
ಬಿ.ಎಚ್. ಶ್ರೀಧರ
ಸಮಗ್ರ ಸಾಹಿತ್ಯ

ಸಂಪುಟ–4
ಸಂಕೀರ್ಣ



ಸಂಪಾದಕರು

ರಾಜಶೇಖರ ಹೆಬ್ಬಾರ

ತೇಜು ಪಬ್ಲಿಕೇಷನ್ಸ್

ಬಿ.ಎಚ್. ಶ್ರೀಧರ ಸಮಗ್ರ ಸಾಹಿತ್ಯ

ಸಂಪುಟ – ೪

ಸಂಕೀರ್ಣ

ಸಂಪಾದಕರು

ರಾಜಶೇಖರ ಹೆಬ್ಬಾರ

ತೇಜು ಪಬ್ಲಿಕೇಷನ್ಸ್

ನಂ. 233, 7ನೇ 'ಎ' ಅಡ್ಡರಸ್ತೆ

ಶಾಸ್ತ್ರಿನಗರ, ಬೆಂಗಳೂರು – 560 028.

B.H. Shridhar's Complete Works
Volume - 4
SANKEERNA

Edited by
Rajashekhar Hebbar

Published by
V. Padmavathi, on behalf of **Teju Publications**
233, 7th 'A' Cross, Shastrinagar,
Bangalore - 560 028. Mob : 9900195626

First Edition : 2017

Pages : 736 (Box Binding)

Price : Rs. 560 ಬೆಲೆ : ರೂ. ೫೬೦

No. of Copies : 1000

70 GSM N.S. Maplitho – 1/8 Demy

ಸಲಹೆ ಸಹಕಾರ
ಪ್ರೊ.ಎಚ್.ಆರ್.ಅಮರನಾಥ, ಡಾ.ಎಮ್.ಜಿ.ಹೆಗಡೆ, ಶ್ರೀ ಸಿ.ಆರ್.ಶಾನಭಾಗ,
ಡಾ. ಸುಮಿತ್ರ ಮೋತಿಲಾಲ ಹಲವಾಯಿ, ಶ್ರೀಮತಿ ರಾಜೇಶ್ವರಿ ಲೋಕರೆ, ಶ್ರೀಕೃಷ್ಣ ಲೋಕರೆ,
ಶ್ರೀಮತಿ ಭುವನೇಶ್ವರಿ ಹೆಗಡೆ

Cover Design : **Bagur Markandaya**

Typeset at : **Page Designers**
Bangalore - 560 004. Ph : 41691270 E-mail : bsmadhu75@gmail.com

Printed at : **Satyananada Printers**
Pipeline Service Road, Magadi Road,
Bangalore.

ಅರ್ಪಣೆ

ನೋವು ನುಂಗಿ ನಕ್ಕ ಶ್ರೀಧರರ ಧರ್ಮಪತ್ನಿ
ಶ್ರೀಮತಿ ರಮಾದೇವಿಯವರಿಗೆ



ಚಂದ್ರಲೋಕದ ತಾಯಿ

ತುಸುವೆ ನೋಡಿದೆವು ಎನ್ನುವಂತಿಲ್ಲ
ಅರೆಗಳಿಗೆ ಕಂಡರೂ ಅದು ಪೂರ್ಣವೇ
ಕಂಡದ್ದಲ್ಲ, ಕಣ್ಣ ತುಂಬಿತು ನೋಟ
ಕಣ್ಣುತುಂಬಿದ ಮೇಲೆ ಮನ ಬಾಕಿಯೇ?

ಹಲವೊಮ್ಮೆ ನೋಡಿದ್ದಕ್ಕೆ ಹೆಚ್ಚಾಗಲಿಲ್ಲ
ಹೊಟ್ಟೆಯಲಿ ಹುಟ್ಟಿದ್ದಕ್ಕೇ ಮಕ್ಕಳೆನಿಸಿದ್ದಲ್ಲ
ದೂರ ನಿಂತವರೂ ತಮ್ಮ ಹತ್ತಿರದ ಬಂಧುಗಳೇ
ಅರಿಯದಿದ್ದವರೂ ತಮ್ಮ ಸ್ವಂತದವರೇ!

ಹುಲ್ಲು ಸಸಿ ಕಲ್ಲುಗಳೆಲ್ಲವನೂ ಹಾದು
ಹೊಳೆಸುತ್ತ ಹರಿಸುತ್ತ ಮತ್ತೆ ಹಡೆದಿರಿ ತಾವು
ಭೂಮಿಯೆಂದೆನಲಾರೆ ಚಂದ್ರನಂಥವರನ್ನು
ಮಣ್ಣಾಗಬಹುದೇ ಬೆಳದಿಂಗಳು?

–ಎಸ್.ಮಂಜುನಾಥ್
(ಖ್ಯಾತ ಕವಿ)

ಕವಿ ಕಾವ್ಯ ವಿಚಾರ

ಕವಿ, ಚಿಂತಕ, ವಿಮರ್ಶಕ, ವಾಗ್ಮಿ, ಬಹುಶ್ರುತ ವಿದ್ವಾಂಸ ಪ್ರೊ.ಬಿ.ಎಚ್.ಶ್ರೀಧರರ ಜನನ ೧೯೧೮, ಏಪ್ರಿಲ್ ೨೪ ರಂದು ಬಿಜೂರಿನ (ದ.ಕನ್ನಡ) ಬವಲಾಡಿಯಲ್ಲಿ. ತಂದೆ ಸೀತಾರಾಮ ಹೆಬ್ಬಾರ, ತಾಯಿ ನಾಗಮ್ಮ. ಲಕ್ಷ್ಮಿಯದಿಲ್ಲದಿದ್ದರೂ ಸರಸ್ವತಿಯ ಕೃಪಾಕಟಾಕ್ಷ ಧಾರಾಳವಾಗಿ ಇದ್ದ ಆಶುಕವಿಗಳ, ಪಂಡಿತರ, ಸತ್ಯವ್ರತರ ಕುಟುಂಬ. ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಜ್ಞಾನನಿಧಿಗಳೂ, ಗುಣನಿಧಿಗಳೂ ಆದ ಶಿಕ್ಷಕರಿಂದ ಬೋಧನೆ, ಸಂಸ್ಕೃತ ಎಮ್.ಎ. ಪೂರೈಕೆ (೧೯೪೨). ರಮಾದೇವಿಯವರೊಡನೆ ೧೯೪೬ರಲ್ಲಿ ವಿವಾಹ. ನಾಲ್ಕು ಹೆಣ್ಣು, ಒಂದು ಗಂಡು ಮಕ್ಕಳ ತಂದೆ. ೧೯೪೨ರಲ್ಲಿ ಮಿಲಿಟರಿ ಅಕೌಂಟ್ಸ್ ಆಫೀಸಿನಲ್ಲಿ ಗುಮಾಸ್ತಗಿರಿಯಿಂದ ಆರಂಭವಾದ ಉದ್ಯೋಗಪರ್ವ ಶಿಕ್ಷಕವೃತ್ತಿ, ಪತ್ರಿಕೋದ್ಯಮ ಪ್ರಾಚಾರ್ಯಗಿರಿಯವರೆಗೆ ಹಬ್ಬಿದೆ. ಈ ಎಲ್ಲ ಕಾಲಘಟ್ಟಗಳಲ್ಲೂ (೧೯೪೫ರಿಂದಲೇ) ವಿವಿಧ ಸಾಹಿತ್ಯಪ್ರಕಾರಗಳಲ್ಲಿ ಅವಿರತವಾಗಿ ಬರಹ, ಬರಹ–ದೇಹ ಸಂಪೂರ್ಣವಾಗಿ ಸೋಲುವ (ನಿಧನ ೧೯೯೦ ಏಪ್ರಿಲ್ ೨೪) ತುಸು ಮುಂಚಿನವರೆಗೂ. ಶಿಶುಸಾಹಿತ್ಯದಿಂದ ಹಿಡಿದು ವಿಮರ್ಶೆ, ಇತಿಹಾಸ, ದರ್ಶನಗಳವರೆಗೂ ಶ್ರೀಧರರ ಆಸಕ್ತಿ, ಅಭ್ಯಾಸ, ಕೊಡುಗೆ. ಕಾವ್ಯಸೂತ್ರ, ಜ್ಞಾನಸೂತ್ರ, ರಾಷ್ಟ್ರಸೂತ್ರಗಳು ಸೂತ್ರತ್ರಯಗಳೆನಿಸಿಕೊಂಡವುಗಳು, ಬಹು–ಬಹುಮಾನಿತವಾದವುಗಳು. ಜೀವನದ ಮತ್ತು ಸಾಹಿತ್ಯ ಶ್ರೇಷ್ಠತೆಯ ನಿಕಷದ ಅನ್ವೇಷಣೆಯಲ್ಲಿ ಪಾಶ್ಚಾತ್ಯ–ಪೌರಾತ್ಯ ಇತಿಹಾಸ, ಸಾಹಿತ್ಯ, ದರ್ಶನಗಳನ್ನು ಅಭ್ಯಸಿಸಿ ಅರಗಿಸಿಕೊಂಡು ನಿಖರ ನಿಲುವಿಗೆ ಬಂದು ಅದನ್ನು ತಮ್ಮ ಐವತ್ತಕ್ಕೂ ಹೆಚ್ಚಿನ ಕೃತಿಗಳಲ್ಲಿ, ಅಸಂಖ್ಯಾತ ಲೇಖನಗಳಲ್ಲಿ ಸ್ಪಷ್ಟವಾಗಿ ("ಧರ್ಮಾದರ್ಥಶ್ಚ ಕಾಮಶ್ಚ" ಎಂದ ವ್ಯಾಸನಷ್ಟೇ ಖಚಿತವಾಗಿ) ಅಭಿವ್ಯಕ್ತಿಸಿದ ವಿಶಿಷ್ಟ ಲೇಖಕ.

ಸಂಪಾದಕೀಯ

ಯಾವುದೇ ಲೇಖಕನ ಕೃತಿಯೊಂದು ಇಂದಿಗೂ, ಎಂದಿಗೂ ಪ್ರಸ್ತುತವೆನಿಸುವದು ಅದು ಸಾರ್ವಕಾಲಿಕ ಮೌಲ್ಯವನ್ನು ಪ್ರತಿಪಾದಿಸುತ್ತಿದ್ದರೆ ಮಾತ್ರ. ಶತಕ–ದಶಕಗಳ ಹಿಂದಿನ ಶ್ರೇಷ್ಠ ಕೃತಿಗಳು ಇಂದಿಗೂ ಪ್ರಸ್ತುತವೆನಿಸುವದು ಇದೇ ಕಾರಣಕ್ಕೆ ಮತ್ತು ಬದಲಾದ ಕಾಲ–ದೇಶಗಳ ಆವರಣದಲ್ಲಿ ಅವುಗಳ ಪುನರಧ್ಯಯನ ಹೊಸ ಕಾಣ್ಕೆಗೂ, ಜಾಗರಕ್ಕೂ ಕಾರಣವಾಗುತ್ತದೆ. ಏಕೆಂದರೆ ಕಾಲ–ದೇಶಗಳು ಬದಲಾದರೂ ಸಮಾಜವನ್ನು ಕಟ್ಟಿ ನಿಲ್ಲಿಸುವ ಶಕ್ತಿ ಇಂದಿಗೂ ಬದಲಾಗಿಲ್ಲ ಮತ್ತು ಅದರ ಸ್ವರೂಪ ನೈತಿಕವಾದುದೆಂಬುದನ್ನು ಮಾನವಕುಲದ ಚರಿತ್ರೆಯನ್ನು ಅಭ್ಯಸಿಸಿ ಅರ್ಥೈಸಿಕೊಂಡ ಪೂರ್ವಗ್ರಹರಹಿತ ವಿವೇಕಿಗಳೆಲ್ಲರೂ ಒಪ್ಪುತ್ತಾರೆ.

ಪ್ರೊ.ಬಿ.ಎಚ್.ಶ್ರೀಧರರ ಎಲ್ಲ ಕೃತಿಗಳಲ್ಲೂ ಸಮಾಜದ ಸುದೃಢತೆಗೆ ಅನಿವಾರ್ಯವಾದ ಮತ್ತು ಅತ್ಯವಶ್ಯವಾದ ಈ ನೈತಿಕತೆಯ ಅಂತಃಸೂತ್ರದ ಅಭಿವ್ಯಕ್ತಿ ಖಚಿತವಾಗಿ ಮತ್ತು ಪ್ರಬಲವಾಗಿ ಪಡಿಮೂಡಿದೆ. ಹೀಗಾಗಿ ಅವು ಅಂದಿಗೂ, ಇಂದಿಗೂ ಸಲ್ಲುವಂಥವುಗಳೆಂಬ ವಿಚಾರವೇ ಅವುಗಳ ಪುನರ್ಮುದ್ರಣಕ್ಕೆ ಪ್ರೇರಣೆ. ಅವರ ಐವತ್ತಕ್ಕೂ ಹೆಚ್ಚಿನ ಕೃತಿಗಳಲ್ಲಿ ಹಲವಾರು ಪ್ರಾತಿನಿಧಿಕ ಕೃತಿಗಳ ಪ್ರತಿಗಳು ಮುಗಿದುಹೋಗಿ ವಾಚಕವರ್ಗಕ್ಕೆ ಲಭ್ಯವಾಗದ ಪರಿಸ್ಥಿತಿ ಇತ್ತು. ಈಗ ಶ್ರೀಧರರು ಕಾಲವಾದ ೨೨–೨೩ ವರ್ಷಗಳ ಬಳಿಕ ಅವೆಲ್ಲ ಮತ್ತೆ ಬೆಳಕು ಕಾಣುವ, ಬೆಳಕು ಬೀರುವ ಸುಯೋಗ ಬಂದೊದಗಿದೆ.

೧೯೪೫ರಲ್ಲಿ ಪ್ರಕಟವಾದ “ಮೇಘನಾದ” ಕವನಸಂಕಲನದೊಂದಿಗೆ ಆರಂಭವಾದ ಅವರ ಸಾಹಿತ್ಯಕೃಷಿ ೧೯೮೮ರಲ್ಲಿ ಬಂದ “ಭಾರತೀಯ ಮೂರ್ತಿಶಿಲ್ಪ” ಗ್ರಂಥದವರೆಗೂ ಅವಿರತವಾಗಿ ನಡೆಯಿತು. ಕಾವ್ಯ, ವಿಮರ್ಶೆ, ವೈಚಾರಿಕ ಪ್ರಬಂಧಗಳು, ವಿಡಂಬನೆ, ಇತಿಹಾಸ, ನಾಟಕ, ಯಕ್ಷಗಾನ, ಅನುವಾದ ಇತ್ಯಾದಿ ಸಾಹಿತ್ಯದ ಬಹುತೇಕ ಎಲ್ಲ ಪ್ರಕಾರಗಳಲ್ಲೂ ಅವರ ಕೊಡುಗೆ ಇದೆ. ಆದರೆ ಪ್ರಮಾಣದಿಂದಾಗಿ ಅಲ್ಲ, ಅವುಗಳೆಲ್ಲವೂ ‘ಸಮ್ಯಗ್’ ಜೀವನಕ್ಕೆ ಪೋಷಕವಾದ ಮೌಲ್ಯಗಳನ್ನು ಪ್ರತಿಪಾದಿಸುವುದರಿಂದ ಮಹತ್ವದ್ದೆನಿಸಿವೆ. ಶ್ರೀಧರರ ಪ್ರಕಾರ “ಸಾಹಿತ್ಯವು ಉತ್ತಮ ಜೀವನದಿಂದ ಸಂಪೂರ್ಣ ಪ್ರತ್ಯೇಕವೂ, ಸ್ವತಂತ್ರವೂ ಆದ ಅಸ್ತಿತ್ವ ಉಳ್ಳದ್ದಲ್ಲ. ಸತ್ಯವೂ, ಶಿವವೂ ಆದದ್ದಷ್ಟೇ

ನಿಜಸೌಂದರ್ಯ ಉಳ್ಳದ್ದು"–(ಕಾವ್ಯಸೂತ್ರ). ಶುಚಿ, ಸದಭಿರುಚಿ ಬದುಕು–ಬರಹಗಳಲ್ಲಿ ಅವರ ಅಪೇಕ್ಷೆಯಾಗಿತ್ತು, ಆಗ್ರಹವಾಗಿತ್ತು. ಅದಿಲ್ಲದುದು, ಅದಲ್ಲದುದು ವರ್ಜ್ಯ ಎಂಬುದವರ ಧೀರೋದಾತ್ತ ನಿಲುವು. ಶ್ರೇಷ್ಠ ಕಾವ್ಯಗಳಾದ ರಾಮಾಯಣ–ಮಹಾಭಾರತಗಳನ್ನು ಪೂಜಿಸಿದಷ್ಟೇ ಭಕ್ತಿಯಿಂದ ವಾಲ್ಮೀಕಿ–ವ್ಯಾಸರನ್ನೂ ಪೂಜಿಸುವ ಭಾರತೀಯ ಮನೋಭಾವ ಬದುಕು–ಬರಹಗಳಿಗೆ ಸಮಾನ ಮಹತ್ವ ನೀಡುತ್ತದೆ. ಶ್ರೀಧರರ ಈ ನಿಲುವು ಅವರ ಕೌಟುಂಬಿಕ, ಶೈಕ್ಷಣಿಕ ಹಾಗೂ ಅಂದಿನ ಸಾಮಾಜಿಕ ಪರಿಸರದಿಂದ ರೂಪಿತವಾಗಿದ್ದಿರಬಹುದು ಎಂದಿಟ್ಟುಕೊಂಡರೂ ಪಾಶ್ಚಾತ್ಯ ಕಾವ್ಯ, ವಿಮರ್ಶೆ, ದರ್ಶನಗಳನ್ನು ಓದಿದ ಬಳಿಕವೂ ಅವರ ಮೂಲಭೂತ ನಿಲುವು ಬದಲಾಗಲಿಲ್ಲ ಅಥವಾ ಇನ್ನಷ್ಟು ಗಟ್ಟಿಗೊಂಡಿತು – ಪಾಶ್ಚಾತ್ಯ ವಿಚಾರಧಾರೆಯ ದೋಷ, ಮಿತಿಗಳನ್ನು ಕಂಡುಕೊಂಡದ್ದರಿಂದ ಎಂಬುದು ಗಮನಾರ್ಹ. ಹೀಗಾಗಿ ಅವರ ಕೃತಿಗಳು, ಅವುಗಳಲ್ಲಿಯ ಖಚಿತ ನಿಗಮನಗಳು ಇಂದಿನ ಸಂದರ್ಭದಲ್ಲೂ ಚರ್ಚೆಗೆ ಯೋಗ್ಯವಾಗಿವೆ ಮತ್ತು ಸಮಕಾಲೀನತೆಯನ್ನು ಪಡೆದುಕೊಂಡಿವೆ. ತೆರೆದ ಮನಸ್ಸಿನ, ಪಾಶ್ಚಾತ್ಯ–ಪೌರಾತ್ಯ ಚಿಂತನೆಗಳನ್ನು ಅಭ್ಯಸಿಸಿ ಅರಗಿಸಿಕೊಂಡ, ಸಮಷ್ಟಿಕಲ್ಯಾಣದ ಕಳಕಳಿಯುಳ್ಳ ವಿದ್ವಾಂಸವೃಂದ ಶ್ರೀಧರರ ನಿಗಮನಗಳನ್ನು ಮರುಪರಿಶೀಲಿಸಬೇಕಿದೆ, ಸಮಾಜಸೌಧದ ಸುದೃಢತೆಗೆ. ಶ್ರೀಧರರ ಕೃತಿಗಳನ್ನೋದಿ ಅವರ ನಿಲುವನ್ನು ನಿಖರವಾಗಿ ಅರಿತು ಅರ್ಥೈಸಿಕೊಂಡ ಅವರ ಕುಟುಂಬಮಿತ್ರ ಮತ್ತು ಶ್ರೀಧರರ ಪುತ್ರ ಸಮಾನ ಪ್ರೊ.ಎಚ್.ಆರ್.ಅಮರನಾಥರು ತಮ್ಮ "ಪ್ರವೇಶ"ದಲ್ಲಿ ಈ ಕುರಿತು ಸವಿವರವಾಗಿ ಚರ್ಚಿಸಿದ್ದಾರೆ.

ಐದು ಸಂಪುಟಗಳಲ್ಲಿ ಶ್ರೀಧರರ ಎಲ್ಲಾ ಕೃತಿಗಳು ಆಯಾ ಪ್ರಕಾರಗಳಿಗೆ ಅನುಗುಣವಾಗಿ ಬರುತ್ತಿವೆ – ಕಾವ್ಯ, ವಿಮರ್ಶೆ, ವಿಚಾರ, ಸಂಕೀರ್ಣ, ಅನುವಾದ ಎಂಬುದಾಗಿ.

ಶ್ರೀಧರರ ಸಮಗ್ರಸಾಹಿತ್ಯದ ಪುನರ್ಮುದ್ರಣವೆಂಬ ಸುವಿಚಾರದ ಬೀಜವನ್ನು ನಮ್ಮೊಳಗೆ ಬಿತ್ತಿ, ಈ ಧನ್ಯ ಕಾರ್ಯಕ್ಕೆ ನಮ್ಮನ್ನು ಪ್ರೇರೇಪಿಸಿದ ಶ್ರೇಯಸ್ಸು ಶ್ರೀಧರರ ಶಿಷ್ಯೆ ಶ್ರೀಮತಿ ಡಾ. ಸುಮಿತ್ರ ಮೋತಿಲಾಲ ಹಲವಾಯಿ ಅವರಿಗೆ ಸಲ್ಲಬೇಕು. ಅವರಿಗೆ ನಮ್ಮ ಮೊದಲ ಕೃತಜ್ಞತೆಗಳು. ಇನ್ನು ಈ ಬೃಹತ್ (ಸುಮಾರು ೬೦೦೦ ಪುಟಗಳು) ಹಾಗೂ ಮಹತ್ತಾದ ಕಾರ್ಯ ಒಬ್ಬಿಬ್ಬರಿಂದ ಸಾಧ್ಯವಿಲ್ಲವೆಂಬುದು ಸುವಿದಿತ. ಇದರ ಹಿಂದೆ ಹಲವು ಹಿರಿಯರ, ಸ್ನೇಹಿತರ, ಶ್ರೀಧರರ ಶಿಷ್ಯರ, ಕುಟುಂಬ ಬಂಧುಗಳ ಸಲಹೆ, ಸಹಕಾರ, ಹಾರೈಕೆಗಳಿವೆ. ಅವರೆಲ್ಲರಿಗೂ ಹೃತ್ಪೂರ್ವಕ ನಮನಗಳು.

ಸಂಪುಟಗಳ ಪ್ರಕಟಣೆಯ ಕಾರ್ಯಭಾರವನ್ನು ಪ್ರೀತಿಯಿಂದ ಮತ್ತು ನಿಜ–ಆಸಕ್ತಿಯಿಂದ (ಇದು ಔಪಚಾರಿಕ ಮಾತಲ್ಲ) ವಹಿಸಿಕೊಂಡು ಶುದ್ಧವಾಗಿ ಮತ್ತು

ಮನೋಹರವಾಗಿ ಪ್ರಕಟಿಸಿಕೊಟ್ಟ ತೇಜು ಪ್ರಕಾಶನ, ಬೆಂಗಳೂರು ಅವರಿಗೆ ತುಂಬುಹೃದಯದ ವಂದನೆಗಳು. ಅವರನ್ನು ಪರಿಚಯಿಸಿದ ಖ್ಯಾತ ಹಾಸ್ಯ ಲೇಖಕಿ, ಶ್ರೀಮತಿ ಭುವನೇಶ್ವರಿ ಹೆಗಡೆಯವರಿಗೆ ಹಾರ್ದಿಕ ನಮನಗಳು.

ಈ ಎಲ್ಲಾ ಸಂಪುಟಗಳನ್ನು ಶ್ರೀಧರರ 'ಜೀವಯಾನ'ದ ಜತೆಗಾತಿ, ಜೀವಸಖಿ ಶ್ರೀಮತಿ ರಮಾದೇವಿಯವರಿಗೆ ಅರ್ಪಿಸುತ್ತಿದ್ದೇವೆ. ೨೦೦೭, ಏಪ್ರಿಲ್ ೨೪ರಂದು ರಮಾದೇವಿಯವರ ಹಸ್ತದಿಂದಲೇ ಬಿ.ಎಚ್.ಶ್ರೀಧರ ಪ್ರಶಸ್ತಿಯನ್ನು ಖ್ಯಾತ ಕವಿ ಶ್ರೀ ಎಸ್. ಮಂಜುನಾಥರು ಸ್ವೀಕರಿಸಿದ್ದರು. ಮುಂದೆ ಮೂರೇ ತಿಂಗಳಲ್ಲಿ (ಜುಲೈ ೨೦, ೨೦೦೭) ರಮಾದೇವಿಯವರು ದೈವಾಧೀನರಾದಾಗ ಸುದ್ದಿ ತಿಳಿದು ನೊಂದ ಮಂಜುನಾಥರು ಬರೆದು ಕಳುಹಿಸಿದ್ದ ರಮಾದೇವಿಯವರ ಒಳ–ಹೊರಗನ್ನು ತದ್ವತ್ ಕಟ್ಟಿಕೊಟ್ಟ ಕವನವನ್ನೇ ಅರ್ಪಣೆಯಲ್ಲಿ ಬಳಸಿಕೊಂಡಿದ್ದೇವೆ. ಅವರಿಗೆ ನಮ್ಮ ವಿಶೇಷ ಪ್ರಣಾಮಗಳು. ಹಾಗೆಯೇ ಸಂಪುಟದ ಬೆನ್ನುಡಿಗೆ ಶ್ರೀ ಸತೀಶ್ ಎಲ್ಲಾಪುರ ಅವರ ಕಾರ್ಟೂನನ್ನು ಉಪಯೋಗಿಸಿಕೊಂಡಿದ್ದೇವೆ. ಕಲಾವಿದನಿಗೆ ಕೃತಜ್ಞತೆಗಳು.

ನಂಬಿದಂತೆ ನಡೆದ, ನುಡಿದ, ಬರೆದ ಬಿ.ಎಚ್. ಶ್ರೀಧರರ ಕೃತಿ ನಿಮ್ಮ ಮುಂದಿದೆ. ಇವುಗಳ ವಾಚನ, ಮನನ ಬುದ್ಧಿಯ ಔನ್ನತ್ಯಕ್ಕೂ, ಹೃದಯ ಸಂಸ್ಕಾರಕ್ಕೂ ಕಾರಣವಾಗಲೆಂಬುದೇ ಆಶಯ. ಶ್ರೀಧರರು ಕಾಯೇನ–ವಾಚಾ–ಮನಸಾ ನಂಬಿದ್ದ ಶ್ರೀರಮಣರ ಅನುಗ್ರಹವೇ ಎಲ್ಲ ಕಾರ್ಯಕ್ಕೂ ಕಾರಣವೆಂಬ ಸತ್ಯದ ಅರಿವು ನಮ್ಮೊಳಗೆ ಇದ್ದೇ ಇದೆ. ಅವರಲ್ಲಿ ತುಡಿಯುತ್ತಿದ್ದ ಸಮಷ್ಟಿಯ ಒಳಿತಿನ ಬಯಕೆ ಶ್ರೀಗುರುವಿಗೆ ತಲುಪಲೆಂಬುದೇ ಹರಕೆ.

– ರಾಜಶೇಖರ ಹೆಬ್ಬಾರ

ಪ್ರವೇಶ

ಪ್ರೊ.ಬಿ.ಎಚ್.ಶ್ರೀಧರರು ನನ್ನ ತಂದೆ ವಿದ್ವಾನ್ ರಾ.ಭ. ಹಾಸಣಗಿಯವರ ಮಿತ್ರರು, ಆಪ್ತರು, ನನಗೆ ತಂದೆ ಸಮಾನರು. ಇಬ್ಬರೂ ಕವಿ ದ.ರಾ.ಬೇಂದ್ರೆಯವರೊಂದಿಗೆ ಒಡನಾಟ, ವಿಶ್ವಾಸ ಹೊಂದಿದವರು. ಈ ತ್ರಿಮೂರ್ತಿಗಳು ನನ್ನ ಚಾರಿತ್ರ್ಯವನ್ನು ರೂಪಿಸಿದ ಶಿಲ್ಪಿಗಳು. ಇವರಲ್ಲಿ ಶ್ರೀಧರರದು ವಿಷ್ಣುಸ್ಥಾನ. ಮೂರ್ತಿಪೂಜೆಯೇ ಕಂದಾಚಾರವಾಗಿ, ರಾಜಕೀಯವಾಗಿ, ಮೂರ್ತಿಭಂಜನೆಯೇ ಮೌಲ್ಯವಾಗಿ ಕಂಡುಬರುವ ಕಾಲದಲ್ಲಿ ಬರೆಯುತ್ತಿದ್ದೇನೆ. ಈ ಮೂವರಲ್ಲಿ ನನ್ನ ತಂದೆಯವರಿಗೆ ಇಂಗ್ಲೀಷ್ ಬರುತ್ತಿರಲಿಲ್ಲ. ಮೂವರಿಗೂ ಸಂಸ್ಕೃತ–ಕನ್ನಡ, ಮಾರ್ಗ–ದೇಸಿಗಳ ಹಾಸುಹೊಕ್ಕಿನ ಸೂಕ್ಷ್ಮ ಜ್ಞಾನವಿತ್ತು. ನಾನು ಇವರಿಂದ ಕಲಿತದ್ದು ತರಗತಿಯಲ್ಲಿ ಅಲ್ಲ, ಅಂತೇವಾಸದ (one-to-one) ಸಂಬಂಧದಲ್ಲಿ. ಇಂದಿಗೂ ನಾನು ಅವರೊಂದಿಗೆ ಮನೋಸಂವಾದದಲ್ಲಿ ತೊಡಗಿರುತ್ತೇನೆ. ಅವರ ಗ್ರಂಥಗಳಲ್ಲಿ ಏನನ್ನೋ ಹುಡುಕುತ್ತಿರುತ್ತೇನೆ. ಅವರನ್ನೂ ನನ್ನನ್ನೂ ಅರ್ಥೈಸಿಕೊಳ್ಳಲು ಯತ್ನಿಸುತ್ತೇನೆ. ಅವರ ನಿರೀಕ್ಷೆಯಂತೆ ನಾನು ಬೆಳೆದಿದ್ದೇನೆಯೇ ಎಂಬುದು ನನಗೆ ಗೊತ್ತಿಲ್ಲ. ಆದರೂ ಶ್ರೀಧರರ ಮಕ್ಕಳ ಅಪೇಕ್ಷೆಯಂತೆ ಅವರ ಸಮಗ್ರ ಸಾಹಿತ್ಯ ಸಂಪುಟಕ್ಕೆ ಒಂದು ಪ್ರಸ್ತಾವನೆ ಬರೆಯಲು ಅಳುಕುತ್ತಲೇ ಒಪ್ಪಿಕೊಂಡಿದ್ದೇನೆ. ಅವರ ಸಾವಿರಾರು ಪುಟಗಳ, ಹಲವು ಜ್ಞಾನ ಕ್ಷೇತ್ರಗಳ ಶಾಸ್ತ್ರ ಸಾಹಿತ್ಯವನ್ನೂ, ಸೃಜನಶೀಲ ಸಾಹಿತ್ಯ–ವಿಮರ್ಶೆಗಳನ್ನೂ ಹಿಂಡಿ ಭಟ್ಟಿ ಇಳಿಸಿ ಐದಾರು ಪುಟಗಳಲ್ಲಿ ಸಾರಾಂಶ ಕೊಡುವ ಅಸಾಧ್ಯ ಪ್ರಯತ್ನಕ್ಕೆ ಕೈ ಹಾಕುವುದಿಲ್ಲ. ಅವರ ಬರಹಗಳನ್ನು ಗಮನಿಸಬೇಕಾದ, ಅವು ನಮಗೆ ಪ್ರಸ್ತುತವಾಗುವ ಒಂದು ದಿಕ್ಸೂಚಿಯನ್ನು ಮಾತ್ರ ನೀಡಬಯಸುತ್ತೇನೆ.

ಶ್ರೀಧರರ ಬರಹಗಳಲ್ಲಿ ಎದ್ದು ಕಾಣುವ ಒಂದು ಮುಖ್ಯ ಅಂಶವೆಂದರೆ ಭಾರತೀಯತೆಯಲ್ಲಿ ಅಚಲ ವಿಶ್ವಾಸ ಮತ್ತು ಅದರ ಅಧಿಕಾರಯುತ ಪ್ರತಿಪಾದನೆ. ಮೂಲಭೂತವಾದ ಮತ್ತು ಪಾಶ್ಚಾತ್ಯೀಕರಣದ ಅತಿರೇಕಗಳ ನಡುವೆ ಅವರು ಒಂದು ಮಧ್ಯಮ ಮಾರ್ಗ ಕಂಡುಕೊಂಡಿದ್ದರು. ಭಾರತವೆಂಬುದು ಅವರಿಗೆ ಕೇವಲ ಭೌಗೋಳಿಕ/ರಾಜಕೀಯ ನಕಾಶೆ ಆಗಿರಲಿಲ್ಲ, ಒಂದು ಜೀವನ ದರ್ಶನವಾಗಿತ್ತು. ಅವರ ಸೂತ್ರತ್ರಯಗಳಲ್ಲಿ (ಜ್ಞಾನಸೂತ್ರ, ಕಾವ್ಯಸೂತ್ರ, ರಾಷ್ಟ್ರಸೂತ್ರ) ಇದು ಮಂಡಿಸಲ್ಪಟ್ಟಿದೆ. ಇದರ ಹಿನ್ನೆಲೆಯಲ್ಲಿ ಪ್ರಾಚೀನ ಭಾರತದ ಮೂವರು ಸೂತ್ರಕಾರರಿದ್ದಾರೆ– ಪಾಣಿನಿ,

ಭರತ ಮತ್ತು ವ್ಯಾಸ. ಇವರ ಸಾರ್ವಕಾಲಿಕ ಶ್ರೇಷ್ಠತೆ, ಪ್ರಸ್ತುತತೆಗಳ ಬಗ್ಗೆ ಅವರಿಗೆ ಯಾವುದೇ ಅನುಮಾನವಿರಲಿಲ್ಲ. ಪಾಣಿನಿಯನ್ನು ಸ್ಮರಿಸದ ಧ್ವನಿಶಾಸ್ತ್ರ, ಭಾಷಾಶಾಸ್ತ್ರ; ಭರತನನ್ನು ಮೆಚ್ಚದ ಸಾಹಿತ್ಯ ಸಿದ್ಧಾಂತ, ವಿಮರ್ಶೆ; ವ್ಯಾಸರ ಶಾಂತಿಪರ್ವಕ್ಕೆ ಮನ್ನಣೆ ನೀಡದ ರಾಜ್ಯಶಾಸ್ತ್ರ – ಇವು ಅವರಿಗೆ ದ್ರೋಹವಾಗಿ, ವಿದ್ರೋಹವಾಗಿ ಕಾಣುತ್ತಿದ್ದವು. ವ್ಯಾಸರ ಬ್ರಹ್ಮಸೂತ್ರಕ್ಕೆ ಶಾಂಕರ ಭಾಷ್ಯದ ಬಗ್ಗೆ ಅವರಿಗೆ ವಿಶೇಷ ಒಲವಿದ್ದಿತಾದರೂ ಅದ್ವೈತ–ದ್ವೈತ–ವಿಶಿಷ್ಟಾದ್ವೈತಗಳ ಅಂತಃಕಲಹದಲ್ಲಿ ಅವರು ಪಾಲ್ಗೊಂಡಿದ್ದು ನನಗಂತೂ ಕಂಡುಬಂದಿಲ್ಲ. ಭರತನ ನಾಟ್ಯಶಾಸ್ತ್ರ, ರಸಸಿದ್ಧಾಂತಗಳಲ್ಲಿ ನಾಟಕ–ಕಾವ್ಯ–ಸಾಹಿತ್ಯ–ಕಲಾ ಸಾಧಕರು ಮಾತ್ರವಲ್ಲ, ಮನೋವಿಜ್ಞಾನಿಗಳೂ ಆಸಕ್ತರಾಗಬೇಕು ಎಂಬುದು ಅವರ ಅಪೇಕ್ಷೆಯಾಗಿತ್ತು. ಅವರು ಮೆಚ್ಚಿದ ಚಾಣಕ್ಯ ಗದ್ದುಗೆಯ ಗುರಿಯಾಗಿ ಏನನ್ನೂ ಮಾಡುವ ದಾರಿ ಸರಿ ಎನ್ನುವ ಮೆಕೆವಿಲಿ ಆಗಿರಲಿಲ್ಲ; ಚಂದ್ರಗುಪ್ತನ ಸತ್ವವನ್ನು ಬೀಜರೂಪದಲ್ಲಿ ಗುರುತಿಸುವ, ಅಮಾತ್ಯ ರಾಕ್ಷಸನನ್ನು ಆಳದಲ್ಲಿ ಗೌರವಿಸುವ, ಅಂತರಂಗದಲ್ಲಿ ಸನ್ಯಾಸಿಯಾಗಿರುವ ಚಾಣಕ್ಯನ ನೀತಿ ಬೇಕೆನ್ನುತ್ತಿದ್ದರು. ನೀತಿಪ್ರಧಾನ ಸಮಾಜ, ಸರ್ವಧರ್ಮ ಸಾಮರಸ್ಯ, ಭ್ರಷ್ಟಾಚಾರರಹಿತ ಆಡಳಿತ ವ್ಯವಸ್ಥೆ ಅವರ ಕಾಳಜಿಯ ವಿಷಯಗಳಾಗಿದ್ದವು. ಆತ್ಮಪೌರುಷವಿಲ್ಲದ ನಾಡು ಪರಕೀಯರ ಪಾಲಾಗುವುದು ಎಲ್ಲ ರಾಷ್ಟ್ರಗಳ ಹಣೆಬರಹವೆಂದು ಇತಿಹಾಸ ಸಾರಿಸಾರಿ ಹೇಳುತ್ತದೆ. ಮನೆಮುರುಕರನ್ನು ಹೊರ ಹಾಕಬೇಕಾಗುತ್ತದೆ, ಸಮಯಸಾಧಕರ ಬಗ್ಗೆ ಎಚ್ಚರಿಕೆ ವಹಿಸಬೇಕಾಗುತ್ತದೆ. ನಮ್ಮೊಳಗೆ ಜಗಳವಾದರೆ ನಾವು (ಪಾಂಡವರು) ಐದು ಜನ, ಅವರು (ಕೌರವರು) ನೂರು ಜನ; ಹೊರಗಿನವರೊಂದಿಗೆ ಜಗಳ ಬಂದರೆ ನಾವು ನೂರೈದು ಜನ ಎಂಬ ಧರ್ಮರಾಯನ ಭ್ರಾತೃತ್ವದ ರಾಜನೀತಿ ಶ್ರೀಧರರಿಗೆ ಮಾನ್ಯವಿತ್ತು.

ಇಪ್ಪತ್ತನೆಯ ಶತಮಾನದ ಪಾಶ್ಚಾತ್ಯ ಚಿಂತಕರಲ್ಲಿ ಶ್ರೀಧರರ ಹೃದಯ ಗೆದ್ದವರು ಇಬ್ಬರು: ವಿಜ್ಞಾನಿಗಳಲ್ಲಿ ಐನ್‌ಸ್ಟೀನ್ ಮತ್ತು ಸಾಹಿತಿಗಳಲ್ಲಿ ಟಿ.ಎಸ್.ಎಲಿಯಟ್. ಅವರ ವಿಶೇಷ ಆಗ್ರಹವಿರುವುದು ಮಾರ್ಕ್ಸ್ ಮತ್ತು ಫ್ರಾಯ್ಡ ಕುರಿತು. ಮಾರ್ಕ್ಸ್‌ನದು ಅರ್ಥಮೂಲದ ದೃಷ್ಟಿ, ಫ್ರಾಯ್ಡನದು ಕಾಮಮೂಲದ ದೃಷ್ಟಿ. ಇವೆರಡೂ ವ್ಯಕ್ತಿಯ ಮತ್ತು ಸಮಾಜದ ಸ್ವಾಸ್ಥ್ಯಕ್ಕೆ ಪೂರಕವಲ್ಲ ಎಂಬುದು ಶ್ರೀಧರರ ಖಚಿತ ನಿಲುವು. ಪಂಪನ ಆದಿಪುರಾಣದಲ್ಲಿ ಭರತನ ಸ್ವಗತವಾಗಿ ಬರುವ ಒಂದು ಪದ್ಯದೆಡೆ ಓದುಗರ ಗಮನ ಸೆಳೆಯಬಯಸುತ್ತೇನೆ.

ಧರ್ಮಂ ಪ್ರಧಾನಂ, ಅರ್ಥಂ
ಧರ್ಮಾಂಘ್ರಿಪ ಫಲಂ, ಅದರ್ಕೆ ರಸಮದು ಕಾಮಂ. (೧೦–೫೦)

ಧರ್ಮವು ಮೂಲ, ಅರ್ಥವು ಧರ್ಮವೃಕ್ಷದ ಹಣ್ಣು, ಅದರ ರಸವೇ ಕಾಮ. ಇದು ಜೀವನ ಮೌಲ್ಯಗಳ ಆದ್ಯತಾ ಮಾರ್ಗಸೂಚಿ. ಈ ಬಗ್ಗೆ ಯಾವುದೇ ಭರತರ ಅಥವಾ ಬಾಹುಬಲಿಗಳ ಆಕ್ಷೇಪವಿರಲಾರದು ಎಂದು ಭಾವಿಸುತ್ತೇನೆ.

ಶ್ರೀಧರರು ಬರೆಯಲಾರಂಭಿಸಿದಾಗ ನವ್ಯಪಂಥ ಚಿಗುರೊಡೆಯುತ್ತಿತ್ತು. ಅಡಿಗರು ಶ್ರೀಧರರ ಸಮವಯಸ್ಕರು, ಸಂಬಂಧಿಗಳೂ ಕೂಡ. ಶ್ರೀಧರರು ನವ್ಯ ಪಂಥದೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲಿಲ್ಲ. ಅವರು ಸಂಸ್ಕೃತ ಪ್ರಾಧ್ಯಾಪಕರಾಗಿದ್ದು, ಹೆಚ್ಚಿನ ನವ್ಯರು ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದುದು ಗಮನಾರ್ಹ ಸಂಗತಿ. (ಯುಗಧರ್ಮ, ವಯೋಧರ್ಮ, ಮನೋಧರ್ಮ ಮತ್ತು ವೃತ್ತಿಧರ್ಮಗಳ ಸಂಬಂಧವನ್ನು ಬಿಡಿಸಿ ವಿವರಿಸಿ ಹೇಳುವುದು ನನಗೆ ಸದ್ಯಕ್ಕಂತೂ ಸಾಧ್ಯವಿಲ್ಲ.) ವಿ.ಕೃ.ಗೋಕಾಕರ ನವ್ಯಕ್ಕೆ ಶ್ರೀಧರರ ಆಕ್ಷೇಪವಿರಲಿಲ್ಲ. ಉಳಿದವರ ಸಾಹಿತ್ಯ ಕೇವಲ 'ಸಂಕರ', 'ಸಂಸೃಷ್ಟಿ' ಅಲಂಕಾರಗಳ ಉದಾಹರಣೆ ಎಂದು ಒಂದೇ ವಾಕ್ಯದಲ್ಲಿ ನಿರ್ಣಯ ಹೇಳುತ್ತಿದ್ದರು. ದೇವರನ್ನು ತಲೆಹಿಡುಕನನ್ನಾಗಿ ಗ್ರಹಿಸಿ ಇಂತಿಂಥ ಹೆಣ್ಣುಗಳ ತನ್ನ ಬಳಿ ಕಳಿಸು ಎಂದು ಬೇಡುವ ಅಡಿಗರ 'ಪ್ರಾರ್ಥನೆ'ಯಂತೂ ವಿಕೃತಿಯ ಪರಮಾವಧಿ ಎನ್ನುತ್ತಿದ್ದರು. ಶಿಲ್ಪಶಾಸ್ತ್ರದಿಂದ ಹಿಡಿದು ಮಕ್ಕಳ ಸಾಹಿತ್ಯದವರೆಗಿನ ಅವರ ಆಸಕ್ತಿ ಮತ್ತು ಕೃಷಿ ನವ್ಯ ಪಾಳೆಯದಲ್ಲಿ ಕಂಡುಬರುವುದಿಲ್ಲ. ನವ್ಯರದೇನಿದ್ದರೂ ಬರಿ ಕಾವ್ಯಶಿಲ್ಪದ ಕಾಳಜಿ. ನವ್ಯರಲ್ಲಿ ಕಾಣದ ವಾತ್ಸಲ್ಯ ಭಾವ ಮತ್ತು ಹಾಸ್ಯ ಪ್ರಜ್ಞೆ ಶ್ರೀಧರರ ಕಾವ್ಯದಲ್ಲಿವೆ. ಹಲವು ಬಗೆಯ ಛಂದಸ್ಸುಗಳಲ್ಲಿ ಅವರ ಪ್ರಭುತ್ವ ಯಕ್ಷಗಾನ ಪ್ರಸಂಗಗಳ ದೇಸಿ ಮತ್ತು ಪಂಪಾದಿ ಮಾರ್ಗಕಾವ್ಯಗಳಿಂದ ಹೀರಿಕೊಂಡದ್ದಾಗಿದೆ. ಯಕ್ಷಗಾನದ ವೇಷ ಕಟ್ಟಿ ನಿಲ್ಲಿಸಿದರೆ ತಾನು ಕುಣಿಯಲಾರೆನಾದರೂ ಅರ್ಥ ಹೇಳಬಲ್ಲೆ ಎಂದು ಅವರು ಹೇಳಿದ್ದು ನನಗೆ ನೆನಪಿದೆ.

ಕನ್ನಡವು ನನ್ನ ತಾಯಿನುಡಿ, ಸಂಸ್ಕೃತವು ತಂದೆನುಡಿ ಎಂದು ಘೋಷಿಸಿದ ಶ್ರೀಧರರು ಕನ್ನಡ–ಸಂಸ್ಕೃತಗಳಿಗೆ ಬಾಂಧವ್ಯವಿದೆ, ದಾಯಾದಿತನವಿಲ್ಲ ಎಂದು ಸಾಧಿಸಿದ್ದಾರೆ. ತಾಯಿ–ತಂದೆಯರ ನಡುವೆ ವಿರಸವಾದಾಗ ಮಕ್ಕಳೇನು ಮಾಡಬೇಕೆಂಬುದು ಯಕ್ಷಪ್ರಶ್ನೆ. ವಾಗರ್ಥ ದಾಂಪತ್ಯದ ತಾಯಿತಂದೆ ಎಲ್ಲರಿಗೂ ಸಿಗುವುದಿಲ್ಲ. ತಾಯಿತಂದೆಯರನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಯಾವ ಮಕ್ಕಳಿಗೂ ಇರುವುದಿಲ್ಲ. ಹೆಚ್ಚೆಂದರೆ ರಾಮ–ಸೀತೆಯರ ಬಿಂಬವನ್ನು ಹೃದಯದಲ್ಲಿರಿಸಿಕೊಂಡು ಅವರು ಒಂದಾಗಲು ಶ್ರಮಿಸುವ ಹನುಮರಾಗಬಹುದು. ಸಂಸ್ಕೃತ=ಬ್ರಾಹ್ಮಣಿಕೆ=ಪುರೋಹಿತಶಾಹಿ=ಶೋಷಣೆ ಎಂಬ ಅತಾರ್ಕಿಕ ಸಮೀಕರಣವನ್ನಿಟ್ಟುಕೊಂಡು ಇಂಗ್ಲೀಷ್=ಉದ್ಧಾರ ಎಂಬ ನಿರ್ಣಯಕ್ಕೆ ಜಿಗಿಯುವವರ ಬಗ್ಗೆ ಶ್ರೀಧರರಿಗೆ ಯಾವ ಗೌರವವೂ ಇರಲಿಲ್ಲ. ಆಯಾ ಪ್ರಾಧ್ಯಾಪಕರು ತಮ್ಮದು ಅಂತರರಾಷ್ಟ್ರೀಯ ಮಟ್ಟ, ರಾಷ್ಟ್ರಮಟ್ಟ, ಪ್ರಾದೇಶಿಕ ಮಟ್ಟ ಎಂದು ಮೇಲರಿಮೆಯನ್ನೋ, ಕೀಳರಿಮೆಯನ್ನೋ ಬೆಳೆಸಿಕೊಳ್ಳುವುದು ಆರೋಗ್ಯದ ಲಕ್ಷಣವಲ್ಲ. ಎಂಥ ವಿಶ್ವಮಾನವನಾದರೂ ನಿಂತಷ್ಟು ನೆಲ ಪ್ರಾದೇಶಿಕವಾಗಿರುತ್ತದೆ ಎಂಬ ಅರಿವು ಕುವೆಂಪು ಅವರಿಗೂ ಇತ್ತು. "ಕನ್ನಡದ ಮನೆಯಲ್ಲಿ ಕನ್ನಡಿತಿ ಯಜಮಾನಿತಿ/ಮಿಕ್ಕ ಹೆಂಗಸರೆಲ್ಲ ಒಕ್ಕಲಷ್ಟೇ" ಎಂಬುದು ಶ್ರೀಧರರ ಒಂದು ಕವಿತೆಯ ಸಾಲು.

ಅವರ ಕನ್ನಡ ಪ್ರೀತಿ ಉಕ್ಕಿ ಹರಿಯುವುದು ಕದಂಬರ, ಅದರಲ್ಲೂ ಮಯೂರಶರ್ಮನ ಬಗ್ಗೆ ಬರೆಯುವಾಗ. ಬನವಾಸಿಯ ಕದಂಬರು (ಇತಿಹಾಸ ಸಂಶೋಧನೆ), ನೌಕಾಗೀತ (ಖಂಡಕಾವ್ಯ), ಕದಂಬ ವೈಭವ ('ರಘುವಂಶ' ಮಾದರಿಯ ಕಥನಕಾವ್ಯ), ಮಯೂರಶರ್ಮ (ಚಾರಿತ್ರಿಕ ನಾಟಕ)– ಎಲ್ಲದರ ಆಶಯ ಒಂದೇ: ರಾಷ್ಟ್ರ ಕಟ್ಟುವ ಕನಸು. ಸಮೃದ್ಧ, ಸ್ಥಿರ, ಸಮರ್ಥ ರಾಜ್ಯ ವ್ಯವಸ್ಥೆಯಲ್ಲಿ ವೇದಮಂತ್ರಗಳಿಂದ ಸ್ಫೂರ್ತಿ ಪಡೆದು ಬೇಡರು, ಬೆಸ್ತರವರೆಗೆ ಎಲ್ಲರ ಸಹಕಾರದೊಂದಿಗೆ ನಿರ್ಮಿಸಿದ ಸಕಾರಾತ್ಮಕ ಮಾದರಿಯ ಚಿತ್ರಣವಿದೆ. ಮಯೂರಶರ್ಮನ ವ್ಯಕ್ತಿತ್ವಕ್ಕೆ ಪರಶುರಾಮನ ಪುರಾಣಕಥೆಯ ಪ್ರೇರಣೆ ಇದೆಯಾದರೂ ಶ್ರೀಧರರಿಗೆ ಪುರಾಣ–ಇತಿಹಾಸಗಳ ವ್ಯತ್ಯಾಸದ ಸ್ಪಷ್ಟತೆ ಇದೆ. ಧರ್ಮ, ವಾಣಿಜ್ಯ, ವಿಜ್ಞಾನಗಳ ಸ್ಥಾನದ ಬಗ್ಗೆಯೂ ಕಾಳಜಿಯದೆ.

ಪರಶುರಾಮನ ಬಗ್ಗೆ ಸ್ವಲ್ಪ ಹೆಚ್ಚು ಬರೆಯಬೇಕೆನಿಸುತ್ತದೆ. ಸಂಪ್ರದಾಯ ಇವನನ್ನು ಚಿರಂಜೀವಿ ಎಂದೂ, ವಿಷ್ಣುವಿನ ಅವತಾರವೆಂದೂ ಪರಿಗಣಿಸುತ್ತದೆ. ಇವನ ತಂದೆ ಜಮದಗ್ನಿಯನ್ನು ಒಬ್ಬ ಗೋತ್ರ ಪ್ರವರ್ತಕನೆಂದು ವೈದಿಕ ಸಂಸ್ಕೃತಿ ಒಪ್ಪಿಕೊಳ್ಳುತ್ತದೆ. ಇವನ ತಾಯಿ ರೇಣುಕೆ=ಎಲ್ಲಮ್ಮ ಎಂಬ ನಂಬಿಕೆ ಕೆಲವು ತಳಸಮುದಾಯಗಳ ಜಾನಪದ ಆಚರಣೆಗಳಲ್ಲಿ ಕಂಡುಬರುತ್ತದೆ. (ಇದು ಬೆತ್ತಲೆ ಸೇವೆಯ ಸಮರ್ಥನೆಯಲ್ಲ). 'ರೇಣುಕಾ ಮಹಾತ್ಮೆ' ಜನಪ್ರಿಯ ಯಕ್ಷಗಾನ ಪ್ರಸಂಗವೂ ಹೌದು. ಶ್ರೀಧರರ ಕದಂಬ ವೈಭವದ ಮೊದಲ ಸಾಲಿನಲ್ಲೇ ಭಾರ್ಗವರಾಮ ಕಾಣಿಸಿಕೊಳ್ಳುತ್ತಾನೆ. ಮಯೂರಶರ್ಮ ನಾಟಕದಲ್ಲಿ ಬ್ರಾಹ್ಮಣ ವಟು ಮಯೂರಶರ್ಮ ಪಲ್ಲವ ದೊರೆ ಶಿವಸ್ಕಂದನಿಂದ ಅವಮಾನಿತನಾದಾಗ "ಬ್ರಾಹ್ಮಣನಾದ ಪರಶುರಾಮ ಇಪ್ಪತ್ತೊಂದು ಸಲ ಭೂಪ್ರದಕ್ಷಿಣೆ ಮಾಡಿ ಕ್ಷತ್ರಿಯರನ್ನೆಲ್ಲ ಸಮೂಲನಾಶ ಮಾಡಿದಂತೆ ನಿನ್ನ ಗರ್ವವನ್ನು ಹಿಂಡದಿದ್ದಲ್ಲಿ ನಾನು ಮಯೂರಶರ್ಮನಲ್ಲ" ಎಂದು ಪ್ರತಿಜ್ಞೆ ಮಾಡುತ್ತಾನೆ. ಇತರ ಕೃತಿಗಳಲ್ಲೂ 'ಇದಂ ಬ್ರಾಹ್ಮಂ ಇದಂ ಕ್ಷಾತ್ರಂ ಶಾಪಾದಪಿ ಶರಾದಪಿ" (ಪರಶುರಾಮ) ಮತ್ತು 'ಧಿಗ್ಬಲಂ ಕ್ಷತ್ರಿಯಬಲಂ ಬ್ರಹ್ಮತೇಜೋ ಬಲಂ ಬಲಂ' (ವಿಶ್ವಾಮಿತ್ರ) ಎಂಬ ಮಾತುಗಳು ಕಾಣಿಸಿಕೊಂಡಿವೆ. ಕಾವ್ಯಸೂತ್ರದಲ್ಲಿ "ಧರ್ಮಕ್ಷೇತ್ರಕ್ಕೆ ಕುರುಕ್ಷೇತ್ರದ ಕಳೆ ಬಂದಿದೆ" ಎಂದಿದ್ದಾರೆ ಬೇಂದ್ರೆ. ಶ್ರೀಧರರ ಗದ್ಯ ಶೈಲಿಯಲ್ಲಿ ಕ್ಷಾತ್ರ ತೇಜಸ್ಸಿದೆ (ಆ ಪದ ಬಳಸಬಹುದಾದರೆ).

ಇಂದಿನ ಸಾಹಿತ್ಯಿಕ ಪರಿಸರದಲ್ಲಿ ಪರಶುರಾಮನ ಬಗ್ಗೆ ಎರಡು ಆಕ್ಷೇಪಗಳಿವೆ: ಒಂದು ಮಾತೃಹಂತಕ ಎಂದು, ಇನ್ನೊಂದು ಜನಾಂಗದ್ವೇಷಿ ಎಂದು. ಮಾತೃಹಂತಕ ಎನ್ನುವವರು ತಾಯಿಗೆ ಮತ್ತೆ ಜೀವ ತಂದುದನ್ನು ಒಪ್ಪಿಕೊಳ್ಳುವುದಿಲ್ಲ. ಅದು ಹೇಗೆ ಸಾಧ್ಯ ಎಂದು ಭೌತವಾದಿ, ವಿಚಾರವಾದಿ ನೆಲೆಯಿಂದ ಪ್ರಶ್ನಿಸುತ್ತಾರೆ. ಪುರಾಣ ಕಥೆಗಳಲ್ಲಿ ಎಲ್ಲವೂ ಸಾಧ್ಯ, ಸಮಗ್ರವಾಗಿ ಓದಿ ಎನ್ನಬೇಕಾಗುತ್ತದೆ. ಪುರಾಣದ ಪಠ್ಯ

ಸಾಹಿತ್ಯಿಕ ಪಠ್ಯದಂತಲ್ಲ; ಹಲವು ಆವೃತ್ತಿಗಳಿರುವುದು ಸಹಜ. "ತಾಯೀ ತಲೀ ಕಡದಾ/ಮತ್ತ ಮಾತೃಭಕ್ತನಾಗಿ ಉಳದಾ" ಎಂದಿದ್ದಾರೆ ಬೇಂದ್ರೆ. (ತಾ ಲೆಕ್ಕಣಿಕಿ ತಾ ದೌತಿ, ಪುಟ ೫೮). ಇನ್ನು ಜನಾಂಗ ದ್ವೇಷದ ಬಗ್ಗೆ. ವಶಿಷ್ಠ–ವಿಶ್ವಾಮಿತ್ರರ ಸಂಘರ್ಷ ವೈಯಕ್ತಿಕವೆಂದೂ, ಭಾರ್ಗವ ಬ್ರಾಹ್ಮಣರು ಮತ್ತು ಹೈಹೆಯ ಕ್ಷತ್ರಿಯರದು ಜನಾಂಗ/ವರ್ಗ/ಸಮುದಾಯಗಳ ಸಂಘರ್ಷವೆಂದೂ ವಿಶ್ಲೇಷಿಸಿದವರಿದ್ದಾರೆ. 'ಸಂಘರ್ಷ' ಪದ ಸ್ವಲ್ಪ ವಸ್ತುನಿಷ್ಠವೆನಿಸಿದರೆ 'ದ್ವೇಷ'ವು ಮನಃಕಷಾಯವನ್ನು ಸೂಚಿಸುತ್ತದೆ. ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚಲುವ ಕನ್ನಡನಾಡು' ಹಾಡಿನಲ್ಲಿ 'ರಾಜನ್ಯರಿಪು ಪರಶುರಾಮನಮ್ಮನ ನಾಡು' ಎಂಬ ಸಾಲಿನ ಬಗ್ಗೆ ಎದ್ದ ವಿವಾದವೂ ಇದೇ ನೆಲೆಯದು. ವಿನಾಯಕರ ಭಾರತ ಸಿಂಧುರಶ್ಮಿಯಲ್ಲಿ ವಿಶ್ವಾಮಿತ್ರರೆದುರು ಪರಶುರಾಮ ತನ್ನ ಸ್ವಭಾವದೋಷ ಒಪ್ಪಿಕೊಳ್ಳುತ್ತಾನೆ – "ಅಂಕಿತದೊಳಿಲ್ಲ ಹಲವಾರು ಮರ್ತ್ಯಾಂಶಗಳು:/ ಪ್ರಶಂಸೆಯ ಪ್ರೀತಿ, ಮುಂಗೋಪ, ಹಿತ್ತಾಳೆ ಕಿವಿ" (ಸಂಪುಟ ೨, ಪುಟ ೭೧೩). ಈ ಲೇಖನದ ಚಿಂತನೆ ಮಾಡುತ್ತಿರುವಾಗ ನಾನೊಂದು ಚುಟುಕ ಬರೆದೆ.

ಪರಶುರಾಮನ ಶಪಥ ಕ್ಷತ್ರಿಯರ ಕುಲನಾಶ
ಜನಕ ದಶರಥರೆಂತೊ ಉಳಿದರಲ್ಲ ।
ಇನ್ನೊಂದು ಶಪಥ ಕ್ಷತ್ರಿಯಗೆ ಕಲಿಸುವುದಿಲ್ಲ
ಭೀಷ್ಮನಿವನಿಂದಲೇ ಕಲಿತನಲ್ಲ ॥

ಈ ಚುಟುಕ ಮೂಡಿದ್ದು ನನ್ನ ಸ್ಪಷ್ಟತೆಗೇ ಹೊರತು ಯಾರದೋ ಕಾಮಾಲೆ ರೋಗಕ್ಕೆ ಔಷಧಿಯಾಗಿ ಅಲ್ಲ.

ಆಫ್ರಿಕಾ ಬಗ್ಗೆ ಜೊಸೆಫ್ ಕಾನ್ರಾಡನ ಕತ್ತಲೆಯ ಹೃದಯ (Heart of Darkness, 1899) ಕಾದಂಬರಿ ಯುರೋಪಿಯನ್ನರ 'ಹೃದಯದ ಕತ್ತಲೆ' ಎಂದು ವಾದಿಸುವ ಆಫ್ರಿಕಾದ ಲೇಖಕ ಚಿನುವಾ ಅಛಬೆ ಆ ಕಾದಂಬರಿಯಲ್ಲಿ ಜನಾಂಗವಾದದ ಕುರುಹುಗಳನ್ನು ಎಳೆ ಎಳೆಯಾಗಿ ಬಿಡಿಸುತ್ತಾನೆ. ಅವನ ಲೇಖನದ (೧೯೭೭) ಕೊನೆಯಲ್ಲಿ ಒಂದು ವಾಕ್ಯ ಬರುತ್ತದೆ: "ಕಾನ್ರಾಡ್ ಸಾಮ್ರಾಜ್ಯವಾದೀ ಶೋಷಣೆಯ ಕೇಡನ್ನು ಕಂಡನು, ಖಂಡಿಸಿದನು, ಆದರೆ ಅದು ತನ್ನ ಕಬ್ಬಿಣದ ಹಲ್ಲುಗಳನ್ನು ಮಸೆದುಕೊಂಡ ಜನಾಂಗವಾದದ ಬಗ್ಗೆ ಅವನಿಗೆ ಗೊತ್ತಿಲ್ಲದಿರುವುದು ವಿಚಿತ್ರವಾಗಿದೆ." ಅರ್ಧವಾಕ್ಯದಲ್ಲಿ ಸಾಧನೆ ಗುರುತಿಸಿ, ಇನ್ನರ್ಧದಲ್ಲಿ ಇತಿಮಿತಿ ತೋರಿದ ಅಛಬೆ ನನಗೆ ಒಪ್ಪಿಗೆ. ತ್ರಿಮೂರ್ತಿಗಳನ್ನಾಗಲೀ, ಅವತಾರಗಳನ್ನಾಗಲೀ ಒಪ್ಪದ ಬುದ್ಧನ ಹೃದಯ ಅಮಾಯಕರಿಗೆ ಕರುಣೆ ಹರಿಸುವಾಗ ಬ್ರಾಹ್ಮಣ ಅಬ್ರಾಹ್ಮಣ ಭೇದ ನೋಡುವುದಿಲ್ಲ ಎಂಬ ನಂಬಿಕೆ ನನಗಿದೆ. ಹೃದಯಕ್ಕೆ ಹೃದಯವೇ ಸಾಕ್ಷಿ, ಬೇರೆ ಇಲ್ಲ ಪ್ರಾಕ್ಸಿ (proxy). ವಾರಾನ್ನದ ವಿದ್ಯಾರ್ಥಿಯಾಗಿ, ಗುಮಾಸ್ತರಾಗಿ, ಚಾಕರಿ –

ನೌಕರಿಗಳಲ್ಲಿ, ಸಂಸಾರಿಕೆಯ ತಪಸ್ಸಿನಲ್ಲಿ ಶ್ರೀಧರರು ಎಲ್ಲೋ ಅನುಭವಿಸಿದ ಅವಮಾನ, ನಂಬಿಕೆ ದ್ರೋಹಗಳು ಛಲ, ನಿಷ್ಠುರತೆಯಾಗಿ ರೂಪುಗೊಂಡಿವೆ ಎಂದು ನನ್ನ ಅನಿಸಿಕೆ.

ಶ್ರೀಧರರ ಸ್ವಭಾವ, ಸಂಬಂಧಗಳನ್ನು ಎತ್ತಿ ತೋರುವ ಒಂದೆರಡು ನಿದರ್ಶನಗಳನ್ನು ನೀಡಬಹುದು. ಬೇಂದ್ರೆಯವರ ಕನ್ನಡ ಮೇಘದೂತದ ಮೊದಲನೇ ಪದ್ಯದಲ್ಲಿ 'ಶಪಿತ ವರುಷವನು' ಎಂಬ ಪದಪ್ರಯೋಗವಿದ್ದು 'ಶಪಿತ' ಎಂಬುದು ಅಪಾಣಿನೀಯ, 'ಶಪ್ತ' ಎಂದಾಗಬೇಕು ಎಂದು ಹೇಳಿದರಂತೆ. ಶಿವರಾಮ ಕಾರಂತರ ಕಾದಂಬರಿಯೊಂದರಲ್ಲಿ 'ಏನಕೇನ ಪ್ರಕಾರೇಣ' ಎಂಬ ಪದವಿದ್ದು 'ಏನಕೇನ' ತಪ್ಪು, 'ಯೇನ ಕೇನ' ಎಂದಾಗಬೇಕು ಎಂದರಂತೆ. ಆ ಹಿರಿಯರಿಬ್ಬರೂ 'ಬಾಲಾದಪಿ ಸುಭಾಷಿತಂ' ಎಂದು ಶ್ರೀಧರರನ್ನು ಒಪ್ಪಿಕೊಂಡರಂತೆ. ಇವರ ಧೈರ್ಯ, ಅವರ ಔದಾರ್ಯ ಎರಡೂ ಮೆಚ್ಚಬೇಕಾದ್ದೇ. ಈ ಘಟನೆಗಳಿಂದ ಅವರ ಸಂಬಂಧಗಳು ಹಾಳಾಗಲಿಲ್ಲ ಎಂಬುದು ಮುಖ್ಯ. ಲಿಪಿದೋಷ, ವ್ಯಾಕರಣ ದೋಷಗಳೇನೂ ನೈತಿಕ ಪತನವಲ್ಲ.

ಶ್ರೀಧರರ ಹಸ್ತಪ್ರತಿ ರೂಪದಲ್ಲಿದ್ದ ಓಂ ಸಾಧು ಅವರ ರಮಣಮಾರ್ಗ ಮತ್ತು ಅರವಿಂದರ ವೇದರಹಸ್ಯ ಕನ್ನಡ ಭಾಷಾಂತರಗಳು ಈ ಸಮಗ್ರ ಸಾಹಿತ್ಯ ಸಂಪುಟದಲ್ಲಿ ಪ್ರಥಮ ಬಾರಿಗೆ ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿ. ಶ್ರೀಧರರು ಹೇಳಿರುವಂತೆ "ಶಂಕರಾರ್ಥ ವಿವರಣೆ ರಮಣರಿಂದಾಗಿದೆ; ರಮಣಾರ್ಥ ವಿವರಣೆ ಅರವಿಂದರಿಂದಾಗಿದೆ. ಅರವಿಂದಾರ್ಥ ವಿವರಣೆಯು ಶಾಸ್ತ್ರೇತರ ಮಾರ್ಗದ ಮೂಲಕ ಬೇಂದ್ರೆಯವರಿಂದಾಗಿದೆ." ವೇದಗಳಿಗೆ ಸಾಯಣರ ಯಾಜ್ಞಿಕ ಅರ್ಥ ಮತ್ತು ಪಾಶ್ಚಾತ್ಯರ ಸಾಮಾಜಿಕ ಅರ್ಥ ತನಗೆ ಗ್ರಾಹ್ಯವಿಲ್ಲ, ಅರವಿಂದರ ಸಾಂಕೇತಿಕ ಅರ್ಥವೇ ಸಮ್ಮತ ಎನ್ನುತ್ತಿದ್ದರವರು. ಅದ್ವೈತಿಗಳು ಭೋಳೆ ಸ್ವಭಾವದವರು, ಸುಲಭವಾಗಿ ಮೋಸ ಹೋಗುತ್ತಾರೆ ಎನ್ನುವ ವ್ಯಾವಹಾರಿಕ ಜಾಣ ಸಾಹಿತಿಗಳಿದ್ದಾರೆ. ರಶಿಯಾದ ಕವಿ ಪುಷ್ಕಿನ್ ಹೇಳಿದಂತೆ ಪೆದ್ದು ಹುಡುಗಿಯೊಬ್ಬಳು ತನ್ನ ಭೋಳೇತನದಿಂದಾಗಿ ಪ್ರಿಯಕರನನ್ನು ಕಳೆದುಕೊಂಡರೆ ಅದು ಹಾಡಾಗಬಲ್ಲದು, ಲೋಭಿಯಾದ ಜಿಪುಣ ಅತ್ಯಾಸೆಯಿಂದ ಹಣ ಕಳೆದುಕೊಂಡರೆ ಅದು ಕೇವಲ ವಿಡಂಬನೆಗೆ ವಸ್ತುವಾಗಬಲ್ಲದು. ಕಳೆದ ಶತಮಾನದ ಕೊನೆಯಲ್ಲಿ ಗಣಪತಿ ಹಾಲು ಕುಡಿದ ಪವಾಡ (?) ಘಟಿಸಿದಾಗ

ಸಂಭ್ರಮ ಪಟ್ಟವರಲ್ಲಿ ಮುಗ್ಧ ಭಕ್ತಿಯವರು ಮಾತ್ರವಲ್ಲ, ಭಾರತದ ಮಾಧ್ಯಮದವರು, ವಿಜ್ಞಾನ–ತಂತ್ರಜ್ಞಾನದವರೂ ಪಾಲ್ಗೊಂಡಿರಲೇ ಬೇಕು. ಅವರ ಕೈವಾಡ (!) ವಿಲ್ಲದೇ ಅದು ಜಾಗತಿಕ ಮಟ್ಟದಲ್ಲಿ ಹರಡುವುದು ಸಾಧ್ಯವೇ ಇಲ್ಲ. ಗಣಪತಿಯ ಜೊತೆ ನಾನಂತೂ ಹಾಲು ಕುಡಿದಿದ್ದೇನೆ. ಕವಿ ಬೇಂದ್ರೆ ಹೇಳಿರುವಂತೆ ತಾಯಿಯ ಹಾಲನ್ನು ಎಂಜಲು ಮಾಡುವ ಮಗ ಇನ್ನೂವರೆಗೆ ಹುಟ್ಟಿ ಬಂದಿಲ್ಲ;

ಅಕಸ್ಮಾತ್ ಯಾರಿಗಾದರೂ ಹಾಗೆ ಅನಿಸಿದರೆ ಅವರ ಕಣ್ಣಿನಲ್ಲೇ ದೋಷವಿರಬೇಕು.

ಜೀವನದ ನಾಟ್ಯಶಾಲೆಯಲ್ಲಿ ಶ್ರೀಧರರು ಪಾಲ್ಗೊಂಡ ವಾರಾನ್ನದೂಟ, ಗುಮಾಸ್ತಗಿರಿ, ಪತ್ರಿಕಾವೃತ್ತಿ, ಆಡಳಿತ ನಿರ್ವಹಣೆ, ಶಾಸ್ತ್ರ ಸಾಹಿತ್ಯ ರಚನೆ, ಇತಿಹಾಸ ಸಂಶೋಧನೆ–ಈ ಯಾವುದರ ನೇರ ಕ್ಷೇತ್ರಾನುಭವವೂ ನನಗಿಲ್ಲ. ಅವರನ್ನು ಆತ್ಮಿಕವಾಗಿ ಹಚ್ಚಿಕೊಂಡವನೆಂಬ ಕಾರಣಕ್ಕಾಗಿ ನನ್ನಿಂದ ಈ ಲೇಖನ ಬರೆಸಿದ್ದಾರೆ. ಇದು ಪಾಮರರಿಗೆ ಅಜೀರ್ಣವೂ, ಪಂಡಿತರಿಗೆ ಅಪಥ್ಯವೂ ಆಗದೇ ಶ್ರೀಧರ ಸಾಹಿತ್ಯದ ಅನುಸಂಧಾನಕ್ಕೆ ಪೀಠಿಕೆಯಾಗಲಿ ಎಂದು ಆಶಿಸುತ್ತೇನೆ. ಒಳಗೆ ಬನ್ನಿ.

ಎಚ್.ಆರ್. ಅಮರನಾಥ
ಇಂಗ್ಲೀಷ್ ಸಹ ಪ್ರಾಧ್ಯಾಪಕ
ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು
ಸಾಗರ (ಶಿವಮೊಗ್ಗ ಜಿಲ್ಲೆ) ೫೭೭೪೦೧

ಹರಕೆ

ಡಿ.ವೀರೇಂದ್ರ ಹೆಗ್ಗಡೆಯವರು

ಶ್ರೀ ಧರ್ಮಸ್ಥಳ – ೫೭೪೨೧೬

ದಕ್ಷಿಣ ಕನ್ನಡ, ಕರ್ನಾಟಕ

ಕಛೇರಿ : (೦೮೨೫೬) ೨೭೭೧೨೧

ಫ್ಯಾಕ್ಸ್ : ೨೭೭೧೧೬

ತಾ. ೩.೫.೨೦೧೨

ಶ್ರೀಮತಿ ರಾಜೇಶ್ವರಿ ಲೊಕಾರೆಯವರಿಗೆ,

ಖ್ಯಾತ ಸಾಹಿತಿಗಳೂ, ವಿಮರ್ಶಕರೂ ಆಗಿದ್ದ ಬಿ.ಎಚ್.ಶ್ರೀಧರರ ಸಮಗ್ರ ಕೃತಿಗಳ ಪುನರ್ ಮುದ್ರಣ ಮಾಡುವ ವಿಚಾರ ತಿಳಿದು ಸಂತೋಷವಾಯಿತು.

ತನ್ನ ವಿಭಿನ್ನ ಚಿಂತನಾ ಶೈಲಿಯಿಂದ ಅವರು ಕನ್ನಡ ನಾಡು–ನುಡಿಗೆ ಅನುಪಮ ಸೇವೆ ಸಲ್ಲಿಸಿದ್ದಾರೆ. ಅವರ ಕೃತಿಗಳ ಪುನರ್ ಮುದ್ರಣ ಮಾಡುತ್ತಿರುವುದು ಅವರಿಗೆ ನೀಡುವ ಗೌರವವಾಗಿದೆ.

ನೀವು ಹಮ್ಮಿಕೊಂಡ ಕಾರ್ಯ ಯಶಸ್ವಿಯಾಗುವಂತೆ ಶ್ರೀ ಮಂಜುನಾಥ ಸ್ವಾಮಿ ಹರಸಲೆಂದು ಪ್ರಾರ್ಥಿಸುತ್ತೇನೆ.

ಇತಿ,

(ಡಿ.ವೀರೇಂದ್ರ ಹೆಗ್ಗಡೆಯವರು)

ಹಾರೈಕೆ

ಜಿ. ವೆಂಕಟಸುಬ್ಬಯ್ಯ

ಶ್ರೀಮತಿ ರಾಜೇಶ್ವರಿಯವರೇ,

ನಿಮ್ಮ ತಂದೆಯವರನ್ನು ನಾನು ಚೆನ್ನಾಗಿ ಬಲ್ಲೆ. ನಾನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅತ್ಯಂತ ಕಿರಿಯ ಉಪನ್ಯಾಸಕನಾಗಿದ್ದಾಗ ಶ್ರೀ ಬಿ.ಎಚ್.ಶ್ರೀಧರ ಅವರು ಸಂಸ್ಕೃತ ವಿಭಾಗದಲ್ಲಿ ಐ.ಜೆ.ವಿದ್ಯಾರ್ಥಿಯಾಗಿದ್ದರು. ನಾವು ಆಗಾಗ ಸಂಧಿಸುತ್ತಿದ್ದೆವು. ೧೯೪೨ರಲ್ಲಿ ಪಂಪಮಹಾಕವಿಯ ಸಹಸ್ರಮಾನೋತ್ಸವವನ್ನು ನಾವೆಲ್ಲ ನೆರವೇರಿಸಿದಾಗ ಶ್ರೀ ಶ್ರೀಧರ ಅವರು ಪಂಪನ ಮೇಲೆ ಸಂಸ್ಕೃತ ಭಾಷೆಯಲ್ಲಿ ಹೊಗಳಿಕೆಯ ಸ್ತುತಿ ರಚಿಸಿ ಎಲ್ಲ ವಿದ್ವಾಂಸರ ಮನಸ್ಸನ್ನು ಗೆದ್ದರು. ಆ ಕಾಲದಲ್ಲಿಯೇ ಅವರು ಆಗಾಗ ಲೇಖನಗಳನ್ನು ರಚಿಸುತ್ತಿದ್ದರು. ನೇರವಾದ ಮಾತಿನ, ಗಟ್ಟಿ ನಿಲುವಿನ, ದೃಢವಿಶ್ವಾಸದ ವ್ಯಕ್ತಿಯಾಗಿದ್ದರು ಅವರು. ಅವರು ಉ.ಕನ್ನಡದಲ್ಲಿ ಸಂಸ್ಕೃತ ಉಪಾಧ್ಯಾಯರಾಗಿ ನಿಂತಮೇಲೆ, ಸಿದ್ಧಾಪುರದಲ್ಲಿ ಪ್ರಾಂಶುಪಾಲರಾಗಿದ್ದ ಕಾಲದಲ್ಲಿ ನಮ್ಮಿಬ್ಬರಿಗೂ ಸ್ವಲ್ಪ ಕಾಲ ಪತ್ರ ವ್ಯವಹಾರವಿತ್ತು. ಆ ಬಳಿಕ ನಾವಿಬ್ಬರೂ ವೃತ್ತಿಯ ಗೊಂದಲದಲ್ಲಿ ಮುಳುಗಿಬಿಟ್ಟಿತ್ತು. ಅವರು ರಚಿಸಿದ ಕೆಲವು ಪುಸ್ತಕಗಳು ಈಗಲೂ ನನ್ನ ಬಂಡಾರದಲ್ಲಿ ಮುಳುಗಿರುತ್ತವೆ. ಹುಡುಕಿದರೆ ಸಿಗುತ್ತವೆ. ಈ ವಯಸ್ಸಿನಲ್ಲಿ ಆ ಕೆಲಸ ಕಷ್ಟ.

ಶ್ರೀಧರರ ಪುಸ್ತಕಗಳನ್ನು ಪುನರ್ಮುದ್ರಿಸುವ ಕೆಲಸ ಸ್ತುತ್ಯವಾದುದು. ಅವರ ಎಲ್ಲ ಪ್ರಕಾರದ ಕೃತಿಗಳನ್ನು ಸಮಗ್ರವಾಗಿ ಒಂದೊಂದು ಸಂಪುಟವಾಗಿ ಪ್ರಕಟಿಸಿದರೆ ಕನ್ನಡಕ್ಕೆ ಸಹಾಯವಾಗುತ್ತದೆ. ನಿಮ್ಮ ಕಾರ್ಯದಲ್ಲಿ ನಿಮಗೆ ಗೆಲುವು ದೊರಕಲಿ. ನನ್ನ ಶುಭಾಶಯಗಳು.

ಇಂತೀ ನಿಮ್ಮ

ಜಿ.ವೆಂಕಟಸುಬ್ಬಯ್ಯ

೯–೩–೧೨

FOREWORD

I feel honoured that I am invited to write a few words way of a Foreword to the complete works or Professor B.H.Shridhar in six volumes edited with devotion Shrimati Sumitra Halawai, for the excellent reason that Professor B.H.Shridhar was a fascinating figure in the intellectual history of modern Karnataka in the last century. It is one of the regrets of my life that I did not have the opportunity or knowing him personally. I may have run into him either places my younger brother, Prof. K.V.Rao, was his junior colleague in colleges there. But I have no recollection of any such meeting. I see that destiny has forged four connections with him. First he was an independent thinker who refused to be anybody's man. I think I am somewhat like him in this regard. Then, he was devoted to Bendre and I am an equally ardent devotee of Bendre. He was a dedicated teacher whom his students worshipped. I may also claim immodestly that I am a committed teacher, committed to my work and my students. Lastly he has one more interesting link with me. I am not potentially a promising candidate for awards, and the first award I received in my life was given in his name in 2000 for my service to Kannadamma through the mediation of Englishamma! I later learnt that it was given to distinguished writers, and I was happy to be in good company.

Prof. Shridhar was a prolific writer who contributed to a variety of literary fields - creative poetry, drama, fiction, discursive writings, works of impeccable scholarship and lively translations from Sanskrit and English into Kannada. A brief Foreword is no place to engage in a serious discussion of his writings. Instead, I shall focus on one of

his central ideas with which I wholly agree. This is the idea that Indian cultural categories do not mix mechanically with Western categories. This is not to say that the West can have no entry into our cultural universe but that it can enter it only on our terms after being refracted through Indian cultural glass. This was the position of Gandhi and Bendre, perhaps not of Tagore, and I am one with him on this basic idea. It is to the great man's credit that he did not dilute his cultural identity. Instead he fashoined creatively an Indian version of modernity, contrasting sharply with imitative modernity. Shrimati Halawai has done a signal service to the cause of our culture by editing competently Prof Shridhar's corpus. We should all be greateful to her. I am sure these volumes will make a profound impact on our cultural and intellectual life.

Dharwad **K.Raghavendra Raಂ**

ನಾಲ್ಕನೆಯ ಸಂಪುಟದ ಕುರಿತು...

ಬಿ.ಎಚ್. ಶ್ರೀಧರ ಸಮಗ್ರ ಸಾಹಿತ್ಯ ಸರಣಿಯಲ್ಲಿ – 'ಕಾವ್ಯ', 'ವಿಮರ್ಶೆ', 'ವಿಚಾರ'ಗಳ ಬಳಿಕ ನಾಲ್ಕನೆಯ ಸಂಪುಟವಾಗಿ ಬರುತ್ತಿರುವ ಈ 'ಸಂಕೀರ್ಣ' ಶ್ರೀಧರರ ಸ್ವಾರಸ್ಯಮಯ, ವಿಭಿನ್ನ ಮುಖಗಳನ್ನು ಪರಿಚಯಿಸುತ್ತದೆ. 'ಭಾಷಣ ಭೈರವರ ಒಡ್ಡೋಲಗ' (ವಿಡಂಬನೆ), ಸೋಮಾರಿ ಕ್ಲಬ್ ನಾಟಕ), 'ಮಯೂರ ಶರ್ಮ' (ಚಾರಿತ್ರಿಕ ನಾಟಕ, ಮಕ್ಕಳಿಗಾಗಿ), ಪಂಚರಾತ್ರ (ಯಕ್ಷಗಾನ), ಕೌಶಿಕ ರಾಮಾಯಣ (ಕಾವ್ಯಸಂಗ್ರಹ), ಬನವಾಸಿಯ ಕದಂಬರು (ಸಂಶೋಧನೆ), 'ಮಯೂರಶರ್ಮ' (ಮಕ್ಕಳಿಗಾಗಿ ಮಯೂರಶರ್ಮರ ಇತಿಹಾಸ), ಬನವಾಸಿಯ ಕೈಪಿಡಿ (ಬನವಾಸಿ ಕ್ಷೇತ್ರವಿವರ) ಮತ್ತು 'ಜೀವಯಾನ' (ಆತ್ಮಕಥೆ), ಜತೆಗೆ ಶ್ರೀಧರರ ಶಿಷ್ಯರು, ಸ್ನೇಹಿತರು, ಕುಟುಂಬವರ್ಗದವರ ನೆನಪುಗಳು – ಇವಿಷ್ಟು ಈ ಸಂಪುಟದ ಒಳಗಿನ ಹೂರಣಗಳು.

'ಭಾಷಣ ಭೈರವರ ಒಡ್ಡೋಲಗ', ೫೦–೬೦ರ ದಶಕದಲ್ಲಿದ್ದ ಕನ್ನಡ ಹಾಸ್ಯಸಂಚಿಕೆ 'ನಗುವನಂದ' ಪತ್ರಿಕೆಗೆಂದು ಬರೆದ ಕೆಲವು ಲೇಖನಗಳ ಸಂಕಲನ. ಶ್ರೀಧರರ ಪ್ರಿಯ ಅಸ್ತ್ರವಾದ ವಿಡಂಬನೆ ಗದ್ಯರೂಪಿಯಾಗಿ ಅಲ್ಲಿ ವಿಜೃಂಭಿಸಿದೆ. ಬಾಲಪುರಂದರ, ಪರಮಾಚಾರ್ಯ, ಮರುಳಸಿದ್ಧ, ಇತ್ಯಾದಿ ಕಾವ್ಯನಾಮಗಳಿಂದ ಪತ್ರಿಕೆಯ ವಿವಿಧ ಅಂಕಣಗಳನ್ನು ತರುಣ ಶ್ರೀಧರರು ತುಂಬುತ್ತಿದ್ದರು. ವಚನಶೈಲಿಯ ಈ ವಿಡಂಬನೆ – "ಮುಕ್ತಾತ್ಮರಾರು ಎಂಬುದ ಬಲ್ಲಿರಾ ಭವಿಗಳೇ? ಅಡ್ವಾನ್ಸ್ ಪಡೆದ ಆಳು, ವರ್ಗವಾದ ನೌಕರ, ಮತ ಗಿಟ್ಟಿಸಿದ ಎಮ್ಮೆಲ್ಲೆ, ಮಂತ್ರಿಯಾದ ಮಾನಹೀನ, ಕಳ್ಳಮಾಲನ್ನು ಇಲ್ಲ ಮಾಡಿದವ, ಕಂಡದ್ದನ್ನೇ ಕಾಣೆನೆಂದು ಕೂಗುವವ, ಇಂತಪ್ಪ ಶರಣರ ಸಂತಪಂಥ ಹಿಡಿದು ಚಿಂತೆ ಬಿಟ್ಟು ಚಿರಭೋಗಿಗಳಾಗಿರೋ ಎಂಬ ನಮ್ಮ ನನ್ನಿಯ ಚೆನ್ನಿಗ ಎಮ್ಮೆಲ್ಲಯ್ಯ!" ಇಂದಿಗೂ ಸಂಪೂರ್ಣ ಹೊಂದುವುದೊಂದು ಭಾರತದ ದುರಂತ! 'ನಗುವನಂದ'ದ ಇಂಥ ಎಷ್ಟೋ ಲೇಖನಗಳು ಅಲಭ್ಯವಾಗಿವೆ ಎಂಬ ಖೇದವಿದೆ. 'ಸೋಮಾರಿ ಕ್ಲಬ್' ಇಂಥದೇ ಲಘುಶೈಲಿಯಲ್ಲಿರುವ ತಿಂದುಂಡು ಕೊಬ್ಬಿದ, ನೀತಿ–ನಿಯಮರಹಿತ, ಬೇಜವಾಬ್ದಾರಿ ಬದುಕನ್ನು ಕಂಠಮಟ್ಟ ಆಸ್ವಾದಿಸುತ್ತಿರುವ ಸೋಮಾರಿಗಳ ಕೂಟದ ಚಿತ್ರಣವೀಯುವ ನಾಟಕ. ಕೌತುಕವೆಂದರೆ ಈ ನಾಟಕ ಬರೆಯುವಾಗ ಶ್ರೀಧರರು ೭೦ ವರ್ಷ ಮುಟ್ಟಿದ್ದರು! ಪ್ರತಿಭೆ ಮತ್ತು ಸ್ಫೂರ್ತಿ ಯಾವಾಗ ಎಂಥ ಸೃಷ್ಟಿಗೆ ಕಾರಣವಾಗುವುದೋ ಎಂಬುದು ಅನೂಹ್ಯ! ಏಕೆಂದರೆ ಪ್ರತಿಭೆ ನಿಯತಿಕೃತನಿಯಮರಹಿತ! ಶ್ರೀಧರರ ಗಂಭೀರ ಚಿಂತಕ ಮುಖ ಇಂಥ 'ಬಂಧವಿರದ ಬಂಧುರ, ಸ್ವಚ್ಛಂದ ಸುಂದರ' ಹೇಗಾಯಿತು ಎಂಬ ಬೆರಗಿಗೆ ಉತ್ತರ, ವಿಷಯಕ್ಕನುಗುಣವಾಗಿ ಉಚಿತ ರೂಪ ಧಾರಣೆ ಮಾಡಬಲ್ಲ ಶಕ್ತಿ ಉನ್ನತ ಕವಿಗಿರುತ್ತದೆ

ಎಂಬುದೇ. ಮುಂದಿನ ಕೃತಿ 'ಮಯೂರ ಶರ್ಮ' ಶ್ರೀಧರರ ಅಭಿಮಾನ ಮತ್ತು ಪ್ರೀತಿಯ ಕೇಂದ್ರವಾಗಿದ್ದ ಬಲವಾಸಿಯ ದೊರೆ, ಕರ್ನಾಟಕದ ಪ್ರಥಮ ಚಕ್ರವರ್ತಿಯೆನಿಸಿಕೊಂಡ ಮಯೂರಶರ್ಮನ ಜೀವನಚರಿತ್ರೆ, ನಾಟಕರೂಪದಲ್ಲಿ ಮಕ್ಕಳಿಗೆ ರಚಿತವಾಗಿದೆ. ಅದೇ ಅಭಿಮಾನ ಸರಳರೂಪದಲ್ಲಿ ಮತ್ತೆ ಮಕ್ಕಳಿಗೆಂದೇ ಜೀವನಚರಿತ್ರೆಯಾಗಿ 'ಮಯೂರಶರ್ಮ' ಎಂಬ ಹೆಸರಿನಲ್ಲೇ ಬರೆಯಲ್ಪಟ್ಟಿದೆ. ಅದೇ ಶ್ರದ್ಧೆಯಿಂದ 'ಬನವಾಸಿಯ ಕದಂಬರು' ಗಂಭೀರ ಸಂಶೋಧನೆ, 'ಬನವಾಸಿಯ ಕೈಪಿಡಿ' ಎಂಬ ಕ್ಷೇತ್ರವಿವರ ಇತಿಹಾಸದ ಅಭ್ಯರ್ಥಿಗಳಿಗಾಗಿ ಬರೆಯಲ್ಪಟ್ಟಿದೆ. 'ಧೀರೋದಾತ್ತತೆ' ಶ್ರೀಧರರ ಪ್ರಿಯ ಆದರ್ಶ. ಅದನ್ನವರು ಕನ್ನಡದ ಚಕ್ರವರ್ತಿ ಮಯೂರಶರ್ಮನಲ್ಲಿ ಗುರುತಿಸಿ, ಮೆಚ್ಚಿದ್ದರು. 'ರಾಮರಾಜ್ಯ'ಕ್ಕೊಂದು ಸಂವಾದಿಯಾಗಿ ಕುಂತಳರಾಜ್ಯ (ಬನವಾಸಿ) ಅವರಿಗೆ ಕಂಡಿದೆ. ಆ ಹೆಮ್ಮೆಯ ಅಭಿವ್ಯಕ್ತಿಯೇ ಈ ಸರಣಿ ಕೃತಿಗಳು!

'ಪಂಚರಾತ್ರ', ಸಂಸ್ಕೃತ ನಾಟಕಕಾರ ಭಾಸನ ಅದೇ ಹೆಸರಿನ ನಾಟಕದ ಯಕ್ಷಗಾನ ರೂಪ. ಹಲವು ವರ್ಷಗಳ ಹಿಂದೆಯೇ ರಚಿತವಾಗಿದ್ದರೂ ಇದಕ್ಕೆ ಪ್ರಕಟಣೆಯ ಭಾಗ್ಯ ದೊರಕಿರಲಿಲ್ಲ. ಈಗ ಅದು ಶ್ರೀಧರರ ಸಹೋದ್ಯೋಗಿ, ಸಂಸ್ಕೃತ ವಿದ್ವಾಂಸ ಮತ್ತು ಕಿರಿಯ ಸ್ನೇಹಿತ ಪ್ರೊ. ಎಮ್.ಎ. ಹೆಗಡೆ, ದಂಟಕಲ್ ಇವರಿಂದ ಪರಿಷ್ಕೃತಗೊಂಡು ಈ ಸಂಪುಟದಲ್ಲಿ ಬೆಳಕು ಕಾಣುತ್ತಿದೆ. ಶ್ರೀಧರರ ಮೇಲಿನ ಗೌರವ, ಆದರಗಳಿಂದ ಈ ಕಾರ್ಯ ಮಾಡಿಕೊಟ್ಟ ಪ್ರೊ. ಎಮ್.ಎ. ಹೆಗಡೆಯವರಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಶ್ರೀಧರರ ಯಕ್ಷಗಾನದ ಪ್ರೀತಿ, ಜ್ಞಾನ ಎರಡೂ ಅವರ ದೊಡ್ಡಪ್ಪಂದಿರಿಂದ ಬಂದ ಬಳುವಳಿ.

'ಕೌಶಿಕ ರಾಮಾಯಣ', ಮಕ್ಕಳಿಗಾಗಿ, ಯಾಣದ ಕವಿ ಬತಲೇಶ್ವರ ವಿರಚಿತ ರಾಮಾಯಣದ ಸಂಗ್ರಹ. ೪೪ ಸಂಧಿಗಳನ್ನುಳ್ಳ, ಭಾಮಿನೀ ಷಟ್ಪದಿಯಲ್ಲಿರುವ, ಸುಲಲಿತ ಶೈಲಿಯ ಆ ಗ್ರಂಥವನ್ನು ಶ್ರೀಧರರು ಅಷ್ಟೇ ರಸವತ್ತಾದ ಶೈಲಿಯಲ್ಲಿ, ರಸವತ್ತಾದ ಭಾಗಗಳನ್ನು ಆಯ್ಕೆ ಮಾಡಿ ಸಂಗ್ರಹಿಸಿದ್ದು ಅವರ ಕೌಶಲ್ಯದ ದ್ಯೋತಕ.

ಕೊನೆಯ 'ಜೀವಯಾನ', ಶ್ರೀಧರರ 'ಆತ್ಮಕತೆ' ಎನ್ನುವುದಕ್ಕಿಂತ ಸ್ಮರಣೆಗಳ ಸರಮಾಲೆ ಎನ್ನಬಹುದು. ಅವರ ಜೀವನದಲ್ಲಿ ನಡೆದ ಘಟನೆಗಳು, ಬಂದು–ಹೋದ, ಮನದಲ್ಲಿ ನಿಂತ ಎಲ್ಲ ವ್ಯಕ್ತಿಗಳು – ಇವುಗಳನ್ನೆಲ್ಲ ದಾಖಲಿಸುವುದಕ್ಕೆ ಅವರಿಂದಾಗಿಲ್ಲ ಅಥವಾ ಅವರದಕ್ಕೆ ಕೈಹಾಕಲಿಲ್ಲ. ಬಾಲ್ಯ, ವಿದ್ಯಾರ್ಥಿದೆಸೆಯ ಮನವನ್ನು ಮುದಗೊಳಿಸಿದ ರಸಪೂರ್ಣ ಕ್ಷಣಗಳನ್ನಷ್ಟೇ ನೀಡಿದ್ದಾರೆ. ಜೀವನಾನುಭವದ ಕಿಂಚಿತ್ ಭಾಗ ಮಾತ್ರ ನೆನಪಾದಷ್ಟು ಮೂಡಿಬಂದಿದೆ. ಹೀಗಾಗಿ ಅದು 'ಆತ್ಮಕಥೆ'ಯ ವ್ಯಾಖ್ಯೆಗೆ ಹೊಂದಿಕೊಳ್ಳದೇನೋ. ಶ್ರೀಧರರು ಬೆಳೆದಂತೆಲ್ಲ, 'Life is a passing show' (ಜೀವಯಾನ) ಎಂಬ ಕಾಣ್ಕೆ ಅವರನ್ನು ಆವರಿಸಿರೇಕು ಎನಿಸುತ್ತದೆ. ಆದರೂ ಈ 'ಪ್ರದರ್ಶನಯುಗ'ದ ಮಧ್ಯೆಯೂ ಅವರನ್ನು ಜೀವನವಿಮುಖಿಯಾಗದಂತೆ, ಸಿನಿಕರಾಗದಂತೆ ಕಾಯ್ದದ್ದು ಅವರು ಒಪ್ಪಿದ್ದ, ಅರಗಿಸಿಕೊಂಡಿದ್ದ 'ರಮಣ ಮಹರ್ಷಿತ್ವ'. ಜೀವನ್ಮುಕ್ತಿ ಎಂಬುದು ಜೀವನಮುಖಿಯೇ ಆತ್ಯಂತಿಕವಾಗಿ!

ಈ ನಾಲ್ಕನೆಯ ಸಂಪುಟ ಬರುವ ಹೊತ್ತಿನಲ್ಲಿ ಶ್ರೀಧರರ ಬರವಣಿಗೆಗಳ ರಾಶಿಯಲ್ಲಿ ಅಕಸ್ಮಾತ್ತಾಗಿ 'ಸಹ್ಯಾದ್ರಿ ದರ್ಶನ' ಎಂಬ ಶೀರ್ಷಿಕೆಯನ್ನು ಹೊತ್ತ ಸುಮಾರು ೫೦ ಪುಟಗಳ ಹೊತ್ತಿಗೆ ಸಿಕ್ಕಿತು. ಈ ಸಂಪುಟದಲ್ಲಿ ಬಂದಿರುವ ಶ್ರೀಧರರ ಆತ್ಮಕಥೆಯ ಸ್ವರೂಪವಿರುವ 'ಜೀವಯಾನ' ದ ಕಡೆಯ ಭಾಗವಾಗಿ ಇದನ್ನು ಸೇರಿಸಬಹುದು ಎನಿಸಿತು. ಶ್ರೀಧರರು ೧೯೮೭-೮೮ ರ ಸುಮಾರಿಗೆ ಇದನ್ನು ಬರೆದಿರಬಹುದು. ಇದು ಅವರ ಆತ್ಮನಿರೀಕ್ಷಣೆಯ ಫಲವಾಗಿ ಬಂದ ಅಭಿವ್ಯಕ್ತಿಯಾಗಿದ್ದರೂ ಎಲ್ಲ ಚಿಂತಕರ ಸೊಲ್ಲೂ ಅಂತಿಮವಾಗಿ ಇದೇ ಇರಲಾರದೇ ಎನಿಸುತ್ತದೆ. ಹೀಗಾಗಿ ಈ ಹೊತ್ತಿಗೆಯನ್ನೂ ಇಲ್ಲಿ ಸೇರಿಸಲಾಗಿದೆ.

ಕೊನೆಯಲ್ಲಿ ಶ್ರೀಧರರ ಅಭಿಮಾನಿಗಳ, ಶಿಷ್ಯರ, ಸ್ನೇಹಿತರ, ಬಂಧುಗಳ ನೆನಪುಗಳು ಸಂಸ್ಮರಣೆಯ ರೂಪದಲ್ಲಿ ನೀಡಲ್ಪಟ್ಟಿವೆ. ಕೆಲವು ಈ ಸಮಗ್ರಕ್ಕೆಂದೇ ಬರೆಯಲ್ಪಟ್ಟವುಗಳು, ಇನ್ನು ಕೆಲವು "ಶ್ರೀಧರ ಸ್ಮರಣೆ" (ಶ್ರೀಧರ ಪ್ರಶಸ್ತಿ ೧೦ ವರ್ಷ ಪೂರೈಸಿದಾಗ ತಂದ ಸ್ಮರಣಸಂಚಿಕೆ) ಯಿಂದ ಆಯ್ದವುಗಳು. ಅವರೆಲ್ಲರಿಗೂ ನಮ್ಮ ಗೌರವಪೂರ್ವಕ ನಮನಗಳು. ಶ್ರೀಧರರ ಪತ್ನಿ ಶ್ರೀಮತಿ ರಮಾದೇವಿಯವರ ನೆನಪುಗಳು, ಶ್ರೀಧರರ ಮರಣಾನಂತರ "ಧ್ಯೇಯನಿಷ್ಠ ಪತ್ರಕರ್ತ" ಎಂಬ ಪತ್ರಿಕೆಯಲ್ಲಿ ಸರಣಿಲೇಖನದ ರೂಪದಲ್ಲಿ ಬಂದದ್ದು. ಈಗ ರಮಾದೇವಿಯವರೂ ಸ್ಮರಣೆ ಮಾತ್ರ ಎಂಬ ನೋವಿದೆ.

ಈ ಸಂಪುಟದೊಂದಿಗೆ, ಶ್ರೀಧರರು ರಚಿಸಿದ ಕೃತಿಗಳೆಲ್ಲವೂ ಮುಗಿದಿವೆ ಎಂದುಕೊಂಡರೂ ಅದು ಹಾಗಲ್ಲ. ಏಕೆಂದರೆ ಸಂಸ್ಕೃತದಿಂದ, ಇಂಗ್ಲಿಷ್‌ನಿಂದ ಅವರು ಕನ್ನಡಕ್ಕೆ ಅನುವಾದಿಸಿದ ಕೃತಿಗಳು ಹಲವಿವೆ. ಆ ಅನುವಾದಿತ ಕೃತಿಗಳ ಸಂಪುಟ ಬರಬೇಕಿದೆ, ಶೀಘ್ರವೇ ಬರುತ್ತದೆ. ಅಷ್ಟೇ ಅಲ್ಲ. ಪತ್ರಿಕೆಗಳಲ್ಲಿ, ವಿಶೇಷ ಸಂಚಿಕೆಗಳಲ್ಲಿ ಬಂದಿದ್ದ ನೂರಾರು ಮೌಲಿಕ ಲೇಖನಗಳ ಸಂಗ್ರಹ ಪ್ರಕಟಣೆ ಆಗಬೇಕಿದೆ. ಶ್ರೀಧರರ ಒಂದು ಚಿಕ್ಕ ಲೇಖನದ ಹಿಂದೆಯೂ ಪೂರ್ಣ ಶ್ರದ್ಧೆ, ಪರಿಶ್ರಮ, ಆಳಚಿಂತನೆ ಇರುತ್ತಿದ್ದಾದ್ದರಿಂದ, ಅವುಗಳ ಸಂಕಲನದ ಕಾರ್ಯ ಕನ್ನಡ ಸಾಹಿತ್ಯದ ಅಗತ್ಯ. ಪ್ರಕಾಶನವನ್ನು ಜ್ಞಾನಪ್ರಕಾಶದ ಸಾಧನವೆಂದು ಭಾವಿಸಿರುವ ಪ್ರಕಾಶಕರಿಂದ ಇದೂ ಸಾಧ್ಯ.

ಇಂದಿನ ಈ ವಿಚಿತ್ರ ಸಂಧಿಕಾಲದಲ್ಲಿ, ಅಲ್ಲಿಯೂ ಸಲ್ಲದ – ಇಲ್ಲಿಯೂ ಸಲ್ಲದ ಗೊಂದಲದಲ್ಲಿ, ಧ್ಯೇಯ-ಆದರ್ಶ-ಮೌಲ್ಯಗಳು ಮಸುಕಾಗುತ್ತಿರುವ ಗಳಿಗೆಯಲ್ಲಿ ಸುಸಂಸ್ಕೃತಿಯನ್ನು ನಿಷ್ಠೆಯಿಂದ, ಧೀರತೆಯಿಂದ ಬಾಳಿದ, ಅದನ್ನೇ ಸಾರಿದ ಶ್ರೀಧರರಂಥ ವ್ಯಕ್ತಿಗಳ ಬದುಕು-ಬರಹದ ಅಧ್ಯಯನ – ಒಂದು ಗಟ್ಟಿ ನೆಲೆಯನ್ನು, ಗಮ್ಯವನ್ನು ತೋರುವಲ್ಲಿ ನೆರವು ನೀಡೀತು ಎಂಬ ಸದಿಚ್ಛೆ ಈ ಸಂಪುಟವನ್ನು ಹೊರತರುವ ಕಾರ್ಯಕ್ಕೆ ಮೂಲವಾಗಿದೆ.

– ಸಂಪಾದಕರು

ಪರಿವಿಡಿ

ಭಾಷಣ ಭೈರವರ ಒಡ್ಡೋಲಗ

(ವಿಡಂಬನಗಳ ಸಂಗ್ರಹ)

ಅರಿಕೆ

ವಿಡಂಬನವು ಒಂದು ಸಾಹಿತ್ಯಕಲೆ. ವಸ್ತು, ವ್ಯಕ್ತಿ, ಸನ್ನಿವೇಶ, ಘಟನೆಗಳ ಬೆಲೆ ಅತಿಶಯ ಕಡಿಮೆಯಾಗುವಂತೆ ಚಿತ್ರಿಸುವುದು ಇಲ್ಲಿ ಸಹಜ. ವಿಡಂಬನದಲ್ಲಿ ವ್ಯಕ್ತಿಗತ ಟೀಕೆ ಎಂದು ಒಮ್ಮೆ ತೋರಿದರೂ ಅದು ಆ ವ್ಯಕ್ತಿಯ ವರ್ಗಕ್ಕೆ ಅನ್ವಯಿಸುತ್ತದೆ.

ಈ ವಿಡಂಬನ ಸಂಗ್ರಹದಲ್ಲಿ ವರ್ತಮಾನ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ, ಮುಂತಾದ ವ್ಯವಹಾರಗಳಲ್ಲಿ ವಿವಿಧ ಮಾದರಿಯ ವಾಗ್ವರ್ತನೆಗಳನ್ನು ಇಲ್ಲಿ ಚಿತ್ರಿಸಲಾಗಿದೆ. ನಮ್ಮ ಧುರೀಣರಲ್ಲಿ ಕೃತಿಗಿಂತ ಮಾತು ಹೆಚ್ಚಾಯಿತೆಂದು ಜನತೆ ಇಂದು ಅರಿತಿದೆ. ಈ ಪಟಾಕಿ ಪುಟ್ಟತನ, ಪಟ್ಬಂಗ ಶೂರತನ, ಹರಟೆಮಲ್ಲತನ, ಅನೇಕರಿಗೆ ಜುಗುಪ್ಸೆ ಉಂಟಾಗುವಷ್ಟು ಮುಂದುವರಿದಿದೆ. ಭಾಷಣ ಭೈರವರ ಒಡ್ಡೋಲಗವನ್ನು ಕಾಣದ ಊರು ಇಂದು ಸಿಗಲಾರದು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ದಕ್ಷ ನಾಯಕರೂ ಕಾಣಿಸಿಕೊಂಡರು. ಅದಕ್ಷ ನಾಯಕರೂ ಅವತರಿಸಿದರು. ಆದರೆ ದಿನೇ ದಿನೇ ನಾಯಕತ್ವದ ಮಟ್ಟ ಇಳಿಯುತ್ತ ಬಂದಂತೆ ಅನೇಕರಿಗೆ ತೋರಿದೆ. "ತರುಣರಲ್ಲಿ ಧ್ಯೇಯವಿಲ್ಲ, ಸ್ಫೂರ್ತಿಯಿಲ್ಲ–ಜನರಲ್ಲಿ ಆರಂಭಶೀಲವಿಲ್ಲ–ಸಹಕಾರ ಬುದ್ಧಿಯಿಲ್ಲ" ಎಂದು ಬೋಧಿಸಿ ಸಹಜ ಮತ್ತು ಕೃತಕ ವ್ಯಸನಗಳನ್ನು ವ್ಯಕ್ತಪಡಿಸುತ್ತ ಬಂದಿರುವ ನಮ್ಮ ರಾಜಕೀಯ ಧುರೀಣರು ತಮ್ಮನ್ನು ತಾವೇ ಮರೆತಂತಿದೆ. ಅದಕ್ಕಾಗಿ ಸಾರ್ವಜನಿಕ ಸ್ಮೃತಿಬಲವನ್ನು ಬಡಿದೆಬ್ಬಿಸಿ ದಕ್ಷರೂ ಪ್ರಾಮಾಣಿಕರೂ ಆದ ಮುಂದಾಳುಗಳನ್ನೇ ಆಯ್ದು ಬೆಂಬಲಿಸುವ ಸತ್ಪ್ರವೃತ್ತಿ ನಮ್ಮ ಜನತೆಯಲ್ಲಿ ಜಾಗ್ರತವಾಗಲಿ ಎಂಬುದೇ ಈ ವಿಡಂಬನಕಾರನ ಉದ್ದೇಶ.

ಹಿಂದೆ 'ನಗುವ ನಂದ'ದಲ್ಲಿ ಪ್ರಕಟಿತವಾದ ಈ ಸಂಗ್ರಹವನ್ನು ತಮ್ಮ ಮಾಲೆಯ ಕಿರು ಹೊತ್ತಿಗೆಯನ್ನಾಗಿ ಪ್ರಕಟಿಸಲು ಉದ್ಯುಕ್ತರಾದ ಶ್ರೀ ಕೋಣಿ ಕೃಷ್ಣ ಭಂಡಾರಿಯವರ ಪ್ರಕಟನೋತ್ಸಾಹವನ್ನು ಅಭಿನಂದಿಸಲೇಬೇಕು. ಶ್ರೀ ಆಣೆಗುಡ್ಡೆ ಮಹಾಗಣಪತಿಯ ಹೆಸರಿನಲ್ಲಿ ಮನೋರಂಜನೆಯ ಮೂಲಕ ಸಮಾಜ ಶಿಕ್ಷಣವನ್ನು ನೆರವೇರಿಸಲು ವ್ಯವಸ್ಥೆ ಮಾಡಿಕೊಂಡ ಸಂಪಾದಕ ಮಿತ್ರರ ಸದಾಶಯಕ್ಕೆ ಜಯ ಲಭಿಸದೇ ಇರಲಾರದು

ಎಂದು ನನ್ನ ದೃಢವಾದ ನಂಬಿಕೆ. ಈ ಪ್ರಯೋಗದ ಬಗ್ಗೆ ಕನ್ನಡಿಗರು ಪ್ರೋತ್ಸಾಹ ಕೊಡಲು ಹಿಂದೆ ಮುಂದೆ ನೋಡಲಾರರು ಎಂದು ನನ್ನ ಪ್ರತ್ಯಾಶೆ.

ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು,
ಶಿರಸಿ, ಉ.ಕ. ಜಿಲ್ಲೆ,
೯–೧೨–೧೯೬೫

–ಬಿ.ಎಚ್. ಶ್ರೀಧರ

ಉತ್ತರಪುರದ ಆಕಾಶವಾಣಿಯಿಂದ ಕಾರ್ಯಕ್ರಮಗಳು

ಸಮಾನತೆ

೧೪೪ನೆಯ ಮೀಟರ್ ನಿಶಾಗಮ ಕಾಲ

ಮಾನ್ಯ ನಾಗರೀಕರಿಗೀಗ ಅಪೂರ್ವ ಸಂಧಿಯುಂಟಾಗಿದೆ. ನಮ್ಮ ಆಕಾಶವಾಣಿಯಿಂದ ವಾರವಾರದ ವಾರ್ತಾಪ್ರಸಾರ ಇನ್ನು ಮೇಲೆ ಪ್ರಾರಂಭವಾಗುತ್ತದೆ. ಈ ವಾರದಲ್ಲಿ ನಮ್ಮ ವಿಶೇಷ ಸುದ್ದಿಗಾರರಿಂದ ಬಂದ ಅಮೂಲ್ಯ ಸುದ್ದಿಯನ್ನು ಈಗ ಬಿತ್ತರಿಸಲಾಗುತ್ತದೆ; ಜೊತೆಗೆ ಅವರ ಟೀಕೆ ಟಿಪ್ಪಣಿಗಳ ಚಟಾಕಿಗಳನ್ನೂ ನೀವು ಕೇಳುವಿರಿ.

ಉತ್ತರಪುರದ ನಗರಸಭೆಯಲ್ಲಿ ಒಂದು ಸ್ವಾರಸ್ಯದ ಸಂಗತಿ ಮೊನ್ನೆ ನಡೆಯಿತು. ಸ್ತ್ರೀ ಸದಸ್ಯರೊಬ್ಬರು ಮೀಸೆ ಹುರಿಮಾಡಿ ಮಾತಾಡುವುದು ಅಸಭ್ಯವೆನಿಸುವುದು ಎಂದು ಅಧ್ಯಕ್ಷರೆದುರು ದೂರಿಕೊಂಡದ್ದಕ್ಕೆ ಮನ್ನಣೆಯಿತ್ತು ಎದುರು ಕುಳಿತ ಮಾತುಗಾರರು ಮೀಸೆ ಹುರಿಮಾಡುವುದನ್ನು ನಿಲ್ಲಿಸಿದರಂತೆ. ಸ್ತ್ರೀ ಸ್ವಾತಂತ್ರ್ಯಕ್ಕಾಗಿ ಗಂಡಸರು ಹೋರಾಡಿ ಗಳಿಸಿದ ಘನಪದವಿಯೆಂದರೆ ಇದು. ಇದಕ್ಕಾಗಿ ಎಲ್ಲ ಗಂಡಸರೂ ಹೆಮ್ಮೆಪಡಬೇಕಲ್ಲವೆ? ಪ್ರಾಯದ ಫ್ಯಾಶನ್ ಸುಂದರಿಯರು ದೇಶ ಕಾಲ ಸ್ಥಾನಭೇದವಿಲ್ಲದೆ ಮದನಚೇಷ್ಟೆ–ಮಂಗಚೇಷ್ಟೆ ಯಾವುದನ್ನು ಮಾಡಲೂ ಹಕ್ಕುಳ್ಳವರು; ಆದರೆ ವ್ಯಕ್ತಿತ್ವಸಹಜವಾದ ಮೀಸೆಯನ್ನು ಹುರಿಮಾಡುವ ಆರು ಸಾವಿರ ವರ್ಷದಿಂದ ಬಂದ ಭಾರತೀಯ ಸಂಸ್ಕೃತಿ ಹಳೆಯದಾದ ಕಾರಣದಿಂದ ಇಂದು ಅಸಭ್ಯ. ಇದರ ಮೇಲೆ ಮೀಸೆಯನ್ನು ಇಟ್ಟುಕೊಳ್ಳುವುದು ಕುರೂಪ ಎಂದು ಹೆಣ್ಣು ಹೇಳಿ ಸ್ತ್ರೀದಾಸನಾದ ಪುರುಷನು ಮೀಸೆ ಮೂಡಿದ್ದೇ ಪಾಪಫಲವೆಂದು ತಿಳಿದು ಅದನ್ನು ಗುರುತು ಹತ್ತದಂತೆ ಪ್ರತಿ ಗಳಿಗೆಯಲ್ಲೂ ಬೋಳಿಸಿಕೊಂಬಂತೆ ಮಾಡಿದ ಸ್ತ್ರೀಯ ಸಾಮ್ಯವಾದ ಸಾಧನೆಗಾದ ದಿಗ್ವಿಜಯ ಹೊಸ ಪ್ರಜಾಪ್ರಭುತ್ವಕ್ಕೆ ಶೋಭೆಯನ್ನೇ ತಂದಿದೆ ಎನ್ನಬೇಕು. ಮತ್ತೂ ಒಂದು ಸ್ವಾರಸ್ಯ: ಈ ಪ್ರಕರಣ ನಡೆದದ್ದು ಒಂದು ಜೋಡಿ ಎತ್ತನ್ನು ಕೊಳ್ಳುವ ವಿಷಯವಾಗಿ ನಗರಸಭೆ ಚರ್ಚೆ ನಡೆಸುತ್ತಿದ್ದಾಗ ಆ ಸ್ತ್ರೀ ಸದಸ್ಯರು

ಬುದ್ಧಿವಂತರಾಗಿದ್ದರೆ, ಎತ್ತಿನ ಜೊತೆಯನ್ನೇ ಏಕೆ ಕೊಳ್ಳಬೇಕು? ಅವುಗಳ ಬದಲು ಹಸುಗಳ ಒಂದು ಜೊತೆಯನ್ನು ಕೊಳ್ಳುವುದು ಲಿಂಗಸಾಮ್ಯ ನೀತಿಗೆ ಸಾಧಕ ಎಂದು ವಾದಿಸುವುದು ಮತ್ತಷ್ಟು ರಮ್ಯವಾಗುತ್ತಿತ್ತು. ಏಕೆಂದರೆ ಎತ್ತುಗಳು ಮಾಡುವ ಎಲ್ಲ ಕಾರ್ಯಗಳನ್ನೂ ಹಸುಗಳು ಮಾಡುತ್ತವೆ ಎಂಬುದು ಸರ್ವ ನಾಗರಿಕ ಸಮಾನತೆಯನ್ನು ಸಾರುವ ಉತ್ತರಪುರದ ರಾಜ್ಯಾಂಗ ನಿಯಮಾವಳಿ ಸಾರುತ್ತದೆ!

ಜಪಾನೀ ಮಾದರಿಯ ಶಿಕ್ಷಣ

ಇದುವರೆಗೆ ನೀವು ನಮ್ಮ ವಿಶೇಷ ಸುದ್ದಿಗಾರರಿಂದ ವಾರದ ಗಣ್ಯವಾರ್ತೆಯನ್ನೂ ಅದರ ಮೇಲಿನ ಟೀಕೆಟಿಪ್ಪಣಿಗಳನ್ನೂ ಕಿವಿಯಿಸಿದಿರಿ. ಈಗ ಉತ್ತರಪುರದ ವಿದ್ಯಾಮಂತ್ರಿಗಳಾದ ಮಾನ್ಯ ಉತ್ತರಖರ್ ಅವರು ಶಿಕ್ಷಣದ ಬಗ್ಗೆ ನಾಲಿಗೆಯಿಸುತ್ತಾರೆ. ತಾವೆಲ್ಲರೂ ಸದ್ದು ಮಾಡದೆ ಕಿವಿಯಿಂದ ಸವಿಯಬೇಕಾಗಿ ವಿನಂತಿ.

ಮಾನ್ಯ ವಿದ್ಯಾಮಂತ್ರಿ ಉತ್ತರ್‌ಖರ್ ಅವರು–

ಮಹಿಳೆಯರೇ ಮತ್ತು ಮಹನೀಯರೇ, ಪ್ರಾಥಮಿಕ ಶಾಲೆಗಳ ಸಂಖ್ಯೆಯನ್ನು ಅತಿ ವೇಗದಿಂದ ಹೆಚ್ಚಿಸುವುದು ಸರಕಾರದ ಗುರಿ. ಸೌಂದರ್ಯ, ಸೌಕರ್ಯ ಮತ್ತು ವ್ಯಯ ಸೌಲಭ್ಯಗಳನ್ನೊಳಗೊಂಡ ಜಪಾನೀ ಮಾದರಿಯ ಶಾಲೆಗಳನ್ನು ರಚಿಸುವೆವು. ಅದರಿಂದ ಕೆಲವೇ ದಿನಗಳಲ್ಲಿ ಶಿಕ್ಷಕರ ಸಂಖ್ಯೆ ಏರುತ್ತದೆ. ಅವರ ಪಗಾರ ಏರಿಸುವ ಆಲೋಚನೆಯಿದೆ. ಅದನ್ನು ಕಾರ್ಯರೂಪಕ್ಕೆ ತರಲು ಅನೇಕ ಅಡಚಣೆಗಳಿವೆ. ಇದ್ದರೂ ಪರವಾಯಿಲ್ಲ. ಒಟ್ಟಿನ ಮೇಲೆ ವಿದ್ಯಾರ್ಥಿಗಳ, ಶಿಕ್ಷಕರ ಮತ್ತು ಶಾಲೆಗಳ ಸಂಖ್ಯೆ ಏರುವುದೇ ಮುಖ್ಯ. ಏಕೆಂದರೆ, ಪ್ರಜಾಪ್ರಭುತ್ವದಲ್ಲಿ ಸಂಖ್ಯಾಬಲವೇ ಪರಮಬಲ. ಅದೇ ಪ್ರಗತಿಯ ಮಟ್ಟವನ್ನು ಅಳೆಯುವ ಮಾನದಂಡ. ತಾಳಿಕೆ, ಬಾಳಿಕೆ, ವಿದ್ಯಾರ್ಜನೆ, ವಿದ್ಯಾದಾನಗಳು ಪ್ರಾಚೀನ ಸನಾತನ ಧ್ಯೇಯಗಳು. ಅವು ಅಪ್ರಗತಿಶೀಲ; ಅಜಪಾನೀಯ. ಬಹುಬೇಗ ಪ್ರಗತಿಯನ್ನು ಸಾಧಿಸಿದ ನಾಡುಗಳಲ್ಲಿ ಜಪಾನು ಅಗ್ರಗಾಮಿ. ಆದುದರಿಂದ ಅಲ್ಲಿಯವರಂತೆಯೇ ನಾವಾಗಬೇಕು. ಸತತವಾದ ಜುಜುತ್ಸು ಮೊದಲಾದ ವಿದ್ಯೆಗಳಿಂದ ನಾವು ವಾಮನತ್ವವನ್ನು ಮೊದಲು ಸಾಧಿಸಿಕೊಳ್ಳಬೇಕು. ಆಗ ಗುಬ್ಬಿಯ ಗೂಡಿನಂಥ ಅತಿ ಕಡಿಮೆ ಖರ್ಚಿನ ಮನೆಗಳಲ್ಲಿ ವಾಸಮಾಡಲು ನಾವು ಶಕ್ತರಾಗುತ್ತೇವೆ. ಅದರಿಂದ ಹಣ ಉಳಿಯುತ್ತದೆ; ಆರ್ಥಿಕ ಸಮಸ್ಯೆ ನಿಮಿಷಾರ್ಧದಲ್ಲಿ ಬಗೆಹರಿಯುತ್ತದೆ. ಅದರಲ್ಲೂ ಬಿದಿರಿನ ಮನೆಗಳನ್ನೇ ಕಟ್ಟಿಸಬೇಕೆಂದು ಸರಕಾರ ಯೋಚಿಸಿದೆ. ಶಾಲೆಗಳಿಗೂ ಅವೇ ಯೋಗ್ಯ. ಭೂಕಂಪದಿಂದ ಆಗ ನಮ್ಮ ಕಟ್ಟಡಗಳಿಗೆ ಹಾನಿಯಾಗದು; ಆದರೂ ಬಹಳ ನಷ್ಟ ಸಂಭವಿಸದು. ಬಹು ದಿವಸ ಬಾಳುವ ಮತ್ತು ವ್ಯಯದಾಯಕ ಕಟ್ಟಡಗಳು ನಮ್ಮ ವಿದ್ಯಾಭ್ಯಾಸದ ಮಟ್ಟವನ್ನು ಏರಿಸಲಾರವು ಅದೇಕೆಂದರೆ ಬಹಳ ಕಲಿತ ಶಿಕ್ಷಕರನ್ನು ಬಹಳ ಪಗಾರದ ಮೇಲೆ ನಿಯಮಿಸಿಕೊಂಡು ಬಹಳ ಕಾಲ ಶಿಕ್ಷಣ

ಕೊಡಿಸಲು ಹೊರಟರೆ ವಿದ್ಯಾರ್ಥಿಗಳು ಬಹಳ ಕಾಲ ಬಾಳುವ ಅಪ್ರಗತಿಶೀಲ ಮಾರ್ಗವನ್ನು ಕಲಿತಾರು; ಬಹಳ ಬುದ್ಧಿವಂತರಾಗಿ ಸರಕಾರವನ್ನೇ ಉರುಳಿಸಿಯಾರು. ಪ್ರತಿಕ್ಷಣವೂ ಹೊಸತನ್ನು ಕಾಣುವುದೇ ನಿಜವಾದ ನವನಾಗರಿಕತೆ. ಹಾಗೆಂದು ನಾಳೆ ನಾನು ಈ ಆಕಾಶವಾಣಿಯಲ್ಲಿ ಮಾತಾಡ ಬಂದರೆ ಹಳಬನೆಂದು ಕಿವಿ ಮುಚ್ಚಿಕೊಳ್ಳಕೂಡದು. ನಾನು ಹಳಬನಾಗುವೆನಾದರೂ ನನ್ನ ಅಭಿಪ್ರಾಯಗಳೆಲ್ಲ ಹಳೆಯವೆನಿಸಿದರೂ ಕಾಲ ಹೊಸದು ಮಾತುಗಳು ಹೊಸವು ಎಂಬುದನ್ನು ಮರೆಯಕೂಡದು. ಗುಡ್ ನೈಟ್ ಮೈ ಸ್ವೀಟ್ ಸಿಟಿಜನ್ಸ್?

ಭಾರತ ವಾಚನ

ಈಗ ೧೪೬ನೆಯ ಮೀಟರಿನಲ್ಲಿ ಬೇಗನೆ ಭಾರತವಾಚನ ಮಾಡಲಾಗುತ್ತದೆ. ಏಕೆಂದರೆ ಆಗಲೇ ಬೆಳಗಾಗುತ್ತ ಬಂದಿತು. ಗಡಿಬಿಡಿಗಾಗಿ ಮಹಾಜನರು ಕ್ಷಮಿಸಬೇಕು. ವಾಚಕರು ಶ್ರೀ ಉತ್ತರಾನಂದಾಚಾರ್ಯರು–

ಶ್ರೀವನಿತೆಯ ಮುಖಾರವಿಂದದ
ಭಾವನಿರ್ಭರ ರಮ್ಯತೆಯ ತಾ
ನೋವಿ ಕೊಟ್ಟಣು ದೇಶಕಲ್ಲಿಂದನ್ನವನು ತಂದು ।
ಭಾವಿಕರಿಗೊಲಿದಿತ್ತು ಪೊರೆಯುವ
ದೇವ ಕಲ್ಮಶರಾಯನುರೆ ಮುಂ
ಜಾವದಲ್ಲಿಡ್ಡಲಿಯ ತಪ್ಪದೆ ಕರುಣಿಸಲಿ ನಿಮಗೆ ॥

ಹೆಂಡಿರಿಬ್ಬರ ಮಾಡಿಕೊಳದಿರು,
ದಿಂಡುಗೆಡೆಯೊ ಜಮೀನುದಾರರ,
ದಂಡಿಸಲ್ಲಿ ವಿಚಾರಿಸದೆ ರಿಪುಪಕ್ಷದವರನ್ನು ।
ಗಂಡಗರಿಯದೆ ಪರನ ಕೂಡುವ
ಮಂಡೆಗಾರ್ತಿಯ ಶಿಕ್ಷಿಸದಿರು, ಪ
ಲಾಂಡು ಭಕ್ತರನಷ್ಟೆ ಕಾಲೇಜೊಳಗೆ ಬಿಡು ಎಂದು ॥

ಗಂಡುಗಲಿತನದುತ್ತರಾಪುರ
ದುಂಡು ಸುಖಿಸುವ ರಾಜಧರ್ಮದ
ಪಂಡಿತರು ಕಾಯದೆಗಳನು ಮಾಡಿರಲು ಮನದಂಡು
'ಚಂಡಶಾಸನ! ಪಂಕ್ತಿಭೇದದ
ಬಂಡುಗಾರಿಕೆ !' ಎಂದು ನಾಗರ
ರಂಡಲೆದು ಹತ್ತಿದರು ಕೋರ್ಟಿನ ಕಟ್ಟೆಯನು ಬಿಡದೆ ॥

ಜನಪಜನಮೇಜಯ ಮುಖಂಡರ
ಕನಕಕಾಶಿಸಿ ಮನೆಯ ಕಾಯುವ

ವನಜಮುಖ ಕಲ್ಮಠಪುರಾಧಿಪ ಕಾವಲಿರುವಾಗ ।
ಮನೆಯೊಳಗೆ ನಾಯ್ ನುಗ್ಗುವಂತೆ ವೊ
ಲನಿತರಲಿ ಹೈಕೋರ್ಟಿನಪ್ಪಣೆ
ಚಿನುಮಯರು ರಚಿಸಿರ್ದ ಶಾಸನಗಳನು ಖಂಡಿಸಿತು ॥

ಏನ ಹೇಳಲಿ ರಾಜ್ಯ ಘಟನೆಯ
ಮಾನವುಳಿಸಲು ಛಲವ ತೊಟ್ಟ ಮ
ಹಾನುಭಾವ ನಿರುತ್ತರೀಕೃತ ಭೂಪ ಸಿಡಿದೆದ್ದು ।
ತಾನು ರಚಿಸಿದ ಘಟನೆಯನ್ನನು
ಮಾನಿಸದೆ ಬದಲಿಸಲು ಹೊರಟನು
ಬಾಣಗತಿಯಲಿ; ಹೊಗಳಿರೋ ಶಾಸನ ಪರಾಕ್ರಮನ ॥

ಘಟನೆ ಹೋಳಿಯ ಕಾಮನಂತಿದೆ,
ಘಟಿಸಿದುದು ಮಣ್ಣಿಂದ ಮೂರ್ತಿಯ;
ಸೆಟೆದ ಮೂಗನು ತಿದ್ದುವುದು ದುಷ್ಕಾರ್ಯವೇನೆಂದು ।
ಚಟಪಟಿಸಿ ಸಂಸತ್ಸದಸ್ಯರ
ಶಠಶಿರವ ಪರಿವರ್ತಿಸಿದ ! ಸಂ
ಕಟದ ವೆಂಕಟರಮಣನುತ್ತರಭೂಪ ತಾನಲ್ತೇ ॥

ಮತ್ತೆ ಕುಳಿತರು ಶಾಸಕರು ತ
ಮ್ಮುತ್ತಮಾಂಗವ ತುರಿಸಿಕೊಳ್ಳುತ;
ಒತ್ತಹೋಗಲು ಮೂಗಘಟನಾ ಮದನಮೂರುತಿಯ ।
ಕಿತ್ತುಹೋದವು ಕಂಗಳೆರಡೂ
ಬೆತ್ತ ಹಿಡಿದೊದರಿದರು ಬಾರವು–
ಚಿತ್ತವಿಸು, ತಿರುಮುರುಗ ಬಿದ್ದಿತು ತಾಳದಾಯೇಟು ॥

ನಾನೆ ಘಟನೆ ! ಇದೇಕೆ ಈ ದುರ್
ಧ್ವಾನಮಯ ಲಿಪಿಜಾಲವೆಂದು ಕ
ಮಾನು ಟೋಪಿಯ ಮುಖ್ಯಮಂತ್ರಿ ಕದನ್ನದಾತಾರ ।
ನಾನೆ 'ನಾ ವಿಷ್ಣುಃ ಪೃಥಿವಿಪತಿ'
ಕಾಣಿರೇನೆಂದಬ್ಬರಿಸೆ ನಿ
ರ್ಮಾಣವಾಯ್ತು ನವೀನಯುಗ ರಾಷ್ಟ್ರೀಯ ಜೀವನದ ॥

ಅಕ್ಕಿ ತಿಂಬವರಿಗೆ ಮಕ್ಕಳು ಹೆಚ್ಚು

೧೪೪ನೆಯ ಮೀಟರ್ ನಿಶಾರಂಭ

ಇದೀಗ ವಿದೇಶದಿಂದ ಬಂದ ವಿಜ್ಞಾನತಜ್ಞರಾದ ಚಂದ್ರಸೂಕರನ್ನರು ಅಕ್ಕಿ ಮತ್ತು ಮಕ್ಕಳು ಎಂಬ ವಿಷಯದ ಮೇಲೆ ಸಮಾಜಶಿಕ್ಷಣಾರ್ಥ ಭಾಷಣ ಮಾಡುತ್ತಾರೆ. ಬಹುಮಾನ್ಯ ಚಂದ್ರಸೂಕರನ್ನರು:

"ಉತ್ತರಪುರದ ಜನಗಣನೆಯಲ್ಲಿ ಅಕ್ಕಿ ತಿಂಬವರಿಗೆ ಮಕ್ಕಳು ಹೆಚ್ಚು ಎಂದು ಕಂಡುಬಂದಿದೆ. ಗೋದಿ ತಿಂಬವರಿಗೆ ತೀರ ಕಡಿಮೆ. ಆದುದರಿಂದ ಇನ್ನು ಮೇಲೆ ಎಲ್ಲರೂ ಗೋದಿ ತಿಂದು ಮಕ್ಕಳ ಉತ್ಪಾದನೆಯನ್ನು ಕಡಿಮೆ ಮಾಡುವುದೊಂದೇ ಆಹಾರ ಸಮಸ್ಯೆಯ ವೈಜ್ಞಾನಿಕ ಉಪಾಯ. ಇದರ ಜೊತೆಗೆ ಅನ್ನಭಕ್ಷಕರಲ್ಲಿ ಸ್ತ್ರೀಯರ ಸಂಖ್ಯೆಯೂ ಜಾಸ್ತಿ. ಅದರಿಂದ ಸ್ತ್ರೀ ಸಮಸ್ಯೆ ಹೆಚ್ಚಿ, ಅವರ ಬೆಲೆ ತಗ್ಗಿ, ಸ್ತ್ರೀಮರ್ಯಾದೆ ಇಳಿದುಹೋಗುವುದು. ಅನ್ನವನ್ನು ಬಿಡಲು ಇದೂ ಒಂದು ಮಹತ್ವದ ಕಾರಣ. ವರದಕ್ಷಿಣೆಯ ಅನ್ಯಾಯವನ್ನು ತಪ್ಪಿಸಬೇಕಾದರೆ ಸ್ತ್ರೀಯರು ತಮ್ಮ ಸಂಖ್ಯೆಯನ್ನು ಕಡಿಮೆಮಾಡಿಕೊಳ್ಳಬೇಕು. ಅಕ್ಕಿಯಿಂದ ಪುರುಷರ ಬುದ್ಧಿಚಾತುರ್ಯ ಬೇಕಾದ ಪ್ರಮಾಣಕ್ಕಿಂತ ಹೆಚ್ಚುವುದು. ಆಗ ಅವರನ್ನು ಹತೋಟಿಯಲ್ಲಿಟ್ಟುಕೊಳ್ಳಲು ಸ್ತ್ರೀಯರಿಗೆ ಸಾಧ್ಯವಾಗದು. ಆದುದರಿಂದ ಗೃಹಿಣಿಯರು ಅಕ್ಕಿಯ ಬಳಕೆ ಮನೆಯಲ್ಲಿ ಕಡಿಮೆಮಾಡುತ್ತ ಹೋಗಬೇಕು. ಅನ್ನಾದ್ಭವಂತಿ ಭೂತಾನಿ– ಅಂದರೆ ಅನ್ನದಿಂದ ಭೂತಗಳು ಹುಟ್ಟುತ್ತವೆ ಎಂದು ಗೀತೆಯಲ್ಲಿ ಹೇಳಿದೆ. ಎಂದ ಮೇಲೆ ಯಾರಾದರೂ ಇನ್ನು ಮೇಲೆ ಅನ್ನ ತಿನ್ನಲು ಮನಸ್ಸು ಮಾಡಿಯಾರೇ? 'ಅನ್ನವನು ಇಕ್ಕುವುದು' ಎಂದ ಸರ್ವಜ್ಞನ ಮಾತಾದರೂ ಅನ್ನವನ್ನು ಅನ್ಯರಿಗೆ ಹಾಕಬೇಕಲ್ಲದೆ ತಾವು ತಿನ್ನಬಾರದು ಎಂಬುದನ್ನೇ ಸಾರುತ್ತದೆ. ಅಕ್ಕಿಯು ಮಾನವನ ಶತ್ರು. ಅಕ್ಕಿಯಿಂದಲೇ ಸರ್ವ ದುಃಖ. ಭತ್ತದಿಂದಲೇ ಕುತ್ತ. ಆದುದರಿಂದ ಆಧುನಿಕರೂ ಸುಸಂಸ್ಕೃತರೂ ಫ್ಯಾಶನ್ ಬಲ್ಲಿದರೂ ಆದ ನಮ್ಮ ಪ್ರಜೆಗಳಿಗಿನ್ನು ಅಕ್ಕಿಯನ್ನು ತಿನ್ನುವುದು ಒಳ್ಳೆಯ ಫ್ಯಾಶನ್ ಎನಿಸಲಾರದು. ಅಕ್ಕಿ ತ್ಯಾಗಮಹೋತ್ಸವಗಳನ್ನು ಅನ್ನ ಬಹಿಷ್ಕಾರ

ಪರಿಷತ್ತುಗಳನ್ನೂ ನಡೆಸಿ ಸರಕಾರವು ಆಹಾರ ಮತ್ತು ಇತರ ಸಮಸ್ಯೆಗಳನ್ನು ಬಗೆಹರಿಸುವುದು ಕ್ರಮ ಪ್ರಾಪ್ತ. ಅದಕ್ಕೆ ನೀವೆಲ್ಲ ತನು ಮನ ಧನ ಉದರಗಳಿಂದ ನೆರವಿತ್ತು ಸಹಕರಿಸಬೇಕು. ಅಕ್ಕಿಯು ಹತವಾಗಲಿ!"

ನೂತನ ಪ್ರಜಾಪ್ರಭುತ್ವ ಕುಟುಂಬ ಪದ್ಧತಿ

ಇಲ್ಲಿಯವರೆಗೆ ತಾವೆಲ್ಲ ಅಕ್ಕಿವಿಜ್ಞಾನಿ ಚಂದ್ರಸೂಕರರ ವೈಜ್ಞಾನಿಕ ಭಾಷಣ ಕೇಳಿದಿರಿ. ಇನ್ನು ಮುಂದೆ ೧೪೫ನೆಯ ಮೀಟರಿನಲ್ಲಿ ಲಂಡನ್ನಿನಲ್ಲಾದ ಸಾಮಾಜಿಕ ಪರಿಷತ್ತಿನ ಮುಖ್ಯಾಂಶಗಳನ್ನು ನಮ್ಮ ವಿಶೇಷ ಪ್ರತಿನಿಧಿ ಘೋಷರು ಈಗ ಬಿತ್ತರಿಸುತ್ತಾರೆ. ಮಾನ್ಯ ಘೋಷರು, 'ಪಯೋನಿಯರ್' ಪತ್ರಿಕೆಯ ಕಚೇರಿಯವರು– "ನಿಜವಾದ ಪ್ರಜಾಪ್ರಭುತ್ವ ಪದ್ಧತಿಯಂತೆ ನಡೆಯುವ ಕುಟುಂಬದಲ್ಲಿ ಗಂಡನು ಹೆಂಡತಿಯ ಜೊತೆಗೆ ಸಮಪಾಲುಗಾರನಾಗಿರಬೇಕು. ಚಿಕ್ಕ ಮಕ್ಕಳ ಮಲಿನ ವಸ್ತ್ರಗಳನ್ನು ತೊಳೆಯುವಂತಹ ಕ್ಷುದ್ರಕಾರ್ಯಗಳಲ್ಲಿ ಕೂಡ ಅವನು ಭಾಗವಹಿಸಬೇಕು ಎಂದು ಪರಿಷತ್ತು ತೀರ್ಮಾನಿಸಿದ್ದು ಅಭಿನಂದನೀಯ. ಹೊಸ ವೈಜ್ಞಾನಿಕ ಸಂಶೋಧನೆಗಳಿಂದ ಗರ್ಭಧಾರಣೆಯನ್ನು ಕೂಡ ೪॥ ತಿಂಗಳು ಗಂಡನೂ ೪॥ ತಿಂಗಳು ಹೆಂಡತಿಯೂ ನಡೆಸುವಂತೆ ಮಾಡಲಾದೀತು. ಬೀಜ ಅಥವಾ ಜನಿಯ ತಯಾರಿಕೆಯಲ್ಲಿ ಸ್ತ್ರೀಯೂ ಪಾಲುಗಾರಳಾಗಬೇಕೆಂದು ಪುರುಷರು ಹಟ ಮಾಡುವುದಾದರೆ ಅದು ಪಾಶವಿ, ಅನಾಗರಿಕ, ಅರಸಿಕ ಎನಿಸುತ್ತದೆ. ಪುರುಷ ಕಾರ್ಯಗಳು ಪುರುಷನವೇ. ಅವನು ಅದರ ಮೇಲೆ ಸ್ತ್ರೀ ಕಾರ್ಯಗಳಲ್ಲಿ ಅರ್ಧಭಾಗ ವಹಿಸಿಕೊಂಡರೇನೇ ಸದ್‌ಗಂಡನೆನಿಸುತ್ತಾನೆ. ದುಡಿಮೆಯಲ್ಲಿ ಪುರುಷನ ಪಾಲು ೧॥, ಸ್ತ್ರೀಯದು ಅರ್ಧ. ಲಾಭದಲ್ಲಿ ಅವನಿಗೆ ಸ್ತ್ರೀ ಸಮವಾದ ಪಾಲು. ಇದೇ ನೂತನ ಪ್ರಜಾಪ್ರಭುತ್ವ ಘಟಿತ ಕುಟುಂಬ ಪದ್ಧತಿಯ ಜೀವಾಳ; ಆದಿಶಕ್ತಿ, ಆದಿ ಮಾತೆ, ಅನುಪಮ ಸುಂದರಿಯಾದ ಸ್ತ್ರೀಗೆ ಪಶುಜಾತ ಪುರುಷನು ಸಲ್ಲಿಸಬೇಕಾದ ಕಾಣಿಕೆ.

"ಇನ್ನೊಂದು ವಿಚಾರ: ನನ್ನ ಜೊತೆಯ ಉತ್ತರಪುರ ಪ್ರತಿನಿಧಿಗಳು ನಮ್ಮವರ ಹಿಂದುಳಿದ ಆಚಾರಗಳನ್ನು ಸತ್ಯರೀತಿಯಲ್ಲಿ ಹೇಳಹೋಗಿ ಮರ್ಯಾದೆ ತೆಗೆಯುವುದರಲ್ಲಿದ್ದರು. ಅವರ ಅನಾಗರಿಕತೆಯನ್ನು ನಿವಾರಿಸಿ ವಿದೇಶೀಯರೆದುರು ನಮ್ಮ ಮಾನ ಕಾಯ್ದುಕೊಳ್ಳಲೆಂದು ನಾನು ನಮ್ಮ ಸ್ತ್ರೀಯರೆಲ್ಲರೂ ಬೀಡಿ ಸಿಗರೇಟು ಸೇದುತ್ತಾರೆ; ಸಿಕ್ಕವರೊಡನೆಲ್ಲ ಕೈ ಕೈ ಹಿಡಿದು ಕುಣಿಯುತ್ತಾರೆ; ಲಂಗವನ್ನು ಹಾಕಲು ಕಲಿಯುತ್ತಿದ್ದಾರೆ; ಮಕ್ಕಳನ್ನು ದಾಸಿಯರ ಕೈಗಿತ್ತು ಕ್ಲಬ್ಬುಗಳಿಗೆ ಹೋಗಿ ಬೇಕಾದಷ್ಟು ಕುಡಿಯುತ್ತಾರೆ. ಯಥೇಷ್ಟ ವಿವಾಹ ವಿಚ್ಛೇದ ಮಾಡಿಕೊಳ್ಳುತ್ತಾರೆ; ಮೂರು ಹೊತ್ತೂ ಸಿನೆಮ ಮಂದಿರಗಳಲ್ಲೇ ಇರುತ್ತಾರೆ; ಇಷ್ಟೇ ಅಲ್ಲ, ಅವರು ಗಂಡಂದಿರನ್ನು ಎಲ್ಲೆಂದರಲ್ಲಿ ಬೈದು, ಥಳಿಸಿ, ನಗೆಗೇಡು ಮಾಡಿ ಸೆಟೆದುಕೊಂಡು ತಿರುಗುತ್ತಾರೆ– ಎಂದು ವರ್ಣಿಸಿ

ನಾವೂ ಇಂಗ್ಲಿಷ್ ಮತ್ತು ಅಮೇರಿಕನ್ ಜನರಷ್ಟೇ ಅಥವಾ ಅವರಿಗೂ ಒಂದು ಕೈ ಹೆಚ್ಚು ಮುಂದುವರಿದವರು ಎಂಬುದನ್ನು ತೋರಿಸಿಕೊಟ್ಟೆ.

"ಇದರಿಂದ ಉತ್ತರಪುರದ ಪ್ರಜೆಗಳು ಕಲಿಯಬೇಕಾದ ಪಾಠವೆಂದರೆ, ನಾಳಿನಿಂದ ಕುಟುಂಬಕ್ಕಾಗಿ ಧನಾರ್ಜನೆ ಮಾಡುವುದರ ಜೊತೆಗೆ ತಮ್ಮ ಅವಲಂಬಿಗಳಾದ ಕೌಟುಂಬಿಕರ ಅದರಲ್ಲೂ ಹೆಚ್ಚಾಗಿ ಹೆಣ್ಣು ಮಕ್ಕಳ–ಮಲಿನ ವಸ್ತ್ರ ತೊಳೆಯುವ ಮುಂತಾದ ಕಿಂಕರ ಕಾರ್ಯದಲ್ಲಿ ತೊಡಗಿ ಪ್ರಜಾಪ್ರಭುತ್ವದ ಸ್ವತಂತ್ರ ನಾಗರಿಕತೆಯನ್ನು ಅಳವಡಿಸಿಕೊಳ್ಳುವುದೇ ನೂತನ ಪ್ರಜಾಪ್ರಭುತ್ವದ ಕುಟುಂಬ ಪದ್ಧತಿ!"

೧೪೯ನೆಯ ಮೀಟರ್ ನಿಶಾಂತ

ಈವರೆಗೆ ನೀವೆಲ್ಲ ವಿದೇಶಕ್ಕೆ ಹೋಗಿಬಂದ ನಮ್ಮ ವಿಶೇಷ ಪತ್ರಿಕಾ ಪ್ರತಿನಿಧಿ ಘೋಷರ ಅಮೂಲ್ಯ ಭಾಷಣವನ್ನು ಆಲಿಸಿದಿರಿ. ಇನ್ನು ಮುಂದೆ ಉತ್ತರ ಭಾರತದ ವಾಚನ ಪ್ರಾರಂಭವಾಗುತ್ತದೆ. ಎಲ್ಲರೂ ತಮ್ಮ ತಮ್ಮ ಪಂಚೇಂದ್ರಿಯಗಳನ್ನು ತೆರೆದುಕೊಂಡು ರಸಾಸ್ವಾದಕ್ಕೆ ಸಿದ್ಧರಾಗಿರಿ.

ಭಾ.।ಷ.
ಶ್ರೀಜನಕ ಯಂತ್ರಗಳನಿಟ್ಟಿಹ
ಭೋಜನೋದ್ಯಮಿಗಳನು ಸಾಕುವ
ರಾಜಕೀಯ ರಮಾವಿಲಾಸದ ನಾಗರಿಕಕುಲದ ।
ರೋಜವೆನಿಸಿದ ಮಂತ್ರಿಸಂಪುಟ
ದೋಜೆ ಬೆಳಗುವ ವಿದ್ಯುದಾವಳಿ
ರಾಜಿಸುವ ಬೀದಿಯಲಿ ಕಲ್ಮಶರಾಯ ಬಿದ್ದಿರಲಿ ॥ ೧ ॥

ವಾ.। ಷ.
ಕೋರ್ಟುಗಳು ತೀರ್ಪಿಸಿದವುನ್ಮತ್ತರಂದದಲಿ
ಪಾರ್ಟಿಗಳು ಕೂರ್ಪಿಸಿದವುದ್ದಂಡರಂದದಲಿ
ಕಾರ್ಟೂನಿನಾಟನಿಂ ಪತ್ರಿಕೆಗಳೆಲ್ಲವೂ ಬೈದು ಸರಕಾರವನ್ನು ।
ಹಾರ್ಟುಫೇಲಿಸತೊಡಗಲದರಿಂದ ಸಿಡಿದೆದ್ದು
ಮಾರ್ಟಿಯರ ಮುಖ್ಯ ಸಚಿವೇಂದ್ರನುತ್ತರಪುರದ
ಚಾರ್ಟರನೆ ರಾಜ್ಯಾಂಗದದಲು ಬದಲಿಸಲೆದ್ದನೇನೆಂಬೆನಚ್ಚರಿಯನು ॥ ೨ ॥

ಎಲ್ಲಿ ಭೂಧಾರರಿಂಗೆಡೆಯುಂಟೊ ಘಟನೆಯ
ಲ್ಲೆಲ್ಲ ವಾಕ್‌ಸ್ವಾತಂತ್ರ್ಯ ಪತ್ರಿಕೆಗಳಿಂಗುಂಟ
ದೆಲ್ಲಿ ಜಾತೀಯತೆಗೆ ಬಂದು ಕಟ್ಟುಗಳುಂಟೊ ಎಲ್ಲಿ ಹಗೆಗಳನು ಹಿಡಿದು ।
ಎಲ್ಲು ವಿಚಾರಣೆಗೆ ನಿಲ್ಲಿಸದೆ ಶಿಕ್ಷಿಸಲು
ಬಲ್ಲಿದರಿಗೆಡೆಯಿಲ್ಲದಾಗಿಹುದೊ ಅಲ್ಲೆಲ್ಲ
ಕಲ್ಲಿಟ್ಟು ಕಲ್ಮಶಿಸ ಹೊರಟ ಭೂಪನ ಕತೆಯ ಕೇಳಿ ಕಲ್ಲಾಗಿರೆಲ್ಲ ॥ ೩ ॥

ಉತ್ತರಾಪುರದೊಡೆಯ ಮುಖ್ಯಮಂತ್ರೀಶ ಕೊ
ಟ್ಟುತ್ತರಕ್ಕುತ್ತರವ ಕೊಡಬಲ್ಲನಾವನವ?
ಕತ್ತಿಗೂ ಕೋವಿಗೂ ಅಣುಬಾಂಬುಗೀಂಬಿಗೂ ಮೀರ್ದ ಮಾತುಗಳನುಗಿವ ।
ಉತ್ತಮ ಸದಸ್ಯರೆಲ್ಲರು ನಿರುತ್ತರರಾಗೆ
ಮತ್ತಿತರ ಜನರು ಹೆಪ್ಪಳಿಸಿ ನಿಟ್ಟುಸಿರು ಬಿಡೆ
ಹೊತ್ತು ಸಾಗಲು ಕೊಡದೆ ಬಿಲ್ಲನು ಬಾಣಿಸಿದ ಮಂತ್ರಿಮಾರ್ತಾಂಡತೇಜ ॥ ೪ ॥

ಭಾ.ಷ.
ಬಿಲ್ಲು ರಾಜ್ಯಾಂಗದಲಿ ಸೇರಲು
ಖುಲ್ಲರಿಗೆ ಬಾಯ್‌ಬೀಗ ಬಡಿಯುವು
ದಲ್ಲದಹುದೆಂಬವರಿಗಲ್ಲದ ಗುಳಿಗೆ ತಿನಿಸುವುದು ।
ಹಲ್ಲುಮೀರಿದ ಟೀಕೆ ಮಾಡುವ
ಹೊಲ್ಲಹಕ್ಕಿನ ಮೂಲಭೂತವ
ಪಲ್ಲಟಿಸಿದುತ್ತುಂಗನಿಗೆ ಜಯವೆನ್ನಿರೋ ಕೂಗಿ ॥ ೫ ॥

⌘ ⌘ ⌘

ಪಂಚವಾರ್ಷಿಕ ಯೋಜನೆ

೧೪೪ನೆಯ ಮೀಟರ್ ನಿಶೋದಯ ಕಾಲ

'ಉತ್ತರಪುರದ ಇತಿಹಾಸದಲ್ಲೇ ಅಪೂರ್ವವಾದ ಪಂಚವಾರ್ಷಿಕ ಯೋಜನೆ' ಎಂಬ ವಿಷಯವಾಗಿ ಮಾನ್ಯ ಪ್ರಧಾನಮಂತ್ರಿ ಉತ್ತರಭೂಪರಿಂದು ಭಾಷಣ ಮಾಡುತ್ತಾರೆ; ಇದೀಗ ಅದು ಪ್ರಾರಂಭವಾಗುತ್ತದೆ. ಎಚ್ಚರಿಕೆಯಿಂದ ಕೇಳೋಣಾಗಲಿ. ಮಾನ್ಯ ಉತ್ತರಭೂಪಜೀ ಅವರು:

"ಸನ್ಮಾನ್ಯ ಮಹಿಳೆಯರೇ, ಮಹನೀಯರೇ, ನಮ್ಮ ಯೋಜನೆ ಭೂಮ್ಯಾಕಾಶದಷ್ಟು ವಿಸ್ತಾರವಾದದ್ದು. ಅದರ ಖರ್ಚೆಷ್ಟು ಗೊತ್ತುಂಟೋ? ೧೪೯೩ ಕೋಟಿ ರೂಪಾಯಿ, ೧೫ ಆಣೆ, ೧೧ ಕಾಸುಗಳು! ಇದರ ಮೇಲೆ ಮಾಂಡಲಿಕ ಸರಕಾರಗಳಿಂದ ೮೧ ಕೋಟಿ ನಮ್ಮ ಖರ್ಚಿಗೆ ದೊರಕುವುದು. ಬಂಡವಾಳದ ಪೇಟೆಯಿಂದ ೪೦೯ ಕೋಟಿ ಬರುತ್ತದೆ. ೪೪೦ ಕೋಟಿ ಸಾಲ ಇದೆ ಅಂತೀರಾ? ಇದ್ದರೆ ಅದರ ಪಾಡಿಗದು ಬಿದ್ದಿರುತ್ತದೆ. ನಮಗೇನು, ನಿಮಗೇನು? ಇಷ್ಟಾದರೂ ೨೯೦ ಕೋಟಿ ಕಮ್ಮಿಬೀಳುತ್ತೆ ಅಂತೀರಾ? ಅದು ಹೇಗಾದರೂ ಆಗುತ್ತೆ. ಈ ಪ್ಲಾನೆಂದರೆ ಎಲ್ಲಾ ಇಜಮ್ಮುಗಳನ್ನೂ ಕರಗಿಸಿ ಭಟ್ಟಿ ಇಳಿಸಿದ್ದು. ಇದು ಜಯಪ್ರದವಾಗಬೇಕಾದರೆ ಕೆಳಗಿನ ಶರ್ತಗಳು ಕೂಡಿ ಬರಬೇಕು:

೧. ಸಾಮಾನುಗಳ ಬೆಲೆ ಇಳಿಯಬೇಕು, ಆದರೆ ಬೆಲೆಗಳಲ್ಲಿ ತಾರತಮ್ಯ ಬಹಳ ಉಳಿಯಬಾರದು–ಬಹಳವಲ್ಲ, ಏನೂ ಉಳಿಯಬಾರದು, ಗೊತ್ತಾಯಿತೆ?

೨. ಅವರಿವರ ಉಪಕಾರಕ್ಕಾಗಿ ಸಾಲಕೊಡುವುದನ್ನು ನಿಲ್ಲಿಸಿಬಿಡಬೇಕು. ಸರಕಾರದಿಂದ ಇನ್ನು ಮೇಲೆ ಯಾರೂ ಏನನ್ನೂ ಕೇಳೋ ಹಾಗಿಲ್ಲ. ಗಿರಣಿ, ಕಾರಖಾನೆ, ಕಂಪೆನಿಗಳು ಸಂಬಳ ಇಳಿಸಬೇಕು, ಬೋನಸ್ ಕಡಿಮೆ ಮಾಡಬೇಕು, ಕೂಲಿ ದರ ತಗ್ಗಿಸಬೇಕು. ಇಲ್ಲದೆ ಹೋದರೆ ರೊಕ್ಕ ಕೂಡಿಬರುವುದು ಹೇಗೆ?

೩. ಕಂಟ್ರೋಲು ಹೆಚ್ಚಬೇಕು; ಗೈರಾಡಳಿತ ಹೆಚ್ಚಾದರೆ ಅದಕ್ಕೆ ಸರಕಾರ ಹೊಣೆಯಲ್ಲ.

೪. ಜಾಯಿಂಟ್ ಸ್ಟಾಕ್ ಕಂಪೆನಿಗಳು ಡಿವಿಡೆಂಟ್ ಕೊಡೋದು ಕಡಿಮೆ ಮಾಡಿ ಕರ ಹೆಚ್ಚು ಹೆಚ್ಚು ಕೊಡುತ್ತ ಹೋಗಬೇಕು.

ಒಟ್ಟಿನ ಮೇಲೆ ನೀವೆಲ್ಲ ಹೊಟ್ಟೆ ಕಟ್ಟಬೇಕು. ಮಧ್ಯಮವರ್ಗವಂತೂ ಹೊಟ್ಟೆಗೆ ಬೆಲ್ಟನ್ನೇ ಬಿಗಿಯಬೇಕು; ಕೂಲಿಕಾರರು ಧೋತ್ರ (ಹಳೆಯದು, ಹೊಸದು ಸಿಗೋಹಾಗಿಲ್ಲ) ಸುತ್ತಿಗೋಬೇಕು, ಹೊಸೆದು ಹುರಿಮಾಡಿ – ತಿಳಿಯಿತೇ? ಇದಕ್ಕೆ 'ತ್ಯಾಗ' ಎಂದು ಹೇಳಿದ್ದಾರೆ ಮಹಾತ್ಮರು! ಮಹಾತ್ಮರ ಮಾತೆಂದಾದರೂ ನೀವು ಮೀರಲು ಮನಸ್ಸು ಮಾಡೀರೇ? ಸರ್ವಥಾ ಇಲ್ಲ. ಆದುದರಿಂದ ಪ್ಲಾನಿನ ಜಯಾಪಜಯ ನಿಮ್ಮ ಕೈಯಲ್ಲೇ ಇದೆ – ಅಂಗೈ ಒಳಗಿನ ನೆಲ್ಲಿಕಾಯಿ ಅಂತಾರಲ್ಲ ಹಾಗೆ. ನೆಲ್ಲಿಕಾಯಿ ಅಂದ ಕೂಡಲೆ ತಾವಾರೂ ತಾತ್ಸಾರ ಮಾಡಬಾರದು. ಅದರ ಉಪಯೋಗದ ಬಗ್ಗೆ ಅಮೇರಿಕದ ಅಮರಸನ್ ಎಂಬ ವಿಜ್ಞಾನಿ ಬಹಳವಾಗಿ ಹೇಳಿದ್ದಾನೆ. ಅದರಿಂದಲೇ ಈ ಪ್ಲಾನು ಹೊರಟದ್ದು ಎಂದರೆ ಯಾರೂ ಮೂಗಿನ ಮೇಲೆ ಬೆರಳಿಡಬೇಕಾಗಿಲ್ಲ. ಅಳಲೆಕಾಯಿ ಪಂಡಿತರಿಗಿಂತ ನೆಲ್ಲಿಕಾಯಿ ಪಂಡಿತರೇ ಶ್ರೇಷ್ಠರು. ಪ್ಲಾನಿನ ರಚಕರಲ್ಲಿ ಅಂಥ ಒಗರಿದೆ. ಹುಳಿಯಿದೆ. ಔಷಧಿ ಅಂದ ಮೇಲೆ ಅದು ಹಾಗೇ ಇರಬೇಕಲ್ಲವೆ? ಪಂಚವರ್ಷ ಮುಗಿಯುವುದರಲ್ಲಿ ನೀವು ಜೀವ ಗಟ್ಟಿ ಹಿಡಿದುಕೊಂಡಿರಬೇಕು. ಬಿಟ್ಟರೆ ಅದಕ್ಕೆ ನೀವೇ ಹೊಣೆ. ಇದು ಅನ್ನ ತೆತ್ತು ಚಿನ್ನ ಪಡೆಯೋ ಸುವರ್ಣ ಸಂಧಿ ನಿಮಗೆ. ಅಮೇರಿಕದವರೆಲ್ಲ ಹೀಗೇ ದೊಡ್ಡವರಾದದ್ದು. ರಾಷ್ಟ್ರಕ್ಕಾಗಿ ಮಾಡೋ ತ್ಯಾಗಕ್ಕೆ ರಾಷ್ಟ್ರತ್ಯಾಗ ಎಂದು ಹೆಸರು. ಅದು ಮಾಡೋ ಹೊತ್ತು ಬಂದರೂ ಯಾರೂ ಹಿಂಜರಿಯಬಾರದು. ಇದ್ದವರು ಮಾಡೋ ತ್ಯಾಗಕ್ಕಿಂತ ಇಲ್ಲದವರು ಮಾಡೋ ತ್ಯಾಗ (ಅಂದರೆ ದಾನ) ಇದೆಯಲ್ಲ, ಅದಕ್ಕೇ ಬೆಲೆ ಹೆಚ್ಚು. ಆದುದರಿಂದ ದೇಹ–ಬುದ್ಧಿ ಶ್ರಮಗಳನ್ನು ತೆತ್ತು ಕೂಲಿ–ಸಂಬಳ ಪಡೆಯುವ ಮಂದಿಯಿಂದು ಬೇಕಾದಷ್ಟು ತ್ಯಾಗಮಾಡಿ ರಾಷ್ಟ್ರೋದ್ಧಾರ ಮಾಡಬಹುದು. ಭಾರತೀಯರು ಅನಾದಿಯಿಂದಲೂ ತ್ಯಾಗವೀರರು–ಅವರಲ್ಲೂ ಬಡವರದು ಮತ್ತೂ ಒಂದು ಕೈ ಮೇಲು! ಅವರ ತ್ಯಾಗ ದಾರಿದ್ರ್ಯವಿಂದು ದೇಶದ ತುಂಬ ನಲಿದಾಡಲಿ! ನಮಸ್ತೇ, ಜಯ ಹಿಂದ್, ಪಾಂಚ್‌ಪ್ಲಾನ್ ಜಿಂದಾಬಾದ್!

ಚುನಾವಣಾ ಭಾಷಣ

೧೪೫ನೆಯ ಮೀಟರ್ ಹಕ್ಕಿ ನಿದ್ದೆ ಹೋದ ಕಾಲ; ಮಾನವರಲ್ಲ!

ಇಷ್ಟರವರೆಗೆ ನೀವೆಲ್ಲ ಸರಸತರವಾದ ಸಣ್ಣಕತೆಯನ್ನು ಸವಿಸ್ತಾರವಾಗಿ ಸವಿದಿರಿ. ಈಗ ನೀವು ನಾಳಿನ ಚುನಾವಣೆಯ ಬಗ್ಗೆ ಉತ್ತರಪುರದ ಸೋಶಲಿಸ್ಟ್ ಮುಖಂಡ ಉತ್ತರಪ್ರಕಾಶರ ಭಾಷಣವನ್ನು ಕೇಳುವಿರಿ. ಶ್ರೀಮಾನ್ ಉತ್ತರ ಪ್ರಕಾಶರು:

"ರಚನಾತ್ಮಕ ಕಾರ್ಯಕರ್ತರನ್ನು ನಾವು ತೀರ ಹೊರಗಿಡಲಾರೆವು. ಅವರು ಹೇಳುವುದು ಸೋಶಲಿಜಮ್ಮಿಗೆ ಬಹಳ ಹತ್ತಿರವಾದ ತತ್ವ. ಗಾಂಧಿಯವರ ಟ್ರಸ್ಟೀಶಿಪ್ ಸಿದ್ಧಾಂತವನ್ನು ಹಾಸ್ಯ ಮಾಡಲಾಗದು. ಗಾಂಧಿಜಮ್ಮು ಸೋಶಲಿಜಮ್ಮಿನ ಒಂದು ಅಂಗ. ಆದರೆ ಬೃಹದಾಕಾರದ ಸೋಶಲಿಜಮ್ಮಿನ ಹೊಟ್ಟೆಯಲ್ಲಿ ಗಾಂಧೀಜಮ್ಮು ಅಡಗಿದೆ. ಉತ್ತರ ಕಾಂಗ್ರೆಸ್ಸು ಕ್ಯಾಪಿಟಲಿಸ್ಟಿಕ್ಕು; ಗಾಂಧೀವಾದವನ್ನು ಸಂಪೂರ್ಣ ತ್ಯಜಿಸಿಬಿಟ್ಟಿದೆ. ಆದುದರಿಂದ ಭಾರತೀಯ ಪ್ರಜೆಗಳೆಲ್ಲರೂ ಸೋಶಲಿಸ್ಟರಿಗೆ ಮತಹಾಕಬೇಕು. ಬೇಕಾದರೆ ಜನರು ನಮ್ಮನ್ನು ಗಾ–ಸೋಶಲಿಸ್ಟರೆಂದು ಕರೆಯಲಿ. ಗಾಸೋಶಲಿಜಮ್ಮು ಮಾರ್ಕ್ಸ್‌ನ ಮೂಲ ಸಿದ್ಧಾಂತಕ್ಕೂ ಮುಂದೆ ಹೋಗಿದೆ. ಭಾರತೀಯ ಸನ್ನಿವೇಶಕ್ಕೆ ಅದು ಬಹಳ ಯುಕ್ತವಾದ ಮದ್ದೆನಿಸಿದೆ. ಯುದ್ಧ ಕೊರಿಯದಲ್ಲಾದರೂ ಗಾಯವಾಗಿರುವುದು ಭಾರತಸ್ಥ ಭಾರತೀಯರಿಗೇ. ಈ ಮಾತಿನ ಮರ್ಮವನ್ನು ಎಲ್ಲರೂ ಅರಿತುಕೊಳ್ಳಬೇಕು. ಈ ಗಾಯಕ್ಕೆ ಮದ್ದೆರೆಯಲು ನಾವುಗಳೆಲ್ಲ ಕಲ್ಲುಗಳನ್ನು ಹುಡುಕಿಕೊಂಡು ಬರಬೇಕು. ಸದ್ಯದ ವಿಪಕ್ಷ ಸರಕಾರದಲ್ಲಿ ಕಲ್ಲುಗಳ ದರ ಕೂಡ ಗಗನಕ್ಕೇರಿ ಹೋಗಿದೆ. ಅದನ್ನು ಇಳಿಸಲು ನಾವು ಏಣಿಯನ್ನು ತರಬೇಕು. ಇಂದಿನ ಆಡಳಿತೆಯಲ್ಲಿ ಏಣಿ ಕೂಡ ಸಿಗದಾಗಿದೆ; ಅದನ್ನು ಪರದೇಶಗಳಿಂದ ಆಮದು ಮಾಡಿಕೊಳ್ಳಬೇಕು. ಅದಕ್ಕೆ ವಿನಿಮಯ ಪದಾರ್ಥ ನಮ್ಮಲ್ಲೇನೂ ಇಲ್ಲ. ಅದಕ್ಕೆ ಸರಕಾರವೇ ಹೊಣೆ. ಒಟ್ಟಿನಲ್ಲಿ ಗಾಸೋಶಲಿಜಂ ಬರಬೇಕಾದರೆ ಪರದೇಶದ ಏಣಿ ಬೇಕು; ಏಣಿ ಸಿಗಬೇಕಾದರೆ ಸದ್ಯದ ಸರಕಾರ ಉರುಳಬೇಕು. ಅದನ್ನು ಉರುಳಿಸಲು ಪರದೇಶದ ವಿಜ್ಞಾನದ ದೊಡ್ಡ ಗಾಳಿ ಬೀಸಬೇಕು. ವಿಜ್ಞಾನ ಪ್ರಗತಿಗೆ ಯುದ್ಧ ಬೇಕು. ಯುದ್ಧಕ್ಕೆ ಜನ ಬೇಕು. ಸರಕಾರ ಜನ ಕಳಿಸಲೊಲ್ಲದು. ಆದುದರಿಂದ ನಮ್ಮ ಕೈಯಲ್ಲಿ ಏನು ಮಾಡಲೂ ಸಾಧ್ಯವಿಲ್ಲ. ಇದಕ್ಕೆ ಸರಕಾರವೇ ಹೊಣೆ. ಇನ್ನು ಒಂದು ವೇಳೆ ನಮಗೆ ನೀವು ಓಟು ಕೊಟ್ಟರೂ ಅದನ್ನು ನೀವು ಹಾಕುವುದು ಸರಕಾರೀ ಬ್ಯಾಲೆಟ್ ಬಾಕ್ಸಿನಲ್ಲಿ. ಆದುದರಿಂದ ಅದು ನಮಗೆ ತಲುಪಲಾರದು. ಇದಕ್ಕಾಗಿ ನೀವು ನಿಮ್ಮ ಅಮೂಲ್ಯಮತಗಳನ್ನು ನಮ್ಮ ಮಠಗಳಿಗೇ ಬಂದು ಅಲ್ಲೇ ಡಬ್ಬಿಗೆ ಹಾಕತಕ್ಕದ್ದು. ಡಬ್ಬಿಗಳಲ್ಲಿ 'ಗಾಸೋಮಠ' ಎಂದು ಬರೆದಿದೆಯೋ ಇಲ್ಲವೋ ಎಂಬುದನ್ನು ಮೊದಲೇ ನೀವು ಪರಿಶೀಲಿಸಿಕೊಳ್ಳಬೇಕು. ಅದಕ್ಕೆ ತಪ್ಪಿದರೆ ನೀವೇ ಹೊಣೆ. ನಾವು ಯಾವುದಕ್ಕೂ ಯಾವಾಗಲೂ ಜವಾಬುದಾರರಲ್ಲ!

'ಗಾಸೋಹಾಸಃ ಕಪಿಕುಲಗುರುಃ ಕರ್ಣಕಾಫೀ ಕಷಾಯಃ'

ಎಂಬ ಪ್ರಾಚೀನ ಕವಿ ವಾಣಿಯಾದರೂ ಇದೇ ಮಾತನ್ನು ಬೆಂಬಲಿಸುತ್ತದೆ! "ಜೈ ಗಾಸೋಲೀನಿಜಂಕೀ!"

ವ್ಯಕ್ತಿ ಚಿತ್ರ

೧೪೪ನೆಯ ಮೀಟರ್ ಅಭಿಸರಣ ಕಾಲ

ಸಭ್ಯರೇ, ಶ್ರಾವಕರೇ, ಈಗ ನಿಮಗಾಗಿ ಅತ್ಯಂತ ಹೊಸ ಮಾದರಿಯ ಕಾರ್ಯಕ್ರಮ ಕಾದಿದೆ. ಅದೆಂದರೆ ವ್ಯಕ್ತಿಚಿತ್ರ! ವ್ಯಕ್ತಿಯೂ ಸಾಮಾನ್ಯನಲ್ಲ, ಚಿತ್ರಕಾರರೂ ಸಾಧಾರಣದವರಲ್ಲ. ಉತ್ತರಪುರದ ಯಾರಿಗೂ ಇವರು ಅಪರಿಚಿತರಲ್ಲ–ಆದರೆ ಸುಪರಿಚಯ ಸಾಕಷ್ಟಿಲ್ಲ ಎಂಬುದನ್ನೀಗ ಎಲ್ಲರೂ ಒಪ್ಪುವಿರೆಂದು ನಾನು ಎದೆತಟ್ಟಿ ಹೇಳಬಲ್ಲೆ. ಚಿತ್ರವು ಮಾನ್ಯ ಕೃಪೋಲಿನಿಯವರದು; ಚಿತ್ರಕರು ಶ್ರೀ ತ್ರಪಾನಾಥರು:

"ಅರ್ಧನಾರಿ ಎಂದರೆ ಶಿವ ಎಂಬುದನ್ನು ಹೊಸದಾಗಿ ಹೇಳಬೇಕೆ? ಬೇಕು ಎನ್ನುವವ ನಾನು. ಹಳೆಗಾಲದ ಮಾತಾದರೂ ಅದನ್ನಾಡುತ್ತಿರುವುದು ಹೊಸ ಕಾಲದಲ್ಲಿ ಎಂಬುದನ್ನು ಗಮನದಲ್ಲಿಡಿರಿ. ಸಪತ್ನೀಕರಾಗಿ ಪಾರ್ಲಿಮೆಂಟಿನಲ್ಲಿ ಪಟ್ಟಾಧಿಕಾರ ನಡೆಸುತ್ತಿರುವ ಕೃಪೋಲಿನಿ ಅರೆ ನಾರಿ ಎಂದರೆ ಯಾರಿಗಾದರೂ ಸುಳ್ಳೆನ್ನುವ ಧೈರ್ಯ ಬಂದೀತೇ? ಪ್ರಗತಿಶೀಲ ಯುಗವೆಂದರೆ ಪ್ರಮೀಳಾ ಯುಗ. ಅದರ ಧರ್ಮಕ್ಕೆ ಅನುಗುಣವಾಗಿ ಪಿತೃಪಕ್ಷವನ್ನು ತ್ಯಜಿಸಿ ಹೊರಬಿದ್ದ ಕೃಪೋಲಿನಿಗೆ ಪತ್ನೀಪಕ್ಷ ದೊರಕಿತು!

"ಕೃಪೋಲಿನಿ ಎಂದರೆ ಉತ್ತರಪುರದ ಭಾರಿ ವೆಟರನ್; ಪಾರ್ಲಿಮೆಂಟಿನ ಪಂಚಾನನ; ಮನೆಯಲ್ಲಿ ಕುಂಕುಮವಿಲ್ಲದ ಸುಮಂಗಲ! ಅವನ ಮನೆ ಕಟ್ಟಿಕೊಂಡು ನಾವೇನು ಮಾಡಬೇಕು? ವಿಚಾರ ಮಾಡಬೇಕು. ಅವನು ಕಟ್ಟುವ ಮಠದ ಲಕ್ಷಣ ಅದರಿಂದಲೇ ಸಿದ್ಧ.

"ಮನುಷ್ಯಸ್ಪರ್ಶವಾದ ಮಂಗವನ್ನು ಹಿಂಡಿನಲ್ಲಿ ಸೇರಿಸಿಕೊಳ್ಳುವುದೇ ಇಲ್ಲವಂತೆ. ಅಂಥವೇ ಹೆಚ್ಚಾದರೆ ಅವುಗಳದೇ ಒಂದು ಶಿಬಿರ ತಯಾರಾಗುವುದು ಸ್ವಾಭಾವಿಕ. ಪಿತೃಪಕ್ಷ ಬಿಟ್ಟುಬಂದ ಜನರಲ್ಲಿ ಪೂರ್ಣವಾಗಿ ಪತ್ನೀಪರಾಯಣತೆ ಬೆಳೆದಿಲ್ಲ. ಕೃಪೋಲಿನಿಗೆ ಆತ್ಮಬುದ್ಧಿಯಿಲ್ಲವಾದರೂ ಪತ್ನೀಬುದ್ಧಿ ಸಂಪೂರ್ಣವಾಗಿ ಇದೆ. ಆದುದರಿಂದ ಬಿಟ್ಟುಬಂದವರ ಬೆನಕ ಎನಿಸಿಕೊಂಬ ಪ್ರಯತ್ನದಲ್ಲಿ ಮಹಾಶಯ ಸಾಕಷ್ಟು ಕೃತಕೃತ್ಯನಾಗಲಿಲ್ಲ. ಪಿತೃಪಕ್ಷದ ಪಿಂಡ ಬಹಳ ಕಾಲ ತಿಂದದ್ದರಿಂದ ಇವನಲ್ಲೂ ದಿನದ ಎರಡೇ ತಾಸುಗಳಲ್ಲಾದರೂ ಅತ್ತಕಡೆ ಮರುಕ ಹುಟ್ಟುವುದು ತಪ್ಪಿಲ್ಲ. ಇಂಥ ನಾರುಸ್ವಭಾವದ ನರರು ನಾರುತ್ತಲಾದರೂ ಬದುಕಿಯೇ ತೀರುವರು. ಬಡಪೆಟ್ಟಿಗೇ ಬಾಗುವ ಇವರಿಗೆ ದೀರ್ಘಾಯುಷ್ಯ ಕಟ್ಟಿಟ್ಟದ್ದು!

"ಪಕ್ಷ ಕಟ್ಟುವ ತಂತ್ರವನ್ನು ಈತ ಚರಕ್‌ಬಾಬುಗಳಿಂದ ಕಲಿತಿದ್ದಾನೆ. ಹೆಣ್ಣುಗಂಟು ಕಟ್ಟುವುದೂ ಸುಲಭ, ಬಿಚ್ಚುವುದೂ ಸುಲಭ. ಗಾಳಿ ಬಂದಾಗ ತೂರಿಕೊಳ್ಳಲೂ ಆರ, ಗಾಳಿಯಿಲ್ಲದಾಗ ಸುಮ್ಮನೆ ಕುಳಿತುಕೊಳ್ಳಲೂ ಆರ– ಇಂಥ ಅಪರಂಜಿ; ಅಂದರೆ,

ಕುಚೋದ್ಯಕ್ಕಿಂತ ಚೋದ್ಯವೇ ಜಾಸ್ತಿ. ಎಲಾ ಇವನ? ಅಂತ ನೀವಾರಾದರೂ ದನಿಯೆತ್ತಿದರೆ ಕೋಲಮೇಲೆ ಹಾವು ಬಂದಂತೆ ಬರುತ್ತಾನೆ. ಉಬ್ಬರಕ್ಕಿಂತ ಅಬ್ಬರವೇ ಹೆಚ್ಚು! ಇಡ್ಡಲಿಯಾದರೂ ಒಂದು ಲೆಕ್ಕ; ಚಪಾತಿಯಾದರೂ ಒಂದು ಲೆಕ್ಕ. ಅದೂ ಅಲ್ಲ, ಇದೂ ಅಲ್ಲ; ಅರೆ ಬೇಯುವ ಉಪ್ಪಿಟ್ಟು!

ರೇಶನ್ ಹೊಟ್ಟೆ

೧೪೫ನೆಯ ಮೀಟರ್ ಕೆಟ್ಟಿರುಳ ಕಾಲ

ಈವರೆಗೆ ತಾವೆಲ್ಲ ವ್ಯಕ್ತಿಚಿತ್ರವನ್ನು ಕಿವಿಯಿಂದ ಕಂಡಿರಿ. ತುಂಬಾ ಧನ್ಯವಾದಗಳು. ಈಗ ರೇಶನ್ ಹೊಟ್ಟೆ ಎಂಬ ಹೊಸ ಸೃಷ್ಟಿಯ ಬಗ್ಗೆ ವಿಜ್ಞಾನ ಭಾಸ್ಕರ ವಿತಂಡನ್ನರ ಸುಮನೋಜ್ಞವಾದ ಭಾಷಣವನ್ನು ಲಾಲಿಸುವಿರಿ. ಶ್ರೀ ವಿತಂಡನ್ನರು:

"ಗರುಡಪುರಾಣದಲ್ಲಿ ಕಲಿಯುಗಾಂತ್ಯದಲ್ಲಿ ಹೆಬ್ಬೆರಳು ಗಾತ್ರದ ಮಾನವರು ತುಂಬೆಯ ಗಿಡಕ್ಕೆ ಏಣಿ ಹಾಕಿಕೊಂಡು ಹೂ ಕೊಯ್ಯುತ್ತಾರೆ ಎಂದು ಹೇಳಿರುವುದರಲ್ಲಿ ವೈಜ್ಞಾನಿಕ ಸತ್ಯವಿದೆ. ಹ್ರಸ್ವತೆ ಅಥವಾ ಸೂಕ್ಷ್ಮತೆ ಸಕಲ ಜೀವಿಗಳ ವಿಕಾಸದ ಅಂತ್ಯಾವಸ್ಥೆ. ಸೂಕ್ಷ್ಮ ಸೂಕ್ಷ್ಮತರವಾಗುತ್ತ ಹೋಗುವುದೇ ಪ್ರಗತಿ. ನಮ್ಮ ಶರೀರ, ಮನಸ್ಸುಗಳು ಆಗಲೇ ಹಿಂದಿಗಿಂತ ಸಣ್ಣವಾಗಿವೆ ಎಂಬುದನ್ನು ಈ ರೇಶನ್ ಯುಗ ಪ್ರತ್ಯಕ್ಷವಾಗಿ ಸಿದ್ಧಮಾಡಿ ತೋರಿಸಿದೆ. 'ಅಣೋರಣೀಯಾನ್' ಎಂದು ಪುರಾಣಗಳು ಬಣ್ಣಿಸುವ ದೈವೀ ಸ್ಥಿತಿಯೇ ನಮ್ಮ ಪರಮಾದರ್ಶ ಎಂಬುದನ್ನು ಆಧುನಿಕ ವಿಜ್ಞಾನ, ಮತ್ತು ಅದನ್ನವಲಂಬಿಸಿದ ರಾಜಕೀಯ ಧೋರಣ ಇವು ಒಪ್ಪಿವೆ.

"ಕ್ರಾಂತಿ ಎಂದರೆ ಇದೇ. ಹಿಂದೆ ಯಾವುದು ಮಹತ್ತೆನಿಸಿತ್ತೋ ಅದಿಂದು ಲಘು ಎನಿಸಿದೆ. ಹಿಂದೆ ಲಘು ಎನಿಸಿದ್ದು ಇಂದು ಮಹತ್ತಾಗುತ್ತ ಹೋಗಿದೆ. ಜಠರ ಪ್ರಶ್ನೆ ಹಿಂದೆ ಲಘು, ಇಂದು ಮಹತ್. ಹಿಂದೆ ದೊಡ್ಡದಾಗಿದ್ದ ಅದು ಇಂದು ಸಣ್ಣದಾಗಿದೆ. ಬಕತ್ವದಿಂದ ನಾವಿಂದು ಭೇದತ್ವಕ್ಕೆ ಬಂದು ಮುಟ್ಟಿದ್ದೇವೆ. ಮುಂದಿನದು ಕೀಟತ್ವ; ಕೀಟಗ್ರಾಹ್ಯ ಆಹಾರ ಪ್ರಾಮಾಣದಿಂದ ನಮ್ಮ ಹಸಿವು ಇಂಗುವುದು ಮುಂದಿನ ಮಟ್ಟ. ಆ ಸಿದ್ಧಿಯೇ ಇಂದಿನ ಶಿಕ್ಷಣದ ಗುರಿ, ರಾಜಕೀಯ ಉತ್ಕರ್ಷದ ಸಿರಿ.

"ಮಾನ್ಯ ಔತ್ತರಾಯಣರೇ, ನೂರು ವರ್ಷಗಳಲ್ಲಿ ಹಿಂದೆ ಮಾಡಲಾಗುತ್ತಿದ್ದ ಕಾರ್ಯಗಳನ್ನು ಮೂರು ವರ್ಷಗಳಲ್ಲಿಂದು ಮಾಡಿ ಮುಗಿಸಬಲ್ಲೆವಾದರೆ ನಮಗಿರುವ ಆಯುಷ್ಯ ಮತ್ತು ಕಾರ್ಯಶಕ್ತಿಯ ಪೂರಕಕೇಂದ್ರವಾದ ಹೊಟ್ಟೆ ಇವುಗಳು ಅನವಶ್ಯಕ ಪ್ರಮಾಣದಲ್ಲಿವೆ ಎಂಬುದು ಸ್ಪಷ್ಟ. ಅವೀಗ ಕ್ರಮೇಣ ಅಪಕರ್ಷಗತಿ ಹಿಡಿದಿರುವುದು ಸ್ವಾಭಾವಿಕ. ವಿಜ್ಞಾನ ಸಾಧನಗಳಿರುವುದರಿಂದ ದೇಹಶಕ್ತಿ ಮೊದಲಿನಷ್ಟು ಇರಬೇಕಾಗಿಲ್ಲ; ಇದ್ದರೆ ಅದೀಗ ವ್ಯರ್ಥ. ಆದುದರಿಂದ ನಿಸರ್ಗ ಮತ್ತು ತದನುಸಾರಿಯಾದ ಸರಕಾರ

ಇವು ರೇಶನ್ ತತ್ವವನ್ನು ಹಿಡಿದು ಜಠರಸಂಕೋಚನ ವಿಧಾನವನ್ನು ಆರಂಭಿಸಿರುವುದು ಕ್ರಮಪ್ರಾಪ್ತ. ಇಂದು ಚಿಕ್ಕ ಹೊಟ್ಟೆಯುಳ್ಳವರೇ ಚೆಲುವರು. ಅಲ್ಪಭಕ್ಷಕರು, ಅಲ್ಪಕಾರ್ಯಪರರು, ಅಲ್ಪಾಯುಗಳು, ಅಲ್ಪಭಾವನಾಬಲ–ಬುದ್ಧಿಬಲ ಉಳ್ಳ ಅಲ್ಪರು. ಅಬಲರು ಇವರೇ ಸುಂದರರು, ಸುಸಂಸ್ಕೃತರು, ಸದ್ಗೃಹಸ್ಥರು, ಶಿಷ್ಟರು ಎಂದು ತಿಳಿಯತಕ್ಕದ್ದು. ಅಬಲ–ಅಬಲೆಯರೇ ಇಂದು ಪ್ರಬಲರೆಂಬುದನ್ನು ಜೀವಶಾಸ್ತ್ರ ಸಿದ್ಧಮಾಡಿಕೊಟ್ಟಿದೆ. ಅದಕ್ಕೇ ಇದು ಗಂಡು ಯುಗವಲ್ಲ ಹೆಣ್ಣು ಯುಗ ಎನ್ನುತ್ತಾರೆ ವಿದ್ಯಾವಂತರು. ವಿಶ್ವಾಮಿತ್ರ ಪರಾಶರಾದಿ ಮುನಿಗಳು ಗಾಳಿ, ನೀರು, ತರಗೆಲೆ ಭಕ್ಷಿಸಿ ಆದರ್ಶ ಪುರುಷರೆನಿಸಿದ್ದು ಸುಪ್ರಸಿದ್ಧ. ಹೀಗಿರುವಾಗ ನಾವಾದರೂ ವಿಜ್ಞಾನಸಮರ್ಥಿತ ರಾಜಕೀಯ ಧೋರಣದಂತೆ ಅಲ್ಪ ಭಕ್ಷಣಾಭ್ಯಾಸಿಗಳಾಗಿ ಕಿರುಹೊಟ್ಟೆಯ ಕಿಂನರರಾಗುವುದು ಕಿಂಪುರುಷರಾಗುವುದು ಪ್ರಗತಿ, ವಿಕಾಸ, ಉನ್ನತಿ ಎನ್ನಬೇಕಲ್ಲವೆ?

ವಾಚನ

೧೪೬ನೆಯ ಮೀಟರ್ ಶುಕ್ರೋದಯ ಕಾಲ

ಬೆಳ್ಳಿ ಮೂಡಿದೆ. ಭಾರತ ಪ್ರಾರಂಭವಾಗುತ್ತದೆ. ವಾಚಕರು ಅಂಬಿಗರ ಅಕ್ಷರಚಕ್ಷುಗಳು. ತಪ್ಪು ಓದುವುದು ಅವರಿಗೆ ಗೋತ್ತೇ ಇಲ್ಲ ಎಂಬುದು ಅವರ ಕೀರ್ತಿ. ಮಾನ್ಯ ಅಕ್ಷರಚಕ್ಷುಗಳು:

ಶ್ರೀರಮಣಿಯೆಡಗಾಲ ಬೆರಳಿ
ಕೋರಯಿಪ ಸುಲಿಯುಗುರುಗಳ ಹಿಡಿ
ದಾರಯಿದು ನಟಿಕೆಯನು ಮುನಿವರ ಗೋಷ್ಠಿಯಲಿ ತೆಗೆದು ।
ಶೂರತನವನು ಮೆರೆದ ಕಲ್ಮಠ
ನಾರಿವತ್ಸಲದೇವ ನಿಮ್ಮ ಕ
ರಾರವಿಂದವ ಹಿಡಿದು ನಡೆಸಲಿ ಮನೆಯ ಹಿತ್ತಿಲಲಿ ॥೧॥

ಉತ್ತರಾಪುರದಲ್ಲಿ ಹಸಿವಿನ
ಕುತ್ತವಡಸಿದ ಪರಿಯನಾಗಳೆ
ಬಿತ್ತರಿಸಲಿಲ್ಲವೆ? ಅದೀಗ ಮಹತ್ವಕೇರಿತಲಾ ।
ಮತ್ತೆ ಮತ್ತಟ್ಟಿದರು ಸಚಿವರು
ಸುತ್ತಲಿನ ನಾಡುಗಳಿಗೋಲೆಯ
ಸತ್ತುದನು ಸುಳ್ಳೆಂದು ಸಾರುತ ಶಂಖನಾದದಲಿ ॥ ೨ ॥

ಬಿಳಿಯ, ಹಳದಿಯ, ಬಣ್ಣಬಣ್ಣದ
ಗೆಳೆಯ ನಾಡಿಗರವರ ಮನವಿಯ
ನಳೆದು ಸುರಿದಾಡಿಸಲು ತೊಡಗಲು ಸಾಕುಸಾಕಾಯ್ತು ।

ಬಳಲುತಿರೆ ಸಚಿವರ್ಕಳೊಮ್ಮೆಲೆ
ಕಳಿಸಲೊಪ್ಪಿದರಿತರರಾದರೆ
ತಿಳಿನಗೆಯ ಬೆಳ್ದೊಗಲಿಗರು ಮುಂದೂಡತೊಡಗಿದರು ॥ ೩ ॥

ಹೃದಯಮಿತ್ರರು ಕಳಿಸಲು ನವ
ಗದಿಸಿದುದು ಗರ್ವಕ್ಕೆ ಭಂಗವ
ನೊದವಿಸಿತು ಮತ್ತಾದರಾ ಬಣ್ಣಿಗರು ಕಾಳಿಸುವುದ ।
ಮುದದೆ ಕೊಳ್ಳಲು ಕೈಯೆ ಬಾರದು
ಸದಮಲತೆಗದು ಸೇರದೆಂದಾ
ವಿಧುರ ಮಂತ್ರಿಮಹಾತ್ಮ ಚಿಂತೆಗೆ ತಲೆಯ ತೆತ್ತನಲಾ ॥ ೪ ॥

ಮುಟ್ಟದವರಿಗೆ ಮುಟ್ಟಗೊಟ್ಟ ಮ
ಹಾಟ್ಟಹಾಸದ ದೊರೆಗಳಿಗೆ ಕೈ
ಸುಟ್ಟಹಾಗೆನಿಸಿತು ಕಮ್ಯೂನಿಸ್ಟ್ ಕಾಡುಗಳ ಕಾಳ ।
ಮುಟ್ಟವೊಡೆ, ಹಾಯ್ ಹರಹರಾ ! ಕೈ
ಬಿಟ್ಟರೂ ಮೊದಲಲ್ಲಿ ಕೊನೆಗಾ
ರೊಟ್ಟಿಗೇ ನೀಡಿದನು ಭೂಪತಿ ತನ್ನ ಮಡಿಗೈಯ ॥ ೫ ॥

ಹೇಳಲೇನಾ ಶೋಕಸಾಗರ
ದಾಳವಳೆಯಲು ಮೇರು ಕೂಡಾ
ಸಾಲದೋ ಬಹುಮಾನವನು ಸಂದೂಕದಲ್ಲಿಟ್ಟು ।
ಕಾಳಜಿಯ ತಾಳಿದ್ದು ಬರಲಿಹ
ಖೂಳತನದ ಚುನಾವಣೆಯ ಹೆ
ದ್ದಾಳಿಗಂಜಿ ಜನಾನುರಂಜನ ಲಗ್ನ ಮಂತ್ರಿಕುಲ! ॥ ೬ ॥

ರಾಯತನದಲಿ ಜೀಯ ಎನ್ನದೆ
ಪಾಯಸವ ಭುಂಜಿಸುತ ಬಾಳಿದ
ನಾಯಕರ ಮುಖ ಕರಟದಗಲಕ್ಕಿಳಿದ ಆ ದಿನದ ।
ಶಾಯಿಕಳೆಯ ಶಿವೇತರಪ್ರದ
ಮಾಯೆಮಾಟಗಳಿರವ ಸಾಸಿರ
ತಾಯ ಮಗನೂ ತಿಳಿಸಲಾರನು ಬಾಯ ಮಾತಿಂದ ॥ ೭ ॥

ಡೆಮಾಕ್ರಸಿ ಸತ್ವಪರೀಕ್ಷೆ!

೧೪೪ನೆಯ ಚಂದ ಕುಜರಾಹು ಸಂಧಿಕಾಲ

ಆಕಾಶವಾಣಿಯಲ್ಲೀಗ ಅಕ್ಕರಗೊಟ್ಟೆ; ಅಂದರೆ ಮೀಟಿಂಗು. ನಾಗರಿಕತೆಯ ತಿರುಳು ಎನಿಸಿದ ಪೊಲಿಟಿಕಲ್ ಅಫೇರ್ಸು ಮಂತ್ರಿಗಳ ಸೋಲಿನ ಬಗ್ಗೆ ಟೀಕಾಟೂಕೆ. ಟಾಪೀಲರ ಘನಘೋರ ಗರ್ಜನೆ. ಡೆಮಾಕ್ರಸಿಯ ಸತ್ವಪರೀಕ್ಷೆ!

ಟಾಪೀಲ್–

ಅಲ್ಲಾ, ಈ ಜನಗಳಿಗೇನು ಬುದ್ಧಿಯಿಲ್ಲ ಅಂತೀನಿ. ಹಿಂದೆ ಗೃಹಮಂತ್ರಿಯಾಗಿ ಮುಖ್ಯಮಂತ್ರಿಗೇ ಗ್ರಹಣ ಹಿಡಿಸಿದ ಭುಜಬಲಪರಾಕ್ರಮಿಯಾದ ಮಾರಾರಜಿಯವರನ್ನು ಚುನಾವಣೆಯಲ್ಲಿ ಆರಿಸದೆ ಬಿಟ್ಟ ಇವರ ದಿಮಾಕನ್ನು ಕಂಡರೆ ಮೈಯಲ್ಲಿಯ ಎಂಟುಕೋಟಿ ರೋಮಗಳೂ ಉರಿದೇಳುತ್ತವೆ. ಅಬ್ಬಾ ಏನಿವರ ಸೊಕ್ಕು ! ಹೇಳುವವರು ಕೇಳುವವರು ಯಾರೂ ಇಲ್ಲದಾಗಿ ಹೋಯಿತೆ? ಎ ಲ ಲ ಲ ಲಾ ! ಈ ಡೆಮಾಕ್ರಟರ ಮಿದುಳಿನ ಮಸ್ತಿಯಾದರೂ ಎಷ್ಟಿದೆಯೆಂಬುದನ್ನು ಪರೀಕ್ಷೆ ಮಾಡಿಬಿಡುತ್ತೇನೆ. ಹಸ್ತಿನಾಪುರದವರೆಗೆ ಸ್ವತಃ ಬಿಜಯಂಗೆಯ್ದು ಕಾನ್‌ಸ್ಟಿಟ್ಯೂಶನ್ನನ್ನೇ ಬದಲಿಸಿಬಿಡುತ್ತೇನೆ. ಮಾರಾರಜಿಯನ್ನು ಮುಖ್ಯಮಂತ್ರಿಯನ್ನಾಗಿ ಪಟ್ಟಗಟ್ಟದಿದ್ದರೆ ನಾನು ಟಾಪೀಲನೇ ಅಲ್ಲ, ಮೀಸೆ ತೆಗೆದದ್ದೇ ವ್ಯರ್ಥ.

ಪಿಕಾಸಪ್ಪ–

ಅಲ್ಲರೀ ಟಾಪೀಲ ಸಾಹೇಬರೆ, ನೀವು ಇರುವುದು ಯಾವ ಯುಗದಲ್ಲಿ ಎಂಬುದನ್ನೇ ಮರೆತುಬಿಟ್ಟಂತೆ ಕಾಣುತ್ತದೆ. ನಿಮ್ಮ ಮವಾಲೀ ಸೈನಿಕ ಬಲದ ಮಸ್ತಿ ಇಲ್ಲಿ ಕೆಲಸಕ್ಕೆ ಬರದು. ಇದು ಡೆಮಾಕ್ರಸಿಯ ಕಾಲ. ಹಸ್ತಿನಾವತಿಯಲ್ಲಿಯ ಉತ್ತರಭೂಪನನ್ನು ಬೆದರಿಸಿ ಬುಟ್ಟಿಗೆ ಹಾಕಿಕೊಳ್ಳುವುದು ಬೂಂದಿಯುಂಡೆಯನ್ನು ಬಾಯಲ್ಲಿ ಹಾಕಿಕೊಂಡಷ್ಟು ಸುಲಭವೆಂದು ತಿಳಿದಿರೋ? ಉತ್ತರಭೂಪನನ್ನು ಅಷ್ಟು ದೊಡ್ಡ ಲಂಚಪಂಚಾಶನನೆಂದು ಗಣಿಸಿಬಿಟ್ಟಿರೋ? ನವನೀತ ಬುಭುಕ್ಷುವೆಂದು ಲೆಕ್ಕಿಸಿದಿರೋ? ಝುಣಲ್ಲಕ್ಷ್ಮೀಕರಾವಲಂಬನನೆಂದು ಪರಿಭಾವಿಸಿದಿರೋ? ಪುರುಷರೂಪಿ ಸ್ತ್ರೀ ಎಂದು ಪರಿಲಕ್ಷಿಸಿದಿರೋ? ನೀವೀ ಮೋಕ್ಷ ನಿಸ್ಸೀಮನೆಂದು ನಿಶ್ಚಯಿಸಿದಿರೋ? ಹಾಗಾದರೆ ನಿಮ್ಮ ಲೆಕ್ಕಾಚಾರ ತಪ್ಪು, ಪೂರಾ ತಲೆಕೆಳಗು. ಉತ್ತರಭೂಪನು ಡೆಮಾಕ್ರಸಿ ಜಟ್ಟಿಗನ ಪಾತ್ರಿ; ಸೆಕ್ಯೂಲಾರಮ್ಮನ ಕೊರಡು; ಜಾತ್ಯತೀತ ಹುಲಿರಾಯನ ಗಣ; ಜಮೀನುದಾರ ಭಕ್ಷಕ ಹಾಯಗುಳಿ. ಹೀಗಿರುವಾಗ ಮಾರಾರಜಿಗಾಗಿ ಕಾನ್‌ಸ್ಟಿಟ್ಯೂಶನ್ನು ಬದಲಿಸಲು ಆ ಅಕಾಲತಾಂಡವನು ಒಪ್ಪಿಯಾನೇ?

ನಯಸವಿಯಪ್ಪ–

ಯಾಕೆ ಒಪ್ಪಲಾರನರೀ? ಯಾಕೆ? ಅಂದೆ. ಒಬ್ಬ ಮಾರನಲ್ಲ, ಆರು ಮಾರರಿಗೆ ಸಮನಾದ ನಮ್ಮ ಮಾರಾರಜಿಯಂಥ ಮುತ್ಸದ್ದಿ ಹುದ್ದರಿಯಿಲ್ಲದೆ ಆ ರಾಯನಾದರೂ ಏನು ರಾಜ್ಯಭಾರ ನಡೆಸಿಯಾನು? ಇಂದ್ರನಾದರೂ ಒಬ್ಬನೇ ಸ್ವರ್ಗವನ್ನು ಆಳಬಲ್ಲನೇನು? ಮಾರನಿಲ್ಲದೆ ಹೋಗಿದ್ದರೆ ಎಷ್ಟೋ ಭೂಲೋಕದ ಋಷಿಗಳು ಅವನನ್ನು ತಪೋಬಲದಿಂದ, ಗದ್ದುಗೆಯಿಂದ ಹೊರದಬ್ಬಿ ಇಂದ್ರರಾಗಿ ಬಿಡುತ್ತಿದ್ದರು! ಆ ಅನಂಗನು ಇಂದ್ರನಿಗೆ ಹೇಗೆ ಅಂಗರಕ್ಷಕನೋ ಹಾಗೆಯೇ ಮಾರಾರಜಿಯಾದರೂ ಉತ್ತರಭೂಪನ ರಾಜ್ಯದ ಪಾನರಕ್ಷಾಕವಚ, ದ್ವೈಪತ್ನಿಕೆ ಪಿಶಾಚಮಾರಕ ಯಂತ್ರ, ಟೆನ್ನೆಸ್ಸಿದೈವತ, ಅಸ್ಪೃಶ್ಯಪಾವನ, ಐರನ್ ಮ್ಯಾನ್, ಅಡಾಮಂಟ್ ಆಟೋಕ್ರಾಟ್! ಒಂದೇ, ಎರಡೇ, ಮೂರೇ, ನಾಲ್ಕೇ?–

ಒಂದೇ ಮಾರಗುಣಾಕರಂ ಮುರಧರಂ
ಎರ್ಡೇ ಅಪಾನಪ್ರಿಯಂ ।
ಮೂರೇ ಗುರ್ಜರಭೂಷಣಂ ಗುರುವರಂ
ನಾಲ್ಕೇ ಟಿನೆಸ್ಸೀಪತಿ ॥
ಐದೇ ಅಂತ್ಯಜ ಪಾವನಂ ಸತಿಹಿತಂ
ಆರೇ ಹಠಾಂಗಾರಕಂ
ಏಳೇ ಸೋತರು ಗೆದ್ದವಂ ಜನಕಿದೇ
ನೆಂಟೇನು ಸೋಲೆಂಬವಂ ॥

ಟಾಪೀಲ್–

ಸವಿಯಪ್ಪನೆಂದುದೇ ಸವಿ, ಸರಿ; ಅದಕ್ಕೆ ನನ್ನ ಸಂಪೂರ್ಣ ಸಹಿ. ಯಾರಾದರೇನು, ಮಾರಾರಜಿಗೆ ಸರಿಯೇ? ಮಾರಾರಜಿಯನ್ನು ಪಟ್ಟದಲ್ಲಿ ಕುಳ್ಳಿರಿಸಲು ಹೊರಟ ನನ್ನೆದುರು–

'ದೇವ ದಾನವ ಗಂಧರ್ವಯಕ್ಷ ರಾಕ್ಷಸ ಕಿನ್ನರಾಃ । ಸೋಶಾಲಿಸ್ಟಾಃ ಕಮ್ಯೂನಿಷ್ಟಾಃ ಸ್ವತಂತ್ರಾಃ ಸ್ವೈರಿಣೀಪರಾಃ'– ಈ ಯಾವ ವಾಮಾಚಾರ ಪಂಗಡಿಗರು ಬಂದರೂ ಅವರನ್ನು ಸಜೀವ ಸ್ವರ್ಗಾರೋಹಣ ಮಾಡಿಸಿಬಿಡಲು ತಕ್ಕ ಏರ್ಪಾಡಿದೆ ಈ ಟಾಪೀಲನಲ್ಲಿ. ಠಾಪ್ಪೆಂದು ನಾನು ಮೇಜು ಬಡಿದ ಮಾತ್ರದಲ್ಲಿ ನಾನು ಹೇಳಿದ ಕೆಲಸವನ್ನು ನಾ ಮಾಡುವೆ ತಾ ಮಾಡುವೆ ಎಂದು ಹಿಂಬಾಯಿಗಳೆಲ್ಲ ಮುಂಬಾಯಿಗಳಾಗಿ ಬಿಡುತ್ತಾರೆಂಬುದನ್ನು ಬಲ್ಲಿರೇನು ಪಿಕಾಸಪ್ಪನವರೇ? ಇದು ಪಿಕಾಸಿ ಪಕಾಸಿಗಳ ಕಾಲವಲ್ಲ.

This is not an age of musketeers, nor is it of biscuiteers. This is not an age of Pannah but of Jinnah! This is not your Dharwar, Karwar or domestic war; this is Bomb war, Back bite war; Wire pulling war and Briberological War! ಇದರ ಮುಂದೆ ನಿಮ್ಮ ಡೆಮಾಕ್ರಟರ, ಡಮ್ಮೀಕ್ಯಾಟರ, ಅಥವಾ ಕಿಳ್ಳೀಕ್ಯಾತರ ಆಟ ನಡೆಯದು.

This is pure lambent fire that Hell itself sets! This is Gamalogical operation. ಗಫ್ಹಾಲಾಜಿಕಲ್ ಅಲ್ಲ. ಗೊತ್ತಾಯಿತೋ? ಹೆಚ್ಚಿಗೆ ಮಾತಾಡಿದರೆ–ಅರೇ ಮವಾಲಿ ಭಯ್ಯಾ! ಆವೋ ಸೀದಾ! ಪಕಡೋ ಇನ್ಕೋ, ಗಿರಫ್‌ದಾರ್ ಕರೋ– ಏಕ್, ದೋ, ತೀನ್! ಟಾಪ್!!

ವಚನಗಳು

೧೪೫ನೆಯ ಮೀಟರ್ ಅಜಗಲಕೃಪಾಣ ಸಂಧಿಕಾಲ

"ಸ್ವತಂತ್ರ ಉತ್ತರಪುರದ ಅಮೃತವಾಣಿಗಳು!" ಪುರೋಹಿತ ಕರಾಳ ವೆಂಕಟಾರ್ಯರಿಂದ. ಮಾನ್ಯ ಕರಾಳ ವೆಂಕಟಾರ್ಯರು:

೧. ಕಾಳಪೇಟೆಯೇ ಬಾಳಪೇಟೆ. ಕಾಳಧರ್ಮವೇ ಕಾಲಧರ್ಮ. ಕಾಳಕಲೆ ಬಾಳ ಸೆಲೆ. ಕಾಳ ಬೋಳರೊಡನೆ ವೇಳೆಗಳೆದು ಬೇಳೆಬೇಯಿಸಿಕೊಳ್ಳೋ ಕೂಳ ಕೂಡಲಸಂಗಮದೇವಾ!

೨. ಗಾಂಧಿಯೇ ಮಾತಿನ ನಾಂದಿ; ಗಾಂಧಿಯೇ ಪ್ರಚಾರದ ಬ್ರಾಂದಿ. ಗಾಂಧಿಯ ಮಾತು ಗಾಳಿಯ ಪಾಲು, ಸೇಂದಿಯ ಪೀಪಾಯಿ ಕಳ್ಳಭಟ್ಟಿ ಪಾಲು. ಗಾಂಧಿ ಗಾಂಧಿ ಎಂದು ಗೋಗರೆದು ಬೂಂದಿಯೂಟ ಕಳಕೊಳ್ಳಬೇಡವೋ ಸೇಂದಿ ಸಿದ್ಧೇಶ್ವರಾ!

೩. ಸರಕಾರಿ ಮತವೇ ಸಾರ್ವಜನಿಕ ಮತ. ಮುಖ್ಯಮಂತ್ರಿಯ ಮತವೇ ಮುನ್ನಡೆಯುವ ಮತ. ಮತದಾನವೇ ಮತಿದಾನ. ಮತಚೌರ್ಯವೇ ಮಹಾಶೌರ್ಯ. ಮತಿವಂತರ ಮತಕ್ಕಾಗಿ ಒದ್ದಾಡದೆ, ಮತವಂತರ ಮತಿಗೆ ಮಂಕು ಕವಿಸಿ ಮಾನ್ಯನಾಗೋ ಪಾರ್ಲಿಮೆಂಟಿನ ಪರಮೇಶ್ವರಾ!

೪. ಲಂಚವೆಂದರೆ ಲಂಚವಲ್ಲ. ಕಂಡರೆ ಮಾತ್ರ ಅದು ಕಾಯದೆಯಂತೆ ಲಂಚ; ಕಾಣದಿದ್ದಲ್ಲಿ ಕಮಲಾ ಕಟಾಕ್ಷ ಪ್ರಪಂಚ. ಲಂಚ ನಿಂದಕನಿಗೆ ಸಂಚಿತವೇ ಶೂನ್ಯ, ಲಂಚ ವಂದಕನಿಗೆ ಸ್ವರ್ಗ ಕೂಡ ಗಮ್ಯ. ಲಂಚ ವಂಚವೆಂದು ಹೀಗಳೆವವ ಹಳೆಯ ಹಂಚಿನೋಡಿಗೂ ಕೀಳಾದಾನೋ ವಂಚನ ಸಂಗಮದೇವಾ!

೫. ಸುಳ್ಳನ್ನಾದರೂ ಸುಳ್ಳೆಂದು ಸಾರದಿರು; ಕಳ್ಳತನ ಮಾಡಿದರೂ ಕಾಯದೆಯನ್ನು ಮೀರದಿರು. ಕಾಯದೆಯೇ ಕೈಲಾಸ. ಕಾಗದ ಪತ್ರವೇ ಕಾಯುವ ಮಿತ್ರ. ಕಾಯದೆ ಕಾಯದೆ ಹೋದರೆ ಫಾಯದೆ ಎಲ್ಲಿಂದ ಬಂತೋ ವಾಯದೆಯ ವಕೀಲ ಮಲ್ಲಿಕಾರ್ಜುನಾ.

೬. ಮುಕ್ತಾತ್ಮರಾರು ಎಂಬುದು ಬಲ್ಲಿರಾ ಭವಿಗಳೇ? ಅಡ್ವಾನ್ಸ್ ಪಡೆದ ಆಳು. ವರ್ಗವಾದ ನೌಕರ. ಮತ ಗಿಟ್ಟಿಸಿದ ಎಮ್ಮೆಲ್ಲೆ, ಮಂತ್ರಿಯಾದ ಮಾನಹೀನ, ಕಳ್ಳಮಾಲನ್ನು ಇಲ್ಲಮಾಡಿದವ, ಕಂಡದ್ದನ್ನೇ ಕಾಣೆನೆಂದು ಕೂಗಬಲ್ಲವ. ಇಂತಪ್ಪ ಶರಣರ ಸಂತಪಂಥ ಹಿಡಿದು ಚಿಂತೆಬಿಟ್ಟು ಚಿರಭೋಗಿಗಳಾಗಿರೋ ಎಂಬ ನಮ್ಮ ನನ್ನಿಯ ಚೆನ್ನಿಗ ಎಮ್ಮೆಲ್ಲಯ್ಯ!

೭. ಜಾತಿ ಜಾತಿ ಎಂದು ಏತಕ್ಕೆ ಕೂಗುವಿರೋ? ಜಾತಿಯ ಮಾತೇ ನಿಂದ್ಯ, ಜಾತೀಯ ಕಾರ್ಯ ವಂದ್ಯ. ಜಾತಿ ಕೆಟ್ಟವನಿಗಿಂತ ಜಾತಿ ಬಿಟ್ಟೆನೆಂಬವನೇ ಖ್ಯಾತಿ ಲಕ್ಷ್ಮಿಯ ಪ್ರೀತಿ ಪುತ್ರ–ಜಾತಿಯ ನೀತಿಯೂ ಸಲ್ಲ, ಜಾತೀಯ ಮಾತೂ ಸಲ್ಲ,. ಖ್ಯಾತಿಯೇ ನೀತಿಹೀನನ ಮನೆಯ ಜ್ಯೋತಿ–ಕಾಣಿರೋ ಎಂಬ ನಮ್ಮ ಕಾಳ ಪಾಳೆಯದ ಕೈತವ ಕೈವಲ್ಯ ಮಹಾದೇವ!

೮. ಇಸಮ್ಮಿಗೊಂದು ಇಜಮ್ಮಿರಬೇಕು. ಇಷ್ಟಬಿಟ್ಟರೂ ಇಜಂ ಬಿಡಬಾರದು; ಇರುವೆ ಎಂಭತ್ತುಕೋಟಿಗೆ ಜಾತಿಯಿದ್ದರೂ ಇಜಂಗಳಿಲ್ಲ. ಪರಮಾತ್ಮನು ಸರ್ವಾಂತರ್ಯಾಮಿಯಾದರೆ ಪರ್ಸ್ಇಜಂ ಸರ್ವಇಜಂ ಅಂತರ್ಯಾಮಿ; ಸರ್ವಕಾರ್ಯಗಳಲ್ಲೂ "ಸರ್ವಇಜಂ ಅಂತರ್ಗತ ಪರ್ಸಿಜಂ ಪ್ರಿಯತಾಂ" ಎಂಬುದೇ ನವಯುಗದ ತತ್ವಮಸಿ ಎಂದು ನಂಬಿರೋ ಎಂಬ ನಮ್ಮ ಬಂಡವಾಳ ಭಾಳಲೋಚನನ ಭಕ್ತ ಬಂಡಿ ಗೂಳಯ್ಯ!

ಸೇವಕ ನಿಯಂತ್ರಣ ಶಾಸ್ತ್ರ

೧೪೬ನೆಯ ಮೀಟರ್ ಜಿಹ್ವಾಲೋಪ ಸಂಧಿಕಾಲ

"ಸೇವಕ ನಿಯಂತ್ರಣ ಶಾಸ್ತ್ರ" ಎಂಬುದು ಉತ್ತರಪುರಿ ವಿಜ್ಞಾನದ ಹೊಸ ಸಂಶೋಧನೆ. ಅದರಲ್ಲಿ ತಜ್ಞ ದ್ರಷ್ಟಾರರಾದ ಎಚ್ಚೆಂ ಮಹಾಶಯರೀಗ ಹೊಸ ತಂತ್ರದ ಬಗ್ಗೆ ನಿಮಗೆಲ್ಲ ಬೆಳಕು ಹಿಡಿಯುವವರಿದ್ದಾರೆ. ಮಾನ್ಯ ಎಚ್ಚೆಂ ಮಹಾಶಯರು:

'ನೀವು ಆಫೀಸಿನಲ್ಲಿ ಕುಳಿತು ಲೋ ಬೋರಾ ಎಂದು ಸಂಗೀತವಾಗಿ ಕರೆದಿರಿ ಎಂದಿಟ್ಟುಕೊಳ್ಳಿ. ನಿಮಗೆ ಬಹಳ ಅರ್ಜಂಟ್ ಕೆಲಸವಾಗಬೇಕಿತ್ತೆನ್ನಿ. ಒಂದು ಎರಡು

ಮೂರು ಬಾರಿ ಕರೆದರೂ ಬೋರ ಅವತರಿಸಲಿಲ್ಲ ಎಂದುಕೊಳ್ಳಿ. ಆಗ ನೀವೇನು ಮಾಡುವಿರಿ? ಅದೂ ಯಾರಾದರೂ ದೊಡ್ಡ ಆಫೀಸರರು ನಿಮ್ಮೆದುರು ಕುಳಿತಿದ್ದಾಗ!

'ಅದಕ್ಕೆ ಒಂದೇ ಒಂದು ಉಪಾಯವಿದೆ, ಚಿನ್ನದಂಥ ಉಪಾಯ, ಚಾಣಕ್ಯನಂಥ ಉಪಾಯ. ಏನೆಂದು ಹೇಳಿ ನೋಡೋಣ. ಉಹುಂ, ನೀವು ಹೇಳಲಾರಿರಿ, ನನಗೆ ಗೊತ್ತು, ಅದಕ್ಕೇ ಹೇಳುತ್ತೇನೆ ಕೇಳಿ:

'Point Four' ಚತುರಂಗ ಸಹಾಯ ಯೋಜನೆಗೆ ನಿಮ್ಮ ದೇಶ ಹೇಗೂ ಮೆಂಬರ್ ಆಗಿದೆ. ಟ್ರೂಮನ್ನರಿಗೆ ಬರೆಯಿರಿ. ನೇರವಾಗಿ ಪ್ರೆಸಿಡೆಂಟ್ ಟ್ರೂಮನ್ ಅಟ್ಲಾಂಟಿಕ್ ಸಾಗರ ಎಂದು. ಬರ್ತಾನೆ ನೋಡಿ ಅಮೇರಿಕದ ಎಂಜಿನೀಯರ–ಎವರಿಥಿಂಗ್ ಎಕ್ಸ್‌ಪರ್ಟ್! ಕರೆಸಿ ಅವನ್ನ. ಕೊಡಿ ಕೆಲ್ಸಾನ–ತಮಾ ಒಂದು ದಶಮುಖದ (Decilateral) ಸ್ಟೂಲನ್ನು ತಯಾರಿಸಿ ಕೊಡು ಎಂದು. ಮಾಡಿ ಇಡ್ತಾನೆ ನೋಡಿ ಅವ ನಿಮ್ಮೆದುರಿಗೆ. ಅದನ್ನು ನಿಮ್ಮ ಆಫೀಸ್ ರೂಮಿಗೂ ಹೊರಗಿನ ಗೇಟಿಗೂ ನಡುವೆ ಫಿಕ್ಸ್ ಮಾಡಿಸಿಬಿಡಿ, ಸಿಮೆಂಟ್ ಕಾಂಕ್ರೀಟ್‌ನಲ್ಲಿ ಹೂಳಿ ಮತ್ತೆ, ನೋಡ್ಕೊಳ್ಳಿ.

'ಆಮೇಲೆ ನೋಡಿ ಹಿಡ್ಕೊಂಡ್ ಬನ್ನಿ ಬೋರನ್ನ. ಲೋ ಬಡ್ಡಿ ಹೈದಾ ಇಲ್ಲಿ ಕುತ್ಕೊ ಬಡ್ಡೀ ಅನ್ನಿರಿ. ಅವ ಕೂತ್ಕೋತಾನೆ. ಹೇಗೆ ಕೂತ್ಕೋಬೇಕು ಗೊತ್ತೋ ಅವನು? ಒಂಟಿಕಾಲ ಮೇಲೆ ಮೀನು ಹಿಡಿಯಲು ಬಕಪಕ್ಷಿ ಕೂತಹಾಗೆ ಕೆರೆ ಏರಿ ಮೇಲೆ! ಶಹಭಾಸ್ ಎನ್ನಿ ಆಗ; ಆಮೇಲೆ ಅವನ ಪಾದಕ್ಕೊಂದು ಬಲವಾದ ಎಮ್ಮೆ ಕಟ್ಟೋ ಸರಪಳಿ ತಂದು ಬಿಗಿಯಿರಿ ಸ್ಟೂಲಿನ ಕಾಲಿಗೆ–ಹಾಕಿರಿ ಅಲಿಘರ್ ಲಾಕನ್ನ. ಎಲ್ಲಿಗೆ ಓಡಿಹೋಗ್ತಾನೆ ಅವ ನೋಡೋಣ!

'ಎಂಥ ಚಮತ್ಕಾರದಲ್ಲಿ ಕೆಲಸವಾಗುತ್ತೆ ಅಂತೀರಿ ಆಗ. ಲೋ ಬೋರಾ ಅಂತ ಕರೆಯಿರಿ. ಅವ ಓ ಅನ್ನೋದರೊಳಗೆ ನಿಮ್ಮ ಕೆಲಸವಾಗಿಬಿಟ್ಟಿರುತ್ತೆ! ಪನಿಷ್‌ಮೆಂಟ್ ಅಂದರೆ ಹೇಗಿರುತ್ತೆ ಗೊತ್ತೇ? ಏಳಬೇಕೆಂದು ಅವನು ಮನಸ್ಸು ಮಾಡೋದ್ರೊಳಗೇ ಬಿದ್ದಿರ್ತಾನೆ ನೋಡಿ ತಲೆಕೆಳಗಾಗಿ. ಹೌದೋ ಸುಳ್ಳೋ ಬೇಕಾದ್ರೆ ಮಾಡಿನೋಡಿ. ಸುಳ್ಳಾದರೆ ಐನ್‌ಸ್ಟಿನನ ಆಣೆ, ಎಡ್ಡಿಂಗ್‌ಟನ್ನನ ಆಣೆ, ಜೀನ್ಸನ ಆಣೆ, ರಾಮನ್ನನ ದೋನಾಣೆ, ಭಟ್ನಾಗರರ ಪಾವಾಣೆ!

Punishment is the justice for the unjust. Purposelesness is the fruitful mother of crime. Proverb is the evil of one man and the wisdom of many.'

ಟೂರಿಂಗ್ ಟಾಕಿ

೧. ಈ ಟೂರ್ನಲ್ಲಿ ನಾನು ಭಾಷಣ ಮಾಡಿದ್ದು ಎಷ್ಟು ಕಡೆ ಗೊತ್ತೇ? ಅಯ್ಯೋ ಅದನ್ನೇನು ಕೇಳ್ತೀರಿ! ಬೆಂಗಳೂರಿಂದ ಪ್ಲೇನ್ ಹತ್ತಿ ಬೊಂಬಾಯ್ನಲ್ಲಿಳಿದು ತಾಜ್‌ಮಹಲ್ನಲ್ಲಿ ತಂಗಿದೆ. ಮುಖ್ಯಮಂತ್ರಿಗಳ ಕಾರು ಬಾಗ್ಲಲ್ಲೇ ಕಾದಿತ್ತು ನೋಡಿ ನನ್ನ ಕರಕೊಂಡು ಹೋಗೋದಕ್ಕೆ ಹೊರಗೆ ಬಂದ ಕೂಡಲೇ. ಚೌಪಾಟಿಯಲ್ಲಿ ಸಭೆ. ನನ್ನದೇ ಉದ್ಘಾಟನೆ. ಚುನಾವಣೆ ವಿಷಯ. ಪರಚಕ್ರ ಕ್ಷಯಕಾಲಚಕ್ರ ಅಂದರೆ ನಾನೇ ಅಲ್ಲವೆ? ಬಿಟ್ಟೆ ನೋಡಿ ಚೆನ್ನಾಗಿ. ಆ ರಾಜಾಜಿಗೆ ಬುದ್ಧಿಯಿಲ್ಲ ಅಂದೆ. ಕಮ್ಯೂನಿಸ್ಟರು ಕದೀಮರು ಅಂದೆ. ಪ್ರಸವಾಪಕ್ಷಕ್ಕೆ ಬುಡವೇ ಇಲ್ಲ ಅಂದೆ. ಜನಸಂಘವೋ? ದನಸಂಘ, ಹಳೇ ಪರಾಕನ್ನು ಉದ್ಧಾರ ಮಾಡಲೆದ್ದ ಸಂಘ ಅಂದೆ. ಶ್ರೀಮನ್ನಾರಾಯಣ ಹೇಳಿದ ಪಾನಪ್ರತಿಬಂಧದ ಮಾತುಗಳನ್ನೆಲ್ಲಾ ನನ್ನವೆಂದೇ ಹೇಳಿಬಿಟ್ಟೆ! ಚಪ್ಪಾಳೆ ಎಷ್ಟು ಬಿತ್ತು ಅಂತೀರಿ? ಹತ್ತು ಲಕ್ಷ ಜನರದ್ದು!

೨. ಯಾರಾದರೂ ನಡುವೆ ಎದ್ದು ಪ್ರಶ್ನೆಗಳ್ನೆ ಕೇಳಿದರೋ ಹೇಗೆ? ಬೊಂಬಾಯ್ ಜನ, ಕೇಳಬೇಕೇ?

೧. ಹೂಂ, ಒಬ್ಬ ಎದ್ದ ನೋಡಿ ಸಲಗ, ಕೇಳೋದಕ್ಕೆ. ಮುಖ್ಯಮಂತ್ರಿಗಳು ಬಾಯ್ ಮುಚ್ಕೊಂಡ್ ಬಿದ್ದಿರಯ್ಯ ಅಂತ ಕೈಸನ್ನೆ ಮಾಡಿದರೆ ಕೇಳಿದ್ನೇ? ಊಹೂಂ. ಕೇಳಲಿ ಬ...ಮಗ ಅಂದ್ಕೊಂಡೆ. ಕೇಳಿದ ಅವನೂ; ಏನಂತ ಗೊತ್ತೇ? ನಿರುದ್ಯೋಗವನ್ನು ನಿಮ್ಮ ಪಕ್ಷ ಹೇಗೆ ಪರಿಹಾರ ಮಾಡುತ್ತೇಂತ. ನನಗೆ ನಗು ಬಂದ್ಹೋಯ್ತು. ಅಲ್ಲಾ ಈ ಮುಂ...ಮಗನಿಗಿಷ್ಟೂ ಹೊಳೆಯ ಬೇಡವೇಂತ. ದೇಶದಲ್ಲಿ ಎಲ್ಲರೂ ಉದ್ಯೋಗಶೀಲರಾದರೆ ನಿರುದ್ಯೋಗದ ಸೊಲ್ಲೇ ಅಡಗಿಹೋಗುವುದು– ಎಂದು ಹೇಳಿ ನಾನವನ ಸೊಲ್ಲಡಗಿಸಿಬಿಟ್ಟೆ! ಬಡಪಾಯಿ ಕೂತುಬಿಟ್ಟ ನೋಡಿ ತನ್ನ ಸೀಟ್ನಲ್ಲಿ. ಹೇಗಿದೆ ನಂತುರುಪು? ಆ ಮೇಲೆ ಮುಖ್ಯಮಂತ್ರಿಗಳೊಟ್ಟಿಗೆ ಡಿನ್ನರ್ ಹೊಡೆದು ಹತ್ತಿದೆ ನೋಡಿ ಪ್ಲೇನನ್ನ– ದಿಲ್ಲಿಗೆ ದೌಡಾಯಿಸೋದಕ್ಕೆ.

೨. ದಿಲ್ಲಿಯಲ್ಲೂ ಮತ್ತೆ ಸಭೆಯಿತ್ತೇನು ಚುನಾವಣೇದು?

೧. ಅಲ್ಲಿದ್ದದ್ದು ಚುನಾವಣೆ ಮೀಟಿಂಗಲ್ಲ. ಅದೊಂದು ಕಾನ್‌ಫಿಡೆನ್ಷಲ್ ಮೀಟಿಂಗು. ಅದರ ತರಹವೇ ಬೇರೆ. ಅದಕ್ಕೆ ಯಾರ್‍ಯಾರು ಬಂದಿದ್ರು ಗೊತ್ತೇ? ಶ್ರೀಮತಿ ಇಂದಿರಾಗಾಂಧಿ, ಅವರ ತಂದೆ, ಧೇಬರ್ ಭಾಯಿ, ನಿಜಲಿಂಗಪ್ಪನವರು. ವಲ್ಲಭ ಪಂತ್–ಒಬ್ಬರೇ, ಇಬ್ಬರೇ? ನಾಳಿನ

ಚುನಾವಣೆಯಲ್ಲಿ ಯಾರ್ಯಾರಿಗೆ ಟಿಕೇಟ್ ಕೊಡಬೇಕು ಅನ್ನೋದನ್ನ ನಿರ್ಧರಿಸಬೇಕಾಗಿತ್ತು ನೋಡಿ. ಕಾಂಗ್ರೆಸ್ ಹೈ ಕಮಾಂಡಿನ ಸ್ವರವೇ ಇಂದು ಅಧಿಕಾರ ಸ್ವರ. ಪ್ರಾಂತೀಯ ಕಾಂಗ್ರೆಸ್ಸುಗಳೆಲ್ಲಾ ಕಾದು ಕೂತಿರಬೇಕು ಅದರ ತೀರ್ಮಾನಗಳಿಗಾಗಿ–ಜೀಯ, ಹಿಸಾದ–ಎಂದು. ಅಂಥ ಹೈಕಮಾಂಡಿನ ಮೀಟಿಂಗಿಗೆ ನ್ಯೂಕ್ಲಿಯಸ್ಸಾಗಿ ನಡೆದಿತ್ತು ನಮ್ಮ ಈ ಮೀಟಿಂಗು. ಹಿಂದುಸ್ತಾನದ ಎಲ್ಲ ಪ್ರಾಂತಗಳ ಕಾಂಗ್ರೆಸ್ ನಾಯಕರ ಹೆಸರುಗಳನ್ನೂ ಪಠನ ಮಾಡಲಾಯ್ತು. ಅವರ ಹಣೆಯಬರಹಗಳನ್ನು ತೂಗಿದೆ ನೋಡಿ ನಾನೂ ತಕ್ಕಡಿಯಲ್ಲಿ ಹಾಕಿ! ಜಾತಿಬಲ–ಧನಬಲಗಳ ಹೆಸರೆತ್ತಿದರೆ ನೆಹರೂ ಅವರಿಗೆ ಕಣ್ಣು ಕೆಂಪಾಗುತ್ತೆ ಅಂತ ನಮಗೆಲ್ಲರಿಗೂ ಗೊತ್ತು. ಆದರೆ ಅವಿಲ್ಲದ ಯಾವನಿಗೆ ಟಿಕೆಟ್ ಕೊಟ್ಟರೂ ವ್ಯರ್ಥ ಎಂಬುದನ್ನು ನಾವೆಲ್ಲಾ ಅರಿತು ಕೊಂಡವರು. ಅದಕ್ಕೇನ್ಮಾಡಿದ್ವಿ ಗೊತ್ತೇ?

೨. ಏನ್ ಸ್ವಾಮೀ, ಬಚಾವ್ ಮಾಡ್ಕೋಳ್ಳೋಕೆ ಸಾಧ್ಯವಿಲ್ಲವಲ್ಲಾ ಇಂಥ ಫಜೀತೀಲಿ ಸಿಕ್‌ಹಾಕ್ಕೊಂಡ್ರೆ!

೧. ತಾಳಿ ಮತ್ತೆ, ಹೇಳ್ತೀನಿ ನಾವು ಹೂಡಿದ ಹಂಚಿಕೇನ. ನಮಗೆ ಲಾಭಕರವಾದ ಇಸಮ್ಮುಗಳ ಹೆಸರುಗಳನ್ನೇ ತೆಗೆದುಕೊಂಡು ಅವರನ್ನು ಜಾತೀಯತಾ ವಿರೋಧಿಗಳೆಂದೂ ಬಡವರೆಂದೂ ಅಂದರೆ ಅವರಲ್ಲಿ ಕೆಲವರು ವಾಗ್ಮಿಗಳು, ಕೆಲವರು ಶೂರರು, ಕೆಲವರು ತ್ಯಾಗಿಗಳು. ಕೆಲವರು ತಜ್ಞರು ಎಂದೂ ಬಹಳ ಗಂಭೀರವಾಗಿ ವರ್ಣನೆ ಮಾಡಿದ್ವು. ಅವರ ಸಾರ್ವಜನಿಕ, ಸಹಕಾರಿ, ಜನಶಿಕ್ಷಕ ಸೇವೆಗಳನ್ನು ಕಡ್ಡಿ ತೆಗೆದು ಗುಡ್ಡ ಮಾಡಿ ಹೇಳಿದ್ವು!

೨. ನಂಬಿದರೇ ನೆಹರೂ ಅವರು?

೧. ನಂಬದೇ ಏನ್ಮಾಡ್ತಾರೆ ನೆಹರು? ನಂಬ್ಸೋ ಅಂಥ ಕೂಬಿ ನಮ್ಮ ಹತ್ರ ಇರೋವಾಗ! ಬರೆದೆ ನೋಡಿ ನಾಳಿನ ಕ್ಯಾಂಡಿಡೇಟುಗಳ ಹಣೆಯಬರಹವನ್ನ. ಇಡಿ ಹಿಂದುಸ್ತಾನದಲ್ಲಿ ಯಾರ್ಯಾರೆಂಥೆಂಥವರು ಅನ್ನೋದು ಹೈಕಮಾಂಡಿಗೇನು ಗೊತ್ತಿರುತ್ತೆ? ನಮ್ಮಂಥ ಪ್ರಾಂತೀಯ ಸಿ.ಐ.ಡಿ.ಗಳು ಹೇಳಿದರೆ ತಾನೇ ಗೊತ್ತಾಗೋದು? ಇದ್ವು ಅಲ್ಲಿ ನಮ್ಮಂಥ ೨೦ ಜನ–ಎಂ.ಎಲ್.ಎ. ನಿರ್ಮಾಪಕ ಪಿಂಡಗಳು! ಅಂತೂ ನ್ಯೂಕ್ಲಿಯರ್ ಫಿಶ್ಶನ್ ನಡೆಸಿ; ರಾತ್ರಿ ಅಶೋಕ್ ಹೋಟೆಲಿನಲ್ಲಿ ಪೊಗಡ್‌ದಸ್ತಾಗಿ ಬೀಫ್, ಬಿಸ್ಕಟ್, ಬೀರ್ ಎಂಬ 'ಬಿ' ಗ್ರೂಪನ್ನೂ ಆಮ್ಲೆಟ್, ಕಟ್ಲೆಟ್, ಚಾಕ್ಲೆಟ್, ಎಂಬ 'ಟಿ' ಗ್ರೂಪನ್ನೂ ಮುಗಿಸಿ; ಏಂಕ್ಲೆಟ್, ಬ್ರೇಸ್ಲೆಟ್, ರಿಂಗ್ಲೆಟ್‌ಗಳ ಸಂಪರ್ಕ ಪಡೆದು, ಬೆಳಿಗ್ಗೆ ಎದ್ದೆ ನೋಡಿ ಕಲ್ಕತ್ತಾಕ್ಕೆ!

೨. ಕಲ್ಕತ್ತಾದಲ್ಲೇನಿತ್ತು ಮತ್ತೆ?

೧. ಏನಿತ್ತು ಅಂತ ಕೇಳ್ತೀರಾ? ಹಯ್ಯೋ ಮಹಾರಾಯರೇ! Ladies are bodies and men are soles in Delhi; and poor men are bodies and rich men are souls in Culcutta! ಏನಂತೀರಿ? "ಬಾರಾಬಂಗಾಳಿ" ಅಂದರೆ ಕನ್ನಡದ 'ಬಾರಾ' ಆಗುತ್ತ್ಯೇ? ಅದು ಬಾಬುಗಳ ರಾಜ್ಯ. ಅವರು ಹೇಳಿದ್ದೇ ಬ್ರಹ್ಮಸೂತ್ರ. ಬಾಂಬುಗಳ ರಾಜ್ಯಗಳಾದ ರಷ್ಯಾ–ಅಮೇರಿಕಗಳಲ್ಲಿದ್ದ ಹಾಗೇನೇ–ಬಂಡ್ವಾಳಿದ್ದವನ ಬಡಾಯಿ ಮಾತ್ರ ನಡೆಯುತ್ತೆ ಅಲ್ಲಿ. ಕಲಾವಿದರು, ಲೇಡಿಗಳು, ನರ್ತಕರು, ಸಾಹಿತಿಗಳು ಹೆಚ್ಚಾಗಿ ತಮ್ಮ ತಮ್ಮ ಕೆಲಸಗಳಲ್ಲೇ ಬಿದ್ದಿರೋದ್ರಿಂದ–ಕರ್ನಾಟಕದಲ್ಲಿರೋ ಹಾಗೆ ಎಲ್ಲರೂ ಪಾಲಿಟಿಕ್ಸಿಗಿಳಿದೇ ಇರೋದ್ರಿಂದ–ಇದ್ದ ಪಾಲಿಟೀಷನ್ಸಿಗೆ ಸ್ವಾರಾಜ್ಯ!

ಅಂದಹಾಗೆ ಮರಾಠ–ತಮಿಳು–ತೆಲುಗು–ಪಂಜಾಬಿ–ಬಂಗಾಳಿ ಭಾರತಗಳ ಬಗೆಯೇ ಬೇರೆ; ಮಿಕ್ಕ ಭಾರತಗಳ ತರಹವೇ ಬೇರೆ. ಅಲ್ಲಿ ಜಿಗುಟಿದೆ, ಇಲ್ಲಿ ತೊಗಟಿದೆ–ಅಷ್ಟೆ. ಬಂಗಾಳದಲ್ಲಿ ಗಾಳವಿದ್ಯೆಯಲ್ಲಿ ಹೆಸರಾದವರು ಬಹಳ!

"ನೀರೇ ಇಲ್ದಿದ್ದಲ್ಲಿ ಮೀನಾಗೀನಾ ಹಿಡ್ಯೋ
ಇದ್ಯಾ ಇದ್ರೇ ಗಿದ್ರೆ ಬಂಗಾಳ್ದಲ್ಲೇ"

ಅಂದ ಒಬ್ಬ ಮರ್ಜಡ್ ಮೈಸೂರು ಕವಿ. ಕಾಳಿಪೂಜೆ ಮಾಡೋ ಜನಗಳಲ್ವೇನ್ರೀ ಆ ಜನ? ಕನ್ನಡ ಕಾಳಿ ಅಲ್ಲ ಮತ್ತೆ; ಬಂಗಾಳಿ ಕಾಳಿ–ಬಿಳಿ ಕಾಳಿ–ಸಾಸಿವೆ ಎಣ್ಣೆ ಹಚ್ಚಿಕೊಳ್ಳೋ ಕಾಳಿ! ಆದರೆ ಅಲ್ಲಿಯ ನಗರಗಳಾದರೋ–

"ಬಾಬೂ ಬನೇಹುಯೇ ಹೈ ಕಾಲರ್ ಲಗಾನೆವಾಲಾ!" ಎಂಬಂತಹ ಅರ್ಥಾತ್ ನನ್ನಂಥವರ ನಾಯಕತ್ವದಲ್ಲೇ ನಡೆಯುತ್ತವೆ. ಅದು ರಾಜಭಾರತ, ರಮಾಭಾರತ–ಇಂಗ್ಲೀಷ್ನಲ್ಲಿ ಹೇಳೋಹಾಗೆ–

One pimple of a lady's face
May teach you more of man
Of moral evil and of good
Than all the sages can!

ಬೆಂಗ್ಳೂರ್ ಡ್ರಿಂಕ್ಸೆಲ್ಲಾ ಬಂಗಾಳಾ ಡ್ರಿಂಕ್ಸ್ ಹಾಗೇನೇ. ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಸಮಿತಿ ಬಂಗಾಳದ್ದಿದ್ದಾಗೇನೇ ಆದರೆ ಬಂಗಾಳದಲ್ಲಿರೋ ಮೀನು ತಿಂದ ಬುದ್ಧಿ ಬೆಂಗಳೂರಿಗಿಲ್ಲ. ಆದ್ದರಿಂದಲೇ ಎಷ್ಟೋ ವೇಳೆ ಹೈ ಕಮಾಂಡಿನಿಂದ

ಒದೆತ ತಿನ್ನಬೇಕಾಗುತ್ತೆ ನಮ್ಮ ಗುಂಪಿನ ರಾಜಕೀಯ. ಆದರೆ ಅದನ್ನೆಲ್ಲಾ ಕಟ್ಕೊಂಡ್ ನನಗೇನಾಗ್ಬೇಕ್ ಹೇಳಿ? ನನ್ನ ವಿಹಾರ, ನನ್ನ ಆಹಾರ ನನ್ನ ಪ್ರಹಾರ ಒಂದು ಸ್ಫೂರ್ತಿ ಬಂದ್ಬಿಟ್ಟಿತು–ಹೇಳ್ಬಿಡ್ಲಾ?

ಕಲ್ಕತ್ತೆಯಲ್ಲೊಂದು ಕಲ್‌ಕತ್ತೆಯಿತ್ತು
ಬೀಸಿರಾಯ್ ಎಂದದಕೆ ಹೆಸರು ಮತ್ತಿತ್ತು;
ಎತ್ತುಗಳ ಕಟ್ಟಿಕೊಂಡರಸುಗೈದಿತ್ತು
ಬಂಗಾಳಿ ಮಿದುಳಿಗದು ಚಿಪ್ಪು ಎನಿಸಿತ್ತು.
ಪರರ ದುಃಖವು ಸುಖಕೆ ಸಮವೆನ್ನುತ್ತಿತ್ತು;
ಬರಡೆಮ್ಮ ಹಾಲ್ ಮರಿಗಳಿಗೆ ಕುಡಿಸುತ್ತಿತ್ತು!
ಅಸ್ಸಾಂ ಗಲಾಟೆ ಹಿನ್ನೆಲೆಗೆ ಕಿರಿಚಿತ್ತು.
ದುರ್ಮರಾಟಿಗ ಕಿವಿಯನುದ್ದ ಬೆಳೆಸಿತ್ತು;
ಕಾಮರಾಜೀಯರೊಡನೊಳಸಂಚಿಸಿತ್ತು–
ರಾಜಾಜಿಯಿಂಗ್ಲೀಷನಾಕರ್ಷಿಸಿತ್ತು!
ಬಾಬುಕತ್ತೆಯ ಬಲ್ಮೆಯನು ಹೆಚ್ಚಿಸಿತ್ತು,
ಬಡಕತ್ತೆಗಳ ಗೋಳ ಮೂಲೆಗೊತ್ತಿತ್ತು;
ದಿಲ್ಲೀಶ್ವರರ ಕೃಪೆಯನುಂಡು ಬದುಕಿತ್ತು,
ಅದು ಮಾಡಿರುವ ಗತ್ತು ನನಗಷ್ಟೆ ಗೊತ್ತು
ಹರಿಕೃಷ್ಣಮೆಹತಾಬನದಕಿಂತ ಹೆಡ್ಡ
ಗಣತಂತ್ರದೊಡನಾಡಿ ಸುಟ್ಟಿತ್ತು ಗಡ್ಡ!
ಪಂಜಾಬಿ ಕೈರಾನನೊಬ್ಬ ಸಮನೆಂದು
ಹೇಳಬಹುದದಕೆ ತಾಂತ್ರಿಕತೆಯಲಿ ಮಿಂದು!

ಹೇಗಿದೆ ಸ್ಫೂರ್ತಿ ನನ್ನದು? ಸ್ಫೂರ್ತಿ ಬರೋಹಾಗೇ ಇದೇರೀ (Situation) ಸಿಚುಯೇಶನ್ನು! ನಗತೀರೇಕೆ? ಸರ್ವಜ್ಞ ಹೇಳಲಿಲ್ಲವೆ?–

"ಹೋದಾಗ ಬಂದಾಗ ಬಾಗಿಲನು ತೆರೆದಿಣುಕು
ಬೋಧೆಯಿಲ್ಲದನವೋಲ್ ಹಣಕು–
ತಿಣುಕು ಎದುರಾಡರವರಿವರು ಸರ್ವಜ್ಞ!"
ಬೆಂಗಳೂರಿನಲ್ಲಿ ಬೆಳದೋನಿಗೆ "ಬಂಗಾಳಿ ಬರೋದಿಲ್ವೇ?
ತಂಗಳನ್ನಾ ತಿಂಬೋನಿಗೆ ತರಕಾರಿ ಹಂಗಿದೆಯೆ?
ಅಂಗಳದಲ್ಲಾಡೋನಿಗೆ ಮಂಗಳಾರತಿ ಬೆಳಕು ಬೇಕೆ?
ಇಂಗಲನ್ನಾ ಬೆಯ್ಸೋಳಿಗೆ ಬಂಗ್ಲೆಯೇತಕ್ ಹೇಳೀ?
ಪಾಲಿಟಿಕ್ಸ್‌ನಲ್ಲಿ ಬಿದ್ದೋನಿಗೆ ಪಾಪ–ಪುಣ್ಯ ಇರುತ್ಯೇ?
ಚರ್ಮಪ್ರಿಯರಿಗೆಲ್ಲಾದರೂ ಕರ್ಮಪ್ರಿಯತೆ ಬಂದೀತೇ?
ಅಧಿಕಾರದ ಅಫೀಮಿರೋವಾಗ ಅವಮಾನಾನ ಕೇರ್ಮಾಡ್ತಾರ್ಯೆ?
ಅಪ್ಪಾ ಅಮ್ಮಾ ಸತ್ಮೇಲೆ ಮನೆದೇವರಿಗೆ ಮಸಾಣ ಗತಿ ಅಲ್ವೇ?

Dress is man and man is dress.
The universe is the dress of God.
Appearence is reality and reality is an appearance.
Selfishness is individuality and individuality is the essence of liberty.
Advocation of equality Perpetuates inequality where Democracy is a maya and Oligarachy is Brahman

ಸ್ವಾಮಿ, ಕಲ್ಕತ್ತೆಯ ಮಝಾನೇ ಬೇರೆ. ಅಲ್ಲಿ ಲೇಡೀಸ್ ಕಾನ್‌ಫರೆನ್ಸ್ ಲೇಬರ್‌ರ್‍ಯಾಲಿ, ಸ್ಟೂಡೆಂಟ್ಸ್ ಕನ್‌ವೆನ್‌ಷನ್ ಎಂಬ ಮೂರಕ್ಕೂ ನಾನೇ ಮುಖ್ಯ ಅತಿಥಿಯಾಗಬೇಕಾಗಿಬಂತು. ಮೂರುವರ್ಗಗಳಿಗೆ ಮೂರು ಅಡ್ವೈಸುಗಳು ಲೇಡೀಸ್ ಯಾವಾಗ್ಲೂ ಮುಂದಕ್ಕಡ್ವಾನ್ಸ್ ಆಗ್ತಿರ್ಬೇಕು. ಲೇಬರ್‍ರ್‍ ಇಂಡಸ್ಟ್ರಿಯಲ್ ಬ್ಯಾಕ್‌ವರ್ಡ್‌ನೆಸ್‌ನಿಂದ ದೇಶವನ್ನು ಡೆಲಿವರ್ ಮಾಡ್ತಾನೇ ಇರ್‌ಬೇಕು, ಸ್ಟೂಡೆಂಟ್ಸ್ ಯಾವಾಗ್ಲೂ ಏಕ್ಟಿವ್ ಸೋಷಲ್ ಸರ್ವೀಸ್ ಮಾಡ್ತಿರ್‌ಬೇಕು ಸಾಲದೇ, ಇನ್ನೇನು ಬೇಕು ಬುರುಡೆ? ಕಲ್ಕತ್ತಾದಲ್ಲಿ ನೋಡ್‌ಬೇಕಾದದ್ದನ್ನೆಲ್ಲಾ ನೋಡಿ ಮದ್ರಾಸಿಗೆ ಬಂದೆ. ಕಾಮರಾಜ್ ಅಂದರೆ ಕಾಮಧೇನು ಅವನ್ಹತ್ರ ಕಿವಿಕಚ್ಚಿ, ವಾಸನ್ನನ ಆತಿಥ್ಯವನ್ನು ದಾಸಪ್ರಕಾಶದಲ್ಲಿ ಸ್ವೀಕರಿಸಿ, ಅಲ್ಲಿ ಐ.ಎ.ಎಸ್ ಅಡ್ವೈಸರಾಗಿರೋ ಬ್ರದರ್ ಇನ್ಲಾನ್ ಮಾತ್ನಾಡಿಸಿ. ಉಳಕೋ ಅಂದರೆ ಪುರುಸೊತ್ತಿಲ್ಲಾ ಅಂತ, ಹೇಳಿ ನಡೆದೆ ನೋಡಿ ಹುಬ್ಬಳ್ಳಿಗೆ. ಹುಬ್ಬಳ್ಳಿಯಲ್ಲೋ ಮಟನ್ ಸ್ಪೆಶಲ್ಲು, ಆರ್ಟ್ಸ್ ಸರ್ಕಲ್ಲ್‌ಪ್ರೊಗ್ರಾಮು, ಪತ್ರಿಕಾ ಸಂಸ್ಥೆಗಳ ಆತಿಥ್ಯ. ಕ್ಯಾಂಡಿಡೇಟುಗಳಿಗೆ ಆಶ್ವಾಸನ–ಒಂದೇ ಎರಡೇ ಬಿಸಿನೆಸ್ಸು?

೨. ಬಿಸಿನೆಸ್ಸೂ ಆಯ್ತೋ ಅಲ್ಲಿ ತಮಗೆ?

೧. ಹೌದು; ಹುಬ್ಬಳ್ಳಿ ಅಂದ್ರೇ ಗೊತ್ತಿಲ್ವೇ ಒಳ್ಳೇ ಬಿಸಿನೆಸ್ ಸೆಂಟ್ರು ಅಲ್ಲಿರೋ ಬಿಸಿನೆಸ್ ಕಿಂಗ್ಸನ್ನ ಬುಟ್ಟೀಗ್ ಹಾಕ್ಕೊಳ್ದೇ ಇದ್ರೆ ಕೆಲಸವಾಗುತ್ತೆಯೆ ಹೇಳಿ? Congress means business and business means Congress I am a Congress Business!

೨. ಸ್ವತಂತ್ರಪಕ್ಷ ಇದೆಯಲ್ಲಾ ಸ್ವಾಮಿಬಿಸಿನೆಸ್ನೋರನ್ನ ಎತ್ತಿ ಹಾಕೂದಕ್ಕೆ?

೧. ಅಯ್ಯಾ ರಾಜಾಜಿ ಪಕ್ಷಕ್ಕೆ ಸೇರೋರು ಬರೇ ಹಳೇ ಜಮೀಂದಾರ್‍ರು ಬಿಸಿನೆಸ್ನೋರವರ್ಗಿಂತ ಷ್ರೂಡ್ ಇದ್ದಾರೆ ಕಣ್ರೀ! ನಾನು ನೂರು ಕಂಟ್ರಾಕ್ಟುಗಳಿ ಆಗಲೇ ಸ್ಯಾಂಕ್ಷನ್ ಮಾಡ್ಸೋ ವ್ಯವಸ್ಥೆಯ ಜವಾಬ್ದಾರಿ ಹೊತ್ತು ಬಂದಿದ್ದೀನಿ ಹುಬ್ಬಳ್ಳಿ ಸೈಡಿನ ಸಾಹುಕಾರರಿಗಾಗಿ–ಏನಂತೀರಿ? ಅವೆಲ್ಲ ಗ್ಯಾರಂಟೀ ಮಾಲುಗಳು ಸ್ವಾಮೀ, ಗ್ಯಾರಂಟೀ ಮಾಲುಗಳು! ನಾ ಫೋನ್ ಮಾಡ್ದೇ ಅಂದ್ರೆ ಎಲ್ಲಾ ರೆಡಿ ಮಾಡಿಟ್ಟಿರೋ ಜನ ಅಲ್ಲೀದು. ಇಲ್ನೋಡಿ ಈ

ಗೋಲ್ಡ್ ರಿಸ್ಟ್ವಾಚ್ ಯಾರು ಕೊಟ್ಟಿದ್ದು ಅಂತ ತಿಳ್ಕೊಂಡಿದ್ದೀರಾ? ಬಾಂಬೆ ಬಿಸಿನೆಸ್ಸಿನ ಜನಾ ಅವರು ಅವರಿಗೆಲ್ಲಾ ಹೇಳಿಕೊಡ್ಬೇಕೆ? ಇನ್ನು ಪ್ರೆಸ್ಸಂತೂ ಎಲ್ಲಾ ನಮ್ದೇ–ನಮ್ದಲ್ಲದವನ್ನ ಸಂದರ್ಭಕ್ಕೆ ಬೇಕಾದಾಗ ನಮ್ಮವನ್ನಾಗಿ ಮಾಡಿಕೊಳ್ಳೋದು ಹೇಗೆಂತ ನಮಗ್ಗೊತ್ತಿಲ್ವೇ?

೨. ಇನ್ನೇನ್ ಬಂತಲ್ಲಾ ಬೆಂಗಳೂರು, ನಮ್ಮ ಕಲ್ಯಾಣನಗರ.

೧. ನೀವ್ ಹುಬ್ಬಳ್ಳಿಗೇತಕ್ಕೋಸ್ಕರ ಹೋಗಿದ್ರಿ?

೨. ನಾನೇ ನಮ್ಮ ಹುಡುಗಿಗೆ ಒಂದು ವರಾ ನೋಡ್‌ಬೇಕಂತ ಹೋಗಿದ್ದೆ.

೧. ಆಯ್ತೇನು ಹೋದ ಕೆಲ್ಸ?

೨. ಆಗ್ದೇ ವಾಪಸ್ ಬರ್ತೇನೆಯೇ ಸ್ವಾಮಿ? ನಾನು ಅವರ ಹುಡುಗನಿಗೆ ಅಸಿಸ್ಟೆಂಟ್ ಕಮೀಶನ್ನರ ಗ್ರೇಡ್ಗೆ ಏರಿಸೋ ವ್ಯವಸ್ಥೆ ಮಾಡ್ತೀನಿ ಅಂತ ಹೇಳಿದ್ಮೇಲೆ ಒಪ್ದೇ ಯಾರು ಉಳಿತಾರೇ? ನಮ್ಮ ಚಿಕ್ಕಮಾವ ಆಗ್ಬೇಕು ರೆವಿನ್ಯೂ ಮಿನಿಷ್ಟ್ರು ಅನ್ನೋದು ನಿಮಗ್ಗೊತ್ತಿಲ್ವೇ? I am a Congress Influence!

೧. ಇನ್ನೂ ಒಂದ್ಸಲ ಹಾಗನ್ನಿ, ಕಾಂಗ್ರೆಸ್ ಪವರ್ನಲ್ಲಿರೋವಾಗ ತಾನೇ ನಿಮಗಿದೆಲ್ಲಾ ಸಾಧ್ಯ? Congress is the greatest God that confersboons on the clever classes!

ಇದ್ಯಾವನೋ ಈತ–ರೈಲ್ನಲ್ಲೇ ಹಾಡೋಕ್ಕಾರಂಭಿಸಿದ್ನಲ್ಲಾ.

೨. ಹಾಡ್ಲಿ ಸ್ವಾಮೀ, ಸುಮ್ನಿರಿ, ಕೇಳೋಣ–ತಮಾಷೆಯಾಗಿದಾನೆ!

"ಮೈಸೂರ್ ಹುಲಿಯಾ ಹಾವಳಿ ಕೇಳಿ ಮಾರ್ನಿಂಗ್ ಅಕ್ಬರ ಫೌಜ್ ಬಂತು;
ಮೈಸೂರ್ ಇಲಿಗಳ ಹಾವಳಿಯಿಂದ ಬಡವರ ಬಾಳಿಗೆ ಬರ ಬಂತು!
ಅಜಪ್ ತಮಾಷ್ ಈಸ್ಟಿಂಡ್ಯಾ ಕಂಪನಿ ಇಂಗ್ಲೀಷರ ನೆಲೆಯಾಗಿತ್ತು:
ಅದೇ ಮಾದರಿಯ ಕಾಂಗ್ರೆಸ್ ಕಂಪನಿ ಲಂಚದ ಬಿಸಿನೆಸ್ ಬೆಳೆಸಿತ್ತು!
ಹೆಂಡಾ ಹೆಂಡ್ತಿ ಕನ್ನಡ್ ಪದ್ಯೋಳ್ ಅಂದ್ರೇ ರತ್ನಂಗ್ ಪ್ರಾಣ್ವಂತೆ.
ಮಂಡೇ ತುಂಬಾ ಕುಡ್ದ್‌ಬುಟ್ಟಾ ಎಂದ್ರೆ ರಾಜ್ಯದ ದರ್ಬಾರ್ ನಡಸ್‌ದಂತೆ!
ಉಡ್ಪೀ ಪೇಪರ್ ಹೇಳೋ ಬಾತ್ಮೀ ಉಂಡವ್ನಗ್ ನೀರಡ್ಕಿ ತರ್‍ತೈತೆ
ಕಾರ್ವಾರ್ ಕಡೆಯ ಸುದ್ದೀ ಕೇಳಿದರ್ ಬಿಜಾಪುರಕ್ಕೇ ಒಯ್ತೈತೆ!"

ಅಪ್ಡೇಟ್ ಪುರಾಣ

೧. ಮೈಸೂರಿಗೆ ಐಸೋರಿ (Eysore) ನಂತೆ ಮೈಸೋರುಗಳೀಗ ಹತ್ತು. ಅದರ ರಾಜಕೀಯ ಗಂಡಭೇರುಂಡಕ್ಕೆ ತಲೆಯೆರಡಿದ್ದರೂ ರೆಕ್ಕೆಗಳೂ ಎರಡೇ ಇದ್ದವು. ಈಗಲಾದರೋ ಹತ್ತು ಪಕ್ಷಗಳು. ಕಾಂಗ್ರೆಸ್–ಆದಿ ಮಹಾರಾಷ್ಟ್ರ ಏಕೀಕರಣ ಸಮಿತಿ–ಅಂತವಾದ ದಶಪಕ್ಷಗಳ ದಶಾವತಾರದ ಮೇಳವೀಗ ರಾಜಧಾನಿ, ಜಿಲ್ಲಾಧಾನಿ, ತಾಲೂಕುಧಾನಿ, ಗ್ರಾಮಧಾನಿಗಳಲ್ಲೆಲ್ಲಾ ಆಟವಾಡಲಾರಂಭಿಸಿದೆ; ಸಂದಿಗೊಂದಿಗಳಲ್ಲೆಲ್ಲಾ ಸಮಾರಾಧನೆಗಾರಂಭಿಸಿದೆ; ತನ್ನ ದಶಕುಮಾರರಿಪುಚರಿತ್ರವನ್ನು ಹೆಮ್ಮೆಯಿಂದ ಹೇಳಿಕೊಳ್ಳಲಾರಂಭಿಸಿದೆ. ಅದರ ವೈಶಿಷ್ಟ್ಯವನ್ನು ಕುಮತಾಪುರದ ಹೆಗ್ಗಡೆ ಊರಿನ ತೇರಿನಲ್ಲಿ ಚೆನ್ನಾಗಿ ಕಾಣಬಹುದಾಗಿತ್ತು. ದಶಪಾತ್ರಗಳೂ ಏಕಕಾಲದಲ್ಲಿ ದಶರಂಗಗಳಲ್ಲಿ ದಶಕಂಠಗಳಿಂದ ತಂತಮ್ಮ ಬಿರುದು–ಬಾವಲಿ, ಸಾಧನೆ–ಭೇದನೆ, ಧಾರಣೆ–ಸುಧಾರಣೆ, ಖಂಡನೆ–ಮಂಡನೆ, ಬಂಡವಾಳ–ಬಡಾಯಿ, ಕೀರ್ತಿ–ಸ್ಫೂರ್ತಿ, ಮಂತ್ರ–ತಂತ್ರ, ಆಧಾರ–ಉದ್ಧಾರಗಳನ್ನು ಉಲ್ಲೇಖಿಸುತ್ತಿದ್ದುದನ್ನು ನೋಡಿದರೆ, ಶ್ರೀಮದ್ರಾಮರಮಾ ಪಹಾರ ಪರಾಕ್ರಮಕಂಠೀರವನನ್ನು ಲಂಕಾಸ್ಥಾನ ವಿದೂಷಕನು ಸ್ವಾಗತಿಸಿದ್ದು ಗೊತ್ತೇ? ಹಾಗೆನ್ನಿಸಿತು!

೨. ಗೊತ್ತಿಲ್ಲಾ ಸ್ವಾಮೀ, ಅಪ್ಪಣೆ ಕೊಡಿಸಿದರೆ ಅವಧರಿಸುತ್ತೇನೆ.

೧. **ಭಳಿಭಳಿರೆ ದಶಕಂಠ, ಭಾಗ್ಯಹೀನರ ನೆಂಟ.**
ಗಳಿಗಳಿಗೆಗೊಂದೊಂದು ರೂಪ ತಾಳುವ ಬಂಟ;
ತಿಳಿದೂ ತಿಳಿದು ಹಾಕಿಕೊಂಡೆ ಕೊರಲ್ಗುರುಳ್ಗಂಟ–
ಎಡಹದಿರು ಎದುರಾಯ್ತು ನಿನ್ನ ಗದ್ದೆಯ ಕಂಟ!

೨. ಯಾರು ಸ್ವಾಮೀ? ನಾನು ರಾವಣನೇ? ಏನ್ರೀ ಹೀಗಂತೀರಾ?

೧ ಕ್ಷಮಿಸಿ; ನಾನು ಹೇಳಿದ್ದು ವಿದೂಷಕನು ರಾವಣನನ್ನು ಸ್ವಾಗತಿಸಿದ್ದನ್ನು ತಮ್ಮನ್ನ ಅಂತ ತಿಳಕೊಂಡರಾ? ಅಯ್ಯೋ, ಪಾಪ! ಎಲ್ಲಿ ಬಂತು ಸ್ವಾಮಿ?

೨. ತಮಗವರನ್ನು ಹಾಗೇ ಸ್ವಾಗತಿಸಬೇಕೆನ್ನಿಸಿತೇ?

೧. ಅದೇ; ಹೇಳಿದ್ದೇ ಹಾಗೆ ನಾನು. ಏಕೆಂದರೆ ಅದೇ ೪ ದಿನಗಳ ಹಿಂದೆ.

"ಕಾಂಗ್ರೆಸ್ ಕಾಂಗ್ರೆಸ್ ಕೂಡಿದ್ರಣ್ಣ
ಕಾಂಗ್ರೆಸ್ ಕೋಲಾಡಿದ್ರಣ್ಣ
ಕಾಂಗ್ರೆಸ್ಸೇಕೆ ಕೋಲು
ಹೊಡ್ದಾಡ್ಕೊಳ್ವಲ್ ಮೇಲು!"

ಅನ್ನೋ ಪರಿಸ್ಥಿತಿ ಉಂಟಾಗಿತ್ತು. ನಮ್ಮ ಭಾವಿ ಮುಖ್ಯಮಂತ್ರಿಗಳು ಬಂದಾಗ. ಹಸ್ತಾಹಸ್ತಿ, ಜುಬ್ಬಾಜುಬ್ಬಿ, ಮುಷ್ಟಾಮುಷ್ಟಿ ಜಿಹ್ವಾಜಿಹ್ವಿಗಳು ನಡೆದುಹೋದವಂತೆ! ನಾಮಪತ್ರ ಪ್ರಕರಣದ ದುರಂತ ನಾಟಕಕ್ಕೆ ನಾಂದಿಯನ್ನು ಆಡಿ ತೋರಿಸಿದ ಬಳಿಕ ಪ್ರಜಾರಾಜ್ಯ ಜಾತ್ರಾಪ್ರಚಾರಕ್ಕೆ ಸ್ಪರ್ಧೆಯಿಂದ ಹೊರಟ. ಆ ಪೈಕಿಯ, ಇತರ ಪೈಕಿಯ ಮತ್ತು ಹಳೇ ಪೈಕಿಯ ವೀರಾಧಿವೀರರ ರಣ ಗರ್ಜನೆ ಸಮುದ್ರವನ್ನು ಗಡಗಡನೆ ನಡುಗಿಸಿತು!

೨. ಹಳೇ ಪೈಕಿಯವರೆಂದರೆ ಯಾರು ಸ್ವಾಮೀ?

೧. ಹಿಂದುಳಿದವರು, ಹಿಂದುಗಳ ಜಾತಿಯವರು, ಅಸ್ಪರ್ಶಕರು, ಜನರು, ಆಡಳಿತದ ಸುಧಾರಣೆಗೆ ಪ್ರಥಮ ಪ್ರಾಶಸ್ತ್ಯ ಕೊಡುತ್ತೇವೆ ಎನ್ನುವವರು!

೨. ಅಂಥವರು (Bad Government is better than foreign (Hindu) Government ಅಂತ ತಿಳಕೊಂಡು ಸ್ವದೇಶಿಗೆ ಮತ ಕೊಡಬೇಕು. ತಾಯ್ನಾಡಿಗಿರಬೇಕಾದ ತಾಯ್ತನ ಇರಬೇಡವೇ ಮತದಾರರಿಗೆ?

೧. ಹೌದು, ಹೌದು; ದೇವರ ಆಸ್ತಿಕ್ಯದಿಂದ ಹೊಟ್ಟೆ ತುಂಬಿಕೊಂಡು ಬಂದವರಿಗೆ ದೇಶದ ಆಸ್ತಿಕ್ಯದ ಪ್ರಯೋಜನ ಗೊತ್ತಾಗುತ್ತೆಯೇ? ಅಷ್ಟಗ್ರಹಗಳಿಗೆ ಹೆದರಿ ಅಗ್ನಿಯ ಹೊಟ್ಟೆ ಹೊರೆದಾರಲ್ಲದೆ, ದೇಶದ ಬಡವರ ಹೊಟ್ಟೆಯ ಅಗ್ನಿಯನ್ನು ಶಮನಮಾಡಲು ಹೊರಟಾರೇ? ಎಲ್ಲಿ ಬಂತು ಸ್ವಾಮೀ ಈ ದೇವಜನರೆಂದಾದರೂ ದೇಶಜನರಿಗಾಗಿ ಆಡಳಿತ ಸುಧಾರಿಸುತ್ತಾರೆ ಎಂದು ತಿಳಕೊಂಡಿರಾ! ಭಾರತದೇವಿಯ ಗುಡಿ (officer)ಗಳ ಮೊಕ್ತೇಸರಿಕೆ ಹಿಡಿದು ಧನಸ್ವಾಹಾಯಜ್ಞಕ್ಕಾರಂಭಿಸದೆ ಉಳಿದಾರೇನಿವರು?

೨. ಹಾಗಾದರೆ ನೀವನ್ನೋದಾದರೂ ಏನು? ಸ್ವಲ್ಪ ಖುಲಾಸುಮಾಡಿ ಹೇಳಿ.

೧. ನಾನನ್ನೋದು ಈ ಇಬ್ಬಣಗಳಿಗೂ ಬೇಡ ಆದರೋಪಚಾರ. ಈಯೆರಡೂ ಪಾರ್ಟಿಗಳಿಗಿಂತ ಸ್ವತಂತ್ರ ಪಾರ್ಟಿಯೇ ಸದ್ಯ ಸರ್ವೋತ್ತಮ ಅಂತ. ಯಾಕಂದರೆ ಅದು 'ದೇಶ, ಕಾಲ, ಕಾರ್ಯ' ನೋಡಿ ಆಡಳಿತ ನಡೆಸುವೆನೆನ್ನುತ್ತದೆ. ಮದ್ರಾಸ್ ಬಿಳಿ ಟೋಪಿ ಏನಂದಿದೆ ಗೊತ್ತೇ? 'The benefit of the two plans has generally not reached the common man!'

೨. ಸ್ವಾಮೀ, ಬೇಜಾರು ಮಾಡಬಾರದು; ಸಾಹ್ಕಾರರ ಪಕ್ಷಕ್ಕೆ ನಾನೆಂದೂ ಮತ ಕೊಡಲಾರೆ. ಅವರು ಹಿಂದಿನ ಸಾಹ್ಕಾರರಲ್ಲ. ಇಂದಿನ ಐಷಾರಾಮ ಪರಂಪರೆಯವರು!

೧. ಹಾಗಾದರೆ ಮಹಾರಾಷ್ಟ್ರ ಸಮಿತಿ ಆಗಬಹುದೋ?

೨. ಬಹಳ ಚೆನ್ನಾಗಿ ಹೇಳ್ತೀರಿ. ಆ ಒರಟು ಜನಗಳ ಕೈಯಲ್ಲಿ ಸಿಕ್ಕಿದರೆ ಆಗ್ಹೋಯ್ತು. ಕೊಳ್ಳಿದೆವ್ವಗಳಿಗೂ ಅವರಿಗೂ ವ್ಯತ್ಯಾಸವಿದೆಯೇ? ವಾನರರಿದ್ದದ್ದೇ ಆ ಕಿಷ್ಕಿಂಧೆಯಲ್ಲಿ.

೧. ಹಾಗಾದರೆ ಪಿ.ಎಸ್.ಪಿ.ಗೆ ಹಾರ ಹಾಕ್ತೀರಾ?

೨. ಹಾರ ಹಾಕೋಕೆ ಇದೇನು ಸ್ವಯಂವರವೇನು? ಪಿ.ಎಸ್.ಪಿ. ಅಂದರೆ 'ಪುಸ್ಪ್' ಅಂತ; ನೀರು ಸೌದೆ ಒಲೆಗೆ ಹಾಕಿ 'ಪುಸ್ ಪುಸ್' ಅಂತ ಊದೋ ಅಡುವಳಿತಿ ದರ್ಬಾರ್ ಅದರದು,

೧. ಹಾಗಾದರೆ ಕಮ್ಯುನಿಷ್ಟ್ ಪಕ್ಷಕ್ಕೇನು ನಿಮ್ಮ ಅಮೂಲ್ಯ (Valueless) ಮತ?

೨. ಆ ಕಾಟಕ ಜನರ ಕೈಯಲ್ಲಿ ತಲೆ ಯಾರು ಚಚ್ಚಿಕೊಳ್ತಾರೆ ಹೇಳಿ. ಅವರದ್ದೋ ತಳವಿಲ್ಲದ ಪೀಪಾಯಿ: ಅದರಲ್ಲವರು ನೀರು ತುಂಬಿಸ್ತಾರಂತೆ. ನ್ಯಾಯ ನೀತಿಗಳ Standard ಗಳನ್ನು ಭೂಗತಗೊಳಿಸಿ ಭ್ರಷ್ಟಾಚಾರ ನಿಲ್ಲಿಸೋ ನಷ್ಟಾಚಾರಿಗಳವರು. ಬಿಳಿಯ ಟೋಪಿಗಳಿಗಿಂತ ಬಹಳ ಬುದ್ಧಿವಂತರೆಂದು ಕೊಂಡ್ರಾ ಅವರನ್ನ? ಚೆನ್ನಾಯ್ತು!

೧. ಇನ್ನುಳಿದವು ಸಮಾಜವಾದಿ. ರಿಪಬ್ಲಿಕ್, ದ್ರವಿಡಕರಗ, ಲೋಕ ಸೇವಾ ಸಂಘ-ಅಷ್ಟೇತಾನೇ? ಯಾರ ಕರಗ ಹೊರತೀರಿ ಹೇಳಿ!

೨. Information is thelanguage of a beautiful eye upon a sensitive heart ಅಂತಾರಲ್ಲಾ ಹಾಗಾಯ್ತು ಜನಗಳ ಮತದಾನ ವಿಶ್ಲೇಷಣೆ; ಕೊಂಕುನೋಟಕ್ಕೆ ನೇರವಾದೊಡೆ ಮಣಿಯುತ್ತದೆಯಂತೆ. ಮಟಮಟ ಮಧ್ಯಾಹ್ನ ಅಲ್ಲವೀಗ; ಮತ ಮತ ಮಧ್ಯಾಹ್ನ! ವ್ಯಕ್ತಿಗಿಂತ ಸಂಸ್ಥೆ ದೊಡ್ಡದು ಅಂತ ಬೋಧಿಸುವ ವ್ಯಕ್ತಿತ್ವಕ್ಕೆ ಬೆಲೆ ಇದೆಯೇ? ಸಂಸ್ಥೆ ವ್ಯಕ್ತಿಯಲ್ಲವಾದ್ದರಿಂದ ಅದಕ್ಕೆ ಮೊದಲೇ ವ್ಯಕ್ತಿತ್ವವಿಲ್ಲ; ಅದಕ್ಕಿದೆ ಅಂತ ನಂಬಿರೋ ಬೋಧಕರ, ನಂಬಿಕೆಗೆ ಅವರಿಗಿಲ್ಲವಾದದ್ದೇ ಆಧಾರ. ಈ ಅವ್ಯಕ್ತರ, ಪ್ರಾಕೃತರ, ಪಾರ್ಟಿಪ್ರಿಯರ (Tea or political or wiskey party!) ಪಾಂಚಜನ್ಯ ಕೇಳಿ ಅಮೂಲ್ಯ ಮತವನ್ನು ನಿರ್ಮೂಲಗೊಳಿಸಬೇಕೇ? ಎಂದಿಗೂ ಸಾಧ್ಯವಿಲ್ಲ ಸ್ವಾಮಿ.

೧. ಅಂದರೆ ಅತಂತ್ರರಾದ ಸ್ವತಂತ್ರರಿಗೋ ತಮ್ಮ ಮತ? ನಿಃಸ್ವರತ್ವವನ್ನು ಮರೆಮಾಜಲು ಅಪಸ್ವರವನ್ನು ಅಪರೂಪವಾಗಿ ಎತ್ತುವ ಮೌನಗೌರಿಯಪ್ಪಗಳಿಗೊ?

೨. ಅಲ್ಲ; ನನ್ನದೇ ಒಂದು ಪಕ್ಷವಿದೆ, ನಾನೇ ಒಬ್ಬ ಕ್ಯಾಂಡಿಡೇಟು. ನನ್ನದು ನಿಷ್ಪಕ್ಷ ಪ್ರಜಾಪ್ರಭುತ್ವ ಪಕ್ಷ (Partiless Democracy party) "ಜಾತ್‌ಪತ್ ತೋಡಕ್ ಸಂಘ್" ಇದ್ದಹಾಗೆ. ರೈತ ಸಂಘಕ್ಕಿಂತ ದೊಡ್ಡದಾದ ಬಡಸಂಘ!

೧. ಈ ಸಮಾಚಾರ ನನಿಗ್ಗೊತ್ತೇ ಇರ್ಲಿಲ್ವಲ್ಲಾ? ಎಲಾ ನಿಮ್ಮಾ! ಛೆ, ಛೆ, ಛೇ, ಬೇಸರಪಟ್ಟಕೋಬೇಡಿರಿ. ತಿಳಿಯದೆ ಹೇಳಿದೆ ಅಂದೆ.

೨. ಏನೂ ಪರವಾ ಇಲ್ಲ. ತಿಳಿಯದೆ ಇದ್ದಮೇಲೆ ಹೇಳಿದ್ದಕ್ಕೇಕೆ ಬೇಸರ ನನಗೆ? Honesty is the plainest and humblest manifestation of Truth ಆದ್ದರಿಂದ ನನ್ನ ಪಾಲಿಗೆ ಬಂತು. ವಿಷಯವನ್ನು ಬಿಡಿಸಿ ಹೇಳಬೇಕಾದ ಫಜೀತಿ. ನಮ್ಮದು ತಿಳಿಯದವರಿಂದ ತುಂಬಿದ ದೇಶವಾದುದರಿಂದಲೇ "ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಂ" ಎಂದಿದೆ ಗೀತೆ. ಶ್ರೀ ಸಿದ್ದವ್ವನ ಹಳ್ಳಿಯ ಕೃಷ್ಣಶರ್ಮ ಮಹೋದಯರು ಅದರಿಂದಲೇ ಪ್ರಜಾರಾಜ್ಯ ದಿನೋತ್ಸವವನ್ನು ಜಾತ್ರೆಯನ್ನಾಗಿ ಆಚರಿಸಬೇಕೆಂದು ಆಗ್ರಹಿಸಿದ್ದು. ಏಕ ಮುಖತಾ ಸ್ವಭಾವದ ನಮ್ಮ ಜನಕ್ಕೆ ಅನೇಕ ಮುಖದ ರಾಜಕೀಯವನ್ನು ಕಂಡು ವಿಶ್ವರೂಪವನ್ನು ಕಂಡ ಅರ್ಜುನನಂತೆ ಗಾಬರಿಯಾಗಿ ಹೋಗಿದೆ. ವಿಗ್ರಹಭೇದಕನಾಗಿ ನಿಂತ ನಮ್ಮ ಪಕ್ಷವು ಎಲ್ಲ ಪಾರ್ಟಿಗಳನ್ನೂ ಬಹಿಷ್ಕರಿಸಬೇಕೆಂಬ ಕ್ರಾಂತಿಯ ಆಂದೋಲನವನ್ನೇ ಶುರುಮಾಡಿದೆ. ವ್ಯಕ್ತಿಯೂ ಒಂದು ಕುಟುಂಬದ ಪಾರ್ಟಿಯಾಗಿರುವುದರಿಂದ ಅವನಿಗೆ ಉಮೇದುವಾರನಾಗಲು ಅರ್ಹತೆಯಿಲ್ಲ. ಕುಟುಂಬಾತೀತರಷ್ಟೇ ಚುನಾವಣೆಗೆ ನಿಲ್ಲಲು ಅರ್ಹರಾಗಬೇಕು. ಅವರಿಗೆ ಅಪ್ರತ್ಯಕ್ಷ ಕುಟುಂಬಗಳೂ ಇರಬಾರದು; ಅಂದರೆ ೫೦ ರಿಂದ ೬೫ರೊಳಗಿನ ಸಂನ್ಯಾಸಿಗಳಾಗಿರಬೇಕು. ಆನಂದಮಠದಲ್ಲಿ ಬಂಕಿಮರು ಯಾರನ್ನು ಸಂಘಟಿಸಿದರು ಸ್ವಾತಂತ್ರ್ಯಾಂದೋಲನಕ್ಕೆ? ಸಂನ್ಯಾಸಿಗಳನ್ನು–ಭಿಕ್ಷುಕ ಬೇವಕೂಫ ಕಪಿನೀಪತಯ್ಯಗಳನ್ನಲ್ಲ! ಗೀತೆ ಹೇಳಿದ ಸಂನ್ಯಾಸಿ ಆ ಪಂಗಡಕ್ಕೆ ಸೇರಿ ೧೫ ಲಕ್ಷ ತನ್ನ ಸಂಖ್ಯೆಯನ್ನು ಬೆಳಸಿಲ್ಲ. ಗಾಂಧಿಯವರು ಸಂನ್ಯಾಸಿಗಳು–ಗೀತಾಲಕ್ಷಣದಂತೆ. ಅವರು ಕೊಡಿಸಿದ ಸ್ವರಾಜ್ಯದ ಆಡಳಿತ ಅಂಥ ಪ್ರತಿನಿಧಿಗಳಿಂದ ಮಾತ್ರ ಉಳಿಯಬಲ್ಲುದು. ಇಷ್ಟು ಸಲ ಸಂವಿಧಾನವನ್ನು ಬದಲಾಯಿಸಿದವರಿಗೆ ಈ ಬದಲಾವಣೆಗಾಗಿ ಬದಲಾಯಿಸಲು ಬರುವುದಿಲ್ಲವೇ? ಮನಸ್ಸಿದ್ದಲ್ಲಿ ಮಾರ್ಗವಿದೆ!

೧. ಜೋರಾಯಿತಲ್ಲ, ಸ್ವಾಮೀ, ನಿಮ್ಮ ಅವ್ಯವಹಾರ್ಯ ಯೋಜನೆಯ ಭಾಷಣ!

೨. ಸರಿ ವ್ಯವಹಾರ್ಯತೆಯ ಅಳೆಗೋಲನ್ನು ನಿಮ್ಮಂಥ ಜನರ ಕೈಗೊಪ್ಪಿಸಿದ ಅಜ್ಞಾನಪರ್ವತವನ್ನು ಕಡಿದೊಗೆಯಲೆಂದೇ ನಮ್ಮ ಪಕ್ಷವು ಕ್ರಾಂತಿಗಾರಂಭಿಸಿದೆ. ಹಾಗೆ ಒಪ್ಪಿಸಿಯೇ ಭಾರತೀಯರು ಕೆಟ್ಟರು; ಭಾರತ ಹಾಳಾಯ್ತು; ಬಡವರಿಗೆ ಗೋಳಾಯ್ತು. Vice is a false arithmetic, false philosophy of life! ನೆಹರುಗಳಿಂದ ಹಿಡಿದು ಮೊಹರು ಹೊಡೆದು ಕೊಂಬ ಕೆಲ ಗೊಡ್ಡು ಆಚಾರ್ಯರುಗಳವರೆಗೂ ಇದೇ ಗಣಿತ!

ಬೆಂಗಳೂರಿನ ಉಪವನವ ಹಂಚಿ ಕೊಡುವಾಗ
ದಿಲ್ಲಿ ವೈರ್‌ಲೆಸ್‌ಸೆಟ್ಟು ಕೊಳ್ಳುವಾಗ
ಬಂಡವಿಲ್ಲದ ಕಂಪೆನಿಗೆ ಸಾಲ ಕೊಡುವಾಗ
ವರಣಕ್ಕೆ (Election) ನಿಧಿಯ ಸಂಗ್ರಹಿಸುವಾಗ
ಹುರಿಯಾಳು ಲೋಹರರ ಹೊತ್ತುಕೊಂಡೊಯ್ವಾಗ
ಕೃಷ್ಣಮಾಚಾರಿಯನ್ನಾಯುವಾಗ
ಪೂರ್ಣದೇವಿಯ ಹಣವ ಟಪ್ಪಾಲು ತಿನುವಾಗ
ವಿಕ್ಟೋರಿಯಾಸ್ಪತ್ರೆ ಯಮನೆನಿಸಿದಾಗ
ಯಾವ ಪಕ್ಷದ ಆಳ್ಕೆಯಿತ್ತು ಹೇಳಿರಿ ಸ್ವಾಮಿ
ಅಹ, ಮೆರೆಯುತಿರೆ ಯೋಜನಾ ಸ್ವರ್ಗಭೋಗ!

ನಿಮಗೂ ಗೊತ್ತಿರಬೇಕಲ್ಲಾ–ನೀವೂ ಯೂನಿವರ್ಸಿಟಿಯ ಚುನಾವಣೆಗಳಿಗೆ ನಿಂತವರು. ನೀವು ಲಿಂಗಾಯತರಲ್ಲ. ಮಾಧ್ವರಲ್ಲ, ವಿಜಾಪುರದವರಲ್ಲ, ಹಳೆ ಬೆಂಗಳೂರು ಮೈಸೂರಿನವರಲ್ಲ, ಹಿಂದುಳಿದವರಲ್ಲ, ಮತ್ಸ್ಯಬ್ರಾಹ್ಮಣರಲ್ಲ, ಜತ್ತಿ–ನಿಜಲಿಂಗಪ್ಪನವರ ಗುಂಪಿನವರಲ್ಲ, ಇಂಗ್ಲಿಷ್ ಸ್ಕಾಲರಲ್ಲ, ರಾಜಧಾನಿವಾಸಿಗಳಲ್ಲ, ವಶೀಲಿ ಇಲ್ಲ–ಆದ್ದರಿಂದ ಜಯಲಕ್ಷ್ಮಿ ನಿಮಗೆ ಮಾಲೆ ಹಾಕಲಿಲ್ಲ! ನಿಮ್ಮಂಥವರು ಬಹುಸಂಖ್ಯರಾಗಿರುವುದೇ ಅಪರಾಧ. ನಮ್ಮ ಸದ್ಯದ ಪ್ರಜಾಪ್ರಭುತ್ವದ ಭಾರತೀಯ ಪ್ರಯೋಗದಲ್ಲಿ, ಇಂಥಾ ಭಾವನಾ ಸಮನ್ವಯವುಳ್ಳ ಜನ ನಿಮ್ಮಂಥವರಿಗೆ ಅದಿಲ್ಲವೆಂದು ಕಲಿಸಲು ಯೋಜನೆ ಹಾಕಲು ಆರಂಭಿಸಿದ್ದಾರೆ ದಿಲ್ಲಿಯಲ್ಲಿ! ಇವರೇ ರಾಜಕೀಯ ಪಕ್ಷಗಳೆಂದರೆ–ಇವರಿಗೆ ರಾಜಕೀಯ ತತ್ವಜ್ಞಾನದಲ್ಲಿ ಶ್ರದ್ಧೆ ಇದೆ ಅಂತ ತಿಳಕೊಂಡಿರಾ? ಇಂಥ ಪಕ್ಷಗಳನ್ನು ಸಾಕುತ್ತ ಬಂದ ನೆಹರು ನಾಗರಿಕತೆ ಭಾರತವನ್ನು ಹರಾಜುಮಾಡೀತು! ಹೇಳಿದ್ದನ್ನು ಮಾಡದಿರುವನಾಗರಿಕತೆಗೆ ನೆಹರು ನಾಗರಿಕತೆ ಎಂಬುದನ್ವರ್ಥನಾಮ.

೩. ಏನ್ ಸ್ವಾಮೀ–ಅವರೊಬ್ಬರೇ ಸಿಕ್ಕಿದ್ದಾರೆ ನಿಮ್ಕೈಯಲ್ಲಿ ಅಂತ ದಬಾಯಿಸ್ತಿದೀರಾ? ನನ್ನ ಪ್ರಶ್ನೆಗಳಿಗೆ ಸ್ವಲ್ಪ ಉತ್ತರವನ್ನು ಹೇಳಿ ನೋಡೋಣ:

೧. ತಾವು ಹೇಳಿದ ಪಕ್ಷಗಳನ್ನೂ ಜಾತಿಗಳನ್ನೂ ಬಿಟ್ಟರೆ ಇಂಡಿಯಾ ಎಲ್ಲಿದೆ?

೨. ಒಂದು ವೇಳೆ ಇದ್ದರೂ ಅವುಗಳ ಅಸ್ತಿತ್ವ ಇಂಡಿಯದ ಹೊರಗೆಲ್ಲಿ ಸಾಧ್ಯ?

೩. ಬುದ್ಧಿವಂತಿಕೆ ಇಲ್ಲದೆ ಅವರು ಪ್ರಭಾವಿ ಸ್ಥಾನಮಾನಗಳಲ್ಲಿದ್ದಾರಾದರೂ ಹೇಗೆ?

೨. ಸಾವಧಾನ, ಸಾವಧಾನ. ತಮ್ಮ ಪ್ರಶ್ನೆಗಳಿಗೆ ಒಂದೊಂದಾಗಿ ಉತ್ತರ ಕೊಡುತ್ತೇನೆ:

೧. ತಮ್ಮ ೧ನೆಯ ಪ್ರಶ್ನೆಗೆ ೨ನೆಯ ದರದಲ್ಲಿ ಉತ್ತರವಿದೆ.

೨. ಎರಡನೆಯದು ಹೀಗೆ: ಅವು ಇಂಡಿಯದಲ್ಲಲ್ಲ, ಎಲ್ಲೂ ಇರಬಾರದು. ಎಲ್ಲಿದ್ದರೂ ಅವು ಇಂದಿನ ಕಾಡಾಡಿ ಭಾವನೆ ತುಂಬಿರುವವರೆಗೆ ಮಾನವ ನಾಗರಿಕತೆಗೆ ಹಾವು–ಚೇಳುಗಳಿದ್ದ ಹಾಗೆ; ಅವುಗಳು ತಮ್ಮ ಸಂಘಕಾರ್ಯವನ್ನು ಬಿಟ್ಟೊಡನೆಯೆ ಇಲ್ಲವಾಗುವುವು. ಅವುಗಳ ಅನುಯಾಯಿಗಳೆಲ್ಲ ನನ್ನಂತೆ, ನಾನೇ ಆಗುವರು.

೩. ಅವಕ್ಕೆ ಬುದ್ಧಿವಂತಿಕೆ ಇರುವುದು ನಿಜ. ಆದರೆ ಅದಕ್ಕಿಂತ ಹೆಚ್ಚಾಗಿ ಇತರರ ಅಬುದ್ಧಿವಂತಿಕೆಯು ದುರುಪಯೋಗಕ್ಕೆ ಅದು ಬಳಕೆಯಾಗಿರುವುದು ದೇಶಕ್ಕೆ ತಗಲಿದ ಮಾರಿಬೇನೆ. ಅಂಥ ಬೇನೆಯ ಪರಿಹಾರಕ್ಕೆ ಎರಡೇ ಮಾರ್ಗಗಳು. (a) ನಮ್ಮ ಕ್ರಾಂತಿ ಅಂಥ ಪಕ್ಷ–ಜಾತಿಗಳನ್ನು ಕಾಯದೆಯಿಂದ ನಿಷಿದ್ಧಗೊಳಿಸಿ ಜನ ಎಲ್ಲೆಲ್ಲೂ ಖಂಡಿಸುವಂತೆ ಮಾಡುವುದು; (b) ಅದಾಗದೆ ಹೋದರೆ ಅವುಗಳಂತೆ ಇನ್ನೂ ಎಷ್ಟೋ ಹೊಸ ಹೊಸ ಪಕ್ಷ ಜಾತಿಗಳನ್ನು ಕಾಯದೆ ಮೂಲಕ ಮುನ್ನಡೆಕೊಟ್ಟು ಜಾತೀಯ ಪ್ರಜಾಪ್ರಭುತ್ವ ಪ್ರಾತಿನಿಧ್ಯವನ್ನು ಆಸೇತು ಹಿಮಾಚಲವಾಗಿ ರಚಿಸಿಬಿಡುವುದು: ಜಾತ್ಯುಪಜಾತಿಗಳ ಜಾತಿ ಸಂಖ್ಯಾನುಸಾರ ಅವುಗಳ ಪ್ರತಿನಿಧಿಗಳ ಸಂಖ್ಯೆ ಇರತಕ್ಕದ್ದು; ಮತದಾರ ಕ್ಷೇತ್ರಗಳ ವ್ಯಾಪ್ತಿಯೂ ಅದೇ ಜಾತೀಯ ಆಧಾರವನ್ನು ಅವಲಂಬಿಸತಕ್ಕದ್ದು. ಈ ಎರಡು ಮಾರ್ಗಗಳಲ್ಲಿ ಒಂದನ್ನು ಹಿಡಿಯದೆ ಭಾರತದ ಉದ್ಧಾರವಾಗದು. ಒಂದನೆಯ ಮಾರ್ಗವನ್ನು ನನ್ನ ಕ್ರಾಂತಿತಂತ್ರವಿಲ್ಲದೆ ಅನುಸರಿಸಹೋಗಿ ಕಾಂಗ್ರೆಸ್ಸು ಸೋತಿದೆ; ಎರಡನೆಯದು ಯಾರ ಮೆಚ್ಚಿಗೆಗೂ ಗಣ್ಯವಾಗಿ ಪಾತ್ರವಾಗಿಲ್ಲ!

೧. ಅದೇನು ಸ್ವಾಮೀ ನಿಮ್ಮ ಕ್ರಾಂತಿತಂತ್ರ? ದಯವಿಟ್ಟು ವಿವರಿಸಿ ನೋಡೋಣ.

೨. ತಿರುಪತಿಗೆ ಕರೆದುಕೊಂಡು ಹೋಗಿ ತಲೆಬೋಳಿಸುವುದು, ಪಕ್ಷಾಂಧತೆ ಜಾತ್ಯಂಧತೆಗಳನ್ನು ವಾಕ್‌ಕಾರ್ಯಗಳಲ್ಲಿ ತೋರಿದವರಿಗೆ–ಅವರ ಅಧಿಕಾರ ಸ್ಥಾನ–ಮಾನಗಳನ್ನು ಖಾಯಂ ಆಗಿ ಲೋಪಿಸಿ! ಯಾರು? ನಮ್ಮಂಥವರು; ಅಧಿಕಾರವನ್ನು ಕಸಿದುಕೊಂಡು–ಇಸಿದುಕೊಂಡಲ್ಲ–ಇಸಿದುಕೊಳ್ಳಲು

ಯುಗಾಂತರಗಳು ಬೇಕಾದಾವು ಇಂದಿನ ಚುನಾವಣಾ ಪದ್ದತಿಯ ದುಸ್ತಂತ್ರದ ಪ್ರಕಾರ! ಕ್ರಾಂತಿ ಶಬ್ದದ ಅರ್ಥವನ್ನರಿಯದೆ ಭಾಷಣಮಾಡುತ್ತಿರುವ ನೆಹರು ಮಹಾಶಯರಿಗೊಂದು ಶಬ್ದಕೋಶವನ್ನು ಕೊಂಡುಕೊಡಿ. ಕಾಯದೆ ಬಲವನ್ನು ಪಡೆಯಲಾಗದುದಕ್ಕೆ. ಪಡೆದು ಸುಧಾರಣೆ ಮಾಡಲಾಗದುದಕ್ಕೆ ಅವರಿಗೆ ಕ್ರಾಂತಿ ಪದದ ಅರ್ಥ ಗೊತ್ತಿಲ್ಲ, ಕ್ರಾಂತಿ ಮಾಡುವ ಧೈರ್ಯವಿಲ್ಲ, ಕ್ರಾಂತಿಧರ್ಮದ ಯೋಜನೆ ಮಾಡುವ ಮಿತ್ರಶಕ್ತಿಯಿಲ್ಲ. ಕಾಂಗ್ರೆಸ್ ಬಿಡಲು ಆತ್ಮಶುದ್ಧಿ ಇಲ್ಲ! ಕಾಂಗ್ರೆಸ್ ಶುದ್ಧಮಾಡಲು ರಾಜತಾಂತ್ರಿಕ ಯುಕ್ತಿಯಿಲ್ಲ!

೩. ಈ ಮಾತು ನಿಜ, ಸ್ವಾಮೀ, ನಿಜ. ದೇವರನ್ನು ನಂಬದಿರುವ ನೆಹರುಗಳದಿಂದು 'ದೇವರೇ ಗತಿ' ಎಂಬಂತಾಗಿದೆ; ಅವರಾಳಿಕೆಗೆ ಸಿಕ್ಕ ದೇಶಕ್ಕೂ ಅದೇ ಗತಿಯಾಗಿದೆ! ಇದೂ ಒಂದು ಮೋಜು: ದೇವರ ಯಾವ ಸ್ವರೂಪವನ್ನೂ ಲಕ್ಷಣವನ್ನೂ ಅಥವಾ ಚಿಹ್ನವನ್ನೂ ನಂಬೆನೆಂಬವರು ತಮಗೆ ಪ್ರಿಯವಾದ ಒಳ್ಳೆಯ ಅಥವಾ ಕೆಟ್ಟ ತತ್ವಗಳನ್ನೇ ದೇವರೆಂದು ನಂಬಿ ನಡೆಯುತ್ತಾರೆ, ದೇವರನ್ನು ನಂಬಿರುವೆವೆಂಬುವರು ಅವನ ಯಾವುದೋ ಒಂದು ನಿರರ್ಥಕ–ದುರರ್ಥಕ ರೂಪ ಅಥವಾ ನಾಮವನ್ನು ನಂಬಿ ಆತ್ಮವಂಚನೆ–ಪರವಂಚನೆಗಳಲ್ಲೊಂದನ್ನು ನಿತ್ಯವೂ ಮಾಡುತ್ತಿರುತ್ತಾರೆ, ತತ್ವಕ್ಕೆ ತಿಲಾಂಜಲಿಯಿತ್ತು ಬಾಯಲ್ಲಷ್ಟೇ ಹೇಳುತ್ತ! ಇದಕ್ಕೆ ನಿಮ್ಮ ಕ್ರಾಂತಿ ತಂತ್ರ ಏನೆನ್ನುತ್ತದೆ ಸ್ವಾಮೀ?

೨. ನಮ್ಮ ಕ್ರಾಂತಿ ತಂತ್ರವು ಹಿಟ್ಲರನ ಸಂಘಟನಾ ಕಲೆಯನ್ನು ಹಿಡಿಯುತ್ತದೆ. ಪುಸ್ತಕ ತರಿಸಿ ಓದಿಕೊಳ್ಳಿ.

There is no education to any pattern of nationalistic civilisation without indoctrination. ತತ್ವಾವಾಪವಿಲ್ಲದೆ ಯಾವ ಕ್ರಾಂತಿಯೂ ಸಂಘಟಿತವಾಗದು. ತತ್ವಾವಾಪವೆಂಬುದು ಸ್ವಾತಂತ್ರ್ಯ–ಪ್ರಜಾಪ್ರಭುತ್ವಗಳಿಗೆ ವಿರುದ್ಧವೆಂಬವರಿಗೆ ವ್ಯವಹಾರ ಜ್ಞಾನವಿಲ್ಲ. ನಮ್ಮ ತತ್ವಜ್ಞಾನದ ಅದ್ವಿತೀಯ ಅದ್ವೈತ ಸಂಪತ್ತನ್ನು ರಾಜಕೀಯಕ್ಕೆ ಸಮನ್ವಯಿಸಿಕೊಂಡು ಭಾರತಾದ್ವೈತವನ್ನು ಜಪ, ತಪ, ಯಜ್ಞ, ಪ್ರಾರ್ಥನೆ, ಕಥೆ, ಉಪಾಸನೆಗಳನ್ನಾಗಿ ದೈವೀಕರಿಸಿ ಸರ್ವ ವ್ಯವಹಾರಗಳಲ್ಲೂ ಹಾಸುಹೊಕ್ಕಾಗುವಂತೆ ಸಂಕೇತಿಸಬೇಕು. ನಾನೀಗ ಈ ಮತಕ್ಕೆ ನಿಮ್ಮನ್ನು ಪರಿವರ್ತಿಸಲು ಬಂದಿದ್ದೇನೆ. ನೀವೀಗ ಪರಿವರ್ತಿತರಾಗಿದ್ದೀರಿ.

೪. ಎಲ್ಲರನ್ನೂ ಇಷ್ಟು ಹೊತ್ತಿನ ತನಕ ಲೇವಡಿ ಮಾಡ್ತಿದ್ರಲ್ಲ ಸ್ವಾಮೀ; ಲೇವಡಿ ಮಾಡೋದು ನಿಮಗೆ ಗುತ್ತಿಗೆಯೇ? ಏನು ಮಳ್ಳುಹರಿಯುತ್ತೀರಿ?

ಹಲಬುತ್ತೀರಿ ಪೊಕಳೆ ಪಂಡಿತರೇ! ನನಗುತ್ತರ ಕೊಡಿ–ಕೊಡೋಕಾಗೊಲ್ಲ ನಿಮಗೆ. ವಿಶ್ವವೇ ಭಗವಂತನ ಲೀಲೆ. ಲೀಲೆಗೇನಾದರೂ ಕಾರ್ಯ ಕಾರಣ ತರ್ಕವಿದೆಯೆ? ಲೀಲೆಯೇ ಉದ್ದೇಶ, ಲೀಲೆಯೇ ಫಲ; ಲೀಲೆಯೇ ಕಾರಣ, ಲೀಲೆಯೇ ಕಾರ್ಯ! ಅವನ ಲೀಲೆಯಲ್ಲಿ ನಿಮ್ಮದೂ ಒಂದು ಲೀಲೆ, ನನ್ನದೂ ಒಂದು ಲೀಲೆ, ನಾಯಕಸಾನಿ ಲೀಲಾಬಾಯಿಯದೂ ಒಂದು ಲೀಲೆ–ಅವನ ಲೀಲೆ ಎಂಬುದಲ್ಲವಾದರೆ ಅಂಧಪ್ರಕೃತಿಯ ಅಜ್ಞಾನ ಲೀಲೆ ಎನ್ನಿ–ಅಷ್ಟಗ್ರಹಗಳ ಲೀಲೆ ಎನ್ನಿ–ಬುದ್ಧಿವಂತರೆಂದುಕೊಂಬವರ ಬುದ್ಧಿಲೀಲೆ ಎನ್ನಿ. ವಿಶ್ವವಂತೂ ಒಂದು ವಿಕಟವಾದ ಶ್ವಾನ.

ಅಶ್ವವಲ್ಲ ಈ ವಿಶ್ವ ಇದೋ ವಿಕಟಶ್ವ ನಶ್ವರಾತ್ಮ
ಪಶ್ವಾಜೀವ ಸಜೀವ ಕೋಟಿ ಪಶುನಿಂದೆಯೊ ಮತಿವೇಶ್ಮ
ಕಶ್ಮಲವನು ಹತ್ತವತಾರಗಳೂ ಗುಡಿಸದಾದ ಮೇಲೆ
ಕಶ್ಮಲವನ್ನೇ ಹಿಡಿದು ನಡೆವ ಮಲಪಂಥ ನಮ್ಮ ಲೀಲೆ
ಮಾನವಿಲ್ಲದವರೇತಕೆ ಮಾನದ ಮಾತನಾಡಬೇಕು?
ಮಾನವಿಲ್ಲ ವಿಶ್ವಕ್ಕೆ ಎಲ್ಲವನು ಗರ್ಭೀಕರಿಸಿರಲು!
ಮಾನವ ಮಾನಾಭಾಸ ಮಾನ–ಮರ್ಯಾದೆಗಾದ ದಾಸ
ಜ್ಞಾನದ ಹೆಸರಲಿ ಏನೇನನ್ನೋ ಮಾಡಿ ಹೋದ ಮೋಸ!

ಭಾರತದ ವರ್ಣಗಳು

‘ಏ’ ಅರ್ಥಾತ್ ‘ಇಂಡಿಯನ್ನ’ರಿಂದು ಅರಾಜಕರಾಗಿದ್ದಾರೆ ಬಸ್ತಾರಾಧಿ ಪತ್ಯದಲ್ಲಿದ್ದವರಂತೆ. ಏಕೆ? ಈ ಅಲ್ಪರಾದ ಮಹಾಸಂಖ್ಯರು Anarchy is the sure consequence of tyranny though it is socialism in action ಕಾರ್ಯಗತವಾಗಲು ಬಯಸುತ್ತಿರುವ ಸಮಾಜವಾದವಾದರೂ, ಅರಾಜಕತೆಯೆಂಬುದದು. ಶಾಸನದ ಪರಿಣಾಮವೆಂದು ಬಗೆಯುಲಾರಂಭಿಸಿದ್ದಾರೆ. ಇವರದು ಶೇಷಭೋಜನ. ಉಳಿದವರುಂಡು ಬಿಟ್ಟಿದ್ದನ್ನುಂಬ ಶಿಷ್ಟರಿವರು. ಬೀಗಳಾದ ಭಾರತೀಯರೋ? ಅದೊಂದು ಬಗೆಯ ಅಪ್ರಾಚೀನತಾವಾದಿಗಳು. ಯೇನ ಕೇನ ಪ್ರಕಾರ ಭೋಗಿಗಳಲ್ಲ; ಎಲ್ಲರೂ ಬಿಟ್ಟುಕೊಟ್ಟ ವಂಚನೋತ್ಪಾದನಗಳನ್ನಿವರುಣ್ಣರು. ಇವರದು ಧನಸಂಪು. ಇವರು ಆತ್ಮವಂಚನೋತ್ಪಾದಕರು. ಸೀಯೆಂಬ ಹಿಂದುವೊ? ರಾಷ್ಟ್ರದ ಭಾರವನ್ನೇ ಹೊತ್ತ ಧೃತರಾಷ್ಟ್ರ; ಅಪ್ಪನಾದ ವ್ಯಾಸ ಹೋದ ಬಳಿಕ ಈ ಜನಕ್ಕೆ ಕಣ್ಣೇ ಹೊರಟು ಹೋಯ್ತು; ಡೀಯೋ? Dilute Christian. ಬೀಯ ಅನುಯಾಯಿ, ಒರಟು ಬಿಳಿ ಬಟ್ಟೆಯವ. ಇವನೇ ಡಿಲ್ಲಿ ರೆಡಿಮೇಡಿನ ಮಾಲಕ; ರಾಜನಿಲ್ಲದ ರಾಜ್ಯಗಳ ನಿರ್ಮಾಪಕ; ಆದರೆ ಪಂಚವಾರ್ಷಿಕ ಬಸ್ತಾರರನ್ನು ನಿರ್ಮಿಸಿದ್ದೂ ಈತನೇ! ನಮ್ಮ ನಾಗರಿಕತೆಯನ್ನು ಎರಡೇ ಅಕ್ಷರಗಳಲ್ಲಿ ವರ್ಣಿಸಬೇಕಾದರೆ Comulative Deposit ‘ಸೀಡಿ’ ಎನ್ನಬೇಕು!

'ಈ' ಮುಂತಾದ ವರ್ಗೇಶ್ವರರು ಸುಲಭಗ್ರಾಹ್ಯರು. ಆದರೂ ಗರ್ವಜ್ಞನೇನೆಂದ ಗೊತ್ತೆ?

ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ?
ಜಾತೀಯ ಎಣ್ಣೆ ಇರುವನಕ ಹೀನವೇ!
ಮಾತಾಡು ಬಂದು ಸರ್ವಜ್ಞ!

ಜಾತೀಯ ಉತ್ತಮನ ಕಣ್ಣ ಬೆಳಕೂ ಕೂಡ
ಪಾತಾಳದಂಧತಮ; ಪಾಪಿವರ್ಗಕ್ಕೆ
ಜಾತಿಯುಂಟೆಲ್ಲಿ? ಸರ್ವಜ್ಞ!

ಪಾಪ ಧರ್ಮಕ್ಕಿಂದು ತೋಪು ಸಾಕ್ಷಿಯ ಕೊಡಗು;
ವ್ಯಾಪಾರಿ ಬುದ್ಧಿ ಸರ್ವಾಂಗಗಳ ತುಂಬೆ
ನೀ ಫೈಲು ಧರ್ಮ ಸರ್ವಜ್ಞ!

ಏಬಿಸೀಡಿಗಳನ್ನು ಜಡ್ಡುರುವ ಹೊಡೆದವರ,
ಜಾಬು ಹಂಟರರ, ಜಂಭದಂಭಾತ್ಮಕರ
ಬಾಬತ್ತು ಗೊತ್ತೆ? ಸರ್ವಜ್ಞ!

ಸರ್ವಜ್ಞನಿಗೆ ಮೊದಲೇ ಗೊತ್ತಿಲ್ಲ; ನಿನಗೆ ಕಡೆಗೆ ಗೊತ್ತಿಲ್ಲ!

"ಪ್ರೊ. ಬೇಂದ್ರೆ, ಕವಿ ಬೇಂದ್ರೆ, ಶ್ರೀ ಬೇಂದ್ರೆ ಮತ್ತು ಅನುಭಾವಿ (=ಯೋಗಿ) ಬೇಂದ್ರೆ ಎಂಬಿವರು ಬೇರೆ ಬೇರೆ" ಎಂದು. ಇದೇ ಸ್ವತಂತ್ರ ಭಾರತದ ನಾಗರಿಕತೆಯ ಬೀಜಮಂತ್ರವಾಗಬಲ್ಲ ಮನಃಶಾಸ್ತ್ರ ತತ್ವ. ಇದನ್ನು ಬೇಂದ್ರೆಯವರೇ ಸ್ವತಃ ಆಡಿದ್ದರಲ್ಲದೆ, ಆಚರಿಸಿದ್ದಿಲ್ಲ!

ಯಾರೋ "ಎ. ಜಡ್. ಖಾನ್" ಅಂತ ಒಬ್ಬರು ಹಿಂದೆ ಇದ್ದರಂತೆ. ಅವರ ಬಗ್ಗೆ ಏಜೆಡ್ (Aged) ಆದ ಇನ್ನೊಬ್ಬರೆನ್ನುತ್ತಿದ್ದರು; 'ಏ' ಇಂದ 'ಜಡ್' ಎಂಬವರೆಗಿನ ೨೬ ಸ್ವರೂಪಗಳು ಅವರಿಗಿದ್ದವು–ಎಂದು.

ಸ್ವತಂತ್ರ ಭಾರತದ ಸಂಸ್ಥಾನಾಯಕರಲ್ಲನೇಕರು ಇಂದು 'ಏಜೆಡ್' ಏ. ಜಡ್. ಖಾನರೇ ಆಗಿರುವುದು ಸ್ಪಷ್ಟವಾಗಿದೆ. ನೀವು ಅವರಿಂದ ವೇದಾಂತವನ್ನಲ್ಲದೆ ಇನ್ನೇನನ್ನೂ ನಿರೀಕ್ಷಿಸಲಾರಿರಿ. ಅವರು ರಾಜಕೀಯವನ್ನೆತ್ತಲಿ, ಆರ್ಥಿಕವನ್ನು ಹೇಳಲಿ, ಸಾಹಿತ್ಯವನ್ನು ಕುರಿತು ಉದ್ಗರಿಸಲಿ–ಏನು ಮಾಡಿದರೂ ವೇದಾಂತ ಅವರ ಬೆನ್ನ ಬಿಡದು!

ಈ ವೇದಾಂತದ ಹಿನ್ನೆಲೆಯಾಗಿರುವ ಖಾನ್ ಪದದ ಅರ್ಥವಾದರೂ 'ಏ' ಇಂದ 'ಜಡ್' ಎಂಬಲ್ಲಿಯವರೆಗಿದೆ. "ಖಾನೇವಾಲಾ ಖಾನ್" ಎಂಬ ಅನ್ವರ್ಥದಲ್ಲಲ್ಲದೆ ಅಂಕಿತದಲ್ಲಿ ಅದರ ಅರ್ಥವಿಲ್ಲ. ಏನನ್ನು ಎಲ್ಲರೂ ತಿನ್ನುತ್ತಾರೆ? ಧನಕನಕ

ವಸ್ತುವಾಹನಾದಿ ಭೋಗಸಾಧನಗಳನ್ನು! ಭೋಗಿ ಎಂದರೆ ಸರ್ಪವೆಂತಲೂ ಅರ್ಥವಿದೆ. ಆದುದರಿಂದ ನಮ್ಮ ದೇಶದ ಯಜಮಾನರಲ್ಲಿ ಬಹುಸಂಖ್ಯಾತರು ನಾಗಾಲ್ಯಾಂಡಿನ ಪ್ರಜೆಗಳೇ ಆಗಿದ್ದಾರೆ, ಅನ್ವರ್ಥದಲ್ಲಿ. ನಮ್ಮ ರಾಜಧಾನಿ ಹಸ್ತಿನಾವತಿ. ಹಸ್ತಿಯೂ ನಾಗದ ಒಂದು ರೂಪ; ಸೊಂಡಿಲಿರುವುದರಿಂದ ಆನೆಯೂ ನಾಗವೆನಿಸಿದೆ. ಆದುದರಿಂದ ಹಸ್ತಿನಾವತಿ (ಇಂದ್ರಪ್ರಸ್ಥ–ದಿಲ್ಲಿ)ಯ ಮೂಲಾಧಾರದಿಂದ ಹೊರಟ ವಾಯುವು ಕನ್ಯಾಕುಮಾರಿಯ ಸಹಸ್ರಾರದವರೆಗೆ ೨೬ ವರ್ಗದವರನ್ನು ನಿರ್ಮಿಸಿ ಅವರಲ್ಲಿ ೨೬ ರೂಪಗಳ ಭೋಗವರ್ಗಗಳನ್ನು ನಿರ್ಮಿಸಿದೆ. ಆ ೨೬ ವರ್ಗಗಳಾವುವೆಂದರೆ:–

೧. Aesthetically honourable-ಸಿನಿಮೆಯರು.
೨. Backwardly honourable-ಹಿಂದುಳಿದವರು (ದಡ್ಡರು).
೩. Chronologically honourable-ವಯೋವೃದ್ಧರು.
೪. Despicably honourable-ಗುಂಡರು.
೫. Effeminately honourable-ಅಧೀರ ಯುಕ್ತಿಸಂಪನ್ನರು. (ನರಿನರರು)
೬. Fearfully honourable-ಪೋಲೀಸರು.
೭. Gorgeously honourable-ಉಡುಪು ಸೊಗಸುಗಾರರು. (ಜೆಂಟ್ಲಮನ್ ಡಾಕುಗಳು)
೮. Hircinely honourable-ದಾಡೀವಾಲರು.
೯. Illusively honourable-ಲಂಚಕೋರರು.
೧೦. Joculary honourable-ಹುಚ್ಚರು.
೧೧. Kismetically honourable-ಕಳ್ಳಪೇಟೆ ಸಾಹುಕಾರರು.
೧೨. Libidinously honourable-ಬೀದಿ ಕಾಮಣ್ಣರು.
೧೩. Mechanically honourable-ವರದಕ್ಷಿಣಾಪ್ರಿಯ ಅವಿವಾಹಿತ ಎಂಜಿನಿಯರ್.
೧೪. Nauseously honourable-ಜಂಭ ಕೊಚ್ಚುವವರು.
೧೫. Officially honourable-ದುಷ್ಟ ಅಧಿಕಾರಿಗಳು.
೧೬. Proverbially honourable-ಅಜ್ಜಿಯರು.
೧೭. Quotatively honourable-ಸ್ಕಾಲರರು–(ಪಂಡಿತರು)
೧೮. Racially honourable-ಬಿಳಿಯರು.
೧೯. Shabbily honourable-ಹೊಲಸು ಜೊತೆ ಪ್ರವಾಸಿ.
೨೦. Theatrically honourable-ಮುಖಸ್ತುತಿ ಪ್ರಿಯರು.
೨೧. Unisonously honourable-ಪಾರ್ಟಿದಾಸ ಎಮ್ಮೆಲ್ಲೆಗಳು. (ಎತ್ತುಗೈವೀರರು)

೨೨. Vampirically honourable-ಅಧಿಕಾರಾಂಧ ಅಧಿಪತಿಗಳು.

೨೩. Wantonly honourable-ಕುಬೇರ ಪುತ್ರಿಯರು.

೨೪. Xylocarpously honourable-ನಿರ್ಲಜ್ಜ ಅನಿವಾರ್ಯರು.

೨೫. Yearly honourable-ಮೃತರಾದ ಪಿತೃಗಳು.

೨೬. Zoologically honourable-ಚಿಲ್ಲರೆ ಬುದ್ಧಿಯವರು.

ಈ ೨೬ ವರ್ಣಗಳನ್ನು ಖಾದೀ ಮಿಲ್ಲಿನಲ್ಲಿ ತಯಾರಿಸಲಾಯ್ತು. ಈಗ ಚೀನ, ಪಾಕೀಸ್ತಾನ, ಗೋವೆ, ಕಾಂಗೋ, ಲಾವೋಸ್, ನೇಪಾಳ ಮತ್ತು ನಾಗಾಲ್ಯಾಂಡುಗಳ ಜೊತೆಗೆ ಜಬ್ಬಲ್ಪುರದ ರಣರಂಗ ನಮ್ಮ ಖಾದೀ ವೇದದ ಶ್ರೋತ್ರಿಯರೆದುರು!

"ಏನೇ ಬರಲಿ, ಸ್ಟೇಟ್‌ಮೆಂಟಿರಲಿ" ಎಂದು, 'ನೀಲಿ ಪ್ರಿಂಟು,' 'ಬಿಳಿ ಕಾಗದ,' ಪ್ರತಿಭಟನಾಪತ್ರ, ಸ್ನೇಹ, ಶಾಂತಿ. ಸಹಜೀವನಗಳ ಮಂತ್ರಪಠನ ಇಷ್ಟನ್ನು ನಿತ್ಯವೂ ಮಾಡುತ್ತಿದ್ದರೆ. ದೇಶಪ್ರೇಮದ ಗೌರೀಶಂಕರವನ್ನೂ ವಿವೇಕದ ಕನ್ಯಾಕುಮಾರಿಯನ್ನೂ ಗೆದ್ದಂತಾಗುತ್ತದೆ! ಅಲ್ಲವೇನಯ್ಯಾ!

ಸೂತ ಉವಾಚ–

ಅಯ್ಯಾ, ಭೂತಪ್ಪಾ–ಎಲ್ಲಿಂದ ಮಾತಾಡುತ್ತಿರುವೆ? ನಿನಗೆ ಕಣ್ಣೇ ಕಾಣುವುದಿಲ್ಲವೆ? ಪ್ರತಿ ಶಿಕ್ಷಣಸಂಸ್ಥೆಯ ವಾರ್ಷಿಕೋತ್ಸವದಲ್ಲೂ ಭಾರತದಾದ್ಯಂತ ಅಮೃತವಾಣೀ ಯಜ್ಞವನ್ನು ನೆರವೇರಿಸುತ್ತಿರುವುದು ಸಾಲದೇ? ಡಿಸೆಂಬರಿಂದ ಫೆಬ್ರವರಿ ಕೊನೆಯವರೆಗೆ (ಒಂದೇ, ಎರಡೇ?) ಬಾಲಕ–ಪಾಲಕ–ಮಾಲಕ (Manager) ಮತ್ತು ಶಿಕ್ಷಕರ ಸ್ನೇಹಸಮ್ಮೇಳನಗಳು ನಡೆಯುವುದನ್ನು ನೋಡಿಲ್ಲವೆ? ಅವುಗಳಲ್ಲಿ ಖಾದಿವಾದಿ ವಾಗ್ರಘುರಿಂಯು ರಾಜಕಾರಣ ವೇದಾಂತಕಾರಣಗಳಿಂದ ಹಿಡಿದು ಮೋದಕಕಾರಣವಾದ ಫಲಾಹಾರ ಕಾರಣದವರೆಗಿನ ಸರ್ವಶಾಸ್ತ್ರಗಳ ಮೇಲಿನ ಸದುಪದೇಶಗಳನ್ನೂ, ಕಾಕ–ಭೇಕ–ಬಕ–ಘೂಕ–ಪೋಕ ಉದ್ದೇಶಗಳನ್ನೊಳಗಿಟ್ಟುಕೊಂಡು ಜಿಹ್ವಾಶ್ರಮದಾನಯಜ್ಞವನ್ನೂ ಈ ೧೩ ವರ್ಷಗಳಿಂದಲೂ ಮಾಡುತ್ತ ಬಂದಿಲ್ಲವೆ? ಅದರಿಂದ ಭಾರತದ, ಮಹೀಶೂರ ಕರ್ನಾಟಕದ ಮತ್ತು ಇತರ ದೇಶಗಳ ಸಮಸ್ಯೆಗಳೆಲ್ಲವಕ್ಕೂ ಸದುತ್ತರಗಳನ್ನು ಕೊಟ್ಟಂತಾಗಿಲ್ಲವೆ? ಮಾತೇ ಮಾತೆ; ಮಾತೃಪ್ರಧಾನ ಸಂಸ್ಕೃತಿಯ ಸ್ವಭಾವವೇ ಭಾವ.

ತುಲಾಧಾರ (ವ್ಯಾಪಾರಿ) ಉವಾಚ–ಲಾಭವು ಲೋಭವೆ?

ದಂಡಧಾರ (ಅಧಿಕಾರಿ) ಉವಾಚ–ಲಂಚವು ಲಂಚಿಗಲ್ಲವೆ?

ಉಪನೇತ್ರಧಾರ (ಉಪಾಧ್ಯಕ್ಷ) ಉವಾಚ–ಉಂಡಾದ ಮೇಲೆ ಉಳಿದವರ ಚಿಂತೆ ಇರಬೇಕೆ?

ಉಪಸೂತ್ರಧಾರ (ಮರಿ ಮುಖಂಡ) ಉವಾಚ–ದೊಡ್ಡವರು ಹೇಳಿದ್ದಕ್ಕೆ ದುಡ್ಡಿನ ಅರ್ಥವಿಲ್ಲವೆ?

ಭಾಕ್ರಾದಲ್ಲಿ ೫೦ ಲಕ್ಷ ನುಂಗಲು ಸಾಧ್ಯವಾದರೆ, ದಾಮೋದರದಲ್ಲಿ ೩೦ ಲಕ್ಷವನ್ನಾದರೂ ನುಂಗಲು ಸಾಧ್ಯವಿಲ್ಲವೆ? ಪೊಂಗಲ್ ಭಾತ್ ಅಂತ ಬೆಂಗಳೂರಿನಲ್ಲಿ ಮಾಡಿದ ಹಾಗೆ ನುಂಗಲ್ ಭಾತ್ ಅನ್ನೋದನ್ನ ಮಾಡಿ ತಿನ್ನುವುದೇ ಸ್ವತಂತ್ರ ಭಾರತದಲ್ಲಿ ಬದುಕ್ಕಿದ್ದಕ್ಕೆ ಸಾರ್ಥಕ. ದೇವರ ಹೆಸರಿನಲ್ಲಿ ಆಚರಿಸುವ ನಾಸ್ತಿಕತೆಯು ನಮ್ಮ ಪ್ರಜಾಕೋಟಿಯ ಕೆಲ ರಾಜರ ಧರ್ಮವಾಗಿರುವ ಸಂದರ್ಭವನ್ನು ಕಂಡೇ ದಾಸರು–

“ನೀ ಮಾಯೆಯೊಳಗೊ? ನಿನ್ನೊಳು ಮಾಯೆಯೋ?” ಎಂದು ಮಾಯಾಮಾಳವಗೌಳದಲ್ಲಿ ಹಾಡಿದ್ದು. ದೈವಶಾಪ ಕೊಡದೆ ಮನುಷ್ಯಮಂಡಲೇಶ ಪಾಪ ಮಾಡುತ್ತಾನೆಯೆ? ಶಿವಮೂರ್ತಿ (ಸಾಹಿತ್ಯ ಪರಿಷದಧ್ಯಕ್ಷರ ಕುಕ್ಷಿ) ಕೃಷ್ಣರಾಯ (ಪರಿಷತ್ತಿನ ಅಧ್ಯಕ್ಷರ ತಲೆ) ರಲ್ಲಿ ಅಗ್ನ್ಯಸ್ತ್ರ–ವರುಣಾಸ್ತ್ರಗಳ ವಿನಿಮಯವಾಗುತ್ತಿತ್ತೇ? ಅಲ್ಲದೆಹೋದರೆ! ಕರ್ಮವೀರರೆಲ್ಲಾ ಮತಧರ್ಮವೀರರಾದರು ಏಕೆ ಮತ್ತೆ? Mr. Bhootappa, please tell me. It is not a sign of cultural and literary development? ಸೆನ್ಸು ಮತ್ತು ನಾನ್ಸೆನ್ಸುಗಳ ಎಕ್ಸ್‌ಚೇಂಜ್ ವ್ಯಾಲ್ಯೂ ಆದರೂ ನಿನಗೆ ಗೊತ್ತಾಗಬೇಡವೇ?

Exchange is change that always gives you a novelty-Novelty is beauty! ಗೊತ್ತಾಗಲಿಲ್ವೇ? ಹಳ್ಳಿ ಹಳ್ಳಿಗಳಿಗೂ ಇನ್ನು ರೋಟರಿ ಕ್ಲಬ್ಬುಗಳು ಬರುತ್ತವೆ ರೋಟರಿ ಕ್ಲಬ್ಬುಗಳೆಂದರೆ ರೊಕ್ಕಸ್ಥರ ಸಂಘ; ದುಡ್ಡಿದ್ದವನಷ್ಟೇ ಸರ್ವಗುಣ ಸಂಪನ್ನ; ಆದುದರಿಂದ ಭಯಭಕ್ತಿಗರ್ಹ ಎಂದು ಪ್ರಚಾರಮಾಡಿ ಆಚರಿಸುವ ಅಮಲ್ದಾರಿ ಸೂತ್ರ; Night Club ರಾತ್ರಿ ಕ್ರೀಡಾ ಸಂಘ ಮುಂತಾದವುಗಳನ್ನು ಹಡೆಯುವ ರಾಣಿ ಜೇನದು! ಮಧ್ಯ ಯುಗೀನ ಜಮೀನುದಾರಿ–ಪಾಳೆಯಗಾರಿಕೆಯ ಸಾಹುಕಾರ ಸರದಾರಿಕೆಯನ್ನು ಪುನರುದ್ಧಾರಗೊಳಿಸಲು ಕಾಯದೆ ಪೋಲೀಸರಿಂದ ಆತಂಕ ಬರದಂತೆ ಪ್ರಚುರಪಡಿಸಲು ಹೊರಟ ಅಮೇರಿಕದ ಗುಪ್ತಗಾಮಿನಿಗಳಾದ ಈ ಕಾರ್ಟೆಲ್ (Cartel) ಧ್ಯೇಯ ಗ್ರಸ್ತರ ಬಳಗಕ್ಕೆ ಬಡಪಾಯಿಗಳೂ ಷೋಕಿ ಲಾಲಸೆಯಿಂದ ಸೇರುತ್ತಿರುವ ದೃಶ್ಯವೇನು ಅಪ್ರಗತಿಶೀಲವೇ?

ರೋಟರೀ ತೀರ್ಥಮಾದಾಯ
ಪಿಬನ್ ನೇತ್ರೇ ಸ್ಪೃಶನ್ ನರಃ ।
ಅವಮಧ್ಯಮ ವರ್ಗೀಯೋ
ಗುರುತ್ವೇ ಹಿಮವಾನ್ ಭವೇತ್ ॥
ಭೂತ ಉವಾಚ–

ಅಹುದು ಮಹಾರಾಯಾ, ನೀನು ಹೇಳಿದ್ದು ಸರಿಯೋ ಸೂತಪ್ಪಾ! ನಾನು ಹೇಳಿದ್ದು ಸರಿಯೋ ಸೂತಪ್ಪಾ! ನಾನು ಭೂತಕಾಲದ ಭೂತ; ನೀನೋ? ವರ್ತಮಾನಕಾಲದ ಭೂತ. ಅಂದಮೇಲೆ ನನ್ನ ಮುಂದೆ ನೀನು. ನನ್ನ ಕತ್ತಿನ ಮೇಲ್ ಕೂತ್ಕೊಂಡು ನೀನು ಸವಾರಿ ಮಾಡ್ತೀಯಾ. ಆದರೆ ನೋಡು–ಬ್ಯೂಟಿಗೆ ಒಂದು ಟ್ರೂತ್ (ಸತ್ಯ) ಬೇಕಾಗುತ್ತೆ. ಅದಿಲ್ಲದೆಹೋದರೆ ಅದೆಲ್ಲಾ ಸೊನ್ನೆ ! Hollow ಆ ಸತ್ಯವೋ? ವರ್ತಮಾನವೆಂದು ತಿಳಿದು ಭೂತವಾಗಿರುತ್ತೆ. ಒಂದು ನಾಡಿನ ಭೂತಗಳ ಜಾಲವೇ ಹಾಗಿದೆ. ಚರಿತ್ರೆಯಂತೂ ಭೂತವೇ ವರ್ತಮಾನದ್ದು ಕೂಡ!

ನೋಡಪ್ಪಾ, ಒಂದ್ ಮಾತು: ಸತ್‌ಮೇಲೆ ಎಲ್ಲರೂ ಭೂತ (Past) ಆಗೋದು ಎಲ್ಲರಿಗೂ ಗೊತ್ತು. ಜೀವಿಸಿದ್ದಾಗಲೇ ಭೂತವಾಗೋ 'ನಾವೆಲ್ಲ' ಗೊತ್ತೇನಯ್ಯಾ ನಿನಗೆ? ನಿನ್ನ ರೋಟೇರಿಯಾನಿಜಂ ಅಂಥ ಮದ್ದು. ಆಜಾದ್ ಕಾಶ್ಮೀರ ಅಂಥ ಮದ್ದುಂಡವರ ಕಾರ್ಯಾಭಾವದ ಫಲ. ಶ್ರೀ ವಿ. ಸೀತಾರಾಮಯ್ಯ ಏನು ಹೇಳಿದರು ರಾಯಚೂರಿನಲ್ಲಿ? "ನಮ್ಮಲ್ಲಿ ಸಾರ್ವಜನಿಕ ಸದ್ಗುಣ ಬೆಳೆದಿಲ್ಲ; ಬೆಳೆಸಲು ನಮಗೆ ಅವಕಾಶವಿಲ್ಲ!" ಸ್ವತಂತ್ರ ಭಾರತದ ಆಧುನಿಕ ವಿಜ್ಞಾನಯುಗದ ಸರ್ವಸಮಾನಾವಕಾಶ ಇರೋದು ಯಾತಕ್ಕೆ? ದುರ್ಗುಣ ಬೆಳೆಸಿಕೊಳ್ಳೋಕೆ; ಸದ್ಗುಣ ಬೆಳೆಸಲು ಅವಕಾಶ ಕಳಕೊಳ್ಳೋಕೆ! ಹಾದಿಗೆ ಬಾರಯ್ಯಾ, ಭೂತನಿಂದಕನೇ. ನಿನ್ನ ಹೃದಯ ಅನ್ನೋದು ಫ್ಯೂಡಲಿಜಂನಲ್ಲಿದೆ; ಬುದ್ಧಿ ಸದ್ಯಕ್ಕೆ ಸೋಷಲಿಸ್ಟಿಕ್ ಮಾತಾಡುತ್ತಿದೆ; ಕೈಕಾಲುಗಳು ಹೃದಯ ಹೇಳಿದ್ದನ್ನೇ ಪ್ರಚ್ಛನ್ನವಾಗಿ ಮಾಡುತ್ತಿವೆ. ಈ ಅಹೋರಾತ್ರ ರಾವಣ ಭಜನದಲ್ಲಿ ಕುಂಭಕರ್ಣ ನಿದ್ದೆ ಹೊಡೆಯುತ್ತಾನೆ. ವಿಭೀಷಣ ಪರರಾಜಹಸ್ತಕನಾಗುತ್ತಾನೆ, ಶೂರ್ಪಣಖೆ ಚಾಡಿಹೇಳುತ್ತಾಳೆ, ಮಂಡೋದರಿ ಮಂಡೆ ಕಟ್ಟಿಕೊಳ್ಳುತ್ತಾಳೆ, ಸೀತೆ ಒಳಸಂಚು ಮಾಡುತ್ತಾಳೆ, ಹನುಮಂತ ಬರುತ್ತಾನೆ, ಲಂಕಾಪಟ್ಟಣ ಸುಟ್ಟು ಹೋಗುತ್ತದೆ. ರಾವಣ ಸೀತೆಯನ್ನು ಕದ್ದ ಕಳ್ಳನೆನಿಸಿ ಹತ್ತು ತಲೆಗಳನ್ನು ಕಳೆದುಕೊಳ್ಳುತ್ತಾನೆ! ಗೆದ್ದವನು ಇತಿಹಾಸ–ಪುರಾಣಕಾರರಿಂದ ಬೇಕಾದ್ದನ್ನು ಬರೆಯಿಸುತ್ತಾನೆ! ಇದೇ ನಾ ಹೇಳಿದ ಏಬೀಸೀಡಿಗಳ ವರ್ಗೀಕರಣ. ವರ್ಗ ಗರ್ವವೇ ಮೃತ್ಯು. ಅದರಿಂದಲೇ ಭಾರತೀಯರು ಮರ್ತ್ಯರು, ಅವರ ಕೀರ್ತಿ ಮಾತ್ರ ಅಮರ! ಪಂಜಾಬೀ ಸುಭಾ ಜಿಂದಾಬಾದ್!

ಸಿದ್ದವ್ವನಹಳ್ಳಿ ಕೃಷ್ಣಶರ್ಮರು ಲಿಂಗಾಯತರು ಹಿಂದುಗಳಲ್ಲವೆಂಬ ವಾದವನ್ನು ಖಂಡಿಸಲು ಎತ್ತಿದ್ದು ಜನಗಣನೆಯ ಮೂಲಕ ಜಾತಿ ವರ್ಗಭೇದವನ್ನು ಅಜರಾಮರಿಸಿದ ಪದ್ಧತಿಯನ್ನೇ ಕುರಿತು. ಮಂತ್ರಿಗಳ ಮಕ್ಕಳೆಲ್ಲಾ ಬೃಹಸ್ಪತ್ಯಾಚಾರ್ಯರೆಂದು ತಿಳಿದು ಅವರಿಗೇ ಹಿರಿಹುದ್ದೆಗಳನ್ನು ಸರಕಾರದಲ್ಲೂ ಸಾವಕಾರಿಯಲ್ಲೂ ಕೊಡುತ್ತಹೋಗುವ ವರ್ಗಸಂಸ್ಥಾಪನೆಯೂ ಅಂಥದೇ ಸೂತಪ್ಪಾ. ದಬ್ಬಾಳಿಕೆಯನ್ನು ಖಂಡಿಸುವವರು ಸ್ಥಾಪಿಸುವ ದಬ್ಬಾಳಿಕೆಯ ವರ್ಗಗಳ ಪರಿಚಯ ನಿನಗಿಲ್ಲಾ ಅಂತ ಕಾಣುತ್ತೆ. ಅದೊಂದು ತರಹ ಡೈಲೆಮ್ಮ (Dilemma) ಕಣಯ್ಯಾ–

೧. ಮದುವೆಯಾಗದ ಹುಚ್ಚು ಬಿಡದು; ಹುಚ್ಚುಬಿಡದೆ ಮದುವೆಯಾಗದು.

೨. ದಾರಿದ್ರ್ಯವು ಪಾಪಕ್ಕೆ ಮೂಲ; ಪಾಪವು ದಾರಿದ್ರ್ಯಕ್ಕೆ ಕಾರಣ.

೩. ಜಾತಿಯು ಅನೈಕ್ಯಕ್ಕೆ ಹೇತು: ಅನೈಕ್ಯವು ಜಾತಿ ಹೇತು.

೪. ಸಮಾಜ ಸ್ವಾಸ್ಥ್ಯ ಉಂಟಾಗದೆ ವ್ಯಕ್ತಿ ಸಾಸ್ಥ್ಯ ಉಂಟಾಗದು; ವ್ಯಕ್ತಿ ಸ್ವಾಸ್ಥ್ಯ ಉಂಟಾಗದೆ ಸಮಾಜ ಅರೋಗವಾಗದು.

೫. ನಿಜವಾದ ಪ್ರಜಾಸತ್ತೆ ಸಿದ್ಧಿಸದೆ, ಪ್ರಜೆಗಳೆಲ್ಲಾ ಸಂಸ್ಕೃತರಾಗರು; ಪ್ರಜೆಗಳೆಲ್ಲಾ ಸಂಸ್ಕೃತರಾಗದೆ ನಿಜವಾದ ಪ್ರಜಾಸತ್ತೆ ಸಂಭವಿಸದು.

೬. ಆಡಳಿತ ಸುಧಾರಿಸದೆ ಶಿಕ್ಷಣದಿಂದ ಶೀಲವಂತಿಕೆ ಬೆಳೆಯದು; ಶಿಕ್ಷಣವು ಶೀಲವನ್ನು ಬೆಳೆಯಿಸದೆ ಒಳ್ಳೆಯ ಅಧಿಕಾರಿಗಳು ಸಿಗರು.

೭. ಶ್ರೇಷ್ಠ ಕೃತಿಗಳಿಲ್ಲದಲ್ಲಿ ಶ್ರೇಷ್ಠ ವಿಮರ್ಶಕರು ಕಾಣಸಿಗರು; ಶ್ರೇಷ್ಠ ರಸಜ್ಞರಿಲ್ಲದಲ್ಲಿ ಶ್ರೇಷ್ಠ ಕೃತಿಗಳು ಬೆಳಕು ಕಾಣವು.

೮. ಅದಕ್ಷ ಸೂತನಿಂದ ರಥಿಕನ ಪ್ರಾಣಕ್ಕೆ ಸಂಚಕಾರ: ಅಸಮರ್ಥ ರಥಿಕನಿಂದ ಸೂತನ ಜೀವಕ್ಕೆ ಗಂಡಾಂತರ.

೯. ಹೆಂಡತಿ ಯೋಗ್ಯಳೆನಿಸದೆ ಗಂಡ ಯೋಗ್ಯನಾಗಲಾರ; ಗಂಡ ಯೋಗ್ಯನೆನಿಸಿಕೊಳ್ಳದೆ ಹೆಂಡತಿ ಯೋಗ್ಯಳಾಗಲಾರಳು.

೧೦. ಭೂತಕಾಲದ ಹಿರಿಯರು ಪಾಪಮಾಡದೆ ವರ್ತಮಾನಕಾಲದಲ್ಲಿ ಅವರ ಗೋತ್ರಜರು ಪಾಪಶೀಲರಾಗಲಾರರು; ವರ್ತಮಾನ ಜನರು ಪೂರ್ವಜನ್ಮದಲ್ಲಿ ಪಾಪ ಮಾಡಿದುದರಿಂದಲೇ ಅಂಥ ಪಾಪಿಗಳ ಗೋತ್ರದಲ್ಲಿ ಹುಟ್ಟಿದ್ದಾರೆ.

೧೧. ಭೂತ ಉವಾಚಕ್ಕೆ ಸೂತ ಉವಾಚ; ಸೂತ ಉವಾಚಕ್ಕೆ ಭೂತ ಉವಾಚ!

೧೨. ಬಿಗುವಿಲ್ಲದಲ್ಲಿ ನಗುವಿಗೆ ಮಾನವಿಲ್ಲ; ನಗುವಿಲ್ಲದಲ್ಲಿ ಬಿಗುವಿಗೆ ಮಾನವಿಲ್ಲ!

⌘ ⌘ ⌘

ಸೋಮಾರಿ ಕ್ಲಬ್

(ನಾಟಕ)

✦ ೨೦

ಪರಿವಿಡಿ

'ಸೋಮಾರಿ ಕ್ಲಬ್' ಹಿನ್ನೆಲೆ

೧೯೮೭ರ ಏಪ್ರಿಲ್ ೨೬ರಂದು ಬಿ.ಎಚ್.ಶ್ರೀಧರರ ಸಾಹಿತ್ಯ ಶಿಕ್ಷಣ, ಪತ್ರಿಕಾರಂಗ ಕ್ಷೇತ್ರಗಳ ಸಾಧನೆಯನ್ನು ಗಣಿಸಿ ಶಿರಸಿಯ 'ರಂಗಸಂಗ' ಹಾಗೂ 'ಕಲಾರಂಗ,' ಸಂಸ್ಥೆಗಳು ಅದ್ದೂರಿಯ ಸನ್ಮಾನ ಕಾರ್ಯಕ್ರಮ ನಡೆಸಿದರು. ಈ ಕಾರ್ಯಕ್ರಮ ಅದೆಂಥ ಪ್ರಾಮುಖ್ಯ ಪಡೆಯಿತೆಂದರೆ ಮೂರು ತಿಂಗಳು ಕರ್ನಾಟಕದ ಪ್ರಖ್ಯಾತ ಪತ್ರಿಕೆಗಳೆಲ್ಲ ಶ್ರೀಧರರ ಬಗ್ಗೆ ಅನೇಕ ಛಾಯಾಚಿತ್ರ ಸಹಿತ ಲೇಖನಗಳನ್ನು ಪ್ರಕಟಿಸಿದವು. ಶ್ರೀಧರರ ಪತ್ರಕರ್ತ ಸಹೋದ್ಯೋಗಿಗಳು, ಸಮಕಾಲೀನ ಪತ್ರಕರ್ತರು, ಶ್ರೀಧರರ ಬಗ್ಗೆ ಅವರ ಬಹುಮುಖ ಪ್ರತಿಭೆಯ ಪರಿಚಯ ಇದ್ದ ಸಾಹಿತಿಗಳು ಹೀಗೆ ಅನೇಕರು ಲೇಖನ ಬರೆದು ಪ್ರಕಟಿಸಿ ಅದ್ಭುತವಾಗಿ ಸ್ಪಂದಿಸಿದರು. ಅಂದಿನ ಆ ಸನ್ಮಾನ ಶ್ರೀಧರರಿಗೆ ಅವರ ಸಾಧನೆ ಹಾಗೂ ಅನೇಕ ರಂಗಗಳಿಗೆ ಪತ್ರಿಕೆ, ಸಾಹಿತ್ಯ ಹಾಗೂ ಶಿಕ್ಷಣ ಕ್ಷೇತ್ರಗಳಿಗೆ ನೀಡಿದ ಅಮೂಲ್ಯ ಕೊಡುಗೆಗಳಿಗೆ ದೊರೆತ ಆತ್ಮೀಯ ಸನ್ಮಾನವಾಗಿದ್ದು, ಶಿರಸಿಯ ಅತ್ಯಂತ ಕಿರಿಯ ವಯಸ್ಸಿನ ಯುವಕರು ಇದನ್ನು ಮಾಡಿ ಮುಗಿಸಿದರು! ಸಮಾಜದ ಎಲ್ಲಾ ರಂಗದ ಗಣ್ಯರು ಇದನ್ನು ಸಾಂಕೇತಿಕವೂ ಮಹತ್ವದ್ದೂ ಎನ್ನಿಸಿ ಸ್ಪಂದಿಸಿದ್ದರು. ಈ ಕಾಲದಲ್ಲಿ ಶ್ರೀಧರರನ್ನು ಸನ್ಮಾನಿಸಿದ ರಂಗಸಂಗದ ಸದಸ್ಯರು ನಂತರ ಶ್ರೀಧರರೇ ಬರೆದಿದ್ದ 'ಸೋಮಾರಿ ಕ್ಲಬ್' ಎಂಬ ವಿಡಂಬನಾ ಪ್ರಧಾನ ಪ್ರಹಸನವನ್ನು ಕಿರಣಭಟ್‌ರ ನಿರ್ದೇಶನದಲ್ಲಿ ಅಭಿನಯಿಸಿ ಸೈ ಯೆನಿಸಿಕೊಂಡರು.

'ಸೋಮಾರಿ ಕ್ಲಬ್'

ಭಾರೀ ಶ್ರೀಮಂತ ಕುಳಗಳು ಸದಸ್ಯರಾಗಿರುವ ಸೋಮಾರಿ ಕ್ಲಬ್‌ನಲ್ಲಿ ಶ್ರೀಮಂತರು ನಡೆಸುವ ಕುಕೃತ್ಯ, ಲಂಚ ವ್ಯವಹಾರಗಳು, ರಾಜಕಾರಣಿಗಳ ಭಯೋತ್ಪಾದಕರ ಸಂಪರ್ಕಗಳು, ವಂಚನಾ ತಂತ್ರ ಹೆಣೆಯುವ ಸಂಚುಗಳು ಇತ್ಯಾದಿಗಳು ಶ್ರೀಧರರ ಅದ್ಭುತ ವಿಡಂಬನಾ ಶೈಲಿಯಲ್ಲಿ ಚಿತ್ರಿತವಾಗಿವೆ. ಗಝಲ್, ಸ್ವರಚಿತ ವಿಡಂಬನಾ ಪದ್ಯ, ವಿರೂಪಿತ ರೂಪದಲ್ಲಿ ಪುರಂದರ, ಕನಕ ದಾಸರುಗಳ ಪದ್ಯಗಳು, ರಾಜರತ್ನಂ

ಪದ್ಯಗಳು, ಕೈಲಾಸಂ, ದಂಡಿ, ಸರ್ವಜ್ಞ ಇವರೆಲ್ಲರ ಮಾತು ಶ್ಲೋಕಗಳನ್ನು ಸಾಂದರ್ಭಿಕವಾಗಿ ಉಪಯೋಗಿಸಿಕೊಂಡು ಶ್ರೀಧರರು ವಿಡಂಬನೆಯ ಮೆರುಗನ್ನು ಹೆಚ್ಚಿಸಿದ್ದಾರೆ. ಈಗಿನ ಗೊಂದಲಾಪುರದ ವಿಕೃತಿಯ ಮೂಲವನ್ನು ಅಂದೇ ಕಂಡಂತೆ ಬರೆದ ಸೋಮಾರಿ ಕ್ಲಬ್ ಶೈಲೀಕೃತ ಚಿತ್ರಣದಿಂದ ಕುತೂಹಲಕಾರಿಯಾಗಿದೆ.

ಇಂದೊಬ್ಬ ಬಂದ ಕಡು ಚೆಲ್ವನಂದ
ಪುರಾಕೃತಾ ಮಾಡಿದಾ ಪುಣ್ಯದಿಂದಾ।
ನಾನವನ ಬಲ್ಲೆ। ಅವನನ್ನ ಬಲ್ಲ
ಸಮಂಜಸಾ ರೂಪ ಖಲ್ವಾಟ ಚೆಲ್ವ।
ಕಬ್ಬಿಂಬ ಮಧು ಜಠರೇ
ಮಲ್ಲಿಗೆ ಜಾಜಿ ಮೈಜುಂ
ಆಹಾ ಆಹಾ ಕುಳಿತವರು ನೋಡಿರೆಲ್ಲಾ!

ಎಂಬ ಕನ್ನಡ ಗಝಲ್ ಒಂದೆಡೆಯಿದ್ದರೆ,

ಈ ಮುಂದಿನ ಪದ್ಯದ ಸ್ವಾರಸ್ಯ ನೋಡಿ –

ಲಂಚಕ್ಕೆ ಕೊನೆಯಿಲ್ಲ
ಪರ್ಮಿಟ್ಟು ಲೈಸೆನ್ಸ್ ಕಾಂಟ್ರಾಕ್ಟ್‌ಗಳ್।
ವಂಚನಾ ವೈಭವದ ಮೂಲ ನೆಲೆಗಳು ಶಾಖೆ
ಕೋಟಿ ಕೋಟಿಗಳಷ್ಟು ಉಪರೂಪಗಳ್
ಲಂಚವೇ ಅಭಿವೃದ್ಧಿ ಯೋಜನಾ ಫಲವಯ್ಯ
ಲಂಚ ತೆರಿಗೆಗೆ ಕೂಡ, ದಾನ ಹಿಡಿಯಲು ಕೂಡ
"ಉದ್ಧಾರ" = ಕೀಳುವುದು ಬೇರು ಸಹಿತ॥

'Sip & Gossip ಎಂಬುದೇ ಸೋಮಾರಿ ಧರ್ಮ' ಎಂಬಂಥ ವಾಕ್ಯ ಸೋಮಾರಿ ಕ್ಲಬ್ ಸದಸ್ಯರ ಕೆಲಸವನ್ನು ಸೊಗಸಾಗಿ ಮಾರ್ಮಿಕವಾಗಿ ವಿಡಂಬಿಸಿ ಬಣ್ಣಿಸುತ್ತದೆ.

ಗುರಿಯ ತಾಗದ ಬಾಣ
ನೂರಾರನೆಸೆದೇನು
ಬರಿ ಮಾತನಾಡಿ ಫಲವೇನು? ಕ್ಲಬ್ಬಿನಾ
ಅರಿವಿಲ್ಲದಿರಲು ಸರ್ವಜ್ಞ

ಎಂದು ವಿಡಂಬಿಸಿ–

ಹೆಗಣೋಪವೀತಂ ನೂರಾರು ಗಂಟಂ
ಶೆಟ್ಟಪ್ಪ ಕೊಟ್ಟಂ ದುಡ್ಡಪ್ಪ ತೊಟ್ಟಂ॥

ಎಂಬ ತುಂಟ ಶ್ಲೋಕದೊಂದಿಗೆ–

ಮಂತ್ರಿಗಳ ನೇಮಿಸುವ ಕಂಟ್ರಾಟುದಾರರೇ
ತಂತ್ರಜ್ಞರಾಗುವರ್ ಮಂತ್ರಜ್ಞರಾಗುವರ್
ಎಂಥೆಂಥ ಜನರೆಲ್ಲ ಯಾರ್‍ಯಾರೋ ಆಗುವರ್
ಪಂಥಕ್ಕೆ ಮುಂದಾಳು ಮುಂದೆ ದೇಣಿಗೆಗಳಿಸ–
ಲಂತಃ ಪುರವ ಕೂಡ ಹೊಗುವ ಹಂಚಿಕೆಯುಂಟು
ಎಂಥೆಂಥ ಧೂತ ದೂತಿಯರನ್ನು ನೇಮಿಸುವ ಥಾಕತ್ತು
ನಮದಯ್ಯ!

ಎಂಬಂಥ ಪಂಚುಗಳಿಂದ ಕಚಗುಳಿ ನೀಡುತ್ತ, ಗುದ್ದುತ್ತ ಎಚ್ಚರಿಸುವ ಶ್ರೀಧರರ 'ಸೋಮಾರಿ ಕ್ಲಬ್' ಪ್ರಹಸನ ಇಂದಿನ ಕಾರ್ಪೋರೇಟ್‌ಗಳ ಜಗತ್ತು ಮಾಡುತ್ತಿರುವ ಜಾಗತೀಕರಣದ ಮರಣಾಂತಿಕ ಮಂಗಾಟಗಳ ಹಿಂದೆ ಇರುವ ವಿಕೃತ ಮನಸ್ಸನ್ನು ಶೈಲೀಕೃತ ಸಂಭಾಷಣೆ, ಪದ್ಯ ಮುಂತಾದ ಎಲ್ಲರೂಪ ರೂಪಕಗಳನ್ನು ಉಪಯೋಗಿಸಿ ವಿಡಂಬಿಸಿ ಎಚ್ಚರಿಕೆಯ ಘಂಟೆಯನ್ನು ಬಾರಿಸುತ್ತದೆ. ಇಂಥ ಒಂದು ಉತ್ಕೃಷ್ಟ ಕೃತಿಯನ್ನು ಯಶಸ್ವಿಯಾಗಿ ಅಭಿನಯಿಸಿದ 'ರಂಗ ಸಂಗ' ತಂಡ, ಶ್ರೀಧರರನ್ನು೨೬–೪–೧೯೮೭ರಂದು ಸನ್ಮಾನಿಸಿ, ಅವರ ಕೃತಿಯನ್ನು ಅಂದು ಅವರ ಎದುರೇ ಅಭಿನಯಿಸಿ ಅರ್ಥಪೂರ್ಣ ಕಾಣಿಕೆಯನ್ನು ನೀಡಿ ನಿಜಕ್ಕೂ ಅಭಿನಂದನೀಯ ಎನ್ನಿಸಿ 'ಸೋಮಾರಿ ಕ್ಲಬ್'ನ ರಂಗಸಾಧ್ಯತೆಯನ್ನು ಯಶಸ್ವಿಯಾಗಿ ತೋರಿಸಿ ಕೊಟ್ಟಿದೆ. (ನಾಟಕದ ಧ್ವನಿ ಸುರುಳಿಯ ದಾಖಲೆ ಲಭ್ಯವಿದೆ)

– ರಾಜಶೇಖರ ಹೆಬ್ಬಾರ

ಸೋಮಾರಿ ಕ್ಲಬ್

– ದೃಶ್ಯ ಒಂದು –

ತಲೆಕಾಲುಪುರ, ಕ್ಯಾಷ್‌ಕ್ರಾಪ್ ಬೆಳೆಯುವ ಸ್ಥಳ. ಲೇಬರರ್‌ನಿಂದ ಕೆಲಸಮಾಡಿಸಿಕೊಂಡು ತಿಂದುಂಡು ಸುಖವಾಗಿರುವವರ ಮುಖಂಡರು ಸ್ಥಾಪಿಸಿದ ಕ್ಲಬ್ಬು. ಇಸ್ಪೀಟು ನಿತ್ಯದ ಸೇವೆ. ಒಂದು ಗಳಿಗೆ ಒಬ್ಬನು ಚಂದಮಾಮವನ್ನು ಓದಿ ಹೇಳುತ್ತಿದ್ದರೆ ಉಳಿದವರು ಕೇಳುತ್ತಿರುವುದು ರೂಢಿ. ಪ್ರತಿಸಂಜೆಯೂ ಕ್ಲಬ್ಬಿನ ಸದಸ್ಯನು ತನ್ನ ತನ್ನ ದೈನಂದಿನ ಪರಾಕ್ರಮವನ್ನು ಹೇಳಿಕೊಳ್ಳಲು ಅಲ್ಲಿ ಅವಕಾಶ. ಬಾಂಬೆ, ಮದ್ರಾಸ್, ಬೆಂಗಳೂರ್, ಕಲ್ಕತ್ತ, ದಿಲ್ಲಿ ಸಾವಕಾರರೊಡನೆ ಅವರಿಗೆ ಸಂಪರ್ಕ. ಅವರ ಸಂಬಾಷಣೆಯೇ ಸ್ವಾರಸ್ಯಕರ.

ಅಮರನಾಥ ಸೇಟ್ – ಮೊನ್ನೆ ನಾನು ನಮ್ಮ ಎಂ.ಎಲ್.ಎ ಅನ್ನು ದಿಲ್ಲಿಗೆ ಕಳಿಸಿ ಗವರ್ನ್‌ಮೆಂಟ್ ಕೋಟಾದ ಹತ್ತು ಮಾರುತಿ ಕಾರನ್ನು ಸ್ಟೇಂಡರ್ಡ್ ರೇಟಿಗೆ ತೆಗೆಸಿಕೊಂಡು ಬಂದೆ.

ಜಯಕಾಂತ ಭಟ್ – ಭೇಷ್, ಒಂದೊಂದರ ಮೇಲೆ ಹದಿನೈದು ಹಾಕಿದರೂ 1½ ಲಕ್ಷ ನಿನಗೆ ಕೂತಲ್ಲೇ ಸಿಕ್ಕಂತಾಯ್ತು. ಹತ್ತು ಕಾರುಗಳೂ ಡಿಸ್‌ಪೋಸ್ ಆದವೇನು?

ಅಮರನಾಥ ಸೇಟ್ – ಅದನ್ನು ಈಗ ನೀನು ಕೇಳ್ತೀಯಾ? ಅವುಗಳೆಲ್ಲಾ ಬ್ಲಾಕ್‌ನಲ್ಲಿ ಸೇಲಾಗಿ ನನಗೆ ಸಹಾ ಒಂದೂ ಉಳಿಯಲಿಲ್ಲ. ಅದಕ್ಕೇ ನಾನೀದಿನ ಕೆಬರೆ ಡ್ಯಾನ್ಸ್ ಹಾಡು, ಮಟನ್ ಪಾರ್ಟಿ ಎಲ್ಲಾ ಇಡಿಸಿದ್ದು.

ಸುಮನ್‌ಲಾಲ್ – ಅದರದ್ದೇ ಏನೋ ಹಾಡು ಕೇಳಿಸ್ತಾ ಇರಬಹುದು.

(ಎಲ್ಲರೂ ಕಪಾಲಿನ ಮೇಲೆ ಕೈಯಿಟ್ಟು ಕೇಳುವರು)

ಹಾಡು (ಹಿನ್ನೆಲೆಯಲ್ಲಿ)

ಧ್ವನಿ (೧) **ಗುಲಿಸ್ತಾನ್‌ಮೆ ಜಾಕರ್ ಗುಲೇಬರ್ಗ ದೇಖಾ**
ನ ತೇರೀಪಿ ರಂಗತ್ ನತೇರೀಪಿ ಬೂ ಹೈ ॥ಪಲ್ಲ॥

ವೋ ದಿನ್, ಹವಾ ಹುವಾಥಾ ।
ಜಿಸ್‌ವಖತ್ ಪಸೀನಾ ಗುಲಾಬ್‌ಥಾ ॥

ಧ್ವನಿ (೨) **ದುಕಾನ್ ಬಂದ ಕರಕೇ ರಹಾಬೈಠಜೋ**
ತೋ ದೀ ಉಸ್ನೆ ಬಿಲ್‌ಕುಲ್ ಹಿ ಉಠಿಯಾದುಬೋ ॥

ಧ್ವನಿ (೩) **ಸೇರಕಹೇ ಸೇರಕಹೇ ಸೇರ ಬತಾಸಾ ।**
ಬುಡ್ಡಾಪೇ ಬುಡ್ಡಿ ಚಢೀ ದೇಖತಮಾಷಾ ॥

ಎಲ್ಲರೂ–ಭೇಷ್, ವಹವಾ, ಶಾಭಾಸ್।

(ಬಾಟ್ಲಿಗಳ ಆಗಮನ. ಗ್ಲಾಸುಗಳಿಂದ ಬುದು ಬುದು ನೊರೆ ಸುರಿಯುತ್ತಿದೆ. ಇಂದ್ರನಂತೆ ಸುರಾಸರೋವರಗಳನ್ನೇ ಕುಡಿದರು. ಅದರಿಂದ ಅವರ ಬಾಯಲ್ಲೂ ಬುರುಗುಬಂದು ಮಾತಾಡಲಾರದಾದರು. ಎಲ್ಲರೂ ಮಿಟಿ ಮಿಳಿ ಸ್ವರ್ಗದಲ್ಲಿ ಕಣ್ಣು ಕಣ್ಣು ಬಿಡುತ್ತಾ ತಮ್ಮ ತಮ್ಮ ಆಸನಗಳಲ್ಲೇ ತುಳಿತು ತೂಕಡಿಸಿ ತೂರಾಡುತ್ತಾರೆ. ಒಂದು ನಿಮಿಷದ ಅನಂತರ ಇದ್ದಕ್ಕಿದ್ದಂತೆಯೇ) ಸುರಾಚಾರ್ಯಶಾಸ್ತ್ರಿಗಳಿಗೆ ಸ್ಫೂರ್ತಿ ಬಂದು ಬಿಟ್ಟಿತು:–

ಸುರೆಯ ಕೆರೆಯ ಕುಡಿದು ಶಂಬರನನು ಇಂದ್ರ ಕೊಂದನು
ಸುರೆಯ ಕುಡಿದೆ ಸುರರಾದ ಸುರೇಶ ಗಡಂಗಿಟ್ಟನು
ತ್ರಿಮೂರ್ತಿಗಳು ಗಿರಾಕಿಗಳು ಶಿವನು ರುದ್ರನಾದನು.
ರಂಭೆ, ಊರ್ವಶಿಯರ ನಗ್ನ ಸೇವೆಯನ್ನು ಕಂಡನು.

(ಚಪ್ಪಾಳೆ)

: ನಾನು ಇಂದ್ರನ ಮನೆಯ ಪೌರೋಹಿತ್ಯಕ್ಕೆ ಹೋಗಿದ್ದೆನು. ಅವನು ಆಸ್ತಿ ಮಾಡಿದ್ದೆಲ್ಲಾ ದೇವತಾ ಪ್ರಜೆಗಳನ್ನು ವಂಚಿಸಿ. ಕಲಾಸುಂದರಿಯರು ಬಂದರೆ ಅವರು ಹಾಗೇ ಕುಣಿದು ಹೋಗಬೇಕು. ರುದ್ರನ ಮನೆಯಲ್ಲಾದರೆ ಬಂಗಾರದ ಬಿಸ್ಕತ್ತುಗಳಾದರೂ ಸಿಕ್ಕುತ್ತಿದ್ದವು. ಈ ಸ್ವರ್ಗಸುಂದರಿ ಯರೇನೂ ಕಡಿಮೆಯವರಲ್ಲ. ಸುರಾಚಾರ್ಯ ಬೃಹಸ್ಪತಿಯಾದ ನಾನು ಇವರಿಗೆ ವೇದೋಕ್ತಮಂತ್ರ ಪುಷ್ಪಗಳನ್ನು ದಯಪಾಲಿಸಬೇಕೆಂದು ಆಗ್ರಹ. ಈ ಘೂಲನ್ ದೇವಿಯರು ದೇವಲೋಕದ ಚುನಾವಣೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಾರೆ. ಇವರ ತತ್ವವಾದರೋ ಆರು ದೋಸೆ ಕೊಟ್ಟರೆ ಅತ್ತೆಯ ಕಡೆ, ಮೂರು ದೋಸೆ

ಕೊಟ್ಟರೆ ಸೊಸೆಯ ಕಡೆ. ಇವರಿಗೆ ವೇದಮಂತ್ರವನ್ನು ಕೇಳುವ ಅಧಿಕಾರ ಕೂಡಾ ಇಲ್ಲ. ಆದರೂ ಇವರ ಶ್ರೀಮಂತಿಕೆಯ ಗರ್ವಕ್ಕೆ ನಾನು ಹೆದರಬೇಕಾಯಿತು ಒಮ್ಮೆ.

ದಿಗಂಬರಕಾಮತ್ : ಆಗ ತಾವು ಯಾವ ಉಪಾಯ ಮಾಡಿದಿರಿ ಶಾಸ್ತ್ರಿಗಳೇ?

ಶಾಸ್ತ್ರಿಗಳು : ಪಾಪ ಪುಣ್ಯಗಳನ್ನು ಲೆಕ್ಕಿಸದೆ ಧನಾಶೆಗಾಗಿ, ರಾಕ್ಷಸ ಬಂದರೂ ಯಾರಿಗೂ ಹೇಳದೆ ಅವನನ್ನು ಒಂದು ರಾತ್ರಿಯ ಮಟ್ಟಿಗಾದರೂ ಸುರೆ ಎಂದು ಹೆಂಡವನ್ನು ಕುಡಿಸಿ ತಲೆಕೆಡಿಸಿ ಅವನು ಪೋಲೀಸರ ಕೈಗೆ ಸಿಕ್ಕಿದರೂ ಬಿಡಿಸಿಕೊಡುವ ಇವರಿಗೆ ಮುದ್ದರೆಯಲೇ ಬೇಕೆಂದು ಸತ್ಯನಾರಾಯಣ ಪೂಜೆ ಮುಗಿಯುತ್ತಾ ಬಂದಾಗ ಮ್ಲೇಚ್ಛಭಾಷೆಯಲ್ಲಿ ನಾನೇ ಅವರಿಗಾಗಿ ಒಂದು ಮಂತ್ರವನ್ನು ತಯಾರಿಸಿದೆ. ಇಂದ್ರಾದಿಗಳ ತಲೆಯನ್ನೂ ಕೆಡಿಸುವ ಇವರಿಗಿನ್ನೇನು ಮಾಡಬೇಕು? ನೀವೇ ಹೇಳಿ. ಆ ಮಂತ್ರ ಹೀಗಿತ್ತು:

ಇಂದೊಬ್ಬ ಬಂದ ಕಡು ಚೆಲ್ವನಂದ
ಪುರಾಕೃತಾ ಮಾಡಿದಾ ಪುಣ್ಯದಿಂದಾ
ನಾನವನ ಬಲ್ಲೆ। ಅವನನ್ನ ಬಲ್ಲ।
ಸಮಂಜಸಾರೂಪ ಖಲ್ವಾಟ ಚೆಲ್ವ॥
ಕಬ್ಬಿಂಬ ಮಧು ಜಠರೇ
ಮಲ್ಲಿಗೆ ಜಾಜಿ ಮೈಜುಂ
ಆಹಾ ಆಹಾ ಕುಳಿತವರು ನೋಡಿರೆಲ್ಲಾ!

ಇದನ್ನು ಕೇಳಿ ಆನಂದೋದ್ರೇಕದಿಂದ ವೇಶ್ಯಾರತ್ನ ರಂಭೆಯು ತನ್ನ ಕೊರಳಿನಲ್ಲಿದ್ದಮುತ್ತಲೀ ಸರವನ್ನೇತೆಗೆದು ನನ್ನ ಕೊರಳಿಗೆ ಹಾಕಿ ಬಿಟ್ಟಳು. ಕ್ಲಬ್ಬಾಧಿಪತಿ ಇಂದ್ರನಿಗೆ ಗೊತ್ತಾದ ಕೂಡಲೇ ಅವನ ಕಣ್ಣು ಕೆಂಡಗಳಾದವು. ಆದರೆ ಅವನೇನು ಮಾಡ್ಯಾನು ಪ್ರತಿಯೊಂದಕ್ಕೂ ಸೆಕ್ರೆಟರಿಯಾದ ನನ್ನನ್ನೇ ಅವಲಂಬಿಸಬೇಕು. ಒಂದು ಪತ್ರ ಬರೆಯುವುದಕ್ಕೆ ಕೂಡಾ. ನಾನು ಬರೆಯಬೇಕು ಅವ ಸಹಿ ಹಾಕಬೇಕು. ಪುಣ್ಯ ಅವನು ಇಂದಿನ ಸಭೆಯಲ್ಲಿ ಇಲ್ಲ. ಅದಕ್ಕೇ ನಮಗೆಲ್ಲಾ ಸ್ವಾತಂತ್ರ್ಯ.

ವಸಂತ ಕುಲಕರ್ಣಿ : ಈಗ ನಮ್ಮ ಕ್ಲಬ್ಬಿಗೆ ಅಟ್ಯಾಚ್ ಆದ ಲೇಡೀಸ್ ಸೋಮಾರಿ ಕ್ಲಬ್ಬಿನಲ್ಲಿ ಮೊನ್ನೆ ಮೊನ್ನೆ ನಡೆದ ಭರತನಾಟ್ಯ ಎಂದು ಕರೆಯಲಾದ ಸುರತನಾಟ್ಯದ ಸುದ್ದಿಯನ್ನೇ ಕೇಳಿದಂತಾಗುತ್ತದೆ ಶಾಸ್ತ್ರಿಗಳೇ!

ದಿಗಂಬರ ಕಾಮತ್: ನಿಜವಾಗಿ ನನಗೂ ಹಾಗೇ ಕಾಣುತ್ತದೆ. ಹೇಳಿ ಕೇಳಿ ಇದು ಬೊಂಬಾಯಿಯ ರೆಡ್‌ಲೈಟ್ ಏರಿಯಕ್ಕೆ ಅಫಿಲಿಯೇಟಾದ ಕ್ಲಬ್ಬು. ನಾವು ಸುರ ಸುರೆಯರಿಗೇನು ಕಡಿಮೆ? ನಮ್ಮ Black Money racing Centre ಅಂದರೇನೇ ಈ ಪಂಚಾದಿ ಶತತಾರಾ ಹೋಟೇಲುಗಳು. ನಮ್ಮ ಬಿಸಿನೆಸ್‌ಪ್ಲಾನ್ ಹ್ಯಾಚ್ ಔಟ್ ಆಗೋದೇ ಇಲ್ಲಿ.

ಶಾಸ್ತ್ರಿಗಳು : **ಸಾಟೋಪಕೂಟ ಕಪಟಾನೃತಗಳಾಗಾರ**
ಶಾಠ್ಯಾತ್ಮಕರ ಬೀಡು ರತಿರಹಸ್ಯ ಪ್ರೆಸ್ಸು
ವೇಷದಿಂದಲೆ ವೇಶ್ಯೆ, ರಾಜಕಾರಣ ಚತುರ
ಮೋಸದಿಂದೇ ಎಂಬುದೆಲ್ಲರಿಗು ಗೊತ್ತು–

ಆದರೆ ನಿನಗೆ ಮಾತ್ರ ಗೊತ್ತಿಲ್ಲವೇನೋ!

ಕಾಮತ್ : ದೇವಲೋಕದ ಪತ್ರಿಕೆಗಳಲ್ಲಿ ಬಾರದೆ ಇರುವ ಸುದ್ದಿ ಸಮಾಚಾರಗಳಿವೆಯೇ? ನೀವೇ ಹೇಳಿ.

ಶಾಸ್ತ್ರಿಗಳು : ಅದು ನಿಜ. ಈಗ ರಾತ್ರಿ ೧೨ ಆಯಿತು. ಇನ್ನು ಮನೆಗಳಿಗೆ ಹೋಗೋಣ.

(ಎಲ್ಲರೂ ಹೋಗುವರು)

– ದೃಶ್ಯ ಎರಡು –

(ಮಾಮೂಲಿನಂತೆ ಸೋಮಾರಿ ಸದಸ್ಯರು ಗಜಗತಿಯಿಂದ ಒಬ್ಬೊಬ್ಬರಾಗಿ ತಂತಮ್ಮ ವಾಹನಗಳಲ್ಲಿ ಬಂದಿಳಿದರು. ಇಬ್ಬರು ಸದಸ್ಯರು ಕ್ಲಬ್ಬನ್ನು ಹೊಗುವಾಗಲೇ ಕರಾಚೂರಿ ನಂಜರಂತೆ ಗಟ್ಟಿಯಾದ ದನಿಯಲ್ಲಿ ವಾಗ್ವಾದ ಮಾಡುತ್ತ ಬಂದರು.)

ಸುಮನ್‌ಲಾಲ್ : ಸೂತ್ರಧಾರನಾದ ನಾನು ಬಂದರೂ ಮಿಕ್ಕ ಸದಸ್ಯರ ಸುಳಿವೇ ಇಲ್ಲವಲ್ಲ!

ಕುಲಕರ್ಣಿ : ನಿನಗ್ಯಾರೋ ಸೂತ್ರಧಾರನ ಪಟ್ಟಕಟ್ಟಿದವರು? ಇದು ಫ್ರೀ ಕ್ಲಬ್ಬು– Open Access Club. ಇಲ್ಲಿ ಯಾರಿಗೆ ಯಾವ ನಿರ್ಬಂಧವೂ ಇಲ್ಲ. ಎನ್ನುವುದು ಗೊತ್ತಿಲ್ಲವೇ? ಮಿನಿಸ್ಟರರಿಂದ ಕನಿಷ್ಠರವರೆಗೂ ಇಲ್ಲಿ ಅವಕಾಶವಿದೆ. ಇದು ಕಮ್ಯುನಿಸ್ಟಲ್ಲ, ಕೆಪಿಟಲಿಸ್ಟಲ್ಲ, ಸೋಶಲಿಸ್ಟಲ್ಲ–ಸರ್ವಸೇವಾ ಸಂಘ. ಯಾರ ಏನನ್ನಾದರೂ ಲಪಟಾಯಿಸುವ ಗತ್ತುಗಾರಿಕೆ ಇಲ್ಲಿ ಯೋಜನಾಬದ್ಧ–ವಾಗಬಹುದು. I.A.S ನಿಂದ I say yes ಎಂಬಲ್ಲಿಯವರೆಗಿನ ನೌಕರರೂ ಇದ್ದಾರೆ. "ಕಾಂಚನಾ ತ್ಕಾರ್ಯಸಿದ್ಧಿ" ಕೇಳು ಬೇಕಾದರೆ ಶಾಸ್ತ್ರಿಗಳನ್ನು ಅವರವರ ಕ್ಷೇತ್ರದಲ್ಲಿ ಅವರವರು ತಿಂದದ್ದೆಲ್ಲಾ ಅವರವರದ್ದೇ. ಹಾಜಿಮಸ್ತಾನ್ ಹೇಳಿಲ್ಲವೇ? "ಜಿಸ್ ಕಿ ಲಾಠಿ ಉಸ್ಕಿಭೈಂಸ್" ಇಲ್ಲಿಯ ಸುರೆಯೆಲ್ಲಾ ರಾಮಕೃಷ್ಣ ಗೋವಿಂದ ತೀರ್ಥ. ಇಲ್ಲಿಯ ಗಾಯತ್ರಿಯನ್ನು ಶಾಸ್ತ್ರಿಗಳಿಂದ ಬೇಕಾದರೆ ಕೇಳಿ ತಿಳಿದುಕೋ.

ಶಾಸ್ತ್ರಿಗಳು : ಕೇಳಿ

ತೀರದ ತೋರದ ಹಾಳು ಸಂಸಾರದ
ಮೀರಿದ ಭಾರಕ್ಕೆ ಎಡೆಯಿಲ್ಲ
ಯಾರ ಮನೆಯವರ ಕೈಹಿಡಿದು ಕುಣಿದರೂ
ಬ್ಯಾಲೆ ಎಂದೆಂಬರು, ಜನರೆಲ್ಲ!

ತಕ್ರ ಚಂದ್ರಸೇನ್ : ಇದು ನಮ್ಮ ಹಲವಾರು ಪಾರ್ಲಿಮೆಂಟಿಗರಿಗೂ ಮಿನಿಸ್ಟರುಗಳಿಗೂ ಆಪ್ಯಾಯಮಾನವಾದೀತು. ಅವರಲ್ಲಿ ಹಲವಾರು ಜನರು ಸ್ವಿಸ್ ಬ್ಯಾಂಕಿನಲ್ಲಿಟ್ಟ ಹಣ ೭೦೦೦ ಕೋಟಿ ಎಂದು ರಾಷ್ಟ್ರಪತಿ ಹೇಳಿದ್ದಾರೆ.

ಕಾಮತ್ : ಅದು ಅವರಿಗೆ ಶಕ್ಯವಾದದ್ದು ಹೇಗಪ್ಪಾ?

ಸೇನ್ : ಅವರು ನಾವು ಮಾಡುತ್ತಿರುವುದನ್ನೆ ಬಹುದೊಡ್ಡ ಪ್ರಮಾಣದಲ್ಲಿ ಮಾಡುತ್ತಾ ಹೋದರು.

ಶಾಸ್ತ್ರಿಗಳು : ಹೌದು,

ಆದಿ ಮಧ್ಯಾಂತಹೀನಾಯ
ಲಂಚಾನಂತಾಯ ತೇ ನಮಃ॥
ಲಂಚಕ್ಕೆ ಮೊದಲಿಲ್ಲ, ಲಂಚಕ್ಕೆ ಕೊನೆಯಿಲ್ಲ
ಪರ್ಮಿಟ್ಟು ಲೈಸೆನ್ಸು ಕಾಂಟ್ರಾಕ್ಟುಗಳ್।
ವಂಚನಾವೈಭವದ ಮೂಲ ಸೆಲೆಗಳು ಶಾಖೆ
ಕೋಟಿ ಕೋಟಿಗಳಷ್ಟು ಉಪರೂಪಗಳ್॥
ಲಂಚವೇ ಅಭಿವೃದ್ಧಿ ಯೋಜನಾಫಲವಯ್ಯ
ಲಂಚ ಭೂಕೈಲಾಸ ಸೀಟುದಾತ
ಲಂಚ ತೆರಿಗೆಗೆ ಕೂಡ, ದಾನ ಹಿಡಿಯಲು ಕೂಡ
"ಉದ್ಧಾರ"=ಕೀಳುವುದು ಬೇರುಸಹಿತ"

ದಂಡಿ ಹೇಳಿದ್ದ ಹಿಂದೆ, ಕಲಿಯುಗದಲ್ಲಿ ಕಡಿದು ತಿಂದರೆ ಕೂಡಾ ಪಾಪವಿಲ್ಲ ಎಂದು.

ಒಮ್ಮೆ ಭಾರತವು ಕಲಹರಡಿಗಿಂತ ಕನಿಷ್ಠ ಆಡಳಿತಕ್ಕೊಳಗಾದಾಗ, ಧೂಮಿನಿ, ಗೋಮಿನಿ, ನಿಂಬವತಿ, ನಿತಂಬವತಿ ಎಂಬ ನಾಲ್ವರು ನಾಲ್ಕು ಜನ ಅಣ್ಣತಮ್ಮಂದಿರಿಗೆ ಮದುವೆಯಾಗಿದ್ದರಂತೆ. ಆ "ನಂದೋ ರಾಯನ" ದರಬಾರನ್ನು ನಾಯಿನರಿ ತಿಂದುಕೊಂಡು ಹೋದಾಗ ಆ ಸೋದರರು ಯಾವ ಉದರನಿರ್ವಹಣದ ಉಪಾಯವನ್ನೂ ಕಾಣಲಾರದೆ– ಏಕೆಂದರೆ ಅವರು ಲಂಚ ತಿನ್ನುತ್ತಿರಲಿಲ್ಲ–ಸಾಲಾಗಿ ಒಬ್ಬಳನ್ನಾದ ಮೇಲೆ ಇನ್ನೊಬ್ಬಳಂತೆ ತಮ್ಮ ತಮ್ಮ ಹೆಂಡಂದಿರನ್ನು ಕಡಿದು ಮೂರು ದಿನ ಊಟ ಮಾಡಿ ಕಳೆದರು. ನಾಲ್ಕನೆಯವನು ಮಾತ್ರ ತನ್ನ ಹೆಂಡತಿಯನ್ನು ಕರೆದುಕೊಂಡು ರಾತ್ರೋ ರಾತ್ರಿ ಪರದೇಶಕ್ಕೆ ಪಲಾಯನ

ಮಾಡಿದನಂತೆ! ನಾವಿಲ್ಲಿ ಆ ಬಡಯುವಕರ ಸ್ಥಿತಿಗೇ ಇಳಿಯುತ್ತಿದ್ದೆವು. ಆದರೆ ದೇವರ ದಯೆಯಿಂದ ಚೋರಗುರು ಮೂಲದೇವ ಕೊಟ್ಟ ಶಿಕ್ಷಣದ ಬಲದಿಂದ ಅಕ್ಕನದನ್ನಾದರೂ ಅಕ್ಕಿಯಷ್ಟನ್ನೋ ಗೋದಿಯಷ್ಟನ್ನೋ ಗುಂಬಳ ಕಾಯಿಯಷ್ಟನ್ನೋ ನಯವಾಗಿ ಎತ್ತಿಹಾಕಲು ಈ ಕ್ಲಬ್ಬಿನ ಆಶ್ರಯದಲ್ಲಿ ಕಲಿತು ಸೊನ್ನೆಯಿಂದ ಬೇಕಾದರೂ ಲಾಟರಿ ಹಾಕಿ ದುಡ್ಡು ಗಳಿಸಲು ಕಲಿತು ನಿಷ್ಕರ್ಮಯೋಗವನ್ನು ಹಿಡಿದಿದ್ದೇವೆ.

ಅಕೌಂಟಂಟ್

ತಿಂಗಳಾಯ : ಅಲ್ರೀ ಶ್ರೀಮಂತಿಕೆ ಯಾರಿಗೆ ಹೇಗೆ ಬರುತ್ತೆ ಅಂತೀರಿ 'ಲೆಕ್ಕಾಚಾರ' ಚೌಕ ಶುದ್ಧ ಇಡುವ ಕಲೆಗೊತ್ತಿರುವವಗೆ; ದಾಖಲೆಗಳನ್ನು ಸೃಷ್ಟಿಸಿ ಸಕಾಲಕ್ಕೆ ಸರಿಯಾಗಿ ಒದಗಿಸುವವನಿಗೆ, ಸ್ವಾಮೀ, ನಾನಿಲ್ಲದಿದ್ದರೆ ನಿಮ್ಮನ್ನು ಯಾರೂ ಯಾವಾಗಲೂ ರಕ್ಷಿಸಲಾರರು. ನನ್ನ ಕೃತಕ ಲೆಕ್ಕದಿಂದ ಈ ಕ್ಲಬ್ಬು ಬದುಕಿದೆ. ಮೊನ್ನೆ ರೋಡ್ ಮಾಡಲಿಕ್ಕೆ, ಟಾರ್ಚರ್ ಕನ್‌ಫ್ಲೆಶನ್ ತೆಗೆದುಕೊಳ್ಳಲಿಕ್ಕೆ ಬಂದಿದ್ದ ಒಬ್ಬ ಬಡೆಸಾಬ. ಅವನಿಗೆ ಸಲಾಮು ಹಾಕುವುದರೊಳಗೇ ಅವನು ಕಾಳಿಂಗನಂತೆ ಹೆಡೆಯತ್ತಿ ಪೂತ್ಕರಿಸುತ್ತಿದ್ದ. ಕೂಡಲೇ ಒಳಗೆ ಹೋಗಿ ಎರಡು ಲಕ್ಷರೂಪಾಯಿಗಳನ್ನು ತಂದುಕೊಟ್ಟೆ. ಆಸಾಮಿ ಬುಸುಗುಟ್ಟುವುದನ್ನು ನಿಲ್ಲಿಸಿ, ಕಣ್ಣು ಮುಚ್ಚಿಕೊಂಡು, ನಾನು ತಮಾಷೆಗಾಗಿ ಕೊಟ್ಟ ಖಾಲಿಬಿಳಿಹಾಳೆಯ ತುದಿಯಲ್ಲೂ ಸಹಿಮಾಡಿಬಿಟ್ಟ! ಫಿಲ್ಮೋತ್ಸವಕ್ಕಿಂತಲೂ ಲಂಚೋತ್ಸವ ಮೇಲು ಅಲ್ಲವೇ?

ಶೇಟ್ : ಅವನು ಆಗಲೂ ಸಹಿ ಮಾಡದೆ ಮತ್ತೆರಡು ಲಕ್ಷ ಬೇಕೆಂದು ಧರಣಿ ಕುಳಿತು ಬಿಟ್ಟಿದ್ದರೆ ನೀನೇನು ಮಾಡುತ್ತಿದ್ದಿ?

ತಿಂಗಳಾಯ : ಅವನ ಸಹಿಯನ್ನು ಕಲಾನೈಪುಣ್ಯದಿಂದ ನಾನೇ ಎಲ್ಲಾ ಪೇಪರುಗಳ ಮೇಲೂ ಹಾಕಿ ಬಿಡುತ್ತಿದ್ದೆ ಮತ್ತು ಅವನ ಕೆನ್ನೆಗೆರಡು ಕೊಟ್ಟು How could you enter our club, which is private, without previous intimation and without bringing your pass port size photo and Identity card? ನೀನು ಕ್ರಿಮಿನಲ್ ಇರಬಾರದೇಕೇ? ಎಂದು ಸವಾಲು ಹಾಕಿ ಕೂಡಲೇ ಪೋಲೀಸ್‌ಸ್ಟೇಷನ್ನಿಗೆ ಫೋನ್ ಮಾಡ್ತಿದ್ದೆ. ಅವನನ್ನ ತನಿಖೆಯಿಲ್ಲದೆ ಹತ್ತು ವರ್ಷ ಜೈಲಿನಲ್ಲಿ ಕೊಳೆಯಿಸುತ್ತಿದ್ದೆ.

ಕಾಮತ್ : ನಿನ್ನ ಮಾತನ್ನು ಯಾರಯ್ಯಾ ಕೇಳೋರು?

ತಿಂಗಳಾಯ : ಅಯ್ಯೋ, ನಿಮಗಿಷ್ಟೂ ಗೊತ್ತಿಲ್ಲವೆ – ಹಣಕಂಡರೆ ಹೆಣ ಬಾಯ್ಬಿಡುತ್ತದೆ ಎನ್ನೋದು?

"ಕಾಯ್ಕೊಟ್ರೆ ದೇವ್ರು ಪರ್ಚಂಡ ।
ಕಾಸ್ಕೊಟ್ರೆ ಮುನ್ಯಂದು ಯಂಡ ।"

ಕೆಲ ಆಡಿಟರಿಗೆ ಕೆಲ ಜಜ್ಜರಿಗೆ ಸಹಾ ಬಿರ್ಲಾದಿಗಳು ಲಂಚ ನೈವೇದ್ಯಮಾಡಿ ವರ್ಷಕ್ಕೆ ೨೦೦–೩೦೦ ಕೋಟಿ ನಿವ್ವಳ ಲಾಭ ಮಾಡಿಕೊಳ್ಳುತ್ತಿರುವಾಗ, ಇನ್ನು ಅಡ್ವೊಕೇಟರ ಮಾತನ್ನು ಹೇಳಬೇಕೇ? ಜಸ್ಟಿಸ್ ಭಗವತಿಯವರು ಇತ್ತೀಚೆಗೆ ಹೇಳಿದ್ದಾರೆ, ಕೇವಲ ಸ್ವಾರ್ಥಕ್ಕಾಗಿ ದುಡಿವವರಲ್ಲಿ ಕೆಲ ಅಡ್ವೋಕೇಟರು ಅಗ್ರಗಣ್ಯರು, ಎಂದು. ಅವರ ನ್ಯಾಯವಾದವೇ ನಮ್ಮ ಕ್ಲಬ್ಬಿನ ನ್ಯಾಯವಾದವು. ಸತ್ಯಹೇಳಿದರೆ ಮರುಕ್ಷಣದಲ್ಲಿ ಗೊಯಂಕನ ಆಫೀಸಿನ ಮೇಲೆ ದಾಳಿಯಾದಂತೆ ನಮ್ಮ ಕ್ಲಬ್ಬಿನ ಮೇಲೂ ದಾಳಿಯಾದೀತು! ಪರೋಪಕಾರವು ಮೈಮೇಲೆ ಬರುತ್ತದೆ. ಅದುದರಿಂದ ಪರಪ್ರತಾರಣವೇ ರಾಜಕಾರಣ ಹೇಳಲಿಲ್ಲವೇನು ಕಾಳಿದಾಸ? ಮೋಸ ನಂಗ್ಮಾಡ್‌ಬೇಕಂತ್ ಬೇಡ್ತಜ್ಜಗತ್ತು' ಎಂದಿಲ್ಲವೇ ಹೆಂಡ್ಕುಡುಕರತ್ನ?

ಸುಮನ್‌ಲಾಲ್ ಶೇಟ್ : ಅದೆಲ್ಲಾ ಸರಿ. ನೀನು ಆ ಎರಡು ಲಕ್ಷಾನ ಎಲ್ಲಿಂದ ತಂದಿಟ್ಟಿದ್ದಿ?

ತಿಂಗಳಾಯ : ಒಂದೇ ಒಂದು ಸ್ಟೆನ್‌ಗನ್ ತೋರಿಸಿ ಬ್ಯಾಂಕ್ ಆಫ್ ಇಂಡಿಯಾ ಕ್ಯಾಷಿಯರನಿಂದ. ಅದು ನಿಜವಾಗಿ ಸ್ಟೆನ್ನೂ ಆಗಿರಲಿಲ್ಲ. ಗನ್ನೂ ಆಗಿರಲಿಲ್ಲ ಎಲ್ಲಾ ಫೇಕ್. ಆ ಪ್ರಾಣಿಗೇನು ಗೊತ್ತು? ಹೆದರಿ ಥೈಲಿನೇ ಕೊಟ್ಟು ಬಿಟ್ಟ! ನಾನು ನಿಮಿಷಾರ್ಧದಲ್ಲಿ ಸ್ಕೂಟರ್ ಕುದುರೆಯೇರಿ ಗಲ್ಲಿಯಲ್ಲಿ ಮಾಯವಾಗಿ ಬಿಟ್ಟೆ!

ಶೇಟ್ : ಬಿನ್ ಬಂಡವಾಳದ ದುಡಿಮೆ ಎಂದರೆ ಹೀಗಿರಬೇಕು. ಭೇಷ್! ಸರಿ ಬಿಡು. ನಾಳಿನ ಆಟ ಯಾವುದು? ಚದುರಂಗ ಅಲ್ಲವೆ? ನಡೆಯಿರಿ ಈಗ ರಾತ್ರಿ ಬಂದಾಯಿತು!

(ಎಲ್ಲರೂ ಹೋಗುತ್ತಾರೆ)

– ದೃಶ್ಯ ಮೂರು –

(ಮೂರನೆಯ ದಿನದ ಸಂಜೆ ಚದುರಂಗದಾಟ. ಯಥಾ ಪ್ರಕಾರ ಐದು ಜನ ಸದಸ್ಯರು ಮೊದಲು ಹಾಜರಾದರು. ತಡಮಾಡಲೇ ಇಲ್ಲ. ಆಟಕ್ಕೆ ಆರಂಭಿಸಿದರು)

ತರ್ಕಚಂದ್ರಸೇನ್ : (ಆಟದ ನಡುವೆ) ಅಲ್ಲಯ್ಯಾ ಶೇಟ್, ನಾನು ರಾಜನ ಶಹಾ ಕೊಟ್ಟಿರುವಾಗ ನಿನ್ನ ಕುದುರೆ ಹೇಗೆ ಮುಂದಿನ ಮನೆಗೆ ಹೋಗತ್ತೇ?

ಸುಮನ್‌ಶೇಟ್ : ರಾಜನ ತಲೆ ಮೇಲೆ ಹಾರಿ ಹೋಗತ್ತೆ. ಕುದುರೆ ಹಾರಿಧಾಂಗ ರಾಜ ಹಾರಬಲ್ಲನೇ? ಒಂಟೆ ಕೂಡಾ ಹಾರಲಾರದು. ರಾಜಕೀಯದ ಹಾರಾಟ ಹೀಗೇ ನಡೆಯೋದು. ಹಿಂದಿನ ರಾಜ, ಮಂತ್ರಿ, ಸೇನಾ ಪತಿಗಳಿವರಲ್ಲ. ಅವರು ಹೆಚ್ಚಾಗಿ ನಡೆದುಹೋಗಿ ನೆಲದ ಮೇಲೆ ನಿಂತೇ ಯುದ್ಧ ಮಾಡುತ್ತಿದ್ದರು. ಈಗ Days of Areal warfare ಆದುದರಿಂದ ನನ್ನ ಕುದುರೆಯು ನಿನ್ನ ರಾಜನ ತಲೆಯು ಮೇಲೆ ಹಾರಿ ಮುಂದಿನ ಮನೆಗೆ ಹೋಗಬಲ್ಲುದು. ಯಾರ ತಲೆಯನ್ನು ಯಾರು ಯಾವಾಗ ಬೇಕಾದರೂ ಹಾರಿಸಬಲ್ಲರು. ಇದನ್ನೇ The Art of Terrorism ಎನ್ನುತ್ತಾರೆ.

ಸುರಾಚಾರ್ಯಶಾಸ್ತ್ರಿಗಳು : ನೀವು ಆಡುತಿರೋದು ಚದುರಂಗ, ಹೇಳ್ತಿರೋದು ಬೀದಿರಂಗ! ಬೀದಿಗಾಳೆಗ ನಡೆಯದ ನಗರವೇನೋ ಏಶಿಯದಲ್ಲಿಲ್ಲ ಎಂಬುದು ನಿಜವಾದರೂ ನಮ್ಮ ಸೋಮಾರಿ ರಾಜ್ಯದಲ್ಲಿ ಕತ್ತಿಯನ್ನಲ್ಲ, ಬಂದೂಕನ್ನಲ್ಲ–ಒಂದು ಸೂಜಿಯನ್ನೂ ಎತ್ತಬಾರದೆಂಬ ಮನೋ ಧರ್ಮ ಬೆಳೆಸಿಕೊಂಡವರು ಆಕಾಶ ಯುದ್ಧದ ಮಾತಾಡುತ್ತಿರುವುದು ಚೋದ್ಯ.

ಕುಲಕರ್ಣಿ : Sip and gossip ಎಂಬುದೇ ಸೋಮಾರಿ ಧರ್ಮ. ನಮಗೆ ಕೆಲಸ ಮಾಡಲು ಇಷ್ಟವಿಲ್ಲ. ಮಾತಾಡಲು ಅತಿ ಚಾಪಲವಿದೆ.

ನಮ್ಮ ಮಾತು ಮುಗಿಲು ಮುಟ್ಟಬೇಕು, ನೆರೆಹೊರೆಯವರನ್ನಲ್ಲ ಸ್ವದೇಶೀಯ ಪರ ದೇಶಿಯರನ್ನೂ ಅಲ್ಲ.

Idleness is the greatest ideal
Idleness and Virtue are twin brothers,
An Idler is the Lord of nothing

not even of himself!

ಶಾಸ್ತ್ರಿಗಳು : ನಿಜ, ನನಗೀಗ ಒಂದು ದಾಸರ ಪದ ನೆನಪಾಗುತ್ತಿದೆ; ಅದಾವುದೆಂದರೆ ಹಾಕಿ ತಾಳಾನ.

ಇಕ್ಕಲಾರದ ಕೈ ಎಂಜಲು । ಚಿಕ್ಕ
ಮಕ್ಕಳು ಅಳುತಾವೆ ಹೋಗೋ ದಾಸಯ್ಯ ॥
ಪಕ್ಕದ ಮನೆಗ್ಹೋಗು। ಅಕ್ಕಂದಿರಿದ್ದಾರೆ
ಸಿಕ್ಕಿದವರಿಗೆಲ್ಲಾ। ಭಿಕ್ಷಾ ನೀಡುವರು ॥
ಸೊಕ್ಕಿದವರಿಗಿಕ್ಕಿ। ನರಕಕ್ಕೆ ಹೋಗುವ
ದುಃಖವ ನಾ ತಂದು ಕೊಳೆನಯ್ಯ ॥ಇಕ್ಕ॥

ಒಬ್ಬ ಗೃಹಿಣಿ ನಾನು ನಮ್ಮಕ್ಲಬ್ಬಿಗೆ ದೇಣಿಗೆ ಕೇಳಹೋದಾಗ ಈ ಪದ್ಯ ಹೇಳಿದಳು. ಅವಳ ಕೈ ಎಂಜಲಂತೆ, ಎಂಜಲು ಕೈಯಿಂದ ಕೊಡಬಾರದಂತೆ ಅವಳಿಗೆ ಡಜನ್ ಗಟ್ಟಲೆ ಮಕ್ಕಳಂತೆ, ಅವುಗಳಿಗೆಲ್ಲಾ ಹಾಕಿದ ಮೇಲೆ ನಮಗೆ ಕೊಡಲು ಏನೂ ಉಳಿಯವುದಿಲ್ಲವಂತೆ. ಆದ್ದರಿಂದ ಬಿನ್ ಬಂಡವಾಳದ ಮೇಲೆ ನಮ್ಮ ಕ್ಲಬ್ಬು ನಡೆಯಬೇಕಾಗಿದೆ. ಇದಕ್ಕಾಗಿ ಒಂದು ಬ್ಯಾಂಕಿನಿಂದ ಸಾಲತರುವುದು. ಅದನ್ನು ತೀರಿಸಬೇಕಾದ ವಾಯದೆ ಬಂದಾಗ, ಮತ್ತೊಂದು ಬ್ಯಾಂಕಿನಿಂದ ಸಾಲತಂದು ತೀರಿಸಿ ಬಿಡುವುದು. ಹೀಗೆ ಮಾಡುತ್ತಾ ಹೋದರೆ ಕ್ಲಬ್ಬಿನ ಖರ್ಚಿಗೆ ಕೊರತೆಯಾಗುವುದೇ ಇಲ್ಲ. ಈ ಉಪಾಯಕ್ಕೇನೆನ್ನುತ್ತೀರಿ?

ಶೇಟ್ : ಇದು ಬಹಳ ಜಾಣತನದ ಉಪಾಯ, ಭೇಷ್. ಸರ್. ಎಂ.ವಿಶ್ವೇಶ್ವರಯ್ಯನ ತಲೆಗಿಂತ ನಿಮ್ಮ ತಲೆಗೇ ಬೆಲೆ ಹೆಚ್ಚು.ಇನ್ನು ಲೋಕೋಪಕಾರದ Service Motto ವನ್ನೂ ನಿಭಾಯಿಸಬಹುದು. ಹಾಗೇ ಮದುವೆ ಮೇಳ, ತಾಳೀಭಾಗ್ಯ, ಭಾಗ್ಯಜ್ಯೋತಿ, ಬಡವರಿಗೆ ವಸತಿ ನಿರ್ಮಾಣ, ಫ್ಯಾಮಿಲಿ ಪ್ಲಾನಿಂಗು, ಸಂತಾನದಾನ, ಹಾಲುಹಂಚೋದು, ಬಸ್‌ಸ್ಟಾಪ್

ನಿರ್ಮಾಣ, ಐಕ್ಯಾಂಪು, ಇಯರ್‌ಕ್ಯಾಂಪು, ನೋಸ್‌ಕ್ಯಾಂಪು, ಬೋರ್‌ವೆಲ್ ತೆಗೆಸೋದು, ಕಾಡು ಬೆಳೆಸುವುದು, ಪುಕ್ಕಟೆ ಕ್ಷೌರಾಲಯ ನಡೆಸೋದು, ಕಂಬಳಿ ಸೇವೆ, ಸೀರೇ ಸೇವೆ, ಕುಬಸದ ಸೇವೆ, ಸಂಚಾರಿ ಡಾಕ್ಟರ್ ಸೇವೆ, ಮಿಡ್‌ಡೇ ಮೀಲ್ಸ್‌ಸೇವೆ, ವಿಧವಾಪತಿ ಸಂಯೋಜನ ಸೇವೆ, ನಿರುದ್ಯೋಗಿಗಳಿಗೆ ಸೋಷಲಿಜಂ ಜಾರಿಗೆ ತರೋದನ್ನು (ಅರ್ಥಾತ್ ಚೋರ ವಿದ್ಯೆಯನ್ನು) ಕಲಿಸುವ ಸೇವೆ, ಅಪಾಯಿಂಟ್‌ಮೆಂಟ್ ಕೊಡಿಸೋ ಕಮಿಶನ್ ಏಜೆನ್ಸಿ ಸೇವೆ, ಮಹಾಧಿಕಾರಿಗಳ ವೇಷ ಧರಿಸಿ ಹಣ ಕೀಳುವ ಸೇವೆ, ಪ್ರಮಾಣಪತ್ರವಿತರಣದ ಏಜೆನ್ಸಿ ಸೇವೆ ಹಾಗೂ ಸರ್ವಸೇವೆ ಅರ್ಥಾತ್ ಹೆಣ ಹೊರಿಸಿ ಸ್ಮಶಾನಕ್ಕೆ ಕಳಿಸುವ ಸೇವೆ ಎಂಬ Twenty five point ಸೇವೆ ಪ್ರೋಗ್ರಾಮುಗಳನ್ನು ಇಟ್ಟುಕೊಂಡರೆ ಇಕ್ಕಲಾರದ ಕೈಯೇ ಸಿಕ್ಕಲಾರದು.

ಸೇನ್ : ಖಂಡಿತವಾಗಿಯೂ ಇದು ಭಾರೀ ಸೇವಾ ಯೋಜನೆ. ಇದರ ಜೊತೆಗೆ ಮಂತ್ರವಾದ, ಭವಿಷ್ಯ ಕಥನಗಳಿಗೂ ಇಬ್ಬರನ್ನೂ ನಿಯಮಿಸಿಕೊಂಡರೆ ನಮ್ಮ ಕ್ಲಬ್ಬಿನಲ್ಲೇ ಮಹಾಲಕ್ಷ್ಮಿ ಕಾಲು ಮುರಿದುಕೊಂಡು ಬಿದ್ದಿರುತ್ತಾಳೆ ಸರ್ವಜ್ಞ ಹೇಳಿಲ್ಲವೇ?

ಗುರಿಯ ತಾಗದ ಬಾಣ ನೂರಾರನೆಸೆದೇನು
ಬರಿ ಮಾತನಾಡಿ ಫಲವೇನು ಕ್ಲಬ್ಬಿನಾ
ಅರಿವಿಲ್ಲದಿರಲು ಸರ್ವಜ್ಞ

ಉಂಡು ಮಲಗರಾದ ನಮಗೆ ಈ ಯೋಜನೆ ದಿವ್ಯವಾದ ವರ. ಶೇಟ್ ಸಾಹೇಬರ ತಲೆ ಎಂದರೆ ತಲೆ. ಎಲ್ಲವುದರಲ್ಲೂ ನೂರಕ್ಕೆ ತೊಂಬತ್ತರಷ್ಟು ಕಮಿಶನ್! ಕಮಿಶನ್ನು ಲಂಚದ ಗೌರವನಾಮಧೇಯ–ದಕ್ಷಿಣೆಯ–ಹಾಗೇ.

ತಿಂಗಳಾಯ : ಮಹಾರಾಯಾ, ಇದಕ್ಕೆಲ್ಲಾ ತಿರುಗಾಟ ಮಾಡಬೇಕಾಗುತ್ತಯ್ಯಾ! ಸೋಮಾರಿಗಳಾದ ನಾವು ತಿರುಗುವುದು ಹೇಗೆ?

ಸೇನ್ : ಅದಕ್ಯಾಕಯ್ಯಾ ಹೆದರೋದು? ಪ್ರೆಸ್ಸಿದೆ, ಪೋಸ್ಟಾಫೀಸಿದೆ. ಬರಸೋದು ನಮ್ಮ ಧ್ಯಾನನಿಂದ. ನಾವೇನೂ ಮಾಡಬೇಕಿಲ್ಲ. ಮತ್ತೇನು ನಿನ್ನ ಅಬ್ಜಕ್ಷನ್ನು? Gratitude is a heavy burden. ಅವನ್ನೇನೂ ನಾವು ಹೊರಬೇಕಾಗಿಲ್ಲ. ನಾವು ಪೂಜಾರಿಯವರ ಬಲದಿಂದ ಸಾಲಕೊಡಿ ಸೋದಷ್ಟೇ ಅಲ್ಲದೆ ಸಾಲಕೊಡೋದಲ್ಲ.

ದಲಾಲ ಗಿರಿ, ಕಮಿಶನ್ ಏಜೆಂಟ್ ಗಿರಿ, ಲೇವಾದೇವಿ ಅಂದರೇ ಹೀಗೆ. God is a sun that never sets ನಮ್ಮ ಕ್ಲಬ್ಬು ಮುಳುಗೋದು ಅನ್ನೋದೇ ಇಲ್ಲ. ಹಾಗೇನೇ God is the Merchant of Nature ನಾವೆಲ್ಲಾ ದೇವರ ಹಾಗೇ. ಕೂತಲ್ಲಿಂದ ಏಳುವವರೇ ಅಲ್ಲ. ಆದರೆ ಎಲ್ಲಾ ಕೆಲಸವೂ ನಮ್ಮಿಂದಲೇ ನಡೆಯುತ್ತದೆ. ನಾವು ದೇವರ ವ್ಯಾಪಾರಿಗಳು.

ಶಾಸ್ತ್ರಿಗಳು : ಅಲ್ಲಾ ನಮ್ಮ ಚದುರಂಗದಾಟ ಎಲ್ಲಿಗೆ ಮುಟ್ಟಿತು?

ಕುಲಕರ್ಣಿ : ನಾವೂ ಅದನ್ನು ಮುಟ್ಟೋದಲ್ಲ. ಅದೇ ಕೊನೆ ಮುಟ್ಟಬೇಕು. ನಾಳೆ ಮುಂದುವರಿಯುತ್ತದೆ. ಬೇಕಾದರೆ!

ಶೇಟ್ : ಬರಾಬರಿ, ಈಗ ಮನೆಗಳಿಗೆ ಮರಳೋಣ.

(ಎಲ್ಲರೂ ಹೋಗುತ್ತಾರೆ)

– ದೃಶ್ಯ ನಾಲ್ಕು –

(ಯಥಾ ಪೂರ್ವ ಸಾಯಂಕಾಲ. ಸೋಮಾರಿಗಳ ಆಗಮನ)

ಸುರೇಶ್ವರಾಚಾರ್ಯ ಶಾಸ್ತ್ರಿಗಳು : ಇಂದು ನೂಲು ಹುಣ್ಣಿಮೆ ಅನ್ನೋದು ಯಾರಿಗೂ ಗೊತ್ತಿಲ್ಲವೇ?

ಕುಲಕರ್ಣಿ : ಯಾರಿಗೆ ಗೊತ್ತಿಲ್ಲಾ ಅಂತೀರಿ ಶಾಸ್ತ್ರಿಗಳೇ? ನಾವು ದಿನಾ ಹಗ್ಗ ಹಾಕೋರು ದುಡ್ಡಿನ ದೊಡ್ಡಪ್ಪಂದಿರಿಗೆ.

ಹೆಗಣೋಪವೀತಂ ನೂರಾರು ಗಂಟಂ
ಶೆಟ್ಟ್ಯಪ್ಪ ಕೊಟ್ಟಂ ದುಡ್ಡಪ್ಪ ತೊಟ್ಟಂ ॥

ಇದೇ ಮೂಲ ಮಂತ್ರ ಸೋಶಲಿಜಮ್ಮಿಗೆ, ಡೆಮಾಕ್ರೆಸಿಗೆ ಮತ್ತು ಸೆಕ್ಯೂಲಾರಿಜಮ್ಮಿಗೆ, ಬೇಕಾದರೆ ಎನ್.ಟಿ.ಆರ್‌ರನ್ನು ಕೇಳಿರಿ. ದಾರ ತೆಗೆದರೆ ಐಕ್ಯ (ಭಾವನ ಮತ್ತು ಅಕ್ಕನ ಐಕ್ಯ) ಆಗೋದಿಲ್ಲ. ದಾರ ಹಾಕಿಕೊಂಡರೇನೇ ಒಬ್ಬೊನ್ನ ಇನ್ನೊಬ್ಬನಿಗೋ ಇನ್ನೊಬ್ಬಳಿಗೋ ಕಟ್ಟಾಕೋಗಾಗುತ್ತೆ. ನಲವತ್ತು ವರ್ಷವಾದರೂ ಈ ದೇಶದಲ್ಲಿ ಭಾವೈಕ್ಯ ಆಗದೆ ಹೋಗಲು (ಶಿವದಾರವೂ ಅಲ್ಲ, ಜನಿವಾರವೂ ಅಲ್ಲ) ಶನಿದಾರವನ್ನು ೭೦ ಕೋಟಿಗೂ ಒಂದೇ ದಿನ ಕಟ್ಟದೆ ಹೋದದ್ದು ಕಾರಣ. ಶನಿದಾರವೆಂದರೆ ಬಾವಿ ಹಗ್ಗದ ಉರುಳು ಕೊರಳ್ಗೆ ಉರುಳ್! Limited Licence. ಈಗಿನ ಭ್ರಷ್ಟಾಚಾರವೆಲ್ಲಾ Unlimited Licence ಇನ ಫಲ. ಅದಕ್ಕೆ ಶನಿದಾರವು ಪರಿಹಾರಕ ತಾಳಿಯಾಗಬಹುದು.

ತಿಂಗಳಾಯ : ಶನಿದಾರಕ್ಕೆ ಎಷ್ಟು ಎಳೆಗಳಿರಬೇಕು?

ಶಾಸ್ತ್ರಿಗಳು : ಮಂಡಲಕಮಿಶನ್ನಿನಲ್ಲಿ ಎಷ್ಟು ಜಾತಿಗಳನ್ನು ಹೆಸರಿಸಿದ್ದರೋ ಅದಕ್ಕೆ ಮೂರು ಎಳೆ ಸೇರಿಸಿದಷ್ಟಿರಬೇಕು.

ತಿಂಗಳಾಯ : ಅಂದರೆ ೧೩೩೩ರೋ ಅದಕ್ಕೂ ಹೆಚ್ಚೋ?

ಶಾಸ್ತ್ರಿಗಳು : ಹೆಚ್ಚಾದರೂ ಏನು ಹೆದರಿಕೆ? ಎಲ್ಲವುದಕ್ಕೂ ಒಟ್ಟು ಒಂದು ಬ್ರಹ್ಮ ಗಂಟನ್ನು ಹಾಕಿಬಿಟ್ಟರೆ ಸರಿ ಅಲ್ಲದಿದ್ದರೆ ಒಂದು ಪ್ರಧಾನಿ ಗಂಟನ್ನು ಹಾಕಿದರೂಸರಿ ೪ ಮೆಜಾರಿಟಿ ಅವನ ಬೆನ್ನಿನ ಹಿಂದೆ ಇದ್ದೇ ಇರುತ್ತಾರೆ.

ಶೇಟ್ : ಮೂರು ಎಳೆ ಸೇರಿಸೋದ್ಯಾತಕ್ಕೆ?

ಶಾಸ್ತ್ರಿಗಳು : ಮುಸ್ಲಿಂ, ಕ್ರಿಶ್ಚನ್ ಮತ್ತು ತತ್ಸದೃಶ ಅಭಾರತೀಯ ಮೂಲದ ಮತದಧರ್ಮದವರಿಗಾಗಿ All Religions are Secular in India ಸರ್ವ ಮತಧರ್ಮಗಳ ಕರ್ಮಕಾಂಡಗಳೂ ಸೆಕ್ಯುಲಾರ್ ಹಿಂದು ಧರ್ಮವೊಂದನ್ನು ಬಿಟ್ಟು, ಅದಕ್ಕೆ ಸರಕಾರಗಳಿಂದ ಸಿಕ್ಕುವುದು ನಗ್ನಸೇವೆ ನಮ್ಮಕ್ಲಬ್ಬಿಗೆ ಸಿಕ್ಕಿದ ಹಾಗೆ.

ತಿಂಗಳಾಯ : ಚಂದ್ರಗುತ್ತಿ ಧರ್ಮ ಅನ್ನಿ.

ಸೇನ್ : ಹೌದು. ಇಂಡಿಯನ್ ಎಕ್‌ಪ್ರೆಸ್ ಮಾರ್ಚ್ ೨೯ನ್ನು ಓದಿರಿ. ಕನ್ನಡದ ಕಾವಲಿಗಿರುವ ಪ್ರೆಸ್ಸುಗಳ ಪರಾಕ್ರಮವನ್ನು ತಿಳಿಯಿರಿ. ಅಲ್ಲಿ ತಲೆ ಹಾಕಹೋದವರಿಗೆ ಇನ್ನೆಲ್ಲಿ ತಲೆ ಹಾಕಲು ಬರುವುದಿಲ್ಲ? ಬಂಗಾಳದ ದಸರೆಯ ನಗ್ನಿಕಾಪೂಜೆ ಪರವಾಯಿಲ್ಲ! ದಿಗಂಬರ ಜೈನರಿಗೆ ಪರವಾ ಇಲ್ಲ. ಈ ಗುಟ್ಟು ಸೋಮಾರಿ ಕ್ಲಬ್ಬಿಗೇ ಗೊತ್ತು. Education is the darkness that dispels the light of mind.

ಕುಲಕರ್ಣಿ : ಏನು ಸ್ವಾಮಿ, ನಿಮ್ಮ ಆರ್ಗ್ಯುಮೆಂಟ್ ಕೇಳಿದರೆ ನನಗೇಕೋ ಆಕಳಿಕೆ ತೂಕಡಿಕೆ ಬರುತ್ತದೆ!

ತಿಂಗಳಾಯ : ನಗ್ನ ಸತ್ಯಕ್ಕೆ ವಸ್ತ್ರ ಉಡಿಸಲು ಹೋದ್ದರಿಂದಲೇ ಈ ಘಟನೆ ನಡೆದದ್ದು. ನಮ್ಮ ಪ್ರಜಾಪ್ರಭುತ್ವದ ಚುನಾವಣೆಗಳೆಲ್ಲಾ ವಸ್ತ್ರದಾಟ, ಒಡವೆ ಆಟ, ಇನ್ನೇನನ್ನೋ ಕೊಡುವ–ಹೊಡೆತವನ್ನೂ ಕೊಡುವ ಆಟ, ಪೇಪರ್‍ನ ಓದಿಲ್ವೇ?

ಸೇನ್ : ಜಗತ್ತೇ ಪರಮಾತ್ಮನ ಲೀಲೆ ಎಂದು ಮಹರ್ಷಿಗಳು ಹೇಳಿರುವಾಗ, ಇಲ್ಲಿ ನಡೆವ ನ್ಯಾಯ–ಅನ್ಯಾಯಗಳೆಲ್ಲಾ ಅವನ ಲೀಲೆಗಳೇ ಅಲ್ಲವೇ? ಶಾಸ್ತ್ರಿಗಳೇ ನೀವೇ ಹೇಳಿ.

ಶಾಸ್ತ್ರಿಗಳು : ಸರಿಯಾದ ಮಾತು. ಕನಕದಾಸರೇ ಹೇಳಿದ್ದಾರೆ. ಏಡ್ಸ್‌ರೋಗ ಬಂದರೂ ನಾವಿಲ್ಲಿ ಸುಮ್ಮನಿರಬೇಕು.

ಏಕೆಂದರೆ,

'ಎಂಜಲೆಂಜಲು' ಎಂಬರಾ ನುಡಿ
ಎಂಜಲಲ್ಲವೆ ವಾರಿ ಜಲ ಚರ
ದೆಂಜಲಲ್ಲವೆ ಹಾಲು ಕರುವಿನ ಎಂಜಲೆನ್ನಿಸದೆ
ಎಂಜಲೆಲ್ಲಿಯದೆಲ್ಲಿಯುಂಪರ
ರೆಂಜಲಲ್ಲದೆ ಬೇರೆ ಭಾವಿಸ
ಲೆಂಜಲುಂಟೇ ದೇವ ರಕ್ಷಿಸು ನಮ್ಮನನವರತ ॥

ಅದೇ ಮೇರೆಗೆ ನಾವಿಲ್ಲಿ ಬಾಯಿ ಬಿಟ್ಟರೆ ಬಣ್ಣಗೇಡು. ವಾಕ್‌ಸ್ವಾತಂತ್ರ್ಯ ಗೀಕ್ ಸ್ವಾತಂತ್ರ್ಯದ ಮಾತನ್ನೇ ಪ್ರೆಸ್ತಿನವರೆತ್ತ ಬಾರದು. ಕನಕದಾಸರು ಮೊದಲೇ ಹೇಳಿಬಿಟ್ಟಿದ್ದಾರೆ.

ನಿನ್ನ ಸೂತ್ರದೊಳಾಡುವುವು ಚೈ
ತನ್ಯ ಸಚರಾಚರಗಳೆಲ್ಲವು
ನಿನ್ನ ಸೂತ್ರವು ತಪ್ಪಿದರೆ ಮುಗ್ಗುವುದು ತುಪ್ಪಸಹಾ।
ಇನ್ನು ನಮಗೆ ಸ್ವತಂತ್ರವೆಲ್ಲಿಯ
ದನ್ಯ ಕರ್ಮ ಸುಕರ್ಮವೆಲ್ಲವು
ನಿನ್ನದೆಂದೊಪ್ಪಿಸಿದೆ ರಕ್ಷಿಸು ನಮ್ಮನನವರತ

ಶೇಟ್ : ಹೌದು ಸ್ವಾಮಿ, ಹೌದು ಲಂಚ ಪರಮಾತ್ಮನೇ ಸೂತ್ರಧಾರ. ಅದನ್ನು ಹಿಡಿವವನು ಪಾತ್ರಧಾರ, ಪ್ರಧಾನ, ಪ್ರಮುಖ, ಮುಖಂಡ.

ಕಾಮತ್ : Indolence is a state in which we have no grief or pain ಸುಮ್ಮ ಇರಕರರ್ದ್" ಎಂದು ರಮಣ ಮಹರ್ಷಿಗಳು ಹೇಳಿಲ್ಲವೆ? ನಮ್ಮದು ಮೋಕ್ಷದ ಕ್ಲಬ್ಬು. ಆದ್ದರಿಂದ ಯಾರು ಎಲ್ಲಿ ಏನು ತಿಂದರೂ ನಾವು ಬಾಯಿ ಎತ್ತಬಾರದು. ತಿನ್ನಲು ಸಾಧ್ಯವಾದಷ್ಟನ್ನು ನಾವೂ ತಿಂದರೆ ಸರಿ. ಸೋಮಾರಿತನ ಎಂದರೆ The Science of absolute indifference between the ideal and the real. ದಾಸರೂ ಹೇಳಿದ್ದಾರೆ:

ಅರ್ಥಕ್ಕೆ ಪುರುಷನುದಾಸ ।ಸಾ
ಮರ್ಥ್ಯವಿದ್ದರೆ ಮಾಡಲುಬೇಕು ಮೋಸ ॥ ಅ.ಪ.॥
ಕರ್ತನು ಸೃಷ್ಟಿಗೆ ಮೊದಲು ಮೋಸವ ಮಾಡಿ
ಮರ್ತ್ಯರ ನೂಕಿದ ನೀ ಲೋಕಕೆ ।
ಅರ್ಥಕ್ಕೆ ಶಬ್ದವಿರದ ಹಾಗೆ ಮಾಡಿದ
ತುರ್ತಾಗಿ ನೋಟುಗಳನು ನಿರ್ಮಿಸಿ ॥೧॥
ಮತ್ತೂ ಫೋರ್ಜರಿ ಚೆಕ್ಕುಗಳ ಮನುಜ ಮಾಡಿದ
ಒತ್ತಾಯಕೆ ಮಣಿದು ಪರಮಾತ್ಮನ॥
ಕತ್ತು ಬಗ್ಗಿಸಿ ಕೂಲಿ ಕೋಟಿಯ ದುಡಿಸಿದ
ವಿತ್ತಾಪಹಾರವ ವಿಸ್ತರಿಸಿದ ॥೨॥
ಹತ್ತು ನೆಲೆಯನೇರಿಸಿ ನೂರೈವತ್ತಕೆ
ಒತ್ತು ಗುಂಡಿಯ ಲಿಫ್ಟ್ ಮಾಡಿಸಿದ
ಕತ್ತೆ ಕಾಲುಗಳನ್ನು ಕಡಿಸಿ ಮಾರಿಸಿದನು
ಹತ್ತು ಸಾವಿರ ಹೆಣ್ಣುಗಳ ಮಾರಿದ ॥೩॥

ಶಾಸ್ತ್ರಿಗಳು : 'ಗಂಟಿರುವವರೆಗೆ ನಂಟರಿರುತ್ತಾರೆ" ಎನ್ನೋ ಗಾದೆ ಗೊತ್ತಿಲ್ಲವೇ? ಅದರಲ್ಲೂ ಕೂತಲ್ಲೇ ಕೂತು ಟೆಲಿಫೋನಿನ ಮೂಲಕ ಕೋಟಿಗಳನ್ನು ತನ್ನ ಲೆಕ್ಕಕ್ಕೆ ಜಮಾ ಮಾಡಿಸುವ ಸೋಮಾರಿ ಬಂಟನು ಸುರಗುರುವೂ ಸುರಾ ಗುರುವೂ ಆದ ನನಗೆ ತೆತ್ತ ಕೋಟಿಗಳನ್ನು ಯಾವ ಸಿ.ಐ.ಡಿ ಪತ್ತೆ ಹಿಡಿದಾನು? ಅವನ ಬಿಸಿನಸ್ಸೇ ಗೋಲ್ಡ್ ಎಂಡ್ ಡೈಮಂಡ್. ಜೋಹಾನ್ಸ್‌ಬರ್ಗಿನಲ್ಲಿ ನನ್ನ ಏಜಂಟಿರಿರುವುದು ಯಾರಿಗಾದರೂ ಗೊತ್ತೇ? ಅವರು ನನ್ನ ಅತ್ಯಂತ ವಿಧೇಯರಾದ ಮಹಾಕುಶಲ ಶಿಷ್ಯರು. ಬಾಂಬೇ ಜ್ಯೂಯೆಲರಿ ಪೇಟೆಯ ಮೇಲಿನ ಪ್ರಭುತ್ವ ಯಾರದ್ದು? ನಿನಗಾದರೂ ಗೊತ್ತಿದೆಯೇ?

ಶೇಟ್ : ಹಾಗಾದರೆ ನಮ್ಮ ಕ್ಲಬ್ಬು ಶಾಸ್ತ್ರಿಗಳನ್ನು ಖಾಯಂ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಇದೇ ಮೀಟಿಂಗಿನಲ್ಲಿ ಸರ್ವಾನುಮತದಿಂದ ಠರಾಯಿಸೋಣ. ಏನಂತೀರಿ?

ಕುಲಕರ್ಣಿ : ಹಾಗೇ ಮಾಡೋಣ.

(ಶಾಸ್ತ್ರಿಗಳು ಅಧ್ಯಕ್ಷ ಗದ್ದುಗೆಯನ್ನೇರಿದರು. ರೌಂಡ್ ಟೇಬಲ್ಲಿನಿಂದ ಒಂದು ಇಸಂ ಕಡಿಮೆಯಾಯಿತು.)

ಎಲ್ಲರೂ : ಅಧ್ಯಕ್ಷರಿಗೆ ಜಯವಾಗಲಿ

(ಸಭಿಕರ ತಪ್ಪಾಳೆ)

ಅಧ್ಯಕ್ಷ ಶಾಸ್ತ್ರಿಗಳು : ಒಂದೊಂದೇ ನಗರವನ್ನು ಸುಲಿಗೆ ಮಾಡುತ್ತಾ ಹೋಗುವುದೇ ಸೋಮಾರಿ ಧರ್ಮ. ಏಕೆಂದರೆ ನಗರಗಳು ಗ್ರಾಮಗಳನ್ನು ಸುಲಿಯುತ್ತಲೇ ಇರುತ್ತವೆ. ಸುಲಿಗೆಗೆ ವ್ಯವಹಾರ, ಆಡಳಿತ ಎಂಬಂಥ ಗೌರವಾರ್ಹ ಹೆಸರಿದ್ದರೆ ಸಾಕು. ನಮ್ಮ ಕ್ಲಬ್ಬಿನ ಆಡಳಿತಕ್ಕೆ Social Service ಎಂಬ ಮೋಟೋದ ಬೋರ್ಡಿದ್ದರೆ ಸಾಕು. ಆದರೆ ಭೂಪತಿಯಾಗಬೇಕು. ಇಲ್ಲದಿದ್ದರೆ ಯತಿಯಾಗಬೇಕು. ಹೆನ್ರಿ ಫೋರ್ಡ್, ರಾಕ್‌ಫೆಲ್ಲರ್ ಮುಂತಾದ ಲಕ್ಷ್ಮೀಪತಿಗಳು ನಾಲ್ಕಾರು ಕಡೆ ಅಲ್ಪ ಸ್ವಲ್ಪ ದಾನ ಮಾಡಿ ತಮ್ಮ ಘೋರ ಪಾಪಗಳೆಲ್ಲವನ್ನೂ ಆಮೇಲೆ ತೊಳೆದುಕೊಂಡದ್ದು ಸುಪ್ರಖ್ಯಾತ. ಹಾಗಾಗಬೇಕು. ಏನಂತೀರಿ ಶೇಟ್?

ಶೇಟ್ : ಹೌದರೀ, ನೀವು ಹೇಳೋದೆಲ್ಲಾ ಸರಿ. ಆದರೆ ನಮ್ಮ ದೇಶದಲ್ಲಿ ಇನ್ನು ಮುಂದೆ ಹೆಂಡತಿಗೆ Love Letter ಬರೆದರೂ ಅದನ್ನು ಒಡೆದೋದುವ ಹಕ್ಕನ್ನು ಸರಕಾರಿ ಮನುಷ್ಯರು ಪಡೆದುಕೊಳ್ಳುವ ಬಿಲ್ಲು ಪಾರ್ಲಿಮೆಂಟಿನಲ್ಲಿ ಪಾಸಾಗಲಿದೆಯಂತೆ. ಇಲ್ಲಿ ಎಲ್ಲವೂ ಸರಕಾರಿ ಗುಟ್ಟು. ಅದೆಲ್ಲಾ ಮೊದಲೇ ಪರದೇಶದವರಿಗೆ ಗೊತ್ತಾಗಿದ್ದರೂ ಪರವಾಯಿಲ್ಲ. ಇಂಥ ಮೋಜಿನ ಜಾತ್ರೆ ಅಗಲಿದೆ ನಮ್ಮ ಪ್ರಜಾಪ್ರಭುತ್ವ.

ತಿಂಗಳಾಯ : ನಮ್ಮ ದೇಶದ ಅನೇಕ ರಾಜ್ಯಗಳೀಗ ಎಲ್ಲವ್ವನ ಗುಡ್ಡಗಳಾಗುತ್ತಿವೆ. ಅಲ್ಲಿ ಸಲ್ಲುವುದು ಅನೇಕ ರಾಜಧಾನಿಗಳಲ್ಲಿ ಸಲ್ಲುತ್ತದೆ. ಮುಖ್ಯಮಂತ್ರಿಗಳಿಗೆ ಸಹಾ ಸಲ್ಲುತ್ತದೆ. ಎಲ್ಲಾ ಬಿಟ್ಟು ಭಂಗಿನಟ್ಟ! ಅವಧೂತರ ಚೆಂಬಲ್ ಬೆಂಬಲವಿಲ್ಲದೆ ಹಿಂದೀ ಬೆಲ್ಟಿನಲ್ಲಿ ಚುನಾವಣೆಯೇ ನಡೆಯುವುದಿಲ್ಲವಂತೆ. ಅದಕ್ಕೇ ಮೊದಲು ಹೂಂ ಎಂದವರೂ ಈಗ ಗಂಗಾ–ಕಾವೇರಿ ಯೋಜನೆ ಬೇಡ ಎನ್ನುತ್ತಿದ್ದಾರೆ.

"ಪಾಪಿಗಳ ಪಾಪಮಂ ತೊಳೆವ ಗಂಗೆಗೆ ಪಾಪ ಲೇಪ ಉಂಟಾಯ್ತೆ?" ಎಂದು ರಾಘವಾಂಕ ಹೇಳಿ ಬಹಳ ಕಾಲವಾಯಿತು. ಈಗೇನಾಗಿದೆ? ೮೪ ಎಂ.ಪಿ ಗಳನ್ನು ಕಳಿಸುವ ಉತ್ತರ ಪ್ರದೇಶದಲ್ಲಿ ಮಾಡಿದ ಪಾಪ, ಬಿಹಾರದ ಪಾಪ ಎಲ್ಲಾ

ತುಂಬಿಹೋದ್ದರಿಂದ ಇಲ್ಲಿಂದ ಯಾರು ಹೋಗಿ ಗಂಗೆಯಲ್ಲಿ ಕಾಲಿಟ್ಟರೂ ಅವರ ಕಾಲಿಗೆ ಒಂದೊಂದು ಮಣ ಪಾಪ ಅಂಟಿಕೊಳ್ಳುತ್ತದೆ. ಹಳೇ ಹುಬ್ಬಳ್ಳಿಯ ಓಪನ್ ಗಟಾರ ಸಹಾ ಗಂಗೆಯ ಮಟ್ಟಕ್ಕಿಳಿದಿಲ್ಲ.

ಶಾಸ್ತ್ರಿಗಳು : ಅದಕ್ಕೇ ಎನ್.ಟಿ.ಆರ್ ಕೃಷ್ಣಾ ನೀರು ಕದ್ದುಕೊಂಡ್ಹೋಗಿ ತೆಲುಗು ಗಂಗಾ ಮಾಡ್ತಾನಂತೆ. ಅಂದರೆ ಯಾವ ನದಿಯ ನೀರನ್ನಾದರೂ ಅವನು ಇಂದಿನ ಕೊಳೆಗಂಗೆಯನ್ನಾಗಿ ಮಾಡಬಲ್ಲ ಎಂದರ್ಥ. ಎಷ್ಟಾದರೂ ಪರಮಾತ್ಮನ ದಶಾವತಾರಗಳನ್ನೂ ಸಿನೆಮಿಸಿದವನಲ್ಲವೇ ಅವನು?

ಸೇನ್ : ಸ್ವಾಮೀ, 'ಗಂ' ಅಂದರೆ ಗುಳುಂ ಅನ್ನಿಸೋದು ಅಂತಾರೆ" ನಮ್ಮ ಕಡೆ. ಶ್ರೀಮಂತ ಉಂಡರೆ ಬಡವನು ತೇಗಬೇಕಂತೆ ಇದು ಇಂದಿನ ಬ್ಯೂರೋಕ್ರಿಸಿಯ ಗಾದೆ. ಬ್ಯೂರೋಕ್ರಾಟ್ಸೇ ಡೆಮೋಕ್ರಾಟ್ಸು. ಮತ್ಯಾರಿದ್ದಾರೆ? Agean Stables ನ್ನು ಮೊದಲು ಇಲ್ಲೇ ಕಟ್ಟಿದ್ದರಂತೆ. ಆಮೇಲೆ ಅದನ್ನೊಯ್ದು ಗ್ರೀಸಿನಲ್ಲಿ ಇಟ್ಟರಂತೆ. ಅರಾಜಕ ರಾಜ್ಯಕ್ಕೇ ಗಣರಾಜ್ಯ ಅನ್ನೋದಲ್ಲವೇ? ಪೌರಾಣಿಕ ಶಿವಗಣಂಗಳ ಭೂತಚೇಷ್ಟೆ ನಮ್ಮ ಜನಕ್ಕೇನೂ ಹೊಸದಲ್ಲವಲ್ಲಾ!

ಶಾಸ್ತ್ರಿಗಳು : ಆದರೀಗ ಅದಕ್ಕೆ ಐದೈದು ರೂಪಾಯಿ ಟಿಕೇಟು ಕೊಟ್ಟು ನೋಡಬೇಕು. ನಮ್ಮ ಲಕ್ಷ್ಮೀಶ ಕವಿ ಆಗಲೇ ಹೇಳಿಬಿಟ್ಟಿದ್ದಾನೆ.

ಮಂತ್ರಿಗಳ್ ನೇಮಿಸುವ ಕಂತ್ರಾಟುದಾರರೇ
ತಂತ್ರಜ್ಞರಾಗುವರ್ ಮಂತ್ರಜ್ಞರಾಗುವರ್
ಎಂಥೆಂಥ ಜನರೆಲ್ಲ ಯಾರ‍್ಯಾರೊ ಆಗುವರ್ ಏನಾಗಬೇಕು ಹೇಳಿ
ಪಂಥಕ್ಕೆ ಮುಂದಾಳು ಮುಂದೆ ದೇಣಿಗೆ ಗಳಿಸ
ಲಂತಃ ಪುರವ ಕೂಡ ಹೊಗುವ ಹಂಚಿಕೆಯುಂಟು
ಎಂಥೆಂಥ ದೂತ ದೂತಿಯರನೂ ನೇಮಿಸುವ ಥಾಕತ್ತು ನಮ್ಮದಯ್ಯ

ಸೇನ್ : ಅವರೆಂಥ ದೂತ–ದೂತಿಯರು ಸ್ವಾಮೀ?

ಶಾಸ್ತ್ರಿಗಳು : **ಜಡನು ಮೂರ್ಖನು ಶಠನುತಾಮಸನುನಿಷ್ಠುರದ**
ನುಡಿಯವನು ಪಿಸುಣನು ಕೃತಘ್ನನಾದವನು ಬಾ
ಯ್ಬಡಿಕನು ಕುಚೇಷ್ಟಕನು ಕಾಮುಕನು ಹಿಂಸಕನು
ಡಾಂಭಿಕನು ಪಾಖಂಡಿಯು

ಕಡುಗೋಪದವನು ಬಹುಭಕ್ಷಕನು ಖೂಳಮತ್ತೇರಿರುವ
ದೃಢನು ಕುತ್ಸಿತನುಕುಹಕ ಡಾಂಭಿಕಾಚಾರದಿಂ
ನಡೆವವನು ವಿಶ್ವಾಸಘಾತಕನು ಪಾತಕನು
ರಾಜತಂತ್ರಧುರೀಣನು ॥

ಸ್ವಾಮೀ, ಇನ್ನು ಕೇಳಿರಿ ದೂತಿಯರ ವರ್ಗಗಳನ್ನು –

ಚಪಲೆ ಚಂಚಲೆ ಚಾಟುವತಿ ಚಂಡಿ ಛಲವಾದಿ
ಕುಪಿತೆ–ಕುತ್ಸಿತೆ ಕುಹಕೆ ಕುಜೆ ಕುಟಿಲೆ ಕುಲಗೇಡಿ
ಕಪಟಿ ಕಂಟಕಿ ಕಟಕಿ ಕಡುದುಷ್ಟೆ ಕಲಹಾರ್ಥಿ
ಪರುಷೆ ಪರವಶೆ ಪಾದರಿ।
ವಿಫಲೆ ವಿಹ್ವಲೆ ವಿಷಮೆ ವಿರಹಿ ವಿಪರೀತೆ ಮಿಗೆ
ತಪಿತೆ ತಸ್ಕರೆ ತವಕಿ ತವೆತಂತ್ರಿ ತಾಮಸಿಯೆ
ನಿಪ ವನಿತೆಯರ್ ಮಹಾಧೂರ್ತೆಯರ್ ಪುಸಿಲಜ್ಜೆ
ತೋರ್ಪ ನಟಿಯರ್ ವಿಟಿಯರು॥

ಎಲ್ಲರೂ : ಒಂದನೇ ಜಾಗತಿಕ ಮಹಾಯುದ್ಧದಲ್ಲಿ ಶತ್ರುಗಳ ಗುಟ್ಟನ್ನು ತಿಳಿಸಲು ಜರ್ಮನರು ತರಬೇತು ಕೊಟ್ಟ ಮಾತಾಹರಿ ಖಂಡಿತವಾಗಿ ಇಂಥವಳೇ ಆಗಿರಬೇಕು. ಆದ್ದರಿಂದ ಸೋಮಾರಿ ಕ್ಲಬ್ಬಿಗೆ ಜಯಕಟ್ಟಿಟ್ಟದ್ದು. ಶಾಸ್ತ್ರೀಜೀಕೆ ಜೈ । ಜಬರ್ ದಸ್ತ್।

ಯಕ್ಷಗಾನ

ಪಂಚರಾತ್ರ

(ಭಾಸನ ಪಂಚರಾತ್ರ ನಾಟಕದ ಯಕ್ಷಗಾನ ರೂಪ)

ರಚನೆ : ಪ್ರೊ.ಬಿ.ಎಚ್.ಶ್ರೀಧರ

(ಪರಿಷ್ಕರಣೆ – ಪ್ರೊ. ಎಂ.ಎ. ಹೆಗಡೆ)

ಪರಿವಿಡಿ

ವಂದೇ ವಂದೇ ರಂಗಕಲಾಗುರು ।

ರಾಜ್ಯೈಶಂ ವಂದೇ ನಾಟ್ಯಪದ ಪ್ರಭುಂ ॥

– ಬಿ.ಎಚ್. ಶ್ರೀಧರ ಕೃತ ಪ್ರಸಂಗ

ಉಪೋದ್ಘಾತ

ಯಕ್ಷಗಾನದ ಸಂಶೋಧಕರು ಯಕ್ಷರನ್ನು 'ಜಕ್ಕಲ'ರೆಂಬ ಒಂದು ಜಾತಿಯ ಜನರೆಂದೂ "ಎಕ್ಕಲ" ಎಂಬುದು ಕೂಡ "ಯಕ್ಷ"ದ ತದ್ಭವವೆಂದೂ ಹೇಳಿದ್ದುಂಟು. ಋಗ್ವೇದದಲ್ಲಿ "ಯಕ್ಷು"ಗಳು ಒಂದು ಜಾತಿಯ ಜನರೆಂಬ ಉಲ್ಲೇಖವಿದೆ. ಕಲ್ಹಣನ 'ರಾಜತರಂಗಿಣಿ'ಯಲ್ಲಿ "ಯಕ್ಷದರ" ಎಂಬುದೊಂದು ಜಿಲ್ಲೆಯ ಹೆಸರಾಗಿದೆ. "ಯಕ್ಷರಾತ್ರಿ" ಎಂಬುದು ದೀಪಾವಳಿಯ ಹೆಸರು. "ಯಕ್ಷಸ್ಥಲ"ವೆಂಬುದು ಒಂದು ಊರಿನ ಹೆಸರು. ಈ ಯಕ್ಷಾರ್ಥಗಳನ್ನು ಗಮನಿಸಿದರೆ ಮೂಲತಃ ಯಕ್ಷರು ಭಾರತದ ಒಂದು ಜನವರ್ಗ; ಅವರ ಸಂಸ್ಕೃತಿಗೆ ಕೆಲವು ವೈಶಿಷ್ಟ್ಯಗಳಿದ್ದವು ಎಂದು ಹೇಳಬಹುದು. "ಯಕ್ಷ"ದ ತದ್ಭವ "ಯಕ್ಕ" ಅಥವಾ "ಎಕ್ಕ" ಎಂಬ ವಿಚಾರಸರಣಿಯಲ್ಲಿ "ಏಕ"ವೆಂಬ ಅರ್ಥ ಉಂಟಾಗುವುದರಿಂದ "ಯಕ್ಷಗಾನ"ಕ್ಕೆ "solo – ಏಕವ್ಯಕ್ತಿಯ ಗಾಯನ" ಎಂಬ ಅರ್ಥ ಹುಟ್ಟುತ್ತದೆ! ಆಗ ಭಾಗವತ ಒಬ್ಬನೇ ಪದ್ಯಗಳನ್ನು ಹಾಡುವ ಪದ್ಧತಿಯೆಂಬ ಅರ್ಥ ಹೊಳೆದಾಗ ಅದು ಯಕ್ಷಗಾನದ ವೈಶಿಷ್ಟ್ಯವಲ್ಲ. ಆದುದರಿಂದ ಯಕ್ಷಜನರ ಇತಿಹಾಸ ಅನುಪಲಬ್ಧವಾದರೂ ಅದು ಯಕ್ಷಗಾನದ ಜನಕ ಜನಾಂಗವೆಂದು ನಂಬುವುದಿಂದು ಕಷ್ಟ.

"ಗಾನ"ವೆಂದರೆ ಗೀತ, ಹಾಡು. ಭಾರತದಲ್ಲಿ ಮೊದಲು ಶ್ರವ್ಯ ಕಾವ್ಯ ಹುಟ್ಟಿತೆಂದೂ ಆಮೇಲೆ ಅದನ್ನು ಹಿನ್ನೆಲೆಯಿಂದ ಹಾಡುತ್ತ ಅದರ ಅರ್ಥವನ್ನು ವೇಷಧಾರಿಗಳು ಅಭಿನಯಿಸುತ್ತ ಹೋದ ಹಾಗೆ ನಾಟಕ ಅಥವಾ ಆಟವೆಂಬುದು ರೂಪಿತವಾಯಿತೆಂದೂ ಭಾರತದ ನಾಟಕ ಸಂಶೋಧಕರು ಹೇಳುತ್ತಾರೆ. ಸಂಸ್ಕೃತ ನಾಟಕ ಹುಟ್ಟಿದ್ದು ಸುಮಾರು ಕ್ರಿ.ಪೂ. ೨೦೦–೩೦೦ ವರ್ಷಗಳ ಹಿಂದೆ ಎಂಬುದು ಅವರ ಮತ. ಎಂದ ಮೇಲೆ ಸಂಸ್ಕೃತ ಭಿನ್ನಭಾಷೆಗಳ ನಾಟಕ ಅದಕ್ಕಿಂತ ೫೦೦–೬೦೦ ವರ್ಷಗಳ ಹಿಂದೆಯೇ ರೂಪಿತವಾಗಿದ್ದಿರಬೇಕೆಂಬುದು ಸಹಜವಾದ ಊಹೆ. ಭರತನಾಟ್ಯಶಾಸ್ತ್ರದ ಕಾಲ ಕ್ರಿ.ಶ.೧ನೆಯ ಶತಮಾನ ಎಂದು ಊಹಿಸಲಾಗಿದೆ. ಶಿಲಾಲಿ, ಕೃಶಾಶ್ವರು ನಟಸೂತ್ರಗಳನ್ನು ಬರೆದ ಉಲ್ಲೇಖ ಪಾಣಿನಿಯ ವ್ಯಾಕರಣದಲ್ಲಿ ಬಂದಿರುವುದರಿಂದ ಮತ್ತು ಪಾಣಿನಿಯು

ಕ್ರಿ.ಪೂ.೩ನೆಯ ಶತಮಾನದವನೆಂದು ನಿರ್ಧರಿಸಲಾಗಿರುವುದರಿಂದ ಭಾರತದ ನಾಟಕದ ಪ್ರಾಚೀನತೆಯ ಬಗ್ಗೆ ಸ್ಥೂಲಕಲ್ಪನೆಯನ್ನು ಮಾಡಿಕೊಳ್ಳಬಹುದು.

ಯಕ್ಷಗಾನದ ಮಹತ್‌ಪರಿಮಾಣ

"ಅಭಿನಯತ್ರಯಂ ಗೀತಾತೋಽಖ್ಯೇ ಚೇತಿ ಪಂಚಾಂಗಂ ನಾಟ್ಯಂ" ಎಂದು ನಾಟ್ಯಶಾಸ್ತ್ರದ ವ್ಯಾಖ್ಯಾನಕಾರನಾದ ಅಭಿನವಗುಪ್ತನು ಹೇಳಿರುವುದರಿಂದ ಈ ಪಂಚ ಅಂಗಗಳಲ್ಲಿ ಎಲ್ಲವೂ ಇದ್ದರೆ ನಾಟ್ಯ ಅಥವಾ ನಾಟಕ; ಒಂದು ಕೊರತೆಯಾದರೂ ಅದು ಅಪೂರ್ಣವಾಗುತ್ತದೆ. ಈ ಅರ್ಥದಲ್ಲಿ ಯಕ್ಷಗಾನವೊಂದೇ ಸರ್ವಾಂಗಸಮನ್ವಿತ ನಾಟಕ ಎನ್ನಬೇಕಾಗುತ್ತದೆ. ಸಂಗೀತ–ನಾಟಕಗಳಲ್ಲಿ ನೃತ್ಯವು ವಿರಳ; ಆಧುನಿಕ ಸಾಮಾಜಿಕ ನಾಟಕಗಳಲ್ಲಿ ಗೀತವೂ ಇಲ್ಲ. ಸಾಹಿತ್ಯ, ಸಂಗೀತ, ನೃತ್ಯ, ದೈಹಿಕಾಭಿನಯ ಮತ್ತು ವೇಷಭೂಷಣ ರೂಪದ ಆಹಾರ್ಯಾಭಿನಯಗಳೆಂಬ ಐದು ಭಾವಾಭಿನಯ ಸಾಧನಗಳನ್ನು ಆದ್ಯಂತವಾಗಿ ಬಳಸುವ ಏಕಮೇವ ನಾಟಕರೂಪವೆಂದರೆ ಯಕ್ಷಗಾನವೊಂದೇ. ಇದನ್ನು ಪಾಮರರು ಆಡಿದರೆ ಜಾನಪದ ನಾಟಕವೆನ್ನಿಸುವುದು. ಪಂಡಿತರು ಆಡಿದರೆ ಅತ್ಯಂತ ಸುಸಂಸ್ಕೃತ ಕಲಾರೂಪವೆನ್ನಿಸುವುದು.

"ಯಕ್ಷ"ದ ತದ್ಭವ "ಎಕ್ಕಲ" ಎಂದಾದರೆ ಯಕ್ಷಗಾನಕ್ಕೆ ದೊಡ್ಡಾಟ, ಬಯಲಾಟ ಎಂಬ ಅರ್ಥ ಬರುತ್ತದೆ. ಯಕ್ಷ ನಾಟಕಗಳಲ್ಲಿ ಎಲ್ಲವೂ ದೊಡ್ಡವೇ. ಭಾಗವತರ ಕಂಠವೂ ದೊಡ್ಡದು; ದಶಾವತಾರದ ಕಥಾವಸ್ತುಗಳ ಪ್ರಸಿದ್ಧಿಯೂ ದೊಡ್ಡದು; ಪಾತ್ರಗಳ ಶಕ್ತಿ, ಗಾತ್ರ, ಗುರಿಗಳೂ ದೊಡ್ಡವು – ಎಲ್ಲವೂ Great, Gigantic! ಒಳಿತು–ಕೇಡುಗಳ ಗಾತ್ರ–ಪಾತ್ರ–ಘರ್ಷಣ, ಮರ್ಷಣಗಳಿಗೆ ಸಪ್ತನಾಶ–ಸಪ್ತನರಕಗಳು ಆವರಣ. ದೈವೀ ಮತ್ತು ಆಸುರೀ ಸಂಪತ್ತುಗಳ ಹೋರಾಟದ ಕಲ್ಪನೆಯ ಆಳ–ಅಗಲಗಳನ್ನು ಯಕ್ಷನಾಟಕಗಳಲ್ಲಿ ಕಾಣಬಹುದಾದಷ್ಟು ಇನ್ನಾವ ನಾಟಕದಲ್ಲೂ ಕಾಣಲು ಸಾಧ್ಯವಿಲ್ಲ. ಆದುದರಿಂದ ಯಕ್ಷಗಾನವು ಭಾರತದ Great Drama – ಮಹಾನಾಟಕ !

೧೧ನೆಯ ಶತಮಾನದ್ದೆಂದು ನಂಬಲಾದ ಸಂಸ್ಕೃತದ "ಮಹಾನಾಟಕ"ವು ಸಂಸ್ಕೃತ ಯಕ್ಷಗಾನ ನಾಟಕದ ಆದಿರೂಪವನ್ನು ನಿದರ್ಶಿಸುತ್ತದೆ. ಅದನ್ನು ಬರೆದದ್ದು ಹನುಮಂತನೆಂದು ಪ್ರಸಿದ್ಧಿ. ಅದರಿಂದಲೇ ಏನೋ ಯಕ್ಷಗಾನದ ವಿದೂಷಕನನ್ನು "ಹನುಮನಾಯಕ" ಎಂದು ಕರೆಯುವುದು ಸಂಪ್ರದಾಯ. ರಾಮಾಯಣದ ಹನುಮಂತನು ವ್ಯಾಕರಣ ವಿದ್ವಾಂಸ. ಅಂಥ ಗಂಭೀರ ಪಾತ್ರ ಅಥವಾ ವ್ಯಕ್ತಿತ್ವ ಸಂಪನ್ನನೇ ಹನುಮ ವೇಷವನ್ನು ಧರಿಸಲರ್ಹನು. ಹಾಸ್ಯವು ಸೂಕ್ಷ್ಮತಮವಾದ ಕಲೆ. ಆದ್ದರಿಂದ ಯಕ್ಷಗಾನದ ಸಂಪ್ರದಾಯದವರು ಈ ಅಂಶವನ್ನು ಗಮನಕ್ಕೆ ತಂದುಕೊಳ್ಳುವುದು ಅಗತ್ಯ. ಹಾಸ್ಯದ ಹತ್ತು ಮುಖಗಳಿಂದ ಸಮಾಜ ಶಿಕ್ಷಣವನ್ನು

ಅತ್ಯಂತ ಪರಿಣಾಮಕಾರಿಯಾಗಿ ನೆರವೇರಿಸಬಹುದು; ಮನೋರಂಜನೆಯ ಮಟ್ಟ ಬಹಳ ಎತ್ತರಕ್ಕೆ ಏರುವಂತಾಗುವುದೂ ಆಗ ಸಹಜ.

ನಾಟಕಗಳ ಮೂಲರೂಪ

ದಶರೂಪಕಗಳಲ್ಲಿ ಒಂದಾದ "ವೀಥಿ"ಯ ಲಕ್ಷಣಗಳು ಯಕ್ಷಗಾನದಲ್ಲಿ ಎದ್ದು ಕಾಣುತ್ತವೆ. ಉದ್ಘಾತಕ ಅಥವಾ ಅರ್ಥಪೂರ್ಣವಾದ ಸಮಯಸ್ಫೂರ್ತ ಚಿಕ್ಕವಾಕ್ಯಗಳ ಚಮತ್ಕಾರಕ ಸಂವಾದ, ಅವಲಗಿತ ಅಥವಾ ಮಾತಿನ ಪ್ರಸ್ತಾವನೆಯ ವಿಸ್ತಾರ, ಪ್ರಪಂಚ ಅಥವಾ ಅಪಹಾಸೋಕ್ತಿಗಳನ್ನಾಡುವುದು, ಛಲ ಅಥವಾ ಗಡಿ ಮೀರಿದ್ದೆನ್ನಿಸಬಹುದಾದ ವಾಕ್ಕಲಹ, ವಾಕ್ಕೇಳಿ ಅಥವಾ ಚತುರೋಕ್ತಿಯ ಸಂವಾದ, ಅಧಿಬಲ ಅಥವಾ ಸಿಟ್ಟಿನ ವಾಗ್ವಾದ, ಗಂಡ ಅಥವಾ ಏಕಾಏಕಿ ಪ್ರಶ್ನೋತ್ತರ ನಡೆಯುವುದು, ಅವಸ್ಯಂದಿತ ಅಥವಾ ಮಾತುಗಾರರು ತಮಗೆ ಬೇಕಾದ ಅರ್ಥವನ್ನು ಕೆಲವೊಮ್ಮೆ ತಾವು ಮೊದಲಾಡಿದ ಭಿನ್ನಾರ್ಥಕ ಮಾತುಗಳಿಗೆ ಅನ್ವಯಿಸಿಕೊಂಡು ಉತ್ತರ ಹೇಳುವುದು, ನಾಲಿಕೆ ಅಥವಾ ಸಂದಿಗ್ಧವೆನ್ನಿಸುವ ಚುಚ್ಚುಮಾತುಗಳನ್ನು ವ್ಯಂಗ್ಯವಾಗಿ ಆಡುವುದು, ಅಸತ್ ಪ್ರಲಾಪ ಅಥವಾ ಅಲ್ಲಸಲ್ಲದ ವಾದ ಹೂಡುವುದು, ಇಲ್ಲವೆ ವಿರೋಧಕ್ಕಾಗಿ ವಿರೋಧ ಮಾಡುವುದು, ವ್ಯಾಹಾರ ಅಥವಾ ಪರಿಹಾಸೋಕ್ತಿಗಳನ್ನಾಡುವುದು ಮತ್ತು ಮಾರ್ದವ ಅಥವಾ ಮೃದುವಚನಗಳಿಂದ ಕ್ಷಮಾಶೀಲತೆಯನ್ನು ಪ್ರದರ್ಶಿಸುವುದು – ಎಂಬ ೧೩ ವೀಥೀ ಲಕ್ಷಣಗಳಲ್ಲಿ ಕೆಲವು ಇತರ ನಾಟಕ ರೂಪಗಳಲ್ಲಿಯೂ ಕಂಡು ಬರಬಹುದಾದರೂ ಇವಿಷ್ಟೂ ಒಂದೇ ನಾಟಕರೂಪದಲ್ಲಿ ಅಥವಾ ಒಂದೇ ಆಟದಲ್ಲಿ ಕಂಡು ಬರುವ ಸಂಭವ ಯಕ್ಷಗಾನದ ಅರ್ಥಗಾರಿಕೆಯಲ್ಲಿದ್ದಷ್ಟು ಇತರ ಸಂವಾದ ಪದ್ಧತಿಗಳಲ್ಲಿಲ್ಲ ಎಂದು ಧೈರ್ಯವಾಗಿ ಹೇಳಬಹುದು. ಬೀದಿಯ ಜನಗಳು ಕೂಡ ಸುಲಭವಾಗಿ ಪಾತ್ರಗಳ ಒಳಹೊರಗುಗಳನ್ನು ಕ್ಷಣಾರ್ಧದಲ್ಲಿ ಸ್ಪಷ್ಟವಾಗಿ ತಿಳಿದುಕೊಳ್ಳುವಂತೆ ಭಾವಾಭಿನಯ ಮಾಡಲು ಈ ೧೩ ಅಂಗಗಳು ಅತ್ಯುಪಕಾರಿಗಳೆಂಬುದನ್ನು ಯಾರೂ ಅಲ್ಲಗಳೆಯಲಾರರು. ಆದುದರಿಂದ ಅಂಕಭೇದವಿಲ್ಲದ ವೀಥಿಯು ಯಕ್ಷನಾಟಕದ ಮೂಲಸಾಮಗ್ರಿಗಳಲ್ಲಿ ಒಂದೆನ್ನಬಹುದು.

ದಶರೂಪಕಗಳಲ್ಲಿ ಇನ್ನೊಂದಾದ "ಸಮವಕಾರ"ವು ದೇವಾಸುರರಿಗೆ ಸಂಬಂಧಿಸಿದ ಪ್ರಖ್ಯಾತ ವಸ್ತುವನ್ನೇ ಆಯ್ದುಕೊಳ್ಳುತ್ತದೆ; ಅದರಲ್ಲಿ ಬರುವ ನಾಯಕರು ದೇವಮಾನವರು; ಸಮುದ್ರಮಥನ ಅಂಥ ಕಥಾವಸ್ತು ಎಂಬ ಅಂಶಗಳನ್ನು ಗಮನಿಸಿದರೆ ಯಕ್ಷಗಾನದಲ್ಲಡಗಿರುವ ದೇವತಾ ಪಾತ್ರಗಳ ಹಾಗೂ ಅದ್ಭುತ ಪ್ರತಾಪದ ಅಸುರ ಪಾತ್ರಗಳ ನಿರ್ಮಾಣದ ಅಂಶ ಸ್ಪಷ್ಟವಾಗುತ್ತದೆ.

"ಸಮವಕಾರ"ದಲ್ಲಿ ಹೇಗೋ ಹಾಗೇ "ಪ್ರಹಸನ"ವೆಂಬ ರೂಪಕ (ನಾಟಕ)ದಲ್ಲಿಯೂ ವೀಥ್ಯಂಗಗಳು ಬರುತ್ತವೆ. ಪ್ರಹಸನದಲ್ಲಿ ಕೀಳು ಹಾಸ್ಯವು ಪ್ರಧಾನ; ಬಹುಶಃ ಯಕ್ಷನಾಟಕದ

ಹನುಮನ ಹಾಸ್ಯಗಾರಿಕೆ ಕೆಲವೊಮ್ಮೆ ಬಹಳ ಗ್ರಾಮ್ಯವಾಗಲು ಪ್ರಹಸನ ಸಂಪ್ರದಾಯದ ಕೈವಾಡವು ಕಾರಣವಾಗಿರಬಹುದು.

ದಶರೂಪಕಗಳಲ್ಲಿ ಅತ್ಯುತ್ತಮವಾದ "ನಾಟಕ" ಎಂಬ ರೂಪಕ್ಕೆ ವೀಥಿ, ಸಮವಕಾರ, ಪ್ರಹಸನಗಳ ಅಂಶಗಳು ಬೆರೆತರೆ ಯಕ್ಷನಾಟಕದ ಸರ್ವಸಾಧಾರಣವಾದ ಮಾದರಿಯು ಹುಟ್ಟುತ್ತದೆ. ಈ ಅಂಶವನ್ನು ಗಮನಿಸಿದರೂ ಯಕ್ಷನಾಟಕವೇ ದಶರೂಪಕಗಳ ಹಾಗೂ ಅಷ್ಟಾದಶ ಉಪರೂಪಕಗಳ ವಿಕಾಸಕ್ಕೆ ಕಾರಣವಾದ ಮೂಲ ಆಕರ ಎಂದು ತೋರದಿರದು. ಸಂಸ್ಕೃತ ನಾಟಕ ಪರಂಪರೆಯಲ್ಲಿರುವಂತೆಯೇ ವೀರ–ಶೃಂಗಾರ–ಕರುಣಗಳೇ ಯಕ್ಷನಾಟಕಗಳಲ್ಲಿಯೂ ಪ್ರಧಾನ ರಸಗಳಾಗಿರುವುದು ಸ್ಪಷ್ಟ; ಇತರ ರಸಗಳು ಇವುಗಳಿಗೆ ಅಂಗಗಳಾಗಿರುತ್ತವೆ. ಮೂಲಯಕ್ಷನಾಟಕದ ದೃಶ್ಯದ ವಿವಿಧ ಅಂಗಗಳನ್ನು ಪ್ರತ್ಯೇಕಿಸಿ ವಿಶೇಷವಾಗಿ ಬೆಳೆಯಿಸಿದಾಗ ಸಂಸ್ಕೃತದ ೨೮ ರೂಪಕೋಪರೂಪಕಗಳು ರಚಿತವಾಗುತ್ತವೆ ಎಂಬುದು ಸುಲಭೋಹ್ಯ. ಆದುದರಿಂದ ಸಂಸ್ಕೃತೇತರ ಭಾಷೆಗಳಲ್ಲಿ ಯಕ್ಷಗಾನ ಎಂದಿನಿಂದಲೂ ನಡೆದು ಬಂದಿತ್ತು; ಆದರೆ ಅದರ ಹಸ್ತಪ್ರತಿಗಳ ಐತಿಹಾಸಿಕ ಪ್ರಾಚೀನತೆ ಮಾತ್ರ ೧೦–೧೧ನೆಯ ಶತಮಾನಗಳಿಗಿಂತ ಹಿಂದೆ ಹೋಗದಾಗಿದೆ.

ಚಂಡೆ ಮದ್ದಳೆ

ಆತ್ಮದ ಸ್ಥಿತಿಗೆ ಭಾವವೆನ್ನುತ್ತಾರೆ. ಅದನ್ನು ಹೊರಗೆ ಮೂಡುವಂತೆ ಮಾಡುವುದೇ ಅಭಿನಯ. ಅದಕ್ಕೆ ನೃತ್ಯದ ಅಂಗೋಪಾಂಗಗಳೂ ಸಾತ್ತ್ವಿಕಾಭಿನಯ ಪ್ರಕಾರಗಳೂ ಮಾತುವೇಷಗಳೂ ಸಾಧನಗಳು. ಇವುಗಳಲ್ಲಿ ದೈಹಿಕಾಭಿನಯದ ಕಕ್ಷೆಯಲ್ಲಿ ಬರುವ ನೃತ್ತ, ಆಂಗಿಕಾಭಿನಯ ಮತ್ತು ಸಾತ್ತ್ವಿಕಾಭಿನಯಗಳು ನಾಟಕಕಲೆ ಅಥವಾ ಅಂಗಗಳ ಚಲನ ಅಥವಾ ವಿನ್ಯಾಸಗಳ ಮೂಲಕ ಅಂತರ್ಭಾವವನ್ನು ಪ್ರತಿಬಿಂಬಿಸುವ ವ್ಯವಸ್ಥೆ. ಹಸ್ತಮುದ್ರೆ, ಪಾದಚಾರಿ, ಅಂಗಭಂಗಿಗಳೆಲ್ಲವೂ ಭಾವ–ವಿಭಾವ ಸೂಚಕವಾದ ಬಾಹ್ಯ ಸಂಕೇತಗಳು. ಆಸನಗಳ ವೈವಿಧ್ಯವೂ ಅವುಗಳ ವರ್ಗಕ್ಕೆ ಸೇರುತ್ತದೆ. ವಿಭಾವವು ಇಲ್ಲಿ ಉದ್ದೀಪಕವಾದ ಬಹಿರಾವರಣ. ಅದು ಬಾವಪ್ರೇರಕ. ಭಾವಗಳನ್ನೂ ಭಾವಪ್ರೇರಕಗಳನ್ನೂ ಪ್ರೇಕ್ಷಕರ ಗಮನಕ್ಕೆ ತರುವುದೇ ನಟನ ಕೆಲಸ. ಕೋರ್ಟಿನಲ್ಲಿ ಅಪರಾಧವೆನಿಸುವ Impersonation ಅಥವಾ ತಾನು ಇನ್ನೊಬ್ಬನೆಂದು ತೋರಿಸುವುದೇ ನಟನ ಕಲೆ. ಹೀಗೆ ತೋರಿಸಲು ಲೋಕಜೀವನದ ಎಲ್ಲ ಸಾಧನೆಗಳನ್ನೂ ಬಳಸಿಕೊಳ್ಳುವುದು ಅಸಾಧ್ಯವೂ ಅನುಚಿತವೂ ಆಗುವುದರಿಂದ ನಾಟ್ಯದ (ಮೇಲೆ ಹೇಳಿದ) ಕೃತಕಸಾಧನಗಳನ್ನು ಬಳಸಲಾಗುತ್ತದೆ. ಈ ಕೃತಕವಾದ ತಾಂತ್ರಿಕ ಪಾರಿಭಾಷಿಕ ಸಂಜ್ಞೆಗಳನ್ನು ಭರತಶಾಸ್ತ್ರವು ಪೂರ್ಣತೆಗೊಯ್ದು ಮುಟ್ಟಿಸಿದೆ. ಯಕ್ಷಗಾನ ಸಂಪ್ರದಾಯದವರು ತಮಗೆ ಅಗತ್ಯವಾದಷ್ಟನ್ನು ಮಾತ್ರ ಆ ಸಂಜ್ಞಾಕೋಶದಿಂದ

ತೆಗೆದು ಬಳಸುತ್ತಾರೆ. ಪ್ರೇಕ್ಷಕರಿಗೆ ಈ ಮುದ್ರಾದಿ ಸಂಕೇತಗಳ ಸ್ಥೂಲ ಪರಿಚಯವಾದರೂ ಇರಬೇಕಾದದ್ದು ಅಗತ್ಯ. ಅದಿಲ್ಲದೆ ಇದ್ದಾಗ ಕೂಡ ರಸಪ್ರತೀತಿಗೆ ಬಹಳ ವಿಘ್ನಗಳಾದಂತೆ ಕಂಡು ಬರದಿರಲು ಯಕ್ಷನಾಟಕದ ಇತರ ಭಾವಸೂಚಕ ಸಾಧನಗಳ ಸಾಮರ್ಥ್ಯ ಕಾರಣವಾಗಿದೆ. ಅಂಥ ಸಾಧನಗಳಲ್ಲಿ ಚಂಡೆ ಮದ್ದಳೆಗಳು ಅತ್ಯಂತ ಗಣ್ಯವೆನ್ನಿಸಿವೆ. ಅವು ಭಾಗವತರು ಹಾಡುವ ರಸೋದ್ಬೋಧಕವಾದ ಪದಗಳ ಅರ್ಥಶಕ್ತಿಯನ್ನು ಬಹಳ ಚೆನ್ನಾಗಿ ಪೋಷಿಸುತ್ತವೆ. ಯಕ್ಷಗಾನದ ಮೃದಂಗದ ಗತ್ತು ಅನನ್ಯ ಸಾಮಾನ್ಯವಾದುದು; ರಸಾವೇಶವನ್ನು ನಟರಲ್ಲೂ ಪ್ರೇಕ್ಷಕರಲ್ಲೂ ಆವಿರ್ಭವಿಸುವಂತೆ ಮಾಡುವುದರಲ್ಲಿ ಅದರ ಪಾತ್ರ ಅತ್ಯಂತ ಹಿರಿಯದು. ಮೃದು–ಕಠಿನಭಾವ ಪ್ರವಾಹಗಳಿಗನುಗುಣವಾಗಿ ಅವನ್ನು ಒತ್ತಡ ಕೊಟ್ಟು ನಡೆಸಿಕೊಂಡು ಹೋಗುವುದರಲ್ಲಿ ಚಂಡೆಗಿಂತಲೂ ಮದ್ದಳೆ ಹೆಚ್ಚು ಕಲಾಕುಶಲತೆಯಿಂದ ಕೂಡಿದ್ದಾಗಿದೆ. ತಬಲೆಗಿಲ್ಲದ ವಿಶಿಷ್ಟ ಅನುಸರಣ ಶಕ್ತಿ ಮದ್ದಲೆಗಿದೆ. ಶಾಸ್ತ್ರೀಯ ದೃಷ್ಟಿಯಿಂದ ವಿಚಾರಿಸಿದರೂ ತಬಲೆಯ ಮಧ್ಯಭಾಗ (ಕರ್ನ)ವನ್ನು ಮಿಡಿದಾಗ ಅಪಸ್ವರ ಬರುತ್ತದೆ. ಆದರೆ ಕೇವಲ ಯಕ್ಷಗಾನ ಮದ್ದಲೆ ಮಾತ್ರ ಈ ಪರಿಪೂರ್ಣ ಶೃತಿಬದ್ಧತೆಯನ್ನು ಹೊಂದಿರುತ್ತದೆ. ಚಂಡೆಯು ಉಗ್ರಭಾವಗಳಾದ ಕ್ರೋಧ, ಪೌರುಷ, ಪರಾಕ್ರಮಗಳನ್ನು ಸಂವರ್ಧಿಸುವ ತಾಳಲಯಗಳನ್ನು ಚೆನ್ನಾಗಿ ಅಳವಡಿಸಿಕೊಂಡಿದೆ. ಚಂಡೆಯ ಅತಿನಾದ ಕೆಲವೆಡೆ ಕೇಳಿಬರುವುದು ನ್ಯೂನತೆ. ರಸಜ್ಞತೆಯಿಲ್ಲದ ಚಂಡೆಗಾರರಷ್ಟೇ ಎಲ್ಲ ಸಂದರ್ಭಗಳಲ್ಲೂ ಕಪಾಲಕ್ಕೆ ಏಟುಕೊಟ್ಟಂತೆ ಬಾರಿಸುತ್ತಾರೆ. ಅದರ ಸಂದರ್ಭೋಚಿತ ತಾಡನದಿಂದ ನರ್ತಕರ ನೃತ್ಯವಿಲಾಸ ಹೆಚ್ಚು ಆಕರ್ಷಕವಾಗುತ್ತದೆ. ಹೀಗೆ ಈ ಎರಡು ವಾದ್ಯಗಳು ಯಕ್ಷಗಾನ ಕಲೆಗೇ ಮಹಾ ಸಂಕೇತಗಳಾಗಿವೆ. ಸೂತ್ರಧಾರರಾದ ಭಾಗವತರಿಂದು ಧ್ವನಿವರ್ಧಕಗಳನ್ನು ಬಳಸಿ ಆಟ ಮುಗಿಯುವವರೆಗೆ ಕಂಠಮಾಧುರ್ಯವನ್ನು ಉಳಿಸಿಕೊಂಡರೆ ಹಾಗೇ ನಟರೂ 'ಸ್ಟೇಜ್‌ಮೈಕ್' ಬಳಸಿದರೆ ಆಟಕ್ಕೆ ಮತ್ತಷ್ಟು ಕಳೆ ಬರದಿರದು.

ಭಾವಗಳ ಬಗೆಗಳು

ಇಂದಿನ ಮಾತಿನಲ್ಲಿ ಯಕ್ಷನಾಟಕವನ್ನು 'ನೃತ್ಯಗೀತನಾಟಕ'ವೆಂದು ವರ್ಣಿಸಬೇಕಾಗಿದೆ. ಏಕೆಂದರೆ ನೃತ್ಯಗೀತಗಳಿಲ್ಲದ ಬೋಳು ಸಂವಾದಗಳಷ್ಟೇ ಈಗ ನಾಟಕಗಳೆನ್ನಿಸಿಕೊಂಡಿವೆ. ನೃತ್ಯದ ಮೂಲರೂಪವಾದ "ನೃತ್ತ"ವನ್ನು ಆಂಗಿಕಾಭಿನಯದ ಮೊದಲನೆಯ ಅಂಶವೆಂದೆನ್ನಬಹುದು. ನಾಟ್ಯದ ಆರು ಮುಖ್ಯಾಂಗಗಳಲ್ಲಿ (೧) ಕಾಲುಗಳು ಎರಡು (೨) ಕೈಗಳೆರಡು (೩) ಮತ್ತು ತಲೆಯೊಂದು ಕುಣಿತದಲ್ಲಿ ಈ ಮೂರೂ ತಾಳ–ಲಯಬದ್ಧವಾಗಿ ಚಲಿಸುತ್ತವೆ; (೪) ಕಟಿ (೫) ವಕ್ಷ ಮತ್ತು (೬) ಪಾರ್ಶ್ವಗಳು ಅವುಗಳನ್ನು ಅನುಸರಿಸುತ್ತವೆ. ಆಮೇಲೆ ಪ್ರತ್ಯಂಗ ಅಥವಾ ಉಪಾಂಗಗಳು

೯; ಹುಬ್ಬುಗಳು, ಕಣ್ಣುಗಳು, ಮೂಗು, ತುಟಿಗಳು, ಗಡ್ಡ, ಬಾಯಿ, ಕುತ್ತಿಗೆ, ಹೊಟ್ಟೆ ಮತ್ತು ತೊಡೆಗಳು. ಈ ಅಂಗ ಪ್ರತ್ಯಂಗಗಳೂ ಸಾಹಿತ್ಯವೆನ್ನುವ ವಾಚಿಕಾಭಿನಯವೂ ವ್ಯಕ್ತಪಡಿಸುವ ಭಾವಗಳು ಸುಮಾರು ೪೨; ಪ್ರೇಮ, ಉತ್ಸಾಹ, ಶೋಕ, ವಿಸ್ಮಯ, ಹಾಸ, ಭಯ, ಕ್ರೋಧ, ಜುಗುಪ್ಸೆ, ಶಮ, ನಿರ್ವೇದ, ಕ್ಷೋಭೆ, ದೈನ್ಯ, ಸುಸ್ತು, ತಲೆತಿರುಕತನ, ಬೆಪ್ಪುತನ, ಉಗ್ರತೆ, ಎಚ್ಚರ ತಪ್ಪುವಿಕೆ, ಎಚ್ಚರವಾಗುವುದು, ಸ್ವಪ್ನ–ಸ್ಥಿತಿ, ತಲೆಕೆಟ್ಟ ಅವಸ್ಥೆ, ಸೊಕ್ಕು, ಸಾಯುತ್ತಿರುವ ಸ್ಥಿತಿ, ಆಲಸ್ಯ, ಎದುರುಸಿಟ್ಟು, ನಿದ್ರಾವಶತೆ, ಮನಸ್ಸಿನಲ್ಲಿದ್ದುದನ್ನು ಅಡಗಿಸಿಕೊಳ್ಳುವ ಪ್ರಯತ್ನ, ತಾಳ್ಮೆಗೇಡು, ಹುಚ್ಚು ವರ್ತನೆ, ಶಂಕೆ, ನೆನಪು ಮಾಡಿಕೊಳ್ಳುವುದು, ನಿರ್ಧಾರ ಮಾಡುವುದು, ಶಾರೀರಿಕ ವೇದನೆ, ಗಾಬರಿ, ಸಂಕೋಚ, ಸಂತೋಷ, ಹೊಟ್ಟೆಕಿಚ್ಚು, ಖಿನ್ನತೆ, ಧೃತಿ, ಚಾಪಲ್ಯ, ಅಶಕ್ತಮನಃಸ್ಥಿತಿ, ಅಥವಾ ಜೋಲುಮೋರೆ ಹಾಕಿಕೊಳ್ಳುವುದು, ಚಿಂತೆ ಮತ್ತು ಸಂದೇಹಗ್ರಸ್ತತೆಗಳು. ಇವುಗಳಲ್ಲಿ ಕೆಲವು ಆಂಗಿಕಾಭಿನಯಕ್ಕೆ ಸೇರುವ ಸಾತ್ತ್ವಿಕ ವಿಭಾಗದ ಶಾರೀರಿಕ ವಿಕಾರಗಳ ಮೂಲಕವೂ ಹೊರಪಡುವವು; ನಿಶ್ಚೇಷ್ಟತೆ, ಬೆವರುವುದು, ರೋಮಾಂಚ, ಗದ್ಗದ ಕಂಠ, ನಡುಕ, ಮುಖದ ಬಣ್ಣ ಬದಲಾಗುವುದು, ಕಣ್ಣೀರು ಸುರಿಯುವುದು ಮತ್ತು ದಿಙ್ಮೂಢ, ನಿಶ್ಚಲತೆ ಎಂಬ ೯ ಭಾವಸೂಚಕವಾದ ದೈಹಿಕ ವಿಕಾರಗಳು. ಭಾವಗಳನ್ನು ಪ್ರದರ್ಶಿಸುವ ನಟನು ಪ್ರೇಕ್ಷಕರ ಸಮೀಕ್ಷಣದ ಕೇಂದ್ರಬಿಂದುವಾಗಿರುತ್ತಾನೆ. ಮುಖ್ಯಪಾತ್ರಗಳಾದ ಮಿತ್ರಪಕ್ಷದ ನಾಯಕ–ನಾಯಿಕೆಯರ ಪಾರ್ಟು ಹಾಕಿದವರು ಅಂಥ ಕೇಂದ್ರಗಳಲ್ಲಿ ಅತಿ ಗಣ್ಯರು. ಅವರು ತೋರಿಸುವ ಭಾವ ವಿಕಾಸವನ್ನೇ ಪ್ರೇಕ್ಷಕರ ಮನಸ್ಸು ದೃಢವಾಗಿ ಅನುಸರಿಸುತ್ತಿರುತ್ತದೆ. ಇದೇ ರಸಾಸ್ವಾದದ ಮಾರ್ಗ. ಕಥಾ ನಾಯಕನನ್ನು ಶಾಸ್ತ್ರದಲ್ಲಿ ಆಲಂಬನ ವಿಭಾವವೆನ್ನಲು ಅವನಲ್ಲಿರುವ ಸ್ಥಾಯಿಯಾದ ಪ್ರೇಮ ಮುಂತಾದ ಭಾವಗಳ ವಿಕಾಸವನ್ನೇ ಪ್ರೇಕ್ಷಕರ ಮನಸ್ಸು ಅನುಸರಿಸುತ್ತ ಹೋಗುವುದೇ ಕಾರಣ. ಪ್ರೇಮ ಮುಂತಾದ ಸುಮಾರು ೯ ಸ್ಥಾಯಿಭಾವಗಳ ವಿಕಾಸಕ್ಕೆ ಮಿಕ್ಕೆಲ್ಲ ಭಾವಗಳೂ ಅನುಗುಣವಾಗಿರುವಂತೆ ಯೋಜಿಸುವುದೇ ನಾಟಕಕಾರನ ಜಾಣ್ಮೆಯ ಗುರುತು.

ಅರ್ಥಗಾರಿಕೆ

ಯಕ್ಷನಾಟಕದ ಅರ್ಥಗಾರಿಕೆಯ ವೈಶಿಷ್ಟ್ಯ ಎತ್ತಿ ಹೇಳುವಂಥದು. ಪದ್ಯಗಳಲ್ಲಿಯೇ ಕಥಾನಕವೂ ಅದರ ಸಂವಾದವೂ ಅಡಕವಾಗಿರುವುದಾದರೂ ಅದು ಹಿಂದೆ ಹೇಳಿದ ವೀಥೀ ಲಕ್ಷಣಗಳೆಲ್ಲವನ್ನೂ ಅಳವಡಿಸಿಕೊಂಡು ಹತ್ತು ಸಮಸ್ತರ ಅರ್ಥಗ್ರಹಣಶಕ್ತಿಗೆ ಹೊಂದುವ ಶೈಲಿಯಲ್ಲಿ ಪದ್ಯಗಳ ಅರ್ಥವನ್ನು ರಸವತ್ತಾಗಿ ವಿವರಿಸುವುದು ರಸದೃಷ್ಟಿಯಿಂದಲೂ ಸಮಾಜಶಿಕ್ಷಣ ದೃಷ್ಟಿಯಿಂದಲೂ ಅತ್ಯಂತ ಉಚಿತ. ಎಲ್ಲ ಕಲೆಗಳಲ್ಲೂ ಅತಿವಾದಿಗಳಿರುವಂತೆ ಇಲ್ಲಾದರೂ ತಮ್ಮ ವಾಕ್‌ಪೌರುಷವನ್ನು ಪ್ರದರ್ಶಿಸ

ಹೊರಟ ಕೆಲವರು ತಮ್ಮ ವಾಕ್‌ಚಾಪಲದಿಂದ ವಿರಸ ಹುಟ್ಟಿಸಿದ್ದಿರಬಹುದು. ಆದರದು ನಿಯಮವಲ್ಲ, ಅಪವಾದವಷ್ಟೇ.

ಪ್ರಸಾರ ಪ್ರಯತ್ನ

ಯಕ್ಷನಾಟಕಕ್ಕೆ ಅಂತಃಪ್ರಾಂತೀಯ ಹಾಗೂ ಅಂತಾರಾಷ್ಟ್ರೀಯ ಪ್ರಸಾರವನ್ನು ಒದಗಿಸುವ ಉದ್ದೇಶದಿಂದ ಡಾ.ಶಿವರಾಮಕಾರಂತರು ನಡೆಸಿದ ಪ್ರಯೋಗಗಳು ಸ್ತುತ್ಯ. ಆದರವು ನಮ್ಮ ಯಕ್ಷಗಾನ ರಸಿಕರೆಲ್ಲರಿಗೂ ತೃಪ್ತಿಯನ್ನುಂಟು ಮಾಡಲು ಶಕ್ತವಾಗಲಿಲ್ಲ. ವೇಷಗಳು, ಭಾಗವತರು ಪದ ಹೇಳುತ್ತಿರುವಾಗ, ಕೇವಲ ಮೂಕವಾಗಿ ಅಭಿಯಿಸಿದ್ದು ಇಲ್ಲಿ ಅನೇಕರಿಗೆ ಒಂದು ನ್ಯೂನತೆಯೆನ್ನಿಸಿತು. ಭಾಷೆ ತಿಳಿಯದವರಿಗೆ ಮೂಕ ಸನ್ನೆಯಿಂದಲೇ ಭಾವಗ್ರಹಣವಾಗಬೇಕೆಂಬ ಉದ್ದೇಶವು ಅಂಥ ಪ್ರಯೋಗಕ್ಕಿದ್ದರೆ ಭಾಗವತರು ಕನ್ನಡ ಪದಗಳನ್ನು ಹೇಳದೆ ಕುಣಿತಕ್ಕೆ ತಕ್ಕ ರಾಗಾಲಾಪವನ್ನು ಪಕ್ಕವಾದ್ಯಗಳೊಂದಿಗೆ ಮಾಡಿದ್ದರೆ ಸಾಕಾಗುತ್ತಿತ್ತಲ್ಲವೇ? ಹಾಗೆ ಮಾಡದೆ ಇರುವಾಗ ಪಾತ್ರಧಾರಿಗಳು ತಮ್ಮ ಆಂಗಿಕ, ಸಾತ್ವಿಕ, ಆಹಾರ್ಯ ಅಭಿನಯಗಳನ್ನು ನರ್ತನದೊಡನೆ ಪ್ರದರ್ಶಿಸುವಾಗ ಕನ್ನಡದಲ್ಲಿ ಅರ್ಥ ಹೇಳಿದರೆ ಏನು ಕಷ್ಟ? ಅಥವಾ ಭಾಗವತರೇ ಬೇಡವೆಂದು ತೆಗೆದು ಹಾಕಿ ವೇಷಧಾರಿಗಳೇ ಅವರವರ ಪದಗಳನ್ನು ಹೇಳುತ್ತ ಅಲ್ಪಸ್ವಲ್ಪ ಗದ್ಯಮಿಶ್ರಣದಿಂದ ಅಭಿನಯಿಸುತ್ತ ಕುಣಿದರೂ ಮೂಕಾಭಿನಯಕ್ಕಿಂತ ಹೆಚ್ಚು ಆಕರ್ಷಕವಾದೀತೆಂದು ಕೆಲವರಿಗನ್ನಿಸಿದ್ದು ಸಹಜ.

ನಮ್ಮ ಯಕ್ಷಗಾನ ಕಲಾಕೃಷಿಕರಲ್ಲಿ ಕೆಲವರಾದರೂ ಸಂಘಟಿತ ಪ್ರಯತ್ನದಿಂದ ನೆರೆಯ ಪ್ರಾಂತಗಳ ರಂಗಮಂದಿರಗಳಲ್ಲಿ ಈ ಅದ್ವಿತೀಯ ನಾಟಕರೂಪವನ್ನು ಜನಪ್ರಿಯಗೊಳಿಸುವುದೀಗ ಕ್ರಮಪ್ರಾಪ್ತ. ಸಂಘಟನೆಯ ಮಾತನ್ನೆತ್ತಿದ ಕೂಡಲೇ ಅದು ಅಸಾಧ್ಯವೆಂದು ನುರಿತ ಗಣ್ಯ ಯಕ್ಷಗಾನ ಕಲಾವಿದರಿಗೆ ಎನ್ನಿಸುತ್ತದೆ. ಈ ಪರಿಸ್ಥಿತಿಯಲ್ಲಿ ನಮ್ಮ ಕರ್ನಾಟಕ ಸಂಘಗಳೂ ಸಾಂಸ್ಕೃತಿಕ ಮಂಡಲಗಳೂ ಯಕ್ಷಗಾನ ರಸಿಕರನ್ನು ಸಂಘಟಿಸಿ ಅವರ ಪ್ರಯತ್ನದ ಫಲವಾಗಿ ಮಹಾರಾಷ್ಟ್ರ, ಆಂಧ್ರ, ಮಲೆಯಾಳ ಮತ್ತು ತಮಿಳುನಾಡುಗಳಲ್ಲಿರುವ ರಂಗಮಂದಿರಗಳೊಡನೆ ಸಂಪರ್ಕ ಬೆಳೆಸಿ ಇಲ್ಲಿಯ ಕಲಾವಿದರಿಗೆ ವರುಷಕ್ಕೊಮ್ಮೆಯಾದರೂ ಅಲ್ಲಿ ಯಕ್ಷ ನಾಟಕವನ್ನಾಡುವ ಅವಕಾಶವನ್ನು ಕಲ್ಪಿಸಿಕೊಡಬಹುದು. ರಾಜ್ಯದಲ್ಲಿರುವ ಪ್ರತಿಯೊಂದು ಕಾಲೇಜೂ ವರ್ಷಕ್ಕೊಮ್ಮೆ ಒಂದು ಯಕ್ಷಗಾನ ಆಟವನ್ನಾದರೂ ಆಡಿಸಲು ಏರ್ಪಾಟು ಮಾಡುವಂತೆ ಕರ್ನಾಟಕ ಸಂಘಗಳೂ ಸಾಂಸ್ಕೃತಿಕ ಕೇಂದ್ರಗಳೂ ಪ್ರಿನ್ಸಿಪಾಲರಿಗೆ ಅರಿಕೆ ಮಾಡಿಕೊಳ್ಳಬಹುದು. ಶಿಕ್ಷಣ ಶಾಖೆಗೆ ಬರೆದು ಐಚ್ಛಿಕವಾಗಿ, "ಡ್ರಾಯಿಂಗ್" ಪರೀಕ್ಷೆಗಳನ್ನಿಟ್ಟಂತೆ ಹೈಸ್ಕೂಲು ಮಟ್ಟದಲ್ಲಿ ಯಕ್ಷಗಾನ ಪರೀಕ್ಷೆಗಳನ್ನು ಇಡಿಸಲು ಪ್ರಯತ್ನಿಸಲು ಸಾಂಸ್ಕೃತಿಕ ಸಂಸ್ಥೆಗಳು ಮುಂದಾಗಬಹುದು. ಇಲ್ಲವಾದರೆ ನಮ್ಮೆಲ್ಲರ ಹೃದಯಕ್ಕೆ ಆಪ್ಯಾಯಮಾನವಾದ

ಈ ಯಕ್ಷಗಾನ ಸಂಪ್ರದಾಯವು ಲಘು ಕಲ್ಪನೆಯ ಮನೋರಂಜನೆಗೆ ವಶವಾದ ನಮ್ಮ ರಾಜ್ಯದಲ್ಲಿ ನಶಿಸಿ ಹೋಗುವ ಭಯವಿದೆ. ಉತ್ತರ ಕನ್ನಡವೇ ಇಂದು ಕೆಲ ಪ್ರಧಾನ ಯಕ್ಷಗಾನ ಕಲಾವಿದರಿಂದ ಕೂಡಿದ್ದು ಹೆಮ್ಮೆಯ ಸಂಗತಿ. ಇದನ್ನರಿತು ನಮ್ಮ ಜಿಲ್ಲಾ ಬಂಧುಗಳು ಉಕ್ತ ಪ್ರಯತ್ನವನ್ನು ತಪ್ಪದೇ ಮಾಡಲೆಂದು ಹಾರೈಸುತ್ತೇನೆ.

– ಬಿ.ಎಚ್.ಶ್ರೀಧರ

ಪ್ರಸ್ತಾವನೆ

ಭರತ ವರ್ಷದ ಕಾವ್ಯಪ್ರಪಂಚದಲ್ಲಿ ವಾಲ್ಮೀಕಿ ಆದಿಕವಿ ಎಂದು ಹೆಸರಾಗಿರುವಂತೆ ನಾಟಕ ಪ್ರಪಂಚದಲ್ಲಿ ಭಾಸನು ಆದಿ ನಾಟಕಕಾರ. ಕಾಳಿದಾಸನು ತನ್ನ 'ಮಾಲವಿಕಾಗ್ನಿಮಿತ್ರ'ದಲ್ಲಿ ಭಾಸನನ್ನು ಮೆಚ್ಚಿ ಕೊಂಡಾಡಿದ್ದಾನೆ. ಕಾಳಿದಾಸನ ಕಾಲವು ಕ್ರಿ.ಪೂ. ೧ನೆಯ ಶತಮಾನವೆಂಬ ಭಾರತೀಯ ವಾದವನ್ನು ಆಧರಿಸಿದರೆ ಭಾಸನಕಾಲ ಕ್ರಿ.ಪೂ. ೨ ನೆಯ ಶತಮಾನ ಅಥವಾ ಅದಕ್ಕೂ ಸ್ವಲ್ಪ ಹಿಂದೆ ಎಂದು ಹೇಳಬೇಕಾಗುತ್ತದೆ. ಕೆಲ ಪ್ರಸಿದ್ಧ ಸಂಶೋಧಕರ ಭಿನ್ನಾಭಿಪ್ರಾಯಗಳ ಪ್ರಕಾರ ಭಾಸನು ಕ್ರಿ.ಶ. ೧ನೆಯ ಶತಮಾನದಿಂದ ೪ನೆಯ ಶತಮಾನದ ವರೆಗೆ ಇರುವ ೪೦೦ ವರ್ಷಗಳಲ್ಲಿ ಅತ್ತ ಇತ್ತ ಒಲೆಯುತ್ತ ಇರಬೇಕಾಗಿದೆ.

ಭಾಸನ ನಾಟಕಗಳೆಂದು ಈಗ ಪ್ರಸಿದ್ಧವಾಗಿರುವ ನಾಟಕಗಳು ೧೪. ಸ್ವಪ್ನವಾಸವದತ್ತ, ಪ್ರತಿಜ್ಞಾಯೌಗಂಧರಾಯಣ, ಅವಿಮಾರಕ, ಚಾರುದತ್ತ ಎಂಬ ೪ ನಾಟಕಗಳು ಕಥಾವಸ್ತುವಿನ ದೃಷ್ಟಿಯಿಂದ ಬೃಹತ್ಕಥೆಯ ಆಧಾರದ ಮೇಲೆ ಬರೆದವು. ಅಭಿಷೇಕ ನಾಟಕ, ಪ್ರತಿಮಾ ನಾಟಕ, ಯಜ್ಞಫಲ ಎಂಬ ನಾಟಕಗಳು ರಾಮಾಯಣದ ಆಧಾರದ ಮೇಲೆ ಬರೆದವು. ಬಾಲಚರಿತ ಎಂಬ ನಾಟಕವು ಭಾಗವತವನ್ನು ಆಧರಿಸಿದೆ. ಪಂಚರಾತ್ರ, ಮಧ್ಯಮವ್ಯಾಯೋಗ, ದೂತ ವಾಕ್ಯ, ದೂತ ಘಟೋತ್ಕಚ, ಕರ್ಣಭಾರ, ಊರುಭಂಗ ಎಂಬವು ಭಾರತವನ್ನಾಧರಿಸಿ ಬರೆದಂಥವು.

"ಉದಯನ ಕಥಾ ನಾಟಕಗಳಲ್ಲಿ ಸ್ವಪ್ನವಾಸವದತ್ತವು ಹೇಗೋ ರಾಮಾಯಣ ಕಥಾ ನಾಟಕಗಳಲ್ಲಿ ಪ್ರತಿಮಾ ನಾಟಕವು ಹೇಗೋ ಭಾರತ ಕಥಾ ನಾಟಕಗಳಲ್ಲಿ ಪಂಚರಾತ್ರವು ಹಾಗೆ ಭಾಸನ ಕಲಾಕೌಶಲವನ್ನು ಸಮಗ್ರರೂಪದಲ್ಲಿ ಪ್ರದರ್ಶಿಸತಕ್ಕದ್ದಾಗಿದೆ" ಎನ್ನುತ್ತಾರೆ ಡಾ.ಎ.ಆರ್.ಕೃಷ್ಣಶಾಸ್ತ್ರಿಗಳು. ಸಂಸ್ಕೃತ ನಾಟ್ಯಶಾಸ್ತ್ರದ ಪ್ರಕಾರ ಇದು ಮೂರು ಅಂಕದ 'ಸಮವಕಾರ' ಎಂಬ ರೂಪಕ. ಕಥೆ ಉತ್ತರ ಗೋಗ್ರಹಣ; ಆದರೆ ಅದನ್ನು ನಾಟಕದ ಹೆಸರಿನಿಂದ ಊಹಿಸುವುದಕ್ಕಾಗುವುದಿಲ್ಲ. ಏಕೆಂದರೆ ಇದು ಕವಿಕಲ್ಪಿತವಾದ ಐದು ರಾತ್ರಿಯ ಒಂದು ವೃತ್ತಾಂತವನ್ನು ಅವಲಂಬಿಸಿದೆ. ಕಥಾಸಾರ ಇಂತಿದೆ:–

ಪಾಂಡವರು ಅಜ್ಞಾತವಾಸದಲ್ಲಿದ್ದಾಗ ಒಂದು ದಿನ ದುರ್ಯೋಧನನು ಒಂದು ಯಾಗ ಮಾಡಿ ದ್ರೋಣಾಚಾರ್ಯರಿಗೆ ಆಚಾರ್ಯಪೂಜೆ ಮಾಡಿ ಅವರಿಗೆ ಇಷ್ಟವಾದ ದಕ್ಷಿಣೆಯನ್ನು ಕೊಡುವುದಾಗಿ ಪ್ರತಿಜ್ಞೆ ಮಾಡಿದನು. ಆಗ ಅವರು ಪಾಂಡವರಿಗೆ ಅರ್ಧರಾಜ್ಯವನ್ನು ಕೊಡಬೇಕೆಂದು ಕೇಳಿದರು. ದುರ್ಯೋಧನನು ಕೊಡಬೇಕೆಂದಿರಲು ಶಕುನಿಯು ಅಡ್ಡ ಬಂದು "ಇಲ್ಲಿಂದ ಐದು ರಾತ್ರಿಯೊಳಗಾಗಿ ಪಾಂಡವರ ವೃತ್ತಾಂತವನ್ನು ತರುವುದಾದರೆ ದುರ್ಯೋಧನನು ಅರ್ಧ ರಾಜ್ಯವನ್ನು ಕೊಡುತ್ತಾನಂತೆ" ಎಂದನು. ಭೀಷ್ಮರ ಪ್ರೇರಣೆಯ ಮೇರೆಗೆ ದ್ರೋಣರು ಒಪ್ಪಿಕೊಳ್ಳುತ್ತಾರೆ. ಕೀಚಕವಧೆಯ ವರ್ತಮಾನ ಆಗತಾನೇ ಬಂದಿದ್ದರಿಂದ ಅದು ಭೀಮನ ಕೆಲಸವೇ ಎಂದೂ ವಿರಾಟನಗರಿಯಲ್ಲಿ ಅವರ ವರ್ತಮಾನ ತಿಳಿಯುವುದೆಂದೂ ಭೀಷ್ಮರು ನಿರ್ಧರಿಸಿ ವಿರಾಟನ ಮೇಲೆ ತಮಗೆ ಹಳೆಯ ವೈರವಿತ್ತೆಂದು ನೆಪ ಹೇಳಿ ಅವನ ಮೇಲೆ ಯುದ್ಧಕ್ಕೆ ಹೊರಟು ಅವನ ಗೋವುಗಳನ್ನು ಹಿಡಿದರು.

ವಿರಾಟನು ಯುದ್ಧಕ್ಕೆ ಹೊರಡಬೇಕೆನ್ನುವಷ್ಟರಲ್ಲಿ ಉತ್ತರನು ಬೃಹನ್ನಳೆಯನ್ನು ಸಾರಥಿಯನ್ನಾಗಿ ಮಾಡಿಕೊಂಡು ಹೊರಟುಬಿಟ್ಟಿದ್ದನು. ಅರ್ಜುನನ ಬಾಣ ಪ್ರಯೋಗವನ್ನು ಗುರುತಿಸಿ ಭೀಷ್ಮ ದ್ರೋಣರು ತೃಪ್ತಿಗೊಂಡು ಸುಮ್ಮನಾದರು; ಮಿಕ್ಕವರು ಸೋತರು; ಭೀಮನು ಕಾಲುನಡಿಗೆಯಿಂದ ಹೋಗಿ ಅಭಿಮನ್ಯುವನ್ನು ಸೆರೆ ಹಿಡಿದುಕೊಂಡು ಬಂದನು. ಉತ್ತರನಿಂದ ನಿಜಸ್ಥಿತಿಯೆಲ್ಲಾ ಹೊರಪಟ್ಟಿತು.

ವಿರಾಟನು ತನ್ನ ಮಗಳಾದ ಉತ್ತರೆಯನ್ನು ಅಭಿಮನ್ಯುವಿಗೆ ಕೊಟ್ಟು ಲಗ್ನ ಮಾಡಬೇಕೆಂದು ನಿಶ್ಚಯಿಸಿ ಈ ಶುಭ ವರ್ತಮಾನವನ್ನು ಕೌರವ ಶಿಬಿರಕ್ಕೆ ಹೇಳಿ ಕಳಿಸಿದಾಗ ಪಾಂಡವರ ವೃತ್ತಾಂತವು ವಿವರವಾಗಿ ತಿಳಿದು ನಿರ್ವಿವಾದ ಪರಿಸ್ಥಿತಿಯುಂಟಾಯಿತು. ಆಗ ದುರ್ಯೋಧನನು ತನ್ನ ಮಾತಿನಂತೆ ಅರ್ಧರಾಜ್ಯವನ್ನು ಪಾಂಡವರಿಗೆ ಕೊಟ್ಟೆನು ಎಂದು ಸಾರಿದನು.

"ನಾಟಕದ ಉದ್ದಕ್ಕೂ ಎಲ್ಲಿ ನೋಡಿದರೂ ಒಂದು ಉದಾತ್ತತೆ, ಘನತೆ, ಗಾಂಭೀರ್ಯ ಕಂಡು ಬರುತ್ತವೆ. ಉತ್ತರನ ಜಂಭ, ಹೇಡಿತನಗಳ ಗ್ರಾಮ್ಯಪರಿಹಾಸವಿಲ್ಲ; ಶಾಂತವೂ ಘನವೂ ಆದ ವೀರ್ಯ, ಶೌರ್ಯ, ಔದಾರ್ಯ ಮತ್ತು ನಿರ್ಮಲವೂ ನಿಷ್ಕಲ್ಮಷವೂ ಆದ ಧಾರ್ಮಿಕ ವಾತಾವರಣ" ತುಂಬಿವೆ. ಈ ವಾತಾವರಣದಲ್ಲಿ ಚಲಿಸುವ ಭಾರತಪಾತ್ರಗಳು ಚಿರಪರಿಚಿತವಾದರೂ ಹೊಸತಾಗಿ ತೋರುತ್ತವೆ.

"ಕುರುಕುಲ ಪಿತಾಮಹರಾದ ಭೀಷ್ಮರು ಮಹಾಭಾರತದ ಅಗಾಧ ಸಂಸಾರವನ್ನು ನಡೆಸಬಲ್ಲ ಸಮರ್ಥರು; ತಾಳ್ಮೆ, ಗೌರವ, ಘನತೆ, ಗಾಂಭೀರ್ಯಗಳಿಂದ ಶೋಭಿಸುವವರು." ಅವರು ಎಲ್ಲವರ ಯೋಗ್ಯತೆಯನ್ನೂ ಬಲ್ಲವರು; ಸೂಕ್ಷ್ಮದರ್ಶಿಗಳು, ನಿರ್ಧಾರ ಬುದ್ಧಿಯುಳ್ಳವರು ಮತ್ತು ಪರಾಕ್ರಮ ಪಕ್ಷಪಾತಿಗಳು.

ಭೀಷ್ಮರಂತೆಯೇ ದ್ರೋಣರು; ಋಜುಬುದ್ಧಿಯುಳ್ಳ ಮೃದು ಹೃದಯರು. ಪಾಂಡವರ ಕಷ್ಟವನ್ನು ನೆನೆದು ಬಹಳ ನೊಂದವರು, ತೇಜಸ್ವಿಗಳಾದ ಬ್ರಾಹ್ಮಣರು; ಅನ್ಯಾಯ ಅವಮಾನಗಳನ್ನು ಸಹಿಸತಕ್ಕವರಲ್ಲ ಮತ್ತು ಅಪಾರವಾದ ಶಿಷ್ಯವಾತ್ಸಲ್ಯವುಳ್ಳವರು. ಈ ಭೀಷ್ಮದ್ರೋಣರೇ ನಾಟಕ ಸೂತ್ರಧಾರರು.

ದುರ್ಯೋಧನ, ಶಕುನಿ, ಕರ್ಣರದು ಪ್ರತ್ಯೇಕ ಗುಂಪು ಅವರ ದುಷ್ಟ ಪ್ರಕೃತಿಯು ಭೀಷ್ಮ–ದ್ರೋಣರ ಸಾತ್ತ್ವಿಕ ಪ್ರಭೆಯಲ್ಲಿ ಸ್ವಲ್ಪ ಪಳಗಿ ಸುಧಾರಿಸಿದೆ. ಕರ್ಣ ಉದಾರಿ, ಶೂರ, ನಿಷ್ಕಪಟಿ; ಆದರೆ ದುರ್ಯೋಧನ ಭಕ್ತಿ ಅವನ ಬುದ್ಧಿಯ ಋಜುತ್ವವನ್ನು ಸ್ವಲ್ಪ ಮೊಟಕುಗೊಳಿಸಿದೆ. ಆದರೂ ಶಕುನಿಗಿಂತ ಬಹುಪಾಲು ಉತ್ತಮ. ದುರ್ಯೋಧನ ಇವರಿಬ್ಬರ ನಡುವೆ ನಿಲ್ಲುತ್ತಾನೆ. ಆದರೂ ತನ್ನ ಸತ್ಯಬದ್ಧತೆಯಿಂದ ಬೆರಗುಗೊಳಿಸುತ್ತಾನೆ. ಶಕುನಿಯು ಕಲ್ಲೆದೆಯ "ಸಿನಿಕ್"; ಕಾಪಟ್ಯ, ಮಾತ್ಸರ್ಯ, ದುಷ್ಪ್ರೇರಣೆಗಳ ತವರು ಮನೆ.

ವಿರಾಟ, ಉತ್ತರ, ಪಾಂಡವರು ಮತ್ತು ಅಭಿಮನ್ಯುಗಳದು ಮೂರನೆಯ ಗುಂಪು. ಇವರಲ್ಲಿ ಅಭಿಮನ್ಯುವಿನ ಪಾತ್ರ ಪ್ರದರ್ಶನ ಈ ನಾಟಕದಲ್ಲಿ ಅತ್ಯುತ್ತಮವಾಗಿದೆ. ಕ್ಷತ್ರಧರ್ಮದ ಮೂರ್ತಿಯಾದ ಅಭಿಮನ್ಯುವಿನ ಪರಾಕ್ರಮ, ಕುಲಾಭಿಮಾನ, ಸ್ವಾಭಿಮಾನ ವಿದ್ಯುಕ್ತ ನಡವಳಿಕೆಯಲ್ಲಿಯ ನಿಷ್ಠೆ, ಅವನು ನಿರಾಯುಧನಾದ ಛದ್ಮವೇಷಧಾರಿಯಾದ ಭೀಮನ ಕೈಯಲ್ಲಿ ಸಿಕ್ಕಿಬಿದ್ದು ಪಡುವ ಪರಿಪಾಟಲು, ದರ್ಪ, ವಿನಯ, ಕೃತಜ್ಞಭಾವಗಳ ಸಮಯೋಚಿತ ಪ್ರದರ್ಶನಗಳು ಬಹಳ ಮನೋರಂಜಕವಾಗಿವೆ. ಭೀಮಾರ್ಜುನರು ಅಜ್ಞಾತ ವೇಷದಲ್ಲಿದ್ದುಕೊಂಡು ತರುಣನಾದ ಅಭಿಮನ್ಯುವನ್ನು ತಮಾಷೆಗಾಗಿ ಕೆಣಕಿ ಅವನ ಬಾಯಿಂದ ಅವನ ಸ್ವಾಭಿಮಾನ, ಪಿತೃಪೌರುಷ ಪ್ರಶಂಸೆ, ವೀರವಾಣಿಗಳನ್ನು ಹೊರಡಿಸಿ ಮನಸ್ಸಿನಲ್ಲಿಯೇ ಹಿರಿ ಹಿರಿ ಹಿಗ್ಗುವ ಸಂನಿವೇಶವು ನಾಟಕ ಪ್ರಪಂಚದಲ್ಲಿ ಬಹಳ ವಿರಳವಾದ ಎದೆ ತಣಿಸುವ ವಿನೋದ ಸಂದರ್ಭ. ಇದು ಭಾಸನ ಪ್ರಸನ್ನ, ಗಂಭೀರ, ಪವಿತ್ರ ರಸಜ್ಞತೆಗೆ ನಿಕಷವಾಗಿದೆ ಎನ್ನಬಹುದು. ಭಾಸನ ಪಂಚರಾತ್ರ–ಮಧ್ಯಮವ್ಯಾಯೋಗಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದವರಿಗೆ ಅವನು ತನ್ನ ಎಲ್ಲ ನಾಟಕಗಳಲ್ಲೂ ವಾತ್ಸಲ್ಯದ ಅಂತರ್ವಾಹಿನಿಯನ್ನು ಎಲ್ಲ ಮಧುರ ಬಾಂಧವ್ಯದ ಸಂನಿವೇಶಗಳಲ್ಲೂ ಹರಿಯಿಸಿ ಜೀವನದ ಪರಮೌಲ್ಯದ ವ್ಯಾವಹಾರಿಕ ತತ್ತ್ವಾರ್ಥವನ್ನು ಅಭಿವ್ಯಕ್ತ ಮಾಡಿದ್ದಾನೆ ಎಂದೊಮ್ಮೆ ತೋರಿದರೆ ಆಶ್ಚರ್ಯವಲ್ಲ. ದುರ್ಯೋಧನನ ಪತ್ನಿಯ ಪಾತ್ರವನ್ನು ಈ ಪ್ರಸಂಗದಲ್ಲಿ ಹೊಸದಾಗಿ ಸೇರಿಸಲಾಗಿದೆ.

ಮೂಲ ನಾಟಕದ ಅಚ್ಚುಕಟ್ಟಾದ ಮತ್ತು ಪಾತ್ರ ಸ್ವಭಾವ ವ್ಯಂಜಕವಾದ ಎಲ್ಲ ಸಂವಾದ ವಾಕ್ಯಗಳನ್ನೂ ಇಲ್ಲಿ ಅನುವಾದ ಮಾಡಿಲ್ಲ. ಆ ಸ್ವಾರಸ್ಯವನ್ನು ಯಕ್ಷನಾಟಕದ ನಟರೇ ಅಳವಡಿಸಿಕೊಳ್ಳಬಹುದು. ಅವುಗಳಲ್ಲಿಯ ಗಣ್ಯಾಂಶಗಳನ್ನು ಆರಿಸಿ ಅವುಗಳಿಗೆ ಇಲ್ಲಿ ಯಕ್ಷಗೀತ ರೂಪವನ್ನು ಅಳವಡಿಸಲಾಗಿದೆ. ಬಾಸನು ಸರಸ್ವತಿಯ ಹಾಸನೆಂದು

ಪ್ರಸಿದ್ಧನಾಗಿದ್ದಾನೆ. ಆದ್ದರಿಂದ ಅವನ ಸರಳವಾಕ್ಯಗಳನ್ನು ಎಲ್ಲ ಅರ್ಥಧ್ವನಿಗಳೊಡನೆ ಭಾಷಾಂತರಿಸುವುದು ಕಠಿನ ಗ್ರಂಥಗಳ ಭಾಷಾಂತರಕ್ಕಿಂತ ಕಠಿನ. ಈ ಅಂಶವನ್ನು ಗಮನಿಸಿ ಯಥಾವತ್ತಾಗಿ ಭಾಷಾಂತರಿಸಲು ಯತ್ನಿಸದೆ ಭಾವಾನುವಾದ ಮಾರ್ಗವನ್ನೇ ಆದ್ಯಂತವಾಗಿ ಅನುಸರಿಸಲಾಗಿದೆ. ಈ ತಾತ್ಪರ್ಯ ನೀತಿಯ ಜಯಾಪಜಯಗಳು ನಟಾಧೀನ. ಆದುದರಿಂದ ನಟರಾಜನನ್ನು ನಮಿಸಿ ಗದ್ಯಪ್ರಸ್ತಾವನೆಯನ್ನು ಕೊನೆಗೊಳಿಸುತ್ತೇನೆ.

ಟಿಪ್ಪಣಿ

ಮೊದಲನೆಯ ಅಂಕ ನಡೆಯುವುದು ಹಸ್ತಿನಾವತಿಯಲ್ಲಿರುವ ದುರ್ಯೋಧನನ ಅರಮನೆಯ ಆವರಣದಲ್ಲಿ. ಎರಡನೆಯ ಅಂಕ ನಡೆಯುವುದು ವಿರಾಟರಾಜನ ರಾಜಧಾನಿಯ ಹೊರವಲಯದಲ್ಲಿರುವ ವಿಸ್ತಾರವಾದ ಗೋವನದಲ್ಲಿ; ಅದೇ ರಣರಂಗವಾಗುತ್ತದೆ. ಅಲ್ಲೇ ವಿರಾಟರಾಯ ಉತ್ತರಾ ವಿವಾಹದ ಮಾತನ್ನಾಡಿ ಪಾಂಡವರನ್ನು ಸಂತೋಷ ಪಡಿಸುವುದು. ಮೂರನೆಯ ಅಂಕದ ಕಥೆ ಅದರ ಹೊರಗೆ ಹೂಡಿದ ಕೌರವ ಶಿಬಿರದಲ್ಲಿ ನಡೆಯುತ್ತದೆ. ದುರ್ಯೋಧನನ ರಾಜ್ಯದಾನ ಘೋಷಣೆಯೊಂದಿಗೆ ಅದು ಮುಗಿಯುತ್ತದೆ.

ಗೀತ, ನೃತ್ಯ, ಅಂಗಾಭಿನಯ, ವೇಷ, ವಾದ್ಯ, ಸಂವಾದಗಳು ಸಮಕಾಲೀನವಾಗಿ ಬುಡದಿಂದ ತುದಿವರೆಗೆ ಭಾವಾಭಿವ್ಯಕ್ತಿಯನ್ನು ಮಾಡುತ್ತ ಹೋಗುವ ಅದ್ವಿತೀಯ ರಸರಚನೆಯನ್ನಿಸಿದ ಯಕ್ಷನಾಟಕವು ಭರತಹೃದಯದ ಸಾರಭೂತ ಕಲಾಯೋಜನೆ; ಎಲ್ಲ ಬಗೆಯ ನಾಟಕಗಳ ಮಾನಸ ಮೂಲ.

ಕರ್ನಾಟಕದಲ್ಲಿ ಆನೆಗೊಂದಿ ಹಸ್ತಿನಾವತಿ ಮತ್ತು ಹಾನುಗಲ್ಲು ವಿರಾಟನಗರ ಎಂಬ ಪ್ರಸಿದ್ಧಿ ಇತ್ತು.

– **ಗ್ರಂಥಕರ್ತ**

ಪಾತ್ರ ವರ್ಗ

ದುರ್ಯೋಧನ

ಭೀಷ್ಮ

ದ್ರೋಣ

ಕರ್ಣ

ಶಕುನಿ

ಅಭಿಮನ್ಯು

ವಲಲ (ಭೀಮ)

ಬೃಹನ್ನಳೆ (ಅರ್ಜುನ)

ವಿರಾಟ

ಧರ್ಮರಾಜ

ಭಾನುಮತಿ

ದೂತರು, ಗೋಪಾಲಕರು, ವಟುಗಳು – ಇತ್ಯಾದಿ.

ಯಕ್ಷಗಾನ
ಪಂಚರಾತ್ರ ಪ್ರಸಂಗ

ಅಂಕ : ೧

ಸ್ರಗ್ಧರಾ

ನಾಂದೀಶ್ಲೋಕ

ಅದ್ರೀಶಂ ಭದ್ರವೇಷಂ ಶುಚಿರುಚಿಫಲದಂ ಶುಭ್ರಮೇಧಾಪ್ರಕಾಶಂ
ಸಧ್ರೀಚೀನಂ ಸದಸ್ಥಂ ಸದಸದತಿಪಥಂ ಸತ್ಯಸಂಪ್ರಾಂತವಾಸಂ ।
ಚಿದ್ರಾಗಾಢ್ಯಂ ಚಮತ್ತಾಂಡವ ಚತುರ ಚಲನ್ನೇತ್ರಲೀಲಾ ವಿನೋದಂ
ರುದ್ರಂ ಮಾರ್ದಂಗತಾಲ ವ್ಯತಿಕರ ನಟನಾ ಸಾರ್ವಭೌಮಂ ನಮಾಮಿ ॥೧॥

ಪ್ರಸ್ತಾವನೆ

ಕಂದ

ಭಾಸನ ನಾಟಕ ಸುಕಲಾ
ಹಾಸನ ಕೃತಿರತ್ನಪಂಚರಾತ್ರಮಿದಲ್ತೇ ।
ವ್ಯಾಸನ ಹೃದಯಮನುಕ್ಕಿಸಿ
ಸೋಸಿದ ರಸಯಜ್ಞಕುಂಡ ದೀಪ್ತಿಯಿದಲ್ತೇ ॥೨॥
ಮಿತ್ರ ಮಹಾಬಲ ಹೆಗ್ಗಡೆ
ಯೊತ್ತಾಯಿಸಲೆದ್ದು ಬಾಗವತರಾಶಯಮಂ ।
ಪೊತ್ತೀರಮಣ ಶ್ರೀಧರ
ನೆತ್ತಿದನೊರೆಯಲ್ ಕಥಾ ಪ್ರಸಂಗಮನೀಗಳ್ ॥೩॥

ದುರ್ಯೋಧನನ ಒಡ್ಡೋಲಗ
ವಾರ್ಧಿಕ

ಹಸ್ತಿನಾವತಿ ಚಕ್ರವರ್ತಿ ಛಲದಂಕ ಜೂ
ಜೆತ್ತಿ ಪಾಡವರ ಸೋಲಿಸಿ ಹನ್ನೆರಡು ವರುಷವಂ
ಸುತ್ತಿ ಕಾಡಿನಲು ಕೊನೆಗಜ್ಞಾತವಾಸವನು ಮಾಡುವಂತೆಸಗಿ ತನ್ನ ।
ವಿತ್ತ ವೈಭವದಿಂದ ಮೆರೆಯುತ್ತಲಿರೆ ವೇದ
ವೇತ್ತರೊರೆದರು 'ದೊರೆಯೆ ಯಜ್ಞ ಮಾಡಿಸು' ಎನಲು
ಹತ್ತು ಜನರೆಂದುದನ್ನಲ್ಲಗಳೆಯದ ರಾಜನುತ್ಸಾಹದಿಂ ತೊಡಗಿದಂ ॥೪॥

ಮತ್ತೇಭವಿಕ್ರೀಡಿತ – ಯಜ್ಞಕಾರ್ಯ

ಕುರುರಾಜಂ ನತರಾಜ ಮಸ್ತಕಶತಂ ಛತ್ರೇಶ್ವರಂ ಮಂಡಲೇ
ಶ್ವರರೊಳ್ ಚರ್ಚಿಸಿ ತಾಂ ಮಹಾರ್ಘಕ್ರತುವಂ ಮಾಡಲ್ಕೆ ನಿಶ್ಚೈಸಿದಂ ।
ವರ ಋತ್ವಿಗ್ಗಣಮಲ್ಲಿಕೂಡಿ ಕರೆಯಲ್ ಕೊಂಡರ್ ಹವಿರ್ಭಾಗಮಂ
ಸುರರೆಲ್ಲರ್ ನೆರೆದಪ್ಸರೋನಿವಹಮೆದ್ದೋಲೈಸಿತಾ ಭೂಪನಂ ॥೫॥

ಕಲ್ಯಾಣಿ ಆದಿ – ಅಪ್ಸರ ನೃತ್ಯ

ಮೊಲ್ಲೆ ಮಲ್ಲಿಗೆಗಳೆಲ್ಲವನ್ನು ಚೆಲ್ಲುವೆವು ।
ನಿಲ್ಲಿನಿಲ್ಲಿ ಹಾರುವಯ್ಯ ನಿಮ್ಮ ಪೂಜಿಪೆವು ॥
ಎಲ್ಲ ದೇವರುಗಳಿಲ್ಲಿ ಬರುವಂತೆ ಮಾಡಿ
ಸೊಲ್ಲಿಸಿದಿರಯ್ಯ ವೇದಮಂತ್ರ ತಂತ್ರ ಹೂಡಿ ॥೬॥

ಎಲ್ಲೆಲ್ಲೂ ಪರಿಮಳಿಸುವ ಹೊಗೆ ಹೊಗೆ
ಚೆಲ್ಲಿದೆ ಸೂಸಿದೆ ಆಕಾಶದ ನಗೆ ॥
ಮಲ್ಲಿಗೆಯಾಗಿದೆ ದ್ವಿಜರುಂಡುಳಿದುದು ।
ಎಲ್ಲಾ ಗಿಡಮರದರಳ್ಗಳ ತಂಪೆರೆದು ॥೭॥

ಝಂಪೆ – ಯಜ್ಞಪ್ರಶಂಸೆ

ತೃಪ್ತಿ ಹೊಂದಿದನಗ್ನಿಯಮರಮುಖ ಹವಿಯಿಂದ
ತೃಪ್ತರಾದರು ದಕ್ಷಿಣೆಗಳಿಂದ ದ್ವಿಜರು ॥
ತೃಪ್ತಿ ತೇಗಿತು ಮಹಾತಿಥಿಗಳೊಡಲೊಳಗಿಂದ
ತೃಪ್ತವಾದವು ಹಸಿದ ಪಶುಪಕ್ಷಿಗಡಣ ॥೮॥

ತೃಪ್ತಾಸ್ಯದಿಂದ ದುರ್ಯೋಧನನ ಸದ್ಗುಣವ ।
ಎತ್ತೆತ್ತಲೂ ಹೊಗಳೆ ಲೋಕದಲಿ ಜನರು ॥
ಹತ್ತಿ ಕುಳಿತಿರುವಂತೆ ತೋರಿದುದು ಸುರಪತಿಯ ।
ರತ್ನದೀಧಿತಿ ಹೊಳೆಯುವರಮನೆಯನಂದು ॥೯॥

ಭಾಮಿನಿ – ಆಕಸ್ಮಿಕ ಅಗ್ನಿಪ್ರಕೋಪ

ಯಜ್ಞದವಭೃತ ಮುಗಿಯುವದರೊಳ
ಗಜ್ಞವಟುಗಳು ಬಿಸುಟರಗ್ನಿಯ
ಸುಜ್ಞರರರೇ ನಿಲ್ಲಿರೆಂದೊದರುತ್ತಲಿರುವಾಗ ।
ಪ್ರಜ್ವಲಿಸಿ ನಿಮಿಷಾರ್ಧದಲಿ ಹೃದ
ಯಜ್ವರವನೊಡರಿಸಿದ ಜನರಿಗೆ
ಯಜ್ಞನಾರಾಯಣ ಕೃಪಾನಿಧಿ ಮತ್ತೆ ಮರೆಯಾದ ॥೧೦॥

ನಾಟಿ ರೂಪಕ – ಜನಾಶಂಸೆ

ಜಯಜಯ ಅಧಿಯಜ್ಞಾತ್ಮಕ
ಜಯ ಜಯ ಜಗದಧಿದೈವತ
ಜಯ ಲೋಕಸ್ಥಿತಿಕಾರಕ ಜಯಜಯಜಯತು ॥ಪ॥
ರಾಜಸ ವಿಜ್ಞಾನಸ್ಥಿತ । ತೈಜಸಮತಿ ಸಂಪೂಜಿತ ।
ಭೋಜಕ ಭೋಜ್ಯಗಣಾತ್ಮಕ । ರಾಜೀವೇಕ್ಷಣನೇ ॥೧೧॥
ಸಜ್ಜನಪಾಲನ ತತ್ಪರ । ದುರ್ಜನ ಶಿಕ್ಷಣ ನಿಷ್ಠುರ ।
ಪ್ರಜ್ವಲದರ್ಕಪರಾಕ್ರಮ । ವಜ್ರಧರಾನುಗನೇ ॥೧೨॥
ಯಜ್ಞವ ಮಾಡಿದನೀ ದೊರೆ । ಪ್ರಜ್ಞೋದಯ ಪಡೆದೀ ದಿನ ।
ಉಜ್ಜುಗಿಸಾ ಪಾಂಡವರಲಿ ದಯದೋರುವೊಲು ॥೧೩॥

ಭೈರವಿ ಝಂಪೆ – ಕೌರವಪ್ರಾರ್ಥನೆ

ಮುಗಿಯಲಧ್ವರ ಹಸ್ತಿನಾಪುರೇಶ್ವರ ತನ್ನ ।
ಮುಗಿಲ ಮುಟ್ಟಲಿ ಪುಣ್ಯವೆಂದು ಹಿರಿಯರಿಗೆ ॥
ಒಗೆದ ಮಣಿಮುಕುಟ ಮಂಡಿತ ಶಿರವಭಕ್ತಿತಾ ।
ನೊಗೆದುದೋ ಮೈವೆತ್ತು ಎಂಬಂತೆ ಮಣಿದು ॥೧೪॥
ನಗುನಗುತವೆಲ್ಲರಾಶೀರ್ವಾದಗಳ ಪಡೆದು ।
ಮಗುಳೆ ಗುರುಗಳೆ ಕೇಳಬೇಕು ದಕ್ಷಿಣೆಯ ॥

ಹಗಲಿಡೀ ಹಸಿದವನಿಗೌತಣದ ಕರೆಸಿಕ್ಕ ।
ಬಗೆಯಾದುದೆಂದು ದ್ರೋಣಾಚಾರ್ಯ ನುಡಿದ ॥೧೫॥

ಕಲ್ಯಾಣಿ – ಅಷ್ಟತಾಳ – ದ್ರೋಣವಚನ

ಮಗನೆ ನೀ ಪಾಂಡವರ । ದುರ್ದೈವವ ।
ಬಗೆ ಕುರುಕುಲದೀಶ್ವರ ॥
ಹಗಲಿರುಳೆನ್ನದೆ ತಿರುಗಿ ಕಾಡುಗಳೆಲ್ಲಿ ।
ಮಿಗಗಳೊಡನೆ ಕಾದಿ ಬದುಕಾಯ್ತು ದುರ್ಧರ ॥೧೬॥
ಬಿಸಿಲು ಬೆಂಕಿಗಳೊಳಗೆ । ಸಂಚರಿಸುತೆ ।
ಹಸಿವು ನೀರಡಿಕೆ ಬೇಗೆ ॥
ದೆಸೆಗೆಡಿಸುತ್ತಿರೆ ಕಳೆದ ಹನ್ನೆರಡಬ್ದ ।
ತುಸುವಾಯ್ತೆ ಶಿವಶಿವ ಮರೆತೆ ನೀನಿದ ಹೇಗೆ ॥೧೭॥
ಅರಮನೆಯಲಿ ಬೆಳೆದ । ಕುಮಾರರು ।
ಪರದೇಶಿಗಳವೋಲಿಂತು ॥
ದುರಿತ ದುಮ್ಮಾನದ ದೀರ್ಘಾವಧಿಯ ಕಳೆ ।
ದರತು ಹೋಗುತ್ತಿಹರಯ್ಯೊ ತಾಳುವೆನೆಂತು ॥೧೮॥
ದೈನ್ಯ ದಾರಿದ್ರ್ಯಗಳ । ಕಾಣದ ಜನ ।
ಸ್ತೈನ್ಯ ವೃತ್ತಿಯ ದುಷ್ಪರ ॥
ಠಾಣ್ಯಗಳಿಂದ ತುಂಬಿರುವಂಥ ಅತಿ ಘೋರಾ
ರಣ್ಯದೊಳಿರಬೇಕೆ ಭೃತಶತಸೋದರ ॥೧೯॥

ಮೆಚ್ಚು ಅಷ್ಟ – ಶಕುನಿ ವಚನ

ಎನೆ ಗುರು ದ್ರೋಣ ಸುಶೀಲ । ಕ್ರೂರಿ ।
ಮುನಿದೆಂದ ಶಕುನಿ ಶೃಗಾಲ ॥
ಹಣೆಯಬರಹವಿಂದಿದೇನು ಕೌರವನಿಗೆ ।
ಘನವಂಚನೆಯ ಸ್ವಂತ ಗುರುವೆ ಮಾಡುವನಲ್ಲ ॥೨೦॥
ಧರ್ಮದ ಹೆಸರನ್ನು ಹಿಡಿದು । ಗುರು ।
ಮರ್ಮಭೇದವನೆಸಗುವನು ॥
ಕರ್ಮವಿಪಾಕವಿದೇನು ಯಜ್ಞದ ಪುಣ್ಯ ।
ನಿರ್ಮಿಸಿಬಿಟ್ಟೀತೇನಿಂಥ ವಂಚಕನನು ॥೨೧॥
ಗುರುವೆಂದು ನಂಬಿ ಕೇಳಿದರೆ । ಇಂಥ ।

ದುರುಳತನವ ತೋರಿಸುವರೆ ॥
ನೆರೆ ನಂಬಿದವರ ವಂಚಿಸುವಂಥ ಗುರುತನ ।
ಕಿರುವುದೆ ಸರಿದೊರೆ ವನಜಭವಾಂಡದಿ ॥೨೨॥

ಭೈರವಿ ಏಕ – ದ್ರೋಣವಚನ

ಎನಲಾ ಶಕುನಿಯ ಕಂಡು । ಗುರು ।
ಕನಲಿ ನುಡಿದನಿಂತೆಂದು ॥
ಮನೆ ಮಕ್ಕಳು ಸಮಪಾಲ ।ಕೇ।
ಳುವುದಲ್ಲವೆ ಶುಭಶೀಲ ॥೨೩॥
ವಂಚಕತನದಲಿ ಹುಟ್ಟಿ ।ಮೇಣ್।
ವಂಚನೆಯಲ್ಲಿಯೆ ಬೆಳೆದು ॥
ಪಂಚಮಮತಿ ನಿನ್ನಂತೆ ।ಜಗ।
ವಂ ತಿಳಿಯುವೆ ನೀನಳೆದು ॥೨೪॥
ಸಲ್ಲುವುದನು ಪ್ರೀತಿಯಲಿ । ನೆರೆ ।
ಸಲ್ಲಿಸುವುದು ರೀತಿಯಲಿ ॥
ಅಲ್ಲದೊಡವರಾಜಿಯಲಿ । ಕಸಿ ।
ದೆಲ್ಲವನೊಯ್ವರು ಮರಳಿ ॥೨೫॥

ಸೌರಾಷ್ಟ್ರ ತ್ರಿವುಡೆ – ಬಹುವಚನ

ದ್ರೋಣನಿಂತೆನೆ ಧಾರ್ತರಾಷ್ಟ್ರ ।
ಪ್ರಾಣಸಖಕರ್ಣಾದಿ ಧೂರ್ತರು ।
ಏನಿದೇನವರಾರು ಕಸಿದೊಯ್ವಂಥ ಭಟರು ॥೨೬॥
ಮಾನಶೌರ್ಯಧನಾಢ್ಯರಾದಮ ।
ಹಾನುಭಾವರು ನಾವಿರುವ ವರೆ ।
ಗಾ ನೃಶಂಸರದೇನ ಮಾಳ್ವರು ನೋಳ್ಪೆವೆನಲು ॥೨೬॥

ನಾದನಾಮ ಅಷ್ಟ – ಭೀಷ್ಮವಚನ

ಶಕುನಿ ಕರ್ಣರ ಮಾತ ಕೇಳಿ ।ಭೀಷ್ಮ ।
ಮುಖವ ತಿರುಹಿ ತಾಳ್ಮೆ ತಾಳಿ ॥
ಮಕುಟವರ್ಧನರೊಡನಿರ್ದ । ಕುರು
ಮುಕುರನ ಕುರಿತೊಲಿದೆಂದ ।೨೭॥

ಮಗು ದುರ್ಯೋಧನ ಲಾಲಿಸಯ್ಯ । ಇಂಥ ।
ಮೃಗಗಳ ಮಾತ ಸುಡಯ್ಯ ॥
ಬೆಗಡರಿಯದ ಪಾಂಡುಸುತರು । ಕಾಡ
ಹೊಗಲು ಕಾರಣರೀ ಸ್ನೇಹಿತರು ॥೨೮॥
ನಿನಗವರಾಗದಂತಾಗಿ । ನಿನ್ನ ।
ಘನವಂತಿಕೆಗೆ ಕಪ್ಪು ತಾಗಿ ॥
ಜನನಿಂದೆ ಸೋಂಕಲಿನ್ನೇನು । ಇಂಥ
ಶುನಕಗಳುಪಜಾಪ ಕಾಣು ॥೨೯॥

ಸಾಂಗತ್ಯ – ಕೌರವವಚನ

ಗಾಂಗೇಯನಿಂತುಸಿರಲು ಕೌರವೇಶ್ವರ ।
ಸಂಗಡಿಗರ ನಡುವಿಂದ ॥
ತುಂಗಪೀಠದೊಳಿರ್ದ ಗುರುದೇವನನು ಕಂಡು ।
ಹಂಗಿಸಿ ಕೇಳಿದನಿಂತು ॥೩೦॥
ಹಿಂದೆ ನಿಮ್ಮಿದಿರಲಿ ಸೇರಿದ ಸಭೆಯೊಳ
ಗೊಂದೂ ಮಾತನ್ನಾಡದವರು ।
ಬಂದ ಫಲವನುಂಬೆವೆಂದು ಲೆತ್ತವನಾಡಿ
ನಿಂದರೇತಕೆ ರಾಜ್ಯ ತೆತ್ತು ॥೩೧॥
ಅಂದು ದುಃಶಾಸನನವರ ಶ್ರೀಮತಿಯನು
ತಂದು ಸಭೆಗೆ ದಾಸಿಯಾಗು ।
ಎಂದಾಗ ಎಲ್ಲಿಗೈದಿತ್ತು ಪಾಂಡವರೋಷ
ಇಂದದೆಲ್ಲಿಂದ ಬಂದಪುದು ॥೩೨॥

ದ್ರೋಣವಚನ

ಕಂದಕೇಳ್ ಧರ್ಮವ ನಂಬಿ ದ್ಯೂತವನಾಡಿ
ಮಂದನಾದಾ ಯುಧಿಷ್ಠಿರನ ।
ಇಂದು ನೀನೇ ಕೇಳಬೇಕದಕುತ್ತರ
ವೆಂದನಾ ಕುಂಭಸಂಭವನು ॥೩೩॥
ಒಂದು ಕಂಬವ ಕಿತ್ತು ರುದ್ರಾವತಾರದಿ
ನಿಂದ ಭೀಮನನು ಧರ್ಮಜನು ।
ಅಂದು ತಡೆಯದಿದ್ದರೆಮಗೀ ಗಾಂಧಾರೇಶ
ಇಂದು ಹಳಿಯಲುಳಿದಪನೇ ॥೩೪॥

ಸೌರಾಷ್ಟ್ರ ತ್ರಿವುಡೆ – ಭೀಷ್ಮವಚನ

ಎಂದು ನುಡಿಯಲು ಘಾತವಾಯಿತು ।
ಒಂದ ಮಾಡಲು ಯತ್ನಿಸಿದರಿ ।
ನ್ನೊಂದು ಘಟಿಸಿತು ಗುರುವರರೆ ಬಿಡಿ । ಸಾಕು ವಾದ ॥ ೩೫ ॥
ಬಂದ ಕಾರ್ಯವ ನಿರ್ವಹಿಸುವುದು ।
ಎಂದೆನಲು ಗಾಂಗೇಯ ಗುರುತಾ
ಬಂದುದೆಲ್ಲವು ಬರಲಿ ಕಲಹವೆ । ಬಂದರಳುಕೆ ॥೩೬॥

ಭೈರವಿ ಝಂಪೆ

ಆಚಾರ್ಯವರ್ಯ ನೀವ್ ತಾಳ್ಮೆಗೆಡದಿರಿ ವತ್ಸ ।
ಶೌಚಾರ್ಜವಾದಿ ಗುಣಸಂಪನ್ನ ನೀನು ॥
ವಾಚಾಮಗೋಚರವೆನಿಪ್ಪ ಕಷ್ಟದೊಳಿಳಿದ
ಪ್ರಾಚೀನ ಕರ್ಮಹತರಹರು ಪಾಂಡವರು ॥೩೭॥
ನೀ ಚಕ್ರವರ್ತಿ ನಿನ್ನೆದರು ಗರ್ವವ ತೋರ ।
ದಾಚಾರಶೀಲ ಸೋದರರು ನೆಲೆ ತಪ್ಪಿ ॥
ಯಾಚಕತ್ವವ ಹಿಡಿದು ಮೃಗಗಳೊಡನವರಿಹುದು ।
ಯೋಚಿಸೈ ಲೇಸೆನಿಪುದೇ ನಿನ್ನ ಮನಕೆ ॥೩೮॥

ಕಂದ – ಶಕುನಿವಚನ

ಎಂದಾ ಭೀಷ್ಮಂ ನುಡಿಯಲ್
ತಿಂದೇ ಬಿಡುವಂಥ ದನಿಯೊಳೆಂದಂ ಶಕುನಿ ।
ಮಂದರ್ ತಿರುಗಲಿ ಕಾಡೊಳ್
ಬಂದಾಪತ್ತೇನು ನಮಗೆ ಮೇಣದರಿಂದಂ ॥೩೯॥

ಮುಖಾರಿ ಏಕ– ಕರ್ಣವಚನ

ಗುರುದೇವನನ್ನು ತಣಿಸಲೆಂದು । ನಡುವೆಯೆದ್ದು ।
ಎರಗಿದ ಕರ್ಣನುಡಿದ ನಿಂತು ॥
ಬಿಡಬೇಕು ಕೋಪವನ್ನು ಗುರುವೆ । ಈ ವಿಷಯದಲ್ಲಿ ।
ದುಡುಕಿದ ಕೌರವೇಂದ್ರನೆನುವೆ ॥

ಸಿಡಿವನು ಕೌರವ ನುಡಿದರು ಹಿತವನು ।
ನುಡಿಯಪ್ರಿಯವಾಗಿರೆ ಗಜದಂತಿವ ।
ಅಡಿಗಡಿಗೂ ದೋಷಗಳಿದ್ದರು ಸಹ ।
ನುಡಿದೊಳ್ವಾತನೆ ಶಿಷ್ಯನ ಕಾರ್ಯವ ।
ನಡೆಯಿಸಿಕೊಡಬೇಕೆಂಬೆ ಗುರೂತ್ತಮ ।
ಪೊಡವಿನುತಿಪ ವಿದ್ಯಾಕಲ್ಪದ್ರುಮ ॥೪೦॥

ದ್ರೋಣವಚನ

ನುಡಿದೆ ನೀನುಚಿತವನ್ನು ಜಾಣ । ನೀವೆಲ್ಲ ನನ್ನ ।
ಒಡಲ ಮಕ್ಕಳಿಗೆ ಸಮ ಸುತ್ರಾಣ ॥
ಎಡರಾಡಿದ ಈ ಬಡಶಕುನಿಯ ನುಡಿ ।
ಬಡಿದೆಬ್ಬಿಸಿತುಗ್ರತ್ವವನೆನ್ನಲಿ ।
ತಡೆದುಪಕರಿಸಿದೆ ರವಿಸುತ ಅನುನಯ ।
ವಿಡಿದೇ ಕೌರವನನು ನಾ ಕೇಳುವೆ ॥೪೧॥

ಕೇದಾರಗೌಳ ಏಕ

ಲಾಲಿಸೈ ಪ್ರಿಯಶಿಷ್ಯ ಕೌರವನೇ । ಕುರುಸಾರ್ವಭೌಮನೆ
ಲಾಲಿಸು । ಲಬ್ಧಾಖಿ । ಲಾಗಮ । ಲಲಿತನೆ ॥ಪ॥
ನಿನ್ನ ಕುಲ ಬಲು ಹಿರಿಯದಾಗಿಹುದು । ನಿನ್ನಾತ್ಮ ದೊಡ್ಡದು ।
ನಿನ್ನ ನಾ ವಂಚಿಸಿದರದರ ಫಲ ॥
ನನ್ನ ಕಾಡೀತಲ್ಲದೆಂದೂ ನಿನ್ನ ಕಾಡಿಸದಯ್ಯ ತಿಳಿ ನೀ ।
ಚೆನ್ನಾಗಿ । ಆಲೋಚಿ ।ಸುನ್ನತಿ । ಪಾತ್ರನೆ ॥೪೨॥
ನಿಮ್ಮ ಮನೆತನದಲ್ಲಿ ಭಿನ್ನಮತ । ಉಂಟಾದರದಕೇ ।
ಧರ್ಮವನ್ನುಸಿರುವುದು ನಮ್ಮದೂ ॥
ಸುಮ್ಮನಿರಲೆಮಗಕ್ಕು ದೋಷವು ।
ತಮ್ಮಾನೀ । ನೊಮ್ಮನ । ದಿಂದ ವಿಚಾರಿಸು ॥೪೩॥

ಸೌರಾಷ್ಟ್ರ ತ್ರಿವುಡೆ – ಕೌರವವಚನ

ಎನಲು ಕೌರವ ಕರೆದ ಶಕುನಿಯ ।
ನಿನ ಸುತನನಾಲೋಚನೆಗೆ ನೀ
ವೆನುವುದೇನೆನ್ನರ್ಧರಾಜ್ಯವ । ಪಾಂಡವರಿಗೆ ॥೪೪॥

ವಿನಯದಲಿ ಕೊಡಬೇಕೆ ಎನಲಾ ।
ಪಣನ ಪಂಡಿತರೆಂದರಾದೀ ।
ತೆನುವುದ್ಯೆದಿರುಳೊಳಗೆ ತರಲಾ । ಗವರಕುರುಹ ॥೪೫॥

ಶಂಕರಾಭರಣ ಏಕ – ದ್ರೋಣವಚನ

ಸಾಧ್ಯವಾದಿತೇನು ಇಂಥ । ಶೋಧಕಾರ್ಯವೆಂದು ದ್ರೋಣ ।
ವೇದನೆಯೊಳೆಂದ ಮೋಸ । ವೇದ್ಯವಾಯಿತು ।೪೬॥
ಜಲಧಿಯನ್ನು ದಾಟಿ ಹನುಮ । ಕಳೆದ ಸೀತೆಯನ್ನು ಲಂಕೆ ।
ಯೊಳಗೆ ಕಂಡು ಸುದ್ದಿಯನ್ನು । ತಿಳಿಸಿದಂತಿದು ॥೪೭॥
ಕಳೆದವೇನೋ ಆರರೆರಡು । ವರುಷಗಳಿನ್ನವರ ಇರವ ।
ತಿಳಿಯಲಾದೀತೇನು ನನಗೆ । ಉಳಿದ ವಿವರವ ॥೪೮॥

ಕಾಂಬೋಧಿ ಝಂಪೆ – ಭೀಷ್ಮವಚನ

ಇಂತು ಚಿಂತಿಸುತಿರಲು ಕುಂಭಸಂಭವ ಭೀಷ್ಮ ।
ನಿಂತೆಂದ ನೊಪ್ಪಿಕೊಳ್ಳಾಚಾರ್ಯ ನೀನು ॥
ಪಂಥಕ್ಕೆ ನಾನೀಗ ಕೇಳಿರುವೆ ಗುಪ್ತಚರ
ಹಂತಿ ಬಂದುಸಿರಿಹುದೆ ಕೀಚಕನ ಹತಿಯ ॥೪೯॥
ನಿಂತಿರುವರಾ ವಿರಾಟನ ಪುರದಿ ಪಾಂಡವರು ।
ಚಿಂತಿಸದಿರೀ ಯಜ್ಞಕೆಮ್ಮಲ್ಲಿ ಬರದೆ ॥
ಸಂತಾಪದಿಂದ ಶಿಕ್ಷಿಸಲವನ ಗೋವುಗಳ ।
ನಿಂತಲ್ಲೆ ಹಿಡಿದು ತರಲೇಳಿರೆಂದೆನುವೆ ॥೫೦॥

ವಾರ್ಧಕ – ದ್ರೋಣವಚನ

ಅಂತಾಗ ರಣಕಹಳೆ ಕೇಳಿ ಪಾಂಡವರು ಧುರ
ಪಂಥಿಗಳು ಹೊರಬಾರದಿರರು ಎನಲಾ ದ್ರೋಣ
ಸಂತಸದೊಳೆಂದನೊಡ್ಡೋಲಗಸ್ಥರಿಗೆಲ್ಲ ಕೇಳಿ ನೀವ್ ಕೇಳಿಂದು ।
ಎಂತಾದರಾ ಪಾಂಡವರ ವಾರ್ತೆ ಪಂಚರಾ
ಪ್ರಾಂತದೊಳ್ ತಿಳಿದರವರಿಂಗರ್ಧ ರಾಜ್ಯವನು
ತಾಂ ತೆಗೆದುಕೊಡುವ ಪ್ರಿಯಶಿಷ್ಯ ದುರ್ಯೋಧನನು ಸಾಕ್ಷಿ ನೀವೆಲ್ಲರಿದಕೆ
॥೫೧॥

ದುರ್ಯೋಧನ–ಭಾನುಮತಿಯರ ಸಂವಾದ
ಸುರುಟಿ ಏಕ

ಹೇಳಿದ ನಿಜಸತಿಗೆ । ಕೌರವ । ಪಾಳಿಯುಪಕ್ರಮವೆ ॥
ದಾಳಿಗೆ ಹೊರಡುವ ಮುನ್ನ ಮಹೀಪತಿ ।
ಕೇಳೆಂದೊರೆದನು ರಾಣಿಗೆ ವಿವರವ ॥೫೨॥
ಗುರುಗಳು ಬೇಡಿದರು । ಪಾಂಡುಕು । ವರರಿಗೆ ರಾಜ್ಯವನು ॥
ಗುರುದಕ್ಷಿಣೆಯನು ಕೊಡಲೊಪ್ಪಿದೆನಾ ।
ಎರಡಾಡದೆ ಪಾಲ್ಗೊಡಬೇಕಾಗಿದೆ ॥೫೩॥
ಐದಿರುಳೊಳಗವರ । ವಾರ್ತೆಯ । ಶೋಧಿಸಿ ತಂದವರು ॥
ಈ ದುರ್ಯೋಧನಗುಸಿರುವ ಶರ್ತಕೆ ।
ಬಾಧ್ಯರು ತಾವೆಂದರು ಗುರು ದ್ರೋಣರು ॥೫೪॥
ಇಂತಿರೆ ಮುತ್ತಯ್ಯ । ಮತ್ಸರ । ಪಂಥವನರುಹಿದನು ॥
ಎಂತಹ ನಡತೆ ವಿರಾಟನದೇಕೆ ।
ಮ್ಮಂಥವರಾಮಂತ್ರಣವ ಗಣಿಸದಿಹ ॥೫೫॥
ಗೋಗ್ರಹಣದ ನೆವದಿಂ । ದವನದು । ರಾಗ್ರಹವನು ಹಣಿಯೆ ॥
ಶೀಘ್ರದಿ ಪೊರಡುವೆವಿಂದು ಲಲನೆ ಭಟ ।
ವ್ಯಾಘ್ರ ಚಮೂಪತಿಗಳ ನೊಡಗೂಡುತ ॥೫೬॥

ಶಹನ ಏಕ–ಭಾನುಮತಿ ವಚನ

ಎನಲಾ ಸುದತೀಮಣಿ ಸಂತಸದಲಿ ಒರೆದಳು ನಿಜಪತಿಗೆ ॥
ಮನದಲ್ಲುಬ್ಬಿ ಮಹಾವೀರರೆ ನೀವ್ । ಅನುನಯವರಿತವರು ॥೫೭॥
ಕುರುಕುಲ ಮೂಲಸ್ತಂಭನೆನಿಸಿದಾ । ಪರಮನದೀಸುತನ ॥
ಹರಿಹರಮಹಿಮೆಯ ಪ್ರಿಯಗುರುದೇವರ । ವರಮತವೇ ಗ್ರಾಹ್ಯ ॥೫೮॥
ಧರ್ಮವಕಾವ ಪ್ರತಿಜ್ಞೆಯ ಹೊತ್ತಿಹ । ಕರ್ಮಿಕ್ಷತ್ರಿಯನು ॥
ದುರ್ಮದರಾಲೋಚನೆಗೆಡೆನೊಡದಿಹ । ಮರ್ಮನಿಮಗೆ ಹೊರತೇ ॥೫೯॥
ಕುರುಬಲದಕ್ಷೌಹಿಣಿಗಳ ದಾಳಿಯ । ಧೂಳೇ ಅರಿಬಲವ ॥
ಗರಹೊಡೆವವೊಲಡಗಿಸದಿರದಂಜಿಸಿ । ಧರಣಿಗೊಡೆಯ ನಿಮ್ಮ ॥೬೦॥
ಎತ್ತಿರಿ ಸಖಿಯರೆ ಕದಲಾರತಿಯನು । ಚಿತ್ತಜಭವ ನಾಚಿ ॥
ಅತ್ತಸರಿವ ಸುರ ಸೌಂದರ್ಯಾಬ್ಧಿಗೆ । ಉತ್ತಮಗುಣಮಣಿಗೆ ॥೬೧॥

ಸೌರಾಷ್ಟ್ರ ಅಷ್ಟ

ಕುರುಕುಲದಾರಾಧ್ಯದೇವನದೀಸುತ । ಪ್ರಾಣಕಾಂತ ।
ಸರ್ವ । ಶರವಿದ್ಯಾಪಂಡಿತ ಶಸ್ತ್ರಪಾರಂಗತ । ಪ್ರಾಣಕಾಂತ ॥೧॥
ಅರುಹಿದುದನ್ನಲ್ಲಗಳೆಯದೆ ಮಾಳ್ಪುದು । ಪ್ರಾಣಕಾಂತ ॥
ಅಂಥ । ಹಿರಿಯರಾಶೀರ್ವಾದ ನಮ್ಮನು ಕಾಯ್ವುದು । ಪ್ರಾಣಕಾಂತ ॥೨॥
ಕುಲಗೌರವವಕಾವ ಪಂಥವೆ ನಿನ್ನದು । ಪ್ರಾಣಕಾಂತ ॥
ಕ್ಷಾತ್ರ । ಛಲವಾದ ನಿನ್ನೆದುರಾ ವಿರಾಟನದೇನು । ಪ್ರಾಣಕಾಂತ ॥೩॥
ಎತ್ತಿರಿ ಸಖಿಯರೆ ಕದಲಾರತಿಯ ನೀತ । ಪ್ರಾಣಕಾಂತ ॥
ಮತ್ತೆ ಚಿತ್ತಜಾರಿಗೆ ಸಮ ಸಮರದೊಳೀಯೆನ್ನ । ಪ್ರಾಣಕಾಂತ ॥೪॥]

ಭಾಮಿನಿ – ಗೋಗ್ರಹಣಾರ್ಥ ಸೇನಾಪ್ರಯಾಣ

ಕುರುಕುಲೋತ್ತಮನೊಪ್ಪಿದನು ಗುರು
ಭರದೊಳಾತನನಪ್ಪಿದನು ಸುರ
ವರನದೀಸುತ ಕೊಟ್ಟನಾಜ್ಞೆಯ ಗೋಗ್ರಹಣಕಾಗಿ ।
ಅರರೆ ನಿಮಿಷಾರ್ಧದಲಿ ಕೌರವ
ನರಪತಿಯ ಚತುರಂಗಬಲವಾ
ತರಣಿಸುತ ದುಃಶಾಸನಾದಿಗಳೊಡನೆ ಧಾವಿಸಿತು ॥೬೨॥

ಶಂಕರಾಭರಣಮಟ್ಟೆ

ಹುಲುವಿರಾಟ । ಖಲವಿರಾಟ । ಬಾರದಾದ ಯಜ್ಞಕೆ ।
ಕರೆಯ ಮಾನ್ಯ ಮಾಡದೆಮ್ಮ । ಕುರುಕಲಾಧಿನಾಥನ ॥೬೩॥
ಅರಿವೆವವನ ಹದವನು । ಮುರಿವೆವವನ ಮದವನು ।
ತರಿವೆವವನ ಬಲವನು । ಹರಿವೆವವನ ಛಲವನು ॥೬೪॥
ದುರುಳರಾಜ । ಮಕುಟವ । ಉರುಳಿಸುವುದೆ ಧರ್ಮವು ॥
ಕರುಳ ಬಗೆದು । ಮಾರಿಗೊಗೆದು । ತೆರಳ್ಪುದೆಮ್ಮ । ಕರ್ಮವು ॥೬೫॥

ಅಂಕ : ೨

ಭಾಮಿನೀ

ಇತ್ತಲೀಪರಿ ಮಂದಿ ಮಾರ್ಬಲ
ವೆತ್ತು ಕೌರವರಾಯ ಹೊರಟಿರ
ಲತ್ತ ಗೋಪಾಲಕರು ಮತ್ಸ್ಯೋದ್ದೇಶದಲಿ ತಮ್ಮ ।
ಹತ್ತು ಲಕ್ಷ ಮಹಾವೃಷಭ ಗೋ
ವತ್ಸಗಳ ಪೂಜಿಸುತಲಿದ್ದರು
ಉತ್ಸವದಿ ಹರಸುತ್ತ ಧನ್ಯವಿರಾಟರಾಯನನು ॥೬೬॥

। ಗೋಪಾಲನರ್ತನ ।

ಗೋಪನಾಯಕರು । ಕರೆದರು । ಗೊಲ್ಲರ । ಗುಡಿಗುಡಿಲ ॥
ಶ್ರೀಪತಿಯ ಮೂರ್ತಿ । ಯನ್ನು । ಮಾಡಿ । ನಡುವೆ । ನಿಲಿಸಿ ॥೬೭॥
ಗೋವಳರೇ । ಗೋಮನರೇ ।
ಗೋಪ್ರಿಯ ನರ್ತನ ಕೋವಿದರೇ ॥
ಧಾವಿಸಿರಿತ್ತ ಕಲಾರಣಯೋಧರೆ ।
ಭಾವಿಕರಲ್ಲಿ ಬಹುಶ್ರುತರೆ ॥೬೮॥
ಮುರಲಿಗಳನು ಹಿಡಿದು । ಊದಿರಿ । ಕರತಾಲವ ಬಡಿದು ॥
ನೆರೆದೀ ರಸರಾಗಸ್ಮಿತ ಸಭೆ ಕುಣಿ
ದರೆಗಳಿಗೆಯೊಳಾನಂದವ ಹೊಂದಲಿ
ಪುರದ ಪುರಂಧ್ರಿಯರೆಲ್ಲಾ ಸೇರಲಿ
ಸುರಿಸಲು ಲಾಜಾಕ್ಷತೆಗಳ ಶಿರದಲಿ ॥೬೯॥
ತರಳೆಯರೇ । ಎರಳೆಯರೇ ।
ಕುರವಕ ಮರುವಕ ಮುಡಿದವರೇ ।
ಕರುಗಳ ಬಿಡಿರವು ಕುಣಿಯಲಿ ತಣಿಯಲಿ ।

ಶರಚಾಪಗಳಾಗಿರಿ ಮನುಮಥನಿಗೆ
ಚರಾಚರಗಳಿಗೆ ಯೌವನವೊದಗಲಿ
ಮರೆಯಿರಿ ಮನೆಮಠಗಳ ನರ್ತನದಲಿ ॥೭೦॥
ರಾಸಲಾಸದಲ್ಲಿ । ತೊಡಗಿರಿ । ವೇಷವೇಷದಲ್ಲಿ ।
ಹರಿಹರ ಬೊಮ್ಮರ ಮಡದಿಯರಾಗಿರಿ ।
ಚರಣದ ನೂಪುರ ಝಣಝಣಿಸಲಿ
ಸುರಗಣಿಕೆಯರೂ ಬಂದಿಳಿಯಲಿ ಕುಣಿತಕೆ
ಧಿಮಿಕಿಟ ತರಿಕಿಟ ನಾದ ತರಂಗದಿ :
ಕಂಡು ಕಲಿಯಲೀ ಗೋಪಕಲೆಯ ಕೊಡಿ
ಉಂಡೆ ಕಡಬುಗಳ ಸಗ್ಗದೊಳಿಲ್ಲದ
ಮಂಡೆ ಬೆಳೆದು ಮೈ ಸಣ್ಣವಾದ ಸುರ
ಮಂಡಲದತಿಥಿಗಳಿಗೆ ಕರೆಕರೆದು ॥೭೧॥

ದನಗಳಿರಾ । ಕರುಗಳಿರಾ ॥
ವೃಷಭೇಶ್ವರ ಕುಲಮಣಿಗಳಿರಾ ॥
ತನನನ । ಧನನನ । ತಾಳ ಹಾಕುವೆವು ।
ಘನಮೃದಂಗಗಳ । ಬಡಿಯುವೆವು ।
ಜನದನ ಭೇದಕ್ಕುಳಿವಿಲ್ಲದವೊಲು
ಕುಣಿದು ಕುಣಿಸುವೆವು ಖಗಮೃಗನಗಗಳ ॥೭೨॥
ಚಂಡೆಯಿದುಚ್ಚಂಡ । ಕೃಪಣರ
ಖಂಡಿಸೆ ಮಾರ್ತಂಡ ॥
ಪಂಡಿತ ಶಾಸ್ತ್ರದ ಹಲವಿಧ ಕೌಶಲ ।
ದಂಡಮೆನಿಸದಿರದಿದರಬ್ಬರದಲಿ ॥೭೩॥

ಬೇಗಡೆ ಅಷ್ಟ

ಕುಣಿಯೋಣ । ಕುಣಿಯೋಣ । ಕುಣಿಯೋಣ । ಬನ್ನಿ ॥
ದನಗಾಹಿಗಳೆ ಯಕ್ಷಗಾನಕಯ್ತನ್ನಿ ॥ಪ॥
ಅನಿಮಿಷರರಸನ । ರಾಜ್ಯದೊಳಿಂಥ
ಘನಕಪಿಲಾಧನ । ವಿಲ್ಲ ನಮ್ಮಂಥ ।
ಅನಿರುದ್ಧನರ್ತನ । ಪಟುಗಳೆಲ್ಲಿಹರು ।
ಕುಣಿವಟ್ಟಹಾಸದಾ । ನಂದದ ಹೊಗರು ॥೭೪॥

ಅಮೃತಾಂಧಸುರಲೋಕ । ದಲ್ಲೆಲ್ಲಿ ಬಂತು ?
ಶ್ರಮಹೀನರುಂಡದ್ದ । ನರಗಿಪುರೆಂತು ?
ಪಿಳಿಪಿಳಿ ಕಂಗಳ । ಬಿಡುವಂಥ ಸ್ವರ್ಗ ।
ನಮಗೆಂದಿಗೂ ಆಗ । ದಿರಲತ್ತ ವರ್ಗ ॥೭೫॥

ಕಂದ – ಅನಿರೀಕ್ಷಿತ ಶರಪಾತ

ಕುಣಿದರ್ ಮಣಿದರ್ ದಣಿದರ್
ಚಣಿದರ್ ಗೋಪಾಲರಲ್ಲಿ ಗೋಗಳ ನಡುವೆ ।
ಚಣದಂತೆ ಕಳೆಯೆ ದಿನಮಂ
ಫಣಿಗಳ ಕಣೆ ಬಂದು ಕುಕ್ಕಿತದನೇನೆಂಬೆಂ ॥೭೬॥

ಏಕತಾಳ ।

ಕಳ್ಳರು ಕಳ್ಳರು ಕಳ್ಳರು ಅಯ್ಯಯ್ಯೋ । ಬೆನ್ನಟ್ಟುತ್ತಿಹರದೊ ।
ದಳ್ಳುರಿ ದೊಂದಿಗಳೀ ಕಡೆ ಅಯ್ಯಯ್ಯೋ ॥ಪ॥
ಕಲ್ಲುಗಳಂತಹ ಕಣೆಗಳ ತೂರುವ
ರೆಲ್ಲೋಡಿದರೂ ಹಿಂದೇ ಬರುವರು
ಮಲ್ಲರ ಮೈಕಟ್ಟವರಿಗೆ ನೋಡಲ್
ಬಿಲ್ಲಾಳ್ತನ ವಿಪರೀತವಿದಮಮಾ ॥೭೭॥
ಮುಳ್ಳಿನ ಮಳೆಗಳ ಸುರಿಸುವರೋ ಏನು । ಈದಿಕ್ಕನೆಲ್ಲಾ ।
ಬಳ್ಳುಗಳೆದ್ದೊರಲುತ್ತಿವೆ ಕಪಿಲೆಗಳು ॥
ಎಲ್ಲೆಲ್ಲೂ ಬೆದರ್ದೋಡುತ್ತಿವೆ ಧೂ
ಳೆಲ್ಲಾ ಕಡೆ ಕಣ್ಣಡರುತ್ತಿದೆ ಹಾಯ್
ಹಳ್ಳದೊಳುರುಳಿದೆವಯ್ಯಯ್ಯೋ ಈ
ಕಳ್ಳರ ಕುಲ ಹಾಳಾಗಲಿ ದೇವರೆ ॥೭೮॥
ಕುದುರೆಯನೇರಿದ ಸವಾರರಿತ್ತಕಡೆ । ಜೋರಾಗಿ ಬರುವರು ।
ವಿಧವಿಧದಾಯುಧಗಳ ಝಳಪಿಸುತಿಹರು ॥
ಎದೆಗಡಗುಟ್ಟುತ್ತಿದೆ ಅಯ್ಯಯ್ಯೋ
ಒದರಿದರಾರೂ ಕೇಳರು ಭಾವಾ
ಇದು ನಮಗಾಯ್ತಾಯುಷ್ಯದ ಕೊನೆದಿನ
ಯದುಕುಲದೊಡೆಯನೆ ಎಲ್ಲಿಹೆ ಕಾಯೋ ॥೭೯॥
(ರಾಜನಲ್ಲಿಗೆ ಬಂದು ದೂರುವರು)

ಸಾಂಗತ್ಯ – ಗೋಪಾಲವಚನ

ಎಮ್ಮಾಳುವರಸನೆ ಬಿನ್ನವಿಸುವೆವಿಂದು
ಎಮ್ಮ ಗೋವುಗಳೊಡನಿರಲು.।
ನಿಮ್ಮುಪವನದಲ್ಲಿ ಪರಮಸಂತೋಷದಿ
ಒಮ್ಮೆಲೇ ಕಳ್ಳರು ಬಂದು ॥೮೦॥
ಬಿಲ್ಲುಬಾಣಗಳಿಂದ ಗಾಸಿಗೊಳಿಸಿ ನಮ್ಮ
ಹುಲ್ಲುಗಾವಲಿನ ಗೋವುಗಳ ।
ಎಲ್ಲಿಗೋ ಹೊಡೆದು ಕೊಂಡೊಯ್ದರು ಭಟರೆಲ್ಲ
ಕಳ್ಳರ ತಡೆದು ಕಾಯುವುದು ॥೮೧॥

ವಾರ್ಧಿಕ – ರಣದರ್ಶನ

ಕೇಳಿ ದುರ್ವಾರ್ತೆಯನು ಕಂಕಭಟ್ಟನ ಜೊತೆಗೆ
ಆಲೋಚನೆಯ ಮಾಡಿ ಯುದ್ಧಕ್ಕೆ ರಥವೇರಿ
ಕಾಲಾಗ್ನಿ ಕೆರಳಿದಂತಾ ವಿರಾಟೇಶ್ವರನು ತೆರಳಲಾ ರಣರಂಗಕೆ ।
ಬಾಲನುತ್ತರನವರ ಸಾರಥಿ ಬೃಹನ್ನಳೆ ಶ
ವಾಲಯವ ಮಾಡಿ ಕೌರವ್ಯ ಪಕ್ಷವನಲ್ಲಿ
ಬಾಲರವಿ ಸೌಭದ್ರನೊಡನೆ ಸೆಣಸುತ್ತಿಹುದು ಕಂಡ ವಲಲಾಚಾರ್ಯನು ॥೮೨॥

ಶಂಕರಾಭರಣ ಮಟ್ಟೆ

ಬಿಡೆ ಬೃಹನ್ನಳೆ । ಕಣೆಯ ಮಾಲೆಯ ।
ಮೃಡನ ನೆನೆದು ಮುಂ । ತರಿಸಿ ವಾಘೆಯ ।
ಹಿಡಿದು ಒಂದೆ ಕೈ । ಯಿಂದ ಕುರುಬಲ ।
ನಡೆದಿತೋಡಿ ಬಂ । ದೆಡೆಗೆ ಬೆದರಿ ತಾ ॥೮೩॥
ಕರ್ಣಶರಗಳ । ಕವಳಿಸಿರ್ದುದು ।
ಶಕುನಿ ಶರಗಳ । ನುಂಗಿಬಿಟ್ಟುದು ॥
ದುರ್ಣಯಾಜಿಯ । ದುರಿತತುಂಬಿದೆ ।
ಎಲ್ಲ ಸೇನೆ ಹಿಂ । ದೋಡಿ ಪೋದುದು ।೮೪॥
ಪಾರ್ಥಸಾರಥಿ । ಶಲ್ಯರಥದಲಿ ।
ಕೂತು ಕೋಪದಿಂ । ದವನಪಕ್ರಮ ।
ನೀತಿ ಬಾಹಿರ । ಎಂದು ಬೈದು ನಿ
ಷ್ಣಾತ ತಂತ್ರದ । ತೆರಳ್ದರಂಗದೆ ॥೮೫॥

ತೂರಿ ಕಣೆಗಳ । ತೇರತಿರುಹುತ ।
ಮಾರಿಗೌತಣ । ಕೊಟ್ಟ ಫಲುಗುಣ ।
ಧೀರತನಯನ । ಶರನಿಪಾತವ ।
ಮಾರುಗೊಂಡು ಖಂ । ಡಿಸಿದ ರಣದಲಿ ॥೮೬॥

ಭೈರವಿ ತ್ರಿವುಡೆ ।

ಕರ್ಣಶಕುನಿಗಳೋಡಿ ಪೋಗಿರೆ ।
ನಿರ್ಣಯವ ಮಾಡಲು ಸುಯೋಧನ ।
ಚನ್ನ ಹಿರಿಯರ ಕೇಳಿ ಮುಂದಿನ । ಮಾರ್ಗವನ್ನು ॥೮೭॥
ಬೆನ್ನು ಹಾಕಿರೆ ಕಾಳಗಕೆ ಅಭಿ
ಮನ್ಯು ನಿಂತಿರಲವನ ಕೈದುಗ
ಳನ್ನು ಕಸಿದೆಸೆದಿದ್ದ ಬಕಕೀ । ಚಕ ವಿದಾರಿ ॥೮೮॥

ಕಂದ

ಬಾಲಕನಂ ನೋಡಿ ಚಳ
ಚ್ಚೇಲಾಂಚಲನರ್ಜುನಂ ಮಹಾಮದದಿಂದಂ ।
ಕೇಳಿದನೇನೇನೆಂಬನಿವಂ
ಲಾಲಿಪೆನೆಂದಿರವನೊರೆಯದಾತಂಗಿಂತು ॥೮೯॥

ಶಂಕರಾಭರಣ ಏಕ – ಬೃಹನ್ನಳಾವಚನ

ಬಾಲನಾದ ನೀನೀ ಯುದ್ಧ । ಜಾಲದಲ್ಲಿ ಬಿದ್ದೆಯೇಕೆ ।
ಹೇಳು ಅಭಿಮನ್ಯು ನಿನ್ನ । ಪಾಳಿಯೇನಿದು ॥೯೦॥

ಅಭಿಮನ್ಯುವಚನ

ಯಾರು ನೀನು ಸೀರೆಯುಟ್ಟು । ನಾರಿಯಂತೆ ತೋರದಿರುವೆ ।
ಸೇರದೆನಗೆ ಹೆಸರು ಹಿಡಿದು । ನೀನು ಕರೆವುದು ॥೯೧॥

ಬೃಹನ್ನಳಾವಚನ

ನಿನ್ನ ತಾಯ್ಗೆ ಕುಶಲವಿಹುದೆ । ತನ್ನ ಕಂದ ರಣದೊಳಿಂತು ।
ಬನ್ನ ಬಡುವುದನ್ನು ಕೇಳಿ । ಸುಮ್ಮನಿರುವಳೆ ॥೯೨॥

ಅಭಿಮನ್ಯುವಚನ

ಏನಿದೇನಿದೆನ್ನ ತಾಯ । ನೀನು ಕೇಳಲಾರು ಧರ್ಮ ।
ಸೂನುವೇನು ಭೀಮನೆ ಕಿರೀಟಿಯೇ ನೀನು ॥೯೩॥
ನಾನು ಪುತ್ರನೇನು ನಿನಗೆ । ನೀನು ತಂದೆಯಂತೆ ಹೀಗೆ ।
ಏನ ಕೇಳುತಿರುವೆ ತಾಯ । ಕುಶಲಗಿಶಲವ ॥೯೪॥

ಬೃಹನ್ನಳಾವಚನ

ದೇವಕೀಯ ಪುತ್ರನಾದ । ಮಾವ ಕೃಷ್ಣ ಹೇಗಿರುವನೈ ।
ಯಾವ ಭೀತಿ ನಿನಗೆ ಹೇಳು । ಕಾಯಲಾವಿರೆ ॥೯೫॥

ಅಭಿಮನ್ಯುವಚನ

ಅಮ್ಮನಣ್ಣನನ್ನು ಕೂಡ । ಹಮ್ಮಿನಿಂದ ಹೆಸರು ಹಿಡಿದು ।
ಸುಮ್ಮನೀತ ಕೇಳ್ವನಲ್ಲ । ಧರ್ಮವೇನಿದು? ॥೯೬॥
ಆಗಲಹುದಯ್ಯ ನಿನ್ನ । ಸೋಗು ಹೇಗೇ ಇರಲಿ ದೈವ ।
ಯೋಗದಿಂದ ಚೆನ್ನಾಗಿರುವ । ವಾಸುದೇವನು ॥೯೭॥

ಸೌರಾಷ್ಟ್ರ ತ್ರಿವುಡೆ

ಏನಿದೀತನು ನಗುವನೆನ್ನನು ।
ಮಾನಗೆಡಿಸಲು ಮತ್ತೆ ಎಲೆಲಾ
ನಾನು ವೀರಕ್ಷತ್ರಕುಲದವ । ಮರೆಯಬೇಡ ॥೯೮॥
ಧ್ಯಾನದಲ್ಲಿಡು ನಿನಗಿರುವ ಈ ।
ಸ್ಥಾನಮಾನದ ಕೀಳುಮಟ್ಟವ ।
ಹಾನಿ ಹೊಂದುವೆ ನುಡಿದರೀಪರಿ । ಎಂದು ಗಜರೆ ॥೯೯॥

ಪಂತುವರಾಳಿ ಮಟ್ಟೆ – ಬೃಹನ್ನಳಾವಚನ

ಸಾಕು ಸಾಕು ನಿನ್ನ ವೆಗ್ಗಳ । ಎಲವೊ ಪೋರ ।
ಲೋಕದಲ್ಲಿ ನೀನೆ ಅಗ್ಗಳ ॥
ಪಾಕಶಾಸನಗೆ ಸಮಾನ ।ಪೂತುರೇ ಕುಮಾರ ಮದನ ।
ಕಾಕಪೋಕರಂತೆ ಹರಟ । ಲೇಕೆಯೆಂದ ಸವ್ಯಸಾಚಿ ॥೧೦೦॥
ಮೂರು ಲೋಕ ವೀರ ಪಾರ್ಥನ । ಪುತ್ರ ನೀ ಮು ।

ರಾರಿ ನಿನಗೆ ಮಾವ ಈ ದಿನ ॥
ನೀನು ಹಿಡಿದೆ ಸರಳ ತರುಣ । ಭಾನುಕೋಟಿ ತೇಜರಣದ ।
ಚೂಣಿಯಲ್ಲಿ ಸೋತು ಸಿಕ್ಕಿ । ಪ್ರಾಣವೊಂದನುಳಿಸಿಕೊಂಡೆ ॥೧೦೧॥
ಯಾರು ಕೀಳು ಹೇಳು ಹುಡುಗನೆ । ನಾನೊ ನೀನೊ ।
ಹಾರುವಯ್ಯ ತೇರ ನಿಲ್ಲಿಸಿ ॥
ಹಾರಿಕಸಿಯೆ ಬಿಲ್ಲನಿಲ್ಲಿ । ಮೋರೆಹೊತ್ತು ನಿಂತೆಯಹಹ ।
ಜೋರಿಗಾವ ಬೆಲೆ ನಿರಸ್ತ್ರ । ವೀರಕುರುಕುಲಾಗ್ರಗಣ್ಯ ।೧೦೨॥

ಅಭಿಮನ್ಯುವಚನ

ಹಂಗಿಸುವೆಯದೇಕೆ ಸುಮ್ಮನೆ । ಇಂದಿನ ರಣ ।
ರಂಗದಲ್ಲಿ ಬಿದ್ದ ಸುಭಟರ ॥
ಅಂಗದಲ್ಲಿ ಹೊಕ್ಕ ಸರಳ । ಮೇಲು ಬರಹವೋದು ಪಾರ್ಥ ।
ನಂಗಜಾತನಾಮವಲ್ಲ । ದನ್ಯನಾಮ ಸಿಕ್ಕಬಹುದೆ ॥೧೦೩॥

ಸೌರಾಷ್ಟ್ರ ತ್ರಿವುಡೆ – ಬೃಹನ್ನಳೆಯ ಸ್ವಗತವಚನ

ಎಂದೊಡಾತ್ಮಜ ಸತ್ಯಸತ್ಯವಿ ।
ದಿಂದು ಮತ್ಸ್ಯಾನೀಕದಲಿ ಹಾ ।
ಯೆಂದು ಚೀರದ ಗಾಯಗೊಳ್ಳದ । ಯೋಧನಿಲ್ಲ ॥೧೦೪॥
ನಂದನನ ಬಾಣಗಳು ನನ್ನನು ।
ಬಂದು ಮುಟ್ಟುತ್ತಿದ್ದವೊಮ್ಮೆಲೆ ।
ಹಿಂದೆ ತಿರುಗಿಸದಿರಲು ತೇರನು । ಚಳಕದಿಂದ ॥೧೦೫॥

। ದ್ವಿಪದಿ ಝಂಪೆ । – ಬೃಹನ್ನಳೆಯ ಪ್ರಕಾಶವಚನ

ಮನದೊಳಿಂತೆಂದರ್ಜುನನು ಮತ್ತೆ ಗಜರಿ ।
ಅಣಕಿಸಿದನೇಕೆನೀ ಕಾಲಾಳ್ಗೆ ಹೆದರಿ ॥೧೦೬॥
ಮಣಿದೆ ಸಿಕ್ಕಿದೆ ಕೈಗೆ ಹೇಗೆ ವಾಗ್ವೀರ ।
ದಣಿವಾಯಿತೇ ನಿನಗೆ ಮುದ್ದು ಸುಕುಮಾರ ॥ ೧೦೭॥

ಅಭಿಮನ್ಯುವಚನ

ಅಣಕಿಸದಿರಣಕಿಸದಿರಜ್ಞಾನಿ ನೀನು ।
ತೃಣಕೆ ಸಮವೀದೇಹವಂಜದವ ನಾನು ॥೧೦೮॥
ರಣದಲ್ಲಿ ಹಿಡಿದನಿವ ಬರಿಗೈಗಳಿಂದ ।

ಕಣೆಯ ಕೊಡು ಉತ್ತರಿಪೆ ಕೈಚಳಕದಿಂದ ॥೧೦೯॥
ಯಾರು ಇಲ್ಲವೆ ನನಗೆ ಕೊಡಲು ಬಿಲ್ಲಂಬ ।
ಹೋರಾಡದೆಯೆ ಬಂದಿಯಾದೆ ವಿಷ್ಕಂಭ ॥೧೧೦॥
ಸಾರಿತೀಯುಳಿವಳಿವು ಕ್ಷತ್ರಿಯನಿಗಕಟ ।
ಮೂರು ಸಲ ನಮಿಸುವೆನು ಕೊಡು ಶಸ್ತ್ರವಿಕಟ ॥೧೧೧॥
ತ್ರೈಲೋಕ್ಯವೀರನಿಗೆ ಮಗನಾದ ನಾನು ।
ಭೂಲೋಕದಲ್ಲಿಂತು ಅವಮಾನ ಸೂನು ॥೧೧೨॥
ಈ ವಿರಾಟನ ಸೆರೆಯ ಕಾಣಬೇಕೆಂದು ।
ಯಾವಾಗ ಬರೆದ ಎಂಥ ದಿನವಿಂದು ॥೧೧೩॥

ಕಂದ – ವಲಲ ವಚನ

ಎಂದೊಡೆ ವಲಲಾಚಾರ್ಯಂ
ನಿಂದಂ ನಿಜಭುಜವತಟ್ಟಿ ಮುಗುಳ್ನಗೆಯಿಂದಂ
ವಂದಿಸು ರಾಜವಿರಾಟಂ
ಗೆಂದಂ ಸೌಭದ್ರನೊರೆದನುಗ್ರಸ್ವರದಿಂ ॥೧೧೪॥

ನಾಟಿ ರೂಪಕ – ಅಭಿಮನ್ಯು ವಚನ

ಅಡುಗೆಯ ಭಟ್ಟನ ಬಲದಿಂ । ದೊಡೆಯನು ರಾಜ್ಯಕ್ಕೀ ದೊರೆ ।
ಬಡಿವಾರದ ಮಾತೇತಕೆ । ಬಡ ಅಡುವಳ ನೀನು ॥೧೧೫॥
ಹಿಡಿದಾದರು ಸೌಟನು ಮುಂದ । ದಡಿಯಿಟ್ಟೆದುರಿಸ ಬಂದೆಯ ।
ಹುಡುಗಾಟಿಕೆಯಿಂದೆನ್ನನು । ಹೊತ್ತಿಲ್ಲಿಗೆ ತಂದೆ ॥೧೧೬॥
ಬರಿಗೈಯಿಂದಾಜಿಗೆ ಬಹ । ಪರಿ ಹಿರಿಯಪ್ಪನಿಗಷ್ಟೇ ।
ಪರಿಸೀಮಿತವೆಂಬುದು ಈ । ಧರೆಗೆಲ್ಲಾ ಗೊತ್ತು ॥೧೧೭॥
ಮರುಳ್ತನದೀ ಮಾತೇತಕೆ । ಪರಿಹಾಸಕೆ ಸರಿಕನೆ ನೀ ।
ಕರ ಹಸಿದಿದೆ ಕೊಡು ಬಿಲು । ಬಾಣಂಗಳ ನೆನಗೆ ॥೧೧೮॥

ನೀಲಾಂಬರಿ ಆದಿ – ವಲಲ ವಚನ

ಅಹಹ ಏನನೆಂಬೆ ಬಾಲ । ಮಹಿಮೆಯನ್ನು ಮೆರೆದ ತರುಣ ।
ವಹವ ವಹವ ಎಂದು ಭೀಮ । ಗಹಗಹಿಸಿದನು ॥ಪ॥
ಯಾವ ಯೋಧ ಯುದ್ಧದಲ್ಲಿ । ಬಾಹುಶಸ್ತ್ರವಲ್ಲವೆಂದು ।
ಭಾವಿಸುವನೊ ಅವನ ಶೌರ್ಯ । ಕ್ಷಾತ್ರವೆಂಬರೆ ॥೧೧೯॥

ಆ ವಿಗಡತೆ ತನಗೆ ಮಾತ್ರ । ಎಂದು ಹೇಳುವವನ ಕರೆಸು ।
ಈ ವಿಧದಲಿ ಗಳಹಿ ಹೆಮ್ಮೆ । ತೋರಿ ಕೊಡುವರೆ ॥೧೨೦॥
ಅನ್ನ ತಿಂದ ನನ್ನ ಬಲವ । ಮಾಂಸತಿಂದ ಮನುಜನಾವ ।
ತನ್ನದೆನ್ನಬಲ್ಲ ಹೇಳು । ಮೂರು ಲೋಕದಿ ॥೧೨೧॥
ಸಣ್ಣಮೋರ ನಿನಗೆ ಇಷ್ಟು । ದೊಡ್ಡ ಬಾಯಿ ತಕ್ಕುದಲ್ಲ ।
ಇನ್ನು ನಮ್ಮ ದೊರೆಗೆ ಎರಗಿ । ಬಾಳಿಕೊಂಡಿರು ॥೧೨೨॥
ಕಣ್ಣು ಬಿಡುವೆಯೇಕೆ ಬರಿದೆ । ಬಣ್ಣವಾತಿನಿಂದ ಮೆರೆದೆ ।
ಉಣ್ಣು ಹೋಗು ಹೊಟ್ಟೆಹಸಿದ । ರಿನ್ನು ಬಡಿಸುವೆ ॥೧೨೩॥

ನಾಟಿ ರೂಪಕ – ಅಭಿಮನ್ಯುವಚನ

ಯಾರಿಗೆ ಯಾರಿಗೆ ದೊರೆಯೀ । ಶೂರನಿಗಿವ ದೊರೆಯೆನಿಪನೆ ।
ಈ ರೀತಿ ನಿರಾಯುಧನನು । ಹಿಡಿಯಲು ಕಳಿಸಿ ॥
ವೈರಿಯ ಬಂಧಿಸಿ ಗದ್ದುಗೆ । ಏರಿರುವವ ದೊರೆಯೇನಿವ ।
ಸೈರಿಸೆ ವಂದಿಸೆನಿಂತಹ । ದೊರೆಗಿರೆಗಳನು ॥೧೨೪॥

ಕಂದ – ವಿರಾಟ ವಚನ

ಉಸಿರಲಭಿಮನ್ಯುವಿಂತಾ
ರಸೆಯೊಡೆಯಂ ಕೇಳ್ದನಿವನನಾರ್ ಕರೆತಂದರ್ ।
ಹಸಿದ ಹುಲಿಯಂತೆ ಕಾಣ್ಬಂ
ಅಸದೃಶ ಗರ್ವಂ ವಿಶೇಷ ವಿಧ ಶಿಕ್ಷಾರ್ಹಂ ॥೧೨೫॥

। ದ್ವಿಪದಿ ಝಂಪೆ । – ವಲಲ ವಚನ

ರಾಜ ಕೇಳ್ ನಾ ಹಿಡಿದೆ ಬರಿಗೈಗಳಿಂದ ।
ಗಾಜುಗೊಂಬೆಯ ಹೋಲುತಿರುವನೀ ಕಂದ ॥೧೨೬॥
ಸಾಜವೀ ಮಲ್ಲನಿಗೆ ವಜ್ರಸಮಬಾಹು ।
ಮೂಜಗಕೆ ಗೊತ್ತು ನನಗಿದರಿಂದ ಕಾಹು ॥೧೨೭॥

ಅಭಿಮನ್ಯು ವಚನ

ಸೋಜಿಗವು ನೀನೆನ್ನ ನಡುತಂದೆಯೇನು ।
ವ್ಯಾಜವಿಲ್ಲದ ವಿಕ್ರಮಾದಿಷ್ಟನವನು ॥೧೨೮॥

ಯೋಜನವ ತುಂಬಿದಕ್ಷೌಹಿಣಿಗೆ ಸಾಟಿ ।
ಆಜಿಯಲಿ ಅವನ ತೋಳ್ ನಿನ್ನದೊಣದೋಟಿ ॥೧೨೯॥

ವಿರಾಟ – ಅಭಿಮನ್ಯು ಸಂವಾದ

ಯಾವ ಮಧ್ಯಮನವನು ತರಳ ಹೇಳಯ್ಯಾ ।
ಯಾವನಾ ತೋಳ್ಮಲ್ಲ ಬಿಡಿಸಿ ಹೇಳಯ್ಯ ॥೧೩೦॥
ಯಾವನು ಜರಾಸಂಧ ಕಂಠವನು ಹಿಡಿದು ।
ಠೀವಿಯಿಂ ತೂಗಿ ತೋಳಿಂದೆಸೆದ ಬಡಿದು ॥೧೩೧॥
ಮಾವರನಿಗಾ ಹೆಮ್ಮೆಸಿಗದಂತೆ ದಿಟ್ಟ ।
ಜೀವವನು ದೇಹದಿಂಬೇರ್ಪಡಿಸಿ ಬಿಟ್ಟ ॥೧೩೨॥
ತೀವಿದನೊ ಯಾವನಾ ನೆತ್ತರಿಂದಿಳೆಯ ।
ಪಾವನಾನಿಲಸೂನು ಅವನೆಂದು ತಿಳಿಯ ॥೧೩೩॥
ನಿಲ್ಲದಿರು ವೇದಿಕೆಯೊಳಿಲ್ಲಿನ್ನು ಖುಲ್ಲ ।
ಎಲ್ಲಾದರೂ ಹೋಗು ನನಗೆ ಮುನಿಸಿಲ್ಲ ॥೧೩೪॥

। ಬೇಗಡೆ ಅಷ್ಟ ।

ಎಂದೊಡಾ ಮತ್ಸ್ಯೇಶ ಫಾಲ್ಗುಣನು । ಕಾಲಿಂಗೆ ನಿಗಡವ ।
ತಂದು ತೊಡಿಸಿನ್ನೇಕೆ ತಡಹದನು ॥
ಇಂದಿನವಿನಯಕಿಂಥ ಶಾಸನ । ತಂದಿರೆನ್ನನು ತೋಳ್ಗಳಿಂಹಿಡಿ ।
ದೊಂದೆ ತೋಳಿಂದೆತ್ತಿ ನಡುವಿನ । ತಂದೆ ಕೊಂಡೊಯ್ಯದಿರನೆನ್ನನು ॥೧೩೫॥

ಕಂದ – ಉತ್ತರ ವಚನ

ಆ ಸಮಯದೊಳೆಯ್ತಂದಂ
ಭಾಸುರವೇಷಂ ಕುಮಾರನುತ್ತರವರ್ಮಂ ।
ಲೇಸಲ್ಲ ಪೊಗಳ್ವುದೆನ್ನಂ
ಸಾಸಿರ ಸೂಳೊರೆವೆ ನೊರೆನೆವೆಂದೊದರುತ್ತಂ ॥೧೩೬॥

ಘಂಟಾರವ ಅಷ್ಟ

ತಂದೆ ಲಾಲಿಸು ಹೊಗಳುವರಿವರೆನ್ನ ॥
ಮಂದಮತಿಗಳು ಹಗೆಗಳನು ನಾ ।

ಕೊಂದು ಕೆಡಹಿದೆನೆನ್ನುತ ॥೧೩೭॥
ಅಂದವಲ್ಲವಿದೆಲ್ಲ ಈ ಕೃತ್ಯದ ।
ತಂದೆ ಫಲ್ಗುಣನೀ ಬೃಹನ್ನಳೆ ।
ಬಂದು ಕುಳಿತಿಹ ಬಿಮ್ಮನೆ ॥೧೩೮॥
ನಾನು ನೋಡಿದೆ ಶಾಲ್ಮಲೀದ್ರುಮದಿಂದ ।
ತಾನು ಶರಚಾಪಗಳ ಕೊಂಡೊ
ಯ್ದೀನಮೂನೆಯ ಮಾಡಿದ ॥೧೩೯॥
ಏನ ಹೇಳಲಿ ಕುರುಸೈನ್ಯ ಕಂಗೆಟ್ಟು ।
ಬಾಣವೃಷ್ಟಿಯ ತಾಳಲಾರದೆ ।
ಕಾಲಿಗುಸಿರಿತು ಬುದ್ಧಿಯ ॥೧೪೦॥
ಜಾಣರಾದರು ಕರ್ಣಶಕುನಿಗಳು ।
ದ್ರೋಣಭೀಷ್ಮರ ಕಣ್ಗೆ ಬೀಳದೆ ।
ತಾವೆ ಮುಂಜಿಗಿದೋಡುತ ॥೧೪೧॥

ಶಂಕರಾಭರಣ ರೂಪಕ – ಕಂಕವಚನ

ನಾವು ಪಾಂಡುಸುತರು ದೊರೆಯೆ । ದೈವ ಮುನಿಯೆ ಕಾಡನಲೆದು ।
ಜೀವಧಾರಣಾರ್ಥವಾಗಿ । ನಿನ್ನ ನಾಡೊಳು ।
ಠಾವ ಕಂಡಜ್ಞೇಯರಾಗಿ । ಬೇವಸವನುಳಿದು ಬಾಳಿ ।
ಈ ವರುಷ ಕಳೆದೆವಯ್ಯ । ಮತ್ಸ್ಯ ಕೇಳೆಲ ॥೧೪೨॥
ಊಳಿಗವನು ಕೊಟ್ಟು ನಮ್ಮ । ಪಾಲಿಸಿರ್ದ ನಿನಗೆ ನಾವು ।
ಸಾಲದೇನ ಕೊಟ್ಟರೂ ಭೂ । ಪಾಲ ಚಂದ್ರಮ ॥
ಆಳುಗಳನು ಮಕ್ಕಳಂತೆ । ತಾಳಿಕೊಂಡು ಸಲಹುವಂಥ ।
ಮೇಲುತನದ ಒಡೆಯನಾದೆ । ಕರುಣವಿಕ್ರಮ ॥೧೪೩॥
ದಾಯಧರ್ಮದಲ್ಲಿ ಸಿಕ್ಕಿ । ಮಾಯದಂಥ ಗಾಯ ಹೊಂದಿ ।
ಶ್ರೀಯ ಕಳೆದುಕೊಂಡ ನಮ್ಮ । ಕಾಯರಕ್ಷೆಯ ॥
ವಾಯದೆಯವರೆಗೆ ಮಾಡಿ । ತಾಯಿತಂದೆಯಾದೆ ನಮಗೆ ।
ಶ್ರೇಯವಾಗದಿರದು ಗೆಳೆಯ । ನಿನಗೆ ನಿಶ್ಚಯ ॥೧೪೪॥

ಮತ್ತೇಭವಿಕ್ರೀಡಿತ – ವಿರಾಟವಚನ

ಎನಲಾ ಧರ್ಮಜನಂದು ಮತ್ಸ್ಯನೃಪನಾನಂದಾಬ್ಧಿಯೊಳ್ ಮಿಂದ ನೀ
ಘನಧರ್ಮರ್ ಗೃಹಕೃತ್ಯನಿರ್ವಹಣದೊಳ್ ವ್ಯರ್ಥಂ ಬಳಲ್ದರ್ ಗಡ ।

ಮನೆಗೋತ್ರಂ ಕುಲಮಾಯ್ತು ನಿರ್ಮಲತರಂ ಸತ್ಯವ್ರತರ್ ಪಾಂಡವರ್
ದನುಜಧ್ವಂಸಿ ಕೃಪಾಬಲರ್ ನೆಲಸಲೆಂದೋರಂತೆ ಕೊಂಡಾಡಿದಂ ॥೧೪೫॥

ಕಂದ – ಅಭಿಮನ್ಯು ವಚನ

ಕ್ಷಮಿಸಿರಿ ಕ್ಷಮಿಸಿರಿ ಪಿತೃಗಳೆ
ನಮಸ್ಕರಿಪೆನನ್ಯಥಾರ್ಥಮಂ ಮಾಡದಿರಿ ।
ಅಮಿತಾಪರಾಧವೆಸಗಿದೆ –
ನಮಾನ್ಯ ಸಂವಾದದೊಳ್ ತೊಡಂಗಿದೆ ನಿಮ್ಮೊಳ್ ।೧೧೪೬॥

ಸಾಂಗತ್ಯ

ನಾನು ಕ್ರೋಧವ ತಾಳಿ ಜರೆದರೆ ಜರೆದಿರಿ ।
ತಾಳಿ ಮುಗುಳುನಗೆಯ ॥
ನಾನೇನನೆಂದರು ಹುಸಿವಿರೋಧವ ತೋರಿ ।
ಪರಿಕಿಸಿದಿರಿಬಗೆಯ ॥೧೪೭॥
ನಾನು ನಿಮ್ಮೊಲವಿನ ಪರಿಯ ಬಗೆಯದಾದೆ ।
ಛದ್ಮವೇಷದೊಳಿರುವ ॥
ದೀನನ ಕ್ಷಮಿಸಿರಿ ಎಂದಂಗಲಾಚಿದ ।
ಭಾನುತೇಜದ ಬಾಲನು ॥೧೪೮॥
ಅಜ್ಞಾನದಿಂದ ನಿಮ್ಮೊಡನೆ ಸೆಣಸಿದೆನ್ನ ।
ಕ್ಷಮಿಸು ಹಿರಿಯ ತಂದೆಯೆ ॥
ಪ್ರಾಜ್ಞಪ್ರತಾಪದಿಗ್ಗಜ ಎಂದು ನುತಿಸಿ ಭೀ
ಮನ ಪಾದಕೆರಗಿದನು ॥೧೪೯॥

ಕೇದಾರಗೌಳ ಅಷ್ಟ – ಭೀಮಾರ್ಜುನ ವಚನ

ತಂದೆಯಂತೆಯೆ ಶೂರನಾಗು ಮಗನೆ ಅಭಿ ।
ನಂದಿಸುವೆನು ನಿನ್ನನು ॥
ತಂದೆಗೆ ನಮಿಸಿದೊ ಪುಲಕಿತನಾಗಿಲ್ಲಿ
ನಿಂದಿಹ ನೋಡೆಂದನು ॥೧೫೦॥
ಮರುತನಂದನನೆಂದ ಮಾತಿಗೆ ಹಿಗ್ಗಿತಾ ।
ಚರಣಕೆ ಬಾಗಿದನು ॥
ಅರಿಮೃಗಕೇಸರಿಯಾದ ಸ್ವಜನಕನ ।

ತರಳ ಭಕ್ತಿಯಭಾವದಿ ॥೧೫೧॥
ದ್ವಾದಶಾಧಿಕ ವರ್ಷವಾದವು ಮಗನೆನಿ ।
ನ್ನಾಗಮನವ ಕಾಣದೆ ॥
ಯೋಧಾಗ್ರಗಣ್ಯ ನೀನಾದೆ ಎಂದರ್ಜುನ ।
ತೂಗಿ ತಬ್ಬಿದ ಮಗನ ॥೧೫೨॥
ಮಗು ನಮ್ಮನಿಲ್ಲಿಯವರೆಗೆ ರಕ್ಷಿಸಿದಂಥ ।
ಸುಗುಣಾಭರಣನಾಗಿಹ ॥
ಹೊಗಳಿಕೆಗೆಳಸದ ಮತ್ಸ್ಯಾಧಿಪತಿಯನು ।
ನಮಿಸು ನಮ್ಮವನಾಗಿಹ ॥೧೫೩॥
ಎಂದ ಕೂಡಲೆ ಭಯಭಕ್ತಿಭಾವಗಳಿಂದ ।
ಮುಂದೆ ಹೆಜ್ಜೆಗಳನಿಟ್ಟು ॥
ವಂದಿಸಿದನು ಬಾಲ ವೀರ ವಿರಾಟ ಭೂ ।
ಮಂಡಲೇಶ್ವರನಡಿಗೆ ॥ ೧೫೪॥

ತುಜಾವಂತು ಮಟ್ಟೆ – ವಿರಾಟವಚನ

ಭಳಿರೆ ವೀರಬಾಲ ಮೆಚ್ಚಿದೆ । ವಿನಯಶೀಲ ।
ಕುಲಕೆ ಧರ್ಮದೀಪ ಹಚ್ಚಿದೆ ॥
ಅಳಿಯದಿನ್ನು ಪಾಂಡುಸುತರ । ಧವಳಕೀರ್ತಿ ಸೂರ್ಯಚಂದ್ರ ।
ರುಳಿಯುವಷ್ಟು ಕಾಲವುಳಿಗು । ಶಿಲೆಯ ಬರಹದಷ್ಟು ಸತ್ಯ ॥೧೫೫॥
ಯಮನ ಮಗನ ಧೈರ್ಯ ನಿನ್ನಲಿ । ನಿಲಲಿ ಮಗನೆ ।
ಸಮರದಲ್ಲಿ ಬೆಳೆದು ಮೂಡಲಿ ॥
ಅಮಿತವಾದ ಭೀಮಶಕ್ತಿ । ಸುಮನಸಃ ಪ್ರಶಸ್ತನಾಗು ।
ಜಮದರಿ ಪ್ರಹಾರದಲ್ಲಿ । ನರನ ಕೈಯ ಜಾಣ್ಮೆವಡೆದು ॥೧೫೬॥
ಮದ್ರಸುತೆಯ ಸುತರ ಕಾಯದ । ಕಾಂತಿಮತ್ತೆ ।
ಮುದ್ರಿಸಿರಲಿ ನಿನ್ನ ಮೈಯಲಿ ॥
ಉದ್ರವಂತನಣುಗಿಯರಸ । ಗಿರುವಲೋಕವಂದ್ಯ ಕೀರ್ತಿ ।
ಭದ್ರವಾಗಿ ನಿನಗೆ ಸಿಗಲಿ । ಎಂದು ಹರಸಿದನು ವಿರಾಟ ॥೧೫೭॥

ಬೇಗಡೆ ಅಷ್ಟ

ಅರರೆ ಅರ್ಜುನ ನಿನ್ನ ಅಚ್ಚಾದ । ಈ ಚಲುವ ಬಾಲಕ ।
ಪರಿಕಿಸಲು ನನಗೀಗ ಮೆಚ್ಚಾದ ॥

ಸ್ಮರಿಸಿ ನೀನೆನ್ನಣುಗಿಗೀವರೆ । ಗರಿವ ನೀಡಿದುದನ್ನು ನಾಟ್ಯದ ।
ಕರೆದುಕೊಡುವೆನು ನನ್ನ ಮಗಳನು।ಎರೆದು ಧಾರೆಯ ನಿನ್ನ ಮಗನಿಗೆ ॥೧೫೮॥
ಹಿರಿಯರೊಪ್ಪುವ ಕಾರ್ಯವಿದು ನೋಡು । ದೇವೇಂದ್ರನಂದನ ।
ತೆರೆದೆದೆಯ ಸೂಚನೆಗೆ ಮನ ಮಾಡು ॥
ತರುಣನೊಪ್ಪಿಗೆಯನ್ನು ಮುಗುಳ್ನಗೆ । ಬೆರೆದ ಮೊಗದಲಿ ಕಂಡು ಸೈಯೆನೆ ।
ನೆರೆದ ಪಾಂಡವರಲ್ಲಿ ಮಂಗಲ । ಮೊರೆಯತೊಡಗಿತು ವಾದ್ಯರವದಲಿ ॥೧೫೯॥

ಅಂಕ : ೩

ಕೌರವರ ಪಾಳಯ
ಭಾಮಿನಿ – ಸೂತವಚನ

ಇತ್ತ ಕೌರವ ಶಿಬಿರದಲಿ ಕೈ
ಯೆತ್ತಿ ಕೂಗಿದ ದೂತನೊಬ್ಬನು
ಶತ್ರುಗಳು ಕೊಂಡೊಯ್ದರಭಿಮನ್ಯುವನು ಲೆಕ್ಕಿಸದೆ ।
ಸತ್ತ ಬಂಧುಗಳನ್ನು ದಾನವ
ವೃತ್ತ ವೈರಿಯ ಚಕ್ರವನ್ನುನಿ
ರಸ್ತಕೋದಂಡಕ್ಕೆ ಕುರುಸೈನ್ಯಕ್ಕೆ ಧಿಕ್ಕಾರ ॥೧೬೦॥

ಭೈರವಿ ಏಕ – ದ್ರೋಣವಚನ

ಸೂತನ ಮಾತನು ಕೇಳಿ । ಕೆರ। ಳ್ದಾತುಳಿಲಾಳನು ಸೀಳಿ ।
ನಾತರುವೆನು ಕುವರನನು । ಹೇ । ಳಾತನದಾರೊಯ್ದವನು ॥೧೬೧॥
ಆ ಹತಭಾಗ್ಯನದಾರು । ಎ । ನ್ನಾಹವ ಯಜ್ಞದ ಆಡು ॥
ನೀ ಹೇಳೆಂದಾ ದ್ರೋಣ । ಕ್ರು । ದ್ಧಾಹಿವೊಲಾರ್ಭಟಿಸಿದನು ॥ ೧೬೨॥

ಭೀಷ್ಮ ವಚನ

ಹಿನ್ನಡೆ ಗೊಂದಲದಲ್ಲಿ । ಈ । ಕನ್ನಾಡಲಿ ಭಯವೆಷ್ಟು ॥
ಎನ್ನುವುದನ್ನರಿಯದಿಹ । ತರ । ಳನ್ನಾರೊಯ್ದರು ಹೇಳು ॥೧೬೩॥
ಹಿಂಡೋಡಿದ ಮೇಲುಳಿದ । ಮರಿ । ಗಂಡಾನೆಯ ಕರದೊಯ್ವ ॥
ಭಂಡನದಾವನು ಹೇಳು । ನಾ । ಚೆಂಡಾಡುವೆನೆನೆ ಭೀಷ್ಮ ॥೧೬೪॥

ಕೌರವ ವಚನ

ಮನೆತನ ಜಗಳಗಳಲ್ಲಿ । ತ । ಪ್ಪೆನುವುದು ಮಕ್ಕಳೊಳೆಲ್ಲಿ ॥
ಜನ ದೂಷಿಸುವರು ನನ್ನ । ಆ । ನನಗಾಯಿತೆ ಈ ಬನ್ನ ॥೧೬೫॥
ತನಯನು ಮೊದಲವನನನಗೆ । ಮೇಣ್ । ಕೊನೆಗಾ ಕೌಂತೇಯನಿಗೆ ॥
ಮನವೆನ್ನದು ನೊಂದಿಹುದು । ನಾ । ಹೊಣೆಯವನನು ಬಿಡಿಸಲಿಕೆ ॥೧೬೬॥

ಕರ್ಣವಚನ

ಎಂದಾ ಫಣಿಕೇತನನು । ರಥ । ಬಂದಿತೆ ಎನುತಿರೆ ಕರ್ಣ ॥
ನೊಂದೆಂದನು ಕುರುರಾಯ । ಕೇಳ್ । ಬಂಧುವಿರಲಿ ಇರದಿರಲಿ ॥೧೬೭॥
ಕಂದನವನು ಕಳೆದೆಯ್ದೆ । ನಮ । ಗೆಂದಾದರು ಹಿತವಹುದೆ ॥
ಚಂದವೆ ನಮಗೀರೀತಿ । ಗುರು । ವೃಂದದೆದುರು ಸಂಗಾತಿ ॥೧೬೮॥
ತರಲಾರದೆ ನಾವವನ । ಹಿಂ । ದಿರುಗಿದರೀ ನೃಪವೇಷ ॥
ಉರಿಯಲಿ ಬೀಳಲಿ ತೊಡುವ । ವ । ಲ್ಕಲವನು ಕಾಡಿನೊಳಿರುವ ॥೧೬೯॥

ಸೌರಾಷ್ಟ್ರ ತ್ರಿವುಡೆ । ಶಕುನಿ ವಚನ

ಏತಕೀ ಭಯ ಏತಕೀ ನಯ । ಏತಕೀ ದಯ ವೇತಕೀ ವ್ಯಥೆ ।
ನಾಥರೊಬ್ಬರೆ ಹೇಳಿ ಆತಗೆ । ನಾವೆಯೇನು ॥೧೭೦॥
ಪಾರ್ಥಸುತನೆಂದರಿತು ತಾನೇ । ಪ್ರೀತಿಯಿಂದಾ ಮತ್ಸ್ಯಭೂಪತಿ ।
ಓತುಬಿಡಬಹುದಲ್ಲವಾದರೆ । ನೀತಿಗೆಟ್ಟು ॥೧೭೧॥
ಸೋತವರವೊಲು ಯುದ್ಧಭೂಮಿಯ । ಮಾತನಾಡದೆ ಬಿಟ್ಟು ಹೋದಾ ।
ಖ್ಯಾತ ಕೃಷ್ಣನ ನೆನೆದುಬಿಡಬಹು । ದೇಕೆ ಚಿಂತೆ ॥೧೭೨॥
ಕ್ರೋಧದಲಿ ನೇಗಿಲನು ಝಳಪಿಸಿ । ಹೋದವರ ಕೊಂದಾನು ಆತನ ।
ಸೋದರನು ಎಂದಂಜಿ ಬಿಡಲೂ । ಬಹುದು ನೋಡಿ ॥೧೭೩॥
ಇಲ್ಲವಾದರೆ ಎಲ್ಲರಿಪುಗಳ । ಹಲ್ಲಮುರಿದೆಸೆದೀಗಲೇ ತಂ ।
ದಿಲ್ಲಿ ನಿಲ್ಲಿಸದಿರ ವೃಕೋದರ । ತರಳನನ್ನು ॥೧೭೪॥

। ಮಧ್ಯಮಾವತಿ ತ್ರಿವುಡೆ ।

ಎಂದು ಮೂದಲಿಸಲು ಶಕುನೀ । ಹಂದೆ ಹೋಗೆಂದೊವಜನೂತನ ।
ಮುಂದೆ ಬಾ ಹೇಳಾವನೊಯ್ದನು । ಮಂದಭಾಗ್ಯನು ಸುತನನು ॥೧೭೫॥
ಎಂದು ಕೇಳಲು ಮಲ್ಲನೊಬ್ಬನು । ಬಂದು ತೇರನು ತಡೆದು ತಾಕೈ ।
ಯಿಂದ ಸೆಳೆದೊಯ್ದನು ಮಹಾಬಲ । ಚಂದದಿಂದಲಿ ಕುವರನ ॥೧೭೬॥

ಎಂದೊಡನೆ ಅವಭೀಮನೇ ಸರಿ । ಎಂದು ಭೀಷ್ಮನು ಪೇಳುತಿರೆ ಕುರು ।
ನಂದನನಿದಾಧಾರವಾಗದು । ಪಾಂಡುಕುವರರ ಇರವಿಗೆ ॥೧೭೭॥
ತಂದು ಕೊಡಿರಕ್ಷರದ ಸಾಕ್ಷಿಯ । ನೆಂದು ಗಜರುತ್ತಿರಲು ಪಾರ್ಥನ ।
ದೆಂದು ತೋರಿದ ಬಾಣಲಿಪಿಯನು । ತಂದು ಶರವನು ದ್ರೋಣನು ॥೧೭೮॥

ವಾರ್ಧಿಕ

ಬಂದು ಮತ್ತೊಬ್ಬ ಭಟ ಧರ್ಮಜನು ಕಳಿಸಿದ್ದ
ಸಂದೇಶವನ್ನುಸಿರ್ದ ಸಂತೋಷವಿದ ಕೇಳಿ
ಇಂದು ಸೊಸೆ ತನಕೆ ಬಂದಳು ವಿರಾಟನ ಕುವರಿ ಮದುವೆಯೆಲ್ಲಾಗಬೇಕು ।
ಎಂದು ಹಿರಿಯರು ತಿಳಿದು ಹೇಳಬೇಕೆಂದಾಗ
ಕಂದಿರ್ದ ಮೊಗವರಳಿ ತಾ ಹಿರಿಯರಿಗೆ ಕೊಡುವೆ
ನೆಂದರ್ಧರಾಜ್ಯವನ್ನೀಗ ಕೊಡು ಶಿಷ್ಯವರ ಎಂದ ಭಾರದ್ವಾಜನು ॥೧೭೯॥

ಏಕತಾಳ – ದ್ರೋಣವಚನ

ಕೊಡು ಮಗು ದುರ್ಯೋಧನನೆ । ನೀ ।
ನುಡಿದುದ ಧರ್ಮಧ್ವರನೆ ॥
ಮಡಿದರು ಮಡಿಯದು ಕೀರ್ತಿ ಮನುಷ್ಯರ ।
ಪೊಡವಿಪ ಸತ್ಯದುರಂಧರರಗ್ರನೆ ॥೧೮೦॥
ದೃಢಪಟ್ಟಿರೆ ಪಾಂಡವರ । ಇರ
ವೊಡನೆಯೆ ಭಟನುಸಿರ್ದವರ ॥
ನುಡಿಯನು ಮಂಗಲಕಾರ್ಯವ ನೀನದ ।
ನಡೆಯಿಸಿಕೊಡು ಭ್ರಾತೃಪ್ರಿಯ ನೃಪವರ ॥೧೮೧॥

ಶಂಕರಾಭರಣ ರೂಪಕ – ಭೀಷ್ಮ ವಚನ

ಕೇಳು ಕೌರವೇಂದ್ರ । ರಾಜ । ಮೌಳಿವಂದಿತ ।
ಪಾಳಿ ಈ ಪ್ರಕಾರ । ಎಂದು । ಭೀಷ್ಮನುಸಿರಿದ ॥ಪ॥
ಪಂಚರಾತ್ರ ಕಾಲದೊಳಗೆ । ಪಾಂಡುಪುತ್ರರೊಸಗೆ ಬಂತು ।
ಪಂಚಭೂತ ಸಾಕ್ಷಿಯಿಂದ । ಕೊಟ್ಟ ವಚನವ ॥
ಚಂಚಲಿಸದೆ ಪಾಲಿಸುವುದು । ಕುಲದಧರ್ಮಪೌತ್ರ ಕೇಳು ।
ತಂಚವಂಚ ನಿನ್ನೊಳುಂಟೆ । ದಾನಶೌಂಡನೆ ॥೧೮೨॥
ಕುರುವಿಭಾಗ ನಿನ್ನದಾಯ್ತು । ಪುರದ ಪೂರ್ವಗಡಿಯ ಭಾಗ ।

ಬರುವ ಪಾಂಡವರಿಗೆ ನಿನ್ನ । ಕರೆಯ ಮನ್ನಿಸಿ ॥
ಧರೆಯೊಳೆಮ್ಮ ಕುಲದ ಕೀರ್ತಿ । ಕಲಹಕದನ ನಾಶದಿಂದ ।
ಮರಳಿ ಮಣ್ಣಿಗಿಳಿಯದಿರಲಿ । ಕುಲಧುರಂಧರ ॥೧೮೩॥
ನಿರುಪಮ ಪ್ರತಾಪಿಯಾದ । ಪರಶುರಾಮಗೆಲಿದ ನಾಡ ।
ಪರರಿಗಿತ್ತನವನ ಗುರುಪ । ರಂಪರಾಗತ ॥
ವರಪ್ರಶಿಷ್ಯನಾದ ನೀನು । ಸ್ವಾರ್ಥಿಯಾಗಲಾರೆ ಎಂದು ।
ತರಣಿ ಸಾಕ್ಷಿಯಾಗಿ ನಂಬಿರುವೆನು ಕೌರವ ॥೧೮೪॥

ಕಾಂಬೋಧಿ ಝಂಪೆ – ಕೌರವ ವಚನ

ಮಾನಧನನಾನಾಗಿ ವಚನಕ್ಕೆ ತಪ್ಪುವುದು ।
ಹೀನಕುರುಕುಲಕೆ ಗುರುದೇವ ॥
ನಾನೀಗ ಕೊಟ್ಟೆನಿದೊ ಕೊಟ್ಟೆ ಪಾಂಡವರಿಂಗೆ ।
ಈ ನನ್ನ ರಾಜ್ಯಾರ್ಧವನ್ನು ॥೧೮೫॥
ಕರೆಯಿಸಿರಿ ಪಾಂಡವರ ವರರಥಗಳನು ಕಳಿಸಿ ।
ಬರಮಾಡಿಕೊಳುವೆ ನಾನವರ ॥
ಸರಸದಿಂದಾದರಿಸಿ ಸರಿಕತನವನ್ನಿತ್ತು
ಹರುಷ ಬಡಿಸುವೆ ನಿಮ್ಮನೆಲ್ಲ ॥೧೮೬॥

ಕಂದ

ಎಂದಾ ಕುರುಪತಿ ಘೋಷಿಸ
ಲಂದೆದ್ದವು ಕಹಳೆ ಕೂಗಿ ಭೇದಿಸೆ ದಿಶೆಯಂ ।
ಮಂದರಧರ ನೆಯ್ತಂದಂ
ಕುಂದಸ್ಮಿತನಾಗಿ ಭಾರತೋದ್ಧಾರಧುರಂ ॥೧೮೭॥

ಕೃಷ್ಣವಚನ ಅಷ್ಟತಾಳ ।

ಜಯಧರ್ಮ ಧರ್ಮವಲ್ಲ । ಬಂಧುಗಳೆ ।
ಧರ್ಮಜಯ ಜಯವಿದೆಲ್ಲ ॥
ಭಯಬಾಧೆಯಿಂದ । ಬಲದ । ಆಳುವುದು
ನಯದಿಂದ ಹೊರಗೆ ಒಲಿದ ॥೧೮೮॥
ಕುರುರಾಯ ಮೆರೆದ ಧರ್ಮ । ಭಾರತಕೆ ।
ಪರರಾಯ ನುಗ್ಗದಂತೆ ॥

ವರವಾಗುವುದು ನೀತಿಗೆ । ಮೇಲ್ಪಂಕ್ತಿ ।
ಅರಿತವರ ದೃಷ್ಟಿಯಿಂದ ॥ ೧೮೯॥
ಛಲವಲ್ಲ ಧರ್ಮಜಗಕೆ । ಬಾಂಧವರೆ ।
ಛಲಕೆ ಛಲವಕ್ಕು ಧರ್ಮ ॥
ಕುಲನಾಶವಾಗುತಿತ್ತು । ವಚನದಲಿ ।
ನಿಲದಿರಲು ಫಣಿಕೇತನ ॥೧೯೦॥
ಎರಡಾಡ ಹೊರಟ ರಾಜ । ದೇಶವನು ।
ಬರಡುಗೈದೊರಲಿಸುವನು ॥
ಹುರುಡಳಿದ ಕೌರವೇಂದ್ರ । ದೊರೆಯದೊರೆ ।
ಹರಡಲೀ ಸತ್ಯಜಗದಿ ॥೧೯೧॥

ಮಂಗಲ ಪದ

ಮಂಗಲಂ । ಜಯ ಮಂಗಲಂ ॥ಪ॥
ಜಯ ಜಯ ಮಂಗಲ ನವಕೃತಿಗೆ ।
ಜಯ ಭಾಸನ ಮಂಗಲ ಮತಿಗೆ ॥
ಜಯ ಕುರುಕುಲ ಧವಳ ಯಶೋರಾಶಿಗೆ ॥
ಜಯಭಾರತ ಬಾಂಧವಗುಣಕೆ ॥೧೯೨॥
ದುರ್ಯೋಧನರಲಿ ಧರ್ಮವನು ।
ಮರ್ಯಾದಿಸುವಂತೊಡರಿಸುವ ॥
ಸರ್ವೋದಯ ಗುರು ಭಾರದ್ವಾಜರೆ ।
ಧುರ್ಯತ್ವಕೆ ಜಯವೆನ್ನುವೆವು ॥೧೯೩॥
ದುಃಶಾಸನ ಶಕುನಿಗಳೊಳವ ॥
ನಿಃಶೇಷದೆ ತಿಳಿದೀ ನೆಲವ ॥
ನಿಷ್ಕಂಟಕಗೊಳಿಸುವರನು ಹೊರೆಯುವ ।
ಪುಷ್ಕರ ನೇತ್ರಗೆ ನಿತ್ಯ ಜಯ ॥೧೯೪॥

ವೃತ್ತ

ಬಹುಲಪುರದಲಿಂಗಂ ದ್ರೋಣದೃಷ್ಟಾಂತರಂಗಂ
ರಮಣಹೃದಯರಂಗಂ ಪಂಚರಾತ್ರ ಪ್ರಸಂಗಂ ।
ಮೆರೆಗು ಸಿರಿಯ ಸೀತಾರಾಮಸೂನು ಸೂಕ್ತಿಭೃಂಗಂ
ಪೊರೆಗೆ ಸುಜನರನ್ನೀ ಶ್ರೀಧರಾಧೀಶ ಸಂಘಂ ॥

ಬನವಾಸಿಯ ಕೈಪಿಡಿ

ಬನವಾಸಿಯ ಕೈಪಿಡಿ

ಮಯೂರ ಮುದಿತಂ ಮಹಾಪ್ರಣವನಾದ ಸಂಚೋದಿತಂ
ದಯಾರ್ದ್ರ ಮಧುರೇಕ್ಷಣಂ ಸತತಭಕ್ತಿ ಮತ್ಸುದ್ರುತಂ
ನಿದಾಘರವಿಚೇಷ್ಟಿತಂ ದುರಿತುಕೃತ್ಸು ಕರ್ಣಾಟಕಂ
ಮೃದಂಗಪದದುಂಪಟಂ ಭಜತ ವೈಜಯಂತೀನಟಂ।

ಕದಂಬಕುಲ ಪೂಜಿತಂ ಕರಧೃತತ್ರಿಶೂಲಂ ಲಸದ್
ವಿಧುಗ್ರಥಿತ ಜೂಟಕಾತ್ ಪ್ರಸೃತಗಂಗಯಾ ಶೋಭಿತಂ
ಹೃದಿ ಶ್ರಮಣಜೀವಿನಾಂ ಶ್ರುತಪುರಾಣ ರಮ್ಯಾತ್ಮನಾಂ
ಸದಾ ಭಜತ ಮಾಧವಂ ಪ್ರಕಟಲಿಂಗರೂಪಂ ಪ್ರಭುಂ।

ಅಕಾಲದಿಶಮತ್ವರಂ ಪ್ರಥಿತವಿಗ್ರಹಾಷ್ಟೋತ್ತರಂ
ಪ್ರಚಿಂತ್ಯಮಮರೇಶ್ವರಂ ಪ್ರತತ ಪಾರ್ವತ ಶ್ರೀಧರಂ
ಅಶಾಂತಿಶತವಾರಣಂ ದ್ವಿಷದಶೇಷ ನಿಸ್ತಾರಣಂ
ಪ್ರಶಸ್ತಗತಿಕಾರಣಂ ಭಜತ ಸತ್ ಕೃಪಾಧೋರಣಂ।

ಪಂಪ ಪ್ರಶಂಸೆ

೧

ಸೊಗಯಿಸಿ ಬಂದ ಮಾಮರನೆ ತಳ್ತೆಲೆವಳ್ಳಿಯೆ ಪೂತಜಾತಿಸಂ
ಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರೊಳ್ಮೊಗಂ
ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರ ನೋಳ್ಪಡಾವ ಬೆ
ಟ್ಟುಗಳೊಳಮಾವ ನಂದನವನಂಗಳೊಳಂ ಬನವಾಸಿ ದೇಶದೊಳ್।

೨

ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರಮಾದ ಮಾನಿಸರೆ ಮಾನಿಸರಂತವರಾಗಿ ಪುಟ್ಟಲೇ
ನಾಗಿಯುಮೇನೊ ತೀರ್ದಪುದೊ ತೀರದೊಡಂ ಮರಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವದು ನಂದನದೊಳ್ ವನವಾಸಿ ದೇಶದೋಳ್!

೩

ತೆಂಕಣಗಾಳಿ ಸೋಂಕಿದೊಡಮೊಳ್ನುತಿಗೈದೊಡ ಮಿಂಪನಾಳ್ದಗೇ
ಯಂ ಕಿವಿವೊಕ್ಕೊಡಂ ಬಿರಿದಮಲ್ಲಿಗೆ ಗಂಡೊಡಮಾದ ಕೆಂದಲಂ
ಪಂ ಕೆಡಗೊಂಡೊಡಂ ಮಧುಮಹೋತ್ಸವ ಮಾದೊಡಮೇನನೆಂಬೆನಾ
ರಂಕುಶಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ!

೪

ಅಮರ್ದಂ ಮುಕ್ಕುಳಿಪಂತುಟಪ್ಪ ಸುಸಿಲೊಂದಿಂಪುಂ ತಗುಳ್ದೊಂದು ಗೇ
ಯಮುಮಾದಕ್ಕರಗೊಟ್ಟಿಯುಂ ಚದುರರೊಳ್ವಾತುಂ ಕುಳಿರ್‌ಕೋಳ್ಪ ಜೋಂ
ಪಮುಮೇವೇಳ್ವುದನುಳ್ಳ ಮೈಸುಕಮುಮಿಂತೆನ್ನಂ ಕರಂ ನೋಡಿ ನಾ
ಡೆ ಮನಂಗೊಂಡಿರೆ ತೆಂಕನಾಡ ಮರೆಯಲ್ಕಿನ್ನೇಂ ಮನಂ ಬರ್ಕುಮೇ?

ಬನವಾಸಿಯ ಶಿಲ್ಪ ಮಂದಿರಗಳು

ಪೀಠಿಕೆ

ಹೊಸ ಮೈಸೂರು ರಾಜ್ಯದ ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ಶಿವಮೊಗ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಧಾರವಾಡ, ಬೆಳಗಾವಿ ಜಿಲ್ಲೆಗಳನ್ನೂ ಗೋವೆ, ರತ್ನಗಿರಿ, ಕುಲಾಬಾ, ಪೂನಾ, ಮುಂಬಯಿ ಪ್ರದೇಶಗಳನ್ನೂ ಒಳಗೊಂಡ ಕುಂತಳ (=ಕೊಂಕಣ) ಸಾಮ್ರಾಜ್ಯವನ್ನು ಕ್ರಿ.ಶ ೨೦೦ರ ಬಳಿಕ ಕದಂಬ ಚಕ್ರವರ್ತಿಗಳು ಬನವಾಸಿಯಿಂದ ಆಳತೊಡಗಿದ್ದು ಇತಿಹಾಸ ಪ್ರಸಿದ್ಧ.

ಬನವಾಸಿಗೆ (೧) ಕೌಮುದಿ (೨) ಬೈಂದಿವಿ (೩) ಜಯಂತಿ (೪) ವನವಾಸಿ ಎಂಬ ನಾಲ್ಕು ಹೆಸರುಗಳು ಯುಗಾನುಕ್ರಮವಾಗಿ ಇವೆ. ಹಳಗನ್ನಡದಲ್ಲಿ ಇದನ್ನು 'ಬನವಸೆ'ಎಂದೂ ಈ ರಾಜಧಾನಿಯಿಂದ ಆಳಲ್ಪಡುತ್ತಿದ್ದ ಕುಂತಳವನ್ನು 'ಬನವಸೆ ನಾಡೆಂ'ದೂ ಕರೆಯಲಾಗುತ್ತಿತ್ತು.

ಪಶ್ಚಿಮ ಘಟ್ಟಗಳಲ್ಲಿ ಒಂದಾದ ಸಹ್ಯಾದ್ರಿಯಲ್ಲಿ ಹುಟ್ಟಿದ ವರದಾನದಿಯು ಬನವಾಸಿಯನ್ನು ೨ ಬದಿಗಳಲ್ಲಿ ಆವರಿಸಿದೆ. ಬನವಾಸಿ ಪಟ್ಟಣದ ಕೋಟೆಯು ಕ್ಷೇತ್ರಫಲ ೪. ೧೩ ಫರ್ಲಾಂಗುಗಳು. ಇಂದಿನ ಶಿರಸಿ ಪಟ್ಟಣದಿಂದ ಇದು ೧೫ ಮೈಲು ದೂರದಲ್ಲಿದೆ. ಎಸ್.ಟಿ. ಬಸ್ಸು ಈ ಪಟ್ಟಣಗಳನ್ನು ಸಂಬಂಧಿಸಿದೆ. ಶಿರಸಿಯು ತಾಲೂಕುಧಾನಿಯಾದರೆ ಬನವಾಸಿಯು ಹೋಬಳಿಧಾನಿ. ಬನವಾಸಿಯ ಇಂದಿನ ಜನ ಸಂಖ್ಯೆ ೩೦೮೭.


ಬನವಾಸಿ ವನಾಸ್ಯ, ಮಲೆನಾಡಿನ ನಡುವಿನ ಅರಣ್ಯದ (ಅರಣ್ಯ ರಹಿತವಾದ) ಬತ್ತದ ಗದ್ದೆಗಳ ಒಂದು ವಿಶಾಲ ಮೈದಾನ. ಇಲ್ಲಿ ರಾಷ್ಟ್ರಪಕ್ಷಿಗಳು (ನವಿಲುಗಳು) ಜಾಸ್ತಿ. ಇಲ್ಲಾಳಿದ ಮೊದಲ ಕದಂಬ ಚಕ್ರವರ್ತಿ ಮಯೂರವರ್ಮ (ಕ್ರಿ.ಶ ೨೮೦–೩೩೦). ಕಾವೇರಿಯಿಂದ ನರ್ಮದೆಯವರೆಗಿನ ಕುಂತಳವನ್ನು ಈತನ ವಂಶದವರು ೬೧೦ರವರೆಗೆ ಸ್ವತಂತ್ರ ಸಮ್ರಾಜರಾಗಿ ಆದರ್ಶ ರೀತಿಯಿಂದ ಆಳಿದರು. ಅವರಲ್ಲಿ ಮಯೂರ, ರಘು, ಕಾಕುತ್‌ಸ್ಥ, ಶಾಂತಿ ಮತ್ತು ರವಿವರ್ಮರು ಅತ್ಯಂತ ಪ್ರಖ್ಯಾತರು.

ಮಲೆನಾಡಮ್ಮನ ಮೊಗವಾದ ಬನವಾಸಿಯ ನಿಸರ್ಗ ಸೌಂದರ್ಯವನ್ನು ಕನ್ನಡದ ೧೦ನೆಯ ಶತಮಾನದ ಮಹಾಕವಿ ಪಂಪನು ಬಾಯಿ ತುಂಬ ಹೊಗಳಿದ್ದಾನೆ. ಶಾಲಿವಾಹನ (ಶಾತವಾಹನ) ಕಾಲದ ಮುಂದಿನದಾದ ಕದಂಬ ಮಹಾಯುಗದ ಶಿಲ್ಪದ ಮಾದರಿಗಳು ಕುಂತಳದ (ಇಂದಿನ ದಕ್ಷಿಣ ಭಾರತದ ಪಶ್ಚಿಮಾರ್ಧದ) ಆದ್ಯಂತವಾಗಿ ಕಾಣಬಹುದು. ಅಂದಿನದು ವೇದಾಂತದ (ಅದ್ವೈತದ) ಸಂಪ್ರದಾಯವು ಅದ್ವಿತೀಯವಾಗಿದ್ದ ಕಾಲ. ಆದುದರಿಂದ ಶಿವಲಿಂಗಗಳ ದೇವಸ್ಥಾನಗಳಿಗೆ ಅಗ್ರಸ್ಥಾನವಿತ್ತು* ಹಾಗಾಗಿ ತಾಳಗುಂದದ ಪ್ರಣವೇಶ್ವರ, ಬನವಾಸಿಯ ಮಧುಕೇಶ್ವರ, (ಆನವಟ್ಟಿಯ ಸನಿಹದ) ಕುಬಟೂರಿನ ಕೈಟಭೇಶ್ವರ ದೇವಾಲಯಗಳು ಗೋಕರ್ಣೇಶ್ವರ, ಮಂಜುನಾಥೇಶ್ವರರಂತೆಯೇ ಪ್ರಸಿದ್ಧ ಯಾತ್ರಾ ಸ್ಥಳಗಳಾಗಿದ್ದವು.

ನೈಋತ್ಯ ಕರ್ಣಾಟಕದ ಶಿಲ್ಪ ಶೈಲಿಯ ಪ್ರಖ್ಯಾತಿಯು ಹೊಯ್ಸಳರ (೧೧ನೆಯ ಶತಮಾನದ) ಕಾಲದಿಂದ ಆರಂಭವಾದುದರಿಂದ ಅದಕ್ಕೆ 'ಜಕ್ಕಣಶಿಲ್ಪ' ಎಂಬುದು ಜನಪ್ರಿಯ ಹೆಸರು. ಇದು ದ್ರಾವಿಡ ವೇಸರಗಳಿಂದ ಭಿನ್ನವಾದ ನಾಗರಶಿಲ್ಪಕ್ಕೆ ಹೆಚ್ಚು ಸಮೀಪವರ್ತಿಯಾದದ್ದು. ಆದರೆ ಇದರ ಬೆಳವಣಿಗೆ ಶಾಲಿವಾಹನ ಕಾಲದಿಂದ ಕದಂಬ ಯುಗದ ಮೂಲಕವೇ ಆದದ್ದು. ಹೊಯ್ಸಳ ಪೂರ್ವದ ಶಿಲ್ಪದ ಆದಿ ಭಾಗವು ಶಾಲಿವಾಹನ, ಕದಂಬ ಮತ್ತು ಚಾಲುಕ್ಯ ಚಕ್ರವರ್ತಿಗಳ ಆಳಿಕೆಗಳ ಅವಧಿಗಳನ್ನು ಒಳಗೊಂಡಿದೆ.

ಬನವಾಸಿಯ ಪ್ರಧಾನ ದೇವಾಲಯವನ್ನು ಮಧುಕೇಶ್ವರ ದೇವಾಲಯವೆನ್ನುತ್ತಾರೆ. ಇದರ ಇಂದಿನ ರೂಪವು ೧೧ನೆಯ ಶತಮಾನಕ್ಕಿಂತ ಹಿಂದಿನದಾಗಿರಲಾರದು ಎಂಬುದು ಪ್ರಸಿದ್ಧ ಅಭಿಪ್ರಾಯ. ಆದರಿದು ಕದಂಬ ಕುಲದೈವತವೆಂದು ಪರಂಪರೆಯಿದೆ. ವಿಷ್ಣುವಿನ ಮಧುಸೂದನಾವತಾರ ಇಲ್ಲೇ ಆಯಿತೆಂಬ ಪುರಾಣ ಪ್ರಮಾಣವು ಇದರ ಪ್ರಾಚೀನತೆಗೆ ಐತಿಹ್ಯ ಸಾಕ್ಷಿಯಾಗಿದೆ. ಈ ದೇವಾಲಯವು ಕದಂಬ, ಚಾಲುಕ್ಯ, ರಾಷ್ಟ್ರಕೂಟ ಮತ್ತು ಗಂಗ, ಹೊಯ್ಸಳ, ಯಾದವ, ವಿಜಯನಗರ ಮತ್ತು ಸುಧಾಪುರ ನಾಯಕ ಅರಸರ (೧೭೬೩) ವಂಶದವರ ಸೇವೆಗಳನ್ನು ಕಾಲಾನುಕ್ರಮವಾಗಿ ಪಡೆಯುತ್ತ ಬಂದಿದೆ. ಹೊಯ್ಸಳ-ಯಾದವರ ಪ್ರಭುತ್ವವಿಲ್ಲಿ ಅಲ್ಪ ಕಾಲದ್ದಾಗಿದ್ದರೂ ಹೊಯ್ಸಳ ದೊರೆಗಳ ಶಿಲ್ಪಪ್ರಿಯತೆ ಅತ್ಯಂತ ಹೆಚ್ಚಿನದಾಗಿದ್ದುದರಿಂದ ಜಗತ್ತಿನಲ್ಲಿ ಅದ್ವಿತೀಯವೆನ್ನಿಸಿದ್ದ ಈ ಶಿಲ್ಪದ ಬಾಹ್ಯಮುದ್ರೆ ಕೊನೆಯದಾಗಿ ನೈಋತ್ಯ ಕರ್ಣಾಟಕದ ಎಲ್ಲ ದೇವಾಲಯಗಳಲ್ಲೂ ಉಳಿಯುವಂತಾಯಿತು. ಹಾನುಗಲ್ಲಿನ ತಾರಕೇಶ್ವರ ದೇವಾಲಯವನ್ನು ಕಟ್ಟಿಸಿದಾಗಲೇ (೧೧೩೧) ಹೊಯ್ಸಳ ದೊರೆ ವಿಷ್ಣುವರ್ಧನನು (೧೧೧೧-೧೧೪೧) ಮಧುಕೇಶ್ವರ

* ಶಿವಲಿಂಗದ ಪೀಠಗತವಾದದ್ದು ಬ್ರಹ್ಮಭಾಗ, ನಡುವಿನದು ವಿಷ್ಣುಭಾಗ ಮತ್ತು ಮೇಲಿನದು ಅಥವಾ ತುದಿಯದು ಶಿವಭಾಗ.


ಧುಂಡಿರಾಜ ಗಣಪತಿ
ನಿರಋತಿ
ಚಿಂತಾಮಣಿ ಗಣಪತಿ
ನರಸಿಂಹ
ಕೇದಾರೇಶ್ವರ
ಯಮ
ಆಮ್ರಕೇಶ್ವರ
ಹುವಳ್ಳಿ ಮಧುಕೇಶ್ವರ
ವರದೇಶ್ವರ
ಅಗ್ನಿ
ರಾಮೇಶ್ವರ
ವರುಣ
ವೆಂಕಟರಮಣ
ಶ್ರೀ ರಾಮ
ಉಮಾ ಮಹೇಶ್ವರ
ಕಾರ್ತಿಕೇಯ
ಆದಿಮಾಧವ
ವೀರಭದ್ರ
ಚಂಡೇಶ್ವರ
ನಂದಿ
ಇಂದ್ರ
ಜ್ಯೋತಿ ಸ್ತಂಭ
ಧ್ವಜ ಸ್ತಂಭ
ವಾಯು
ಸೂರ್ಯನಾರಾಯಣ
ಮಹಾಗಣಪತಿ
ಪರಶುರಾಮ
ಆದಿಶೇಷ
ಕೇಶವ
ಕುಬೇರ
ಈಶಾನ್ಯ

ದೇವಾಲಯವನ್ನೂ ಅಲ್ಲಿ ಇಲ್ಲಿ ಅಂಶತಃ ಜೀರ್ಣೋದ್ಧಾರ ಮಾಡಿರಬಹುದೆಂದು ಧಾರಾಳವಾಗಿ ಹೇಳಬಹುದು. ಕದಂಬ ಸಿಂಹ ಮುದ್ರೆಯ ಸುಧಾರಿಸಿದ ಆವೃತ್ತಿಯಾಯಿತು ಹೊಯ್ಸಳ ಸಿಂಹ ಮುದ್ರೆ. ಕದಂಬ, ಕದಂಬ–ಪೂರ್ವ ಶಿಲ್ಪ ಲಕ್ಷಣಗಳು ಉಳಿದಿವೆ.

ನಾಗರಶಿಲ್ಪವು ವಿಂಧ್ಯೋತ್ತರದ್ದು ಎಂಬುದು ಪಂಡಿತರ ಮತ. ಹಾಗಾದರೆ ನಮ್ಮ ಕದಂಬ ಶಿಲ್ಪವನ್ನು 'ಉಪನಾಗರ'ವೆನ್ನುವದು ಒಳಿತು. ಇದು ದಕ್ಷಿಣ ಭಾರತದ ಮಧ್ಯಪ್ರದೇಶದ ಪಶ್ಚಿಮ ಭಾಗದ ನಾಗರಶಿಲ್ಪ. ನಾಗರು ಕಂದಮಿಳರು ಅಥವಾ ಪೂರ್ವಾರ್ಯರು; ತಮಿಳರು; ದ್ರಾವಿಡರು; ಅವರದು ದ್ರಾವಿಡ ಶಿಲ್ಪದ ಪ್ರಸ್ಥಾನ.

ಕದಂಬ ಶಿಲ್ಪದ ಲಕ್ಷಣಗಳು ಈ ತೆರನಾಗಿವೆ:– ಐಹೊಳೆಂಯು ದುರ್ಗಾದೇವಾಲಯದಲ್ಲಿ ಕಂಡು ಬರುವಂತೆ (೧) ಬೌದ್ಧ ಪದ್ಧತಿಯ apsidal cave ನಡು ತಿರುಹಿನ ಗುಹೆಯು 'ದಾಗಬ'ಕ್ಕೆ ಸದೃಶವಾಗಿರುವದು, (೨) ನಡುವೆ ೨ ಸಾಲು ಕಂಬಗಳಿರುವುದು, (೩) ಅವುಗಳ ದೆಸೆಯಿಂದ ನಡುಮನೆ ಮತ್ತು ಪಾತಾಳ ಅಂಕಣಗಳಂತಹ ಆಕಾರಗಳು ಕಾಣಬರುವಂತಾಗುವದು, (೪) ಈ ಪಾತಾಳ ಅಂಕಣ (verandah) ಗಳು ಗರ್ಭಗುಡಿಯ ಹಿಂದೆ ಅರ್ಧಚಂದ್ರಾಕಾರವಾಗಿ (ಇಡಿ ಆಕಾರದ ಅನುಗುಣವಾಗಿ) ಕೂಡಿ ಪ್ರದಕ್ಷಿಣಾಪಥವಾಗಿರುವದು, (೫) ಈ ಗರ್ಭಗುಡಿಯ ಗೋಪುರವು (ಶಿಖರವು) ವೃತ್ತಾಕಾರದ ಬಾಹ್ಯರೇಖೆಯುಳ್ಳದ್ದಾಗಿರುವದು ಮತ್ತು ಆಯತ (horizontal) ಮೆಟ್ಟಿಲುಗಳನ್ನು ಅದರ ಮೇಲೆ ರಚಿಸಿರುವದು–ಈ ಗೋಪುರವನ್ನು "ಕದಂಬ ವಿಮಾನ" ಎನ್ನುತ್ತಾರೆ. ಇದು ಉತ್ತರ ಭಾರತದ ನಾಗರಬೌದ್ಧ ಪ್ರಸ್ಥಾನದ ಸುಧಾರಿಸಿದ ಆವೃತ್ತಿ. ಹಿಂಬಾಗದ ನಡುದಿರುಹಿನ ಅರ್ಧಚಂದ್ರಾಕೃತಿಯ (ಗರ್ಭಗುಡಿಯ) ಆವರಣಭಿತ್ತಿಯು ಕ್ರಮೇಣ ದೀರ್ಘ ಚತುರ್ಭುಜಾಕಾರಕ್ಕೆ ಪರಿವರ್ತಿತವಾಯಿತು; ಹಾಗೇ ಇಡಿ ದೇವಾಲಯದ ಸುತ್ತ ಇರುತ್ತಿದ್ದ ಪ್ರದಕ್ಷಿಣಾಪಥವು ಅನಂತರ ಗರ್ಭಗುಡಿಯ ಸುತ್ತಿಗೆ ಮಾತ್ರ ಪರಿಸೀಮಿತವಾಯಿತು. ಬನವಾಸಿಯ ಮಧುಕೇಶ್ವರ ದೇವಾಲಯದ ಗರ್ಭಗುಡಿ ಈಗ ಈ ಅರ್ವಾಚೀನ ಆಕಾರವನ್ನು ತಳೆದಿದೆ. ಆದರೆ ಇಲ್ಲಿ ಒಳ ಪ್ರದಕ್ಷಿಣಾಪಥವು ಪ್ರದಕ್ಷಿಣೆಗೆ ಮುಕ್ತವಾಗಿದ್ದಿಲ್ಲ; ಹೊರಪಥವೊಂದೇ ಮುಕ್ತವಿತ್ತು. ಇತ್ತೀಚೆಗೆ ಒಳಪಥವನ್ನೂ ಮುಕ್ತಗೊಳಿಸಲಾಗಿದೆ.

ಅರ್ವಾಚೀನ ಚಾಲುಕ್ಯಾವಧಿಯಲ್ಲಿ ಕಂಡು ಬರುವ ರಚನಾ ರೀತಿಗೆ ಪಟ್ಟದ ಕಲ್ಲಿನ ದೇವಾಲಯಗಳು ಮಾದರಿಗಳು. ಅಲ್ಲಿ ಗರ್ಭಗುಡಿಯೆದುರು ನಂದಿಯ (ಎತ್ತಿನ ವಿಗ್ರಹದ) ಮಂಟಪವಿದೆ, ಪೂರ್ವ ಪಶ್ಚಿಮಗಳಲ್ಲಿ ಹೊರಗೆ ಹೋಗಲು ದ್ವಾರಗಳಿವೆ. ಅವು ಸುತ್ತಿನ ಗೋಡೆಗಳಿಗೆ ಸಂಬಂಧಿಸಿವೆ. ಪ್ರದಕ್ಷಿಣಾಪಥದಲ್ಲಿ ೩ ಗೂಡುಗಳಿವೆ. ಪ್ರತ್ಯೇಕವೆನ್ನಿಸುವ ಮುಖಮಂಟಪವನ್ನು ಗರ್ಭಗುಡಿಗೆ ಜೋಡಿಸಲಾಗಿದೆ. ಗರ್ಭಗುಡಿಯ ಮೇಲ್ಛಾವಣಿಯನ್ನು ೧೮ ಮಹಾಸ್ತಂಭಗಳು ಹೊತ್ತಿರುವದು ಉತ್ತರ ಭಾರತೀಯ ಪದ್ಧತಿಯನ್ನು ನೆನಪಿಗೆ ತಂದುಕೊಡುತ್ತದೆ.

ಅರ್ವಾಚೀನ ಕದಂಬರ ಸ್ತಂಭ ಮತ್ತು ಗೂಡುಗಳ ಅಲಂಕಾರ ಪ್ರಕಾರಗಳಲ್ಲಿ ಆ ಕಾಲದ ಶಿಲ್ಪಿಗಳು ಚಾಲುಕ್ಯರ ಮತ್ತು ಪಲ್ಲವರ miniature towers ಹ್ರಸ್ವ ರೂಪದ ಗೋಪುರಗಳನ್ನು ಅಡಕಗೊಳಿಸಿದರು. ಆದರೆ ಕದಂಬ ವಿಮಾನ ರಚನೆಯ ರೀತಿಯನ್ನು ಬಿಡಲಿಲ್ಲ. ಹಲಸಿಯಲ್ಲಿ ಮೃಗೇಶವರ್ಮ ಕಟ್ಟಿಸಿದ ಬಸದಿಯು ಪ್ರಾಚೀನ (೫ನೇಯ ಶತಮಾನ) ಕದಂಬ ಶೈಲಿಯದಾದರೆ ತಾಳಗುಂದದ ಪ್ರಣವೇಶ್ವರ ದೇವಾಲಯವು ಅರ್ವಾಚೀನ ಕದಂಬ ಶೈಲಿಯದು. ಶಾಲಿವಾಹನ (ಆಂಧ್ರಭೃತ್ಯ) ಶೈಲಿಯು ಇವುಗಳ ಮೂಲ ಎಂಬುದು ಜಾರ್ಜ್ ಮೊರಿಸರ ಮತ. ಮಧುಕೇಶ್ವರ ದೇವಾಲಯದ ಉರುಟು ಕಂಬಗಳು ಹೊಯ್ಸಳವಾಗಿ ಮಾರ್ಪಡುತ್ತಿದ್ದ ಅರ್ವಾಚೀನ ಕದಂಬಶೈಲಿಯವು. ಅರ್ವಾಚೀನ ಕದಂಬರು ಹೊಯ್ಸಳರ (೧೦೩೧–೧೩೧೫) ಸಮಕಾಲೀನರು; ಹೊಯ್ಸಳ ರಾಜಧಾನಿಯ ಪ್ರದೇಶವು ಹಿಂದೆ ಪ್ರಾಚೀನ ಕದಂಬ ಚಕ್ರೇಶ್ವರರ ಆಳಿಕೆಗೆ ಒಳಪಟ್ಟಿತ್ತು; ಆದರೆ ಅರ್ವಾಚೀನ ಕದಂಬರ ಬನವಾಸಿ ಪನ್ನಿರ್ಛಾಸಿರದ ಮೇಲೆ ಹೊಯ್ಸಳರ ಪ್ರಭುತ್ವವಿರಲಿಲ್ಲ ಇದ್ದರೆ ಅದು ಒಂದೆರಡು ಸಲ, ವರ್ಷ–ಆರುತಿಂಗಳಷ್ಟು ಮಾತ್ರ. ಅದೂ ಒಂದೆರಡು ಚಿಕ್ಕ ಭಾಗಗಳ ಮೇಲಷ್ಟೆ.

ಮಧುಕೇಶ್ವರ* ದೇವಾಲಯದ ಗರ್ಭಗುಡಿ, ಶುಕನಾಸಿ, ಮುಖಮಂಟಪಗಳ ಸುತ್ತಲಿನ ಪ್ರದಕ್ಷಿಣಾಪಥದ ಎಡಗಡೆಗಿರುವ ಮಹಾವರಣಭಿತ್ತಿಯಲ್ಲಿ ಅಷ್ಟದಿಕ್ಪಾಲಕರನ್ನು ಬಿಟ್ಟೂ ಉಳಿದ ವಿಗ್ರಹಗಳು ಬೇಕಾದಷ್ಟಿವೆ. ಆದುದರಿಂದ ಈ ದೇವಾಲಯವೊಂದು ಮೂರ್ತಿ ಸಂಗ್ರಹಾಲಯ ಎನ್ನುವಂತಿದೆ.

ಪ್ರದಕ್ಷಿಣಾಕಾರವಾಗಿ ನಾವು ಹೊರಟರೆ ಮೊದಲು ನಮಗೆ ಶಿಲಾಮಂಟಪವೊಂದರಲ್ಲಿ ಅತ್ಯಂತ ಕಲಾಲಂಕಾರ ಪೂರ್ಣವಾದ ಒಂದು **ಕಲ್ಲುಮಂಚ** ಸಿಗುತ್ತದೆ. ಸುಧಾಪುರದ (ಸೋದೆಯ) ರಘುನಾಥ ನಾಯಕನು ಇದನ್ನು ೧೬೨೮ರಲ್ಲಿ ಮಾಡಿಸಿ ಮಧುಕೇಶ್ವರನಿಗೆ ಅರ್ಪಿಸಿದನು. ಹಾನುಗಲ್ಲಿನಿಂದ ಬನವಾಸಿ ನಾಡನ್ನು ೧೦೭೫–೧೦೯೪ರ ಅವಧಿಯಲ್ಲಿ ಆಳುತ್ತಿದ್ದ ೨ನೆಯ ಶಾಂತಿವರ್ಮನ ಕಾಲದಲ್ಲಿ ಮಧುಕೇಶ್ವರನ ಮಹಾಪೂಜಾರಿಯ ಉಲ್ಲೇಖವನ್ನು ಶಾಸನಗಳಲ್ಲಿ (E.O.XIII Sb.೨೫೨–೨೬೨) ಮಾಡಲಾಗಿದೆ. ಸದ್ಯದ ದೇವಾಲಯ ಬಹುಶಃ ಆಗ ಪುನಾರಚಿತವಾದದ್ದಾಗಿರಬೇಕು. ಕಲ್ಲು ಮಂಟಪದ ಉದ್ದ ೯೦ ಇಂಚು, ಅಗಲ ೬೦ ಇಂಚು, ಎತ್ತರ ೯೦ ಇಂಚು. ಇದರ ಕಾಲು ಮತ್ತು ಕಂಬಗಳ ಕುಸುರುಗೆಲಸ ಅತ್ಯಾಕರ್ಷವಾಗಿದೆ. ಪ್ರಾಚೀನ ವೈಭವದ ಮಧುಕೇಶ್ವರನ ಪ್ರತಿಷ್ಠೆಗೆ ಇದು ತಕ್ಕದ್ದಾಗಿದೆ.

ಅನಂತರ ಸುಖಾಸನದಲ್ಲಿ ಕುಳಿತ ಧೃಷ್ಟಪುಷ್ಟನಾದ **ಲಕ್ಷ್ಮೀನರಸಿಂಹ** ಸಿಗುತ್ತಾನೆ. ಈತನು ಸುಧಾಪುರದ ಆದಿ ಮಹಾನಾಯಕನಾದ ಅರಸಪ್ಪನ (೧೫೫೫–೧೫೯೮)

* ಮಧುಕೇಶ್ವರ ಲಿಂಗ ತಾಳಗುಂದೇಶ್ವರನ ಕಾಲದ್ದು, ಗರ್ಭಗುಡಿಯ ಶಿಲ್ಪ ಪಲ್ಲವರ ಕಾಲದ್ದು, ಅಂತರಾಳದ್ದು ಬಾದಾಮಿಯ ಚಾಲುಕ್ಯರ ಕಾಲದ್ದು.

ಕುಲದೇವತೆ: ಎತ್ತರ ೩೧ ಇಂಚು, ಅಗಲ ೨೭ ಇಂಚು, ಅವನ ಎಡತೊಡೆಯ ಮೇಲೆ ಪುಟ್ಟ ಲಕ್ಷ್ಮೀ ಇದ್ದಾಳೆ. ಮುಂದೆ ಹಾಗೇ ಕುಳಿತ **ಧುಂಡಿರಾಜ ಗಣಪತಿ** ಕಾಣಿಸುತ್ತಾನೆ ಎತ್ತರ ೪೧ ಇಂಚು, ಅಗಲ ೨೮ ಇಂಚು, ಈ ವಿಗ್ರಹಗಳು ಬಲಿಷ್ಠವಾಗಿವೆ. ಗಂಡುಗಾಡಿಯಿಂದ ಆಕರ್ಷಿಸುತ್ತವೆ. ೪ನೆಯ ಕಲಾವಸ್ತುವೆಂದರೆ ಬಸವಲಿಂಗೇಶ್ವರ ಗುಡಿಯ ಗೋಡೆಯ ಹೊರಮೈಯ ಶಿಲಾ ಚಿತ್ರಗಳ ಸಾಲು. ಇದರಲ್ಲಿ ಮುರಲೀಧರ ಬಹುಚೆಂದವಾಗಿ ತೋರುತ್ತಾನೆ.

ಆಮೇಲೆ **ಸೂರ್ಯನಾರಾಯಣ** ತನ್ನ ಗುಡಿಯಲ್ಲಿ ನಿಂತದ್ದು ಕಾಣಬರುತ್ತದೆ. ಆರ್ಯ–ದ್ರಾವಿಡರ ೩೩ ಕೋಟಿ ದೇವತೆಗಳ ಮೂಲಾಕಾರ ಸೂರ್ಯ. ಈತನ **Elegance** ಹಿತ ಮಿತ. ಮಧುರ ಆಕೃತಿ ಸರಳ ಜೀವನವನ್ನೂ ಉದಾತ್ತ ಉಪಾಸನೆಯನ್ನೂ ಧ್ವನಿಸುತ್ತದೆ: ಎತ್ತರ ೪೧ ಇಂಚು, ಅಗಲ ೨೨ ಇಂಚು.

ಮುಂದೆ ನಡೆದರೆ ಕೊಡಲಿಯ ರಾಮ! ಕೊಂಕ (ತ)ಣ ಪುರವೆನ್ನಿಸಿದ್ದ ಬನವಾಸಿಯ ನಾಡಿನ ತೀರ ಪ್ರದೇಶವನ್ನು (ಕೊಡಲಿಯನ್ನು ಸಹ್ಯಾದ್ರಿ ಶಿಖರದಲ್ಲಿ ನಿಂತು ಬೀಸಿ ಒಗೆದು) ಪಡೆದ ಮಹಾಬ್ರಾಹ್ಮಣನಾಗಿದ್ದ **ಭಾರ್ಗವನು** ಗಂಡು ಗೊಡಲಿಯನ್ನು ಹಿಡಿದು ಕನ್ನಡಿಗರ ಕೆಚ್ಚನ್ನು ಎಚ್ಚರಿಸುತ್ತಿದ್ದಾನೆ! ಇವನ ತಾಯಿ ರೇಣುಕೆ ಬನವಾಸಿಯಿಂದ ೧೨ ಮೈಲು ದೂರದ ಕದಂಬೋಪರಾಜಧಾನಿಯಾಗಿದ್ದ ಚಂದ್ರಗುತ್ತಿ (ಚಂದ್ರಗುಪ್ತಿ) ಯಲ್ಲಿ ೭ ಸುತ್ತಿನ ಕೋಟೆಯನ್ನಾಳುತ್ತಿದ್ದಾಳೆ! ಈ ನೆಲದಲ್ಲಿ ಪರಶುರಾಮನು ತಾಮಸ ಕ್ಷಾತ್ರವನ್ನು ಸಂಹರಿಸಿದ ತೇಜಸ್ಸು ಸತ್ತವರನ್ನು ತಿರುಗಿ ಎಬ್ಬಿಸದಿರದು: ಎತ್ತರ ೧೮॥ ಇಂಚು, ಅಗಲ ೧೧॥ ಇಂಚು.

ಮೂಲ ಮಧುಕೇಶ್ವರ (ಮಧುಕನಟ, ಮಧುಕನಾಥ, ಮಧುಲಿಂಗ) ದೇವಾಲಯಕ್ಕೆ ಸಮರ್ಪಿಸಲಾಗಿದ್ದ **ಮಹಾನಾಗ** ಬಳಿಕ ಬುಸ್ಸೆನ್ನುತ್ತ ನಮಗೆ ಎದುರಾಗುತ್ತದೆ! ಇದನ್ನು ಚುಟುವಂಶದ (ಕ್ರಿ.ಶ.೨೦೦) ಮಹಾಭೋಜಿ ಶಿವಸ್ಕಂದ ನಾಗಶ್ರೀ ಎಂಬ ರಾಣಿಯು ಮಧುಕೇಶ್ವರನಿಗೆ ಅರ್ಪಿಸಿದ್ದು ವಿಗ್ರಹದ ಪಕ್ಕದಲ್ಲೇ ಬರೆದಿದೆ. ಇದು ಕನ್ನಡದ ಅತ್ಯಂತ ಪ್ರಾಚೀನ ನಾಗವಿಗ್ರಹ. ಇದರ ಕಲಾಕುಶಲತೆ ಪರಿಪೂರ್ಣತೆಯನ್ನು ಮುಟ್ಟಿದೆ. ಇಂಗ್ಲೀಷಿನ ಎಂಟೆಂಬ ಅಂಕೆಯನ್ನು ಒಂದರ ಮೇಲೊಂದರಂತೆ ಅಡ್ಡ ಮಲಗಿಸಿದರೆ ನಾಗನ ತೆಕ್ಕೆಯ ಹೆಣಿಗೆ ಸುಲಭೋಹ್ಯವಾಗುತ್ತದೆ. ಇದರ ಹೆಡೆಗಳು ಐದು; ಎತ್ತರ ೫೩ ಇಂಚು, ಅಗಲ ೩೫ ಇಂಚು.

ಬೇಲೂರಿನ **ಚೆನ್ನಕೇಶವನ** ಮಾದರಿ ಆ ಮೇಲೆ ಸಿಗುತ್ತದೆ. ಈ ವಿಗ್ರಹದ ಹೊಯ್ಸಳ sophistication ನಾಗರಿಕತೆ ಎದ್ದು ಕಾಣುತ್ತದೆ. ಇದು ನಿಂತ ನಿಲುವು ಪ್ರಸನ್ನತೆಯನ್ನು ಪರಿಮಳಿಸುತ್ತದೆ; ಎತ್ತರ ೪೫ ಇಂಚು, ಅಗಲ ೨೦ ಇಂಚು.

ಮುಖ್ಯವಾದ ಮಧುಕೇಶ್ವರ ದೇವಾಲಯಕ್ಕೆ ತಾಗಿಯೇ ಅದಕ್ಕೆ ಎದುರಾದವರ

ಬಲಕ್ಕೆ ಮಧುಮತಿಯಾದ ಪಾರ್ವತಿಯ ದೇವಾಲಯವಿದೆ. ಲಿಂಗಾರಾಧನೆಗೆ ಸಮಕಾಲೀನವಾದ ಶಕ್ತ್ಯಾರಾಧನೆಗೆ ಪಾರ್ವತಿ ಕುರುಹಾಗಿದ್ದಾಳೆ. ಲಿಂಗಾರಾಧನೆ Austro-Asiatic ಆಸ್ಟ್ರೇಲಿಯ ಏಶಿಯ ಮೂಲ ನಿವಾಸಿಗಳ ಕಾಲದ್ದೆಂದು ತಜ್ಞರ ಮತ. ಆದುದರಿಂದ ಶಕ್ತಿಗೂ ಆದಿ ಶಕ್ತಿ, ಆದಿಮಾಯೆ ಎಂಬ ಹೆಸರುಗಳು ಬಂದಿವೆ. ನಿಂತ ಈ ತ್ರಿಪುರ ಸುಂದರೀ ವಿಗ್ರಹದ ಎತ್ತರ ೪೨ ಇಂಚು, ಅಗಲ ೨೬ ಇಂಚು. ಮಧುಕೇಶ್ವರನ ಮುಖ ಮಂಟಪಕ್ಕೆ ಸಮನಾಗಿ ಎದುರುನಿಂತ ನಮ್ಮ ಎಡಗಡೆ ಹೊರಗೆ 'ಸರ್ವಶುಕ್ಲೆ' ಯಾದ ಶಾರದೆಯ ಅತಿ ರಮ್ಯ ಮೂರ್ತಿಯಿದೆ. ಇದರ ಲಾಲಿತ್ಯ-ಮಾಧುರ್ಯಗಳು ಇದರದೇ! ಅವಳ ಅಲಂಕಾರಗಳು ಊಹ್ಯ.

ಶರದಚಂದ್ರನ ಕಿರಣಗಳ ಧಿ-
ಕ್ಕರಿಪ ಶುಕ್ಲಾಂಬರದ ಪದನೂ-
ಪುರದ ಕಾಂಚಿಯ ಕಂಕಣದ ಕಿಂಕಿಣಿಯ ಝುಂಕೃತಿಯ।
ಕೊರಳ ಹಾರದ ಕರ್ಣಪೂರದ
ಕರದ ವೀಣೆಯ ಪುಸ್ತಕದ ಶುಭ-
ಕರವದನೆ ವಾಗ್ದೇವಿ!

ಕುಳಿತ ಇವಳ ಎತ್ತರ ೨೬ ಇಂಚು, ಅಗಲ ೨೦ ಇಂಚು. ಈಕೆಯ ಪೀಠದ ಕೆಳಗೆ ಮತ್ತೆ ಐದು ಮುಖಗಳ **ನಾಗ!** ಈ ಸರ್ಪದ ಎತ್ತರ ೩೬ ಇಂಚು, ಅಗಲ ೧೪ ಇಂಚು, ಕುಂತಳವು ಕೆಲಕಾಲ ನಾಗರಖಂಡದಿಂದ ಗಣ್ಯವಾಗಿತ್ತು. ಕದಂಬರನ್ನು ನಾಗರೆಂದು ಹೇಳುತ್ತಾರೆ. ನಾಗರಖಂಡದ ಕದಂಬರಾಜಧಾನಿಯು ಶಿರಾಳಕೊಪ್ಪದ ಸನಿಹದ ಬಂದಣಿಕೆ (ಬಾಂಧವಪುರ)! ದಕ್ಷಿಣ ಕನ್ನಡದ ಪುತ್ತೂರು ತಾಲೂಕಿನ ಸುಬ್ರಹ್ಮಣ್ಯವು (ಅಹಿಕ್ಷೇತ್ರ) ನಾಗಲೋಕದ ದೇವರಾಜಧಾನಿ! ಕನ್ನಡಿಗರಲ್ಲಿರುವ ನಾಗಪ್ಪ-ನಾಗಮ್ಮಂದಿರನ್ನು ಎಣಿಸಿದರೆ ಸುಬ್ರಹ್ಮಣ್ಯ ಷಷ್ಠಿಯ ಮಹತ್ವವೂ. ಕದಂಬರಲ್ಲಿ ಶಿವಸ್ಕಂದ. ಸ್ಕಂದ (ಕಂಗ), ಮಯೂರ (+ವಾಹನ), ಷಷ್ಟ, (ಚಟ್ಟ) ಎಂಬ ಹೆಸರುಗಳನ್ನು ರಾಜರು ಧರಿಸುತ್ತಿದ್ದುದರ ಅರ್ಥವೂ ಪಳಚ್ಚನೆ ಹೊಳೆಯುತ್ತದೆ. ನಾಗರು ಭೋಗಿಗಳು: ಕನ್ನಡಿಗರೇನು ಕಡಿಮೆ ಭೋಗಿಗಳೇ? ಶಿವಮೊಗ್ಗ-ದಕ್ಷಿಣ ಕನ್ನಡ ಪ್ರದೇಶದ ಸೇಂದ್ರಕರು ನಾಗಕುಲದ ಅರಸುಗಳಲ್ಲಿ ಆದ್ಯರು! ಕುಲವಿಲ್ಲಿ **Race** ಅಲ್ಲ.

ಮಧುಕೇಶ್ವರನಿಗೆದುರಾಗಿ ಮುಖಮಂಟಪದಲ್ಲಿ ನಿಂತರೆ ನಮ್ಮ ಎಡಗಡೆಯಲ್ಲಿ ಭಾರಿ **ಶಿಲಾಮಂಟಪ** ಕಾಣಿಸುತ್ತದೆ. ಇದೊಂದು ಸುಂದರ ಕಲಾಕೃತಿ. ಸುಧಾಪುರದ ೧ನೆಯ ಸದಾಶಿವರಾಯ ಇದನ್ನು ಉಮಾಮಹೇಶ್ವರ ವಿಗ್ರಹಗಳ ಸಹಿತವಾಗಿ ಮಾಡಿಸಿ ಮಧುಕೇಶ್ವರನಿಗೆ ಅರ್ಪಿಸಿದನು: ಎತ್ತರ ೧೧೭ ಇಂಚು, ಅಗಲ ೬೯ ಇಂಚು, ಇದರ ಹೆಸರು "ತ್ರೈಲೋಕ್ಯಮಂಟಪ."

ಮಧುಕೇಶ್ವರನ ಗರ್ಭಗುಡಿಯ ಎದುರಿನ ಶುಕನಾಸಿಯ ಕೆಳಗಿನ ಅಂತರಾಳದಲ್ಲಿ ಹೊಕ್ಕರೆ, ನಮ್ಮ ಬಲಗಡೆಗೆ ಒಂದು ಗೂಡಿನಲ್ಲಿ ಆದಿಮಾಧವ ನಿಂತದ್ದು ಕಾಣಿಸುತ್ತದೆ. ಮಧುಕೈಟಭ ಸಂಹಾರಿಯಾದ ಮಾಧವನಿವನು; ಇವನು ಮಧುವಿಗಿತ್ತ ವರಪ್ರಸಾದದಂತೆ ಮಧುಲಿಂಗದಲ್ಲಿ ಶಿವಬಂದು ನೆಲೆಸಿದನು. ಆದಿಮಾಧವನ* ಎತ್ತರ ೬೮ ಇಂಚು, ಅಗಲ ೪೫ ಇಂಚು.

ಮಧುಲಿಂಗವು "ಮಧುಕ್ಷರತಿ" (Exudos honey) ಎಂಬಂತಿದೆ. ನಿರಾಕಾರ ಸೂಚಕವಾದ ಲಿಂಗಕ್ಕೇನಾದರೂ ಸೌಂದರ್ಯವಿದ್ದರೆ ಅದರ ಪೂರ್ಣತೆಯನ್ನು ಮಧುಲಿಂಗನಲ್ಲಿ ಕಾಣಬಹುದು. ಮಧುವು (ಬೃಹದಾರಣ್ಯಕದಲ್ಲಿ) ಪಾರಸ್ಪರಿಕ ಆಧಾರವಾದ ಸ್ನೇಹ, ಸ್ನೇಹಮಯಪುರುಷ, ಸರ್ವಾಧಾರವಾದ ವಿಶ್ವಾತ್ಮ, ಬ್ರಹ್ಮಶ್ರೀ, ಬ್ರಾಹ್ಮೀತತ್ವ! ಸ್ಥಳಪುರಾಣದಲ್ಲಿ ಕೈಟಭಾಸುರನ ಅಣ್ಣ ಮಧುಕಾಸುರ. ಈ ಇಬ್ಬರೂ ಅಧಿಕಾರದ ಅತ್ಯಹಂಮದದ ಪ್ರತೀಕಗಳು: ಈಶ್ವರಾಧಿಕ್ಯವನ್ನು ಒಪ್ಪಿದಾಗ ಇವರು ಮುಕ್ತರಾದರು. ಅಮರರಾದದರು, ಸ್ವತಂತ್ರರಾದರು. ಬ್ರಹ್ಮೈಕ್ಯರಾದರು! ಸಪೀಠ ಮಧುಲಿಂಗದ ಎತ್ತರ ೬೪ ಇಂಚು, ಅಗಲ ೫೯ ಇಂಚು.

ಜಗದಾಧಾರವಾದ ಈಶ ಶಕ್ತಿಯ ಕೌಮಾರ ದಶೆಯನ್ನು ಕುಮಾರ (ಷಣ್ಮುಖ, ಸುಬ್ರಹ್ಮಣ್ಯ, ನಾಗ) ಪ್ರತಿನಿಧಿಸುತ್ತಾನೆ. ಗರ್ಭಗುಡಿಯ ಪ್ರದಕ್ಷಿಣಾಪಥದಲ್ಲಿ ನಾವು ಹೊಕ್ಕರೆ ಬಲಗಡೆ ಒಂದು ಗೂಡಿನಲ್ಲಿ ಕಾರ್ತಿಕೇಯನು ಮಯೂರವಾಹನನಾಗಿರುವ ಸೊಬಗು ಕಣ್ಣಿಗೆ ಹಬ್ಬವಾಗುತ್ತದೆ. ದೇವಸೇನಾಪತಿಯಾದ ಈತನಿಂದಲೇ ಕನ್ನಡ ರಾಜ್ಯಗಳ ಸೇನಾಪತಿಗಳು ಸ್ಫೂರ್ತಿಯನ್ನು ಪಡೆಯುತ್ತ ಬಂದದ್ದು; ಕದಂಬರ ಮಯೂರಶರ್ಮನು ಮಯೂರವರ್ಮನಾದದ್ದು ಈ ಆರು ಮೊಗನ ಶಕ್ತಿಯನ್ನು ತನ್ನಲ್ಲಿ ಆವಾಹಿಸಿಕೊಂಡೇ! ರಾಷ್ಟ್ರಪಕ್ಷಿಯೆಂದು ಮಯೂರವನ್ನು ಆಯ್ದುಕೊಂಡ ಭಾರತವು ಈ ಸಪೀಠ ಮಯೂರ ವಾಹನನನ್ನು ರಾಷ್ಟ್ರಮುದ್ರೆಯನ್ನಾಗಿ ಸ್ವೀಕರಿಸಲಾರದೆ? ಇದರ ಎತ್ತರ ೧೯ ಇಂಚು, ಅಗಲ ೧೬ ಇಂಚು.

ಈಗ ಮಧುಕೇಶ್ವರ ಗುಡಿಯ ಮುಖಮಂಟಪದ ಮಧ್ಯದಲ್ಲಿರುವ ನೃತ್ಯಮಂಟಪಕ್ಕೆ ಹೋಗೋಣ. ಮಮಕಾರ ರಾಜನ ಮಗಳಾದ ಮಾಯೆ ಇಲ್ಲಿ ಕುಳಿತ ಶಿವೋಹಮೆಂಬ ಪರಮಾನುಭಾವವನ್ನು ಕೊನೆಯಲ್ಲಿ ಸಾಧಿಸಿದ ಸಾಧಕ ಅಲ್ಲಮನೆದುರು ನೃತ್ಯಮಾಡಿ ಅವನಲ್ಲಿ ಸ್ತ್ರೀಭೋಗದ ದಾಹವನ್ನು ಮೂಡಿಸಲಾರದೆ ಹೋದಳೆಂದು ಕಥೆಯಿದೆ. ಅಲ್ಲಮನ ಕಾಲ ೧೧೬೦. ಆಗ ಹಾನುಗಲ್ಲಿನಲ್ಲಿ ಬನವಾಸಿ ಕೀರ್ತಿದೇವ ಕದಂಬರಾಯನು ಮಹಾಮಂಡಲೇಶ್ವರನಾಗಿದ್ದನು. ಅವನಿಗೆ ಮಾಯೆಯಂಬ ಮಗಳಿದ್ದದ್ದಕ್ಕೆ ಐತಿಹಾಸಿಕ ಆಧಾರವಿಲ್ಲ; ಪುರಾಣಾಧಾರದಲ್ಲಿ ಮಾಯೆಯ ತಂದೆ

---

* ಇದನ್ನು ಪದಚ್ಯುತಗೊಳಿಸಿ ಮಧುಲಿಂಗವನ್ನು ಪೀಠದ ಮೇಲೆ ಸ್ಥಾಪಿಸಲಾಯಿತೆಂಬುದು ಶಿಲ್ಪ ಶಾಸ್ತ್ರೀಯವಾಗಿ ಅಸಮರ್ಥನೀಯ.

ಮಮಕಾರನೆಂದಿದೆಯಲ್ಲದೆ ಕೀರ್ತಿದೇವನು ಎಂದು ಇಲ್ಲ. ಆದರೆ ಐತಿಹ್ಯದ ಅರ್ಥ ಇಷ್ಟೆ; ಬನವಾಸಿಯು "ಚಾಗದ ಭೋಗದಕ್ಕರದ ಗೊಟ್ಟಿಯ ಗೇಯದಲಂಪಿ ನಿಂಪುಗಳ್ಗೆ ಆಗರ' ಎಂಬುದನ್ನು ಕೇಳಿದ್ದ ಚೆನ್ನಬಸವ ಪುರಾಣಕಾರನು ಅಲ್ಲಮನ ಮಾರಮರ್ದನಕ್ಕೆ ಬನವಾಸಿಯನ್ನು ರಂಗವನ್ನಾಗಿ ಆಯ್ದುಕೊಂಡಿರಬೇಕು. ಮಾಯೆಯೆಂದರೆ ಮರ್ತ್ಯ, ಅದನ್ನು ಅಲ್ಲಮ ಅಲ್ಲಗಳೆದ. ಸಾಹಿತ್ಯ–ಸಂಗೀತ–ನೃತ್ಯ ಸೇವೆಗಳು ದೇವರ ಪೂಜೆಯ ಅಂಗವಾಗಿರುವುದರಿಂದ ನೃತ್ಯಮಂಟಪ ದೇವಾಲಯದಲ್ಲಿದೆ. ಹೀಗೆ ನೃತ್ಯಮಂಟಪ ದೇವಾಲಯದಲ್ಲಿರುವುದು ವಿರಳವಾದರೂ ಪರಂಪರಾವಿರುದ್ಧವಲ್ಲ. ವರದಾ ನದಿಯನ್ನು ಉಲ್ಲೇಖಿಸದ ಆ ಗ್ರಂಥಕರ್ತನು ಅಲ್ಲಮನ ಕಾಲವಾದ ಮೇಲೆ ಕೇಳ್ಮೆಯಿಂದ ದೂರ ಕುಳಿತು ಬರೆದ ಅಂಶವಾದುದರಿಂದ, ಅಲ್ಲಮನನ್ನು ಮೋಹಿಸಲು ಯಾವಳೊ ಪ್ರಸಿದ್ಧ ದೇವದಾಸಿಯು ಪ್ರಯತ್ನಿಸಿ ಇಲ್ಲಿ ವಿಫಲೆಯಾದಳು–ಎಂಬಷ್ಟನ್ನು ತಥ್ಯವೆಂದು ಗಣಿಸಬಹುದು. ಪ್ರಸ್ತುತವೇನೆಂದರೆ, ಅಲ್ಲಮನ ಪಾದಧೂಳಿಗಳು ಈ ಮುಖಮಂಟಪದಲ್ಲಿ ಬಿದ್ದಿರುವುದರ ಮಹತ್ವ; ಮಧುಕೇಶ್ವರನು ಆತನಿಗೆ ಆತ್ಮಸ್ಥೈರ್ಯವನ್ನು ದಯಪಾಲಿಸಿದ ವಿಶೇಷವಾದ ಕಾರಣಿಕತೆ! ಅಲ್ಲಮನು ಬಸವಣ್ಣನ ಗುರು; ಆತನು ಮೋಕ್ಷಾಧಿಕವಾದ ಭಕ್ತಿಯನ್ನು ಪಂಚಮ ಪುರುಷಾರ್ಥವೆಂದು ಬೋಧಿಸಿದನೆಂದು ಕೆಲವರು ಹೇಳಿರುವುದು ನಿರಾಧಾರ. ಈ ನೃತ್ಯಮಂಟಪದ ಎತ್ತರ ೧೦೦ ಇಂಚು, ಉದ್ದ ಹಾಗೂ ಅಗಲ (ಪ್ರತಿಯೊಂದೂ) ೧೪೬ ಇಂಚು. ಇದರ ಒಂದೊಂದು ಸ್ತಂಭದ ನಡುವಿನ ಸುತ್ತಳತೆ ೬೨ ಇಂಚು ಇವುಗಳ ಕಲೆಗಾರಿಕೆ ಮನೋಹರವಾಗಿದೆ. ಈ ೪ ವೃತ್ತಸ್ತಂಭಗಳು ಇತರ ಸ್ತಂಭಗಳಿಗಿಂತ ಹೆಚ್ಚು ಆಕರ್ಷಕವಾಗಿ ಎದ್ದು ಕಾಣುತ್ತವೆ.

ಈಶ್ವರ ದೇವಾಲಯವೆಂದ ಮೇಲೆ ಬಸವ ಇರಲೇ ಬೇಕು, ಇದ್ದಾನೆ. ಗುಡಿಯನ್ನು ಹೊಗುವಾಗ ಮುಖಮಂಟಪದ ಮುಖಸ್ಥಳದಲ್ಲಿ ಬಸವ ಕುಳಿತಿದ್ದಾನೆ. ಅವನ (ಕುಳಿತ ಮಾನದಲ್ಲಿ) ಎತ್ತರ ೮೬ ಇಂಚು, ಅಗಲ ೩೭ ಇಂಚು ಮತ್ತು ಉದ್ದ ೮೪ ಇಂಚು. ಈ ಮೂರ್ತಿಯ ಮೊಗದಲ್ಲಿ ಸಾತ್ವಿಕ ಕಳೆಯಿದೆ.

ದೇವಾಲಯದ ಹೆಬ್ಬಾಗಿಲೊಳಹೊಕ್ಕ ಕೂಡಲೇ ಎದುರಾಗುವ ಕಲ್ಲಿನ ಧ್ವಜಸ್ತಂಭದ ಎತ್ತರ ೪೦ ಅಡಿಗಳು. ಅದಕ್ಕೂ ಮುಖಮಂಟಪಕ್ಕೂ ನಡುವೆ ಇರುವ ದೀಪಸ್ತಂಭದ ಎತ್ತರ ೩೫ ಅಡಿಗಳು. ಕೆಲ ಶಾಸನ ಶಿಲೆಗಳನ್ನು ದೇವಾಲಯದ ಒಳಹೋಗುವ ನಮ್ಮ ಎಡಗಡೆ ಚಾಚಿ ನಿಲ್ಲಿಸಿ ಇಡಲಾಗಿದೆ. ಇವು ಅಸಂಖ್ಯ ರಾಜ ಶಾಸನಗಳ ಅತ್ಯಲ್ಪಸಂಖ್ಯಾತ ಪ್ರತಿನಿಧಿಗಳಷ್ಟೇ!

ಹೆಬ್ಬಾಗಿಲಾನೆಗಳು ಮುದ್ದುಮರಿಗಳು. ಇವುಗಳು ಒಂದನ್ನೊಂದು ಅವಳಿಜವಳಿಗಳಂತೆ ಹೋಲುತ್ತವೆ. ದೇವಾಲಯದ ಹೊರಬಾಗಿಲ ಕಾವಲುಗಾರರಾಗಿವೆ– ಈ ಚಿಟ್ಟಾನೆ ಮರಿಗಳು! ಇಷ್ಟಲ್ಲದೇ, ಅಷ್ಟದಿಕ್ಪಾಲಕರ ಹೊರತಾಗಿ ದೇವಾಲಯದೊಳಗೆ

(ಇಲ್ಲಿ ಹೇಳಿರುವ ಮೂರ್ತಿಗಳಲ್ಲದೆ) ಇನ್ನೂ ನಾಲ್ಕಾರು ವಿಗ್ರಹಗಳು ನೋಡಲು ಸಿಗುತ್ತವೆ. ಇವೆಲ್ಲವುಗಳ ಕಾಪಿಗೆ ನಿಂತ ಮರಿಯಾನೆಗಳ ಮಾದರಿಯ ಎತ್ತರ ೩೧ ಇಂಚು, ಅಗಲ ೧೬ ಇಂಚು, ಮತ್ತು ಉದ್ದ ೩೪ ಇಂಚು.

೨

ಮಧುಕೇಶ್ವರನ ಬಲಕ್ಕೆ ಕದಂಬೇಶ್ವರ; ಆತನ ದೇವತಾ ಕದಂಬವನ್ನು ಅವನ ಆಲಯದ ಹೊರಗೆನಿಂತು ಸಲಹುವ ಮತ್ತೊಂದು ಈಶ್ವರಾವತಾರ! ಕದಂಬರಿಗೆ ೨೮೦ರಿಂದ ೧೩೪೭ರ ವರೆಗೆ ಭಕ್ತಿ ಕೇಂದ್ರವಾಗಿದ್ದ ಬನವಾಸಿಯ ರಾಜ್ಯ ಶಕ್ತಿಯ ಪ್ರತೀಕ, ಈ ಕದಂಬ ಲಿಂಗ. ಪೀಠ ಸಹಿತ ಲಿಂಗದ ಎತ್ತರ ೮೦ ಇಂಚು, ಅಗಲ ೭೧ ಇಂಚು ಮತ್ತು ಲಿಂಗಮಾತ್ರದ ಸುತ್ತಳತೆ ೭೧ ಇಂಚು ಹಾಗೂ ಎತ್ತರ ೨೮ ಇಂಚು. ಕದಂಬದ (ಜನಪ್ರಿಯಾರ್ಥದ ಹನೆ ಅಥವಾ ತಾಳೆ ಮರದ) ಔನ್ನತ್ಯವನ್ನು ಈ ಕದಂಬೇಶ್ವರ ಸಂಕೇತಿಸಿದ್ದಾನೆ! ಈತ ನಿಜವಾಗಿ ಮಹಾಬಲ!

ಆಮೇಲೆ, ಮಧುಕೇಶ್ವರನ (ಗುಡಿಯ) ಬಲಕ್ಕೆ ಅವನ ಗುಡಿಗೂ ಕದಂಬೇಶ್ವರನ ಗುಡಿಗೂ ನಡುವೆ ಶಿತಿಕಂಠೇಶ್ವರ (ಲಿಂಗದ) ದೇವಾಲಯವಿದೆ. ಇದರ ಗೋಪುರದ ಕಲಶ ಹಾಳಾಗಿ ಹೋಗಿದೆ. ಕಲಶವನ್ನು ಶಿಲಾಕಮಲವೊಂದರ ಮೇಲೆ ನಿಲ್ಲಿಸಿದ್ದರ ಕುರುಹು ಉಳಿದಿದೆ. ಈ ಚಚ್ಚೌಕವಾದ ಗುಡಿಯ ಗೋಪುರದಲ್ಲಿ ನಾಲ್ಕು ಬೆರಳಿಗೊಂದರಂತೆ ನಾಲ್ಕು ಬದಿಗಳಲ್ಲೂ ಮೆಟ್ಟಿಲುಗಳ ಸಾಲುಗಳಿರುವುದು ಇದರ ಕದಂಬ ವೈಶಿಷ್ಟ್ಯ. ಗೋಪುರದ ಪ್ರಾಚೀನತೆ ಊಹ್ಯ. ಈ ಗುಡಿಯ ಮುಂದೆ ಮಧುಕೇಶ್ವರನ ಮಹಾರಥವಿದೆ, ಈ ರಥವನ್ನು ಸುಧಾಪುರದ ದೊರೆ ರಾಮಚಂದ್ರನಾಯಕನು ೧೬೦೮ರಲ್ಲಿ ದೇವರಿಗೆ ಮಾಡಿಸಿಕೊಟ್ಟದ್ದು. ಇದಕ್ಕೆ ೧೦ ಅಡಿ ಎತ್ತರದ (ವ್ಯಾಸದ) ೪ ಗಾಲಿಗಳು, ನಡುವೆ ೮ ಅಡಿ ಎತ್ತರದ (ವ್ಯಾಸದ) ೨ ಗಾಲಿಗಳು: ಹೀಗೆ ೬ ಗಾಲಿಗಳನ್ನೊಳಗೊಂಡ ೨೦ ಅಡಿ ಉದ್ದಗಲ, ೨೨ ಅಡಿ ಎತ್ತರವುಳ್ಳ ಈ ರಥವು ಬಹಳ ಭವ್ಯಾಕೃತಿಯುಳ್ಳದ್ದಾಗಿದೆ. ಗಾಲಿಗಳನ್ನೂ ಅಚ್ಚುಗಳನ್ನೂ ಬಿಟ್ಟು ಮಿಕ್ಕ ಇಡೀ ರಥವು ಗಂಧದ ಮರದ ತುಂಡುಗಳಿಂದ ಮಾಡಲ್ಪಟ್ಟಿದ್ದವು ಎಂದು ಕೆಲ ಸಾಂಪ್ರದಾಯಕರ ಮತ. ತೇರ ಜಾತ್ರೆಯು ಚೈತ್ರಶುದ್ಧ ಮಘಾ ನಕ್ಷತ್ರದ ಶುಭಮುಹೂರ್ತದಲ್ಲಿ ನಡೆಯುತ್ತದೆ. ೧೯೦೦ರ ವರೆಗೆ ಶೃಂಗೇರಿ ಮಠದ ೨ ಆನೆಗಳು ಬಂದು ಈ ತೇರನ್ನು ಎಳೆಯುತ್ತಿದ್ದವು. ಇದೀಗ ಏಳು ನೆಲೆಯ ತೇರು; ಮೊದಲು ೯ ನೆಲೆಗಳಿದ್ದವಂತೆ.

೩

ಅನಂತರ ಮಧುಕೇಶ್ವರ ದೇವಾಲಯವನ್ನು ಹೊಗುವಾಗ ಎಡಕ್ಕೆ ವಿಜಯನಗರದ ೧ನೆಯ ಬುಕ್ಕ ಭೂಪಾಲನ ಮಂತ್ರಿಯಾಗಿ ಅವನ ತಮ್ಮ ಮಾರಪ್ಪನಿಗೆ ಸಹಾಯಕನಾಗಿ ಚಂದ್ರಗುತ್ತಿಯಿಂದಾಳುತ್ತಿದ್ದ ಮಾಧವ ಮಂತ್ರಿಯ ಕೆಳಗಿನ ಅಧಿಕಾರಿಯಾದ

ಅಹೋಬಲನಾಥನು ಪುನರುಜ್ಜೀವಿಸಿದ ತಿರುಮಲೇಶ್ವರ (ವೆಂಕಟೇಶ್ವರ) ದೇವಸ್ಥಾನವಿದೆ. ಆತನು ೧೫೬೮ರಲ್ಲಿ ಬರೆಯಿಸಿದ ಶಿಲಾಶಾಸನವನ್ನೂ ನಾವಿಲ್ಲಿ ನೋಡಬಹುದು. ಇದು* ಮಧುಕೇಶ್ವರ ದೇವರ ಕಾರಣಿಕತೆಯ ವಿಜಯನಗರದ ಆದಿಯ ಆಳರಸರ ಮನ್ನಣೆಗೆ ಪಾತ್ರವಾಗಿತ್ತೆಂಬುದನ್ನು ಸೂಚಿಸುತ್ತದೆ.

ಮಧುಕೇಶ್ವರ ದೇವಾಲಯದ ಹೊರವಲಯದಲ್ಲಿ ಉತ್ತರದ್ವಾರವೆಂದು ಕರೆಯಲ್ಪಡುವ 'ಸುಟ್ಟುಪ್ಪರಿಗೆ'ಯ ಕೆಳಗಡೆ ಕದಂಬಸಿಂಹಗಳನ್ನೂ ವಿಶಿಷ್ಟ ಕಲೆಗೆಲಸದ ಕಿಟಕಿಗಳನ್ನೂ ನೋಡಬಹುದು ಎನ್ನುತ್ತಾನೆ ಮೋರೆಸ್. ಅಲ್ಲಿಂದ ಪೂರ್ವ ದಿಕ್ಕಿನಲ್ಲಿರುವ ಶ್ರೀ ಮ.ಚ. ಒಡೆಯರ ಪ್ರಾಚೀನ ಪರಂಪರಾಗತ ಹಿತ್ತಲಿನಲ್ಲಿ ಹಳೆಯ ಅರಮನೆಯ ಗಜ ತುರಗ ಶಾಲೆಗಳ ಅವಶೇಷಗಳು ದೊರಕಿರುವುದರಿಂದ ಆ ಆವರಣದಲ್ಲೇ ಕದಂಬ ಚಕ್ರೇಶ ಪೀಠವಿದ್ದಿರಬಹುದೆಂದು ವಿದ್ವಾಂಸರು ತರ್ಕಿಸಿದ್ದಾರೆ. ಉತ್ತರ ದ್ವಾರವು ಹಳೆಯ ಮಧುಕೇಶ್ವರ ಮಂದಿರದ ಪ್ರವೇಶದ್ವಾರದ ಅವಶೇಷ. ಇತ್ತೀಚೆಗೆ ಪ್ರಾಚ್ಯ ಉತ್ಖನನ ಶಾಖೆಗೆ ಕದಂಬ ವಂಶಾವಳಿಯುಳ್ಳ ಸ್ತಂಭವೊಂದು ಸಿಕ್ಕಿದೆ. ಬನವಾಸಿಯ ಸಮೀಪ ಗುಡ್ನಾಪುರದಲ್ಲಿ ಕದಂಬ ರವಿವರ್ಮನ ಶಾಸನವಿರುವ ೨೦ ಅಡಿ ಎತ್ತರದ ಸ್ಥಂಭವನ್ನು ಕನ್ನಡ ಸಂಶೋಧನ ಸಂಸ್ಥೆಯ ಡಾ. ಗೋಪಾಲ ಕಂಡುಹಿಡಿದಿದ್ದಾರೆ.

೪

ಅಲ್ಲಿಂದ ಮುಂದೆ ವಿಭೂತಿಗೌರಯ್ಯ ಅಥವಾ ಗೌರಾರ್‍ಯನು (೧೨೭೦) ಬಂದಾಗ ಸ್ಥಾಪಿಸಲ್ಪಟ್ಟದ್ದೆಂದು ಐತಿಹ್ಯವಿರುವ ವೀರಶೈವ ಪರಂಪರೆಯ ಶ್ರೀಮನ್ನಿರಂಜನ ಪ್ರಣವಸ್ವರೂಪ ರುದ್ರಸ್ವಾಮಿಗಳ ಗದ್ದುಗೆ (ಪುನಾರಚಿತ ರೂಪದಲ್ಲಿ) ಕಾಣಸಿಗುತ್ತದೆ. ಆಮೇಲೆ ಸ್ವಲ್ಪ ದೂರದಲ್ಲಿ ೮ನೆಯ ತೀರ್ಥಂಕರರಾದ ಚಂದ್ರಪ್ರಭಸ್ವಾಮಿಗಳ ಬಸದಿ ಸಿಗುತ್ತದೆ. ಅವರದ್ದು ಅಮೃತ ಶಿಲಾವಿಗ್ರಹ. ಈ ವಿಗ್ರಹದ ಗರ್ಭಗುಡಿಯ ಎದುರುಗೋಡೆಯ ಹೊರಭಾಗದಲ್ಲಿ ನಮ್ಮ ಎಡಕ್ಕೆ ವೃಷಭ ತೀರ್ಥಂಕರರ ವಿಗ್ರಹವಿದೆ: ಎತ್ತರ ೫೪ ಇಂಚು, ಅಗಲ ೨೫ ಇಂಚು ಬಲಗಡೆ ಬ್ರಹ್ಮದೇವರು; ಎತ್ತರ ೨೪ ಇಂಚು, ಅಗಲ ೧೩ ಇಂಚು. ಚಂದ್ರಪ್ರಭ ಸ್ವಾಮಿಗಳ ವಿಗ್ರಹದ ಕೆಳಗಡೆ ಅಷ್ಟೇ ಚಿಕ್ಕದಾದ ಪದ್ಮಾವತಿಯ ಮೂರ್ತಿಯಿದೆ. ಪದ್ಮಾವತಿಯು ಅವರ ಸೇವಿಕೆಯಾದ ಯಕ್ಷಿಣಿ–ಜೈನರ ಪ್ರಕಾರ. ಈ ಬಸದಿಯ ಹಿತ್ತಿಲಲ್ಲಿ ಅರ್ಹಂತಿ ಭೋಗವ್ವೆಯ ಸಮಾಧಿಶಿಲೆಯಿದೆ; ಅದರ ಹತ್ತಿರ ಒಂದು ಶಾಸನಾಂಕಿತ ಶಿಲೆಯೂ ಇದೆ. ಇದು ಬನವಾಸಿ ಆಳರಸರ "ಸೆಕ್ಯೂಲಾರಿಸಮ್ಮಿಗೆ" ನಿದರ್ಶನ.

ಆಮೇಲೆ ಸುಮಾರು ೪ ಫರ್ಲಾಂಗು ದೂರದಲ್ಲಿ ಆದಿ ಮಧುಕೇಶ್ವರ ದೇವಾಲಯ ತೋರುತ್ತದೆ. ಇದರ ಗೋಪುರದ ಲಕ್ಷಣ ಕದಂಬಶೈಲಿಯನ್ನು ನೆನಪಿಗೆ

---

* ಶಾಸನದಲ್ಲಿ ಇದು "ಗೋಪಿನಾಥ" ದೇವಾಲಯ.

ತಂದುಕೊಡುತ್ತದೆ. ಚಿಕ್ಕದಾದರೂ ಇದು ಚೊಕ್ಕವಾದ ದೇವಾಲಯ. ಇದರ ಸಮೀಪದಲ್ಲಿ ವಸಿಷ್ಠತೀರ್ಥವೆಂಬ ವೇದಕಾಲೀನ ಕೊಳವಿದೆ. ಅದರ ಪ್ರಾಚೀನತೆಗೆ ಅದರ ಆವರಣವೂ, ಸ್ವರೂಪವೂ, ಅದರ ಒಂದು ದಂಡೆಯ ಮೇಲಿನ ಗಡುತರವಾದ ಬೋಳು ಮರವೂ ಸಾಕ್ಷಿಗಳಾಗಿವೆ. ವಸಿಷ್ಠನಿಗೆ ಯಾರದೋ ಶಾಪ ಬಂದಾಗ ಇಲ್ಲಿ ತಪಸ್ಸನ್ನು ಮಾಡಿ ಅವನು ಅದರಿಂದ ಮುಕ್ತನಾದನೆಂದು ಐತಿಹ್ಯ. ಈ ಕೆರೆಯ ರಮಣೀಯತೆ ರುದ್ರವಾಗಿದೆ. ಇತ್ತೀಚೆಗೆ ಆ ಬೋಳುಮರ ಸತ್ತುಹೋಗಿದೆ.

೫

ಬನವಾಸಿ ಪಟ್ಟಣದ ಮಧ್ಯಹೊಕ್ಕರೆ ಅಳಿದುಳಿದ ಅಲ್ಲಮ ಪ್ರಭುಲಿಂಗ ದೇವಾಲಯ ದೊರಕುತ್ತದೆ. ಲಿಂಗದ ಸುತ್ತು ೩೬ ಇಂಚು, ಎತ್ತರ ೧೫ ಇಂಚು, ಪೀಠ ಸಹಿತ ಲಿಂಗದ ಎತ್ತರ ೩೮ ಇಂಚು, ಪೀಠದ ಆಕಾರ ಚಚ್ಚೌಕ; ಅದರ ಒಂದು ಮೈಯ ಅಗಲ ೭೭ ಇಂಚು. ಆಮೇಲೆ ಪ್ರಭುಲಿಂಗ ದೇಗುಲದೆದುರು ನಿಂತರೆ ಬಲ ಮೂಲೆಯಲ್ಲಿ ಸಾರ್ವಭೌಮ ದುರ್ಗದ ಅವಶೇಷವಾದ ಬೃಹದಾಕಾರದ ದಿಬ್ಬಗಳ ಸಾಲು ಕಣ್ಣಿಗೆದುರಾಗುತ್ತದೆ. ಈ ದೇವಾಲಯದ ಗೋಪುರವು ಮಧ್ಯಯುಗೀನ. ಅನತಿದೂರ ನಡೆದಾಗ ನಮಗೆ ವೃಷಭಾಲಯ ಕಾಣಿಸುತ್ತದೆ. ಇದು ಪೂರ್ಣವಾಗಿ ಹೊಸ ರಚನೆ; ಬಸವವಿಗ್ರಹವಷ್ಟೇ ಹಳೆಯದು, ಬಸವೇಶ್ವರನ ಕಾಲ ೧೧೬೦. ಅಲ್ಲಮ ಬಂದಿದ್ದ ಊರಿಗೆ ಬಸವಣ್ಣ ಕೂಡ ಬಂದು ಹೋಗಿದ್ದರೆ ಏನೂ ಆಶ್ಚರ್ಯವಿಲ್ಲ! ಬಳ್ಳಿಗಾವಿಯಲ್ಲಿ ಜನಿಸಿದ ಅಲ್ಲಮನು ಬಸವಣ್ಣನ ಗುರು. ಬಳ್ಳಿಗಾವಿ ಶಿರಾಳಕೊಪ್ಪದ ಸಮೀಪದಲ್ಲಿದೆ.

೬

ಬನವಾಸಿಯ ಆನುವಂಶಿಕ ರಾಜಧಾನಿಪದ

ಬನವಾಸಿಯನ್ನು ಮೊದಲಿಂದ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದವರು ಚುಟುಗಳು ಮತ್ತು ಕದಂಬರು. ಚುಟುಗಾಲ ಕ್ರಿ.ಶ ೨೦೦. ಕದಂಬ ಚಕ್ರವರ್ತಿಗಳ ಮತ್ತು ಇಬ್ಬರು ಸಾಮಂತರ ಕಾಲ ಕ್ರಿ.ಶ ೨೮೦–೬೫೬ ಆಮೇಲೆ ಇಲ್ಲಿ ರಾಷ್ಟ್ರಕೂಟರ ಸಾಹಸ್ರತುಂಗ ದಂತಿದುರ್ಗನ ಮೇಲ್ದೊರೆತನದಲ್ಲಿ ಕದಂಬ ವಂಶದ ಜಕ್ಕಿಯಬ್ಬೆ ಎಂಬ ಮಹಾರಾಣಿ ಆಳಿದಳು. ಅನಂತರ ಅವಳ ಅಳಿಯ ಷಷ್ಠ (ಚಟ್ಟ) ದೇವ ಆಳಿದ. ಅವನ ಮುಂದಿನ ಕೆಲ ಕದಂಬರ ಹೆಸರುಗಳು ಸಿಕ್ಕಿಲ್ಲ. ಅನಂತರ ಇಂದ್ರವರ್ಮ ಕದಂಬನೂ (೮೫೫–೮೯೦) ಅವನ ಮಗ ಅಜ (ಆಯ್ವ) ವರ್ಮ ಕದಂಬನೂ (೮೯೦–೯೧೧) ಬನವಾಸಿ ರಾಜಧಾನಿಯಿಂದ ರಾ.ಕೂ ನೃಪತುಂಗ ಅಮೋಘವರ್ಷನ (೮೧೪–೮೮೦) ಮತ್ತು ೨ನೆಯ ಕೃಷ್ಣಶುಭತುಂಗ ಅಕಾಲವರ್ಷನ (೮೮೦–೯೧೨) ಮೇಲ್ದೊರೆತನದಲ್ಲಿ ಅನುಕ್ರಮವಾಗಿ ಮಲೆನಾಡನ್ನು ಆಳಿದರು. ಮತ್ತೆ ಕೆಲ ಕದಂಬರ

ವೃತ್ತಾಂತ ಅಲಭ್ಯ. ಆಮೇಲೆ ಮಾರಸಿಂಹ ಗಂಗನ ಕೂಡಲೂರು ದತ್ತಿಶಾಸನದ ಪ್ರಕಾರ ಇಲ್ಲಿ ೩ನೆಯ ಅಜವರ್ಮ ಕದಂಬ ಆಳುತ್ತಿದ್ದ. ಕ್ರಿ.ಶ ೯೫೯ರಲ್ಲಿ ೨ನೆಯ ರವಿವರ್ಮ ಕದಂಬನೂ ೯೬೩ರಲ್ಲಿ ಬೊಪ್ಪವ್ವೆ ಕದಂಬೆಯೂ ಬನವಾಸಿ ಸಿಂಹಾಸನಾಸೀನರಾಗಿದ್ದರು. ಈ ಅಜವರ್ಮ ಪಂಪ ಸಮಕಾಲೀನ.

ಅನಂತರ ಇರಿವಬೆಡಂಗದೇವ ಕದಂಬರಾಯನು* (೯೬೭–೯೮೦) ಕದಂಬ ರಾಜಧಾನಿಯುನ್ನು ಹಾನುಗಲ್ಲಿಗೆ ಸ್ಥಳಾಂತರಿಸಿದ. ಆದರೂ ಬನವಾಸಿ ಉಪರಾಜಧಾನಿಯಾದಿ ಉಳಿದಿತ್ತು. ಆಮೇಲೆ ಅದೇ ವಂಶದ ಕೀರ್ತಿವರ್ಮ ಕದಂಬನೆಂಬ ಮಹಾಮಂಡಲೇಶ್ವರನು (೧೦೭೫–೧೧೧೭) ಚಾಲುಕ್ಯರ ೧ನೆಯ ಸೋಮೇಶ್ವರನ ಸಾರ್ವಭೌಮತ್ವದಲ್ಲಿ ಬನವಾಸಿಯನ್ನು ತನ್ನ ಪ್ರತ್ಯೇಕವೂ ಸ್ವತಂತ್ರವೂ ಆದ ರಾಜಧಾನಿಯನ್ನಾಗಿ ಮಾಡಿಕೊಂಡು ಬನವಾಸಿ (ಮಂಡಲ) ಹನ್ನೆರಡು ಸಾವಿರದ ನಾಡನ್ನು ಆಳಿದನು. ಉಪಲಬ್ಧ ಐತಿಹಾಸಿಕ ದಾಖಲೆಗಳಲ್ಲಿ ೧೧೧೭ರ ಬಳಿಕ ಬನವಾಸಿ ರಾಜಧಾನಿಯಾಗಿ ಮುಂದೆ ಎಷ್ಟು ಕಾಲ ಉಳಿಯಿತೆಂಬುದಾಗಲಿ, ಇಲ್ಲಿಯ ಕದಂಬ ಸಿಂಹಾಸನದ ಕತೆಯೇನೆಂಬುದಾಗಲಿ ತಿಳಿದು ಬರುವುದಿಲ್ಲ. ವಿಜಯನಗರದ ಚಕ್ರವರ್ತಿಗಳಿಗೆ ಚಂದ್ರಗುತ್ತಿ ಉಪರಾಜಧಾನಿಯಾಯಿತಲ್ಲದೆ ಬನವಾಸಿಯಲ್ಲ. ಅವರ ಆಳಿಕೆಯಾರಂಭ ೧೩೪೭ರಿಂದ; ಅಲ್ಲಿಯವರೆಗೆ ಹಾನುಗಲ್ಲಿನಿಂದಾಳುತ್ತಿದ್ದ ಕದಂಬರ ರಾಜ್ಯಭಾರಕ್ಕೆ ಬನವಾಸಿ ಸೇರಿತ್ತು. ಆದುದರಿಂದ ೧೨ನೆಯ ಶತಮಾನದಿಂದ ೧೪ರವರೆಗೆ ಅವಶೇಷ ರೂಪದಲ್ಲಾದರೂ ಅರಮನೆ ಇದ್ದಿರಬಹುದಾಗಿದೆ. ೧೩೪೭ರ ಬಳಿಕ ಬಹುಶಃ ಅದು ನಿಃಶೇಷವಾಗಿರಬೇಕು: ಮಲ್ಲಿಕ್ ಕಾಫರನು ಹಾನುಗಲ್ಲನ್ನು ನಿಃಶೇಷಗೊಳಿಸಿದಾಗಲೇ ಬನವಾಸಿಯ ರಾಜಸಂಪತ್ತನ್ನೂ ನಿರ್ಮೂಲಗೊಳಿಸಿರಬೇಕು!

೭

ಮೂರ್ತಿಶಿಲ್ಪದ ಮೂಲ

ಎದುರಿನ ಭಾಗ ಮಾತ್ರ ಇರುವ ವಿಗ್ರಹ ಅರ್ಧ ಚಿತ್ರ; ಇಡಿ ಇರುವದು ಪೂರ್ಣ ಚಿತ್ರ. ವಿಗ್ರಹ ಜೀವಂತವಾಗಿ ತೋರುವದು ಉತ್ತಮ ಕಲೆಗಾರಿಕೆ. ಅದರ ಸುತ್ತ ಕೆಲವೊಮ್ಮೆ ಮಾನವೇತರ ಜೀವಿಗಳ ಚಿತ್ರಪಟ್ಟಿಕೆ ಇರುವುದುಂಟು. ವಿಜಯನಗರ ಕಾಲದ ಕೆತ್ತನೆಯ ಕೆಲಸದಲ್ಲಿ ಮಾತ್ರ ಜೀವಕಳೆ ಕಡಿಮೆಯಂತೆ. ಗೋಡೆಗಳ ಮೇಲಿನ ಚಿತ್ರಗಳನ್ನು ಚಿತ್ರಭಾಸಗಳು ಎನ್ನುತ್ತಾರೆ. ವಿಗ್ರಹವು ಚೂಡಾಮಣಿ, ಮಕರ ಕುಂಡಲ,

---

* ಈ ಶಾಸನವನ್ನು ಸರಿಯಗಿ ಓದಲಾಗುವುದಿಲ್ಲವೆಂದು ಡಾ. ಬಿ. ಆರ್ ಗೋಪಾಲ್ ಹೇಳುತ್ತಾರೆ. ಆದರೆ ಅದನ್ನು ಓದಲು ತಜ್ಞರು ಹೊಸ ಪ್ರಯತ್ನ ಮಾಡಿದರೆ ಡಾ. ಮೋರಿಸ್ಸರ ಮತ ಸುಸ್ಥಿರವಾಗುತ್ತದೆ.

ಹಾರ, ವಲಯ, ಮೇಖಲೆ ನೂಪುರ, ಪದಸಾರಗಳಿಂದ ಲಿಂಗಸಹಜವಾಗಿ ಅಲಂಕೃತವಾಗಿರಬಹುದು.

ವಿಗ್ರಹಗಳ ಬಗೆ ಮೂರು: ಅವ್ಯಕ್ತ (ಸಾಲಿಗ್ರಾಮದಂತೆ ಇಲ್ಲವೆ ಲಿಂಗದಂತೆ). ವ್ಯಕ್ತಾವ್ಯಕ್ತ (ಎಲಿಫಂಟಾಗವಿಯ ತ್ರಿಮೂರ್ತಿ ವಿಗ್ರಹ, ಗುಡಿಮಲ್ಲಲಿಂಗ ಮೊದಲಾದ ಮುಖಲಿಂಗಗಳಂತೆ) ಮತ್ತು ವ್ಯಕ್ತ (ಇಡಿ ಆಕಾರ) ಅಚಲ ಮೂರ್ತಿಗಳು ಧ್ರುವಬೇರಗಳು; ಸುಲಭವಾಗಿ ಎತ್ತಿ ಇಡಬಲ್ಲವು ಚಲವಿಗ್ರಹಗಳು ಮತ್ತು ಎರಡಕ್ಕೂ ನಡುವಿನ ತೂಕ ಉಳ್ಳಂಥವು ಚಲಾಚಲಗಳು ಉತ್ಸವ ಮೂರ್ತಿ ಉತ್ಸವ ಬೇರ, ಬಲಿ ಹಾಕುವಾಗಿನ ಮೂರ್ತಿ ಬಲಿಬೇರ, ಅಭಿಷೇಚ್ಯವು ಸ್ನಾಪನಬೇರ; ಅಚಲ ವಿಗ್ರಹಗಳಲ್ಲಿ ಸ್ಥಾನಕ, ಅಸನ ಮತ್ತು ಶಯನ ಎಂದು ತ್ರಿವಿಧ.

ಚತುರ, ಲಲಿತ, ಕಟಿಸಮ, ಭುಜಂಗತ್ರಸಿತ, ಊರ್ಧ್ವ ಮತ್ತು ತಲಸಂಸ್ಫೋಟಿತ ಎಂಬ ೬ ನೃತ್ಯ ಭಂಗಿಗಳು.

ವಜ್ರ, ಶಕ್ತಿ, ಪಾಶ, ಅಂಕುಶ, ಗದೆ, ತ್ರಿಶೂಲ, ಚಕ್ರ, ಶಂಕ ಮುಂತಾದವು ಆಯುಧಗಳು

ಕಿನ್ನರ, ಯಕ್ಷ, ವಪ, ನಾಗ, ಸಾಧ್ಯ, ಅಸುರ, ಅಪ್ಸರೆ, ಪಿಶಾಚ ಬೇತಾಳ, ಪಿತೃ, ಋಷಿ, ಗಂಧರ್ವ, ಮರುದ್ಗಣಗಳು ಪರಿವಾರಗಳು.

೧ ನೆಯ ರವಿವರ್ಮ ಕದಂಬನ ಕೋರಮಂಗಲ ದತ್ತಿಶಾಸನ

(೪೯೭-೫೩೭)

ಸೂರ್ಯಾಂಶು ದ್ಯುತಿಪರಿಷಿಕ್ತಪಂಕಜಾನಾಂ
ಶೋಭಾಂ ಯುದ್ವಹತಿ ಸದಾಸ್ಯ ಪಾದಪದ್ಮಂ।
ದೇವಾನಾಂ ಮಕುಟಮಣಿಪ್ರಭಾಭಿಷಿಕ್ತಂ
ಸರ್ವಜ್ಞಃ ಸ ಜಯತಿ ಸರ್ವಲೋಕನಾಥಃ॥

....

ಕದಂಬಾಮಲವಂಶಾದ್ರೇರ್ಮೌಳಿತಾಮಾಧಗತೋರವಿಃ॥
ನೃಪಃ ಛಲನಕೀ ವಿಷ್ಣುರ್ದೈತ್ಯಜಿಷ್ಣುರಯಂ ಸ್ವಯಂ।
ಹಿರಣ್ಮಯ ಚಲನ್ಮಾಲಾಂ ತ್ಯಕ್ತ್ವಾ ಚಕ್ರಂ ವಿಭಾವಿತಃ॥
ಸಾಮ್ರಾಜ್ಯೇನಂದಮಾನೋಽಪಿನ ಮಾದ್ಯತಿ ಪರಂತಪಃ।
ಶ್ರೀರೇಷಾಮದಯತ್ಯನ್ಯಾನತಿ ಪೀತೇವ ವಾರುಣೀ॥

*__ನರ್ಮದಾಂತಂ ಮಹೀ__ ಪ್ರೀತ್ಯಾ
ಯಮಾಶ್ರಿತ್ಯಾಭಿನಂದತಿ।
ಕೌಸ್ತುಭಾಭಾರುಣಚ್ಛಾಯಾ ವಕ್ಷೋ
ಲಕ್ಷ್ಮೀರ್ಹರೇ ರಿವ॥
ರೇವಾವಧಿ ಜಯಂತೀಯಂ
ಸುರೇಂದ್ರನಗರೀಂ ಶ್ರಿಯಾ।

---

* ನರ್ಮದೆಯಿಂದ ಶರಾವತಿಯ ಹಾಗೂ ಕಾವೇರಿಯವರೆಗಿನ ನಾಡು ಮೊದಲು "ಕುಂತಳ"ವೆಂದೂ, ಕದಂಬ-ಕಾಕುತ್‌ಸ್ಥವರ್ಮನ ಕಾಲದಲ್ಲಿ "ಕರ್ನಾಟ"ವೆಂದೂ ಪ್ರಸಿದ್ಧವಾಗುತ್ತಬಂತು.

ವೈಜಯಂತೀ ಚಲಚ್ಚಿತ್ರವೈಜಯಂತೀ ವಿರಾಜತೇ॥
ರವೇರ್ಭುಜಾಂ ಗದಾಸೀವ ಚಂದನಪ್ರೀತಮಾನಸಾ।
ತಥಾಶ್ರೀರ್ನಾಭವತ್ ಪ್ರೀತಾ ಮುರಾರೇರಪಿ ವಕ್ಷಸಿ॥
ವಿಶ್ವಾಸುಮತೀ ನಾಥನ್ ನಾಥತೇ ನಯಕೋವಿದಂ।
ದ್ಯೌರಿವೇಂದ್ರಂ ಜ್ವಲದ್ ವಜ್ರದೀಪ್ತಿ ಕೋರಕಿತಾಂಗದಂ।
ಯಸ್ಯ ಮೂರ್ಧ್ನಿ ಸ್ವಯಂ ಲಕ್ಷ್ಮೀ ಹೇಮಕುಂಭೋದರಚ್ಯುತೈಃ॥
ರಾಜ್ಯಾಭಿಷೇಕಮಕರೋದಂಭೋಜಶಬಲೈರ್ಜಲೈಃ॥

ರಘುಣಾಲಂಬಿತಾ **ಮೀಳೀ ಕುಂಡೋ*** ಗಿರಿರಧಾರಯತ್
ರವೇರಾಜ್ಞಾಂ ವಹತ್ಯದ್ಯ ಮಾಲಾಮಿವ ಮಹೀಧರಃ॥
ಧರ್ಮಾರ್ಥಂ ಹರಿದತ್ತೇನ ಸೋಯಂ ವಿಜ್ಞಾಪಿತೋ ನೃಪಃ॥
ಸ್ಮಿತಜ್ಯೋತ್ಸ್ನಾಭಿಷಿಕ್ತೇನ ವಚಸಾ ಪ್ರತ್ಯಭಾಷತ॥
ಚತುಸ್ತ್ರಿಂಶತ್ತಮೇ ಶ್ರೀಮದ್ರಾಜ್ಯವೃದ್ಧಿ ಸಮಾ ಸಮಾ।
ಮಧುರ್ಮಾಸಸ್ತಿಥಿಃ ಪುಣ್ಯಾ ಶುಕ್ಲಪಕ್ಷಶ್ಚ ರೋಹಿಣೀ॥

ಯದಾ ತದಾ ಮಹಾಬಾಹುರಾಸಂದ್ಯಾ ಮಪರಾಜಿತಃ।
sಸಿದ್ಧಾಯತನಪೂಜಾರ್ಥಂ ಸಂಘಸ್ಯಪರಿವೃದ್ಧಯೆ॥
...............ವೇ ಟಿಕಾಟೇ ತ್ರಿನಿವರ್ತನಂ।
ಉಂಭಾದಿ ಪರಿಹರ್ತವ್ಯೇ ಸಮಾಧಿಸಹಿತಂ ಹಿತಂ।
ದತ್ತವಾನ್ ಶ್ರೀಮಹಾರಾಜಃ ಸರ್ವಸಾಮಂತ ಸನ್ನಿಧೌ॥

---

* "ಮೀಳೀ ಕುಂಡ" ವೆಂದು ಡಾ. ಶ್ರೀಕಂಠ ಶಾಸ್ತ್ರಿಗಳು ಹೇಳುತ್ತಾರೆ; ಆದರೆ ವ್ಯಾಕಣಾನುಸಾರವಾಗಿ "ಈಳೀಕುಂಡ"ವೆಂದು ಅದನ್ನು ಬಿಡಿಸಬೇಕಾಗುತ್ತದೆ. ಆ ಹೆಸರಿನ ಗುಡ್ಡವಿನ್ನೂ ಸಂಶೋಧಿಸಲ್ಪಟ್ಟಿಲ್ಲ.

s ಈ ದತ್ತಿಯು ಸಿದ್ಧರ (ಭಿಕ್ಷುಗಳ) ಮಠದ ಪೂಜೆಗಾಗಿ ಸಂಘಕ್ಕೆ (ಬೌದ್ಧ ಸಂಘಕ್ಕೆ) ಕೊಟ್ಟದ್ದು, ಕ್ರಿ.ಶ ೫೫೦ರ ವರೆಗೆ ಬೌದ್ಧ ಭಿಕ್ಷುಗಳು ಬನವಾಸಿಯಲ್ಲಿದ್ದದ್ದಕ್ಕಿದು ಸಾಕ್ಷಿ.

ಪರಿಶಿಷ್ಟ : ೧

ಬನವಾಸಿಯ ಪ್ರಾಚೀನೇತಿಹಾಸ

ಕ್ರಿ.ಶ ೩ನೆಯ ಶತಮಾನದ ಮಧ್ಯಭಾಗದಲ್ಲಿ ಬಳ್ಳಾರಿ ಮೂಲದ ಆಂಧ್ರ (ಶಾಲಿವಾಹನರ ಅಥವಾ ಶಾತವಾಹನರ) ಚಕ್ರಾಧಿಪತ್ಯವು ದಕ್ಷಿಣಪಥದಲ್ಲಿ ಒಡೆದು ಹೋದಮೇಲೆ ಅದರ ವಿವಿಧ ಭಾಗಗಳಿಗೆ ಶಾಲಿವಾಹನರ ಸಾಮಂತರಾಗಿದ್ದ ಇಕ್ಷ್ವಾಕುಗಳು, ಚುಟುಗಳು, ಪಲ್ಲವರು ಮತ್ತು ಕದಂಬರು ಉತ್ತರಾಧಿಕಾರಿಗಳಾದರೆಂಬುದು ಪ್ರಸಿದ್ಧ. ಶಾಲಿವಾಹನರು ಅಶೋಕ ಚಕ್ರವರ್ತಿಯ ಸಾಮ್ರಾಜ್ಯ ಒಡೆದು ಹೋಗುವವರೆಗೆ ಅವನ ಸಾಮಂತರಾಗಿದ್ದರು. ಕ್ರಿ.ಶ ೨೮೦ರವರೆಗೆ ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದವರು ಚುಟುಗಳು. ಅನಂತರ ಅವರ ಸ್ಥಾನವನ್ನು ಕದಂಬರ ಮಯೂರಶರ್ಮ ಚಕ್ರವರ್ತಿಯು ಆಕ್ರಮಿಸಿದನು. ಅವನ ಹಾಗೂ ಅವನ ವಂಶಜರ ಆಳಿಕೆ ಕ್ರಿ.ಶ ೬೫೫ರವರೆಗೆ. ಅನಂತರ ಚಾಲುಕ್ಯರು, ರಾಷ್ಟ್ರಕೂಟರು, ಚಾಲುಕ್ಯರು, ಯಾದವಸೇವುಣರು ಚಕ್ರವರ್ತಿಗಳಾದರು. ಅವರು ಬನವಾಸಿಪ್ರದೇಶವನ್ನು “ಬನವಾಸಿಯ ಕದಂಬರು” ಎಂಬ ಗ್ರಂಥದಲ್ಲಿ ಹೇಳಿದಂತೆ ವಿವಿಧ ರಾಜಪ್ರತಿನಿಧಿ ರಾಜ್ಯಪಾಲರ ಮೂಲಕ ಆಳಿದರು. ಕ್ರಿ.ಶ ೮೫೫ರಿಂದ ೯೬೭ರವರೆಗೆ ಕದಂಬ ಕುಲದವರೇ ರಾಜ್ಯಪಾಲರಾದರು. ೯೬೭ರಿಂದ ೧೩೪೭ರವರೆಗೆ ಕದಂಬ ಮಹಾಮಂಡಲೇಶ್ವರರು ಆನುವಂಶಿಕ ಸಾಮಂತರಾಗಿ ಹಾನುಗಲ್ಲುರಾಜಧಾನಿಯಿಂದ ಧಾರವಾಡ ಜಿಲ್ಲೆಯ ಭಾಗವನ್ನೊಳಗೊಂಡ, ಶಿವಮೊಗ್ಗ ಜಿಲ್ಲೆಯ ಭಾಗವನ್ನೊಳಗೊಂಡ, ಬನವಾಸಿ ೧೨೦೦೦ವನ್ನೂ, ಹಾನುಗಲ್ಲು ೫೦೦ನ್ನು, ಉತ್ತರ–ದಕ್ಷಿಣ ಕನ್ನಡ ಜಿಲ್ಲೆಗಳ (ಗಟ್ಟದ ಕೆಳಗಿನ) ಕನ್ನಡಭಾಗವಾಗಿದ್ದ ಹೈವ ೫೦೦ನ್ನೂ ಆಳಿದರು. ೧೩೪೫ರ ಬಳಿಕ ಕದಂಬರಿಗೂ ಬನವಾಸಿಗೂ ಇರುವ ಸಂಬಂಧ ಕಣ್ಮರೆಯಾಯ್ತು. ವಿಜಯನಗರದ ಚಕ್ರವರ್ತಿಗಳು ತಮ್ಮ ಚಕ್ರಾಧಿಪತ್ಯವನ್ನು ಬೆಳೆಯಿಸಿ, ಬೇರೆ ಬೇರೆ ರಾಜ್ಯಗಳನ್ನಾಗಿ ವಿಂಗಡಿಸಿ ರಾಜ ಪ್ರತಿನಿಧಿಗಳನ್ನೂ, ಮಹಾ ಮಂತ್ರಿಗಳನ್ನೂ, ದಣ್ಣಾಯಕ (ದಂಡನಾಥ)ರನ್ನೂ, ರಾಜ್ಯಪಾಲರನ್ನಾಗಿ ಮಾಡಿ ಅವುಗಳ ಆಡಳಿತವನ್ನು ನೋಡಿಕೊಂಡರು. ಆಗ ಕೆಳದಿ (ಇಕ್ಕೇರಿ, ಬಿದನೂರು) ಸಂಸ್ಥಾನ, ಸೋದೆಯ

ಸಂಸ್ಥಾನ. ಬಿಳಗಿಯ ಸಂಸ್ಥಾನ ಮತ್ತು ಗೇರುಸೊಪ್ಪೆ (ನಗರ) ಹಾಡುವಳ್ಳಿ ಸಂಸ್ಥಾನಗಳು ಉದಯಿಸಿ ಸಾಮಂತಿಕೆಯನ್ನು ದಕ್ಷಿಣೋತ್ತರ–ಕನ್ನಡ ಜಿಲ್ಲೆಗಳಲ್ಲಿ ನಡೆಯಿಸಿದವು. ಈ ಎಲ್ಲ ಸಾಮಂತ, ಅನಂತರ ಸ್ವತಂತ್ರ ಎನ್ನಿಸಿದ ಸಂಸ್ಥಾನಗಳೆಲ್ಲವೂ ೧೭೬೩ರಲ್ಲಿ ಹೈದರಲಿಯ ವಶವಾದವು. ಹೈದರು ಟಿಪ್ಪುಗಳು ಇವುಗಳನ್ನು ತಾವೇ ಸ್ವತಃ ೧೮೦೦ರ ವರೆಗೆ (ಒಬ್ಬರಾದಮೇಲೊಬ್ಬರು) ಆಳಿದರು. ಅಲ್ಲಿಂದ ಮುಂದೆ ೧೯೪೭ರ ವರೆಗೆ ಬ್ರಿಟಿಷ್ ರಾಜ್ಯಭಾರ, ಹೆಚ್ಚು ಸಂಶೋಧನೆಗೆ ಒಳಪಡಬೇಕಾದ ವಿಜಯನಗರದ ರಾಜ್ಯಪಾಲಾದಿಗಳ ಹೆಸರುಗಳನ್ನು ಮುಂದೆ ಕೊಡಲಾಗಿದೆ.

ಉಉಉಉ

ಪರಿಶಿಷ್ಟ : ೨

ಸೋದೆ–ಬನವಾಸಿ ಪ್ರದೇಶವನ್ನಾಳಿದ ವಿಜಯನಗರದ ರಾಜ್ಯಪಾಲರು

ಮತ್ತು

ಅವರ ಉಪಾಧಿಕಾರಿಗಳು

೧. ೧೩೪೭–೧೩೬೯ : ಮಾರಪ್ಪ ಒಡೆಯ ಮತ್ತು ಮಾಧವ ಮಂತ್ರಿ

೨. ೧೩೬೯–೧೩೭೭ : ಸೋಮಣ್ಣ ಒಡೆಯ ಮತ್ತು ಹರಿಯಪ್ಪ ಒಡೆಯ

೩. ೧೩೭೭–೧೩೮೧ : ೧ನೆಯ ವಿರೂಪಾಕ್ಷರಾಯ

೪. ೧೩೮೧–೧೩೯೦ : ಚಿಕ್ಕರಾಯ ಮತ್ತು ವೀರ ವಸಂತರಾಯ

೫. ೧೩೯೦–೧೪೦೨ : ೧ನೆಯ ಮಲ್ಲಪ್ಪ ಒಡೆಯ

೬. ೧೪೦೨–೧೪೦೯ : ಭಾಸ್ಕರ ಒಡೆಯ ಮತ್ತು ವಿಟ್ಟಣ್ಣ ಒಡೆಯ

೭. ೧೪೦೯–೧೪೧೯ : ವೀರಣ್ಣ ಒಡೆಯ ಮತ್ತು ವಿರೂಪಾಕ್ಷ ದಣ್ಣಾಯಕ
ದಣ್ಣಾಯಕನ ಅಧಿಕಾರಾವಧಿ ೧೪೧೭–೧೪೧೯

೮. ೧೪೧೯–೧೪೨೧ : ಮಲ್ಲಪ್ಪ ಒಡೆಯ ಸಿರಿಗಿರಿನಾಥ ಒಡೆಯ
ಸಿರಿಗಿರಿನಾಥ ಅಧಿಕಾರಾವಧಿ ೧೪೨೧

೯. ೧೪೨೧–೧೪೨೪ : ತ್ರ್ಯಂಬಕ ಒಡೆಯ

೧೦. ೧೪೨೪–೧೪೩೧ : ರಾಯಣ್ಣ ಒಡೆಯ

೧೧. ೧೪೩೧–೧೪೩೩ : ಸಿರಿಗಿರಿನಾಥ ಒಡೆಯ

೧೨. ೧೪೩೩–೧೪೪೮ : ಇರುಗಪ್ಪ ಒಡೆಯ

೧೩. ೧೪೪೮–೧೪೪೯ : ಮಲ್ಲರಸ ಒಡೆಯ

೧೪. ೧೪೪೯–೧೪೫೦ : ಬೈಚಣ್ಣ ಒಡೆಯ

೧೫. ೧೪೫೦–೧೪೬೬ : ಸಿರಿಗಿರಿನಾಥ ಒಡೆಯ

೧೬. ೧೪೬೬–೧೪೬೭ : ದೇವಪ್ಪ ದಣ್ಣಾಯಕ

೧೭. ೧೪೬೭–೧೪೮೮ : ಬೈಚಣ್ಣ ಒಡೆಯ

೧೮. ೧೪೮೮–೧೪೯೪: ೨ನೆಯ ಸಾಳುವ ದೇವರಾಯ ಭೈರವ ದೇವ

೧೯. ೧೪೯೪–೧೫೨೦ : ೧ನೆಯ ದೇವರಸ (ಸಾಳುವ)

೨೦. ೧೫೨೦–೧೫೩೦ : ೨ನೆಯ ದೇವರಸ (ಸಾಳುವ)

೨೧. ೧೫೩೦–೧೫೪೯ : ಕೃಷ್ಣದೇವರಸ (ಸಾಳುವ)

೨೨. ೧೫೪೯–೧೫೫೫ : ಕೆಳದಿಯ (ಇಮ್ಮಡಿ) ಸದಾಶಿವರಾಯ

೨೩. ೧೫೫೫–೧೫೯೮ : ಸೋದೆಯ (ಇಮ್ಮಡಿ) ಅರಸಪ್ಪನಾಯಕ

೨೪. ೧೫೯೮–೧೬೧೮ : ಸೋದೆಯ ರಾಮಚಂದ್ರನಾಯಕ

೨೫. ೧೬೧೮–೧೬೩೮ : ಸೋದೆಯ ರಘುನಾಥನಾಯಕ

೨೬. ೧೬೩೮–೧೬೭೪ : ಸೋದೆಯ ಮಧುಲಿಂಗನಾಯಕ

೨೭. ೧೬೭೪–೧೬೯೭ : ಸೋದೆಯ ೧ನೆಯ ಸದಾಶಿವರಾಯ

೨೮. ೧೬೭೭–೧೭೪೫ : ಸೋದೆಯ ಬಸವಲಿಂಗನಾಯಕ

೨೯. ೧೭೪೫–೧೭೬೩ : ಸೋದೆಯ ೨ನೆಯ ಸದಾಶಿವರಾಯ

ಬಬಬಬ

ಪರಿಶಿಷ್ಟ : ೩
ಬನವಾಸಿಯ ಕೆಲ ಶಾಸನಗಳು

(ದಕ್ಷಿಣ ಭಾರತದ ಶಾಸನಗಳ ಪುರವಣಿಗೆಯ ಅನುಕ್ರಮ ಸಂಖ್ಯೆಗಳನ್ನಿಲ್ಲಿ ಕೊಡಲಾಗಿದೆ; ಪ್ರಕಟನದ ಇಸವಿ (೧೯೨೭)

೧. ೧೧೭ : ಸೋದೆಯ ದೊರೆ ರಘುನಾಥನಾಯಕನು ಮಧುಕೇಶ್ವರ ದೇವರಿಗಿತ್ತ ಕಲಾಮಯ ಕಲ್ಲುಮಂಚದ ಮೇಲೆ ಕೊರೆಯಿಸಿದ ಶಾಸನ; ಇಸವಿ ೧೬೨೮.

೨. ೧೧೮: ಚಾಲುಕ್ಯ ಭೂಲೋಕಮಲ್ಲನ (೩ನೆಯ ಸೋಮೇಶ್ವರನ) ಕಾಲದ (೧೧೨೭–೧೧೩೬) ಕದಂಬ ಮಹಾಮಂಡಲೇಶ್ವರನನ್ನು (ಹಾನುಗಲ್ಲಿಂದ ಆಳುತ್ತಿದ್ದ ೨ನೆಯ ತೈಲಪ ಕದಂಬನನ್ನು) ಸೂಚಿಸುವ ಶಾಸನ.

೩. ೧೧೯: ವಿಜಯನಗರದ ೨ನೆಯ ದೇವರಾಯನ ಕಾಲದ (೧೪೨೪–೧೪೪೭) ಶಾಸನ; ಅದರ ಇಸವಿ ೧೪೩೨ ಅದರಲ್ಲಿ ತ್ರಿಭುವನ ಭರತಾಚಾರ್ಯನೆಂಬ ಬಿರುದಿನಿಂದ ಬನವಾಸಿಯ ಬಿಕ್ಕಿದೇವ ಒಡೆಯನ ಮಗನಾದ ಮಲ್ಲಣ್ಣಯ್ಯನು ಬನವಾಸಿ ಪ್ರದೇಶವನ್ನೂ ಮಹಾಪ್ರಧಾನ ಬಯಿಚೆ ದಣ್ಣನಾಯಕನು ಗೋವೆ–ಗುತ್ತಿವೇಂಠೆ ಪ್ರದೇಶವನ್ನೂ ಆಡಳಿತಾಧಿಕಾರಿಗಳಾಗಿ ನೋಡಿಕೊಳ್ಳುತ್ತಿದ್ದುದರ ಉಲ್ಲೇಖವಿದೆ. ಆಗ ರಾಯಣ್ಣನ ಮಗ ಮಲ್ಲಣ್ಣನು ಮಧುಕೇಶ್ವರ ದೇವಾಲಯವನ್ನು ಹೊಕ್ಕ ಕಳ್ಳರೊಡನೆ ಹೋರಾಡಿ ಮಡಿದಾಗ ಅವನಿಗೆ ಅವನ ಕುಟುಂಬಕ್ಕೆ ಭೂದಾನಮಾಡಲಾಯ್ತು.

೪. ೧೨೦: ಮಧುಕೇಶ್ವರ ದೇವಾಲಯದ ಪ್ರಾಕಾರದೊಳಗಿನ ನರಸಿಂಹ ಮಂದಿರದ ಹಿಂದಿದ್ದ ಶಾಸನ: ಇಸವಿ ೧೫೫೨. ಅದರಲ್ಲಿ ವಿಜಯನಗರದ ಸದಾಶಿವ ದೇವಮಹಾರಾಯನ ಕಾಲದಲ್ಲಿ (೧೫೪೨–೧೫೬೫)

ಮಹಾಮಂಡಲೇಶ್ವರರಾದ ವೆಂಕಟಾದ್ರಿರಾಜು ಮತ್ತು ತಿರುಮಲರಾಜರು (೧೫೬೫–೧೫೭೨) ಚಂದ್ರಗುಪ್ತಿದುರ್ಗದಿಂದ ಆಳುತ್ತಿದ್ದರೆಂದೂ ಅವರು ಅರವೀಟಿಕುಟುಂಬದ ಶ್ರೀರಂಗರಾಜನ ಮಕ್ಕಳೆಂದೂ ಅವರ ಊಳಿಗದ ಪದುಮಪ್ಪನು ಪಾರ್ವತಿ ಮತ್ತು ನರಸಿಂಹರ ಮಂದಿರಗಳಿಗೆ ಕಲ್ಲು–ಕಟ್ಟಡಗಳನ್ನು ಜೋಡಿಸಿದರೆಂದೂ ಉಲ್ಲೇಖಿಸಲಾಗಿದೆ.

೫. ೧೨೧: ಪ್ರಾಕಾರದ ಪಡುವಣ ಗೋಡೆಯಲ್ಲಿದ್ದ ೧೫೭೨ನೆಯ ಇಸವಿಯ ಶಾಸನದಲ್ಲಿ ವಿಜಯನಗರ ಚಕ್ರವರ್ತಿಯ ಮಹಾಮಂಡಲೇಶ್ವರ ರಾಮರಾಜಯ್ಯ–ವೆಂಕಟಾದ್ರಿ ರಾಜಯ್ಯ ದೇವನ ಮಗನಾದ ರಂಗಪ್ಪರಾಜಯ್ಯನ ಆಜ್ಞಾನುಸಾರವಾಗಿ ಕೌಶಿಕಗೋತ್ರದ ಆಪಸ್ತಂಬ ಶಾಖೆಯ ಸೋದೆಯ ದೊರೆ ಇಮ್ಮಡಿ ಅರಸಪ್ಪ ನಾಯಕನ ರಾಣಿಯಾದ ಅರಸಾದೇವಿ ಅಮ್ಮನವರು ಅವರ ಮಗ ರಾಮಚಂದ್ರನಾಯಕನೂ ನರಸಿಂಹ ದೇವರ ಪೂಜೆಗಾಗಿ ಭೂದಾನ ಮಾಡಿದ್ದನ್ನು ಹೇಳಲಾಗಿದೆ.

೬.೧೨೨: ಪ್ರಾಕಾರದ ಪಡುವಣ ಮೂಲೆಯಲ್ಲಿ ಪದ್ಮನಾಯಕನನ್ನೂ ಭೂದಾನವನ್ನೂ ಉಲ್ಲೇಖಿಸಿದ ಶಾಸನವಿದೆ.

೭.೧೨೩: ಎದುರಿಂದ ಒಳಹೊಕ್ಕಾಗ ಪ್ರಾಕಾರದಲ್ಲಿ ಬಲಗಡೆ ವಿಷ್ಣು ಸ್ಕಂದ ಚುಟುವಿನ ಮಗಳಾದ ಶಿವಸ್ಕಂದ ನಾಗಶ್ರೀ ಕೊಟ್ಟ, ಬ್ರಾಹ್ಮಿಶಾಸನವುಳ್ಳ, (೨೦೦ ರ) ಪಂಚಮುಖ ನಾಗರ ಕಲ್ಲಿದೆ. ಅವಳದನ್ನು ಮಂತ್ರಿ ಸ್ಕಂದಸ್ವಾತಿಯ ಮೂಲಕ ಮಾಡಿಸಿದಳು. ಸಂಜಯಂತೀ ನಿವಾಸಿ ಇದೆ ಮೋರಕನ ಶಿಷ್ಯ–ನಟಕ ಅದರ ಶಿಲ್ಪಿ.

೮. ೧೨೪: ಮಧುಕೇಶ್ವರ ಮತ್ತು ಪಾರ್ವತೀ ದೇವಿಯರ ಗುಡಿಗಳ ನಡುವೆ ೧೫೫೮–೯ರಲ್ಲಿ ಮಹಾಪ್ರಭು ಇಮ್ಮಡಿ ಅರಸಪ್ಪ ನಾಯಕ (ಸೋದೆ) ಮಾಡಿದ ಭೂದಾನ ಶಾಸನವಿದೆ.

೯. ೧೨೫: ಪಾರ್ವತೀ ದೇವಿಯ ಗುಡಿಯಲ್ಲಿಯ ಕಂಬದಲ್ಲಿ ಸೋದೆಯ ೧ನೆಯ ಸದಾಶಿವ ರಾಜೇಂದ್ರ ಕಟ್ಟಿಸಿದ ಕಲ್ಲು ಮಂಟಪದ ಉಲ್ಲೇಖವಿದೆ. ಅವನ ಆಳಿಕೆ ೧೬೭೪ ರಿಂದ ೧೬೯೭ರ ವರೆಗೆ. ಪಟ್ಟಕ್ಕೇರುವ ಮೊದಲು ೧೬೦೦ರಲ್ಲಿ ಅವನು ಆ ಮಂಟಪವನ್ನು ಮಾಡಿಸಿದ್ದು.

೧೦. ೧೨೬: ಮಧುಕೇಶ್ವರ ದೇವಾಲಯದ ಕಂಬದಲ್ಲಿಯ ಶಾಸನವು ಬಿಕ್ಕಿ ದೇವನು ಲಕುಲೇಶ್ವರ ದೇವನ ಶಿಷ್ಯನೆಂದೂ ಅವನು ಮಧುಕನಾಥ ದೇವನಿಗೆ ಭೂದಾನ ಮಾಡಿದನೆಂದೂ ಹೇಳಿದೆ.

೧೧. ೧೨೭: ಆ ದೇವಾಲಯದ ಕಂಬದ ಮೂರು ಮೈಗಳಲ್ಲಿ ವಿಜಯನಗರದ ಹರಿಹರ (೧೩೭೬–೧೪೦೪) ಬುಕ್ಕರಾಯನ ಮಗನೆಂದೂ ಮಾಧವಾ ವ್ಯಾಸನು ೧೩೮೭ರಲ್ಲಿ ಆಳುತ್ತಿದ್ದನೆಂದೂ ಶಾಸನೋಲ್ಲೇಖವಿದೆ. ಅವನ ಗೋವಾ ರಾಜ್ಯಪಾಲನು ದೇವಸ್ಥಾನಕ್ಕೆ ದಾನ ಮಾಡಿದ್ದು ಅದರಲ್ಲಿ ಮುಖ್ಯ.

೧೨. ೧೨೮: ಅದರ ಒಂದು ಕಂಬದಲ್ಲಿ ಕನ್ನಡ, ನಾಗರಿ ಮತ್ತು ತಮಿಳು ಲಿಪಿಗಳಲ್ಲಿ ಪಂಡಿತಾರಾಧ್ಯನ ಶಿಷ್ಯನಾದ ವಿಭೂತಿ ಗೌರಯ್ಯನ ಬರೆಹವಿದೆ

೧೩. ೧೨೯: ವೀರಭದ್ರ ದೇವಾಲಯದ ಎಡಕ್ಕೆ ೧೦೬೮ರಲ್ಲಿ ಬರೆಯಿಸಿದ ಶಾಸನವು ಕದಂಬ ಕೀರ್ತಿವರ್ಮ ದೇವನು ಬನವಾಸಿ ಪನ್ನಿರ್ಛಾಸಿರ (೧೨೦೦೦) ವನ್ನು ಆಳುತ್ತಿದ್ದನೆಂದು ಹೇಳುತ್ತದೆ. ಕಲ್ಲದೇಗುಲಕ್ಕೆ ಅವನು ದಾನಕೊಟ್ಟನು. ಅವನ ಮೇಲ್ದೊರೆ ಚಾಲುಕ್ಯರ ೧ನೆಯ ತ್ರೈಲೋಕ್ಯಮಲ್ಲ ಸೋಮೇಶ್ವರ. ಅಲ್ಲಿಯ ಇನ್ನೊಂದು ಶಾಸನವು ಕೀರ್ತಿವರ್ಮನು ೬ನೆಯ ಚಾಲುಕ್ಯ ವಿಕ್ರಮನ ಸಾಮಂತನೆಂದಿದೆ.

೧೪. ೧೩೦: ಅದೇ ಸ್ಥಳದಲ್ಲಿರುವ ಇನ್ನೊಂದು ಕಲ್ಲು ಹಲಗೆಯಲ್ಲಿ ೧೩೬೮ರ ಶಾಸನವೊಂದು ವಿಜಯನಗರದ ವೀರ ಬುಕ್ಕರಾಯನ ಕಾಲದಲ್ಲಿ (೧೩೫೫–೧೩೭೬) ಮಹಾಪ್ರಭು ಮಾಧವಾಂಕನು ಬನವಾಸಿ ಪನ್ನಿರ್ಛಾಸಿರ ಪ್ರಾಂತವನ್ನು ಆಳುತ್ತಿದ್ದನೆಂದೂ ವೀರೇಶ್ವರ ದೇವರ ಪೂಜೆಗಾಗಿ ನಾಗರಸನು ಲಕುಲೇಶ್ವರ ದೇವ ಒಡೆಯನ ಶಿಷ್ಯನಾದ ಬಿಕ್ಕಿದೇವ ಒಡೆಯನು ಧನದಾನ ಮಾಡಿದನೆಂದೂ ಹೇಳಿದೆ. ರಟ್ಟಕಲ್ಲಿನ ಪ್ರಭು ಶಿವದೇವನ ಶಿಷ್ಯನಾದ ನಾಗಪ್ಪನು ವೀರಭದ್ರ ಮೂರ್ತಿಯನ್ನು ಸ್ಥಾಪಿಸಿ ೧೩೬೯ರಲ್ಲಿ ಆ ದೇವರ ಪೂಜೆಗಾಗಿ ಗ್ರಾಮದಾನ–ಧನದಾನಗಳನ್ನು ಕದಂಬ ಕುಲಾಚಾರ್ಯ ಲಕುಲೇಶ್ವರ ದೇವ ಒಡೆಯನ ಮಗ ಬಿಕ್ಕಿದೇವ ಒಡೆಯನಿಗೆ ಮಾಡಿದ ಕಲ್ಬರಹ ಅಲ್ಲೆ ಇದೆ.

೧೫. ೧೩೧: ಹಾನುಗಲ್ಲಿನ ರಾಜಧಾನಿಯಿಂದ ಬನವಾಸಿ ಪನ್ನಿರ್ಛಾಸಿರವನ್ನು ಆಳುತ್ತಿದ್ದ ಕೀರ್ತಿದೇವ ಕದಂಬನ (೧೧೫೧–೧೧೮೦) ಶಾಸನ ಅದೇ ಸ್ಥಳದ ೩ನೆಯ ಕಲ್ಲು ಹಲಗೆಯಲ್ಲಿದೆ.

೧೬. ೧೩೨: ವೀರಭದ್ರ ದೇವರ ಗುಡಿಯಲ್ಲಿಯ ೧೬೦೦ರ ಶಾಸನವೊಂದು ಸೋದೆಯ ೧ನೆಯ ಸದಾಶಿವ ರಾಜೇಂದ್ರನು (೧೬೭೪–೧೬೯೭) ಪಟ್ಟಕ್ಕೇರುವ ಮೊದಲು ಬನವಾಸಿ ನಗರವನ್ನು ಕನಕಾವತಿಯೆಂದು ಕರೆದುದನ್ನು ಹೇಳುತ್ತದೆ. ಮತ್ತು ಅಲ್ಲೊಂದು ಕಂಬ ನೆಡಿಸಿದ್ದು ಸದಾಶಿವ ರಾಜಪುತ್ರನ ಸೇವೆ ಎಂದು ಅದು ಉಲ್ಲೇಖಿಸುತ್ತದೆ.

೧೭. ೧೩೩:ಮಧುಕೇಶ್ವರ ದೇವಾಲಯದ ಇನ್ನೊಂದು ಬದಿಯ ಗೋಡೆಯಲ್ಲಿ ಭೂತನಾಥ ಯೋಗೇಶ್ವರ ಒಡೆಯ, ಸದಾಶಿವ ಒಡೆಯ, ಹಿರೇಸರ್ವೇಶ್ವರ ಒಡೆಯ ಮತ್ತು ಚೆನ್ನಪ ಒಡೆಯರ ಹೆಸರುಗಳನ್ನು ಕೆತ್ತಿಸಲಾಗಿದೆ.

೧೮–೨೫. ೧೩೪ರಿಂದ ೧೪೧ರವರೆಗೆ: ಆ ಗೋಡೆಯಲ್ಲಿ ಬನವಾಸೆ ಸ್ಥಳದ ಹಲವಾರು ಒಡೆಯರ ಹೆಸರುಗಳನ್ನು ಕೆತ್ತಿಸಲಾಗಿದೆ.

೨೬. ೧೪೨: ತಿರುಮಲೇಶ್ವರದ ದೇವಾಲಯದ (ಗೋಪಿನಾಥನ ಗುಡಿಯ) ಕಂಬದಲ್ಲಿ ಚಂದ್ರಗುಪ್ತಿ ಪ್ರಾಂತರಾಜ್ಯದ ೧೮ ಕಂಪಣಗಳ ಗವುಡರೂ ಪ್ರಜೆಗಳೂ ಬನವಾಸೆಯಲ್ಲಿ ಸಭೆಸೇರಿ ನಂದಾವುರದ ಚವುಡರಸನ ಮಗ ಅವುಭಳನಾಥನ ಆಜ್ಞೆಯ ಪ್ರಕಾರ ಬಿಕ್ಕಿದೇವ ಅಯ್ಯನಿಗೆ ಭೂದಾನ ಮಾಡಿದರೆಂಬ ಶಾಸನವಿದೆ. ಬಿಕ್ಕಿದೇವನು ಲಕುಲೇಶ್ವರ ದೇವನ ಶಿಷ್ಯ. ಅಹೋಬಲನಾಥನು ತಿರುಮಲೇಶ್ವರ ದೇವಾಲಯುವನ್ನು ರಿಪೇರಿ ಮಾಡಿಸಿದನು. ಅವನು ಮಾಧವ ದಂಡನಾಥನ ಸೇವಕ. ಭೂದಾನ ಮಾಡಿದ್ದು ತಿರುಮಲೇಶ್ವರನ (ಹಿಂದಿನ ಗೋಪಿನಾಥನ) ಆರಾಧನೆಗಾಗಿ. ಮಾಧವ ದಂಡನಾಥನು ಬನವಾಸಿ ಪನ್ನಿರ್ಛಾಸಿರದ ರಾಜ್ಯಪಾಲ (೧೩೬೮) ಅವನ ಚಕ್ರವರ್ತಿ ಹಸ್ತಿನಾವತಿಯಿಂದ ಆಳುತ್ತಿದ್ದ ವೀರ ಬುಕ್ಕರಾಯ (೧೩೫೫–೧೩೭೬)

೨೭. ೧೪೩:ಬನವಾಸಿಯ ಬಸದಿಯಲ್ಲಿ ದೇಸಿಗಣದ, ಪುಸ್ತಕ ಗಚ್ಛದ, ಕೊಂಡಕುಂದಾನ್ವಯದ, ಸಕಲಚಂದ್ರ ಭಟ್ಟಾರಕರ ಶಿಷ್ಯೆಯಾದ ಭೋಗವ್ವೆಯ ಸಮಾಧಿಯ ಕಲ್ಬರೆಹವಿದೆ. ಅವಳು ತಿಪ್ಪಿಸೆಟ್ಟಿ ಸಾಂತಯ್ಯನ ಹೆಂಡತಿ. ಆ ಕಾಲ ಕದಂಬ ಚಕ್ರವರ್ತಿ ವೀರಮನ ಆಳಿಕೆಯ ೧೨ನೆಯ ವರ್ಷ, ದುರ್ಮತಿ ಸಂವತ್ಸರ. ೧೦೮೮ನೆಯ ಇಸವಿ. ಭೋಗವ್ವೆ ಸಮಾಧಿ ಹೊಂದಿದ್ದು ೧೦೮೧ರಲ್ಲಿ ಅದು ಕೀರ್ತಿ ವರ್ಮನ ಸಾಮಂತಿಕೆಯ ಕಾಲ. ವೀರಮ ಅಥವಾ 'ವೀರ ವಿಕ್ರಮ' ಅವನ ಬಿರುದು.

೨೮.೧೪೪: ಬಸದಿಯಲ್ಲಿ ಮುರಿದೊರಗಿದ ಕಲ್ಲಿನ ಇನ್ನೊಂದು ಶಾಸನ ೧೧೧೫ ರದ್ದು, ಕೀರ್ತಿವರ್ಮ ಕದಂಬನ ಸಾಮಂತಿಕೆ ೧೦೭೫ರಿಂದ ೧೧೧೭ರ ವರೆಗೆ ಕಾವದೇವನ ಹೆಸರು ತಿರುಮಲ ದೇವರ ಗುಡಿಯ ಮುರುಕು ಕಲ್ಲೊಂದರಲ್ಲಿ ಬಂದುದಾದರೂ ಅವನ ಬಿರುದಾಗಿಯೇ.

೨೯. ೧೪೫: ಇನ್ನೊಂದು ಕಲ್ಲು ಹಲಗೆ ಅಲ್ಲಿ ಮರಕವೆ ೧೦೭೭ರಲ್ಲಿ ಸಮಾಧಿ ಹೊಂದಿದ್ದನ್ನು ಹೇಳುತ್ತದೆ. ಅದು ಬನವಾಸಿಯ ಕೀರ್ತಿವರ್ಮ ಕದಂಬನ ಸಾಮಂತಿಕೆಯ ಕಾಲ.

೩೦. ೧೪೬: ಮತ್ತೊಂದು ಕಲ್ಲು ಹಲಗೆ ಈಶ್ವರ ಸಂವತ್ಸರದ ವೈಶಾಖ ಮಾಸದಲ್ಲಿ ಬೊಪ್ಪಗಾವುಂಡನ ಮಗ ಕಾಳಗಾವುಂಡನ ಮರಣವನ್ನು ಉಲ್ಲೇಖಿಸಿದೆ. ಅಂದಿನ ಮೇಲ್ದೊರೆ ದೇವಗಿರಿಯ ಸೇವುಣ ಯಾದವರಲ್ಲಿ ಒಬ್ಬನೆಂದು ಹೇಳಲಾಗಿದೆ. ಅಂದು ಹಾನುಗಲ್ಲಿನಿಂದ ಬನವಾಸಿ ಪನ್ನಿರ್ಛಾಸಿರವನ್ನು ಅವರ ಸಾಮಂತರಾಗಿ ಅಥವಾ ಸಹಕಾರಿಗಳಾಗಿ ಕದಂಬ ಕುಲದವರು ಆಳುತ್ತಿದ್ದರು.

ಪರಿಶಿಷ್ಟ : ೪

ಬನವಾಸಿ (ಜಯಂತಿ) ಕ್ಷೇತ್ರ ಮಹಾತ್ಮೆ

ಪೂರ್ವಕಾಲದಲ್ಲಿ ತಪೋನಿಷ್ಠರೂ ವೈರಾಗ್ಯ ಚಕ್ರವರ್ತಿಗಳೂ ಆದ ವಸಿಷ್ಠ, ಆಂಗೀರಸ ಮೊದಲಾದ ಋಷಿಗಳು ಮೋಕ್ಷ ಸಾಧನೆ ಗೈಯಲು ಸುಲಭವಾದ ಉಪಾಯದ ಬಗ್ಗೆ ಚರ್ಚಿಸುತ್ತಿದ್ದರು. ಶಿವ ಭಕ್ತಿ ಪರಾಯಣರಾದ ಸೂತಪೂರಾಣಿಕರು ಆ ವೇಳೆಯಲ್ಲಿ ಅಲ್ಲಿಗೆ ಚಿತ್ತೈಸಿ, ಚರ್ಚೆಯಲ್ಲಿ ಭಾಗ ವಹಿಸಿದರು. ಅವರು ಶಿವಕ್ಷೇತ್ರದಲ್ಲಿ ವಾಸವಾಗಿದ್ದು, ಸಕಲ ಲೋಕಗಳಿಗೂ ಮಂಗಳವನ್ನುಂಟು ಮಾಡುವ ಶಂಕರನನ್ನು ಭಕ್ತಿಯಿಂದ ಆರಾಧಿಸಿದರೆ, ಈ ಲೋಕದಲ್ಲಿ ಸತ್ಯವಂತನೂ, ಸುಖಿಯೂ ಆಗಿ ಬಾಳಿ, ಮೋಕ್ಷವನ್ನು ನಿಶ್ಚಿತವಾಗಿಯೂ ಪಡೆಯಬಹುದೆಂದು ಎಲ್ಲರಿಗೂ ತಿಳಿಸಿದರು. ಅಂಥ ಕ್ಷೇತ್ರ ಯಾವುದೆಂದು ಪ್ರಶ್ನಿಸಲಾಗಿ, ಫಲಪುಷ್ಪಗಳಿಂದ ತುಂಬಿರುವ ವೃಕ್ಷಗಳು, ನೀತಿವಂತರೂ, ಸುಸಂಪನ್ನರೂ ಆದ ಜನರು ಶಾಂತವಾಗಿ ಹರಿಯುವ ವರದಾ ನದಿಯಿರುವ ಜಯಂತಿ ಕ್ಷೇತ್ರವು ಅತಿ ಯೋಗ್ಯವಾಗಿದೆಯೆಂದು ಹೇಳಿದರು.

ಶಂಕರನು ಕೈಲಾಸದಿಂದ ಆಗಮಿಸಿ ಜಯಂತಿ ಕ್ಷೇತ್ರದಲ್ಲಿ ವಾಸಿಸುವ ವಿಶೇಷ ಕಾರಣಗಳೇನೆಂದು ಋಷಿಗಳು ಕೇಳಲಾಗಿ, ಸೂತಪೂರಾಣಿಕರು ಹೇಳತೊಡಗಿದರು. ಶಂಕರನ ಅರ್ಧಾಂಗಿಯಾದ ಪಾರ್ವತಿಯು ಭೂಲೋಕದಲ್ಲಿ ವಾಸಿಸುವ ತನ್ನ ಇಚ್ಛೆಯನ್ನು ತಿಳಿಸಿದಾಗ, ಅಂತರ್ಜ್ಞಾನಿಯಾದ ಶಂಕರನು ಇಂಥ ಸಮಯ ಬೇಗನೆ ಬರಲಿದೆಯೆಂದೂ, ಸಪರಿವಾರ ಸಹಿತವಾಗಿ ಭೂಲೋಕದಲ್ಲಿ ವಾಸಿಸಬೇಕಾಗುವುದೆಂದೂ ತಿಳಿಸಿ, ಆಕೆಯನ್ನು ಸಮಾಧಾನಪಡಿಸಿದನು.

ಈ ವೇಳೆಯಲ್ಲಿ ಮಧು, ಕೈಟಭರೆಂಬ ರಾಕ್ಷಸ ಸಹೋದರರು ಲೋಕಕಂಟಕರಾಗಿ, ಸಕಲರಿಗೂ ತೊಂದರೆ ನೀಡುತ್ತಿದ್ದರು. ಅವರನ್ನು ಸಂಹರಿಸಲು, ದೇವತೆಗಳಿಂದ ಪ್ರಾರ್ಥಿಸಲ್ಪಟ್ಟ ವಿಷ್ಣುವು ಆಗಮಿಸಿದನು. ಯುದ್ಧದಲ್ಲಿ ಸೋಲಿಸಲು ಕಷ್ಟಸಾಧ್ಯವೆಂದು ತಿಳಿದ ಅವನು ರಾಕ್ಷಸ ಸಹೋದರರನ್ನು ಹೊಗಳಿ, ತನ್ನಿಂದ ಬೇಕಾದುದನ್ನು ಪಡೆಯಬಹುದೆಂದು ಹೇಳಿದನು. ರಾಕ್ಷಸ ಸಹೋದರರು ಅಟ್ಟಹಾಸ ಗೈಯ್ಯುತ್ತಾ "ನಮಗೆ ನಿನ್ನಿಂದ ಪಡೆಯಬೇಕಾದುದು ಏನೂ ಇಲ್ಲ. ನೀನೇ ಬೇಕಾದುದನ್ನು

ಕೇಳು" ಎಂದು ಹೇಳಿದರು. ವಿಷ್ಣುವು ಮುಗುಳ್ನಕ್ಕು ವಚನಬದ್ಧರಾದ ನಿಮ್ಮಿಬ್ಬರ ಪ್ರಾಣ ಲೋಕ ಕಲ್ಯಾಣಕ್ಕಾಗಿ ಬೇಕಾಗಿದೆಯೆಂದು ತಿಳಿಸಿದನು.

ಹಿರಿಯವನಾದ ಮಧು ಎಂಬ ರಾಕ್ಷಸನು ಮಹಾವಿಷ್ಣುವೇ, ನಮ್ಮ ವಚನದಂತೆ ನಾವಿಬ್ಬರೂ ಪ್ರಾಣ ನೀಡುವೆವು. ಶಿವ ಭಕ್ತರಾದ ನಮ್ಮಿಬ್ಬರ ಹೆಸರು ಚಿರಸ್ಥಾಯಿಯಾಗಿರುವಂತೆ ನಮ್ಮಿಬ್ಬರ ಹೆಸರಿನಿಂದ ಒಂದೊಂದು ಶಿವಲಿಂಗವನ್ನು ಸ್ಥಾಪಿಸಿ, ಮಹಾದೇವನನ್ನು ನೀನೇ ಅವುಗಳಲ್ಲಿ ಆವ್ಹಾನಿಸಬೇಕಲ್ಲದೇ, ನೀನೂ ಇಲ್ಲಿಯೇ ವಾಸ ಮಾಡಬೇಕೆಂದು ಕೇಳಿಕೊಂಡನು. ವಿಷ್ಣುವು ಸಂತೋಷದಿಂದ ಈ ಮಾತನ್ನು ಒಪ್ಪಿದನು. ಅವರಿಬ್ಬರೂ ಶಿವಧ್ಯಾನ ಮಾಡುತ್ತ ಪ್ರಾಣವನ್ನು ಅರ್ಪಿಸಿದರು.

ಅವರಿಬ್ಬರೂ ಪ್ರಾಣ ಬಿಟ್ಟ ಸ್ಥಳವೇ ಈ ಜಯಂತಿ ಕ್ಷೇತ್ರವು. ಮಧುವಿನ ಮನೀಷೆಯಂತೆ, ಮಹಾವಿಷ್ಣುವು, ಮಧು ವರ್ಣದ ಮಹಾಲಿಂಗವನ್ನು ಸ್ಥಾಪಿಸಿ, ಶಂಕರನನ್ನು ಆಹ್ವಾನಿಸಿ ಮಧುಕೇಶ್ವರನೆಂದು ಕರೆದನು. ಪಾರ್ವತಿಯ ಇಚ್ಛೆ ನೆರವೇರಿತು. ಸಪರಿವಾರ ಸಹಿತ ಶಂಕರನು ಈ ಕ್ಷೇತ್ರದಲ್ಲಿ ವಾಸಿಸಿ ಭಕ್ತರ ಅಭೀಷ್ಟಗಳನ್ನು ಪೂರೈಸುತ್ತಿರುವನು, ಮಧುವಿನ ಇಚ್ಛೆಯಂತೆ ಮಾಧವನೆಂಬ ಹೆಸರಿನಿಂದ ವಿಷ್ಣುವೂ ಇಲ್ಲಿಯೇ ವಾಸಿಸಿದನು. ಕೈಟಭನ ಹೆಸರಿನಿಂದ ಕೈಟಭೇಶ್ವರ ಲಿಂಗವನ್ನು ಕುಬಟೂರಿ (ಆನವಟ್ಟಿ) ನಲ್ಲಿ ಸ್ಥಾಪಿಸಿದ್ದಾನೆ.

ಶ್ರೀರಾಮನು ಮಧುಕೇಶ್ವರನನ್ನು ಆರಾಧಿಸಿ, ಅನೇಕ ಅಸ್ತ್ರಗಳನ್ನು ಪಡೆದು ರಾವಣನನ್ನು ಸಂಹರಿಸಿದನು. "ರಾಮತೀರ್ಥ" ಎಂಬ ಜಲಾಶಯ ಈಗಲೂ ಇದೆ ತಾರಕಾಸುರನನ್ನು ಸಂಹಾರ ಮಾಡುವಾಗ ಷಣ್ಮುಖನು ತನ್ನ ತಂದೆಯ ಆಶೀರ್ವಾದವನ್ನು ಇಲ್ಲಿಯೇ ಪಡೆದನು. ಸೂರ್ಯನಾರಾಯಣನು ತನ್ನ ಮಾವನಿಂದ ಕತ್ತರಿಸಲ್ಪಟ್ಟ ಸಹಸ್ರ ಕಿರಣಗಳನ್ನು, ಮಧುಕೇಶ್ವರನನ್ನು ಆರಾಧಿಸಿ ಪುನಃ ಪಡೆದಿರುವನು, ವಸಿಷ್ಠಾದಿ ಮುನಿಗಳು ಮಧುಕೇಶ್ವರನನ್ನು ಆರಾಧಿಸಿ, ಮೋಕ್ಷ ಸಾಧನೆಗೈದರೆಂಬ ಬಗ್ಗೆ "ವಸಿಷ್ಠ ತೀರ್ಥ" ಈಗಲೂ ಇದೆ.

ಕರ್ನಾಟಕಕ್ಕೆ ಸ್ವತಂತ್ರ ಸಾಮ್ರಾಜ್ಯ ನೀಡಿದ ಕದಂಬ ಕುಲದ ಮಯೂರವರ್ಮನಂತೂ ಮಧುಕೇಶ್ವರನಿಂದಲೇ ಸ್ಫೂರ್ತಿ ಪಡೆದನು. ಕರ್ನಾಟಕದಲ್ಲಿ ಆಳಿದ ಎಲ್ಲ ವಂಶಗಳ ರಾಜ ಮಹಾರಾಜರು ತಮ್ಮ ಶಕ್ತ್ಯಾನುಸಾರ ಈ ದೇವಸ್ಥಾನಕ್ಕೆ ಸೇವೆ ಸಲ್ಲಿಸಿದ್ದಾರೆಂಬುದಕ್ಕೆ ದೇವಸ್ಥಾನವೇ ಸಾಕ್ಷಿ ಹೇಳುತ್ತಿದೆ.

ಈ ಕ್ಷೇತ್ರದ ಜನರು ಸಂತೋಷದಿಂದ ಮಧುಕೇಶ್ವರನನ್ನು ಆರಾಧಿಸುತ್ತ, ಈವರೆಗೂ ದೇವಸ್ಥಾನವನ್ನು ರಕ್ಷಿಸಿ, ಉಳಿಸಿಕೊಂಡು ಬಂದಿದ್ದಾರೆ.

ಇಂದಿಗೂ ಮಧುಕೇಶ್ವರನಿಗೆ ತ್ರಿಕಾಲಗಳಲ್ಲಿ ಪೂಜಾದಿ ವಿನಿಯೋಗಗಳು ನಡೆಯುತ್ತವೆ. ಹಿಂದೂಧರ್ಮದ ಎಲ್ಲ ಪಂಗಡಗಳ ಜನರು ತಮ್ಮ ಭೇದಭಾವಗಳನ್ನೆಲ್ಲ ಮರೆತು, ಶ್ರದ್ಧಾಭಕ್ತಿಯಿಂದ ಸ್ವಾಮಿಯ ಸೇವೆಯನ್ನು ಮಾಡುತ್ತಿದ್ದಾರೆ.

ಚೈತ್ರ ಶುದ್ಧದಲ್ಲಿ ಮಘಾ ನಕ್ಷತ್ರದ ದಿನ ಮಹಾಸ್ಯಂದನ ರಥೋತ್ಸವ ಜರುಗುವದು. ಸಾವಿರಾರು ಜನರು ಸೇರುವರು. ನವರಾತ್ರೆಯ ಉತ್ಸವವು ವಿಜೃಂಭಣೆಯಿಂದ ಜರುಗುವದು. ಪಾರ್ವತಿ ದೇವಸ್ಥಾನದಲ್ಲಿ ಪ್ರತಿದಿನವೂ ಪದ್ಧತಿಗನುಸಾರವಾಗಿ ಅಲಂಕಾರ ಪೂಜಾದಿಗಳು ಜರುಗುವವು. ಈ ಕಾಲದಲ್ಲಿ ಲಕ್ಷಾವಧಿ ರೂಪಾಯಿ ಬೆಲೆ ಬಾಳುವ ದಾಗಿನೆಗಳಿಂದ ದೇವಿಗೆ ಅಲಂಕಾರ ಮಾಡುವರು. ವಿಜಯ ದಶಮಿಯ ದಿನ ರಜತ ಮಂಟಪದಲ್ಲಿ ಬನ್ನಿ ಮಂಟಪಕ್ಕೆ ಸಾಗುವ ಉತ್ಸವದಲ್ಲಿ ಸಾವಿರಾರು ಜನರು ಭಾಗ ವಹಿಸುವರು. ಕಾರ್ತಿಕ ಬಹುಳದಲ್ಲಿ ಮಘಾನಕ್ಷತ್ರದಂದು ಜರುಗಲಿರುವ ಲಕ್ಷ ದೀಪೋತ್ಸವವು ಭಕ್ತ ಜನರ ಕಣ್ಮನಗಳನ್ನು ತಣಿಸುವದು, ಮಹಾಶಿವರಾತ್ರಿಯ ದಿನ ಸೂರ್ಯೋದಯದಿಂದ ಮರುದಿನ ಸೂರ್ಯೋದಯದವರೆಗೂ ಸಾವಿರಾರು ಭಕ್ತರಿಂದ, ಹಾಗೂ ದೇವಸ್ಥಾನದಿಂದ ವಿಶೇಷ ಪೂಜೆಗಳು ಜರುಗುವವು.

ಜಯಂತಿ (ಬನವಾಸಿ) ಕ್ಷೇತ್ರದ ಶ್ರೀ ಮಧುಕೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ಪೂಜಾದಿ ವಿನಿಯೋಗಗಳನ್ನೂ, ಹರಿಕೆ, ಸೇವೆ ಮೊದಲಾದವುಗಳನ್ನೂ ದೇವಸ್ಥಾನದ ಆಡಳಿತ ಕಮೀಟಿಯ ವತಿಯಿಂದ ವ್ಯವಸ್ಥಿತವಾಗಿ ಜರುಗಿಸಿ ಕೊಡಲಾಗುತ್ತದೆ. ಸದ್ಯದಲ್ಲಿಯೇ ಸುವ್ಯವಸ್ಥಿತವಾಗಿ ಉಪನಯನ, ಮದುವೆ, ಮೊದಲಾದವುಗಳನ್ನು ಮಾಡಿಸುವ ಬಗ್ಗೆ ಸೌಕರ್ಯ ಒದಗಿಸುವ ಸಿದ್ಧತೆ ನಡೆದಿದೆ.

ಶಿರಸಿ, ಶಿವಮೊಗ್ಗಾ, ಸಾಗರ ಈ ಊರುಗಳಿಂದ ಪ್ರತಿದಿನ ಬಸ್ಸುಗಳು ಓಡಾಡುತ್ತವೆ. ನೂರಾರು ಸಂದರ್ಶಕರು ಬರುತ್ತಿರುತ್ತಾರೆ.

ಬನವಾಸಿ ಕ್ಷೇತ್ರದ ಸಮೀಪದಲ್ಲಿಯೇ ಇರುವ ಗುಡ್ನಾಪುರ ಕೆರೆಯ ಕೋಟಿತೀರ್ಥವೆಂಬ ಹೆಸರಿನಿಂದ ಪ್ರಸಿದ್ಧವಿದ್ದು, ಅಲ್ಲಿರುವ ಬಂಗಾರೇಶ್ವರ ದೇವರಿಗೆ ಬಹಳ ಜನರು ನಡೆದುಕೊಳ್ಳುತ್ತಾರೆ. ಚಳಿಗಾಲ ಹಾಗೂ ಬೇಸಿಗೆಗಳಲ್ಲಿ ಪ್ರತಿ ಶುಕ್ರವಾರ ಮತ್ತು ಮಂಗಳವಾರ ದೂರ ದೂರದಿಂದ ಯಾತ್ರಿಕರು ಬರುತ್ತಾರೆ.

ಸಂಗ್ರಾಹಕರು: **ರಾಮಚಂದ್ರ ನರಸಿಂಹ ಮಂಗಳೂರ**

ಓಂ ನಮಃ ಶಿವಾಯ

ಯ ಸರ್ವತಶ್ಚಕ್ಷುರನಂತ ಮೂರ್ಧಾ
ಯ ಸ್ತತ್ವಮಸ್ಯಾದಿ ಪದೈಕ ಲಕ್ಷ್ಯಃ।
ತಂ ಸಚ್ಚಿದಾನಂದ ಮಯಂ ಮಹೇಶಂ
ತ್ರಯೀಮಯಂ ಶ್ರೀ ಮಧುಕೇಶ ಮೀಡೇ ॥೧॥
ಶ್ರೀ ಮನ್ನಗೇಂದ್ರ ತನಯಾಶ್ರಿತ ವಾಮಭಾಗಃ

ಸದ್ಭಕ್ತವೃಂದ ಪರಿಸೇವಿತ ಪಾದ ಪದ್ಮಃ
ಭೂತ್ಯೈ ಸವೋಸ್ತು ಭಗವಾನ್ ಮಧು ಕೈಟಭಾರಿ
ಸಂಸ್ಥಾಪಿತಃ ಶಶಿಧರೋ ಮಧುಕೇಶ್ವರಾಖ್ಯಃ ॥೨॥

ಕರ್ತಾ ಬ್ರಹ್ಮಶ್ರೀ ಆಹಿತಾಗ್ನೀ ಗಣಪತಿ ಸುಬ್ರಹ್ಮಣ್ಯ ಶರ್ಮಾ ಗೋಕರ್ಣ

ಕಲೌ ಯುಗೇಸ್ಮಿನ್ ಬನವಾಸಿ ಕೇತಿ।
ಶುಭ ಪ್ರದಾಯಾ ಕಥಿತಾ ಹಿ ಸರ್ವೈಃ।
ತಸ್ಯಾಂ ನಗರ್ಯಾ ಮಾಯಾ ಸಮೇತಂ।
ವಸಂತಮಾದ್ಯಂ ಮಧುಕೇಶ ದೇವಂ ॥೧॥

ಯಸ್ಯಾನುಗ್ರಹ ಪ್ರಾಪ್ತಯೇ ದಿವಿಷದೋ।
ನಿತ್ಯಂ ತಪಃ ಕುರ್ವತೇ।
ಯೇ ನೈವಾಖಿಲ ಲೋಕತಾಪಹರಣೋ।
ಯೇ ನೈವ ಭೂಯಾತ್ ಸುಖಂ॥
ಮತ್ವಾ ಭಾವಿಕ ಲೌಕಿಕಾಶ್ಚ ಸತತಂ।
ಪ್ರತ್ಯಾಗತಾ ಯಂ ಖಲು।
ತಂ ವಂದೇ ಮಧುಕೇಶ್ವರಂ।
ನತಜನಾಭೀಷ್ಟಾರ್ಥದಂ ಸಿದ್ಧಿದಂ ॥೨॥

ಕರ್ತಾ–ಬ್ರಹ್ಮಶ್ರೀ ಶಿವಗಂಗಾಧರ ಶರ್ಮಾ

ಬನವಾಸಿಯ ಕದಂಬರು

ಅರಿಕೆ

ತ್ರಿಶಂಕುವಿನಂತಿರುವ ಭಾರತೀಯನ ಇತಿಹಾಸವನ್ನಿಂದು ಬಣ್ಣಿಸುವುದು ಕಷ್ಟ. ದೇಶದ ಆಡಳಿತದ ವಿವಿಧ ಕ್ಷೇತ್ರಗಳಲ್ಲಿಂದು, 'ಹಲ್ಲಿದ್ದವರಿಗೆ ಕಡಲೆಇಲ್ಲ ಕಡಲೆ ಇದ್ದವರಿಗೆ ಹಲ್ಲಿಲ್ಲ'; 'ಕಡಲೆ-ಹಲ್ಲುಗಳೆರಡೂ ಇರುವವರಿಗೆ ಅಗಿಯಲು ಬರುವುದಿಲ್ಲ. ಒಮ್ಮೆ ಅಗಿಯಲು ಬಂದರೂ ನುಂಗಲು ಬರುವುದಿಲ್ಲ' ಎಂಬಂತಹ ಸನ್ನಿವೇಶ ಕಂಡುಬರುತ್ತಿದೆ.

ಸ್ವತಂತ್ರ ಭಾರತದ ಹೊಸ ಜನಾಂಗಕ್ಕೆ ಸ್ಫೂರ್ತಿಯನ್ನು ಕೊಡಬಲ್ಲ ಮಾನಸಸರೋವರವೆಂದರೆ ಅದರ ಇತಿಹಾಸ. ಇತಿಹಾಸ ಸಂಶೋಧನೆ ಇಲ್ಲಿ ಮಾಡಿದಷ್ಟೂ ಇದೆ. ಇಲ್ಲಿಯ ನಾಗರಿಕತೆಯ ವಯಸ್ಸು ೬೦೦೦ಕ್ಕೂ ಹೆಚ್ಚು ವರ್ಷಗಳು. ಅದರಲ್ಲೂ ಕರ್ನಾಟಕ ಪ್ರಾಂತದಲ್ಲಿರುವಷ್ಟು ಶಾಸನಾದಿ ಐತಿಹಾಸಿಕ ಅವಶೇಷಗಳು ಮತ್ತೆಲ್ಲೂ ಇಲ್ಲವೆಂದು ಪ್ರತೀತಿ. ಹೀಗಿದ್ದರೂ ಕರ್ನಾಟಕದ ಇತಿಹಾಸವು ಭಾರತದಲ್ಲಿ ಸಾಕಷ್ಟು ಪ್ರಸಿದ್ಧವಾಗಿಲ್ಲ. ಶಿಲಾಶಾಸನ, ವೀರಗಲ್ಲು, ತಾಮ್ರಶಾಸನ, ನಾಣ್ಯ, ಮೂರ್ತಿ, ಕಲ್ಕಟ್ಟಡ, ಬಳಕೆಯ ಸಾಮಾನು, ಕಲೆ, ಸಾಹಿತ್ಯ, ಧರ್ಮಗ್ರಂಥ, ತತ್ವಗ್ರಂಥ ಮುಂತಾದ ಅವಶೇಷಗಳನ್ನು ಒತ್ತಟ್ಟಿಗೆ ಕಲೆಹಾಕುವ ಕೆಲಸ ಭರದಿಂದ ಸಾಗಬೇಕಾಗಿದೆ. ಪ್ರಾಚ್ಯವಸ್ತುಗಳ ಸಂಶೋಧನೆ ಸಂರಕ್ಷಣಗಳೂ ಸಂಗ್ರಹ-ಸಮನ್ವಯಗಳೂ ಶಾಸ್ತ್ರೀಯವಾಗಿ ನಡೆಯಬೇಕಾಗಿದೆ. ಆದರೆ?

ಅಧಿಕೃತ ಇತಿಹಾಸ ಸಂಶೋಧನ ಕೇಂದ್ರಗಳಿವೆ, ಭೂಖನನ ಶಾಖೆಗಳಿವೆ, ಧನವಿನಿಯೋಗ ಯೋಜನೆಗಳಿವೆ, ಇತಿಹಾಸಬ್ರಹ್ಮನ ಚತುರ್ಮುಖಗಳನ್ನರಿತ ಆಂಗ್ಲಜ್ಞ ವಿದ್ವಾಂಸರಿದ್ದಾರೆ. ಆದರೂ ಕರ್ನಾಟಕದ ಎಲ್ಲ ಮಹಾ ಸಾರ್ವಭೌಮ ಮನೆತನಗಳ ಚರಿತ್ರೆಯನ್ನೂ ವಿದ್ವದಾರಾಧ್ಯವಾಗಿ, ಜನಾಕರ್ಷಕವಾಗಿ, ಸಂಸ್ಕೃತಿದರ್ಶಕವಾಗಿ ಬರೆದಂತಿಲ್ಲ. ಅಚ್ಚ ಕನ್ನಡನಾಡಿನಲ್ಲಿ ಆಳಿದ ಮೊತ್ತಮೊದಲಿನ ಮಹಾ ಸಾರ್ವಭೌಮರೆಂದರೆ ಕುಂತಳದ ಕದಂಬರು. ಶಕಸಂಸ್ಥಾಪಕ ಶಾಲಿವಾಹನರು ತಮ್ಮ ಕನ್ನಡ ಮೂಲವನ್ನು ಜಗತ್ತು ಮರೆಯುವಂತೆ ನಡೆದುಕೊಂಡರೆ ಶಕಾಹಂಕಾರವಿಲ್ಲದ ಸಾರ್ವಭೌಮ ಕನ್ನಡ ಕದಂಬರು ತಮ್ಮ ಸುಸಂಸ್ಕೃತಿಯಿಂದ ಭಾರತದ ಮೆಚ್ಚಿಗೆಯನ್ನು

ಪಡೆದು (ಸು.ಕ್ರಿ.ಶ.೨೫೦ ರಿಂದ ಕ್ರಿ.ಶ ೬೫೦ರವರೆಗೆ) ನಾನ್ನೂರು ವರ್ಷಗಳವರೆಗೆ ಪಂಪಪ್ರಶಂಸನೀಯವಾಗಿ ನಾಡನ್ನು ಕಟ್ಟಿ ನಿಲ್ಲಿಸಿದ್ದಲ್ಲದೆ, ಆಮೇಲೂ (ಸು.ಕ್ರಿ.ಶ ೮೫೦ ರಿಂದ ಕ್ರಿ.ಶ ೧೨೫೦ರವರೆಗೆ) ಐದುನೂರು ವರ್ಷಗಳ ಕಾಲ ಕರ್ನಾಟಕದ ವಿವಿಧ ಮಂಡಲಗಳಲ್ಲಿ ನಾಯಕತ್ವವನ್ನು ವಹಿಸಿ ನಿಂತು, ಕುಂತಳ ಕರ್ನಾಟಕಗಳಿಗೆ ಕದಂಬವು ಸಮಾನಾರ್ಥಕವೆಂದು ತೋರುವಷ್ಟು ದೊರೆಯೊವಜರಾಗಿ ಆಳಿದ್ದು ಮರೆಯಲರ್ಹವಾದ ಚರಿತ್ರೆಯೇ? ಬನವಾಸಿಯಿಂದ ಗಯೆಯವರೆಗೆ, ನರ್ಮದೆಯಿಂದ ಕಾವೇರಿಯವರೆಗೆ ಪ್ರಭಾವ ಬೀರಿದ ಮಹಾ ಚಕ್ರವರ್ತಿ ಮಯೂರಶರ್ಮ ರವಿವರ್ಮರಂತಹ ಶ್ರೀಮತ್ಕನ್ನಡ ಧ್ರುವತಾರೆಗಳು ವಿಸ್ಮೃತರಾದರೆ ಕನ್ನಡ ಉಳಿದೀತೇ?

ಕನ್ನಡದ ವೈಜಯಂತೀ ಪುರದ (ಬನವಾಸಿಯ) ಮಧುಕೇಶ್ವರ ಪ್ರಚೋದಿತ ಮಿತ್ರರು ರಚಿಸಿದ ಸಮಿತಿಯ ಸದಸ್ಯರಾದ ನಾವು ಕದಂಬರ ಬಗ್ಗೆ ಬರೆಯಲಾರಂಭಿಸಿದ್ದು.

“ಕ್ವ ಸೂರ್ಯಪ್ರಭವೋ ವಂಶಃ ಕ್ವಚಾಲ್ಪವಿಷಯಾ ಮತಿಃ
ತಿತೀರ್ಷುರ್ದುಸ್ತರಂ ಮೋಹಾದುಡುಪೇನಾಸ್ಮಿ ಸಾಗರಂ”

ಎಂಬಂತಾಗಿದೆ. ಏಕೆಂದರೆ ದಕ್ಷಿಣಭಾರತದ ಸಕಲ ಶಾಸನಗಳ, ದತ್ತಿದಾನಗಳ ಸಂಗ್ರಹ ನಮ್ಮಲ್ಲಿ ಪೂರ್ಣವಾಗಿ ಇಲ್ಲ. ಬನವಾಸಿ, ಹಾನುಗಲ್ಲು, ಗೋವೆ, ತ್ರಿಪರ್ವತ, ಹಲಸಿ ಮುಂತಾದೆಡೆಗಳ ಉತ್ಖನನ ಇನ್ನೂ ನಡೆದಿಲ್ಲ. ಕದಂಬ ಕಾಲೀನ ಗ್ರಂಥಗಳೆಲ್ಲವುಗಳ ಸಂಗ್ರಹ–ಮುದ್ರಣಗಳಾಗಿಲ್ಲ. ಈ ಪರಿಸ್ಥಿತಿಯಲ್ಲಿ ಈ ವರೆಗೆ ಭಾರತ, ದಕ್ಷಿಣಭಾರತ, ಕರ್ನಾಟಕಗಳ ಇತಿಹಾಸವನ್ನು ಬರೆದ ವಿದ್ವಾಂಸರ ಮತ್ತು ಕದಂಬ ಕುಲದ ಸಂಕ್ಷಿಪ್ತ ಚರಿತ್ರೆಯನ್ನು ಬರೆದ ಮೊದಲ ಮಹಾಶೋಧಕನ ಗ್ರಂಥಗಳಷ್ಟನ್ನೇ ಅವಲಂಬಿಸಿ, ಉಪಲಬ್ಧ ಶಾಸನಗಳ ಬಲದಿಂದ ಇತಿಹಾಸದ ಒಂದು ಮಹಾಸಿಂಧುವನ್ನು ಅಲ್ಪಬಿಂದುವೊಂದರಿಂದ ಧ್ವನಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಈ ಪ್ರಯತ್ನವನ್ನು ಭಗೀರಥ ಪ್ರಯತ್ನವೆಂದೇ ಹೇಳಬೇಕು.

ವಿವಿಧ ವಿದ್ವಾಂಸರು ಕದಂಬೇತರರನ್ನು ಗಣ್ಯಸ್ಥಾನದಲ್ಲಿಟ್ಟು ಬರೆದಿರುವ ಗ್ರಂಥಗಳಲ್ಲಿ ವಿರಳತಾರೆಗಳಂತೆ ಮಿನುಗುವ ಕದಂಬ ವಾರ್ತಾಂಶಗಳನ್ನು ಕುಕ್ಕುಟಕಲೆಯಿಂದ ಸಂಗ್ರಹಿಸಿ ಸಮನ್ವಯಿಸುವ ಕಾಲದಲ್ಲಿ ಎದುರಾದ ಸಂಶಯ ಸಾಗರದ ರಂಗತ್ತರಂಗಗಳ ಹೊಡೆತವನ್ನು ಉಡುಪಸ್ಥರಾದ ನಮಗೆ ತಡೆದುಕೊಳ್ಳುವುದು ಕಷ್ಟವಾಯ್ತು. ಕಾಲ, ಸ್ಥಳ, ನಾಯಕ–ಉಪನಾಯಕ–ಪ್ರತಿನಾಯಕರ ನಾಮ, ಘಟನೆಗಳ ವಿವರ, ಸನ್ನಿವೇಶಗಳ ಚಿತ್ರ ಮುಂತಾದ ಅಂಶಗಳಲ್ಲಿ ಇದಮಿತ್ಥಂ ಎಂದು ನಿರ್ಣಯಿಸಲಾರದ ಸಂದಿಗ್ಧ ಸಂಧಿಗಳಲ್ಲಿ ಸಿಲುಕಿಸುವಂಥ ಭಿನ್ನಾಭಿಪ್ರಾಯಗಳನೇಕ ನಮಗೆದುರಾದವು; ಇತಿಹಾಸವಿಜ್ಞಾನದ ಖೆಡ್ಡದಲ್ಲಿ ಹೋರಾಡುವ ದಿಗ್ಗಜಗಳ ನಡುವೆ ಸಿಕ್ಕಿದ ಅಲ್ಪಪ್ರಾಣಿಗಳಂತಾದೆವು. ಆದರೂ ಎದೆಗುಂದದೆ ‘ಅಳಿಲು ಭಕ್ತಿ ಮಳಲು ಸೇವೆ’

ಎಂಬ ಗಾದೆಯಂತೆ ಸದಾ ಜಾಗರಿತಾವಸ್ಥೆಯನ್ನು ಆದಷ್ಟು ಕಾಯ್ದುಕೊಂಡು ಸಾರಭೂತವಾದ ಕೆಲ ಅಂಶಗಳನ್ನಿಲ್ಲಿ ಗಡಿಗಂಬದಂತೆ ನಿಲ್ಲಿಸಲು ಹೆಣಗಿದ್ದೇವೆ.

ಪ್ರಾಚೀನ ಭಾರತದ ನಕ್ಷೆಗಳು, ಪ್ರಾಚೀನ ಲಿಪಿಮಾಲೆಗಳು, ಶಿಲ್ಪಕಲೆಯ ವಿವಿಧ ಮಾದರಿಗಳ ಶಾಸ್ತ್ರೀಯ ವರ್ಗೀಕರಣದ ಬರಹಗಳು, ನಾಣ್ಯಮುದ್ರೆಗಳ ಲಾಂಛನಗಳನ್ನು ಗುರುತಿಸಿ ಅರ್ಥಯಿಸಿದ ಪಟ್ಟಿಗಳು ಮುಂತಾದ ಸಂಶೋಧನ ಸಜ್ಜಿಕೆಗಳ ಅಭಾವ ಒಂದೇ ಸಮನಾಗಿ ಬಾಧಿಸುತ್ತಿದ್ದರೂ ಆಧಾರ ವಿವರಣ, ಸಮರ್ಥನಗಳನ್ನು ಸಮರ್ಪಕವಾಗಿ ಕೊಡದೆ ವ್ಯಕ್ತಪಡಿಸಲಾದ ವಿದ್ವದಭಿಪ್ರಾಯಗಳ ರಣರಂಗದಲ್ಲಿ ಪದೇ–ಪದೇ ಬಿದ್ದರೂ ಕದಂಬ ಚಕ್ರವರ್ತಿಗಳ, ಮತ್ತು ಮಹಾಮಂಡಲೇಶ್ವರರ ಕಾಲದಲ್ಲಿದ್ದ ಇತರ ಭಾರತೀಯ ಚಕ್ರವರ್ತಿಗಳ, ರಾಜಪ್ರತಿನಿಧಿಗಳ, ರಾಜ್ಯಪಾಲರ ಮತ್ತು ಮಹಾ ಮಂಡಲೇಶ್ವರರ ಸಂಘರ್ಷ–ಸಂಪರ್ಕ–ಸಂಬಂಧ–ಅಧಿಕಾರಾವಧಿಗಳನ್ನು ಹೇಗೆ ಹೇಗೋ ಸದ್ಯಃ ಸಮಾಧಾನಕ್ಕೆ ಅವಕಾಶವಾಗುವಂತೆ ಜೋಡಿಸಿ ಇಡಲಾಗಿದೆ. ಸಾಹಿತ್ಯ–ಕಲೆ–ಸಂಸ್ಕೃತಿ–ಮತಧರ್ಮ ರಾಜ್ಯಪ್ರಶಾಸನಗಳನ್ನು ಕೇವಲ ದಿಗ್ದರ್ಶಿಸಲಾಗಿದೆ ಎನ್ನಬಹುದು.

ಪ್ರಮಾಣ ಗ್ರಂಥಗಳಿಂದ ವಿಷಯಸಂಗ್ರಹವನ್ನು ಮಾಡುವಾಗ ಸಾಧ್ಯವಿದ್ದಷ್ಟು ಮಟ್ಟಿಗೆ ಸಪ್ರಮಾಣ ಸಂಗತಿಗಳನ್ನೇ ಇಲ್ಲಿ ಆಯ್ದುಕೊಳ್ಳಲಾಗಿದೆ. ಆದರೂ ಕೆಲ ಜಿಜ್ಞಾಸುಗಳಿಗೆ ನಮ್ಮ ಶೈಲಿಯ ಸಂಕ್ಷಿಪ್ತತೆಯ ದೆಸೆಯಿಂದ ಉಂಟಾಗಬಹುದಾದ ಕೆಲ ಸಂದೇಹಗಳನ್ನು ಕೇವಲ ದಿಗ್ದರ್ಶನಕ್ಕಾಗಿ ಇಲ್ಲಿ ಕೊಡಲಾಗಿದೆ. ಇವುಗಳ ಪರಿಹಾರಕ್ಕೆ ದಕ್ಷಿಣಭಾರತದ ಶಾಸನಾದಿ ಮೂಲ ಆಕರಗಳನ್ನು ತುಲನಾತ್ಮಕ ದೃಷ್ಟಿಯಿಂದ ಪರಿಶೀಲಿಸಿ ತೀರ್ಮಾನಕ್ಕೆ ಬರಬಹುದು.

೧) ಮಯೂರ ಶರ್ಮನ ಪೂರ್ವಜರು ಕ್ಷಾತ್ರವೃತ್ತಿಯವರಾಗಿದ್ದರೆ? ಶಾಂತಿ ವರ್ಮನ ಶಾಸನ ಅದನ್ನು ಸಮರ್ಥಿಸುವುದೇ?

೨) ತ್ರಿಣೇತ್ರನು ಕದಂಬರ ಮೂಲ ಪುರುಷನೋ, ಅಥವಾ ಮಯೂರನ ಅಜ್ಜನೋ ಇಲ್ಲವೆ ಅದು ಮಯೂರನ ಉಪನಾಮವೋ, ಬಿರುದೋ?

೩) ಚಂದ್ರವಳ್ಳಿಯ ಶಾಸನವು ಅವಲಂಬನೀಯವೋ, ಅವಲಂಬನೀಯವಾದರೆ ಅದು ಕ್ರಿ.ಶ. ೨೫೦ ಅಥವಾ ೨೮೦ರ ಅವಧಿಯದೆಂಬುದು ಹೇಗೆ ಸಂದಿಗ್ಧ?

೪) ವಂಶವೃಕ್ಷವು ಸ್ಪಷ್ಟವಾಗಿರುವಾಗ ಮತ್ತು ಅದರ ಆ ಈ ದೊರೆಗಳ ಕಾಲವು ಶಾಸನೋಕ್ತವಾಗಿರುವಾಗ ಇತರ ದೊರೆಗಳ ಬಗ್ಗೆ ಅಶಾಸನೋಕ್ತ ಕಾಲವನ್ನು ಅಂದಾಜು ಮಾಡಬೇಕಾದರೆ ಯಾಂತ್ರಿಕವಾಗಿ ಒಂದೊಂದು ಆಳಿಕೆಗೆ ೨೦ ವರ್ಷಗಳೆಂದು ನಿರ್ಣಯಿಸಬೇಕೇ? ೨೫ ವರ್ಷಗಳೆಂದು ಗ್ರಹಿಸಬೇಕೇ?

ಒಮ್ಮೆ ಲೋಕಾನುಭವ ಸಾಕ್ಷಿಕವಾಗಿ ೫೦–೫೫ ವರ್ಷಗಳಾದರೆ ಹಾಗಾಗಬಾರದೆಂದು ನಿಯಮವೇನಾದರೂ ಇದೆಯೇ?

೫) ಕ್ರಿ.ಶ ೬೫೫ರ ಬಳಿಕ ಕ್ರಿ.ಶ ೯೬೭ರ ವರೆಗಿನ ಕದಂಬೇತಿಹಾಸದ ಬಗ್ಗೆ ಖಚಿತವಾದ ಆಧಾರಗಳಾವವೂ ದೊರಕಲಾರವೇ?

೬) ತ್ರಿಪರ್ವತವು ಹಳೇಬೀಡೆಂಬುದು ಹೇಗೆ ಅಸಂಭವವಾದ ಊಹೆ?

೭) ಮಹಾಕವಿ ಪಂಪನು ಬನವಾಸಿಯನ್ನು ಸಂದರ್ಶಿಸಿದಾಗ ಅಲ್ಲಿ ಯಾವ ಸಾಮಂತನು ಆಳುತ್ತಿದ್ದನೆಂಬುದಕ್ಕೆ ಹೆಚ್ಚಿನ ಪ್ರಮಾಣವಿದೆಯೇ?

೮) ಕುಂತಳವು ಕರ್ನಾಟವೆಂದು ಕರೆಯಲ್ಪಟ್ಟಿದ್ದು ಯಾವಾಗ, ಏಕೆ ಮತ್ತು ಹೇಗೆ?

೯) ಶಾತವಾಹನ–ಕದಂಬ–ಚಾಲುಕ್ಯರೆಲ್ಲರಲ್ಲೂ ಮಾನವ್ಯಗೋತ್ರದ ಹಾರೀತೀ ಪುತ್ರರ ಉಲ್ಲೇಖವಿರುವುದಕ್ಕೆ ಅರ್ಥವೇನು?

೧೦) ವ್ಯಕ್ತಿನಾಮದಂತೆ ತೋರುವ ವನವಾಸಿಯು ಸ್ಥಲನಾಮವೆನ್ನಿಸಿದ್ದು ಹೇಗೆ?

೧೧) ಚಾಲುಕ್ಯರ ಇತಿಹಾಸದಲ್ಲಿ ಬಾದಾಮಿಯ ೨ನೆಯ ಕೀರ್ತಿವರ್ಮನಿಗೂ ಕಲ್ಯಾಣದ ೨ನೆಯ ತೈಲಪನಿಗೂ ನಡುವೆ ಇದ್ದ ಚಾಲುಕ್ಯ ವಂಶೀಯರ ಪೀಳಿಗೆ ಅಸಂಧಿಗ್ಧವಾಗಿ ನಿರ್ಣಯಿಸಲ್ಪಟ್ಟಿದೆಯೇ? ಹಾಗಾದರೆ ಚಾಲುಕ್ಯ ಚಟ್ಟಯ್ಯ ಯಾರ ತಂದೆ, ಯಾರ ಮಗ?

೧೨) ಶಿವಮೊಗ್ಗ ಜಿಲ್ಲೆಯ ಕದಂಬ ಶಾಸನಗಳಲ್ಲಿ ಉಕ್ತರಾದ ರಾಜರೆಂದು ತೋರದ ಕದಂಬರ ಸ್ಥಾನಮಾನಗಳಾವುವು?

೧೩) ಕದಂಬ, ಚಾಲುಕ್ಯ ಮುಂತಾದ ವಂಶಗಳಲ್ಲಿ ಆಳಿದ ಕೆಲ ಒಂದೇ ಹೆಸರಿನ ಅರಸರ ಬಗ್ಗೆ ಕಾಲ ಸಾಮೀಪ್ಯವಿರುವಾಗ ಸಂದೇಹಕ್ಕೆಡೆಯುಂಟಾಗಲಾರದೇ? ಅವರ ಹೆಸರು–ಬಿರುದುಗಳ ಪುನರ್ವಿಮರ್ಶೆ ಅಗತ್ಯವಲ್ಲವೇ?

೧೪) ರಾಜ್ಯಪಾಲರಾಗಿ ಆಳಿದ ಅರಸರ ಹಿನ್ನೆಲೆಗಳು ಅಜ್ಞಾತವೇ?

೧೫) ವಿದೇಶ ನೀತಿಯಲ್ಲೂ ಸ್ವತಂತ್ರವಾಗಿ ನಡೆದುಕೊಳ್ಳಲು ಮಾಂಡಲಿಕರಿಗೆ ಅವಕಾಶ ಕೊಟ್ಟ ಚಾಲುಕ್ಯ ಚಕ್ರವರ್ತಿಗಳ ವಿದೇಶ ಧೋರಣದ ವೈಶಿಷ್ಟ್ಯಕ್ಕೆ ತುಲನಾತ್ಮಕ ನಿದರ್ಶನಗಳು ಇತರ ದೇಶ–ಕಾಲಗಳಲ್ಲಿ ಎಷ್ಟು ಸಿಗುತ್ತವೆ?

ಕೆಲ ನಿಜವಾದ ಸಂದಿಗ್ಧ ಅಂಶಗಳನ್ನು ಸಂದಿಗ್ಧತೆಯಿಲ್ಲವೆಂಬಂತೆ ವಿವಿಧ ವಿದ್ವಾಂಸರು ತಮ್ಮ ಇತಿಹಾಸ ಗ್ರಂಥಗಳಲ್ಲಿ ಬರೆದಿದ್ದಾರೆ. ಒಬ್ಬರಿಗೆ ಸಂದಿಗ್ಧವೆನ್ನಿಸಿದ್ದು ಇನ್ನೊಬ್ಬರಿಗೆ ಅಸಂದಿಗ್ಧವೆನ್ನಿಸಿದೆ; ಒಬ್ಬರು ಸ್ವಲ್ಪವಾದರೂ ಆಧಾರಕೊಟ್ಟು ಸಮರ್ಥಿಸಿದರೆ

ಮತ್ತೊಬ್ಬರು ನಿರಾಧಾರವಾಗಿ ಹೇಳಿದ್ದಾರೆ: ಕೆಲವರು ಅಂದಾಜೆಂದು ಸ್ಪಷ್ಟಪಡಿಸಿದ್ದಾರೆ: ಇತರರು ಆಭಾಸಿಕ ಆಧಾರದಿಂದ ಇಲ್ಲವೆ ನಿರಾಧಾರವಾಗಿ ಖಂಡಿಸಲು ಹೋಗಿದ್ದಾರೆ. ಈ ಸಂದರ್ಭಗಳನ್ನು ಗಮನಿಸಿದರೆ ಪಲ್ಲವ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಕಳಚುರ್ಯ, ಹೊಯ್ಸಳ, ಯಾದವರ ಮತ್ತು ಸೇಂದ್ರಕ, ಶಾಂತರ, ಗಂಗ, ಅಳುಪ, ನೊಳಂಬರ ಆಳಿಕೆಗಳಲ್ಲಿ ಆಯಾ ಸಮಕಾಲೀನ ಸಾರ್ವಭೌಮರ, ಸ್ವತಂತ್ರ ಅರಸರ, ರಾಜ್ಯಪಾಲರ ಮತ್ತು ಸಾಮಂತರ (ಮಾಂಡಲಿಕರ, ಮಹಾಮಂಡಲೇಶ್ವರರ) ಆಡಳಿತ ಕ್ಷೇತ್ರಗಳ ಮರ್ಯಾದೆಗಳನ್ನೂ ಕಾಲಸೀಮೆಗಳನ್ನೂ ಮತ್ತೊಮ್ಮೆ ಪರಿಶೀಲಿಸಿ ಸೂಕ್ಷ್ಮ ವಿವರವೊಂದನ್ನೂ ಬಿಡದೆ ವ್ಯವಸ್ಥೆಗೊಳಿಸುವ ಮಹಾಕಾರ್ಯ ನಡೆಯುವುದು ಅತ್ಯವಶ್ಯಕವೆಂದು ತೋರದಿರದು. ಈ ಕದಂಬರ ಇತಿಹಾಸವನ್ನು ಪರಿಪೂರ್ಣಗೊಳಿಸುವ ದಿಶೆಯಲ್ಲಿ ಮಾಡಬೇಕಾದ ಕೆಲವು ಕೆಲಸಗಳು:

೧) ಕದಂಬರ ಶಾಸನಗಳಲ್ಲಿ ಅನಭಿಲಿಖಿತವಾದವುಗಳೆಲ್ಲವನ್ನೂ ಸಂಗ್ರಹಿಸಿ ಮುದ್ರಿಸುವುದು.

೨) ಆದಿಕಾಲದ ಸ್ವತಂತ್ರ ಪಲ್ಲವದೊರೆಗಳ ಬಗ್ಗೆ ಹೆಚ್ಚಿನ ಮಾಹಿತ್ಯವನ್ನು ಕಲೆಹಾಕುವುದು.

೩) ಚುಟುಗಳ, ಪಲ್ಲವರ ಮತ್ತು ಕದಂಬರ ವಂಶಗಳ ಸಂಬಂಧದ ವಿವರ ಪೂರ್ವಕವಾದ ಸ್ಪಷ್ಟೀಕರಣ.

೪) ನಾಗ–ದ್ರಾವಿಡರ ಕುಲ, ಧರ್ಮ, ಭಾಷೆಗಳ ಸಂಬಂಧದ ವಿಶದೀಕರಣ.

೫) ಸಂದಿಗ್ಧ ಚಾರಿತ್ರಿಕ ಸ್ಥಳಗಳ ಹೆಸರುಗಳ ಸ್ವರೂಪಸಮೀಕರಣ ಮತ್ತು ಸ್ಥಲಾಭಿಜ್ಞಾನ.

೬) ಸಂದಿಗ್ಧ ಒಕ್ಕಣೆಯ ಶಾಸನಗಳ ಪುನಃಪರಿಶೀಲನ.

೭) ಕುಂತಳದ ಪ್ರಸಿದ್ಧ ರಾಜಧಾನಿ ಮತ್ತು ಉಪರಾಜಧಾನಿಗಳಲ್ಲಿ ಉತ್ಖನನ.

೮) ಆಯಾ ರಾಜರ ಮತ್ತು ಅವರ ಮೇಲ್ದೊರೆಗಳ ಕಾಲದಲ್ಲಿ ಅವರ ರಾಜ್ಯದ ಒಳ–ಹೊರಗಿದ್ದ ಗ್ರಂಥಕರ್ತರ ಎಲ್ಲ ಕೃತಿಗಳ ಸಮೀಕ್ಷೆ.

ಇವಿಷ್ಟೂ ಆಗಬೇಕಾದ ಕೆಲಸಗಳೆಂಬುದು ನಿಜ. ಇದಕ್ಕೂ ಮೊದಲು ಆಗಲೇ ಸಂಗೃಹೀತವಾದ ಮಾಹಿತ್ಯಗಳ ಸಮಗ್ರ ಕ್ರೋಢೀಕರಣ ಮತ್ತು ರಾಜಮೂಲಗಳನ್ನು ಹೇಳುವ ಆಧಾರ ಗ್ರಂಥಗಳ ಪುನಃ ಪರಿಶೀಲಿತ ಮುದ್ರಣ ನಡೆಯಬೇಕಾದುದು ಅನಿವಾರ್ಯ. ಸಂಸ್ಕೃತ, ಪ್ರಾಕೃತ, ಕನ್ನಡ, ಇತಿಹಾಸಗಳ ಅಭಿಜ್ಞರು ಸಹಕೃತ ಯೋಜನೆ ಮಾಡಿಕೊಂಡು ಕಾರ್ಯಪ್ರವೃತ್ತರಾಗುವಂತೆ ಸರಕಾರವೂ ವಿಶ್ವವಿದ್ಯಾನಿಲಯಗಳೂ ಸಾಂಸ್ಕೃತಿಕ–ಸಾಹಿತ್ಯಕ ಸಂಸ್ಥೆಗಳೂ ಏರ್ಪಡಿಸಿದರೆ ಮಾತ್ರ ಇಂಥ ರಾಷ್ಟ್ರೀಯ ಮಹಾರಂಭಗಳು ಸಾರ್ಥಕ ಜಯವನ್ನು ಸಂಪಾದಿಸಬಲ್ಲವು.

ಸಂಶೋಧನೀಯವಲ್ಲದ ಜ್ಞಾನಶಾಖೆಯಿಲ್ಲವೆಂಬುದು ನಿಜ. ಆದರೆ ಪ್ರತಿಯೊಂದು ತಲೆಮಾರಿನಲ್ಲೂ ಪ್ರತಿ ಶಾಖೆಯಲ್ಲೂ ಏಕಪರಿಮಾಣದ ಸಂಶೋಧನೀಯತೆ ಇದೆ ಎಂದು ವಿಶ್ವವಿದ್ಯಾನಿಲಯವು ಭಾವಿಸಹೋದರೆ ಅದು ವೈಜ್ಞಾನಿಕವಾಗಲಾರದು. ಇಂದಿನ ಭಾರತದಲ್ಲಿ ವ್ಯವಹಾರೋನ್ಮುಖ ವಿಜ್ಞಾನ, ಸತ್ಯೋನ್ಮುಖ ಇತಿಹಾಸ ಮತ್ತು ಸಮನ್ವಯೋನ್ಮುಖ ತತ್ವಜ್ಞಾನಗಳಲ್ಲಿ ಸಂಶೋಧನೆಗಿರುವಷ್ಟು ಅಗತ್ಯ ಅವಕಾಶಗಳು ಇತರ ವಿಷಯಗಳಲ್ಲಿ ಇಲ್ಲವೆಂದರೆ ತಪ್ಪಾಗಲಾರದು. ಸರಸ್ವತಿಯ ಈ ಮೂರು ಸ್ಕಂಧಗಳು ಇತರ ಜ್ಞಾನಶಾಖೆಗಳಿಗೆ ಆಧಾರಭೂತವಾದಂಥವು. ಆಶ್ರಯದಾತೃಗಳು; ಚತುರ್ಥ ಸ್ಕಂಧವೆನಿಸುವ ಇತರ ಶಾಖೆಗಳು ಇವನ್ನುಳಿದು ತಲೆಬುಡಗಳನ್ನು ಕಾಣಲಾರವು. ಈ ಅಂಶವನ್ನು ಕರ್ನಾಟಕದ ವಿದ್ವಜ್ಜನರೂ ವಿದ್ಯಾರ್ಥಿಗಳೂ ಮನದಟ್ಟುಮಾಡಿಕೊಂಡು ಶೋಧಕತ್ವವನ್ನು ಬೆಳೆಸಿಕೊಂಡರೆ ಮನೋವಿಶ್ಲೇಷಣದಲ್ಲಿ ಬಾಲ್ಯಾನುಭವದ ಪುನಃಸ್ಮರಣವು ಹೇಗೆ ಮನೋರೋಗಗಳನ್ನು ನಿವಾರಿಸಬಲ್ಲದೋ ಹಾಗೇ ಕರ್ನಾಟಕದ ಪೂರ್ವೇತಿಹಾಸದ ಕೂಲಂಕಷ ಪುನಃಸ್ಮರಣವುಂಟಾಗಿ, ಆ ಮೂಲಕ ಕನ್ನಡದ ವಿವಿಧ "ಸಮಾಜ"ಗಳಿಗೆ ಅಂಟಿಕೊಂಡಿರುವ ದಿಕ್‌ಕೃತ–ಕಾಲಕೃತ ಪೂರ್ವ ಗ್ರಹಗಳು ಪರಿಹಾರಹೊಂದಿ ಸಮಾರೋಗ್ಯ–ಸುಚೈತನ್ಯ–ಸಮುದಯಗಳು ಉಂಟಾದಾವು–ಎಂಬ ನಂಬಿಗೆಯಿಂದ ಈ ಕಿರುಹೊತ್ತಿಗೆಯನ್ನು ಪ್ರಥಮ ಪ್ರಯತ್ನದ ಅಳಿಲುಸೇವೆಯೆಂದು ಕನ್ನಡ ಬಾಂಧವರೆದುರು ಇಡುತ್ತಿದ್ದೇವೆ.

–ಗ್ರಂಥಕರ್ತರು

ಸಂಕೇತಗಳು

1. S.K.H	Sources of Karnatak History
2. C.S.H.I. (C.S.H.)	Cambridge Shorter History of India
3. K.K.	Kadamba Kula
4. H.C.I.P. (H.C.P.)	History and Culture of the In dian People
5. ಸಂ. ನಾ.	ಸಂಸ್ಕೃತ ನಾಟಕ
6. ರಾ. ಕೂ.	ರಾಷ್ಟ್ರಕೂಟರು
7. E.I.I.P.S.	Epigraphica Indica XIV and Inscriptions in Pali and Sanskrit
8. A.K.	Ancient Karnatak

ಸೀಮಾನಿರ್ದೇಶನ

"ನರ್ಮದಾಂತಂ ಮಹೀಪ್ರೀತ್ಯಾ ಯಮಾಶ್ರೀತ್ಯಾಭಿನಂದತಿ
ಕೌಸ್ತುಭಾಭಾರುಣಚ್ಛಾಯಾ ವಕ್ಷೋ ಲಕ್ಷ್ಮೀರ್ಹರೇರಿವ
ರೇವಾವಧಿ ಜಯಂತೀಯಂ ಸುರೇಂದ್ರನಗರೀ ಶ್ರಿಯಾ
ವೈಜಯಂತೀ ಚಲಚ್ಚಿತ್ರ ವೈಜಯಂತೀ ವಿರಾಜತೇ"

-From the Koramanga
Grant of Ravivarman

ಪರಿವಿಡಿ

ವಿಷಯ

–೧–


ಬನವಾಸಿಯ ಸಾರ್ವಭೌಮರು

ರಾಜಧಾನಿ: ಬನವಾಸಿ

ಚಂದ್ರವಳ್ಳಿಯಲ್ಲಿ ದೊರೆತ ಮಯೂರಶರ್ಮ ಕದಂಬನ ಶಾಸನದಲ್ಲಿ ಅವನು ತ್ರೈಕೂಟಾಭೀರ, ಪಲ್ಲವ, ಪಾರಿಯಾತ್ರಿಕ, ಶಕಸ್ಥಾನ, ಸೇಂದ್ರಕ, ಪುನ್ನಾಟ ಮತ್ತು ಮೌಖರಿ ದೊರೆಗಳನ್ನು ಸೋಲಿಸಿದನೆಂದು ಹೇಳಿದೆ. ತ್ರೈಕೂಟಾಭೀರರ ಶಕವರ್ಷವು ಕ್ರಿ.ಶ ೨೪೨ರಲ್ಲಿ ಆರಂಭವಾಯಿತೆಂದೂ[೧] ಆಭೀರರ ಮೊದಲನೆಯ ದೊರೆಯಾದ ಈಶ್ವರಸೇನನು ಕ್ರಿ.ಶ ೨೫೦ರಲ್ಲಿ[೨] ಇದ್ದನೆಂದೂ ತಿಳಿದುಬರುತ್ತದೆ. ಶಾಂತಿವರ್ಮ ಕದಂಬನ ತಾಳಗುಂದ ಶಾಸನದಲ್ಲಿ ಮಾನವ್ಯಗೋತ್ರದ ಹಾರೀತಿಪುತ್ರನಾದ ವೈದಿಕಬ್ರಾಹ್ಮಣ ಮಯೂರಶರ್ಮನು ಗುರು ವೀರಶರ್ಮನೊಂದಿಗೆ ಪಲ್ಲವೇಂದ್ರ ಪುರವಾದ ಕಾಂಚಿಯ ಘಟಿಕೆಯಲ್ಲಿ ನಿಖಿಲ ಪ್ರವಚನವನ್ನು ಕಲಿಯಲು ಹೋದನೆಂದೂ ಆಗ ಅಲ್ಲಿ ನಡೆಯುತ್ತಿದ್ದ ಅಶ್ವಮೇಧಯಾಗದಲ್ಲಿ ಬ್ರಾಹ್ಮಣರಿಗೆ ತಕ್ಕ ಗೌರವವನ್ನು ಕ್ಷತ್ರಿಯರು ಕೊಡದುದರಿಂದ ಕ್ರುದ್ಧನಾದ ಮಯೂರಶರ್ಮನು ಜಗತ್ತನ್ನೇ ಜಯಿಸಿಬಿಡುವೆನೆಂದು ಶಸ್ತ್ರಪಾಣಿಯಾಗಿ ಪಲ್ಲವರ ಅಂತಪಾಲರನ್ನು ಸೋಲಿಸಿ, ಶ್ರೀ ಪರ್ವತದಲ್ಲಿ ನಿಂತು, ಪಲ್ಲವರಿಗೆ ನಾನಾ ವಿಧವಾಗಿ ತೊಂದರೆಕೊಡಲಾರಂಭಿಸಿದನೆಂದೂ ಬೃಹದ್‌ಬಾಣ ಮುಂತಾದ ದೊರೆಗಳಿಂದ ಕಪ್ಪಕಾಣಿಕೆಗಳನ್ನು ವಸೂಲು ಮಾಡಲಾರಂಭಿಸಿದನೆಂದೂ ಹೇಳಿದೆ. ಅವನನ್ನು ಬಗ್ಗಿಸಲಾರದೆ ಪಲ್ಲವರು ತಮ್ಮ ರಾಜ್ಯದಲ್ಲಿ ಅಮರಾರ್ಣವದಿಂದ (ಪಶ್ಚಿಮ ಸಮುದ್ರದಿಂದ) ಪ್ರೇಮಾರದ[೩] (ಮಾಳವದ, ತುಂಗಭದ್ರೆಯ ಅಥವಾ ಮಲಪ್ರಭೆ, ಮಲಪ್ರಹಾರ ಇಲ್ಲವೆ ಮಲಾಪಹಾರಿನದಿಯ) ವರೆಗಿನ ಭಾಗವನ್ನು ಕೊಟ್ಟು ಪಟ್ಟಗಟ್ಟಿದರು ಎಂಬುದನ್ನೂ ಅದರಲ್ಲೇ ಹೇಳಲಾಗಿದೆ. ಅಶ್ವಮೇಧಯಾಗಮಾಡಿದ ಪಲ್ಲವದೊರೆಯೆಂದರೆ ಧರ್ಮಮಹಾರಾಜ

---

೧. S.K.H.P. 15
೨. The Abhiras-their History and Culture.
೩. ಪ್ರೇಹಾರದ


ರವಿವರ್ಮನ ಕಾಲದ ಕದಂಬ
ಸಾಮ್ರಾಜ್ಯ
ಸೇಂದ್ರಕ ವಿಷಯ
ದಕ್ಷಿಣಾಪಥ
ಬಾದಾಮಿ
ತುಂಗಭದ್ರಾ ನದಿ
ಉಚ್ಚಂಗಿ
ಬನವಾಸಿ
ಕೋಲಾರ
ಕಾಂಚಿ
ಪಾಂಡ್ಯರು
ತನ್ನ ಇಬ್ಬರು ತಮ್ಮಂದಿರಿಂದ ರವಿವರ್ಮನು ಗೆದ್ದುಕೊಂಡ ಪ್ರದೇಶಗಳನ್ನೊಳಗೊಂಡ ಕದಂಬ ಸಾಮ್ರಾಜ್ಯ
ಕದಂಬ ಚಕ್ರವರ್ತಿಗಳ ಸಾಮಂತರು ಆಳುತ್ತಿದ್ದ ನಾಡುಗಳು

ಶಿವಸ್ಕಂದವರ್ಮ[೪]. ಶಾತವಾಹನರ ಚಕ್ರಾಧಿಪತ್ಯವು ಕ್ರಿ.ಶ ೨೨೫ರಲ್ಲಿ ಒಡೆದುಹೋಯಿತೆಂದೂ ಆಗ ಸಿಂಹವರ್ಮ ಬಪ್ಪದೇವಪಲ್ಲವನು ಸ್ವತಂತ್ರ ದೊರೆತನವನ್ನಾರಂಭಿಸಿದನೆಂದೂ ಆ ಮೇಲೆ ಅವನ ಮಗ ಶಿವಸ್ಕಂದವರ್ಮನು ಕ್ರಿ.ಶ ೨೫೦[೫]ರಲ್ಲಿ ಆಳಲಾರಂಭಿಸಿದನೆಂದೂ ತಿಳಿದುಬರುತ್ತದೆ. ಶಿವಸ್ಕಂದವರ್ಮನು ಅಶ್ವಮೇಧ, ಅಗ್ನಿಷ್ಟೋಮ, ವಾಜಪೇಯ ಮುಂತಾದ ಮಹಾಯಾಗಗಳನ್ನು ಮಾಡಿದ ಪ್ರಸಿದ್ಧ ಪಲ್ಲವದೊರೆ. ಆತನ ಮೊಮ್ಮಗ ವಿಷ್ಣುಗೋಪನ ಆಳಿಕೆ ಕ್ರಿ.ಶ ೩೨೫ರಲ್ಲಿ[೬] ಆರಂಭವಾಗುವುದರಿಂದ ಶಿವಸ್ಕಂದವರ್ಮನು ಸುಮಾರು ೪೦ ವರ್ಷಗಳಿಗೆ ಕಡಿಮೆಯಾಗದಷ್ಟು ಕಾಲ ರಾಜ್ಯಭಾರಮಾಡಿ, ಅನಂತರ ತನ್ನ ಮಗ ಬುಧ್ಯಂಕುರನಿಗೆ ಕ್ರಿ.ಶ ೨೯೦ರಲ್ಲಿ ಪಟ್ಟಿಗಟ್ಟಿ ವಾನಪ್ರಸ್ಥವನ್ನು ಹಿಡಿದನು ಎಂದು ಊಹಿಸಲಾಗಿದೆ.

ಶಕಸ್ಥಾನ ರಾಜ್ಯಕ್ಕೆ ಕ್ರಿ.ಶ ೨೫೦ರ ಹೊತ್ತಿಗೆ[೭] ಉಜ್ಜಯನಿಯು ರಾಜಧಾನಿಯಾಗಿತ್ತು. ವಿಶ್ವಸೇನನೆಂಬ ಶಕರಾಜನು ಕ್ರಿ.ಶ ೨೯೬–೩೦೦ರಲ್ಲಿ ಆಳುತ್ತಿದ್ದನು. ಸ್ಕಂದ ಶಿಷ್ಯ ಪಲ್ಲವನು ಸತ್ಯಸೇನ (ಸತ್ಯಸಿಂಹ)ನೆಂಬ ಶಕರಾಜನಿಂದ ಕಾಂಚಿಯ ಘಟಿಕೆಯನ್ನು ವಶಪಡಿಸಿಕೊಂಡನು ಎಂದು ಗೊತ್ತಾಗಿದೆ.[೮] ಕದಂಬ–ಚಾಲುಕ್ಯರ ಅಭಿಲೇಖನಗಳಲ್ಲಿ 'ಸೇಂದ್ರಕ ವಿಷಯ'ದ ಉಲ್ಲೇಖವಿದೆ; ಗಯೆಯ ಮುದ್ರೆಯಲ್ಲಿ ಗಯಾಪ್ರದೇಶದ ಮೌಖರಿಗಳ ಪ್ರಸ್ತಾಪವಿದೆ.

ಕ್ರಿ.ಶ ಮೂರನೆಯ ಶತಮಾನದ ಮಧ್ಯಭಾಗದಲ್ಲಿ ಆಂಧ್ರ ಚಕ್ರಾಧಿಪತ್ಯವು[೯] ದಕ್ಷಿಣಾಪಥದಲ್ಲಿ ಒಡೆದುಹೋದ ಮೇಲೆ, ಅದರ ವಿವಿಧ ಭಾಗಗಳಿಗೆ ಶಾಲಿವಾಹನರ ಸಾಮಂತರಾಗಿದ್ದ ಇಕ್ಷ್ವಾಕುಗಳು, ಚುಟುಗಳು ಮತ್ತು ಪಲ್ಲವರು ಹಾಗೂ ಕದಂಬರು ಉತ್ತರಾಧಿಕಾರಿಗಳೆಂದು ಪ್ರಸಿದ್ಧ. ಈ ಹಿನ್ನೆಲೆಯನ್ನವಲೋಕಿಸಿದರೆ ಪಲ್ಲವರ ೨ನೆಯ ದೊರೆಯಾದ ಶಿವಸ್ಕಂದವರ್ಮ (=ಸ್ಕಂದಶಿಷ್ಯ?) ನೆಂಬವನ ಆಳಿಕೆಯ ಕೊನೆಯ ಕಾಲದಲ್ಲಿ ಅಂದರೆ ಸುಮಾರು ಕ್ರಿ.ಶ ೨೮೦ರ ಹೊತ್ತಿಗೆ ಬನವಾಸಿ ರಾಜಧಾನಿಯಲ್ಲಿ ಆಗಲೇ ದಂಡನಾಯಕನೆಂಬ ಗೌರವಕ್ಕೆ ಪಾತ್ರನಾಗಿದ್ದ ಮಯೂರಶರ್ಮ ಕದಂಬನು ಪಟ್ಟಾಭಿಷಿಕ್ತನಾದನು ಮತ್ತು ಅರಬ್ಬಿ ಸಮುದ್ರ, ವೆಂಗುರ್ಲೆ, ಶಿವಮೊಗ್ಗ, ಬಾದಾಮಿ, ಶ್ರೀಪರ್ವತಗಳ ಪರಿಧಿಯಲ್ಲಿ ಬರುವ ಕುಂತಳ ರಾಜ್ಯವನ್ನು ನೇರವಾಗಿಯೂ ಇವುಗಳಾಚೆಯ ವಿವಿಧ ರಾಜ್ಯಗಳನ್ನು ಚಕ್ರವರ್ತಿತ್ವದ ಅಧಿಕಾರದಿಂದಲೂ

---

೪. Hirahadagalli Grant (E.I.I.P.S.) 5. C.S.H.I.
೫. C.S.H.I .
೬. C.S.H.P .
೭. S.K.H.
೮. S.K.H.
೯. ಆಂಧ್ರ= ಶಾತವಾಹನ=ಶಾಲಿವಾಹನ=ಶಾತಕರ್ಣಿ=ಆಂಧ್ರಭೃತ್ಯ; ಮೌರ್ಯರ ಸಾಮಂತರಾಗಿದ್ದ ಈ ಕುಲದವರು ಮೂಲತಃ ಕರ್ನಾಟಕದವರೆಂದೂ ಇವರ ಮೊದಲನೆಯ ಅರಸ ಕ್ರಿ.ಶ ೭೮ರಲ್ಲಿದ್ದ ಹಾಲನೆಂದೂ ಡಾಕ್ಟರ್ ಎಸ್. ಶ್ರೀಕಂಠಶಾಸ್ತ್ರಿಗಳು ಅಭಿಪ್ರಾಯಪಟ್ಟಿದ್ದಾರೆ.

ಅಳತೊಡಗಿದನೆಂದು ಹೇಳಬಹುದು. ಪಲ್ಲವರ ಅಧಿಕಾರ ಶ್ರೀ ಪರ್ವತದಿಂದ ಕಾಂಚಿಯವರೆಗಿನ ಪ್ರದೇಶಕ್ಕೆ ಪರಿಸೀಮಿತವಾಯಿತು. ತ್ರೈಕೂಟದಲ್ಲಿ (–ಅಪರಾಂತ, ಕೊಂಕಣ) ಆಳುತ್ತಿದ್ದ ಆಭೀರರೂ. ಅದರ ಉತ್ತರದಲ್ಲಿ ಆಳುತ್ತಿದ್ದ ಪಾರಿಯಾತ್ರಿಕರೂ ಶಕರೂ, ಇತ್ತ ಸೇಂದ್ರಕ–ಪುನ್ನಾಟ (=ಮೈಸೂರು)–ಬ್ರಹ್ಮದ್ಬಾಣರೂ ಕದಂಬರ ಚಕ್ರವರ್ತಿತ್ವವನ್ನು ಒಪ್ಪಿ ಗೌರವಿಸಿದರೆಂದು ತಿಳಿಯಬಹುದಾಗಿದೆ. ಅದರಿಂದಲೇ ಉತ್ತರ ಭಾರತದ ಗಯೆಯವರೆಗೂ ಮಯೂರಶರ್ಮನ ಪ್ರಭಾವ ಹರಡಿತ್ತೆಂದು ಪ್ರತೀತಿ.[೧೦]

ಅಶ್ವಮೇಧಯಾಗ ಮಾಡಿ ಕುಂತಳದಲ್ಲಿ ಕದಂಬ ಸಾಮ್ರಾಜ್ಯವನ್ನು ಸ್ಥಾಪಿಸಿದ ಮಯೂರವರ್ಮ ಚಕ್ರವರ್ತಿಯು ಕ್ರಿ.ಶ ೨೮೦ರಿಂದ ೩೩೦ರವರೆಗೆ ಆಳಿರಬಹುದು. ಅನಂತರ ಅವನ ಮಗ ಕಂಗವರ್ಮನು ಕ್ರಿ.ಶ ೩೩೦ರಿಂದ ೩೭೦ರವರೆಗೆ ರಾಜ್ಯಭಾರ ನಡೆಸಿರಬೇಕು. ಕಂಗವರ್ಮನು ಸುತ್ತಮುತ್ತಲಿನ ರಾಜನೊಡನೆ ಬಹಳ ಸಲ ಯುದ್ಧ ಮಾಡುವ ಪ್ರಸಂಗಗಳುಂಟಾದವು. ಅವೆಲ್ಲವುಗಳಲ್ಲೂ ಅವನು ಕೊನೆಯದಾಗಿ ಗೆದ್ದು ಕುಂತಳ ಚಕ್ರೇಶ್ವರತ್ವವನ್ನು ಉಳಿಸಿಕೊಂಡನು. ಅವನಾದ ಮೇಲೆ ಅವನ ಮಗ ಭಗೀರಥವರ್ಮನು ಪಟ್ಟಕ್ಕೆ ಬಂದು ಸುಮಾರು ಕ್ರಿ.ಶ ೩೭೦ರಿಂದ ೪೦೦ರ ವರೆಗೆ ಕುಂತಳವನ್ನು ಆಳಿರಬೇಕು. ತಂದೆಯ ಕಾಲದಲ್ಲಿ ಕಳೆದುಹೋಗಿದ್ದ ಕೆಲ ರಾಜ್ಯಭಾಗಗಳನ್ನು ಇವನು ಪುನಃ ಸಂಪಾದಿಸಿದನು. ಅದರಿಂದ ಈತನು ಸಾಹಸದಲ್ಲಿ ಸಗರ ಚಕ್ರವರ್ತಿಯ ವಂಶದ ಭಗೀರಥನಿಗೆ ಸಮಾನನೆಂದೆನಿಸಿಕೊಂಡನು. ಈತನ ಮುಂದೆ ಮಗನಾದ ರಘುವರ್ಮನು ಕುಂತಳೇಶನಾಗಿ ಕ್ರಿ.ಶ ೪೦೦ರಿಂದ ೪೨೫ರವರೆಗೆ ಸಮರ್ಥವಾಗಿ ಸಾಮ್ರಾಜ್ಯವನ್ನು ಪರಿಪಾಲಿಸಿದನು. ಉತ್ತರ ಭಾರತದಲ್ಲಿ ೨ನೆಯ ಚಂದ್ರಗುಪ್ತ ಸಾಹಸಾಂಕ ವಿಕ್ರಮಾದಿತ್ಯನು ಆಗ (ಕ್ರಿ.ಶ ೩೭೫–೪೧೪) ಆಳುತ್ತಿದ್ದನು. ಈ ಸಮಕಾಲೀನತೆಯ ದೆಸೆಯಿಂದ ಭೋಜನು ತನ್ನ ಶೃಂಗಾರ ಪ್ರಕಾಶದಲ್ಲಿ ಹೇಳಿದಂತೆ ಕಾಳಿದಾಸನೆಂಬ ರಾಯಭಾರಿಯನ್ನು ೨ನೆಯ ಚಂದ್ರಗುಪ್ತ ಚಕ್ರವರ್ತಿ ಕಳಿಸಿಕೊಟ್ಟದ್ದು ರಘುವರ್ಮನ ಆಸ್ಥಾನಕ್ಕೇ ಆಗಿರಬೇಕಲ್ಲದೆ, ಜಿ.ಎಂ.ಮೊರೀಸ್ ಬರೆದಿರುವಂತೆ ಈತನ ತಂದೆಯಾದ ಭಗೀರಥವರ್ಮನ ಆಸ್ಥಾನಕ್ಕಲ್ಲ. ಕಾಳಿದಾಸ ಮಹಾಕವಿಯ ಕಾಲ ಕ್ರಿಸ್ತಪೂರ್ವವೆಂದು ಭಾರತೀಯ ಸಂಶೋಧಕರೀಗ ದೃಢಪಡಿಸುತ್ತಿರುವುದನ್ನೂ ಇತ್ತೀಚೆಗೆ ಕೆಲ ಗಣ್ಯ ಭಾರತೀಯ ವಿದ್ವಾಂಸರು ನಾಟಕಕಾರ ಕಾಳಿದಾಸ ಹಾಗೂ ಕಾವ್ಯಕಾರ ಕಾಳಿದಾಸ ಬೇರೆ ಬೇರೆ ಎಂದು ವಾದಿಸುತ್ತಿರುವದನ್ನೂ ಗಮನಿಸಿದರೆ, ಈ ರಾಯಭಾರಿ ಕಾಳಿದಾಸನು ಕಾವ್ಯಕಾರನಾದ ೨ನೆಯ ಕಾಳಿದಾಸನೆಂದು ಭಾವಿಸಬಹುದು. ನಾಟಕ–

೧೦. ಕನ್ನಡನಾಡಿನ ಚರಿತ್ರೆ (ಡಾ. ಬಿ.ಎ. ಸಾಲೆತೊರೆ) ಪುಟ ೨೯– "ದಕ್ಷಿಣದಲ್ಲಿ ಶಿವಮೊಗ್ಗ ಜಿಲ್ಲೆಯಿಂದ ಹಿಡಿದು ಕಾಂಚೀಪಟ್ಟಣದವರೆಗೂ ಉತ್ತರದಲ್ಲಿ ಮಾಳವದಿಂದ ಹಿಡಿದು ಗಯಾಕ್ಷೇತ್ರದವರೆಗೂ ವ್ಯಾಪಿಸಿದ್ದ ವಿಸ್ತಾರವಾದ ತನ್ನ ಚಕ್ರಾಧಿಪತ್ಯವನ್ನು ಮಯೂರಶರ್ಮನು ಪ್ರತಾಪದಿಂದ ಆಳಿದನಲ್ಲದೆ, ಸಾರ್ವಭೌಮತ್ವದ ಗುರುತಾಗಿ ಅಶ್ವಮೇಧಯಾಗವನ್ನು ಮಾಡಿದನು.

ಕಾವ್ಯಗಳ ಕಾಳಿದಾಸರಿಬ್ಬರಲ್ಲ. ಒಬ್ಬನೇ ಎಂದಾದರೆ, ಈ ರಾಯಭಾರಿ ಕಾಳಿದಾಸನನ್ನು ೨ನೆಯ ಸಾಮಾನ್ಯ ಕಾಳಿದಾಸನೆಂದು ಗುರುತಿಸಬೇಕಾಗುತ್ತದೆ. ಆಗ ಹೇಮಚಂದ್ರನದೆಂದು ಜಿ.ಎಂ. ಮೊರೀಸ್ ಹೇಳಿದ[೧೧] (ಆದರೆ ಕ್ಷೇಮೇಂದ್ರನು ಬರೆದುದೆಂದು ಪ್ರಸಿದ್ಧವಾಗಿರುವ) ಔಚಿತ್ಯ ವಿಚಾರ ಚರ್ಚೆಯಲ್ಲಿ ಬಂದ "ಇಹ ನಿವಸತಿ ಮೇರುಃ... ಸ್ಥಾನಮಸ್ಮದ್ವಿಧಾನಾಂ" ಎಂಬ ವೃತ್ತವನ್ನು ಬರೆದವನು ಕಾವ್ಯಕಾರ ಕಾಳಿದಾಸನೇ ಆಗಿರುವುದರಿಂದ ನಮ್ಮ ರಾಯಭಾರಿಯು ೨ನೆಯ ಪ್ರಸಿದ್ಧ ಮಹಾಕವಿ ಕಾಳಿದಾಸನೇ ಎನ್ನಬೇಕಾಗುತ್ತದೆ. ಕದಂಬ ರಾಜನ ಆಸ್ಥಾನದಲ್ಲಿ ರಾಯಭಾರಿ ಕಾಳಿದಾಸನಿಗೆ ತಕ್ಕ ಸ್ಥಾನಮಾನಗಳು ದೊರಕಲಿಲ್ಲವಂತೆ. ಕದಂಬರ ಶಕ್ತಿ–ವೈಭವಗಳು ಗುಪ್ತರ ಸ್ಥಾನಮಾನಗಳನ್ನು ಮನ್ನಿಸದೆ ಇರುವಷ್ಟು ಹೆಚ್ಚು ಅಥವಾ ಸಮಾನ ಆಗಿತ್ತೆಂದು ಮೇಲಿನ ವೃತ್ತದ ಅನುಮಾನಿಕ ಅರ್ಥವೆಂದು ಭಾವಿಸಲಾಗಿದೆ. ಇದು ರಘುವಿನ ಕಾಲದ ಕದಂಬ ಕುಲದ ಖ್ಯಾತಿಯನ್ನು ಹೊರಗೆಡಹುತ್ತದೆ.

ರಘುವರ್ಮನಿಗೆ ಮಕ್ಕಳಿರಲಿಲ್ಲವೆಂದು ತೋರುತ್ತದೆ. ಆದುದರಿಂದ ಅವನಾದ ಮೇಲೆ ಅವನ ತಮ್ಮ ಕಾಕುತ್ಸ್ಥವರ್ಮನು ಪಟ್ಟಕ್ಕೆ ಬಂದು ಕ್ರಿ.ಶ ೪೨೫ರಿಂದ ೪೫೦ರವರೆಗೆ ಕುಂತಳ ಕರ್ನಾಟಕವನ್ನು ಆಳಿದನು. ಈತನು ಕದಂಬ ಸಾಮ್ರಾಜ್ಯವನ್ನು ಬಹುವಾಗಿ ವಿಸ್ತರಿಸಿದನು. ಶ್ರುತಕೀರ್ತಿ ಎಂಬ ಇವನ ಸೇನಾಪತಿ ತುಂಬ ವೀರನೂ ಸ್ವಾಮಿಭಕ್ತನೂ ಆಗಿದ್ದನು. ಈತನ ಕಾಲದಲ್ಲಿ ಕಳ್ಳಕಾಕರ ಭಯ ಸಂಪೂರ್ಣ ಇಲ್ಲದಂತಾಯಿತೆಂದು ಪ್ರಸಿದ್ಧಿ. ಈತನ ಹಿರಿಯ ಮಗಳಾದ ಅಜಿತ ಭಟ್ಟಾರಿಕೆಯನ್ನು ವಾಕಾಟಕ ನರೇಂದ್ರಸೇನನೂ ಕಿರಿಯ ಮಗಳನ್ನು ಗುಪ್ತಕುಲದ ಕುಮಾರಗುಪ್ತನೂ ಮತ್ತೊಬ್ಬ ಮಗಳನ್ನು[೧೨] ಆಳುವ ಕುಲದ ಪಶುಪತಿಯೂ ಮದುವೆ ಮಾಡಿಕೊಂಡು ಹೋದುದು ಕಾಕುತ್ಸ್ಥ ಚಕ್ರವರ್ತಿಯ ಘನತೆ–ಗೌರವಗಳನ್ನು ಸಾರುತ್ತದೆ.

ಕಾಕುತ್ಸ್ಥವರ್ಮನ ಮಗನಾದ ಶಾಂತಿವರ್ಮನು ಕ್ರಿ.ಶ ೪೫೦ರಲ್ಲಿ ಗದ್ದುಗೆಗೇರಿದನು. ಈತನ ಆಸ್ಥಾನದಲ್ಲಿ ಅಷ್ಟಾದಶ ಸಾಮಂತ ಪ್ರಭುಗಳಿದ್ದರಂತೆ. ತಂದೆಯಂತೆಯೇ ಈತನೂ ಬಹಳ ವೈಭವದಿಂದ ರಾಜ್ಯಭಾರಮಾಡಿದನು; ಹಾಗೇ ಇಷ್ಟಾಪೂರ್ತಗಳಿಗೂ ಪ್ರಸಿದ್ಧನಾಗಿದ್ದನು. ವಿಷ್ಣುವರ್ಮನ ಶಾಸನದ ಪ್ರಕಾರ ಶಾಂತಿವರ್ಮ ಧರ್ಮಮಹಾರಾಜನು ಅಖಿಲ ಕರ್ನಾಟಕದ ಸಾರ್ವಭೌಮನಾಗಿ, ಕ್ರಿ.ಶ ೪೭೫ರ ವರೆಗೆ ಜನಪ್ರಿಯ ಆಡಳಿತದ ಪರಂಪರೆಯನ್ನು ಮುಂಬರಿಸಿಕೊಂಡು ಹೋದನು.

---

೧೧. K.K.Ch. III, K.K., P. 20; and H.C.I.P.Vol. IV p. 183, ಈ ಕಾಕುತ್ಸ್ಥವರ್ಮನು ಕ್ರಿ.ಶ ೪೦೫ರಿಂದ ೪೩೫ರವರೆಗೆ ಆಳುತ್ತಿದ್ದನೆಂದು ಇಲ್ಲಿ ಅಂದಾಜು ಮಾಡಿರುವುದು ಸರಿಯಲ್ಲವೆಂದು ತೋರುತ್ತದೆ (೨ನೆಯ ಪರಿಶಿಷ್ಟ) ನೋಡಿರಿ.

೧೨. S.K.H.P. 20 and H.C.I.P.P ೧೮೨ರಲ್ಲಿ ಕಾಲಿದಾಸನ "ಕುಂತಲೇಶ್ವರದೌತ್ಯ"ದಲ್ಲಿ ಕುಂತಲೇಶನು ರಾಜ್ಯಭಾರವನ್ನು ವಿಕ್ರಮಾದಿತ್ಯನಿಗೆ ವಹಿಸಿಕೊಟ್ಟು ವಿರಾಮಜೀವನ ನಡೆಸುತ್ತಿದ್ದನೆಂದು ಹೇಳಿರುವ ಅಂಶವನ್ನು ಕ್ಷೇಮೇಂದ್ರನು ತನ್ನ ಔಚಿತ್ಯ ವಿಚಾರ ಚರ್ಚೆಯಲ್ಲಿ ಪ್ರತಿಪಾದಿಸಿರುವುದರಿಂದ ವಿಕ್ರಮಾದಿತ್ಯನೆಂಬ ಬಿರುದನ್ನು ಕಾಕುತ್ಸ್ಥ ಚಕ್ರವರ್ತಿ ಧರಿಸಿರಲೂಬಹುದೆಂದು ತೋರುತ್ತದೆ.

ಈತನ ಕಾಲದಲ್ಲಿ ಇವನ ತಮ್ಮನಾದ ೧ನೆಯ ಕೃಷ್ಣವರ್ಮನು ವೈಜಯಂತೀ ರಾಜಧಾನಿಯ ಕುಂತಳ (ಕರ್ನಾಟ) ನಾಡಿನ ದಕ್ಷಿಣಭಾಗದಲ್ಲಿ ಎದುರುನಿಂತ ಸಾಮಂತರನ್ನು ಬಗ್ಗುಬಡಿದು, ಆ ಪ್ರದೇಶದ ಆಡಳಿತವನ್ನು ತ್ರಿಪರ್ವತದಲ್ಲಿ (ಬೇಲೂರು ತಾಲೂಕಿನ ಹಳೇಬೀಡಿನಲ್ಲಿ) ನಿಂತು ನಡೆಸತೊಡಗಿದನು. ವೈಜಯಂತಿಯಲ್ಲಿ (ಬನವಾಸಿಯಲ್ಲಿ) ಶಾಂತಿವರ್ಮ ಚಕ್ರವರ್ತಿಯ ಮಗನಾದ ಮೃಗೇಶವರ್ಮನು ಶ್ರೀ ವಿಜಯಶಿವನೆಂಬ ಬಿರುದಿನಿಂದ ಕ್ರಿ.ಶ ೪೭೫ರಲ್ಲಿ ಪಟ್ಟಕ್ಕೇರಿದನು. ಕೇಕಯ (ಕರ್ನಾಟಕದ ಒಂದು ಪ್ರದೇಶ) ರಾಜನ ಮಗಳಾದ ಪ್ರಭಾವತಿಯು ಇವನ ಪಟ್ಟದರಾಣಿಯಾದಳು. ಈತನು ತನ್ನ ಸಮಕಾಲೀನನಾದ ವಿಷ್ಣುಗೋಪ ಗಂಗನನ್ನು (ಕ್ರಿ.ಶ ೪೭೫–೪೮೦) ಕೋಲಾರ ರಾಜಧಾನಿಯನ್ನು ತ್ಯಜಿಸಿ ತಳಕಾಡಿಗೆ ಓಡುವಂತೆಮಾಡಿದನು; ಸುಮಾರು ಕ್ರಿ.ಶ ೪೫೮–೫೦೦ರ ನಡುವೆ ಕಾಂಚಿಯಲ್ಲಿ ಆಳುತ್ತಿದ್ದಿರಬಹುದಾದ[೧೩] ಮೂರನೆಯ ಸ್ಕಂದವರ್ಮ ಪಲ್ಲವನನ್ನು ಸೋಲಿಸಿದನು. ಶ್ರೀ ಆರ್. ಸಥಿಯನಾಥ ಅಯ್ಯರರು ಪಲ್ಲವ ಶಾಂತಿವರ್ಮನು "ಚಂಡದಂಡ" ಎಂಬ ಬಿರುದನ್ನು ಹೊಂದಿದ್ದನೆಂದೂ ಅವನು ಆರನೆಯ ಶತಮಾನದ ಆದಿಯಲ್ಲಿದ್ದನೆಂದೂ[೧೪] ಹೇಳಿದ್ದಾರೆ. ಈತನು ೩ನೆಯ ಸ್ಕಂದವರ್ಮನ ಮೊಮ್ಮಗನು. ಮೃಗೇಶವರ್ಮನು ಕ್ರಿ.ಶ ೪೭೫ರಿಂದ ೪೯೦ರವರೆಗೂ ತ್ರಿಪರ್ವತದ ವಿಷ್ಣುವರ್ಮ–ಸಿಂಹವರ್ಮರು ಕ್ರಿ.ಶ ೪೮೫ರಿಂದ ೫೪೦ರವರೆಗೂ ಆಳುತ್ತಿದ್ದುದರಿಂದ ಚಂಡದಂಡಪಲ್ಲವನೆಂಬವನು ಪಲ್ಲವರ ಇನ್ನೊಂದು ಅಜ್ಞಾತಶಾಕೆಗೆ ಸೇರಿದವನೆಂದು ಜಿ.ಎಂ. ಮೋರೀಸರಂತೆ[೧೫] ಊಹಿಸಬೇಕಾದ ಪ್ರಮೇಯವಿಲ್ಲ. ಮೊರೀಸರೆಂದಂತೆ ೩ನೆಯ ಸ್ಕಂದವರ್ಮನಿಗೆ ವಿಷ್ಣುಗೋಪನೆಂಬ ಮಗನಿದ್ದುದೂ ಅಯ್ಯರರ ಪ್ರಕಾರ ಸುಳ್ಳು. ೨ನೆಯ ಸ್ಕಂದವರ್ಮನಾದಮೇಲೆ ಕಾಂಚಿಯಲ್ಲಾಳಿದ ವಿಷ್ಣುಗೋಪನ ಕಾಲ ಕ್ರಿ.ಶ ೩೨೫–೩೭೫. ಆದುದರಿಂದ ಮೃಗೇಶವರ್ಮ ಸೋಲಿಸಿದ್ದು ೨ನೆಯ ಸ್ಕಂದವರ್ಮನನ್ನಲ್ಲ ಮೂರನೆಯ ಸ್ಕಂದವರ್ಮನನ್ನು.

ಮೃಗೇಶವರ್ಮನು ಒಳ್ಳೆಯ ಆಡಳಿಗಾರನೆಂದು ಹೆಸರಾಗಿದ್ದನು. ಅವನ ಸರಕಾರವು ಕುಶಲತೆಯಿಂದ ಕೆಲಸಮಾಡುತ್ತಿತ್ತೆಂಬುದು ಶಾಸನಸಿದ್ಧ. ಕಲಾವಿದರು, ಕವಿಗಳು, ಧರ್ಮಜ್ಞರು ಮತ್ತು ವಿದ್ವಾಂಸರು ಅವನ ಆಶ್ರಯವನ್ನು ಸುಲಭವಾಗಿ ಪಡೆಯುತ್ತಿದ್ದರು. ಜೈನರಿಗವನು ವಿಶೇಷವಾಗಿ ಅನುಕೂಲತೆಗಳನ್ನೊದಗಿಸಿಕೊಟ್ಟದ್ದು ಅವನ ಬ್ರಾಹ್ಮಣಿಕೆಯ ಔದಾರ್ಯವನ್ನು ತೋರಿಸುತ್ತದೆ.

ಶಾಂತಿವರ್ಮ ಕದಂಬನ ಸಹೋದರನಾದ ಕುಮಾರವರ್ಮ ಕದಂಬನು ಅಣ್ಣನ ರಾಜಪ್ರತಿನಿಧಿಯಾಗಿ ಉಚ್ಚಂಗಿಯಲ್ಲಿ ಆಳುತ್ತಿದ್ದನು. ಮೃಗೇಶವರ್ಮನ ಕಾಲದಲ್ಲಿ

೧೩. H.C.I.P. Classical Age: P.282-3,
೧೪. H.C.I.P. P. 278 and 283
೧೫. K.K.P.33.

ಅವನು ತನ್ನ ಸ್ವಾತಂತ್ರ್ಯವನ್ನು ಸಾರಿದನು; ಹಾಗೇ ಶಾಂತಿವರ್ಮನ ಮತ್ತೊಬ್ಬ ತಮ್ಮನಾದ ೧ನೆಯ ಕೃಷ್ಣವರ್ಮನು ತನ್ನ ರಾಜಪ್ರತಿನಿಧಿತ್ವವನ್ನು ಕಿತ್ತೆಸೆದು ತ್ರಿಪರ್ವತ (ಹಳೇಬೀಡು) ರಾಜಧಾನಿಯಿಂದ ಸ್ವತಂತ್ರವಾಗಿ ಅಳತೊಡಗಿದನು. ಕದಂಬ ಚಕ್ರಾಧಿಪತ್ಯವೀಗ ಮೂರು ಪಾಲುಗಳಾಗಿ ಒಡೆದುಹೋದಂತಾಯಿತು. ಕೃಷ್ಣವರ್ಮನು ಅಶ್ವಮೇಧಯಾಗವನ್ನು ಮಾಡಿ ಪ್ರಖ್ಯಾತನಾದನು. ಅವನ ಆಳಿಕೆ ಕ್ರಿ.ಶ ೪೭೫ ರಿಂದ ೪೮೦ರ ವರೆಗೆ. ನಣಕ್ಕಾಸಪಲ್ಲವನಿಂದ ಕೊನೆಯಲ್ಲಿ ಅವನಿಗೆ ಸೋಲಾಯಿತಂತೆ. ಅದರಿಂದ ಅವನು ಪಲ್ಲವರ ಸಾಮಂತನಾದನು. ಅವರು ಅವನ ಕಾಲಾನಂತರ ಅವನ ಮಗ ವಿಷ್ಣುವರ್ಮನನ್ನು ಗದ್ದುಗೆಗೇರಿಸಿದರು. ನೆಲ್ಲೂರು–ಗುಂಟೂರುಗಳ ಔತ್ತರೇಯ ಪಲ್ಲವರ ೨ನೆಯ ಸ್ಕಂದವರ್ಮನನ್ನು ಮನಸ್ಸಿನಲ್ಲಿಟ್ಟುಕೊಂಡು ಅವನ ಮಗ ವಿಷ್ಣುಗೋಪನೆಂದು ಹೇಳಿ, ಆ ಸ್ಕಂದವರ್ಮನನ್ನು ಮೊರೀಸರು[೧೬] ಕೃಷ್ಣವರ್ಮನ ಸಮಕಾಲೀನನನ್ನಾಗಿ ಮಾಡಿದ್ದಕ್ಕೆ ಆಧಾರ ತಿಳಿಯದು. ಆದರೆ ನಣಕ್ಕಾಸನೆಂದರೆ (೩ನೆಯ) ಸ್ಕಂದವರ್ಮ ಪಲ್ಲವನಾಗಿರಬಹುದೆಂದು ಊಹಿಸಲಾಗಿದೆ. ಮೊರೀಸರ ಈ ಊಹೆ ಸಮರ್ಥವೆನ್ನಬಹುದು. ಏಕೆಂದರೆ, ೩ನೆಯ ಸ್ಕಂದವರ್ಮ ಪಲ್ಲವನಕಾಲ ಕ್ರಿ.ಶ ೪೫೮ರಿಂದ ಸುಮಾರು ೫೦೦ರವರೆಗೆ.

ಕೃಷ್ಣವರ್ಮನಾದ ಮೇಲೆ ಅವನ ಮಗ ವಿಷ್ಣುವರ್ಮ ಕದಂಬನು ಕ್ರಿ.ಶ ೪೮೫ರಿಂದ ೪೯೭ರವರೆಗೆ ಚಂಡದಂಡ ಶಾಂತಿವರ್ಮ ಪಲ್ಲವನ ಅಧೀನನಾಗಿ ಪಿತ್ರಾರ್ಜಿತ ಕದಂಬ ರಾಜ್ಯಭಾಗವನ್ನಾಳಿದನು. ಚಂಡದಂಡ ಶಾಂತಿವರ್ಮನ ಸಹಾಯದಿಂದ ವಿಷ್ಣುವರ್ಮನು ಕ್ರಿ.ಶ ೪೯೭ರಲ್ಲಿ ಮೃಗೇಶವರ್ಮನ ಮಗನಾದ ರವಿವರ್ಮನನ್ನು ಸೋಲಿಸಹೋದಾಗ ಅವನಿಂದ ಕೊಲ್ಲಲ್ಪಟ್ಟನು. ವಿಷ್ಣುವರ್ಮನ ಮಗ ಸಿಂಹವರ್ಮನು ಕ್ರಿ.ಶ ೪೯೭ರಿಂದ ೫೪೦ರವರೆಗೆ ತ್ರಿಪರ್ವತದಲ್ಲಿ ಸ್ವತಂತ್ರನಾಗಿ ಆಳಿದರೂ ವಿದ್ವಾಂಸನಾಗಿದ್ದರೂ ರವಿವರ್ಮನಷ್ಟು ಖ್ಯಾತನಾಗಲಿಲ್ಲ. ಈ ನಡುವೆ ಮೃಗೇಶವರ್ಮನ ಮರಣಾನಂತರ ರವಿವರ್ಮನು ಬಾಲಕನಾಗಿದ್ದಾಗ ಉಚ್ಚಂಗಿಯ ಕುಮಾರವರ್ಮ ಕದಂಬನ ಮಗನಾದ ಮಾಂಧಾತೃವರ್ಮನು ಕ್ರಿ.ಶ ೪೯೦ ರಿಂದ ೪೯೭ರವರೆಗೆ ಬನವಾಸಿಯಿಂದ ಕದಂಬ ಚಕ್ರಾಧಿಪತ್ಯವನ್ನು ಆಳಲು ನಿಂತನು. ಅವನ ಬಲಾತ್ಕಾರದಾಳಿಕೆ ನಡೆದದ್ದು ಬರೀ ೭ ವರ್ಷಗಳ ಕಾಲ. ಆಮೇಲೆ ಮಕ್ಕಳಿಲ್ಲದ ಮಾಂಧಾತ ತೀರಿಹೋದ; ರವಿವರ್ಮ ಪಟ್ಟಕ್ಕೆ ಬಂದ; ಚಿಕ್ಕಪ್ಪ ವಿಷ್ಣುವರ್ಮನನ್ನು ಕೊಂದ.

ವಿಜಯಿ ರವಿವರ್ಮನು ಕ್ರಿ.ಶ ೪೯೭ರಿಂದ ೫೩೭ರವರೆಗೆ ಆಳಿದನು. ಪಲ್ಲವರ ಮೇಲಿನ ವಿಜಯ ದೊರೆತ ಫಲವಾಗಿ ಹೆಸರಾಂತ ಈ ಚಕ್ರವರ್ತಿಯು ಅವಿನೀತ ಗಂಗನನ್ನು ತಳಕಾಡಿನವರೆಗೆ ಹೋಗಿ ಸೋಲಿಸಿ ಬಂದನು. ಇವನು ಧೀರನೂ

೧೬. K.K., P.40.

ಉದಾರನೂ ಪಂಡಿತನೂ ಆಗಿದ್ದನು; ಹೆಸರಿಗೆ ತಕ್ಕಂತೆ ಉಜ್ವಲ ಪ್ರಭಾವಿಯಾಗಿದ್ದನು. ಈತನ ಜನಪ್ರಿಯತೆ ಸರ್ವಾತಿರಿಕ್ತ. ಈತನ ರಾಣಿಯು ೫೩೭ರಲ್ಲಿ ಇವನೊಡನೆ ಸಹಗಮನ ಮಾಡಿದಳು.

ರವಿವರ್ಮನ ಮಗ ಹರಿವರ್ಮ. ಇವನ ಆಳಿಕೆ ಕ್ರಿ.ಶ ೫೩೭ರಿಂದ ೫೪೭ರವರೆಗೆ. ಮಕ್ಕಳಿಲ್ಲದ ಈತನ ಬಳಿಕ ಬನವಾಸಿಯ ಗದ್ದುಗೆಯು ತ್ರಿಪರ್ವತೀಯ ಸಿಂಹವರ್ಮನ ಮಗ ೨ನೆಯ ಕೃಷ್ಣವರ್ಮನ ವಶಕ್ಕೆ ಹೋಯ್ತು. ಅವನಾಳಿಕೆ ಕ್ರಿ.ಶ ೫೪೭ರಿಂದ ೫೬೫ರವರೆಗೆ. ದಾಯಾದನಾದ ಹರಿವರ್ಮನ ರುಂಡವನ್ನು ಮುಂಡದಿಂದ ಬೇರ್ಪಡಿಸಿದ ರಣವೀರ ಕೃಷ್ಣವರ್ಮನಿಗೆ ಬನವಾಸಿ ಸರಕಾರದ ಗಣ್ಯನೌಕರನಾಗಿ ಬಾದಾಮಿಯಲ್ಲಿ ನೆಲೆಸಿದ್ದ ೧ನೆಯ ಚಾಲುಕ್ಯ ಪುಲಿಕೇಶಿ ದಂಗೆಯೆದ್ದು ಸ್ವತಂತ್ರನಾದದ್ದು ಅನುಕೂಲವಾಗಿ ಪರಿಣಮಿಸಿತು.

ಈ ೨ನೆಯ ಕೃಷ್ಣವರ್ಮನೂ ಬನವಾಸಿಯಲ್ಲಿ ಅಶ್ವಮೇಧಯಾಗ ಮಾಡಿ ಕೀರ್ತಿಯನ್ನು ಗಳಿಸಿದನು; ತಿರುಗಿ ನಿಂತ ಸಾಮಂತ ಸೇಂದ್ರಕರನ್ನು ಹಾದಿಗೆ ತಂದನು; ಕದಂಬ ಸಾಮ್ರಾಜ್ಯವನ್ನು ಪುನಃ ದೃಢಪಡಿಸಿದನು; ಚೆನ್ನಾಗಿ ರಾಜ್ಯಭಾರ ಮಾಡಿದನು. ಆದರೆ ಚಾಲುಕ್ಯರ ೧ನೆಯ ಪುಲಿಕೇಶಿಯ ಮಗನಾದ ೧ನೆಯ ಕೀರ್ತಿವರ್ಮನು ಬನವಾಸಿಗೆ ದಂಡೆತ್ತಿ ಬಂದು ಕೃಷ್ಣವರ್ಮನನ್ನು ಯುದ್ಧದಲ್ಲಿ ಕೊಂದಿರಬೇಕು. ಆದುದರಿಂದ ಇವನ ಮಗ ಅಜವರ್ಮನು ಕ್ರಿ.ಶ ೫೬೫–೬೦೬ರವರೆಗೆ ಕೇವಲ ಬನವಾಸಿ ೧೨ ಸಾವಿರವನ್ನು ಹತಪ್ರಭನಾಗಿ ಆಳುತ್ತಿದ್ದನು. ತಂದೆಗಿದ್ದ ಸ್ವಾತಂತ್ರ್ಯ ಈತನಿಗಿಲ್ಲವಾಯ್ತು; ಈತನು ಚಾಲುಕ್ಯರ ಮಹಾ ಮಂಡಲೇಶ್ವರನಾದನು. ಇವನ ಕಾಲಾನಂತರ ಇವನ ಮಗ ಭೋಗಿವರ್ಮನು ಪಟ್ಟಕ್ಕೆ ಬಂದು ಕ್ರಿ.ಶ ೬೦೬ರಿಂದ ೬೧೦ರವರೆಗೆ ಸ್ವತಂತ್ರನಾಗಿಯೇ ಆಳಿದನು. ಚಿಕ್ಕಪ್ಪನಾದ ಚಾಲುಕ್ಯರ ಮಂಗಲೇಶನಿಗೂ ಅವನ ಅಣ್ಣನ ಮಗನಾದ ೨ನೆಯ ಪುಲಿಕೇಶಿಗೂ ಕಲಹವುಂಟಾದದ್ದು ಇವನಿಗೆ ಲಾಭಕರವಾಗಿ ಪರಿಣಮಿಸಿತು.

ಚಾಲುಕ್ಯರ ಮಂಗಲೇಶ ಆಳಿದ್ದು ಕ್ರಿ.ಶ ೫೯೭ರಿಂದ ೬೧೦ರವರೆಗೆ. ೬೧೦ರಲ್ಲಿ ೨ನೆಯ ಪುಲಿಕೇಶಿ ಅವನನ್ನು ಕೊಂದ, ಚಾಲುಕ್ಯ ಸಮ್ರಾಜನಾದ. ಅನಂತರ ಚಕ್ರಾಧಿಪತ್ಯದ ಕಳೆದ ಭಾಗಗಳನ್ನು ಒಂದೊಂದನ್ನಾಗಿ ಮರಳಿ ಗೆದ್ದುಕೊಳ್ಳುತ್ತ ಆತನು ಬನವಾಸಿಯನ್ನು ಮುತ್ತಿದನು. ಆಗ ನಡೆದ ಘೋರಕದನದಲ್ಲಿ ಭೋಗಿವರ್ಮನೂ ಅವನ ಮಗ ವಿಷ್ಣುವರ್ಮನೂ ಹತರಾಗಿರಬೇಕು. ಕುಬೇರ ಸಂಪತ್ತಿನ ಕದಂಬರ ಸಾರ್ವಭೌಮತ್ವವು ಇಲ್ಲಿಗೆ ಕೊನೆಯದಾಗಿ ಕೊನೆಗಂಡಿತು.

ಆದರೆ ದಕ್ಷಿಣಾಪಥ ಚಕ್ರವರ್ತಿಯಾದ (೬೧೦–೬೪೨) ೨ನೆಯ ಪುಲಿಕೇಶಿಯು ಅಂತ್ಯಕಾಲದಲ್ಲಿ ೧ನೆಯ ಮಹೇಂದ್ರವರ್ಮ ಪಲ್ಲವನ ಮೇಲೆ ದಂಡೆತ್ತಿಹೋದನು, ಅವನನ್ನು ಯುದ್ಧದಲ್ಲಿ ಗೆದ್ದನು. ಆದರೆ ಆ ಗೆಲುವು ತೀರ ನಶ್ವರವಾಯ್ತು. ಮಹೇಂದ್ರನ

ಮಗನಾದ ೧ನೆಯ ನರಸಿಂಹವರ್ಮ ಪಲ್ಲವನು ದಂಡೆತ್ತಿ ಬಂದು ಪುಲಿಕೇಶಿಯ ರಾಜಧಾನಿಯಾಗಿದ್ದ ಬಾದಾಮಿಯನ್ನು ಹಾಳುಗೆಡೆದನು ಮತ್ತು ವಾತಾಪಿಕೊಂಡನೆಂಬ ಬಿರುದನ್ನು ಪಡೆದನು. ಆಗ ೬೪೨ ರಿಂದ ೬೫೫ರವರೆಗೆ ಚಾಲುಕ್ಯಸಿಂಹಾಸನ ಖಾಲಿಯಾಗಿತ್ತು. ಆಮೇಲೆ ಪುಲಿಕೇಶಿಯ ಮಗನಾದ ೧ನೆಯ ವಿಕ್ರಮಾದಿತ್ಯನು ಬಾದಾಮಿಯಿಂದ ಪಲ್ಲವರನ್ನೋಡಿಸಿ ಸಿಂಹಾಸನವನ್ನೇರಿದನು. ಅವನ ಆಳಿಕೆ ಕ್ರಿ.ಶ ೬೫೫ರಿಂದ ೬೮೧ರವರೆಗೆ. ಆದರೆ ಆತನಿಗೂ ತನ್ನ ಆಳಿಕೆಯ ಬಹುಭಾಗವನ್ನು ಪಲ್ಲವದೊರೆಗಳೊಡನೆ (೧ನೆಯ ನರಸಿಂಹವರ್ಮ, ಅವನ ಮಗ ೨ನೆಯ ಮಹೇಂದ್ರವರ್ಮ ಮತ್ತು ಅವನ ಮಗ ೧ನೆಯ ಪರಮೇಶ್ವರವರ್ಮರೊಡನೆ) ಹೋರಾಡುವುದರಲ್ಲೇ ಕಳೆಯಬೇಕಾಯ್ತು; ಹೋರಾಡಿ ಗೆದ್ದೂ ಗೆದ್ದ: ದಕ್ಷಿಣಾಪಥ ಚಕ್ರವರ್ತಿಯಾದ; ಅವನ ತಂದೆಯಂತೆಯೇ ಕದಂಬರ, ಮೌರ್ಯರ (ಉತ್ತರಕೊಂಕಣ ಪ್ರದೇಶದ ಅರಸರ) ಮತ್ತು ಪಲ್ಲವರ "ಮಹಾರಾಷ್ಟ್ರಕ"ಗಳನ್ನು ತನ್ನ ಅಂಕೆಯೊಳಗೆ ತಂದುಕೊಂಡನು. ಆದರೆ ೬೭೪ರಲ್ಲಿ ಒಮ್ಮೆ ೧ನೆಯ ಪರಮೇಶ್ವರವರ್ಮ ಪಲ್ಲವನನ್ನು ಸೋಲಿಸಿದರೂ ಮತ್ತೆ ಅವನ ಸೇನಾಪತಿ ಶಿರುತ್ತೊಂಡನು ಬಾದಾಮಿಯನ್ನು ಮುತ್ತಿದನು. ಆಗ ಅವನಿಂದ ಬಾದಾಮಿಯನ್ನುಳಿಸಿದ ಕೀರ್ತಿಯು ವಿಕ್ರಮಾದಿತ್ಯನ ಮೊಮ್ಮಗನಾದ ವಿಜಯಾದಿತ್ಯನಿಗೆ ಸಲ್ಲುತ್ತದೆ.

ಈ ಸಂದರ್ಭದಲ್ಲಿ ವಲಭಿಯ ಶೀಲಾದಿತ್ಯನು ಪಲ್ಲವರ ೨ನೆಯ ಮಹೇಂದ್ರವರ್ಮನನ್ನು ಕೊಂದಿರಬೇಕೆಂದು ಮೊರೀಸರವಾದ[೧೭]. ಒಂದನೆಯ ನರಸಿಂಹವರ್ಮ ಪಲ್ಲವನು ಪುಲಿಕೇಶಿಯನ್ನು ಕೊಂದು ಅವನ ಸಾಮ್ರಾಜ್ಯದ ಉತ್ತರಭಾಗವನ್ನು ವಶಪಡಿಸಿಕೊಂಡ ಬಳಿಕ ವಲಭಿಯ ಶೀಲಾದಿತ್ಯನು ನರಸಿಂಹವರ್ಮನ ಮಗನಾದ (೬೬೦–೬೭೦)೨ನೆಯ ಮಹೇಂದ್ರನನ್ನು ಕೊಂದು ಆ ಭಾಗವನ್ನು ತಾನಾಳ ತೊಡಗಿದ–ಎಂಬುದು ವಾದದ ಸಿದ್ಧಾಂತ. ಆದರೆ ಲಾಟೀಯ ಯುವರಾಜಶ್ರ್ಯಾಶ್ರಯ ಶೀಲಾದಿತ್ಯನು ಆ ಪ್ರದೇಶದ ಚಾಲುಕ್ಯ ರಾಜ ಪ್ರತಿನಿಧಿಯಾದ ಧರಾಶ್ರಯ ಜಯಸಿಂಹವರ್ಮನ ಮಗನೆಂದು[೧೮] ಸಾಧಾರವಾಗಿ ಗೊತ್ತಾಗಿರುವದರಿಂದ, ಅವನು ಪಲ್ಲವರನ್ನು ಸೋಲಿಸಿದರೆ ಚಾಲುಕ್ಯ ಮನೆತನವನ್ನೇ ಸೋಲಿಸಿದಂತಾಗುತ್ತದೆ. ಶೀಲಾದಿತ್ಯನಾಗ ೧ನೆಯ ವಿಕ್ರಮಾದಿತ್ಯನಿಗೆ ಸಹಾಯ ಮಾಡಿದಂತಾಯಿತು– ಅಷ್ಟೆ. ಆದರೆ ಈ ಘಟನೆ ನಡೆಯುವ ಮೊದಲೇ ಅಂದರೆ ೧ನೆಯ ನರಸಿಂಹವರ್ಮ

---

೧೭. K.K., P. 65,

೧೮. H.C.I.P., P. 246: ವಲಭಿಯು ಲಾಟದೇಶದೊಳಗೆ ಅಡಕವಾಗದ ಭೂಪ್ರದೇಶವಾಗಿದ್ದರೆ, ಅಲ್ಲಿಯ ಧರಸೇನ ವಂಶದ ರಾಜ್ಯಾಧಿಕಾರವು ೪ನೆಯ ಧರಸೇನನ ಬಳಿಕ ಶೀಲಾದಿತ್ಯವೆಂಬ ಹೊಸ ವಂಶಕ್ಕೆ ಹೇಗೆ ಹೋಯ್ತೆಂಬುದು ಗೊತ್ತಿಲ್ಲ. (P.148). ಈ ಹೊಸ ವಂಶದ ವಜ್ರಟ ಶೀಲಾದಿತ್ಯನನ್ನು ೨ನೆಯ ಪುಲಿಕೇಶಿಯ ಮಗನಾದ ಮತ್ತು ಶ್ರ್ಯಾಶ್ರಯ ಶೀಲಾದಿತ್ಯನ ತಂದೆಯಾದ ಧರಾಶ್ರಯ ಜಯಸಿಂಹನು. ಜಯಿಸಿದನು (P.149). ಅಲ್ಲದೆ ಪಲ್ಲವರನ್ನು ಸೋಲಿಸಿದ್ದು ವಲಭಿಯ ಶೀಲಾದಿತ್ಯನಲ್ಲ. ಚಾಲುಕ್ಯ ಶೀಲಾದಿತ್ಯ (P.149).

ಪಲ್ಲವನು ೨ನೆಯ ಪುಲಿಕೇಶಿಯನ್ನು ಕೊಂದು ೧೦ ವರ್ಷಗಳಕಾಲ (೬೪೨–೬೫೨) ಚಾಲುಕ್ಯ ಸಿಂಹಾಸನ ಖಾಲಿ ಉಳಿಯುವಂತೆ ಮಾಡಿದ ಮೇಲೆ ಒಂದನೆಯ ವಿಕ್ರಮಾದಿತ್ಯನು ಪಟ್ಟಕ್ಕೆ ಬರುವುದಕ್ಕೆ ೧ವರ್ಷ ಮೊದಲು ಪರಿಸ್ಥಿತಿಯ ಗೊಂದಲದ ಪ್ರಯೋಜನವನ್ನು ಪಡೆದು, ಬನವಾಸಿಯಲ್ಲಿ ಕ್ರಿ.ಶ ೬೧೦ರಿಂದ ೬೫೧ರವರೆಗೆ ಲುಪ್ತವಾಗಿದ್ದ ರಾಜ್ಯಾಧಿಕಾರವನ್ನು ಭೋಗಿವರ್ಮನ ಮೊಮ್ಮಗನೂ ವಿಷ್ಣುವರ್ಮನ ಮಗನೂ ಆಗಿರಬಹುದಾದ ಮಧುವರ್ಮ ಕದಂಬನು ವಶಪಡಿಸಿಕೊಂಡು, ಕ್ರಿಶ ೬೫೧ರಿಂದ ೬೫೫ರ ವರೆಗೆ ಸ್ವತಂತ್ರವಾಗಿ ಆಳಿದನು. ಒಂದನೆಯ ವಿಕ್ರಮಾದಿತ್ಯನು ಸಿಂಹಾಸನವನ್ನೇರಿ ದಿಗ್ವಿಜಯಕ್ಕೆ ಹೊರಟ ಬಳಿಕ ಪಾಂಡ್ಯ, ಚೋಳ, ಕೇರಳಗಳ ಅರಸರಂತೆಯೇ ಬನವಾಸಿಯ ಸ್ವತಂತ್ರ ಕದಂಬರ ಹೆಸರೂ ಅಡಗಿಹೋಯಿತು. ಬಹುಶಃ ಮಧುವರ್ಮನು ಯುದ್ಧದಲ್ಲಿ ಮಡಿದಿರಬೇಕು.

೨. ಕದಂಬರ ಖಗ್ರಾಸಗ್ರಹಣ

ಬನವಾಸಿಯ ಕುಂತಳ ಚಕ್ರಾಧಿಪತ್ಯ ಅಳಿಯಿತು; ಚಾಲುಕ್ಯರ ಕರ್ನಾಟ ಚಕ್ರಾಧಿಪತ್ಯ ಬೆಳೆಯಿತು. ಕ್ರಿ.ಶ ೬೫೫ರಿಂದ ೬೭೫ರವರೆಗೆ ಖಗ್ರಾಸ ಖಂಡ. ೬೭೫ರಲ್ಲಿ ಆಳುಪ ಅರಸ ಗುಣಸಾಗರನ ಶಾಸನವೊಂದು ಕದಂಬಮಂಡಲವನ್ನು ಉಲ್ಲೇಖಿಸಿದೆ. ಗುಣಸಾಗರನು ಆಳುಪ ಮಾಂಡಲಿಕ. ಚಾಲುಕ್ಯ ಮಂಗಲೇಶನ ಕ್ರಿ.ಶ ೫೬೭ರ ಶಾಸನ ಹೇಳಿದೆ– ೧ನೆಯ ಕೀರ್ತಿವರ್ಮನು ವಂಗ, ಅಂಗ, ಕಳಿಂಗ, ವಟ್ಟೂರ, ಮಗಧ, ಮದ್ರಕ, ಕೇರಳ, ಗಂಗ, ಮೂಷಕ, ಪಾಂಡ್ಯ, ದ್ರಮಿಳ, ಚೋಳಿಯ, ಆಳುಕ ಮತ್ತು ವೈಜಯಂತಿಗಳ ರಾಜರನ್ನು ಗೆದ್ದ ಎಂದು. ಆಳುಪರನ್ನು ಕೊನೆಯದಾಗಿ ಕಳಚುರಿಗಳೊಂದಿಗೆ ಗೆದ್ದವನು ಮಂಗಲೇಶನೇ. ೨ನೆಯ ಪುಲಿಕೇಶಿಯು ಬನವಾಸಿ ರಾಜ್ಯದ ನಾಗರಖಂಡ ಜಿಲ್ಲೆಯನ್ನು ಬಂಧುಗಳಾದ ಸೇಂದ್ರಕರ ಮತ್ತು ಉಳಿದ ಭಾಗವನ್ನು ಆಳುಪರ ಆಡಳಿತಕ್ಕೆ ಒಳಪಡಿಸಿ ಕದಂಬನಿರ್ಮೂಲನಕ್ಕೆ ತಳಪಾಯ ಹಾಕಿದನು. ಗುಣಸಾಗರ ಆಳುಪನು (೬೫೦) ಕುಂದವರ್ಮರಸ ಆಳುಪನಾದಮೇಲೆ ಬನವಾಸಿಯ ಆಡಳಿತವನ್ನು ವಹಿಸಿಕೊಂಡವ. ಅವನ ಮೇಲ್ದೊರೆ ೧ನೆಯ ಚಾಲುಕ್ಯ ವಿಕ್ರಮಾದಿತ್ಯ. ಗುಣಸಾಗರನಾದ ಬಳಿಕ ಅವನ ಮಗ ೧ನೆಯ ಚಿತ್ರವಾಹನ ಆಳುಪ ಬಂದ. ಅವನ ಮೇಲರಸ ಚಾಲುಕ್ಯ ವಿನಯಾದಿತ್ಯ.

ಮಹಾರಾಜ ಚಿತ್ರವಾಹನ (೬೭೫–೭೦೦) ಚೆನ್ನಾಗಿ ಆಡಳಿತ ನಡೆಸಿದ. ಅವನು ತನ್ನ ಎಡೆವೊಳಲ ಜೊತೆಗೆ ಬನವಾಸಿ ನಾಡನ್ನಾಳಿದ. ಆಮೇಲೆ ಚಾಲುಕ್ಯರ ಬಾಂಧವರಾಗಿದ್ದ ಸೇಂದ್ರಕರಿಗೂ ಬನವಾಸಿ ರಾಜ್ಯದಲ್ಲೊಂದು ಪಾಲು ಬಂತು. ಶ್ರೀವಲ್ಲಭಸೇನಾನಂದರಾಜ ಸೇಂದ್ರಕನೂ ಅವನ ಸಂತಾನದವರೂ ಪಶ್ಚಿಮ ಚಾಲುಕ್ಯರ ಮಾಂಡಲಿಕರಾಗಿ ಬನವಾಸಿಯ ಭಾಗವನ್ನಾಳಿದರು. ದೇವಶಕ್ತಿ ಸೇಂದ್ರಕನು ೧ನೆಯ ಚಾಲುಕ್ಯ ವಿಕ್ರಮಾದಿತ್ಯನ ಅಧೀನನಾಗಿ ಬನವಾಸಿ ಭಾಗವನ್ನು ಆಳಿದ. ಅದು ಸುಮಾರು ಕ್ರಿ.ಶ ೬೬೪ರ ಕಾಲ. ದೇವಶಕ್ತಿಯು ಶ್ರೀವಲ್ಲಭ ಸೇನಾನಂದರಾಜನ ಮಗನಾಗಿರಬಹುದು. ಪೊಗಿಲ್ಲಿಮಹಾರಾಜನೆಂಬ ಸೇಂದ್ರಕನು ಚಾಲುಕ್ಯ ವಿನಯಾದಿತ್ಯನ (೬೮೦–೯೬೨) ಅಧೀನನಾಗಿ ಬನವಾಸಿನಾಡಿನ ನಾಗರ ಖಂಡವೆಂಬ ಒಂದು ಜಿಲ್ಲೆಯ ಆಡಳಿತವನ್ನು ನೋಡಿಕೊಂಡಿದ್ದನು; ಸೊರಬತಾಲೂಕಿನ ಜಡೆಯೂ ಅವನ

ಆಡಳಿತಕ್ಕೆ ಸೇರಿತ್ತು. ೮ನೆಯ ಶತಮಾನದಲ್ಲಿ ಚಾಲುಕ್ಯರ ಜೊತೆಗೇ ಸೇಂದ್ರಕರ ಅರಸೊತ್ತಿಗೆಯೂ ದಕ್ಷಿಣಾಪಥದಲ್ಲಿ ನಿರ್ನಾಮವಾಯಿತು.

ಮಾಳಖೇಡದ ರಾಷ್ಟ್ರಕೂಟರೀಗ ಪ್ರಬಲರಾದರು. ಸುಮಾರು ಕ್ರಿ.ಶ ೭೫೪ರ ಸಮಯ. ಖಡ್ಗಾವಲೋಕ ದಂತಿ ದುರ್ಗರಾಜದೇವನೆಂಬ ರಾಷ್ಟ್ರಕೂಟ ದೊರೆಯ ಅಧಿಪತ್ಯ. ಪಶ್ಚಿಮ ಚಾಲುಕ್ಯರು ಅವನಿಗೆ ಮಣಿದರು. ಕರ್ನಾಟ, ಕಾಂಚಿ, ಕೇರಳ, ಚೋಳ, ಪಾಂಡ್ಯ ಅರಸರೆಲ್ಲರೂ ಅವನ ಸಾರ್ವಭೌಮತ್ವವನ್ನು ಒಪ್ಪಿಕೊಂಡರು. ಚಾಲುಕ್ಯರ ೨ನೆಯ ಕೀರ್ತಿವರ್ಮನನ್ನು ಅವನ ಮಗ ರಾ. ಕೂ. ಕೃಷ್ಣ ಕೊನೆಯದಾಗಿ ಸೋಲಿಸಿದನು. ರಾಷ್ಟ್ರಕೂಟರು ತಮ್ಮ ಚಕ್ರಾಧಿಪತ್ಯವನ್ನು ಪ್ರಾಂತಗಳನ್ನಾಗಿ ವಿಂಗಡಿಸಿದಾಗ ಬನವಾಸಿಯೊಂದು ಪ್ರಾಂತವಾಯ್ತು. ಅದರ ಗ್ರಾಮಗಳು ೧೨೦೦೦, ರಾಜಧಾನಿ ಬನವಾಸಿ ಪಟ್ಟಣ. ಆಳುಪರ ಆಡಳಿತದಲ್ಲಿದ್ದ ಬನವಾಸಿ ರಾಜ್ಯಭಾಗವಿಂದು ರಾ.ಕೂ. ಅಧಿಪತ್ಯದ ಒಂದು ಪ್ರಾಂತ. ಆಳುಪರು ರಾಷ್ಟ್ರಕೂಟರ ಅಧೀನರಾಗಿ ಕ್ರಿ.ಶ ೭೯ರವರೆಗೆ ಬನವಾಸಿಯನ್ನಾಳಿದರು.

೯ನೆಯ ಶತಮಾನದ ಆದಿಯಲ್ಲಿ ಆಳುಪರ ೨ನೆಯ ಚಿತ್ರವಾಹನನು ರಾಷ್ಟ್ರಕೂಟರ ವಿರುದ್ಧ ದಂಗೆಯೆದ್ದನು. ಆಗಿನ ರಾ. ಕೂ. ಚಕ್ರವರ್ತಿ ೩ನೆಯ ಗೋವಿಂದ. ಚಿತ್ರವಾಹನನನ್ನು ಬಗ್ಗುಬಡಿದುಕೊಟ್ಟ ಕೊಲ್ಲಿಪಲ್ಲವನೊಳಂಬನ ಮಗನಾದ ರಾಜಾದಿತ್ಯನಿಗೆ ಬನವಾಸಿಯ ಆಡಳಿತವನ್ನು ಅವನು ವರ್ಗಾಯಿಸಿದನು. ರಾಜಪರಮೇಶ್ವರ ಕೊಲ್ಲಿಪಲ್ಲವನು ರಾಷ್ಟ್ರಕೂಟರ ಪ್ರತಿನಿಧಿಯಾಗಿ ಬನವಾಸಿ ರಾಜ್ಯವನ್ನಾಳಿದನು. ಅವನ ರಾಜ್ಯಪಾಲ ವಂದನಾಗ. ಎರೆಯಮ್ಮರಸ (೮೧೪) ಎಂಬ ಮಾಂಡಲಿಕನು ಅನಂತರದ ಆಡಳಿತಾಧಿಕಾರಿಯಾದ ರಾಜ್ಯಪಾಲ.

ರಾ. ಕೂಟರ ೧ನೆಯ ನೃಪತುಂಗ ಅಮೋಘವರ್ಷನ (೮೧೪–೮೮೦) ಸಾರ್ವಭೌಮತ್ವದಲ್ಲಿ ಚೆಲ್ಲಕೇತನ ಮನೆತನದ ಬಂಕೆಯರಸ ಕ್ರಿ.ಶ ೮೩೫ರಲ್ಲಿ ಬನವಾಸಿ ಪನ್ನಿರ್ಛಾಸಿರದ ಆಡಳಿತಗಾರನಾದನು. ಆಮೇಲೆ ಕ್ರಿ.ಶ. ೮೯೩ರ ಹೊತ್ತಿಗೆ ಬಂಕೆಯರಸನ ೨ನೆಯ ಮಗ ಲೋಕಾದಿತ್ಯನು ಇಡಿ ಬನವಾಸಿ ಪ್ರಾಂತದ ಆಡಳಿತಗಾರನಾದನು. ಇವರಿಬ್ಬರಿಗೂ ನಡುವೆ ಕ್ರಿ.ಶ ೮೭೦ರಲ್ಲಿ ಕದಂಬ ಇಂದ್ರನ ಆಡಳಿತಗಾರಿಕೆ ಸಾಗಿತ್ತು. ಆಮೇಲಿನವನು ಬಂಕೆಯನ ಹಿರಿಯ ಮಗ ಶಂಕರಗಂಡ. ಅವನು ರಾ.ಕೂ.೧ನೆಯ ಅಮೋಘವರ್ಷನಿಗೆ ಅಧೀನನಾಗಿದ್ದನು; ೨ನೆಯ ಕೃಷ್ಣನ ಆಳಿಕೆಯ ಆದಿಭಾಗದಲ್ಲೂ ಅವನು ಬನವಾಸಿಯ ಆಡಳಿತಾಧಿಕಾರಿಯಾಗಿದ್ದ. ಅದೇ ಚೆಲ್ಲಕೇತನ ಮನೆತನದ ಮಹಾಸಾಮಂತ ಲೋಕಾದಿತ್ಯನು ಶಂಕರಗಂಡನಾದ ಬಳಿಕ ಬನವಾಸಿಯ ರಾಜ್ಯಪಾಲನಾದನು (೮೯೩–೯೦೫). ರಾ. ಕೂ. ೨ನೆಯ ಕೃಷ್ಣನ ಕೈಕೆಳಗೆ ಅವನು ಕ್ರಿ.ಶ ೯೦೫ರವರೆಗೆ ಬನವಾಸಿ ೧೨೦೦೦ವನ್ನು ಆಳಿದನು. ಅನಂತರ ರಾಜ್ಯಪಾಲ ಸೇನಾವರಿಸನು ಬನವಾಸಿಯ ಆಡಳಿತದ ಮೇಲ್ವಿಚಾರಕನಾದನು. ಮಹಾಸಾಮಂತ

ಕಲಿವಿಟ್ಟರಸನಿಗೆ ಅನಂತರ ಬನವಾಸಿಯ ಅಧಿಕಾರ. ಈತನ ಮಹಾಸಾಮಂತಿಕೆಯಲ್ಲಿ ಮೂಲ ಕದಂಬಕುಲದ ಆಯ್ವವರ್ಮನು ದಂಗೆಯೆದ್ದು ಹತನಾದನು. ಬಂಕೆಯರಸನ ಕಾಲದಿಂದ ಇವರೆಲ್ಲರೂ ಬಂಕಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಬನವಾಸಿಯನ್ನು ಆಳಿದರು. ಇವರಲ್ಲಿ ಇಂದ್ರನೊಬ್ಬ ಕದಂಬರಾಜನೂ ರಾಜ್ಯಪಾಲನೂ ಆದವನು. ಆಮೇಲೆ ಸುಮಾರು ಕ್ರಿ.ಶ ೯೩೪ರ ಹೊತ್ತಿಗೆ ಬನವಾಸಿ ಪ್ರಾಂತದ ಮೇಲಧಿಕಾರಿಯಾಗಿ ಬಂದವನು ಶಾಂತರ. ಇದು ರಾ.ಕೂ. ೪ನೆಯ ಗೋವಿಂದನ ಕಾಲ. ಅನಂತರ ಮತ್ತೆ ೯೪೫ರಲ್ಲಿ ಕಲಿವಿಟ್ಟರಸನೇ ಬನವಾಸಿಯ ಒಂದು ಭಾಗದ ಆಡಳಿತವನ್ನು ವಹಿಸಿಕೊಂಡನು. ಚೆಲ್ಲಕೇತನರ ಆಡಳಿತದ ವೈಭವವು ಕೊನೆಯ ರಾಜ್ಯಪಾಲ ರಸಣ್ಣನಿಂದ ಮುಗಿಯಿತು (೯೫೪).

ಬನವಾಸಿಯ ಬಾಳು ಈ ನಡುವೆ ರಾ.ಕೂ.ಸಾಮಂತನಾದ ಗಂಗದೊರೆ ಸತ್ಯವಾಕ್ಯ ಕೊಂಗುಣಿವರ್ಮನ ಕೈಗೆ ಸೇರಿತ್ತು. ಆದರೆ ಗಂಗರ ಆಡಳಿತವನ್ನದು ೪–೫ ವರ್ಷಗಳ ವರೆಗಷ್ಟೇ ಕಂಡಿತು. ಆಮೇಲೆ ಪುನಃ ಅದು (೯೪೫) ಕಲಿವಿಟ್ಟರಸ ಚೆಲ್ಲಕೇತನನ ಕೈಗೆ ಬಂತು. ಆದರೆ ಕೊನೆಯ ಚೆಲ್ಲಕೇತನನಾದ ರಸಣ್ಣ ಮನೆತನದ ಅಧಿಕಾರಕ್ಕೆ ಇತಿಶ್ರೀ ಹಾಕಿದ. ಅಂತೂ ಮಹಾಸಾಮಂತಾಧಿಪತಿಗಳಾದ ಬಂಕಾಪುರದ ಚೆಲ್ಲಕೇತನರ ಬನವಾಸಿ ರಾಜ್ಯಪಾಲತ್ವವು ಸುಮಾರು ೧೦೦ ವರ್ಷಗಳವರೆಗೆ ಬಾಳಿತು.

ಕ್ರಿ.ಶ ೯೫೪ರಲ್ಲಿ ಮಾಚಿಯರಸ ಅಥವಾ ನಾರಕ್ಕಿ ಅರಸ ಬನವಾಸೀಶ್ವರನಾದನು. ಈ ಮಹಾಸಾಮಂತಾಧಿಪತಿಯ ಆಳಿಕೆ ಆರು ವರ್ಷಕಾಲ. ಇವನ ರಾಜಧಾನಿ ಎಡೆನಾಡು. ಇವನ ಅನಂತರ ಜವನೇಶ ಬಂದ (೯೬೦). ಆಮೇಲೆ ಕ್ರಿ.ಶ ೯೬೫ರಿಂದ ೯೬೭ರವರೆಗೆ ಗೊಬ್ಬಿಂದರಸ ಆಳಿದ. ರಾ. ಕೂ. ದಂತಿದುರ್ಗನು ಕ್ರಿ.ಶ ೭೫೩ರಲ್ಲಿ ಸ್ಥಾಪಿಸಿದ ಸಾಮ್ರಾಜ್ಯ ವೈಭವವು ಕ್ರಿ.ಶ ೯೬೭ರ ವರೆಗೆ ಕ್ರಮೇಣ ಕರ್ನಾಟವಾಗಿ ಹೋದ ಕುಂತಳದಲ್ಲಿ ನೆಲೆಸಿತು; ಬನವಾಸಿಯನ್ನು ಸಾಮಂತ ರಾಜ್ಯಪಾಲರಿಂದಲೂ ಅದರ ಜಿಲ್ಲೆಗಳನ್ನು ಬೇರೆ ಬೇರೆ ನಾಳ್ಗವುಂಡರಿಂದಲೂ ಆಳಿಸಿತು; ಆಮೇಲೆ ರಾ. ಕೂ.೨ನೆಯ ಕಕ್ಕನನ್ನು ಕ್ರಿ.ಶ. ೯೭೩ರಲ್ಲಿ ಚಾಲುಕ್ಯರ ೨ನೆಯ ತೈಲ ಸೋಲಿಸಿದಾಗ ನಾಮಶೇಷವಾಯಿತು.

೩. ಬನವಾಸಿಯ ಕದಂಬರ ಪುನರುತ್ಥಾನ.

ರಾಜಧಾನಿ: ಹಾನುಗಲ್ಲು

ಕ್ರಿ.ಶ ೯೬೭–೮ರಲ್ಲಿ ಚಟ್ಟಿಗದೇವ ಚಾಲುಕ್ಯನು ಬನವಾಸಿಯನ್ನೂ ಅದರ ಸುತ್ತುಮುತ್ತಲಿನ ಪ್ರಾಂತಗಳನ್ನೂ ರಾಷ್ಟ್ರಕೂಟರಿಂದ ಕಸಿದುಕೊಳ್ಳಲಾರಂಭಿಸಿದ್ದನು.[೧೯] ಅದು ರಾ.ಕೂ.೩ನೆಯ ಕೃಷ್ಣ ಅಕಾಲವರ್ಷನ ಕಾಲವಾಗಿತ್ತು (ಕ್ರಿ.ಶ ೯೪೦–೯೭೦). ಚಟ್ಟಿಗನು ಬನವಾಸಿಯಲ್ಲಿ ಮಾಡಿದ ಶುಭಾರಂಭವನ್ನು ತೈಲನು ಕ್ರಿ.ಶ ೯೭೩ರಲ್ಲಿ ಪೂರ್ಣಗೊಳಿಸಿದನು. ಅಂದಿನಿಂದ ನವ ಕರ್ಣಾಟಕದಲ್ಲಿ ಚಾಲುಕ್ಯಯುಗ ಪುನರಾರಂಭವಾಯ್ತು. ಚಟ್ಟಿಗದೇವನು ಬನವಾಸಿಯ ಕದಂಬರ ಪುನರುತ್ಥಾಪನೆಗೆ ನಾಂದಿ ಮಾಡಿದ; ಬನವಾಸಿಯ ಆಡಳಿತವನ್ನು ಇರಿವ ಬೆಡಂಗದೇವ ಕದಂಬನಿಗೆ ವಹಿಸಿದ. ಆಮೇಲೆ ತೈಲ ಮೇಲ್ಗೊದ್ದರೆ, ಛಟ್ಟ ಅಥವಾ ಕುಂದಮ ಕದಂಬ ೨ನೆಯ ಮಹಾಮಂಡಲೇಶ್ವರ.

ಜಿ.ಎಂ. ಮೊರೀಸ್ ಹೇಳುವಂತೆ[೨೦] ಚಾಲುಕ್ಯ ಛಟ್ಟಿಗದೇವನು ಕ್ರಿ.ಶ ೯೬೮ರಲ್ಲಿ ಬನವಾಸಿ ಪ್ರಾಂತವನ್ನು ರಾಷ್ಟ್ರಕೂಟರಿಂದ ಗೆದ್ದುಕೊಂಡದ್ದು ನಿಜವಾದರೆ, ಅದು ರಾ.ಕೂ.೩ನೆಯ ಕೃಷ್ಣ ಅಕಾಲವರ್ಷನ (೯೩೯–೯೬೮) ಕಾಲದಲ್ಲಲ್ಲ; ಅವನ ಬಳಿಕ ಪಟ್ಟಕ್ಕೆ ಬಂದ ೨ನೆಯ ಕಕ್ಕನ ಅಥವಾ ಕೊಟ್ಟಿಗನ (೯೬೮–೯೭೩) ಕಾಲದಲ್ಲಿ. ಕಕ್ಕನು ದುರ್ಬಲ ದೊರೆಯೆಂಬುದು ಸುಪ್ರಸಿದ್ಧ. ಆದುದರಿಂದ ಚಾಲುಕ್ಯರ ೨ನೆಯ (ಕಲ್ಯಾಣಿಯ) ತೈಲಪನ ಪೂರ್ವಜರಲ್ಲಿ ಒಬ್ಬನಾದ ಚಟ್ಟಯ್ಯನು ಬನವಾಸಿ ಪ್ರಾಂತವನ್ನು ಗೆದ್ದುಕೊಂಡನು ಮತ್ತು ಮೂಲ ಕದಂಬ ಕುಲದ ಹಾನುಗಲ್ಲಿನ ಇರಿವ ಬೆಡಂಗ ಕದಂಬನ ಸಾಮಂತಿಕೆಗೆ ಅದನ್ನು ಒಪ್ಪಿಸಿದನು ಎಂದು ತಿಳಿಯಬಹುದಾಗಿದೆ.

ರಾಷ್ಟ್ರಕೂಟರ ಸಾಮಂತರಾಗಿದ್ದರೋ ಏನೋ ಎಂದು ಊಹಿಸಬಹುದಾದ[೨೧] ಇಂದ್ರವರ್ಮ[೨೨], ಐವ ವರ್ಮ[೨೩a], ರವಿವರ್ಮ [೨೩b], ಅರ್ಜುನವರ್ಮ ಎಂಬ

೧೯. K.K. P 88
೨೦. K.K. P 89
೨೧. ಹೊನ್ನಾಳಿ ಶಾ. ನಂ. 13
೨೨. ಶಿಕಾರಪುರ ಶಾ. ನಂ. 45
೨೩a ಸೊರಬ ಶಾ. ನಂ. 465
೨೩b. ಶಿಕಾರಪೂರ ಶಾ. ನಂ. 191-E.C

ಕದಂಬ ದೊರೆಗಳ ಹೆಸರು ಕೇಳಿಬಂದರೂ ಅವರು ಹಾನುಗಲ್ಲಿನ ಇರಿವ ಬೆಡಂಗ ಕದಂಬನ ಪೂರ್ವಜರಾಗಿರಬಹುದಾದರೂ ಅವರಿಗೆ ವಿಧಿವಿಹಿತವಾದ ಸಾಮಂತ ಪಟ್ಟ (ಮಹಾಮಂಡಲೇಶ್ವರತ್ವ) ಇತ್ತೆಂದು ಹೇಳಲು ಸಾಧ್ಯವಿಲ್ಲ. ಬನವಾಸಿಯ ಮಧುವರ್ಮ (೬೫೧–೫೫) ಕದಂಬನಾದ ಮೇಲೆ ೨೦೦ ವರ್ಷಗಳ ಕಾಲ ಕದಂಬ ದೊರೆಗಳ ವಂಶಜರ ದೊರೆತನದ ಸ್ಪಷ್ಟ ಉಲ್ಲೇಖವಿಲ್ಲ; ಇಂದ್ರವರ್ಮ ಕದಂಬನ ಉದಯ ಕ್ರಿ.ಶ ೮೫೫ರಲ್ಲಿ. ಅವನಿಗೂ ಇರಿವ ಬೆಡಂಗನಿಗೂ ನಡುವಿದ್ದ ಕದಂಬ ದೊರೆಗಳ ಸ್ಥಾನ–ಕಾಲಮಾನಗಳು ಅನಿರ್ದಿಷ್ಟವಾಗಿರುವುದರಿಂದ ಹಾನುಗಲ್ಲಿನಿಂದ ಬನವಾಸಿಯನ್ನಾಳತೊಡಗಿದ ಇರಿವ ಬೆಡಂಗನನ್ನೇ (೯೬೭–೯೮೦) ಇಲ್ಲಿ ಮೊದಲ ಮಹಾಮಂಡಲೇಶ್ವರನೆಂದು ಗಣಿಸಲಾಗಿದೆ.

ಇರಿವ ಬೆಡಂಗನ ತರುವಾಯ ಅವನ ಮಗ ಚಟ್ಟಿ, ಚಟ್ಟು, ಚಟ್ಟುಗ, ಕುಂದಮ, ಕುಂದರಾಜ, ಅಥವಾ ಕಟಕದ ಗೋವ ಎಂಬ ಹೆಸರಿನ ಕದಂಬ ಮಾಂಡಲಿಕನು ಬನವಾಸಿಯಾಳಿಕೆಗೆ ನಿಂತನು–ರಾಜಧಾನಿಯು ಪಾನುಂಗಲ್ ಅಥವಾ ಹಾನುಗಲ್ಲು. ಆತನ ಕೈಕೆಳಗೆ ನಾಗರಖಂಡ ೭೦ (=ಬಂದಣಿಕೆ), ಜಿಲ್ಲೆಯನ್ನು ಅಯ್ಯಣ್ಣನ ಮಗ ಬೋಡಯ್ಯನು ನೋಡಿಕೊಳ್ಳಲಾರಂಭಿಸಿದನು. ಈ ಅವಧಿಯಲ್ಲಿ (೯೮೦–೧೦೩೧) ರಾಜರಾಜಚೋಳನು ಚೋಳಮಂಡಲದ ರಾಜನಾಗಿದ್ದನು. (೯೮೫–೧೦೧೨). ಅವನು ತನ್ನ ಆಳಿಕೆಯ ಕೊನೆಗಾಲದಲ್ಲಿ[೨೩] ಆಗಲೇ ಬಹಳ ವಿಸ್ತಾರವಾಗಿದ್ದ ತನ್ನ ರಾಜ್ಯವನ್ನು ಇನ್ನೂ ವಿಸ್ತರಿಸಲೆಂದು ಚಾಲುಕ್ಯ ಸಾಮ್ರಾಜ್ಯದ ಗಡಿನಾಡುಗಳ ಮೇಲೆ ದಾಳಿ ಮಾಡಲಾರಂಭಿಸಿದನು. ಕ್ರಿ.ಶ ೧೦೨೦ರಲ್ಲಿ ಪಟ್ಟಕ್ಕೆ ಬಂದ ಅವನ ಮಗ ರಾಜೇಂದ್ರ ಉತ್ತಮ ಚೋಳನೂ ಬನವಾಸಿ ಮತ್ತು ಅದರ ಸುತ್ತುಮುತ್ತಲಿನ ಪ್ರಾಂತಗಳನ್ನು ಕೊಳ್ಳೆಹೊಡೆಯಲಾರಂಭಿಸಿದನು. ಚೋಳರ ಸೈನ್ಯ ಬಲ ೯೦,೦೦೦ದಷ್ಟಿತ್ತಂತೆ. ಅವರ ದಾಳಿ ತೈಮೂರಲಿಂಗ, ಚಂಗೇಸಖಾನರ ಕ್ರೌರ್ಯವನ್ನು ಮೀರಿಸುವಂತಿತ್ತು. ಜೀವ–ಜಡ ಪದಾರ್ಥಗಳೆಲ್ಲವನ್ನೂ ಅವರು ಸುಟ್ಟು ಬೊಬ್ಬಿಡುತ್ತಿದ್ದರು. ಈ ದಾಳಿಗಳನ್ನೆದುರಿಸಲು ತಂದೆ–ಮಗ ಇಬ್ಬರೂ ಸಿದ್ಧರಾಗಿ ಚಾಲುಕ್ಯ ಚಕ್ರವರ್ತಿಗಳ ಮೆಚ್ಚಿಗೆಗೆ ಪಾತ್ರರಾದರು. ಚಕ್ರವರ್ತಿಗಳಾದ ತೈಲಪ–ಇರಿವ ಬೆಡಂಗ ಸತ್ಯಾಶ್ರಯರೂ (೯೩೭–೧೦೦೮) ೧ನೆಯ ವಿಕ್ರಮಾದಿತ್ಯ ೧ನೆಯ ಜಗದೇಕಮಲ್ಲ ಜಯಸಿಂಹರೂ (೧೦೦೮–೧೦೪೦) ಸಾರ್ವಭೌಮರಾಗಿ ಆಳುತ್ತಿದ್ದ ಕಾಲವದು. ಅವರು ತಮ್ಮ ಮಹಾಮಂಡಲೇಶ್ವರರಿಗೆ ನೆರವೀಯಲು ರಾಜ್ಯಪಾಲರನ್ನು ಅಲ್ಲಲ್ಲಿ ನಿಯಮಿಸಿದರು. ಬನವಾಸಿ, ಸಾಂತಳಿಗೆ, ಕಿಸುಕಾಡು ಜಿಲ್ಲೆಗಳಿಗೆ ಭೀಮರಸನು ರಾಜ್ಯಪಾಲನಾಗಿ ಬಂದನು. ಹೊರಗಿನ ಶತ್ರುಗಳನ್ನೆದುರಿಸಲು ತಕ್ಕ ಸೈನಿಕಶಕ್ತಿಯನ್ನು ಸಜ್ಜುಗೊಳಿಸಿ ಇಟ್ಟುಕೊಂಡಿರುವುದು, ಮಂಡಲೇಶ್ವರರ ರಾಜಕೀಯ ಚಳುವಟಿಕೆಗಳ ಮೇಲೆ ಕಣ್ಣಿಡುವುದು ಮತ್ತು ಸುಂಕಖಾತೆಯ ಮುಖ್ಯಾಧಿಕಾರಿಗಳಾಗಿರುವದು ಅವರ ಕರ್ತವ್ಯಗಳಲ್ಲಿ ಗಣ್ಯವಾಗಿದ್ದವು.

೨೩. C.S.H.I. P 147

ರಿವ ಬೆಡಂಗ ಸತ್ಯಾಶ್ರಯ ಚಾಲುಕ್ಯನು ಒಮ್ಮೆ ಚೋಳರನ್ನು ಓಡಿಸಿದನು. ಆದರೆ ಅವರು ಮತ್ತೆ ದಾಳಿಯನ್ನು ನಡೆಸುತ್ತಲೇ ಹೋದರು. ಕ್ರಿ.ಶ ೧೦೧೨ರೊಳಗೆ ಕುಂದಮ ಕದಂಬನು ಚೋಳರಿಂದ ಹೈವೆ ೫೦೦ರನ್ನು ಗೆದ್ದುಕೊಂಡನು ಎಂದು ತೋರುತ್ತದೆ. ಸಾಂತಳಿಗೆಗೂ ಅವನೇ ಮಂಡಲೇಶ್ವರನಾಗಿದ್ದನು. ಅಲ್ಲಿಯ ಶಾಂತರ ದೊರೆಯೊಬ್ಬನು ಕದಂಬನಿಗೆ ಅಧೀನನಾಗಿ ತನ್ನ ಪಾಳೆಯವನ್ನು ಪರಿಪಾಲಿಸಿಕೊಂಡಿದ್ದುದು ೧೦೮೫ರ ವೀರಗಲ್ಲೊಂದರಿಂದ ತಿಳಿದುಬರುತ್ತದೆ. ಆದರೆ ಶಾಂತರು ಮರುವರುಷವೇ ಕದಂಬರ ಮೇಲ್ದೊರೆತನವನ್ನು ಬಿಟ್ಟರು. ಅವರ ಸ್ವಾತಂತ್ರ್ಯವು ಚೋಳರೊಡನೆ ಕಾಳಗ ನಡೆಯುತ್ತಿದ್ದ ಕಾಲಕ್ಕಷ್ಟೇ ಪರಿಸೀಮಿತ. ಕಾಳಗ ಮುಗಿದೊಡನೆಯೇ ಕುಂದಮ ಕದಂಬನು ಅವರನ್ನು ತನ್ನ ಅಂಕೆಯೊಳಗೆ ತಂದುಕೊಂಡನು. ೧೦೧೯ರ ಹೊತ್ತಿಗೆ ಅವನು ಬನವಾಸಿ, ಸಾಂತಳಿಗೆ, ಹೈವೆ–ಎಂಬೀ ಮೂರೂ ವಿಷಯಗಳ (ಜಿಲ್ಲೆಗಳ) ಮೇಲ್ದೊರೆಯಾಗಿ ಆಳತೊಡಗಿದ. ಆದರೆ ಕೆಲವೇ ವರ್ಷಗಳಲ್ಲಿ ಚೋಳರು ಹೈವೆಯನ್ನು ತಿರುಗಿ ಪಡೆದುಕೊಂಡರು; ಸಾಂತಳಿಗೆಯ ಮೇಲೆ ದಾಳಿ ಮಾಡಿದರು. ಆದರೆ ಸಾಂತಳಿಗೆಯಿಂದ ಅವರನ್ನು ಓಡಿಸಲಾಯ್ತು.

ಕುಂದಮ ಕದಂಬನಿಗೆ ಸತ್ಯಾಶ್ರಯ, ಜಯಸಿಂಹ ಮತ್ತು ಖೇತಮಲ್ಲ ಎಂಬ ಮೂವರು ಮಕ್ಕಳಿದ್ದರು. ಕುಂದಮನು (ಚಟ್ಟನು) ವೀರನೂ ಉದಾರನೂ ಆಗಿದ್ದನು; ಅನೇಕ ದೇವಾಲಯಗಳನ್ನು ಕಟ್ಟಿಸಿ, ದತ್ತಿ–ದಾನಗಳನ್ನು ಮಾಡಿ ಹೆಸರಾದನು; ಸಾರ್ವಜನಿಕ ಶಿಕ್ಷಣಕ್ಕಾಗಿ ಅಗ್ರಹಾರಗಳನ್ನು ಕಟ್ಟಿಸಿದನು; ಬಡಬಗ್ಗರಿಗೆ ನೆರವೀಯುವ ಸ್ವಂತದ ಉದಾಹರಣೆಯಿಂದ ಸಮಾಜ ಅತ್ತ ಒಲೆಯುವಂತೆ ಮಾಡಿದನು. ಕುಂದಮನ ತರುವಾಯ ಅವನ ೨ನೆಯ ಮಗ ಜಯಸಿಂಹನು ಪಟ್ಟಕ್ಕೆ ಬಂದನು. ಮಹಾವೀರನಾದ ಈತನು ಚೋಳರೊಡನೆ ಅನೇಕ ಸಲ ಯುದ್ಧಮಾಡಿ ಗೆದ್ದನು. ಆದರೆ ಕೊನೆಗೆ ವೀರ ಸ್ವರ್ಗವನ್ನು ಅದರಲ್ಲೇ ಹೊಂದಿದನೆಂದು ತೋರುತ್ತದೆ. ಈ ಜಯಸಿಂಹ ಕದಂಬ ಮಹಾಮಂಡಲೇಶ್ವರನು ಚಾಲುಕ್ಯರ ಇರಿವ ಬೆಡಂಗದೇವ ಸತ್ಯಾಶ್ರಯನ ಸೋದರಿಯಾದ ಅಕ್ಕಾದೇವಿಯ ಗಂಡ.[೨೪a] ಈಕೆ ಕಿಸುಕಾಡು ೭೦ರ ಆಡಳಿತಗಾರ್ತಿಯಾಗಿ ತುಂಬ ಜನಪ್ರಿಯತೆಯನ್ನು ಗಳಿಸಿದಳು. ಈಕೆಯ ಮಗ ತೋಯಿಮದೇವ ಕದಂಬ. ಈ ತೋಯಿಮನೇ ಜಯಸಿಂಹ ಕದಂಬೇಶ್ವರನ ೨ನೆಯ ಮಗನಾದ ತೈಲಪ.

ಜಯಸಿಂಹ ಕದಂಬ ಮಹಾರಾಜನಿಗೆ ೫ ಜನ ಮಕ್ಕಳು: ೧) ಮೌಳಿ (೨) ತೈಲ (ತೈಲಪ), (೩) ಶಾಂತಿವರ್ಮ, (೪) ಚೋಕಿದೇವ ಮತ್ತು (೫) ವಿಕ್ರಮ. ಮೌಳಿಯೆಂಬ ಜ್ಯೇಷ್ಠಪುತ್ರನು ಆಮೇಲೆ ೨ನೆಯ ಮಯೂರವರ್ಮನೆಂದು ಹೆಸರಾದನು. ತಂದೆಯ ಮರಣಾನಂತರ ಮೊದಲಿನ ಮೂವರು ಅನುಕ್ರಮವಾಗಿ ಕದಂಬ

೨೪a. K.K.P.102-3.

ಸಂಸ್ಥಾನವನ್ನು ಆಳಿದರು. ಇವರ ಆಳಿಕೆಯಲ್ಲಿ ಕುಂದಮನು ಚೋಳರಿಂದ ಪುನಃ ಪಡೆದುಕೊಂಡಿದ್ದ ಹೈವೆಯು ಆಳುಪರ ಪಾಲಾಯಿತು ಎಂದು ತೋರುತ್ತದೆ. ಜಯಸಿಂಹನ ಆಳಿಕೆ ಕ್ರಿ.ಶ ೧೦೩೧ರಿಂದ ೧೦೩೭ರವರೆಗೂ ೨ನೆಯ ಮಯೂರವರ್ಮನು ೧೦೩೭ರಿಂದ ೧೦೪೮ರವರೆಗೂ ೧ನೆಯ ತೈಲ (ಕದಂಬನು) ೧೦೪೮ರಿಂದ ೧೦೭೫ರ ವರೆಗೂ ೨ನೆಯ ಶಾಂತಿವರ್ಮ ಕದಂಬನು, ೧೦೭೫ರಿಂದ ೧೮೯೪ರವರೆಗೂ ರಾಜ್ಯಭಾರ ಮಾಡಿದರು. ಚಾಲುಕ್ಯರ ೧ನೆಯ ಸೋಮೇಶ್ವರನ ಮೇಲ್ದೊರೆತನ ಆಗ ನಡೆಯುತ್ತಿತ್ತು (ಕ್ರಿ.ಶ ೧೦೪೦–೧೦೬೯).

ತೈಲನು (ತೋಯಿಮದೇವ, ತೋಯಿಮರಸ) ಪಟ್ಟಕ್ಕೆ ಬಂದು ಕದಂಬ ರಾಜ್ಯವನ್ನು ಕೈಗೆ ತೆಗೆದುಕೊಂಡಾಗ ಇವನ ತಾಯಿ ಅಕ್ಕಾದೇವಿಯು ಕಿಸುಕಾಡು ೭೦, ತೊರುಗೆರೆ ೬೦. ಮತ್ತು ಮಾಸವಾಡಿ ೧೪೦ ಎಂಬ ಜಿಲ್ಲೆಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದಳು. ಅಕ್ಕಾದೇವಿಯ ರಾಜಕೀಯ ಮತ್ತು ಆಡಳಿತ ಕ್ರಮಗಳು ತುಂಬ ಪ್ರಶಸ್ತವಾಗಿದ್ದವು. ಕಾಳಿದಾಸಯ್ಯ, ಮಿಳ್ಳಯ್ಯ, ಚಿಟ್ಟಿಮಯ್ಯ, ದೇಮಣ್ಣ, ಚಾವುಂಡರಾಯ ಎಂಬ ಐವರು ಮಂತ್ರಿಗಳು ಈಕೆಯ ದರಬಾರಿನಲ್ಲಿ ಅರಮನೆ ಖಾತೆ, ಆಡಳಿತ, ಪರರಾಜ್ಯ ವ್ಯವಹಾರ, ಸೇನಾಸಂಸ್ಥೆ ಮತ್ತು ಅಡಿಕೆ ಮುಂತಾದ ವ್ಯಾಪಾರ ವಿಭಾಗಗಳನ್ನು ನೋಡಿಕೊಳ್ಳಲು ನಿಯುಕ್ತರಾಗಿದ್ದರು. ದಾಸಿಮಯ್ಯನು ಈ ಮಂತ್ರಿ ಸಂಪುಟದ ಪ್ರಧಾನ ಕಾರ್ಯದರ್ಶಿಯಾಗಿದ್ದನು. ರಾಜ್ಯಮಂಡಲದ ಆದಾಯ ಚಿಂತಕನು (Commissioner) ಕರ್ತವ್ಯದಲ್ಲಿ ನಿಯುಕ್ತನಾದುದಲ್ಲದೆ, ಆತನು ಇತರ ಆರ್ಥಿಕ–ಸಾಮಾಜಿಕ (ಧಾರ್ಮಿಕ) ಆಡಳಿತಗಳ ವ್ಯವಸ್ಥೆಯನ್ನೂ ನೋಡಿಕೊಳ್ಳುತ್ತಿದ್ದನು. ಅಕ್ಕಾದೇವಿಯು ಸ್ವತಃ ದಂಡನಾಯಕತ್ವವನ್ನು ವಹಿಸಿ ಗೋಕಾಕ ಮುಂತಾದೆಡೆಗಳ ಸ್ಥಳೀಯ ದಂಗೆಗಾರರನ್ನು ಅಡಗಿಸುತ್ತಿದ್ದಳು.

ತೈಲಪ ಕದಂಬನ ಕಾಲದಲ್ಲಿ ಬನವಾಸಿ ಸಂಸ್ಥಾನವು ಬಹಳ ಅಭ್ಯುದಯ ಹೊಂದಿತು; ಮನೆತನದ ರಾಜಧಾನಿಯಾದ ಹಾನುಗಲ್ಲು ಮಹಾಭಾರತಕಾಲದ ವಿರಾಟ ನಗರದ ವೈಭವವನ್ನು ಕಂಡಿತು. ಈತನ ದಾಯಾದನಾದ ಹರಿಕೇಸರಿ ಕದಂಬನು ಆಗ ಬಂಕಾಪುರ ಕೇಂದ್ರದಿಂದ ಚಾಲುಕ್ಯ ರಾಜ್ಯಪಾಲನಾಗಿ ಮೇಲ್ವಿಚಾರಣೆ ನಡೆಸುತ್ತಿದ್ದುದು ತೈಲಪನಿಗೆ ತುಂಬ ಅನುಕೂಲವಾಯ್ತು. ಈತನ ತಾಯಿಯಾದ ಅಕ್ಕಾದೇವಿಯ ಮುತ್ಸದ್ದಿತನ, ಸೈನಿಕತಜ್ಞತೆ, ಆಡಳಿತ ಮಾಹಿತ್ಯಗಳ ಬಲವು ತೈಲಪನ ಸುದೈವದಿಂದ ಕಡೆತನಕ ಲಭ್ಯವಾಯ್ತು. ಅಕ್ಕಾದೇವಿಯು ಧರ್ಮವೀರೆಯೂ ಆಗಿದ್ದದ್ದು ದೇವಾಲಯ ರಚನೆ, ದತ್ತಿದಾನ ಮುಂತಾದವುಗಳಿಂದ ಸ್ಪಷ್ಟವಾಗುತ್ತದೆ. ತೈಲಪಪತ್ನಿ ಮೈಲಾಳದೇವಿಯೂ ಧರ್ಮಪರಾಯಣೆಯಾಗಿದ್ದಳು. ತಾಯಿಯ ಮರಣಾ ನಂತರ ತೈಲದೇವನು ಬನವಾಸಿ ಜಿಲ್ಲೆಯನ್ನು ನೋಡಿಕೊಳ್ಳಲು ತನ್ನ ಮಗನಾದ ಕೀರ್ತಿವರ್ಮ ಕದಂಬನನ್ನು ನಿಯಮಿಸಿದನು. ಈತನು ಕ್ರಿ.ಶ ೧೦೭೫ರಿಂದ ೧೧೧೬ರವರೆಗೆ

(ತಂದೆಯ ಕಾಲದ ಅನಂತರ) ಹಾನುಗಲ್ಲು ಸರಕಾರದಿಂದ ಸ್ವತಂತ್ರನಾಗಿ ಬನವಾಸಿಯಲ್ಲಿ ಆಳಿದನು.

ಕ್ರಿ.ಶ ೧೦೭೫ರಿಂದ ೧೮೯೪ರವರೆಗೆ ಹಾನುಗಲ್ಲು ಸಿಂಹಾಸನದಲ್ಲಿ ತೈಲಪನ ತಮ್ಮನಾದ ಶಾಂತಿವರ್ಮ ಕದಂಬನು ವಿರಾಜಮಾನನಾಗಿ ದಕ್ಷತೆಯಿಂದ ರಾಜ್ಯಭಾರ ಮಾಡಿದನು. ಈತನಿಗೂ ಈತನ ಅಣ್ಣನ ಮಗ ಕೀರ್ತಿವರ್ಮನಿಗೂ ಉಂಟಾದ ಹಕ್ಕುದಾರಿಕೆಯ ವ್ಯಾಜ್ಯವನ್ನು ಚಾಲುಕ್ಯವಿಕ್ರಮನ ಮಾವನಾದ ಗೋವೆಯ ೧ನೆಯ ಜಯಕೇಶಿ ಕದಂಬನು ಪರಿಹಾರ ಮಾಡಿದನು. ೧ನೆಯ ಜಯಕೇಶಿಯ ಆಳಿಕೆ ಕ್ರಿ. ಶ ೧೦೫೦ರಿಂದ ೧೦೮೦ರವರೆಗೆ ಕಲ್ಯಾಣಿಯ ನವ್ಯ ಚಾಲುಕ್ಯರ ೨ನೆಯ ಅಥವಾ ಪರಂಪರೆಯಿಂದ ೬ನೆಯ ವಿಕ್ರಮಾದಿತ್ಯನು ಆಗ (ಕ್ರಿ.ಶ ೧೦೭೬–೧೧೨೭) ಕದಂಬರ ಮೇಲರಸನಾಗಿದ್ದನು. ಪಾಂಡ್ಯ ರಾಜಕುಮಾರಿಯಾದ ಸಿರಿಯದೇವಿಯು ಶಾಂತಿವರ್ಮನ ಮಹಿಷಿ ಮತ್ತು ಮಹಾರಾಜ ೨ನೆಯ ತೈಲಪ ಕದಂಬನ ತಾಯಿ.

ಬನವಾಸಿಯೊಡೆಯ ಕೀರ್ತಿವರ್ಮ ಕದಂಬೇಶ್ವರನು ವೀರನೂ ಜ್ಞಾನಿಯೂ ಆಗಿದ್ದನು. ಈ ಸ್ವತಂತ್ರ ಪ್ರಭುವಿನ ಕಾಲದಲ್ಲಿ ವಿದ್ವಾಂಸರಿಗೆ ಹೆಚ್ಚಿನ ಪುರಸ್ಕಾರವಿತ್ತು.* ಅಗ್ರಹಾರಗಳೆಂಬ ಅನೇಕ ವಿದ್ಯಾಕೇಂದ್ರಗಳನ್ನಿವನು ಬನವಾಸಿ ಪ್ರಾಂತರಾಜ್ಯದ ನಾನಾ ಕಡೆಗಳಲ್ಲಿ ಸ್ಥಾಪಿಸಿದನು. ಬ್ರಾಹ್ಮಣ–ಜೈನ ಪಂಡಿತರನೇಕರಿಗೆ ಇವನು ಆಶ್ರಯವಿತ್ತನು. ಕುಪಟೂರಿನ ಅಗ್ರಹಾರ ಪ್ರಖ್ಯಾತವಾಯಿತು. ಧಾರ್ಮಿಕ ಸಹಿಷ್ಣುತೆ ನಾಡಿನಲ್ಲಿ ನೆಲೆಸಿತ್ತು. ಕೀರ್ತಿವರ್ಮನ ಯುವರಾಜ ಮಹಾರಾಜ ಪ್ರಭುತ್ವ ಒಟ್ಟು ಅರ್ಧ ಶತಮಾನದಷ್ಟಾಯಿತು (೧೦೬೮–೧೧೧೬).

---

* ೧೧ನೇ ಶತಮಾನದ ಸಂಸ್ಕೃತ ನಾಟಕಕಾರ ಕೃಷ್ಣಮಿಶ್ರನು "ಪ್ರಬೋಧ ಚಂದ್ರೋದಯ" ನಾಟಕವನ್ನು ಈತನ ಆಜ್ಞೆಯಂತೆ ಬರೆದನು (?) ಸಂ.ನಾ

೪. ಬನವಾಸಿಯ ಚಾಲುಕ್ಯ ರಾಜ್ಯಪಾಲರು

ಕರ್ನಾಟ ಚಕ್ರೇಶ್ವರರಾದ ಚಾಲುಕ್ಯರ ಕೈಕೆಳಗೆ ಸಾಮ್ರಾಜ್ಯದ ವಿವಿಧ ವಿಭಾಗಗಳಲ್ಲಿ ರಾಜ್ಯಪಾಲರು ಮೇಲ್ವಿಚಾರಕರಾಗಿದ್ದರು. ಒಂದೊಂದು ವಿಭಾಗದಲ್ಲಿ ಹಲವಾರು ಮಂಡಲೇಶ್ವರರು ಆಳುತ್ತಿದ್ದರು. ಕುಂತಳ ವಿಭಾಗದ ರಾಜ್ಯಪಾಲರಲ್ಲಿ ಭೀಮರಸನು ಮೊದಲಿಗನೆಂದು[೨೪b] ಆಗಲೇ ಹೇಳಲಾಯ್ತು. ಅವನ ಮೊದಲ ಶಾಸನ ಕ್ರಿ.ಶ ೯೯೨ರದ್ದು. ಬನವಾಸಿ, ಸಾಂತಳಿಗೆ, ಕಿಸುಕಾಡುಗಳು ಆತನಾಳಿಕೆಯ ವಿಭಾಗ.

ಕ್ರಿ.ಶ ೧೦೦೬ರ ಬಳಿಕ ಸೇನಾವರಸನು ರಾಜ್ಯಪಾಲನಾಗಿ ಬಂದನು. ಇದು ಕುಂತಳೇಶ್ವರರಾದ ಕಲ್ಯಾಣಿಯ ಚಾಲುಕ್ಯ ವಂಶದ ೫ನೆಯ ವಿಕ್ರಮನಕಾಲ. ಸೇನಾವರಸನ ಬಳಿಕ ಬಂದ ರಾಜ್ಯಪಾಲರಾರೋ ತಿಳಿಯದು.* ಅವನ ಮೇಲ್ವಿಚಾರಣೆ ಬರಿ ೧೫ ವರ್ಷಗಳ ಕಾಲ. ಆಮೇಲೆ ಕ್ರಿ.ಶ ೧೦೪೫ರಲ್ಲಿ ಮಹಾ ಮಂಡಲೇಶ್ವರ ಸಿಂಗಣದೇವರಸನು ರಾಜ್ಯಪಾಲನಾದನು. ಆದರೆ ಬಹುಬೇಗ ಅವನನ್ನು ತೆಗೆದುಹಾಕಿ ಮಹಾ ಮಂಡಲೇಶ್ವರ ಚಾಮುಂಡರಾಯರಸನನ್ನು ರಾಜ್ಯಪಾಲನನ್ನಾಗಿ ಮಾಡಲಾಯ್ತು. ಅವನ ಮೊದಲ ಶಾಸನ ೧೦೪೬ರರದ್ದು. ಸಾಂತಳಿಗೆ, ಬನವಾಸಿ, ಹೈಗೆ (ವೆ) ಗಳು ಅವನ ಅಧೀನವಾಗಿದ್ದವು. ಕಳಚುರಿ ಬಿಜ್ಜಳನ ಪೂರ್ವಜನಾದ ಕನ್ನಮ್ಮನೇ ಮೊದಲಾದ ಹಲವಾರು ಅರಸರ ಹಮ್ಮನ್ನು ಇಳಿಸಿದ ಪರಾಕ್ರಮ ಚಾಮುಂಡರಾಯನದು. ಶಿರಾಳಕೊಪ್ಪದ ಸನಿಹದ ಬೆಳೆಗಾಮಿ (ಬಳ್ಳಿಗಾಂವೆ)ಯಲ್ಲಿ ಆತನು ಗಂಡಭೇರುಂಡ ಧ್ವಜವನ್ನು ನಿಲ್ಲಿಸಿದನು; ಬಸದಿ–ದೇವಾಲಯಗಳಿಗೆ ದತ್ತಿಗಳನ್ನು ಕೊಟ್ಟನು. ಆತನ ಯಜಮಾನಿಕೆ ಕ್ರಿ.ಶ ೧೦೫೦ರವರೆಗೆ ನಡೆಯಿತು. ಚಾಮುಂಡರಾಯನಾದ ಮೇಲೆ ಬಂದ ರಾಜ್ಯಪಾಲರೆಲ್ಲ ಅವನಂತೆಯೇ ಬಳ್ಳಿಗಾವೆಯನ್ನೇ ರಾಜ್ಯಪಾಲ ರಾಜಧಾನಿಯನ್ನಾಗಿ ಮಾಡಿಕೊಂಡದ್ದಿಲ್ಲಿ ಉಲ್ಲೇಖನೀಯ.

೨೪b H.C.I.P.P.163- ಚಾಲುಕ್ಯರ ೨ನೆಯ ತೈಲಪನ ಕೈಕೆಳಗೆ ಬನವಾಸಿ ೧೨೦೦ ಮತ್ತು ಸಾಂತಳಿಗೆ ೧೦೦೦ಗಳಿಗೆ ಬ್ರಹ್ಮರಸನು ಮೊದಲನೆಯ (ಗವರ್ನರ) ರಾಜ್ಯಪಾಲನಾಗಿದ್ದನೆಂದು ಇತ್ತೀಚೆಗೆ ತಿಳಿದುಬಂದಿದೆ.

* ಕೇಸರಿಭೀಮ, ಗೋರವರಸಕದಂಬ ಎಂಬಿಬ್ಬರು ರಾಜ್ಯಪಾಲರ ಹೆಸರುಗಳು ಈ ನಡುವೆ ಬರುತ್ತವೆ.

ಕ್ರಿ.ಶ ೧೦೫೩ರಲ್ಲಿ ೧ನೆಯ ಸೋಮೇಶ್ವರ ಚಾಲುಕ್ಯನ ಪತ್ನಿಯಾದ ಮೈಳಾಲದೇವಿಯು ಬನವಾಸಿಯ ರಾಜ್ಯಪಾಲೆಯಾಗಿ ಬಂದಳು. ಅವಳಾದ ಮೇಲೆ ೧ನೆಯ ಸೋಮೇಶ್ವರನ ಮಗ ೨ನೆಯ ವಿಕ್ರಮಾದಿತ್ಯ ಚಾಲುಕ್ಯನು ಕುಂತಳ (=ಕದಂಬವಾಡಿ)–ಗಂಗವಾಡಿಗಳೆರಡರ ರಾಜಪ್ರತಿನಿಧಿ ಅಥವಾ ಮಹಾರಾಜ್ಯಪಾಲನಾಗಿ ಸುಮಾರು ೧೦೫೫ರ ಹೊತ್ತಿಗೆ ಅಧಿಕಾರ ವಹಿಸಿಕೊಂಡನು. ಆದರೆ ಆಗ ಬನವಾಸಿ ನೊಳಂಬವಾಡಿಗಳ ನಿಜವಾದ ರಾಜ್ಯಪಾಲ (=ಕಾರ್ಯರಾಜ್ಯಪಾಲ) ಬಂಕಾಪುರದ ಹರಿಗ (ಹರಿಕೇಸರಿ ಕದಂಬ)ನೆಂಬುದು ಸ್ಪಷ್ಟ. ೨ನೆಯ ವಿಕ್ರಮಾದಿತ್ಯನ ರಾಜ ಪ್ರತಿನಿಧಿತ್ವ ಅಥವಾ ಮಹಾರಾಜ್ಯಪಾಲಕತ್ವವು ಕ್ರಿ.ಶ ೧೦೬೦ರವರೆಗೆ ಸಾಗಿತು.

ಆಮೇಲೆ ೧ನೆಯ ಸೋಮೇಶ್ವರ ಚಕ್ರವರ್ತಿಯ ವಸ್ತ್ರಾಲಂಕಾರ ಶಾಖಾಧೀಶನಾಗಿದ್ದ ಲಕ್ಷ್ಮಣನೃಪನು ಬನವಾಸಿ ಪ್ರಾಂತದ ರಾಜ್ಯಪಾಲನಾಗಿ ಬಂದನು. ಅವನ ಆಳಿಕೆ ೧೦೬೬ರಿಂದ ೧೦೭೦ರವರೆಗೆ. ೧ನೆಯ ಸೋಮೇಶ್ವರನ ಅನಂತರ ೨ನೆಯ ಸೋಮೇಶ್ವರನು ಚಕ್ರವರ್ತಿಯಾದನು (ಅವನಾಳಿಕೆ ೧೦೬೯ರಿಂದ ೧೦೭೬ರವರೆಗೆ). ಈ ನಡುವೆ ಅಂದರೆ ವೀರ ಲಕ್ಷ್ಮಣನೃಪಾಲನಾದ ಬಳಿಕ ಉದಯಾದಿತ್ಯ–ಗಂಗರಾಜನು ರಾಜ್ಯಪಾಲನಾಗಿ ಬಂದನು. ಮಹಾರಾಜಾಧಿರಾಜ ರಾಜ ಪರಮೇಶ್ವರನೆಂಬುದು ಅವನ ಬಿರುದು. ಗಂಗವಾಡಿ, ಬನವಾಸಿ, ಸಾಂತಳಿಗೆಗಳು ಅವನ ಆಡಳಿತ ಮೇಲ್ವಿಚಾರಣೆಯ ಕ್ಷೇತ್ರ. ಬಳ್ಳಿಗಾಮೆಯೇ ಅವನ ರಾಜ್ಯಪಾಲಿಕೆಯ ಕೇಂದ್ರ. ಮಹಾಸಾಮಂತಾಧಿಪತಿ, ಮಹಾಪ್ರಚಂಡ ದಂಡನಾಯಕ ಮುಂತಾದ ಬಿರುದುಗಳನ್ನು ಹೊತ್ತ ಆತನು ನರ್ತಕೀವಿಲಾಸಿಯಾಗಿದ್ದನು. ಆದುದರಿಂದ ಕ್ರಿ.ಶ ೧೧೧೨ರ ಬಳಿಕ ಅವನ ಅಧಿಕಾರ ಉಳಿಯದಾಯ್ತು. ೨ನೆಯ ವಿಕ್ರಮಾದಿತ್ಯ ಚಾಲುಕ್ಯನು (೧೦೭೬–೧೧೨೬) ತನ್ನ ತಮ್ಮ ಜಯಸಿಂಹ ಚಾಲುಕ್ಯನನ್ನು ಕುಂತಳದ ರಾಜಪ್ರತಿನಿಧಿ (Vice-Roy)ಯನ್ನಾಗಿ ಮಾಡಿದನು. ಸಾಂತಳಿಗೆ ೧೦೦೦, ಬೆಳ್ವಲ, ೩೦೦, ಪುಲಿಗೆರೆ ೩೦೦ ಮತ್ತು ಬಸವಳ್ಳಿ ೧೦೦೦ ಅವನ ಮೇಲ್ವಿಚಾರಣಾ ಕ್ಷೇತ್ರ. ಉದಯಾದಿತ್ಯ ಗಂಗನ ರಾಜ್ಯಪಾಲ (Governor) ಸ್ಥಾನವನ್ನು ಬರ್ಮದೇವರಸನು ೧೦೭೭ರಲ್ಲಿ ಆಕ್ರಮಿಸಿದ್ದನು. ಆತನು ಚಕ್ರವರ್ತಿಗೆ ನೇರವಾಗಿ ಅಧೀನನಾಗಿದ್ದನು.

ಬನವಾಸಿ, ಸಾಂತಳಿಗೆ ಮತ್ತು ಹದಿನೆಂಟು ಅಗ್ರಹಾರಗಳು ಬರ್ಮದೇವರಸನ ಮೇಲ್ವಿಚಾರಣೆಗೆ ಒಳಪಟ್ಟಿದ್ದವು. ಅವನ ಅನಂತರ ಬಲದೇವಯ್ಯ ದಂಡನಾಯಕನು ರಾಜ್ಯಪಾಲತ್ವವನ್ನು ವಹಿಸಿದ. ಅವನು (೧೦೮೦) ನೇರವಾಗಿ ಜಯಸಿಂಹನ ಕೈಕೆಳಗೆ ಕಾರ್ಯಭಾರವನ್ನು ನಡೆಸಿದನು. ಆದರೆ ಜಯಸಿಂಹನು ಅಣ್ಣನ ವಿರುದ್ಧ ದಂಗೆಯೆದ್ದು ಅವನಿಂದ ಸೋಲಿಸಲ್ಪಟ್ಟುದರಿಂದ ವಿಕ್ರಮಾದಿತ್ಯನು ಮಹಾಸಾಮಂತಾಧಿಪತಿ ಗುಂಡಮರಸನನ್ನು ರಾಜ್ಯಪಾಲನನ್ನಾಗಿ ನಿಯಮಿಸಿದನು. ಮಹಾ ಸಾಮಂತಾಧಿಪತಿಯೆಂದರೆ ಮಂತ್ರಿ ಸೇನಾಪತಿಯೆಂದರ್ಥ. ಅದು ೧೦೮೪ರ ಕಾಲ.

ದಂಡನಾಥ ಶ್ರೀಧರಯ್ಯ ಆಮೇಲೆ ಬಂದ ರಾಜ್ಯಪಾಲ. ಈ ರಾಜ್ಯಪಾಲರಲ್ಲಿ ಪ್ರತಿಯೊಬ್ಬನಿಗೂ ಸುಂಕ ವಸೂಲಿನ ಅಧಿಕಾರಿಯಾದ ಹೆಗ್ಗಡೆಯೊಬ್ಬೊಬ್ಬನಿರುತ್ತಿದ್ದನು. ಚೆಂಗದೇವರಾಯನು ಶ್ರೀಧರಯ್ಯನ ಹೆಗ್ಗಡೆಯಾಗಿದ್ದನು. ಅಂದು ೧೦೮೯ರ ಕಾಲ. ಅನಂತರ ಕ್ರಿ.ಶ ೧೦೯೨ರಲ್ಲಿ ಮಹಾ ಸಾಮಂತಾಧಿಪತಿ, ಮಹಾಕಂಚುಕಿ, ಹೆಗ್ಗಡೆ ದಂಡನಾಯಕ ದೇವಪ್ಪಯ್ಯ ಚಾವೆಂಡರಸನು ರಾಜ್ಯಪಾಲನಾಗಿದ್ದುದು ಕಂಡುಬರುತ್ತದೆ. ಕ್ರಿ.ಶ ೧೦೯೮–೯೯ರಲ್ಲಿ ದಂಡನಾಯಕ ಪದ್ಮನಾಭಯ್ಯನು ಕುಂತಳ ರಾಜ್ಯಪಾಲನಾಗಿ ಬಂದನೆಂದು ಡಾಕ್ಟರ್ ಫ್ಲೀಟರ ಅಭಿಪ್ರಾಯ. ಆಮೇಲಿನ ೧೩ ವರ್ಷಗಳವರೆಗೆ ಮಹಾ ಸಾಮಂತಾಧಿಪತಿ, ಮಹಾಪ್ರಧಾನ, ಬನವಾಸಿವೆರ್ಗಡೆ, ದಂಡನಾಯಕ ಅನಂತಪಾಲನು ರಾಜ್ಯಪಾಲತ್ವವನ್ನು ನಿರ್ವಹಿಸಿದನು.

ಕ್ರಿ.ಶ ೧೧೧೨ರಲ್ಲಿ ಬನವಾಸಿ–ಸಾಂತಳಿಗೆ ಪ್ರಾಂತಗಳಿಗೆ ಮಹಾಮಂಡಲೇಶ್ವರ ಉದಯಾದಿತ್ಯ ಗಂಗ ಪೆರ್ಮಾನಡಿ ದೇವನು ರಾಜ್ಯಪಾಲನಾದನು. ಹಿಂದೆ ೧೦೭೫ರಲ್ಲಿ ಸ್ಥಾನಚ್ಯುತನಾಗಿದ್ದ ಈತನ ಹೆಸರು ಕೇಳಿಬರುವುದು ಈಗವಾತ್ರ. ಒಂದು ವರ್ಷಕಳೆಯಿತು. ಉದಯಾದಿತ್ಯ ಮೃತನಾಗಿರಬೇಕು. ಆದುದರಿಂದ ಮತ್ತೆ ಅನಂತಪಾಲನೇ ರಾಜ್ಯಪಾಲನಾಗಿ ಬಂದನು. ಅವನ ಕೈಕೆಳಗೆ ಗೋವಿಂದರಸನು ಕರಾಕರಣೆಯ ಹೆಗ್ಗಡೆಯಾಗಿದ್ದನು. ಸುಮಾರು ೧೧೧೭ರ ಹೊತ್ತಿಗೆ ಗೋವಿಂದರಸನು ಮಹಾ ಸಾಮಂತನೂ ಮಹಾ ಪ್ರಚಂಡ ದಂಡನಾಯಕನೂ ಬನವಾಸಿ ರಾಜ್ಯಪಾಲನೂ ಆದನು; ಆಮೇಲೆ ಮಹಾ ಸಾಮಂತಾಧಿಪತಿಯೆಂಬ ಬಿರುದನ್ನು ಮರುವರುಷವೇ ಪಡೆದನು. ಆರುವರ್ಷ ಅವನು ಬನವಾಸಿ ರಾಜ್ಯಪಾಲಿಕೆಯನ್ನು ನಡೆಸಿದ ನಂತರ ಮನೆವೆರ್ಗಡೆ ದಂಡನಾಯಕ ಸಾಲಿಪಯ್ಯ ಮಹಾ ಸಾಮಂತಾಧಿಪತಿಯು ರಾಮಯ್ಯ ಹೆಗ್ಗಡೆಯ ಕಾರ್ಯದರ್ಶಿತ್ವ (ಕಾರ್ಯಭಾರಿತ್ವ)ದೊಡನೆ ೧೧೨೩ರಲ್ಲಿ ಬನವಾಸಿಯ ರಾಜ್ಯಪಾಲನಾದನು. ಅನಂತರ ಭೋಗಯ್ಯನ ರಾಜ್ಯಪಾಲಿಕೆಯಧಿಕಾರ. ಅವನು ಕ್ರಿ.ಶ ೧೧೨೬ರಲ್ಲಿ ಕನ್ನಡ ಸಾಂಧಿವಿಗ್ರಹಿಕ ಮಂತ್ರಿಯೆನ್ನಿಸಿದ್ದಲ್ಲದೆ ಮನೆವೆರ್ಗಡೆ–ದಂಡನಾಯಕ (Tax-Collector and General) ಎಂಬ ಪದವಿಗಳನ್ನೂ ಪಡೆದನು. ಮುಂದೆ ೧೫ ವರ್ಷಗಳಕಾಲ ರಾಜ್ಯಪಾಲ ಹುದ್ದೆಗೆ ಯಾರೂ ಬರಲಿಲ್ಲ. ಕದಂಬ–ಹೊಯ್ಸಳರ ತಿಕ್ಕಾಟವೇ ಅದಕ್ಕೆ ಕಾರಣವಾಗಿರಬೇಕು.

೫. ಬನವಾಸಿಯ ಕದಂಬರ ಪುನರಪದಶೆ

ಕ್ರಿ.ಶ ೧೧೧೬ರಲ್ಲಿ ಬನವಾಸಿಯ ಕೀರ್ತಿವರ್ಮ ಕದಂಬನ ಕಾಲಾನಂತರ ಹಾನುಗಲ್ಲಿನ ೨ನೆಯ ತೈಲಪ ಕದಂಬಮಹಾರಾಜನು ಬನವಾಸಿ ಜಿಲ್ಲೆಯನ್ನು ಪುನಃ ಹಾನುಗಲ್ಲು ಜಿಲ್ಲೆಯೊಡನೆ ಆಳಲಾರಂಭಿಸಿದನು; ಸಾಂತಳಿಗೆ ಸಾವಿರದ ಅಧಿಪತಿಯೂ ಆದ. ಅವನ ೨ನೆಯ ಹೆಂಡತಿ ಉಚ್ಚಂಗಿ ಪಾಂಡ್ಯರಾಜ ತ್ರಿಭುವನ ಮಲ್ಲನ ಸೋದರಿ. ಆದುದರಿಂದ ಹೊಯ್ಸಳರಿಂದ ಸುರಕ್ಷಿತವಾಗಿರಲೆಂದು ಮಹಾ ಮಂಡಲೇಶ್ವರರಾದ ತೈಲ–ತ್ರಿಭುವನ ಮಲ್ಲರು ಪರಸ್ಪರ ಸಹಾಯದ ಒಪ್ಪಂದವನ್ನು ಮಾಡಿಕೊಂಡರು. ಅಷ್ಟುಹೊತ್ತಿಗೆ ಸರಿಯಾಗಿ ಹೊಯ್ಸಳ ವಿಷ್ಣುವರ್ಧನ ಮಹಾರಾಜನು (೧೧೧೧–೧೧೪೧) ಪಾಂಡ್ಯಮಂಡಲದ ಮೇಲೆ ದಂಡೆತ್ತಿ ಹೋದನು, ಗೆದ್ದನು. ಅನಂತರ ಅವನು ದಿಗ್ವಿಜಯದಲ್ಲಿ ಗಂಗವಾಡಿ, ನೊಳಂಬವಾಡಿ, ಬನವಾಸಿ ಮತ್ತು ಹಾನುಗಲ್ಲು ಜಿಲ್ಲೆಗಳನ್ನೂ ಗೆದ್ದನು. ಮಾಸಣಯ್ಯನು ಆಗ (೧೧೩೦) ಬನವಾಸಿಯ ತೈಲನೃಪತಿಯ ರಾಜ್ಯಪಾಲನಾಗಿದ್ದನು. ತೈಲಕದಂಬ ಮಾಸಣಯ್ಯ ಕದಂಬರಿಬ್ಬರ ಆಳಿಕೆಯೂ ರಣಾಂಗಣದಲ್ಲಿ ಕೊನೆಗಂಡಿತು.

ತೈಲಪ ಕದಂಬನ ವಿದೇಶನೀತಿ ಯಶಸ್ವಿಯಾಗದೇ ಹೋದರೂ ಒಳ ಆಡಳಿತದಲ್ಲಿ ಅತ್ಯಂತ ಯಶಸ್ವಿ ಎನ್ನಬೇಕು; ದೇವಸ್ಥಾನ, ಕೆರೆ, ಕಾಲುವೆ, ರಾಜಮಾರ್ಗ, ಸಾಲುಮರ, ಛತ್ರ, ಅಗ್ರಹಾರ ವಿದ್ಯಾಪೀಠ ಮುಂತಾದ ಸಾರ್ವಜನಿಕ ಲೋಕೋಪಯೋಗ ನಿರ್ಮಾಣಗಳನ್ನು ಮಾಡಿ ವಿದ್ಯಾಪಕ್ಷಪಾತಿಯೂ ಧರ್ಮಪ್ರಿಯನೂ ಆಗಿ ಕದಂಬರ ಸಾಂಸ್ಕೃತಿಕ ಪರಂಪರೆಯನ್ನು ಸಫಲಗೊಳಿಸಿದನು.

೬. ಬನವಾಸಿಯ ಕದಂಬರ ಪುನರುದಯ

೩ನೆಯ ಮಯೂರವರ್ಮನು ತೈಲಪ ಕದಂಬನ ಜ್ಯೇಷ್ಠಪುತ್ರ. ಇವನ ಆಳಿಕೆ ೧೧೩೦ರಿಂದ ೧೧೩೨ರ ವರೆಗೆ. ಬನವಾಸಿ, ಹಾನುಗಲ್ಲು. ಸಾಂತಳಿಗೆಗಳಲ್ಲಿ ಇವನ ಯಜಮಾನಿಕೆ ಮುಂಬರಿಯಿತು. ಆದರೆ ಹೊಯ್ಸಳರೊಡನೆ ಈ ಕುಮಾರ ರಾಜನ ಸೇನಾಪತಿಗಳು ಹೋರಾಡುತ್ತಲೇ ಇದ್ದರು. ಬಹುಶಃ ಇಂಥ ಹೋರಾಟವೊಂದರಲ್ಲಿ ಇವನು ವೀರಸ್ವರ್ಗವನ್ನು ಹೊಂದಿರಬೇಕು. ಆದುದರಿಂದ ಈತನ ತಮ್ಮ ಮಲ್ಲಿಕಾರ್ಜುನ ಕದಂಬನು ಹಾನುಗಲ್ಲಿನ ಉತ್ತರಾಧಿಕಾರಿಯಾಗಿ ೧೧೩೨ರಿಂದ ೧೧೪೬ರವರೆಗೆ ಆಳಿದನು. ಮಲ್ಲಿಕಾರ್ಜುನನು ಅಣ್ಣನ ಮರಣಾನಂತರ ಹೊಯ್ಸಳರನ್ನು ಓಡಿಸಿದನು. ಹೊಯ್ಸಳರನ್ನು ಸೋಲಿಸುವುದರಲ್ಲಿ ಈತನಿಗೆ ಚಾಲುಕ್ಯ ಚಕ್ರವರ್ತಿ ೨ನೆಯ ಜಗದೇಕಮಲ್ಲನು (೧೧೩೬–೧೧೫೧) ಬಲವಾದ ಬೆಂಬಲವಿತ್ತನು.

ಮಲ್ಲಿಕಾರ್ಜುನನ ಬಳಿಕ ಇವನ ತಮ್ಮ ತೈಲಮ (೧೧೪೬–೧೧೫೧) ಬನವಾಸಿ ಮಂಡಲದ ರಾಜಧಾನಿಯಾದ ಹಾನುಗಲ್ಲಿನ ಪಟ್ಟವನ್ನೇರಿದನು. ಆಗ ನಾಗರಖಂಡದಲ್ಲಿ (ಬಂದಣಿಕೆಯಲ್ಲಿ) ಆಡಳಿತ ನಡೆಸುತ್ತಿದ್ದ ಬೊಪ್ಪ ಕದಂಬನ ಮಗ ಗೋರವರಸ ಸ್ವಾತಂತ್ರ್ಯ ವಹಿಸಿ ಆಳಲಾರಂಭಿಸಿದನು. ಆದರೆ ಇವನ ಸ್ವಾತಂತ್ರ್ಯವು ಕೇವಲ ೫ ವರ್ಷಗಳ ಮಟ್ಟಿಗೆ. ತೈಲಮಪುತ್ರನಾದ ಹಾನುಗಲ್ಲು ಕೀರ್ತಿದೇವ ಕದಂಬನು ಕೂಡಲೇ ಬನವಾಸಿ ಮಂಡಲದ ಮೂಲಪಟ್ಟದ ಪೂರ್ಣ ಸ್ವಾಮ್ಯವನ್ನು ಸಂಪಾದಿಸಿಕೊಳ್ಳಲು ಶಕ್ತನಾದನು. ಈತನ ಕಾಲ ಕ್ರಿ.ಶ ೧೧೫೧ ರಿಂದ ೧೧೮೦ರವರೆಗೆ. ಇವನ ಮೇಲ್ದೊರೆ ೧೧೬೩ರಿಂದ ಚಾಲುಕ್ಯನಲ್ಲ; ಕಳಚುರ್ಯ ಬಿಜ್ಜಳ (೧೧೪೧–೧೧೬೮). ಏಕೆಂದರೆ ಚಾಲುಕ್ಯರ ೨ನೆಯ ಜಗದೇಕಮಲ್ಲನೂ ೨ನೆಯ ತೈಲನೂ ದುರ್ಬಲ ಚಕ್ರವರ್ತಿಗಳಾಗಿ ಬಿಜ್ಜಳನನ್ನು ಅಂಕೆಯಲ್ಲಿಟ್ಟುಕೊಳ್ಳಲಾರದಾದರು. ೨ನೆಯ ತೈಲಕದಂಬನ ಮೊಮ್ಮಗನಾದ ಮೌಲಿ ತೈಲಪನು ಬನವಾಸಿಯ ಪ್ರಾಂತಾಧಿಪತಿಯಾಗಿದ್ದನು; ಈತನು ಕೀರ್ತಿದೇವ ಕದಂಬನ ತಮ್ಮನಾಗಿರಬೇಕು. ಉಚ್ಚಂಗಿಯ ವೀರಪಾಂಡ್ಯನು ಕದಂಬರ ಅಧೀನ ರಾಜನಾಗಿ ಪುಲಿಗೆರೆ ನಾಡನ್ನು ಆಳುತ್ತಿದ್ದನು.

ಸಾಂತಳಿಗೆಯ ಶಾಂತರದೊರೆ ಜಗದೇವನು ರಾಜಧಾನಿಯಾದ ಹೊಂಬುಚದಿಂದ ೧೧೬೦ರಲ್ಲಿ ಬನವಾಸಿ ನಾಡಿನಲ್ಲಿ ಕೆಲಪಾಲನ್ನು ದಾಳಿಮಾಡಿ ಗೆದ್ದುಕೊಂಡನು. ಆದರೆ ಕೀರ್ತಿದೇವನೂ ಮೇಲರಸ ಬಿಜ್ಜಳನೂ ಅವನನ್ನು ಹಣಿದರು. ಹೊಯ್ಸಳರು

ಆಕ್ರಮಿಸಿಕೊಂಡಿದ್ದ ಕುಂತಳಭಾಗಗಳೆಲ್ಲವನ್ನೂ ಕೀರ್ತಿದೇವ ಕದಂಬನು ಮತ್ತೆ ಗೆದ್ದುಕೊಂಡನು.

ಬನವಾಸಿಗೆ ಬಂದ ಮೊದಲನೆಯ ಕಳಚುರ್ಯ ರಾಜ್ಯಪಾಲನೆಂದರೆ ಮಾಯಿದೇವರಸ; ಆಮೇಲೆ ಬಂದವನು ಕೇಶಿಮಯ್ಯ (೧೧೬೦–೧೧೬೮,೧೧೭೯). ಕೇಶಿಮಯ್ಯನ ಸಂಧಾನದಿಂದ ಕಳಚುರ್ಯ–ಹೊಯ್ಸಳರ ಕಲಹ ಕೊನೆಗಂಡಿತು.

ಕೀರ್ತಿದೇವ ಕದಂಬನು ಸಾಹಸಿಕನೂ ಶೂರನೂ ದಕ್ಷ ರಾಜ್ಯಪ್ರಶಾಸಕನೂ ಆಗಿದ್ದನು; ಅದರಿಂದಲೇ ತನ್ನ ಬನವಾಸಿಯಧಿಕಾರಿ ಗೋರವ ಕಿತ್ತಿಗನು ಎದುರುಬಿದ್ದಾಗ ಅವನನ್ನು ದಂಡಿಸಿ ಶಾಂತಿಸ್ಥಾಪನೆಯನ್ನು ಸುಲಭವಾಗಿ ಮಾಡಿದನು. ಇವನ ಕಾಲದಲ್ಲಿ ಕಳಚುರ್ಯರ ರಾಯ ಮುರಾರಿಸೋವಿದೇವ ಸಂಕಮರ ಚಕ್ರೇಶತ್ವಗಳು ಮುಗಿದವು.

ಹಾನುಗಲ್ಲು ಕೀರ್ತಿದೇವ ಕದಂಬನ ಮಗ ಕಾವದೇವನು ಆಮೇಲೆ ಕದಂಬ ಮಂಡಲೇಶ್ವರನಾದನು (೧೧೮೦–೧೨೧೭). ಆಗ ಕಳಚುರ್ಯರ ಮುರಾರಿನರಸಿಂಗ ಚಕ್ರವರ್ತಿಗೂ ಹೊಯ್ಸಳರ ವೀರಬಲ್ಲಾಳ ಮಹಾರಾಜನಿಗೂ ಘೋರ ಯುದ್ಧವಾಗಿ ಕಳಚುರ್ಯರ ಅಧಿಕಾರ ಸಮಾಪ್ತಿ ಉಂಟಾಯಿತು!

ಹೋರಾಟದಲ್ಲಿಯೇ ಕೀರ್ತಿದೇವ ಕದಂಬನು ಕೀರ್ತಿಶೇಷನಾದನು. ಆ ಮೇಲೆ ಪಟ್ಟಕ್ಕೆ ಬಂದ ಕಾಮದೇವ ಕದಂಬನು ಬನವಾಸಿ ಪ್ರಾಂತಕ್ಕೆ ಉತ್ತರಾಧಿಕಾರಿಯಾಗಿ (ಚಕ್ರವರ್ತಿತ್ವವನ್ನು ಕಳಚುರ್ಯರಿಂದ ಪುನಃ ಪಡೆದುಕೊಂಡ ೪ನೆಯ ಚಾಳುಕ್ಯ ಸೋಮೇಶ್ವರನ (೧೧೮೧–೧೨೦೦) ಮೇಲ್ದೊರೆತನವನ್ನೊಪ್ಪಿಕೊಂಡು) ರಾಜ್ಯಭಾರ ಮಾಡತೊಡಗಿದನು. ಆದರೆ ಸೋಮೇಶ್ವರ ಚಾಳುಕ್ಯನ ಚಕ್ರವರ್ತಿತ್ವವು ಹೊಯ್ಸಳ–ಯಾದವರ ಆಕ್ರಮಣಗಳಿಂದ ಮುಕ್ತಾಯಹೊಂದಿತು. ಆಗ ಸುಮಾರು ೧೧೯೧ರಲ್ಲಿ ಕಾಮದೇವನು ಸ್ವತಂತ್ರ ಕದಂಬ ಚಕ್ರವರ್ತಿಯಾದನು. ಕಾದಲು ಎದುರಾದ ಹೊಯ್ಸಳರ ೩ನೆಯ ವೀರಬಲ್ಲಾಳನು ಮೊದಲು ಗೆಲ್ಲುತ್ತ ಬಂದರೂ ಕೊನೆಯಲ್ಲಿ ಸಂಪೂರ್ಣವಾಗಿ ಸೋತುಹೋದನು. ಚಾಳುಕ್ಯ ಚಕ್ರೇಶ್ವರರ ಎಲ್ಲ ಬಿರುದುಗಳನ್ನೂ ಧರಿಸಿದ ಕಾಮದೇವನ ರಾಜ್ಯವು ಬೀರೂರಿನ ತನಕ ವಿಸ್ತೃತವಾಯ್ತು. ಮಲೆಯಾಳ, ತುಳು, ಕೊಂಕಣ ಮತ್ತು ಕೊಂಕಣೋತ್ತರದ ತೀರರಾಜ್ಯಗಳ ಅರಸರು ಈತನ ಚಕ್ರವರ್ತಿತ್ವವನ್ನು ಒಪ್ಪಿಕೊಂಡರು. ಮುಂದೆ ನೂರು ವರ್ಷ ಕದಂಬರ ಆಳಿಕೆ ನಿರಾತಂಕವಾಗುವಂತೆ ಶಾಂತರ, ಆಳುಪ, ಗೋವಾ ಕದಂಬರನ್ನು ವಶವರ್ತಿಗಳನ್ನಾಗಿ ಮಾಡಿಕೊಂಡ ಕಾವದೇವನ ಕದಂಬತನವು ಕುಲಸಹಜವಾಯ್ತು.

ಹಾನುಗಲ್ಲಿನ ಕಲಿ ಕದಂಬನೆನಿಸಿದ ಕಾಮದೇವ ಚಕ್ರವರ್ತಿಯ ಜ್ಯೇಷ್ಠ ಪುತ್ರ ಮಲ್ಲಿದೇವನು (೧೨೧೭–೧೨೫೨) ೧೨೧೭ರಲ್ಲಿ ಕುಂತಳೇಶ್ವರನಾದನು; ಬಹುಕಾಲ ಸ್ವತಂತ್ರ ಚಕ್ರವರ್ತಿಯಾಗಿ ಆಳಿದನು. ಆದರೆ ಯಾದವರ ಸಿಂಘಣನು (೧೨೧೦–

೧೨೪೭)[೨೫] ಹೊಯ್ಸಳರ ೧ನೆಯ ವೀರಬಲ್ಲಾಳನನ್ನು (೧೧೭೩–೧೨೨೦) ಸುಮಾರು ೧೨೧೫ರಲ್ಲಿ ಸೋಲಿಸಿ, ಆತನು ಜಯಿಸಿದ್ದ ಎಲ್ಲ ಪ್ರದೇಶಗಳನ್ನು ಗೆದ್ದುಕೊಂಡನು. ಮೊದಲು ಬಗ್ಗದಿದ್ದರೂ ಸಿಂಘಣನ ಬಲವನ್ನು ನೋಡಿ ಕೊನೆಗೆ ಹೆಚ್ಚು ಯುದ್ಧ ಮಾಡದೆ ಮಲ್ಲಿದೇವ ಕದಂಬನು ೧೨೩೯ರಲ್ಲಿ ಅವನ ಚಕ್ರವರ್ತಿತ್ವವನ್ನು ಒಪ್ಪಿಕೊಂಡಿರಬೇಕು. ಅದಕ್ಕೂ ಮೊದಲೇ ದೇವಗಿರೀಶ್ವರ ಸಿಂಘಣ ಭೂಪಾಲನು ಮಹಾಪ್ರಧಾನ, ಸರ್ವಾಧಿಕಾರಿ, ಮಹಾಪರಮವಿಶ್ವಾಸಿ ಮಾಯಿದೇವ ಪಂಡಿತನನ್ನು ಬನವಾಸಿ (ಕುಂತಳ–ಕರ್ನಾಟ) ಪ್ರಾಂತದ ರಾಜ್ಯಪಾಲನನ್ನಾಗಿ ನಿಯಮಿಸಿದ್ದನು. ೧೨೨೬ರರಲ್ಲಿ ಹಲಸಿಗೆ ೧೨೦೦ರಕ್ಕೆ ಹೆಮ್ಮೆಯ ನಾಯಕನನ್ನು ಅವನು ರಾಜ್ಯಪಾಲನನ್ನಾಗಿ ಮಾಡಿದನು.

ಚಂದ್ರಗುತ್ತಿಯು ೭ ಸುತ್ತಿನ ಕೋಟೆ, ಹಾನುಗಲ್ಲಿನ ಉಪರಾಜಧಾನಿ. ೧೧೭೬ರರಲ್ಲಿ ಬರೆಯಿಸಿದ ಕೀರ್ತಿದೇವ ಕದಂಬನ ಶಾಸನದಲ್ಲಿ ಅದರ ಉಪರಾಜಧಾನಿತ್ವದ ಉಲ್ಲೇಖವಿದೆ. ಅದನ್ನು ಸಿಂಘಣನು ವಶಪಡಿಸಿಕೊಂಡ ಮೇಲೆ ಮಲ್ಲಿದೇವನು ಆ ಯಾದವನಿಗೆ ಶರಣಾಗತನಾಗಬೇಕಾಯ್ತು. ಜೊತೆಗೆ ಅವನು ಹೊಯ್ಸಳರ ವೀರಸೋಮೇಶ್ವರನಿಗೂ (೧೨೩೫–೧೨೫೪) ಸೋತು ಹಲವಾರು ಜಿಲ್ಲೆಗಳನ್ನು ಕಳೆದುಕೊಳ್ಳಬೇಕಾಗಿ ಬಂದಿತು. ಅಂತೂ ಮಲ್ಲಿದೇವನ ಆಳಿಕೆ ೧೨೫೨ರ ಹೊತ್ತಿಗೆ ಕೊನೆಗಂಡಿತು.


ಕ್ರಿ.ಶ ೧೨೫೨ರಿಂದ ೧೨೬೦ರ ವರೆಗೆ ಮಲ್ಲಿದೇವನ ತಮ್ಮನಾಗಿರಬಹುದಾದ ರಾಮದೇವರಸನು ಅಣ್ಣನ ಮಹಾ ಮಂಡಲೇಶ್ವರತ್ವಕ್ಕೆ ಉತ್ತರಾಧಿಕಾರಿಯಾದನು. ಆಮೇಲೆ ಮಲ್ಲಿದೇವನ ಮಗ ಕಾಮದೇವನು ಪಟ್ಟಕ್ಕೆಬಂದನು. ಈತನು (೧೨೬೦–೧೩೧೫) ಚಾಳುಕ್ಯ ಅರಸಿತಿಯ ಮಗನಾಗಿರಬೇಕು.[೨೬a]


ಕ್ರಿ.ಶ. ೧೨೭೬ರಲ್ಲಿ ಯಾದವರಿಗೂ ಹೊಯ್ಸಳರಿಗೂ ಯುದ್ಧವಾಯ್ತು. ಯಾದವರ ಚಕ್ರವರ್ತಿಯಾದ ಸಿಂಘಣನ ಮಗ ಚೈತ್ರಪಾಲ ಅಥವಾ ಜೈತುಗಿ ರಾಜ್ಯಭಾರವನ್ನು ವಹಿಸಿಕೊಳ್ಳದ್ದರಿಂದ ಅವನ ಮೊಮ್ಮಗನಾದ ಕೃಷ್ಣನು ೧೨೪೭ರಿಂದ ೧೨೬೦ರವರೆಗೆ ಆಳಿದನು. ಆಮೇಲೆ ೧೨೬೦ರಲ್ಲಿ ಪಟ್ಟಕ್ಕೆ ಬಂದ ಅವನ ತಮ್ಮ ಮಹಾದೇವ ಯಾದವನ ಮಗ ರಾಮಚಂದ್ರ ಯಾದವನು[೨೬b]. ೧೨೭೬ರಲ್ಲಿ ತಮ್ಮ ಮಹಾ

೨೫. C.S.H.I. ಕ್ರಿ.ಶ ೧೨೧೦ರಲ್ಲಿ ಸಿಂಘಣನು ಪಟ್ಟಾಭಿಷಿಕ್ತನಾದನು.

೨೬a. K.K.P.154.

೨೬b H.C.I.P.Vol. V.P. 193-4-ಮಹಾದೇವನು ಉತ್ತರ ಕೊಂಕಣವನ್ನು ಆಗಲೇ ವಶಪಡಿಸಿಕೊಂಡಿದ್ದನು; ಹೊಯ್ಸಳರಿಗೆ ಸೇರಿದ್ದ ಚೆನ್ನಗಿರಿ ತಾಲೂಕನ್ನೂ (ಶಿವಮೊಗ್ಗದಲ್ಲಿ) ಮೊದಲೇ ಗೆದ್ದುಕೊಂಡಿದ್ದನು. ಆದರೆ ಅವನ ಆಳಿಕೆ ೧೨೭೧ರಲ್ಲಿ ಮುಗಿಯುವುದರಿಂದ ಅವನಿಗೂ ಹೊಯ್ಸಳರಿಗೂ ಯುದ್ಧನಡೆದದ್ದು ೧೨೩೩ರ ಆಸುಪಾಸಿನಲ್ಲಿ; ಮೊರೀಸೆನ್ನುವಂತೆ ೧೨೭೬ರಲ್ಲಲ್ಲ ಎಂದು ತಿಳಿದುಬರುತ್ತದೆ. ತಿಕ್ಕಮನು ಹೊಯ್ಸಳರ ೩ನೆಯ ನರಸಿಂಹನೊಡನೆ ಹೋರಾಡಿದ್ದು ಮಹಾದೇವನ ಮಗನಾದ ರಾಮಚಂದ್ರ ಯಾದವನ ಕಾಲದಲ್ಲಿ.


೨ನೆಯ ಜಯಕೇಶಿಯ ಕಾಲದಲ್ಲದ್ದ
ಗೋವೆಯ ಕದಂಬರಾಜ್ಯ
— ಗೋವೆಯ ಕದಂಬರ ಆಳಿಕೆಗೊಳಪಟ್ಟ ಪ್ರದೇಶಗಳು
- - -, ಹಾನುಗಲ್ಲಿನ ಕದಂಬರ ಆಳಿಕೆಗೊಳಪಟ್ಟ ಪ್ರದೇಶಗಳು
ಠಾಣಾ
ಕರಾಡ
ವೇಲುಗ್ರಾಮ ೭೦
ಪಲಗುಂಡಿ ೭೦
ಕುಂತಕುಳಿ ೭೦
ಗೋವೆ
ಹಲಸಿಗೆ ೧೨೦೦
ಹಾನುಗಲ್ಲು ೫೦೦


೧೧ನೆಯ ಶತಮಾನದಲ್ಲಿದ್ದ
ಕದಂಬರ ರಾಜ್ಯಗಳು
ಕಲ್ಯಾಣ.
ಕೊಲ್ಲಾಪುರ
ವೇಳುಗ್ರಾಮ
ಗೋವೆ
ಉಚ್ಚಂಗಿ
ಬನವಾಸಿ
ಕೋಲಾರ
ಮದುರೆ
ಪಾಂಡ್ಯರು
① ಕೊಂಕಣ ೯೦೦
② ಹಲ್ಸಿ ೧೨೦೦೦
ಗೋವೆ ಕದಂಬರು
③ ಹಾನುಗಲ್ಲು ೫೦೦
④ ಬನವಾಸಿ ೧೨೦೦೦
ಹಾನುಗಲ್ಲು ಕದಂಬರು
⑤ ಬೇಲೂರ ಕದಂಬರು
⑥ ಬಯಲುನಾಡು ಕದಂಬರು

ದಂಡನಾಯಕ ಸಾಳುವ ತಿಕ್ಕಮನನ್ನು ಹೊಯ್ಸಳರ ೩ನೆಯ ನರಸಿಂಹನನ್ನು (೧೨೫೪–೧೨೯೧) ಎದುರಿಸಲು ದೊಡ್ಡ ಸೈನ್ಯದೊಡನೆ ಹೊಯ್ಸಳರ ರಾಜಧಾನಿಯಾದ ದ್ವಾರಸಮುದ್ರದ (ಹಳೇಬೀಡು) ಕಡೆಗೆ ಕಳಿಸಿದನು. ಈ ಯುದ್ಧದಲ್ಲಿ ಒಟ್ಟಿನಲ್ಲಿ ಸಮಪ್ರತಾಪದ ಪ್ರದರ್ಶನವಾದರೂ ಹೊಯ್ಸಳರು ಯಾದವರ ನೆರವಿಗರಾದ ಕದಂಬರಿಗೆ ಅವರಿಂದ ಕಸಿದುಕೊಂಡಿದ್ದ ಪ್ರದೇಶಗಳೆಲ್ಲವನ್ನೂ ತಿರುಗಿಕೊಡಬೇಕಾಯಿತು. ಆದುದರಿಂದ ಕ್ರಿ.ಶ ೧೨೮೦ರ ಹೊತ್ತಿಗೆ ಕಾವದೇವ ಕದಂಬ ಮಹಾಮಂಡಲೇಶ್ವರನು ಯಾದವರ ಸಹಾಯದಿಂದ ಸ್ವಸ್ಥವಾಗಿ ಕುಂತಳ ಕರ್ನಾಟಕವನ್ನು ಚಕ್ರವರ್ತಿ ಬಿರುದಿನಿಂದ ಆಳುತ್ತಿದ್ದನೆಂದು ತಿಳಿದುಬರುತ್ತದೆ.

ಆದರೆ ೩ನೆಯ (ಹೊಯ್ಸಳ) ನರಸಿಂಹನ ಮಗನಾದ ೩ನೆಯ ವೀರಬಲ್ಲಾಳನು (೧೨೯೧–೧೩೪೨) ಪಟ್ಟಕ್ಕೆ ಬಂದಕೂಡಲೇ ಅಲ್ಲದಿದ್ದರೂ ಸುಮಾರು ೧೨೯೮ರ ೯೯ರ ಹೊತ್ತಿಗೆ ಅಲ್ಲಾವುದ್ದೀನನಿಂದ ಯಾದವರು ೧೨೯೪ರಲ್ಲೇ ಪರಾಜಿತರಾಗಿದ್ದುದರಿಂದ ಬನವಾಸಿಯ ಮೇಲೆ ಅವನು ದಂಡೆತ್ತಿಬಂದು, ಅದನ್ನು ವಶಪಡಿಸಿಕೊಂಡನು.[೨೬c]

ಬಳಿಕ ಹಾನುಗಲ್ಲಿನತ್ತ ಸಾಗುವಾಗ, (ದಾವಣಗೆರೆ ಪ್ರದೇಶದ) ಕದಂಬಳಿಗೆ ೧೦೦೦ದ ಮುಖ್ಯಪಟ್ಟಣವಾಗಿದ್ದ ಶಿರಸೆಯಲ್ಲಿ ಬೀಡುಬಿಟ್ಟು,[೨೬d] ಕಡಬಳಲನ್ನು ಕೊಳ್ಳೆಹೊಡೆದನು; ಅಲ್ಲಿ ಯಾದವರ ನೆರವಿಗನಾದ ಕದಂಬ ಕಾವನನ್ನು ಸೋಲಿಸಿ ಸಾಂತಳಿಗೆ, ಕೊಗಲಿಗಳನ್ನು ವಶಪಡಿಸಿಕೊಂಡನು. ಆದರೆ ಅದೇ ೨ ವರ್ಷಗಳಲ್ಲಿ ಹೊಯ್ಸಳರ ವಿರುದ್ಧವಾಗಿ ಸ್ವಾತಂತ್ರ್ಯ ಸಾರಿದ ಕದಂಬ ಚಕ್ರವರ್ತಿ ಕಾವದೇವನು ಚಾಳುಕ್ಯರ ವೇತುಗಿದೇವನ ಅಥವಾ ಅವನ ಮಗ ಸೋಮದೇವನ ಬೆಂಬಲದಿಂದ ಮತ್ತೆ ಹೊಯ್ಸಳರನ್ನೆದುರಿಸಿದನು. ಆಗ ನಡೆದ ಘೋರಯುದ್ಧದಲ್ಲಿ ಹೊಯ್ಸಳರು ಸೋತು ಓಡಿಹೋದರು. ೧೩೦೭ರಲ್ಲಿ ಕಾವದೇವನು ಯುದ್ಧದಲ್ಲಿ ಹೊಯ್ಸಳರು ವಶಪಡಿಸಿಕೊಂಡಿದ್ದ ತನ್ನ ರಾಜ್ಯಭಾಗಗಳೆಲ್ಲವನ್ನೂ ಮರಳಿಪಡೆದುಕೊಂಡನು; ಮತ್ತು ಯಾದವರು ದುರ್ಬಲರಾಗಿ ಹೋದುದರಿಂದ ಸ್ವತಂತ್ರವಾಗಿ ಅಳತೊಡಗಿದನು. ಆದರೆ ೧೩೧೦ರಲ್ಲಿ ದಿಲ್ಲಿಯ ಸುಲ್ತಾನ್ ಅಲ್ಲಾವುದ್ದೀನನ ಸೇನಾಪತಿ ಮಲ್ಲಿಕ್ ಕಾಫರನು ದಂಡಯಾತ್ರೆಯನ್ನು ಕೈಕೊಂಡು ಯಾದವರನ್ನೂ ಹೊಯ್ಸಳರನ್ನೂ ಅವರೊಡನೆ ಹಾನುಗಲ್ಲಿನ ಕದಂಬರನ್ನೂ ಸೋಲಿಸಿದನೆಂದು ಹೇಳಬಹುದು. ಆದರೆ ಮಲ್ಲಿಕ್‌ಕಾಫರ್ ಹಿಂದಿರುಗಿದಮೇಲೆ ೧೩೨೦ರಷ್ಟರಲ್ಲಿ ಹೊಯ್ಸಳರ ೩ನೆಯ ವೀರಬಲ್ಲಾಳನು ಮತ್ತೆ ಕದಂಬರಮೇಲೆ ದಾಳಿಮಾಡಿ, ತಾಳಗುಪ್ಪೆ–ಚಂದ್ರಗುತ್ತಿಗಳು ಗಡಿಗಳಾಗುವ (ಹಾನುಗಲ್ ರಾಜಧಾನಿಯುಳ್ಳ) ಬನವಾಸಿಯ ದಕ್ಷಿಣಭಾಗವನ್ನು

೨೬c ಕದಂಬಳಿಗೆ, ಕಡಬಳಲು,

೨೬d. H.C.P.p.195 ಕ್ರಿ.ಶ ೧೩೦೩ರಲ್ಲಿ

ವಶಪಡಿಸಿಕೊಂಡನು. ಆದರೂ ೧೩೨೬ರಲ್ಲಿ ೨ನೆಯ ಮಹಮ್ಮದನ ದಾಳಿಗೆ ಸಿಕ್ಕಿ ಹೊಯ್ಸಳ ರಾಜಧಾನಿ ಒಮ್ಮೆ ಸಂಪೂರ್ಣ ನಾಶವಾಯಿತು. ಕಾವದೇವ ಕದಂಬನಾದರೋ ಹಾನುಗಲ್ಲು ೫೦೦ರ ಪ್ರಭುವಾಗಿ ಉಳಿದುಕೊಂಡನು. ವೀರಬಲ್ಲಾಳನು ಆಮೇಲೆ ದಿಲ್ಲಿಯ ಮಹಮ್ಮದ ಬಿನ್ ತೊಗಲಕನ ಸೈನ್ಯವನ್ನು ಸೋಲಿಸಿದರೂ ಮಥುರೆಯ ಸುಲ್ತಾನನ ಮೇಲೆ ಬಿದ್ದಾಗ ಹತನಾದನು. ಅವನ ಮಗ ೪ನೆಯ ವೀರಬಲ್ಲಾಳನು ೨–೩ ವರ್ಷಗಳ ಕಾಲ ಹೆಸರಿಗೆ ಮಾತ್ರ ದೊರೆಯಾಗಿದ್ದ. ಅನಂತರ ಹೊಯ್ಸಳರ ಹೆಸರು ಅಡಗಿಹೋಯಿತು.

೭. ಬನವಾಸಿಯ ಕದಂಬರ ಕೊನೆಗಾಲ

ಈ ನಡುವೆ ೩ನೆಯ (ಹೊಯ್ಸಳ) ವೀರಬಲ್ಲಾಳನು ವಿಜಯನಗರದ ಕೋಟೆಯನ್ನು ಕಟ್ಟಿ ಅದರ ಆಡಳಿತವನ್ನು ಸುವ್ಯವಸ್ಥಿತಗೊಳಿಸಿ ಹೋಗಿದ್ದನು.

ಆತನ ಅಧಿಕಾರಿಗಳಾಗಿದ್ದ ಹರಿಹರ ಸಹೋದರರು ಮೊದಲಿನಂತೆಯೇ ಸರಕಾರವನ್ನು ನಡೆಸಿಕೊಂಡು ಹೋದರು. ಆಗ ೧೩೪೭ರಲ್ಲಿ ಹರಿಹರನ ತಮ್ಮ ಮಾರಪ್ಪನು ಗೋಕರ್ಣಕ್ಕೆ ಹೋಗುವಾಗ ಹಾದಿಯಲ್ಲಿ ಹಾನುಗಲ್ಲಿನಲ್ಲಿ ಆಳುತ್ತಿದ್ದ ಕಾವದೇವ ಕದಂಬಪುತ್ರನಾದ ಪುರಂದರರಾಯನನ್ನು ಸೋಲಿಸಿದನು. ೧೩೧೫ರಲ್ಲಿ ಪಟ್ಟಕ್ಕೆ ಬಂದಿದ್ದ ಕಡೆಯ ಬನವಾಸಿ ಕದಂಬ ಮಹಾರಾಯನ ಆಳಿಕೆ ಇಲ್ಲಿಗೆ ಮುಗಿಯಿತು.

ರಶಿಯದ ಯಾತ್ರಿಕ ನಿಕಿಟಿನ್ನನ[೨೭] ಹೇಳಿಕೆಯ ಮತ್ತು ಇತರ ಆಧಾರಗಳ ಮೇಲೆ ಪುರಂದರ ಕದಂಬನ ಮಗ ಶಂಕರದೇವ ಕದಂಬನು ೧೩೩೬ರಲ್ಲಿದ್ದನೆಂದೂ ಈತನು ವಿಜಯನಗರದ ಸಂಗಮ ಕುಲದ ಮೂಲಪುರುಷರ ಸಂಬಂಧಿಕನಾಗಿದ್ದನೆಂದೂ ಕೆಲವರ ಊಹೆ. ಇದಕ್ಕೆ ಶಾಸನದ ಆಧಾರ ದೊರೆತಿಲ್ಲ.

೨೭. K.K., P.163 (Foot Note)

೮. ಬನವಾಸಿಯ ಕದಂಬರ ಶಾಖೋಪಶಾಖೆಗಳು

ಬನವಾಸಿಯ ಕದಂಬ ಮಹಾಮಂಡಲದ ಹೊರಗೆ ಎಂದು ಹೇಳಬಹುದಾದ ಇತರ ಕಡೆಗಳಲ್ಲಿ ಆಳುತ್ತಿದ್ದ ಅವರ ದಾಯಾದಿಗಳಲ್ಲಿ ಗೋವೆಯ ಕದಂಬರು ಅತ್ಯಂತ ಪ್ರಸಿದ್ಧರು. ಅಲ್ಲಿ ೧ನೆಯ ಷಷ್ಠದೇವ ಕದಂಬನಿಂದ ಹಿಡಿದು ಗೋವಾ ಕದಂಬ ಕಾವದೇವನ ಮೊಮ್ಮಗನವರೆಗೆ ಸುಮಾರು ೧೬ ಅರಸರು (ಬಹಳಕಾಲ ಚಾಲುಕ್ಯರಿಗೆ ಸಾಮಂತರಾಗಿ) ಕ್ರಿಶ ೯೬೬ರಿಂದ ೧೩೪೦ರವರೆಗೆ ಆಳಿದರು. (ಕಲ್ಯಾಣಿಯ ಚಾಲುಕ್ಯರ ಚಕ್ರಾಧಿಪತ್ಯವಿದ್ದದ್ದು ೯೩೭ರಿಂದ ೧೧೮೯ರ ವರೆಗೆ ಎಂಬುದಿಲ್ಲಿ ಸ್ಮರಣೀಯ). ಗೋಪಕಪಟ್ಟಣ (ಗೋವೆ) ಈ ಕದಂಬರಿಗೆ ಬಹಳ ಕಾಲ ರಾಜಧಾನಿಯಾಗಿತ್ತು. ಇವರ ಸ್ಥಾನವಾದರೂ ಮಹಾಮಂಡಲೇಶ್ವರರದ್ದೇ. ಬನವಾಸಿಯ ಜನಪ್ರಿಯ ಪ್ರಶಾಶನದ ಪರಂಪರೆಯನ್ನಿವರು ಕಾಯ್ದುಕೊಂಡು ಬಂದರು. ಇವರಲ್ಲಿ ಹೆಸರಾಂತ ರಾಜರು ಆಗಿಹೋದರು.

ಬಯಲು ನಾಡು ೫೩೦೦೦ರ ಕದಂಬರನ್ನು ಎರಡನೆಯವರನ್ನಾಗಿ ಹೆಸರಿಸಬಹುದು. ಇವರ ಆಡಳಿತ ಕ್ಷೇತ್ರವು ಪುನ್ನಾಡಿಗೆ ಪರಿಸೀಮಿತ. ಪುನ್ನಾಡು ಅಥವಾ ಪುನ್ನಾಟವೆಂದರೆ ಹದಿನಾಡು ಇಲ್ಲವೆ ಮೈಸೂರು ಜಿಲ್ಲೆ. ಇವರ ರಾಜಧಾನಿ ಅಲ್ಲಿಯ ಕೀರ್ತಿಪುರ ಅಥವಾ ಕಿತ್ತೂರು. ಕ್ರಿ.ಶ ೫ನೆಯ ಶತಮಾನದಲ್ಲಿ ಗಂಗದೊರೆ ಅವಿನೀತನು ಸ್ಕಂದವರ್ಮನೆಂಬ ಪುನ್ನಾಟ ರಾಜನ ಅಳಿಯನಾಗಿ ಆ ನಾಡನ್ನು ಪಡೆದನು ಎಂದು ಶಾಸನವಿದೆ. ಒಂದು ಶಾಸನವು ರಾಷ್ಟ್ರವರ್ಮ, (೩೬೫–೩೯೦), ನಾಗದತ್ತ (೪೨೦–೪೨೫) ಭುಜಗ, (೪೨೫–೪೪೦), ರವಿದತ್ತ (೪೭೦–೪೯೫) ಎಂಬ ನಾಲ್ಕು ಜನ ಕದಂಬ ಮಹಾಮಂಡಲೇಶ್ವರ ರಾಜಾಧಿರಾಜರ (ಸ್ವತಂತ್ರ ಅರಸರ) ಹೆಸರುಗಳನ್ನು ಹೇಳುತ್ತದೆ[೨೪]. ಒಂದೇ ಬಗೆಯ ಬಿರುದುಗಳು, ಸಿಂಹಮುದ್ರೆ, ವೃಷಭಮುದ್ರೆ, ಮತ್ತು ವಾನರ ಧ್ವಜಗಳು ಕದಂಬ ಕುಲದ ಎಲ್ಲ ಕಡೆಯ ಅರಸರಲ್ಲೂ ಕಂಡುಬರುವುದು ಅವರ ಸಾಮಾನ್ಯ ಪರಂಪರೆಗೆ ಪ್ರಮಾಣ. ಪುನ್ನಾಡಿನ ರವಿಯಮ್ಮರಸನು ಗಣ್ಯ. ಈತನ ಆಳಿಕೆ ೧೦ನೆಯ ೧೧ನೆಯ ಶತಮಾನಗಳ ನಡುವೆ. ಈತನ ರಾಜಧಾನಿಯಾದ ಕೀರ್ತಿಪುರವು ಹೆಗ್ಗಡೆದೇವನ ಕೋಟೆ ತಾಲೂಕಿನ ಕಿತ್ತೂರೇ. ಈತನಾದಮೇಲೆ ೧೦೭೯ರಲ್ಲಿ ಸ್ಕಂದವರ್ಮ (ಕಂದವಮ್ಮ) ಕದಂಬ ಮಹಾರಾಜನ ಉಲ್ಲೇಖವನ್ನು

ಶಾಸನವೊಂದರಲ್ಲಿ ಕಾಣಬಹುದು. ಮೈಸೂರು ಜಿಲ್ಲೆಯ ಕಿಕ್ಕಿನಾಡು (ಕಿಕಿರೆ) ಮತ್ತು ಕೇರಳದ ತೆರುಮಂಗಳ ಈತನ ಉಪರಾಜಧಾನಿಗಳಾಗಿದ್ದವು. ಈತನ ಆಳಿಕೆ ೧೦೮೩. ಅನಂತರ ೧೯೦ರಲ್ಲಿ ಇವನ ಮಗ ಕಾಂತಿವರ್ಮ ಪಟ್ಟಕ್ಕೆ ಬಂದುದು ಗೊತ್ತಾಗುತ್ತದೆ. ಇರಿವ ಚೆಲ್ಲಮ್ಮ ಕದಂಬನು ಮುಂದಿನ ದೊರೆ. ಇವನು ಹಿಂದಿನ ದೊರೆಯಮಗ. ಮುಕ್ಕಣ್ಣ ಕದಂಬನು ಕೊನೆಯ ಅರಸ. ೧೧೩೮ರ ಶಾಸನ ಅದನ್ನು ಉಲ್ಲೇಖಿಸಿದೆ. ಶತಮಾನ ಕಳೆದಮೇಲೆ ೧೩೯೩ರಲ್ಲಿ ವಿಜಯನಗರದ ಸಾಮಂತನಾಗಿದ್ದ ಮಹಾರಾಜಾಧಿರಾಜ ಕದಂಬರಾಯ ವೊಡೆಯ ಅಯ್ಯನ ಹೆಸರು ಶಾಸನ ಪ್ರಸಿದ್ಧವಾದದ್ದು ತಿಳಿದುಬರುತ್ತದೆ.

೩ನೆಯದಾಗಿ, ಬೇಲೂರಿನ ಕದಂಬರು ಉಲ್ಲೇಖನೀಯರು. ತ್ರಿಪುರ, ತ್ರಿಪರ್ವತ ಅಥವಾ ಹಳೇಬೀಡು ಇವರ ರಾಜಧಾನಿಯಾಗಿತ್ತು. ಸುಮಾರು ೧೦೦೦ದ ಹೊತ್ತಿಗೆ ಇವರ ಮೊದಲ ದೊರೆಯಾದ ಕದಂಬರಸನ ಹೆಸರು ಕೇಳಿ ಬರುತ್ತದೆ. ಆಮೇಲೆ ಬಂದವನು ನೀತಿಮಹಾರಾಜ. ೧೦೩೫ರಲ್ಲಿ ಈತನು ದಿವಂಗತನಾದನು. ಇವನ ಆಳಿಕೆ ೧೦೧೫ರಿಂದ ೧೦೩೫ರವರೆಗೆ ನಡೆದಿರಬೇಕು. ಹಿತ್ತೆಯರಸ ಚಾಗಿಮಹಾರಾಜ ಕದಂಬ ಈತನ ಉತ್ತರಾಧಿಕಾರಿ (೧೦೩೫–೧೦೭೦). ಆಮೇಲೆ ದೂಧರಸನ ಆಳಿಕೆ; ಬಳಿಕ ದಯಾಸಿಂಹನ ರಾಜ್ಯಭಾರ. ೧೯೫ರ ಶಾಸನದಲ್ಲಿ ಚಾಲುಕ್ಯರ ಮಹಾಮಂಡಲೇಶ್ವರರಾಗಿ ಈ ಮನೆತನದವರು ಕದಂಬ ಪರಂಪರೆಯನ್ನು ಸಾಗಿಸಿಕೊಂಡು ಹೋದದ್ದು ಗೊತ್ತಾಗುತ್ತದೆ.

೪ನೆಯದಾಗಿ, ಬಂಕಾಪುರದಲ್ಲಾಳಿದ ಕದಂಬ ಮನೆತನವನ್ನು ನೆನೆದುಕೊಳ್ಳಬಹುದು. ಹಾನಗಲ್ಲು ಮನೆತನದ ಶಾಖೆಯಿದು. ಚಾಲುಕ್ಯರ ಬನವಾಸಿ ರಾಜ್ಯಪಾಲನಾದ ಹರಿಕೇಸರಿ ಕದಂಬನ ಅಣ್ಣ ಸತ್ಯಾಶ್ರಯನಿಂದ ಈ ಮನೆತನದ ಆರಂಭ. ಕಾಣನೂರು ರಾಜಧಾನಿ ಯಾಗಿರುವ ಹಾನುಗಲ್ಲನ್ನೊಳಗೊಂಡ ಪ್ರಾಂತಕ್ಕೆ ಸತ್ಯಾಶ್ರಯನು ರಾಜ್ಯಪಾಲನಾಗಿದ್ದಿರಬೇಕು. ೧೦೬೭ರ ಶಾಸನವು ಇವರನ್ನು ಹೆಸರಿಸುವ ಕೊನೆಯ ಶಾಸನ.

೫ನೆಯದಾಗಿ, ಉಚ್ಚಂಗಿಯ ಕದಂಬರೂ ಬನವಾಸಿಯ ಕದಂಬರ ವಂಶವರ್ಧನರೇ ಆಗಿದ್ದರೆಂಬುದು ಪ್ರಸಿದ್ಧ. ಅಜವರ್ಮರಸನು ಈ ಶಾಖೆಯ ಮೊದಲನೆಯ ದೊರೆ. ೧೦೩೨ರಲ್ಲಿ ಈತನು ಚಾಲುಕ್ಯರ ಸಾಮಂತನಾಗಿದ್ದ ಉಲ್ಲೇಖವಿದೆ. ಮನ್ನೆಯ ಪುಟ್ಟಿಯರಸ (೧೦೪೯) ಮತ್ತು ಬಂಚರಸದೇವ (೧೧೧೦) ಎಂಬ ಕದಂಬ ಅರಸರು ಆಮೇಲೆ ಆಳುತ್ತಿದ್ದರು. ಮುಂದಿನ ೩೫ ವರ್ಷಗಳು (೧೦೧೦ರಿಂದ ೧೧೪೫ರ ವರೆಗೆ) ಅಂಧಕಾರಯುಗ. ೧೧೪೬ರಿಂದ ೧೧೭೧ರ ವರೆಗೆ ಕೇತರಸ ಕದಂಬನು ಪಾಂಡ್ಯರ ಮಹಾಮಂಡಲೇಶ್ವರನಾಗಿಯೂ ನಗತಿನೃಪಾಲ ಮತ್ತು ಇವನ ತಮ್ಮ ಹರಿಯರಸ ಕದಂಬನು ತಂದೆಯ ಪರಂಪರೆಯನ್ನು ಮುಂಬರಿಸಿಕೊಂಡು ಹೋದುದಾಗಿಯೂ ತಿಳಿದು ಬರುತ್ತದೆ.

೬ನೆಯದಾಗಿ, ನಾಗರಖಂಡದ ಕದಂಬರು ಅಭಿಲೇಖನೀಯರಾಗುತ್ತಾರೆ. ಬಮ್ಮರಸ ಕದಂಬನು ಈ ಶಾಖೆಯ ಮೊದಲಿಗ. ಬೊಪ್ಪದೇವ ಈತನ ಮಗ. ಈತನು ಹಾನುಗಲ್ಲಿನ ೨ನೆಯ ತೈಲ ಕದಂಬನ ಅಧೀನನಾಗಿದ್ದನು. ಈತನ ಆಳಿಕೆ ಬಹುಶಃ ೧೧೧೨ರಿಂದ ೧೧೩೮ರವರೆಗೆ. ಸೋಮದೇವ ಅಥವಾ ಸೋಯಿದೇವನು ಇವನ ಮಗ. ಕಲಚುರ್ಯರು ಗೆದ್ದು ಬನವಾಸಿಯ ಆಡಳಿತವನ್ನು ಈತನಿಗೆ ವಹಿಸಿಕೊಟ್ಟದ್ದು ೧೧೫೯ರ ಶಾಸನದಿಂದ ತಿಳಿದುಬರುತ್ತದೆ. ಆಮೇಲೆ ಅದನ್ನು ಈತ ಹಾನುಗಲ್ಲಿನ ಕದಂಬರಿಗೆ ಬಿಟ್ಟುಕೊಟ್ಟದ್ದು ೧೧೬೫ರ ಶಾಸನದಿಂದ ಅನುಮೇಯ. ಒಂದು ಶಾಸನವು ಕಳಚುರ್ಯ ಕುಲದೊಡನೆ ಈ ಮನೆತನವನ್ನು ಸಂಬಂಧಿಸುತ್ತದೆ. ಸೋಯಿದೇವನ ಮಗ ಬೊಪ್ಪ (೧೧೮೨). ಈತನು ಹೊಯ್ಸಳರ ಅಧೀನನಾಗಿ ಆಳಿದನು. ಬೊಪ್ಪದೇವನ ಮಗ ಬ್ರಹ್ಮಭೂಪಾಲ (೧೨೦೪). ೧೨೦೭ರ ಹೊತ್ತಿಗೆ ಈ ಮನೆತನವು ರಾಜ್ಯಹೀನವಾಯ್ತು. ಆದರೆ ೧೨೩೫ರಲ್ಲಿ ಕದಂಬರಾಯನೆಂಬವನು ನಾಗರಖಂಡವನ್ನು (ರಾಜಧಾನಿಯಾದ ಬಾಂಧವಪುರದಿಂದ=ಬಂದಣಿಕೆಯಿಂದ) ಆಳುತ್ತಿದ್ದನೆಂದು ತಿಳಿದುಬರುತ್ತದೆ. ವಿಜಯನಗರದ ರಾಜಾಧಿರಾಜ ರಾಜಪರಮೇಶ್ವರ ವೀರಪ್ರತಾಪ ಇಮ್ಮಡಿದೇವರಾಯ ಮಹಾರಾಜ (೧೪೧೯-೧೪೪೯) ಆಳುತ್ತಿದ್ದಾಗ ಬಹುಶಃ ಆತನ ಸಾಮಂತನಾಗಿ ಮಧುಕಣ್ಣನಾಯಕ ಕದಂಬನು ಆಳುತ್ತಿದ್ದನೆಂದು ೧೪೪೨ರಲ್ಲಿ ಉಲ್ಲೇಖಿಸಲಾಗಿದೆ. ಈ ನಾಗರಖಂಡ ೭೦ರ ಕೊನೆಯ ಅರಸನು ಮಧುಕಣ್ಣನ ಮಗ ಬೈಚರಸ ಕದಂಬ.

೭ನೆಯದಾಗಿ, ಕಳಿಂಗದಲ್ಲಿಯೂ ಕದಂಬ ದೊರೆಗಳಿದ್ದರೆಂಬುದು ಆಶ್ಚರ್ಯಕರವಾದರೂ ಸತ್ಯ. ಕಳಿಂಗ ಗಂಗರ ಸಾಮಂತರಾಗಿ ಚಿಕ್ಕ ದೊರೆತನ ನಡೆಸಿದ ಈ ಕುಲದಲ್ಲಿ ಸ್ಪಷ್ಟವಾಗಿ ಗೊತ್ತಾದ ಮೊದಲ ದೊರೆಯೆಂದರೆ ಪಂಚವಿಷಯಾಧಿಪತಿ ಮಹಾಮಂಡಲೇಶ್ವರ ರಾಣಕ ಶ್ರೀ ಭಾಮಖೇಡಿ. ಈತನ ಮಗನಾದ ಧರ್ಮಖೇಡಿಯ ಕಾಲದ (೧೦೫೧)ಶಾಸನ ಇದಕ್ಕಾಧಾರ. ಉಗ್ರಖೇಡಿ ಎಂಬ ಕದಂಬ ದೊರೆ ಭಾಮಖೇಡಿಯ ಹಿಂದಿನವನಂತೆ. ಉದಯಾದಿತ್ಯದೇವ ಕದಂಬನು ಧರ್ಮಖೇಡಿಯ ಉತ್ತರಾಧಿಕಾರಿ. ಕಳಿಂಗ ದೇವೇಂದ್ರವರ್ಮ ಗಂಗನ ೧೧೮೧ರ ಶಾಸನವು ಈತನನ್ನು ಸ್ಮರಿಸುತ್ತದೆ. ಮಹಾಸಾಮಂತ ನಾಗಖೇಡಿಯು ಈ ಕದಂಬಶಾಖೆಯ ಕೊನೆಯ ದೊರೆ. ಈ ಶಾಖೆಯು ಕಳಿಂಗ ರಾಜರಾದ ಗಂಗ ಕುಲದವರಿಗೆ ವೈವಾಹಿಕವಾಗಿ ಸಂಬಂಧಿಕರಾಗಿದ್ದರು. ಮತ್ಸ್ಯಲಾಂಛನ ಈ ಕದಂಬರ ವೈಶಿಷ್ಟ್ಯ. ಗಂಜಾಂ ಜಿಲ್ಲೆಯ ಈಗಿನ ಮಂದಸ ಜಮೀನುದಾರರ ಮನೆತನದವರು ಈ ಖೇಡಿ ಕದಂಬರ ವಂಶದವರೆಂದು ಗ್ರಂಥಾತರದಿಂದ ತಿಳಿದುಬರುತ್ತದೆ.

೯. ಕದಂಬರ ಪ್ರಶಾಸನ

ಸಾರ್ವಭೌಮ ಕದಂಬರು ಜಾತೀಯತೆಗೆ ವಿಮುಖರಾಗಿದ್ದರು. ಯಾವ ಧರ್ಮಗುರುವಿನ ಇಚ್ಛೆಗೂ ಅವರು ತಮ್ಮ ಮತಧಾರ್ಮಿಕ ಧೋರಣವನ್ನು ಒಳಪಡಿಸಲಿಲ್ಲ. ಅವರ ಶಾಸನಗಳಲ್ಲಿ ತಮ್ಮ ವರ್ಣ, ಜಾತಿ, ಮತಗಳಿಗೆ ಸೇರದವರ ಧಾರ್ಮಿಕ ಸಂಸ್ಥೆಗಳಿಗೆ ದತ್ತಿದಾನಗಳನ್ನು ಕೊಟ್ಟದ್ದು ಕಂಡುಬರುತ್ತದೆ. ವಿಮತೀಯರು ಅವರಿತ್ತ ಸಮಾನ ಸಂರಕ್ಷಣೆಗಾಗಿ ಅವರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಿದ ದಾಖಲೆಯಿದೆ.

ಕದಂಬರು ರಾಜಧರ್ಮದ ಪರಂಪರೆಗೆ ಅಧೀನರಾಗಿದ್ದರಲ್ಲದೆ ನಿರಂಕುಶರಾಗಿರಲಿಲ್ಲ. ಜನಮತಕ್ಕೆ ಅವರು ಬಹಳ ಬೆಲೆ ಕೊಡುತ್ತಿದ್ದರೆಂಬುದು ಶಾಸನಸಿದ್ಧ. ಅವರು ಸಾಮಾನ್ಯ ಪ್ರಜೆ ಪಾಲಿಸಬೇಕಾಗಿದ್ದ ಎಲ್ಲ ನೀತಿ–ನಿಯಮಗಳಿಗೂ ಬದ್ಧರಾಗಿದ್ದರು; ರಾಜಧರ್ಮ ಅಥವಾ ರಾಜಕೀಯ ಕರ್ತವ್ಯ ಮಾತ್ರ ಅವರನ್ನು ಪ್ರಜೆಗಳಿಂದ ಪ್ರತ್ಯೇಕಗೊಳಿಸಿತ್ತು. ವಿದ್ಯೆ, ಪ್ರಭಾವ, ವಿವೇಕ, ಪ್ರಸಾದ, ಗಾಂಭೀರ್ಯ, ಔದಾತ್ತ್ಯ, ಪ್ರತಾಪ, ಕೀರ್ತಿಕರ ಕಾರ್ಯಪ್ರವೃತ್ತಿ, ಮಾನವತೆ, ಪರಸ್ವವಿಮುಖತೆ, ಪುರೋಹಿತ, ವಿದ್ವಾಂಸ, ಮತ್ತು ಗಣ್ಯಸಾರ್ವಜನಿಕ ಕಾರ್ಯಕರ್ತರಿಗೆ ದಾನಮಾಡುವ ಅಭ್ಯಾಸ ಹಾಗೂ ಅವರನ್ನು ಗೌರವಿಸಿ ಅವರ ಗೆಳೆತನದಲ್ಲಿರುವುದು, ಅತಿ ಶುದ್ಧ ಚಾರಿತ್ರ್ಯಸಂಪನ್ನತೆ, ಪರಸ್ತ್ರೀ ವಿಮುಖತೆ, ಶರಣಾಗತರಕ್ಷಕತೆ ಮುಂತಾದ ಮಹಾಗುಣಗಳಿಂದ ಕದಂಬಪ್ರಭುಗಳು ಅತ್ಯಂತ ಜನಪ್ರಿಯರಾಗಿದ್ದರು.

ರಾಜ್ಯದ ಹಿರಿಯರೂ ಶಾಸ್ತ್ರಜ್ಞರೂ ಆದ ಮಂತ್ರಿಗಳು ಅರಸರಿಗೆ ಸಲಹೆಗಾರರಾಗಿದ್ದರು. ಹರಿವರ್ಮ ಹಾಗೂ ಶಿವಚಿತ್ತರ ದತ್ತಿ, ಶಾಸನಗಳು ಈ ಮಾತಿಗೆ ಪ್ರಮಾಣಗಳಾಗಿವೆ. ಒಳಹೊರಗಿನ ಶತ್ರುಗಳಿಂದ ಪ್ರಜೆಗಳ ವಿತ್ತಜೀವಿತದನ್ನು ಸಂರಕ್ಷಿಸುವುದು, ದುಷ್ಟಶಿಕ್ಷಣ–ಶಿಷ್ಟಪರಿಪಾಲನ ಮಾಡುವುದು, ಧನಿಕ–ದರಿದ್ರರಲ್ಲಿ ಪರಿಭೇದ ಮಾಡದಿರುವುದು ರಾಜ–ರಾಣಿಯರ ಕರ್ತವ್ಯವೆಂದು ಕದಂಬ ಮನೆತನಗಳು ನಂಬಿ ನಡೆದುಕೊಳ್ಳುತ್ತಿದ್ದವು. ಇಷ್ಟಾಪೂರ್ತಗಳನ್ನು ಹೆಚ್ಚಾಗಿ ಪ್ರಸಿದ್ಧರಾದ ಅವರ ರಾಣಿಯರೇ ಮಾಡಿಸುತ್ತಿದ್ದರು.

ಕದಂಬ ಮಹಾರಾಜರ ಆಸ್ಥಾನದಲ್ಲಿ ಮಾಂಡಲಿಕರು, ಮಂತ್ರಿಗಳು, ಜನನಾಯಕರು. ಪ್ರಾಧಿಕಾರಿಗಳು, ಪುರೋಹಿತರು, ಪಂಡಿತರು ಹಾಗೂ ಕಲೆಗಾರರು

ವಿರಾಜಿಸುತ್ತಿದ್ದರು. ಕರ್ನಾಟ ಸಾರ್ವಭೌಮರ ದರ್ಬಾರಿನ ವಾದರಿಗಳ ಮೂಲವಿರುವುದು ಕದಂಬರ ಮಹಾಸ್ಥಾನದಲ್ಲೇ. ರಾಜಸಭೆಯಲ್ಲಿ ಮಹಾರಾಜ ಮಹಾರಾಣಿಯರು ಎಡಗಡೆ ಕುಟ್ಟಿಮದ ಮೇಲೆ ಸಿಂಹಾಸನದಲ್ಲಿ ಕುಳಿತುಕೊಳ್ಳುತ್ತಿದ್ದರು. ಮಹಾರಾಜರು ಒಂದು ಕೈಯಲ್ಲಿ ಅಧಿಕಾರಖಡ್ಗವನ್ನೂ ಇನ್ನೊಂದು ಕೈಯಲ್ಲಿ ಹೂವನ್ನೂ ಹಿಡಿದಿರುತ್ತಿದ್ದರು. ಆಳುಗಳು ಛತ್ರ–ಚಾಮರಗಳನ್ನು ಎಡ–ಬಲಗಳಲ್ಲಿ ಹಿಡಿದು ನಿಲ್ಲುತ್ತಿದ್ದರು. ಸಿಂಹಾಸನದ ಎದುರಿನಲ್ಲಿ ರಾಜಗುರುಗಳು ಉಚ್ಚಾಸನಾಸೀನರಾಗಿರುತ್ತಿದ್ದರು. ಅವರ ಎಡ–ಬಲಗಳಲ್ಲಿ ಅವರ ಪ್ರಧಾನ ಶಿಷ್ಯರು ಮಂಡಿಸುತ್ತಿದ್ದರು. ಅವರ ಹಿಂದೆ ರಾಜಮನೆತನದ ಹಿರಿಯರೂ, ಮಂತ್ರಿಗಳೂ ಮಾಂಡಲಿಕರೂ ಇತರ ಆಸ್ಥಾನ ವಿದ್ವಾಂಸರೂ ಅಧಿಕಾರಿಗಳೂ ತಕ್ಕ ಆಸನಗಳಲ್ಲಿ ಕುಳಿತುಕೊಳ್ಳುತ್ತಿದ್ದರು. ಈ ಸಭಾಸದರೊಡನೆ ಸಾಮಂತ ರಾಜರೂ ಸಾರ್ವಭೌಮರೂ ರಾಜ್ಯ–ಸಾಮ್ರಾಜ್ಯಗಳಲ್ಲಿ ಎದ್ದ ಸಮಸ್ಯೆಗಳನ್ನು ಚರ್ಚಿಸಿ ನಿರ್ಣಯಕ್ಕೆ ಬರುತ್ತಿದ್ದರು.

ಕುಂತಳದ ಕದಂಬರಾಯರ ಆಸ್ಥಾನವು ರಾಜ–ಮಂತ್ರಿಗಳಲ್ಲಿ ನಡೆಯುತ್ತಿದ್ದ ತತ್ವಜ್ಞಾನವಿಷಯಿಕ ಚರ್ಚೆಗೆ ವಿಶೇಷವಾಗಿ ಹೆಸರಾಗಿತ್ತು. ಅನೇಕ ಶಾಸ್ತ್ರಜ್ಞರು ಅದರಲ್ಲಿ ಭಾಗವಹಿಸುತ್ತಿದ್ದರು. ವಿದ್ವಾಂಸರಿಗೆ ಧನದಾನ, ಭೂದಾನ, ಕರಮುಕ್ತತೆಗಳನ್ನು ನೀಡಲಾಗುತ್ತಿತ್ತು. ರಾಜ್ಯಕ್ಕೆ ಸಂಬಂಧಿಸಿದ ದೈನಂದಿನ ವಿಚಾರ ವಿನಿಮಯದಲ್ಲಿ ಭಾಗವಹಿಸಲು ಮಹಾರಾಜರಿಗೆ ಐವರು ಸದಸ್ಯರ ಒಂದು ಸಮರ್ಥ ಮಂತ್ರಿಸಂಪುಟವಿರುತ್ತಿತ್ತು. ಮನೆವೆರ್ಗಡೆ, ತಂತ್ರಪಾಲ, ಪ್ರಧಾನ, ಕ್ರಮುಕಪಾಲ, ಸಭಾಕಾರ್ಯಸಚಿವ ಎಂಬಿವು ಅವರ ಪದಾಭಿಧಾನಗಳು. ಅವರ ಸಲಹೆಗಳನ್ನು ಅರಸರು ಸದಾ ಒಪ್ಪಿ ನಡೆದುಕೊಳ್ಳುತ್ತಿದ್ದರು. ಅವರ ಆಯ್ಕೆಯು ಅತ್ಯಂತ ಸುಪರೀಕ್ಷಿತವಾಗಿ ನಡೆಯುತ್ತಿತ್ತು. ಅದರಿಂದಲೇ ಕದಂಬ ರಾಜ್ಯಭಾರವು ಅಷ್ಟು ಸರ್ವಾದರಣೀಯವಾಯ್ತು; ಕದಂಬಪದವೇ ಗೌರವಭಾರದಿಂದ ತುಂಬಿಹೋಯ್ತು.

ಕದಂಬರ ಮಂತ್ರಿಗಳು, ಶಾಸನಗಳು ಹೇಳುವಂತೆ ಪ್ರಶಾಸನ ಶಾಸ್ತ್ರಪಂಡಿತರೂ ನೀತಿಸಂಪನ್ನರೂ ವ್ಯಕ್ತಿತ್ವಯುಕ್ತರೂ ಸುಶಿಕ್ಷಿತರೂ ವಿಶಾಲವಿಷಯಜ್ಞಾನವುಳ್ಳವರೂ ಸುನೀತಿಸಂಪನ್ನ ಕುಟುಂಬಗಳಲ್ಲಿ ಜನಿಸಿದವರೂ ಮಹಾಮನರೂ ಆಗಿರುತ್ತಿದ್ದರು. ನ್ಯಾಯ–ಅಲಂಕಾರ–ರಾಜನೀತಿಗಳಲ್ಲಿ ಅವರು ವಿಶೇಷಜ್ಞರಾಗಿರುತ್ತಿರುತ್ತಿದ್ದರು; ನಾಗರಿಕ–ಸೈನಿಕ ಆಡಳಿತಗಳೆರಡಲ್ಲೂ ಅವರು ಪಾರಂಗತರಾಗಿದ್ದರು. ರಾಜನೊಡನೆ ಮಂತ್ರಿಗಳೂ ರಣರಂಗಕ್ಕೆ ಹೋಗಿ ಸೈನ್ಯ–ವಿಭಾಗಗಳ ನೇತೃತ್ವವನ್ನು ವಹಿಸುತ್ತಿದ್ದರು.

ಕದಂಬ ಸಚಿವಾಲಯದಲ್ಲಿ ರಹಸ್ಯಾಧಿಕೃತರೆಂಬ ಖಾಸಗಿ ಕಾರ್ಯದರ್ಶಿಗಳಿರುತ್ತಿದ್ದರು ಎಂಬುದನ್ನು ಮಾಂಧಾತೃವರ್ಮನ ಶಾಸನ ತಿಳಿಸುತ್ತದೆ. ಖಾಸಗಿ ಕಾರ್ಯದರ್ಶಿಯು ಮುಖ್ಯಕಾರ್ಯದರ್ಶಿಗೂ, ಮುಖ್ಯಕಾರ್ಯದರ್ಶಿಯು ಕಂದಾಯ ಶಾಖೆಯ ಪ್ರಾಧಿಕಾರಿಗಳಿಗೂ ರಾಜಾಜ್ಞೆಯನ್ನು ಮುಟ್ಟಿಸುತ್ತಿದ್ದರು. ಅನಂತರ ಪ್ರಾಧಿಕಾರಿಗಳು ತಮ್ಮ ಶಾಖೆಯ

ಲೆಕ್ಕಿಗರ ಸಭೆಯನ್ನು ಸೇರಿಸಿ ಅವರಿಗೆ ತಿಳಿಸಿದಾಗ ಅವರು ತಮ್ಮ ಕಡತಗಳಲ್ಲಿ ಅದನ್ನು ವಿವರಪೂರ್ವಕವಾಗಿ ಬರೆದುಕೊಳ್ಳುತ್ತಿದ್ದರು.

ಕುಂತಳೇಶ್ವರರ ನ್ಯಾಯದಾನದ ನಿಷ್ಪಕ್ಷಪಾತವು ಹೆಸರುವಾಸಿಯಾಗಿತ್ತು. ಅವರದು ಸುಪ್ರೀಂ ಕೋರ್ಟಿನ ಸ್ಥಾನ. ಕೆಳಗಿನ ಧರ್ಮಾಧಿಕರಣಗಳ ಅಧ್ಯಕ್ಷರು ಕಳಿಸಿದ ಅಲ್ಪಸಂಖ್ಯ ಮಹತ್ವದ ಪ್ರಕರಣಗಳಷ್ಟನ್ನು ಅವರು ಪರಿಶೀಲಿಸಿ ನ್ಯಾಯವನ್ನು ನಿರ್ಣಯಿಸುತ್ತಿದ್ದರು. ನ್ಯಾಯಾಧಿಕಾರಿಗಳಲ್ಲಿ ಪ್ರಕರಣ ಪ್ರಕಾರಗಳ ವಿಂಗಡಣೆಯನ್ನಾಧರಿಸಿದ ವರ್ಗೀಕರಣವಿತ್ತು. ಎಲ್ಲ ತರದ ಪ್ರಕರಣಗಳನ್ನೂ ವಿಚಾರಣೆಗೆ ತೆಗೆದುಕೊಳ್ಳುವ ಅಧಿಕಾರವಿದ್ದ ನ್ಯಾಯಾಧೀಶನಿರಲಿಲ್ಲ. ಶಿಕ್ಷೆಯು ಯಾವಾಗಲೂ ತಪ್ಪಿಗೆ ತಕ್ಕದ್ದಾಗಿರುತ್ತಿತ್ತು. ಕದಂಬರು ಶಿಥಿಲದಂಡರೂ ಅಲ್ಲ ಉಗ್ರದಂಡರೂ ಅಲ್ಲ. ಹೊಡೆದು ಬಡಿದು ಇನ್ನೊಬ್ಬರನ್ನು ಹಿಂಸಿಸುವ ಅಥವಾ ಶಿಕ್ಷಿಸುವ ತಪ್ಪಿಗೆ ಅಪರಾಧಿಯು ಮೂರು ಬಂಗಾರದ ಗದ್ಯಾಣಗಳಷ್ಟು ದಂಡವನ್ನು ಕೊಡಬೇಕಾಗಿತ್ತು. ಕೊಲೆಗೆ ಅತಿಹೆಚ್ಚಿನ ದಂಡವನ್ನು ವಿಧಿಸಲಾಗುತ್ತಿತ್ತು. ಕೊಲೆಪಾತಕಿಯು ಕೊಲ್ಲಲ್ಪಟ್ಟವನ ವಾರಸುದಾರರಿಗೆ ನೂರು ಗದ್ಯಾಣಗಳನ್ನೂ ಸರಕಾರಕ್ಕೆ ಐವತ್ತು ಗದ್ಯಾಣಗಳನ್ನೂ ತೆರಬೇಕಾಗಿತ್ತು. ಸತ್ಯಾಸತ್ಯ ಪರೀಕ್ಷೆಯನ್ನು ವಿಶೇಷ ಸಂದರ್ಭಗಳಲ್ಲಿ ಅಗ್ನಿಮುಖವಾಗಿ ಮಾಡಲಾಗುತ್ತಿತ್ತು.

ಅಂದು ಸಾಮ್ರಾಜ್ಯ, ಪ್ರಾಂತಗಳು, ರಾಜ್ಯಗಳು, ವಿಷಯಗಳು (ಜಿಲ್ಲೆಗಳು) ಎಂಬ ರಾಜಕೀಯ ವಿಭಾಗಗಳಿದ್ದವು. ಸಾಂರಾಜ್ಯದಲ್ಲಿ ಹೆಚ್ಚು ಕಡಿಮೆ ನಾಲ್ಕು ಮಹಾ ಪ್ರಾಂತಗಳಿರುತ್ತಿದ್ದವು ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣಗಳೆಂದು. ಈ ಪ್ರಾಂತಗಳಿಗೆ ಸಾರ್ವಭೌಮನ ಮನೆತನದವರು ರಾಜಪ್ರತಿನಿಧಿಗಳಾಗಿರುತ್ತಿದ್ದರು. ಕದಂಬ ಸಾಮ್ರಾಜ್ಯದ ಉತ್ತರಭಾಗವನ್ನು ರಘುವಿನ ಕಾಲದಲ್ಲಿ ಅವನ ತಮ್ಮ ಕಾಕುತ್‌ಸ್ಥವರ್ಮನು ನೋಡಿಕೊಳ್ಳುತ್ತಿದ್ದನು. ಪಲಸಿಕೆಯು ರಾಜಪ್ರತಿನಿಧಿಯಿದ್ದ ಉಪರಾಜಧಾನಿಯಾಗಿತ್ತು. ಚಕ್ರವರ್ತಿ ಶಾಂತಿವರ್ಮನ ಕಾಲದಲ್ಲಿ ಅವನ ಒಬ್ಬ ತಮ್ಮ ಕೃಷ್ಣವರ್ಮನು ತ್ರಿಪರ್ವತದ ಉಪರಾಜಧಾನಿಯಿಂದ ರಾಜಪ್ರತಿನಿಧಿಯಾಗಿ ದಕ್ಷಿಣಾಪಥವೆಂದು ಕರೆಯಲ್ಪಡುತ್ತಿದ್ದ ದಕ್ಷಿಣಮಹಾಪ್ರಾಂತವನ್ನು ಆಳುತ್ತಿದ್ದನು; ಅವನ ಇನ್ನೊಬ್ಬ ತಮ್ಮನಾದ ಕುಮಾರವರ್ಮನು ಹಾಗೇ ಪೂರ್ವಪಥವನ್ನು ಉಚ್ಚಂಗಿಯಿಂದ ಆಳುತ್ತಿದ್ದನು. ಸಮ್ರಾಜರೇ ರಾಜರಾಗಿದ್ದಾಗ ರಾಜ್ಯಗಳಿರುತ್ತಿರಲಿಲ್ಲ. ಆಗ ಮಹಾಪ್ರಾಂತಗಳನ್ನು ವಿಷಯಗಳನ್ನಾಗಿ ವಿಂಗಡಿಸಲಾಗುತ್ತಿತ್ತು. ದೊಡ್ಡ ರಾಜ್ಯಗಳು ಸಾಮ್ರಾಜ್ಯಾಧೀನವಾಗಿ ಮಹಾಮಾಂಡಲಿಕರಿಂದ ಆಳಲ್ಪಡುವಾಗ ಅವುಗಳಿಗೆ ಪ್ರಾಂತಗಳಿರುತ್ತಿದ್ದವು. ಆದರೆ ಅವು ಚಿಕ್ಕರಾಜ್ಯಗಳಾಗಿದ್ದಾಗ ಪ್ರಾಂತವಿಭಜನೆಯಿಲ್ಲದೆ ಜಿಲ್ಲೆಗಳ ವಿಭಾಗಗಳಿಂದಲೇ ಆಡಳಿತ ನಡೆಸುತ್ತಿದ್ದವು. ಆದುದರಿಂದ ಜಿಲ್ಲೆಗಳ ಗಡಿಗಳಷ್ಟೇ ಬಹಳಕಾಲ ಒಂದೇ ಆಗಿ ಉಳಿಯುತ್ತಿದ್ದವು; ಹಾಗೇ ಜಿಲ್ಲಾಂಗಗಳಾದ ಗ್ರಾಮಗಳ ಗಡಿಗಳೂ ಸನಾತನವಾಗಿರುತ್ತಿದ್ದವು.

ಬನವಾಸಿ ೧೨೦೦೦, ಸಾಂತಳಿಗೆ ೧೦೦೦, ಹಾನುಗಲ್ಲು ೫೦೦ ಎಂಬಂತಹ ಕಂದಾಯ ಮೂಲವಾದ ನಿಷ್ಕೃಷ್ಟ ಪ್ರಾಂತಗಳನ್ನು ರೂಪಿಸಿದವರು ರಾಷ್ಟ್ರಕೂಟರು. ಕದಂಬರ ಆಡಳಿತ ಪದ್ಧತಿಯನ್ನಿವರು ಬಹಳವಾಗಿ ಬದಲಾಯಿಸಿದರು. ಇವರು ರಾಜ್ಯಪಾಲರ ಮೂಲಕ ಈ ಪ್ರಾಂತಗಳನ್ನು ಆಳಿದರು. ಈ ರಾಜ್ಯಪಾಲರಿಗೆ ಮಹಾಸಾಮಂತರೆಂದು ಕರೆಯಲಾಗುತ್ತಿತ್ತು. ಇವರು ಸಾಮ್ರಾಜ್ಯ ಭಾಗವಾದ ತಮ್ಮ ಪ್ರಾಂತದೊಳಗಿನ ಸಾಮಂತ (ಮಾಂಡಲಿಕ) ರಾಜರ ಮೇಲೆ ಪ್ರಭುತ್ವವುಳ್ಳವರಾಗಿದ್ದರು. ಆದರೆ ರಾಷ್ಟ್ರಕೂಟರ ಸಾಮ್ರಾಜ್ಯದಲ್ಲಿ ಹೆಚ್ಚಾಗಿ ರಾಜರಿದ್ದಿಲ್ಲ. ರಾಜ್ಯಪಾಲರೇ ರಾಜತ್ವದ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರು. ನಾಳ್‌ಪೆರ್ಗಡೆ–ನಾಳ್ಗವುಂಡರು ರಾಜ್ಯಪಾಲರ ಕೆಳಗೆ ಆಗ ಕಾರಭಾರಿಗಳಾಗಿರುತ್ತಿದ್ದರು.

ಚಾಲುಕ್ಯರ ಆಡಳಿತ ಪದ್ಧತಿಯು ರಾಷ್ಟ್ರಕೂಟರ ಪದ್ಧತಿಗಿಂತ ಸ್ವಲ್ಪ ಭಿನ್ನವಾಗಿತ್ತು. ಆಡಳಿತ ವಿಭಾಗಗಳು ಹಾಗೇ ಉಳಿದರೂ ಸರಕಾರದ ಶಿಬ್ಬಂದಿಯು ವಿಸ್ತೃತವಾಯಿತು. ಚಾಲುಕ್ಯರ ಅಧೀನದಲ್ಲಿ ಅನೇಕ ಅನುವಂಶಿಕ ಸಾಮಂತರಾಜರು ರಾಜ್ಯಭಾರ ಮಾಡುತ್ತಿದ್ದರು. ಈ ಸಾಮಂತರು ತಮ್ಮ ರಾಜ್ಯದ ಒಳ ಆಡಳಿತದಲ್ಲಿ ಸಂಪೂರ್ಣ ಸ್ವತಂತ್ರರು. ಇಷ್ಟೇ ಅಲ್ಲ–ನೆರೆಯ ಸಾಮಂತರೊಡನೆ ಯುದ್ಧ ಮಾಡುವ ಸ್ವಾತಂತ್ರ್ಯವನ್ನೂ ಪಡೆದಿದ್ದರು. ಈ ಹಕ್ಕಿನ ದೆಸೆಯಿಂದ ಸಾಮಂತರ ಸ್ವಾತಂತ್ರ್ಯವು ಸಮ್ರಾಜರ ಸ್ವಾತಂತ್ರ್ಯಕ್ಕೆ ಸರಿಸಮವೆಂಬಂತೆ ತೋರುತ್ತಿತ್ತು. ಸಮ್ರಾಜರ ರಾಜ್ಯಪಾಲರು ಸುಂಕವಸೂಲವನ್ನಷ್ಟು ಮಾಡುತ್ತಿದ್ದರು; ಹೀಗೆ ಅವರ ಕೆಲಸ ಎರಡು: ರಾಜಕೀಯ ವ್ಯವಹಾರದ ಅವೇಕ್ಷಣ ಮತ್ತು ಸುಂಕವಸೂಲು. ಎಷ್ಟೋ ಸಲ ಸಮ್ರಾಜರ ಮಂತ್ರಿಗಳೇ ರಾಜ್ಯಪಾಲರಾಗಿ ಬರುತ್ತಿದ್ದರು. ಈ ರಾಜ್ಯಪಾಲರಿಗೆ ಸಾಮಂತರು ಸುಂಕ ವಸೂಲಿನ ಅಧಿಕಾರ ಕೊಟ್ಟದ್ದಷ್ಟೇ ಮಾಫಿ; ಮತ್ತಾವ ಕಪ್ಪ–ಕಾಣಿಕೆಗಳನ್ನೂ ಸಮ್ರಾಜರಿಗೆ ಕೊಡಬೇಕಾಗಿದ್ದಿಲ್ಲ. ಚಾಲುಕ್ಯರ ರಾಜ್ಯಪಾಲರನ್ನು ಸಾಮಂತಾಧಿಪತಿಗಳೆಂದು ಕರೆಯಲಾಗುತ್ತಿತ್ತು. ಪೆರ್ಗಡೆ, ನಾಳ್ಗವುಂಡ, ನಾಳ್‌ಪ್ರಭುಗಳು ರಾಜ್ಯಪಾಲರ ಕೈಕೆಳಗಿನ ಅಧಿಕಾರಿಗಳು. ಈ ಅಧಿಕಾರಿಗಳು ಸಾಮಂತ ರಾಜರ ಅಧೀನರಾಗಿ ಇದ್ದ ಉಲ್ಲೇಖಗಳೂ ಇವೆ. ಸಮ್ರಾಜರಿಗೆ ಸಲ್ಲುತ್ತಿದ್ದ ತೆರಿಗೆಗಳು (೧) ಪೆರ್ಜುಂಕ ಅಥವಾ ಹೆಜ್ಜುಂಕ, (೨) ವಡ್ಡರಾವುಳ, (೩) ಕಿರುಕುಳ, (೪) ಬಿಳ್ಕೊಡೆ, ಮತ್ತು (೫) ಪನ್ನಯ ಎಂದು ಐದು ಬಗೆಯಾಗಿದ್ದವು. ವ್ಯಾಪಾರದ ಮುಖ್ಯ ವಸ್ತುಗಳ ಮೇಲಿನ ಸುಂಕಕ್ಕೆ ಪೆರ್ಜುಂಕವೆನ್ನಲಾಗುತ್ತಿತ್ತು. ವಡ್ಡರಾವುಳವು ನೀರಿನಸುಂಕ, ಪನ್ನಯವು ವೀಳೆಯದೆಲೆಯ ಮೇಲಿನ ಸುಂಕ ಎಂದು ತೋರುತ್ತದೆ. ಚಿಕ್ಕ–ಪುಟ್ಟ ವಸ್ತುಗಳ ಮೇಲಿನ ಸುಂಕಕ್ಕೆ ಕಿರುಕುಳವೆನ್ನಲಾಗುತ್ತಿತ್ತು. ಬಿಳ್ಕೊಡೆಯು ಪಟ್ಟಣವಾಸಿಗಳು ಕೊಡುತ್ತಿದ್ದ ಕಪ್ಪ ಅಥವಾ ಕಾಣಿಕೆ.

ಚಕ್ರವರ್ತಿಯು ರಾಜ್ಯಪಾಲರ ಆಡಳಿತವನ್ನು ತಿಳಿದುಕೊಳ್ಳಲು ಆಗಾಗ ತನ್ನ ಆಸ್ಥಾನದ ಜನನಾಯಕರನ್ನು ಪ್ರಾಂತಗಳಲ್ಲಿ ಸಂಚರಿಸಲು ಕಳಿಸಿಕೊಡುತ್ತಿದ್ದನು. ಚಾಲುಕ್ಯ

ಸಾರ್ವಭೌಮ ೨ನೆಯ ಸೋಮೇಶ್ವರ ಭುವನೈಕಮಲ್ಲನ ಪರವಾಗಿ, ಸಾಮಂತನಾಗಿದ್ದ ೨ನೆಯ ಶಾಂತಿವರ್ಮ ಕದಂಬನ ಕಾಲದಲ್ಲಿ (೧೦೭೫–೧೦೯೪), ತಮ್ಮನಾದ ಮಹಾಮಂಡಲೇಶ್ವರ ವಿಕ್ರಮಾದಿತ್ಯದೇವನೊಡನೆ ಭುವನೈಕಮಲ್ಲ ಪಲ್ಲವಪೆರ್ಮಾನಡಿ* ಎಂಬ ಬಿರುದನ್ನು ಹೊತ್ತಿದ್ದ ಸಾರ್ವಭೌಮಭ್ರಾತನಾದ ವಿಷ್ಣುವರ್ಧನ ವಿಜಯಾದಿತ್ಯನು ಬನವಾಸಿರಾಜ್ಯದಲ್ಲಿ ಪ್ರತ್ಯವೇಕ್ಷಣ ಮಾಡಿಕೊಂಡು ಹೋದ ಬಗ್ಗೆ ಶಾಸನದ ಆಧಾರ ಸಿಕ್ಕಿದೆ.

ಕದಂಬ ಮಹಾಮಂಡಲೇಶ್ವರರು ತಮ್ಮ ರಾಜ್ಯಪಾಲರ ಹಾಗೂ ಪ್ರಶಾಸನಾಧಿಕಾರಿಗಳ ನೆರವಿನಿಂದ ರಾಜ್ಯಭಾರ ನಡೆಸುತ್ತಿದ್ದರು. ಅವರ ರಾಜ್ಯಪಾಲರು ಹೆಚ್ಚಾಗಿ ಅವರ ಕುಟುಂಬಕ್ಕೆ ಸೇರಿದವರೇ ಆಗಿರುತ್ತಿದ್ದರು. ಎಷ್ಟೋ ವೇಳೆಗಳಲ್ಲಿ ಅವರು ಒಟ್ಟಾಗಿ ಆಳುತ್ತಿದ್ದರು. ತನ್ನ ಹತ್ತಿರದ ಸಂಬಂಧಿಕರಾರೂ ಇಲ್ಲದಿದ್ದಲ್ಲಿ ರಾಜನು ತನ್ನ ಮಂತ್ರಿಯನ್ನೇ ರಾಜ್ಯಪಾಲನನ್ನಾಗಿ ಮಾಡುತ್ತಿದ್ದನು. ಶಾಸನ ಹೇಳುವಂತೆ ರೈತನು ಬೆಳೆದ ಒಟ್ಟು ಉತ್ಪನ್ನದಲ್ಲಿ ಆರನೆಯ ಒಂದಂಶವನ್ನು ಕದಂಬರು ರಾಜಾದಾಯುವನ್ನಾಗಿ ಸ್ವೀಕರಿಸುತ್ತಿದ್ದರು. ಅವರು ತಮ್ಮ ಜಿಲ್ಲೆಗಳನ್ನು ಕಂಪಣಗಳನ್ನಾಗಿಯೂ ಕಂಪಣಗಳನ್ನು ಗ್ರಾಮಗಳನ್ನಾಗಿಯೂ ವಿಭಜಿಸಿಕೊಂಡಿದ್ದರು. ಕಂಪಣದ ಮುಖ್ಯ ಆಡಳಿತಾಧಿಕಾರಿಗೆ ಮನ್ನೆಯನೆಂದು ಕರೆಯಲಾಗುತ್ತಿತ್ತು. ಗಾಣಿಗರು, ಹೇರೆತ್ತು–ಹೇರುಗತ್ತೆ ಮುಂತಾದವುಗಳನ್ನು ಇಟ್ಟುಕೊಂಡವರು ಮತ್ತು ವೀಳೆಯದೆಲೆ ಮಾರುವವರು ಕರಗಳನ್ನು ಕೊಡಬೇಕಾಗಿತ್ತು.

ಬನವಾಸಿ–ಹಲಸಿಗಳಂಥ ಜಿಲ್ಲೆ (ವಿಷಯು)ಗಳಿಗೆ ಕದಂಬರ ರಾಜ್ಯಪಾಲರಿರುತ್ತಿದ್ದರು. ಕದಂಬ ಮಹಾರಾಜರು ಕಾರ್ಯಪಾಲಿಕೆ, ನ್ಯಾಯಪಾಲಿಕೆ ಮತ್ತು ಸೈನ್ಯಪಾಲಿಕೆಗಳ ಪರಮಾಧಿಕಾರವುಳ್ಳವರಾಗಿದ್ದರು. ಕರ–ಕಂದಾಯ–ಸುಂಕಗಳಲ್ಲದೆ ಉಪ್ಪಿನ ತೆರಿಗೆ ಮತ್ತು ಬೀರವಣಗಳಿಂದಲೂ ರಾಜ್ಯದ ಬೊಕ್ಕಸವನ್ನು ಸಮೃದ್ಧಗೊಳಿಸಲಾಗುತ್ತಿತ್ತು. ಗಾಣಿಗ ಮುಂತಾದವರಂತೆ ಕಮ್ಮಾರ, ಅಕ್ಕಸಾಲಿಗ, ಕ್ಷೌರಿಕ ಆಚಾರಿ (ಬಡಗಿ), ಕುಂಬಾರ ಮುಂತಾದವರೂ ಕರಗಳನ್ನು ಕೊಡುತ್ತಿದ್ದ ಉಲ್ಲೇಖವಿದೆ. ಒಟ್ಟಿನಲ್ಲಿ ರಾಜ್ಯವು ಸಮೃದ್ಧವಾಗಿತ್ತು. ಪ್ರಜೆಗಳು ಕರಭಾರದಿಂದ ಸಂತ್ರಸ್ತರಾಗಿರಲಿಲ್ಲ. ಸಾರ್ವಜನಿಕ ಉಪಯೋಗದ ಕೆರೆ, ಕಾಲುವೆ, ರಸ್ತೆ, ಸಾಲುಮರ ಮುಂತಾದ ನಿರ್ಮಿತಿಗಳು ಜನರನ್ನು ಸಂತುಷ್ಟರನ್ನಾಗಿ ಮಾಡಿದ್ದವು.

> **"ನ ಪರ್ಯದೇವನ್ ವಿಧವಾ ನ ಚ ವ್ಯಾಲಕೃತಂ ಭಯಂ**
> **ನ ವ್ಯಾಧಿಜಂ ಭಯಂ ವಾಪಿ ರಾಮೇ ರಾಜ್ಯಂ ಪ್ರಶಾಸತಿ**
> **ನಿರ್ದಸ್ಯುರಭವಲ್ಲೋಕೋ ನಾನರ್ಥಃ ಕಂಚಿದಸ್ಪೃಶತ್**

* K.K.,P.267

ನ ಚ ಸ್ಮವೃದ್ಧಾ ಬಾಲಾನಾಂ ಪ್ರೇತಕಾರ್ಯಾಣಿ ಕುರ್ವತೇ
ಸರ್ವಂ ಮುದಿತಮೇವಾಸೀತ್ ಸರ್ವೋ ಧರ್ಮಪರೋಽಭವತ್
ರಾಮಮೇವಾನುಪಶ್ಯಂತೋ ನಾಭ್ಯಹಿಂಸನ್ ಪರಸ್ಪರಂ
ಆಸನ್ ವರ್ಷಸಹಸ್ರಾಣಿ ತಥಾ ಪುತ್ರಸಹಸ್ರಿಣಃ
ನಿರಾಮಯಾ ವಿಶೋಕಾಶ್ಚಾ ರಾಮೇ ರಾಜ್ಯಂ ಪ್ರಶಾಸತಿ
ನಿತ್ಯಪುಷ್ಪಾ ನಿತ್ಯಫಲಾಸ್ತರವಃ ಸ್ಕಂಧವಿಸ್ತೃತಾಃ
ಕಾಲೇ ವರ್ಷೀ ಚ ಪರ್ಜನ್ಯಃ ಸುಖಸ್ಪರ್ಶಶ್ಚ ಮಾರುತಃ
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾ ಲೋಭವಿವರ್ಜಿತಾಃ
ಸ್ವಕರ್ಮಸು ಪ್ರವರ್ತಂತೇ ತುಷ್ಟಾಃ ಸ್ವೈರೇವ ಕರ್ಮಭಿಃ
ಆಸನ್ ಪ್ರಜಾ ಧರ್ಮರತಾ ರಾಮೇ ಶಾಸತಿ ನಾನೃತಾಃ
ಸರ್ವೇ ಲಕ್ಷಣ ಸಂಪನ್ನಾಃ ಸರ್ವೇ ಧರ್ಮಪರಾಯಣಾಃ"
–ವಾ.ರಾ;ಯು, ಕಾ; ಸ.೧೩೧.

ಎಂಬ ರಾಮರಾಜ್ಯದ ಮಾತಿಲ್ಲಿ ಸತ್ಯ.

ಸಾಂರಾಜ್ಯದ ಸಮೃದ್ಧಿಗೆ ಅಲ್ಲಿಯ ಕಲೆ–ಶಾಸ್ತ್ರಗಳ ಬೆಳವಣಿಗೆಯು ಸಾಕ್ಷಿ. ಮಯೂರ(ಶರ್ಮ) ವರ್ಮನ ಕಾಲದಿಂದ ಸಿದ್ಧವಾಗುತ್ತ ಬಂದ ಸುಸಂಸ್ಕೃತ ಜೀವನದ ಆವರಣವು ಕದಂಬ ಮಹಾಮಂಡಲೇಶ್ವರರ ಕಾಲದಲ್ಲಿ ಚೆನ್ನಾಗಿ ಫಲಕೊಡಲು ಶಕ್ತವಾಯಿತು. ಕುಂತಳದ (ಕರ್ನಾಟಕದ) ಶಿಲ್ಪ–ವಾಙ್ಮಯಗಳ ಪ್ರಗಲ್ಭ ದಶೆ ಆಗ ಆರಂಭವಾಯ್ತು. ಮಹಾಕವಿ ಪಂಪನು (ಕ್ರಿ.ಶ ೯೪೧) ಚಾಲುಕ್ಯ ಅರಿಕೇಸರಿಯ ಆಸ್ಥಾನದಲ್ಲಿದ್ದಾಗ ಬರೆದ ವಿಕ್ರಮಾರ್ಜುನ ವಿಜಯವೆಂಬ ಭಾರತ ಮಹಾಕಾವ್ಯದಲ್ಲಿ ಮೆಚ್ಚಿಕೊಂಡ ಬನವಾಸಿದೇಶವು ರಾಷ್ಟ್ರಕೂಟ ಮೂರನೆಯ ಕೃಷ್ಣ ಅಕಾಲವರ್ಷನ (೯೩೯–೯೬೮) ಸಾರ್ವಭೌಮತ್ವದಲ್ಲಿ ಕದಂಬ ಮಹಾಮಂಡಲೇಶ್ವರನೊಬ್ಬನ ಆಳಿಕೆಗೆ ಒಳಪಟ್ಟಿತ್ತು. ಈ ಕದಂಬ ಮಹೀಪಾಲನು ಬಹುಶಃ ಅರ್ಜುನವರ್ಮನಾಗಿರಬೇಕು. ಈತನಿಗೆ ರಾಮಗಂಡ (ಗಂಡಿರ್) ಎಂಬ ಬಿರುದಿದ್ದಂತೆ ತಿಳಿದು ಬರುತ್ತದೆ. ಇವನ ಬಳಿಕ ಬನವಾಸಿಯಲ್ಲಿ ಆಳಿದ ಕದಂಬ ವಂಶದವನಾವನೋ ತಿಳಿಯದು. ಆದರೆ ಕ್ರಿ.ಶ ೯೬೭ರಲ್ಲಿ ಹಾನುಗಲ್ಲನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಬನವಾಸಿ ರಾಜ್ಯವನ್ನು ಆಳತೊಡಗಿದ ಇರಿವ ಬೆಡಂಗದೇವ ಕದಂಬನು ಬಹುಶಃ ಅರ್ಜುನದೇವನ ಮೊಮ್ಮಗನಾಗಿರಬೇಕು. ಆಮೇಲೆ ಕುಂದಮ–ಜಯಸಿಂಹ–ಮಯೂರ–ತೈಲವರ್ಮ–ಶಾಂತಿವರ್ಮರ ಆಳಿಕೆ. ೨ನೆಯ ಶಾಂತಿವರ್ಮ ಕದಂಬನು (೧೦೭೫–೧೦೯೪) ಹಾನುಗಲ್ಲಿನಲ್ಲಿ ಆಳುತ್ತಿದ್ದಾಗ ಕೀರ್ತಿವರ್ಮ ಕದಂಬನು (೧೦೭೫–೧೧೧೭) ಬನವಾಸಿಯಲ್ಲಿ ಸ್ವತಂತ್ರನಾಗಿ ಆಳುತ್ತಿದ್ದನು. ಶಾಂತಿವರ್ಮನು ತೈಲವರ್ಮನ ತಮ್ಮ, ಕೀರ್ತಿವರ್ಮನು ಮಗ. ಈ ಕೀರ್ತಿವರ್ಮನ ಆಜ್ಞೆಯಂತೆಯೇ "ಪ್ರಬೋಧ ಚಂದ್ರೋದಯ" ಎಂಬ ಸಂಸ್ಕೃತ ನಾಟಕವನ್ನು ಕೃಷ್ಣಮಿಶ್ರನು ಬರೆದುದಾಗಿರಬೇಕು.

ಏಕೆಂದರೆ ಕೃಷ್ಣಮಿಶ್ರನ ಸಮಕಾಲೀನನಾದ ಇನ್ನಾವ ಕೀರ್ತಿವರ್ಮನೂ ಕರ್ನಾಟಕದಲ್ಲಿ ಆಳುತ್ತಿದ್ದನೆಂದು ತಿಳಿದುಬರುವುದಿಲ್ಲ.

ಕೀರ್ತಿವರ್ಮನು 'ಸರ್ವಜ್ಞ'ನೆಂಬ ಪ್ರಖ್ಯಾತಿಯನ್ನು ಪಡೆದಿದ್ದನು; ಅವನ ವಿದ್ವತ್ತೆ ಅಷ್ಟು ಆಳವೂ ಅಗಲವೂ ಆಗಿತ್ತು. ಗೋವೆಯ ಕದಂಬ ವಿಜಯಾದಿತ್ಯನು ಸರಸ್ವತೀಭೂಷಣನೆಂದು ಕರೆಸಿಕೊಂಡಿದ್ದನು. ಕೀರ್ತಿವರ್ಮನ ಕಾಲದಲ್ಲಿದ್ದ ರಾಜ್ಯಪಾಲನಾದ ಲಕ್ಷ್ಮನೃಪನ ಕೋಶಾಧಿಕಾರಿ ಶಾಂತಿನಾಥನು "ಸುಕುಮಾರ ಚರಿತ"ವನ್ನು ಬರೆದನು. ಸುಮಾರು ಅದೇ ಅವಧಿಯಲ್ಲಿದ್ದನೆಂದು ಹೇಳಬಹುದಾದ ನಾಗವರ್ಮಾಚಾರ್ಯನು "ಚಂದ್ರಚೂಡಾಮಣಿ"ಯನ್ನು ಬರೆದನು. ಈತನು ಬನವಾಸಿಯ ಮೇಲಿನ ರಾಜ್ಯಪಾಲನಾಗಿದ್ದ ಉದಯಾದಿತ್ಯ ಗಂಗನ ಸಾಂಧಿವಿಗ್ರಹಿಕ (Minister for War and Peace) ನಾಗಿದ್ದನು.

ಕೀರ್ತಿದೇವ ಕದಂಬನ (೧೧೫೧–೧೧೮೦) ದರ್ಬಾರಿನಲ್ಲಿ ಹರಿವರ್ಮನು ಆಸ್ಥಾನಕವಿಯಾಗಿದ್ದನು. ಸಾಂತಳಿಗೆಯ ದ್ವಿಜವರ್ಯ ಚಂದ್ರರಾಜನು "ಮದನತಿಲಕ"ವನ್ನು ರಚಿಸಿದನು. ಈತನು ಕೀರ್ತಿವರ್ಮನ ಯುಗದವನು. ಅದೇ ಪ್ರಕಾರ ನಾರಾಯಣದೇವನೂ ಅಂದು ಪ್ರಸಿದ್ಧ ಕವಿಯಾಗಿದ್ದನೆಂದು ಹಾವೇರಿಯ ಶಾಸನವೊಂದು ಸಾರುತ್ತದೆ.

೧೦. ಕದಂಬರ ಕಾಲದ ಮತಧರ್ಮ ಮತ್ತು ಸಂಸ್ಕೃತಿ

೧

೧ನೆಯ ಕೃಷ್ಣವರ್ಮ ಕದಂಬನ ದೇವಗಿರಿ ಶಾಸನದಲ್ಲಿ ಕದಂಬರು ನಾಗಕುಲದವರೆಂದಿದೆ. ಇವರ ಕುಲದೇವತೆ ಶಿವ; ಈ ವಂಶದ ಆದಿಪುರುಷನಾದ ಮಯೂರ ಶರ್ಮನು ಬ್ರಾಹ್ಮಣ–ಎಂಬುದು ತಾಳಗುಂದದ ಶಾಸನದಿಂದ ತಿಳಿದುಬರುತ್ತದೆ. ಈ ಬ್ರಾಹ್ಮಣರು ಪರಧರ್ಮ ಸಹಿಷ್ಣುಗಳಾಗಿದ್ದರಷ್ಟೇ ಅಲ್ಲ, ಎಷ್ಟೋ ಸಲ ಪರಧರ್ಮದ ಪ್ರೋತ್ಸಾಹಕರೂ ಆಗಿದ್ದರು. ಅದರಿಂದಲೇ ಜೈನಮತ ಕರ್ನಾಟಕದಲ್ಲಿ ಆಗ ಪ್ರಾಬಲ್ಯಹೊಂದಿತು. ಜೈನರ ಬಸದಿಗಳಿಗೆ ಕದಂಬರು ಅನೇಕಾನೇಕ ದತ್ತಿ–ದಾನಗಳನ್ನು ಕೊಟ್ಟದ್ದು ಇದಕ್ಕೆ ಪ್ರಮಾಣ.

ಅಂದು ದೇಶದ ತುಂಬ ಶೈವ–ಶಾಕ್ತ ಮತಗಳು ಹರಡುತ್ತಿದ್ದ ಕಾಲ. ಜೈನ–ಬೌದ್ಧ ಧರ್ಮಕೇಂದ್ರಗಳಿಗಿಂತ ಶೈವ–ಶಾಕ್ತ ಮಠಗಳೇ ಹೆಚ್ಚಾಗಿದ್ದವು. ಕಾಳಾಮುಖಯತಿಗಳು ಶಿವೋಪಾಸಕರು; ಕಾಪಾಲಿಕರು ಭೈರವಚಂಡಿಯರ ಉಪಾಸಕರು ಶಾಕ್ತರು, ಶಕ್ತಿಯ ಉಪಾಸಕರು. ಈ ಮಠಗಳು ಧರ್ಮ–ಶಿಕ್ಷಣಗಳ ಪ್ರಸಾರ ಕೇಂದ್ರಗಳಾಗಿದ್ದವು.

ದೇವಾಲಯಗಳು ಆರಾಧನಾಸ್ಥಾನಗಳಾಗಿದ್ದವು. ಪುರಾಣ–ಧರ್ಮ–ಶಾಸ್ತ್ರಗಳನ್ನು ಅಲ್ಲಿ ಸಾರ್ವಜನಿಕರಿಗೆ ಓದಿ ಹೇಳುತ್ತಿದ್ದರು. ಭಕ್ತರು ದೇವರಿಗೆ ಅಲ್ಲಿ ಪೂಜೆ–ಪುರಸ್ಕಾರಗಳನ್ನು ಮಾಡುತ್ತಿದ್ದರು. ಶಿಕ್ಷಣವೂ ಅಲ್ಲಿ ಜನರಿಗೆ ಸಿಗುತ್ತಿತ್ತು. ಬಾಲಕರನ್ನು ಓದಿಸಲು ಅಲ್ಲಿ ವ್ಯವಸ್ಥೆಮಾಡಲಾಗಿತ್ತೆಂಬುದು ಶಾಸನಸಿದ್ಧ. ತಾಳಗುಂದದ ಪ್ರಣವೇಶ್ವರ ದೇವಸ್ಥಾನದಲ್ಲಿ (೧) ಋಗ್ವೇದ, (೨) ಯಜುರ್ವೇದ, (೩) ಪಾದಖಂಡಿಕ[೨೯], (೪) ಸಾಮವೇದ (೫) ಕಲ್ಪ (೬) ಶಬ್ದಶಾಸ್ತ್ರ (ವ್ಯಾಕರಣ), (೭) ರೂಪಾವತಾರ,[೩೦] (೮)

೨೯. ಪಾದಖಂಡಿಕ=ಒಂದೊಂದು ಪಾದವನ್ನು ಅನುಕ್ರಮವಾಗಿ ಒಂದಾದಮೇಲೆ ಇನ್ನೊಂದರಂತೆ ಕಲಿಯುವ ವಿದ್ಯಾರ್ಥಿ ನೃತ್ಯದ ಪಠ್ಯ; ಅವನು ಕಲಿಯಲು ಏರ್ಪಾಡುಮಾಡಿದ ನಾಟ್ಯ ವೇದ ವಿಭಾಗವೆಂದು ಗ್ರಹಿಸಬಹುದಾಗಿ ತೋರುತ್ತದೆ

೩೦. ಒಂದು (ಮೂರ್ತಿಶಿಲ್ಪ) ಗ್ರಂಥದ ಹೆಸರು,

ನ್ಯಾಯ,[೩೧] (೯) ಪ್ರವರ[೩೨], ಮತ್ತು (೧೦) ವೇದಾಂತ ಎಂಬ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತಿತ್ತು. ಸಂನ್ಯಾಸಿಗಳ ಊಟ–ವಸತಿಗಳು ಉಚಿತವಾಗಿ ನಡೆಯುವ ವ್ಯವಸ್ಥೆಯನ್ನು ದೇವಾಲಯಗಳಲ್ಲಿ ಮಾಡಲಾಗುತ್ತಿತ್ತು.

ಇಂದಿನ ಭಾಷೆಯಲ್ಲಿ ಹೇಳುವುದಾದರೆ ಕದಂಬರ ಕನ್ನಡ ನಾಡಿನಲ್ಲಿ ಶಿಕ್ಷಣವು ಎಲ್ಲ ಹಂತಗಳಲ್ಲೂ ಉಚಿತವಾಗಿ ದೊರಕುತ್ತಿತ್ತು ಎನ್ನಬೇಕಾಗುತ್ತದೆ. ಗುರುದಕ್ಷಿಣೆಯಿದ್ದರದು ಶಿಷ್ಯನ ಯಥಾಶಕ್ತಿ ಮತ್ತು ಶಿಷ್ಯನ ನೈತಿಕ ಬುದ್ಧಿಗನುಗುಣವಾಗಿ; ಅದೆಂದೂ ಶುಲ್ಕ, ಕರ, ಕಂದಾಯ, ವಿಕ್ರಯ, ಮೌಲ್ಯಗಳ ವರ್ಗಕ್ಕೆ ಸೇರುವಂಥದಲ್ಲ. ವೇದೇತರವಾದ ವ್ಯಾಕರಣ–ಶಿಲ್ಪಾದಿ ವಿದ್ಯೆಗಳು ಸಾರ್ವಜನಿಕವೆಂಬುದು ಸ್ಪಷ್ಟ. ಆಚಾರ್ಯ (ಪೂಜಾರಿ), ರಂಶಿಗ[೩೩], ರವಾಳವಳ (ಅಕ್ಕಸಾಲಿಗ) ಪೆರ್ಗಡೆ (ಹೆಗ್ಗಡೆ=ವ್ಯವಸ್ಥಾಪಕ), ದೇವದಾಸಿಯರು (ದೇವರಿಗೆ ಬಸವಿ ಬಿಟ್ಟ ಚಾಮರಸೇವೆಯವರು), ನಗಾರಿ (ಅಥವಾ ಭೇರಿ) ಬಾರಿಸುವವನು ಮತ್ತು ಕಲ್ಕುಟಿಗನು ದೇವಸ್ಥಾನದ ಅಧಿಕಾರಿ ವರ್ಗದವರು. ಇಲ್ಲಿ ವಿದ್ವಾಂಸನಾದ ಪೂಜಾರಿಯೇ ಆಚಾರ್ಯ, ಶಿಕ್ಷಕ, ಅಗತ್ಯವಿದ್ದಾಗ ಇತರ ವಿದ್ವಾಂಸರನ್ನು ಉಪ–ಶಿಕ್ಷಕರನ್ನಾಗಿ ಅವನು ಬಹುಶಃ ನಿಯಮಿಸಿಕೊಳ್ಳುತ್ತಿದ್ದಿರಬೇಕು. ಕಲ್ಕುಟಿಗನದು ಶಿಲ್ಪಿಯ (ಎಂಜಿನಿಯರನ) ಸ್ಥಾನ. ಸಾರ್ವಜನಿಕವಾದ, ಹೆಚ್ಚು ವೆಚ್ಚಮಾಡಿ ಕಟ್ಟಿಸಿದ, ಕಟ್ಟಡಗಳಿಗೆ ಖಾಯಂ ಆಗಿ ರಿಪೇರಿಯವನೊಬ್ಬನನ್ನು ನಿಯಮಿಸಿರುವುದು ಜಾಣ್ಮೆಯ ಹೆಗ್ಗುರುತಲ್ಲವೇ?

ರಾಜಮಹಾರಾಜರೂ ಶ್ರೀಮಂತರೂ ಆಗಿಂದಾಗ ದೇವಸ್ಥಾನಗಳ ವಿನಿಯೋಗಕ್ಕಾಗಿ ಜಮೀನುಗಳನ್ನು ಉಂಬಳಿಯಾಗಿ ಕೊಡುತ್ತಿದ್ದರು, ಮತ್ತು ಕಾಣಿಕೆಗಳನ್ನು ಸಲ್ಲಿಸುತ್ತಿದ್ದರು, ಹಾಗೂ ಧನ–ದ್ರವ್ಯಗಳನ್ನು ದಾನ ಮಾಡುತ್ತಿದ್ದರು. ಇದು ಪ್ರಾಚೀನರ "ಸಹಕಾರ" ಪದ್ಧತಿ. ಮಧ್ಯಯುಗದ ಕೆಲ ವಿಧರ್ಮೀಯರನ್ನು ಬಿಟ್ಟರೆ ಇತರ ಯಾವ ಶತ್ರುರಾಜರೂ ದಂಡೆತ್ತಿ ಬಂದಾಗ ದೇವಾಲಯ–ಮತಮಾನ್ಯಗಳನ್ನು ಹಾಳುಮಾಡುತ್ತಿದ್ದಿಲ್ಲ ಎಂಬುದು ಗಮನಾರ್ಹ. ಇದು ಭಾರತದ ಮೂಲಭೂತ ಧರ್ಮ (ಸಂಸ್ಕೃತಿ). ಯಾತ್ರಿಕರ, ವರ್ತಕರ ಮತ್ತು ಜಮೀನುದಾರ ಹಾಗೂ ರೈತರ ಮೇಲಿನ ಸುಂಕದ ಕರಗಳೂ ದೇವಸ್ಥಾನದ ಆದಾಯದ ಆಕರಗಳು. ಕೆಲ ದೇವಾಲಯಗಳ ಬೇರೆ ಬೇರೆ ಬಾಬ್ತುಗಳ ವೆಚ್ಚಗಳನ್ನು ಬೇರೆ ಬೇರೆ ಜಾತಿಯವರು ನಿರ್ವಹಿಸುತ್ತಿದ್ದುದೂ ಉಂಟು. ಶಿಕಾರಿಪುರ ತಾಲೂಕಿನ ಗ್ರಾಮ ಗ್ರಾಮದ ಅಗಸರೂ ಕೊತ್ತಳಿಗಳೂ[೩೪] ವಿನಾಯಕದೇವರ

---

೩೧. Indian Logic and Atomism- ನ್ಯಾಯ ವೈಶೇಷಿಕ (ಸಿದ್ಧಾಂತ) ದರ್ಶನ,

೩೨. (1) A particular invocation addressed to Agni= ಒಂದು ವಿಶಿಷ್ಟ ಪರಂಪರೆ ಪರಮ ಅಗ್ನಿಸೂಕ್ತ. (೨) Lineage=ಪೂರ್ವಜರ ವಿವರ, history.

೩೩. ಈ ಪದ 'ವಂಶಿಗ' ಎಂದಿರಬೇಕು. ವಂಶಿಗನೆಂದರೆ ಕೊಳಲುಗಾರ, 'ರಂಸುಕ'ನಾದರೆ ಹಾಡುಗಾರ, ಮಧುರವಾದ ಮಾತುಗಾರ ಎಂದಾದೀತು.

೩೪. ಕೊತ್ತವೆಂದರೆ ಮಲೆಯಾಳಿಯಲ್ಲಿ ಧೂಳಿಯಂದರ್ಥ. ಆದುದರಿಂದ ಕೊತ್ತಳಿಗಳೆಂದರೆ ಕಸಗುಡಿಸುವವರಾಗಿಬಹುದು, ಅಥವಾ ವ್ಯಾಪಾರ ಸಂಘದವರಾಗಿರಬಹುದು.

ಗಂಧಾರ್ಚನೆ–ದೀಪದೆಣ್ಣೆಗಳಿಗಾಗಿ ಕುಟುಂಬವೊಂದಕ್ಕೆ ಒಂದು ಪಣದಂತೆ[೩೫] ಕೊಡುತ್ತಿದ್ದರು. ಮಿಕ್ಕ ಗ್ರಾಮಗಳಲ್ಲಿ ಗಾಣಿಗರು ಉಚಿತವಾಗಿ ದೇವರ ದೀಪಕ್ಕೆ ಎಣ್ಣೆಯನ್ನು ಕೊಡುತ್ತಿದ್ದರು. ಇದಕ್ಕಾಗಿ ಗಾಣಗಳನ್ನೇ ದೇವರಿಗರ್ಪಿಸುವ ಪದ್ಧತಿಯೂ ಇತ್ತು.

ದೇವಸ್ಥಾನಗಳ ಸಾಮಾಜಿಕ ಪ್ರಯೋಜನ ಸುಪ್ರಸಿದ್ಧ. ಊರೊಂದರ ಹಬ್ಬ–ಹುಣ್ಣಿವೆ, ತೇರು–ಜಾತ್ರೆಗಳು ಜರುಗುವುದು ಅಲ್ಲಿಯ ದೇವಸ್ಥಾನದಲ್ಲೇ. ಬಾಳಿನ ಬೇಸರವನ್ನು ಕಳೆಯಲು ಅವು ಉತ್ತಮೋತ್ತಮ ಸಾಧನಗಳಾಗಿದ್ದವು. ಚೈತ್ರೋತ್ಸವ ಅಥವಾ ವಸಂತೋತ್ಸವಗಳು ಶಾಸನಗಳಲ್ಲಿ ಹೆಸರಿಸಲ್ಪಟ್ಟಿವೆ. ಅಶ್ವಯುಜ ಕೃಷ್ಣಪಕ್ಷದ ಚತುರ್ದಶಿಯಿಂದ ಕಾರ್ತಿಕ ಶುಕ್ಲ ಪಕ್ಷದ ಪಾಡ್ಯದವರೆಗೆ ದೀಪಾವಳಿಯನ್ನು ಆಚರಿಸಲಾಗುತ್ತಿತ್ತು. ಅನೀತಿವಂತ ಸ್ತ್ರೀಯರು ಆಗ ಈಗ ದೇವಸ್ಥಾನದ ಕಾರ್ಯಗಳಲ್ಲಿ ಸೇರುತ್ತಿದ್ದುದೊಂದು ದೊಡ್ಡ ದೋಷ. ಈ ದೋಷವು ಮೊದಲಿನಿಂದ ಇದ್ದುದಲ್ಲ; ದೇವದಾಸೀ ಪದ್ಧತಿ ಅಪದಶೆಗಿಳಿದಾಗ ಇದು ಕಾಣಿಸಿಕೊಂಡಿತು.

೧೨ನೆಯ ಶತಮಾನದಲ್ಲಿ ಶಿವಾರಾಧನೆಯ ಪಂಥಕ್ಕೆ ಜೈನಧರ್ಮವು ಏಳಿಗೆಹೊಂದುತ್ತಿದ್ದುದು ಸ್ವಲ್ಪ ವಿಘ್ನಕರವಾಗಿ ಪರಿಣಮಿಸಿತ್ತು. ಆಗ ಏಕಾಂತ ರಾಮನೇ ಮೊದಲಾದ ವೀರಶೈವ ಪಂಥದವರು ಶಿವಭಕ್ತರು ಕೈವಾರಿಗಳಾಗಿ ನಿಂತರು. ಬಸವ ಬಂದಮೇಲೆ ಶಿವಭಕ್ತರ ಮತ ಮತ್ತಷ್ಟು ಪ್ರಬಲವಾಯ್ತು. ಸಿಥಿಯನ್ನರ ಮತ್ತು ಗುಪ್ತರ ಕಾಲಕ್ಕಿಂತ ಹಿಂದೆ ವೈಷ್ಣವ ಮತ ಪ್ರಚುರವಾಗಿದ್ದಿಲ್ಲ. ಅದರಿಂದಲೇ ಬಹುಶಃ ಪ್ರಾಚೀನ ಕದಂಬ ಶಾಸನಗಳಲ್ಲಿ ಅದರ ಹೆಸರು ಬಂದಿಲ್ಲ. ಹಾನುಗಲ್ಲಿನ ಕದಂಬರು ವೈಷ್ಣವರಾಗಿದ್ದರು. ೧೧ನೆಯ ಶತಮಾನದಲ್ಲಿ ವೈಷ್ಣವ ಮತದ ಪ್ರಚಾರ ಪ್ರಾರಂಭವಾಯ್ತು. ರಾಮಾನುಜಾಚಾರ್ಯ ಅದರ ಪ್ರಮುಖ ಪ್ರವರ್ತಕ. ಆತನು ಹೊಯ್ಸಳರ ಬಿಟ್ಟಿದೇವನನ್ನು ವಿಷ್ಣುವರ್ಧನನನ್ನಾಗಿ ಮಾಡಿದನು.

ಅಶೋಕನ ಕಾಲದಲ್ಲಿ ಬುದ್ಧರಕ್ಷಿತ ಬಂದು ಕುಂತಳದಲ್ಲಿ ಬೌದ್ಧಮತವನ್ನು ಪ್ರಚುರಪಡಿಸಲಾರಂಭಿಸಿದ. ಬನವಾಸಿಯಲ್ಲಿ ಅದರಿಂದ ೬೦,೦೦೦ ಜನರು ಬೌದ್ಧ ಮತಕ್ಕೆ ಸೇರಿದರಂತೆ; ಅವರಲ್ಲಿ ೩೭೦೦೦ ಜನರನ್ನು ಆತ ಬೌದ್ಧ ಭಿಕ್ಷುಗಳನ್ನಾಗಿ ಮಾಡಿದನಂತೆ; ಇದು ೯ನೆಯ ಶತಮಾನದ "ಮಹಾವಂಶ"ದಲ್ಲಿ ಬಂದಿದೆ. ಕೊಂಕಣಪುರದಲ್ಲಿ (ಬನವಾಸಿಯಲ್ಲಿ) ಮತ್ತು ಅದರ ಸುತ್ತುಮುತ್ತಲಿನ ಪ್ರದೇಶಗಳಲ್ಲಿ ಬೌದ್ಧರಿದ್ದರೆಂದು ೭ನೆಯ ಶತಮಾನದಲ್ಲಿ ಬಂದಿದ್ದ ಹ್ಯೂಯನ್‌ತ್ಸಾಂಗನ ವರದಿಯಿದೆ. ಗೋವೆಗೂ ಬೌದ್ಧಮತದ ಪ್ರಸಾರ ಸಾಗಿತ್ತು. ೧೧ನೆಯ ಶತಮಾನದ ನಂತರ ಅದಕ್ಕೆ ಕರ್ಣಾಟಕದಲ್ಲಿ ಅಪದಶೆ ಪ್ರಾಪ್ತವಾಯ್ತು. ಬಳ್ಳಿಗಾಮಿಯು ಅಲ್ಲಿಯವರೆಗೆ

೩೫.ಪಣವು ಇಲ್ಲಿ ತಾಮ್ರದ ನಾಣ್ಯ; ಅದರ ಬೆಲೆ ೮೦ ಕವಡೆಗಳು, ೨೦ ಮಾಷಗಳು ಅಥವಾ ೪ ಕಾಕಿಣಿಗಳು; ದುಡ್ಡು=೪ ಪೈಗಳು ಅಥವಾ ಕಾಸುಗಳು.

ಬೌದ್ಧವಿಹಾರಗಳೂ ಮಠಗಳೂ ಪ್ರೋತ್ಸಾಹ ಪಡೆಯುತ್ತಿದ್ದ ಅಗ್ರಹಾರ (ಶಿಕ್ಷಕ) ನಗರವಾಗಿತ್ತು. ಗೋವೆಯ ೧ನೆಯ ಜಯಕೇಶಿಯ (೧೦೫೦–೧೦೮೦) ಆಸ್ಥಾನದಲ್ಲಿ ಬೌದ್ಧಯತಿಗಳಿದ್ದರೆಂದು ಹೇಮಚಂದ್ರ ತನ್ನ ದ್ವಾಶ್ರಯ ಕಾವ್ಯದಲ್ಲಿ ಹೇಳಿದ್ದಾನೆಂದು ಪ್ರಸಿದ್ಧ.

ಜೈನ ಬಸದಿಗಳಲ್ಲಿ ಅಷ್ಟವಿಧ ಅರ್ಚನೆಯಾಗುತ್ತಿತ್ತು. ಜೈನರ ಸಲ್ಲೇಖನವ್ರತ ಜನಜನಿತವಾಗಿತ್ತು. ಗಂಗರಾಜ ೨ನೆಯ ಮಾರಸಿಂಹನು (೯೬೩–೯೭೪) ೩ ದಿನಗಳವರೆಗೆ ಸಲ್ಲೇಖನವ್ರತ ಹಿಡಿದು ಜಿನಲೋಕವನ್ನು ಸೇರಿದನು. ಹಿಂದು ಸಂನ್ಯಾಸಿಗಳು ಜಲಸಮಾಧಿವ್ರತದಿಂದ ಸಾಯುತ್ತಿದ್ದರು. ಹಿಂದುಗಳ ಯಾಗಪದ್ಧತಿಗೆ ಸೇರಿದ ಅಶ್ವಮೇಧ ಯಾಗಗಳನೇಕವನ್ನು ಕದಂಬ ಚಕ್ರವರ್ತಿಗಳು ಮಾಡಿದರು. ಅಶ್ವಮೇಧ ಯಾಗವು ಚಕ್ರವರ್ತಿತ್ವದ ಅಧಿಕಾರದ ಸಂಸ್ಥಾಪನೆಯಚಿಹ್ನೆ. ಆದ್ಯ ಕದಂಬರ ಕುಲದೇವತೆ ಬನವಾಸಿಯ ಮಧುಕೇಶ್ವರ; ಈ ಈಶ್ವರನ ಜೊತೆಗಾರ ಆನವಟ್ಟಿಯ ಸನಿಹದ ಕುಪಟೂರಿನ ಕೈಟಭೇಶ್ವರ. ತಾಳಗುಂದದ ಪ್ರಣವೇಶ್ವರನೂ ಅವರಿಗೆ ಅತ್ಯಾರಾಧ್ಯನಾಗಿದ್ದ. ಈ ಶಿವಾಲಯಗಳು ಕದಂಬರಿಂದ ಹಿಂದೆಯೇ ಸ್ಥಾಪಿಸಲ್ಪಟ್ಟು, ಆಮೇಲೆ ಅನೇಕ ಬಾರಿ ಪುನಾರಚನೆ ಹೊಂದಿದಂಥವುಗಳು. ಗೋಕರ್ಣದ ಮಹಾಬಲೇಶ್ವರನೂ ಕದಂಬಾರ್ಚಿತನೆಂದು ಪ್ರತೀತಿಯಿದೆ. ಉತ್ತರಕಾಲೀನ ಕದಂಬರಲ್ಲಿ ಕೆಲವರು ಜೈನ ಮತಾವಲಂಬಿಗಳಾಗಿರಬೇಕು.

೨

ಕದಂಬ ಶಿಲ್ಪ ಪ್ರಸ್ಥಾನವು ಕರ್ನಾಟಕದ ಆದ್ಯ ಶಿಲ್ಪ ಪ್ರಸ್ಥಾನ. ಶಾತವಾಹನ ಕಾಲೀನ ಅಪರಿಪೂರ್ಣ ಶಿಲ್ಪಶೈಲಿಯ ಪರಿಷ್ಕರಣ ಕದಂಬಯುಗದಲ್ಲಾಯ್ತು. ಅಂದರೆ ಈ ಪರಿಷ್ಕೃತ ಶೈಲಿಯು ಒಂದು ಪ್ರತ್ಯೇಕ ಪ್ರಸ್ಥಾನವೆನ್ನಿಸುವಷ್ಟು ವಿಶಿಷ್ಟತೆಯನ್ನು ಸಾಧಿಸಿಕೊಂಡಿತು. ಪಲ್ಲವ–ಔತ್ತರೇಯ ಶೈಲಿಗಳ ಪ್ರಭಾವ ಕದಂಬ ಶಿಲ್ಪದ ಮೇಲೆ ಬೀಳಲಿಲ್ಲ. ಕದಂಬ ದೇವಾಲಯಗಳ ಗೋಪುರವು (Miniaturetower) ಔತ್ತರೇಯ ಹಿಂದು ಮತ್ತು ಪಲ್ಲವ ಶೈಲಿಗಳಿಂದ ಅಳವಡಿಸಿಕೊಂಡದ್ದಾದರೂ ಅದರ ವಿಮಾನವು ಶುದ್ಧ ಕದಂಬ ಮಾದರಿಯದು. ಹಲಸಿ (ಪಲಸಿಕಾನಗರ)ಯಲ್ಲಿರುವ ಕಟ್ಟಡಗಳೇ ಅತಿ ಪ್ರಾಚೀನವಾದವುಗಳು. ಅವು ಶಾತವಾಹನ ಶೈಲಿಯವೇ ಆಗಿವೆ. ಕ್ರಿ.ಶ ೫ನೆಯ ಶತಮಾನದಲ್ಲಿದ್ದ ಬನವಾಸಿಯ ಮೃಗೇಶ ವರ್ಮನು ಕಟ್ಟಿಸಿರಬಹುದಾದ ಬಸದಿಯೊಂದು ಅಲ್ಲಿದೆ. ಅದಕ್ಕೆ ಗರ್ಭಗೃಹ, (ಶುಕನಾಸ) ಗಳಿವೆ; ಆದರೆ ಎದುರಿನ ಮಂಡಪವಿಲ್ಲ. ಸುಕನಾಸಿಯು ಗರ್ಭಗೃಹಕ್ಕಿಂತ ವಿಸ್ತಾರವಾಗಿದೆ. ದೊಡ್ಡ ದೊಡ್ಡ ಕಲ್ಲುಗಳನ್ನು ಒರಟು ಒರಟಾಗಿ ಕಡಿದು ಗೋಡೆಗಳನ್ನೇರಿಸಲಾಗಿದೆ. ಈ ಕಟ್ಟಡ ಶಾತವಾಹನರ ಕಾಲದ ಕಟ್ಟಡಗಳಿಗಿಂತ ಎಷ್ಟೋ ಸುಧಾರಿಸಿದ್ದು. ಶಾತವಾಹನರ ಕಟ್ಟಡಗಳಲ್ಲಿ ದೊಡ್ಡೊಳ ಗಳಿರುತ್ತವೆಯಲ್ಲದೆ ಅವನ್ನು ಅನುಕೂಲಕ್ಕೆ ತಕ್ಕಂತೆ ವಿಭಜಿಸಿರುವುದಿಲ್ಲ.

ಕದಂಬ ಕರ್ನಾಟಕದ ಆದಿಯುಗದಲ್ಲಿ ಈ ದೋಷವನ್ನು ಪರಿಹರಿಸುವ ಪ್ರಯತ್ನವು ಗರ್ಭಗೃಹ ಶುಕನಾಸಗಳನ್ನು ಪ್ರತ್ಯೇಕಿಸುವುದರಲ್ಲಿ ಎದ್ದುಕಾಣುತ್ತದೆ.

ತಾಳಗುಂದದ ಪ್ರಣವೇಶ್ವರ ದೇವಸ್ಥಾನದಲ್ಲಿ ಇನ್ನೂ ಹೆಚ್ಚಿನ ಶೈಲಿಪರಿಷ್ಕಾರ ಕಂಡುಬರುತ್ತದೆ. ಕಡಿಗಲ್ಲುಗಳ ಗಾತ್ರ ಕಡಿಮೆಯಾಗಿದೆ. ಹಲಸಿಯ ಬಸದಿಯಲ್ಲಿ ಕಾಣುವಂಥ ಹೆಗ್ಗಲ್ಲು (ಬಂಡೆ)ಗಳಿಲ್ಲ. ಗೋಡೆಯ ಕಲ್ಲುಗಳನ್ನು ನಯವಾಗಿ ಕೆತ್ತಲಾಗಿದೆ. ಆದರೆ ಇವು ಆ ಹೆಗ್ಗಲ್ಲುಗಳಂತೆಯೇ ಕುಸುರುಗೆಲಸಗಳಿಲ್ಲದೆ ಬೋಳಾಗಿವೆ. ಕಂಬಗಳು ಉರುಟಾದ ಅಥವಾ ಚಚ್ಚೌಕವಾದ ಇಡಿಗಲ್ಲುಗಳು. ಇವುಗಳ ಮೇಲೆ ಸ್ವಲ್ಪ ಮಟ್ಟಿಗೆ ಜ್ಯಾಮಿತೀಯ ಅಲಂಕಾರದ ಓರಣವಿದೆ. ಬುಡದಲ್ಲಿ ದ್ವಾರಪಾಲಕರ ಮೂರ್ತಿಗಳನ್ನು ಕೆತ್ತಿ ಮೂಡಿಸಲಾಗಿದೆ. ಈ ಕಂಬಗಳಿಗೆ ಅಡಿಗಲ್ಲುಗಳಾಗಲಿ, ಪೋತಿಕೆಯಾಗಲಿ, ಫಲಕವಾಗಲಿ ಇಲ್ಲ. ಕಂಬಗಳ ಮೇರುದಂಡವು ಬೋಳ್ದುದಿಯನ್ನವಲಂಬಿಸಿದೆ. ಗರ್ಭಗೃಹಕ್ಕೆ ಕಿಟಕಿಗಳಿಲ್ಲ; ಒಂದೇ ಒಂದು ಬಾಗಿಲಿದೆ. ಬಾಗಿಲುಗಳ ಮೇಲುಹೊಸ್ತಿಲುಗಳು ಆಮೇಲಿನ ಕದಂಬ ಭವನಗಳಲ್ಲಿ ಕಂಡುಬರುವ ವಿಶಿಷ್ಟ ಕುಸುಮಾಕೃತಿಗಳಿಂದ ಶೋಭಿಸುತ್ತವೆ. ಮೇಲುಹೊಸ್ತಿಲ ನಡುವೆ ಸಮರ್ಪಣಶಿಲೆಯ ಮೇಲೆ ಗಣಪತಿ ವಿಗ್ರಹವನ್ನು ಕಡಿದು ಮೂಡಿಸಲಾಗಿದೆ. ಆದುದರಿಂದ ಮೂಲತಃ ಯಾವುದಾದರೂ ಶಿವಾಕಾರ ಒಳಗೆ ಸ್ಥಾಪಿತವಾಗಿರಬೇಕು; ಸದ್ಯಃ ಒಳಗಿರುವುದು ಶಿವಲಿಂಗ. ಇದು ಗರ್ಭಗೃಹಸ್ಥವಾಗಿದೆ.

ಮಲಪ್ರಭೆಯ ದಂಡೆಯ ಮೇಲಿನ ಕದರೋಳಿ ದೇವಸ್ಥಾನಗಳು ಆದಿ ಕದಂಬ ಶೈಲಿಯ ಹೆಚ್ಚಿನ ಪರಿಚಯ ಮಾಡಿಕೊಡುತ್ತವೆ; ಅವು ತಾಳಗುಂದ ದೇವಾಲಯವನ್ನು ಹೋಲುವ ರಚನಾವಿಧಾನವುಳ್ಳವುಗಳಾಗಿವೆ. ಅವುಗಳ ಶಿಲ್ಪ ಯೋಜನೆ ಬಹಳ ಸರಳ. ಅವೆಲ್ಲವೂ ಚಿಕ್ಕ ಚಚ್ಚೌಕ ಕಟ್ಟಡಗಳು. ಪ್ರತಿಯೊಂದಕ್ಕೂ ಒಂದೊಂದು ಕಲಶ ಮತ್ತು ಒಂದೊಂದು ಗೋಪುರ ಇವೆ. ಈ ಗೋಪುರವು ಬುಗುರಿಯಂತಿರುವುದಲ್ಲದೆ, ಇದರ ಸುತ್ತಲೂ ಅಡ್ಡ ಅಡ್ಡವಾಗಿ ಮೆಟ್ಟಿಲುಗಳಂತೆ ತೋರುವ ಘಟ್ಟಪಟ್ಟಿಗಳಿರುತ್ತವೆ. ಹಲಸಿಯ ಹಸ್ತಿಕೇಶ್ವರ ದೇವಾಲಯವು ಕದಂಬ ಶೈಲಿಯ ಅನಂತರದ ಬೆಳವಣಿಗೆಯನ್ನು ನಿದರ್ಶಿಸುತ್ತದೆ. ಬಾಗಿಲ ಇಬ್ಬದಿಗಳಲ್ಲೂ ಜಾಳಿಗೆ ಕಿಟಕಿಗಳನ್ನು ಕೊರೆದಿರುವುದು ಇಲ್ಲಿಯ ವೈಶಿಷ್ಟ್ಯ. ಇಲ್ಲಿ ಮೊಟ್ಟ ಮೊದಲು ಕಂಡುಬರುವ ಈ ವೈಶಿಷ್ಟ್ಯವು ಆಮೇಲಿನ ಎಲ್ಲ ಕದಂಬಾಲಯಗಳಿಗೂ ಸಾಮಾನ್ಯವಾಯ್ತು. ಕಂಬಗಳ ಮೇಲ್ದುದಿಗಳಲ್ಲೂ ತಿದ್ದುಪಡಿಗಳಾಗಿವೆ. ಇವುಗಳ ಮೇರುದಂಡವು ಬೋಳ್ದೊಲೆಗಳನ್ನವಲಂಬಿಸಿದೆ, ಪೋತಿಕೆ (ಬೋದಿಗೆ) ಫಲಕಗಳನ್ನುಳ್ಳ ಶಿರಃಶಿಲೆಯನ್ನವಲಂಬಿಸಿದೆ. ದೇವಸ್ಥಾನದ ಎದುರಿನ ನಂದಿಯೂ ಸ್ತಂಭಪೀಠಗಳೂ ಗರ್ಭಗೃಹದ ಎದುರು ಮುಖಮಂಟಪವಿತ್ತೆಂಬುದನ್ನು ಸೂಚಿಸುತ್ತವೆ.

ಹಲಸಿಯ ಕಲ್ಲೇಶ್ವರ ದೇವಾಲಯದಲ್ಲಿ ಇದಕ್ಕೂ ಮುಂದಿನ ಸ್ತಂಭರಚನೆಯ ಶೈಲಿಪಾಕವನ್ನು ಕಾಣಬಹುದು. ಕಂಬಗಳು ಘನ ಅಷ್ಟಪಟ್ಟಿಗಳಿಂದ ವಿಭಕ್ತವಾಗಿವೆ.

ಇವೆಲ್ಲವುಗಳಿಗೂ ಬಹುಶಃ ಶಿರಃಶಿಲೆಗಳಿದ್ದಿರಬೇಕು. ಈ ದೇವಾಲಯಕ್ಕೆ ಗರ್ಭಗೃಹ, ಶುಕನಾಸ, ಮುಖಮಂಟಪಗಳಿವೆ. ಹಲಸಿಯ ಸುವರ್ಣೇಶ್ವರ ದೇವಾಲಯದಲ್ಲಿ ಮೇಲೆ ವರ್ಣಿಸಿದ ಬಗೆಯ ಕಂಬಗಳಲ್ಲದೆ, ಉರುಟಾದ ಮತ್ತು ಚೌಕವಾದ ಪಟ್ಟಿಗಳನ್ನುಳ್ಳ ಕಂಬಗಳೂ ಇವೆ.

ಯಲವತ್ತಿಯ ದೇವಸ್ಥಾನವೂ ಬಸದಿಯೂ ಕದಂಬ ಗೋಪುರಗಳ ಮುಂದಿನ ವಿಕಾಸಾವಸ್ಥೆಯನ್ನು ಪ್ರದರ್ಶಿಸುತ್ತವೆ. ಈ ಗೋಪುರಗಳ ಸುತ್ತಲಿರುವ ಸೋಪಾನವೃತ್ತಗಳು ಸಮಾನಾಂತರ ಪ್ರತಿಭುಜಾಕೃತಿಯುಳ್ಳ ಸೊಟ್ಟ ದೀರ್ಘ ಚತುರ್ಭುಜಗಳಾಗಿ ವಿಭಕ್ತವಾಗಿವೆ; ಆದರೆ ಅವುಗಳನ್ನು ಆಲಂಕಾರಿಕ ವಿವರಗಳಿಂದ ರಚಿಸುವ ರೂಢಿ ಆಗ ಬೆಳೆದು ಬಂದಿದ್ದಿಲ್ಲ. ದೇವಾಲಯದ ಮಂಟಪವು, ಹಾಳಾಗಿರುವುದರಿಂದ ಅದರ ಸ್ವರೂಪವು ಸ್ಪಷ್ಟವಾಗುವುದಿಲ್ಲ. ಆದರೆ ಬಸದಿ ಹಾಳಾಗಿಲ್ಲ. ಅದಕ್ಕೆ ಒಂದು ಗರ್ಭಗೃಹ ಅರ್ಧಮಂಟಪ ಮತ್ತು ಅಂತರಾಲಗಳಿವೆ. ಅಂತರಾಲಕ್ಕೆ ವರ್ತುಲಸ್ತಂಭಗಳಿವೆ; ಅವು ತುದಿಯಲ್ಲಿ ಫಲಕ ಮತ್ತು ನೀರೇಖ ಶಿರಃಶಿಲೆಗಳಿಂದ ಕೂಡಿವೆ. ಇಷ್ಟೇಅಲ್ಲ ಅಂತರಾಲದ ಮೇಲ್ಛಾವಣಿಗೆ ಇಳಿಮಾಡುಗಳೂ ಇವೆ. ಇಂಥ ಇಳಿಮಾಡುಗಳು; ಐತಿಹಾಸಿಕ ಕಾಲಾನುಕ್ರಮದಿಂದ ಮೊಟ್ಟಮೊದಲಿನವೆನ್ನಿಸುತ್ತವೆ. ಮತ್ತೂ ಹೊಸ ಅಂಶವೆಂದರೆ, ಈ ಬಸದಿಯ ಗೋಡೆಗಳ ಮೈಯ ನಡುವೆ ಅಡ್ಡವಾದ ಪಟ್ಟಿಯೊಂದನ್ನು ಕೊರೆದು ಮೂಡಿಸಲಾಗಿದೆ. ಈ ಪಟ್ಟಿಗಳಲ್ಲಿ ಕೆಲ ಜ್ಯಾಮಿತೀಯ, ಆಕೃತಿಗಳಿವೆ. ಇಂಥ ಪಟ್ಟಿಕಾರಚನೆ ಆಮೇಲಿನ ಕದಂಬ ಶೈಲಿಗೆ ಸರ್ವಸಾಧಾರಣವಾಯಿತು.

ಈ ಕಾಲದ ಹಲಸಿಯ ರಾಮೇಶ್ವರ ದೇವಸ್ಥಾನವು ಮತ್ತೊಂದು ಹೊಸ ಅಂಶವನ್ನು ಒಳಗೊಂಡಿದೆ. ಈ ದೇವಾಲಯದ ಗೋಪುರಕ್ಕೆ ಎದುರುಗಡೆ ಒಂದು ಪ್ರಾತಿಕೃತಿಕ ಕೋಣೆಯುಳ್ಳ ಕಮಾನಿದೆ. ಗೋಪುರದ ಆಯತಿಕ ಸೋಪಾನಪಂಕ್ತಿಗಳನ್ನು ಇಲ್ಲಿಯೂ ರಚಿಸಲಾಗಿದೆ. ಈ ಅಲಕಾಲಂಕಾರವು (Ornamental projection) ಪಲ್ಲವ ಶೈಲಿಯ ಅಲಕಸಂಪುಟಗಳಿಗಿಂತ (Cells of the ornamental projects) ಭಿನ್ನವಾದವುಗಳಿಂದ ಕೂಡಿದೆ.

ಹಲಸಿಯ ವರಾಹಮಿಹಿರ ದೇವಾಲಯದಲ್ಲಿ ಕದಂಬ ವಾಸ್ತುಶಿಲ್ಪ ಪ್ರಸ್ಥಾನದ ವಿಕಾಸದ ಮುಂದಿನ ಹಂತಗಳನ್ನು ನೋಡಬಹುದು. ಗೋಪುರದ ಸುತ್ತಿನ ಸೋಪಾನಗಳಲ್ಲಿ ಸಮಾಂತರ ಪ್ರತಿಭುಜವುಳ್ಳ ಸೊಟ್ಟ ದೀರ್ಘಚತುರ್ಭುಜಾಕೃತಿಗಳು ಹಿಂದಿನ ಮಾದರಿಗಳಲ್ಲಿರುವುದಕ್ಕಿಂತ ಹೆಚ್ಚಾಗಿವೆ. ಆದರೆ ಆ ಮೇಲಿನ ಗೋಪುರ ಸೋಪಾನಗಳಲ್ಲಿ ಕಂಡುಬರುವಂತೆ ಈ ಘಟ್ಟಸೋಪಾನಗಳನ್ನು ಅಷ್ಟು ಸೂಕ್ಷ್ಮವಾಗಿ ವಿಂಗಡಿಸಿಲ್ಲ. ಅಷ್ಟು ಹೆಚ್ಚು ಅಲಂಕ್ರಿಯೆಗಳಿಂದ ಎದ್ದು ಕಾಣುವಂತೆ ಮಾಡಿಯೂ ಇಲ್ಲ. ಆದುದರಿಂದ ದೂರದ ನೋಟಕರಿಗೆ ಗೋಪುರದ ಬಲಿಷ್ಠವೂ ಉದ್ದೇಶ

ಪೂರ್ಣವೂ ಆದ ನೀಳ್ಗೆರೆಗಳು ರಮ್ಯವಾಗಿ ತೋರುವಂತೆ ಉಳಿದಿವೆ. ಗೋಪುರದ ಅಲಕಫಲಕಕ್ಕೆ ೧ರ ಬದಲು ೩ ಕಿಟಕಿಗಳಿವೆ. ಅವುಗಳಲ್ಲಿ ಎರಡು ಎರಡು ಬದಿಗಳಲ್ಲಿವೆ; ಇನ್ನೊಂದು ಮುಂದಿನ ಭಾಗದಲ್ಲಿ ಇದೆ. ಗೋಪುರದ ರಚನೆ ೧೧ ಸೋಪಾನಸ್ತರಗಳನ್ನು (Steps of the gallery) ತೋರಿಸುತ್ತದೆ. ೧೦ನೆಯ ಸ್ತರ (ಘಟ್ಟ)ದಲ್ಲಿ ೪ ಕೀರ್ತಿಮುಖಗಳನ್ನು (ಭಯಂಕರ ಸಿಂಹಮುಖಗಳನ್ನು) ನಾಲ್ಕು ಪ್ರತ್ಯೇಕವಾದ ನೆಲೆಗಳ ಮೇಲೆ ಇಡಲಾಗಿದೆ. ಗೋಡೆಗಳಿಂದ ಸುತ್ತುವರಿಯಲ್ಪಟ್ಟ ಶುಕನಾಸಕ್ಕೆ ಇಳಿಮಾಡುಗಳಲ್ಲಿ ರಚಿಸಿದ ಕಿಟಕಿಗಳು ಬೆಳಕು ಬೀರುತ್ತವೆ. ಮೇಲ್ಚಾವಣಿಯು ಉಪ್ಪರಿಗೆಯಂತೆ ತೋರುತ್ತದೆ ಮತ್ತು ಇಳಿಮಾಡುಗಳಿಗೆ ಕಂಬಗಳ ಆಧಾರವಿದೆ. ಈ ಕಂಬಗಳ ಎರಡು ಭಾಗಗಳು ಉರುಟಾಗಿಯೂ ಒಂದು ಭಾಗ ಬಲ್ಬಿನಂತೆ ಉಬ್ಬಿಯೂ ಇವೆ ಮತ್ತು ಇವುಗಳನ್ನು ಬುಡದಲ್ಲಿ ಏರಿಸಿ ಇಡಲಾಗಿದೆ.

ದೇಗಾಮಿಯ ಕಮಲಾ–ನಾರಾಯಣ ದೇವಾಲಯದಲ್ಲಿ ಕದಂಬ ಶಿಲ್ಪ ಪ್ರಸ್ಥಾನದ ಪೂರ್ಣತೆಯನ್ನು ಕಾಣಬಹುದು. ಅದನ್ನು ಗೋವೆಯ ಶಿವಚಿತ್ತ ಕದಂಬನ (೧೧೪೭–೧೧೮೧) ರಾಣಿ ಕಮಲಾದೇವಿಯ ಅಪ್ಪಣೆಯ ಪ್ರಕಾರ ಬಂಕೇಶ್ವರ ದೇವರ ಶಿಲ್ಪಿಯಾದ ತಿಪ್ಪೋಜ ಕಟ್ಟಿದ್ದನಂತೆ. ದೇವಾಲಯವು ಗ್ರಾಮ ಮಧ್ಯದಲ್ಲಿದೆ. ಅದರ ಆಕಾರ ಚಚ್ಚೌಕ. ಅದರಲ್ಲಿ ೩ ಕೋಣೆಗಳೂ ಪಡುವಲ ಗರ್ಭಾಗಾರಗಳಿಗಿದಿರಾಗಿ ಬಡಗಲಿಂದ ತೆಂಕಲತ್ತ ಒಂದು ಸ್ತಂಭಮಯ ಹಜಾರವೂ ಇವೆ. ಮಿಕ್ಕೆರಡು ಕೋಣೆಗಳನ್ನು ಮೀರಿ ನಡುವಿನ ಕೋಣೆಯು ಹಜಾರದೊಳಗೆ ಹಾಯುತ್ತದೆ. ಅದರಲ್ಲಿಯ ಪ್ರತಿಯೊಂದು ವಿಭಾಗಕ್ಕೂ ಎರಡು ಭಾಗಗಳಿವೆ: ಒಂದು ಗರ್ಭಗುಡಿ, ಇನ್ನೊಂದು ಶುಕನಾಸ. ಶುಕನಾಸಗಳ ಬಾಗಿಲುಗಳ ಸುತ್ತುಪಟ್ಟಿಗಳ ಮೇಲೆ ಬಳ್ಳಿಗಳನ್ನು ಬಿಡಿಸಲಾಗಿದೆ; ಬಾಗಿಲುಗಳನ್ನು ಸುತ್ತುವರಿದಿರುವ ಕಿಟಕಿಗಳು ಕುಸುರುಗೆಲಸಗಳಿಂದ ತುಂಬಿತುಳುಕುತ್ತವೆ. ಗರ್ಭಗೃಹಗಳ ಹೊಸ್ತಿಲು–ದಾರಂದಗಳಲ್ಲಿ ಕದಂಬ ಶೈಲಿಗೆ ಸಾಧಾರಣವಾದ ಗಜಲಕ್ಷ್ಮಿಯ ಸಮರ್ಪಣಮೂರ್ತಿಯೂ ಎಡ–ಬಲಗಳಲ್ಲಿ ಎರಡು ಲೋಲಕ (ಲಂಬಕ) ಗಳೂ ಇವೆ. ಈ ಬಾಗಿಲುವಾಡಗಳಲ್ಲಿರುವ ಹೊಸ ವಿಶೇಷವೆಂದರೆ, ತೋರಣದ ಮೇಲೆ ೫ ಮೊಳೆಗಳು ಮತ್ತು ಅವುಗಳ ನಡುವೆ ಒಂದೊಂದರಂತೆ ನಾಲ್ಕು ಸಿಂಹಗಳು ಕೆತ್ತಲ್ಪಟ್ಟಿರುವುದು.

ಮೊದಲನೆಯ ಕೋಣೆಯಲ್ಲಿ ನಾರಾಯಣ ವಿಗ್ರಹವಿದೆ. ಅದರ ಪ್ರಭಾವಲಯದಲ್ಲಿ ಅವನ ಹತ್ತು ಅವತಾರಗಳನ್ನು ಕೆತ್ತಲಾಗಿದೆ. ಲಕ್ಷ್ಮಿಯು ನಾರಾಯಣನ ತೊಡೆಯ ಮೇಲೆ ಕುಳಿತಿದ್ದಾಳೆ. ಗರುಡ–ಮಾರುತಿಗಳು ಎಡಬಲಗಳಲ್ಲಿ ನಿಂತಿದ್ದಾರೆ. ಮೂರನೆಯ ವಿಭಾಗದ ಪ್ರತ್ಯೇಕ ಗರ್ಭಗುಡಿಯಲ್ಲಿ ಕಮಲೆಯ ವಿಗ್ರಹವಿದೆ. ಅವಳ ಎಡಬಲಗಳಲ್ಲಿ ಇಬ್ಬರು ಕಿಂಕರರಿದ್ದಾರೆ. ದೇವಸ್ಥಾನದ ಗೋಡೆಗಳಿಗೆ ವಿಗ್ರಹಗಳನ್ನಿಡುವ ಗೂಡುಗಳಿವೆ. ದೀರ್ಘಚತುರ್ಭುಜಾಕೃತಿಯ ಆಧಾರಪರಿಧಿ ಮತ್ತು ಗೋಪುರಗಳು ಆ ಗೂಡುಗಳಿಗಿವೆ.

ಅವು ಶುದ್ಧ ಕದಂಬ ಶೈಲಿಯವು. ಗೋಪುರಗಳ ಮೇಲಿನ ಕಲಶ ಕೂಡ ಹಾಗೇ. ಮುಖಮಂಡಪವನ್ನು ಸುತ್ತುವರಿದ ಅರೆಗೋಡೆಗಳ ಮೇಲೆ ಬುಡದಿಂದ ತುದಿಯವರೆಗೆ (೧) ಕಂಬಗಳ ನಡುವೆ ಸಿಂಹಗಳು (೨) ಈ ಕಂಬಗಳಿಗೆ ಗೋಪುರಗಳು ಮತ್ತು ಗೋಪುರಗಳ ನಡುವೆ ವಿವಿಧ ಭಂಗಿಯ ನರ್ತಕಿಯರು (೩) ತುದಿಯಲ್ಲಿ ಅಲಂಕಾರ ಚಿತ್ರಗಳು ಕೆತ್ತಲ್ಪಟ್ಟಿವೆ. ಕಂಬಗಳು ತ್ರಿವಿಧ; ಅವನ್ನು ಕಲಾಮಯವಾಗಿ ಜಟಿಲ ಅಲಂಕಾರ ಚಿತ್ರಗಳಿಂದ ನಿರ್ಮಿಸಲಾಗಿದೆ. ಅವನ್ನು ಬುಡದಲ್ಲಿ ಎತ್ತರಿಸಿ ತಲೆಯ ಮೇಲೆ ಸುರುಳಿಯಾದ ಸಂವರಣಗಳಿಂದ ಅಲಂಕರಿಸಲಾಗಿದೆ. ಸಂವರಣ ಚಿತ್ರಗಳಿಂದ (ಮದನ ಕೈಗಳಿಂದ=Bracket Figures) ಶೋಭಿಸುವ ಕಂಬಗಳು ದೇವಾಲಯದ ಇಳಿಮಾಡುಗಳನ್ನು ಹೊತ್ತಿವೆ. ಮೇಲ್ಛಾವಣಿಯಲ್ಲಿ ೩ ತೂಗುದಾವರೆಗಳಿವೆ. ಅಲಂಕಾರಸಂಪತ್ತುಗಳಿಂದ ಕೂಡಿದ ಇವು ವಿವರಗಳ ವಿಸ್ತಾರದ ದೆಸೆಯಿಂದ ಕಲೆಗಾರಿಕೆಯ ಉನ್ನತ ಕುಶಲ ಕರ್ಮಗಳೆನ್ನಿಸಿವೆ. ಹೊಯ್ಸಳರ ಉದಯವಾದ ಮೇಲೆ ಅವರ ಕಾಲದ ಶಿಲ್ಪಗಳು ಕದಂಬ ಶೈಲಿಯನ್ನು ಪರಿವರ್ತಿಸಿ ಆಮೂಲಕ ಹೊಯ್ಸಳ ಶೈಲಿಯನ್ನು ರೂಪಿಸಿಕೊಂಡರು.[೩೬]

ಬಳ್ಳಿಗಾಮಿ, ಬನವಾಸಿ ಮುಂತಾದ ಕಡೆಗಳಲ್ಲಿರುವ ಹಲವಾರು ದೇವಾಲಯಗಳು ಕದಂಬ ಮೂಲದ ಮತ್ತು ಹೊಯ್ಸಳ ಶಾಖೆಯ ಲಕ್ಷಣಗಳೆರಡನ್ನೂ ಪ್ರದರ್ಶಿಸುತ್ತವೆ. ದೊಡ್ಡಗೊಡ್ಡವಳ್ಳಿಯ ಲಕ್ಷ್ಮೀದೇವಿಯ ದೇವಾಲಯವು ಇಂಥ ಪರಿವರ್ತನದ ಹೊಸ್ತಿಲಿನಲ್ಲಿದ್ದ ಶಿಲ್ಪಮಾರ್ಗವನ್ನು ನಿದರ್ಶಿಸುತ್ತದೆ. ಬನವಾಸಿಯ ಮಧುಕೇಶ್ವರ ಮತ್ತು ಹಾನುಗಲ್ಲಿನ ತಾರಕೇಶ್ವರ ದೇವಾಲಯಗಳಿಗೆ ಕಾಲಕಾಲಕ್ಕೆ ಪುನಾರಚನೆ–ವಿಸ್ತರಣಗಳನ್ನು ಬೇರೆ ಬೇರೆ ದೊರೆಗಳ ಆಜ್ಞೆಯಂತೆ ವಿವಿಧ ಶಿಲ್ಪಿಗಳು ಮಾಡಿದುದರಿಂದ ಅವು ಮಿಶ್ರಸ್ವರೂಪವನ್ನು ಹೊಂದಿವೆ ಮತ್ತು ಬನವಾಸಿ ನಾಡಿನ ಕದಂಬ ಕಾಲೀನ ದೇವಾಲಯಗಳ ಜೀರ್ಣೋದ್ಧಾರವನ್ನು ಹೊಯ್ಸಳರ ಶಿಲ್ಪಿಗಳು ಬಹಳ ಕಡೆ ಮಾಡಿರಬಹುದೆಂಬುದನ್ನು ಅವುಗಳಲ್ಲಿ ಈಗ ಕಂಡುಬರುವ ಕೆಲ ಹೊಯ್ಸಳ ಲಕ್ಷಣಗಳಿಂದ ಊಹಿಸಬಹುದಾಗಿದೆ. ಹೊಯ್ಸಳ ರಾಜಧಾನಿಯಾದ ಹಳೆಯಬೀಡು ಮೊದಲು ಕದಂಬ ಶಾಖೆಯೊಂದರ ರಾಜಧಾನಿಯಾಗಿತ್ತೆಂಬುದನ್ನು ನೆನೆದರೆ ಬನವಾಸಿ ಬೇಲೂರುಗಳ ಸಾಂಸ್ಕೃತಿಕ ಸಂಬಂಧದ ಅರ್ಥ ಸ್ಪಷ್ಟವಾಗಿರುತ್ತದೆ. ಆದುದರಿಂದ ಬನವಾಸಿಯ ಶಿಲ್ಪಿಗಳ ಪರಂಪರೆಯ ವಿಕಾಸದ ಮುಂದಿನ ಹೊಸ ಮೆಟ್ಟಿಲೆಂದು ನಾವು ಹೊಯ್ಸಳ ಶಿಲ್ಪವನ್ನು ಗುರುತಿಸಬಹುದಾಗಿದೆ. ಈ ಎರಡರಲ್ಲಿರುವ ವ್ಯತ್ಯಾಸವನ್ನು ರಾಮಾಯಣ ಮತ್ತು ರಘುವಂಶಗಳಲ್ಲಿರುವ ಕಾವ್ಯಶೈಲಿ ಲಕ್ಷಣಗಳ ವ್ಯತ್ಯಾಸಕ್ಕೆ ಹೋಲಿಸಬಹುದು.

---

೩೬. K.K.P.314

೩

ಬನವಾಸಿಯ ಕದಂಬ ಕುಲದೇವತೆಯಾದ ಮಧುಕೇಶ್ವರನ ದೇವಾಲಯದ ಬಗ್ಗೆ ವಿಶೇಷ ವಿವರಗಳನ್ನಿಲ್ಲಿ ಸಂಗ್ರಹಿಸಲಾಗಿದೆ. ದೇವಾಲಯದ ಮಹಾ ಪ್ರಾಕಾರದೊಳಗಿನ ಇತರ ದೇವಾಯತನಗಳನ್ನೂ ದೇವತಾ ಮೂರ್ತಿಗಳನ್ನೂ ಅವಲೋಕಿಸಿದರೆ, ಗೋಕರ್ಣ, ನಂಜನಗೂಡುಗಳಲ್ಲಿರುವಂತೆಯೇ ಬನವಾಸಿಯಲ್ಲಿಯೂ ದೇವತಾರಾಧನೆಯ ಪರಂಪರೆಯ ಮಹಾವೈಭವದ ಅವಶೇಷಗಳೆಲ್ಲವನ್ನೂ ಉಳಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಬನವಾಸಿಯ ಮಧುಕೇಶ್ವರನಿಗೆ ಸಂಬಂಧಿಸಿದ ಪೌರಾಣಿಕ ಕಥೆ ಈಕೆಳಗಿನಂತಿದೆ:

ಶ್ರೀ ಭಗವಾನ್ ವಿಷ್ಣುವು ಪ್ರಳಯಕಾಲದಲ್ಲಿ ಕ್ಷೀರಸಮುದ್ರದ ಮೇಲೆ ಯೋಗನಿದ್ರಾವೃತನಾಗಿ ಇರುವ ವೇಳೆಯಲ್ಲಿ ವಿಷ್ಣುವಿನ ಕಿವಿಯಿಂದ ಮಹಾನ್ ಪ್ರತಾಪಿ ಮಧು ಮತ್ತು ಕೈಟಭ ಎಂಬ ಇಬ್ಬರು ದೈತ್ಯರು ಉದ್ಭವಿಸುತ್ತಾರೆ. ಈ ದೈತ್ಯ ಬಾಲಕರು ದೊಡ್ಡವರಾಗುತ್ತ ಒಂದು ಸಾವಿರ ವರ್ಷ ತಪಸ್ಸು ಮಾಡುತ್ತಾರೆ. ಶಕ್ತಿಮಾತೆಯು ಇವರ ತಪಸ್ಸಿಗೆ ಮೆಚ್ಚಿ ಅವರ ಇಚ್ಛೆಯಂತೆ ಇಚ್ಛಾಮರಣಿಗಳಾಗಿರೆಂದು ವರವನ್ನೀಯುತ್ತಾಳೆ. ಮುಂದೆ ಆ ದೈತ್ಯರು ಮದೋನ್ಮತ್ತರಾಗಿ ಬ್ರಹ್ಮನಿದ್ದಲ್ಲಿಗೆ ಹೋಗಿ ಅವನನ್ನು ಕಾಡಿಸಿ, ಪೀಡಿಸಿ ಅವನ ಪಟ್ಟಣವನ್ನೇ ಆಕ್ರಮಿಸುವ ಬೆದರಿಕೆ ಹಾಕುತ್ತಾರೆ. ಬ್ರಹ್ಮನು ನಿರುಪಾಯನಾಗಿ ಭಗವಾನ್ ವಿಷ್ಣುವಿದ್ದಲ್ಲಿಗೆ ಬರುತ್ತಾನೆ. ಇಷ್ಟಾದರೂ ಶ್ರೀವಿಷ್ಣುವಿನ ಯೋಗನಿದ್ರೆ ಭಗ್ನವಾಗಿರುವುದಿಲ್ಲ. ಬ್ರಹ್ಮನು ಯೋಗನಿದ್ರಾದೇವಿಯನ್ನು ಪ್ರಾರ್ಥಿಸುತ್ತಾನೆ. ಯೋಗನಿದ್ರಾದೇವಿಯು ವಿಷ್ಣುವನ್ನು ಬಿಟ್ಟು ಹೋದ ಮೇಲೆ ವಿಷ್ಣುವು ಎಚ್ಚರಗೊಂಡು ಬ್ರಹ್ಮನಿಂದ ಘಟಿಸಿದ ಎಲ್ಲ ವಿಷಯಗಳನ್ನು ತಿಳಿದುಕೊಳ್ಳುತ್ತಾನೆ. ಬ್ರಹ್ಮನ ಇಚ್ಛೆಯಂತೆ ವಿಷ್ಣುವು ಶಿಷ್ಟರ ಪರಿಪಾಲನಾರ್ಥವಾಗಿ ಮಧು–ಕೈಟಭರೊಂದಿಗೆ ಯುದ್ಧ ಮಾಡುತ್ತಾನೆ. ಆದರೂ ದೈತ್ಯರನ್ನು ವಧಿಸಲು ಸಾಧ್ಯವಾಗಲಿಲ್ಲ. ಇದು ಶಕ್ತಿ ದೇವಿಯ ವರಪ್ರಸಾದವೆಂದು ಗ್ರಹಿಸಿ ದೈತ್ಯರನ್ನು ವಧಿಸುವ ಭೇದೋಪಾಯ ಹೂಡುತ್ತಾನೆ. ದೈತ್ಯರೊಡನೆ "ನಿಮ್ಮ ಶೌರ್ಯ–ಪರಾಕ್ರಮಗಳಿಗೆ ಮೆಚ್ಚಿದ್ದೇನೆ. ಬೇಕಾದ ವರಗಳನ್ನು ಕೇಳಿರಿ" ಎಂದು ಹೇಳಿದಾಗ ದಾನವರು. "ವರವನ್ನು ಯಾಚಿಸಲು ನಾವು ಭಿಕ್ಷುಕರಲ್ಲ. ನೀನೇ ವರವನ್ನು ನಮ್ಮಿಂದ ಕೇಳು. ನಾವು ಕೊಡಲು ಸಮರ್ಥರಿದ್ದೇವೆ" ಎಂದು ಹೇಳುತ್ತಾರೆ. ಇದೇ ಸಮಯ ಸಾಧಿಸಿ ವಿಷ್ಣುವು "ನನ್ನ ಚಕ್ರದಿಂದ ನಿಮ್ಮಿಬ್ಬರ ವಧೆಯಾಗಬೇಕು ಎಂಬ ವರವನ್ನು ಬಯಸುತ್ತೇನೆ" ಎಂದು ನುಡಿಯುತ್ತಾನೆ. ಕೂಡಲೆ ಮಧು, ಕೈಟಭರು ಗತ್ಯಂತರವಿಲ್ಲದೆ "ಇದೇ ಸಾಗರ ಮಧ್ಯ ನೀರಿಲ್ಲದ ಸ್ಥಳದಲ್ಲಿ ನಮ್ಮನ್ನು ವಧಿಸಬೇಕು ಮತ್ತು ನಮ್ಮಿಬ್ಬರ ಹೆಸರುಗಳು ಆಚಂದ್ರಾರ್ಕವಾಗಿ ಭೂಲೋಕದಲ್ಲಿ ಪ್ರಸಿದ್ಧಿಯಾಗುವಂತೆ ಅನುಗ್ರಹಿಸಬೇಕು." ಎಂದು ಮರಣಕ್ಕೆ ಸಿದ್ಧರಾದರು. ವಿಷ್ಣುವು ತನ್ನೆರಡು ಕಾಲುಗಳ ಮೇಲೆ ಮಧು, ಕೈಟಭರನ್ನು

ಮಲಗಿಸಿಕೊಂಡು ತನ್ನ ಚಕ್ರದಿಂದ ಇಬ್ಬರೂ ರಕ್ಕಸರ ಶಿರವನ್ನು ಕತ್ತರಿಸುತ್ತಾನೆ. ಈ ರೀತಿ ಮಧು, ಕೈಟಭ ರಕ್ಕಸರ ಸಂಹಾರವಾಗುತ್ತದೆ.

ಮಧು, ಕೈಟಭರ ಇಚ್ಛಾನುಸಾರ ಅವರ ಕೀರ್ತಿ ಲೋಕದಲ್ಲಿ ಪ್ರಸಿದ್ಧಿಯಾಗುವಂತೆ ಶ್ರೀಮನ್ನಾರಾಯಣನು ಜಯಂತಿ (ಬನವಾಸಿ) ಕ್ಷೇತ್ರದಲ್ಲಿ ಮಧುಕೇಶ್ವರ ಎಂಬ ಹೆಸರಿನಿಂದಲೂ, ಆ ಕ್ಷೇತ್ರದಿಂದ ೯ ಮೈಲು ದೂರದಲ್ಲಿ, (ಸೊರಬ ತಾಲೂಕು) ಆನವಟ್ಟಿಯ ಸಮೀಪ "ಕುಬಟೂರು" ಎಂಬಲ್ಲಿ "ಕೈಟಭೇಶ್ವರ" ಎಂಬ ಹೆಸರಿನಿಂದಲೂ ಎರಡು ಲಿಂಗಗಳನ್ನು ವಿಧಿಪೂರ್ವಕವಾಗಿ ಸ್ಥಾಪಿಸಿದನು. ಮಧು, ಕೈಟಭರು ದೈವೀಕೃಪೆಗೆ ಪಾತ್ರರಾದ್ದರಿಂದ ನಾರಾಯಣನು ಮಹಾದೇವನನ್ನು ಆವಾಹನೆ ಮಾಡಿದನು. ಇದರಿಂದ ಸಂಪ್ರೀತನಾದ ಮಹಾದೇವನು ಸತಿಸಮೇತನಾಗಿ ಈ ಲಿಂಗಗಳಲ್ಲಿ ಪೂರ್ಣ ತೇಜಸ್ಸಿನಿಂದ ಅವಾಹಿತನಾಗಿ ಇಂದಿಗೂ ಪ್ರಸಿದ್ಧನಾಗಿರುವನು.

ಈ ಕ್ಷೇತ್ರದಲ್ಲಿ ವಾರಾಣಸೀ ಪಟ್ಟಣದ ರತ್ನಾಂಗದ ರಾಜನ ಶಾಪ ವಿಮೋಚನೆಯಾಗಿರುತ್ತದೆ.

ದೇವೇಂದ್ರನು ವೃತ್ರಾಸುರನನ್ನು ಕೊಲ್ಲುವಾಗ ದಧೀಚಿ ಋಷಿಯ ಬೆನ್ನು ಮೂಳೆಯಿಂದ ವಜ್ರಾಯುಧವನ್ನು ಮಾಡಿಕೊಂಡದ್ದರಿಂದ ದೇವೇಂದ್ರನಿಗೆ ಬ್ರಹ್ಮಹತ್ಯಾದೋಷ ಪ್ರಾಪ್ತವಾಯಿತು. ಇದನ್ನು ಕಳೆದುಕೊಳ್ಳಲು ದೇವೇಂದ್ರನು ಜಯಂತೀ ಕ್ಷೇತ್ರದಲ್ಲಿ ನೆಲೆಸಿ ಶ್ರೀ ಮಧುಕೇಶ್ವರನನ್ನು ಕುರಿತು ತಪಸ್ಸು ಮಾಡಿ ತನ್ನ ದೋಷವನ್ನು ನಿವಾರಿಸಿಕೊಂಡನು.

ಮೃಕಂಡುಮುನಿಯು ಸಂತತಿ ಇಲ್ಲದ್ದರಿಂದ ಜಯಂತೀಕ್ಷೇತ್ರದಲ್ಲಿ ಆಗಮಿಸಿ ಶ್ರೀ ಮಧುಕೇಶ್ವರನನ್ನು ಕುರಿತು ತಪಸ್ಸು ಮಾಡಿ ಮಾರ್ಕಂಡೇಯನನ್ನು ಪಡೆದನು.

ಜಮದಗ್ನಿ ಋಷಿಯ ಮಗನಾದ ಶ್ರೀ ಭಾರ್ಗವನು ತನ್ನ ತಂದೆಯ ಆಜ್ಞೆಯಂತೆ ತಾಯಿಯಾದ ರೇಣುಕೆಯ ಶಿರಚ್ಛೇದನಗೈದುದರಿಂದ ಉಂಟಾದ ಮಾತೃಹತ್ಯಾ ದೋಷವನ್ನು ಕಳೆದುಕೊಳ್ಳಲು ಜಯಂತೀ ಕ್ಷೇತ್ರಕ್ಕೆ ಬಂದು ಶ್ರೀ ಮಧುಕೇಶ್ವರನನ್ನು ಕುರಿತು ತಪಸ್ಸು ಮಾಡಿ ಮಧುಕೇಶ್ವರದೇವನಿಂದ ಮೃತ ತಾಯಿಯ ಜೀವದಾನ ಪಡೆದನು ಮತ್ತು ವರದಾನದಿಯಲ್ಲಿ ಮಿಂದು ಮಾತೃಹತ್ಯಾದೋಷ ಪರಿಮಾರ್ಜನೆ ಮಾಡಿಕೊಂಡನು. ಅಲ್ಲದೆ ಇದೇ ಭಾರ್ಗವ (ಪರಶುರಾಮ)ನು ಜಯಂತೀ ಕ್ಷೇತ್ರದಲ್ಲಿ ಶಿವನನ್ನು ಆರಾಧಿಸಿ ಅಜಯ್ಯವಾದ ಪರಶು (ಗಂಡುಗೊಡಲಿ) ವನ್ನು ಪಡೆದನು.

ಶುಕ್ರಾಚಾರ್ಯನು ಸಂಜೀವನೀ ವಿದ್ಯೆಯನ್ನು ಜಯಂತೀಕ್ಷೇತ್ರದಲ್ಲಿಯೇ ಶ್ರೀ ಮಧುಕೇಶ್ವರನ ಅನುಗ್ರಹದಿಂದ ಪಡೆದನು.

ಅತ್ರಿಮಹಾಮುನಿಯ ಪತ್ನಿ ಅನುಸೂಯಾದೇವಿಯು ತ್ರಿಮೂರ್ತಿಗಳ ವರದಿಂದ

ದುರ್ವಾಸ, ಚಂದ್ರಮ, ದತ್ತಾತ್ರೇಯರೆಂಬ ಮೂವರು ಪುತ್ರರನ್ನು ಜಯಂತೀಕ್ಷೇತ್ರದಲ್ಲಿಯೇ ಪಡೆದಳು.

ಇಂತು ಮಹಾಮಹಿಮನಾಗಿ ಜಯಂತೀ (ಬನವಾಸಿ) ಕ್ಷೇತ್ರದಲ್ಲಿ ವಿರಾಜಮಾನನಾದ ಶ್ರೀ ಮಧುಕೇಶ್ವರನನ್ನು ಆರಾಧಿಸುವವರಿಗೆ ಆಧಿವ್ಯಾಧಿಗಳ ಪೀಡೆ ತಪ್ಪುವದು, ಕಷ್ಟ ಸಂಕಟಗಳು ದೂರಾಗುವವು. ಅಂಥವರು ಜ್ಞಾನಸಂಪನ್ನರಾಗುವರು. ಮಧುಕೇಶ್ವರನ ಪ್ರೀತಿಪಾತ್ರರಾಗಿ ಮೋಕ್ಷ ಪಡೆವರು.

ಆದಿಕಾಶೀ ವಾನವಾಸೀ ವಿಶ್ವೆಶೋ ಮಧುಕೇಶ್ವರಃ।
ಗಂಗಾಪಗಾ ಸಾ ವರದಾ ಕೋಟಿತೀರ್ಥಂ ವಿಶೇಷತಃ॥
ಚಂಡೇಶೋ ಧುಂಡಿರಾಜೋ ವರದ ಯಮಕುಬೇರೇಶ್ವರಾ ಅಗ್ನಿದುರ್ಗೇ
ರಾಮೇಶೋ ವಿಶ್ವನಾಥೋ ವರುಣ ಗಣಪತೀ ನಿರ್ಋತೀಂದ್ರೌ ವಿಠೋಬಃ।
ದತ್ತಾತ್ರೇಯೋ ಹನೂಮಾನ್ ನರಹರಿ ಮಧು ನಂದೀಶ ಕೇದಾರನಾಥಾಃ
ಸ್ಮರ್ತವ್ಯಾ ವೀರಭದ್ರೋ ವಿಮಲಬಸವಲಿಂಗೇಶ್ವರೋ ರುದ್ರಪಾದಃ ॥

ದ್ವಾರೇ ಹಿರಣ್ಯಗರ್ಭೋ ಗಜರಾಜಃ ಸಾಕ್ಷಿಗಣಪತಿರ್ಭಾವ್ಯಾಃ।
ಚಿಂತಾಮಣಿಗಣರಾಜಃ ಸರಸ್ವತೀ ಕಾಲಭೈರವಾದ್ಯಾಶ್ಚ॥
ಶ್ರೀ ವಾನವಾಸ್ಯಭಿಖ್ಯ ಕ್ಷೇತ್ರಸ್ಥಾಃ ಸರ್ವದೇವತಾಃ ಸುಖದಾಃ
ಕಲ್ಯಾಣಗುಣಸುಪೂರ್ಣಾ ಧ್ಯೇಯಾ ಭವ್ಯಾಯ ಸರ್ವದಾ ಮನುಜೈಃ॥

೧೧. ಬನವಾಸಿಯ ದೇವಾಲಯಗಳು

ಶ್ರೀ ಮಧುಕೇಶ್ವರ ದೇವಾಲಯದ ಸುತ್ತಲಿನ (ಪ್ರಾಕಾರ) ಪ್ರದೇಶದಲ್ಲಿರುವ ಮುಖ್ಯ ದೇವರುಗಳು: (೧) ಶ್ರೀ ಮಧುಕೇಶ್ವರ (೨) ಶ್ರೀ ಪಾರ್ವತೀ (೩) ಶ್ರೀ ಮಹಾಗಣಪತಿ (೪) ಶ್ರೀ ನರಸಿಂಹ.

ಶ್ರೀ ಮಧುಕೇಶ್ವರ ದೇವಾಲಯ: ಶೈವಾಗಮ ಪದ್ಧತಿಯಿಂದ ಕಟ್ಟಿದ ಶಿಲ್ಪ ಕಲಾ ದೇವಾಲಯ. ದೇವಾಲಯದ ರಚನೆಯ ಕಾಲದಲ್ಲಿ ದೇವಾಲಯದ ಸುತ್ತಲೂ ಅಲ್ಲಲ್ಲಿ ಸ್ಥಾಪಿಸಿದ ಬಲಿಕಲ್ಲುಗಳನ್ನು ಕಾಣಬಹುದು. ದೇವಾಲಯದಲ್ಲಿ ಮುಖ್ಯವಾಗಿ ಈಕೆಳಗಿನಂತೆ ಭಾಗಗಳನ್ನು ಕಾಣಬಹುದು.

೧) ಬಿಂಬಮಂಟಪ (ಶ್ರೀಮಧುಕೇಶ್ವರದೇವರು ಇರುವ ಸ್ಥಳ)

೨) ಅರ್ಧಮಂಟಪ (ಅರ್ಚಕರು, ಉಪಾಧಿವಂತರು ಕೂಡುವ ಸ್ಥಳ)

೩) ಘಂಟಾಮಂಟಪ (ಘಂಟೆಗಳನ್ನು ತೂಗುಬಿಟ್ಟ ಸ್ಥಳ)

೪) ಸಭಾಮಂಟಪ (ಭಕ್ತಾದಿಗಳು ಸೇರುವ ಸ್ಥಳ)

೫) ನೃತ್ಯಮಂಟಪ (ನೃತ್ಯ ನಡೆಯುವ ಸ್ಥಳ)

೬) ನಂದಿಮಂಟಪ (ಶಿಲೆಯ ನಂದಿವಿಗ್ರಹ ಮಂಡಿಸಿದ ಸ್ಥಳ)

ಅ) ಬಿಂಬಮಂಟಪ ಮತ್ತು ಅರ್ಧಮಂಟಪ ಸೇರಿದ ಕಟ್ಟಡ ಒಂದು ಚೌಕಟ್ಟಿನಲ್ಲಿದೆ. ಅರ್ಧಮಂಟಪದ ಪ್ರವೇಶದ್ವಾರದ ಮೇಲ್ಭಾಗದಲ್ಲಿ ಗಜಲಕ್ಷ್ಮಿಯ ಚಿತ್ರವಿದೆ. ಈ ಕಟ್ಟಡದ ಅಳತೆ ಸಾಮಾನ್ಯ ಉದ್ದ ೫೮ ಫೂಟು, ಅಗಲ ೪೦ ಫೂಟು ಇದೆ. ಇದು ಒಳಭಾಗ.

ಬ) ಘಂಟಾಮಂಟಪ, ಸಭಾಮಂಟಪ, ನೃತ್ಯಮಂಟಪ, ನಂದಿಮಂಟಪ ಇವು ಸೇರಿದ ಕಟ್ಟಡ ಒಂದು ಚೌಕಟ್ಟಿನಲ್ಲಿದೆ. ಇದು ಹೊರಗಿನ ಭಾಗ, ಈ ಕಟ್ಟಡದ ಸಾಮಾನ್ಯ ಉದ್ದ ೫೮ ಫೂಟು, ಅಗಲ ೩೨ ಫೂಟು. ಈ ವಿಭಾಗದಲ್ಲಿಯೇ ಶಿಲ್ಪಕಲಾ ವೈಶಿಷ್ಟ್ಯ ನೋಡುವಂಥದಿದೆ.

ದೇವಾಲಯದ ಒಳ ವಿಭಾಗ ಒಂಬತ್ತನೆಯ ಶತಮಾನದಲ್ಲಿ ಹೊರ ವಿಭಾಗ ಹನ್ನೆರಡನೆಯೆ ಶತಮಾನದಲ್ಲಿ ಪುನಃ ಕಟ್ಟಲ್ಪಟ್ಟಿರಬೇಕು. ಇದರ ಸುತ್ತಲಿನ ಪ್ರಾಕಾರವನ್ನು ಶ್ರೀ. ಮಧುಕೇಶ್ವರ ಒಡೆಯರ ಪೂರ್ವಜರು ಕಟ್ಟಿಸಿ ಕೊಟ್ಟ ಬಗ್ಗೆ ಅದರಲ್ಲೇ ಶಿಲಾಲಿಪಿಯಿದೆ.

ಶ್ರೀ ಪಾರ್ವತೀ ದೇವಾಲಯ: ಇದೂ ಶೈವಾಗಮ ಪದ್ಧತಿಯಿಂದ ಕಟ್ಟಿದ ಶಿಲಾಮಯ ದೇವಾಲಯವು. ಈ ದೇವಾಲಯದಲ್ಲಿ ಮುಖ್ಯವಾಗಿ ಈ ಕೆಳಗಿನಂತೆ ವಿಭಾಗಗಳಿವೆ.

೧) ಬಿಂಬಮಂಟಪ (ಶ್ರೀದೇವಿಯ ವಾಸಸ್ಥಳ)

೨) ಅರ್ಧಮಂಟಪ (ಬ್ರಾಹ್ಮಣರು ಕೂಡ್ರುವ ಸ್ಥಳ)

೩) ಉತ್ಸವಮಂಟಪ (ಉತ್ಸವಗಳು ನಡೆಯುವ ಸ್ಥಳ)

೪) ಸದರಮಂಟಪ (ನವರಾತ್ರಿಯಲ್ಲಿ ಆಯುಧಗಳನ್ನಿಟ್ಟು ಪೂಜಿಸುವ ಸ್ಥಳ)

೫) ಸಭಾಮಂಟಪ (ರಾಜರು, ಭಕ್ತರು ಸೇರುವ ಸ್ಥಳ)

೬) ನೃತ್ಯಮಂಟಪ ಅಥವಾ ಕೀರ್ತನಮಂಟಪ (ನೃತ್ಯಗಳು, ಕೀರ್ತನೆಗಳು, ಪ್ರವಚನಗಳು ನಡೆಯುವ ಸ್ಥಳ.)

ಈ ದೇವಾಲಯದ ಒಟ್ಟು ಅಳತೆ ಸಾಮಾನ್ಯ ಉದ್ದ ೯೨ ಫೂಟು, ಅಗಲ ೩೦ ಫೂಟು ಇದೆ. ಸಭಾಮಂಟಪದಿಂದ ಕೀರ್ತನಮಂಟಪದ ವರೆಗಿನ ಸ್ಥಳಗಳಲ್ಲಿ ಸಾಮಾನ್ಯವಾಗಿ ೩೦೦ ಜನರು ಕೂಡ್ರಲು ಅವಕಾಶವಿದೆ.

ಶ್ರೀ ಗಣಪತಿ, ಶ್ರೀ ನರಸಿಂಹ ದೇವಸ್ಥಾನಗಳೂ ಶಿಲಾಕಟ್ಟಡವನ್ನೊಳಗೊಂಡಿವೆ.

ಶ್ರೀ ಮಧುಕೇಶ್ವರ ದೇವಾಲಯಕ್ಕೆ ಹೊಂದಿ ಬಲಬದಿಯಲ್ಲಿ ಶ್ರೀ ವೀರಭದ್ರ, ಶ್ರೀ ಸದಾಶಿವೇಶ್ವರ ದೇವರನ್ನೊಳಗೊಂಡ ಶಿಲಾಕಟ್ಟಡವಿದೆ. ಇಲ್ಲೊಂದು ಸುರಂಗಮಾರ್ಗವುಂಟು.

ಶ್ರೀ ಮಧುಕೇಶ್ವರ ದೇವಾಲಯದ ಪ್ರಾಕಾರದಲ್ಲಿಯ ಸುತ್ತಲಿನ ದೇವರುಗಳ ಹೆಸರುಗಳು:

೧) ಹೆಬ್ಬಾಗಿಲಾನೆಗಳು. (೨) ಬಾಗಿಲಬ್ರಹ್ಮ (೩) ಧ್ವಜಸ್ತಂಭದ ಬುಡದಲ್ಲಿರುವ ಕಾಲಭೈರವ, ದತ್ತಾತ್ರೇಯ, ಹನುಮಂತ. (೪) ಇಂದ್ರ (೫) ಅಗ್ನಿ (೬) ವಿಠೋಬ (೭) ವಿಶ್ವೇಶ್ವರ (೮) ವರದೇಶ್ವರ (೯) ಹಾವಳಿಮಧುಕೇಶ್ವರ (೧೦) ಅಮೃತೇಶ್ವರ (೧೧) ಯಮ (೧೨) ಕೇದಾರೇಶ್ವರ (೧೩) ಚಿಂತಾಮಣಿ ಗಣಪತಿ (೧೪) ನಿರ್ಋತಿ (೧೫) ಧುಂಡಿ ರಾಜ ಗಣಪತಿ (೧೬) ರಾಮೇಶ್ವರ (೧೭) ವರುಣ (೧೮) ವೆಂಕಟರಮಣ (೧೯) ಶ್ರೀರಾಮ (೨೦) ಉಮಾಮಹೇಶ್ವರ (೨೧) ಬಸವಲಿಂಗೇಶ್ವರ (೨೨) ವಾಯು (೨೩) ಸೂರ್ಯನಾರಾಯಣ (೨೪) ಪರಶುರಾಮ

(೨೫) ಆದಿಶೇಷ (೨೬) ಕೇಶವ (೨೭) ಕುಬೇರ (೨೮) ದುರ್ಗೆ (೨೯) ಚಂಡೇಶ್ವರ (೩೦) ಸಾಕ್ಷಿಗಣಪತಿ (೩೧) ಈಶಾನ್ಯ (ಉಗ್ರಾಣದ ಕಟ್ಟಡದಲ್ಲಿದೆ) (೩೨) ಸರಸ್ವತಿ (ಮಧುಕೇಶ್ವರ ದೇವಾಲಯದಿಂದ ವೀರಭದ್ರಗುಡಿಗೆ ಹೋಗುವಲ್ಲಿ ಬಲಗಡೆಗೆ ಗೋಡೆಗೆ ಹೊಂದಿ ಇದೆ.) (೩೩) ವೀರಭದ್ರ (೩೪) ಸದಾಶಿವೇಶ್ವರ.

೧೨. ಶಿಲ್ಪಕಲಾವೈಶಿಷ್ಟ್ಯಗಳು

(ಶ್ರೀ ಮಧುಕೇಶ್ವರ ದೇವಾಲಯದಲ್ಲಿ)

೧. ಶ್ರೀ ಮಾಧವ (ಶ್ರೀ ಮಹಾವಿಷ್ಣು): ಶ್ರೀ ಮಧುಕೇಶ್ವರ ದೇವಾಲಯದ ಅರ್ಧಮಂಟಪದಲ್ಲಿ ಪ್ರವೇಶಿಸಿದೊಡನೆ ಬಲಕ್ಕೆ ಮೂಲೆಯಲ್ಲಿ ಸ್ಥಾಪಿತನಾದ ಶ್ರೀ ಮಾಧವ ಮೂರ್ತಿಯನ್ನು ನೋಡಿದರೆ ಮೈ ಝಲ್ಲೆನ್ನುತ್ತದೆ. ಎಂಥ ಭವ್ಯ–ದಿವ್ಯ ಮೂರ್ತಿ! ಈ ಮಾಧವ ಮೂರ್ತಿಯ ಬದಿಯಲ್ಲಿ ಸುತ್ತಲೂ ದಶಾವತಾರ ಚಿತ್ರಿತವಾಗಿದೆ. ಮಧು ರಕ್ಕಸನ ಸಂಹಾರ ಮಾಡಿ ಶ್ರೀ ಮಧುಕೇಶ್ವರಲಿಂಗ ಸ್ಥಾಪನೆಗೆ ಕಾರಣೀಭೂತನಾದ ಈ ಮಾಧವನಿಗೆ ನಿತ್ಯ ಪ್ರಾತಃಕಾಲದಲ್ಲಿ ಪ್ರಥಮ ಪೂಜೆ ಸಲ್ಲಿಸಿದ ಅನಂತರ ಶ್ರೀ ಮಧುಕೇಶ್ವರನ ಪೂಜೆ ಮಾಡುವ ಪದ್ಧತಿ ಇದೆ.

೨. ಕಲ್ಯಾಣಮಂಟಪ ಅರ್ಥಾತ್ ತ್ರಿಲೋಕಮಂಟಪ: ಶ್ರೀ ಮಧುಕೇಶ್ವರ ದೇವಾಲಯದ ಹೊರವಿಭಾಗದಲ್ಲಿರುವ ಘಂಟಾಮಂಟಪದಲ್ಲಿ ಇದು ಸ್ಥಾಪಿತವಾಗಿದೆ. ಶಿಲ್ಪನೈಪುಣ್ಯದ ನೆಲೆವೀಡಿದು: ಈ ಮಂಟಪದಲ್ಲಿ ಮೂರು ಲೋಕಗಳನ್ನು ಚಿತ್ರಿಸಿದ ಸಾಹಸ ಸ್ತುತ್ಯರ್ಹವಾಗಿದೆ. (೧) ಮಹಾಶೇಷ ಹಾಗೂ ಅಷ್ಟದಿಗ್ಗಜಗಳು ಭೂಲೋಕ ಹಾಗೂ ದೇವಲೋಕಗಳನ್ನು ಹೊತ್ತು ನಿಂತಂತೆ ತಿಳಿಯಪಡಿಸುವ "ಪಾತಾಳಲೋಕ"; (೨) ಮಧ್ಯದಲ್ಲಿ "ಭೂಲೋಕ"; (೩) ಅಷ್ಟದಿಕ್ಪಾಲಕರನ್ನೊಳಗೊಂಡ "ದೇವಲೋಕ" (ಮೇಲ್ಭಾಗದಲ್ಲಿ). ಈ ಮಂಟಪದಲ್ಲಿಯ ಕಂಬಗಳು ಹಾಗೂ ಮೇಲ್ಛಾವಣಿಯಲ್ಲಿಯ ಕಲಾಕೌಶಲ ಪ್ರಶಂಸನೀಯವಾಗಿದೆ. ಪ್ರತಿ ಸೋಮವಾರ, ಶುಕ್ರವಾರ ಸಂಜೆ ಉತ್ಸವಮೂರ್ತಿಗಳನ್ನು ಈ ಮಂಟಪದಲ್ಲಿ ಕೂಡ್ರಿಸಿ ಪೂಜೆ, ಮಂಗಳಾರತಿಗಳನ್ನು ನಡೆಸಿ ಪ್ರಸಾದ ವಿನಿಯೋಗ ಮಾಡುತ್ತಾರೆ. ಬ್ರಾಹ್ಮಣೇತರರಿಗೆ ವಾರಕ್ಕೆ ಎರಡು ಸಾರಿ ಶ್ರೀದೇವರ ದರ್ಶನ, ಪ್ರಸಾದ ಪ್ರಾಪ್ತಿಯಾಗಿ ಪುಣ್ಯಭಾಗಿಗಳಾಗಲು ಅವಕಾಶ ದೊರಕಬೇಕೆಂಬ ಸದ್ಭಾವನೆಯಿಂದ ಈ ಪದ್ಧತಿ ನಡೆದು ಬಂದಿದೆ.

೩. ದ್ವಾರಪಾಲಕ ವಿಗ್ರಹಗಳು: ಶ್ರೀ ಮಧುಕೇಶ್ವರ ದೇವಾಲಯದ ಒಳ ವಿಭಾಗದ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಸ್ಥಾಪಿತವಾದ ಭವ್ಯ ವಿಗ್ರಹಗಳಿವು. ಕಲುಷಿತ

ಚಿತ್ತಚಾಂಚಲ್ಯವನ್ನು ಬಿಸುಟು ನಿರ್ಮಲ ಮನದಿಂದ ಪ್ರವೇಶಿಸುವಂತೆ ಎಚ್ಚರಿಸುವ ಹಾಗೆ ಭಾಸವಾಗುತ್ತದೆ ಇವನ್ನು ನೋಡಿದರೆ.

೪. ನೃತ್ಯಮಂಟಪ: ಈ ಭಾಗ ಸ್ವಲ್ಪ ವಿಶಾಲವಾಗಿ, ಕಲಾಪೂರ್ಣವಾಗಿದೆ. ಸುತ್ತಲಿನ ಕರಿ ಕಲ್ಲಿನ ನುಣುಪಾದ ಮಿರುಗುವ ಕಂಬಗಳಲ್ಲಿ ಚಿತ್ರಿಸಿದ ಬಳ್ಳಿ ಸುಂದರವಾಗಿದೆ. ಮೇಲ್ಛಾವಣಿಯಲ್ಲಿ ಅಷ್ಟೋತ್ತರ ದಳಗಳ ಪದ್ಮ ಮನೋಹರವಾಗಿದೆ. ಧಾರ್ಮಿಕವಾದ ವಿಶೇಷ ಉತ್ಸವ ಮತ್ತು ಪೂಜಾದಿನಗಳಲ್ಲಿ ಈ ಸ್ಥಳದಲ್ಲಿ ದೇವದಾಸಿಯರಿಂದ ನೃತ್ಯ ನಡೆಯುತ್ತಿದ್ದಿರಬೇಕು. ನೃತ್ಯ ನಡೆಯುವಾಗ ಗೆಜ್ಜೆಗಳ ನಾದ ಪ್ರತಿಧ್ವನಿಸಲೆಂದು ಈ ಸ್ಥಳದ ಅಡಿಭಾಗ ಪೊಳ್ಳಾಗಿದ್ದು ಕಂಡುಬರುತ್ತದೆ.

೫. ನಂದಿ (ಬಸವ) ವಿಗ್ರಹ: ಶ್ರೀ ಮಧುಕೇಶ್ವರನ ಸಮ್ಮುಖದಲ್ಲಿ ಮೊಳಕಾಲೂರಿ ಮಲಗಿದ ಎಂಟು ಫೂಟು ಉದ್ದ, ನಾಲ್ಕು ಫೂಟು ಅಗಲ, ಎಂಟು ಫೂಟು ಎತ್ತರ ಶರೀರವುಳ್ಳ ಭವ್ಯ ಶಿಲಾಪ್ರತಿಮೆ: ಒಂದೇ ಕಲ್ಲಿನಿಂದ ನಿರ್ಮಿಸಿದ ವಿಗ್ರಹ.

೬. ಶ್ರೀ ಸರಸ್ವತಿ: ಈ ಮೂರ್ತಿಯು ಶ್ರೀ ಮಧುಕೇಶ್ವರ ದೇವಾಲಯದಿಂದ ಶ್ರೀ ವೀರಭದ್ರ ದೇವಾಲಯಕ್ಕೆ ಪ್ರವೇಶಿಸುವಾಗ ಬಲಗಡೆಯ ಗೋಡೆಗೆ ಹೊಂದಿ ಇದೆ. ಇದೊಂದು ಅತಿ ಸುಂದರವಾದ ಶಿಲ್ಪ ಕಲಾಕೃತಿ.

೭. ಕಡಲೆ ಮಾರುತಿ, ಕಬ್ಬಿನ ಮಾರುತಿ: ವೀರಭದ್ರ ದೇವಾಲಯವನ್ನು ಪ್ರವೇಶಿಸುವಾಗ ಮೊದಲು ಎಡಕ್ಕೆ ಇರುವ ಪೌಳಿಯ (ಒರಗುವ ಕಲ್ಲುಹಲಗೆಯ) ಹಿಂಭಾಗದಲ್ಲಿರುವ ೧॥ ಇಂಚಿನ ಪ್ರಮಾಣದಲ್ಲಿ ಚಿತ್ರಿಸಲಾದ ಚಿಕ್ಕ, ಚೊಕ್ಕ ಮೂರ್ತಿಗಳು.

೮. ಸಾಕ್ಷಿಗಣಪತಿ: ಇದು ಶ್ರೀ ಪಾರ್ವತೀ ದೇವಸ್ಥಾನದಿಂದ ಶ್ರೀ ಮಧುಕೇಶ್ವರ ದೇವಸ್ಥಾನದ ಘಂಟಾಮಂಟಪಕ್ಕೆ ಪ್ರವೇಶಿಸುವ ಮೊದಲು ಎಡ ಭಾಗಕ್ಕೆ ಸ್ವಲ್ಪ ದೂರದಲ್ಲಿ, ಪೌಳಿಯ (ಒರಗುವ ಕಲ್ಲುಹಲಗೆಯ) ಹಿಂಭಾಗದಲ್ಲಿ ಚಿತ್ರಿಸಲಾದ ೬ ಇಂಚು ಪ್ರಮಾಣದ ಚಿಕ್ಕದಾದ ಸುಂದರ ಮೂರ್ತಿ. ಬನವಾಸಿಯ ಮಧುಕೇಶ್ವರ ದೇವಸ್ಥಾನವನ್ನು ಸಂದರ್ಶಿಸಿದ ಸಾಕ್ಷಿಗಾಗಿ ಯಾತ್ರಿಕರು ದೇವಸ್ಥಾನದಿಂದ ಹೊರಡುವಾಗ ಈ ಸಾಕ್ಷಿಗಣಪತಿಯ ದರ್ಶನ ಪಡೆದು ಹೋಗಬೇಕು.

ಸುತ್ತಲಿನ (ಹೊರವಲಯದ) ಸ್ಥಳದಲ್ಲಿರುವ ಶಿಲ್ಪಕಲಾ ವೈಶಿಷ್ಟ್ಯ ಹೀಗಿದೆ:

೯. ಧ್ವಜಸ್ತಂಭ: ಶ್ರೀ ಮಧುಕೇಶ್ವರ ದೇವಾಲಯದ ಹೆಬ್ಬಾಗಿಲನ್ನು ಪ್ರವೇಶಿಸಿದೊಡನೆ ಎದುರಿಗೆ ಕಾಣುವ, ಸಾಮಾನ್ಯ (ತಳದಿಂದ) ೪೦ ಫೂಟು ಎತ್ತರವುಳ್ಳ ಶಿಲಾಸ್ತಂಭ, ಇದರ ಹತ್ತಿರ ಬಸವಮಂಟಪವಿದೆ. ಇದರ ಸ್ಥಾಪನೆ ಶಕೆ ೧೫೫೨; ಇಸ್ವಿ ೧೬೭೦ರಲ್ಲಿ.

ಆಧಾರ: "ಶಾಲಿಶೀತಾಂಶು ವಿಶಿಖಗ್ರಹ ಲೋಚನಹಾಯನೇ, ಸಾಧಾರಣೇ ಧ್ವಜಸ್ತಂಭಃ ಸ್ಥಾಪಿತಃ ಶಂಕರಾಗ್ರತಃ." ಪ್ರತಿ ವರ್ಷವೂ ನಡೆಯುವ ಮಹಾರಥೋತ್ಸವದ ಕಾಲದಲ್ಲಿ ಇದರ ಮೇಲೆ ದೇವಸ್ಥಾನದ ಧ್ವಜವನ್ನು ಏರಿಸುತ್ತಾರೆ.

೧೦. ಆಸ್ಥಾನಮಂಟಪ (ಕಲ್ಲುಮಂಚ): ಸ್ಥಾಪನೆಯ ಕಾಲ ಶಕೆ ೧೫೫೦; ಇಸ್ವಿ: ೧೬೨೮. ಅರ್ಪಿಸಿದವರು– ಸೋದೆಯ ಶ್ರೀ ರಘುನಾಥ ನಾಯಕ. ಇದರ ಆಧಾರ: "ಶ್ರೀ ವರ್ಷೇ ವಿಭವೇ ಋತೌಚ ಶಿಶಿರೇ ಮಾಘಾಖ್ಯ ಮಾಸೇ ಸಿತೇ। ಪಕ್ಷೇ ಸಚ್ಚಿವರಾತ್ರಿ ಸೌಮ್ಯದಿವಸೇ ಸೋದಾ ರಘುಕ್ಷ್ಮಾಭೃತಾ। ಪರ್ಯಂಕೋಽಶ್ಮಮಯೋ ವಸಂತ ಕುತುಕಾಯಾಸ್ಥಾನಿಕೇ ಮಂಟಪೇ। ದತ್ತಃಶ್ರೀಮಧುಕೇಶ್ವರಾಯ ರುಚಿರಃ ಶ್ರೀಮಜ್ಜಯಂತೀಪುರೇ॥ ಇದು ಕಲ್ಲುಮಂಚದ ಮೇಲೆ ಕೊರೆದಿರುವಶ್ಲೋಕ.

ಚೈತ್ರ ಶುದ್ಧದಲ್ಲಿ ೯ ದಿನ ಸಾಗುವ ರಥೋತ್ಸವದ ಸಂದರ್ಭದಲ್ಲಿ ಪ್ರತಿದಿನ ರಥೋತ್ಸವ ಮುಗಿದೊಡನೆ ಉತ್ಸವ ಮೂರ್ತಿಗಳನ್ನು ರಥದಿಂದ ಬರಮಾಡಿಕೊಂಡು ಈ ಮಂಟಪದ ಮೇಲೆ ಇಟ್ಟು ಅಲಂಕರಿಸಿ, ಅಷ್ಟಾವಧಾನ ಸೇವೆ ಸಲ್ಲಿಸುವರು. ಈ ಮಂಟಪ (ಮಂಚ)ದ ನಾಲ್ಕು ಕಂಬಗಳು ಹಾಗೂ ಮೇಲ್ಛಾವಣಿಗಳಲ್ಲಿ ಚಿತ್ರಿಸಲಾದ ಶಿಲ್ಪಕಲಾ ನೈಪುಣ್ಯವು ಪ್ರೇಕ್ಷಕರನ್ನು ಮೂಕವಿಸ್ಮಿತರನ್ನಾಗಿಸುತ್ತದೆ: ಗಿಳಿಗಳು, ಸಿಂಹಗಳು, ವಿವಿಧ ಕೆತ್ತನೆಯ ಕೆಲಸಗಳು ಬೆರಗುಗೊಳಿಸುತ್ತವೆ.

೧೧. ಧುಂಡಿರಾಜ ಗಣಪತಿ: ಶ್ರೀ ಮಧುಕೇಶ್ವರದೇವರ ಗುಡಿಯನ್ನು ಸುತ್ತುವರಿದು ಹೋಗುವಾದ ಎಡಭಾಗದಲ್ಲಿ ಈ ಮೂರ್ತಿ ಕಾಣುತ್ತದೆ. ಇದು ಕಲಾ ವೈಶಿಷ್ಟ್ಯವುಳ್ಳ ದಿವ್ಯ ಭವ್ಯ ಮೂರ್ತಿ.

೧೨. ಬಸವಲಿಂಗೇಶ್ವರ ದೇವಾಲಯದ ಭಿತ್ತಿ ಚಿತ್ರ: ಇದನ್ನು ಸೋದೆಯ ಇಮ್ಮಡಿ ಸದಾಶಿವರಾಯನು ಕಟ್ಟಿಸಿದನೆಂದು ಶ್ಲೋಕವಿದೆ. ಶಕೆ ೧೬೭೫. ಇಸ್ವಿ: ೧೭೫೩. "ಸ್ವಸ್ತಿ ಶ್ರೀ ನೃಪಶಾಲಿವಾಹನ ಶಕೇ ಬಾಣಾದ್ರಿ ಋತ್ವಿಂದುಭೇ ಸಂಖ್ಯಾತೇಂಗಿರಸಾಽಶ್ವ ಶುಕ್ಲವಿಶದೇ ಸೋಮೇ ದ್ವಿತೀಯಾತಿಥೌ। ಚಂದ್ರರ್ಕ್ಷೇಽ ಹನಿಭೂಸುರಾಡ್ ಬಸವಲಿಂಗಾಧೀಶ್ವರ ಸ್ಥಾಪನಂ। ದ್ವೈಗುಣ್ಯಂ ಚ ಸದಾಶಿವ ಕ್ಷಿತಿಪತಿ: ಶ್ರೀಮಜ್ಜಯಂತೀ ಪುರೇ॥"

ಈ ದೇವಾಲಯದ ಗೋಡೆಯ ಹೊರಭಾಗದ ಮೇಲೆ ಚಿತ್ರಿಸಲಾದ ರಾಕ್ಷಸ ಸಂಹಾರದ ನೃತ್ಯ ಹಾಗೂ ಗೋಪೂಜಾ ಚಿತ್ರಕೃತಿಗಳು ಆಕರ್ಷಕವಾಗಿವೆ.

೧೩. ಶ್ರೀಮನ್ಮಹಾಸ್ಯಂದನ: ೧೦ ಅಡಿ ಎತ್ತರದ (ವ್ಯಾಸ)ದ ೪ ಗಾಲಿಗಳು, ಮಧ್ಯದಲ್ಲಿ ೮ ಅಡಿ ಎತ್ತರ (ವ್ಯಾಸ)ದ ೨ ಗಾಲಿಗಳು; ಒಟ್ಟು ೬ ಗಾಲಿಗಳನ್ನೊಳಗೊಂಡ ೨೦ ಅಡಿ ಉದ್ದಗಲ. ೨೨ ಅಡಿ ಎತ್ತರವುಳ್ಳ ಈ ಭವ್ಯರಥ ಅದ್ಭುತ ಮಾದರಿಯದಾಗಿದೆ. ಈ ರಥವನ್ನು ಸೋದೆಯ ರಾಮಚಂದ್ರರಾಜನು ಶ್ರೀ ಶಕೆ ೧೫೩೦, ಇಸ್ವಿ: ೧೬೦೮ರಲ್ಲಿ ಅರ್ಪಿಸಿದನೆಂದು ಉಲ್ಲೇಖವುಂಟು. "ಸ್ವಸ್ತಿ ಶ್ರೀ ಕೀಲಕಾಬ್ದೇ ಹ್ಯುದಗಯನ ಗತೇ ಭಾಸ್ಕರೇ ಶೈಶಿರರ್ತೌ ಮಾಘೇಮಾಸೇ ಮಘಾಯಾಂ ಭೃಗುಸುತದಿವಸೇ ಪೌರ್ಣಿಮಾಯಾಂ ರಥಾರ್ಯಂ।ಸರ್ವಾಲಂಕಾರ ಯುಕ್ತಂ

ಕನಕಪುರಪತೇರುತ್ಸವಾರ್ಥಂ ಪ್ರಸಿದ್ಧಂ ಸೋದಾ ಭೂನಾಯಕೇಂದ್ರಃ ಕ್ಷಿತಿಪತಿತಿಲಕೋ ದತ್ತವಾನ್ ರಾಮಚಂದ್ರಃ॥"

ಇದು ಸಂಪೂರ್ಣ (ಗಾಲಿ ಹಾಗೂ ಅಚ್ಚು ಬಿಟ್ಟು) ಚಂದನದ ಕಟ್ಟಿಗೆಯಿಂದ ರಚಿಸಿದ್ದಿದೆ. ಚೈತ್ರ ಶುದ್ಧದ ಮಘಾ ನಕ್ಷತ್ರದ ಶುಭ್ರ ಮುಹೂರ್ತದ ದಿನ ಈ ರಥೋತ್ಸವ ಸಾಗುತ್ತದೆ. ಈ ಮಹಾರಥವು ತೇರುಬೀದಿಯಲ್ಲಿ ಸಾಗುವ ಅಬ್ಬರ ನೋಡಿದರೆ ಮೈನವಿರೇಳುತ್ತದೆ, ಭಯಕಂಪಿತರಾಗುತ್ತೇವೆ. ರಾಜರ ಕಾಲದಲ್ಲಿ ಹಾಗೂ ಅನಂತರ ಎಷ್ಟೋ ಕಾಲಗಳ (೧೯೦೦ನೆಯ ಇಸ್ವಿಯ)ವರೆಗೆ ಶೃಂಗೇರಿ ಮಠದಿಂದ ಎರಡು ಆನೆಗಳನ್ನು ತರಿಸಿ ಈ ರಥವನ್ನು ಎಳೆಯಿಸುತ್ತಿದ್ದರಂತೆ.

೧೪. ರುದ್ರಪಾದ: "ವಾನವಾಸ್ಯಾಂ ರುದ್ರಪಾದೇ ಪಿಂಡಂ ದದ್ಯಾತ್ ಸಕೃಜ್ಜನಃ। ಕಲ್ಪಾಂತಂ ಪಿತೃಭಿಃ ಸಾಕಂ ಸ್ವರ್ಗಲೋಕೇ ಸ ಮೋದತೇ॥"

ಬನವಾಸಿಗೆ ಬಂದ ಭಕ್ತಜನರು ವರದಾನದಿಯಲ್ಲಿ ಮಿಂದು ಇದೇ ನದಿಯ ದಂಡೆಯ ಮೇಲೆ ಇರುವ ರುದ್ರಪಾದದಲ್ಲಿ ಪಿಂಡಪ್ರದಾನ ಮಾಡಿದರೆ ಅವರ ಪಿತೃಗಳು ಸ್ವರ್ಗಲೋಕ ಸೇರುತ್ತಾರೆ. ಈ ರುದ್ರಪಾದವು ಶ್ರೀ ಮಧುಕೇಶ್ವರ ದೇವಾಲಯದ ಸಮ್ಮುಖದಲ್ಲಿ ವರದಾನದಿಗೆ ಹೋದಾಗ ನಮ್ಮ ದೃಷ್ಟಿಪಥಕ್ಕೆ ಬೀಳುತ್ತದೆ. ಇದರ ಬದಿಯಲ್ಲೊಂದು ಈಶ್ವರಲಿಂಗವಿದೆ.

೧೫. ಆದಿಮಧುಕೇಶ್ವರ (ಆದಿಬನವಾಸಿ): ಇದು ಶ್ರೀ ಮಧುಕೇಶ್ವರ ದೇವಸ್ಥಾನದಿಂದ ದಕ್ಷಿಣ ದಿಕ್ಕಿಗೆ ಮೂರು ಫರ್ಲಾಂಗ್ ಅಂತರದ ಮೇಲೆ ನಿರ್ಮಿಸಲಾದ ಶಿಲಾಮಯ ದೇವಾಲಯ. ಇಲ್ಲಿ ಒಂದು ಈಶ್ವರದೇವರ ಗುಡಿ, ಹಾಗೂ ಬದಿಯಲ್ಲಿ ಪಾರ್ವತೀದೇವಿಯ ಗುಡಿ ಇವೆ. ವಿಶಾಲವಾದ ಬಯಲು ಪ್ರದೇಶದ ಮಧ್ಯದಲ್ಲಿ, ಮಾವಿನ ವನದ ನಡುವೆ ಈ ದೇವಾಲಯಗಳು ನೆಲೆಸಿವೆ. ಈ ಗುಡಿಗಳ ಎದುರಿಗೆ "ವಶಿಷ್ಠ ತೀರ್ಥ" ಎಂಬ ಕೆರೆ ಉಂಟು. ಈ ತೀರ್ಥದ ನೀರಿನಲ್ಲಿ ಮಿಂದು ಹಿಂದಿನವರು ಇಲ್ಲಿಯ ದೇವರ ಪೂಜೆ ಮಾಡಿ ಪುಣ್ಯಭಾಗಿಗಳಾಗುತ್ತಿದ್ದಿರಬೇಕು. ಮುಸಲ್ಮಾನರ ದಾಳಿಯ ಕಾಲದಲ್ಲಿ ಜಯಂತೀ (ಬನವಾಸಿ) ಕ್ಷೇತ್ರದ ದೇವಸ್ಥಾನವು ಇದೇ ಎಂದು ತೋರಿಸಿ ಕೋಟೆಯ ಒಳಗಿನ ದೇವಸ್ಥಾನವನ್ನು ರಕ್ಷಿಸುವ ಉಪಾಯ ಹೂಡಲು ಇದನ್ನು ನಿರ್ಮಿಸಲಾಗಿತ್ತೆಂದು ವದಂತಿ ಇದೆ.

ಪರಿಶಿಷ್ಟ ೧

ಬನವಾಸಿಯ ಈಗಿನ ಸ್ಥಿತಿ

ಬನವಾಸಿಯ ಈಗಿನ ಜನಸಂಖ್ಯೆ –೩೦೮೭.
ಭತ್ತದ ಕ್ಷೇತ್ರ: ಅಂದಾಜು ೫೦೦ ಎಕರೆ
ಉತ್ಪನ್ನ: ಪ್ರತಿ ಎಕರೆಗೆ ಸರಾಸರಿ ೧೦ ಕ್ವಿಂಟಲ್ ಭತ್ತ.
ಕೋಟೆಯ ಒಳಭಾಗ: ಸಾಮಾನ್ಯ ಉದ್ದ ೧೫೦೦ ಘೂಟು,
ಅಗಲ ೧೨೦೦ ಘೂಟು
೪.೧೩ ಚ. ಫರ್ಲಾಂಗುಗಳು (1 mile 5280 Ft.)

ಕೋಟೆಯ ಒಳಭಾಗದಲ್ಲಿ ಬ್ರಾಹ್ಮಣ, ಜೈನ, ಆರೇರ, ಕಬ್ಬೇರ ಜಾತಿಯವರ ಸಂಖ್ಯೆ ಹೆಚ್ಚಾಗಿದೆ. ಕೋಟೆಯ ಹೊರಭಾಗದಲ್ಲಿ ಲಿಂಗಾಯತ, ಮುಸಲ್ಮಾನ ಸಂಖ್ಯೆ ಹೆಚ್ಚಾಗಿದೆ. ಪಶ್ಚಿಮ ದಿಕ್ಕಿನ ಹೊರವಲಯದಲ್ಲಿ ಹರಿಜನರು, ಚರ್ಮಕಾರರು; ಇವರ ಕೇರಿಗಳು ಬೇರೆ ಬೇರೆ ಇವೆ.

ವರದಾನದಿಯು ಬನವಾಸಿಯ ಪಶ್ಚಿಮ, ದಕ್ಷಿಣ, ಪೂರ್ವದಿಕ್ಕುಗಳನ್ನು ಸುತ್ತುಗಟ್ಟಿ ಉತ್ತರಾಭಿಮುಖವಾಗಿ ಹರಿದಿದೆ.

ಬನವಾಸಿಯಲ್ಲಿ ಒಂದು ಕನ್ನಡ ಗಂಡುಮಕ್ಕಳ ಶೇತಕೀ ಶಾಲೆ, ಒಂದು ಹೆಣ್ಣುಮಕ್ಕಳ ಶಾಲೆ, ಒಂದು ಉರ್ದುಶಾಲೆ, ಹರಿಜನ ಮಕ್ಕಳಿಗಾಗಿ ಒಂದು ಶಾಲೆ, ಒಂದು ಇಂಗ್ಲಿಷ್ ಶಾಲೆ ಇದೆ. ಎಲ್ಲ ಶಾಲೆಗಳಲ್ಲಿ ಸೇರಿ ೮೦೦ಕ್ಕೆ ಮೇಲ್ಪಟ್ಟು ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಶತಮಾನೋತ್ಸವ ಆಚರಿಸಿದ ಶೇತಕಿ ಶಾಲೆಗೆ ೨ ಎಕರೆಯ ಹೊಲ ಇದೆ. ಇದರಿಂದ ಪ್ರತಿವರ್ಷ ಅಂದಾಜ ೮೦೦ ರೂ.ಗಳಿಂದ ೯೦೦ ರೂ.ಗಳ ವರೆಗೆ ಉತ್ಪನ್ನ ಬರುತ್ತದೆ. ಇದೇ ಶಾಲೆಯ ಕಾಯಿಪಲ್ಲೆ ಬೆಳೆಗಳಿಂದ ಪ್ರತಿವರ್ಷ ೧೫೦ ರೂ.ಗಳವರೆಗೆ ಉತ್ಪನ್ನ ಬರುತ್ತದೆ.

ಸಬ್ ಪೋಸ್ಟಾಫೀಸು ಹಾಗೂ ಹಿರಿದಾದ ಒಂದು ಆಸ್ಪತ್ರೆ ಇದೆ. ಸಾಗರ, ಶಿವಮೊಗ್ಗಾ ಭಾಗದ ಸಂಪರ್ಕ ಪಡೆಯಲು ವರದಾನದಿಗೆ ಸೇತುವೆ ನಿರ್ಮಾಣವಾಗುತ್ತಿದೆ. ಶಿವಮೊಗ್ಗಾದಿಂದ ಬನವಾಸಿಗೆ ಎರಡು ಖಾಸಗೀ ಕಂಪನಿಗಳ ಮೋಟಾರು ಓಡಾಡುತ್ತಿವೆ.

ಶಿರಸಿಯಿಂದ ಬನವಾಸಿಗೆ ಎಸ್.ಟಿ.ಕಂಪನಿಯ ಮೋಟಾರುಗಳು ಪ್ರತಿದಿನ ನಾಲ್ಕು ಸಾರೆ ಓಡಾಡುತ್ತವೆ.

ಜಾತಿವಾರು ಸಂಖ್ಯೆ ಹಾಗೂ ಸಂಪ್ರದಾಯ

ಬ್ರಾಹ್ಮಣ: ಅಂದಾಜು ಸಂಖ್ಯೆ ೩೫೦. ಇವರಲ್ಲಿ ಹವ್ಯಕ ಬ್ರಾಹ್ಮಣ, ಚಿತ್ತಪಾವನ ಬ್ರಾಹ್ಮಣ, ದೇಶಸ್ಥ ಬ್ರಾಹ್ಮಣ ಎಂದು ಭೇದಗಳಿವೆ. ಇವರೆಲ್ಲರೂ ಶ್ರೀಮಧುಕೇಶ್ವರ ದೇವರ ಅರ್ಚಕರು ಅಥವಾ ಉಪಾಧಿವಂತರು ಆಗಿದ್ದಾರೆ.

ಜೈನ: ಅಂದಾಜು ಸಂಖ್ಯೆ ೬೫. ದಿಗಂಬರ ಮತ್ತು ಶ್ವೇತಾಂಬರ ಪಂಥದವರು ವಾಸಿಸುತ್ತಿದ್ದರೂ ದಿಗಂಬರ ಜೈನರ ಸಂಖ್ಯೆ ಹೆಚ್ಚಾಗಿದೆ. ಇವರ ಒಂದು ಬಸದಿ ಇದೆ. ಇದು ಯಾವಾಗ ಕಟ್ಟಲ್ಪಟ್ಟಿದೆ ಎಂಬುದರ ಬಗ್ಗೆ ಯಾವ ಆಧಾರವೂ ಇಲ್ಲ ಬಸದಿಯ ಹೊರವಲಯದಲ್ಲಿರುವ ಭಿನ್ನವಾದ ಜಿನಮೂರ್ತಿ ಹಾಗೂ ಪಾಣಿಪೀಠಗಳನ್ನು ನೋಡಿದರೆ ಈ ಬಸದಿ ಮುಸ್ಲಿಮರ ಆಳಿಕೆಯ ಕಾಲದ ಮುಂಚೆ ಅಂದರೆ ಸುಮಾರು ಕ್ರಿ.ಶ ೬೦೦–೭೦೦ರ ಸುಮಾರಿಗೆ ಅಸ್ತಿತ್ವದಲ್ಲಿತ್ತೆಂದು ಊಹಿಸಬಹುದು. ಈ ಬಸದಿಯಲ್ಲಿ ೮ನೆಯ ತೀರ್ಥಂಕರರಾದ ಚಂದ್ರಪ್ರಭ ದೇವರ ಸಂಗಮರಿ ಶಿಲೆಯ ಒಂದಡಿ ಎತ್ತರದ ಮೂರ್ತಿ ಇದೆ. ೧ನೆಯ ತೀರ್ಥಂಕರರಾದ ಋಷಭದೇವರ ಕರಿಶಿಲೆಯ, ಸುಮಾರು ನಾಲ್ಕು ಅಡಿ ಎತ್ತರದ, ಕಾರ್ಯೋತ್ಸರ್ಗದಲ್ಲಿದ್ದ ಮೂರ್ತಿ ಇದೆ; ಪಾರ್ಶ್ವನಾಥ ದೇವರ ಯಕ್ಷಿಣಿಯಾದ ಪದ್ಮಾವತೀ ದೇವಿಯ ಕಂಚಿನ ಮೂರ್ತಿ ಇದೆ. ಈ ಪದ್ಮಾವತೀ ದೇವಿಗೆ ನವರಾತ್ರಿಯಲ್ಲಿ ವಿಶೇಷ ಪೂಜೆ ನಡೆಯುವದು.

ಬಸದಿಯಲ್ಲಿ ದಿನವೂ ಪೂಜೆ ನಡೆಯುತ್ತದೆ. ಈ ಬಸದಿಗೆ ಸರಕಾರದಿಂದ ಯಾವುದೇ ಸಹಾಯಧನ ದೊರೆಯುವುದಿಲ್ಲ. ಬಸದಿಯ ದೀಪದ ವ್ಯವಸ್ಥೆಗಾಗಿ ಭಕ್ತರಿಬ್ಬರು ಎರಡು ಹೊಲಗಳನ್ನು ದಾನವಾಗಿ ಸಲ್ಲಿಸಿದ್ದಾರೆ. ಈ ಬಸದಿಯ ಅರ್ಚಕರಾದ ಶ್ರೀ ಉಪಾಧ್ಯರು ಯಾವ ಸಾಮಾಜಿಕ ನಿರ್ಬಂಧಕ್ಕೂ ಒಳಗಾಗಿರುವುದಿಲ್ಲ; ಸ್ವಸಂತೋಷದಿಂದ ಬಸದಿಯ ದೇವತಾಕಾರ್ಯ ಹಾಗೂ ಇತರ ಸೇವಾಕಾರ್ಯ ಮಾಡುತ್ತಿದ್ದಾರೆ.

ಬಸದಿಯಲ್ಲಿ ನಡೆಯುವ ವಿಶೇಷೋತ್ಸವಗಳು

ಚೈತ್ರಶುದ್ಧ ತ್ರಯೋದಶಿ–	ಮಹಾವೀರಸ್ವಾಮಿಯ ಜನ್ಮದಿನೋತ್ಸವ.
ಜ್ಯೇಷ್ಠಶುದ್ಧ ಪಂಚಮಿ–	ಇದಕ್ಕೆ ಶ್ರುತಪಂಚಮಿ ಅನ್ನುವರು. ಜೈನರ ಸಿದ್ಧಾಂತ ಗ್ರಂಥಗಳ ಪೂಜೆ.

ಆಷಾಢಶುದ್ಧ ಅಷ್ಟಮಿಯಿಂದ ಹುಣ್ಣಿಮೆ ವರೆಗೆ ಕಾರ್ತಿಕಶುದ್ಧ ಅಷ್ಟಮಿಯಿಂದ ಹುಣ್ಣಿಮೆ ವರೆಗೆ ಫಾಲ್ಗುಣ ಶುದ್ಧ ಅಷ್ಟಮಿ ಯಿಂದ ಹುಣ್ಣಿಮೆ ವರೆಗೆ	–ಈ ಮಾಸಗಳ ಈ ಎಂಟು ದಿನಗಳಲ್ಲಿ ಅಷ್ಟಾಹ್ನಿಕವ್ರತವೆಂದು ಆಚರಿಸುವರು. ನಂದೀಶ್ವರ ದ್ವೀಪಗಳನ್ನು ರಚಿಸಿ ವ್ರತಪೂರ್ವಕ ಪೂಜಾದಿಗಳನ್ನು ಮಾಡುವರು. ವಿಶೇಷ ನೋಂಪಿಗಳನ್ನು ತೊಡುವರು.
ಭಾದ್ರಪದ ಶುದ್ಧ ಚತುರ್ಥಿ–ಯಿಂದ ಚತುರ್ದಶಿ.	ಈಹತ್ತುದಿನಗಳಲ್ಲಿ "ದಶಲಕ್ಷಣಪರ್ವ"ವೆಂದು ಪೂಜಾಭಿಷೇಕ, ವ್ರತಪಾಲನೆ ನಡೆಸುವರು. ಈ ವ್ರತದ ಭಿನ್ನರೂಪಗಳು–೧) ಉತ್ತಮ ಕ್ಷಮಾ ೨) ಉತ್ತಮ ಮಾರ್ದವ ೩) ಉತ್ತಮ ಆರ್ಜವ ೪) ಉತ್ತಮ ಸತ್ಯ ೫) ಉತ್ತಮ ಶೌಚ ೬) ಉತ್ತಮ ಸಂಯಮ ೭) ಉತ್ತಮ ತಪ ೮) ಉತ್ತಮ ತ್ಯಾಗ ೯) ಉತ್ತಮ ಅಪರಿಗ್ರಹ ೧೦) ಉತ್ತಮ ಬ್ರಹ್ಮಚರ್ಯೆ.
ಆಶ್ವೀಜಶುದ್ಧ ಪಾಡ್ಯದಿಂದ – ದಶಮಿಯ ವರೆಗೆ	ಪದ್ಮಾವತೀ ದೇವಿಯ ವೈಭವದ ಪೂಜೆ ಹಾಗೂ ದಶಮಿಯ ದಿನ ಭರತ ಚಕ್ರೇಶನ ದಿಗ್ವಿಜಯದ ಬಗ್ಗೆ ವಿಶೇಷ ಉತ್ಸವ.
ಆಶ್ವೀಜ ಬಹುಳ ಚತುರ್ದಶಿ–	ಮಹಾವೀರಸ್ವಾಮಿಯ ನಿರ್ವಾಣದ ದಿನ. ಬಸದಿಗಳಲ್ಲಿ ದೀಪೋತ್ಸವ ಮೋಕ್ಷ ಲಕ್ಷ್ಮಿಯ ಪೂಜೆ.
ಮಾಘ ಬಹುಳ ಚತುರ್ದಶಿ–	ಋಷಭ ದೇವರ ಪುಣ್ಯತಿಥಿ ಆಚರಣೆ.

ಆರೇರು: ಇವರ ಅಂದಾಜು ಸಂಖ್ಯೆ: ೨೦೦, ಇವರಲ್ಲಿ ಕೆಲವು ಮನೆತನಗಳವರು ಶ್ರೀಮಧುಕೇಶ್ವರ ದೇವರ ಉತ್ಸವದಲ್ಲಿ ಪಲ್ಲಕ್ಕಿ ಹೊರುವ ಬೋಯಿ ಕೆಲಸ ಹಾಗೂ ರಥಗಳ ನೆಲೆ (ಅಂತಸ್ತು) ಕಟ್ಟುವ ಕೆಲಸ ಮಾಡುವರು.

ಲಿಂಗಾಯತರು: ಇವರ ಅಂದಾಜು ಸಂಖ್ಯೆ: ೩೫೦. ಈ ಸಮಾಜದ ಎರಡು ದೇವಸ್ಥಾನಗಳಿವೆ. ೧) ಶ್ರೀ ಪ್ರಭುದೇವರ ಗುಡಿ. ೨) ಶ್ರೀ ಬಸವೇಶ್ವರ ಗುಡಿ. ಶ್ರೀ ಪ್ರಭುದೇವರ ಗುಡಿಯು ಶಿಲೆಯಿಂದ ಹಾಗೂ ಶ್ರೀ ಬಸವೇಶ್ವರ ಗುಡಿಯು ಈಗಿತ್ತಲಾಗಿ

ಆಧುನಿಕ ರೀತಿಯಂತೆ ಕಟ್ಟಲ್ಪಟ್ಟಿದೆ. ಇವೆರಡೂ ಗುಡಿಗಳ ನಿರ್ಮಾಣದ ಕಾಲಾವಧಿ ಬಹುಶಃ ೧೨–೧೩ನೆಯ ಶತಮಾನವಿರಬೇಕೆಂದು ತರ್ಕಿಸಲಾಗಿದೆ. ಶ್ರೀ ಬಸವೇಶ್ವರ ದೇವರ ಗುಡಿಗೆ ಸರಕಾರದಿಂದ ೬ ರೂ. ತಸ್ತೀಕು ಸಿಗುತ್ತದೆ. ಪ್ರತಿವರ್ಷ ಕಾರ್ತಿಕಮಾಸದ ಶುಕ್ಲ ಪಕ್ಷದಲ್ಲಿ ಶ್ರೀ ಬಸವೇಶ್ವರ ದೇವರ ರಥೋತ್ಸವವು ವಿಜೃಂಭಣೆಯಿಂದ ಸಾಗುತ್ತಿತ್ತಂತೆ. ಈ ರಥೋತ್ಸವ ಈಗ ಸಾಗುವದಿಲ್ಲ. ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಸಮಾಜದವರು ನಿಯಮಿಸಿಕೊಂಡ ಒಬ್ಬ ಪೂಜಾರಿಗಳಿದ್ದಾರೆ. ಶ್ರೀ ಪ್ರಭುದೇವರ ಗುಡಿಯಲ್ಲಿ ನಿತ್ಯದಲ್ಲಿ ನಿಶ್ಚಿತವಾದ ಪೂಜೆ ನಡೆಯುತ್ತಿಲ್ಲ.

ಈ ಸಮಾಜದ ೮ ಮಠಗಳಿದ್ದವೆಂದು ತಿಳಿದುಬರುತ್ತದೆ. ೧) ಹೊಳೆ–ಮಠ (ವಿರಕ್ತಮಠ) ೨) ನಗಾರಿಮಠ (ವಿರಕ್ತಮಠ) ೩) ಗುಡ್ಡಾಪುರಮಠ (ಪಟ್ಟದಮಠ) ೪) ಹಿರೇಮಠ ೫) ಚಿಕ್ಕಮಠ ೬) ಚೌಕಿಮಠ ೭) ಹಾಲಮಠ ೮) ತವರೀಮಠ. ಇವುಗಳಲ್ಲಿ ಹೊಳೆಮಠ, ಹಿರೇಮಠ, ಚಿಕ್ಕಮಠ, ಚೌಕೀಮಠ, ಹಾಲಮಠ ಇವು ಅಸ್ತಿತ್ವದಲ್ಲಿ ಇವೆ. ಹೊಳೆಮಠದಲ್ಲಿ ಈಗಲೂ ವಿರಕ್ತ ಸ್ವಾಮಿಗಳಿರುತ್ತಾರೆ.

ಈ ಮಠದಲ್ಲಿ ಈಗಲೂ ಬಸವಜಯಂತಿ, ಹಾಗೂ ಶಿವಾನುಭವ ಕಾರ್ಯಕ್ರಮಗಳು ಪ್ರತಿವರ್ಷ ನಡೆಯುತ್ತವೆ. ಶ್ರೀ ಮಧುಕೇಶ್ವರ ದೇವರ ರಥೋತ್ಸವ ಕಾಲದಲ್ಲಿ ಶ್ರೀ ಮಧುಕೇಶ್ವರ ದೇವಸ್ಥಾನದಿಂದ ಹೊಳೆಮಠ, ನಗಾರಿಮಠ, ಗುಡ್ನಾಪುರ ಮಠಗಳಿಗೆ ಸೀದಾ ಕಳಿಸಿ ಮರ್ಯಾದೆ ಸಲ್ಲಿಸುವ ಪದ್ಧತಿ ಇತ್ತೆಂದು ತಿಳಿದುಬರುತ್ತದೆ.

ಲಿಂಗಾಯತ ಜನರಲ್ಲಿ ವ್ಯಾಪಾರಸ್ಥರೇ ಹೆಚ್ಚು ಇದ್ದಾರೆ. ಮೂರು ಅಕ್ಕಿಯ ಗಿರಣಿಗಳು ಲಿಂಗಾಯತ ಸಮಾಜದ ಜನರಿಂದ ನಡೆಯುತ್ತಿವೆ. ಈ ಸಮಾಜದವರ ಪೈಕಿ ಒಬ್ಬರಾದ ಶ್ರೀ ಚನ್ನಪ್ಪ ಮುಳಗುಂದ ಇವರು ದಾವಣಗೇರಿಯಲ್ಲಿ "ಮುಳಗುಂದ ಇಂಡಸ್ಟ್ರೀಜ" ಎಂಬ ಫ್ಯಾಕ್ಟರಿ ಸ್ಥಾಪಿಸಿ ಔದ್ಯಮಿಕ ಪಥದಲ್ಲಿ ಮುಂದೆಸಾಗಿದ್ದಾರೆ.

ಮುಸಲ್ಮಾನರು: ಇವರ ಅಂದಾಜು ಸಂಖ್ಯೆ ೫೦೦. ಇಲ್ಲಿಯ ಮುಸ್ಲಿಂ ಜನರಲ್ಲಿ ಬಹಳಷ್ಟು ಜನರು ಬಡವರಿದ್ದಾರೆ. ಕೂಲಿಕಂಬಳಿಯೇ ಇವರ ಚರಿತಾರ್ಥದ ಸಾಧನವಾಗಿದೆ. ೫–೬ ಕುಟುಂಬಗಳು ಮಾತ್ರ ಅನುಕೂಲ ಸ್ಥಿತಿಯುಳ್ಳವಾಗಿವೆ.

ಧಾರ್ಮಿಕರೀತಿಯಿಂದ ಇವರಲ್ಲಿ ಮೊದಲು ಕೇವಲ ಒಂದೇ ಒಂದು ಪಂಗಡ "ಹನ್ನಫೀ" ಹೆಸರಿನದು ಇತ್ತು. ಇವರಿಗಾಗಿ ಒಂದು ಹಳೆಯ ಮಸೀದೆ ಇದ್ದು ಸರಕಾರದಿಂದ ಅದಕ್ಕೆ ೩೬ರೂ. ತಸ್ತೀಕು ಸಿಗುತ್ತದೆ. ಈ ಪಂಗಡಕ್ಕೆ ಖಾಜೀಪಂಗಡ ಎನ್ನುತ್ತಾರೆ.

ಕಳೆದ ೬೦ ವರ್ಷಗಳಿಂದ ಇಲ್ಲಿ ಮತ್ತೊಂದು ಪಂಗಡ ತಲೆಯೆತ್ತಿದೆ. ಸಮೀಪದ ಶಿರಸಿಯಲ್ಲಿ ಆದ ಧಾರ್ಮಿಕ ಕ್ರಾಂತಿಯ ಕಾರಣದಿಂದ ಇಲ್ಲಿ "ಅಹಲೆ–ಹದೀಸ" ಎಂಬ ಹೊಸಪಂಗಡ ಸ್ಥಾಪಿತವಾಯಿತು. ಇವರದೂ ಒಂದು ಮಸೀದೆ ಇದೆ. ಈ ಪಂಗಡದವರ

ಸಂಖ್ಯೆ ಕಡಿಮೆಯಿದ್ದರೂ ಸುಸ್ಥಿತಿಯಲ್ಲಿದ್ದಾರೆ. ಇವರು ಮೊಹರಮ್ ಪಂಜಾಮೂರ್ತಿಗಳಲ್ಲಿ ವಿಶ್ವಾಸವಿಡುವುದಿಲ್ಲ. ಸಮಾಧಿಗಳಿಗೆ ಹರಕೆ ಸಲ್ಲಿಸುವುದಿಲ್ಲ. ಈ ಪಂಗಡಕ್ಕೆ "ಮೌಲವೀಪಂಗಡ" ಎನ್ನುತ್ತಾರೆ.

ಈ ಎರಡೂ ಪಂಗಡಗಳಲ್ಲಿ ಹೆಣ್ಣುಗಂಡಿನ ಸಂಬಂಧ, ಊಟೋಪಚಾರಗಳು ನಡೆಯುತ್ತವೆ. ದೇವರ ಪ್ರಾರ್ಥನೆಯ ವಿಷಯದಲ್ಲಿ ಮಾತ್ರ ಬೇರೆ ಬೇರೆ ಪಂಗಡಗಳಾಗಿವೆ. ಶೈಕ್ಷಣಿಕ ದೃಷ್ಟಿಯಿಂದ ಈ ಜನರು ಹಿಂದುಳಿದಿದ್ದಾರೆ. ಒಂದು ಪೂರ್ಣ ಪ್ರಾಥಮಿಕ ಉರ್ದುಶಾಲೆ ಇದ್ದರೂ ಮೇಲಿನ ವರ್ಗದಲ್ಲಿ ಮಕ್ಕಳು ಕಡಿಮೆ.

ಹನ್ನಫೀ ಪಂಗಡದವರು ಮಾತ್ರ ಮೊಹರಮ್ ಮತ್ತು ಈದಮಿಲಾದ ಹಬ್ಬ ಆಚರಿಸುವರು.

ಹಲ್ಮಿಡಿಶಾಸನ

ಜಯತಿ ಶ್ರೀ ಪರಿಷ್ವಂಗ ಶಾರ್ಙ್ಗ (ಮ್ಯಾನತಿ) ರಚ್ಯುತಃ।
ದಾನವಾಕ್ಷ್ಣೋರ್ಯುಗಾಂತಾಗ್ನಿಃ (ಶಿಷ್ಯಾನಾಂತು) ಸುದರ್ಶನಃ॥

ನಮಃ ಶ್ರೀಮತ್ಕದಂಬಪನ್ತ್ಯಾಗಸೇಪನ್ನನ್ಕಲಭೋರ (ನಾ) ಅರಿಕಕುತ್ಸ್ಥ ಭಟ್ಟಾರಾನಾಳೆ ನರಿದಾವಿ (ಳೆ) ನಾಡುಳ್ ಮೃಗೇಶ ನಾಗೇಂದ್ರಾಭೀತಿ ಭರ್ಟಹರಪ್ಪೊರ್ ಶ್ರೀಮೃಗೇಶನಾಹ್ವಯರಿರ್ವರಾ ಬಟರಿ ಗುಲಾಮಲವ್ಯೋಮತಾರಾಧಿನಾಥನ್ನಳಪಗಣ ಪಶುಪತಿಯ ದಕ್ಷಿಣಾ ಪಥ ಬಹುಶತಹವನಾಹವದು (ಶ್) ಪಶುಪ್ರಧಾನ ಶೌರ್ಯೋದ್ಯಮ ಭ'ರಿತೋ (ನ್ದಾನ) ಪಶುಪತಿಯೆಂದು ಪೊಗಳೆ ಪೊಟ್ಟಣ ಪಶುಪತಿನಾಮಧೇಯನಾಸರಕ್ಕೆಲ್ಲ ಭಟರಿಯಾ ಪ್ರೇವಾಲಯ ಸುತನ್ಗೆ ಸೇಂದ್ರಕಬಗೋಭಯ ದೇಶದಾವೀರಾ ಪುರುಷಸಮಕ್ಷದೆಕೇಶಯಪಲ್ಲವರಂತಾದಿಂದು ಪೆತ್ತಜಯನಾ ವಿಜರಸನ್ಗೆ ಬಾಳ್ಗಳ್ಚಿ ಪುಲ್ಮಡಿಉಂ ಮೂಳಿವಳ್ಳಿ ಉಂಕೊಟ್ಟಾರ್ ಬಟವಿಕುಲದೊನಳ ಕದಂಬನ್ ಶಳ್ದೋನ್ ಮಹಾಪಾತಕನ್ ಇರ್ವರು ಸಳ್ಬಂಗದರ್ ವಿಜಾರಸರು ಪಲ್ಮಡಿಗೆ ಕುರಿಂಬಿಡಿವಿಟ್ಟರ್ ಅದಾನಳಿವೊನ್ ಮಹಾಪಾತಕಂ ಸ್ವಸ್ತಿ ಭಟ್ಟರ್ಗಿಗಳ್ದೆ ಒಡ್ಡಲಿ ಆಪತ್ತೊಂದಿ ವಿಟ್ಟಾರಕರ

ಪರಿಶಿಷ್ಟ ೨

ರಘು–ಕಾಕುತ್ಸ್ಥರ ಕಾಲ

ಭಟಾರಿ ಕಾಕುತ್ಸ್ಥವರ್ಮ ಆಳುಪನ ಪಲಮಾಡಿ (ಹಲ್ಮಿಡಿ) ಶಾಸನದ[೧] ಕಾಲವನ್ನು ಕ್ರಿ.ಶ ೪೨೦ ಅಥವಾ ೪೫೦ ಎಂದು ವಿದ್ವಾಂಸರು ನಿಶ್ಚಯಿಸಿದ್ದಾರೆ. ಅದರಲ್ಲಿ ಪಶುಪತಿ ಆಳುಪ ಅರಸನು ಕದಂಬ ಕಾಕುತ್ಸ್ಥನ ಅಳಿಯನೆಂದೂ, ಅವನು ಭಟಾರಿ ಕಾಕುತ್ಸ್ಥ ಆಳುಪನ ತಂದೆಯೆಂದೂ ತಿಳಿದುಬರುವುದೆಂಬುದು ಡಾ. ಶ್ರೀಕಂಠ ಶಾಸ್ತ್ರಿಗಳ ಅಭಿಪ್ರಾಯ. ಅಂದರೆ ಕದಂಬ ಕಾಕುತ್ಸ್ಥನ ಒಬ್ಬಳು ಮಗಳನ್ನು ಸುಮಾರು ಕ್ರಿ.ಶ ೪೨೦ರ ಹೊತ್ತಿಗೆ ಆಳ್ವಖೇಡದ ಆಳ್ವ (ಆಲುಪ) ಪಶುಪತಿಗೆ ಮದುವೆ ಮಾಡಿಕೊಟ್ಟದ್ದು ಸ್ಪಷ್ಟವಾಗುತ್ತದೆ.

೨ನೆಯ ಚಂದ್ರಗುಪ್ತನ ಆಳಿಕೆ ಮುಗಿದದ್ದು ಕ್ರಿ.ಶ ೪೧೩ ಅಥವಾ ೪೧೫ರಲ್ಲಿ. ಅವನ ಮಗ ಕುಮಾರಗುಪ್ತನ ಆಳಿಕೆ ಕ್ರಿ.ಶ ೪೧೫ರಿಂದ ೪೫೫ರವರೆಗೆ. ಕ್ರಿ.ಶ ೪೫೦ರ ತಾಳಗುಂದ ಶಾಸನವು ತಂದೆ ತೀರಿ ತಾನು ಪಟ್ಟಕ್ಕೆ ಬಂದಕೂಡಲೇ ಶಾಂತಿವರ್ಮ ಕದಂಬ ಬರೆಯಿಸಿದ್ದಾಗಿರಬೇಕು. ಅದುದರಿಂದ ಬಹು ಜನ ವಿದ್ವಾಂಸರು ಕಾಕುತ್ಸ್ಥನ ಆಳಿಕೆ ಮುಗಿದು ಅವನ ಮಗ ಶಾಂತಿವರ್ಮ ಪಟ್ಟಕ್ಕೆ ಬಂದದ್ದು ಕ್ರಿ.ಶ ೪೫೦ರಲ್ಲೆಂದು ನಿರ್ಣಯಿಸಿದ್ದಾರೆ. ಅವನ ಅಣ್ಣ ರಘುವಿನ ಕಾಲದಲ್ಲಿ ಅವನು ಯುವರಾಜನಾಗಿದ್ದುದು ಸ್ಪಷ್ಟವೆಂದು ಮೋರಿಸ್ ಒಪ್ಪಿದ್ದಾರೆ. ಆದುದರಿಂದ ಸ್ವಲ್ಪ ಹೆಚ್ಚು ಕಡಿಮೆ ಸಮವಯಸ್ಕರಾಗಿರಬಹುದಾದ ೨ನೆಯ ಚಂದ್ರಗುಪ್ತ ಮತ್ತು ರಘುವರ್ಮ ಕದಂಬರ ನಡುವೆ ರಾಯಭಾರ ಸಂಬಂಧ ಉಂಟಾಗಿರಬೇಕೆಂದು ನಮಗೆ ತೋರುತ್ತದೆ. ಇದರ ಫಲವಾಗಿ ಮಕ್ಕಳಿಲ್ಲದ ರಘುವು ತನ್ನ ತಮ್ಮ ಕಾಕುತ್ಸ್ಥವರ್ಮನ ಮೊದಲನೆಯ ಮಗಳನ್ನು ೨ನೆಯ ಚಂದ್ರಗುಪ್ತನ ಮಗನಾದ ಕುಮಾರಗುಪ್ತನ ಕಿರಿಯ ರಾಣಿಯನ್ನಾಗಿ ಮದುವೆ ಮಾಡಿಕೊಟ್ಟಿರಬಹುದು. ರಘುವಿನ (ಗುಪ್ತಾಧಿಕವಲ್ಲದಿದ್ದರೆ) ಗುಪ್ತಸಮ ವೈಭವ, ಸಂಸ್ಕೃತಿಗಳನ್ನು ಕಂಡೇ ಏನೋ ರಾಯಭಾರಿಯೂ ಕುಂತಲೇಶರ ದೌತ್ಯದ

---

೧. S.K.H.P.20 ಒಂದು ವೇಳೆ ಈ ಶಾಸನವು ಡಾ. ಸಾಲೆತ್ತೊರೆಯವರು (A.K.,P.251) ಅಭಿಪ್ರಾಯಪಟ್ಟಿರುವಂತೆ ಭಟಾರಿಕುಲ ಕದಂಬ (ಕಾಕುತ್ಸ್ಥ) ನದೇ ಆದರೂ ನಮ್ಮ ಸಿದ್ಧಾಂತವನ್ನದು ಖಂಡಿಸದು.

ಕರ್ತನೂ ಆದ ಕಾವ್ಯಕಾರ ಕಾಳಿದಾಸನು ರಾಮ ವಂಶದ ಹಿರಿಯರಲ್ಲಿ ಉಳಿದ ಯಾರ ಹೆಸರನ್ನೂ ಆಯ್ದುಕೊಳ್ಳದೆ, ರಘುವಿನ ಹೆಸರನ್ನು ಆಯ್ದುಕೊಂಡು ತನ್ನ ಕಾವ್ಯನಾಮವನ್ನಾಗಿ ಮಾಡಿಕೊಂಡಿರಬಹುದು.

ಮೊರಿಸ್ ಹೇಳುವಂತೆ ಕುಮಾರಗುಪ್ತನ ಮಗನಾದ ಸ್ಕಂದಗುಪ್ತನು ಕಾಕುತ್ಸ್ಥ ಕದಂಬನ ಅಳಿಯನಾಗಿದ್ದರೆ ೨ನೆಯ ಚಂದ್ರಗುಪ್ತನ ರಾಯಭಾರ ನಿರರ್ಥಕವಾಗುತ್ತದೆ. ಏಕೆಂದರೆ ಮೊಮ್ಮಗನ ಮದುವೆಯನ್ನು ೨ನೆಯ ಚಂದ್ರಗುಪ್ತನು ನೋಡಿ ಸತ್ತದ್ದು ಅಸಂಭವವಾಗುತ್ತದೆ. ಕಾಕುತ್ಸ್ಥನ ಮಗಳಿಗೂ ಕುಮಾರ ಗುಪ್ತನಿಗೂ ವಯಸ್ಸಿನ ಅಂತರ ಅಧಿಕವಾಗುವುದಲ್ಲಾ ಎಂದು ಮೊರಿಸ್ ಹೇಳುವುದು ಗಣ್ಯ ಆಕ್ಷೇಪವಲ್ಲ. ದಶರಥ–ಕೈಕೇಯಿ ಮತ್ತು ಅಗ್ನಿಮಿತ್ರ ಮಾಳವಿಕೆಯರಂಥ ರಾಜದಂಪತಿಗಳಾಗಿ ಹೋದ ಮಹಾಭಾರತೇತಿಹಾಸದಲ್ಲಿ ವಯಸ್ಸಿನ ಅಂತರವು ಶ್ರೀಮಂತರ ಮದುವೆಗೆ ಮಹಾವಿಘ್ನವಾದೀತೇ? ಅಲ್ಲದೆ, ಕಾಕುತ್ಸ್ಥನ ಇಬ್ಬರು ಮಕ್ಕಳ ಮದುವೆಯ ಕಾಲಗಳ ಅಂತರ ೩೦ ವರ್ಷಗಳೆಂಬ ಅಸಂಭಾವ್ಯತೆಯನ್ನು ಸ್ವೀಕರಿಸುವ ದುರವಸ್ಥೆಯನ್ನು ಮೊರಿಸ್ ತಂದುಕೊಂಡದ್ದು ಕಾಕುತ್ಸ್ಥನ ಅಳಿಯ ಸ್ಕಂದಗುಪ್ತನೆಂದು ಹೇಳಹೋಗಿ. "Kings married young and had many wives'' -ರಾಜರು ಚಿಕ್ಕವಯಸ್ಸಿನಲ್ಲೇ ಮದುವೆಯಾಗುತ್ತಾರೆ ಮತ್ತು ಅವರಿಗೆ ಬಹಳ ರಾಣಿಯರಿರುತ್ತಿದ್ದರು" ಎಂದು ಅವನ ಮಾತು ಕುಮಾರಗುಪ್ತನು ಕಾಕುತ್ಸ್ಥ ಕದಂಬನ ಅಳಿಯನಾದುದನ್ನು ಸಮರ್ಥಿಸಬಲ್ಲುದಾಗಿದೆ.

ವಾಕಾಟಕರ ೨ನೆಯ ಪ್ರವರಸೇನನು ಕ್ರಿ.ಶ ೩೯೫ರಿಂದ ೪೨೦ರವರೆಗೆ ರಾಜ್ಯಭಾರ ಮಾಡಿದನು. ಅವನ ಮಗ ನರೇಂದ್ರಸೇನ ರಾಜ್ಯಭಾರ ಮಾಡಿದಂತಿಲ್ಲ; ಮೊಮ್ಮಗ ಪೃಥ್ವೀಸೇನನು ಕ್ರಿ.ಶ ೪೨೦ರಲ್ಲಿ ಪಟ್ಟಕ್ಕೆ ಬಂದ. ನರೇಂದ್ರ ಸೇನನ ರಾಣಿಯು ಕುಂತಳದ ಅಜಿತ ಭಟ್ಟಾರಿಕೆಯೆಂದು ಪ್ರಸಿದ್ಧವಾಗಿರುವುದರಿಂದ ಅವಳು ಕಾಕುತ್ಸ್ಥ ಕದಂಬೇಶ್ವರನ ಮಗಳಾಗಿರಬೇಕೆಂಬುದು ಅತ್ಯಂತ ಸಂಭವ. ಸಾರ್ವಭೌಮ ರಘುವು ದೊಡ್ಡ ವಿದ್ವಾಂಸನಾಗಿದ್ದನು. ಅಂಥವನ ತರಬೇತಿಯಲ್ಲಿ ಬೆಳೆದ (ತಮ್ಮನ) ಮಗಳು ಭಟ್ಟಾರಿಕೆಯೆನ್ನಿಸಿಕೊಳ್ಳುವುದು ಸಹಜ. ಡಾ. ಡಿ.ಸಿ. ಸರ್ಕಾರರು ಭರತ ಚರಿತಕಾರನು ಸೇತುಬಂಧ ಕಾವ್ಯದ ಕರ್ತನು ಕುಂತಲೇಶನೆಂದಿರುವುದನ್ನು ಗಮನಿಸಿದರೆ ರಘುಮಹಾರಾಜನೇ ಆ ಕುಂತಲೇಶನೆಂದೂ ಊಹಿಸಬಹುದಾಗಿದೆ. ೨ನೆಯ ಪ್ರವರಸೇನ ವಾಕಾಟಕನೂ ಸಾರ್ವಭೌಮ ರಘುವೂ ಸಮಕಾಲೀನರಾಗಿರುವುದು ಈ ಯೆಲ್ಲ ಸಂಗತಿಗಳಿಗೆ ಹೊಂದುವಂಥದಾಗಿದೆ.

ಮೇಲೆ ಹೇಳಿದ ಸಂಗತಿಗಳಿಂದ ಕದಂಬ ಚಕ್ರವರ್ತಿ ರಘು ಕ್ರಿ.ಶ ೪೦೦ರಿಂದ ೪೨೫ರವರೆಗೂ ಅವನ ತಮ್ಮ ಕಾಕುತ್ಸ್ಥನು ಕ್ರಿ.ಶ ೪೨೫ರಿಂದ ೪೫೦ರವರೆಗೂ ಆಳಿರಬಹುದೆಂದು ವಿದ್ವಾಂಸರು (Cambridge shorter History of India) ನಿಗಮಿಸಿದುದು ಗ್ರಾಹ್ಯವೆಂದು ನಮ್ಮ ಮತ.

ಪರಿಶಿಷ್ಟ ೩

ಕದಂಬಯುಗದ ಊರುಗಳು

ಪ್ರಾಚೀನ ಕದಂಬ–ಕಾಲೀನ ಜನರಿಗೆ (ಕುಂತಳ ಕರ್ಣಾಟಕೀಯರಿಗೆ) ವೆಂಗಿ, ಕಳಿಂಗ, ವಂಗ, ಮಗಧ, ಆಂಧ್ರ, ಕಾಶ್ಮೀರ, ಲಾಂಗಲ, ನೇಪಾಳ, ವರಲ, ಮಾಲವ, ಮಹಾರಾಷ್ಟ್ರ, ಆರ್ಯ, ಸೌರಾಷ್ಟ್ರ, ಕೇರಳ, ಕಾಂಭೋಜ, ತುರುಷ್ಕ, ಪಾಂಡ್ಯ, ಮಲೆಯಾಳ ಮತ್ತು ದ್ರಮಿಳ ಎಂಬ ರಾಜ್ಯಗಳ ಪರಿಚಯ ತಕ್ಕಮಟ್ಟಿಗೆ ಇತ್ತು. ಪ್ರತಿಯೊಂದು ರಾಜ್ಯವೂ ಗ್ರಾಮ, ನಗರ, ಖೇಡ, ಕರ್ವಣ, ನಡಂಬ, ದ್ರೋಣಮುಖ, ಪುರ, ಪಟ್ಟಣ ಮತ್ತು ರಾಜಧಾನಿಗಳಿಂದ ರಾಜಿಸುತ್ತಿತ್ತು. ಬನವಾಸಿಯನ್ನು (ಕುಂತಳ ಚಕ್ರಾಧಿಪತ್ಯವನ್ನು) ಜಂಬೂದ್ವೀಪದ ಶಿರೋಮಣಿಯೆಂದೂ ಭೂಸ್ವರ್ಗವೆಂದೂ ಶಾಸನಗಳು ಹೊಗಳಿವೆ.

ಮಯೂರ ಸಾಮ್ರಾಜ್ಯಕ್ಕೆ ಚಂದ್ರವಳ್ಳಿಯ ಶಾಸನದ ಪ್ರಕಾರ ತ್ರೈ–ಕೂಟಾಭೀರ, ಪುನ್ನಾಟ, ಗಯೆ, ಅರಬ್ಬೀ ಸಮುದ್ರ, ಪ್ರೇಹಾರಗಳು ಗಡಿಗಳಾಗಿದ್ದವು. ರವಿವರ್ಮ ಕದಂಬಾಧಿನಾಥನ ಸುದೀರ್ಘ ಪ್ರಶಾಸನದ ಅವಧಿಯಲ್ಲಿ ಕದಂಬ ಸಾಮ್ರಾಜ್ಯ ಮತ್ತಷ್ಟು ವಿಸ್ತಾರಹೊಂದಿತು; ಗಂಗವಾಡಿಯ ಮಲ್ಕವ ಮುಳ್ಳಗಿ ಗ್ರಾಮಗಳವರೆಗೂ ಹಬ್ಬಿತು. ಕೊರಮಂಗಲ ದಾನಶಾಸನವು ನರ್ಮದಾ ನದಿಯವರೆಗೂ ಕದಂಬ ಪ್ರಭುತ್ವ ಪಸರಿಸಿತ್ತೆಂದು ಹೇಳಿದೆ.

೧೦ನೆಯ ಶತಮಾನದಲ್ಲಿ ಪುನರುತ್ಥಾನ ಹೊಂದಿದ ಕದಂಬ ಮಹಾಮಂಡಲೇಶ್ವರರು ಹಲವಾರು ರಾಜ್ಯಗಳನ್ನಾಳುತ್ತಿದ್ದರು. ಗೋವೆಯ ಕದಂಬರು ಕೊಂಕಣದ (ಅಪರಾಂತದ, ಸದ್ಯದ ಗೋವಾ ಪ್ರದೇಶದ) ಬಹುಭಾಗವನ್ನು ಆಳುತ್ತಿದ್ದರೆ, ಬನವಾಸಿ ಕದಂಬರು ಹಾನುಗಲ್ಲಿನ ರಾಜಧಾನಿಯಿಂದ ಬನವಾಸಿ ೧೨೦೦೦, ಹಾನುಗಲ್ಲು ೫೦೦, ಮತ್ತು ಹೈವೆ ೫೦೦ರನ್ನು ಬಹುಕಾಲ ಸಾಮಂತರಾಗಿ (ಕೆಲವೊಮ್ಮೆ ಸ್ವತಂತ್ರರಾಗಿ) ಆಳುತ್ತಿದ್ದರು. ಹೈವೆ ಒಂದೆರಡು ಸಲ ಅವರ ಕೈತಪ್ಪಿ ಹೋಗಿತ್ತು. ಕಲ್ಯಾಣಿಯ ಚಾಲುಕ್ಯರ ೬ನೆಯ ವಿಕ್ರಮಾದಿತ್ಯನೂ ೨ನೆಯ ಭುವನೈಕಮಲ್ಲನೂ ಮೇಲ್ದೊರೆಗಳಾಗಿದ್ದಾಗ ಗೋವೆಯ ಕದಂಬ ೧ನೆಯ ಜಯಕೇಶಿ (೧೦೫೦–೧೦೮೦), ನಾಗರಖಂಡದ ಕದಂಬ ಸೋಯಿದೇವ (೧೧೩೮–೧೧೭೭) ಹಾನುಗಲ್ಲಿನ

ಕದಂಬ ಕಾಮದೇವ (೧೨೧೯–೧೨೨೧) ಮತ್ತು ಅವನ ಮಗ ಮಲ್ಲಿದೇವ (೧೨೧೭–೧೨೫೨) ಎಂಬ ಮಹಾರಾಜರು ಬಾರಕೂರು ರಾಜಧಾನಿಯ ತುಳುರಾಜ್ಯದ ಅರಸರಾಗಿದ್ದ ಉದಯಾದಿತ್ಯ ಪಾಂಡ್ಯ ಪಟ್ಟಿಗದೇವ, ಭುಜಬಲ ಕವಿ (?) ಆಲುಪೇಂದ್ರದೇವ ಮತ್ತು ೧ನೆಯ ಭುಜಬಲ ಕುಲಶೇಖರ ಆಳುಪೇಂದ್ರರನ್ನು ಸೋಲಿಸಿ ಕಪ್ಪಕಾಣಿಕೆಗಳನ್ನು ವಸೂಲು ಮಾಡಿದ ಉಲ್ಲೇಖ[೨]ವಿರುವುದರಿಂದ ಅವರ ಉಪಚಕ್ರಾಧಿಪತ್ಯವು ಸುಮಾರು ೧೦೫೦ ರಿಂದ ೧೨೫೨ರವರೆಗೆ (ಹೆಚ್ಚು ಕಡಿಮೆ ೨೦೦ ವರ್ಷಗಳ ಕಾಲ) ತುಳುನಾಡನ್ನೊಳಗೊಂಡಿತ್ತು. ಎಂದು ಹೇಳಬಹುದು. ವಿಜಯನಗರದ ಹರಿಹರರಾಯನ ಸಾರ್ವಭೌಮತ್ವದಲ್ಲಿದ್ದ ಕದಂಬ ಕಾಮದೇವನ ಮಗಳಾದ ಪದುಮಲಾದೇವಿಯ (ಮಂಗಳೂರು ಸನಿಹದ) ಓಮಂಜೂರು ಅಮೃತನಾಥ ದೇವಾಲಯದ ಸರ್ವಮಾನ್ಯ ದಾನಶಾಸನದ ಪ್ರಮಾಣವು ಮಂಗಳೂರವರೆಗಿನ ತುಳುನಾಡು ಆಗ (ಸುಮಾರು ೧೩೮೯ರವರೆಗೆ) ಆಗೀಗ ಕೈತಪ್ಪಿಹೋಗಿರಬಹುದಾದರೂ ಹಾನುಗಲ್ಲಿನ (ಬನವಾಸಿಯ) ಕದಂಬರ ಅಥವಾ ಗೋವೆಯ ಕದಂಬರ ಪೀಳಿಗೆಯ ಈ ಅರಸರ ಅಂಕೆಯಲ್ಲಿತ್ತೆಂದು ಊಹಿಸಬಹುದು. ೨೯ನೆಯ ಆಳುಪೇಂದ್ರನಾದ ೩ನೆಯ ವೀರಕುಲಶೇಖರನ ಕಾಲದಲ್ಲಿ ಬಹುಶಃ ತುಳುನಾಡಿನ ಮೇಲೆ ಕದಂಬರ ಅಂಕೆ ತಪ್ಪಿತು ಎನ್ನಲು ಅವಕಾಶವಿದೆಯೆಂದು ತೋರುತ್ತದೆ.

ಬೇಲೂರು ಶಾಖೆಯ ಕದಂಬರು ಮಂಜರಾಬಾದು ಪ್ರದೇಶವನ್ನು ಆಳುತ್ತಿದ್ದರು; ಬಯಲುನಾಡ ಶಾಖೆಯವರು (ಮೈಸೂರನ್ನು) ಪುನ್ನಾಡನ್ನು ಆಳುತ್ತಿದ್ದರು. ಗೋವೆಯ ಕದಂಬರು ತಮ್ಮ ಉಚ್ಛ್ರಾಯಕಾಲದಲ್ಲಿ ಹಲಸಿ ೧೨೦೦೦, ಕೊಂಕಣ ೯೦೦, ವೇಲುಗ್ರಾಮ ೩೦, ಕದರೋಳಿ ೩೦, ಉಂಕ ೩೦, ಪೊಳಲ್ ಗುಂಡೆ ೩೦ ಮತ್ತು ಕುಂತಕಳಿ ೩೦ ಎಂಬ ಪ್ರದೇಶಗಳನ್ನು ಆಳುತ್ತಿದ್ದರು.

ಹಲವಾರು ಶಾಸನಗಳು ಪ್ರಜೆಗಳು ಬಹಳ ಸಮೃದ್ಧರೂ ಸುಖಿಗಳೂ ಆಗಿದ್ದರೆಂದೂ ಕದಂಬರ ಆಡಳಿತ ಜನಪ್ರಿಯವಾಗಿತ್ತೆಂದೂ ಸಾರಿವೆ. ಕದಂಬ ಚಕ್ರಾಧಿಪತ್ಯದ ಕಾಲದಲ್ಲಿ ಮಹಾರಾಷ್ಟ್ರಗಳು ಮೂರು: ೧) ಕುಂತಳ ಅಥವಾ ಕರ್ಣಾಟ ೨) ಕುಂತಳಾಧೀನವಾದ ಸಧ್ಯದ ಮಹಾರಾಷ್ಟ್ರ ಮತ್ತು ೩) ಕುಂತಳದ ಅಂಗವಾಗಿದ್ದ ಕೊಂಕಣ. ಚಾಲುಕ್ಯ ಚಕ್ರವರ್ತಿಯಾದ ೨ನೆಯ ಪುಲಿಕೇಶಿಯ ಕಾಲದಲ್ಲಿ ಈ ಮೂರು "ಮಹಾರಾಷ್ಟ್ರಕ"ಗಳೆಂದು ಹೆಸರಾಗಿದ್ದವು. ಈ ಅಂಶಗಳನ್ನು ಗಮನಿಸಿದರೆ ಕದಂಬರ ಮೇಲ್ದೊರೆತನವನ್ನು ಅನೇಕ ಸಲ ದಕ್ಷಿಣಭಾರತದ ಮುಕ್ಕಾಲು ಭಾಗವು ಒಪ್ಪಿಕೊಂಡಿತ್ತೆಂದು ಸ್ಪಷ್ಟವಾಗುತ್ತದೆ. ಅದರಿಂದಲೇ ಕದಂಬಕುಲಕ್ಕೆ ಸಂಬಂಧಿಸಿದವರು ತಾವೆಂದುಕೊಳ್ಳಲು ಗಣ್ಯರಾಜವಂಶೀಯರು ಹೆಮ್ಮೆಪಡುತ್ತಿದ್ದರು.

೨. A.K; Pages 205, 206, 254, 255, 259, 260, 261

ಧಾರವಾಡ ಜಿಲ್ಲೆಯ ಅಬ್ಬಲೂರು–ಅಜ್ಞಾಡಿಗಳು ನಾಗರಖಂಡ ೭೦ರ ಅಂಗಗಳಾಗಿದ್ದವು. ಅಬ್ಬಲೂರಿನಲ್ಲಿ ಶೈವ–ಜೈನಾಲಯಗಳಿದ್ದವು. ಅಲ್ಲಿ ಏಕಾಂತ ರಾಮನು ಜೈನರೊಡನೆ ವಾದ ಮಾಡಿದನೆಂದು ಪ್ರಸಿದ್ಧಿ. ಅದೇ ಜಿಲ್ಲೆಯ ನವಲಗುಂದ ತಾಲೂಕಿನ ಅಣ್ಣಿಗೇರಿ (ಅಣ್ಣಿಗೆರೆ) ಬೆಳ್ವೊಲ (ರೋಣ ತಾಲೂಕು) ೩೦೦ರ ಮುಖ್ಯಪಟ್ಟಣವಾಗಿತ್ತು. ಬಲಿಪುರವೆಂದರೆ ಬೆಳಗಾಮಿ ಅಥವಾ ಬಳ್ಳಿಗಾಂವೆ. ಶಿಕಾರಿಪುರ ತಾಲೂಕಿನ ಈ ಸ್ಥಳವು ಕೆಲಕಾಲ ಹಾನುಗಲ್ಲಿನ ಮೊದಲ ದೊರೆಯಾದ ಚಟ್ಟನ (ಕುಂದಮರಸನ) ರಾಜಧಾನಿಯಾಗಿತ್ತು. ಅದೊಂದು ಅಗ್ರಹಾರನಗರ (=ವಿದ್ಯಾನಗರ)ವಾಗಿತ್ತು. ಅಲ್ಲಿ ಸಾರ್ವಜನಿಕ ಶಿಕ್ಷಣಾಲಯಗಳಾದ ೫ ಮಠಗಳೂ ಬ್ರಹ್ಮಪುರಿಗಳೂ ಇದ್ದವು. ಮುಂದೆ ಸಾಗಿದರೆ ನಮಗೆ ಬಂದಣಿಕೆ (ಬಾಂಧವಪುರ) ಸಿಗುತ್ತದೆ. ಅದು ಬನವಾಸಿ ಕದಂಬರ ನಾಗರಖಂಡ ಶಾಖೆಯ ರಾಜಧಾನಿ. ಅಲ್ಲಿ ಆಳಿದ ಕದಂಬ ಸೋಮೇಶ್ವರನಿಗೆ (ಸೋವಿದೇವನಿಗೆ) ಕದಂಬರುದ್ರ, ಗಂಡರ ದಾವಣಿ, ಮಾಂಡಲಿಕ ಭೈರವ, ನಿಗಳಾಂಕಮಲ್ಲ ಮತ್ತು ಸತ್ಯಪತಾಕ ಎಂಬ ವೀರೋಚಿತ ಬಿರುದುಗಳಿದ್ದವು. ಶಾಂತರ–ಚೆಂಗಾಳ್ವರನ್ನು ಸೋಲಿಸಿದ್ದರಿಂದ ಸಂತುಷ್ಟನಾದ ಬಿಜ್ಜಳನು ಈ ಬಿರುದುಗಳನ್ನು ಈತನಿಗೆ ಕೊಟ್ಟಿರಬೇಕು.

ಬಂಕಾಪುರದ ಕದಂಬ ಶಾಖೆಗೆ ಬಂಕಾಪುರವು ರಾಜಧಾನಿಯಾಗಿತ್ತು. ಅಲ್ಲಿದ್ದ ಕದಂಬರೆಲ್ಲಾ ರಾಜ್ಯಪಾಲರು, ಮಹಾಮಂಡಲೇಶ್ವರರಿಗೂ ಚಕ್ರವರ್ತಿಗೂ (ರಾಜಪ್ರತಿನಿಧಿಯಿದ್ದರೆ ಅವನಿಗೂ) ನಡುವಿನ ಅಧಿಕಾರಿಗಳು; ರಾಜ್ಯಪಾರಲ್ಲಿ ಹೆಸರಾಂತ ಬಂಕೆಯರಸ ಚೆಲ್ಲಕೇತನ ಅದನ್ನು ಸ್ಥಾಪಿಸಿದವನು.

ಕದಂಬರ ಬಯಲ್ನಾಡಿಂದು ವೈನಾಡು; ೭ ಸುತ್ತಿನ ಕೋಟೆಯ ಚಂದ್ರ ಗುಪ್ತಪುರವು ಚಂದ್ರಗುತ್ತಿ, ಚಂದ್ರಪುರವು (ಹೊನ್ನಾವರ ತಾಲೂಕು) ಚಂದಾವರ, ಕದಂಬ ಕಾಲೀನ ವ್ಯಾಪಾರ ಕೇಂದ್ರ: ರತ್ನಗಿರಿ ಜಿಲ್ಲೆಯ ಚಿಪ್ಳೋಣವೂ ಹಾಗೇ ವ್ಯಾಪಾರ ಸ್ಥಳ.

ಎಡೆವೊಳಲು ಆಳುವ(ಪ)ರ ರಾಜ್ಯಕ್ಕೆ ಸೇರಿದ ಪ್ರದೇಶ. ಅದರ ಗ್ರಾಮ ಸಂಖ್ಯೆ ೭೦. ಅದು ಬನವಾಸಿಯ ಉಪರಾಜ್ಯವಾಗಿತ್ತು. ಗೋಕಾಗೆಯು ಗೋಕಾಕ್; ಕದಂಬ ಅಕ್ಕಾದೇವಿ ಅಲ್ಲಿಯ ಕೋಟೆಯನ್ನು ಹಿಡಿದಿದ್ದಳು. ಗೋಪಕ ದ್ವೀಪವಿಂದು ಗೋವೆರಾಜ್ಯ; ಗೋಪಕಪಟ್ಟಣ, ಗೋವೆ, ಗೋಪಕಪುರಿ (ರ) ಎಂದರೆ ಗೋವಾಪಟ್ಟಣ, ಗೋವಾ, ಕದಂಬರ ರಾಜಧಾನಿ. ಶಿವಮೊಗ್ಗ ಜಿಲ್ಲೆಯ ಹನ್ನಿ ಹಳ್ಳಿಯು ಬನವಾಸಿ ಪ್ರಾಂತದ ಒಂದು ಕಂಪಣ (ಜಿಲ್ಲೆ)ಯಾಗಿತ್ತು. ಹೈವೆಯೆಂದರೆ ಹಳೆಯ ಉತ್ತರ ಕನ್ನಡ ಜಿಲ್ಲೆ. ಜಿಡ್ಡುಳಿಕೆಯು ಸೊರಬ ತಾಲೂಕಿನ ಜಡೆ. ಕಡವಲವು (ಕಡಬಳ) ಕದಂಬಳಿಗೆಯಾಗಿರಬೇಕು. (ದಾವಣಗೆರೆ ತಾಲೂಕು)–ಅದಕ್ಕೆ ಸಂಬಂಧಿಸಿದ ಶಾಸನವು ಹೆಗ್ಗಡೆದೇವನ ಕೋಟೆ ತಾಲೂಕಿನ ಕಿತ್ತೂರಲ್ಲಿ (ಕೀರ್ತಿಪುರದಲ್ಲಿ) ದೊರಕಿದೆ. ಬಹುಶಃ ಪುನ್ನಾಟದ (ಡಿನ) ಕದಂಬರ ರಾಜ್ಯವೊಮ್ಮೆ ಅಲ್ಲಿಯವರೆಗೆ ಹಬ್ಬಿತ್ತೋ ಏನೋ! ಅಥವಾ ಪುನ್ನಾಡಿನ ದೊರೆಯೊಬ್ಬನೊಡನೆ ಯುದ್ಧ ಮಾಡುವಾಗ ನೆರವಿತ್ತ

ಉಪರಾಜನೊಬ್ಬನಿಗೆ ಬನವಾಸಿ ಕದಂಬರು ಅದನ್ನು ಮೆಚ್ಚನಿತ್ತರೋ ಏನೋ? ಅದರ ಮೂಲ ಕದಂಬಪಲ್ಲಿಯಾಗಿರಬೇಕು[೩]. ಕನ್ನೆವೊಳ ಅಥವಾ ಕನ್ನೆವೊಳಲೂ ಹಾಗೇ ಅನಭಿಜ್ಞಾತ.

ಕಾಲವಂಗೆಯು ಬೆಳಗಾವಿಯ ಸಂಪಗಾವಿ ತಾಲೂಕಿನಲ್ಲಿಯ ಸ್ಥಳವಾಗಿರಬೇಕು. ಈ ಹಳ್ಳಿಯಲ್ಲಿ ಮೂರು ಪಾಲುಗಳನ್ನು ಮಾಡಿ ಒಂದನ್ನು ದೇವರಿಗೂ ಇನ್ನೊಂದನ್ನು ಶ್ವೇತಪಥದ ಸನ್ಯಾಸಿಗಳಿಗೂ ಉಳಿದದ್ದನ್ನು ನಿರ್ಗ್ರಂಥ ಪಂಥದವರಿಗೂ ಕೊಡಲಾಗಿತ್ತು.

ಕದಂಬ ರಾಜ್ಯದ ಕಿಷ್ಕಿಂಧೆಯು ಧಾರವಾಡ ಜಿಲ್ಲೆಯ ಒಂದು ಹಳ್ಳಿ; ತುಂಗಭದ್ರೆಯ ದಕ್ಷಿಣದ ದಂಡೆಯ ಮೇಲಕ್ಕೆ ಇದೆ; ಕಿಷ್ಕಿಂಧೆಯ ಗುಡ್ಡಗಳು ಹಂಪಿಯಿಂದ ೩ ಮೈಲು ದೂರದಲ್ಲಿ (ಆನೆಗುಂಡಿಯ ಹತ್ತರ) ಇವೆ. ಕಿಸುಕಾಡು ೭೦ರ ರಾಜಧಾನಿ ಕಿಸುವೊಳಲು ಬಿಜಾಪುರ ಜಿಲ್ಲೆಯ ಬಾದಾಮಿ ತಾಲೂಕಿನಲ್ಲಿದೆ, ಈಗ ಅದು ಪಟ್ಟದಕಲ್ಲು.

ಕಿತ್ತೂರು ಕೀರ್ತಿಪುರ–ಮೈಸೂರು ಜಿಲ್ಲೆಯ ಹೆಗ್ಗಡೆದೇವನ ಕೋಟೆಯ ತಾಲೂಕಿನಲ್ಲಿದೆ. ಅದು ಬಯಲುನಾಡ ಕದಂಬರ (ಪುನ್ನಾಡ ಕದಂಬರ) ರಾಜಧಾನಿಯಾಗಿತ್ತು.

ಕೂಡಲೂರು ಕದಂಬ ಕಾಲೀನ ಅಗ್ರಹಾರನಗರ, ವಿದ್ಯಾಕೇಂದ್ರ, ಇದು ಬೆಂಗಳೂರು ಜಿಲ್ಲೆಯ ಚೆನ್ನಪಟ್ಟಣ ತಾಲೂಕಿನಲ್ಲಿದೆ. ಕುದೂರು ಅಥವಾ ಕುಂದೂರ್ಗೆ ಆಗಿನ ಹಲಸಿಗೆಯ ಅಂಗವಾಗಿತ್ತು. ಅಲ್ಲಿ ಕದಂಬರ ರಾಜ್ಯಭವನವಿತ್ತು. ಅದನ್ನೀಗ (ಧಾರವಾಡ ಜಿಲ್ಲೆಯ) ನರೇಂದ್ರ ಗ್ರಾಮವೆಂದು ಕರೆಯಲಾಗುತ್ತದೆ. ಕುಪ್ಪಟ್ಟೂರು ಶಿಕ್ಷಣಪ್ರಸಿದ್ಧಿಯ ಅಗ್ರಹಾರವಾಗಿತ್ತು. ಅದೀಗ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನಲ್ಲಿದೆ. ಮದವವು ಮಂಗಳೂರಿನ ಸನಿಹದ ಹಳ್ಳಿಯಾಗಿರಬಹುದಾಗಿದೆ. ಕೀರ್ತಿದೇವ ಕದಂಬ ಅಲ್ಲಿಯ ದೇವಾಲಯಕ್ಕೆ ದತ್ತಿ ಬಿಟ್ಟ ಶಾಸನವಿದೆ. ಮೈಸೂರು ಜಿಲ್ಲೆಯ ತಲಕಾಡು ತಾಲೂಕಿನ ಮೊಗಲೂರು (ಮುಗೂರು, ಮುಳ್ಳೂರು) ರವಿವರ್ಮ ಕದಂಬನ ಚಕ್ರಾಧಿಪತ್ಯದ ಗಡಿಯಾಗಿತ್ತೆಂಬುದಕ್ಕೆ ಅಲ್ಲಿಯ ದಾನ ಶಾಸನ ಪ್ರಮಾಣವಾಗಿದೆ; ತಲಕಾಡಿಗೆ ಸಮೀಪದಲ್ಲಿರುವ ಮಳಕಾವು ಗ್ರಾಮವೂ ಹಾಗೇ ಸೀಮಾ ಸೂಚಕವಾಗಿದೆ. ಧಾರವಾಡ ಜಿಲ್ಲೆಯ ಕರಜಗಿ ತಾಲೂಕಿನ ದಿಡಗೂರನ್ನು ಮುಗುಂದವೆಂದು ಕರೆಯುತ್ತಿದ್ದರು. ಮುಗುಂದ ೧೨, ಬನವಾಸಿ ೧೨೦೦೦ದ ಒಂದು ಕಂಪಣ (ಜಿಲ್ಲೆ) ವಾಗಿತ್ತು. ನಿಡುಗುಂಡಿಗೆ (ನಿಡುಗುಂಡಿ) ಹಾನುಗಲ್ಲು ೫೦೦ರ ಒಂದು ಕಂಪಣವಾಗಿತ್ತು.

೩. ಕಡವಲ, ಕಡವಾಲ, ಕಡಬಳ=ಕದಂಬವೃಕ್ಷ (ತಾಳೆಯ ಅಥವಾ ಹನೆಯ ಮರ) ಬಗನೆ ಅಥವಾ ಬಯನೆಯಲ್ಲ; ಈಚಲವೂ ಅಲ್ಲ. ಶಾಸ್ತ್ರೀಯ ಕದಂಬವು Nauclea Cadamba with orange coloured frgrant flowers; sinapis Dichotoma; Cadamba Aromatica. ಕದಂಬರ ಕದಂಬವು ಗೃಹಕದಂಬ, ಮನೆಯ ಹನೆಮರ; ಹನೆಹಳ್ಳಿಯ ಕದಂಬ ಮೂಲವೂ ಇದೇ ತಾಳೆ.

ಪ್ರೇಮಾರ, ಪ್ರೇಹಾರಗಳಲ್ಲದೆ ರೈಸನ ಪ್ರಕಾರ ಪ್ರಮಾರವೆಂಬ ಪಾಠಾಂತರವೂ ತಾಲಗುಂದದ (ಸ್ಥಾನಗೂಢದ) ಶಾಸನಕ್ಕೆ ಇದೆಯಂತೆ. ಪ್ರಮಾರವೆಂದರೆ ಪರಮಾರ, ಮಾಳವ, ಮಯೂರಶರ್ಮ (ಕದನತ್ರಿಣೇತ್ರನ) ಸಾಮ್ರಾಜ್ಯ ಸೀಮಾ ರಾಜ್ಯ. ಡಾ. ಕೀಲ್‌ಹಾರನ್ನನು ಪ್ರೇಮಾರವೆಂದರೆ ತುಂಗಭದ್ರೆಯೆಂದು ಅರ್ಥಮಾಡಿದ್ದಾನೆ. ಅದಕ್ಕಾಧಾರ ಅವನಿಗೇ ಗೊತ್ತು. ಇನ್ನು ಕೆಲವರು ಘಟಪ್ರಹಾರ ಅಥವಾ ಮಲಪ್ರಹಾರ (ಘಟಪ್ರಭೆ ಅಥವಾ ಘಟಾಪಹಾರಿ ಮತ್ತು ಮಲಪ್ರಭಾ ಅಥವಾ ಮಲಾಪಹಾರಿ) ನದಿ ಎನ್ನುತ್ತಾರೆ. ಅವರ ಆಧಾರವೂ ಹಾಗೇ.

ಸಂಗಮೇಶ್ವರ ಪಟ್ಟಣವು ರತ್ನಗಿರಿಗೆ ಈಶಾನ್ಯದಲ್ಲಿ ಸುಮಾರು ೨೦ ಮೈಲು ದೂರವುಳ್ಳದ್ದಾಗಿದೆ. ಇದು ಬೇಲೂರು (ತ್ರಿಪರ್ವತ) ಕದಂಬರ ರಾಜ್ಯದ ಒಂದು ವಿಷಯ (ಜಿಲ್ಲೆ)ವಾಗಿತ್ತು. ಸೇಂದ್ರಕ ವಿಷಯವು ಬನವಾಸಿಗೆ ಆಗ್ನೇಯದಲ್ಲಿದೆ. ಸೊರಬ ತಾಲೂಕಿನ ಸದನಿಯು ಅಂದಿನ ಎಡೆನಾಡು ಕಂಪಣದ ಅಂಗವಾಗಿತ್ತು. ಶ್ರೀಪರ್ವತವು ಕರ್ನೂಲು ಜಿಲ್ಲೆಯ ಶ್ರೀಶೈಲ; ಪಲ್ಲವರನ್ನು ಎದುರಿಸಲು ಮಯೂರವರ್ಮನು ಹೆಚ್ಚಿನ ತರಬೇತು ತಯಾರಿಗಳನ್ನು ನಡೆಸಿದ ಸ್ಥಳ. ಸ್ಥಾನಕುಂದೂರೆಂದರೆ ಸ್ಥಾನಗೂಢಪುರ ಅಥವಾ ತಾಳಗುಂದ–ಉಚ್ಚಶಿಕ್ಷಣದ ಅಗ್ರಹಾರವೆಂದದು ಪ್ರಸಿದ್ಧವಾಗಿತ್ತು. ಧಾರವಾಡ ಜಿಲ್ಲೆಯ ರೋಣ ತಾಲೂಕಿನ ಸುಂಡಿಯು (ಸೂಡಿಯು) ಕಿಸುಕಾಡು ೭೦ರ ರಾಜಧಾನಿಯಾಗಿತ್ತೆಂದು ತೋರುತ್ತದೆ. ಧಾರವಾಡ ಜಿಲ್ಲೆಯ ಸುಳ್ಳವು ನರೇಗಲ್ ರಾಜಧಾನಿಯಾಗಿದ್ದ ಬೆಳ್ವೊಲ ೨೦೦ ಕಂಪಣದ ಒಂದು ಹಳ್ಳಿಯಾಗಿತ್ತು. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ತಾಲೂಕಿನ ಮೊಳಕಾಲ್ಮುರು ಪಟ್ಟಣದ ಸನಿಹದಲ್ಲಿದ್ದ ಉಚ್ಚಂಗಿಯು ಉಚ್ಚಂಗಿ ಕದಂಬರ ರಾಜಧಾನಿಯಾಗಿತ್ತು. ಏಕೆಂದರೆ ರೈಸನು ಬಳ್ಳಾರಿಯ ದಕ್ಷಿಣದಲ್ಲಿರುವ ಉಚ್ಚಂಗಿ ಪಟ್ಟಣ ಅವರ ರಾಜಧಾನಿಯಾಗಿದ್ದಿಲ್ಲವೆನ್ನುತ್ತಾನೆ.

ಪ್ರಾಚೀನ ಕದಂಬರು

ಉಚ್ಚಂಗಿ **ಬನವಾಸಿ** **ತ್ರಿಪರ್ವತ**

ಮಯೂರ ವರ್ಮ
೨೮೦–೩೩೦
ಕಂಗವರ್ಮ
೩೩೦–೩೭೦
ಭಗೀರಥವರ್ಮ
೩೭೦–೪೦೦

ರಘುವರ್ಮ
೪೦೦–೪೧೫

ಕಾಕುತ್ಸ್ಥವರ್ಮ
೪೧೫–೪೫೦

ಕುಮಾರ ವರ್ಮ
೪೭೫–೪೯೦

ಶಾಂತಿವರ್ಮ

ಕೃಷ್ಣವರ್ಮ
೪೫೦–೪೭೫

೪೭೫–೪೮೦

ಮೃಗೇಶವರ್ಮ
೪೭೫–೪೯೦

ಮಾಂಧಾತೃವರ್ಮ
ದೇವವರ್ಮ
೪೯೦–೪೯೭

ವಿಷ್ಣುವರ್ಮ
೪೮೫–೪೯೭

ರವಿವರ್ಮ
೪೯೭–೫೩೭

ಹರಿವರ್ಮ
೫೩೭–೫೪೭

ಸಿಂಹವರ್ಮ
೪೯೭–೫೪೦

ಕೃಷ್ಣವರ್ಮ II
೫೪೦–೫೪೭

ಕೃಷ್ಣ ವರ್ಮ III
೫೪೭–೫೬೫

ಅಜವರ್ಮ
೫೬೫–೬೦೬

ಭೋಗಿವರ್ಮ
೬೦೬–೬೧೦

ವಿಷ್ಣುವರ್ಮ
೬೧೦–೬೫೧

ಮಧುವರ್ಮ
೬೫೧–೬೫೫

ಅರ್ವಾಚೀನ ಕದಂಬರು

ಬನವಾಸಿ **ಬನವಾಸಿ ಹಾನುಗಲ್ಲು** **ಹಾನುಗಲ್ಲು**

ಇರಿವಬೆಡಂಗ ದೇವ
೯೬೭–೯೮೦
ಚಟ್ಟದೇವ
೯೮೦–೧೦೩೧

ಸತ್ಯಾಶ್ರಯ ಜಯಸಿಂಹ ಖೇತಮಲ್ಲ
ಅಕ್ಕಾದೇವಿ
೧೦೩೧–೧೦೩೭

ಮಯೂರವರ್ಮ II ತೈಲ I ಶಾಂತಿವರ್ಮ II ಚೋಕಿದೇವ ವಿಕ್ರಮ
೧೦೩೭–೧೦೪೮ ೧೦೪೮–೧೦೭೫ ೧೦೭೫–೧೦೯೪
ಕೀರ್ತಿವರ್ಮ ತೈಲ II
೧೦೭೫–೧೧೧೬ ೧೦೯೪–೧೧೧೬
ಮಾವುಲಿ ತೈಲ II
೧೧೧೭–೧೧೩೦

ಮಯೂರವರ್ಮ-IIIಮಲ್ಲಿಕಾರ್ಜುನ ತೈಲಮ
೧೧೩೦–೧೧೩೨ ೧೧೩೨–೧೧೪೬
೧೧೪೬–೧೧೫೧

ಕೀರ್ತಿದೇವ ಮೌಲಿ ತೈಲಪ
೧೧೫೧ ೧೧೮೦
ಕಾಮದೇವ
೧೧೮೦–೧೨೧೭
ಮಲ್ಲಿದೇವ ರಾಮದೇವ
೧೨೧೭–೧೨೫೨ ೧೨೫೨–೧೨೬೦
ಕಾವದೇವ
೧೨೬೦–೧೩೧೫
ಪುರಂದರರಾಯ
೧೩೧೫–೧೩೪೭

ಗೋವೆಯ ಕದಂಬರು

ಕಂಟಕಾಚಾರ್ಯ
ನಾಗವರ್ಮ
ಗುಹಲ್ಲದೇವ I
ಚತುರ್ಭುಜ ಅಥವಾ ಷಷ್ಠದೇವ I
೯೬೬ । ೯೮೦
ಗುಹಲ್ಲದೇವ II
೯೮೦ । ೧೦೦೫
ಷಷ್ಠದೇವ II
೧೦೦೫ । ೧೦೫೦
ಜಯಕೇಶಿ I
೧೦೫೦ । ೧೦೮೦
ಗುಹಲ್ಲದೇವ III
೧೦೮೦ । ೧೧೦೦
ವಿಜಯಾದಿತ್ಯ I
೧೧೦೦ । ೧೧೦೪
ಜಯಕೇಶಿ II
೧೧೦೪ । ೧೧೪೮

(ಪೆರ್ಮಾಡಿ ಅಥವಾ) ಶಿವಚಿತ್ತ
೧೧೪೮ – ೧೧೮೧

ವಿಷ್ಣುಚಿತ್ತ (ಅಥವಾ ವಿಜಯಾದಿತ್ಯ II)
೧೧೪೮ – ೧೧೮೮
ಜಯಕೇಶಿ–III
೧೧೮೮ – ೧೨೧೬

ಶಿವಚಿತ್ತ ವಜ್ರದೇವ
೧೧೯೩–೧೨೦೨
ಷಷ್ಠದೇವ–III
೧೨೪೬ । ೧೨೬೦

ತ್ರಿಭುವನಮಲ್ಲ (ಅಥವಾ ಸೋಮದೇವ)
೧೨೧೬–೧೨೩೮
(ಅಳಿಯ) ಕಾಮದೇವ
೧೨೬೦ । ೧೩೧೦
ಮಗ
೧೩೧೦ । ೧೩೨೮
ಮಗ
೧೩೨೮ – ೧೩೪೦

ಕದಂಬಾಣಂ ಮಯೂರ ಶರ್ಮ್ಮಣಾ ವಿಣಿರ್ಮ್ಮಿಅಂ ।
ತಟಾಕಂ ದೂಭ ತ್ರೇಕೂಟ ಆಭೀರ ಪಲ್ಲವ ಪಾರಿ –।
ಯಾತ್ರಿಕ ಸಕಸ್ಥಾಣ ಸಯಿಂದಕ ಪುಟಾಣ ಮೋಕರಿಣಾ ॥

- Chandravalli Inscription
of Mayurasarman

ಪರಿಶಿಷ್ಟ ೪

ಸಾಮಂತ ಕದಂಬರು, ರಾಜ್ಯಪಾಲರು ಮತ್ತು ಚಕ್ರವರ್ತಿಗಳು

ಕದಂಬ ಮಹಾಮಂಡಲೇಶ್ವರರು	ರಾಜ್ಯಪಾಲರೂ ರಾಜಪ್ರತಿನಿಧಿಗಳೂ	ಚಕ್ರವರ್ತಿಗಳು
ವಿಷ್ಣುವರ್ಮ (೬೧೦–೬೫೧)	ಆಳುಪ ಕುಂದವರ್ಮರಸ (೬೨೫–೬೫೦)	ಚಾಲುಕ್ಯ ಪುಲಿಕೇಶಿ II (೬೦೮–೬೪೨)
ಮಧುವರ್ಮ (೬೫೧–೬೫೫)	” ಗುಣಸಾಗರ (೬೫೦–೬೭೫)	” ವಿಕ್ರಮಾದಿತ್ಯ I (೬೪೨–೬೮೦)
	ರಾ. ಪ್ರ. ಜಯಸಿಂಹ I (೬೬೭–೬೭೫)	,, ವಿನಯಾದಿತ್ಯ (೬೮೦–೬೯೭)
	ಆಳುಪ ಚಿತ್ರವಾಹನ I (೬೭೫–೭೦೦)	,, ವಿಜಯಾದಿತ್ಯ (೬೯೭–೭೩೩)
	,, ಶ್ವೇತವಾಹನ I (೭೦೦–೭೧೦)	
	,, ರಣಸಾಗರ (೭೧೦–೭೨೦)	
	,, ಶ್ವೇತವಾಹನ II (೭೨೦–೭೩೦)	,, ವಿಕ್ರಮಾದಿತ್ಯ II (೭೩೩–೭೪೬)
	,, ಪೃಥ್ವೀಸಾಗರ (೭೩೦–೭೫೦)	,, ಕೀರ್ತಿವರ್ಮ II (೭೪೬–೭೫೩)
	,, ವಿಜಯಾದಿತ್ಯ (೭೫೦–೭೭೦)	,, ರಾಷ್ಟ್ರಕೂಟ ದಂತಿದುರ್ಗ (೭೫೩–
೭೫೬)		
	ಮಾರಮ (ಉತ್ತಮ ಪಾಂಡ್ಯ)	,, ಕೃಷ್ಣ ಮತ್ತು ಧ್ರುವ ೭೫೬–೭೯೪
	ಚಿತ್ರವಾಹನ II (೭೭೦–೭೯೧)	,, ಗೋವಿಂದ III (೭೯೪–೮೧೪)
	೧) ರಾ. ಪ್ರ. ನೊಳಂಬರಾಜಾದಿತ್ಯ (೭೯೯–೮೧೪)	
	೨) ವಂದನಾಗ (೭೯೧–೮೧೪)	

	೩) ಎರೆಯಮ್ಮರಸ (೮೧೪–೮೩೫)	ನೃಪತುಂಗ ಅಮೋಘವರ್ಷ(೮೧೪–೮೮೦)
ಇಂದ್ರವರ್ಮ (೮೫೫–೮೯೦)	ಬಂಕೆಯರಸ (೮೩೫–೮೫೫)	
(ಆಯ್ವ) ಆರ್ಯವರ್ಮ (೮೯೦–೯೧೧)	ಇಂದ್ರವರ್ಮ (೮೫೫–೮೭೦)	
	ಶಂಕರಗಂಡ (೮೭೦–೮೯೨)	ಕೃಷ್ಣ II ಅಕಾಲವರ್ಷ (೮೮೦–೯೧೨)
	ಲೋಕಾದಿತ್ಯ (೮೯೩–೯೦೫)	
	ಸೇನಾವರಸ I (೯೦೫–೯೧೨)	ಇಂದ್ರ III ನಿತ್ಯವರ್ಷ (೯೧೨–೯೧೭)
	ಕಲಿವಿಟ್ಟರಸ (೯೧೨–೯೩೪)	ವಡ್ಡಿಗ ಅಮೋಘವರ್ಷ II ಮತ್ತು ಗೋವಿಂದ (೯೧೭–೯೩೫)
	ಶಾಂತರಸ (೯೩೪–೯೪೦)	ಅಮೋಘವರ್ಷ III (೯೩೫–೯೩೯)
	ಕೊಂಗುಣಿವರ್ಮಗಂಗ (೯೪೦–೯೪೫)	ಕೃಷ್ಣ ಅಕಾಲವರ್ಷ III (೯೩೯–೯೬೭)

	ಕಲಿವಿಟ್ಟರಸ (೯೪೫–೯೪೬)	
	ರಸಣ್ಣ (೯೪೬–೯೫೪)	
	ಮಾಟೂರು ಮಾಚಿದೇವ (೯೫೪–೯೬೦)	
	ಜವನೇಶ (೯೬೦–೯೬೫)	
	ಗೋವಿಂದರಸ I (೯೬೫–೯೬೭)	
ಇರಿವ ಬೆಡಂಗದೇವ (೯೬೭–೯೮೦)	ಚಟ್ಟಯ್ಯ (ಚಾಲುಕ್ಯ?) (೯೬೭–೯೬೮)	ರಾಷ್ಟ್ರಕೂಟ ಖೊಟ್ಟಿಗ (೯೬೭–೯೭೧)
	ಮಾಟೂರು ಶಾಂತಿವರ್ಮ (೯೬೮–೯೭೨)	,, ಕಕ್ಕ II (೯೭೧–೯೭೩)
ಚಟ್ಟದೇವ ಕುಂದಮ (೯೮೦–೧೦೩೧)	ಬೊಮ್ಮರಸ (೯೭೨–೯೯೭)	,, ಚಾಲುಕ್ಯ ತೈಲಪ II (೯೭೩–೯೯೭)
	ಭೀಮರಸ (೯೯೭–೧೦೧೦)	,, ಸತ್ಯಾಶ್ರಯ (೯೯೭–೧೦೦೮)
ಜಯಸಿಂಹ (೧೦೩೧–೧೦೩೭)	ಸೇನಾವರಸ II (೧೦೧೦–೧೦೨೫)	,, ವಿಕ್ರಮಾದಿತ್ಯ V (೧೦೦೮–೧೦೧೫)
ಮಯೂರವರ್ಮ II (೧೦೩೭–೧೦೪೮)	ಸಿಂಗಣ ದೇವರಸ (೧೦೪೫–೧೦೪೬)	,, ಜಯಸಿಂಹ II (೧೦೧೫–೧೦೪೨)
ತೈಲ I (೧೦೪೮–೧೦೭೫)	ಚಾಮುಂಡರಾಯರಸ (೧೦೪೬–೧೦೫೩)	,, ಸೋಮೇಶ್ವರ I (೧೦೪೨–೧೦೬೮)
ಶಾಂತಿವರ್ಮ II (೧೦೭೫–೧೦೯೪)	ರಾ.ಪ್ರ.ಸೋಮಪತ್ನಿ ಮೈಲಾಳದೇವಿ (೧೦೫೩–೧೦೫೫)	

ಕೀರ್ತಿದೇವ ವರ್ಮ(೧೦೭೫–೧೧೧೭)	ರಾ. ಪ್ರ. ಚಾಲುಕ್ಯ ವಿಕ್ರ. ಮಾ. VI (೧೦೫೫–೬೦)	
	ಹರಿಕೇಸರಿ ಕದಂಬ (೧೦೫೫–೧೦೬೩)	
	ಚಾವುಂಡರಾಯರಸ (೧೦೬೩–೧೦೬೬)	
	ಲಕ್ಷ್ಮನೃಪ (೧೦೬೬–೧೦೭೦)	ಸೋಮೇಶ್ವರ II (೧೦೬೮–೧೦೭೬)
	ಉದಯಾದಿತ್ಯಗಂಗ (೧೦೭೦–೧೦೭೬)	
	ರಾ.ಪ್ರ.ಚಾಲುಕ್ಯ ಜಯಸಿಂಹ III (೧೦೭೬–೧೦೮೨)	ವಿಕ್ರಮಾದಿತ್ಯ VI (೧೦೭೬–೧೧೨೭)
	ಬರ್ಮದೇವರಸ (೧೦೭೬–೧೦೮೦)	
	ಬಲದೇವಯ್ಯ (೧೦೮೦–೧೦೮೮)	
	ಗುಂಡಮರಸ (೧೦೮೮–೧೦೮೯)	
	ಶ್ರೀಧರಯ್ಯ (೧೦೮೯–೧೦೯೨)	
	ದೇವಪ್ಪಯ್ಯ ಚವೆಂಡರಸ (೧೦೯೨–೧೦೯೮)	
	ಪದ್ಮನಾಭಯ್ಯ (೧೦೯೮–೧೦೯೯)	
	ಅನಂತಪಾಲ (೧೦೯೯–೧೧೧೭)	
	ರಾ.ಪ್ರ. ಉದಯಾದಿತ್ಯಗಂಗ (೧೧೧೨–೧೧೧೩)	
	ಗೋವಿಂದರಸ II (೧೧೧೭–೧೧೨೩)	
ತೈಲ II (೧೧೧೭–೧೧೩೦)	ಸಾಲಿಪಯ್ಯ (೧೧೨೩–೧೧೨೬)	
ಮಯೂರವರ್ಮ III	ಭೋಗಯ್ಯ (೧೧೨೬–೧೧೩೦)	ಚಾಲುಕ್ಯ ಸೋಮೇಶ್ವರ–III
(೧೧೩೦–೧೧೩೨)	ಗೋರಬ ದೇವರಸ ಕದಂಬ (೧೧೪೫–೧೧೫೧)	(೧೧೨೭–೧೧೩೬)
ಮಲ್ಲಿಕಾರ್ಜುನ (೧೧೩೨–೧೧೪೬)		ಚಾಲುಕ್ಯ ಜಗದೇಕಮಲ್ಲ–II
		(೧೧೩೬–೧೧೫೧)
		ಚಾಲುಕ್ಯ ತೈಲಪ –III
		(೧೧೫೧–೧೧೫೬)

ತೈಲಮ (೧೧೪೬–೧೧೫೧)	ಕಳಚುರ್ಯ ಬಿಜ್ಜಳ	(೧೧೫೧–೧೧೫೬)	
ಕೀರ್ತಿದೇವ (೧೧೫೧–೧೧೮೦)	ಕಸಪಯ್ಯ ನಾಯಕ	(೧೧೫೬–೧೧೬೩)	ಕಳಚುರ್ಯ ಬಿಜ್ಜಳ (೧೧೫೬–೧೧೬೮)
	ಮಾಯಿದೇವರಸ	(೧೧೫೭–೧೧೬೦)	ಕಳಚುರ್ಯ ಸೋಮೇಶ್ವರ (೧೧೬೮–೧೧೭೮)
	ಬ್ಯಾಳಿಕೆ ಕೇಶಿಮಯ್ಯ	(೧೧೬೦–೧೧೬೮)	(ರಾಯಮುರಾರಿ ಸೋವಿದೇವ)
	ಸಿಂದ ಈಶ್ವರಭೂಪ	(೧೧೬೮–೧೧೭೯)	ಕಳಚುರ್ಯ ಸಂಕಮ(೧೧೭೮–೧೧೮೦)
ಕಾಮದೇವ (೧೧೮೦–೧೨೧೭) (೧೧೮೦–	ಬ್ಯಾಳಿಕೆ ಕೇಶಿಮಯ್ಯ– II	(೧೧೭೯–೧೧೮೧)	ಕಳಚುರ್ಯ ಆಹವಮಲ್ಲ ೧೧೮೧)
ಮಲ್ಲಿದೇವ (೧೨೧೭–೧೨೫೨)			ಚಾಲುಕ್ಯ ಸೋಮೇಶ್ವರ IV (೧೧೮೧–೧೨೦೦)
ರಾಮದೇವ (೧೨೫೨–೧೨೬೦)	ಮಾಯಿದೇವ ಪಂಡಿತ	(೧೨೦೯–೧೨೨೩)	ಯಾದವ ಸಿಂಘಣ (೧೨೦೯–೧೨೪೭)
ಕಾವದೇವ (೧೨೬೦–೧೩೧೫)	ವಂಕರಾವುತ	(೧೨೨೩–೧೨೩೨)	ಯಾದವ ಕೃಷ್ಣ (೧೨೪೭–೧೨೬೦)
	ಹೊನ್ನ ಬೊಮ್ಮಶೆಟ್ಟಿ	(೧೨೩೨–೧೨೬೬)	ಯಾದವ ಮಹಾದೇವ (೧೨೬೦–೧೨೭೧)
	ಬೊಮ್ಮರಸ	(೧೨೬೬–೧೨೯೨)	
	ಗೋವಿಂದರಸ III	(೧೨೯೨–೧೨೯೪)	ಯಾದವ ರಾಮಚಂದ್ರ (೧೨೭೧–೧೨೯೪)
ಪುರಂದರರಾಯ (೧೩೧೫–೧೩೪೭)			

ಪರಿಶಿಷ್ಟ –೫

ಪೂಜಾವಿಧಾನಗಳು

ಶ್ರೀ ಮಧುಕೇಶ್ವರ: ಜೇನುತುಪ್ಪದ ವರ್ಣಯುಕ್ತವಾದ ಅಷ್ಟಕೋನಾಕೃತಿಯ ಪಾಣಿಪೀಠವನ್ನೊಳಗೊಂಡ ೫ ಫೂಟು (ಪೀಠವನ್ನೊಳಗೊಂಡು) ಎತ್ತರವಾದ ಭವ್ಯಲಿಂಗ. ಪ್ರತಿದಿನ ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲಗಳಲ್ಲಿ ಏಕಾದಶರುದ್ರ ಪಠನದೊಂದಿಗೆ ಪಂಚಾಮೃತ ಅಭಿಷೇಕ, ಪೂಜಾನಂತರ ಸಹಸ್ರನಾಮ ಮಂತ್ರೋಚ್ಚಾರಣೆಯೊಂದಿಗೆ ಸಹಸ್ರಬಿಲ್ವಾರ್ಚನೆ. ಅನಂತರ ದೇವಸ್ಥಾನದ ವತಿಯಿಂದ ಅನ್ನನೈವೇದ್ಯ, ಈ ಪ್ರಸಾದವು ಓಲಗದವರಿಗೆ ಮತ್ತು ಚಾಮರ ಸೇವೆಯ ದೇವದಾಸಿಯರಿಗೆ ಸಲ್ಲುತ್ತದೆ. ಹುಣ್ಣಿಮೆ, ಅಮವಾಸ್ಯೆ ಹಾಗೂ ವಿಶೇಷ ಉತ್ಸವಾದಿಗಳಲ್ಲಿ "ವಿಶೇಷಗಟ್ಟಲೆ ಪೂಜೆ" ಎಂದು ಲಿಂಗಕ್ಕೆ ಬೆಳ್ಳಿಯ ಮುಖಮಂಡಲ ಹಾಕಿ ಸಿಂಗರಿಸುವರು. ಮೂರೂ ಕಾಲಗಳ ಪೂಜಾರಿಗಳು ಬೇರೆ ಬೇರೆ ಇದ್ದಾರೆ. ಪೂಜಾ ಕಾಲದಲ್ಲಿ ರುದ್ರಮಂತ್ರ ಪಠಿಸುವ ಬ್ರಾಹ್ಮಣರು ಬೇರೆ. ಇವರಿಗೆ ಉಪಾಧಿವಂತರೆನ್ನುತ್ತಾರೆ. "ಬನವಾಸಿಯ ಅರ್ಚಕತನ"ದಲ್ಲಿ ಒಂದು ವೈಶಿಷ್ಟ್ಯವಿದೆ. ಅರ್ಚಕರು ಶ್ರೀದೇವರಿಗೆ ಅಭಿಷೇಕ ಮಾಡಿ ಪೂಜೆಯನ್ನಷ್ಟೇ ಮಾಡುವರು. ಪೂಜಾಸಾಮುಗ್ರಿಗಳನ್ನು ಸಿದ್ಧಪಡಿಸಿಡುವದು, ನೀರು ತುಂಬಿಡುವದು, ಗಂಧ ಪುಷ್ಪಾಕ್ಷತೆಗಳನ್ನು ಸಿದ್ಧಪಡಿಸಿಡುವದು, ಆರತಿ ಹಚ್ಚಿಕೊಡುವದು. ಗಂಟೆ ತೂಗುವದು ಮುಂತಾದ ಶಾರೀರಿಕ ಶ್ರಮಗಳನ್ನು ಬ್ರಾಹ್ಮಣ ಪರಿಚಾರಕರು ಮಾಡುತ್ತಾರೆ.

ಶ್ರೀ ಪಾರ್ವತಿ: ಪ್ರತಿದಿನ ಮಧ್ಯಾಹ್ನ ಕಾಲದಲ್ಲಿ ಮಾತ್ರ ಪಂಚಾಮೃತ ಪೂಜೆ, ಅಭಿಷೇಕ. ನವರಾತ್ರಿಯ ಸಂದರ್ಭದಲ್ಲಿ ೯ ದಿನಗಳವರೆಗೆ ಪ್ರತಿದಿನ ಬೇರೆ ಬೇರೆ ಅವತಾರಗಳಿಗೆ ತಕ್ಕಂತೆ ದೇವಿಯ ಶೃಂಗಾರ ಮತ್ತು ರಾತ್ರಿ ದೇವಿಯ ಸಮ್ಮುಖದಲ್ಲಿ ಸಿಂಗರಿಸಿದ ಮಂಟಪದಲ್ಲಿ ಉತ್ಸವಮೂರ್ತಿ (ಶ್ರೀ ಮಧುಕೇಶ್ವರ, ಶ್ರೀ ಪಾರ್ವತಿ, ಶ್ರೀ ಷಣ್ಮುಖ)ಗಳನ್ನಿಟ್ಟು ಮಹಾಮಂಗಳಾರತಿ ಹಾಗೂ ಅಷ್ಟಾವಧಾನ ಸೇವಾ ಸಮರ್ಪಣೆ. ಈ ನವರಾತ್ರಿಯಲ್ಲಿ ರಾತ್ರಿಯ ಪೂಜಾಕಾಲದಲ್ಲಿ ದೇವರ ಸಮ್ಮುಖದ ಸದರ ಮಂಟಪದಲ್ಲಿ ಕತ್ತಿ, ಢಾಲು, ಚಾಮರಗಳನ್ನಿಡುವ ಪದ್ಧತಿ ಇದೆ. ಈ ದೇವಿಯ ಪೂಜೆಯನ್ನು ಸಾಯಂಕಾಲ ಪೂಜೆಯ ಅರ್ಚಕರು ಮಾಡುತ್ತಾರೆ.

ಶ್ರೀ ಮಹಾಗಣಪತಿ: ಪ್ರತಿದಿನ ಮಧ್ಯಾಹ್ನ ಕಾಲದಲ್ಲಿ ಪಂಚಾಮೃತ ಪೂಜಾಭಿಷೇಕ. ಈ ದೇವರ ಪೂಜೆಯನ್ನು ಮಂಗಳೂರು ಮನೆತನದ ಬ್ರಾಹ್ಮಣರು ಮಾಡುತ್ತಾರೆ. ಈ ದೇವರ ಎಡದ ಅರ್ಧಭಾಗ ಕಾಶಿಯಲ್ಲಿದೆ ಎಂದು ವದಂತಿ.

ಶ್ರೀ ನರಸಿಂಹ: ಪ್ರತಿದಿನ ಮಧ್ಯಾಹ್ನ ಕಾಲದಲ್ಲಿ ಪಂಚಾಮೃತ ಪೂಜಾಭಿಷೇಕ. ಈ ದೇವರ ಪೂಜೆಯನ್ನು ಹಿಂದೆ ವೈಷ್ಣವ ಬ್ರಾಹ್ಮಣರು ಮಾಡುತ್ತಿದ್ದರು. ಈ ದೇವರ ಅರ್ಚಕರಾದ ವೈಷ್ಣವ ಬ್ರಾಹ್ಮಣರು ಈಗ ಇಲ್ಲದ್ದರಿಂದ ಹವ್ಯಕ ಬ್ರಾಹ್ಮಣರೊಬ್ಬರು ಮಾಡುತ್ತಿದ್ದಾರೆ.

ದೇವಸ್ಥಾನದ ಪೂಜಾವಿನಿಯೋಗಗಳಿಗೆ ಸಂಬಂಧಪಟ್ಟ ಮನೆತನಗಳು

ಪ್ರಾತಃಕಾಲ ಮನೆತನ: ಶ್ರೀ ಮಧುಕೇಶ್ವರ ದೇವರ ಪ್ರಾತಃಕಾಲದ ಪೂಜಾರಿಗಳು ಬ್ರಾಹ್ಮಣರು. ಇವರು ಭಟ್ಟನಾಮಧೇಯರು. ಶ್ರೀ ಮಧುಕೇಶ್ವರ ದೇವರ ಪೂಜೆಯ ಸಂಗಡ ಶ್ರೀಮಾಧವ ಮತ್ತು ಶ್ರೀಸದಾಶಿವೇಶ್ವರದೇವರ ಪೂಜೆಮಾಡುವರು.

ಮಧ್ಯಾಹ್ನ ಮನೆತನ: ಶ್ರೀ ಮಧುಕೇಶ್ವರ ದೇವರ ಮಧ್ಯಾಹ್ನ ಕಾಲದ ಬ್ರಾಹ್ಮಣ ಪೂಜಾರಿಗಳು ದೀಕ್ಷಿತ ನಾಮಧೇಯರು. ಮಧುಕೇಶ್ವರ ದೇವರ ಪೂಜೆಯ ಸಂಗಡ ಶ್ರೀವೀರಭದ್ರ, ಶ್ರೀಬಸವಲಿಂಗೇಶ್ವರ ಮತ್ತು ಶ್ರೀ ತಿರುಮಲೇಶ್ವರ ದೇವರ ಪೂಜೆಮಾಡುವದು ಹಾಗೂ ಮಧ್ಯಾಹ್ನ ಕಾಲದ ಪಲ್ಲಕ್ಕಿ ಉತ್ಸವ ಸಾಗಿಸುವದು ಇವರ ಕೆಲಸ.

ಸಾಯಂಕಾಲ ಮನೆತನ: ಶ್ರೀ ಮಧುಕೇಶ್ವರ ದೇವರ ಸಾಯಂಕಾಲ ಪೂಜೆ ಮತ್ತು ಪಾರ್ವತೀದೇವಿಯ ಮಧ್ಯಾಹ್ನ ಪೂಜೆಗಳನ್ನು ಮಾಡುವ ಬ್ರಾಹ್ಮಣ ಪೂಜಾರಿಗಳಿವರು. ಶಾಸ್ತ್ರಿ–ನಾಮಧೇಯರಾದ ಇವರು ರಾತ್ರಿಯ ಕಾಲದ ಶ್ರೀ ದೇವರ ಉತ್ಸವ ಸಾಗಿಸುವರು.

ಮಂಗಳೂರು ಮನೆತನ: ಪ್ರತಿದಿನ ಮಧ್ಯಾಹ್ನ ಕಾಲದಲ್ಲಿ ಶ್ರೀಗಣಪತಿದೇವರ ಪೂಜೆ ಮಾಡುವ ಬ್ರಾಹ್ಮಣರು, ರಥೋತ್ಸವ ಸಾಗಿಸುವ ತಾಂತ್ರಿಕರು, ಕ್ಷೇತ್ರಪಾಲ ಪೂಜಾರಿಗಳು. **ಉತ್ಸವಮೂರ್ತಿ ಮನೆತನ** ಬ್ರಾಹ್ಮಣರು ಶ್ರೀ ಮಧುಕೇಶ್ವರ, ಶ್ರೀ ಪಾರ್ವತಿ, ಶ್ರೀ ಷಣ್ಮುಖ ಮತ್ತು ಶ್ರೀ ಗಣಪತಿ ದೇವರ ಉತ್ಸವ ಮೂರ್ತಿಗಳನ್ನು ಪೂಜಿಸುವದು, ಮೂರ್ತಿಗಳಿಗೆ ದೃಷ್ಟಿ ಚಿತ್ರ ಬರೆಯುವದು ಮತ್ತು ಶ್ರೀ ದೇವರ ದ್ವಾರದಮುಂದೆ ಸಾರಿಸಿ ರಂಗವಲ್ಲಿ ಚಿತ್ರಿಸುವದು ಇವರ ಕರ್ತವ್ಯ. ಇವರು ಬಹುಶಃ ಬಹುಕಾಲದ ಹಿಂದೆ ಈ ಮನೆತನವರು ಪ್ರಾಕಾರದ ಸುತ್ತಲಿನ ಉತ್ಸವ ಕಾಲದಲ್ಲಿ ಉತ್ಸವ

ಮೂರ್ತಿಗಳನ್ನು ಹೊತ್ತೊಯ್ಯುವ ಕಾರ್ಯ ಮಾಡುತ್ತಿದ್ದಿರಬೇಕೆಂದೆನಿಸುತ್ತದೆ; ಈಗ ಪಲ್ಲಕ್ಕಿ ಮೇಲೆ ಕೂಡ್ರಿಸಿ ಪ್ರದಕ್ಷಿಣೆ ಉತ್ಸವ ಸಾಗಿಸುತ್ತಾರೆ.

ಪತ್ರೆ ಮನೆತನ: ಶ್ರೀ ದೇವ–ದೇವಿಯರ ಪ್ರತಿನಿತ್ಯದ ಪೂಜೆಗೆ ಬಿಲ್ವಪತ್ರೆ ಪೂರೈಸುವ ಇವರು ಬ್ರಾಹ್ಮಣರು. ಶ್ರೀ ಮಧುಕೇಶ್ವರ, ಶ್ರೀ ಪಾರ್ವತಿ, ಶ್ರೀ ಮಹಾಗಣಪತಿ, ಶ್ರೀ ನರಸಿಂಹ ದೇವರ ಪೂಜೆಗಾಗಿ ನೀರು ಗಂಧ ಸಿದ್ಧಪಡಿಸಿಡುವದು. ಮತ್ತು ಅಷ್ಟದಿಕ್ಪಾಲಕ ದೇವರ ಪೂಜೆಮಾಡುವದು ಇವರ ನಿತ್ಯವಿಧಿ.

ಬಲಿಮನೆತನ: ನಿತ್ಯ ತ್ರಿಕಾಲದಲ್ಲಿ ಬಲಿಹಾಕುವದು ಈ ಮನೆತನದವರ ಕೆಲಸ.

ಸರ್ವಾಧಿಕಾರಿ: ದೇವಸ್ಥಾನದಲ್ಲಿ ನಿಶ್ಚಿತವಾಗಿದ್ದ ನಿತ್ಯ–ನೈಮಿತ್ತಿಕ ಪೂಜಾ ವಿಧಿ ವಿಧಾನಗಳ ಹಾಗೂ ಎಲ್ಲ ಕಾರ್ಯಗಳ ಮೇಲ್ವಿಚಾರಣೆ ಮತ್ತು ಮೊಕ್ತೇಸರ ಮಂಡಳಿಯು ಆಗಾಗ ಗೊತ್ತುಪಡಿಸುವ ಕ್ರಮಗಳನ್ನು ಕಾರ್ಯಗತ ಮಾಡುವದು ಇವರ ಕೆಲಸ.

ಯಜಮಾನ ಮನೆತನ: ಶ್ರೀ ದೇವಸ್ಥಾನದಿಂದ ಕೊಡಲ್ಪಡುವ ಉಪಾಧಿ (ಮರ್ಯಾದೆ) ಸಾಮಾನುಗಳನ್ನು ಪ್ರತಿದಿನ ಆಯಾ ಪೂಜಾಕಾಲದ ನಂತರ ಉಪಾಧಿವಂತರಿಗೆ ಹಂಚುವದು. ಇವರು ಆಂಧ್ರ (ಆನಂಗಿ) ಬ್ರಾಹ್ಮಣರು.

ನಾಡಿಗೇರ ಮನೆತನ: ದೇಶಸ್ಥ ಬ್ರಾಹ್ಮಣರು, ಶ್ರೀ ದೇವಸ್ಥಾನದಲ್ಲಿ ಲೆಕ್ಕ–ಪತ್ರ ಬರೆಯುವ ಕರಣಿಕರು. ದೇವಸ್ಥಾನದಿಂದ ಇವರಿಗೆ ಉತ್ಸವಾದಿಗಳಲ್ಲಿ ವಿಶೇಷ ಮರ್ಯಾದೆ ಸಲ್ಲುತ್ತದೆ.

ತಾಸಿನ್ ಮನೆತನ: ದೇಶಸ್ಥ ಬ್ರಾಹ್ಮಣರು. ಇವರು ಶ್ರೀದೇವರ ಉತ್ಸವಾದಿಗಳಲ್ಲಿ ಮತ್ತು ಬಹುಶಃ ರಾಜರ ಪ್ರಯಾಣ ಕಾಲದಲ್ಲಿ ಗಳಿಗೆಬಟ್ಟಲು ಹಿಡಿದು ಶುಭಮುಹೂರ್ತ ಗೊತ್ತುಪಡಿಸುವ ಕಾರ್ಯ ಮಾಡುತ್ತಿದ್ದಿರಬೇಕು.

ಒಡೆಯರ ಮನೆತನ: ಇವರು ವೀರಶೈವ ಮತಸ್ಥರು, ಶ್ರೀ ಮಧುಕೇಶ್ವರ ದೇವರ ಪ್ರತಿನಿಧಿಗಳು. ರಥೋತ್ಸವ ಕಾಲದಲ್ಲಿ ಹಾಗೂ ಶ್ರೀದೇವರ ವಿಶೇಷ ಸಮಾರಂಭಗಳಲ್ಲಿ ದೇವಸ್ಥಾನದ ವತಿಯಿಂದ ಕೊಡುವ ದಾನ–ಧರ್ಮಗಳನ್ನು ಶ್ರೀ ದೇವರ ಪ್ರತಿನಿಧಿಯಾಗಿ ಶ್ರೀ ಒಡೆಯರು ಕೊಡಬೇಕೆಂಬ ಪದ್ಧತಿ ಇದೆ. ಶ್ರೀ ದೇವಸ್ಥಾನದ ಕಾರ್ಯಕರ್ತರ ದಿನದ ಹಾಜರಿ ಇಡುವ, ಉತ್ಸವಾದಿಗಳ ಮೇಲ್ವಿಚಾರಣೆ ಮಾಡುತ್ತಿರುವ ಅಧಿಕಾರಿಗಳಿವರು. ಉತ್ಸವಾದಿಗಳಲ್ಲಿ ಶ್ರೀದೇವರ ಮುದ್ರೆ (ಬೆಳ್ಳಿ ಬೆತ್ತ) ಹಿಡಿದು ಮೇಲ್ವಿಚಾರಕರಾಗುತ್ತಾರೆ. ಶ್ರೀ ದೇವಸ್ಥಾನದಲ್ಲಿ ಇವರಿಗೆ ವಿಶೇಷ ಮಾನ–ಮರ್ಯಾದೆ, ಅಧಿಕಾರ ಇದೆ.

ಮಶಾಲ್ದಿ ಮನೆತನ: ಇವರು ಬ್ರಾಹ್ಮಣೇತರರು, ಕಬ್ಬೇರ ಜಾತಿಯವರು. ಹಗಲು–ರಾತ್ರಿಗಳ ಉತ್ಸವ ಕಾಲದಲ್ಲಿ ಉತ್ಸವದ ಸಂಗಡ ಮಶಾಲು (ದೀವಟಿಗೆ) ದೀಪ ಹಿಡಿದು ನಡೆಯುವ ಸೇವೆ ಹಾಗೂ ದೇವಸ್ಥಾನದ ಸ್ವಚ್ಛತಾಕಾರ್ಯ ಮಾಡುವದು ಇವರ ಕಾರ್ಯ.

ತುಲಾಧಾರ ಮನೆತನ: ಇವರು ಶ್ರೀ ಮಧುಕೇಶ್ವರ ದೇವಸ್ಥಾನದಲ್ಲಿ ಶ್ರೀದೇವರ ನಿತ್ಯ–ನೈಮಿತ್ತಿಕ ಪೂಜಾ–ವಿನಿಯೋಗಗಳಿಗೆ ಅಗತ್ಯವಿದ್ದ ಸಾಮಾನುಗಳನ್ನು ತೂಕ ಮಾಡಿ ಅಥವಾ ಅಳತೆ ಮಾಡಿ ಕೊಡುವರು. ಇವರು ವೈಶ್ಯ ಜಾತಿಯವರಾಗಿದ್ದರು. ಈಗ ಈ ಕೆಲಸವನ್ನು ಬ್ರಾಹ್ಮಣ ವರ್ಗದವರೇ ಮಾಡುತ್ತಾರೆ.

ಬುಕ್ಕಿಟ್ಟುಗಾರ ಮನೆತನ: ಇವರು ಮುಸಲ್ಮಾನ ಜಾತಿಯವರು. ವಿಶೇಷ ಉತ್ಸವ, ರಥೋತ್ಸವಗಳ ಕಾಲದಲ್ಲಿ ಬುಕ್ಕಿಟ್ಟು ಪೂರೈಸುವದು ಇವರ ಕಾರ್ಯ. ಬುಕ್ಕಿಟ್ಟು ಒಂದು ಸುವಾಸನೆಯುಳ್ಳ ಹಿಟ್ಟು. ಈಗಿನ ಮದುವೆ ಸಮಾರಂಭಗಳಲ್ಲಿ ಸುವಾಸಿತ ಪನ್ನೀರು ಚಿಮುಕಿಸುವಂತೆ ಮೊದಲಿನ ಕಾಲದಲ್ಲಿ ದೇವಸ್ಥಾನದ ವಿಶೇಷ ಸಭೆ–ಸಮಾರಂಭಗಳಲ್ಲಿ ಈ ಬುಕ್ಕಿಟ್ಟನ್ನು ಸಿಂಪಡಿಸುತ್ತಿದ್ದರಂತೆ. ರಥೋತ್ಸವ ಕಾಲದಲ್ಲಿ ಇವರಿಗೆ ಮರ್ಯಾದೆ ಸಲ್ಲುತ್ತಿದ್ದಿತಂತೆ.

ಉಪ್ಪಾರರು: ಶ್ರೀದೇವರ ಉತ್ಸವಗಳಲ್ಲಿ ಪಲ್ಲಕ್ಕಿ, ಲಾಲಕಿಗಳನ್ನು ಹೊತ್ತೊಯ್ಯುವದು ಹಾಗೂ ದೀಪೋತ್ಸವದ ದಿನಗಳಲ್ಲಿ ಹಣತೆಗಳನ್ನಿಡುವದು, ಎಣ್ಣೆ ಹಾಕಿ ದೀಪ ಹಚ್ಚುವದು ಮತ್ತು ತೇರುಗಳ ನೆಲೆಗಳನ್ನು ರಚಿಸುವದು ಈ ಜನಾಂಗದವರ ಕೆಲಸ.

ಮಡಿವಾಳರು: ಶ್ರೀ ದೇವ–ದೇವಿ ವಿಗ್ರಹಗಳಿಗೆ ಹೊದೆಸುವ ಬಟ್ಟೆಗಳನ್ನು ಬಿಟ್ಟು ಉಳಿದ ಯಾವದೇ ಬಟ್ಟೆಗಳನ್ನು ತೊಳೆಯುವದು ಹಾಗೂ ದೀಪೋತ್ಸವ ಕಾಲದಲ್ಲಿ ದೀಪಗಳಿಗಾಗಿ ಬತ್ತಿ ತಯಾರಿಸಿ ಕೊಡುವದು ಇವರ ಕೆಲಸ.

ಗುಡಿಗಾರರು: ಚವತಿಯ ಹಬ್ಬದಲ್ಲಿ ದೇವಸ್ಥಾನದಲ್ಲಿ ಕೂಡ್ರಿಸುವ ಮಣ್ಣಿನ ಗಣಪತಿ ಮೂರ್ತಿ ತಯಾರಿಸುವದು, ನಾಲ್ಕೂ ತೇರುಗಳ ತಟ್ಟಿಗಳಿಗೆ ಬಣ್ಣ ಬರೆಯುವದು ಇವರ ಕೆಲಸ.

ಇದಲ್ಲದೆ, ದೇವಸ್ಥಾನದ ಬಗ್ಗೆ ಕಾಯಂ ವಾಲಗ ಸೇವೆ ಸಲ್ಲಿಸುವ ಮನೆತನವೂ ಚಾಮರಸೇವೆ ನಡೆಸುವ ದೇವದಾಸಿ ಮನೆತನವೂ ಇವೆ. ಶ್ರೀ ಮಧುಕೇಶ್ವರ ದೇವರ ತ್ರಿಕಾಲದ ಪೂಜೆಗಳಲ್ಲಿ ತಯಾರಿಸುವ ನೈವೇದ್ಯದ ಅನ್ನವು ಇವರಿಗೆ ಸಲ್ಲುತ್ತದೆ.

ಇದಲ್ಲದೆ, ದೇವಸ್ಥಾನದ ಬಗ್ಗೆ ಗೊತ್ತುಪಡಿಸಲ್ಪಟ್ಟ ಸೊನಗಾರರು, ಜಿನಗಾರರು, ಬಡಿಗರು, ಗಾಣಿಗರು ಇದ್ದರು. ಅವರವರ ಕಾರ್ಯಕ್ಕೆ ತಕ್ಕಂತೆ ಯೋಗ್ಯ ಮರ್ಯಾದೆ ಅವರಿಗೆ ಸಲ್ಲುತ್ತಿದ್ದಿತು.

ಶ್ರೀ ದೇವಸ್ಥಾನದ ಉತ್ಸವ, ಸಮಾರಂಭಗಳ ದಿನಗಳಲ್ಲಿ ಮಾತ್ರ ಬಂದು ಸೇವೆ ಸಲ್ಲಿಸುವ ಉಪ್ಪಾರರು, ಗುಡಿಗಾರರು, ಮಡಿವಾಳರು ಮುಂತಾದ ಸೇವಾಧಾರಿಗಳಿಗೆ ಅಧಿಕಾರದ ಅಕ್ಕಿ, ಕೆಲವಾಂಶ ಹಣದರೂಪದಲ್ಲಿ ಪ್ರತಿಫಲ ದೊರೆಯುತ್ತದೆ.

ಶ್ರೀ ಮಧುಕೇಶ್ವರ ದೇವಸ್ಥಾನದ ಅರ್ಚಕರು, ಉಪಾಧಿವಂತರು; ಇವರಿಗೆ ನಿರ್ದಿಷ್ಟಪಡಿಸಿದ ತಸ್ತೀಕುಹಣ ದೊರೆಯುತ್ತದೆ. ನಿತ್ಯದ ಕಾರ್ಯಕರ್ತರಿಗೆ ಪಗಾರರೂಪದಲ್ಲಿ ಹಣ ಸಲ್ಲುತ್ತದೆ.

ಶ್ರೀ ಮಧುಕೇಶ್ವರ ದೇವಸ್ಥಾನದ ನಿತ್ಯ ನೈಮಿತ್ತಿಕ ಪೂಜೆ, ಉತ್ಸವ, ವಿಧಿ ವಿನಿಯೋಗ ಕ್ರಮಗಳೆಲ್ಲವೂ ರಾಜಾಶ್ರಯದ ಕಾಲದಲ್ಲಿ ನಿಶ್ಚಿತಪಡಿಸಿದವುಗಳಾಗಿವೆ.

ಪೂಜಾವಿಧಾನಗಳು

ಶ್ರೀ ಮಧುಕೇಶ್ವರ: ಜೇನುತುಪ್ಪದ ವರ್ಣಯುಕ್ತವಾದ ಅಷ್ಟಕೋನಾಕೃತಿಯ ಪಾಣಿಪೀಠವನ್ನೊಳಗೊಂಡ ೫ ಘೂಟು (ಪೀಠವನ್ನೊಳಗೊಂಡು) ಎತ್ತರವಾದ ಭವ್ಯಲಿಂಗ. ಪ್ರತಿದಿನ ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲಗಳಲ್ಲಿ ಏಕಾದಶರುದ್ರ ಪಠನದೊಂದಿಗೆ ಪಂಚಾಮೃತ ಅಭಿಷೇಕ, ಪೂಜಾನಂತರ ಸಹಸ್ರನಾಮ ಮಂತ್ರೋಚ್ಚಾರಣೆಯೊಂದಿಗೆ ಸಹಸ್ರಬಿಲ್ವಾರ್ಚನೆ. ಅನಂತರ ದೇವಸ್ಥಾನದ ವತಿಯಿಂದ ಅನ್ನನೈವೇದ್ಯ, ಈ ಪ್ರಸಾದವು ಓಲಗದವರಿಗೆ ಮತ್ತು ಚಾಮರ ಸೇವೆಯ ದೇವದಾಸಿಯರಿಗೆ ಸಲ್ಲುತ್ತದೆ. ಹುಣ್ಣಿಮೆ, ಅಮವಾಸ್ಯೆ ಹಾಗೂ ವಿಶೇಷ ಉತ್ಸವಾದಿಗಳಲ್ಲಿ "ವಿಶೇಷಗಟ್ಟಲೆ ಪೂಜೆ" ಎಂದು ಲಿಂಗಕ್ಕೆ ಬೆಳ್ಳಿಯ ಮುಖಮಂಡಲ ಹಾಕಿ ಸಿಂಗರಿಸುವರು. ಮೂರೂ ಕಾಲಗಳ ಪೂಜಾರಿಗಳು ಬೇರೆ ಬೇರೆ ಇದ್ದಾರೆ. ಪೂಜಾ ಕಾಲದಲ್ಲಿ ರುದ್ರಮಂತ್ರ ಪಠಿಸುವ ಬ್ರಾಹ್ಮಣರು ಬೇರೆ. ಇವರಿಗೆ ಉಪಾಧಿವಂತರೆನ್ನುತ್ತಾರೆ. "ಬನವಾಸಿಯ ಅರ್ಚಕತನ"ದಲ್ಲಿ ಒಂದು ವೈಶಿಷ್ಟ್ಯವಿದೆ. ಅರ್ಚಕರು ಶ್ರೀದೇವರಿಗೆ ಅಭಿಷೇಕ ಮಾಡಿ ಪೂಜೆಯನ್ನಷ್ಟೇ ಮಾಡುವರು. ಪೂಜಾಸಾಮಗ್ರಿಗಳನ್ನು ಸಿದ್ಧಪಡಿಸಿಡುವದು. ನೀರು ತುಂಬಿಡುವದು, ಗಂಧ ಪುಷ್ಪಾಕ್ಷತೆಗಳನ್ನು ಸಿದ್ಧಪಡಿಸಿಡುವದು, ಆರತಿ ಹಚ್ಚಿಕೊಡುವದು. ಗಂಟೆ ತೂಗುವದು ಮುಂತಾದ ಶಾರೀರಿಕ ಶ್ರಮಗಳನ್ನು ಬ್ರಾಹ್ಮಣ ಪರಿಚಾರಕರು ಮಾಡುತ್ತಾರೆ.

ಶ್ರೀ ಪಾರ್ವತಿ: ಪ್ರತಿದಿನ ಮಧ್ಯಾಹ್ನ ಕಾಲದಲ್ಲಿ ಮಾತ್ರ ಪಂಚಾಮೃತ ಪೂಜೆ, ಅಭಿಷೇಕ. ನವರಾತ್ರಿಯ ಸಂದರ್ಭದಲ್ಲಿ ೯ ದಿನಗಳವರೆಗೆ ಪ್ರತಿದಿನ ಬೇರೆ ಬೇರೆ ಅವತಾರಗಳಿಗೆ ತಕ್ಕಂತೆ ದೇವಿಯ ಶೃಂಗಾರ ಮತ್ತು ರಾತ್ರಿ ದೇವಿಯ ಸಮ್ಮುಖದಲ್ಲಿ ಸಿಂಗರಿಸಿದ ಮಂಟಪದಲ್ಲಿ ಉತ್ಸವಮೂರ್ತಿ (ಶ್ರೀ ಮಧುಕೇಶ್ವರ, ಶ್ರೀ ಪಾರ್ವತಿ, ಶ್ರೀ ಷಣ್ಮುಖ)ಗಳನ್ನಿಟ್ಟು ಮಹಾಮಂಗಳಾರತಿ ಹಾಗೂ ಅಷ್ಟಾವಧಾನ ಸೇವಾ ಸಮರ್ಪಣೆ.

ಈ ನವರಾತ್ರಿಯಲ್ಲಿ ರಾತ್ರಿಯ ಪೂಜಾಕಾಲದಲ್ಲಿ ದೇವರ ಸಮ್ಮುಖದ ಸದರ ಮಂಟಪದಲ್ಲಿ ಕತ್ತಿ, ಢಾಲು, ಚಾಮರಗಳನ್ನಿಡುವ ಪದ್ಧತಿ ಇದೆ. ಈ ದೇವಿಯ ಪೂಜೆಯನ್ನು ಸಾಯಂಕಾಲ ಪೂಜೆಯ ಅರ್ಚಕರು ಮಾಡುತ್ತಾರೆ.

ಶ್ರೀ ಮಹಾಗಣಪತಿ: ಪ್ರತಿದಿನ ಮಧ್ಯಾಹ್ನ ಕಾಲದಲ್ಲಿ ಪಂಚಾಮೃತ ಪೂಜಾಭಿಷೇಕ. ಈ ದೇವರ ಪೂಜೆಯನ್ನು ಮಂಗಳೂರು ಮನೆತನದ ಬ್ರಾಹ್ಮಣರು ಮಾಡುತ್ತಾರೆ. ಈ ದೇವರ ಎಡದ ಅರ್ಧಭಾಗ ಕಾಶಿಯಲ್ಲಿದೆ ಎಂದು ವದಂತಿ.

ಶ್ರೀ ನರಸಿಂಹ: ಪ್ರತಿದಿನ ಮಧ್ಯಾಹ್ನ ಕಾಲದಲ್ಲಿ ಪಂಚಾಮೃತ ಪೂಜಾಭಿಷೇಕ. ಈ ದೇವರ ಪೂಜೆಯನ್ನು ಹಿಂದೆ ವೈಷ್ಣವ ಬ್ರಾಹ್ಮಣರು ಮಾಡುತ್ತಿದ್ದರು. ಈ ದೇವರ ಅರ್ಚಕರಾದ ವೈಷ್ಣವ ಬ್ರಾಹ್ಮಣರು ಈಗ ಇಲ್ಲದ್ದರಿಂದ ಹವ್ಯಕ ಬ್ರಾಹ್ಮಣರೊಬ್ಬರು ಮಾಡುತ್ತಿದ್ದಾರೆ.

ದೇವಸ್ಥಾನದ ಪೂಜಾವಿನಿಯೋಗಗಳಿಗೆ ಸಂಬಂಧಪಟ್ಟ ಮನೆತನಗಳು

ಪ್ರಾತಃಕಾಲ ಮನೆತನ: ಶ್ರೀ ಮಧುಕೇಶ್ವರ ದೇವರ ಪ್ರಾತಃಕಾಲದ ಪೂಜಾರಿಗಳು ಬ್ರಾಹ್ಮಣರು. ಇವರು ಭಟ್ಟನಾಮಧೇಯರು. ಶ್ರೀ ಮಧುಕೇಶ್ವರ ದೇವರ ಪೂಜೆಯ ಸಂಗಡ ಶ್ರೀಮಾಧವ ಮತ್ತು ಶ್ರೀಸದಾಶಿವೇಶ್ವರದೇವರ ಪೂಜೆಮಾಡುವರು.

ಮಧ್ಯಾಹ್ನ ಮನೆತನ: ಶ್ರೀ ಮಧುಕೇಶ್ವರ ದೇವರ ಮಧ್ಯಾಹ್ನ ಕಾಲದ ಬ್ರಾಹ್ಮಣ ಪೂಜಾರಿಗಳು ದೀಕ್ಷಿತ ನಾಮಧೇಯರು. ಮಧುಕೇಶ್ವರ ದೇವರ ಪೂಜೆಯ ಸಂಗಡ ಶ್ರೀವೀರಭದ್ರ, ಶ್ರೀಬಸವಲಿಂಗೇಶ್ವರ ಮತ್ತು ಶ್ರೀ ತಿರುಮಲೇಶ್ವರ ದೇವರ ಪೂಜೆಮಾಡುವದು ಹಾಗೂ ಮಧ್ಯಾಹ್ನ ಕಾಲದ ಪಲ್ಲಕ್ಕಿ ಉತ್ಸವ ಸಾಗಿಸುವದು ಇವರ ಕೆಲಸ.

ಸಾಯಂಕಾಲ ಮನೆತನ: ಶ್ರೀ ಮಧುಕೇಶ್ವರ ದೇವರ ಸಾಯಂಕಾಲ ಪೂಜೆ ಮತ್ತು ಪಾರ್ವತೀದೇವಿಯ ಮಧ್ಯಾಹ್ನ ಪೂಜೆಗಳನ್ನು ಮಾಡುವ ಬ್ರಾಹ್ಮಣ ಪೂಜಾರಿಗಳಿವರು. ಶಾಸ್ತ್ರಿ–ನಾಮಧೇಯರಾದ ಇವರು ರಾತ್ರಿಯ ಕಾಲದ ಶ್ರೀ ದೇವರ ಉತ್ಸವ ಸಾಗಿಸುವರು.

ಮಂಗಳೂರು ಮನೆತನ: ಬ್ರಾಹ್ಮಣರು ಶ್ರೀ ಮಧುಕೇಶ್ವರ, ಶ್ರೀ ಪಾರ್ವತಿ, ಶ್ರೀ ಷಣ್ಮುಖ ಮತ್ತು ಶ್ರೀ ಗಣಪತಿ ದೇವರ ಉತ್ಸವ ಮೂರ್ತಿಗಳನ್ನು ಪೂಜಿಸುವದು, ಮೂರ್ತಿಗಳಿಗೆ ದೃಷ್ಟಿ ಚಿತ್ರ ಬರೆಯುವದು ಮತ್ತು ಶ್ರೀ ದೇವರ ದ್ವಾರದಮುಂದೆ ಸಾರಿಸಿ ರಂಗವಲ್ಲಿ ಚಿತ್ರಿಸುವದು ಇವರ ಕರ್ತವ್ಯ. ಇವರು ಬಹುಶಃ ಬಹುಕಾಲದ

ಹಿಂದೆ ಈ ಮನೆತನವರು ಪ್ರಾಕಾರದ ಸುತ್ತಲಿನ ಉತ್ಸವ ಕಾಲದಲ್ಲಿ ಉತ್ಸವ ಮೂರ್ತಿಗಳನ್ನು ಹೊತ್ತೊಯ್ಯುವ ಕಾರ್ಯ ಮಾಡುತ್ತಿದ್ದಿರಬೇಕೆಂದೆನಿಸುತ್ತದೆ; ಈಗ ಪಲ್ಲಕ್ಕಿ ಮೇಲೆಯ ಕೂಡ್ರಿಸಿ ಪ್ರದಕ್ಷಿಣೆ ಉತ್ಸವ ಸಾಗಿಸುತ್ತಾರೆ.

ಪತ್ರೆ ಮನೆತನ: ಶ್ರೀ ದೇವ–ದೇವಿಯರ ಪ್ರತಿನಿತ್ಯದ ಪೂಜೆಗೆ ಬಿಲ್ವಪತ್ರೆ ಪೂರೈಸುವ ಇವರು ಬ್ರಾಹ್ಮಣರು. ಶ್ರೀ ಮಧುಕೇಶ್ವರ, ಶ್ರೀ ಪಾರ್ವತಿ, ಶ್ರೀ ಮಹಾಗಣಪತಿ, ಶ್ರೀ ನರಸಿಂಹ ದೇವರ ಪೂಜೆಗಾಗಿ ನೀರು ಗಂಧ ಸಿದ್ಧಪಡಿಸಿಡುವದು. ಮತ್ತು ಅಷ್ಟದಿಕ್ಪಾಲಕ ದೇವರ ಪೂಜೆಮಾಡುವದು ಇವರ ನಿತ್ಯವಿಧಿ.

ಬಲಿಮನೆತನ: ನಿತ್ಯ ತ್ರಿಕಾಲದಲ್ಲಿ ಬಲಿಹಾಕುವದು ಈ ಮನೆತನದವರ ಕೆಲಸ.

ಸರ್ವಾಧಿಕಾರಿ: ದೇವಸ್ಥಾನದಲ್ಲಿ ನಿಶ್ಚಿತವಾಗಿದ್ದ ನಿತ್ಯ–ನೈಮಿತ್ತಿಕ ಪೂಜಾ ವಿಧಿ ವಿಧಾನಗಳ ಹಾಗೂ ಎಲ್ಲ ಕಾರ್ಯಗಳ ಮೇಲ್ವಿಚಾರಣೆ ಮತ್ತು ಮೊಕ್ತೇಸರ ಮಂಡಳಿಯು ಆಗಾಗ ಗೊತ್ತುಪಡಿಸುವ ಕ್ರಮಗಳನ್ನು ಕಾರ್ಯಗತ ಮಾಡುವದು ಇವರ ಕೆಲಸ.

ಯಜಮಾನ ಮನೆತನ: ಶ್ರೀ ದೇವಸ್ಥಾನದಿಂದ ಕೊಡಲ್ಪಡುವ ಉಪಾಧಿ (ಮರ್ಯಾದೆ) ಸಾಮಾನುಗಳನ್ನು ಪ್ರತಿದಿನ ಆಯಾ ಪೂಜಾಕಾಲದ ನಂತರ ಉಪಾಧಿವಂತರಿಗೆ ಹಂಚುವದು. ಇವರು ಆಂಧ್ರ (ಆನಂಗಿ) ಬ್ರಾಹ್ಮಣರು.

ನಾಡಿಗೇರ ಮನೆತನ: ದೇಶಸ್ಥ ಬ್ರಾಹ್ಮಣರು, ಶ್ರೀ ದೇವಸ್ಥಾನದಲ್ಲಿ ಲೆಕ್ಕ–ಪತ್ರ ಬರೆಯುವ ಕರಣಿಕರು. ದೇವಸ್ಥಾನದಿಂದ ಇವರಿಗೆ ಉತ್ಸವಾದಿಗಳಲ್ಲಿ ವಿಶೇಷ ಮರ್ಯಾದೆ ಸಲ್ಲುತ್ತದೆ.

ತಾಸಿನ್ ಮನೆತನ: ದೇಶಸ್ಥ ಬ್ರಾಹ್ಮಣರು. ಇದರು ಶ್ರೀದೇವರ ಉತ್ಸವಾದಿಗಳಲ್ಲಿ ಮತ್ತು ಬಹುಶಃ ರಾಜರ ಪ್ರಯಾಣ ಕಾಲದಲ್ಲಿ ಗಳಿಗೆಬಟ್ಟಲು ಹಿಡಿದು ಶುಭಮುಹೂರ್ತ ಗೊತ್ತುಪಡಿಸುವ ಕಾರ್ಯ ಮಾಡುತ್ತಿದ್ದಿರಬೇಕು.

ಒಡೆಯರ ಮನೆತನ: ಇವರು ವೀರಶೈವ ಮತಸ್ಥರು, ಶ್ರೀ ಮಧುಕೇಶ್ವರ ದೇವರ ಪ್ರತಿನಿಧಿಗಳು. ರಥೋತ್ಸವ ಕಾಲದಲ್ಲಿ ಹಾಗೂ ಶ್ರೀದೇವರ ವಿಶೇಷ ಸಮಾರಂಭಗಳಲ್ಲಿ ದೇವಸ್ಥಾನದ ವತಿಯಿಂದ ಕೊಡುವ ದಾನ–ಧರ್ಮಗಳನ್ನು ಶ್ರೀ ದೇವರ ಪ್ರತಿನಿಧಿಯಾಗಿ ಶ್ರೀ ಒಡೆಯರು ಕೊಡಬೇಕೆಂಬ ಪದ್ಧತಿ ಇದೆ. ಶ್ರೀ ದೇವಸ್ಥಾನದ ಕಾರ್ಯಕರ್ತರ ದಿನದ ಹಾಜರಿ ಇಡುವ, ಉತ್ಸವಾದಿಗಳ ಮೇಲ್ವಿಚಾರಣೆ ಮಾಡುತ್ತಿರುವ ಅಧಿಕಾರಿಗಳಿವರು. ಉತ್ಸವಾದಿಗಳಲ್ಲಿ ಶ್ರೀದೇವರ ಮುದ್ರೆ (ಬೆಳ್ಳಿ ಬೆತ್ತ) ಹಿಡಿದು ಮೇಲ್ವಿಚಾರಕರಾಗುತ್ತಾರೆ. ಶ್ರೀ ದೇವಸ್ಥಾನದಲ್ಲಿ ಇವರಿಗೆ ವಿಶೇಷ ಮಾನ–ಮರ್ಯಾದೆ, ಅಧಿಕಾರ ಇದೆ.

ಮಶಾಲ್ದಿ ಮನೆತನ: ಇವರು ಬ್ರಾಹ್ಮಣೇತರರು, +ಕಬ್ಬೇರ ಜಾತಿಯವರು. ಹಗಲು–ರಾತ್ರಿಗಳ ಉತ್ಸವ ಕಾಲದಲ್ಲಿ ಉತ್ಸವದ ಸಂಗಡ ಮಶಾಲು (ದೀವಟಿಗೆ) ದೀಪ ಹಿಡಿದು ನಡೆಯುವ ಸೇವೆ ಹಾಗೂ ದೇವಸ್ಥಾನದ ಸ್ವಚ್ಛತಾಕಾರ್ಯ ಮಾಡುವದು ಇವರ ಕಾರ್ಯ.

ತುಲಾಧಾರ ಮನೆತನ: ಇವರು ಶ್ರೀ ಮಧುಕೇಶ್ವರ ದೇವಸ್ಥಾನದಲ್ಲಿ ಶ್ರೀದೇವರ ನಿತ್ಯ–ನೈಮಿತ್ತಿಕ ಪೂಜಾ–ವಿನಿಯೋಗಗಳಿಗೆ ಅಗತ್ಯವಿದ್ಧ ಸಾಮಾನುಗಳನ್ನು ತೂಕ ಮಾಡಿ ಅಥವಾ ಅಳತೆ ಮಾಡಿ ಕೊಡುವರು. ಇವರು ವೈಶ್ಯ ಜಾತಿಯವರಾಗಿದ್ದರು. ಈಗ ಈ ಕೆಲಸವನ್ನು ಬ್ರಾಹ್ಮಣ ವರ್ಗದವರೇ ಮಾಡುತ್ತಾರೆ.

ಬುಕ್ಕಿಟ್ಟುಗಾರ ಮನೆತನ: ಇವರು ಮುಸಲ್ಮಾನ ಜಾತಿಯವರು. ವಿಶೇಷ ಉತ್ಸವ, ರಥೋತ್ಸವಗಳ ಕಾಲದಲ್ಲಿ ಬುಕ್ಕಿಟ್ಟು ಪೂರೈಸುವದು ಇವರ ಕಾರ್ಯ. ಬುಕ್ಕಿಟ್ಟು ಒಂದು ಸುವಾಸನೆಯುಳ್ಳ ಹಿಟ್ಟು. ಈಗಿನ ಮದುವೆ ಸಮಾರಂಭಗಳಲ್ಲಿ ಸುವಾಸಿತ ಪನ್ನೀರು ಚಿಮುಕಿಸುವಂತೆ ಮೊದಲಿನ ಕಾಲದಲ್ಲಿ ದೇವಸ್ಥಾನದ ವಿಶೇಷ ಸಭೆ–ಸಮಾರಂಭಗಳಲ್ಲಿ ಈ ಬುಕ್ಕಿಟ್ಟನ್ನು ಸಿಂಪಡಿಸುತ್ತಿದ್ದರಂತೆ. ರಥೋತ್ಸವ ಕಾಲದಲ್ಲಿ ಇವರಿಗೆ ಮರ್ಯಾದೆ ಸಲ್ಲುತ್ತಿದ್ದಿತಂತೆ.

ಉಪ್ಪಾರರು: ಶ್ರೀದೇವರ ಉತ್ಸವಗಳಲ್ಲಿ ಪಲ್ಲಕ್ಕಿ, ಲಾಲಕಿಗಳನ್ನು ಹೊತ್ತೊಯ್ಯುವದು ಹಾಗೂ ದೀಪೋತ್ಸವದ ದಿನಗಳಲ್ಲಿ ಹಣತೆಗಳನ್ನಿಡುವದು, ಎಣ್ಣೆ ಹಾಕಿ ದೀಪ ಹಚ್ಚುವದು ಮತ್ತು ತೇರುಗಳ ನೆಲೆಗಳನ್ನು ರಚಿಸುವದು ಈ ಜನಾಂಗದವರ ಕೆಲಸ.

ಮಡಿವಾಳರು: ಶ್ರೀ ದೇವ–ದೇವಿ ವಿಗ್ರಹಗಳಿಗೆ ಹೊದೆಸುವ ಬಟ್ಟೆಗಳನ್ನು ಬಿಟ್ಟು ಉಳಿದ ಯಾದವೇ ಬಟ್ಟೆಗಳನ್ನು ತೊಳೆಯುವದು ಹಾಗೂ ದೀಪೋತ್ಸವ ಕಾಲದಲ್ಲಿ ದೀಪಗಳಿಗಾಗಿ ಬತ್ತಿ ತಯಾರಿಸಿ ಕೊಡುವದು ಇವರ ಕೆಲಸ.

ಗುಡಿಗಾರರು: ಚವತಿಯ ಹಬ್ಬದಲ್ಲಿ ದೇವಸ್ಥಾನದಲ್ಲಿ ಕೂಡ್ರಿಸುವ ಮಣ್ಣಿನ ಗಣಪತಿ ಮೂರ್ತಿ ತಯಾರಿಸುವದು, ನಾಲ್ಕೂ ತೇರುಗಳ ತಟ್ಟಿಗಳಿಗೆ ಬಣ್ಣ ಬರೆಯುವದು ಇವರ ಕೆಲಸ.

ಇದಲ್ಲದೆ, ದೇವಸ್ಥಾನದ ಬಗ್ಗೆ ಕಾಯಂ ವಾಲಗ ಸೇವೆ ಸಲ್ಲಿಸುವ ಮನೆತನವೂ ಚಾಮರಸೇವೆ ನಡೆಸುವ ದೇವದಾಸಿ ಮನೆತನವೂ ಇವೆ. ಶ್ರೀ ಮಧುಕೇಶ್ವರ ದೇವರ ತ್ರಿಕಾಲದ ಪೂಜೆಗಳಲ್ಲಿ ತಯಾರಿಸುವ ನೈವೇದ್ಯದ ಅನ್ನವು ಇವರಿಗೆ ಸಲ್ಲುತ್ತದೆ.

ಇದಲ್ಲದೆ, ದೇವಸ್ಥಾನದ ಬಗ್ಗೆ ಗೊತ್ತುಪಡಿಸಲ್ಪಟ್ಟ ಸೊನಗಾರರು, ಜಿನಗಾರರು, ಬಡಿಗರು, ಗಾಣಿಗರು ಇದ್ದರು. ಅವರವರ ಕಾರ್ಯಕ್ಕೆ ತಕ್ಕಂತೆ ಯೋಗ್ಯ ಮರ್ಯಾದೆ ಅವರಿಗೆ ಸಲ್ಲುತ್ತಿದ್ದಿತು.

ಶ್ರೀ ದೇವಸ್ಥಾನದ ಉತ್ಸವ, ಸಮಾರಂಭಗಳ ದಿನಗಳಲ್ಲಿ ಮಾತ್ರ ಬಂದು ಸೇವೆ ಸಲ್ಲಿಸುವ ಉಪ್ಪಾರರು, ಗುಡಿಗಾರರು, ಮಡಿವಾಳರು ಮುಂತಾದ ಸೇವಾಧಾರಿಗಳಿಗೆ ಅಧಿಕಾರದ ಅಕ್ಕಿ, ಕೆಲವಾಂಶ ಹಣದರೂಪದಲ್ಲಿ ಪ್ರತಿಫಲ ದೊರೆಯುತ್ತದೆ.

ಶ್ರೀ ಮಧುಕೇಶ್ವರ ದೇವಸ್ಥಾನದ ಅರ್ಚಕರು, ಉಪಾಧಿವಂತರು; ಇವರಿಗೆ ನಿರ್ದಿಷ್ಟಪಡಿಸಿದ ತಸ್ತೀಕುಹಣ ದೊರೆಯುತ್ತದೆ. ನಿತ್ಯದ ಕಾರ್ಯಕರ್ತರಿಗೆ ಪಗಾರರೂಪದಲ್ಲಿ ಹಣ ಸಲ್ಲುತ್ತದೆ.

ಶ್ರೀ ಮಧುಕೇಶ್ವರ ದೇವಸ್ಥಾನದ ನಿತ್ಯ ನೈಮಿತ್ತಿಕ ಪೂಜೆ, ಉತ್ಸವ, ವಿಧಿ ವಿನಿಯೋಗ ಕ್ರಮಗಳೆಲ್ಲವೂ ರಾಜಾಶ್ರಯದ ಕಾಲದಲ್ಲಿ ನಿಶ್ಚಿತಪಡಿಸಿದವುಗಳಾಗಿವೆ.

ವಿಶೇಷ ಉತ್ಸವಗಳ ವಿವರ

ಉತ್ಸವಗಳು ೩ ರೀತಿಯಿಂದ ಸಾಗುತ್ತವೆ: (೧) ಪಲ್ಲಕ್ಕಿ ಉತ್ಸವ (೨) ಲಾಲಕಿ (ಬೆಳ್ಳಿಮಂಟಪ) ಉತ್ಸವ (೩) ರಥೋತ್ಸವ

ಮಾಸಗಳು	ತಿಥಿ	ವಿಶೇಷ
ಚೈತ್ರ	ಯುಗಾದಿ ಪಾಡ್ಯ	ವಿಶೇಷಗಟ್ಟಲೆ ಪೂಜೆ, ಪಲ್ಲಕ್ಕಿ ಉತ್ಸವ, ಯುಗಾದಿ ಫಲವಾಚನ (ಪುರೋಹಿತರಿಂದ)
	ಶುದ್ಧ ಪಂಚಮಿಯಿಂದ ನವಮಿ ಅಥವಾ ದಶಮಿಯವರೆಗೆ	ಚಿಕ್ಕ ಎರಡು ರಥೋತ್ಸವಗಳು
	ಶುದ್ಧ ದಶಮಿ ಅಥವಾ ಏಕಾದಶಿ ಶುದ್ಧ ಮಘಾ ನಕ್ಷತ್ರ (ಏಕಾದಶಿ ಅಥವಾ ದ್ವಾದಶಿ)	ಗಜಯಂತ್ರೋತ್ಸವ (ಹೂವಿನ ತೇರು) ಶ್ರೀ ಮನ್ಯಹಾಸ್ಯಂದನ ರಥೋತ್ಸವ (ದೊಡ್ಡ ತೇರು)
ವೈಶಾಖ	ಹುಣ್ಣಿಮೆ	ನರಸಿಂಹ ಜಯಂತಿ, ದೇವಸ್ಥಾನದ ಪ್ರಾಕಾರದ ಸುತ್ತಲೂ ಪಲ್ಲಕ್ಕಿ ಉತ್ಸವ, ಇಡಿಮಾಸ ಪ್ರತಿದಿನ ಸಾಯಂಕಾಲ ವಸಂತ ಪೂಜೆ

ಜ್ಯೇಷ್ಠ	ಕರ್ಕ ಸಂಕ್ರಮಣ	ವರದಾನದೀ ಪೂಜೆ
ಆಷಾಢ	ಶುದ್ಧ ಏಕಾದಶಿ ಹಾಗೂ ದ್ವಾದಶಿ	ವಿಶೇಷಗಟ್ಟಲೆ ಪೂಜೆ, ವಿಠೋಬ ದೇವರ ಮಂದಿರದಲ್ಲಿ ವಿಶೇಷ ಉತ್ಸವ.
ಶ್ರಾವಣ	೪ ಸೋಮವಾರಗಳು,	ವಿಶೇಷಗಟ್ಟಲೆ ಪೂಜೆ
	ಶ್ರೀ ಕೃಷ್ಣಾಷ್ಟಮಿ ಹಾಗೂ ಶ್ರೀ ಕೃಷ್ಣ ನವಮಿ }	ವಿಶೇಷಗಟ್ಟಲೆ ಪೂಜೆ, ಪಲ್ಲಕ್ಕಿ ಉತ್ಸವ, ಶ್ರೀ ಕೃಷ್ಣನ ಜನ್ಮದ ಸಂತೋಷ ಸಂಭ್ರಮಕ್ಕಾಗಿ ಮೊಸರುಗಡಿಗೆ ಒಡೆಯುವದು.
	ನೂಲು ಹುಣ್ಣಿಮೆ	ವಿಶೇಷಗಟ್ಟಲೆ ಪೂಜೆ, ಶ್ರೀ ಪಾರ್ವತೀ ದೇವಾಲಯದಲ್ಲಿ ಬ್ರಾಹ್ಮಣ ವರ್ಗದವರು ಸೇರಿ ಸಾಮೂಹಿಕವಾಗಿ ಯಜ್ಞೋಪವೀತ ಧಾರಣವಿಧಿ ನಡೆಸುವರು.
ಭಾದ್ರಪದ ಗುಡಿಗಾರನ	ಶ್ರೀ ಗೌರಿ ತದಿಗೆ ಹಾಗೂ	ಶ್ರೀ ಪುರೋಹಿತರ ಮನೆಯಿಂದ ಗೌರಿಯ ಮೂರ್ತಿಯನ್ನು ಮತ್ತು
	ಶ್ರೀ ಗಣೇಶ ಚವತಿ	ಮನೆಯಿಂದ ಶ್ರೀ ಗಣೇಶನ ಮೃಣ್ಮೂರ್ತಿಯನ್ನು ಪಲ್ಲಕ್ಕಿ ಉತ್ಸವದಲ್ಲಿ ಬರ ಮಾಡಿಕೊಂಡು ಪೂಜೆ.
ಅಶ್ವೀಜ	ನವರಾತ್ರಿ (ಶುದ್ಧ ಪ್ರತಿಪದೆಯಿಂದ)	ಶ್ರೀ ಪಾರ್ವತೀದೇವಿಗೆ ಪ್ರತಿದಿನ ಬೇರೆ ಬೇರೆ ಅವತಾರಕ್ಕೆ ತಕ್ಕಂತೆ ಶೃಂಗಾರ ಹಾಗೂ ರಾತ್ರಿ ಪಾರ್ವತಿ ದೇವಾಲಯದಲ್ಲಿ ಮಹಾ ಮಂಗಳಾರತಿ ಹಾಗೂ ಅಷ್ಟಾವಧಾನಸೇವಾಸಮರ್ಪಣೆ ಹಾಗೂ ಪ್ರತಿದಿನ ಹಗಲು ದುರ್ಗಾ ಸಪ್ತಶತಿ ಪಾರಾಯಣ, ಕೊನೆಯ ದಿನ ಚಂಡೀಹವನ.

ಅಶ್ವೀಜ	ವಿಜಯಾದಶಮಿ	ಲಾಲಕಿ ಉತ್ಸವ, ಸೀಮೋಲ್ಲಂಘನ; ಕೋಟೆಯ ಹೊರಗೆ ಸುಮಾರು ೧ಮೈಲು ದೂರದಲ್ಲಿರುವ ಬನ್ನಿದಿಬ್ಬ ಅರ್ಥಾತ್ ಗಣಪತಿ ದೇವಸ್ಥಾನಕ್ಕೆ ಉತ್ಸವ ಸಾಗುವದು, ಬನ್ನಿ ಮುಡಿಯುವದು.
	ಭೂಮಿ ಹುಣ್ಣಿಮೆ (ಶೀಗೆ ಹುಣ್ಣಿಮೆ)	ಲಾಲಕಿ ಉತ್ಸವ, ಕೋಟೆಯ ಹೊರಭಾಗದಲ್ಲಿರುವ ಶ್ರೀ ದೇವಸ್ಥಾನದ ಹೊಲಕ್ಕೆ ಉತ್ಸವ ಸಾಗಿ ಅಲ್ಲಿ ದೇವರ ಸಮ್ಮುಖದಲ್ಲಿ ಭತ್ತದ ತೆನೆಗಳನ್ನು ಕೊಯ್ದು ದೇವಸ್ಥಾನಕ್ಕೆ ತಂದು ಅಕ್ಕಿ ತಯಾರಿಸಿ ಅನ್ನ ನೈವೇದ್ಯ.
	ನರಕಚತುರ್ದಶಿ	ಎಲ್ಲ ದೇವರಿಗೆ ತೈಲಾಭ್ಯಂಜನ, ಸ್ನಾನ.
ಕಾರ್ತಿಕ	ಬಲಿಪಾಡ್ಯ	ದೇವಸ್ಥಾನದ ಬಸವನನ್ನು ಸಿಂಗರಿಸಿ ಉಣ್ಣಿ ಬಸವಣ್ಣ ದೇವಸ್ಥಾನದವರೆಗೆ ಒಯ್ದು ತರುವದು, ದೇವಸ್ಥಾನದಲ್ಲಿ ಬ್ರಾಹ್ಮಣರಿಂದ ಆಶೀರ್ವಚನ.
	ಹುಣ್ಣಿಮೆ	ಶೈವಾಗಮನ ಪ್ರಕಾರ ಬಲಿದಾನ, ಶಿಖರದೀಪೋತ್ಸವ, ಚಿಕ್ಕ ರಥೋತ್ಸವ ಕಾರ್ತಿಕಮಾಸ ಮಹಾತ್ಮೆಯ ಶ್ರವಣ.
	ಬಹುಳ ಅಷ್ಟಮಿ (ಮಘಾ ನಕ್ಷತ್ರ ಮುಖ್ಯ)	ಶ್ರೀ ದೇವಸ್ಥಾನದ ಸುತ್ತಲಿನ ಬೀದಿಗಳ ಗುಂಟ ಲಕ್ಷದೀಪೋತ್ಸವ ಹಾಗೂ ಚಿಕ್ಕ ರಥೋತ್ಸವ.
	ಬಹುಳ ದಶಮಿ	ಆದಿ ಬನವಾಸಿಗೆ ನರಸಿಂಹ ದೇವರ ಪಲ್ಲಕ್ಕಿ ಉತ್ಸವ, ದೀಪೋತ್ಸವ ಹಾಗೆ

		ಕೋಟೆಯ ಒಳಭಾಗದ ದೇವರಲ್ಲಿ ದೀಪೋತ್ಸವ.
ಮಾರ್ಗಶಿರ	ಚಂಪಾಷಷ್ಠೀ	ಮಧುಕೇಶ್ವರ ದೇವರ ಪಲ್ಲಕ್ಕಿ ಉತ್ಸವ, ಬನ್ನಿದಿಬ್ಬಕ್ಕೆ ಲಾಲಕಿ ಉತ್ಸವ,
ಪುಷ್ಯ	ಮಕರ ಸಂಕ್ರಮಣ	ಎಳ್ಳು–ಸಕ್ಕರೆ ಹಂಚುವದು.
ಮಾಘ	ಹುಣ್ಣಿಮೆ (ವ್ಯಾಸ ಪೂರ್ಣಿಮಾ)	ಮಾಘಮಾಹಾತ್ಮ್ಯದ ಬಗ್ಗೆ ಪುರಾಣ–ಪ್ರವಚನ
	ಶಿವರಾತ್ರಿ	ರಾತ್ರಿಯಲ್ಲಿ ಭಕ್ತರ ವತಿಯಿಂದ ನಾಲ್ಕು ಯಾಮಪೂಜೆ, ಲಿಂಗೋದ್ಭವ, ಸರಕಾರದ ವತಿಯಿಂದ ಕೊನೆಯ ಯಾಮಪೂಜೆ.
ಫಾಲ್ಗುಣ	ಹೋಳಿ ಹುಣ್ಣಿಮೆ	ಪ್ರಾತಃಕಾಲದಲ್ಲಿ ಪಲ್ಲಕ್ಕಿ ಉತ್ಸವ, ಉತ್ಸವದೊಡನೆ ಇರುವ ದೀವಟಿಗೆ ದೀಪದಿಂದ ಬೆಂಕಿಯನ್ನೊಯ್ದು ಕಾಮದಹನಕ್ರಿಯೆ ಮಾಡುವರು.

ರಥೋತ್ಸವದ ವಿವರ

ರಥೋತ್ಸವವು ಪ್ರತಿವರ್ಷ ಚೈತ್ರ ಶುದ್ಧ ಪಂಚಮಿ ಅಥವಾ ಷಷ್ಠಿಯಿಂದ ೯ ದಿನಗಳವರೆಗೆ ಸಾಗುತ್ತದೆ. ಈ ಕಾಲಾವಧಿಯಲ್ಲಿ ನಾಲ್ಕು ತೇರುಗಳು ಎಳೆಯಲ್ಪಡುತ್ತವೆ. (೧) ಹಗಲು ಉತ್ಸವ ತೇರು, (೨) ತಿರುಗಣೆ ತೇರು (೩) ಹೂವಿನ ತೇರು (ಗಜಯಂತ್ರ), (೪) ದೊಡ್ಡ ತೇಋಉ (ಶ್ರೀಮನ್ಮಹಾಸ್ಯಂದನ ರಥ).

ಚೈತ್ರ ಶುದ್ಧ ಚೌತಿ ದಿನ ರಾತ್ರಿ ಶ್ರೀ ಮಹಾಗಣಪತಿಯಲ್ಲಿ ಹರಕೆಕಟ್ಟುವದು. ಅನಂತರ ಮೃತ್ತಿಕಾಹರಣ ಹಾಘೂ ಅಂಕುರಾರೋಪಣ ಕಾರ್ಯಕ್ರಮಗಳು.

ತಿಥಿ	ವಿಷಯ	ವಿಶೇಷ
೧. ಚೈತ್ರಶುದ್ಧ ಪಂಚಮಿ	ಧ್ವಜಾರೋಹಣ, ಭೇರಿತಾಡನ, ಯಾಗಶಾಲಾ ಪ್ರವೇಶ, ಮಹಾಬಲಿ, ಕೌತುಕಬಂಧನ ಶಿಬಿಕಾಯಂತ್ರ (ಪಲ್ಲಕ್ಕಿ) ಉತ್ಸವ.	
೨. ಷಷ್ಠಿ	ಪಂಚಕೂಟ ಯಂತ್ರೋತ್ಸವ	ಈ ಐದು ದಿನಗಳಲ್ಲಿ
೩. ಸಪ್ತಮಿ	ವೃಷಭ	(೧) ಹಗಲುತ್ಸವ ತೇರು (ಕತ್ತಲೆಯಾಗುವದರೊಳಗಾಗಿ)
೪. ಅಷ್ಟಮಿ	ಪುಷ್ಪಪಿಂಜರಿ	(೨) ತಿರುಗಣಿತೇರು ರಾತ್ರಿ)
೫. ನವಮಿ	ಸಿಂಹ	ಈ ಎರಡೂ ತೇರುಗಳು ಪ್ರತಿದಿನ ಬೇರೆ ಬೇರೆ ಹೆಸರಿನ ಉತ್ಸವದೊಂದಿಗೆ ಸಾಗಿಸಲ್ಪಡುತ್ತದೆ.

೬. ದಶಮಿ ಅಥವಾ ಏಕಾದಶಿ	ಗಜ	ಹೂವಿನ ತೇರು
೭. ಏಕಾದಶಿ ಅಥವಾ ತ್ರಯೋದಶಿ	ಶ್ರೀ ಮನ್ಮಹಾಸ್ಯಂದನ ರಥೋತ್ಸವ	ದೊಡ್ಡತೇರು
೮. ದ್ವಾದಶಿ ಅಥವಾ ತ್ರಯೋದಶಿ	ಕುಂಕುಮೋತ್ಸವ	
೯. ತ್ರಯೋದಶಿ ಅಥವಾ ಚತುರ್ದಶಿ	ಅವಭೃತ ತೀರ್ಥಸ್ನಾನ	

ಯಾಗ ಶಾಲಾಪ್ರವೇಶದಿಂದ ದೊಡ್ಡ ತೇರಿನವರೆಗೆ ಯಾಗಶಾಲೆಯಲ್ಲಿ ದಿನಾಲು ೫ ಜನರಿಂದ ಹವನ ಕೆಲಸವು ನಡೆಯುತ್ತದೆ.

ರಥೋತ್ಸವದ ವಿಧಿ–ವಿಧಾನಗಳನ್ನು ಪೂರೈಸುವವರು ಬ್ರಾಹ್ಮಣರು. ಇವರಿಗೆ ತಾಂತ್ರಿಕರೆನ್ನುತ್ತಾರೆ. ಬನವಾಸಿಯ ಮಂಗಳೂರ ಮನೆತನದವರು ಹಾಗೂ ಕೆಳದಿಯ ಒಂದು ಬ್ರಾಹ್ಮಣ ಮನೆತನದವರು ಪಾಳಿಯ ಪ್ರಕಾರ (ವರ್ಷ ಬಿಟ್ಟು ವರ್ಷಕ್ಕೆ) ರಥೋತ್ಸವ ಸಾಗಿಸುತ್ತಾರೆ.

ಹೂವಿನ ತೇರಿಗೆ ಐದು ನೆಲೆ (ಅಂತಸ್ತು)ಗಳನ್ನು ನಿರ್ಮಿಸುತ್ತಾರೆ. ಶ್ರೀ ಮನ್ಮಹಾಸ್ಯಂದನ ರಥಕ್ಕೆ (ದೊಡ್ಡ ತೇರಿಗೆ) ಏಳು ನೆಲೆಗಳನ್ನು ನಿರ್ಮಿಸುತ್ತಾರೆ. ತೇರಿನ ಮೇಲೆ ಸಾಮಾನ್ಯ ೪೦ ಫೂಟು ಎತ್ತರ (ನೆಲದಿಂದ ೬೦ ಫೂಟು ಎತ್ತರ) ಆಗುತ್ತದೆ.

ದೊಡ್ಡ ತೇರಿನ ದಿನ ಹಾಗೂ ಮರುದಿನ ಈ ಎರಡು ದಿನಗಳಲ್ಲಿ ಪರಸ್ಥಳದಿಂದ ಬಂದ ಯಾತ್ರಿಕರಿಗಾಗಿ ದೇವಸ್ಥಾನದ ಹೊಲವನ್ನಾಶ್ರಯಿಸಿದ ಬ್ರಾಹ್ಮಣ ಭಕ್ತರೊಬ್ಬರ ವತಿಯಿಂದ ಅನ್ನಸಂತರ್ಪಣೆ ಜರಗುತ್ತದೆ.

ಹಗಲುತ್ಸವ ತೇರು: ಇದು ಐದು ದಿನಗಳವರೆಗೆ ಪ್ರತಿದಿನ ಕತ್ತಲಾಗುವುದರೊಳಗಾಗಿ ದೇವಸ್ಥಾನದ ಹಿಂಬದಿಯ ಓಣಿಯಲ್ಲಿ ಹಾದು ಕಂಚುಗಾರ ಬೀದಿಯಲ್ಲಿ ಹಾಗೂ ರಥಬೀದಿಯಲ್ಲಿ ಸಾಗುತ್ತದೆ.

ಉಳಿದ ತೇರುಗಳು ರಾತ್ರಿಯಲ್ಲಿ ಹಾಗೂ ರಥ ಬೀದಿಯಲ್ಲಿ ಮಾತ್ರ ಸಾಗುವುದರಿಂದ ಕೆಲವರಿಗೆ ರಾತ್ರಿಯಲ್ಲಿ ಶ್ರೀ ದೇವರ ದರ್ಶನವಾಗಲಿಕ್ಕಿಲ್ಲವೆಂದು ಕತ್ತಲಾಗುವುದರೊಳಗಾಗಿ ಹಗಲುತ್ಸವ ತೇರಿನ ಪ್ರದಕ್ಷಿಣೆ ಸಾಗುತ್ತದೆ.

ಶ್ರೀ ಮನ್ಮಹಾಸ್ಯಂದನ ರಥೋತ್ಸವದ ದಿನ ಉಳಿದ ಯಾವ ತೇರುಗಳನ್ನೂ ಎಳೆಯವುದಿಲ್ಲ. ಶ್ರೀ ದೇವರು (ಶ್ರೀ ಮಧುಕೇಶ್ವರ, ಶ್ರೀ ಪಾರ್ವತೀ, ಶ್ರೀ ಷಣ್ಮುಖ) ಪಲ್ಲಕ್ಕಿ ಉತ್ಸವದೊಡನೆ ಪ್ರದಕ್ಷಿಣೆ ಸಾಗಿ ರಥವನ್ನೇರಿದ ಕೂಡಲೆ ಪ್ರಥಮದಲ್ಲಿ

ನಾಡಿಗೇರ ಮನೆಯವರಿಂದ ಕಾಯಿ, ಹಣ್ಣು ನಿವೇದನೆಯಾಗಬೇಕೆಂಬ ಪದ್ಧತಿ ಇದೆ. ಅನಂತರ ಅರ್ಚಕರ ಮತ್ತು ಉಪಾಧಿವಂತರ ಸರತಿ, ಅನಂತರ ಭಕ್ತವೃಂದದಿಂದ ಸ್ವೀಕಾರ.

ಬೇರೆ–ಬೇರೆ ದೇವರಲ್ಲಿ ಭಕ್ತರು ಸಲ್ಲಿಸಬಹುದಾದ ಸೇವಾ ಪ್ರಸಾರಗಳು

ಶ್ರೀ ಮಧುಕೇಶ್ವರ ದೇವರಲ್ಲಿ

ಅ.ನಂ	ಹೆಸರು
೧	ಕರ್ಪೂರದಾರತಿ
೨	ಬಿಲ್ವಾರ್ಚನೆ
೩	ಕ್ಷೀರಾಭಿಷೇಕ
೪	ಫಲಪಂಚಾಮೃತ ಪೂಜೆ
೫	ಸಹಸ್ರನಾಮ ಪೂಜೆ
೬	ರುದ್ರಾಭಿಷೇಕ
೭	ಏಕಾದಶ ರುದ್ರಾಭಿಷೇಕ
೮	ಕಲ್ಯಾಣ ಮಂಟಪೋತ್ಸವ
೯	ರತ್ನಕಿರೀಟಾಲಂಕಾರ ಪೂಜೆ

ಶ್ರೀ ಪಾರ್ವತೀ ದೇವಿಯಿಲ್ಲಿ

೧	ಕುಂಕುಮ ಪೂಜಾ
೨	ಪಂಚಾಮೃತ ಸಹಸ್ರನಾಮ ಪೂಜಾ
೩	ದೇವೀ ಮಾಹಾತ್ಮ್ಯ ಪಾರಾಯಣ ಪೂಜಾ
೪	ಮಾಂಗಲ್ಯಪ್ರದ ಅಲಂಕಾರ ಪೂಜಾ

ಬೇರೆ–ಬೇರೆ ದೇವರಲ್ಲಿ ಭಕ್ತರು ಸಲ್ಲಿಸಬಹುದಾದ ಸೇವಾಪ್ರಕಾರಗಳು

ಶ್ರೀ ಮಹಾಗಣಪತಿಯಲ್ಲಿ

ಅ.ನಂ	ಹೆಸರು
೧	ದೂರ್ವಾ ಪೂಜೆ
೨	ಸಹಸ್ರನಾಮ (ನೈವೇದ್ಯ ಸಹಿತ)
೩	ಇಷ್ಟಾರ್ಥಪ್ರದ ಸಹಸ್ರಮೋದಕಾರ್ಪಣ ಪೂಜೆ
೪	(ಪಂಚಕಜ್ಜಾಯ ನೈವೇದ್ಯ ೧ ರೂ.ಗೆ)
೫	ವಿವಾಹ ಪ್ರಸಾದ ಕಾಣಿಕೆ ಪೂಜೆ
೬	ಸತ್ಯನಾರಾಯಣ ದೇವರ ಪೂಜಾ ವ್ರತ ಕಥೆ

ಪ್ರಮಾಣ ಗ್ರಂಥಾವಳಿ

BIBLIOGRAPHY

1) History of India Vol.1 & Vol.2	by R. Sathianath Aier.
2) Ancient India and South Indian History and Culture. Vol.2	S. Krishnaswami Aiyangar.
3) Rashtrakutas and their times. (Poona Oriental Series No. 36)	A.S.Altekar
4) Early History of Deccan down to Mohamedan Conquest	R.G.Bhandarkar
5) History and Culture of the Indian People, Vols. 1.2.3.4.&5	Published by "Bharatiya Vidyabhavan"
6) Ancient Karnatak: History of Tuluva Vol. 1	by B.A. Saletore. V.D.Mahajan
7) Ancient India	V.D.Mahajan
8) The Kadamba Kula	George M. Moraes.
9) Sources of Karnataka History Vol 1	S. Srikantha Sastri.

10) The Cambridge Shorter History of India	
11) The Oxford History of India	Vincent A. Smith
12) A Comprehensive History of India	Ed. by K.A.Nilakantha Sastri.
13) A History of South India	by K.A.Nilakantha Sastri
14) The Ancient Geography of India	Alexander Cunningham
15) Studies in the Geography of Ancient India	D.C. Sircar.
16) The Abhiras	Bhagavan Singh Suryavamsi
17) Prachi Jyoti Vol.2	
18) Jainism and Karnatak Culture	S.R.Sharma
19) Medieval Jainism	B.A Saletore
20) Jainism in Karnatak	
21) (a) Epigraphia Carnatica	
(b) South Indian Inscriptions	
(c) Bulletins of the Archeological Survey of India	
22) Ancient Indian History and Culture	by S.V.D Rao, V.K. Gokhale, & A.L.D'Souze
23) ದಕ್ಷಿಣ ಭಾರತದ ಇತಿಹಾಸ	K.K. Pillai
24) ಕನ್ನಡನಾಡಿನ ಚರಿತ್ರೆ	B.A. Saletore
25) ಕರ್ನಾಟಕದ ಅರಸುಮನೆತನಗಳು	N. Laxminarayan Rao and R.S Panchamukhi
26) ಔಚಿತ್ಯ ವಿಚಾರ ಚರ್ಚಾ	Ks'emendra
27) ವಿಕ್ರಮಾರ್ಜುನ ವಿಜಯ	Mahakavi Pampa

ಕದಂಬ ಕುಲಮೂಲ

ಸಿದ್ಧಂ ನಮಃ ಶಿವಾಯ। ಜಯತಿ ವಿಶ್ವವೇದ ಸಂಘಾತ ನಿಶ್ಚಿತೈಕ ಮೂರ್ತಿಃ ಸನಾತನಃ। ಸ್ಥಾಣುರಿಂದು ರಶ್ಮಿಚ್ಛುರಿತ ದ್ಯುತಿಮಜ್ಜಟಾ ಭಾರಮಂಡನಃ॥ ತಮನು ಭೂಸರಾ ದ್ವಿಜಪ್ರವರಾಃ ಸಾಮರ್ಗ್ಯಜುರ್ವೇದ ವಾದಿನಃ। ಯತ್ ಪ್ರಸಾದಃ ತ್ರಾಯತೇ ನಿತ್ಯಂ ಭುವನತ್ರಯಂ ಪಾಪ್ಮನೋ ಭಯಾತ್। ಅನುಪದಂ ಸುರೇಂದ್ರ ತುಲ್ಯವಪುಷ್ಯಾಕುತ್‌ಸ್ಥವರ್ಮಾ ವಿಶಾಲಧೀಃ। ಭೂಪತಿಃ ಕದಂಬಸೇನಾನೀ ಬೃಹದನ್ವಯವ್ಯೋಮಚಂದ್ರಮಾಃ॥

ಅಥ ಬಭೂವ ದ್ವಿಜಕುಲಂ ಪ್ರಾಂಶು ಚರದ್ಗುಣೇಂದ್ವಂಶುಮಂಡಲಂ ತ್ರ್ಯಾರ್ಷವರ್ತ್ಯ ಹಾರಿತೀಪುತ್ರಂ ಋಷಿ ಮುಖ್ಯಮಾನವ್ಯ ಗೋತ್ರಜಂ॥ ವಿವಿಧ ಯಜ್ಞಾವಭೃತ ಪುಣ್ಯಾಂಬುನಿಯತಾಭಿಷೇಕಾರ್ದ್ರ ಮೂರ್ಧಜಂ। ಪ್ರವಚನಾವ ಗಾಹ ನಿಷ್ಣಾತಂ ವಿಧಿವತ್ ಸಮಿದ್ಧಾಗ್ನಿ ಸೋಮಪಂ। ಪ್ರಣವ ಪೂರ್ವಷಡ್ವಿಧಾಧ್ಯಯನಾನರ್ಘ ಮಾನಾಂತರಾಲಯಂ। ಅಕೃಶ ಚಾತುರ್ಮಾಸ್ಯ ಹೋಮೇಷ್ಟಿ ಪಶುಪಾರ್ವಣ ಶ್ರಾದ್ಧಪೌಷ್ಟಿಕಂ॥ ಅತಿಥಿನಿತ್ಯ ಸಂಶ್ರಿತಾವಸಥ ಸಮನಂತರಯಾ– ವಂಧ್ಯನೈತ್ಯಕಂ। ಗೃಹಸಮೀಪ ದೇಶಸಂರೂಢ ವಿಕಸತ್ ಕದಂಬೈಕ ಪಾದಪಂ॥ ತದುಪಚಾರಾತ್ ತದಾ ಅಸ್ಯ ತರೋಃ ಸಾನಾಮ್ಯ ಸಾಧರ್ಮ್ಯಂ ಅಸ್ಯತತ್। ಪ್ರವವೃತೇ ಸತೀರ್ಥ್ಯ ವಿಪ್ರಾಣಾಂ ಪ್ರಾಚುರ್ಯತಃ ತದ್ವಿಶೇಷಣಂ॥ ಏವಮಾಗತೇ ಕದಂಬಕುಲೇ ಶ್ರೀಮಾನ್ ಬಭೂವ ದ್ವಿಜೋತ್ತಮಃ। ನಾಮತೋ ಮಯೂರ ಶರ್ಮೇತಿ ಶ್ರುತಶೀಲ ಶೌಚಾದ್ಯಲಂಕೃತಃ॥ ಯಃ ಪ್ರೇಯಾಯ ಪಲ್ಲವೇಂದ್ರಪುರೀಂ ಗುರುಣಾ ಸಮಂ ವೀರಶರ್ಮಣಾ। ಅಧಿಜಿಗಾಂಸುಃ ಪ್ರವಚನಂ ನಿಖಿಲಂ ಘಟಿಕಾಂ ವಿವೇಶಾಶುತರ್ಕಕಃ॥ ತತ್ರ ಪಲ್ಲವಾಶ್ವ ಸಂಸ್ಥೇನ ಕುಲಹೇನ ತ್ರೀವ್ರೇಣ ರೋಷಿತಃ। ಕಲಿಯುಗೇಽಸ್ಮಿನ್ ಅಹೋ ಬತ ಕ್ಷತ್ರಾತ್ ಪರಿಪೇಲವಾ ವಿಪ್ರತಾಯತಃ॥ ಗುರುಕುಲಾನಿ ಸಮ್ಯಗಾರಾಧ್ಯ ಶಾಖಾಮಧೀತ್ಯಾಪಿ ಯತ್ನತಃ ಬ್ರಹ್ಮಸಿದ್ಧಿರ್ಯದಿ ನೃಪಾಧೀನಾ ಕಿ ಮತಃ ಪರಂ ದುಃಖಮಿತ್ಯತಃ॥ ಕುಶಸಮಿದ್‌ದೃಷತ್ ಸ್ರಗಾಜ್ಯ ಚರುಗ್ರಹಣಾದಿ ದಕ್ಷೇಣ ಪಾಣಿನಾ। ಉದ್ಬಬರ್ಹ ದೀಪ್ತಿಮತ್ ಶಸ್ತ್ರಂ ವಿಜಿಗೀಷವಾಣೋ ವಸುಂಧರಾಂ॥ ಯೋಽಂತಪಾಲಾನಾ ಪಲ್ಲವೇಂದ್ರಾಣಾಂ ಸಹನಾ ವಿನಿರ್ಜಿತ್ಯ ಸಂಯುಗೇ ಅಧ್ಯುವಾಸ ದುರ್ಗಮಾಂ ಅಟವೀಂ ಶ್ರೀ ಪರ್ವತದ್ವಾರ ಸಂಶ್ರಿತಾಂ। ಆದದೇ ಕರಾನ್ ಬೃಹದ್‌ಬಾಣ ಪ್ರಮುಖಾದ್ ಬಹೂನ್ ರಾಜಮಂಡಲಾನ್॥

–ಶಾಂತಿವರ್ಮನ ತಾಳಗುಂದ ಶಾಸನದಿಂದ



ಮಧುಕೇಶ್ವರ ದೇವಸ್ಥಾನ ಎದುರಿನ
ಧ್ವಜಸ್ತಂಭ ಮತ್ತು ದೀಪಸ್ತಂಭ



ಮಧುಕೇಶ್ವರ ದೇವಸ್ಥಾನದ
ಮಹಾದ್ವಾರದ ಹೆಬ್ಬಾಗಿಲು



ಮಧುಕೇಶ್ವರ ದೇವಸ್ಥಾನದ ಪ್ರವೇಶ ದ್ವಾರ



ಮಧುಕೇಶ್ವರ ದೇವಸ್ಥಾನದ ಹೆಬ್ಬಾಗಿಲಲ್ಲಿರುವ ಆನೆಯ ಪ್ರತಿಮೆ



ವಿಠೋಬ



ವಿಶ್ವೇಶ್ವರ



ವರದೇಶ್ವರ



ಹಾವಳಿ ಮಧುಕೇಶ್ವರ



ಅಮೃತೇಶ್ವರ



ಕೇದಾರೇಶ್ವರ



ಚಿಂತಾಮಣಿ ಗಣಪತಿ



ರಾಮೇಶ್ವರ



ನರಸಿಂಹ ದೇವಸ್ಥಾನ



ವೆಂಕಟರಮಣ




ಶ್ರೀರಾಮ



ಧುಂಡಿರಾಜ ಗಣಪತಿ



ಉಮಾಮಹೇಶ್ವರ



ಬಸವಲಿಂಗೇಶ್ವರ



ಮಧುಕೇಶ್ವರ ಹಾಗೂ ಪಾರ್ವತಿ ದೇಗುಲಗಳ ಹಿಂಭಾಗ



ಬಸವಲಿಂಗೇಶ್ವರ ದೇವಸ್ಥಾನದ ಭಿತ್ತಿಶಿಲ್ಪ (ಮಹಿಷಾಸುರ ಮರ್ದಿನಿ)



ಬಸವಲಿಂಗೇಶ್ವರ ದೇವಸ್ಥಾನದ ಭಿತ್ತಿಶಿಲ್ಪ (ಶ್ರೀಕೃಷ್ಣ)



ಬಸವಲಿಂಗೇಶ್ವರ ಮತ್ತು ನಂದಿ



ಮಹಾಗಣಪತಿ



ಐವೆಡೆ ನಾಗ



ಪಾರ್ವತಿದೇವಿ ದೇಗುದಲ ಒಳಭಾಗ



ದುರ್ಗೆ



ಲಿಂಗ ಮತ್ತು ನಂದಿ



ಮಧುಕೇಶ್ವರ ದೇವಸ್ಥಾನದ ಭಿತ್ತಿಯ ಕೆತ್ತನೆ



ಮಧುಕೇಶ್ವರ ದೇವಸ್ಥಾನದ ಭಿತ್ತಿಯ ಕೆತ್ತನೆ



ಮಧುಕೇಶ್ವರ ದೇವಸ್ಥಾನದ
ಪ್ರವೇಶದ್ವಾರದಲ್ಲಿರುವ ನಂದಿ



ಮಧುಕೇಶ್ವರ ದೇವಸ್ಥಾನ
ಒಳಭಾಗದ ನೃತ್ಯ ಮಂಟಪ



ಉಮಾಮಹೇಶ್ವರ ಮಂಟಪ





ಉಮಾಮಹೇಶ್ವರ ಮಂಟಪದ ಪಾರ್ಶ್ವಭಾಗದ ಕೆತ್ತನೆ



ಕಾರ್ತಿಕೇಯ



ಗಣಪತಿ



ಮಧುಕೇಶ್ವರ ದೇವಾಲಯದ
ಒಳಭಾಗದ ಒಂದು ಮೂರ್ತಿ



ವಿಷ್ಣು



ಮಧುಕೇಶ್ವರ ದೇವಸ್ಥಾನದಲ್ಲಿರುವ
ಮೂರ್ತಿ



ಲಿಂಗ ಹಾಗೂ ನಂದಿ



ಮಧುಕೇಶ್ವರ ದೇವಸ್ಥಾನದ ಮೇಲ್ಛಾವಣಿ ಕೆತ್ತನೆ



ಮಧುಕೇಶ್ವರ ದೇವಸ್ಥಾನದ ಪ್ರವೇಶದ್ವಾರದಲ್ಲಿರುವ ನಂದಿ



ಸೋದೆ ಅರಸ ಸದಾಶಿವರಾಯ
ನೀಡಿದ ಕಲ್ಲುಮಂಚ



ಶಾಂತ ಲಕ್ಷ್ಮೀನರಸಿಂಹ



ಕಲ್ಲುಮಂಚದ ಮೇಲಿನ ಶ್ಲೋಕ



ವರದಾನದಿಯ ತೀರದಲ್ಲಿ ಇರುವ ಲಿಂಗ ಮತ್ತು ರುದ್ರಪಾದ



ಆದಿ ಮಧುಕೇಶ್ವರ



ಆದಿಮಧುಕೇಶ್ವರ ದೇಗುಲದ ಕೆರೆ (ವಶಿಷ್ಠ ತೀರ್ಥ)

ಮಯೂರಶರ್ಮ

(ಇತಿಹಾಸ)

ಮಯೂರಶರ್ಮ

ನಮ್ಮ ಮೈಸೂರು ರಾಜ್ಯದ ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪ ಎಂಬ ಪಟ್ಟಣದ ಹತ್ತಿರ ತಾಳಗುಂದ ಎಂಬ ಊರಿದೆ. ಅಲ್ಲಿ ಕ್ರಿ.ಶ. ೨೦೦ರಲ್ಲಿ ಮುಕ್ಕಣ್ಣ ಅಥವಾ ತ್ರಿಣೇತ್ರಶರ್ಮ ಎಂಬ ಬಡಗನಾಡು ಕರ್ನಾಟಕ ಬ್ರಾಹ್ಮಣನೊಬ್ಬನ ಮನೆ ಇತ್ತು. ಅವನು ವೇದ–ವೇದಾಂತಗಳನ್ನು ಕಲಿತ ಮಹಾವಿದ್ವಾಂಸನಾಗಿದ್ದನು. ಅವನ ಮನೆಯ ಎದುರು ಒಂದು ಎತ್ತರವಾದ ಹನೆ (ತಾಟನುಂಗು) ಮರ ಬೆಳೆದು ನಿಂತಿದ್ದರಿಂದ ಅವನ ಮನೆಯನ್ನು "ಕದಂಬರ ಮನೆ" ಎಂದು ಜನರು ಕರೆಯುತ್ತಿದ್ದರು. ತ್ರಿಣೇತ್ರಶರ್ಮನೂ, ಅವನ ಸೋದರರೂ, ಅವರ ಮಕ್ಕಳೂ ವೇದೋಕ್ತವಾದ ವ್ರತ, ನಿಯಮ, ಯಜ್ಞ, ಯಾಗಗಳನ್ನು ಋತುಮಾನಕ್ಕೆ ತಕ್ಕಂತೆ ತಪ್ಪದೆ ಮಾಡುವ ಶ್ರೋತ್ರಿಯರಾಗಿದ್ದರು.

ಕ್ರಿ.ಶ. ೨೦೦ರಲ್ಲಿ ನಮ್ಮ ಮೈಸೂರು ರಾಜ್ಯದ ಹೆಸರು 'ಕುಂತಳ' ಎಂದಿತ್ತು. ಕ್ರಿ.ಶ. ೪೨೫ರ ಸುಮಾರಿಗೆ ಕರ್ನಾಟಕ ಎಂಬ ಹೆಸರೂ ಕ್ರಿ.ಶ. ೧೬ನೆಯ ಶತಮಾನದಷ್ಟು ಹೊತ್ತಿಗೆ ಮೈಸೂರೆಂಬ ಇಂದಿನ ಹೆಸರೂ ರೂಢಿಗೆ ಬಂದವು. ಕುಂತಳದ ಪ್ರಾಚೀನ ರಾಜಧಾನಿ ಕುಪಟೂರು. ಕುಪಟೂರು ಅಂದಿನ ಕುಂತಳ ನಗರವು. ದ್ವಾಪರಯುಗದಲ್ಲಿ ಚಂದ್ರಹಾಸನಿಗದು ರಾಜಧಾನಿಯಾಗಿತ್ತೆಂಬುದಕ್ಕೆ ಅಲ್ಲಿಯ ಕಾಳಿಕಾ ದೇವಸ್ಥಾನದಲ್ಲಿರುವ ತಲೆ ಕಡಿದುಕೊಂಡು ಬಿದ್ದ ದುಷ್ಟಬುದ್ಧಿಯ ವಿಗ್ರಹವು ಪ್ರಮಾಣ. ಕ್ರಿ.ಶ.೨ನೆಯ ಶತಮಾನದಲ್ಲಿ ದಕ್ಷಿಣ ಭಾರತವೆಲ್ಲವೂ ಶಾಲಿವಾಹನ ಚಕ್ರವರ್ತಿಗಳ ಅಧೀನವಾಗಿತ್ತು. ಶಿರಾಳಕೊಪ್ಪದಿಂದ ಸುಮಾರು ೨೫ಮೈಲು ದೂರದಲ್ಲಿರುವ ಬನವಾಸಿ ನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸಾಮಂತರಾಗಿ ಚುಟುಗಳೆಂಬ ಅರಸು ಮನೆತನದವರು ಉತ್ತರ ಕುಂತಳವನ್ನು ಆಳುತ್ತಿದ್ದರು. ಅಲ್ಲಿ ಬೌದ್ಧರ ಸಂಘಾರಾಮಗಳ ನಡುವೆ ಧರ್ಮಶರ್ಮನ ಅಗ್ರಹಾರ ಮಾತ್ರ ವೈದಿಕ ವಿದ್ಯಾಭ್ಯಾಸದ ಕೇಂದ್ರವಾಗಿತ್ತು. ತಾಳಗುಂದದ ಅಗ್ರಹಾರಕ್ಕಿಂತ ಬನವಾಸಿಯ ಅಗ್ರಹಾರ ಅಂದು ಹೆಚ್ಚಿನ ಮಹಾ ಮಹೋಪಾಧ್ಯಾಯರಿಂದ ಕೂಡಿ ಆಕರ್ಷಕವಾಗಿತ್ತು.

ಕ್ರಿ.ಶ. ೨೨೫ರಲ್ಲಿ ಶಾಲಿವಾಹನರ ಚಕ್ರವರ್ತಿತ್ವ ಮುಗಿಯಿತು. ಕಾಂಚೀಪುರದಲ್ಲಿ ಪಲ್ಲವರು ಸಾರ್ವಭೌಮರಾದರು. ಕಾಂಚಿಯ ಘಟಿಕಾಸ್ಥಾನವು (ವಿಶ್ವವಿದ್ಯಾನಿಲಯವು) ಅಂದು ಬಹಳ ಪ್ರಸಿದ್ಧವಾಗಿತ್ತು. ಚತುಃಷಷ್ಟಿ ಕಲೆಗಳ (ವಿಜ್ಞಾನಗಳ) ಮಹಾಗ್ರಂಥಾಲಯ ಮತ್ತು ಪ್ರಯೋಗಶಾಲೆಗಳಿಂದ ಅದು ಸುಸಜ್ಜಿತವಾಗಿತ್ತು. ಭಾರದ್ವಾಜ ಪ್ರಾಚಾರ್ಯರು ಅದರ ಕುಲಪತಿಗಳು. ಪಲ್ಲವ ಚಕ್ರವರ್ತಿ ಶಿವಸ್ಕಂದವರ್ಮನು ಆ ಘಟಿಕಾ ಸ್ಥಾನದ ಮಹಾಪೋಷಕನಾಗಿದ್ದನು.

ಜನನ

ಕ್ರಿ.ಶ. ೨೫೦ರ ಕಾಲ. ತ್ರಿಣೇತ್ರಶರ್ಮನ ಜ್ಯೇಷ್ಠ ಪುತ್ರನಾದ ಶಿವಸ್ಕಂದಶರ್ಮನಿಗೆ ಮಯೂರಶರ್ಮನೆಂಬ ಮಗನು ತಾಳಗುಂದದಲ್ಲಿ ಹುಟ್ಟಿದನು. ಅವನಿಗೆ ಚಕ್ರವರ್ತಿತ್ವದ ೩೨ ಲಕ್ಷಣಗಳಿದ್ದುದನ್ನು ಕಂಡು ಇಡೀ ಕದಂಬ ಕುಲವು ಹರ್ಷದಿಂದ ಹಿರಿಹಿರಿ ಹಿಗ್ಗಿತು. ಅವನಿಗೆ ಎಂಟುವರ್ಷಗಳಾದ ಕೂಡಲೇ ಉಪನಯನಮಾಡಿ ಬನವಾಸಿಯ ಅಗ್ರಹಾರದ ಪ್ರಾಚಾರ್ಯನಾಗಿದ್ದ ವೀರಶರ್ಮನ ವಶಕ್ಕೆ ವಿದ್ಯಾಭ್ಯಾಸಕ್ಕಾಗಿ ಒಪ್ಪಿಸಲಾಯಿತು. "ಬೆಳೆಯ ಗುಣ ಮೊಳಕೆಯಲ್ಲೇ ಕಾಣಿಸಿತು" ಎಂಬಂತೆ ಮಯೂರನು ಸ್ವಾಭಿಮಾನಿಯೂ, ಶೂರನೂ, ಸತ್ಯಸಂಧನೂ, ಧ್ಯೇಯನಿಷ್ಠನೂ, ವಿಧೇಯನೂ, ತೇಜಸ್ವಿಯೂ, ಸೂಕ್ಷ್ಮಜ್ಞನೂ ಆಗಿದ್ದುದು ವೀರಶರ್ಮನಿಗೆ ಗೊತ್ತಾಗಿ ಆತನು ಅವನ ಮೇಲೆ ವಿಶೇಷ ಲಕ್ಷ್ಯವನ್ನು ಇಟ್ಟಿದ್ದನು. ಮಯೂರನು ಸುತ್ತಮುತ್ತಲಿನ ಬೌದ್ಧ ವಿಹಾರಗಳ, ಭಿಕ್ಷು–ಭಿಕ್ಷುಣಿಯರ ಹಾಗೂ ಬೌದ್ಧ ವಟುಗಳ ಸಪ್ಪೆ ವರ್ತನೆಯನ್ನು ಕಂಡು ಬೇಸರಗೊಂಡನು. ಅಂಥ ಮನಃಪ್ರಣಾಲಿಯನ್ನು ಕಂಡು ಜುಗುಪ್ಸೆಗೀಡಾದ ಅವನ ಹೃದಯವು ತನ್ನ ಗುರುಗಳು ಮನಂಬುಗುವಂತೆ ಬಣ್ಣಿಸಿದ ರಾಮರಾಜ್ಯದ ಕನಸನ್ನು ಮೆಲುಕು ಹಾಕ ತೊಡಗಿದಾಗ ಅವನಿಗೆ ೧೬ ವರ್ಷಗಳು ತುಂಬಿದವು. ಶ್ರೀರಾಮನ ಗುಣವಂತಿಕೆ, ವೀರ್ಯವಂತಿಕೆ, ಧರ್ಮಜ್ಞತೆ, ಕೃತಜ್ಞತೆ, ಸತ್ಯಸಂಧತೆ, ದೃಢವ್ರತ, ಚಾರಿತ್ರ ಸಂಪನ್ನತೆ ಸರ್ವಪ್ರಾಣಿಗಳ ಮೇಲಿದ್ದ ದಯೆ, ವಿದ್ವತ್ತೆ, ಕಾರ್ಯದಕ್ಷತೆ, ಸಜ್ಜನರ ಮೆಚ್ಚಿಗೆಗೆ ಪಾತ್ರವಾದ ವಿನಯಾಚಾರಗಳು ಅವನ ಹೃದಯವನ್ನು ಸೂರೆಗೊಂಡವು.

ವಿದ್ಯಾಭ್ಯಾಸ

ಬನವಾಸಿಯ ಅಗ್ರಹಾರದಲ್ಲಿ ಸ್ನಾತಕ ಪದವಿಯನ್ನು ಪಡೆದ ಮಯೂರಶರ್ಮನನ್ನು ಸ್ನಾತಕೋತ್ತರ ಶಿಕ್ಷಣಕ್ಕಾಗಿ ವೀರಶರ್ಮನು ಕಾಂಚಿಗೆ ಕರೆದುಕೊಂಡು ಹೋದನು. ಅಲ್ಲಿಯ ಘಟಿಕಾಸ್ಥಾನದಲ್ಲಿ ವಿದ್ಯಾರ್ಥಿಗಳ ದೈಹಿಕ–ಮಾನಸಿಕ ಆರೋಗ್ಯವೃದ್ಧಿಗೆ ಬೇಕಾದ ಎಲ್ಲ ಸೌಕರ್ಯಗಳೂ ಇದ್ದವು. ಅಶ್ವಮೇಧ, ಅಗ್ನಿಷ್ಟೋಮ, ವಾಜಪೇಯಿ ಮುಂತಾದ ಕ್ಷತ್ರಯಜ್ಞಗಳನ್ನು ಮಾಡಿ ಕೀರ್ತಿಗಳಿಸಿದ

ಶಿವಸ್ಕಂದವರ್ಮನ ವೈಭವವನ್ನು ಕೊಂಡಾಡುವವರೇ ಅಲ್ಲಿ ಹೆಚ್ಚಾಗಿದ್ದರು. ಚಕ್ರವರ್ತಿಯು ದಿನವೂ ಘಟಿಕಾಸ್ಥಾನಕ್ಕೆ ಬಂದು ಹೋಗುತ್ತಿದ್ದನು. ತಾಳಗುಂದದಲ್ಲಿ ಮಯೂರನ ಮನೆಯವರು ಕೇವಲ ಬ್ರಹ್ಮಯಜ್ಞಗಳನ್ನು ಮಾಡುತ್ತಿದ್ದರು. ಕ್ಷತ್ರಯಜ್ಞಕ್ಕಾಗಿ ಒಮ್ಮೆ ಅಲ್ಲಿ ಒಂದು ಸಲಕ್ಷಣವಾದ ಕುದುರೆಯನ್ನು ಆಯ್ದಿಡಲಾಗಿತ್ತು. ಕ್ರೀಡಾಪಟುವಾದ ಮಯೂರಶರ್ಮನು ಅದರ ಬೆನ್ನ ಮೇಲೆ ಹತ್ತಿ ಕುಳಿತುಕೊಳ್ಳುತ್ತಿದ್ದಾಗ ಚಕ್ರವರ್ತಿ ಎದುರಾದನು. ಅವನಿಗೆ ಈ ಬಡ ಹಾರುವ ವಿದ್ಯಾರ್ಥಿಯು ಯಜ್ಞಕ್ಕೆಂದು ಆಯ್ದಿಟ್ಟ ಕುದುರೆಯನ್ನು ಏರಿದ್ದು ಮನಸ್ಸಿಗೆ ಒಪ್ಪಲಿಲ್ಲ. ಆದ್ದರಿಂದ ಮಯೂರನನ್ನು ಕುರಿತು ಅವನು ಇಂತೆಂದನು.



ಶಿವಸ್ಕಂದವರ್ಮ: ಎಲೈ ಬ್ರಾಹ್ಮಣ ವಟುವೇ, ಬ್ರಹ್ಮ ಯಜ್ಞ ಮಾಡುವ ನಿಮ್ಮ ಜಾತಿಯವರಿಗೆ ಕುದುರೆ ಸವಾರಿ ಏಕೆ?

ಮಯೂರಶರ್ಮ: ಚಕ್ರವರ್ತಿಯೇ, ಅಶ್ವಮೇಧಯಾಗ ಮಾಡಿದ ಹೆಮ್ಮೆ ಈ ಮಾತನ್ನು ನಿನ್ನ ಬಾಯಿಂದ ಬರಿಸಿತೇ?

ಶಿವಸ್ಕಂದವರ್ಮ: ಅಯ್ಯಾ, ಇದು ಹೆಮ್ಮೆಯ ಮಾತಲ್ಲ. ಸತ್ಯ ಸಂಗತಿ; ಕ್ಷಾತ್ರಶಕ್ತಿಯು ಸರ್ವಾಧಾರ. ಬ್ರಾಹ್ಮಣರಿಗೆ ಅಧ್ಯಾತ್ಮ ಸಿದ್ಧಿಯಾಗಬೇಕಾದರೂ ಕ್ಷತ್ರ ರಕ್ಷಣೆ ಅಗತ್ಯ. ಕ್ಷತ್ರಿಯನ ಅಥವಾ ರಾಜನ ರಕ್ಷಣೆ ಇಲ್ಲದಾಗ ಬ್ರಾಹ್ಮಣರು ತಪಸ್ಸನ್ನು ಕೂಡ ನಿರ್ವಿಘ್ನವಾಗಿ ಮಾಡಲಾರರು! ಆದುದರಿಂದ ಬ್ರಾಹ್ಮಣ ವಟುವಾದ ನೀನು ಅಶ್ವಾರೂಢನಾದದ್ದು ನನಗೆ ಸ್ವಲ್ಪ ವಿಚಿತ್ರವೆನ್ನಿಸಿತು, ಅಧಿಕ ಪ್ರಸಂಗಿತನ ಎನ್ನಿಸಿತು. ಬೇಕಾದರೆ ನಿಮ್ಮ ಗುರುಗಳನ್ನು ಕೇಳು– 'ಅಶ್ವಮೇಧಯಾಗವನ್ನು ಮಾಡಲು ಬ್ರಾಹ್ಮಣರಿಗೆ ಸಾಧ್ಯವೇ?" ಎಂದು. ನೀನು ಹತ್ತಿದ್ದು ಅದಕ್ಕಾಗಿ ಆಯ್ದಿಟ್ಟ ಕುದುರೆಯನ್ನು.

ಮಯೂರಶರ್ಮ: ಚಕ್ರವರ್ತಿಯೇ, 'ರಾಜಾ ಕಾಲಸ್ಯ ಕಾರಣಂ' ಎಂಬ ಗಾದೆಯನ್ನು ನೀನು ನನಗೆ ಉಪದೇಶಿಸುತ್ತಿರುವೆಯಲ್ಲವೇ? ಇರಲಿ ನಾನೀಗ ನಿನ್ನೆದುರು ಪ್ರತಿಜ್ಞೆ ಮಾಡುತ್ತೇನೆ– "ಇದಂ ಬ್ರಾಹ್ಮಮಿದಂ ಕ್ಷಾತ್ರಂ' ಎಂಬ ಸವ್ಯಸಾಚಿತ್ವವನ್ನು ನಿನ್ನೆದುರು ತೋರಿಸಿ ಅಶ್ವಮೇಧ ಯಾಗವನ್ನು ಮಾಡುವೆನು!

ಶಿವಸ್ಕಂದವರ್ಮ: ಅಯ್ಯೋ, ಹುಚ್ಚು ಹುಡುಗ!

ಮಯೂರಶರ್ಮ: ಹುಚ್ಚು ಯಾರಿಗಿದೆ? ಯಾರಿಗಿಲ್ಲ? ಬಳ್ಳಾರಿಯಲ್ಲಿ ಹುಟ್ಟಿದ ಕನ್ನಡಿಗ ಹಾಲ ಶಾಲಿವಾಹನನ ವಂಶಜರಲ್ಲಿ ಕೊನೆಯ ದೊರೆ ದುರ್ಬಲನಾದುದರಿಂದ ನೀನು ಆತನನ್ನು ವಂಚಿಸಿ ಸಾರ್ವಭೌಮತ್ವವನ್ನು ಪಡೆದೆ. ನಿನ್ನ ತಂದೆ ವಿಷ್ಣುವರ್ಮ ಬೊಪ್ಪದೇವನು ಕೇವಲ ಸಾಮಂತಿಕೆಯನ್ನು ಪಡೆದಿದ್ದನು. ಸ್ವಾಮಿದ್ರೋಹದ ಕಲಂಕವನ್ನು ತೊಳೆಯಲು ಸಾಮ್ರಾಜ್ಯದ ಬೊಕ್ಕಸವನ್ನು ಬಳಸಿ ಅಶ್ವಮೇಧಯಾಗವನ್ನು ಮಾಡಿದರೆ ನಿನಗೆ ಬ್ರಹ್ಮತೇಜಸ್ಸನ್ನು ಎದುರಿಸುವ ಸಾಮರ್ಥ್ಯ ಬಂದಿರುವುದೆಂದು ತಿಳಿದೆಯಾ? ತಪೋಧನರನ್ನು ರಕ್ಷಿಸುವ ಹೊಣೆ ರಾಜನದೆಂಬುದು ನಿಜ. ಆದರೆ ಅವರನ್ನು ಕೀಳ್ಗಳೆದರೆ ಏನಾಗುವುದೆಂಬುದನ್ನು ದುಷ್ಯಂತಾದಿ ಮಹಾರಾಜರು ಪಟ್ಟ

ಪಾಡನ್ನು ನೋಡಿ ನೀನು ತಿಳಿದುಕೊಳ್ಳಬೇಕಾಗಿತ್ತು. ಆದರೆ ಅಧಿಕಾರಕ್ಕಿಂತ ಹೆಚ್ಚಿನ ಮಾದಕವಸ್ತು ಯಾವುದಿದೆ?

ಶಿವಸ್ಕಂದವರ್ಮ: ಮಯೂರ, ನಿನಗೆ ನಾನು ಸಲಿಗೆಯಿಂದ ಮಾತನಾಡಿಸಿದ್ದು ತಪ್ಪಾಯಿತೆಂದು ತೋರುತ್ತದೆ. ಅಭ್ಯಾಸ ಮಾಡುವುದನ್ನು ಬಿಟ್ಟು ಅಲ್ಲದ ಸಲ್ಲದ ಮಾತುಗಳನ್ನಾಡುವ ನಿನ್ನನ್ನು ನಮ್ಮ ಘಟಿಕಾಸ್ಥಾನದಿಂದ ಹೊರಗೆ ಹಾಕಿಸುತ್ತೇನೆ. ಜಾಗ್ರತೆ!

ಮಯೂರಶರ್ಮ: ದೊರೆಯೇ, ಕಂಡದ್ದಾಡಿದರೆ ಕೆಂಡದಂಥ ಕೋಪ ಬರುವುದು ಸಹಜ. ಆದರೆ ಅಪಾತ್ರನು ಪಾತ್ರನಿಗೆ ಉಪದೇಶಿಸುವುದನ್ನು ಬ್ರಹ್ಮ ತೇಜಸ್ಸೆಂದೂ ಸಹಿಸದು. ಬ್ರಹ್ಮತೇಜಸ್ಸು ಕ್ಷಾತ್ರಕ್ಕೆಂದೂ ಮಣಿಯದೆಂಬುದನ್ನು ಮಾತ್ರ ಚೆನ್ನಾಗಿ ಸೆರಗಿಗೆ ಗಂಟುಹಾಕಿಕೋ. ಇರಲಿ; ಮಾಡದೆ ಆಡುವುದು ತರವಲ್ಲ. ನೀನು ನನಗಿತ್ತ ಎಚ್ಚರಿಕೆಯನ್ನು ಚೆನ್ನಾಗಿ ಅರಿತುಕೊಂಡೆ. ಬರುತ್ತೇನೆ ಹೊರಟು ಹೋಗಲು!

ಹೀಗೆಂದು ಮಯೂರನು ಹುಬ್ಬು ಗಂಟಿಕ್ಕಿ ಚಕ್ರವರ್ತಿಯ ಎದುರಿಂದ ಹೊರಟು ಹೋದನು. "ಹಿಂದೆ ಪರಶುರಾಮನು ಕ್ಷತ್ರಿಯರ ಸೊಕ್ಕನ್ನು ಇಳಿಸಿದರೂ ಶ್ರೀರಾಮನಿಂದ ಪರಾಜಿತನಾಗಬೇಕಾಯ್ತು. ಆದುದರಿಂದಲೇ ಮತ್ತೆ ಕ್ಷತ್ರಿಯರು 'ತಮ್ಮಿಂದಲೇ ಜಗತ್ತು ನಡೆಯುತ್ತದೆ' ಎಂಬ ಅಹಂಕಾರವನ್ನು ತೋರಿಸಲಾರಂಭಿಸಿದ್ದಾರೆ. ಅದಕ್ಕೀಗ ಮದ್ದೆರೆಯುವ ಕಾಲ ಬಂದಿದೆ ಎಂದು ಮಯೂರನು ಭಾವಾವೇಶದಿಂದ ಮನದಲ್ಲೇ ಗೊಣಗಿದನು.

ಯುದ್ಧ

ಕುಂತಳದ ಇತಿಹಾಸದಲ್ಲಿ ಮಹಾಕ್ರಾಂತಿಯಾಗಲು ತಕ್ಕ ಏರ್ಪಾಡನ್ನು ವಿಧಿಯು ಅಂದಿನ ಇರುಳಲ್ಲೇ ನಡೆಯಿಸಿತು. ತನ್ನ ಪ್ರಿಯ ಗುರುವಾದ ವೀರಶರ್ಮನೊಡನೆ ಮಯೂರನು ಬೆಳಗಾಗುವುದರೊಳಗೆ ಕಾಂಚಿಯಿಂದ ಮಾಯವಾದನು. ಶ್ರೀಪರ್ವತದ ಘೋರಾರಣ್ಯದಲ್ಲಿ ಶಸ್ತ್ರಶಾಸ್ತ್ರವನ್ನು ಅಭ್ಯಸಿಸಿ, ಅಲ್ಲಿರುವ ಕಿರಾತ, ವಾನರ, ಕರಡಿ ಮುಂತಾದ ವನವಾಸಿಗಳನ್ನು ವಿವಿಧ ರೀತಿಗಳಿಂದ ಯುದ್ಧಕ್ಕಾಗಿ ಸಂಘಟಿಸಿ ತರಬೇತು ಕೊಟ್ಟು, ಕಿರುಕುಳ ಯುದ್ಧದ ಅದ್ಭುತ ತಂತ್ರವನ್ನು ಮಯೂರನು ಪಲ್ಲವರ ಗಡಿಗಾವಲುಗಾರರ ಮೇಲೆ ಪ್ರಯೋಗಿಸಿದನು. "ಕೆಟ್ಟೋಡಿದರ್ ಕೆಲ ಕೆಲರ್ ಗಜರಥಂಗಳಂ ಬಿಟ್ಟೋಡಿದರ್ ಕೈದುಗಳನೆಲ್ಲಮಂ" ಎಂಬಂತೆ ಪಲ್ಲವ ಅಂತಪಾಲರ ಸಮುದ್ರದಂಥ ಸೈನ್ಯವು ದಿಕ್ಕೆಟ್ಟು ಓಡಿತು. ಶಿವಸ್ಕಂದವರ್ಮನ ಮಂತ್ರಿಗಳು ಈ ಅದ್ಭುತ ಪರಾಕ್ರಮಿ ಮಯೂರನೇ ಎಂಬುದನ್ನು ಗೊತ್ತು ಹಚ್ಚಿದರು. ಆದರೆ ಅವನ ದಾಳಿಗಳ ಸ್ಥಳ, ಕಾಲ, ಕ್ರಮಗಳನ್ನು ಅರಿಯಲಾಗದ ಪಲ್ಲವ ಸೇನಾಪತಿಗಳು ತಿಂಗಳು ಗಟ್ಟಲೆ ಪ್ರಯಾಸಪಟ್ಟು ತಮ್ಮಿಂದ ಅವನನ್ನು ಹುಡುಕುವುದು ಸಾಧ್ಯವಾಗದೆಂದು ವರದಿ ಒಪ್ಪಿಸಿದರು. ಆ ಮಂತ್ರಿಗಳು ಚಕ್ರವರ್ತಿಗೆ ಅವನನ್ನು ಕರೆದು ಗೌರವಿಸಿ ಮಹಾದಂಡನಾಯಕನೆಂಬ ಸ್ಥಾನವನ್ನಿತ್ತು ಕುಂತಳದ ಸಾಮಂತಿಕೆಯನ್ನು ವಹಿಸಿಕೊಡುವುದು ಜಾಣತನವೆಂದು ಸಲಹೆಯಿತ್ತರು. ಚಕ್ರವರ್ತಿಯು ಅದಕ್ಕೊಪ್ಪಿ ಬನವಾಸಿಯಲ್ಲಿದ್ದ ಸಾಮಂತರಾದ ಚುಟುಗಳ ಆಧಿಪತ್ಯವನ್ನು ಕೊನೆಗೊಳಿಸಿ, ಅವರ ಸ್ಥಾನದಲ್ಲಿ ಮಯೂರಶರ್ಮನನ್ನು ಕುಳ್ಳಿರಿಸಿ, ಪಟ್ಟಾಭಿಷೇಕ ಮಾಡಿ, ಶ್ರೀ ಪರ್ವತದಿಂದ ದಕ್ಷಿಣದಲ್ಲಿರುವ ಪಲ್ಲವ ರಾಜ್ಯದ ಅಧಿಕಾರವನ್ನು ಅವನಿಗೆ ವಹಿಸಿಕೊಟ್ಟನು. ಮಲೆನಾಡಿನ ಮಹಾಮಲ್ಲನಾದ ಮಯೂರಶರ್ಮನು ಅಂದಿನಿಂದ ಮಯೂರವರ್ಮನಾದನು ಮತ್ತು ಒಂದೇ ವರ್ಷದಲ್ಲಿ ತನ್ನ ಸೈನ್ಯವನ್ನು ಶಾಸ್ತ್ರೀಯವಾಗಿ ಸಂಘಟಿಸಿಕೊಂಡು, ತ್ರೈಕೂಟ ಪ್ರಾಂತ್ಯದ (ರತ್ನಗಿರಿ–ಕುಲಾಬಾ ಪ್ರದೇಶದ) ಆಭೀರರನ್ನೂ ಉತ್ತರದ ಕೆಲ ಪಲ್ಲವ ಮನೆತನದ ದೊರೆಗಳನ್ನೂ ಪಾರಿಯಾತ್ರಿಕ (ಆರಾವಳಿ ವಿಂಧ್ಯಗಳ ನಡುವಿನ ಪ್ರದೇಶದ) ದೊರೆಗಳನ್ನೂ ಮಾಳವದ ಗಡಿಯವರೆಗೆ ಆಧಿಪತ್ಯ ನಡೆಸುತ್ತಿದ್ದ ಶಕಸ್ಥಾನದವರನ್ನೂ ಶಿವಮೊಗ್ಗ–ದಕ್ಷಿಣ ಕನ್ನಡ ಜಿಲ್ಲೆಗಳ ಭಾಗವಾದ ನಡುವಣ ಪ್ರದೇಶದ ಸೇಂದ್ರಕರನ್ನೂ ಅಂದು ಪುನ್ನಾಟವೆನಿಸಿದ್ದ ಮೈಸೂರು ಜಿಲ್ಲೆಯ ಪ್ರದೇಶದ

ಆಳರಸರನ್ನೂ, ಅಲಹಾಬಾದಿನ (ರಾಜಸ್ಥಾನ?) ಪ್ರದೇಶದಲ್ಲಿ ಆಳುತ್ತಿದ್ದ ಮೌಖರಿಗಳನ್ನೂ ಒಬ್ಬರನ್ನಾದ ಮೇಲೆ ಇನ್ನೊಬ್ಬರನ್ನೆಂಬಂತೆ ಸೋಲಿಸಿ ಅಖಿಲ ಭಾರತವೀರನೆನಿಸಿದನು. ಬೃಹದ್ ಬಾಣರೇ ಮೊದಲಾದ ಚಿಕ್ಕ ಅರಸರು ಈತನಿಗೆ ಕಪ್ಪ ಕಾಣಿಕೆಗಳನ್ನಿತ್ತರು. ಶಿವಸ್ಕಂದವರ್ಮನು ನೋಡುವಂತೆಯೇ ಮಯೂರವರ್ಮನು ಅಶ್ವಮೇಧಯಾಗವನ್ನು ಮಾಡಿ ತನ್ನ ಚಕ್ರವರ್ತಿತ್ವವನ್ನು ಜಗತ್ತಿಗೆ ಘೋಷಿಸಿದನು. ಈತನ ಕನ್ನಡ ಸಾಮ್ರಾಜ್ಯಕ್ಕೆ ಅಮರಾರ್ಣವ (ಪಶ್ಚಿಮ ಸಮುದ್ರ), ಮಾಳವ, ಶ್ರೀಪರ್ವತ ಹೆಗ್ಗಡದೇವನಕೋಟೆಯ ಪ್ರದೇಶ, ಮಲಬಾರಗಳು ಗಡಿಗಳಾದವು. ಇವನ ಆಳ್ವಿಕೆ ಕ್ರಿ.ಶ. ೨೮೦ರಿಂದ ೩೩೦ ರ ವರೆಗೆ.

ಸ್ವಾಭಿಮಾನ ಮತ್ತು ಇತರ ಸುಗುಣಗಳು

ಮಯೂರಶರ್ಮನ ಕನ್ನಡಿಗತನದ ಸ್ವಾಭಿಮಾನವು ಅವಿವಾದಾಸ್ಪದವಾಗಿ ಅವನನ್ನು ಮೊಟ್ಟಮೊದಲನೆಯ ಕನ್ನಡ ಚಕ್ರವರ್ತಿಯನ್ನಾಗಿ ಮಾಡಿದ್ದು ಎಷ್ಟು ಅನುಕರಣೀಯವೋ ಅದಕ್ಕೂ ಹೆಚ್ಚಾಗಿ ಅವನು ಬಾಲ್ಯದಲ್ಲಿ ಕನಸು ಕಂಡ ರಾಮರಾಜ್ಯವನ್ನು ಕನ್ನಡ ನೆಲದಲ್ಲಿ ಸರ್ವ ಲಕ್ಷಣ ಸಂಪನ್ನವಾಗಿ ಸ್ಥಾಪಿಸಿದ್ದು ಅಷ್ಟೇ ಅನುಕರಣೀಯವಾಗಿದೆ. ಶ್ರೀರಾಮನು ಮಂಗ, ಕರಡಿಗಳನ್ನು ಯುದ್ಧಕ್ಕೆ ಸಿದ್ಧಗೊಳಿಸಿದ್ದು ಪೌರಾಣಿಕವಾದರೆ, ಮಯೂರಶರ್ಮನು ಹಾಗೆ ಮಾಡಿದ್ದು ಐತಿಹಾಸಿಕವಾಯಿತು. ಹಾಗೇ ರಾಜ ಪ್ರಭುತ್ವದ ಪದ್ಧತಿಯಲ್ಲಿ ಸರಕಾರೀ ಆಡಳಿತದ ಶಿಸ್ತು, ವ್ಯವಸ್ಥೆ, ಅಚ್ಚುಕಟ್ಟುತನಗಳನ್ನು ದಕ್ಷಿಣ ಭಾರತದ ಎಲ್ಲ ಅರಸರಿಗೂ ಮಾದರಿಗಳಾಗುವಂತೆ ರೂಪಿಸಿದ ಶ್ರೇಯಸ್ಸು ಮಯೂರಶರ್ಮನಿಗೆ ಸಂದಿದೆ.

ತ್ಯಾಗ, ಶೀಲ, ಕೃತಕೃತ್ಯತೆ, ಕುಲೀನತೆ ಅಥವಾ ಸುಸಂಸ್ಕೃತತೆ, ವರ್ಚಸ್ಸು, ಸೌಂದರ್ಯ, ಯೌವನ, ಉತ್ಸಾಹ, ದಕ್ಷತೆ, ಜನಪ್ರೀತಿ, ತೇಜಸ್ಸು, ಪಾಂಡಿತ್ಯ, ವಿನಯವಂತಿಕೆಗಳು ಚೆನ್ನಾಗಿ ಬೆಳೆದು ನೆಲೆಗೊಂಡಿದ್ದ ವ್ಯಕ್ತಿತ್ವ ಮಯೂರಶರ್ಮನದು. ಆದುದರಿಂದ ಅವನು ಅಂಥ ಗುಣಗಳನ್ನುಳ್ಳವರನ್ನೇ ಸೂಕ್ಷ್ಮವಾಗಿ ಚಾಣಕ್ಯ ನೀತಿಯಿಂದ ಪರೀಕ್ಷಿಸಿ, ಗುರುತಿಸಿ ಮಂತ್ರಿಗಳನ್ನಾಗಿ ನಿಯಮಿಸಿಕೊಂಡನು. ಪ್ರಧಾನಿ (ಅಮಾತ್ಯ) ಮತ್ತು ಇತರ ಮಂತ್ರಿಗಳೂ ಸೇರಿ ಒಟ್ಟು ಎಂಟು ಜನರು ಮನುಸ್ಮೃತಿಯ ಪರಂಪರೆಯಂತೆ ಚಕ್ರವರ್ತಿಯ ಸಲಹೆಗಾರರಾದರು. ಅವರ ಸಲಹೆಗಳಂತೆ ಕಾರ್ಯನಡೆಸುವ ಕಾರ್ಯಾಂಗದಲ್ಲಿ ೧೮ ಜನ ಅಧ್ಯಕ್ಷರು. ಚಕ್ರಾಧಿಪತ್ಯವನ್ನು ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ ರಾಜ್ಯಗಳೆಂದು ನಾಲ್ಕು ವಿಭಾಗಗಳನ್ನಾಗಿ ಮಾಡಿ ಅವುಗಳನ್ನಾಳಲು ಶಾಸ್ತ್ರಜ್ಞರಾದ ಸ್ವಕುಟುಂಬದವರನ್ನು ರಾಜಪ್ರತಿನಿಧಿಗಳನ್ನಾಗಿ ಮಯೂರಶರ್ಮನು ನಿಯಮಿಸಿದನು. ಅವರು ತಮ್ಮ ವಿದ್ಯೆ, ವಿವೇಕ, ಚಾರಿತ್ರ ಸಂಪನ್ನತೆಗಳಿಂದ ಸರ್ವಪ್ರಜೆಗಳೂ, ಸರಕಾರಿ ನೌಕರರೂ ರಾಜಾಜ್ಞೆಯನ್ನು ಚಾಚೂತಪ್ಪದೆ ಪಾಲಿಸುವಂತೆ ದಕ್ಷತೆಯಿಂದ ನೋಡಿಕೊಂಡು ಸರ್ವ ಪ್ರಜೆಗಳಿಗೂ ಪ್ರಿಯರಾದರು.

ಆಸ್ಥಾನ

ಮಯೂರಶರ್ಮನ ಆಸ್ಥಾನದಲ್ಲಿ ಮಾಂಡಲಿಕರು, ಮಂತ್ರಿಗಳು, ಜನನಾಯಕರು, ಇವರ ಜೊತೆಗೆ ಇತರ ಪ್ರಾಧಿಕಾರಿಗಳು, ಪುರೋಹಿತರು, ಪಂಡಿತರು, ಕವಿಗಳು ಹಾಗೂ ಇತರ ಮಹಾಪ್ರತಿಭರಾದ ಕಲೆಗಾರರು ವಿರಾಜಿಸುತ್ತಿದ್ದರು. ಕರ್ನಾಟಕ ಸಾರ್ವಭೌಮರ ದರ್ಬಾರಿನ ಮಾದರಿ ಮಯೂರಶರ್ಮನ ಆಸ್ಥಾನದ ರಾಜಸಭಾ ವ್ಯವಸ್ಥೆಯಲ್ಲಿತ್ತು. ರಾಜಸಭೆಯಲ್ಲಿ ಮಹಾರಾಜ–ಮಹಾರಾಣಿಯರು ಕುಟ್ಟಿಮದ (ವೇದಿಕೆಯ) ಮೇಲೆ ಸಿಂಹಾಸನಗಳಲ್ಲಿ ಕುಳಿತುಕೊಳ್ಳುತ್ತಿದ್ದರು. ಮಹಾರಾಜರು ಒಂದು ಕೈಯಲ್ಲಿ ಅಧಿಕಾರಖಡ್ಗವನ್ನೂ ಇನ್ನೊಂದು ಕೈಯಲ್ಲಿ ಕಮಲವನ್ನೂ ಹಿಡಿದಿರುತ್ತಿದ್ದರು. ಆಳುಗಳು ಛತ್ರ–ಚಾಮರಗಳನ್ನು ಎಡ ಬಲಗಳಲ್ಲಿ ಹಿಡಿದು ನಿಲ್ಲುತ್ತಿದ್ದರು. ಚಕ್ರವರ್ತಿಯ ಸಿಂಹಾಸನದ ಎದುರಿನಲ್ಲಿ ರಾಜಗುರುಗಳು ಎತ್ತರದ ಆಸನದಲ್ಲಿ ಕುಳಿತುಕೊಳ್ಳುತ್ತಿದ್ದರು. ಮಯೂರಶರ್ಮನ ರಾಜಗುರು ವೀರಶರ್ಮ. ರಾಜಗುರುವಿನ ಎಡಬಲಗಳಲ್ಲಿ ಅವನ ಪ್ರಧಾನ ಶಿಷ್ಯರು ಕುಳಿತುಕೊಳ್ಳುತ್ತಿದ್ದರು. ಅವರ ಹಿಂದೆ ರಾಜಮನೆತನದ ಹಿರಿಯರೂ, ಮಂತ್ರಿಗಳೂ, ಮಾಂಡಲಿಕರೂ, ಆಸ್ಥಾನ ವಿದ್ವಾಂಸರೂ, ಪ್ರಾಧಿಕಾರಿಗಳೂ ಮಂಡಿಸುತ್ತಿದ್ದರು. ಈ ಸಭಾಸದರೊಡನೆ ಸಾರ್ವಭೌಮನೂ ಸಾಮಂತ ಮಹಾರಾಜರೂ, ಸ್ವದೇಶ–ವಿದೇಶ ನೀತಿಗಳ ಬಗೆಗೆ ಚರ್ಚಿಸಿ ನಿರ್ಣಯಕ್ಕೆ ಬಂದು ಕಾರ್ಯಯೋಜನೆಗಳನ್ನು ರೂಪಿಸುತ್ತಿದ್ದರು.

ಮಯೂರಶರ್ಮನ ರಾಜಸಭೆಯಲ್ಲಿ ಇನ್ನೊಂದು ವೈಶಿಷ್ಟ್ಯವೆಂದರೆ ಅಲ್ಲಿ ನಡೆಯುತ್ತಿದ್ದ ತತ್ವಜ್ಞಾನದ ಚರ್ಚೆ. ಜೀವನದ ಮೌಲ್ಯಗಳನ್ನು ನಿರ್ಧರಿಸುವ ಅದರ ಅಂಕೆಯಲ್ಲಿಯೇ ಇತರ ಶಾಸ್ತ್ರಗಳ ತೀರ್ಮಾನಗಳೂ ಕಾರ್ಯಾರಂಭಗಳೂ ನಡೆಯುವುದು ಮಹಾಸಂಸ್ಕೃತಿಯ ಲಕ್ಷಣ. ಅದರ ಶ್ರೀಕಾರವನ್ನು ಹಾಕಿಕೊಟ್ಟ ಶ್ರೇಯಸ್ಸು ಮೊದಲ ಕದಂಬ ಚಕ್ರವರ್ತಿಯದು.

ಚಕ್ರವರ್ತಿಯ ಕೈಕೆಳಗಿನ ರಾಜಪ್ರತಿನಿಧಿಗಳಿಗೂ ಮಹಾರಾಜರಿಗೂ ಐದೈದು ಜನರ ಮಂತ್ರಿ ಸಂಪುಟವಿರುತ್ತಿತ್ತು. ಮನೆವೆರ್ಗಡೆ, ತಂತ್ರಪಾಲ, ಪ್ರಧಾನ ಪ್ರಮುಖಪಾಲ, ಸಭಾಕಾರ್ಯ ಸಚಿವ ಎಂಬ ಆ ಐವರು ದೈನಂದಿನ ಆಡಳಿತದ ಮೇಲ್ವಿಚಾರಣೆಯನ್ನು ಮಾಡುತ್ತಿದ್ದರು. ರಹಸ್ಯಾಧಿಕೃತನೆಂಬ ಖಾಸಗಿ ಕಾರ್ಯದರ್ಶಿಯು ಮಹಾರಾಜರಿಗೆ

ವೈಯಕ್ತಿಕ ನೆರವಿಗನಾಗಿರುತ್ತಿದ್ದನು. ಧರ್ಮಶಾಸ್ತ್ರದಲ್ಲಿ ಹೇಳಿದ ನಿಯಮಗಳಂತೆ ರಾಜಾಜ್ಞೆ ಹೊರಡಿಸುವ, ನ್ಯಾಯದಾನ ಮಾಡುವ ಮತ್ತು ಕರ–ಕಂದಾಯಾದಿಗಳನ್ನು ವಸೂಲು ಮಾಡಿ ಜನಹಿತಕ್ಕಾಗಿ ವಿನಿಯೋಗಿಸುವ ಹಕ್ಕು ಮಾತ್ರ ಭಾರತೀಯ ಚಕ್ರವರ್ತಿಗಿತ್ತು. ಅವನ ಸಾಮ್ರಾಜ್ಯ ಅವನ ಜಮೀನಾಗಿರಲಿಲ್ಲ. ಅವನು ಹೊಸ ಧರ್ಮಶಾಸ್ತ್ರವನ್ನು ನಿರ್ಮಿಸಲಾರ ಮತ್ತು ಜನಾಭಿಪ್ರಾಯವನ್ನು ಮಂತ್ರಿ, ಪುರೋಹಿತ, ರಾಜಗುರುಗಳ ಮೂಲಕ ತಿಳಿದು ಅವರ ಸಲಹೆಯಂತೆಯೇ ನಡೆದುಕೊಳ್ಳಬೇಕಾದ ಪ್ರಜಾಸಂಘಟನ ಪದ್ಧತಿ ಅವನು ಸರ್ವಾಧಿಕಾರಿಯಾಗದಂತೆ ನೋಡಿಕೊಳ್ಳಲು ಬಹಳ ಕಾಲ ಸಮರ್ಥವಾಗಿತ್ತು. ಗಾಂಧಿಯವರು ನೆನೆದುಕೊಂಡ ಗ್ರಾಮ ಸ್ವರಾಜ್ಯ ಪದ್ಧತಿಯು ಮಯೂರಶರ್ಮನ ಕಾಲದಲ್ಲಿ ಚೆನ್ನಾಗಿತ್ತು.

ನೀತಿನಿಷ್ಠೆ

ಮಯೂರಶರ್ಮನು ಸರ್ವಮತ ಸಹಿಷ್ಣುವಾಗಿದ್ದನಲ್ಲದೆ, ಆಯಾ ಮತೀಯರ ಸತ್ಕಾರ್ಯಗಳಿಗೆ ಪ್ರೋತ್ಸಾಹವನ್ನು ಕೊಡುತ್ತಿದ್ದನು. ಕೆರೆ, ಕಾಲುವೆ, ರಸ್ತೆ, ಸಾಲುಮರ, ಧರ್ಮಛತ್ರ ಮುಂತಾದ ಸಾರ್ವಜನಿಕ ಉಪಯೋಗದ ಕೆಲಸಗಳನ್ನು ಸರಕಾರ ಸದಾ ಮಾಡುತ್ತಿರುವುದು ಅಂದಿನ ರಾಜಧರ್ಮವಾಗಿತ್ತು. ದೇವಾಲಯ, ಮಠ, ಬ್ರಹ್ಮಪುರಿ, ಅಗ್ರಹಾರ ಮುಂತಾದ ವಿದ್ಯಾಪೀಠಗಳಿಗೆ ಸರಕಾರವೂ, ಸಾವಕಾರರೂ ಯಥೇಷ್ಟವಾಗಿ ಭೂದಾನ, ಧನದಾನಗಳನ್ನು ನೀಡುತ್ತಿದ್ದ ಸುವರ್ಣ ಯುಗವದು. ಪುರಗಳೂ, ಜನಪದಗಳ ಅಂದಿನ ನಗರ–ಗ್ರಾಮ ಪ್ರದೇಶಗಳೂ ರಾಜ್ಯದ ಪ್ರತಿಯೊಂದು ಘಟಕ–ಉಪಘಟಕಕ್ಕೂ ಒಬ್ಬೊಬ್ಬ ಉಚ್ಚ ಕಾರ್ಯಾಂಗಾಧಿಕಾರಿ ಇರುತ್ತಿದ್ದನು. ಗ್ರಾಮಸ್ಥರ ಅಭಿಪ್ರಾಯವೇ ಅಂದು ಜನಾಭಿಪ್ರಾಯವಾಗಿತ್ತು.

ವೈಯಕ್ತಿಕ ಹಾಗೂ ಕುಟುಂಬದ ಜೀವನದ ನಿಯಮಗಳು ಚಕ್ರವರ್ತಿಗೂ ಪ್ರಜೆಗೂ ಒಂದೇ ಬಗೆಯಾಗಿದ್ದವು. ಅಪೂಜ್ಯರ ಪೂಜೆ, ಪೂಜ್ಯರ ತಿರಸ್ಕಾರ ನಡೆಯದಂತೆ ಎಲ್ಲ ಎಚ್ಚರಿಕೆಗಳನ್ನೂ ತೆಗೆದುಕೊಳ್ಳುವ ವ್ಯವಸ್ಥೆಯ ದೆಸೆಯಿಂದ ಮಹಾವೀರನಾದ ಮಯೂರಶರ್ಮನು ಮಹಾ ಪ್ರಶಾಸಕನೂ ಆಗಿ ಜನರ ಪ್ರೀತಿಯನ್ನು ಗಳಿಸಿದನು. ಸ್ವರಾಜ್ಯವು ಸುರಾಜ್ಯಕ್ಕೆ ಮಾತ್ರ ಸಾಧನ ಎಂಬುದನ್ನು ತೋರಿಸಿ ಕೊಟ್ಟ ಮೊದಲ ಕನ್ನಡಿಗನವನು. ತಾಳಗುಂದದ ಪ್ರಣವೇಶ್ವರ ಅವನ ಮನೆ ದೇವರಾದರೆ, ಬನವಾಸಿಯ ಮಧುಕೇಶ್ವರ ಸಾಮ್ರಾಜ್ಯ ದೇವರು. ದೇವಾಲಯಗಳು ಅಂದು ಸಮಾಜ ಶಿಕ್ಷಣ ಕೇಂದ್ರಗಳಾಗಿದ್ದವು. ಅವುಗಳ ಮೂಲಕ ಚಕ್ರವರ್ತಿಯೂ ಸಾಮಂತರೂ ಪ್ರಜೆಗಳಿಗೆ ಸುಸಂಸ್ಕಾರವನ್ನು ನೀಡುತ್ತಿದ್ದರು. ಸ್ವರಾಜ್ಯ–ಪರರಾಜ್ಯದವರೆಂಬ ಭೇದವನ್ನು ಮಾಡದೆ ಚಾರಿತ್ರವಂತ ವಿದ್ವಾಂಸರನ್ನು ಸ್ವತಂತ್ರವಾಗಿ ವಿದ್ಯಾದಾನ ಮಾಡಲು ಪ್ರೋತ್ಸಾಹಿಸುವ ರಾಜಧರ್ಮಕ್ಕೆ ಕನ್ನಡನಾಡಿನಲ್ಲಿ ಮಯೂರಶರ್ಮನೇ ಮೂಲ ಪುರುಷನಾದನು.

ವಂಶಜರ ಕೀರ್ತಿ

ಮಯೂರಶರ್ಮನ ಮಗ ಕಂಗ (ಸ್ಕಂದ)ವರ್ಮ (೩೩೦–೩೬೦); ಮೊಮ್ಮಗ ಭಗೀರಥವರ್ಮ (೩೬೦–೪೦೦) ಮತ್ತು ಮರಿಮಗ ರಘುವರ್ಮ (೪೦೦–೪೨೫) ರಘುವರ್ಮನ ತಮ್ಮ ಕಾಕುತ್‌ಸ್ಥವರ್ಮ (೪೨೫–೪೫೦). ಕದಂಬ ವೈಭವವನ್ನು ಪುನರುಜ್ವಲಿಸಿದವರು ರಘು–ಕಾಕುತ್‌ಸ್ಥರು. ಅವರು ಮಯೂರಶರ್ಮನ ನಿಜವಾದ ಸಾಂಸ್ಕೃತಿಕ ಪ್ರತಿನಿಧಿಗಳಾಗಿದ್ದರು. ವಿದ್ಯೆ, ಪರಾಕ್ರಮ, ಔದಾರ್ಯ, ಸೌಂದರ್ಯಗಳಲ್ಲಿ ಅವರು ಮಯೂರಶರ್ಮನನ್ನು ಪ್ರಜೆಗಳಿಗೆ ಪದೇ ಪದೇ ನೆನಪು ಮಾಡಿ ಕೊಡುತ್ತಿದ್ದರು. ಉತ್ತರ ಭಾರತದ ಎರಡನೆಯ ಚಂದ್ರಗುಪ್ತ ಸಾಹಸಾಂಕ ವಿಕ್ರಮಾದಿತ್ಯನು (೩೬೫–೪೧೪) ಕಾಳಿದಾಸನೆಂಬ ತನ್ನ ಆಸ್ಥಾನಕವಿಯನ್ನು ರಘುವರ್ಮನ ಆಸ್ಥಾನಕ್ಕೆ ಕನ್ಯಾರ್ಥಿಯನ್ನಾಗಿ ಕಳಿಸಿಕೊಟ್ಟಿದ್ದನು. ಅವನ ಮೊಮ್ಮಗ ಕುಮಾರಗುಪ್ತನ ಹೆಂಡತಿ ಕಾಕುತ್‌ಸ್ಥವರ್ಮನ ಕಿರಿಯ ಮಗಳು. ವಾಕಾಟಕ ನರೇಂದ್ರಸೇನನ ಹೆಂಡತಿ ಅವನ ಹಿರಿಯ ಮಗಳು. ಉಡುಪಿಯ ಸನಿಹದ ಉದಯಾವರ ರಾಜಧಾನಿಯಲ್ಲಿ ಸಾಮಂತನಾಗಿದ್ದ ಪಶುಪತಿ ಆಳುಪನು ಅವನ ಮತ್ತೊಬ್ಬ ಮಗಳ ಗಂಡ.

ಕಾಕುತ್‌ಸ್ಥವರ್ಮನ ಮಗ ಶಾಂತಿವರ್ಮ. ಅವನು ಅಖಿಲ ಕರ್ನಾಟಕ ಸಾರ್ವಭೌಮನೆಂದು ಹೆಸರಾದನು. ಅವನೂ ಕದಂಬಗನ್ನಡದ ಸೂರ್ಯಪ್ರಭೆಯನ್ನು ಕ್ರಿ.ಶ. ೪೫೦ ರಿಂದ ೪೬೫ರ ವರೆಗೆ ಬೆಳಗಿದನು. ಅವನ ಮಗ ಮೃಗೇಶ ವರ್ಮ (೪೬೫–೪೯೦), ಮೊಮ್ಮಗ ರವಿವರ್ಮ (೪೯೨–೫೩೬).

ಶಾಂತಿವರ್ಮನ ನೆಚ್ಚಿನ ಸೇನಾಪತಿ ಶ್ರುತಕೀರ್ತಿ; ಅವನ ಆಡಳಿತದಲ್ಲಿ ಕಳ್ಳತನವು ಶಬ್ದಕೋಶದಲ್ಲಿ ಮಾತ್ರ ಉಳಿಯುವಂತಾದದ್ದು ಅವನ ಸುರಾಜ್ಯಭಾರದ ಹೆಗ್ಗುರುತು!

ಮೃಗೇಶವರ್ಮನು ಕಾಂಚಿಯಲ್ಲಾಳುತ್ತಿದ್ದ ಮೂರನೆಯ ಸ್ಕಂದವರ್ಮ ಪಲ್ಲವನನ್ನು ಸೋಲಿಸಿದ್ದು ಕದಂಬ ಕುಲದ ಎರಡನೆಯ ಬಾರಿಯ ಪಲ್ಲವ ವಿಜಯ. ಅವನೂ ತನ್ನ ಆಡಳಿತಗಾರಿಕೆಗೆ ಹೆಸರಾದವನು.

ರಘು–ಕಾಕುತ್‌ಸ್ಥರ ಕಾಲದ ಸರ್ವವೈಭವದ ಪುನರುದಯವಾದದ್ದು ಮಹಾವೀರ ರವಿವರ್ಮನ ಕಾಲದಲ್ಲಿ. ಈತನು ಪಲ್ಲವರನ್ನು ಗೆದ್ದದ್ದು ಕದಂಬ ಕುಲದ ಮೂರನೆಯ

ಬಾರಿಯ ಪಲ್ಲವ ವಿಜಯ; ಅವಿನೀತ ಗಂಗದೊರೆಯನ್ನೀತ ಸೋಲಿಸಿದನು; ಜನಪ್ರಿಯತೆಯಲ್ಲಿ ಮಯೂರಶರ್ಮನಿಗೆ ಸರಿದೊರೆ ಎನ್ನಿಸಿದವನು ರವಿವರ್ಮನೊಬ್ಬನೇ! ಈತನ ಚಕ್ರಾಧಿಪತ್ಯವು ನರ್ಮದಾ ನದಿಯವರೆಗೆ ಹಬ್ಬಿತ್ತು. ಮಯೂರಶರ್ಮನ ಚಕ್ರಾಧಿಪತ್ಯವು ಧರ್ಮವಿಜಯ ರೂಪವಾಗಿದ್ದಿತು. ಅವನು ಗೆದ್ದ ದೂರದ ರಾಜ್ಯಗಳ ರಾಜ್ಯಭಾರವನ್ನು ಅಲ್ಲಿಯ ರಾಜರೇ ನಡೆಸುತ್ತಿದ್ದರು. ಆದರೆ ರವಿವರ್ಮನ ಚಕ್ರಾಧಿಪತ್ಯವು ಅರ್ಥ ವಿಜಯರೂಪದ್ದು. ಆದುದರಿಂದ ನರ್ಮದೆಯ ವರೆಗೆ ನೇರವಾಗಿ ಅವನು ಆಡಳಿತ ಮಾಡುತ್ತಿದ್ದನು.

> **"ನರ್ಮದಾಂತಂ ಮಹೀ ಪ್ರೀತ್ಯಾ**
> **ಯಮಾಶ್ರಿತ್ಯಾಭಿನಂದತಿ ।**
> **ಕೌಸ್ತುಭಾಭಾರುಣಚ್ಛಾಯಾ**
> **ವಕ್ಷೋ ಲಕ್ಷ್ಮೀಹರೇರಿವ ॥**
> **ರೇವಾವಧಿ ಜಯಂತೀಯಂ**
> **ಸುರೇಂದ್ರನಗರೀ ಶ್ರಿಯಾ ।**
> **ವೈಜಯಂತೀ ಚಲಚ್ಚಿತ್ರ**
> **ವೈಜಯಂತೀ ವಿರಾಜತೇ ॥"**

ಎಂಬ ಕೊರಮಂಗಲ ದತ್ತಿಶಾಸನವು ರವಿವರ್ಮನ ಕರ್ನಾಟಕವು ಕಾವೇರಿಯಿಂದ ನರ್ಮದೆಯ ವರೆಗೆ ಹಬ್ಬಿದ್ದನ್ನು ಪ್ರಮಾಣಿಸುತ್ತದೆ!

ವಂಶಜರ ಪರಾಕ್ರಮ

ಬನವಾಸಿಗೆ ಕೌಮುದಿ, ಬೈಂದಿವಿ, ಜಯಂತಿ, ವೈಜಯಂತಿ, ವನವಾಸಿ ಎಂಬ ಹೆಸರುಗಳು ಪ್ರಸಿದ್ಧ. ಕುಂತಳ (ಕೊಂಕಣ) ಪುರವೆಂದೂ ಆಮೇಲೆ ಅದಕ್ಕೆ ಹೆಸರು ಬಂತು.

ತಾಳಗುಂದದ ಶಿಲಾಶಾಸನವನ್ನು ಬರೆಯಿಸಿದವನು ಕಾಕುತ್‌ಸ್ಥವರ್ಮನ ಮಗನಾದ ಶಾಂತಿವರ್ಮ ಚಕ್ರವರ್ತಿ. ಈತನು ತನ್ನ ದಿಗ್ವಿಜಯದಿಂದ ಕದಂಬ ಸಾಮ್ರಾಜ್ಯವನ್ನು ಬಹುವಾಗಿ ವಿಸ್ತರಿಸಿದನು. ಈತನ ಆಸ್ಥಾನದಲ್ಲಿ ೧೮ ಜನ ಸಾಮಂತರಿದ್ದರು. ಇವನ ಕಾಲದಲ್ಲಿ ಇವನ ತಮ್ಮನಾದ ಒಂದನೆಯ ಕೃಷ್ಣವರ್ಮನು ಬನವಾಸಿ ರಾಜಧಾನಿಯಾದ ಕುಂತಳ ಅಥವಾ ಕರ್ನಾಟಕ ಸಾಮ್ರಾಜ್ಯದ ದಕ್ಷಿಣ ಭಾಗದಲ್ಲಿ ಎದುರು ನಿಂತ ಸಾಮಂತರನ್ನು ಸೋಲಿಸಿ, ಆ ಪ್ರದೇಶದ ಆಡಳಿತವನ್ನು ತ್ರಿಪರ್ವತದಲ್ಲಿ (ಬೇಲೂರು ತಾಲ್ಲೂಕಿನ ಹಳೆಯಬೀಡಿನಲ್ಲಿ) ನಿಂತು ನಡೆಸತೊಡಗಿದನು. ಬನವಾಸಿಯಲ್ಲಿ ಶಾಂತಿವರ್ಮನ ಮಗನಾದ ಮೃಗೇಶವರ್ಮನು ಶ್ರೀ ವಿಜಯ

ಶಿವನೆಂಬ ಬಿರುದಿನಿಂದ ಪಟ್ಟಾಭಿಷಿಕ್ತನಾದನು. ಕೇಕಯ ರಾಜನ ಮಗಳಾದ ಪ್ರಭಾವತಿಯು ಇವನ ಪಟ್ಟದ ರಾಣಿಯಾದಳು. ಈತನು ಗಂಗರಾಜನಾಗಿದ್ದ ವಿಷ್ಣುಗೋಪನನ್ನು ಸೋಲಿಸಿ ತಲಕಾಡಿಗೆ ಓಡಿಸಿದನು. ಪಲ್ಲವರ ೩ನೆಯ ಸ್ಕಂದವರ್ಮನನ್ನೂ ಇವನು ಹಿಮ್ಮೆಟ್ಟಿಸಿದನು.

ಕೃಷ್ಣವರ್ಮನ ಸಂತತಿಯವರಾದ ವಿಷ್ಣುವರ್ಮ, ಸಿಂಹವರ್ಮ, ೨ನೆಯ ಕೃಷ್ಣವರ್ಮರು ಹಳೆಯಬೀಡಿನಿಂದ ತಮ್ಮ ಭಾಗವನ್ನು (೪೭೫–೫೪೭) ಆಳಿಕೊಂಡಿದ್ದರು. ಬನವಾಸಿಯಲ್ಲಿ ರವಿವರ್ಮನ ಮಗನಾದ ಹರಿವರ್ಮನಿಗೆ ಮಕ್ಕಳಿಲ್ಲದುದರಿಂದ ಅವನ ಆಳಿಕೆ (೫೩೭–೫೪೭) ಮುಗಿದ ಮೇಲೆ ೨ನೆಯ ಕೃಷ್ಣವರ್ಮನು ಬನವಾಸಿಗೆ ಬಂದು ಈ ಭಾಗವನ್ನೂ ಆಳತೊಡಗಿದನು. ಒಟ್ಟಿನ ಮೇಲೆ ಇವನ ಆಳಿಕೆ ೨೫ ವರುಷಗಳ ಕಾಲ. ಆಮೇಲೆ ಅಜವರ್ಮ (೫೬೫–೬೦೬) ಮತ್ತು ಭೋಗಿವರ್ಮರು (೬೦೬–೬೧೦) ಆಳಿದರು. ಇವರ ಕಾಲದಲ್ಲಿ ಸಾಮ್ರಾಜ್ಯ ಪದವಿ ಕೊನೆಗೊಂಡಿತು. ಬಾದಾಮಿಯ ಚಾಲುಕ್ಯರು ಪ್ರಬಲರಾಗಿ ಇವರ ಅಂಕೆಯನ್ನು ಮೀರಿ ಇವರನ್ನು ಅಧೀನತೆಗೆ ಇಳಿಸಿದರು. ಅನಂತರ ಆಳಿದವರು ೨ನೆಯ ವಿಷ್ಣುವರ್ಮ (೬೧೦–೬೫೧) ಮತ್ತು ಮಧುವರ್ಮರು (೬೫೧–೬೫೫).

೨ನೆಯ ಕೃಷ್ಣವರ್ಮನು ಬನವಾಸಿಯಲ್ಲಿ ಅಶ್ವಮೇಧ ಯಾಗವನ್ನು ಮಾಡಿ ಮಯೂರಶರ್ಮನ ಚಕ್ರೇಶ್ವರ ಪದವಿಯನ್ನು ಪುನಃ ಭಾರತೀಯರ ನೆನಪಿಗೆ ತಂದು ಕೊಟ್ಟನು; ಇವನು ಸಾಮಂತರಾಗಿದ್ದ ಸೇಂದ್ರಕರ ದಂಗೆಯನ್ನು ಅಡಗಿಸಿದನು; ಕದಂಬ ಸಾಮ್ರಾಜ್ಯವನ್ನು ಪುನಃ ದೃಢಪಡಿಸಿದನು; ಚೆನ್ನಾಗಿ ಪರಂಪರಾನುಗತ ರೀತಿಯಿಂದ ರಾಜ್ಯಭಾರವನ್ನು ಮಾಡಿದನು. ಇವನ ಮಗನಾದ ಅಜವರ್ಮನಿಗೆ ಚಾಲುಕ್ಯರ ಸಾಮಂತಿಕೆ ಪ್ರಾಪ್ತವಾದರೂ ಮೊಮ್ಮಗ ಭೋಗಿವರ್ಮನು ಸ್ವತಂತ್ರವಾಗಿಯೇ ರಾಜ್ಯಶಾಸನವನ್ನು ನಡೆಯಿಸಿದನು. ಇವರ ಸಂತತಿಯ ಭೋಗಿವರ್ಮ – ವಿಷ್ಣುವರ್ಮರು ಚಾಲುಕ್ಯರಿಂದ ಸೋಲಿಸಲ್ಪಟ್ಟರೂ ವಿಷ್ಣುವರ್ಮನ ಮಗ ಮಧುವರ್ಮನು ಚಾಲುಕ್ಯರು ಪಲ್ಲವರಿಂದ ಸೋಲಿಸಲ್ಪಟ್ಟದ್ದರಿಂದ ಸ್ವತಂತ್ರವಾಗಿ ಬನವಾಸಿನಾಡನ್ನು ಆಳಿಕೊಂಡಿದ್ದನು. ಇವನ ಕಾಲವು ಮಯೂರಶರ್ಮನ ಚಕ್ರವರ್ತಿತ್ವದ ಪರಂಪರೆಗೆ ಕೊನೆಯದಾಗಿ ಇತಿಶ್ರೀ ಹಾಕಿತು.

ಆಡಳಿತದ ಆದರ್ಶ

ಆದರೆ ಕ್ರಿ.ಶ.೨೮೦ರಿಂದ ೬೫೫ರ ವರೆಗೆ ಅಂದರೆ, ಸುಮಾರು ೩೭೫ ವರುಷಗಳ ಕಾಲ, ಮಯೂರಶರ್ಮನು ಹಾಕಿಕೊಟ್ಟ ಸಾಂಸ್ಕೃತಿಕ ಸತ್‌ಪರಂಪರೆಯು ಅವಿಚ್ಛಿನ್ನವಾಗಿ ನಡೆದು ಬಂದದ್ದು ಕನ್ನಡ ನಾಡಿನ ನಾಗರಿಕತೆಗೆ ಭದ್ರವಾದ ಬುನಾದಿಯನ್ನು ಹಾಕಿಕೊಟ್ಟಿತು. ಅವರ ಕಾಲದಲ್ಲಿ ಕುಂತಳ (ಕರ್ನಾಟಕ)ದಲ್ಲಿ ೮೦

ದೊಡ್ಡ ನಗರಗಳಿದ್ದವೆಂದು ಪ್ರಸಿದ್ಧಿ. ಪ್ರತಿಯೊಂದು ನಗರಕ್ಕೂ ಒಬ್ಬೊಬ್ಬ ನಗರಸ್ವಾಮಿ (ಮೇಯರ್) ಇರುತ್ತಿದ್ದನು. ನಗರದಲ್ಲಿ ಕೇರಿ–ಮನೆಗಳಿದ್ದವು. ಪ್ರತಿಯೊಂದು ವೃತ್ತಿಯವರ ಕೇರಿಯೂ ಪ್ರತ್ಯೇಕ. ಆಯಾ ವೃತ್ತಿಯವರದೇ ಒಂದೊಂದು ಪ್ರತ್ಯೇಕ ಸಂಘ. ನಗರಸಭೆಗೆ ಅವರು ತಮ್ಮ ನಾಯಕರನ್ನು ಪ್ರತ್ಯೇಕವಾಗಿ ಕಳಿಸುತ್ತಿದ್ದರು. ಅಂದಿದ್ದದ್ದು ಗುಪ್ತಮತದಾನವಲ್ಲ, ಪ್ರಕಟ ಮತದಾನ. ಅದರಿಂದ ಜನರಲ್ಲಿ ಸತ್ಯಸಂಧತೆಯೂ ನೈತಿಕ ಧೈರ್ಯವೂ ಹೆಚ್ಚಾಗುತ್ತಿತ್ತು. ಅವರು ನಗರಕ್ಕಾಗಿ ನಡೆಯುವ ಬಹುಮತ ನಿರ್ಣಯದ ಕಾರ್ಯಯೋಜನೆಗೆ ಅವಶ್ಯವಾದ ದೇಣಿಗೆಗಳನ್ನು ತಮ್ಮ ಸಂಘಗಳ ಸಾಮೂಹಿಕ ನಿಧಿಯಿಂದ ಒದಗಿಸುತ್ತಿದ್ದರು. ಅವರವರ ಕೇರಿಯ ಸುಧಾರಣೆ ಆಯಾ ಕೇರಿಯವರ ಧನಶಕ್ತಿಯನ್ನು ಅವಲಂಬಿಸುತ್ತಿತ್ತು. ಎಲ್ಲ ಕೇರಿಯವರ ಸಾರ್ವಜನಿಕ ಕಾರ್ಯಗಳಿಗೆ ನಗರಸಭೆ ಅವರಿಂದ ವಸೂಲುಮಾಡಿದ ಕರ, ಕಂದಾಯ ಸುಂಕಗಳಿಂದ ಮತ್ತು ಬಿಟ್ಟಿ ಆಳುಗಳ ಪೂರಯಿಕೆಯಿಂದ ತಕ್ಕ ವ್ಯವಸ್ಥೆಯನ್ನು ಮಾಡುತ್ತಿತ್ತು. ವೃತ್ತಿಸಂಘದ ಅಧ್ಯಕ್ಷತೆಯೂ ಪ್ರಕಟ ಮತದಾನದಿಂದಲೇ ಸಿದ್ಧವಾಗುತ್ತಿತ್ತು. ಮಹಾತ್ಮ ಗಾಂಧಿಯವರು ಹೇಳಿದಂತೆ ಅವರಿಗೆ ಸಾರ್ವಜನಿಕ ವ್ಯವಹಾರದಲ್ಲಿ ಗುಪ್ತಿಯು ಪಾಪ ಎಂಬ ನಂಬಿಗೆಯಿತ್ತು. ರಾಜ್ಯದ ಆಡಳಿತ ನಿಯಮಾವಳಿಯಂತೆಯೇ ನಗರಕ್ಕೂ ಆಡಳಿತ ನಿಯಮಾವಳಿ ಇತ್ತು. ಸಾರ್ವಜನಿಕ ಕಾರ್ಯಗಳಿಗಾಗಿ ಪಡೆಯುವ ದೇಣಿಗೆಗಳು ಆಯಾ ಕಾರ್ಯದ ಯೋಜನೆಯ ಅಂದಾಜು (ವ್ಯಯ) ಪತ್ರಿಕೆಯ ಮೊತ್ತಕ್ಕಿಂತ ಎಂದೂ ಹೆಚ್ಚಾಗಿರುತ್ತಿರಲಿಲ್ಲ. ಅಂಥ ದೇಣಿಗೆಗಳು ಅನಂತರ ಧರ್ಮದಾಯ ಎಂಬ ಹೆಸರು ಬಂದಿತು.

ಕೃಷಿ, ಗೋರಕ್ಷೆ, ವಾಣಿಜ್ಯಗಳು ವೈಶ್ಯವೃತ್ತಿ ಎನಿಸಿದ್ದವು. ಈ ಮೂರೂ ರೈತರಕಾರ್ಯಕ್ಷೇತ್ರದಲ್ಲಿ ಸಮೀಕೃತವಾಗಿ ನಡೆಯುತ್ತಿದ್ದುದರಿಂದ ಇಂದಿನಂತೆ ವರ್ತಕರು ಪ್ರತ್ಯೇಕ ವರ್ಗದವರಾಗಿ ರೈತರ ಶೋಷಣೆಗೆ ಕಾರಣರಾಗುತ್ತಿದ್ದಿಲ್ಲ. ಮಯೂರಶರ್ಮನ ಕಾಲದಲ್ಲೇ ನೌಕಾ ವ್ಯಾಪಾರ (ವಿದೇಶಿಯ ವ್ಯಾಪಾರ) ಆರಂಭವಾಗಿತ್ತೆಂಬುದು ಐತಿಹ್ಯ. ಕಾರವಾರದ ನೌಕಾತಾಣೆಯ ಚರಿತ್ರೆ ಅಲ್ಲಿಂದ ಆರಂಭವಾಗಿತ್ತೆನ್ನಬಹುದು. ಬೌದ್ಧ ಭಿಕ್ಷುಗಳಂತೆಯೇ ಬ್ರಾಹ್ಮಣ ತತ್ತ್ವಜ್ಞಾನಿಗಳೂ ಮಹಾ ವಾಣಿಜ್ಯಕರೂ ಯೂರೋಪಿನ ದಕ್ಷಿಣಭಾಗದ ನಗರಗಳಿಗೆ ಹೋಗುತ್ತಿದ್ದರೆಂದು ಪ್ರತೀತಿ. ರೋಂ ನಗರದ ಕೊನೆಯ ಚಕ್ರವರ್ತಿಗಳ ಕಾಲವದು. ರೋಮನ್ ಮಾದರಿಯ ಆ ಕಾಲದ ಹೂಜಿಗಳು ಬನವಾಸಿಯಲ್ಲಿ ದೊರಕಿವೆ. ಅವು ಕೆಂಪೊತ್ತಿದ (ಬೇಯಿಸಿದ) ಮಣ್ಣಿನಿಂದ ಮಾಡಿದಂಥವುಗಳು, ಅವುಗಳ ಕಲಾಮಯತೆ ಸರಳವಾಗಿದ್ದರೂ ಸುಂದರವಾಗಿತ್ತು.

ವೀಳೆಯದೆಲೆ, ಕಬ್ಬು, ಬತ್ತ, ತೆಂಗು, ಅಡಿಕೆ, ಬಾಳೆ, ಹಲಸು, ಮಾವುಗಳ ಫಲಗಳು ದೇಶೀಯ ಮಾರುಕಟ್ಟೆಯಲ್ಲಿ ವಿನಿಮಯ–ವಿಕ್ರಯ ಎಂಬ ಎರಡು ರೀತಿಗಳಿಂದಲೂ ಖರ್ಚಾಗುತ್ತಿದ್ದರೆ, ಮೆಣಸಿನ ಕಾಳು ಮತ್ತು ಏಲಕ್ಕಿಗಳು ಹೆಚ್ಚಾಗಿ

ಗಂಧ–ದಂತಗಳಂತೆ ವಿದೇಶೀಯ ವ್ಯಾಪಾರದ ವಸ್ತುಗಳಾಗಿದ್ದವು. ಭಾರತೀಯ ನೌಕಾ ನಿರ್ಮಾಣಕ್ಕೆ ಈ ವ್ಯಾಪಾರವು ಕಾರಣವಾಯಿತು.

ಹಸ್ತಿ, ಅಶ್ವ, ರಥ, ಪದಾತಿಗಳೆಂಬ ಚತುರಂಗಬಲ ಯುದ್ಧವು ರೂಢಿಯಲ್ಲಿತ್ತು. ಯುದ್ಧದ ಧಾರ್ಮಿಕತೆಯನ್ನಂದು ಎಲ್ಲ ಭಾರತೀಯ ಅರಸರೂ ಪಾಲಿಸುತ್ತಿದ್ದರು. ಅಶ್ವಮೇಧ ಯಾಗದ ಕುದುರೆಯನ್ನು ವಿಜಯ ದಶಮಿಯಲ್ಲಿ ಬಿಟ್ಟಾಗ ಅದನ್ನು ಕಟ್ಟಿಹಾಕಿದ ಅರಸನು ಅದರ ಒಡೆಯನೊಡನೆ ಯುದ್ಧ ಮಾಡಬೇಕಾಗಿತ್ತು. ಕಟ್ಟಿಹಾಕದವನು ಅದರ ಹಿಂದೆ ಬಂದ ರಾಜಪ್ರತಿನಿಧಿಗೆ ಕಪ್ಪ–ಕಾಣಿಕೆಗಳನ್ನು ಒಪ್ಪಿಸಬೇಕಾಗಿತ್ತು. ಧರ್ಮವಿಜಯ, ಅರ್ಥವಿಜಯ, ಕಾಮವಿಜಯಗಳೆಂಬ ಮೂರು ಬಗೆಯ ವಿಜಯ ಯಾತ್ರೆಗಳಲ್ಲಿ ಮೊದಲೆರಡೇ ಹೆಚ್ಚು ರೂಢಿಯಲ್ಲಿದ್ದವು. ಮಯೂರಶರ್ಮ ಕೇವಲ ಧರ್ಮವಿಜಯಿಯಾಗಿದ್ದನು. ಅದರ ತತ್ತ್ವದಂತೆ ಇತರ ಅರಸನು ಧರ್ಮಯುದ್ಧದಲ್ಲಿ ಸೋತರೆ ಒಮ್ಮೆ ಕಪ್ಪ ಕಾಣಿಕೆಗಳನ್ನು ಕೊಟ್ಟರೆ ಆಗಿಹೋಯಿತು. ಅನಂತರ ವ್ಯಾವಹಾರಿಕವಾಗಿ ಅವನು ತನ್ನ ರಾಜ್ಯದಲ್ಲಿ ಸ್ವಾಯತ್ತ ಅಧಿಕಾರವನ್ನು ತನ್ನ ಹಿರಿಯರ ಪರಂಪರೆಯಂತೆ ನಡೆಸಿಕೊಂಡು ಹೋಗಬಹುದಾಗಿತ್ತು. ಅವನು ಯುದ್ಧದಲ್ಲಿ ಮಡಿದರೆ ಅವನ ವಾರಸುದಾರನು ಪಟ್ಟವನ್ನು ಏರಬಹುದಾಗಿತ್ತು. ಗೆದ್ದ ಚಕ್ರವರ್ತಿಯೇ ಅವನ ಪಟ್ಟಾಭಿಷೇಕವನ್ನು ಮಾಡುತ್ತಿದ್ದನು. ಈ ವಿಧದ ಸಾರ್ವಭೌಮತ್ವವು ಭಾರತಕ್ಕೆ ಮಾತ್ರ ಆ ಕಾಲದಲ್ಲಿ ವಿಶಿಷ್ಟವಾಗಿತ್ತು. ಧರ್ಮವಿಜಯಿಯಾದ ಸಮ್ರಾಜನು ತನಗೆ ಕಾಣಿಕೆಯಾಗಿ ಬಂದ ಐಶ್ವರ್ಯವೆಲ್ಲವನ್ನೂ "ಸರ್ವಜಿತ್"ಯಾಗ ಮಾಡಿ ವಿದ್ಯಾಪ್ರಸಾರಕರಾದ ವಿಪ್ರರಿಗೆ ದಾನಮಾಡುತ್ತಿದ್ದನೆಂಬ ಅಂಶವು ಕಾಳಿದಾಸನ ರಘುವಂಶದಿಂದ ತಿಳಿದು ಬರುತ್ತದೆ.

ಆಧ್ಯಾತ್ಮಿಕ ಬುನಾದಿ

ಡಾ॥ ರಾಧಾಕೃಷ್ಣರೀಗ ಮಾನವರ ಜೀವನದಲ್ಲಿ ಆಧ್ಯಾತ್ಮಿಕ ದೃಷ್ಟಿ ಕಡಿಮೆಯಾದುದು ಜಾಗತಿಕ ಅಶಾಂತಿಗೆ ಕಾರಣವೆಂಬ ಅಭಿಪ್ರಾಯವನ್ನು ಹೇಳಿದ್ದು ಮಯೂರಶರ್ಮನು ತನ್ನ ಆಸ್ಥಾನದಲ್ಲಿ ತತ್ತ್ವಚರ್ಚೆಗಳನ್ನು ನಡೆಯಿಸುತ್ತಿದ್ದುದನ್ನು ನೆನಪಿಗೆ ತಂದುಕೊಡುತ್ತದೆ. ಅದೇ ಪರಂಪರೆ ಬಹಳ ಶತಮಾನಗಳವರೆಗೆ ಕರ್ನಾಟಕದಲ್ಲಿ ರೂಢಿಯಲ್ಲಿತ್ತೆಂಬುದಕ್ಕೆ ರಾಮಾನುಜ, ಬಸವೇಶ್ವರ, ಮಧ್ವರ ಜನಪ್ರಿಯತೆಯೂ, ಹಾಗೇ ಶಿರಾಳಕೊಪ್ಪದ ಬಳ್ಳಿಗಾವಿಯಲ್ಲಿ ಹುಟ್ಟಿದ ಮತ್ತು ಬಸವೇಶ್ವರನ ಗುರುಗಳಾದ ಅಲ್ಲಮಪ್ರಭುವು ಬನವಾಸಿಯ ಮಧುಕೇಶ್ವರ ದೇವಸ್ಥಾನದಲ್ಲಿ ತನ್ನ ಆಧ್ಯಾತ್ಮಿಕ ತೇಜಸ್ಸನ್ನು ಮೆರೆಯಿಸಿದ ಕಥೆಯೂ ಗಮನಾರ್ಹವಾಗಿವೆ.

"ಮಮಕಾರ ರಾಜನ ಮಗಳಾದ ಮಾಯೆ ಮಧುಕೇಶ್ವರ ಗುಡಿಯ ಸುಂದರವಾದ ನೃತ್ಯಮಂಟಪದಲ್ಲಿ ಶಿವೋಹವೆಂಬ ಪರಮಾನುಭಾವವನ್ನು ಕೊನೆಯಲ್ಲಿ ಸಾಧಿಸಿದ ಸಾಧಕ, ಅಲ್ಲಮ ಪ್ರಭುವಿನೆದುರು ಕುಣಿದು, ಅವನಲ್ಲಿ ಸ್ತ್ರೀಭೋಗದ ಲಾಲಸೆಯನ್ನು ಹುಟ್ಟಿಸಲು ವಿಧವಿಧವಾಗಿ ಪ್ರಯತ್ನಿಸಿದಳು. ಆ ಮಾಯಾದೇವಿಯು ಕದಂಬ ದೊರೆಯೊಬ್ಬನ ಮಗಳೆಂದು" ಪುರಾಣದ ಹೇಳಿಕೆ. ಅಲ್ಲಮನ ಕಾಲ ೧೧೬೦. ಆಗ ಹಾನುಗಲ್ಲಿನಲ್ಲಿ ಬನವಾಸಿ ಮಂಡಲೇಶ್ವರ ಕೀರ್ತಿದೇವ ಕದಂಬರಾಯನು ಕಳಚುರ್ಯರ ಅಧೀನನಾಗಿ ಆಳುತ್ತಿದ್ದನು. ಅವನಿಗೆ ಮಾಯೆ ಎಂಬ ಮಗಳಿದ್ದಳೆಂಬುದಕ್ಕೆ ಐತಿಹಾಸಿಕ ಆಧಾರವಿಲ್ಲ; ಮಮಕಾರ ಎಂಬ ಹೆಸರಿನ ಕದಂಬರಾಜನೂ ಇತಿಹಾಸದಲ್ಲಿಲ್ಲ. ಆದರೆ ಪುರಾಣೋಕ್ತ ಐತಿಹ್ಯದ ಸಾರವಿಷ್ಟೆ: "ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯ ಲಂಪಿನಿಂಪುಗಳ್ಗಾಗರವಾದ" ರಾಜಧಾನಿಯಾದ ಬನವಾಸಿಯ ಮಹಿಮೆವೆತ್ತ ಮಧುಕೇಶ್ವರ ಗುಡಿಯಲ್ಲಿ ತಾಳಗುಂದದ ಸನಿಹದ ಬಳ್ಳಿಗಾವೆಯಲ್ಲಿ ಜನಿಸಿದ ಅಲ್ಲಮ ಹೋಗಿ ಧ್ಯಾನಸ್ಥನಾಗಿ ನೃತ್ಯಮಂಟಪದಲ್ಲಿ ಕುಳಿತಾಗ, ಯಾವಳೋ ದುಷ್ಟಳಾದ ದೇವದಾಸಿಯು ಅವನ ಧ್ಯಾನವನ್ನು ಭಂಗಿಸಿ, ಪರೀಕ್ಷಿಸಲು ಪ್ರಯತ್ನಿಸಿದಳು; ಅಥವಾ ಅಲ್ಲಮನ ಮೇಲೆ ಸಂಶಯ – ಅಸೂಯೆಗಳನ್ನುಳ್ಳವರು ಅವಳನ್ನು ಹಾಗೆ ಮಾಡಲು ಪ್ರೇರಿಸಿದರು. ಆಗ ಅಲ್ಲಮನ ಅಚಲತೆ, ಮತ್ತು ಅಂಥ ಜಿತೇಂದ್ರಿಯತ್ವದ ಶಕ್ತಿ ಅವನಿಗೆ ಬರಲು ಕಾರಣನಾದ ಮಧುಕೇಶ್ವರನ ಮಹಿಮೆ ಪ್ರಕಟವಾದವು.

ಮಾಯಾದೇವಿಯು ಆಗ ಸೋತು ಅಲ್ಲಿಂದ ಮಾಯವಾದಳು. ಕನ್ನಡ ನಾಡಿನಲ್ಲಿ ಜನಿಸಿದವರಲ್ಲಿ ಅದ್ವಿತೀಯ ಅದ್ವೈತ ವೇದಾಂತ ಕೇಸರಿಯಾದ ಅಲ್ಲಮಪ್ರಭುವು ಬಸವಣ್ಣ, ಸಿದ್ಧರಾಮ ಮುಂತಾದ ಶರಣರ ಗುರುವಾದದ್ದು ಸುಪ್ರಸಿದ್ಧ. ಪ್ರಭುವಿನ ನೆನಪು ಬನವಾಸಿಯಲ್ಲಿ ಈಗಲೂ ಉಳಿಯುವಂತೆ ಮಾಡಿರುವುದು ಆ ನೃತ್ಯಮಂಟಪ. ಮಾಯಾದೇವಿಯ ದೇವಸ್ಥಾನವು ಬಳ್ಳಿಗಾವೆಯಾಚೆಗಿನ ನಾಗರಖಂಡದಲ್ಲಿದೆ. ಆ ಮೂರ್ತಿಗೆ ಈಗಲೂ ನಿತ್ಯಪೂಜೆ ನಡೆಯುತ್ತಿದೆ. ಅದು ತನ್ನ ಉಗ್ರಸೌಂದರ್ಯದಿಂದ ಬಹಳ ಆಕರ್ಷಕವಾಗಿದೆ. ಪುರಾಣದ ಪ್ರಕಾರ ಮಾಯಾದೇವಿಯು ಪಾರ್ವತಿಯ ಸ್ವಭಾವಕ್ಕೆ ವಿರುದ್ಧ ಸ್ವಭಾವವನ್ನುಳ್ಳ ಶಿವಶಕ್ತಿ. ಅವಳು ಶಿವ (=ಪರಬ್ರಹ್ಮ) ಭಕ್ತನಾದ ಅಲ್ಲಮನ ಸತ್ವಪರೀಕ್ಷೆಗಾಗಿ ಭೂಲೋಕದಲ್ಲಿ ಕದಂಬಕುಲದಲ್ಲಿ ಜನಿಸಿದಳು. ಸತ್ವಪರೀಕ್ಷೆಯಲ್ಲಿ ಅಲ್ಲಮು ಗೆದ್ದುದರಿಂದ ಪರಮೇಶ್ವರ ಪಾರ್ವತಿಯರಿಗೆ ಪರಮಸಂತೋಷವಾಯಿತು. ಮಾಯಾದೇವಿಯ ಅವತಾರದ ಕಾರ್ಯ ಮುಗಿದುದರಿಂದ ಅವಳು ಶಿವಲೋಕಕ್ಕೆ ಮರಳಿದಳು. ಸೋಮದೇವನೆಂಬ ಕದಂಬಪಾಳೆಯಗಾರನು ೧೧೩೮–೧೧೭೭ರ ನಡುವೆ ನಾಗರಖಂಡ ಎಪ್ಪತ್ತನ್ನು ಆಳುತ್ತಿದ್ದನು. ಅವನಿಗಾದರೂ ಮಾಯಾದೇವಿ ಎಂಬ ಮಗಳಿದ್ದುದಕ್ಕೆ ಐತಿಹಾಸಿಕ ಆಧಾರವಿಲ್ಲ.


ಆಧ್ಯಾತ್ಮಿಕ ತಪಸ್ವಿಗಳನ್ನು ಆಕರ್ಷಿಸುತ್ತಿದ್ದ ಬನವಾಸಿಯ ಮಧುಕೇಶ್ವರ ದೇವರಿಗೆ ಆ ಹೆಸರು ಬರಲು ಪೌರಾಣಿಕ ಕಥೆಯೊಂದಿದೆ. ಮಧು–ಕೈಟಭರೆಂಬ ರಾಕ್ಷಸ ಸಹೋದರರು ಲೋಕಕಂಟಕರಾಗಿ, ಎಲ್ಲರಿಗೂ ಪೀಡೆ ಕೊಡುತ್ತಿದ್ದರು. ಅವರನ್ನು ಸಂಹರಿಸಲು ದೇವತೆಗಳು ವೈಕುಂಠಕ್ಕೆ ಹೋಗಿ ಮಹಾವಿಷ್ಣುವನ್ನು ಬೇಡಿಕೊಂಡರು. ಮಹಾವಿಷ್ಣುವು ಅವರೊಡನೆ ಅಹೋರಾತ್ರ ಹೋರಾಡಿದರೂ ಅವರು ಯುದ್ಧದಲ್ಲಿ ಸೋಲಲಿಲ್ಲ. ಆಗ ಅವನು ಅವರ ಪರಾಕ್ರಮವನ್ನು ಹೊಗಳಿ, "ನೀವು ಕೇಳಿದ ವರವನ್ನು ಕೊಡುತ್ತೇನೆ" ಎಂದನು. ಅದಕ್ಕೆ ಪ್ರತಿಯಾಗಿ ಅವರು "ನೀನು ಕೇಳಿದ ವರವನ್ನು ನಾವು ಕೊಡುತ್ತೇವೆ; ನಿನ್ನ ವರ ನಮಗೆ ಬೇಕಾಗಿಲ್ಲ" ಎಂದರು. ಕೂಡಲೇ ಮಹಾವಿಷ್ಣುವು ನಕ್ಕು, "ಲೋಕ ಕಲ್ಯಾಣಕ್ಕಾಗಿ ನಿಮ್ಮ ಪ್ರಾಣ ನನಗೆ ಬೇಕಾಗಿದೆ" ಎಂದ. ಆಗ ಇಬ್ಬರು ರಾಕ್ಷಸರೂ ಪೆಚ್ಚಾದರು! ಕೊಟ್ಟ ವಚನವನ್ನು ಮುರಿದರೆ ತಮ್ಮ ಪರಾಕ್ರಮಕ್ಕೆ ಕಲಂಕ ಬರುವುದು ಎಂದು ಹೆದರಿ, ಅಣ್ಣನಾದ ಮಧುವು "ಮಹಾವಿಷ್ಣುವೇ, ನಮ್ಮ ವಚನದಂತೆ ನಾವಿಬ್ಬರೂ ನಮ್ಮ ಪ್ರಾಣವನ್ನು ಅರ್ಪಿಸುವೆವು. ಶಂಕರನ ಭಕ್ತರಾದ ನಮ್ಮಿಬ್ಬರ ಹೆಸರು ಅಜರಾಮರವಾಗುವಂತೆ ನಮ್ಮಿಬ್ಬರ ಹೆಸರುಗಳಿಂದಲೂ ಒಂದೊಂದು ಶಿವಲಿಂಗವನ್ನು ಸ್ಥಾಪಿಸಿ, ಮಹಾದೇವ ಅವುಗಳಲ್ಲಿ ನೆಲೆಸುವಂತೆ ಅನುಗ್ರಹಿಸು" ಎಂದು ಪ್ರಾರ್ಥಿಸಿದರು. ಮಹಾವಿಷ್ಣು ಅದಕ್ಕೊಪ್ಪಿದನು; ಅವರು ಪ್ರಾಣಬಿಟ್ಟರು!

ಬನವಾಸಿಯು ಮಧುಕೈಟಭರು ಪ್ರಾಣಾರ್ಪಣ ಮಾಡಿದ ಸ್ಥಳ. ಮಧುವಿನ ಬಯಕೆಯ ಪ್ರಕಾರ ಮಹಾವಿಷ್ಣುವು ಮಧುವರ್ಣದ ಮಹಾಲಿಂಗವನ್ನು ಸ್ಥಾಪಿಸಿ,

ಶಂಕರನನ್ನು ಆವಾಹಿಸಿ, ಮಧುಕೇಶ್ವರನೆಂದು ಕರೆದನು. ಸಪರಿವಾರವಾಗಿ ಪರಮೇಶ್ವರನು ಬನವಾಸಿಗೆ ಬಂದನು. ಮಾಧವನೆಂಬ ಹೆಸರಿನಿಂದ ವಿಷ್ಣುವೂ ಅಲ್ಲೇ ನೆಲೆಸಿದನು. ಕೈಟಭನ ಹೆಸರಿನಿಂದ ಕೈಟಭೇಶ್ವರ ಲಿಂಗವನ್ನು ಮಹಾವಿಷ್ಣುವು ಕುಬಟೂರಿನಲ್ಲಿ (ಕೆಲವರ ಪ್ರಕಾರ ಆನವಟ್ಟಿಯಲ್ಲಿ) ಸ್ಥಾಪಿಸಿದನು. ಬನವಾಸಿ ಊರಿನಲ್ಲಿರುವ ಮಧುಕೇಶ್ವರ ಲಿಂಗವು ಜೇನುತುಪ್ಪದ ಬಣ್ಣವುಳ್ಳ ಕಲ್ಲಿನಿಂದ ಮಾಡಿದ್ದೆಂಬುದು ಈಗಲೂ ನೋಡಿದರೆ ಗೊತ್ತಾಗುತ್ತದೆ. ಬಹುಶಃ ಚುಟುಗಳ ಕಾಲದಲ್ಲೇ ಸ್ಥಾಪಿತವಾಗಿರಬಹುದಾದ ಈ ಲಿಂಗವು ಮಯೂರಶರ್ಮನಿಗೆ ಬನವಾಸಿಯು ರಾಜಧಾನಿಯಾದ ಮೇಲೆ ಅವನ ರಾಜ್ಯ ದೇವತೆಯಾಗಿ ಅನೇಕಸಲ, ಕಾಲಕ್ರಮೇಣ, ಜೀರ್ಣೋದ್ಧಾರವಾಗುತ್ತ ಬಂದ ಕಟ್ಟಡದಲ್ಲಿ ವಿರಾಜಿಸುತ್ತಿದೆ!


ಸಮಾಜ ಶಿಕ್ಷಣವು ಆಧ್ಯಾತ್ಮಿಕತೆಗೆ ಅಗ್ರಸ್ಥಾನವನ್ನು ಕೊಟ್ಟದ್ದಕ್ಕೆ ಕನ್ನಡನಾಡು ಅನಾದಿಯಿಂದ ೧೮೦೦ನೆಯ ಇಸವಿಯವರೆಗೆ ನಿದರ್ಶನವನ್ನು ಒದಗಿಸುತ್ತದೆ. ಜೀವನದ ಪರಮಮೌಲ್ಯದ ಗಡಿಗೆರೆಯೊಳಗೇ ಇತರ ಮೌಲ್ಯಗಳ ಕ್ರಮಿಕ ಪಟ್ಟಿ ಇರುವುದು ಮಾನಸಿಕ ಆರೋಗ್ಯಕ್ಕೆ ಅತ್ಯಗತ್ಯವೆಂಬುದನ್ನು ಮಯೂರಶರ್ಮನೂ, ಅವನ ಅನಂತರದ ಕದಂಬರೂ, ವಿಜಯನಗರದ ಚಕ್ರವರ್ತಿಗಳೂ, ಮೈಸೂರರಸರೂ ಅರಿತು ಸರ್ವಮತ ಧರ್ಮಗಳ ಸಮಾನತೆಯನ್ನು ಗಣಿಸಿ ಯೋಗ್ಯ ಪ್ರೋತ್ಸಾಹವನ್ನು ಕೊಡುತ್ತ ಬಂದುದು ಇತಿಹಾಸ ಪ್ರಸಿದ್ಧ.

ಬನವಾಸಿಯ ಕೋಟೆಯ ಅವಶೇಷದ ಹೊರಗೆ ಕ್ರಿ.ಪೂ.೨ನೆಯ ಶತಮಾನದ ಶಾಲಿವಾಹನ ನಗರವೊಂದು ಉತ್ಖನನಕ್ಕೊಳಗಾಗಿದೆ. ಬನವಾಸಿಯು ಕದಂಬ ಕುಲದ



ರಾಜಧಾನಿಯಾಗಿದ್ದುದು ಕ್ರಿ.ಶ. ೨೮೦ ರಿಂದ ೧೧೧೭ರ ವರೆಗೆ. ಕದಂಬ ಕುಲದ ಸಾಮಂತರ ಆಳಿಕೆ ಕ್ರಿ.ಶ. ೬೫೫ ರಿಂದ ೧೩೪೨ರ ವರೆಗೆ; ಆದರದು ಅವಿಚ್ಛಿನ್ನವಾಗಿ ಅಲ್ಲ. ೬೫೫ ರಿಂದ ೮೫೫ರ ವರೆಗೆ ವಿಚ್ಛೇದವಿದೆ. ಹಾನುಗಲ್ಲು ಕದಂಬರ ಆಳಿಕೆ ೯೬೭ ರಿಂದ ೧೩೪೭ರ ವರೆಗಾದರೆ ಗೋವೆಯ ಕದಂಬರ ಆಳಿಕೆ ೯೬೬ ರಿಂದ ೧೩೪೨ರ ವರೆಗೆ. ಕೊಡಗಿನ ಮೊದಲನೆಯ ರಾಜಮನೆತನದ ಆದ್ಯ ಮಹಾರಾಜನು ಚಂದ್ರವರ್ಮ– ಕದಂಬ, ಮಂಗಳೂರು ಅಂದು ಮಂಗಕದಂಬವೆನ್ನಿಸಿತ್ತು. ಕ್ರಿ.ಶ.೪೭೫ರಿಂದ ೫೪೭ರ ವರೆಗೆ ತ್ರಿಪರ್ವತ ಅಥವಾ ಹಳೆಯಬೀಡು ಕದಂಬರ ಉಪರಾಜಧಾನಿಯಾಗಿತ್ತು. ಕದಂಬರಾಳದಿದ್ದ ಜಾಗವೇ ಕರ್ನಾಟಕದಲಿಲ್ಲ ಎಂಬಷ್ಟು ಕಡೆಗಳಲ್ಲಿ ಕದಂಬ ಪೀಳಿಗೆಯ ಒಂದಲ್ಲ ಒಂದು ಮನೆತನವು ೧೩೪೭ರ ವರೆಗೆ ಮಹಾಮಂಡಲೇಶ್ವರ ಸ್ಥಾನದಿಂದಲಾದರೂ ರಾಜ್ಯಭಾರ ಮಾಡುತ್ತಿದ್ದುದರಿಂದ ಉತ್ತರ ಕರ್ನಾಟಕದಲ್ಲಿ ಕದಂಬವೆಂದರೆ ಕನ್ನಡ, ಕನ್ನಡವೆಂದರೆ ಕದಂಬ ಎಂಬಷ್ಟು ಸಾಂಸ್ಕೃತಿಕ ನೇತೃತ್ವ ಕದಂಬ ಕುಲಕ್ಕಿದೆ.

ಕಪಿ, ಸಿಂಹ, ವೃಷಭಗಳು ಕದಂಬರ ಲಾಂಛನಗಳು. ಬನವಾಸಿಯ ಮಧುಕೇಶ್ವರ ದೇವಸ್ಥಾನದ ಗರ್ಭ ಗುಡಿಯ (ಕಾಲ ಸುಮಾರು ೫ನೆಯ ಶತಮಾನ) ಮೇಲಿನ



ಶಿಖರದಲ್ಲಿರುವ ಅತ್ಯದ್ಭುತ ಚಿತ್ರಗಳ ಜೊತೆಗೆ ಈ ಲಾಂಛನಗಳು ಮೂರ್ತಿಮತ್ತಾಗಿವೆ. ಕದಂಬ ಸಾಮ್ರಾಜ್ಯ ದೈವತ ಮಧುಕೇಶ್ವರ. ಅಂತರಾಳದೆದುರಿನ ಮಹಾಮಂಟಪ ೫೨ ಕಂಬಗಳಿಂದ ಕೂಡಿದೆ. ಅದರ ಕಂಬ ಸುಮಾರು ೧೧–೧೨ನೆಯ ಶತಮಾನದ್ದು. ಮಧುಕೇಶ್ವರ ಲಿಂಗವು ಪೀಠ ಸಮೇತ ೬೪ ಅಂಗುಲಗಳಷ್ಟು ಎತ್ತರವಾಗಿದೆ. ಅದರದು ಜೇನುತುಪ್ಪದ ಬಣ್ಣ. ಗರ್ಭಗುಡಿಯ ಸುತ್ತಿನ ಪ್ರದಕ್ಷಿಣಾಪಥದಲ್ಲಿ ಮಯೂರ ವಾಹನನಾದ ಸ್ಕಂದವಿಗ್ರಹ ವಿಚ್ಛಿನ್ನವಾಗಿದೆ. ಅದು ಬಹುಶಃ ಮಯೂರಶರ್ಮನ ಮೊದಲನೆಯ ರಾಜಮುದ್ರೆಯ ಪ್ರತೀಕವಾಗಿರಬೇಕು. ಅನಂತರ ಸಿಂಹಮುದ್ರೆಯೇ ಪ್ರಸಿದ್ಧ. ಕದಂಬರ ಬಂಗಾರದ ನಾಣ್ಯಗಳು ಗದ್ಯಾಣಗಳು.

ವರದಾ ನದಿಯು ಬನವಾಸಿಯನ್ನೊಂದು ಪರ್ಯಾಯ ದ್ವೀಪವನ್ನಾಗಿ ಮಾಡಿದೆ. ಅದರ ಸುತ್ತುಮುತ್ತಲಿನ ಗಂಧಶಾಲಿ (ಪರಿಮಳ ಸಾಲಿ) ಬತ್ತದ ಗದ್ದೆಗಳು ಮಹಾಕವಿ



ಪಂಪ ವರ್ಣಿಸಿದಂತೆಯೇ ಇವೆ. ಸಹ್ಯಾದ್ರಿ, ಮಲಯ ಮುಂತಾದ ಪೂರ್ವಘಟ್ಟಗಳ ತಪ್ಪಲಿನ ಕಾಡುಗಳ ಎದುರಿನ ಬಯಲು ವನಾಸ್ಯ (ವನಮುಖ) ಅಥವಾ ವನವಾಸಿ. ಅಲ್ಲಿ ಈಗಲೂ ನವಿಲು–ಕೋಗಿಲೆಗಳು ಮನೆ ಮಾಡಿಕೊಂಡಿವೆ; ತೆಂಕಣಗಾಳಿ ಸುಖಕರವಾಗಿ ಋತುಮಾನಾನುಸಾರ ಬೀಸುತ್ತದೆ.

ಹಂಪೆಯ ಅವಶೇಷಗಳು ನೆಲದ ಮೇಲೆ ಇದ್ದರೆ, ಬನವಾಸಿಯ ಅವಶೇಷಗಳು ಹೆಚ್ಚಾಗಿ ಭೂಗತವಾಗಿವೆ.

ಧರ್ಮ ಪ್ರಸಾರ

ಮಯೂರಶರ್ಮನು ವೈದಿಕ ಧರ್ಮಪ್ರಸಾರಕ್ಕಾಗಿ ೬೮ ಬ್ರಾಹ್ಮಣ ಕುಟುಂಬಗಳನ್ನು ಉತ್ತರದಿಂದ ಕರೆಯಿಸಿದನೆಂಬುದು ಪರಂಪರಾಗತ ಐತಿಹ್ಯ. ಇದರಿಂದ ಮೊದಲು ಇಲ್ಲಿ ಬ್ರಾಹ್ಮಣರೇ ಇರಲಿಲ್ಲವೆಂಬ ಮತ್ತು ಇದ್ದರೂ ಅವರು ಅವೈದಿಕರಾಗಿದ್ದರೆಂಬ ಅಪತರ್ಕಗಳು ಹುಟ್ಟಲಾರವು. ತಾಳಗುಂದದ (ಸ್ಥಾನಕುಂದೂರಿನ) ಶಾಂತಿವರ್ಮ ಶಾಸನದ ಪ್ರಕಾರ ಮಯೂರ ಶರ್ಮನ ಮನೆತನವೇ ದೊಡ್ಡ ಶ್ರೋತ್ರಿಯ ಮನೆತನವಾಗಿತ್ತು. ಅವರ ದಾಯಾದರ ಕುಟುಂಬಗಳೂ ವೈದಿಕರಾಗಿರದೆ ಇದ್ದುದು ಸುಳ್ಳು. ಜೊತೆಗೆ ತಾಳಗುಂದದಲ್ಲಿ ಬ್ರಾಹ್ಮಣರ ಅಗ್ರಹಾರ ಪ್ರಾಚೀನ ಕಾಲದಿಂದಲೂ ಇತ್ತು. ಆದರೆ ಕಂಚಿಯಲ್ಲಿ ಓದಿ ಅಪ್ರತಿಮ ವಿದ್ವಾಂಸರೆನಿಸಿದ್ದ ಆಚಾರ್ಯ ಪ್ರಾಚಾರ್ಯರನ್ನು ಆಂಧ್ರ ಪ್ರದೇಶದಲ್ಲಿರುವ ಅಹಿಚ್ಛತ್ರ ಅಥವಾ ಅಹಿಕ್ಷೇತ್ರ ಮುಂತಾದ ಸ್ಥಳಗಳಿಂದ ಬನವಾಸಿಯ ಅಗ್ರಹಾರದಲ್ಲಿ ನಿಯೋಜಿಸಿಕೊಂಡಿರುವುದು ಸಂಭವವಾಗಿದೆ. ಅಂದು "ಸ್ವದೇಶೇ ಪೂಜ್ಯತೇ ರಾಜಾ ವಿದ್ವಾನ್ ಸರ್ವತ್ರ ಪೂಜ್ಯತೇ" ಎಂಬುದು ಅಖಿಲ ಭಾರತೀಯವಾಗಿತ್ತು. ಸಂಸ್ಕೃತವು ಅಂತಃ ಪ್ರಾದೇಶಿಕವೂ, ಸರಕಾರಿ ಭಾಷೆಯೂ, ಉಚ್ಚ ಶಿಕ್ಷಣ ಮಾಧ್ಯಮವೂ ಆಗಿದ್ದುದು ಸಂಸ್ಕೃತವು ಶಾಸನ ಭಾಷೆಯಾಗಿದ್ದುದರಿಂದ ಸ್ಪಷ್ಟವಾಗುತ್ತದೆ. ಅಶೋಕನ ಆಳ್ವಿಕೆ ಇದ್ದಷ್ಟು ಕಾಲ ಪಾಳಿಯು ಶಾಸನ ಭಾಷೆಯಾಗಿತ್ತು. ಶಾಲಿವಾಹನರ ಮತ್ತು ಪಲ್ಲವರ ಕಾಲದಲ್ಲಿ ಸಂಸ್ಕೃತ – ಪ್ರಾಕೃತಗಳೆರಡೂ ರಾಜ ಭಾಷೆಯಾಗಿದ್ದರೂ ಕದಂಬ ಕಾಕುತ್‌ಸ್ಥವರ್ಮನ ಕಾಲದಲ್ಲಿ ಸಂಸ್ಕೃತದ ಜೊತೆಗೆ ಕನ್ನಡವೂ ರಾಜಭಾಷೆಯ ಪಟ್ಟವನ್ನು ಪಡೆಯಿತು (೪೨೫–೪೫೦). ಆದುದರಿಂದ ಆದ್ಯಕದಂಬರು ಕನ್ನಡ ಪ್ರತಿಷ್ಠಾಪನಾಚಾರ್ಯರಾದದ್ದು ಮರೆಯಲಾಗದ ಸಂಗತಿ. ನರ್ಮದೆಯ ವರೆಗೆ ದೊರೆಗನ್ನಡವು ಸರಕಾರಿ ಹಾಗೂ ಸಾರ್ವಕಾರಿ ವ್ಯವಹಾರಗಳ ಭಾಷೆಯಾಗಿದ್ದುದರಿಂದ ಕ್ರಿ.ಶ.೧೦ನೆಯ ಶತಮಾನದಲ್ಲಿ ಉದಯಿಸಿದ ಮರಾಠಿಯಲ್ಲಿ ಕನ್ನಡ ಶಬ್ದಗಳು ಕಂಡು ಬರುವಂತಾದದ್ದು. ಋಗ್ವೇದ, ಯಜುರ್ವೇದ, ಪಾದಖಂಡಿಕ, ಸಾಮವೇದ, ಕಲ್ಪ, ವ್ಯಾಕರಣ, ಶಿಲ್ಪಶಾಸ್ತ್ರ, ನ್ಯಾಯಶಾಸ್ತ್ರ, ಪ್ರವರವೆಂಬ ಒಂದು ಅಗ್ನ್ಯುಪಾಸನೆಯ ಕ್ರಮ, ವೇದಾಂತ (ಅದ್ವೈತ)ಗಳನ್ನು ಅಗ್ರಹಾರ, ಬ್ರಹ್ಮಪುರಿ,

ಮಠ, ದೇವಾಲಯಗಳಲ್ಲಿ ವಿವಿಧ ಮಟ್ಟಗಳ ವಿದ್ಯಾರ್ಥಿಗಳು ಕಲಿಯುತ್ತಿದ್ದರು. ವೇದಪಠನವು ಬ್ರಾಹ್ಮಣ, ಕ್ಷತ್ರಿಯ, ವೈಶ್ಯವೃತ್ತಿಯವರಲ್ಲಿ ಪ್ರಸಿದ್ಧವಾಗಿತ್ತು.

ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಗಳೆಂಬ ಅಷ್ಟಾಂಗ ಯೋಗದ ಆಚಾರವುಳ್ಳ ಮಹಾಜನರು ಪ್ರಾಧ್ಯಾಪಕರು, ಆಚಾರ್ಯರು, ಪ್ರಾಚಾರ್ಯರು; ಅವರೇ ಅಗ್ರಹಾರಗಳ ಯಜಮಾನರು. ಅವುಗಳ ರಕ್ಷಣೆಗಾಗಿ ಸೈನ್ಯ ಕಟ್ಟಿ ಕೆಲವೊಮ್ಮೆ ಅವರು ಶತ್ರುಗಳೊಡನೆ ಹೋರಾಡಿ ಗೆದ್ದದ್ದೂ ಉಂಟು. ಯಾತ್ರಿಕರ, ವರ್ತಕರ, ಜಮೀನುದಾರರ, ರೈತರ ಹಾಗೂ ಇತರ ಕಸಬುದಾರರ ಮೇಲಿನ ಸುಂಕಗಳೂ ಉಂಬಳಿ, ದತ್ತಿ, ದಾನಾದಿಗಳ ಹೊರತಾದ ಇತರ ವ್ಯಾಪಾರ ಸಾಮಗ್ರಿಗಳ ಮೇಲಿನ ಕರಗಳೂ ಆದಾಯದ ಆಕರಗಳು. ಅದು ನಿಜವಾದ ಶಿಕ್ಷಣ ಸ್ವರಾಜ್ಯವಾಗಿತ್ತು. ಭೂಪತಿ ರಾಜ್ಯದಿಂದ ಭಿನ್ನವಾದ ಯತಿರಾಜ್ಯವಾಗಿತ್ತು. ೧೦,೦೦೦ ಶಿಷ್ಯರಿರುವ ಅಗ್ರಹಾರಕ್ಕೆ ಕಣ್ವರ್ಷಿ ಕುಲಪತಿಯಾಗಿದ್ದುದು ಇಂಥ ಸ್ವತಂತ್ರ ಶಿಕ್ಷಣ ಕೇಂದ್ರಗಳಿಗೆ ಮಾದರಿಯಾಗಿತ್ತು. ಸರಕಾರಿ ಪಠ್ಯಗಳ ಕಾಲ ಅದಾಗಿದ್ದಿಲ್ಲ. ನೈತಿಕ ಮೌಲ್ಯವೇ ಶಿಷ್ಯನ ವಿದ್ಯಾರ್ಹತೆಯ ಪ್ರಥಮ ಅಳೆಗೋಲಾಗಿತ್ತು. ಗುರುತ್ವಕ್ಕೂ ಹಲವಾರು ವಿಷಯಗಳಲ್ಲಿ ಹಾಗೇ. ಅದರಿಂದಲೇ ವೈದ್ಯ, ಗಣಿತ, ಜ್ಯೋತಿಷ್ಯ, ಶಿಲ್ಪ, ಕೃಷಿ, ಗೋರಕ್ಷೆ, ವಾಣಿಜ್ಯ, ಧರ್ಮ, ರಾಜ್ಯ, ತತ್ವಶಾಸ್ತ್ರಗಳ ಪಠನ–ಪಾಠನಗಳು ಸಾರ್ವಜನಿಕವಾಗಿದ್ದವು.

ಸಾಂಸ್ಕೃತಿಕ–ಉನ್ನತಿ

ಮಯೂರಶರ್ಮನು ತನ್ನ ಸಾಮ್ರಾಜ್ಯದಲ್ಲಿ ಸಾಂಸ್ಕೃತಿಕ ಉನ್ನತಿಗೆ ಬೇಕಾದ ಎಲ್ಲ ಸ್ವಾತಂತ್ರ್ಯವನ್ನೂ ಸೌಕರ್ಯವನ್ನೂ ಪ್ರಜೆಗಳಿಗೆ ಒದಗಿಸಲು ತನ್ನ ಸರಕಾರವನ್ನು ಸಿದ್ಧಗೊಳಿಸಿಬಿಟ್ಟಿದ್ದನು. ಚೈತ್ರೋತ್ಸವ ವಸಂತೋತ್ಸವಗಳು ಸಾಮ್ರಾಜ್ಯದ (ರಾಷ್ಟ್ರದ) ವಾರ್ಷಿಕೋತ್ಸವಗಳು. ಆಶ್ವಯುಜ ಕೃಷ್ಣಪಕ್ಷದ ಚತುರ್ದಶಿಯಿಂದ ಕಾರ್ತಿಕ ಶುಕ್ಲಪಕ್ಷದ ಪಾಡ್ಯದ ವರೆಗೆ ದೀಪಾವಳಿಯನ್ನು ಆಚರಿಸಲಾಗುತ್ತಿತ್ತು. ಗರಡಿಯ ಮನೆಗಳ ಶಾರೀರಿಕ ವ್ಯಾಯಾಮವು ಆಯುರ್ವೇದಿಯ ಚಿಕಿತ್ಸಾ ಪದ್ಧತಿಯಂತೆಯೇ ನೈತಿಕನೆಲೆಗಟ್ಟಿನ ಮೇಲೆ ಸಾರ್ವಜನಿಕವಾಗಿತ್ತು. ಸಾಮೂಹಿಕ ನೇತೃತ್ವದ ಬಿಗಿ ಇದ್ದುದರಿಂದ ರಾಜ್ಯದತ್ತ ಸಾರ್ವಜನಿಕ ಸೌಕರ್ಯಗಳ ದುರುಪಯೋಗ ಅಂದು ಅಸಾಧ್ಯವಾಗಿತ್ತು. ಇದರಿಂದ ರಾಜ್ಯಭಾರವು ಸುವ್ಯವಸ್ಥಿತವಾಗಿತ್ತು.

ಕರ್ನಾಟಕದ ಶಾಸ್ತ್ರ ಸಾಹಿತ್ಯ–ಸಂಗೀತ ಗೋಷ್ಠಿಗಳು ಮಯೂರಶರ್ಮನ ಕಾಲದಿಂದ ಪ್ರಬಲವಾಗುತ್ತ ನಡೆದವು. ಶಿಲ್ಪಕಲೆಗೆ ಹೊಸ ಜೀವಕಳೆ ಬಂದಿತು. ಶಾಲಿವಾಹನ ಶಿಲ್ಪಶೈಲಿಯ ಪರಿಷ್ಕರಣವು ಕದಂಬಯುಗದಲ್ಲಿ ನಡೆದು ಕದಂಬ ಶಿಲ್ಪಪ್ರಸ್ಥಾನ (ಉಪನಾಗರ ಪ್ರಸ್ಥಾನ) ಉದಯವಾಯಿತು. ಪಲ್ಲವ–ಔತ್ತರೇಯ ಶೈಲಿಗಳ




ಪ್ರಭಾವ ಕದಂಬಕಾಲದ ಶಿಲ್ಪದ ಮೇಲೆ ಪ್ರಬಲವಾಗಿ ಬೀಳಲಿಲ್ಲ. ಕದಂಬ ದೇವಾಲಯಗಳ ಶಿಖರವು ಔತ್ತರೇಯ ಮತ್ತು ಪಲ್ಲವ ಶೈಲಿಗಳಿಂದ ಅನೇಕ ಗೌಣ ಅಂಶಗಳನ್ನು ಅಳವಡಿಸಿಕೊಂಡಿದ್ದರೂ ತನ್ನ "ವಿಮಾನ"ದಲ್ಲಿ ಕದಂಬ ಅನನ್ಯತೆಯನ್ನು ಮೆರೆಯಿಸಿತು. ಶಿಖರವು ವಿಮಾನದ ಕೇಂದ್ರ ಭಾಗ; ವಿಮಾನವು ಗರ್ಭಗುಡಿಯ ಮೇಲ್ಛಾವಣಿಯನ್ನಾಧರಿಸಿ ರಚಿತವಾದ ಕಿರೀಟ ಪ್ರಾಯದ ಒಂದು ರಚನೆ. ಒಟ್ಟಿನಲ್ಲಿ ವಿಮಾನವನ್ನೇ ಶಿಖರವೆಂದು ಕಾಣಬಹುದು.

ಬನವಾಸಿಯ "ಮಧುಕೇಶ್ವರ ದೇವಸ್ಥಾನ"ದೆದುರು ನಿಂತಾಗ ಅದೊಂದು ದೊಡ್ಡ ಶಿಲ್ಪಸಂಗ್ರಹಾಲಯದಂತೆ ತೋರುತ್ತದೆ. ಅದರ ಗರ್ಭಗುಡಿಯ ಕಂಬಗಳು ಪಲ್ಲವ ಕಾಲೀನ ಶೈಲಿಯ ಹೊಳಹನ್ನು ತೋರಿಸುವುದರಿಂದ ಅದು ಕ್ರಿ.ಶ.೫ನೆಯ ಶತಮಾನಕ್ಕಿಂತ ಈಚಿನದಾಗಿರದು ಎಂಬುದ ತಜ್ಞರ ಮತ. ಅದರ ಅಂತರಾಳವೂ ಹಾಗೇ ಚಾಲುಕ್ಯಕಾಲೀನ ಶೈಲಿಯ ಹೊಳಹುಳ್ಳದ್ದಾಗಿದೆ. ಮಿಕ್ಕ ಭಾಗಗಳೆಲ್ಲವೂ ಪುನಾರಚಿತವಾಗಿರುವಂತೆ ಕಾಣುವುದರಿಂದ ೧೦–೧೨ನೆಯ ಶತಮಾನದವುಗಳೆಂದು ಅವನ್ನು ವರ್ಗೀಕರಿಸಲಾಗಿದೆ. ಆದರೆ ಅದರ ಶಿಖರವು ಪುನಾರಚಿತವಾಗಿರಬಹುದಾದರೂ ಅದು ತನ್ನ ಹಳೆಯ ಕದಂಬ ಮಾದರಿಯನ್ನು ಉಳಿಸಿಕೊಂಡಿದೆ. ಅದರಷ್ಟು ಚೆಂದವಾದ ಶಿಖರವು ಭಾರತದ ಬಹಳ ದೇವಸ್ಥಾನಗಳಿಗಿಲ್ಲ. ಮಯೂರಶರ್ಮ ಮತ್ತು ಅವನ ಮಕ್ಕಳು ಮೊಮ್ಮಕ್ಕಳ ಕಲಾಭಿರುಚಿಗೆ ಕದಂಬ ವಿಮಾನವು ಸಾಕ್ಷಿಯಾಗಿದೆ. ಅದರ ನಾಲ್ಕು ಮೈಗಳನ್ನೂ ನೋಡಿದರೆ ಅವುಗಳಲ್ಲಿ ಚಿತ್ರ–ವಿಚಿತ್ರವಾದ ದೊಡ್ಡ ಭಿತ್ತಿ ಚಿತ್ರಗಳು ಕಾಣಿಸುತ್ತವೆ:

ಆದಿಶೇಷ, ಗಣಪತಿ, ನಂದಿ, ಗರುಡ, ಸಿಂಹವಾಹಿನಿ, ಭೇರುಂಡ, ಸಿಂಹ, ಕಪಿಗಳು, ವಾಯು, ಭಕ್ತರು, ಕಾಲಿಯ ಮರ್ದನ, ಈಶ್ವರ, ಪಾರ್ವತಿ, ದೊಡ್ಡ ಕೊಕ್ಕಿನ ಹಕ್ಕಿ, ಕೃಷ್ಣ, ಗೊಂಬೆಗಳು, ನರಸಿಂಹ ಮುಂತಾದವು ಎದ್ದು ಕಾಣುತ್ತವೆ. ಅವುಗಳಲ್ಲಿ ಎರಡು ಸಿಂಹಗಳಿಗೆ ಒಂದೇ ಮುಖ ಇರುವುದು, ಎರಡು ಆನೆಗಳಿಗೂ ಹಾಗೇ, ಹಕ್ಕಿ–ವೃಷಭಗಳಲ್ಲೂ ಅದೇ ತರ ಇರುವುದು–ವಿಚಿತ್ರ! ಆದಿಶೇಷನಿಗೆ ಏಳು ಹೆಡೆಗಳು; ಗಂಡ ಭೇರುಂಡವು ಸಿಂಹಗಳ ಬಾಲವನ್ನು ಕಚ್ಚಿಕೊಂಡಿದೆ. ಶಿಖರಕ್ಕೆ ನಾಲ್ಕು ಮೈಗಳಲ್ಲೂ ಒಟ್ಟು ೬೦ ಮೆಟ್ಟಿಲುಗಳಿವೆ. ಶಿಖರದ ಎದುರುಭಾಗದಲ್ಲಿ ಸುಂದರವಾದ ಶುಕನಾಸ ಕಟ್ಟಡವಿದೆ.

ಗರ್ಭಗುಡಿಯ ಮುಂದಿರುವ ಅಂತರಾಳದ ಮುಂದೆ ೫೨ ಕಂಬಗಳ ಅತಿ ದೊಡ್ಡ ೧೬ ಮೂಲೆಯ ಹಜಾರವಿದೆ. ಎಲ್ಲವೂ ಶಿಲಾಮಯ. ಒಂದೊಂದು ಅಂಕಣದ ನಾಲ್ಕು ಕಂಬಗಳು ಒಂದೊಂದು ಮಾದರಿಯವು. ಹಜಾರದ ನಾಲ್ಕು ಭಾಗಗಳ ಹೆಸರುಗಳು ಹೀಗಿವೆ: ನಂದಿ (ಮುಖ) ಮಂಟಪ, ನೃತ್ಯ (ರಂಗ) ಮಂಟಪ, ಪುರಾಣ ಮಂಟಪ ಮತ್ತು ಘಂಟಾ ಮಂಟಪ; ಘಂಟಾ ಮಂಟಪವನ್ನು ದಾಟಿದರೆ ನಾವು ಹೊಗುವುದು ಅಂತರಾಳವನ್ನು, ಆಮೇಲೆ ಗರ್ಭಗುಡಿಯನ್ನು, ನೃತ್ಯಮಂಟಪವು ಮಂಟಪಗಳಲ್ಲೆಲ್ಲ ಅತ್ಯಂತ ಸುಂದರವಾದದ್ದು. ಗರ್ಭಗುಡಿಯೊಳಗೆ ಮಧುಕೇಶ್ವರ ಲಿಂಗವು ಅತಿ ಸುಂದರವಾಗಿ ತೋರಿದರೆ, ಅಂತರಾಳದಲ್ಲಿರುವ ಆದಿಮಾಧವ ವಿಗ್ರಹವೂ ಬಹಳ ಸೊಗಸಾಗಿದೆ. ಎಲ್ಲವೂ ಬೃಹದಾಕಾರಗಳೇ! ಆದರೂ ನಯ–ನಾಜೂಕಿನ ಮಾಟವಾದ ಅಂಗೋಪಾಂಗಗಳನ್ನುಳ್ಳವುಗಳು!





ಮಧುಕೇಶ್ವರನ ಗುಡಿಗೆ ತಾಗಿ ಆತನ ಎಡಕ್ಕೆ ಪಾರ್ವತಿ ಅಮ್ಮನವರ ಗುಡಿಯಿದೆ; ಬಲಕ್ಕೆ ಸದಾಶಿವ ವೀರಭದ್ರರ ಗುಡಿಗಳು ತಾಗಿಕೊಂಡಿವೆ. ಮಧುಕೇಶ್ವರನ ಗುಡಿಯ ಘಂಟಾ ಮಂಟಪದಲ್ಲಿ ತ್ರೈಲೋಕ್ಯ ಮಂಟಪವಿದೆ. ಅದರಲ್ಲಿ ಉಮಾಮಹೇಶ್ವರರು ಮಧ್ಯದಲ್ಲಿ ಕುಳಿತಿದ್ದಾರೆ. ಈ ನಾಲ್ಕು ರೀತಿಯ ಗುಡಿಗಳ ಸುತ್ತಲೂ ವಿವಿಧ ದೇವರುಗಳ ಹಾಗೂ ಅಷ್ಟ ದಿಕ್ಪಾಲಕರುಗಳ ಗುಡಿಗಳಿವೆ. ಅಂಥ ಪ್ರದರ್ಶನೀಯ ಶಿಲ್ಪ ಕೃತಿಗಳಲ್ಲಿ ಕಲ್ಲು ಮಂಚವು ಅತ್ಯಂತ ಸುಂದರವಾದುದು. ಮಧುಕೇಶ್ವರನ ಉತ್ಸವಮೂರ್ತಿಯ ಪೂಜೆ ಆ ಮಂಚದ ಮೇಲೆ. ಅದರ ನಯ, ನುಣುಪು, ನಾಜೂಕು, ಕುಸುರು ಕೆಲಸಗಳು ಹೊಯ್ಸಳ ಶಿಲ್ಪದ ಅಥವಾ ಹಾನುಗಲ್ ಕದಂಬ ಶಿಲ್ಪದ ಶೈಲಿಯನ್ನು ತೋರಿಸುತ್ತವೆ.

ಲಕ್ಷ್ಮೀನರಸಿಂಹ, ದುಂಡಿರಾಜ, ಬಸವಲಿಂಗೇಶ್ವರ, ಸೂರ್ಯನಾರಾಯಣ, ಪರಶುರಾಮ, ಐವೆಡೆಯ ಸರ್ಪ, ಪಾರ್ಶ್ವಗಣಪತಿ, ಚೆನ್ನಕೇಶವ, ನಾಗ ಮತ್ತು

ಸರಸ್ವತಿ, ಕಾರ್ತಿಕೇಯ (ಮಯೂರವಾಹನ), ಧ್ವಜಸ್ತಂಭ, ದೀಪಸ್ತಂಭ, ಶಾಸನದ ಕಲ್ಲು ಹಲಗೆಗಳು, ಹೆಬ್ಬಾಗಿಲಾನೆಗಳು ಮತ್ತು ಅಷ್ಟದಿಕ್ಪಾಲಕರು ಮಧುಕೇಶ್ವರ ಪಾರ್ವತೀ ಅಮ್ಮನವರುಗಳ ಸುತ್ತಲಿನ ಚಿಕ್ಕ ಗುಡಿಗಳಲ್ಲಿದ್ದಾರೆ.

ಮಧುಕೇಶ್ವರ ದೇವಾಲಯದ ವಿಗ್ರಹಸೈನ್ಯವಿರುವ ಕೋಟೆಯ ಹೊರಗೆ ಕದಂಬೇಶ್ವರ ದೇವಾಲಯ, ಶಿತಿ ಕಂಠೇಶ್ವರ ದೇವಾಲಯ, ತಿರುಮಲ ಅಥವಾ ಗೋಪಿನಾಥ ದೇವಾಲಯ, ವರದಾನದಿ, ಚಂದ್ರಪ್ರಭ ಬಸದಿ, ವೃಷಭ ತೀರ್ಥಂಕರ, ಆದಿಮಧುಕೇಶ್ವರ, ವಸಿಷ್ಠ ತೀರ್ಥ, ರುದ್ರಸ್ವಾಮಿಗಳ ಗದ್ದುಗೆ, ಮಾರುತಿ ದೇವಾಲಯ, ಪ್ರಭುಲಿಂಗ ದೇವಾಲಯ, ಕೋಟೆದಿಬ್ಬ, ಅಲ್ಲಮಪ್ರಭು ಲಿಂಗ ದೇವಾಲಯ, ಬಸವನ ಗುಡಿಗಳು ಬನವಾಸಿಯ ತುಂಬ ಹರಡಿಕೊಂಡಿವೆ.

ಮಧುಕೇಶ್ವರ–ಪಾರ್ವತಿಯರ ಗರ್ಭಗುಡಿ – ಶಿಖರಗಳ ಮಾದರಿಗಳನ್ನು ಬಿಟ್ಟರೆ ಉಳಿದ ಎಲ್ಲ ದೇವಾಲಯಗಳೂ, ವಿಗ್ರಹಗಳೂ ಮಯೂರಶರ್ಮನ ಕಾಲದ ಅನಂತರ ರಚಿತವಾದವುಗಳು – ಎಂದು ಧಾರಾಳವಾಗಿ ಹೇಳಬಹುದು. ಆದರೆ ಬನವಾಸಿಯ ದೇವಾಲಯಗಳೆಲ್ಲವುಗಳಲ್ಲೂ ಶಿಖರದ ಮಾದರಿಗಳು, ಕದಂಬ ವಿಮಾನವನ್ನು ಸ್ವಲ್ಪ ಹೆಚ್ಚು ಕಡಿಮೆ ಹೋಲುತ್ತಿರುವುದು ಆಶ್ಚರ್ಯಕರ. ಹೊಸದಾಗಿ ಕಟ್ಟಿಸಿದವರು ಬಹುಶಃ ಕದಂಬ ವಿಮಾನದ ಪ್ರಖ್ಯಾತಿಯ ದೆಸೆಯಿಂದ ಅದನ್ನು





ಒಂದಲ್ಲ ಒಂದು ವಿಧದಿಂದ ಹೋಲುವ ಶಿಖರವನ್ನೇ ಅಲ್ಲಿಯ ಗುಡಿಗಳಿಗೆ ಕಟ್ಟಿಸಿಕೊಟ್ಟಿರಬೇಕು. ಅವುಗಳ ಚೌಕೋನದ ಮೆಟ್ಟಿಲುಗಳನ್ನುಳ್ಳ ಶಿಖರಗಳ ಸಾಮ್ಯವು ಮರೆಯುವಂಥದಲ್ಲ.

ತಾಳಗುಂದದ ಪ್ರಣವೇಶ್ವರ ದೇವಸ್ಥಾನದಲ್ಲಿ ಕದಂಬಶಿಲ್ಪದ ಹೆಚ್ಚಿನ ಪರಿಷ್ಕಾರ ಕಂಡು ಬರುತ್ತದೆ. ಕಡಿಗಲ್ಲುಗಳ ಗಾತ್ರ ಕಡಿಮೆಯಾಗಿದೆ. ಕದಂಬ ಶಿಲ್ಪದ ಹಲಸಿಯ ಮಾದರಿಯ ಹೆಬ್ಬಂಡೆಗಳು ಇಲ್ಲಿಲ್ಲ. ಗೋಡೆಯ ಕಲ್ಲುಗಳನ್ನು ನಯವಾಗಿ ಕೆತ್ತಲಾಗಿದೆ. ಆದರೆ ಹೆಬ್ಬಂಡೆಗಳ ಮೇಲೆ ಹೇಗೆ ಕುಸುರುಗೆಲಸಗಳಿಲ್ಲವೋ ಇವುಗಳ ಮೇಲೂ ಇಲ್ಲ. ಕಂಬಗಳ ಉರುಟಾದ ಅಥವಾ ಚಚ್ಚೌಕವಾದ ಅಡಿಗಲ್ಲುಗಳು. ಅವುಗಳ ಮೇಲೆ ಕೆಲಮಟ್ಟಿಗೆ ಜ್ಯಾಮಿತೀಯ ಅಲಂಕಾರದ ಓರಣವಿದೆ. ಬುಡದಲ್ಲಿ ದ್ವಾರಪಾಲಕರ ಮೂರ್ತಿಗಳನ್ನು ಕೆತ್ತಿ ಮೂಡಿಸಲಾಗಿದೆ. ಇಂದ್ರ, ಅಗ್ನಿ, ಯಮ, ನಿಋತಿ, ವರುಣ, ವಾಯು, ಕುಬೇರ, ಈಶಾನರು ಅಷ್ಟದಿಕ್ಪಾಲಕರು. ಈ ಕಂಬಗಳಿಗೆ ಅಡಿಗಲ್ಲುಗಳಾಗಲಿ, ಪೋತಿಕೆಂಯಾಗಲಿ, ಫಲಕವಾಗಲಿ ಇಲ್ಲ. ಕಂಬಗಳ ಮೇರುದಂಡವು ಬೋಳ್ದುದಿಯನ್ನವಲಂಬಿಸಿದೆ. ಗರ್ಭಗೃಹಕ್ಕೆ ಕಿಟಕಿಗಳಿಲ್ಲ; ಒಂದೇ ಒಂದು ಬಾಗಿಲಿದೆ. ಬಾಗಿಲುಗಳ ಮೇಲು ಹೊಸ್ತಿಲುಗಳು ಆಮೇಲಿನ ಕದಂಬ ಭವನಗಳಲ್ಲಿ ಕಂಡು ಬರುವ ವಿಶಿಷ್ಟ ಕುಸುಮಾಕೃತಿಗಳಿಂದ ಶೋಭಿಸುತ್ತವೆ. ಮೇಲು ಹೊಸ್ತಿಲ ನಡುವೆ ಸಮರ್ಪಣ ಶಿಲೆಯ ಮೇಲೆ ಗಣಪತಿ ವಿಗ್ರಹವನ್ನು ಕಡಿದು ಮೂಡಿಸಲಾಗಿದೆ. ಆದುದರಿಂದ ಮೂಲತಃ ಅಲ್ಲಿಯ ಶಿವಲಿಂಗ ಶಾಲಿವಾಹನರ ಕಾಲದಿಂದ ಇದ್ದಿತೆಂದು ಹೇಳಬಹುದು. ತಾಳಗುಂದಕ್ಕೆ ಸ್ಥಾನ ಕುಂದೂರು ಎಂಬುದಲ್ಲದೆ, ಸ್ಥಾನಗೂಢಪುರ ಎಂಬುದೂ ಶಾಸನಗಳಲ್ಲಿರುವ ಒಂದು ಪರ್ಯಾಯ ಪದ.

ಪಂಪ ಪ್ರಶಂಸೆ

ಮಯೂರಶರ್ಮನಿಂದ ಹಿಡಿದು ಮಧುವರ್ಮ ಕದಂಬನ ವರೆಗಿನ (೨೮೦–೬೫೫) ದೊರೆಗಳಿಗೆ ಬನವಾಸಿಯು ರಾಜಧಾನಿಯಾಗಿತ್ತು. ಅನಂತರ ಕದಂಬರಲ್ಲಿ ಚಕ್ರವರ್ತಿಗಳ ಪರಂಪರೆ ಉದಯವಾಗಲಿಲ್ಲ. ಅವರ ಸಾಮಂತಿಕೆ ಕರ್ನಾಟಕದ ವಿವಿಧ ಭಾಗಗಳಲ್ಲಿ ನಡೆಯಿತು. ಅವರಲ್ಲಿ ಗೋವೆ–ಹಾನುಗಲ್ಲುಗಳಿಂದ ಆಳಿದ (೯೬೬–೧೩೪೭) ಸಾಮಂತ ಕದಂಬರು ಪ್ರಸಿದ್ಧರು. ಹಾನುಗಲ್ಲಿನ ಕೀರ್ತಿವರ್ಮ ಕದಂಬ ಮಹಾಮಂಡಕೇಶ್ವರನು ೧೦೭೫ ರಿಂದ ೧೧೧೭ರ ವರೆಗೆ ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದದ್ದು ಕೊನೆ. ಆಮೇಲೆ ಅದು ಕದಂಬರ ರಾಜಧಾನಿ ಅಥವಾ ಉಪರಾಜಧಾನಿಯಾಗಲಿಲ್ಲ. ಈ ಕದಂಬರ ಆಳಿಕೆಗೆ ಗೋವೆ, ಬೆಳಗಾವಿ, ಧಾರವಾಡ, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಸೇರಿದ್ದವು.

ನಮ್ಮ ದೇಶದ ಅತ್ಯಂತ ಶ್ರೇಷ್ಠ ಪುರುಷರ ಉನ್ನತ ಆದರ್ಶದಲ್ಲಿ ದೃಢ ಶ್ರದ್ಧೆಯನ್ನಿಟ್ಟು ಮುಂಬರಿದರೆ ಎಂಥ ಅಪೂರ್ವ ಸತ್ಫಲ ದೊರಕುತ್ತದೆ ಎಂಬುದಕ್ಕೆ ಕದಂಬ ಮಯೂರಶರ್ಮನ ಉನ್ನತ ಆದರ್ಶದಲ್ಲಿ ಅಚಲವಾದ ನಂಬಿಗೆಯನ್ನಿಟ್ಟು ಬಾಳಿದ ಅವನ ವಂಶಜರ ಕನ್ನಡನಾಡ ಸಂರಕ್ಷಣೆ, ಅಭಿವೃದ್ಧಿಗಳು ಪ್ರಮಾಣವಾಗಿವೆ. ಕ್ರಿ.ಶ.೨೮೦ ರಿಂದ ೧೩೪೭ರ ವರೆಗೆ ಅವನ ಸಂತಾನದವರು ದಕ್ಷಿಣ ಭಾರತದ ವಿವಿಧ ಭಾಗಗಳಲ್ಲಿ ಆಳುತ್ತಿದ್ದುದು "ಪುಣ್ಯ"ವೆಂಬ ಹಳೆಯ ಶಬ್ದದ ಸ್ಪಷ್ಟವಾದ ಅರ್ಥವನ್ನು ಸೂಚಿಸುತ್ತದೆ. ಕಳಿಂಗದಲ್ಲಿಯೂ ಕದಂಬ ದೊರೆಗಳಿದ್ದರು (೧೦೫೧) ಎಂಬುದನ್ನು ಕೇಳಿದರೆ ಯಾರು ತಾನೇ ಆಶ್ಚರ್ಯಪಡಲಿಕ್ಕಿಲ್ಲ? ವೈನಾಡು, ಕೊಡಗು. ಹಳೇಬೀಡು, ಬೇಲೂರು, ಉಚ್ಚಂಗಿ, ಮೈಸೂರು, ರಾಯಚೂರು, ನೂರುಂಬಾಡ ಮುಂತಾದೆಡೆಗಳಲ್ಲೆಲ್ಲ ಕದಂಬ ಸಾಮಂತರ ಬಹುಕಾಲ ಆಳುತ್ತಿದ್ದುದು "ಯತೋ ಧರ್ಮ ಸ್ತತೋ ಜಯಃ" ಎಂಬ ಸೂಕ್ತಿಗೆ ದೃಷ್ಟಾಂತವಾಗಿದೆ.

ಮಯೂರಶರ್ಮನ ಸ್ವಾಭಿಮಾನ–ಸ್ವಾತಂತ್ರ್ಯ ಪ್ರಿಯತೆಗಳಿಗೆ ಪ್ರಜಾಹಿತವು ಗುರಿಯಾಗಿದ್ದುದನ್ನು ಅವನ ಪೀಳಿಗೆಯವರು ಮರೆಯದಿದ್ದುದು ಅವರ ಯಶಸ್ಸಿಗೆ ಕಾರಣ. ಸ್ವರಾಜ್ಯವು ಸುರಾಜ್ಯಕ್ಕೆ ಮಾತ್ರ ಸಾಧನವಾಗುವುದು ಉನ್ನತಧ್ಯೇಯ. ಕದಂಬರಲ್ಲಿ ಗಣ್ಯ ಚಕ್ರವರ್ತಿಗಳ ಕಾಲ ಮುಗಿದುಹೋದ ಮೇಲೂ ೧೦ನೆಯ ಶತಮಾನದಲ್ಲಿ

ಪಂಪನು ಬನವಾಸಿ ಪನ್ನೀರ್ಛಾಸಿರ (೧೨೦೦೦) ಎಂಬ ನಾಡಿನ ನೈಸರ್ಗಿಕ–ಸಾಂಸ್ಕೃತಿಕ ಸಂಪತ್ತುಗಳನ್ನು ಬಾಯಿತುಂಬ ಹೊಗಳಿರುವುದು ಕ್ರಮಬದ್ಧ ಆಡಳಿತ ಮೊದಲಿಂದ ಇದ್ದರೆ ಏನಾಗುತ್ತದೆ ಎಂಬುದನ್ನು ನಿದರ್ಶಿಸುತ್ತದೆ:

"ಸೊಗಯಿಸಿ ಬಂದ ಮಾಮರನೆ ತಳ್ತೆಲೆವಳ್ಳಿಯೆ
ಪೂತ ಜಾತಿ ಸಂ
ಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ
ತುಂಬಿಯೆ ನಲ್ಲರೊಳ್ಮೆಗಂ
ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರ
ನೋಳ್ಪೊಡಾವ ಬೆ–
ಟ್ಟುಗಳೊಳಮಾವ ನಂದನವನಂಗಳೊಳಂ
ವನವಾಸಿದೇಶದೊಳ್
ಚಾಗದ ಭೋಗದಕ್ಕರದ ಗೇಯದ
ಗೊಟ್ಟಿಯಲಂಪಿನಿಂಪುಗ–
ಳ್ಗಾಗರಮಾದ ಮಾನಿಸರೆ ಮಾನಿಸ–
ರಂತವರಾಗಿ ಪುಟ್ಟಲೇ–
ನಾಗಿಯು ಮೇನೋ ತೀರ್ದಪುದೊ ತೀರದೊಡಂ
ಮರಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್
ವನವಾಸಿ ದೇಶದೊಳ್
ತೆಂಕಣ ಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡ
ಮಿಂಪನಾಳ್ದ ಗೇ–
ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡ–
ಮಾದ ಕೆಂದಲಂ–
ಪಂ ಕೆಡೆಗೊಂಡೊಡಂ ಮಧುಮಹೋತ್ಸವ ಮಾದೊಡ–
ಮೇನನೆಂಬೆನಾ–
ರಂಕುಶಮಿಟ್ಟೊಡಂ ನೆನೆವುದೆನ್ನ ಮನಂ
ವನವಾಸಿ ದೇಶಮಂ
ಅಮರ್ದಂ ಮುಕ್ಕುಳಿಪಂತುಟಪ್ಪ ಸುಸಿಲೊಂ
ದಿಂಪುಂ ತಗುಳ್ದೊಂದು ಗೇ
ಯಮುಮಾದಕ್ಕರಗೊಟ್ಟಿಯುಂ ಚದುರರೊಳ್ವಾತುಂ
ಕುಳಿರ್ ಕೋಳ್ಪ ಜೊಂ–
ಪಮುಮೇವೇಳ್ವುದನುಳ್ಳ ಮೈಸುಖಮುಮಿಂ

ತೆನ್ನಂ ಕರಂ ನೋಡಿ ನಾ–
ಡೆ ಮನಂಗೊಂಡಿರೆ ತೆಂಕನಾಡ ಮರೆಯ–
ಲ್ಕಿನ್ನೇಂ ಮನಂ ಬರ್ಕುಮೇ?"

ಅಂದರೆ

ಸೊಗಸಾಗಿ ಕಾಯಿಬಿಟ್ಟ ಮಾವಿನ ಮರ; ಒತ್ತೊತ್ತಾಗಿ ಎಲೆಬಿಟ್ಟ ವೀಳೆಯದೆಲೆಯ ಬಳ್ಳಿ; ಹೂಬಿಟ್ಟ ಜಾಜಿ, ಸಂಪಿಗೆ; ಕುಹೂ ಎಂದು ದನಿದೆಗೆವ ಕೋಗಿಲೆ, ಹಾಡುವ ತುಂಬಿ, ಹೊಸದಾಗಿ ಮದುವೆಯಾದ ತರುಣರ ಪ್ರಸನ್ನವಾದ ಮುಖ; ನಗೆಮೊಗದಿಂದ ಜೊತೆ ಜೊತೆಗೇ ತಿರುಗುವ ಮದುಮಕ್ಕಳು (ದಂಪತಿಗಳು) ಬನವಾಸಿ ನಾಡಿನಲ್ಲಿ ಯಾವ ಹಕ್ಕಲಿನಲ್ಲಿ ಅಥವಾ ಹಾದಿಯಲ್ಲಿ ನೋಡಿದರೂ ಕಣ್ಣಿಗೆ ಬೀಳುತ್ತಾರೆ.

ತ್ಯಾಗದ, ಭೋಗದ, ಅಕ್ಷರಗೋಷ್ಠಿಗಳ (ಸಾಹಿತ್ಯ ಸಂಘಗಳ), ಸಂಗೀತ ಸಭೆಗಳ ಸಂತೋಷದ ಮಾಧುರ್ಯಕ್ಕೆ ನೆಲೆಮನೆಯಾದ ಮನುಷ್ಯರೇ ನಿಜವಾದ ಮನುಷ್ಯರು. ಅಂಥ ಮನುಷ್ಯರಾಗಿ ಬನವಾಸಿ ನಾಡಿನಲ್ಲಿ ಹುಟ್ಟಲು ಎಷ್ಟು ಪುಣ್ಯಮಾಡಬೇಕೋ ತಿಳಿಯದು. ಒಮ್ಮೆ ನನಗೆ ಅಷ್ಟು ಪುಣ್ಯವನ್ನು ಮಾಡಿ ಅಲ್ಲಿ ಮನುಷ್ಯನಾಗಿ ಹುಟ್ಟಲು ಸಾಧ್ಯವಾಗದಿದ್ದರೆ, ನಾನು ಅಲ್ಲಿಯ ಸುಂದರವಾದ ಕೈದೋಟಗಳಲ್ಲಿ ಜೇನಿನ ಮರಿಯಾಗಿಯೋ ಕೋಗಿಲೆಯ ಮರಿಯಾಗಿಯೋ ಹುಟ್ಟಿಯೇ ಹುಟ್ಟುವೆನು!

ದಕ್ಷಿಣದ ಮಲಯ ಮಾರುತವು ನನ್ನ ಮೈಗೆ ತಾಗಿದಾಗ, ಒಳ್ಳೆಯ ಮಾತನ್ನು ಕೇಳಿದಾಗ, ಇಂಪಾದ ಹಾಡು ಕಿವಿಯಲ್ಲಿ ಹೊಕ್ಕಾಗ, ಅರಳಿದ ಮಲ್ಲಿಗೆ ಕಾಣಿಸಿದಾಗ, ಮದುವೆಯಾದ ಅನುರಾಗವಂತರ ಜೋಡಿಯನ್ನು ಕಂಡಾಗ, ವಸಂತೋತ್ಸವದ ಆಚರಣೆ ನಡೆದಾಗ–ನಾನೇನ ಹೇಳಲಿ! ಆನೆಗೆ ಅಂಕುಶದಿಂದ ತಡೆಯನ್ನು ಹಾಕಿದ ಹಾಗೆ ನನಗೆ ತಡೆಹಾಕಿದರೂ ಕೇಳದೆ ನನ್ನ ಮನಸ್ಸು ಬನವಾಸಿ ನಾಡನ್ನು ನೆನೆಯುವುದು!

ಅಮೃತವನ್ನು ಬಾಯಲ್ಲಿ ಹಾಕಿಕೊಂಡು ಮುಕ್ಕಳಿಸುವಷ್ಟು ಸುಖವೆನ್ನಿಸುವ ಗೃಹಸ್ಥ (ದಾಂಪತ್ಯ) ಜೀವನ ಸುಖ ಒಂದೆಡೆ, ಇಂಪಾಗಿ ಕಿವಿಯನ್ನು ತಣಿಸುವ ಕಾವ್ಯ ವಾಚನ (ಗಮಕ) ಕಚೇರಿ ಒಂದೆಡೆ, ಸಂವಾದ ಚತುರರ ಚಮತ್ಕಾರ ಮತ್ತೊಂದು ಕಡೆ, ತಣ್ಣನೆಯ ಚಪ್ಪರ ಇನ್ನೊಂದೆಡೆ ಏನು ಹೇಳಲಿ! ಹೀಗೆ ಒಂದಕ್ಕಿಂತ ಮತ್ತೊಂದು ಹೆಚ್ಚು ಸುಖಕರ ಎನ್ನಿಸಿದ ವಸ್ತುಗಳನ್ನುಳ್ಳ (ದಕ್ಷಿಣದಲ್ಲಿರುವ) ಬನವಾಸಿ ನಾಡನ್ನು ಇನ್ನೆಂದಾದರೂ ಮರೆಯಲು ಮನಸ್ಸು ಬಂದೀತೇ?

ಪಂಪನು ಗೃಹಸ್ಥ ಜೀವನವನ್ನು ಬನವಾಸಿ ನಾಡಿನಲ್ಲಿ ನಡೆಯಿಸಿದ್ದಿಲ್ಲಿ ಸೂಚಿತವಾಗಿದೆ. ಇಲ್ಲೇ ಹುಟ್ಟಿದ್ದರೂ ಈ ನಾಡಿನ ಹೊರಗೆ ಹೋಗಿ ರಾಜಾಶ್ರಯ ಪಡೆದು ಉಳಿದ ಕವಿ ಮಾತ್ರ ಹೀಗೆ ಉದ್ಗರಿಸುವುದು ಸ್ವಾಭಾವಿಕ. ಅವನಿಗೆ ಅರಿಕೇಸರಿ

ರಾಜನು ಗ್ರಾಮದಾನವನ್ನು ಅಂತ್ಯದಶೆಯಲ್ಲಿ ಆಂಧ್ರಪ್ರದೇಶದಲ್ಲಿ ಮಾಡಿರಬಹುದು. ಅವನ ತಂದೆ ಅಲ್ಲಿಯವನೇ ಆಗಿದ್ದರೂ ಸರಿಯೆ, ಅವನು ಅರಿಕೇಸರಿಯ ಆಸ್ಥಾನದ ಕವಿಯಾದ ಮೇಲೆ ಅಲ್ಲಿಯೇ ಅಣ್ಣತಮ್ಮಂದಿರೊಡನೆ ಬದುಕಿರಲೂಬಹುದು. ಜೈನತತ್ವಜ್ಞಾನವನ್ನು ಮೆಚ್ಚಿಕೊಂಡ ಆ ವಿಪ್ರಕವಿ ಯಾವ ಶಿಲಾಶಾಸನದಿಂದಲೂ ಬನವಾಸಿ ನಾಡಿನವನಲ್ಲವೆಂದಾಗಲಾರನು. ಆತ ಬನವಾಸಿ ನಾಡಿನವನು–ಇಲ್ಲೇ ಹುಟ್ಟಿರಲಿ ಅಥವಾ ಒಂದು ವೇಳೆ ಇಲ್ಲಿಗೆ ಚಿಕ್ಕಂದಿನಲ್ಲೇ ವಲಸೆ ಬಂದು ನೆಲೆಸಿರಲಿ– ಪ್ರಜಾಪ್ರಭುತ್ವದ ಇಂದಿನ ಮಾತಿನಲ್ಲಿ ಆತನು ಬನವಾಸಿ ಘಟಕದ ಪ್ರತಿನಿಧಿ!

ಇಷ್ಟೇಕೆ, ಕನ್ನಡದ ಕವಿಬ್ರಹ್ಮ ಈ ನಾಡನ್ನು, ಕನ್ನಡ ನಾಡಿನ ಸಂಸ್ಕೃತಿಯ ತೂಗುದೊಟ್ಟಿಲಾದ ಮಲೆನಾಡು ಕರಾವಳಿಯನ್ನು, ಹೊಗಳಿದನೆಂಬುದಕ್ಕೆ ಮಯೂರಶರ್ಮನ ಮತ್ತು ಅವನ ಸಂತಾನದವರ ಸ್ವರಾಜ್ಯ ಸಂಪಾದನೆ (ಜೀಯನೆ ಬೇಡಿಕೊಳ್ಳದೆ ಎಂದು ಅವನೊಂದೆಡೆ ಹೇಳಿರುವಂತೆ) ಮತ್ತು ಸುರಾಜ್ಯಭಾರಗಳೇ ಮೂಲ ಕಾರಣಗಳೆಂಬುದು ಬುದ್ಧಿವಂತರಿಗೆ ಗೊತ್ತಾಗದಿರದು.

ಮಯೂರ ಧ್ವನಿ

ಸ್ವಾಭಿಮಾನವಿಲ್ಲದವಗೆ
ಮಾನವತ್ವವಿಲ್ಲ;
ದುರಭಿಮಾನ ಭಾವನೆ ತಾ
ಸಂಸ್ಕೃತಿಯೇ ಅಲ್ಲ!

ತರಬೇತನು ಪಡೆಯುವವಗೆ
ಯಾವ ವಿದ್ಯೆ ಕಷ್ಟ?
ಮರಳಿ ಮಾಡದಿರುವವನಿಗೆ
ಕಲಿತುದೆಲ್ಲ ನಷ್ಟ!

ಸ್ವಾತಂತ್ರ್ಯತೆ ಸಾಹಸಿಕತೆ
ಸಂಘಟನೆಗಳಾಜ್ಯ;
ಅವು ತೀರಿದವೆಂದಾದರೆ
ಪಾರತಂತ್ರ್ಯ ಭೋಜ್ಯ!

ಅನುಯಾಯಿಗಳಾರಾಧನೆ
ಮುಖಂಡತೆಯ ನೆಲೆ;
ಪ್ರಜಾಹಿತವ ಕಡೆಗಣಿಸುವ
ರಾಜ್ಯಭಾರ ಕೊಲೆ!

ತಕ್ಕವರನು ತಕ್ಕದ್ದಕೆ
ನಿಯಮಿಸುವುದು ಜಾಣ್ಮೆ;
ಚಿರಕಾಲಿಕ ಸಂಸ್ಥೆಗಳಿಗೆ
ಅದರಿಂದಲೆ ಮೇಲ್ಮೆ!

ಆದರ್ಶದ ಹಿರಿಮೆಯನ್ನು
ನಂಬಿ ನಡೆದ ಹಿರಿಯ;
ಅವನ ನಂಬಿ ನಡೆಯುವಾತ
ವಯದೊಳಷ್ಟೆ ಕಿರಿಯ!

ನ್ಯಾಯಕಿಂತ ದೊಡ್ಡ ಧರ್ಮ
ಲೋಕದಲ್ಲಿ ಇಲ್ಲ;
ಅದನ್ನರಿತ ಹಿರಿಯನೆ ಗುರು–
ದಂಭವೀರನಲ್ಲ!

ಉದಾರಿಯೇ ಮಹಾವೀರ
ನ್ಯಾಯ ಪೂಜೆ ಗೈವ
ಮಾನವೀಯ ಭಾವಾಧೃತ
ನ್ಯಾಯವೊಂದೆ ದೈವ!

ಮಯೂರ ಧರ್ಮಾಭಿರಾಮ
ಮಹಾನ್ಯಾಯ ವೀರ
ಕನ್ನಡಿಗರ ಕಣ್ಣೆನ್ನಿಸಿ–
ದಾದ್ಯ ಸುನೇತಾರ!

ಭೂಮಿಗಿಳಿದ ಕಾರ್ತಿಕೇಯ
ಮಹಾ ಕುಲಪಿತಾಮಹ
ಅವನನೆಂಬುದಮರಾರ್ಣವ
ಪಲ್ಲವರಿಗೆ ಬಲ್ಲಹ!

ಕನ್ನಡ ಪ್ರಥಮ ಸಾರ್ವಭೌಮ
ಮಯೂರ ಶರ್ಮ

(ಚಾರಿತ್ರಿಕ ನಾಟಕ)

'ಮಯೂರ ಶರ್ಮ' ನಾಟಕದ ಕುರಿತು.....

ರಾಜಶೇಖರ ಹೆಬ್ಬಾರ

ಮಯೂರ ಶರ್ಮ ಬಿ.ಎಚ್.ಶ್ರೀಧರರು ಬರೆದ ಪ್ರಕಟಿತ ಐತಿಹಾಸಿಕ ನಾಟಕ. ಇದನ್ನು ಪ್ರೌಢಶಾಲಾ ವಿದ್ಯಾರ್ಥಿಗಳು ಅಭಿನಯಿಸಿದ್ದು ಆಕಾಶವಾಣಿ ಧಾರವಾಡದಲ್ಲಿ ಪುನಃ ಅಭಿನಯಿಸಿಲ್ಪಟ್ಟು ಬಿತ್ತರವಾಗಿತ್ತು. ಇದೊಂದು ಜನಪ್ರಿಯ ನಾಟಕ. ಶ್ರೀಧರರು ಕವಿಗಳು. ಹಾಗಾಗಿ ಕನಸುಗಾರಿಕೆಯ ಹಾಗೂ ಕಲ್ಪನಾಶಕ್ತಿಯನ್ನು ಇಲ್ಲಿ ಯಥೇಚ್ಛವಾಗಿ ಕಾಣಬಹುದಾಗಿದೆ. ನಾಂದಿ ಪದ್ಯದ ಆರಂಭ ಆ ಕಾಲದತ್ತ ನಮ್ಮನ್ನು ಕೊಂಡೊಯ್ಯುತ್ತದೆ. ಇದೊಂದು ಫಲ, ಪುಷ್ಪ, ಹೊಳೆ, ದೈವಗಳ ಬಣ್ಣಿಪ ಅಂದದ ಪದ್ಯ–

ಪೂಗಿ ಫಲಗಳಿಗೆ / ನಾಗವಲ್ಲಿಗಳಿಗೆ
ಬೀಗಿ ಬೆಳೆದ / ಎಲ್ಲಾ ಫಲಗಳಿಗೆ
ಸಾಗು ಮಾಡುವ ಕರಿ / ಮೆಣಸು ಬಾಳೆಗಳಿಗೆ...
ಕೊಲ್ಲೂರೂ ಗೋಕರ್ಣ / ತಾಳಗುಂದಗಳಿಗೆ
ಚಂದ್ರಗುತ್ತಿಗೆ, ಬನವಸೆ ಗುಡಿಗೆ....
ಚೆಂದಕ್ಕೆ ಚೆಂದವ ಸೂಡುವ ನಾಡಲ್ಲಿ
ಅಂದು ತೆರೆಯುತಿದೆ ಕಲಿಯ ಕದ !

ಕವಿತ್ವದಲ್ಲಿ ಎತ್ತಿದ ಕೈ ಎನಿಸಿದ್ದ ಶ್ರೀಧರರ ಈ ಗೀತನಾಟಕದಲ್ಲಿ ವಿಶಿಷ್ಟ ಶಬ್ದ ಶಿಲ್ಪದಿಂದ ಐತಿಹಾಸಿಕ ವಾತಾವರಣ ಬಹುಸುಲಭವಾಗಿ ನಿರ್ಮಾಣವಾಗಿಬಿಡುತ್ತದೆ. ಸಂಸ್ಕೃತದಲ್ಲೂ ಪ್ರಭುತ್ವವಿದ್ದ ಶ್ರೀಧರರಿಂದ ಗುರುಗಳ ಆಶ್ರಮದ ದೃಶ್ಯ ನಿರ್ಮಿಸುವುದು ಸುಲಭದ ಕೆಲಸವೆನ್ನಿಸಿದೆ. ಮಯೂರಶರ್ಮ ಓದುತ್ತಿದ್ದ ಆಶ್ರಮದ ದೃಶ್ಯವನ್ನು ಅಲ್ಲಿ ನಡೆಯುವ ಗಂಭೀರ ಸಂಭಾಷಣೆ, ಶ್ಲೋಕ ಇತ್ಯಾದಿಗಳ ಮೂಲಕ ಕಟ್ಟಿಕೊಡುತ್ತಾರೆ. ಕಥೆಯೊಳಗೆ ತನ್ಮಯರಾಗಿ ಅನುಭವಿಸುವ ಸಾಧ್ಯತೆಯನ್ನು ಶ್ರೀಧರರು ತಮ್ಮ ಪ್ರತಿಭೆಯ ಮೂಲಕ ಸೃಷ್ಟಿಸಿದ್ದಾರೆ.

ಆನಂತರದ ದೃಶ್ಯದಲ್ಲಿ ಗುರು ವೀರಶರ್ಮರ ಆಶ್ರಮದಿಂದ ಕಾಂಚಿಯ ಘಟಿಕಾಸ್ಥಾನದತ್ತ ಮಯೂರ, ವೀರಶರ್ಮ (ಗುರುಗಳು) ತಮ್ಮ ಶಿಷ್ಯವೃಂದದೊಂದಿಗೆ ಪ್ರವೇಶಿಸುತ್ತಾರೆ. ಕುಲಪತಿಗಳಾದ ಆಚಾರ್ಯ ಭರದ್ವಾಜರು ಹಾಗೂ ಶಿಷ್ಯರು ಕುಳಿತಿದ್ದಾರೆ. ನಂತರ ಮಯೂರ ಹಾಗೂ ಆಚಾರ್ಯರೊಡನೆ ನಡೆಯುವ ಸಂಭಾಷಣೆಗಳು ಮಯೂರನ ವಿಶಾಲ ವ್ಯಕ್ತಿತ್ವವನ್ನು ನಮ್ಮೆದುರಿಗಿಡುತ್ತದೆ, ಆತ ಎಂಥ ಶೂರ, ಸುಸಂಸ್ಕೃತ, ತತ್ವಗಳಲ್ಲಿ ನಂಬಿಕೆಯುಳ್ಳ ಯುವಕ ಎಂಬುದು ಪ್ರಕಟವಾಗುತ್ತದೆ.

ಮುಂದಿನ ದೃಶ್ಯದಲ್ಲಿ ನಾಟಕದ ಪ್ರಮುಖ ಕಥೆಯನ್ನು ಬಹಳ ಆಕರ್ಷಕವಾಗಿ ಶ್ರೀಧರರು ಕಟ್ಟಿಕೊಟ್ಟಿದ್ದಾರೆ. ಪಲ್ಲವ ಮಹಾರಾಜ ಶಿವಸ್ಕಂದವರ್ಮನ ಯಜ್ಞದ ಕುದುರೆಯನ್ನೊಮ್ಮೆ ಏರಿದ ಮಯೂರನನ್ನು ಶಿವಸ್ಕಂದ ಹಿಯ್ಯಾಳಿಸಿ ಅವಮಾನಿಸುವುದರಿಂದ ನಿರ್ಮಾಣವಾಗುವ ನಾಟಕೀಯ ಸನ್ನಿವೇಶವನ್ನು ಹಂತ ಹಂತವಾಗಿ ಸೂಕ್ಷ್ಮವಾಗಿ ಚಿತ್ರಿಸಿದ ಶ್ರೀಧರರ ಪ್ರತಿಭೆ ಗಮನಸೆಳೆಯುತ್ತದೆ. "ನಾನು ಕನ್ನಡ ನೆಲದಲ್ಲಿ ಹುಟ್ಟಿ, ಅದರ ಜಲ, ಗಾಳಿ, ಅನ್ನವನ್ನುಂಡದ್ದು ಸತ್ಯವಾಗಿದ್ದರೆ..... (ಇತ್ಯಾದಿ), ನಿನ್ನ ಗರ್ವವನ್ನು ಹಿಂಡದಿದ್ದಲ್ಲಿ ನಾನು ಮಯೂರಶರ್ಮನಲ್ಲ..." ಎಂದು ಪ್ರತಿಜ್ಞೆ ಮಾಡುವ ದೃಶ್ಯ ನಾಟಕದ ಪ್ರಮುಖ ದೃಶ್ಯ, ಮನೋಜ್ಞವಾಗಿ ಚಿತ್ರಿತವಾಗಿದೆ.

ಪ್ರತಿಜ್ಞೆಯನ್ನು ಸಾಕಾರಗೊಳಿಸಲು ಮಯೂರ ಬೇಡರೊಡನೆ ಸೈನ್ಯ ಕಟ್ಟುವಾಗಿನ ದೃಶ್ಯದಲ್ಲಿ ಉಪಯೋಗಿಸಿದ ಬೇಡರ ಭಾಷೆಗೆ ಉತ್ತರ ಕರ್ನಾಟಕದ ಕನ್ನಡ ಭಾಷೆಯ ಸೊಗಡಿದೆ. (ಈ ಭಾಷೆಯನ್ನು ಯಕ್ಷಗಾನದಲ್ಲಿ ಬೇಡರ ಪಾತ್ರಧಾರಿಗಳು ಉಪಯೋಗಿಸುತ್ತಾರೆ). ಇಲ್ಲಿ ಬೇಡರ ನಾಯಕ ತಮ್ಮವರನ್ನುದ್ದೇಶಿಸಿ ಹುರಿದುಂಬಿಸಿ ಮಾತನಾಡುವ ಶೈಲಿಯ ಗತ್ತೇ ಬೇರೆ. ತನ್ನ ಉತ್ಸಾಹೀ ಭಾಷಣದ ಜೊತೆಗೆ ತಮ್ಮ ಯೋಜನೆಗಳನ್ನು ಹೇಳಿ ತಮ್ಮವರನ್ನು ಯುದ್ಧಕ್ಕೆ ಬೇಡರ ನಾಯಕ ತಯ್ಯಾರು ಮಾಡುತ್ತಾನೆ. ಆಗ ನೀಡಿದ ಪದ್ಯದ ಸಾಂಗತ್ಯ–

ಹೊರಟೆವಿದೊ । ಹೊರಟೆವಿದೊ ।
ವೀರ ಬೇಡ ಪಡೆಯಿದೋ । ಹೊರಟೆವು
ಬಿಲ್ಲು ಬಾಣ । ಕತ್ತಿ ಈಟಿ । ಭರ್ಚಿಗಳನು ತನ್ನಿರೋ
ಕವಣೆ । ದೊಣ್ಣೆ ಕಲ್ಲು । ಗಳನು ಎತ್ತಿ ತನ್ನಿರೋ
ಬೆಂಕಿಯಿಡಲು । ಸೂಡಿಗಳನು । ಹೊತ್ತಿಸಿ ಸುಡಲೆಂದು....
ಡೊಳ್ಳು ಹೊಟ್ಟೆಯವರ ಡೊಳ್ಳ । ಬಿರಿದು ಒಡಯಲೇಳಿರಿ ॥

– ಎಂಬ ಹಾಸ್ಯಭರಿತ ಸಮೂಹಗಾಯನದೊಂದಿಗೆ ಬೇಡರ ಪಡೆ ಯುದ್ಧಮಾಡಲು ತೆರಳುವ ದೃಶ್ಯ ಅಪ್ಯಾಯಮಾನವಾಗಿ ಕಣ್ಣೆದುರು ನಿಲ್ಲುತ್ತದೆ. ಪಲ್ಲವನ ಸೋಲು ಹಾಗೂ ಮಯೂರನ ಪಟ್ಟಾಭಿಷೇಕದೊಂದಿಗೆ ಕೊನೆಯ ದೃಶ್ಯವಿದ್ದು ಮಂಗಲ ಪದ್ಯದೊಂದಿಗೆ ತೆರೆ ಬೀಳುತ್ತದೆ.

ಶ್ರೀಧರರು ಕಟ್ಟಿಕೊಟ್ಟ ಈ ನಾಟಕ ಹಾಗೂ ಇದೇ ಕಥೆಯನ್ನಾಧರಿಸಿ ಇವರೇ ಬರೆದ ಕಥನಕಾವ್ಯ 'ಕದಂಬ ವೈಭವ'ಗಳ ದೃಶ್ಯಾವಳಿಗಳನ್ನಾಧರಿಸಿ 'ರಂಗಸಂಗ' ಸಂಸ್ಥೆಯ ಬೇಸಿಗೆ ಶಿಬಿರದ ಮಕ್ಕಳು 'ಕದಂಬ ವೈಭವ' ಎಂಬ ಹೆಸರಿನಲ್ಲಿ ಬಿ.ಎಚ್.ಶ್ರೀಧರ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಾಟಕ ಮಾಡಿ ಅಭಿನಯಿಸಿ ಮೆಚ್ಚಿಗೆ ಗಳಿಸಿದರು. ಇವರ ನಿರ್ದೇಶನವನ್ನು ಕಿರಣ ಭಟ್ ಹಾಗೂ ಶ್ರೀಪಾದ ಭಟ್ ಮಾಡಿದ್ದರು, ಈ ನಾಟಕದ ರಂಗ ಸಾಧ್ಯತೆಯನ್ನು ಯಶಸ್ವಿಯಾಗಿ ತೋರಿಸಿದ್ದರು. ಕದಂಬ ಇತಿಹಾಸದ ಆಳವಾದ ಅಭ್ಯಾಸವುಳ್ಳ ಶ್ರೀಧರರು ನಾಟಕದುದ್ದಕ್ಕೂ ಐತಿಹಾಸಿಕ ಘಟನೆಗಳನ್ನು ನಿಷ್ಠೆಯಿಂದ ಅನುಸರಿಸಿ, ಕಲ್ಪನೆ ಹಾಗೂ ಕಾವ್ಯವನ್ನು ಬೆರೆಸಬಹುದಾದ ಜಾಗದಲ್ಲಿ ಬೆರೆಸಿ ಹದವಾದ ಪಾಕವನ್ನು ನಿರ್ಮಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕಥೆ ಹಾಗೂ ಕವನ ಕಟ್ಟುವ ಜಾಣ್ಮೆಯುಳ್ಳ ಶ್ರೀಧರರ ಈ ನಾಟಕ ಪ್ರಯೋಗಶೀಲರಿಗೆ ಹಾಗೂ ಸಾಹಿತ್ಯಾಸಕ್ತರಿಗೆ ಮಹತ್ವದ ಕೊಡುಗೆಯೆನ್ನಿಸಿದೆ.

ಮುನ್ನುಡಿ

ಯುಗಪುರುಷನು ಕನ್ನಡ ನಾಡಿನಲ್ಲಿ ಯಾರು? ಎಂದು ಕೇಳಿದರೆ ನಮ್ಮ ಮಕ್ಕಳಿಗೆ (ಮುಂದಿನ ಪ್ರಜೆಗಳಿಗೆ) "ಮಯೂರ ಸಾರ್ವಭೌಮ" ಎನ್ನಲು ಜ್ಞಾನ, ಧೈರ್ಯ, ಸ್ಥೈರ್ಯಗಳನ್ನು ಕೊಡಲು ಬರೆದು ಹೈಸ್ಕೂಲಿನಲ್ಲೂ, ಬಾನುಲಿಯಲ್ಲೂ ಆಡಿಸಿದ ನಾಟಕವಿದು. ಇದರ ಸಂಪಾದಕರೂ ಪ್ರಕಾಶಕರೂ ಶ್ರೀ ಕೆ.ಎ. ಉಡುಪರು ಎಂಬುದನ್ನು ಈ ಮೂಲಕ ಸಾರುತ್ತೇನೆ. ಕ್ರಿ.ಶ ೧೪೦೦ರ ವರೆಗೆ (ಆಳುಪರ ಅಧೀನ ಆಳಿಕೆಯ ಕೊನೆಗಾಲ) ಸಾರ್ವಭೌಮತ್ವ ಹೋದರೂ ದಕ್ಷಿಣ ಭಾರತದ ನಾನಾ ಭಾಗಗಳಲ್ಲಿ ಉಪರಾಜರಾಗಿ ಕದಂಬ ಕುಲಜರು ಆಳುತ್ತಿದ್ದರು. ಉದಯಾವರದ ೫ನೆಯ ಅರಸ ಪಶುಪತಿ ಆಳುಪನು ಕಾಕುತ್‌ಸ್ಥವರ್ಮನ ಅಳಿಯನು. ಆಳುಪರದು ಆಳ್ವಖೇಟ ೨೪೦೦೦. ಕದಂಬರ ರಾಜಧಾನಿ ಬನವಾಸಿಯು ಪನ್ನಿರ್ಛಾಸಿರ.

ಕ್ರಿ.ಶ ೯೬೬ ರಿಂದ ೧೩೪೦ರವರೆಗೆ ಗೋವಾರಾಜ್ಯವನ್ನು ೯೬೭ರಿಂದ ೧೩೪೭ರ ವರೆಗೆ (ಬನವಾಸಿ ಸಹಿತವಾದ) ಹಾನುಗಲ್ಲು ರಾಜ್ಯವನ್ನೂ ಇದರ ಹಿಂದು–ಮುಂದಿನ ಅವಧಿಗಳಲ್ಲಿ ಪುನ್ನಾಡನ್ನೂ ಬೇಲೂರನ್ನೂ ಬಂಕಾಪುರವನ್ನು ಉಚ್ಚಂಗಿಯನ್ನೂ ನಾಗರ ಖಂಡವನ್ನೂ ಕಳಿಂಗರಾಜ್ಯ ಭಾಗವನ್ನೂ (ಹೆಚ್ಚು ಕಡಿಮೆ) ಕ್ರಿ.ಶ ೧೦೫೧ರ ವರೆಗೆ ಕದಂಬ ವಂಶಜರು ಉಪರಾಜರಾಗಿ ರಾಜ್ಯಭಾರ ಮಾಡುತ್ತಿದ್ದರೆಂಬುದಕ್ಕೆ ಶಾಸನಾಧಾರವಿರುವುದರಿಂದ ಕನ್ನಡನಾಡಿನ ಮಾತು 'ಕದಂಬಗನ್ನಡ' ಎಂದರೆ ತಪ್ಪಾಗದು. ಇವರ ಆಂತರಿಕ ರಾಜ್ಯಭಾರದಲ್ಲಿ ಯಾವ ಚಕ್ರವರ್ತಿಯೂ ಕೈ ಹಾಕುತ್ತಿದ್ದನೆಂಬುದಕ್ಕೆ ಆಧಾರವಿಲ್ಲದುದರಿಂದ ಕನ್ನಡ ಸಂಸ್ಕೃತಿಯನ್ನು ರಾಜರ ಹೆಸರ ಮೇಲಿಂದ ಹೇಳುವುದಾದರೆ, ಮೇಲಿನ ಮಾತು ತಪ್ಪಾಗದು. ಶಿಲ್ಪವನ್ನು ರಾಜರ ಹೆಸರ ಮೇಲಿನಿಂದ ವಿಭಜಿಸುವ ಪದ್ಧತಿಗಿದು ಸರಿಸಮಾನವಾದುದು. ಕದಂಬ ದೇವಸ್ಥಾನದ ಶಿಖರಕ್ಕೆ (ಗೋಪುರಕ್ಕಲ್ಲ) ಕದಂಬ ವಿಮಾನವೆಂಬ ಪ್ರಸಿದ್ಧಿ ಇದೆ. ಹಲಸಿಗೆ ಬನವಾಸಿಗಳಲ್ಲಿ ಇದಕ್ಕೆ ಉದಾಹರಣೆಗಳಿವೆ.

ಕದಂಬರು ಕದಂಬರಾದದ್ದು ಅವರ ಮನೆಯ ಇದಿರಿನಲ್ಲಿ ಬೆಳೆದ ದೊಡ್ಡ ಕದಂಬ ವೃಕ್ಷದ ದೆಸೆಯಿಂದ, ಕದಂಬ (NAUCLACADAMBA) ವೃಕ್ಷಕ್ಕೆ SINA-

PIS DICHOTOMA, CURCUMA AROMATICA ಚಂಡುಮಲ್ಲಿಗೆಯಂತೆ (ಕದಂಬ ಕುಸುಮ ನ್ಯಾಯ) ಒಂದು ಸುತ್ತಾದ ಮೇಲೆ ಎರಡನೆಯದು–ಹೀಗೆ ಅರಳುತ್ತ ಹೋಗುವ ಹೂವನ್ನು ಬಿಡುವ ಮರ ಎಂಬ ಹೆಸರುಗಳಿವೆ. ಇದರ ವೈಶಾಲ್ಯ ಶಾಸನೋಕ್ತ. (ಆಲದ ಮರಕ್ಕೆ ಸಮಾನ)

ಇಂದಿನ ಕರ್ನಾಟಕ ಅಷ್ಟು ವಿಶಾಲವಾಗಿಲ್ಲ. ಕಾಸರಗೋಡು–ಬೆಳಗಾವಿಗಳಾದರೂ ಉಳಿದರೆ ಸ್ವಲ್ಪ ಸಮಾಧಾನ–ಅಲ್ಲವೇ?

ಅನಾಂಗ್ಲವಾಗಲಿಂದು ನಮ್ಮ ಶುದ್ಧವಾದ ಕನ್ನಡ
ಅಶುದ್ಧ ಬಳಕೆ ಪದಗಳಲ್ಲಿ ಬಾರದಿರಲು ಮುನ್ನಡೆ
ಅಸಂಶಯಸ್ಥವಕ್ಕು ಹನೆಮರದ ಕದಂಬ ವಿಸ್ತರ
ಮಯೂರ ಸದೃಶ ವೀರ ಬರಲು ಕನ್ನಡವೋ ಸುಸ್ಥಿರ॥

ಶಿರಸಿ, ಉ. ಕ. **ಬವಳಾಡಿ ಶ್ರೀಧರ ಹೆಬ್ಬಾರ**
೧೯–೧೭–೧೯೮೮

ನಾಟಕಕಾರನ ನಾಲ್ಕು ಮಾತುಗಳು

ಕರ್ನಾಟಕದ ಪ್ರಥಮ ಸಾರ್ವಭೌಮ ಕದಂಬ ಮಯೂರ ಶರ್ಮನು ಚಕ್ರವರ್ತಿಯಾಗಿ ನರ್ಮದಾಂತ (ಮತ್ತು ಗೋದಾವರ್ಯಂತ) ಪ್ರಶಾಸನ ಗೈಯಲಾರಂಭಿಸಿದುದು ಕ್ರಿ.ಶ ೨೮೦ ರಿಂದ. ಕರ್ನಾಟಕದ ಆದಿಯು ಆಧ್ಯಾತ್ಮ ಪ್ರಧಾನವಾದ ವೇದದ ಅಂಗವಾದ ಮನು ಕೌಟಿಲ್ಯರಾದೇಶಿಸಿದ ರಾಜಧರ್ಮದಿಂದ ಎಂಬುದು ಶಾಸನ ಪ್ರಮಾಣ ಸಿದ್ಧವಾಗಿದೆ.

ತಾಳಗುಂದದ ಶಾಸನವು ಮಯೂರ ಶರ್ಮನ ಮಿಮ್ಮಗನಾದ ಕಾತ್‌ಸ್ಥವರ್ಮ ಶಾಂತಿವರ್ಮರದು. ಅದರ ಕಾಲ ಕ್ರಿ.ಶ ೪೫೦, ಬರೋಡ ವಿಶ್ವವಿದ್ಯಾನಿಲಯದ "The Abiras ಅಭೀರರು" ಎಂಬ ಮಹಾಪ್ರಬಂಧದಲ್ಲಿ ಮಯೂರ ಶರ್ಮನು ಆಭೀರರ ಅರಸ ಶಕ ಸ್ಥಾಪಕನಾಗಲು ಕ್ರಿ.ಶ ೨೫೦ ರಲ್ಲಿ ಪ್ರಯತ್ನಿಸುತ್ತಿದ್ದಾಗ ಅವನನ್ನು ಸಾಮಂತನನ್ನಾಗಿ ಮಾಡಿಕೊಂಡ ಮಯೂರ ಶರ್ಮನ ಉಲ್ಲೇಖವಿದೆ. ಇದನ್ನರಿತು ಮಯೂರ ಶರ್ಮನು ಮಯೂರ ವರ್ಮನಾಗಲು "ಶಸ್ತ್ರಂ ದ್ವಿಜಾತಿ ಭಿರ್ಗ್ರಾಹ್ಯಂ" ಎಂದು ಮನುವು ತನ್ನ ಸ್ಮೃತಿಯ ೮ನೆಯ ಅಧ್ಯಾಯದಲ್ಲಿ ಹೇಳಿದಂತೆ ಸಂದರ್ಭಾನುಸಾರ (ಪರಶುರಾಮನಂತೆ) ಬ್ರಾಹ್ಮಣನಾಗಿಯೂ ಶಸ್ತ್ರ ಹಿಡಿದು ಗರ್ವಿಷ್ಠ ಪಲ್ಲವರನ್ನು ಸೋಲಿಸಿ ಬನವಾಸಿಯಿಂದ ದಕ್ಷಿಣ ಭಾರತದ ಬಹು ಭಾಗವನ್ನು ಆಳತೊಡಗಿದನು. ವೀರಸೇನನು ಅವನ ತಂದೆಯಲ್ಲ ಗುರು; ಅವನು 'ಸೇನ,' ಶರ್ಮನಲ್ಲ. ಅವನಿಂದ ಶಸ್ತ್ರವಿದ್ಯಾಪಾರಂಗತನಾಗಿ ಕನ್ನಡದ ಬಾವುಟವನ್ನು ಕ್ರಿ.ಶ ೨೧೦ರಲ್ಲಿ ಸಂಸ್ಕೃತ ಕನ್ನಡದಿಂದ ಏರಿಸಿದನು. ಅಂದಿನ ಚಕ್ರವರ್ತಿತ್ವದ ಕಲ್ಪನೆ ಬಹು ಉದಾರ; ಅದಕ್ಕೂ ಇಂದಿನ Imperialism ಚಕ್ರವರ್ತಿತ್ವದ ಅನುದಾರ ಪ್ರವೃತ್ತಿಗೂ ಏನೂ ಸಂಬಂಧವಿಲ್ಲವೆಂಬುದನ್ನು ಅಶೋಕನ ಸಾರ್ವಭೌಮತ್ವದ ನಿದರ್ಶನದಿಂದ ತಿಳಿಯಬಹುದು.

ಮಯೂರ, ಕಂಗ (ಸ್ಕಂದ), ಭಗೀರಥ, ರಘು, ಕಾಕುತ್ಸ್ಥ, ಶಾಂತಿ, ಕುಮಾರ, ಕೃಷ್ಣವರ್ಮಾದಿ ೧೭ ಅರಸರು ಬೆಳೆಸಿದ ಸಂಸ್ಕೃತಿಯು ಎಂಥ ಮೂಲವುಳ್ಳದ್ದು? ಅದು ಮಯೂರ ಶರ್ಮನ ಗೋತ್ರಾನುಸಾರವಾದದ್ದು, ಅವನು ಹಾರಿತೀ ಪುತ್ರನೆನ್ನಿಸಿದ

ಮಾನವರ್ಷಿಯ ಗೋತ್ರದವನು. "ಯಜ್ಞಾವಭೃತ ಪುಣ್ಯಾಂಬುನಿಯತ ಅಭಿಷೇಕಾರ್ದ್ರ ಮೂರ್ಧಜನು; ಪ್ರವಚನಾವಗಾಹ ನಿಷ್ಣಾತನು; ವಿಧಿವತ್ ಸಮಿದಾಗ್ನಿ ಸೋಮಪನು; ಪ್ರಣವಪೂರ್ವ ಷಡ್ವಿದಾಧ್ಯಯನ ಅನರ್ಘ ಮಾನಾಂತರಾಲಯನು; ಅಕೃಶ ಚಾತುರ್ಮಾಸ್ಯ ಹೋಮೇಷ್ಟಿ ಪಶುಪಾರ್ವಣ ಶ್ರಾದ್ಧ ಪೌಷ್ಟಿಕನು; ಅತಿಥಿ ನಿತ್ಯ ಸಂಶ್ರಿತಾವ ಪಥ ಸಮನಂತರಯಾಽವಂಧ್ಯ ನೈತ್ಯಕನು: ಶ್ರುತಶಿಲ ಶೌಚಾದ್ಯಲಂಕೃತನು"; ಬ್ರಹ್ಮ ಸಿದ್ಧಿಯ ಗುರಿಯುಳ್ಳವನು. ಆ ವಿದ್ಯಾಭ್ಯಾಸಕ್ಕೆ ಪಲ್ಲವರ ಅರಸ ತಕ್ಕ ಮರ್ಯಾದೆ ಕೊಡದುದರಿಂದ ಕುಶ ಸಮಿದ್ ದೃಷತ್ ಸ್ರುಕ್ ಆಜ್ಯ ಚರುಗ್ರಹಣಾದಿಗಳನ್ನು ಹಿಡಿಯುತ್ತಿದ್ದ ಬಲಗೈಯಿಂದ ದೀಪ್ತಿಮತ್ತಾದ ಶಸ್ತ್ರವನ್ನು ಹಿಡಿದು ದುಷ್ಟ ಕ್ಷತ್ರಿಯ ನಿಗ್ರಹಕ್ಕೆ ಸಿದ್ಧನಾದನು ಮತ್ತು ಅದರಲ್ಲಿ ಸಿದ್ಧಿ ಹೊಂದಿದನು. ಬ್ರಹ್ಮಯಜ್ಞಕ್ಕೆ ಬದ್ಧನಾದ ಅವನು ಕ್ಷತ್ರಯಜ್ಞವನ್ನು ಮಾಡಲಿಲ್ಲ. ಷಣ್ಮತಗಳಲ್ಲಾತನ ಮತ ಸ್ಕಂದಮತ.

ಸಾರ್ವಭೌಮ ಮಯೂರನು ತನ್ನ ವಂಶಜರಿಗೆ ಹಾಕಿಕೊಟ್ಟ ಹಾದಿ: "ತನಗಿಂತ ಬಲಿಷ್ಠರನ್ನು ಗೆಲ್ಲುವುದು; ಬಡವರಲ್ಲಿ ದಯೆ ದೋರುವುದು; ನಿಷ್‌ಪಕ್ಷಪಾತವಾಗಿ (ಪಂಕ್ತಿ ಭೇದ ಮಾಡದೆ) ಪ್ರಜಾಹಿತ ಸಾಧಿಸುವುದು; ಸ್ಥಾನಹೀನ ವಿದ್ವಾಂಸರಿಗೆ ಸ್ಥಾನ ಕೊಡುವುದು, ಶ್ರೋತ್ರಿಯರಿಗೆ (ಆಧ್ಯಾತ್ಮಿಕಾರ್ಥ ಸಹಿತ ವೇದವೋದಿದವರಿಗೆ) ಅವರ ವ್ರತಾದಿಗಳಿಗೆ ಬೇಕಾದ ಧನಾದಿ ಸಾಧನಗಳನ್ನು ಒದಗಿಸಿ ಕೊಡುವುದು; ಪ್ರಜ್ಞಾವಂತಿಕೆಯೇ ಭೂಷಣವೆಂದು ತಿಳಿಯುವುದು ಮತ್ತು ಸತ್ವಗುಣ ಸಂಪನ್ನರನ್ನೇ ಸ್ನೇಹಿತರನ್ನಾಗಿ ಮಾಡಿಕೊಳ್ಳುವುದು."

ಕದಂಬ ಸಾರ್ವಭೌಮರ ಅನಂತರ ಬಂದ ಚಾಲುಕ್ಯ, ರಾಷ್ಟ್ರಕೂಟ, ಕಳಚುರ್ಯ, ಹೊಯ್ಸಳರಲ್ಲದೆ ವಿಜಯನಗರಾಧೀಶ್ವರರೂ, ಮಹೀಶೂರ ಮರವರಾಧೀಶರೂ ಪೋಷಿಸಿಕೊಂಡು ಬಂದ ಸಂಸ್ಕೃತಿ ವೈದಿಕ ಹಿಂದು ಧರ್ಮದ ಎಲ್ಲ ಶಾಖೆಗಳೂ (ಬೌದ್ಧ, ಜೈನಾದಿ, ವೀರಶೈವಾಂತ) ವೈದಿಕ ಸಂಸ್ಕೃತಿ ಹೇಳಿದ ಶಾಶ್ವತ ಧರ್ಮಗಳಾದ ಅಹಿಂಸೆ, ಸತ್ಯ, ಅಸ್ತೇಯ, ಶಾಂತ ಇಂದ್ರಿಯ ನಿಗ್ರಹ ಎಂಬವುಗಳನ್ನು ತಾವೂ ತಮ್ಮ ಪ್ರಜೆಗಳೂ ಪಾಲಿಸುವ ಯೋಜನೆಯನ್ನು ಯಥಾಶಕ್ತಿ ಮಾಡಿದರು. ಇದಕ್ಕೆ ಕದಂಬವು ಮೂಲ ಎಂಬುದು ರಾಷ್ಟ್ರೋತ್ಥಾನಕ್ಕೆ ಅಗತ್ಯವಾದ ಜ್ಞಾನವಲ್ಲವೇ?

ಬಿ.ಎಚ್.ಶ್ರೀಧರ

ಭಾರತೀಯ ಕನ್ನಡ ಸಾಹಿತ್ಯರತ್ನ, ಶಿರಸಿ, ಉ.ಕ.

ಮಯೂರ ವಿಜಯ
(ನಾಟಕ)

ದೃಶ್ಯ–೧

ನಾಂದಿ ಪದ್ಯ

ಮೇಳಗಾನ (ಸಾಂಗತ್ಯ) ತ್ರಿಪುಟ ತಾಳ

ಪೂಗಿ ಫಲಗಳಿಗೆ । ನಾಗವಲ್ಲಿಗಳಿಗೆ
ಬೀಗಿ ಬೆಳೆದ । ಎಲ್ಲಾ ಫಲಗಳಿಗೆ
ಸಾಗು ಮಾಡುವ ಕರಿ । ಮೆಣಸು ಬಾಳೆಗಳಿಗೆ
ರಾಗಿ ಭತ್ತಗಳಿಗೆ । ರಸದಾಳಿಗೆ
ಮಾವಿಗೆ ಹಲಸಿಗೆ । ತಾಳೆ ತೆಂಗುಗಳಿಗೆ
ಸಾವಿರದಹಿ ಪುಷ್ಪ ಬಕುಳಗಳ
ಸಾವಿರ ಜಾತಿಯ । ಜಾಜಿ ಮಲ್ಲಿಗೆಗಳ
ಹೂವಿನ ತರುಲತಾ ವನಗಳಿಗೆ
ಸಹ್ಯಾದ್ರಿ ಮುನಿಯ ಪು । ತ್ರಿಯರಾದವರ ದೇಶ
ರಾವತಿ ಶಾಲ್ಮಲೆ ಹೊಳೆಗಳಿಗೆ
ದುಹ್ಯಮಾನ ಶ್ರೀಯ । ತುಂಗಭದ್ರೆ ದಂಡಾ–
ವತಿಗೆ ಮತ್ತಿನ ಪುಣ್ಯ ನದಿಗಳಿಗೆ
ಕೊಲ್ಲೂರು ಗೋಕರ್ಣ । ತಾಳಗುಂದಗಳಿಗೆ
ಚಂದ್ರಗುತ್ತಿಗೆ ಬನವಸೆ ಗುಡಿಗೆ
ಎಲ್ಲವ್ವ ಗುಡ್ಡಕ್ಕೆ । ಮೈಲಾರ ಲಿಂಗಕ್ಕೆ
ಬಳ್ಳಿಗಾವಿಯ ಬಹುಲಿಂಗನಿಗೆ
ತವರಾಯ್ತು ಕುಂತಳ । ಮೂಲ ಕನ್ನಡ ತಳ
ಕೊಂತಣ ಕೊಂಕಣ ಪಡುಗಡಲ

ಸವಿ ಗನಸುಗಳೆಲ್ಲ । ಘನಿಸಿ ಮೂರ್ತೀಭೂತ
ಅಹಿಖಂಡ ಕೀರ್ತಿಯ ಹಸಿರು ನೆಲ
ಆದಿ ನಾರಾಯಣ । ಮಧು ಕೈಟಭರ ಜನ–
ಬಾಧೆಯ ಮುಗಿಸಿದ ಯುಗ ಮುಗಿದಿರೆ
ಭಾರ್ಗವ ರಾಮ । ದು । ರ್ಮದರ ಮೆಟ್ಟುವ ಧುರ
ರಾಘವಗಿನ್ನೆಂದು ನುಡಿದೆಯ್ದಿರೆ
ಮೇಧಾವಿ ಚಂದ್ರಹಾಸನ ತಂದೆಯಾಳಿದ
ಕುಪಟೂರ ದ್ವಾಪರವನು ಮುಗಿಸಿದೆ
ಕುಂದಕ್ಕೆ ಮಡಿಯಾದ ಚಂದನ ಕಡಿಯಾದ
ಸುಂದರ ಸಹ್ಯಕೆ ಮುಡಿಯಾದ
ಚೆಂದಕ್ಕೆ ಚೆಂದವ ಸೂಡುವ ನಾಡಲ್ಲಿ
ಅಂದು ತೆರೆಯುತಿದೆ ಕಲಿಯ ಕದ !

ದೃಶ್ಯ–೨

(ವೇದಾಧ್ಯಯನ ಪಾಠಶಾಲೆ, ಅಧ್ಯಯನದ ವಟುಗಳು ಆಚೆ ಈಚೆ (ಎದುರು ಬದುರಾಗಿ) ಎರಡು ಸಾಲಿನಲ್ಲಿ ಕೂತಿದ್ದಾರೆ. ನಡುವೆ ಹಿಂಬದಿಯಲ್ಲಿ ಉಚ್ಚಾಸನ ಗುರುಗಳಿಗಾಗಿ (ಅಧ್ಯಾಪಕರು) ಇದೆ.)

ಮಯೂರ
ಶರ್ಮ : ಎಲೋ ರಾಮಶರ್ಮ, ನಮ್ಮ ಅಗ್ನಿ ದೇವರಿತ್ತ ಬರುತ್ತಿದ್ದಾರೆ, ಎಲ್ಲರೂ ಸರಿದು ನಿಲ್ಲಿರಿ.

ರಾಮಶರ್ಮ: ಹೌದು ಗುರುಗಳು ಆಗಮಿಸುತ್ತಿದ್ದಾರೆ ಎಲ್ಲರೂ ಎದ್ದು ನಿಲ್ಲಿರಿ.

(ಎಲ್ಲ ವಟಗಳೂ ಎದ್ದು ನಿಲ್ಲುತ್ತಾರೆ)

ಎಲ್ಲ ವಟುಗಳು:(ಏಕ ಕಂಠದಿಂದ) ತ್ರಿಣೇತ್ರಾಖ್ಯ ಕದಂಬಸ್ಯ ಶಿಷ್ಯಕೋಟಿ ವಿನಾಯಕ।
ವಂದೇ ಮಹೀಮಹಾವೀರಂ ಕುಂತಳ ದ್ರೋಣ ಪೌರುಷಂ ॥
ವಿಷ್ಣು ಸ್ಕಂದ ಚುಟುಕುಲಾನಂದ ಶಾತಕರ್ಣಿ ಮಹಾರಾಜಾಶ್ರಿತ ರಾಜ ಪುರೋಹಿತ ವಿದ್ಯಾವಾಚಸ್ಪತಿ ಗುರುಚರಣಾಭ್ಯಾಂ ನಮಃ॥

(ಎಲ್ಲರೂ ಸಾಷ್ಟಾಂಗ ನಮಸ್ಕರಿಸುತ್ತಾರೆ)

(ಅಷ್ಟರಲ್ಲಿ ಗುರುಗಳು ವೇದಾಧ್ಯಯನ ಮಾಡಿಸುವ ಆಚಾರ್ಯರ ವೇಷ ಭೂಷಣಗಳಿಂದ ತಮ್ಮ ಆಸನದಲ್ಲಿ ಕುಳಿತುಕೊಳ್ಳುತ್ತಾರೆ.)

ವೀರಶರ್ಮ: ವಿದ್ಯಾರ್ಥಿಗಳೇ ಕುಳಿತುಕೊಳ್ಳಿರಿ. (ಎಲ್ಲರೂ ಕುಳಿತುಕೊಳ್ಳುತ್ತಾರೆ) ಪ್ರಾರ್ಥನೆಯನ್ನು ನೆರವೇರಿಸಿರಿ.

ಶಿಷ್ಯರು : (ಏಕಕಂಠ, ಏಕಶೃತಿಯಿಂದ ಪ್ರಾರ್ಥನೆ ಮಾಡುತ್ತಾರೆ)

ಓಂ ಅಸತೋಮಾ ಸದ್ಗಮಯ ।
ತಮಸೋಮಾ ಜ್ಯೋತಿರ್ಗಮಯ ।
ಮೃತ್ಯೋರ್ಮಾ ಅಮೃತಂಗಮಯ ।
ಓಂ ಶಾಂತಿಃ ಶಾಂತಿಃ ಶಾಂತಿಃ ।
ಓಂ ಅಗ್ನಿ ಮೀಳೇ ಪುರೋಹಿತಂ

ಯಜ್ಞಸ್ಯ ದೇವಮೃತ್ವಿಜಂ
ಹೋತಾರಂ ರತ್ನ ಧಾತಮಂ ॥
ಅಗ್ನಿಃ ಪೂರ್ವೇ ಭಿರ್ ಋಷಿಭಿರೀಡ್ಯೋ
ನೂತ ನೈರುತ
ಸದೇವಾ ಏಹ ವಕ್ಷತಿ ॥
ಅಗ್ನಿನಾ ರಯಿ ಮಶ್ನವತ್ ಪೋಷಮೇವ
ದಿವೇ ದಿವೇ ॥
ಯಶಸಂ ವೀರ ವತ್ತಮಂ ॥
ಅಗ್ನೇಯಂ ಯಜ್ಞಮಧ್ವರಂ
ವಿಶ್ವತಃ ಪರಿ ಭೂರಸಿ
ಸ ಇದ್ದೇ ವೇಷು ಗಚ್ಛತಿ ॥
ಅಗ್ನಿ ಹೋ್ತಾ ಕವಿಕ್ರತುಃ ಸತ್ಯಶ್ಚಿತ್ರ –
ಶ್ರವಸ್ತಮಃ
ದೇವೋ ದೇವೇಭಿರಾಗ ಮತ್ ॥
ಯದಂಗ ದಾಶುಷೇ ತ್ವಮಗ್ನೇ
ಭದ್ರಂ ಕರಿಷ್ಯಸಿ
ತವೇತ ತತ್ ಸತ್ಯ ಮಂಗಿರಃ ॥
ಉಪತ್ವಾಗ್ನೇ ದಿವೇ ದಿವೇ
ದೇಕಾಷಾ ವಸ್ತರ್ಥಿಯಾ ವಯಂ
ನಮೋ ಭರಂತ ಏಮಸಿ
ರಾಜಂತ ಮಧ್ವರಾಣಾಂ ಗೋಪಾಮೃತಸ್ಯ
ದೀದಿವಿಂ ॥
ವರ್ಧಮಾನಂ ಸ್ವೇದಮೇ
ಸನಃ ಪಿತೇವ ಸೂನವೇऽಗ್ನೇ
ಸೂಪಾಯನೋಭವ
ಸಚಸ್ವಾನಃ ಸ್ವಸ್ತಯೇ ॥
ಓಂ ಶಾಂತಿಃ ಶಾಂತಿಃ ಶಾಂತಿಃ
ಓಂ ಸಹನಾವವತು । ಸಹನೌ ಭುನಕ್ತು
ಸಹ ವೀರ್ಯಂ ಕರವಾವ ಹೈ । ತೇಜಸ್ವಿನಾವ
ಧೀತಮಸ್ತು ಮಾ ವಿ ದ್ವಿ ಷಾವ ಹೈ
ಓಂ ಶಾಂತಿಃ ಶಾಂತಿಃ ಶಾಂತಿಃ ॥

ಮ ಶ : ಗುರುಗಳೇ ಇಂದು ಕೃಷ್ಣ ಶರ್ಮನು ಪಂಚಾಂಗವನ್ನು ಹೇಳುವದು.

ವೀ ಶ : ಕೃಷ್ಣಶರ್ಮ ಇಂದಿನ ಪಂಚಾಂಗವನ್ನು ಹೇಳು,

ಕೃಷ್ಣಶರ್ಮ: ಸ್ವಸ್ತಿ ಶ್ರೀ ಮಜ್ಜಯಾಭ್ಯುದಯ ನೃಪ ಶಾಲಿವಾಹನ ಶಕ ೧೧೦ ಪ್ರಮಾದಿ ಸಂವತ್ಸರದ ಮಾರ್ಗಶೀರ್ಷ ಶುದ್ಧ ಷಷ್ಠೀ ಶನಿವಾರ ಮಹಾನಕ್ಷತ್ರ ಜ್ಯೇಷ್ಠಾ ಚಂದ್ರ ನಕ್ಷತ್ರ ಮಘಾ ವಿಷ್ಕಂಭಯೋಗ,

ವಣಿಜಾಕರಣ: ದಿವಾ ಘಟಿ ೨೭–೫೪ ವೃಶ್ಚಿಕ ಮಾಸದ ೩೦ನೆಯ ದಿನ.

ಮ ಶ : ಎಲ್ಲರೂ ಗುರುಗಳಿಗೆ ವಂದಿಸಬೇಕು

ಎಲ್ಲರೂ : **ಗುರುರ್ಬ್ರಹ್ಮಾ ಗುರುರ್ವಿಷ್ಣುರ್**
ಗುರುಃಸಾಕ್ಷಾನ್ಮಹೇಶ್ವರಃ ।
ಗುರುರೇವ ಜಗತ್ಸರ್ವಂ ।
ತಸ್ಮೈ ಶ್ರೀ ಗುರವೇ ನಮಃ ॥
(ವಂದಿಸುವರು)

ವೀ ಶ : ಭೋ ಭೋ ಮಾಣವಕಾ; ಬ್ರಹ್ಮ ವರ್ಚಸ್ವಿನೋ ಭೂಯಾಸ್ತ ।
(ಎಲ್ಲರೂ ಏಳುವರು)

ವೀ ಶ : ಮಯೂರ

ಮ : ಗುರುದೇವ

ವೀ ಶ : ಇಂದು ಪಂಚಾಂಗ ನೋಡಿದರೆ ಅಪೂರ್ವ ಮಂಗಲ ಮುಹೂರ್ತ ಇರುವುದು ಕಂಡುಬರುತ್ತದೆ.

ಮ : ಗುರುದೇವ, ಅಂದರೆ ಯಾವ ಶುಭಕಾರ್ಯವನ್ನು ಮಾಡಲು ತಾವು ಸಂಕಲ್ಪಿಸಿದ್ದೀರಿ?

ವೀ ಶ : ನಿನಗೆ ಗೊತ್ತಾಗಲಿಲ್ಲವೇ?

ಮ : ಇಲ್ಲ ಗೊತ್ತಾಗಲಿಲ್ಲ

ವೀ ಶ : ಚುಟು ಮಹಾರಾಜರು ಗೊತ್ತಿಲ್ಲವೇ?

ನಾಗಶರ್ಮ: ಹೌದು, ವಿಷ್ಣುಸ್ಕಂದ ಚುಟುಕುಲಾನಂದ ಶಾತಕರ್ಣಿ ಮಹಾರಾಜರು, ನಮ್ಮ ಭಾಗ್ಯಕ್ಕೆಲ್ಲ ಅವರೇ ಅರಸರಲ್ಲವೇ?

ಮ : ಅವರ ಆಶ್ರಯದಲ್ಲಿ ನೀವು ರಾಜಪುರೋಹಿತರು, ಪವಿತ್ರ ವರದಾ ನದಿಯ ದಂಡೆಯ ಮೇಲೆ ರಾರಾಜಿಸುವ ಈ ಅಗ್ರಹಾರಕ್ಕೆ ದತ್ತಿಕೊಟ್ಟು ಆಶ್ರಯ ನೀಡಿದ ಉದಾರ ಮಹಾರಾಜರನ್ನು ನಾವು ಬಲ್ಲೆವು.

ನಾ ಶ : ನಾಲ್ಕು ದಿಕ್ಕುಗಳಲ್ಲಿ ವಿದ್ಯಾವಾರಿಧಿಯನ್ನು ಹರಿಸುತ್ತಿರುವ ಕೀರ್ತಿಗೆ ಕಾರಣವಾದ ಈ ವಿದ್ಯಾಮಂದಿರ ಹಾಗೂ ಇದರ ಶಾಖೋಪಶಾಖೆಗಳ ಅಭಿವೃದ್ಧಿಗೆ ಕೊಡುಗೈ ದೊರೆಗಳಾಗಿ ಸಹಾಯ ಸಲ್ಲಿಸುತ್ತಿರುವ ಆ ಸತ್ಕುಲಪ್ರಸೂತ ಮಹಾರಾಜರನ್ನು ನಾವು ಬಲ್ಲೆವು.

ವೀ ಶ : ನಾನು ರಾಜಾಸ್ಥಾನಕ್ಕೆ ಮಹಾರಾಜರ ನಿರೂಪದಂತೆ ಹೋದವನು ನಿನ್ನೆಯಷ್ಟೇ ತಿರುಗಿ ಬಂದೆನು.

ಮ : ಅದು ನಮಗೆ ಗೊತ್ತು, ಅಲ್ಲಿ ಏನು ವಿಶೇಷ ನಡೆಯಿತು?

ವೀ ಶ : ಚುಟು ಮಹಾರಾಜರು ಅಪ್ಪಣೆ ಕೊಡಿಸಿದರು.

ಮ : ಏನೆಂದು ಗುರುದೇವ?

ವೀ ಶ : ತಮ್ಮ ಆಸ್ಥಾನದ ವಿದ್ವನ್ಮಣಿಯಾಗಲು ತಕ್ಕವನು ನೀನೆ ಎಂದು.

ಎಲ್ಲರೂ : ಗುರುದೇವ, ಬಹಳ ಸಂತೋಷದ ಸಮಾಚಾರ, ಆಸ್ಥಾನಕ್ಕೆ ಮಯೂರಶರ್ಮನು ತಕ್ಕವನಾಗಿದ್ದಾನೆ.

(ಮಯೂರನು ಹರ್ಷ ಪುಳಕಿತನಾಗುತ್ತಾನೆ)

ನಾ ಶ : ಗುರುದೇವ, ಯಾರ ಜಿಹ್ವಾಗ್ರದಲ್ಲಿ ಸರಸ್ವತಿ ಒಲಿದು ನರ್ತಿಸುತ್ತಾಳೋ, ಯಾರ ನೆತ್ತಿಯ ಮೇಲೆ ಗುರುವಿನ ಸಂಪೂರ್ಣ ಅನುಗ್ರಹ ನೆಲೆಸಿದೆಯೋ ಯಾರು ನಯ ವಿನಯ ಸಂಪನ್ನನಾಗಿ ಸಕಲ ಸದ್ಗುಣಗಳಿಗೆ ತವರ್ಮನೆ ಎನ್ನಿಸಿದ್ದಾನೆಯೋ, ಆ ಮಯೂರ ಶರ್ಮ, ಆ ಸ್ಥಾನಕ್ಕೆ ಯೋಗ್ಯನಿದ್ದಾನೆ.

ವೀ ಶ : ನಾನೂ ಅದನ್ನೇ ಚಿಂತಿಸುತ್ತಿದ್ದೆ ಆದರೆ...

ಕೃಷ್ಣಶರ್ಮ: ಗುರುದೇವ ಏನು... ಆದರೆ !

ವೀ ಶ : ಮಯೂರ, ನನಗೆ ಕಾಂಚೀನಗರದ ಮಹಾಘಟಿಕಾಸ್ಥಾನವು ಈ ಬ್ರಾಹ್ಮೀ ಮುಹೂರ್ತದಲ್ಲಿ ಸ್ವಪ್ನವಾಗಿ ಕಾಣಿಸಿಕೊಂಡಿತು. ನಿನ್ನನ್ನು ಅಲ್ಲಿಗೆ ಕರೆದೊಯ್ದು ಪೂಜ್ಯ ಭಾರದ್ವಾಜ ಕುಲಪತಿಗಳಲ್ಲಿಟ್ಟು ವೇದೋತ್ತರ ಶಾಸ್ತ್ರಾಭ್ಯಾಸವನ್ನು ಮಾಡಿಸಬೇಕೆಂಬ ಸಂಕಲ್ಪ ಉಂಟಾಯಿತು.

ಮಯೂರ: ಗುರುಗಳೇ ಈ ವಿಷಯದಲ್ಲಿ ಅಜ್ಜನನ್ನು ವಿಚಾರಿಸಿದಿರಾ?

ವೀ ಶ : ಹೌದು ಅವರೊಡನೆ ಸಮಾಲೋಚಿಸಿದೆ.

ಮಯೂರ: ಅವರು ಏನೆಂದರು ತಿಳಿಯಬಹುದೇ?

ವೀ ಶ : ಅವರು ಕೂಡಲೆ 'ತಥಾಸ್ತು' ಎಂದರು. ಅವರೂ ಸಂತೋಷ ಪಟ್ಟಿದ್ದಾರೆ. ಅವರ ಆಶೀರ್ವಾದವನ್ನು ಪಡೆದೇ ನಾನೀ ನಿರ್ಧಾರಕ್ಕೆ ಬಂದಿದ್ದೇನೆ. ನಿನ್ನ ಆಲೋಚನೆಯೇನು?

ಮಯೂರ: (ಕಾಲಿಗೆ ನಮಸ್ಕರಿಸಿ) ಗುರುದೇವ, ತಾವು ನನಗೆ ಸಂಸ್ಕೃತ ಸಾಹಿತ್ಯದ ಪೂರ್ಣ ಅಭ್ಯಾಸ ಮಾಡಿಸಿದ್ದೀರಿ. ವೇದಸಾಹಿತ್ಯದ ಮೇರೆಯನ್ನಳೆಯುವ ಮಹಾ ಮೇಧಾಶಕ್ತಿ ನನ್ನಲ್ಲಿ ಉಂಟಾಗಲು ಕಾರಣರಾದ ಗುರುಗಳು ನೀವು. ಮೇಲೆ ಚಿಕ್ಕಜ್ಜ ತಾವು. ನಿಮ್ಮ ಹಾಗೂ ಮುಕ್ಕಣ್ಣಪ್ಪನ ಮತವೇ ನನ್ನ ಮತ. ಬ್ರಹ್ಮವಿದ್ಯೆಗಿಂತ ಹೆಚ್ಚಿನ ವಿದ್ಯೆ ಇನ್ನೊಂದಿಲ್ಲವೆಂಬುದನ್ನು ನೀವೇ ನನಗೆ ಹೇಳಿದ್ದೀರಿ (ಎದ್ದು ನಿಂತು) ಆದರೆ...

ವೀ ಶ : ಏನಾದರೂ ಸಂದೇಹವಿದ್ದರೆ ತಿಳಿಸು ಮಗೂ, ಸಂಕೋಚಪಡಬೇಡ.

ಮ : ಗುರುದೇವ ತಂದೆ ಬರೆದ ಓಲೆಯೊಂದರಲ್ಲಿ "ತಾವು ಚುಟು ಮಹಾರಾಜರ ದಂಡನಾಯಕರಾಗಿ "ಬಂಧುಷೇಣ" ಎಂಬ ಬಿರುದನ್ನು ಪಡೆದಿರುವಾಗ ನೀನು ಕ್ಷಾತ್ರವಿದ್ಯೆಯಲ್ಲಿ ಪಾರಂಗತನಾಗುವುದೂ ಅಗತ್ಯ" ಎಂದು ಬರೆದಿದ್ದರು.

ವೀ ಶ : ಮಗು, ನಿನಗೆ ನಾನೇ ಕ್ಷಾತ್ರವಿದ್ಯೆಯನ್ನು ಅಲ್ಲಿ ಕಲಿಸುತ್ತೇನೆ. ಅದಕ್ಕೆ ಚ್ಯುತಿ ಉಂಟಾಗದು.

ಮ : ಬಹಳ ಸಂತೋಷ, ನೀವು ಶುಕ್ರಾಚಾರ್ಯ ಪ್ರಣೀತ, ದಂಡನೀತಿಶಾಸ್ತ್ರ ಸಾಗರವನ್ನೂ ಈಸಿ ಜೈಸಿದವರು. ಶುಕ್ರಾಚಾರ್ಯರ ಪರಂಪರಾ ಧರ್ಮಪುತ್ರನಾದ ಚಾಣಕ್ಯನು ರಚಿಸಿದ ಅರ್ಥಶಾಸ್ತ್ರದಲ್ಲಿ ಪಾರಂಗತರಾಗಿದ್ದೀರಿ. ಕ್ಷಾತ್ರವಿದ್ಯೆಯಲ್ಲಿ ವ್ಯುತ್ಪನ್ನ ಮತಿಗಳು ಎಂಬುದನ್ನು ಕೇಳಿದ್ದೇನೆ. ಆದರೆ...

ವೀ ಶ : ಮತ್ತೇನು ಸಂದೇಹ?

ಮ : ನೀವೂ ನನ್ನೊಡನೆ ಕಾಂಚಿಗೆ ಹೊರಡುವಿರಾ?

ವೀ ಶ : ನಿನ್ನೊಡನೆಯೇ ಹೊರಡುತ್ತೇನೆ. ನಾನು ಕಾಂಚಿಯಲ್ಲುಳಿದು ವಿರಾಮ ವೇಳೆಯಲ್ಲಿ ನಿನಗೆ ಕ್ಷಾತ್ರವಿದ್ಯೆಯ ಎಲ್ಲ ಹಂತಗಳಲ್ಲೂ ತರಬೇತು ಕೊಡುತ್ತೇನೆ.

ನಾ ಶ : ಹೌದು ಗುರುಗಳೇ, ಮಯೂರನು ಈಗಾಗಲೇ ಸಂಸ್ಕೃತ ಕಾವ್ಯಾಕಾಶದ ನಕ್ಷತ್ರಗಳನ್ನೆಣಿಸುವ ಸಾಮರ್ಥ್ಯವನ್ನು ಪಡೆದಿದ್ದಾನೆ. ವೇದ ಸಾಹಿತ್ಯದಲ್ಲಿ ವ್ಯುತ್ಪನ್ನ ಮತಿಯಾಗಿದ್ದಾನೆ. ಇನ್ನು ಕಾಂಚಿಯಲ್ಲಿ ಬ್ರಹ್ಮವಿದ್ಯೆಯ ಜೊತೆಗೆ ಕ್ಷಾತ್ರವಿದ್ಯಾ ಪಾರಂಗತನಾಗುವುದರಿಂದ ಚಿನ್ನಕ್ಕೆ ಕುಂದಣವಿಟ್ಟಂತಾಗಿ ಅವನು ಮುಂದೆ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗಿನ ವಿದ್ವನ್ಮಣಿಗಳ ಸಾಲಿನಲ್ಲಿ ಪ್ರಕಾಶಮಾನವಾಗಿ ಶೋಭಿಸುವನೆಂದು ನಮಗೆ ವಿಶ್ವಾಸವಿದೆ.

ಕೃ ಶ : ಕನ್ನಡನಾಡು ವಿದ್ಯೆಯಲ್ಲಿ ಯಾವಾಗಲೂ ಮುಂದಾಗಿದೆ. ಅದು ಎಂದೆಂದಿಗೂ ಮುಂದಾಗಿರಬೇಕು. ನಾಳಿನವರಿಗೆಲ್ಲ ಮಯೂರ ಶರ್ಮ

ದಿಕ್ಸೂಚಿಯಾಗಿ ಕನ್ನಡದ ಕೀರ್ತಿ ಪತಾಕೆಯನ್ನು ಭರತ ವರ್ಷದಲ್ಲಿ ರಾರಾಜಿಸುವಂತೆ ಮೆರೆಸುವ ಶಕ್ತಿ ಸಂಪನ್ನನಾಗಲೆಂದು ಈ ಘಟಿಕಾ ಸ್ಥಾನದ ಅವನ ಸ್ನೇಹಿತರಾದ ನಾವೆಲ್ಲಾ ಸ್ನೇಹವರ್ಷದ ಧಾರೆಯೆರೆದು ಕಳಿಸಿಕೊಡಲು ಹೆಮ್ಮೆಪಡುತ್ತೇವೆ.

(ಮಯೂರ ಹರ್ಷ ಪುಳಕಿತನಾಗಿ ನಿಲ್ಲುತ್ತಾನೆ)

ವೀ ಶ : ಮಯೂರ, ನಿನ್ನ ಸ್ನೇಹಿತರ ಮಾತನ್ನು ಕೇಳಿದೆಯಾ?

ಮಯೂರ: (ಹರ್ಷ ಪುಳಕಿತನಾಗಿ) ಗುರುದೇವರಾದ ಚಿಕ್ಕಜ್ಜನವರ ಆಶೀರ್ವಾದ, ಮುಕ್ಕಣ್ಣಪ್ಪನ ಅನುಗ್ರಹ, ತಂದೆಯ ಮಹದಾಶೆ, ಗೆಳೆಯರ ಅಭಿಲಾಷೆಯನ್ನು ಈಡೇರಿಸುವ ಭಾಗ್ಯ ನನ್ನದಾಗಲಿ, ಹಾಗಾದರೆ ನಾವು ಹೊರಡುವುದು ಇಂದೇ ಅಲ್ಲವೇ? ದೊಡ್ಡಜ್ಜನವರ ಆಶೀರ್ವಾದ ಪಡೆದು ಬರುತ್ತೇನೆ.

ರಾ ಶ : ಗುರುಗಳೇ...

ವೀ ಶ : ರಾಮಶರ್ಮ, ನಿನ್ನ ಅಭಿಪ್ರಾಯವೇನು?

ರಾ ಶ : ತಮ್ಮ ಆಶೀರ್ವಾದವಿದ್ದರೆ, ಅನ್ಯಥಾ ಭಾವಿಸಬಾರದು. ನಾನೂ ತಮ್ಮಿಂದಲೇ ಮುಂದಿನ ವಿದ್ಯಾಭ್ಯಾಸವನ್ನು ಮಾಡಲು ಆಶಿಸುತ್ತೇನೆ. ಮಯೂರನನ್ನು ನಾನು ಬಿಟ್ಟಿರಲು ಸಾಧ್ಯವಿಲ್ಲ. ನನಗೂ ತಮ್ಮ ಜೊತೆಗೆ ಬರಲು ಅಪ್ಪಣೆ ಕೊಟ್ಟರೆ...

ಕೃಷ್ಣ ಶರ್ಮ: ಗುರುಗಳೇ...

ವೀ ಶ : ಏನು ಕೃಷ್ಣ ಶರ್ಮ?

ಕೃಷ್ಣ ಶರ್ಮ: ನೀವು ಒಪ್ಪಿದರೆ ನಾನೂ ನಿಮ್ಮ ಜೊತೆಗೆ ಬಂದು ಕಾಂಚಿಯ ಮಹಾ ಘಟಿಕಾಸ್ಥಾನದಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸುವ ಪುಣ್ಯಕ್ಕೆ ಭಾಗಿಯಾಗಬೇಕೆಂದಿದ್ದೇನೆ.

ವೀ ಶ : ನಿಮಗೆ ಅಂಥ ಉತ್ಕಟ ಅಭಿಲಾಷೆ ಇದ್ದರೆ ನಿಮ್ಮ ಮಹತ್ವಾಕಾಂಕ್ಷೆಯ ಬೇರನ್ನು ಕೊಯ್ದೆಸೆಯಲಾರೆ. ಹಾಗೇ ಆಗಲಿ.

ಮಯೂರ: ಗುರುದೇವ, ಈ ಅಗ್ರಹಾರವನ್ನು ನೋಡಿಕೊಳ್ಳುವವರಾರು?

ವೀ ಶ : ನಮ್ಮ ಶಿಷ್ಯನಾದ ವೇದಾಂತ ಕೇಸರಿ ನಾಗಶರ್ಮನೇ ನಮ್ಮ ಪ್ರತಿನಿಧಿ–ಯಾಗಿ ಈ ಅಗ್ರಹಾರವನ್ನು ನೋಡಿಕೊಳ್ಳುತ್ತಾನೆ. ಹಾಗೇ ಲೇಖನವನ್ನೂ ಚುಟು ಮಹಾರಾಜನಿಗೆ ಬರೆದಿಟ್ಟಿದ್ದೇನೆ. ಏನು ನಾಗಶರ್ಮ?

ನಾ ಶ : ಗುರುಗಳ ಆಶೀರ್ವಾದ, ಅಭಿಮಾನ ಹಾಗಿದ್ದರೆ ಅದು ನನಗೆ ಶಿರಸಾಮಾನ್ಯ ವರಪ್ರಸಾದ

ವೀ ಶ : ಇಕೋ ಈ ಲೇಖನ. ಇದನ್ನು ಚುಟು ಮಹಾರಾಜರಿಗೆ ನಾಳೆಯೇ ಆಸ್ಥಾನಕ್ಕೆ ಒಯ್ದು ಕೊಡು. ಯಥಾಯೋಗ್ಯವಾಗಿ ಈ ಬನವಾಸಿ ಅಗ್ರಹಾರವನ್ನು ನಡೆಸಿಕೊಂಡು ಬಾ. ರಾಜರನ್ನು ಕಂಡಾಗ ಪರಾಕನ್ನು ಹೇಳಲು ಮರೆಯಬೇಡ.

ನಾ ಶ : ಅಗಲಿ ಗುರುಗಳೇ

(ಲೇಖನ ತೆಗೆದುಕೊಂಡು)

ವೀ ಶ : ಎಲ್ಲಿ ಹೇಳೊಮ್ಮೆ

ನಾ ಶ : ದ್ವಾದಶಸಹಸ್ರವನವಾಸಿ ಸಂಘಟಿತ ಚುಟುಕುಲಾಧಿಪತಿ ಶಿರಃ ಸೇವ್ಯಮಾನ ಪಾದ ಪದ್ಮಾSSS

ವಿಷ್ಣು ಸ್ಕಂದ ಚುಟುಕುಲಾನಂದ

ಶಾತಕರ್ಣಿ ಮಹಾರಾಜಾSS

ಭೋSSS ಪರಾಕು.

ವೀ ಶ : ಸೊಗಸಾಗಿ ಹೇಳುವೆ. ನಾಗಶರ್ಮ, ಚಿರಕೀರ್ತಿವಂತನಾಗು.

ಎಲ್ಲರೂ : (ಏಕ ಕಂಠದಿಂದ)

ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ ।
ಭದ್ರಂ ಪಶೇಮಾಕ್ಷ ಭಿರ್ಯ ಜ ತ್ರಾಃ
ಸ್ಥಿರೈರಂಗೈ ಸ್ತುಷ್ಟು ವಾಂಸಸ್ತನೂಭಿಃ
ವ್ಯಶೇಮ ದೇವಹಿತಂ ಯದಾಯಂಃ ॥
ಸ್ವಸ್ತಿನಃ ಇಂದ್ರೋ ವೃದ್ಧಶ್ರವಾ:
ಸ್ವಸ್ತಿನಃ ಪೂಷಾ ವಿಶ್ವ ದೇವಾಃ
ಸ್ವಸ್ತಿನಃ ತಾರ್ಕ್ಷ್ಯೋ ಅರಿಷ್ಟ ನೇಮಿಃ
ಸ್ವಸ್ತಿನೋ ಬೃಹಸ್ಪತಿರ್ದಧಾತಂ ॥
ಓಂ ಶಾಂತಿಃ ಶಾಂತಿಃ ಶಾಂತಿ ॥
ಓಂ ಸಹನಾ ವವತು
ಸಹನೌ ಭುನಕ್ತು
ಸಹವೀರ್ಯಂ ಕರವಾವಹೈ ।
ತೇಜಸ್ವಿ ನಾವಧೀತ ಮಸ್ತು
ಮಾ ವಿದ್ವಿಷಾವಹೈ ।
ಓಂ ಶಾಂತಿಃ ಶಾಂತಿಃ ಶಾಂತಿಃ

(ತೆರೆ ಬೀಳುವುದು)

ದೃಶ್ಯ–೩

(ರಸ್ತೆಯಲ್ಲಿ–ಕಾಂಚಿ ಮಹಾಘಟಿಕಾ ಸ್ಥಾನದ ಎದುರಿನಲ್ಲಿ)

(ತೆರೆಯ ಹಿಂದೆ ಪರಾಕು ಕೇಳುತ್ತಿದೆ. ಎದುರಿನಲ್ಲಿ ವೀರಶರ್ಮ, ಮಯೂರಶರ್ಮ, ರಾಮಶರ್ಮ, ಕೃಷ್ಣಶರ್ಮ ಸಾವಕಾಶವಾಗಿ ಪ್ರವೇಶಿಸುತ್ತಾರೆ. ಪರಾಕನು ಆಲಿಸುತ್ತಾನೆ. ಜೊತೆಗೇ ಡಂಗುರದ ದನಿಯನ್ನು ಆಲಿಸುತ್ತಾರೆ.)

ಭಟ್ಟಂಗಿ : ಶರಚಾಪ ಮಂಡಿತ ದೋರ್ದಂಡಾಹೃತ ಶತ್ರುಸರ್ವಸ್ವಾSSSS ರಾಜಾಧಿರಾಜ, ರಾಜಪರಮೇಶ್ವರ, ಶಿವಸ್ಕಂದವರ್ಮ ಪಲ್ಲವ ಮಹಾರಾಜಾಧಿರಾಜಾSSS ಭೋSSS ಪರಾಕು

ಮ : ಗುರುದೇವ ಭಟ್ಟಂಗಿಗಳ ಪರಾಕು ಕೇಳಿ ಬರುತ್ತಿದೆ.

ವೀ ಶ : ಮಹಾರಾಜರು ಆಸ್ಥಾನ ಪ್ರವೇಶ ಮಾಡುತ್ತಿರಬೇಕು

ರಾ ಶ : ಮಹಾರಾಜರು ಯಾರು?

ವೀ ಶ : ಪಲ್ಲವ ಸಾಮ್ರಾಜ್ಯಕ್ಕೆ ಅಧೀಶ್ವರನಾದ, ರಾಜಾಧಿರಾಜ ರಾಜಪರಮೇಶ್ವರ ಬಿರುದನ್ನು ಧರಿಸಿದ ಶ್ರೀ ಶಿವಸ್ಕಂದವರ್ಮ ಮಹಾರಾಜರು.

ಕೃ ಶ : ಕಾಂಚೀ ನಗರವು ಎಷ್ಟು ಸೊಗಸಾಗಿದೆಯಲ್ಲವೇ?

ಮ : ಭವ್ಯವಾದ ಅರಮನೆಗಳು, ಮಹಾಸೌಧಗಳು, ದೇವಾಲಯಗಳು, ವಿಶಾಲವಾದ ಬೀದಿ, ವೈಭವದಿಂದ ಈ ನಗರ ನಲಿಯುತ್ತಿದೆ ಎಂದು ಸಾರಿ ಹೇಳುವ ನಗುತ್ತಿರುವ ಅಂಗಡಿಗಳು ರಾರಾಜಿಸಿ ಪಟ್ಟಣ ಚೆಲುವನ್ನು ಹೆಚ್ಚಿಸುತ್ತಿರುವ ಹೂದೋಟಗಳು, ಪನ್ನೀರ ಕೊಳಗಳು ಮನಸ್ಸಿಗೆ ಆಹ್ಲಾದವನ್ನುಂಟು ಮಾಡುತ್ತಿವೆ.

ವೀ ಶ : ಕವಿಗಳು ರಾಜಧಾನಿಯನ್ನು ವರ್ಣಿಸುವಾಗ ಈ ಕಾಂಚೀ ನಗರವನ್ನೇ ಉದಾಹರಿಸುತ್ತಿರಬೇಕು.

ರಾ ಶ : ಗುರುಗಳೇ ಅಲ್ಲಿ ಕಾಣುತ್ತಿರುವ ಎತ್ತರವಾದ ಆ ಭವನ ಯಾವುದು?

ವೀ ಶ : ಅದೇ ನಾವು ಈಗ ಹೋಗಲಿಕ್ಕಿರುವ ವಿದ್ಯಾಮಂದಿರ. ಇಡೀ ದಕ್ಷಿಣ ಭಾರತದಲ್ಲೇ ಅತ್ಯಂತ ಶ್ರೇಷ್ಠ ಸ್ನಾತಕೋತ್ತರ ವಿದ್ಯಾಪೀಠವೆಂದೆನಿಸಿದ ಮಹಾಘಟಿಕಾ ಸ್ಥಾನ.

ಕೃಷ್ಣ ಶರ್ಮ: ಎಷ್ಟು ವಿಶಾಲವಾಗಿದೆ. ಈ ಮಹಾಘಟಿಕಾಸ್ಥಾನ ಗುರುಗಳೇ?

ವೀ ಶ : ಹೌದು ಹತ್ತು ಸಾವಿರ ವಟುಗಳು ಇಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಇಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಊಟ ವಸತಿಯ ಏರ್ಪಾಟನ್ನು ಮಾಡಲಾಗಿದೆ.

ಮಯೂರ: ಅಬ್ಬ! ಎಂಥಾ ಮಹಾ ಮಂದಿರವಿದು! ಇದನ್ನು ಪ್ರವೇಶಿಸಲೂ ಪುಣ್ಯ ಬೇಕು. ಇಲ್ಲಿ ವಿದ್ಯಾಭ್ಯಾಸ ಮಾಡುವವನು ಎಷ್ಟು ಜನ್ಮಗಳ ಪುಣ್ಯ ಮಾಡಬೇಕೋ ಏನೋ?

ವೀ ಶ : ಹೌದು, ಮಯೂರ, ಆಚಾರ್ಯ ಭಾರದ್ವಾಜರು ಈ ಮಹಾ ಘಟಿಕಾಸ್ಥಾನದ ಕುಲಪತಿಗಳು. ಅವರ ಸಹೋದ್ಯೋಗಿಗಳು ೬೪ ವಿವಿಧ ಶಾಸ್ತ್ರಗಳಲ್ಲಿ ಪಾರಂಗತರಾದ ಅಧ್ಯಾಪಕರು. ಇಲ್ಲಿ ಅವರು ವೇದ, ವೇದಾಂಗ, ಬ್ರಹ್ಮ ವಿದ್ಯೆ, ಶಿಲ್ಪ, ಚಿತ್ರ, ಸಂಗೀತ, ನಾಟ್ಯ, ನೃತ್ಯ, ಪುರಾಣ, ಕಾವ್ಯ, ವ್ಯಾಕರಣ, ಜ್ಯೋತಿಷ್ಯ, ಧರ್ಮಶಾಸ್ತ್ರ, ರಾಜನೀತಿ, ಕೃಷಿ, ಗೋರಕ್ಷ, ವಾಣಿಜ್ಯ, ವೈದ್ಯ ಮುಂತಾದ ವಿವಿಧ ವಿದ್ಯೆಗಳನ್ನು ದೇಶ ವಿದೇಶಗಳಿಂದ ಬಂದ ಸ್ನಾತಕೋತ್ತರ ಶಿಷ್ಯರ ವ್ಯುತ್ಪತ್ತಿ, ಅರ್ಹತೆ ಅಭಿರುಚಿಗಳಿಗನುಗುಣವಾಗಿ ಹೇಳಿಕೊಡುತ್ತಾರೆ.

ರಾ ಶ : ಅದೋ ಡಂಗುರ ಕೇಳಿ ಬರುತ್ತಿದೆ.

ವೀ ಶ : ಅದನ್ನು ಆಲಿಸಿರಿ

ಡಂಗುರದವ: (ತೆರೆಯಲ್ಲಿ) (ರೂಪಕ ತಾಳ)

ಸಾರುವೆವು ಡಂಗುರವ। ಊರೆಲ್ಲ ಕೇಳಲಿ ॥
ಸಾರುವೆವು ಡಂಗುರವ ॥ಪಲ್ಲ॥
ಶ್ರೀ ಪಲ್ಲವ । ಶಿವಸ್ಕಂದ । ಮಹಾರಾಜ । ಪರಮೇಶ್ವರ
ಸರ್ವರಾಜ । ಕುಲಶೇಖರ । ಸಾರ್ವಭೌಮ । ಕೃಪಾಪಾರ
ಭಾರತೀಯ । ಸಂಸ್ಕೃತಿಯ । ನ್ನಾಗಸದೆ । ತ್ತರಕ್ಕೇರಿಸೆ
ಆರ್ಯ ವಿದ್ಯೆ । ಗಳನು ಸರ್ವ । ಮಾನವರಲಿ ಹೆಚ್ಚಿಸಲಿಕೆ
ಕಟ್ಟಿಸಿದೀ । ಘಟಿಕಾ ಸ್ಥಳ । ವಿಶ್ವವಿದ್ಯೆಗಳ ಸಾಗರ
ಭಟ್ಟಾರಕ । ಯತಿವರೇಣ್ಯ । ರುಪ ದೇಶದ । ಗೀತಾಸ್ವರ
ಕೇಳಿ ಕೇಳಿ । ಬರುತ್ತಿರುವ । ವಿದ್ಯಾರ್ಥಿಗಳಿಗೆ ಸ್ವಾಗತ
ಬಾಳಲಿ ಮನು । ಕುಲ ಧರ್ಮದ । ಗಾಳಿಯನುಸಿ ರಾಡಿಸುತ

ವೀ ಶ : ನಂಗೆಲ್ಲ ಸ್ವಾಗತವನ್ನು ಕೋರಿದ್ದಾರೆ ಹೇಗೂ ಪ್ರಾತಃ ಕಾಲದ ಸಂಧ್ಯಾವಂದನೆ ನಿತ್ಯ ಕರ್ಮಗಳನ್ನು ತೀರಿಸಿಕೊಂಡಾಗಿದೆ. ಮಹಾವಿದ್ಯಾಲಯವು ಪ್ರಾರಂಭವಾಗುವ ಸುಮುಹೂರ್ತವಿದು. ಎಲ್ಲರೂ ಅಲ್ಲಿಗೇ ನೆರೆಯೋಣ

ಮ : ಹಾಗೇ ಆಗಲಿ, ಗುರುದೇವ, ಶುಭಸ್ಯ ಶೀಘ್ರಂ,

ದೃಶ್ಯ–೪

(ಮಹಾ ಘಟಿಕಾ ಸ್ಥಾನದ ಕುಲಪತಿ ಆಚಾರ್ಯ ಭರದ್ವಾಜರು ಪೀಠದಲ್ಲಿ ಕುಳಿತಿದ್ದಾರೆ. ಎದುರಿನಲ್ಲಿ ಶಿಷ್ಯರು ಕುಳಿತಿದ್ದಾರೆ. ಜೊತೆಯಲ್ಲಿ ಮಯೂರ ರಾಮ ಕೃಷ್ಣ–ಶರ್ಮರು ಕುಳಿತಿದ್ದಾರೆ. ಆಚಾರ್ಯರ ಜೊತೆಯಲ್ಲೇ ಬದಿಯಲ್ಲಿ ವೀರಶರ್ಮರು ಕುಳಿತಿದ್ದಾರೆ)

ಪ್ರಾರ್ಥನೆ

ಓಂ ಪೂರ್ಣಮದಃ ಪೂರ್ಣಮಿದಂ
ಪೂರ್ಣಾತ್ ಪೂರ್ಣಮುದಚ್ಯತೇ ।
ಪೂರ್ಣಸ್ಯ ಪೂರ್ಣ ಮಾದಾಯ
ಪೂರ್ಣಮೇವಾವ ಶಿಷ್ಯತೇ ॥

ಓಂ ಈಶಾವಾಸ್ಯಂ ಇದಂ ಸರ್ವಂ
ಯತ್ಕಿಂಚ ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಂಜೀಥಾಃ
ಮಾಗೃಧಃ ಕಸ್ಯ–ಸ್ವಿದ್ಧನಂ ॥

ಓಂ ಸಹನಾವವತು । ಸಹನೌ ಭುನಕ್ತು
ಸಹ ವೀರ್ಯಂ ಕರವಾವಹೈ ।
ತೇಜಸ್ವಿನಾವಧೀತಮಸ್ತು । ಮಾ ವಿದ್ವಿ
ಷಾವ ಹೈ । ಓಂ ಶಾಂತಿಃ ಶಾಂತಿಃ ಶಾಂತಿಃ ॥

ವೀ ಶ : ಮಯೂರ, ಆಚಾರ್ಯರಿಗೆ ವಂದಿಸು

ಮ : ಭೋ ಆಚಾರ್ಯವರ್ಯ, ಮಾನವ್ಯ ಗೋತ್ರೋ ಮಹಾ ಕದಂಬ ವಂಶೋತ್ಪನ್ನೋ ಹಾರೀತೀ ಪುತ್ರೋ ಕದಂಬ ತ್ರಿಣೇತ್ರ ಶರ್ಮಣಃ ಪುತ್ರೋ ವೀರಶರ್ಮಣಃ ಶಿಷ್ಯಶ್ಚ ಮಯೂರ ಶರ್ಮಾs ಹಂ ಭವತಶ್ಚರಣಾಂಬುಜ ಚಂಚರೀಕೋ ಭವಾಮಿ ॥ ನನ್ನನ್ನು ಇಂದಿನಿಂದ ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿ ನನಗೆ ಉಪನಿಷತ್ತಿನ ಬ್ರಹ್ಮ ವಿದ್ಯೆಯನ್ನು

ಅನುಗ್ರಹ ಮಾಡಬೇಕೆಂದು ನಮ್ರತೆಯಿಂದ ಸದ್ಗುರು ವೀರಶರ್ಮರ ಆಜ್ಞೆಯಂತೆ ಬೇಡಿಕೊಳ್ಳುತ್ತೇನೆ.

ಆಚಾರ್ಯರು: ಪ್ರಿಯ ಮಯೂರ, ನಿನ್ನ ಹೆಸರು, ಕುಲ ಎಲ್ಲವೂ ನಮಗೆ ಸಂತೋಷವನ್ನುಂಟುಮಾಡಿವೆ. ನಿನ್ನ ವಿಖ್ಯಾತ ಗುರು ನಿನ್ನ ಕುರಿತಾಗಿ ಈಗಾಗಲೇ ವಿವರಗಳನ್ನು ತಿಳಿಸಿದ್ದಾರೆ. ತಮ್ಮೆಲ್ಲರಿಗೆ ಸುಸ್ವಾಗತ. ನನ್ನ ಸಾದರ ಪ್ರಣಾಮಗಳಿಗೆ ಅರ್ಹರಾದ ವೀರಶರ್ಮರು ವಿವರಿಸಿದಂತೆ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಗಳಲ್ಲಿ ಪಾರಂಗತನಾದ ನಿನಗೆ ಪರಮಸಂತೋಷದಿಂದ ಉಪನಿಷದ್ವಿದ್ಯೆಯನ್ನು ಕಲಿಸುತ್ತೇನೆ. ವೀರಶರ್ಮರೇ, ನೀವು ಉಳಿದೆರಡು ವಿದ್ಯಾರ್ಥಿಗಳನ್ನು ಕರೆದುಕೊಂಡು ಒಳಗೆ ನಡೆಯಿರಿ. ಅವರಿಗೆ ಯಾವ ಶಾಸ್ತ್ರವನ್ನು ಕೊಡಿಸಬಹುದೆಂದು ಆಮೇಲೆ ತೀರ್ಮಾನಿಸೋಣ, ನಿಮ್ಮ ಪ್ರಿಯಶಿಷ್ಯ ಮಯೂರನಿಗೆ ಇಂದೇ ಬ್ರಹ್ಮ ವಿದ್ಯಾಭ್ಯಾಸ ದೀಕ್ಷಿತನನ್ನಾಗಿ ಮಾಡುತ್ತೇನೆ.

ವೀ ಶ : ತಥಾಸ್ತು (ರಾಮಶರ್ಮ, ಕೃಷ್ಣಶರ್ಮರು ಒಳಗೆ ಹೋಗುವರು)

ಆಚಾರ್ಯರು: (ದರ್ಭಾಸನವನ್ನು ತೋರಿಸಿ) ಅದೋ ಆ ದರ್ಭಾಸನದ ಮೇಲೆ ಕುಳಿತುಕೋ.

ಮಯೂರ: (ದರ್ಭಾಸನದ ಮೇಲೆ ಕುಳಿತುಕೊಳ್ಳುತ್ತಾನೆ)

ಆಚಾರ್ಯರು: ಇಕೋ ಅತ್ಯಂತ ಕಠಿಣವಾದ ಈ ಬ್ರಹ್ಮವಿದ್ಯೆಯನ್ನು ಕಲಿಯುವಾಗ ನೀನು ದೀಕ್ಷಿತನಾಗಬೇಕಾಗುತ್ತದೆ. ನಿನಗೆ ಆ ವಿದ್ಯೆಯು ಸಾಕ್ಷಾತ್ಕಾರವಾಗುವಂತೆ ದೀಕ್ಷೆಯನ್ನು ನೀಡುತ್ತೇನೆ.

ಮ : (ತಲೆ ಬಾಗಿ ಕುಳಿತಿರುತ್ತಾನೆ. ಧ್ಯಾನಮಗ್ನ ಆಚಾರ್ಯರು ಸಮಾಧಿ ಸ್ಥಿತಿಯಲ್ಲಿ ಅವನ ತಲೆಯ ಮೇಲೆ ಕೈಯನ್ನು ಇಡುತ್ತಾರೆ.)

ಆಚಾರ್ಯರು: ಮಯೂರ

ಮ : (ಧ್ಯಾನ ಸ್ಥಿತಿಯಿಂದ ಎಚ್ಚತ್ತು) ಗುರುದೇವ

ಆಚಾರ್ಯರು: ಬ್ರಹ್ಮ ವಿದ್ಯೆಯನ್ನು ನಾವು ಪ್ರಸ್ಥಾನ ತ್ರಯಿಗಳಾದ ಉಪನಿಷತ್ತು, ಭಗವದ್ಗೀತೆ, ಬ್ರಹ್ಮಸೂತ್ರಗಳ ಮೂಲಕ ತಿಳಿದುಕೊಳ್ಳುತ್ತೇವೆ. ಅವುಗಳಲ್ಲಿ ಬ್ರಹ್ಮಸೂತ್ರವನ್ನು ನಾವು ಇಂದು ಪ್ರಾರಂಭಿಸೋಣ.

ಮ : ಆಜ್ಞೆಯನ್ನು ಅಂಗೀಕರಿಸಿದ್ದೇನೆ

ಆಚಾರ್ಯರು: ಬ್ರಹ್ಮಸೂತ್ರದಲ್ಲಿ ಒಂದು ಸೂತ್ರ ಇದು. (ವೇದಾಂತ ಪಾಠ) ಅಥಾ ತೋ ಬ್ರಹ್ಮ ಜಿಜ್ಞಾಸಾ 'ಅಥ' ಎಂದರೆ ಸಾಧನ ಚತುಷ್ಟಯವನ್ನು ಅಳವಡಿಸಿಕೊಳ್ಳುವುದು.

ಮ : ಸಾಧನ ಚತುಷ್ಟಯಗಳು ಯಾವುವು ಗುರುಗಳೇ?

ಆಚಾರ್ಯರು: ಇಹಾಮುತ್ರ ಫಲಭೋಗ ವಿರಾಗ, ನಿತ್ಯಾ ನಿತ್ಯ ವಸ್ತು ವಿವೇಕ, ಶಮದಮಾದಿ ಸಾಧನ ಸಂಪತ್ತಿ ಮತ್ತು ಮುಮುಕ್ಷತ್ವ ಇವು. ಅತಃ ಎಂದರೆ ಇಹ–ಪರಗಳ ಸುಖಗಳು ನಶ್ವರವಾದುದರಿಂದ ಬ್ರಹ್ಮ ಜಿಜ್ಞಾಸಾ ಎಂದರೆ ನಿತ್ಯ, ಶುದ್ಧ, ಬುದ್ಧ, ಸರ್ವಜ್ಞ, ಸರ್ವಶಕ್ತಿ ಎನ್ನಿಸಿದ ಸೃಷ್ಟಿ, ಸ್ಥಿತಿ, ಲಯಗಳಿಗೆ ಹೇತುವಾದ ಬ್ರಹ್ಮನನ್ನ "ಜಿಜ್ಞಾಸಾ" ಅರಿತುಕೊಳ್ಳುವ ಆಸೆ ಎಂದರ್ಥ.

ಮ : ಬ್ರಹ್ಮ ಎನ್ನುವದು ಯಾರಿಗೂ ಕಾಣಿಸುವುದಿಲ್ಲ ಗುರುಗಳೇ !

ಆಚಾರ್ಯರು: ಅದು ಇಂದ್ರಿಯ ಮನ ಬುದ್ಧಿಗಳಿಗೆ ಕಾಣಿಸುವಂಥದ್ದಲ್ಲ. ಅವುಗಳ ಎಲ್ಲ ಕಾಣ್ಕೆಗಳಿಗೂ ಅದೇ ಮೂಲಾಧಾರ. ಅದನ್ನು ಕಾಣಲು ಅದೇ ಸಾಧನ. ಅನ್ಯಸಾಧನವಿಲ್ಲ.

ಮ : ಧರ್ಮದಿಂದ ಸಾಧ್ಯವಿಲ್ಲವೇ ಗುರುಗಳೇ !

ಆಚಾರ್ಯರು: ಅದನ್ನೇ ಧರ್ಮವೆಂದು ಕರೆದರೆ ಅದರಿಂದ ಸಾಧ್ಯ. ಅಬ್ರಹ್ಮ ಧರ್ಮದಿಂದ ಅಸಾಧ್ಯ.

ಮ : ಬ್ರಹ್ಮವೆಂದರೆಂಥದು?

ಆಚಾರ್ಯರು: ನಿರ್ವಿಕಲ್ಪ ಸಮಾಧಿಯಲ್ಲಿ, ಬೇಕಾದಾಗ, ಬ್ರಹ್ಮ ಲೀನನಾಗಿರುವದು. ಅದೇ ಜೀವನ್ಮುಕ್ತಿ. ಜೀವನ್ಮುಕ್ತನೇ ಜಗತ್ತಿನ ಆದರ್ಶನಾಯಕ, ಅವನ ಯೋಗ್ಯ ಶಕ್ತಿಗೆ ಸಾಧ್ಯವಾಗದ ಕೆಲಸವಿಲ್ಲ.

ಮ : ಇದರ ಅರಿವಾಗುವುದು ಹೇಗೆ?

ಆಚಾರ್ಯರು: ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ – ಎಂದರೆ ಬ್ರಹ್ಮವು ಸತ್ಯ. ಜಗತ್ತು ಅಸತ್ಯ. ಮಾಯೆ, ಜೀವಾತ್ಮ ಪರಮಾತ್ಮರು ಒಂದೇ ಎಂದು ತಿಳಿದುಕೊಳ್ಳಬೇಕು.

ಮ : ಇದನ್ನು ತಿಳಿದುಕೊಳ್ಳುವುದು ಬಹಳ ಕಷ್ಟ ಅಂತ ಕಾಣುತ್ತದೆ ನನಗೆ. ನನಗೆ ಗೊತ್ತಿರುವದು ಕೇವಲ ಸವಿಕಲ್ಪ ಸಮಾಧಿ ಗುರುಗಳೇ!

ಆಚಾರ್ಯರು: ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಸಿಧ್ಯತಿ ಅಭ್ಯಾಸದಿಂದಲೂ ವೈರಾಗ್ಯದಿಂದಲೂ ಕಾಲಕ್ರಮೇಣ ನಿರ್ವಿಕಲ್ಪ ಸಮಾಧಿ ಸಾಧ್ಯವಾಗುತ್ತದೆ. ಸದಾ ಇದರ ಸಾಧನೆಯಲ್ಲೇ ಇರು; ಸಾಧ್ಯವಾಗುತ್ತದೆ. ಚಂಚಲವಾದ ಮನಸ್ಸನ್ನು ನಿಗ್ರಹಿಸಿಕೊಳ್ಳುವ ಸಾಮರ್ಥ್ಯವನ್ನು ಪ್ರಾಥಮಿಕವಾಗಿ ಪಡೆ. ಸಾಕು ಇಂದಿಗೆ. ಈಗ ಸಾಯಂಕಾಲವಾಯ್ತು. ಅರಮನೆಯ ತುತ್ತೂರಿ ಕೇಳುತ್ತಿದೆ. ಸಂಧ್ಯಾವಂದನೆಗೆ ತೆರಳೋಣ.

(ತೆರೆ ಬೀಳುವುದು)

ದೃಶ್ಯ – ೫

(ಮಹಾರಾಜ ಪಲ್ಲವ ಶಿವಸ್ಕಂದ ವರ್ಮನು ದಿನವೂ ದೇವಾಲಯಕ್ಕೆ ಹೋಗುವ ಸಂದರ್ಭ. ರಾಮ ಶರ್ಮ, ಕೃಷ್ಣ ಶರ್ಮರು ಹಿಂದಿನಿಂದ ಬರುತ್ತಾರೆ.)

ಮಯೂರ: (ಸ್ನಾನಕ್ಕಾಗಿ ಕೆರೆಗೆ ಹೊರಟಿದ್ದಾರೆ. ದಾರಿಯಲ್ಲಿ ಕುದುರೆಯನ್ನು ಕಂಡು) ಆಹಾ! ಎಂಥಾ ಚಂದವಾದ ಕುದುರೆಯದು ! ಸುಲಕ್ಷಣ ಸಂಪನ್ನವಾದ ಕುದುರೆಯನ್ನು ನೋಡಿದಾಗ ಇನ್ನೂ ನೋಡಬೇಕೆಂಬ ಕುತೂಹಲ ಕೆರಳುತ್ತದೆ. ಓಹೋ ಅಲ್ಲೇ ಕುದುರೆ ಕಾಸ್ತಾರನೂ ಇದ್ದಾನೆ, ಏ, ಯಾರಯ್ಯಾ?

ಕಾಸ್ತಾರ : ಯಾರು? ಏನು? ಏಕೆ?

ಮಯೂರ: ನೀನು ಆ ಕುದುರೆಯ ಕಾಸ್ತಾರನೇನಯ್ಯಾ?

ಕಾಸ್ತಾರ : ಹೌದು, ಏನಾಗಬೇಕಿತ್ತು?

ಮಯೂರ: ಆ ಕುದುರೆ ಬಹಳ ಸೊಗಸಾಗಿದೆ. ಅದರ ವಿಷಯವಾಗಿ ತಿಳಿಯಬೇಕೆಂಬ ಆಸೆಯಾಯಿತು. ಅದಕ್ಕಾಗಿ ಕರೆದೆ.

ಕಾಸ್ತಾರ : ಹಾಗೋ? ನೀವು ಯಾರು?

(ರಾಮ ಶರ್ಮ, ಕೃಷ್ಣ ಶರ್ಮರು ಆಗಲೇ ಪ್ರವೇಶಿಸುತ್ತಾರೆ)

ಮಯೂರ: ನಾವು ಇದೇ ಕಾಂಚೀನಗರದ ಮಹಾಘಟಿಕಾ ಸ್ಥಾನದಲ್ಲಿ ವಿದ್ಯಾಭ್ಯಾಸ ಮಾಡುವ ಬ್ರಾಹ್ಮಣ ವಟುಗಳು.

ಕಾಸ್ತಾರ : ಓಹೋ! ಬ್ರಾಹ್ಮಣರೋ? ನಮಸ್ಕಾರ ಸ್ವಾಮಿ

ಮ : ಉತ್ತರೋತ್ತರ ಅಭಿವೃದ್ಧಿಯಾಗಲಿ.

ಕಾಸ್ತಾರ : ಧನ್ಯನಾದೆ ಸ್ವಾಮಿ, ಕುದುರೆ ಸಮಾಚಾರ ಕೇಳಿರಿ. ಇದು ನಮ್ಮ ಪಲ್ಲವ ಸಾಮ್ರಾಜ್ಯಕ್ಕೆ ಮಹಾಸಾರ್ವಭೌಮರಾದ ಶಿವಸ್ಕಂದವರ್ಮರ ಯಜ್ಞದ ಕುದುರೆ.

ರಾ ಶ : ಯಾವ ಯಜ್ಞ?

ಕಾಸ್ತಾರ : ಸದ್ಯವೇ ಅಶ್ವಮೇಧಯಾಗವು ನಡೆಯಲಿದೆ. ಅದಕ್ಕಾಗಿ ತರಿಸಿದ ಕುದುರೆಯಿದು.

ಕೃ ಶ : ಇಂಥ ಚಂದವಾದ ಕುದುರೆಯು ಎಲ್ಲಿಸಿಕ್ಕಿತು? ನೀನೇ ತಂದೆಯಾ?

ಕಾಸ್ತಾರ : ಇಲ್ಲ ಇಲ್ಲ ನಮ್ಮ ಮಹಾಮಂತ್ರಿಗಳಾದ ರಹಸ್ಯಾಧಿಕೃತರು ಹುಡುಕಿ ತಂದಿದ್ದಾರೆ.

ಮ : ಈ ಸರ್ವಲಕ್ಷಣ ಸಂಪನ್ನವಾದ ಕುದುರೆಯ ಕಾಸ್ತಾರನಾಗುವುದೂ ನಿನ್ನ ಒಂದು ಪುಣ್ಯವಿಶೇಷವೇ ಸರಿ.

ಕಾಸ್ತಾರ : ಕುದುರೆಯ ಲಕ್ಷಣವನ್ನರಿಯುವ ನಿಮ್ಮ ಸಾಮರ್ಥ್ಯವನ್ನು ಕಂಡು ಆನಂದವಾಗುತ್ತದೆ.

ಮ : ನೀನು ಒಪ್ಪುವುದಾದರೆ ನನ್ನ ಒಂದು ಅಭಿಲಾಷೆಯನ್ನು ಈಡೇರಿಸುವೆಯಾ?

ಕಾಸ್ತಾರ : ಅಪ್ಪಣೆಯಾಗಬೇಕು

ಮ : ಒಮ್ಮೆ ಈ ಕುದುರೆಯನ್ನೇರಿ ಕುಳಿತುಕೊಳ್ಳಬೇಕೆಂಬಾಶೆಯಾಗುತ್ತಿದೆ.

ಕಾಸ್ತಾರ : ಸ್ವಾಮಿ, ಇದು ಯಜ್ಞದ ಕುದುರೆಯಲ್ಲವೇ?

ಮ : ಇನ್ನೂ ಇದನ್ನು ಪೂಜಿಸಿಲ್ಲವಷ್ಟೇ?

ಕಾಸ್ತಾರ : ಮಹಾರಾಜರು ಕಂಡರೆ ಶಿಕ್ಷಿಸಬಹುದಲ್ಲವೇ?

ಮ : ಈಗೆಲ್ಲಿ ಮಹಾರಾಜರು ಬರುತ್ತಾರೆ? ನಾನು ಹೋಗಿ ಹೇಳಿಕೊಡುವುದಿಲ್ಲ.

ಕಾಸ್ತಾರ : ಮತ್ತೆ ಯಾರಿಗೂ ಹೇಳಬೇಡಿ. ನೀವು ಬ್ರಾಹ್ಮಣರು. ನಿಮ್ಮ ಮನಸ್ಸನ್ನು ನೋಯಿಸಿದರೆ ಅನ್ನಾನಗತಿಕರಾಗಬೇಕಾಗುತ್ತದಂತೆ. ಆದರೆ ಈ ಬಡ ಕಾಸ್ತಾರನ ಉದ್ಯೋಗಕ್ಕೆ ಲೋಪಬರದಂತೆ ನೋಡಿಕೊಳ್ಳಬೇಕು.

ರಾ ಶ : ಮಯೂರ, ನಿನಗಾದರೂ ಏಕೆ ಅಷ್ಟು ಆಶೆ? ಆ ಬಡಪಾಯಿಗೆ ತೊಂದರೆಕೊಡಬೇಡ.

ಕೃ ಶ : ಬ್ರಾಹ್ಮಣ ವಟುಗಳಿಗೇಕೆ ಕುದುರೆಯ ಉಸಾಬರಿ?

ಮ : (ಖಿನ್ನನಾಗಿ) (ಸ್ನೇಹಿತರ ಮಾತನ್ನು ಅಲಕ್ಷಿಸಿ) ಏನಯ್ಯಾ ಕಾಸ್ತಾರ? ಒಮ್ಮೆ ಅವಕಾಶ ಕೊಡುವೆಯಾ?

ಕಾಸ್ತಾರ : (ಆತಂಕದಿಂದ) ನಿಮ್ಮ ಉತ್ಕಟ ಇಚ್ಛೆಯನ್ನೂ ಅಲ್ಲಗಳೆಯಲು ಮನಸ್ಸು ಬರುವುದಿಲ್ಲ. ಒಮ್ಮೆ ಏರಿ ಕುಳಿತುಕೊಳ್ಳಿರಿ. ನಾನು ಇಲ್ಲೇ ಸಮೀಪದಲ್ಲಿ ಅಡ್ಡಾಡಿ ಬರುತ್ತೇನೆ. ಕುದುರೆಯ ಬಗ್ಗೆ ಎಚ್ಚರಿಕೆ.

ರಾ ಶ : ಮಯೂರ, ಹುಡುಗಾಟಿಕೆ ತಲೆಗೆ ಬಂದರೆ ನಾವೇನು ಜವಾಬ್ದಾರರಲ್ಲ!

ಕೃ ಶ : ಆಗ ನಮ್ಮನ್ನು ಪಂಚಾಯ್ತಿಯೊಳಗೆ ಸೇರಿಸಿದರೆ ನಾವೇನು ಕೇಳುವವರಲ್ಲ.

ಮ : ನೀವು ಸುಮ್ಮನಿರಿ. ಕುದುರೆ ಏರಿದರೆ ಯಾರಪ್ಪನ ಗಂಟು ನಷ್ಟವಾಗುತ್ತದೆ?

ಭಟ್ಟಂಗಿ : ಸರ್ವಧರ್ಮ ಮತ ಪಂಥ ಪಕ್ಷ ಸಮಾನ ಪೋಷಣ! ಚಾತುರ್ಯ ಸಂಪನ್ನ ವಿವೇಕ ರತ್ನಾಕರಽಽಽಽಽಽ ಭೋಽಽಽಽಽ ಪರಾಕ್! ಶ್ರೀ ಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಪಲ್ಲವ ಸಾಮ್ರಾಜ್ಯಾಧೀಶ್ವರ ಶ್ರೀ ಶ್ರೀ ಶ್ರೀ ಶಿವಸ್ಕಂದವರ್ಮ ಮಹಾರಾಜರು ದೇವಾಲಯಕ್ಕೆ ಬರುತ್ತಿದ್ದಾರೆ ದಾರಿ, ದಾರಿ ಬಿಡಿ.

[ಮುಂದೆ ಇಬ್ಬರು ಪೂಜಾ ಸಾಮಗ್ರಿಗಳನ್ನು ಹಿಡಿದು ಮುಂದುವರಿದಿದ್ದಾರೆ. ನಡುವೆ ರಾಜ ಹಿಂದೆ ಇಬ್ಬರು ಅಂಗರಕ್ಷಕರು ಹೊರಟಿದ್ದಾರೆ.]

ಶಿವಸ್ಕಂದ : (ಎದುರಿನಲ್ಲಿ ನೋಡಿ) ಯಾರಯ್ಯ ಅವನು? ಅಶ್ವಮೇಧಯಾಗಕ್ಕೆಂದು ತಂದ ಕುರುರೆಯಲ್ಲವೇ ಅದು? ಅದರ ಮೇಲೆ ಸವಾರಿ ಮಾಡುತ್ತಿದ್ದಾರಲ್ಲ? ಕಾಸ್ತಾರನೆಲ್ಲಿ? ಅವರನ್ನೂ ಕಾಸ್ತಾರನನ್ನೂ ಎಳೆದು ತನ್ನಿರಿ.

[ಸೈನಿಕರು ಹೋಗಿ ಮೂವರು ಮಕ್ಕಳನ್ನು ಕರೆದು ತರುತ್ತಾರೆ. ಹಿಂದೆ ಕಾಸ್ತಾರನು ನಡುಗುತ್ತಾ ನಿಂತಿರುತ್ತಾನೆ.]

ಶಿವಸ್ಕಂದ : ನೀವು ಯಾರು? ಅಶ್ವಮೇಧಯಾಗಕ್ಕೆಂದು ತಂದ ನಮ್ಮ ಕುದುರೆಯ ಮೇಲೆ ಸವಾರಿ ಮಾಡಲು ನಿಮಗೆ ಹೇಳಿದವರಾರು?

ರಾ ಶ : ಮಹಾ ಪ್ರಭೋ, ನಾವು ಕುದುರೆಯನ್ನು ಹತ್ತ ಹೋದವರಲ್ಲ. ಅವನೊಬ್ಬನೇ ಅದರ ಮೇಲೆ ಸವಾರಿ ಮಾಡಿದವರು (ಮಯೂರನನ್ನು ತೋರಿಸುತ್ತಾರೆ)

ಕೃ ಶ : ನಾವು ಬೇಡ ಬೇಡವೆಂದರೂ ಕೇಳದೆ ಸವಾರಿ ಮಾಡಿದವನು ಅವನೊಬ್ಬನೇ.

(ಮಯೂರನನ್ನು ತೋರಿಸುತ್ತಾನೆ)

ಶಿವಸ್ಕಂದ : ಬ್ರಾಹ್ಮಣರ ಮಕ್ಕಳಿಗೆ ವೇದಾಧ್ಯಯನ ಮತ್ತು ಯಜ್ಞ ಯಾಗಗಳು ಕರ್ತವ್ಯಗಳು ಅವನ್ನು ಬಿಟ್ಟ ಕ್ಷತ್ರಿಯ ಕುಮಾರರಂತೆ ಅದರಲ್ಲೂ ಯಾವ ಅಧಿಕಾರಿಯ ಅಪ್ಪಣೆಯನ್ನೂ ಪಡೆಯದೆ ರಾಜಾಶ್ವವನ್ನೇರುವುದು ಧರ್ಮವೇ?

ಮ : ಮಹಾರಾಜ, ನಾನೇನೋ ಬ್ರಾಹ್ಮಣನೆಂಬುದು ನಿಜ; ನನಗೆ ಕುದುರೆ ಸವಾರಿ ಮಾಡುವ ಅಭ್ಯಾಸವಿದೆ. ಕುದುರೆ ಚೆನ್ನಾಗಿ ಕಾಣಿಸಿತು. ಯಾಗದ ಕುದುರೆಯಾಗಿದ್ದರೂ ಇನ್ನೂ ಪೂಜೆ ಆಗಲಿಲ್ಲವೆಂದು ಕಾಸ್ತಾರನನ್ನ ಕೇಳಿಯೇ ಹತ್ತಿದೆ. ಕ್ಷಮಿಸಬೇಕು.

ಕಾಸ್ತಾರ : ಇಲ್ಲ ಇಲ್ಲ ಪ್ರಭೋ, ಈ ವಟು ಸುಳ್ಳು ಹೇಳುತ್ತಾನೆ. ನನ್ನ ಮಾತನ್ನು ಕೇಳದೆ ಕುದುರೆ ಸವಾರಿ ಮಾಡಿದನು.

ಶಿವಸ್ಕಂದ : ನೀನೇನು ಕೈಗೆ ಬಳೆತೊಟ್ಟಿರುವೆಯಾ?

ಕಾಸ್ತಾರ : ಬ್ರಾಹ್ಮಣರು ಶಾಪ ಕೊಟ್ಟರೇನು ಮಾಡುವುದೆಂದು ಹೆದರಿದೆನು.

ಮಯೂರ: ನಾನು ನಿನ್ನ ಹತ್ತಿರ ಹೇಳಿಯೇ ಕುದುರೆಯನ್ನು ಏರಲಿಲ್ಲವೇ? ಬೇಕಾದರೆ ಅವರನ್ನು ಕೇಳಿ (ರಾಮ, ಕೃಷ್ಣರ ಕಡೆ ಬೆರಳು ಮಾಡಿ)

ರಾ ಶ : ಪ್ರಭೋ ಕಾಸ್ತಾರನನ್ನು ಕೇಳಿ ಏರಿದ್ದು ನಿಜ.

ಕೃ ಶ : ಪ್ರಭೋ ಅಪ್ಪಣೆ ಪಡೆದೇ ಏರಿದ್ದು ನಿಜ.

ಶಿವಸ್ಕಂದ : ತಪ್ಪು ಮಾಡಿದ್ದಲ್ಲದೇ, ಸುಳ್ಳು ಹೇಳಿ ಅರಮನೆಯ ಚಾಕರರ ಮೇಲೆ ಆರೋಪ ಹೊರಿಸುವೆಯಾ? ನೀವು ಬ್ರಾಹ್ಮಣರೇ?

ಮ ಶ : ಮಹಾಪ್ರಭೋ, ನಾನು ಬ್ರಾಹ್ಮಣ ವೀರಶರ್ಮರ ಪಟ್ಟದ ಶಿಷ್ಯ, ಕದಂಬ ಶಿವಸ್ಕಂದ ಶರ್ಮರ ಪುತ್ರ. ಕಾಂಚಿಮಹಾಘಟಿಕಾ ಸ್ಥಾನದ ಕುಲಪತಿ ಆಚಾರ್ಯ ಭಾರದ್ವಾಜರ ಶಿಷ್ಯ. ಅದರಲ್ಲು ಬ್ರಹ್ಮವಿದ್ಯೆಯ ಸ್ನಾತಕೋತ್ತರ ವ್ಯಾಸಂಗ ಮಾಡುತ್ತಿರುವ ನನ್ನ ಮಾತಿನಲ್ಲಿ ತಿಲಾಂಶವೂ ಅಸತ್ಯವಿಲ್ಲ. ಸುಳ್ಳು ಆಡಿಯೇ ನನಗೆ ಗೊತ್ತಿಲ್ಲ ಕ್ಷಮಿಸಬೇಕು.

ಶಿವಸ್ಕಂದ:(ತುಚ್ಛವಾಗಿ) ನನಗೆಲ್ಲ ಗೊತ್ತು. ಅಧಿಕ ಪ್ರಸಂಗಿ, ಮಾತಿನಲ್ಲಿ ಜಾಣನಿರುವೆ ಬಾಯಿ ಮುಚ್ಚು. ಬ್ರಾಹ್ಮಣರಿಗೆ ಇಷ್ಟು ಗರ್ವ ಇರಕೂಡದು. ಯಾರೆದುರಿಗೆ ಮಾತಾಡುತ್ತಿರುವೆ ಎಂದು ಗೊತ್ತೇ? ನೀನು ಮಾಡಿದ ತಪ್ಪಿಗೆ ಚೌಕಿಯವರನ್ನು ಈಡು ಮಾಡಿದೆ. ನೀನು ಆಡಿದ ಸುಳ್ಳಿಗೆ ಕುಲವನ್ನೆ ಸಾಕ್ಷಿಕೊಟ್ಟು ವಂಶವನ್ನು ಗುರುಕುಲವನ್ನು ನರಕಕ್ಕೆ ನೂಕುತ್ತಿರುವೆ.

ಮ : ಮಹಾಪ್ರಭೋ, ತಪ್ಪು ತಿಳಿಯಬಾರದು. ತಾವು ಈ ಸಾಮ್ರಾಜ್ಯದ ಅಧಿಪತಿಗಳು. ನಾನು ಬ್ರಹ್ಮಜ್ಞಾನ ಪಡೆಯಲು ದೀಕ್ಷಿತನಾದ ವಟು. ನಾನು ತಲೆ ಹೋದರೂ ಸುಳ್ಳಾಡಲಾರೆ. ಬ್ರಾಹ್ಮಣರು ಎಂಥ ಪ್ರಸಂಗದಲ್ಲಿಯೂ ಸುಳ್ಳಾಡುವುದಿಲ್ಲ. ನನ್ನಿಂದಾದ ತಪ್ಪನ್ನು ಮನ್ನಿಸಬೇಕು. (ನಮಸ್ಕರಿಸಿ) ಸ್ವಲ್ಪ ವಿವೇಕದಿಂದ ನೋಡಬೇಕು.

ಶಿವಸ್ಕಂದ : ನನಗೆ ಎದುರಾಡುವೆಯಾ ಮೂರ್ಖ. ಉದ್ಧಟ ಬ್ರಹ್ಮಜ್ಞಾನ ತಮ್ಮ ಸ್ವಂತ ಆಸ್ತಿ ಎಂದು ಕೊಂಡಿರುವ ಬ್ರಾಹ್ಮಣರ ವಿತ್ತ ಜೀವಿತಗಳ ರಕ್ಷಣೆ ಕ್ಷತ್ರಿಯರಿಂದಲೇ ಆಗುತ್ತದೆ ಎಂಬುದನ್ನು ನೀನು ತಿಳಿದಿಲ್ಲವೇ? ನನಗೇ ವಿವೇಕ ಹೇಳುವೆಯಾ? ಬ್ರಾಹ್ಮಣರು ಕ್ಷತ್ರಿಯರನ್ನು ಗೌರವಿಸುವುದನ್ನು ಕಲಿಯಬೇಕು. ವಿನಯ ಶೂನ್ಯ ಪಶು. ನಿನ್ನಂತೆಯೇ ನಿನ್ನ ಕುಲವಿರಬೇಕು.

ಮ : (ಸಿಟ್ಟಿನಿಂದ) ಮಹಾರಾಜ, ಒಂದು ಸಣ್ಣ ತಪ್ಪಿಗೆ ಕ್ಷಮೆ ಕೇಳುತ್ತಿದ್ದರೂ ನೀವು ನನ್ನ ಕುಲಶೀಲವನ್ನೇ ನಿಂದಿಸತೊಡಗಿದಿರಿ. ಜೊತೆಗೆ ಬ್ರಹ್ಮಸಿದ್ಧಿ ಕ್ಷತ್ರಿಯಾಧೀನವೆಂದಿರಿ. ಮನುಸ್ಮೃತಿ ಏನೆಂದಿದೆ? ಶಸ್ತ್ರಂ ದ್ವಿಜಾತಿ ಭಿರ್ಗ್ರಾಹ್ಯಂ ಆಪತ್ಕಾಲದಲ್ಲಿ ಬ್ರಾಹ್ಮಣರೂ, ವೈಶ್ಯರೂ ಕ್ಷಾತ್ರ ಧರ್ಮವನ್ನು ಹಿಡಿಯಬೇಕೆಂದಲ್ಲವೇ? ಇದೋ ನೀವು ತಿಳಿದಿರಲಿಕ್ಕಿಲ್ಲ. ತಿಳಿಸುತ್ತೇನೆ ಧಿಗ್ಬಲಂ ಕ್ಷತ್ರಿಯ ಬಲಂ, ಬ್ರಹ್ಮತೇಜೋ ಬಲಂ ಬಲಂ.

ಶಿವಸ್ಕಂದ : ಎಳೆದು ಹಾಕಿರಿ ಅವನನ್ನು

ಭಟರು : (ಮಯೂರನನ್ನು ಎಳೆದು ನಿಲ್ಲಿಸುತ್ತಾರೆ)

ಮಯೂರ: (ಬುಸುಗುಡುತ್ತ) ಎಲೋ ಮದಾಂಧನಾದ ರಾಜನೇ ನನ್ನ ಪ್ರತಿಜ್ಞೆಯನ್ನು ಕೇಳು. ಬ್ರಾಹ್ಮಣ ಬ್ರಹ್ಮ ತೇಜಸ್ಸಿನ ಬೆಂಕಿಯನ್ನು ಕೆರಳಿಸಿ ಮೈಮೇಲೆ ಹಾಕಿಕೊಂಡಿರುವ ನಿನ್ನ ದುರಹಂಕಾರಕ್ಕೆ ಧಿಕ್ಕಾರ. ನಾನು ಕನ್ನಡ ನೆಲದಲ್ಲಿ ಹುಟ್ಟಿ, ಅದರ ಜಲ, ಗಾಳಿ, ಅನ್ನವನ್ನುಂಡದ್ದು ಸತ್ಯವಾಗಿದ್ದರೆ, ಕದಂಬ ಶಿವಸ್ಕಂದನ ಪುತ್ರನಾಗಿದ್ದದ್ದು ನಿಜವಾಗಿದ್ದರೆ, ಶುಕ್ರಾಚಾರ್ಯ ಪ್ರಣೀತ ದಂಡನೀತಿ ಶಾಸ್ತ್ರವನ್ನು ಆಚಾರ್ಯ ವೀರಶರ್ಮರಿಂದ ಕಲಿತು ಅವರ ಪರಂಪರಾಧರ್ಮ ಪುತ್ರನಾಗಿದ್ದರೆ, ಬ್ರಹ್ಮವಿದ್ಯೆಯನ್ನು ಕಲಿಸಿದ ಆಚಾರ್ಯ ಭಾರದ್ವಾಜರ ಪ್ರಿಯ ಶಿಷ್ಯ ಹೌದಾಗಿದ್ದರೆ, ಬ್ರಾಹ್ಮಣನಾದ ಪರಶುರಾಮ ೨೧ ಸಲ ಭೂ ಪ್ರದಕ್ಷಿಣೆ ಮಾಡಿ ಕ್ಷತ್ರಿಯರನ್ನೆಲ್ಲ ಸಮೂಲ ನಾಶಮಾಡಿದಂತೆ ನಿನ್ನ ಗರ್ವವನ್ನು ಹಿಂಡದಿದ್ದಲ್ಲಿ ನಾನು ಮಯೂರ ಶರ್ಮನಲ್ಲ.

ಭಟರು : (ಅವನನ್ನು ಎಳೆಯಲು ಹೋಗುತ್ತಾರೆ)

ಶಿವಸ್ಕಂದ : ಆ ಹುಚ್ಚು ಹುಡುಗನನ್ನು ಬಿಟ್ಟು ಬಿಡಿರಿ, ಅದೇನು ಮಾಡೀತು? ಗುರುಗಳ ಹತ್ತಿರ ಹೋಗಿ ಅತ್ತರೆ ಕಪಾಳ ಮೋಕ್ಷವಾದೀತು. ನಡೆಯಿರಿ ಪೂಜೆಗೆ ತಡವಾಗುತ್ತದೆ.

(ಹೋಗುತ್ತಾರೆ)

ಮ : (ಆ ಕಡೆಗೇ ನೋಡಿ) ಹುಚ್ಚು ಹುಡುಗ, ಅದೇನು ಮಾಡೀತು... ಗುರುಗಳಿಂದ ಕಪಾಳಮೋಕ್ಷವಾದೀತು (ಕಟ ಕಟನೆ ಹಲ್ಲು ಮಸೆದು) ಅಲ್ಲವೇ? ಬ್ರಾಹ್ಮಣ ನಿಂದೆ ಮಾಡಿ ಅಪಮಾನ ಪಡಿಸಿದ ನಿನ್ನ ಪೂಜೆಯನ್ನು ಆ ಶಿವನು ಸ್ವೀಕರಿಸುವನೇ? ಈ ಭೂಮಿಯನ್ನು ಗೆದ್ದವನು ಬ್ರಾಹ್ಮಣ, ತಿರುಗಿ ಪಾಲಿಸಲೆಂದು ಕ್ಷತ್ರಿಯರಿಗೆ ಕೊಟ್ಟವನೂ ಬ್ರಾಹ್ಮಣ ಅಂತ ಬ್ರಾಹ್ಮಣ ವಂಶಕ್ಕೇ ಅಪಮಾನವೆಸಗುತ್ತಿರುವ ಕ್ಷತ್ರಿಯನು ಕೃತಘ್ನ.

ರಾ ಶ : ಹೋಗಲಿ, ಬಿಡು ಮಯೂರ, ಬಡವನ ಕೋಪ ದವಡೆಗೆ ಕೇಡಂತೆ.

ಕೃ ಶ : ಸಿಟ್ಟಿಗೆ ಬುದ್ಧಿ ಕೊಡಬಾರದು ಮಯೂರ. ಎಷ್ಟೆಂದರೂ ಕೈಯಲ್ಲಿ ಅಧಿಕಾರವಿದ್ದವರು ದರ್ಪ ತೋರಿಸುತ್ತಾರೆ. ಸಹಿಸಿಕೊಳ್ಳದೆ ಬೇರೆ ದಾರಿ ಇದೆಯೇ?

ಮ : ಥೂ–ನಾಚಿಕೆಗೇಡಿಗಳೇ, ತುತ್ತು ಕೂಳಿಗಾಗಿ ನಾವು ಬದುಕುತ್ತಿದ್ದೇವೆಯೇ? ಸ್ವಾಭಿಮಾನ ಶೂನ್ಯವಾದ ಬಾಳಿಗೆ ದಿಕ್ಕಾರ ನೀವು ಬೇಕಾದರೆ ತಿರುಪೆ ಬೇಡಿ ತಿನ್ನಿ. ನಾನು ಈ ಸೇಡನ್ನು ತೀರಿಸಿಕೊಳ್ಳದೇ ಇರಲಾರೆ.

ರಾ ಶ : ಅದು ಹೇಗೆ?

ಮ : ಶಾಪಾದಪಿ, ಶರಾದಪಿ.

ಕೃ ಶ : ನಿನ್ನ ಕೊನೆಯ ನಿರ್ಣಯವೇನು?

ಮ : ನಾನು ಇಂದೇ ಗುರುಗಳನ್ನು ಕಂಡು ಮಾತಾಡಿ ಈ ಸೇಡನ್ನು ತೀರಿಸಿಕೊಳ್ಳಲು ದಾರಿ ಹುಡುಕಲು ಹೊರಡುತ್ತೇನೆ. ನೀವು ಬೇಕಾದರೆ ಇಲ್ಲೇ ಇರಿ.

ರಾ ಶ : ನಾನೂ ನಿನ್ನ ಜೊತೆಗೇ ಬರುತ್ತೇನೆ.

ಕೃ ಶ : ನಾನೂ ಅಷ್ಟೇ.

ಮ : ಬೇಡ, ಕೃಷ್ಣಶರ್ಮ ನೀನು ಇಲ್ಲಿಯೇ ಇರು. ನಮ್ಮ ಬೇಹುಗಾರವಾಗಿ ಇಲ್ಲಿಯ ಸಮಾಚಾರ ತಿಳಿಸುತ್ತಿರು. ರಾಮಶರ್ಮ ನನ್ನ ಜೊತೆಗೆ ಬರಲಿ. ನಾನು ಆಗಾಗ ವೇಷಾಂತರಗಳಿಂದ ಅವನನ್ನು ಕಳಿಸುತ್ತೇನೆ. ಅವನ ಮುಖಾಂತರ ಸಮಾಚಾರವನ್ನು ತಿಳಿಸಲು ಅನುಕೂಲವಾಗುತ್ತದೆ.

ಕೃ ಶ : ಹಾಗೆಯೇ ಆಗಲಿ. ನನ್ನನ್ನು ಎಂದಿಗೂ ಮರೆಯಬೇಡ

ಮ : ಇಲ್ಲ ನೀನೂ ಮಿತ್ರದ್ರೋಹಿಯಾಗಬೇಡ.

ಕೃ ಶ : ಸರ್ವಥಾ ಆಗಲಾರೆ, ಈ ಯಜ್ಞೋಪವೀತವೇ ಸಾಕ್ಷಿ, ಸೂರ್ಯ ಚಂದ್ರರೇ ಸಾಕ್ಷಿ, ಗಾಯತ್ರಿಯೇ ಸಾಕ್ಷಿ.

ಮ : ಧನ್ಯನಾದೆ. ಎಲ್ಲರೂ ಗುರುಗಳಾದ ವೀರಶರ್ಮರನ್ನು ಕಂಡು ಮುಂದಿನ ಹಂಚಿಕೆ ಮಾಡೋಣ. ನಡೆಯಿರಿ.

(ತೆರೆ ಬೀಳುವದು)

ದೃಶ್ಯ–೬

(ಅರಣ್ಯ)

(ಶ್ರೀ ಪರ್ವತದ ಘೋರಾರಣ್ಯ. ಹುಲಿ, ಕರಡಿ, ಸೀಳುನಾಯಿ–ಮುಂತಾದ ಕ್ರೂರ ಮೃಗಗಳ ಗರ್ಜನೆ ತೆರೆಯ ಹಿಂದೆ. ಎತ್ತರವಾದ ಸ್ಥಳದಲ್ಲಿ ಒಂದು ಪರ್ಣ ಕುಟೀರ. ಅದರಲ್ಲಿ ಮಯೂರಶರ್ಮ, ವೀರಶರ್ಮರು ವೀರಾಸನದಲ್ಲಿ ಕುಳಿತಿದ್ದಾರೆ. ಸುತ್ತಲೂ ಬೇಡಪಡೆಯ ಒಡೆಯರು.)

ವೀ ಶ : ನಮ್ಮ ನೆಚ್ಚಿನ ಬೇಡಪಡೆಯೊಡೆಯರೇ, ಸ್ವಾಭಿಮಾನಿಗಳೇ, ಶೂರರೇ, ನೀವು ಧರ್ಮಶಾಸ್ತ್ರಾನುಸಾರ ಭಾರತ ರಾಜ್ಯಗಳ ಹೊರವಲಯಗಳಲ್ಲಿ ಧರ್ಮಪಾಲನೆ ಮಾಡತಕ್ಕ ಅಧಿಕಾರವುಳ್ಳವರು. ಊರು ಕಾಡಾದಾಗ ಕಾಡು ಊರಾಗಬೇಕು. ಕ್ಷತ್ರಿಯರು ರಾಜ್ಯಾಧಿಕಾರ ಸಂಪನ್ನರು. ಅವರು ಧರ್ಮಪಾಲನೆ ಮಾಡದೆ ಮದೋನ್ಮತ್ತರಾಗಿ ಅರಾಜಕತೆಗೆಡೆಕೊಟ್ಟಾಗ, ರಾಜಶೋಷಣೆಗವಕಾಶ ಕೊಟ್ಟಾಗ ಸ್ವಾಭಿಮಾನಿಗಳಾದ ಮತ್ತು ಪರೋಪಕಾರಿಗಳಾದ ವಿದ್ವಜ್ಜನರನ್ನು ಅವಮಾನಿಸಿದಾಗ ದೀನದಲಿತ ದರಿದ್ರರಿಗೆ ನ್ಯಾಯ ದೊರಕದಂತೆ ಮಾಡಿದಾಗ ಪಾತ್ರಾಪಾತ್ರ ವಿವೇಕವನ್ನು ಕಡೆಗಣಿಸಿದಾಗ, ಮೋಸ, ವಂಚನೆ, ದ್ರೋಹ, ಪರಪೀಡೆಗಳಲ್ಲಿ ನಿರತರಾದಾಗ, ಅಧರ್ಮವು ನೆಲೆವಾಸವಾದಾಗ, ಪರಶುರಾಮನು ಮದಾಂಧನಾದ ಕಾರ್ತವೀರ್ಯಾರ್ಜುನನನ್ನೂ ಅವನ ೨೧ ತಲೆಮಾರುಗಳ ಅರಸರನ್ನೂ ಸಂಹರಿಸಿದ್ದು ಧರ್ಮಸಂಸ್ಥಾಪನೆಗಲ್ಲವೇ? ಆದ್ದರಿಂದಲೇ ಶ್ರೀರಾಮನಂಥ ಒಳ್ಳೆಯ ರಾಜರು ಹುಟ್ಟುವಂತಾದದ್ದು. ಅಂದಿನಂತೆಯೇ ಇಂದೂ ಪಲ್ಲವೇಂದ್ರನು ಮಲೆತು ಮಯೂರನನ್ನು ಅವಮಾನಿಸಿದ್ದು ಸಾಂಕೇತಿಕ. ಅಧರ್ಮವು ಹೆಚ್ಚಿದ್ದಕ್ಕೆ ಇದೇ ಪ್ರಮಾಣವಲ್ಲವೇ? ಇದು ಕ್ಷಮ್ಯವೇ?

ಬೇಡ : ಗುರುಗೋಳೇ, ಅಕ್ಷಮ್ಯ. ಎಂದೆಂದೂ ಅಕ್ಷಮ್ಯ. ನಾವಿನ್ನು ಸುಮ್ಮನಿರಾಕಿಲ್ಲ. ನಾವೇನ ಹೆಂಬೇಡಿಗೋಳಲ್ಲ; ಧರ್ಮಕ್ಕಾಗಿ ಜೀವ ಕೊಡತೇವ್. ಸಾಮಿ, ತಮ್ಮ ಪಾದದಾಣೆ. ಅಪ್ಣೆ ಕೊಟ್ಟರೆ ನಾವು ಬಿಡಾಂಗಿಲ್ಲ. ಆ ಪಲ್ಲವೇಂದ್ರನ ಸೇನೆ ಅದೇಟ್ ಇರತಾವ್ ನೋಡತೇವ್.

ಬೇಡರ ಜದ್ಧ ಕೂಟಯುದ್ಧ. ಅಲ್ಲೋಲ ಕಲ್ಲೋಲ್ ಮಾಡತೇವ್; ಅವನ್ನೆಲ್ಲ ಮಯೂರಪ್ಪನೋರೆ ಅಂದ ಹಾಗೆ ಈಗ ನಾವೆಲ್ಲಾ ಸುತ್ತಾ ಮುತ್ತಾನಾಗೀನ್ ರಾಜ್ಯದೊಳಗೆಲ್ಲ ಲೂಟಿ ಮಾಡಾಕ್ ಹೊರಟೇವ್. ಬೇಹಗಾರಿ ನಡ್ಸತಾರ್ ಸುದ್ಧಿ ತಿಳಿತಾರ್. ದೇವರಂತ ಮಯೂರಪ್ಪನೋರ್ಗೆ ನಾವ್ ಶೇವಕರು ಆಗೇವ್. ಏರ್ಗಖಂಡ ಪಲ್ಲವ್ರೋರ್ ಸೇನೆರಾಕ್ಸಸರ್ಗೆ ಈಟಿ, ಬಲ್ಲೆ, ರುಚಿ ತೋರ್‍ಸತೇವ್. ನೆಲ ಬಗ್ಧ ಹಂದಿ ಸೀಳದಾಂಗ ಸೀಳತೇವ್, ಸುಲ್ಗೆ ಮಾಡ್ತೇವ್ ಕಾಡತೇವ್. ಅವರ ಮದ ಇಳ್ಸತೇವ್.

ಮಯೂರ: ಧರ್ಮಸೇವಕರಾದ ಬೇಡಗೆಳೆಯರೇ, ನಿಮಗೆ ನಾನು ಋಣಿ. ನಿಮಗಿರುವ ಧರ್ಮಾಧರ್ಮ ವಿವೇಕವು ಪಲ್ಲವೇಂದ್ರನಿಗಿದ್ದಿದ್ದರೆ ಈ ದುಷ್ಟ ರಕ್ಕಸ ಸರಕಾರ ಇಂದು ಇರುತ್ತಿದ್ದಿಲ್ಲ; ಮೋಸ, ವಂಚನೆ, ಲಂಚಗಳಿಂದ ಐಷಾರಾಮದ ಜೀವನ ನಡೆಸುವ ಸರದಾರಿಕೆ ಇಲ್ಲಿ ಮೈದೋರುತ್ತಿರಲಿಲ್ಲ. "ಹೇಳುವುದು ಕಾಶೀಖಂಡ, ತಿನ್ನುವುದು ಮಶೀಕೆಂಡ" ಎಂಬ ದಂಡನಾಯಕರಿಲ್ಲಿ ಹಬ್ಬುತ್ತಿರಲಿಲ್ಲ. ಗುಪ್ತವಧೆ, ಹಗಲು ದರೋಡೆ, ಬ್ರಾಹ್ಮಣ ದ್ವೇಷ ಬೆಳೆಯುತ್ತಿರಲಿಲ್ಲ. ಬಡವರನ್ನು ಗುಲಾಮರಿಗಿಂತಲೂ ಕೀಳಾಗಿ ನಡೆಸುತ್ತಿರಲಿಲ್ಲ. ದರ, ಕರ, ಕಂದಾಯಗಳು ಆಕಾಶದೆತ್ತರಕ್ಕೇರುತ್ತಿರಲಿಲ್ಲ. ನಮಗೀ ಅಹನ್ಯಹನಿ ಕಾಲಕ್ಷೇಪ ಕೂಡಾ ಸಾಧ್ಯವಾಗದಂತಾಗುತ್ತಿರಲಿಲ್ಲ. ಈ ನೆಲ, ಈ ನೀರು, ಈ ಗಾಳಿ ಎಂದೆಂದೂ ಇಷ್ಟು ಕಾಲ ಅಧರ್ಮವನ್ನು ಸಹಿಸಿದ್ದಿಲ್ಲ, ಇನ್ನು ಸಹಿಸಲಾರೆವು. ಅಷ್ಟೇ ಅಲ್ಲ, ನರ್ಮದೆ, ಗೋದಾವರಿಗಳಿಂದ ಶರಾವತಿ, ಕಾವೇರಿವರೆಗಿನ ಕನ್ನಡ ಜನ ಇನ್ನೂ ಕತ್ತು ಬಗ್ಗಿಸಿ ಕುಳಿತುಕೊಂಡಿರಲಾರರು. ನೀವು ಬಿಲ್ಲು ವಿದ್ಯೆಯಲ್ಲಿ ಪಾರಂಗತರು. ಕೂಟಯುದ್ಧ ಪ್ರವೀಣರು. ಗಟ್ಟಿಮುಟ್ಟಾದ ದೇಹವುಳ್ಳ ನಿಸರ್ಗದ ಮಕ್ಕಳು. ಈಗಾಗಲೇ ನಮ್ಮ ಗುರುಗಳು ನಿಮಗೆ ಹಲವಾರು ಇತರೇ ಆಯುಧ ಪ್ರಯೋಗಗಳನ್ನೂ ಕಲಿಸಿದ್ದಾರೆ. ನಿಮ್ಮದು ಕನ್ನಡದ ಕೆಚ್ಚು. ನೀವು ನನ್ನ ಎಡಗೈ–ಬಲಗೈ–ಗಳು. ಈಗಾಗಲೇ ನೀವು ನನ್ನ ಆಜ್ಞೆಯಂತೆ ಅಲ್ಲಿ ಇಲ್ಲಿ ಕೊಳ್ಳೆ ಹೊಡೆದು ಪಲ್ಲವರ ಎದೆಯನ್ನು ನಡುಗಿಸಿದ್ದೀರಿ. ನನ್ನ ಸ್ನೇಹಿತ ನಿಮ್ಮ ಜನರಂತೆ ಕುರ್ ಮಾಮನ ವೇಷದಿಂದ ರಾಜ್ಯದ ಹಲವಾರು ಕಡೆಗೆ ಈಗಾಗಲೇ ಸಂಚರಿಸಿ ಬೇಹುಗಾರಿಕೆ ನಡೆಸಿ ತಿಳಿಸುತ್ತಿದ್ದಾನೆ. ಇನ್ನು ತಡಬೇಡ. ನಾವು ಸಾಕಷ್ಟು ಪ್ರಮಾಣದಲ್ಲಿ ಕೂಡಿಕೊಂಡಿದ್ದೇವೆ. ಇನ್ನು ನಮ್ಮ ಕೂಟಯುದ್ಧದ ಮೊದಲ ಅಂಕವನ್ನು ಆರಂಭಿಸೋಣ, ಪಲ್ಲವರ ಸೊಕ್ಕನ್ನು ಮದ್ದಾನೆಯನ್ನು ಮುರಿದ ಸಿಂಹದಂತೆ ಮುರಿದು ಮುಕ್ಕೋಣ.

ಬೇಡರು : ನಾಯಕರೇ, ಒಡೆಯರೇ, ಗುರುಗೊಳೇ, ನಿಮ್ಮಾತೀಗ್ ಎರಡಿಲ್ಲ. ನಮ್ಮ ತಾವ್ ಬ್ಯಾಟಿ ಪ್ರಾಣಿ ಅದಾವ ಮಂಗ, ಕರಡಿ, ನಾಯಿ ಅವೂ ಹೊರಡತಾವ್. ದೆವ್ವದಂತ ದಂಡು ನಮ್ಮದದಾವ್, ಹೊರಡತಾವ್. ಎ ಲೆ ಲೆ ಲೆ ಲೆ ઽ ઽ ઽ ઽ ઽ ಬಲ್ಲೆ, ಬಲ್ಲೆ, ಬಲ್ಲೆ, ಬಲ್ಲೇ, ઽ ઽ ઽ ઽ ದೊಡ್ಡಯ್ಯ, ಗಿಡ್ಡಯ್ಯ, ಎದ್ದಯ್ಯ ઽ ઽ ઽ ઽ, ಗೇಣಯ್ಯ, ಬೆರಳಯ್ಯ, ಬ್ಯಾಟಯ್ಯ, ಮಾದಯ್ಯ ઽ ઽ ઽ ઽ ಈಟಿ, ಬಲ್ಲೆ, ಭರ್ಚಿ, ಬಿಲ್ಲು ಬಾಣ ತರಬೇಕಲೇ ઽ ઽ ઽ ઽ ಕತ್ತಿ, ಗುರಾಣಿ, ಕವಣಿ, ದೊಣ್ಣೆ ತಾರಲೇ ઽ ઽ ઽ ઽ, ಹೊಂಡಿ, ಹೊಂಡಿ, ಹೊಂಡಿ ઽ ઽ ઽ ઽ

ಹಿನ್ನೆಲೆ ಸಂಗೀತ (ರೂಪಕ ತಾಳ)

ಹೊರಟೆವಿದೊ । ಹೊರಟೆವಿದೋ!
ವೀರ ಬೇಡ । ಪಡೆಯಿದೋ। ಹೊರಟೆವು॥
ಬಿಲ್ಲು ಬಾಣ । ಕತ್ತಿ ಈಟಿ । ಭರ್ಚಿಗಳನು ತನ್ನಿರೋ
ಕವಣಿ ಹಗ್ಗ । ದೊಣ್ಣೆ ಕಲ್ಲು । ಗಳನು ಎತ್ತಿ ತನ್ನಿರೋ
ಬೆಂಕಿಯಿಡಲು । ಸೂಡಿಗಳನು । ಹೊತ್ತಿಸಿ ಸುಡಲೆಂದು
ಸೇತುಗಳನು । ಮುರಿದು ಕೆರೆಯ । ಬತ್ತಿಸಿ ಬಿಡಲೆಂದು
ಸರದಾರರ । ಕಣಜಗಳನು । ಬರಿದು ಮಾಡಿಲೇಳಿರಿ
ಡೊಳ್ಳು ಹೊಟ್ಟೆ । ಯವರ ಡೊಳ್ಳ । ಬಿರಿದು ಒಡೆಯಲೇಳಿರಿ ॥

ಏಕತಾಳ

ಜಯ ದಣ್ಣಾಯಕ ಮಯೂರಪ್ಪನಿಗೆ
ಜಯ ಬನವಾಸಿಯ ಹುಲಿರಾಯನಿಗೆ
ಜಯ ಕನ್ನಡ ಬೇಡರ ಮನೆ ದೇವನಿಗೆ
ಜಯ ನೆತ್ತರ ಬಲಿ ಕನ್ನಡವ್ವನಿಗೆ!

(ತೆರೆಯ ಹಿಂದೆ ಕೂಡ ಕೋಲಾಹಲ ಧ್ವನಿ)

ದೃಶ್ಯ–೭

(ಪಲ್ಲವೇಂದ್ರನ ಸೈನಿಕರು ಅಂತಪಾಲರು ಓಡುತ್ತಿದ್ದಾರೆ.)

ಅಂತಪಾಲ: (ಏದುಸಿರು ಬಿಡುತ್ತಾ) ಅಂತೂ ಇಂತೂ ಜೀವ ಹಿಡಿದುಕೊಂಡು ರಾಜಧಾನಿಗೆ ಬಂದು ಮುಟ್ಟುವ ತನಕ ಜೀವದ ಭರವಸೆ ಇದ್ದಿದ್ದಿಲ್ಲ. ಇನ್ನು ಭಯವಿಲ್ಲ. ಆದರೆ ರಾಜನಿಗೆ ಮುಖ ತೋರಿಸುವುದು ಹೇಗೆ? ಏನೇ ಆಗಲಿ ಅಷ್ಟೆಲ್ಲಾ ಸೈನಿಕರು ಮಡಿದ ಮೇಲೆ ರಾಜನಿಗೆ ವಿಷಯ ತಿಳಿಸಿ, ಮುಂದಿನ ಅಪ್ಪಣೆ ಆದಂತೆ ಮಾಡುವುದು (ಹೋಗುವನು).

(ಮಂತ್ರಿಯು ನಗರ ಸಂಚಾರ ಮುಗಿಸಿ ಹಿಂತಿರುಗುತ್ತಿರುವನು)

ಮಹಾಮಂತ್ರಿ: ಅರಣ್ಯದಲ್ಲಿ ಕೂಟಯೋಧರ ಕಾಟ. ಉಪಟಳ ವಿಪರೀತವಾಗಿದೆ. ರಾಜ್ಯದಲ್ಲಿ ಕೊಲೆ, ಸುಲಿಗೆ, ಲೂಟಿ ಮಿತಿ ಮೀರಿದೆ. ಧರ್ಮ ಹೋಗಿ ಅಧರ್ಮವೇ ಜಾಗ್ರತವಾದ ಸ್ಥಿತಿ ಕಾಣುತ್ತಿದೆ. ಈ ಎಲ್ಲವುಗಳೂ ತಲೆಬಿಸಿ ಮಾಡುತ್ತಿವೆ. ನಗರ ಸಂಚಾರ ಕೈಕೊಂಡು ರಾಜಧಾನಿಯಲ್ಲಿ ಏನಾದರೂ ಅವ್ಯವಸ್ಥೆ ಉಂಟಾಗಿದೆಯೋ ಎಂದು ನೋಡುವುದು ಮಂತ್ರಿಯಾದ ನನ್ನ ಕರ್ತವ್ಯ. ರಾಜ ಉದಾಸೀನನಾಗಿ ಅಧರ್ಮದತ್ತ ಒಲಿಯುತ್ತಿರುವಾಗ ಮಹಾಮಂತ್ರಿಯು ಧರ್ಮರಕ್ಷಣೆ ಮಾಡಬೇಕೆಂದಿದ್ದರೆ, ನನ್ನ ಕರ್ತವ್ಯ ನಿರ್ವಹಣೆ ಮಾಡದೆ ಬೇರೆ ಗತಿಯಿಲ್ಲ. ಓ! ಅದಾರು ಓಡುತ್ತಿರುವವರು? ನಮ್ಮ ಅಂತಪಾಲರಂತೆ ಕಾಣುತ್ತಿದೆಯಲ್ಲ! ಇತ್ತ ಕಡೆಗೇ ಓಡಿ ಬರುತ್ತಿದ್ದಾರೆ. ಏನೋ ವಿಶೇಷ ನಡೆದಿರಬೇಕು. ಬರಲಿ ನೋಡೋಣ.

ಅ.ಪಾ. : ಮಹಾಮಂತ್ರಿಗಳು ಒಳ್ಳೆಯದೇ, ಆಯಿತು. (ನಮಸ್ಕರಿಸಿ) ನಮಸ್ಕಾರ ಮಂತ್ರಿವರ್ಯರಿಗೆ.

ಮ ಮ : ಅಂತಪಾಲರೇ, ನಿಮ್ಮನ್ನು ಕೂಟಯೋಧರ ಸೊಕ್ಕನ್ನು ಮುರಿಯಲು ಕಳಿಸಿದ್ದೆವಲ್ಲವೇ?

ಅ ಪಾ : ಹೌದು, ನಾವೇ ಅಲ್ಲಿಗೆ ಹೋದವರು.

ಮ ಮ : ಏಕೆ ಭಯವಿಹ್ವಲವಾಗಿ ಓಡಿ ಬರುತ್ತಿದ್ದೀರಿ? ಏನಾಯಿತು? ಏನು ಸಮಾಚಾರ?

ಅ ಪಾ : ಆ ಕೂಟಯೋಧರ ಸಂಖ್ಯೆ ಅಗಣಿತವಾಗಿದೆ. ಅವರೆಲ್ಲ ಕಿರಾತರು. ಅವರಿಗೆ ಜೀವದ ಭಯವಿಲ್ಲ. ಕೂಟಯುದ್ಧದಲ್ಲಿ ಪಳಗಿದ್ದಾರೆ. ಶಸ್ತ್ರವಿದ್ಯೆಯಲ್ಲಿ ಅವರನ್ನು ಮೀರಿಸಲು ನಮ್ಮಿಂದ ಆಗಲಿಲ್ಲವೆನ್ನಲು ನಾಚಿಕೆ ಪಡುತ್ತೇವೆ.

ಮ ಮ : ಅವರಿಗೆಲ್ಲ ನಾಯಕನಾರು?

ಅ ಪಾ : ಮಯೂರನೆಂಬ ಯುವಕನೆಂದು ಪತ್ತೆ ಹಚ್ಚಿದೆವು. ಅವನೇ ಮೊದಲು ಇಲ್ಲಿಯೇ ವಿದ್ಯಾಭ್ಯಾಸಕ್ಕೆ ಇದ್ದನಂತೆ. ಮಹಾರಾಜರಿಂದ ಅವನಿಗೊಮ್ಮೆ ಅಪಮಾನವಾಗಿತ್ತಂತೆ. ಈಗ ಕಿರಾತರ ದೊಡ್ಡ ಪಡೆಯನ್ನೇ ಸಿದ್ಧಗೊಳಿಸಿದ್ದಾನೆ.

ಮ ಮ : ನನಗೆ ಗೊತ್ತು. ಬ್ರಾಹ್ಮಣನಿಗೆ ಮಾಡಿದ ಅಪಮಾನದ ದಾವಾಗ್ನಿ ಒಂದು ದಿನ ರಾಜ್ಯಕ್ಕೆ ಅಪಾಯ ತರುತ್ತದೆ ಎಂದು. ಇರಲಿ. ಅವನ ಉಪಟಳವೇನು?

ಅ ಪಾ : ಸುತ್ತಮುತ್ತಲಿನ ಚಿಕ್ಕಪುಟ್ಟ ರಾಜ್ಯಗಳನ್ನೆಲ್ಲ ಲೂಟಿ ಮಾಡಿದ್ದಾನೆ. ನಮ್ಮ ಅನೇಕ ಕೋಟೆಕೊತ್ತಲಗಳು ಅವನ ವಶವಾಗಿವೆ. ಅನೇಕ ದಂಡನಾಯಕರು ಅವನೊಡನೆ ಸೇರಿದ್ದಾರೆ. ಕೆಲವು ಮಾಂಡಲೀಕರೂ ಅವನಿಗೆ ಕಪ್ಪ-ಕಾಣಿಕೆ ಸಲ್ಲಿಸಿದ್ದಾರೆ.

ಮ ಮ : (ಬೆದರಿ) ಅಂತೂ ರಾಜ್ಯಕ್ಕೆ ಗಂಡಾಂತರವಿದೆ. ಇದನ್ನು ಉಪಾಯದಿಂದಲೇ ಬಗೆಹರಿಸಿಕೊಳ್ಳಬೇಕು. ಏಳಿ, ಅರಮನೆಗೆ ಹೋಗಿ ಮಹಾರಾಜರನ್ನೇ ಕಂಡು ತಿಳಿಸಿ ಮುಂದಿನ ಯೋಚನೆ ಮಾಡೋಣ. ಇಂಥ ಕಠಿನವಾದ ತುರ್ತು ಪರಿಸ್ಥಿತಿಯಲ್ಲಿ ಸುಮ್ಮನೆ ಕುಳಿತುಕೊಳ್ಳುವುದಲ್ಲ.

ಅಂತಪಾಲ: ಅದೇ ಸರಿ.

ಮ ಮ : ಅಯ್ಯೋ, ದುರ್ದೈವವೇ.... ಮಹಾರಾಜರೂ ಇದೇ ದಾರಿಯಲ್ಲಿ ಬರುತ್ತಿದ್ದಾರಲ್ಲ! ದೇವಾಲಯಕ್ಕೆ ಹೊರಟಂತೆ ಕಾಣುತ್ತದೆ.

(ಮಹಾರಾಜ ದೇವಾಲಯಕ್ಕೆ ಬರುತ್ತಿದ್ದಾನೆ; ಮಿತ ಪರಿವಾರವಿದೆ)

ಮ ಮ : (ರಾಜನನ್ನು ಕಂಡು) ಮಹಾರಾಜಾಧಿರಾಜ, ರಾಜ ಪರಮೇಶ್ವರ, ಶಿವಸ್ಕಂದ ಮಹಾರಾಜರಿಗೆ ಉದ್ದಂಡ ನಮಸ್ಕಾರಗಳು. ಪ್ರಣಾಮಗಳು.

ಮಹಾರಾಜ: ಏನು? ಮಂತ್ರಿಗಳೂ, ಅಂತಪಾಲರೂ ದಾರಿಯಲ್ಲಿ ಗಂಭೀರವಾದ ಯೋಚನೆಯಲ್ಲಿದ್ದೀರಲ್ಲ?

ಮ ಮ : ತಾವು ದೇವರ ಪೂಜೆಯನ್ನು ಮುಗಿಸಿ ಬನ್ನಿ. ಎಲ್ಲವನ್ನೂ ವಿವರಿಸುತ್ತೇವೆ.

ಮ ರಾ : ಈ ಅಂತಪಾಲರನ್ನು ಕಿರಾತಕ ಉಪಟಳವನ್ನು ನಿಯಂತ್ರಿಸಲು ಕಳಿಸಿದ್ದೆವಲ್ಲವೇ?

ಮ ಮ : ಹೌದು, ಮಹಾರಾಜ.

ಮ ರಾ : ಏನಾಯಿತು? ಗೆದ್ದು ಬಂದರೇ?

ಮ ಮ : ಎಲ್ಲವನ್ನೂ ಆಮೇಲೆ ವಿವರಿಸುತ್ತೇವೆ.

ಮ ರಾ : (ಕುಪಿತನಾಗಿ) ಅಂತಪಾಲರಿಗೆ ಬಾಯಿ ಇಲ್ಲವೇ? ಸೋತು ಬಂದಿರೇನು? ನಾಚಿಕೆಯಿಲ್ಲವೇ? ಏನಾಯಿತು? ಹೇಳಿ.

ಅ ಪ : ಮಹಾಪ್ರಭೋ, ತಮ್ಮ ಆಜ್ಞೆಯಂತೆ ದೊಡ್ಡ ಸೈನ್ಯ ತೆಗೆದುಕೊಂಡು ಹೋಗಿ ಯುದ್ಧಕ್ಕಿಳಿದೆವು. ಗಡಿಯುದ್ದಕ್ಕೂ ಅರಣ್ಯದಲ್ಲೆಲ್ಲಾ ಅಸಂಖ್ಯ ಕಿರಾತರನ್ನು ಕೂಡಿಕೊಂಡು ಕೂಟಯುದ್ಧ ಹೂಡಿದ ಮಯೂರ ಶರ್ಮ ಅಸಾಮಾನ್ಯನು. ನಮ್ಮ ಸೈನಿಕರೆಲ್ಲಾ ಮಡಿದರು. ಅವನು ನಾಲ್ಕೂ ನಿಟ್ಟಿನಿಂದ ಹೂಡುವ ಯುದ್ಧ ಕೌಶಲ್ಯವು ಬೆರಳು ಕಚ್ಚುವಂತಹದು! ಮೇಲಾಗಿ ಅವರ ಬೇಹುಗಾರರ ತಂಡವೂ ದೊಡ್ಡದು. ಈಗ ನಮ್ಮ ಬೆನ್ನ ಹಿಂದೆಯೂ ಇರಬಹುದು. ನಾವು ನಿಜವಾದ ಸೇತುವೆಯೆಂದು ದಾಟ ಹೋದರೆ, ಅದು ಕುಸಿದು ಬಿದ್ದು ನೂರಾರು ಸೈನಿಕರು ಸತ್ತರು, ನಮ್ಮ ಸಾಮಂತರಲ್ಲಿ ಹಲವರು ಸೋತು ಅವನಿಗೆ ಕಪ್ಪ ಕಾಣಿಕೆಯನ್ನು ಅರ್ಪಿಸುತ್ತಿದ್ದಾರೆ. ನಮ್ಮ ಕೆಲವು ಕೋಟೆಗಳು ಅವನ ವಶವಾಗಿವೆ.

ಮ ರಾ : ಅಪಮಾನ! ಅಪಮಾನ! ಈಗ ಏನು ಮಾಡುವದು ಪೂರ್ಣವರ್ಮರೇ?

ಮ ಮ : ಪ್ರಭೋ, ಮಯೂರ ಶರ್ಮ ಪ್ರಬಲನಾದ ಶತ್ರು. ಶತ್ರು ಪ್ರಬಲನಾದಾಗ ಉಪಾಯದಿಂದ ತಪ್ಪಿಸಿಕೊಳ್ಳಬೇಕು, ಇಲ್ಲವಾದರೆ ರಾಜ್ಯಕ್ಕೇ ಗಂಡಾಂತರವಿದೆ. ಅವನು ಸುಸಂಸ್ಕೃತ. ತಮ್ಮ ಸಾಮ್ರಾಜ್ಯ ಬಹಳ ವಿಸ್ತಾರವಾಗಿರುವುದರಿಂದ ಬಿಗು ಬಹಳ ಕಡಿಮೆಯಾಗಿದೆ. ಇದರಿಂದ ಅವನನ್ನು ಸತ್ಕರಿಸಿ ಬನವಾಸಿಯಲ್ಲಿ ನಮ್ಮ ಗೌರವಾರ್ಹ ಸಾಮಂತನೆಂದು ಪಟ್ಟಕಟ್ಟುವುದು ರಾಜತಂತ್ರ, ಇದರಿಂದ ನಮಗೊಬ್ಬ ಸಮರ್ಥ ಆಡಳಿತಗಾರ ದೊರೆತಂತೆ ಆಗುತ್ತದೆ. ಇದು ಸ್ವಹಿತ ಪರಹಿತಗಳೆರಡಕ್ಕೂ ಶ್ರೇಯಸ್ಕರವೆಂದು ತೋರುತ್ತದೆ.

ಮ ರಾ : ಹೌದು. ಮಯೂರ ಶರ್ಮ! ಆ ಹುಡುಗನನ್ನು ಇದೇ ದಾರಿಯಲ್ಲಿ ಒಂದು ದಿನ ಬೈದಿದ್ದೆ. ಅವನನ್ನು ಅಪಮಾನಗೊಳಿಸಿದ್ದೆ, ಅವನು ನನ್ನ ಮುಂದೆ ಪ್ರತಿಜ್ಞೆ ಮಾಡಿಹೋಗಿದ್ದು ನೆನಪಾಗುತ್ತಿದೆ. ಅವನ ಉದ್ದಟತನಕ್ಕೆ ಆಗಲೇ ಮದ್ದರೆಯದೇ ತಪ್ಪು ಮಾಡಿದೆ. ಶತ್ರುವನ್ನು

ಮೂಲದಲ್ಲೇ ನಾಶಪಡಿಸಿಬೇಕೆಂಬ ರಾಜತಂತ್ರ ಮರೆತು ಅವನನ್ನು ಕ್ಷಮಿಸಿದುದಕ್ಕೆ ಈಗ ಈ ಶಾಸ್ತಿ. ಅವನಿಗೆ ರಾಜಪದವಿಯಿತ್ತು ಸನ್ಮಾನಿಸುವದೇ? ಛಿ... ಸಾಧ್ಯವಿಲ್ಲ!

ಮ ಮ : ಅನ್ಯಥಾ ಭಾವಿಸಬಾರದು. ಬ್ರಾಹ್ಮಣನನ್ನು ಅಪಮಾನಿಸಿದ್ದಕ್ಕೆ ಇಂಥ ಗಂಡಾಂತರ ಪ್ರಾಪ್ತವಾಯ್ತು. ಅವನನ್ನು ಕೊಂದಿದ್ದರೆ ಬ್ರಹ್ಮರಾಕ್ಷಸನಾಗಿ ಕಾಡುತ್ತಿದ್ದ. ಅಪಮಾನಗೊಳಿಸದಿದ್ದರೆ ಅಪಾಯವಿರುತ್ತಿರಲಿಲ್ಲ. ಅವನು ಮಹಾ ವ್ಯಕ್ತಿತ್ವವುಳ್ಳವನಾದ್ದರಿಂದಲೂ, ಬ್ರಹ್ಮಕ್ಷಾತ್ರ ವರ್ಚಸ್ಸುಗಳೆರಡೂ ಹೊಯ್ ಕೈಯಾದ ಅವನ ವ್ಯಕ್ತಿತ್ವವನ್ನು ಮೆಚ್ಚಿ ಸನ್ಮಾನಿಸುವುದು ಔಚಿತ್ಯ. ಒಮ್ಮೆ ಮಾಡಿದ ತಪ್ಪನ್ನೇ ಪುನಃ ಮಾಡುವುದು ಬುದ್ಧಿವಂತಿಕೆಯ ಲಕ್ಷಣವಲ್ಲ. ಗುಣಕ್ಕೆ ಮತ್ಸರ ಇರಕೂಡದು. "ಸರ್ವನಾಶೇ ಸಮುತ್ಪನ್ನೇ ಅರ್ಧಂ ತ್ಯಜತಿ ಪಂಡಿತಃ" ಇದರಿಂದ ಅವನನ್ನು ಸಂಧಾನಕ್ಕೆ ಕರೆದು ನಾನು ಹೇಳಿದಂತೆ ಮಾಡಿದರೆ, ಮುಂದಾಗಬಹುದಾದ ಹೆಚ್ಚಿನ ಗಂಡಾಂತರ ತಪ್ಪುತ್ತದೆ.

ಮ ರಾ : (ಒಪ್ಪಿ, ಸೋತು) ನೀವು ಹೇಳುವುದು ಸರಿ. ಬನವಾಸಿಯಲ್ಲಿ ನಮ್ಮ ಸಾಮಂತರಾದ ಚುಟುಗಳಿಗೆ ಪುತ್ರ ಸಂತಾನವೂ ಇಲ್ಲ. ನಿಮ್ಮ ಸಲಹೆ ಗ್ರಾಹ್ಯ ಆದರೆ ಪೂರ್ಣವರ್ಮರೇ, ಸಂಧಾನಕ್ಕೆ ಕರೆದರೆ, ಅವನೀಗ ಬಂದಾನೋ?

ಮ ಮ : ಬಂದಾನೆಂದು ನಮಗೆ ವಿಶ್ವಾಸವಿದೆ. ಮಹಾಪ್ರಭೋ ಅಪ್ಪಣೆಯಾದರೆ ಅವನಿಗೆ ಯೋಗ್ಯರೀತಿಯಿಂದ ಆಮಂತ್ರಣ ಕಳಿಸಿ ಕರೆಸುತ್ತೇವೆ.

ಮ ರಾ : ಆಗಲಿ, ಹಾಗೇ ಮಾಡಿರಿ ಹಿಂದೆ ಆ ಬ್ರಾಹ್ಮಣ ತೇಜಸ್ವಿಗೆ ಮಾಡಿದ ಅಪಮಾನದಿಂದ ಬಂದ ಪಾಪದಿಂದುಂಟಾದ ಆಪತ್ತನ್ನು ಅವನನ್ನು ಸತ್ಕರಿಸಿಯೇ ತೀರಿಸಿಕೊಳ್ಳುತ್ತೇನೆ.

(ತೆರೆ ಬೀಳುತ್ತದೆ)

ದೃಶ್ಯ–೮

(ಬನವಾಸಿಯ ಅರಮನೆ. ಪಟ್ಟಾಭಿಷೇಕ ಮಹೋತ್ಸವ, ಎತ್ತರವಾದ ಸಿಂಹಾಸನದ ಮೇಲೆ ಮಯೂರಶರ್ಮ ಮಯೂರವರ್ಮನಾಗಿ ಎದುರಿನಲ್ಲಿ ಆಚೆ ಈಚೆ ಶಿವಸ್ಕಂದವರ್ಮ, ಕೆಲವು ಸಾಮಂತರು, ವೀರಶರ್ಮ, ರಾಮಶರ್ಮ, ಕೃಷ್ಣಶರ್ಮ ಆಚಾರ್ಯ ಭಾರದ್ವಾಜರು, ಹಿಂದೆ ಚಾಮರದವರು ಎಷ್ಟು ಜನರನ್ನು ತರಲು ಸಾಧ್ಯವೋ ಅಷ್ಟು ಜನರು– ಎದುರಿನಲ್ಲಿ ಕಪ್ಪಕಾಣಿಕೆಯುಳ್ಳ ಹರಿವಾಣಗಳು)

ವೀ ಶ : ಭರದ್ವಾಜರು, ರಾಮಶರ್ಮ, ಕೃಷ್ಣಶರ್ಮಾದಿ ಬ್ರಾಹ್ಮಣರ ಮಂತ್ರ ಪಠಣ–

ಪ್ರಜಾಪತೇ ತಪಸಾ ವಾವೃಧಾನಸ್ಸದ್ಯೋ
ಜಾತೋ ದಧಿಷೇ ಯಜ್ಞಮಗ್ನ:।
ಸ್ವಾಹಾ ಕೃತೇನ ಹವಿಷಾ ಪುರೋಗಾ
ಯಾಹಿ ಸಾಧ್ಯಾ ಹವಿರದಂತು ದೇವಾ:॥
ರಾಜಾಧಿರಾಜಾಯ ಪ್ರಸಹ್ಯಸಾಧಿನೇ
'ನಮೋ ವಯಂ ವೈಶ್ರವಣಾಯ ಕುರ್ಮಹೇ।
ಸಮೇ ಕಾಮ ಕಾಮಾನ್ ಯಮಹ್ಯಾಂ।
ಕಾಮೇಶ್ವರೋ ವೈ ಶ್ರವಣೋದಧಾತು ।
ಕುಬೇರಾಯ ವೈಶ್ರವಣಾಯ, ಮಹಾರಾಜಾ
ಯ ನಮಃ ಪರ್ಯಾಪ್ತಾದ್ಯನಂತ ರಾಜಾಯ
ಸರ್ವಸ್ತೋಮೋತಿ ರಾತ್ರೋತ್ತಮಹರ್ಭವತಿ
ಸಾರ್ವಸ್ಯಾಪ್ತ್ಯ ಸಾರ್ವಸ್ಯಚಿತ್ತ್ಯೈ ಸರ್ವಮೇವಾಪ್ನೋತು
ಸರ್ವಂ ಜಯತಿ॥

ಭಟ್ಟಂಗಿ : ಕವನ ತ್ರಿಣೇತ್ರ ಕದಂಬ ಕುಲಾವತಂಸ ಶಿವಸ್ಕಂದ ಮಹಾರಾಜ ಪುತ್ರೋಪಮಾssss ಮಯೂರವರ್ಮ ಮಹಾರಾಜಾssss ಭೋ ssss ಪರಾಕು!

(ವೀರಗೀತೆ–ರೂಪಕತಾಳ)

ಕುಂತಳೇಂದ್ರ ಜಯ ಜಯ ॥ ಪಲ್ಲ ॥
ಕನ್ನಡ ಸಿರಿ ಜಯ ಜಯ ॥ ಅನು ಪಲ್ಲ ॥
ತಾಳಗುಂದ ತಾಳೆಯುಡಿಯ ಮನೆಯೊಳೆದ್ದ ಮಾರ।
ಬನವಾಸಿಯ ಗರಡಿಯಲ್ಲಿ ತಯಾರಾದ ವೀರ॥
ವೀರಶರ್ಮ ಶಿಷ್ಯನಾದ ಕದಂಬ ಕುಲ ಸೂರ್ಯ ।
ಶಾಪ ಶರಗಳೆರಡನ್ನೂ ಬಳಸಬಲ್ಲ ಧುರ್ಯ॥
ಮಹಾವಿದ್ಯಾ ಮಹಾಕಾಯ ಮೂರ್ತಿಮತ್ ಪಿನಾಕ ।
ದೇವಸೇನೆಯೊಡೆಯನಾದ ಸ್ಕಂದಗೆ ಸಮತೂಕ॥
ಕಂಚಿಯಲ್ಲಿ ಕುದುರೆಯೇರಿ ಮೆರೆದ ಧೈರ್ಯಪರ್ವತ ।
ಹೊಂಚಿ ಸಿರಿಯ ಬೆಟ್ಟದಲ್ಲಿ ಕಟ್ಟಿದ ಪಡೆಯದದ್ಭುತ ॥
ಅರಿಯದಿವನ ಪರಾಕ್ರಮವ ಕೆಣಕಲೆದ್ದು ಬಂದ।
ಪಲ್ಲವರನು ಗೋಳಾಡಿಸಿ ರಣದಿ ಗೆದ್ದು ನಿಂದ॥
ವೀರ ಶರ್ಮ ಬಿಲ್ಲೋಜನು ಕರ್ಣಾಟ ದ್ರೋಣ ।
ಮಯೂರ ಕನ್ನಡದ ಪಾರ್ಥ, ಹಗೆ ಗಂಟಲ ಗಾಣ॥
ಬೃಹದ್ ಬಾಣ ಪಾರಿಯಾತ್ರ ಸೇಂದ್ರಕ ಶಕರಾಜ।
ತ್ರೈಕೂಟಾಭೀರ ಸುವಿಕ್ರಮಂ ಗಾದ ನೋಜ॥
ಪುನ್ನಾಟರ ಆಟ ಮುಗಿಸಿ ಹೂಡಲವರ ಪ್ರಾಣಕೆ।
ಸಹ್ಯಾದ್ರಿಗೆ ಸರಿದೂಗಿತು ಕೊಂಡ ಕಪ್ಪಕಾಣಿಕೆ॥
ಕನ್ನಡದಭಿಮಾನಿ ರತ್ನ ಮೊದಲ ಸಾರ್ವಭೌಮ।
ಧರ್ಮ ರಾಜ್ಯ ಸಂಸ್ಥಾಪಕ ಮಯೂರಾಭಿರಾಮ।
ಬನವಾಸಿಯ ಮುತ್ತೈದೆಯರೆತ್ತಿ ಮಂಗಳಾರತಿ॥
ಹರೆಸಿದ ನದಿ ವರದೆಯಾಯ್ತು ಹಳಗನ್ನಡ ಭಾರತಿ।

ಭಟ್ಟಂಗಿ : ಪ್ರಥಮ ಕನ್ನಡ ಸಂಸ್ಥಾಪನಾಚಾರ್ಯ
ವೀರ ಶರ್ಮಾಶೀರ್ವಾದ ಪರಿಪೂತ ಮೂರ್ಧಾಭಿಷಿಕ್ತ
ಭವ್ಯ ಮಹಾ ಸಾರ್ವಭೌಮಾSS, ಮಹಾ ರಾಜಾಧಿರಾಜ
ಮಯೂರ ವರ್ಮಮಹಾರಾಜಾSSSS ಭೋSSS ಪರಾಕು

ವೀರಶರ್ಮ : ನರ್ಮದಾಂತ ಮಹೀ ಪ್ರೀತ್ಯಾ
ಯ ಮಾ ಶ್ರೀ ತ್ಯಾ ಭಿನಂದತಿ।
ಕೌಸ್ತುಭಾಭಾರುಣಚ್ಛಾಯಾ ವಕ್ಷೋ ರ್ಲಕ್ಷ್ಮೀರ್ಹರೇರಿವ।
ರೇವಾವಧಿ ಜಯಂತೀಯಂ ಸುರೇಂದ್ರ ನಗರೀಯಥಾ।
ವೈಜಯಂತೀ ಚಲಚ್ಚಿತ್ರ ವೈಜಯಂತೀ ವಿರಾಜತೇ॥

ಮುತ್ತೈದೆಯರು : (ಆದಿತಾಳ–ಮಂಗಳಗೀತೆ)

ಮಂಗಳಂ। ಜಯ ಮಂಗಳಂ ।ಪ।
ಕುಂತಳ ರಾಜ್ಯ ಶ್ರೀನಿಧಿಗೆ। ಕಂತು ನಿಹಂತೃ ಪ್ರತಿನಿಧಿಗೆ ।
ಶಂತನು ಸುತ ಕೀರ್ತ್ಯಂಬುಧಿ ವಾಡವ ನೆನೆಸಿದ ವೀರ ಪರಾಕ್ರಮಿಗೆ॥
ಕನ್ನಡ ಕುಲ ರಸಿಕೇಶ್ವರಗೆ। ನನ್ನಿ ನಡೆಯ ಹೆಬ್ಬಾರುವಿಕೆ।
ಕನ್ನಾಡಲಿ ಹೊನ್ನಿನ ಹೊಳೆ ಹರಿಸಿದ್ದ।
ಪುಣ್ಯ ಶ್ಲೋಕ ಮಯೂರನಿಗೆ।
ಪ್ರಣವೇಶ್ವರ ಕೃಪೆ ಪಾಲಿಸಿತು। ಮಧುಕೇಶ್ವರ ಮನವಾಲಿಸಿತು॥
ಮಹಾಬಲೇಶ್ವರ ಮಂಜು ಶ್ರೀಧರ।
ಕಡಲಿನೆದೆಯನುಕ್ಕಿಸಿದವಗೆ॥

ವರಕವಿ ಬತ್ತಲೇಶ್ವರ ವಿರಚಿತ

ಕೌಶಿಕ ರಾಮಾಯಣ

(ಕಾವ್ಯ ಸಂಗ್ರಹ)

ಬತ್ತಲೇಶ್ವರನ ಭಾಷೆಯಲ್ಲೇ
ಎಡ ಹರೆಯದ ಮಕ್ಕಳಿಗಾಗಿ
ಸಂಗ್ರಹಿಸಿದ್ದು:

ಪೀಠಿಕೆ

ಸದ್ಗುರುವನ್ನು ಬ್ರಹ್ಮಸ್ವರೂಪನೆಂದು ನಂಬಿದ ಭಾರತದ ಅಂಗವಾದ ಕನ್ನಡ ನಾಡಿನ ಉತ್ತರ ಕನ್ನಡ ಜಿಲ್ಲೆಯ ಕುಮಟೆ–ಶಿರಸಿ ತಾಲೂಕುಗಳ ಗಡಿಗಳು ಸಂಧಿಸುವಲ್ಲಿರುವ ಯಾಣದ ವರಕವಿ ಬತ್ತಲೇಶ್ವರ ತನಗೆ ಹೆಚ್ಚು ಕಡಿಮೆ ಸಮಕಾಲೀನನಾಗಿದ್ದ ಕುಮಾರವ್ಯಾಸನು "ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ ತಿಂತಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ" ಎಂದು ಹೇಳಲು ಕಾರಣನಾದದ್ದು "ಕೌಶಿಕ ರಾಮಾಯಣ"ವನ್ನು ಬರೆದುದರಿಂದ. ಇದು ಭಾಮಿನೀ ಷಟ್ಪದಿಯಲ್ಲಿ "ಲಲಿತವಹ ಕನ್ನಡದ ನುಡಿಯಲಿ" ಬರೆಯಲಾದ ೪೪ ಸಂಧಿಗಳನ್ನುಳ್ಳ ಮಹಾಕಾವ್ಯ. ಯುದ್ಧಕಾಲದಲ್ಲಿ ಬಾಣ ಬಿಡುವಾಗ ರಾಮ ಅನೇಕ ಸಲ ಗುರು ಕೌಶಿಕನನ್ನು ಇಲ್ಲಿ ನೆನೆದುಕೊಳ್ಳುತ್ತಾನೆ. ಅವನ ಜಯದ ಮೂಲ ಕೌಶಿಕ ಕೃಪೆ. ಆದುದರಿಂದ ಇದು ಕೇವಲ ರಾಮಾಯಣವಲ್ಲ, ಕೌಶಿಕ ರಾಮಾಯಣ!

ವಾಲ್ಮೀಕಿಗಿಂತ ಹಿಂದಿನ ಯಾವ ಮಹಾಕವಿಯೂ ನಮ್ಮಲ್ಲಿಲ್ಲ. ಆ ಆದಿಕವಿಯ ಆದಿ ಕಾವ್ಯವಾದ ರಾಮಾಯಣವು ಎಂದಿಗೂ ಮರೆಯಲಾಗದಷ್ಟು ಮಹತ್ವವನ್ನು ಮಂಗಗಳಿಗೆ ಕೊಟ್ಟದ್ದು ಬತ್ತಲೇಶ್ವರನಿಗೆ ಬಹಳ ಹೃದಯಂಗಮವಾಯ್ತು. ಹಂಪೆಯಲ್ಲಿ ಈಗಲೂ ಗದ್ದೆ ಬಯಲುಗಳಲ್ಲಿರುವ ಮಾರುತಿ ಮೂರ್ತಿಗಳನ್ನು ಲೆಕ್ಕಿಸಿದರೆ ವಿಜಯನಗರದ ಸಾಮ್ರಾಜ್ಯದ ಮೂಲ ಪುರುಷರ ಬಲೋಪಾಸನೆ ಅರ್ಥವಾಗುತ್ತದೆ.

ವಾನರರು ವನರಾಜ್ಯಾಧೀಶನಾದ ಸುಗ್ರೀವನ ಸರದಾರರು. ಅವನು ನಾಗರಿಕತೆಯನ್ನು ರಾಮನೂರಿನವರಿಂದ ಕಲಿತುಕೊಂಡಿರಬಹುದು; ಆದರೆ ಸಂಸ್ಕೃತಿಯಲ್ಲಿ ರಾಮನೂರಿನವರನ್ನು ಆಶ್ಚರ್ಯ ಪಡುವಂತೆ ಮೆಚ್ಚಿಸಿದ್ದನ್ನು ರಾಮಾಯಣ ತೋರಿಸುತ್ತದೆ. ಸುಗ್ರೀವಾದಿಗಳು ವಾನರಧ್ವಜರು ಬನವಾಸಿಯ ಕದಂಬರಂತೆ. ಹನುಮಂತನು ಬತ್ತಲೇಶ್ವರನಾದ ಮಹಾರುದ್ರ ಭೈರವನ ಅಂಶದಿಂದ ಹುಟ್ಟಿ ಅವನನ್ನು ಪ್ರತಿನಿಧಿಸುತ್ತಾನೆ. ರಾಮನು ಇಲ್ಲಿ ವಿಷ್ಣುವಿನ ಪ್ರತಿನಿಧಿ. ಕಿರಾತರಂತಿದ್ದ ವಾನರರಿಗೆ ವರ್ಣಾಶ್ರಮ ಧರ್ಮ ಸ್ಪಷ್ಟವಾಗಿ ಇದ್ದಂತಿಲ್ಲ. ನರರಿಗೂ ರಾಕ್ಷಸರಿಗೂ ಅದಿತ್ತು. ಮನುಜರು ಕೆಟ್ಟರೆ ದನುಜರಾಗುತ್ತಾರೆ: ವಾನರರು ಕೆಟ್ಟರೆ ದನುಜರಾಗರು! ಕೆಡದ

ಮನುಜರೂ ವಾನರರೂ ದೇವಾಂಶ ಸಂಭೂತರೆನಿಸಿಕೊಳ್ಳಬಹುದು. ಕಪಿ ಧ್ವಜರು ಅಥವಾ ಕಪಿಗಳು ದೈತ್ಯರ ದೇಹಬಲದೊಡನೆ ಮಾನವರ ಹೃದಯ ಸೌಂದರ್ಯವನ್ನು ಉಳ್ಳವರು. ಅವರು ರಾಷ್ಟ್ರೀಯ ಸಂಸ್ಕೃತಿಯ ಪುನರುಜ್ಜೀವನಕ್ಕೆ ಹೊರಟ ರಾಮನಂಥ ನಾಯಕರಿಗೆ ಅತ್ಯಂತ ಹೆಚ್ಚಿನ ಸಹಾಯಕರು!


ಕಪಿಗಳ ಯುದ್ಧಕ್ರಮವನ್ನು ಕವಿಯು ಇಂದು ಆಕಾಶದಲ್ಲಿ ನಡೆಯಬಹುದಾದ ಅಣುಬಾಂಬುಗಳ ಯುದ್ಧದ ಭೀಷಣತೆಗೂ ಮಿಗಿಲಾದೀತೇನೋ ಎಂಬಷ್ಟು ರಸವತ್ತಾಗಿ ಬಣ್ಣಿಸಿದ್ದಾನೆ. ದೈತ್ಯರಿಗವರು ಅತಿದೈತ್ಯರೆನ್ನಿಸಿದರು. ಮಾನವರಿಗವರು ಅತಿಮಾನವರೆನ್ನಿಸಿದರು! ಅವರ ವೀರ, ಹಾಸ್ಯ, ದಯೆ, ಧರ್ಮನಿಷ್ಠೆ, ಸತ್ಯಸಂಧತೆ, ಶ್ರದ್ಧೆ, ಭಕ್ತಿ, ಸಾಹಸಗಳು ರಾಮಾಯಣ ನಮ್ಮ ನೆನಪಿನಲ್ಲಿರುವಷ್ಟು ಕಾಲ ಅಚ್ಚಳಿಯದೆ ಉಳಿಯುವಂತೆ ಮಾಡಿದ ವಾಲ್ಮೀಕಿ ಶಿಷ್ಯ ಬತ್ತಲೇಶ್ವರನನ್ನು ಕನ್ನಡ ಮಕ್ಕಳೆಂತು ಮರೆಯಲು ಸಾಧ್ಯ? ಮಹಾಕವಿ ಬತ್ತಲೇಶ್ವರನ ಅರ್ಥ ದಿಗಂಬರನೆಂದು. ಅಂಬರವಾಸವಾದ ಶಿವನೆಂದು ಅದರ ತಾತ್ಪರ್ಯ. ಅವನೊಬ್ಬ ವಿಪ್ರರ್ಷಿ. ಅವನ ಕನ್ನಡವು ಕನ್ನಡ ಜಿಲ್ಲೆಗಳ ಯಕ್ಷಗಾನ ಪ್ರಸಂಗಗಳ ಭಾಷಾಶೈಲಿಗೆ ಗುರುವಾಯ್ತು!

–ಲೇಖಕ

–೧–

ರಾಮ ಮತ್ತು ಅವನ ತಮ್ಮಂದಿರ ಜನನ

ದಾನವಬಾಧೆ ಹೆಚ್ಚಾದಾಗ ದೇವತೆಗಳು ನಾರಾಯಣ ದೇವರಲ್ಲಿ ದೂರಿಕೊಂಡರು. ಆಗ ಅವನು ತಾನು ಭೂಲೋಕದಲ್ಲಿಯ ಕೋಸಲ ದೇಶದ ಅರಸನಾದ ದಶರಥನಿಗೆ ಮಗನಾಗಿ ಹುಟ್ಟುವೆನೆಂದು ಹೇಳಿದ್ದಲ್ಲದೆ, ಅವರೆಲ್ಲರೂ ಮಂಗಗಳಾಗಿ ಹುಟ್ಟಬೇಕೆಂದು ಅಪ್ಪಣೆಕೊಟ್ಟನು.



ಆಗ ದೇವೇಂದ್ರನು ವಾಲಿಯಾದನು. ಬ್ರಹ್ಮನು ಜಾಂಬವನಾದನು. ಸೂರ್ಯ ಸುಗ್ರೀವನಾದನು. ಶಿವನು ಹನುಮಂತನಾದನು. ಚಂದ್ರನು ದಧಿಮುಖನಾದನು. ಅಗ್ನಿಯು ನೀಲನಾದನು. ನಿಋುತಿ ಕೇಸರಿಯಾದನು. ವರುಣ ಪನಸನಾದನು.

ವಿಶ್ವಕರ್ಮನು ನಳನಾದನು! ವಾಲಿ ಮುಂತಾದವರು ಆಯಾ ದೇವತೆಗಳ ಮಕ್ಕಳು ಅಥವಾ ಅವತಾರ ಎಂದೆನಿಸಿ ಕಿಷ್ಕಿಂಧೆಯಲ್ಲಿ ಹುಟ್ಟಿ ಬೆಳೆದರು–ಎಂಬುದು ತಾತ್ಪರ್ಯ.

ಧೇನುಕನು ವಾಯುವಿನ ಅವತಾರ. ಅಂಗದನು ಯಕ್ಷನ ಅವತಾರ. ಗವಯನು ಯಮನ ಅವತಾರ, ಮೈಂದ ಮುಂತಾದವರು ಇತರ ದೇವತೆಗಳ ಅವತಾರಗಳು ಎಂದೆನ್ನಿಸಿ ಮೊದಲಿನ ವನಚರರನ್ನು ಕೂಡಿಕೊಂಡರು.

ಇತ್ತ ನಾರಾಯಣನು ದಶರಥನ ಮಗನಾಗಲು ನಾರದನ ಶಾಪವನ್ನು ನೆಪವಾಗಿ ತೆಗೆದುಕೊಂಡನು. ದಶರಥನ ರಾಜಧಾನಿ ಅಯೋಧ್ಯಾಪುರ. ಅದರಲ್ಲಿ ಹೊಳೆವ ಕನಕದ ಕೋಟೆ, ಮಾಣಿಕ ಕಳಸ, ರತ್ನ ತೋರಣ, ೯೬ ಸಾವಿರ ಸೋಮವೀಥಿಗಳು, ಆರುಯೋಜನ ಅಗಲದ ಅರಮನೆ. ಪಟ್ಟಣದ ಒಟ್ಟು ಉದ್ದ ಹತ್ತುಯೋಜನ–ಎಂಬುದು ಪ್ರವಾಸಿಗಳಿಗೆ ಗೊತ್ತು.

ಹತ್ತು ದಿಕ್ಕುಗಳಲ್ಲಿ ತೇರನ್ನು ಹಾರಿಸಬಲ್ಲ ಮಹಾವೀರನಾಗಿದ್ದ ದಶರಥ ಚಕ್ರವರ್ತಿ! ಅವನಿಗೆ ಕೌಸಲ್ಯೆ, ಸುಮಿತ್ರೆ, ಕೈಕೇಯಿ ಎಂಬ ಮೂವರು ರಾಣಿಯರಿದ್ದರು. ಅವರಲ್ಲಿ ಹಿರಿಯಳಾದ ಕೌಸಲ್ಯೆಯು ಪಟ್ಟದರಾಣಿ. ಸುಮಿತ್ರೆ ಅವರಲ್ಲಿ ಕಿರಿಯಳಾದರೂ ಕೈಕೇಯಿಯು ದಶರಥನ ಹೆಚ್ಚಿನ ಒಲವಿಗೆ ಪಾತ್ರಳಾಗಿದ್ದಳು. ದೇವತೆಗಳ ಅಣ್ಣಂದಿರಾದ ದೈತ್ಯರೊಡನೆ ಯುದ್ಧ ನಡೆದಾಗ ತೇರಚ್ಚು ನೆಗ್ಗಿದರೂ ತನ್ನ ಕೈಯನ್ನು ಕೊಟ್ಟು ರಥನಡೆಸಿದ ಕೈಕೇಯಿಯನ್ನು ಮೆಚ್ಚಿದ ದಶರಥನು ಅವಳಿಗೆ ವರಕೊಡಲು ಹೋದ. ಆಗ ಅವಳು ತನಗೆ ಬೇಕಾದಾಗ ಆ ವರವನ್ನು ಬೇಡಿ ಪಡೆದುಕೊಳ್ಳುವೆನೆಂದು ಹೇಳಿ ಅವನೊಡನೆ ಸ್ವರ್ಗದಿಂದ ಅಯೋಧ್ಯೆಗೆ ಹೋದಳು.

ದಶರಥನಿಗೆ ಮಕ್ಕಳಿರಲಿಲ್ಲ. ಒಂದು ದಿನ ಅವನು ಚಿಂತಾಮಗ್ನತೆಯಲ್ಲಿಯೇ ಇರುಳಲ್ಲಿ ವನಾಂತರದ ಒಂದು ಕೆರೆಯ ದಂಡೆಯ ಮೇಲೆ ಹೋಗಿ ಕುಳಿತನು. ಚೌಡಲನೆಂಬ ಹುಡುಗನು ತನ್ನ ತಂದೆತಾಯಿಗಳಿಗಾಗಿ ನೀರು ತುಂಬಿಕೊಂಡು ಹೋಗಲು ಕೊಡವನ್ನು ನೀರಲ್ಲಿ ಮುಳುಗಿಸಿದಾಗ ಅದು ಆನೆ ನೀರು ಕುಡಿವ ಸದ್ದೆಂದು ಭಾವಿಸಿ ದಶರಥನು ಶಬ್ದವೇಧಿ ಬಾಣವನ್ನು ಬಿಟ್ಟ. ಸಾಯುವುದರೊಳಗೆ ಹುಡುಗ ಚೌಡಲನು ತನ್ನ ಮಾತಾಪಿತೃಗಳ ಸುದ್ದಿಯನ್ನು ಹೇಳಿದ. ಆ ಮುನಿದಂಪತಿಗಳೆದುರು ದಶರಥನು ತಪ್ಪಾಯ್ತೆಂದು ಕ್ಷಮಿಸಲು ಬೇಡಿಕೊಂಡ. ಆದರೆ ಆ ಮುನಿಯು 'ನಿನಗೆ ಪುತ್ರಶೋಕದಿಂದ ಮರಣವೊದಗಲಿ' ಎಂದು ಪ್ರಾಣಬಿಟ್ಟ; ಅವನ ಹೆಂಡತಿಯೂ ಆ ಕೂಡಲೇ ಪ್ರಾಣಬಿಟ್ಟಳು. ಆ ಮೂವರಿಗೆ ದಶರಥ ಶವಸಂಸ್ಕಾರ ಮಾಡಿದ. ಅಂಥ ಪಾಪ ಮಾಡಿದ ಪಶ್ಚಾತ್ತಾಪ ಸ್ಥಿತಿಯಲ್ಲಿದ್ದಾಗಲೇ ಆ ಶಾಪ ಒಂದು ವರವೇ ಸರಿ ಎಂದೆನಿಸಿತು ದಶರಥನಿಗೆ. ಏಕೆಂದರೆ, ಪುತ್ರ ಶೋಕ ಅನುಭವಿಸಲು ಒಬ್ಬನಾದರೂ ಮಗ ಹುಟ್ಟಬೇಕಾಯ್ತಲ್ಲ!



ದಶರಥನು ಅರಮನೆಗೆ ಬಂದು ಓಲಗ ನಡೆಸಿದಾಗ, ಪರಮ ಋಷಿಯಾದ ವಸಿಷ್ಠನು ರೋಮಪಾದನ ಮೂಲಕ ಋಷ್ಯಶೃಂಗ ಋಷಿಯನ್ನು ಕರೆಸಿ ಪುತ್ರಕಾಮೇಷ್ಟಿಯನ್ನು ಮಾಡಲು ಸೂಚಿಸಿದನು. ರೋಮಪಾದನು ದೇವದಾಸಿಯರ ಮೂಲಕ ಋಷ್ಯಶೃಂಗನನ್ನು ಕರೆಯಿಸಿ ತನ್ನ ಮಗಳಾದ ಶಾಂತಾದೇವಿಯನ್ನು ಧಾರೆಯೆರೆದುಕೊಟ್ಟು ಅವನನ್ನು ಅಯೋಧ್ಯೆಗೆ ಕಳಿಸಿದನು; ಅವನು ಇಷ್ಟಿಯ (ಯಜ್ಞದ) ಪೌರೋಹಿತ್ಯವನ್ನು ವಹಿಸಿದನು. ಯಜ್ಞ ಕುಂಡದಿಂದ ಅಗ್ನಿಯೆದ್ದು ಹರಿವಾಣದಲ್ಲಿ ಕೊಟ್ಟ ಚರುವನ್ನು ಋಷ್ಯಶೃಂಗನು ದಶರಥನಿಗಿತ್ತನು; ಅವನದನ್ನು ಕೌಸಲ್ಯೆ ಕೈಕೇಯಿಯರಿಗಿತ್ತಾಗ ಅವರು ಕಾಲು ಕಾಲು ತಿಂದು ಉಳಿದ ಅರ್ಧಭಾಗವನ್ನು ಸುಮಿತ್ರೆಗೆ ಕೊಟ್ಟರು. ಸುಮಿತ್ರೆ ತನ್ನ ಪಾಲನ್ನು ತಿಂದಳು. ಮೂವರೂ ಗರ್ಭಿಣಿಯರಾದರು. ನವಮಾಸ ಕಳೆದ ಮೇಲೆ ಶುಭಮುಹೂರ್ತದಲ್ಲಿ ಕೌಸಲ್ಯೆಗೆ ರಾಮನೂ, ಕೈಕೇಯಿಗೆ ಭರತನೂ, ಸುಮಿತ್ರೆಗೆ ಲಕ್ಷ್ಮಣ ಶತ್ರುಘ್ನರೂ ಮಕ್ಕಳಾಗಿ




ಜನಿಸಿದರು. ದಶರಥನು ಪರಮಾನಂದ ಹೊಂದಿದನು. ತಂದೆ ತಾಯಿಯರಿಗೆ ಮುದ್ದಾಗಿ ರಾಮ ಲಕ್ಷ್ಮಣ ಭರತ ಶತ್ರುಘ್ನರು ಬೆಳೆದು ಆರೇಳು ವರ್ಷಗಳ ವಯಸ್ಸಿನವರಾದಾಗ, ವಿಶ್ವಾಮಿತ್ರ ಋಷಿಯು (ಕೌಷಿಕ ಬ್ರಹ್ಮರ್ಷಿಯು) ರಾಜಸಭೆಗೆ ಬಂದು ತನ್ನ ಯಜ್ಞಕ್ಕೆ ಭಂಗ ಉಂಟುಮಾಡುತ್ತಿದ್ದ ರಾಕ್ಷಸರನ್ನು ಹೊಡೆದೋಡಿಸಲು ರಾಮಾದಿಗಳನ್ನು ಕಳಿಸಿಕೊಡಬೇಕೆಂದನು. ದಶರಥ ಮನಸ್ಸಿಲ್ಲದ ಮನಸ್ಸಿನಿಂದ ಕಳಿಸಿಕೊಟ್ಟ. ಅವರು ಕೌಶಿಕ ಗುರುವಿನ ಸೇವೆಯನ್ನು ಅತ್ಯಾದರದಿಂದ ಮಾಡಿದರು. ಅವರ ದೇವತಾವತಾರದ ಗುಟ್ಟು ಕೌಶಿಕನಿಗೆ ಗೊತ್ತಿತ್ತು. ಅದುದರಿಂದ ಅವರ ಸೇವೆ ಲೀಲಾನಾಟಕವೆಂದು ಹಿಗ್ಗಿ ನಕ್ಕನು. ನರಭಕ್ಷಣಕ್ಕಾಗಿ ಸಾವಿರ ಆನೆಗಳ ಶಕ್ತಿಯುಳ್ಳ ಮಸಿಯ ಗಿರಿ ಕೈಕಾಲು ತಳೆದಿತ್ತೆಂಬ ಹಾಗಿದ್ದ ತಾಟಕಿ ಅಲ್ಲಿಗೆ ಬಂದಾಗ ಗುರುವಿನ ಅಪ್ಪಣೆಯಂತೆ ರಾಮನು ಬಾಣಬಿಟ್ಟು ಅವಳನ್ನುಕೊಂದನು. ಆಮೇಲೆ ಅರುವತ್ತು ಸಾವಿರ ರಾಕ್ಷಸರು ಆಕಾಶದಿಂದ ಹಾರಿ ಬಂದಿಳಿದರು. ಅವರಲ್ಲಿ ಗಣ್ಯನಾದ ಸುಬಾಹು ರಾಮಬಾಣದಿಂದ ಸತ್ತ. ಬ್ರಾಹ್ಮಣ ವೇಷದಿಂದ ಮತ್ತೊಬ್ಬ ಗಣ್ಯನೆನಿಸಿದ್ದ ಮಾರೀಚ ಬರಲು ರಾಮಬಾಣ ಅವನನ್ನು ನೂರು ಯೋಜನದಾಚೆ ಎತ್ತಿ ಎಸೆಯಿತು. ಒಟ್ಟು ಏಳು ದಿನಗಳಲ್ಲಿ ಆ ಅಸುರರೆಲ್ಲಾ ನುಣ್ಣಗಾದರು.

ಆಮೇಲೆ ಒಂದು ದಿನ ವಿಶ್ವಾಮಿತ್ರನು ರಾಮಾದಿಗಳನ್ನು ಅಹಲ್ಯಾಶ್ರಮಕ್ಕೆ ಕರೆದೊಯ್ದಾಗ, ಶಿಲಾನಾರಿಯಾಗಿದ್ದ ಅಹಲ್ಯೆಯು ರಾಮಪಾದ ಸ್ಪರ್ಶದಿಂದ, ಶಿಲಾಸ್ವರೂಪದಿಂದ ಮುಕ್ತಳಾಗಿ ಎದ್ದು ರಾಮನಿಗೆ ವಂದಿಸಿದಳು. ಅನಂತರ ಕೌಶಿಕನು ತನ್ನ ನಾಲ್ವರು ಶಿಷ್ಯರನ್ನು ಮಿಥಿಲಾನಗರಕ್ಕೊಯ್ದನು.

–೨–

ಸೀತಾಸ್ವಯಂವರ

ಲಕ್ಷ್ಮಿಯ ಅವತಾರವಾಗಿ ಮಿಥಿಲಾಧಿಪತಿ ಜನಕನ ರಕ್ಷಣೆಯಲ್ಲಿದ್ದ ಸೀತಾದೇವಿಯ ಸ್ವಯಂವರದ ಸಿದ್ಧತೆಯಲ್ಲಿ ಇಡೀ ವಿದೇಹ ರಾಜ್ಯವೇ ಮುಳುಗಿ ಹೋಗಿತ್ತು. ಹರ, ಬ್ರಹ್ಮ, ಇಂದ್ರ, ಅಗ್ನಿ, ವರುಣ, ವಾಯು, ಕುಬೇರ, ಸೂರ್ಯ, ಚಂದ್ರ, ಗುರು, ಶುಕ್ರ, ಶನಿ ಮುಂತಾದ ದೇವತೆಗಳೂ, ಇತರ ರಾಜಕುಮಾರರೊಡನೆ ಸ್ವಯಂವರ ಮಂಟಪದ ಸುತ್ತ ಉಪಸ್ಥಿತರಾಗಿದ್ದರು. ಇಷ್ಟೇ ಅಲ್ಲ; ಲಂಕೇಶನಾದ ದಶಕಂಠ ರಾವಣನೂ ಅಲ್ಲಿ ಹಾಜರಾಗಿದ್ದ!



ಜನಕ ಹರಧನುಸ್ಸನ್ನು ಪೂಜಿಸಿ, 'ಹರಿಯು ಸೀತೆಯನ್ನು ವರಿಸಲಿ' ಎಂದು ಪ್ರಾರ್ಥಿಸಿದನು. ಆಗ ಧನುಸ್ಸು ಹೂಂಗುಟ್ಟುವಂತೆ ಹೂಂಕರಿಸಿತು! ರಾವಣನು ಅದನ್ನೆತ್ತಲು ಹೋಗಿ ದಣಿವಾಗಿ ತಾನು ಮೊದಲು ಕೂತಿದ್ದ ಪೀಠದತ್ತ ಹೋಗಿ, 'ಬದುಕಿದೆಯಾ ಬಡಜೀವ!' ಎಂದು ಕೂತುಕೊಂಡನು. ಆಗ ವಿಶ್ವಾಮಿತ್ರನು ರಾಮನನ್ನು ಆ ಕೋದಂಡವನ್ನು ಎತ್ತಲೆಂದು ಕರೆದೊಯ್ಯುತ್ತಿದ್ದಾಗ, ಜಂಭದಿಂದ ತಲೆ ಬಾಗದ ರಾವಣನ ಮಣಿ ಪೀಠದ ಸನಿಹದ ನೆಲವನ್ನು ಕಾಲಿಂದ ಒತ್ತಿ ಅವನು ಎರಗುವಂತೆ ಮಾಡಿದನು. ದೇವತೆಗಳಾಗ ನಕ್ಕರು! ವಿಶ್ವಾಮಿತ್ರನ ಆಜ್ಞೆಯಂತೆ ೧೪ ವರ್ಷ ವಯಸ್ಸಿನ ರಾಮ ಈಶ ಕೋದಂಡವನ್ನು ಹಾಯಾಗಿ ಎತ್ತಿ, ಈಶಕೃಪೆಯಿಂದ, ಒಡೆಯುವಂತೆ ಬಾಗಿಸಿದನು. ದೇವತೆಗಳು ನಲಿದರು. ಸೀತೆ ರಾಮನಿಗೆ ಹಾರ ಹಾಕಿದಳು. ದಶರಥನನ್ನು ಮಂಟಪಕ್ಕೆ ಕರೆದೊಯ್ಯಲು ಕೋಟಿ ಪಲ್ಲಕ್ಕಿಗಳು ಹೋದವು! ಸೂರ್ಯವಂಶ–ಚಂದ್ರವಂಶ ಶ್ರೀರಾಮವಿವಾಹದಲ್ಲಿ ಒಂದಾಯ್ತು. ಆ ಮದುವೆಯ ಸಂದರ್ಭದಲ್ಲಿ ಮಂಥರೆಯು ಒಬ್ಬ ಬ್ರಾಹ್ಮಣನನ್ನು ಅಪಮಾನಿಸಿದಳು. ಆಗ ರಾಮನು ಮಂಥರೆಯನ್ನು ದಂಡಿಸಲು, ಆಕೆ ರಾಮನಲ್ಲಿ ಹಗೆತನವನ್ನು ಸಾಧಿಸಿದಳು.

–೩–

ರಾಮನ ವನವಾಸ

ಅರವತ್ತು ವರ್ಷ ತಾನು ರಾಜ್ಯವಾಳಿ ದಣಿದೆನೆಂದು ದಶರಥನು ರಾಮನಿಗೆ ಪಟ್ಟಾಭಿಷೇಕ ಮಾಡುವ ಇಚ್ಛೆಯನ್ನು ವ್ಯಕ್ತಪಡಿಸಿದನು. ಅದನ್ನು ಕೇಳಿದ ಮಂಥರೆ ಕೈಕೇಯಿಯ ಹಿತ್ತಾಳೆ ಕಿವಿಯನ್ನು ಸಂಪೂರ್ಣವಾಗಿ ತಿರುಗಿಸಿ ಅವಳು ದಶರಥನಲ್ಲಿ ಭರತ ಪಟ್ಟಾಭಿಷೇಕವನ್ನು ವರವಾಗಿ ಬೇಡುವಂತೆ ಮಾಡಿ ತನ್ನ ಹಿಂದಿನ ಹಗೆಯನ್ನು ರಾಮನ ಮೇಲೆ ತೀರಿಸಿಕೊಂಡಳು. ರಾಮನು ಕೈಕೇಯಿಯ ಇಷ್ಟದಂತೆ ೧೪ ವರ್ಷಗಳ ವನವಾಸಕ್ಕೆ ಸೀತಾಲಕ್ಷ್ಮಣರೊಂದಿಗೆ ಹೊರಟನು. ಪೌರರೆಲ್ಲರೂ ಮರುಗಿದರು. ಕಾಡಿನಲ್ಲಿ ಲಕ್ಷ್ಮಣನು ತಾನು ಮೊದಲೇ ಹಣ್ಣು ತಿಂದಿದ್ದೆನೆಂದು ನೆಪ ಹೇಳಿ ಉದ್ದಕ್ಕೂ



ಉಪವಾಸವನ್ನು ಆಚರಿಸುತ್ತ ಹೋದನು. ಸಾರಥಿಯು ರಾಮನನ್ನೂ ಸೀತಾಲಕ್ಷ್ಮಣರನ್ನೂ ಗಂಗಾತಟಕ್ಕೆ ಸಾಗುಹಾಕಿ ಅಯೋಧ್ಯೆಗೆ ಬಂದು ಅತ್ತನು. ದಶರಥ ಅತ್ತ ಮತ್ತು ಸತ್ತ. ರಾಜ್ಯವು ಅರಾಜಕವಾಗಿ ಭ್ರಷ್ಟಾಚಾರ ಆರಂಭವಾಯ್ತು. ಆಗ ಮಂತ್ರಿ ಸುಮಂತನು ಸೋದರ ಮಾವನ ಮನೆಯಲ್ಲಿದ್ದ ಭರತನನ್ನು ಬರಹೇಳಿದ. ಅವನು ತಾಯಿಯನ್ನು ಬಯ್ದು ಅತ್ತು ಕರೆದು ಗೋಳಾಡಿದ; ಶತ್ರುಘ್ನನೂ ಹಾಗೇ ಗೋಳಿಟ್ಟ. ಸಿಟ್ಟಿನಿಂದ ಭರತನು ತಾಯನ್ನು ಕಡಿಯ ಹೋದಾಗ ಅವಳು ಬಾಗಿಲು ಹಾಕಿಕೊಂಡು ಪಾರಾದಳು. ಆದರೆ ಮಂಥರೆ ಮಾತ್ರ ಅವನ ಕೈಗೆ ಸಿಕ್ಕಿ ಹೊಡೆತ ತಿಂದು ರಕ್ತವನ್ನು ಕಾರಿದಳು. ಭರತನು ಆತ್ಮಹತ್ಯೆಗೆ ಸಿದ್ಧನಾದಾಗ ವಸಿಷ್ಠಾದಿಗಳು ತಡೆದರು. ಅನಂತರ ಪರಿವಾರದೊಡನೆ ಭರತನು ರಾಮನನ್ನು ಹುಡುಕಲು ಹೊರಟು ಭರದ್ವಾಜನ ಆಶ್ರಮವನ್ನು ತಲುಪಿದನು; ಮತ್ತು ಗಂಗೆಯನ್ನು ದಾಟಿ ರಾಮಾದಿಗಳಿದ್ದ ಸ್ಥಳಕ್ಕೆ ಹೋದನು. ಅಲ್ಲಿ ರಾಮನ ಪಾದಗಳಲ್ಲಿ ತಲೆಯಿಟ್ಟು ಅವನು ಗೋಳಿಟ್ಟನು. ಶತ್ರುಘ್ನ ಕೂಡ ಹಾಗೇ ಮಾಡಿದ. ವಸಿಷ್ಠ ಸಮಾಧಾನ ಹೇಳಿದ. ಗಂಗೆಯಲ್ಲಿ ದಶರಥನ ಉತ್ತರ ಕ್ರಿಯೆಯನ್ನು ಮಕ್ಕಳೆಲ್ಲರೂ ಮುಗಿಸಿದರು. ಅನಂತರ ರಾಮಪಾದುಕೆಗಳನ್ನು ಸ್ವೀಕರಿಸಿ ನಾರುಮಡಿಯುಟ್ಟು ಭರತನು ರಾಮಾಜ್ಞೆಯಂತೆ ಅವನ ಆಳಾಗಿ ರಾಜ್ಯ ಪಾಲನೆ ಮಾಡಲೊಪ್ಪಿ ೧೪ ವರ್ಷಗಳಲ್ಲಿ ರಾಮ ಹಿಂದಿರುಗದಿದ್ದರೆ ಅಗ್ನಿ ಪ್ರವೇಶ ಮಾಡುವೆನೆಂದು ಪ್ರತಿಜ್ಞೆ ಮಾಡಿದನು. ಅನಂತರ ಭರತನೂ ಶತ್ರುಘ್ನನೂ ಕೌಸಲ್ಯಾದಿಗಳೂ ಅಯೋಧ್ಯೆಗೆ ದುಃಖಭಾರದಿಂದ ಹಿಂದಿರುಗಿದರು.

ಒಂದು ದಿನ ರಾಮನು ಸೀತೆಯ ತೊಡೆಯ ಮೇಲೆ ತಲೆಯಿಟ್ಟು ಕಾಡಿನಲ್ಲಿ ಮಲಗಿದ್ದಾಗ ಕಾಕಾಸುರನು ಸೀತೆಯ ಎದೆಯನ್ನು ಒದೆದನು. ಆಗ ರಾಮ ಎಚ್ಚತ್ತು ಅವನತ್ತ ಅಂಬನ್ನು ಬಿಟ್ಟಾಗ ಅವನು ಕ್ಷಮೆ ಕೇಳಿದನು. ಆಗ ಅವನ ಎರಡು ಕಣ್ಣುಗಳನ್ನೂ ಕುರುಡುಗೊಳಿಸದೆ ರಾಮಬಾಣವು ಒಂದೇ ಕಣ್ಣನ್ನು ಕುರುಡು ಮಾಡಿತು. ಅಂದಿನಿಂದ ಯಾವ ದಿಕ್ಕಿಗೆ ಬೇಕಾದರೂ ಕಣ್ಣ ಒಂದೇ ಗೋಲಕವನ್ನು ತಿರುಗಿಸಿ ಕಾಗೆಗಳು ನೋಡಬಲ್ಲವುಗಳಾದವು.

ಇನ್ನೊಂದು ದಿನ ಬೇಟೆಗಾರ ರಾಕ್ಷಸನಾದ ಶಂಭುಕನು ಕುಬೇರನಿಂದ ಪ್ರಾಣಭಿಕ್ಷೆ ಪಡೆದು ತಪಸ್ಸು ಮಾಡತೊಡಗಿದಾಗ ಅವನನ್ನು ಲಕ್ಷ್ಮಣನು ಕಡಿದನು. ಆಗ ಅವನ ತಾಯಿ ಶೂರ್ಪಣಖೆಯು ಲಕ್ಷ್ಮಣನನ್ನು ಕಪಟದಿಂದ ಸಂಹರಿಸಲು ಹೊಂಚುಹಾಕಿ ಸುಂದರಿಯ ರೂಪವನ್ನು ತಾಳಿ ರಾಮನನ್ನು ಮದುವೆಯಾಗೆಂದು ಬೇಡಿದಳು. ಅವನು ಅವಳನ್ನು ಲಕ್ಷ್ಮಣನ ಹತ್ತಿರ ಕಳಿಸಿದನು. ಅವನೊಲ್ಲೆನೆಂದಾಗ ಪುನಃ ರಾಮನೆಡೆಗೆ ಹೋದಳು. ಅವನು ಅವಳ ಬೆನ್ನಮೇಲೆ ತನ್ನ ಉಗುರಿನಿಂದ. ಅವಳ ಮೂಗು ಕೊಯ್ಯೆಂದು ಬರೆದು ಲಕ್ಷ್ಮಣನೆಡೆಗೆ ಕಳಿಸಿದ ಕೂಡಲೇ ಲಕ್ಷ್ಮಣನು ಹಾಗೆಯೇ ಮಾಡಿದನು. ಆಗ ಅವಳು ತನ್ನ ಅಣ್ಣಂದಿರಾದ ಖರದೂಷಣರಲ್ಲಿ

ದೂರು ಕೊಟ್ಟಳು. ಕೂಡಲೇ ೧೪ ಸಾವಿರ ಯೋಧರೊಡನೆ ಖರದೂಷಣರು ರಾಮ–ಲಕ್ಷ್ಮಣರ ಮೇಲೆ ಯುದ್ಧಕ್ಕೆದ್ದರು. ತ್ರಿಶಿರನೆಂಬ ದಾನವನೂ ಅವರ ನೆರವಿಗೆ ಬಂದ. ದೂಷಣನ ತಲೆ ಕಡಿದರೆ ಚಿಗುರುತ್ತಿತ್ತು. ಆಗ ವಾಯು ರಾಮನಿಗೆ– 'ಅವನ ಕಡಿದ ತಲೆಯನ್ನು ಅವನ ಹೊಟ್ಟೆಯಲ್ಲಿ ಹುದುಗಿಸಿ ಸೇರಿಸು' ಎಂದು ಹೇಳಿದ. ರಾಮ ಹಾಗೆ ಮಾಡಿ ಅವನನ್ನು ಕೊಂದು ಖರನೊಡನೆ ಹೋರಾಡುತ್ತಿದ್ದಾಗ ಹಗೆಯು ರಾಮನ ಬಿಲ್ಲನ್ನು ಮೂರು ತುಂಡು ಮಾಡಿದನು. ಕೂಡಲೇ ಶರಭಂಗ ಮುನಿಕೊಟ್ಟ ಧನುವನ್ನೆತ್ತಿಕೊಂಡು ದನುಜನ ಧನುಸ್ಸನ್ನು ಕಡಿದೊಗೆದನು ಮತ್ತು ಮೂರೇ ಬಾಣಗಳಿಂದ ಅವನ ತಲೆ ಕಡಿದನು.

–೪–

ಸೀತಾಪಹಾರ

ಮೂವರು ಅಣ್ಣಂದಿರೂ ಯುದ್ಧದಲ್ಲಿ ಸತ್ತಾಗ ಶೂರ್ಪಣಖೆಯು ರಾವಣನ ಹತ್ತಿರ ತನಗಾದ ಮಾನಭಂಗವನ್ನು ಹೇಳಿಕೊಂಡು ಅತ್ತದ್ದಲ್ಲದೆ ಸೀತಾಪಹರಣಕ್ಕೆ ಪ್ರಚೋದನೆ ಕೊಟ್ಟಳು; ತಾನು ರಾವಣನಿಗಾಗಿ ಸೀತೆಯನ್ನು ತರಹೋಗಿ ಹೀಗಾಯ್ತೆಂದು ಸುಳ್ಳು ಹೇಳಿದಳು. ರಾವಣನು ಮಾವ ಮಾರೀಚನೆಡೆಗೆ ಹೋದ. ಅವನು ಬುದ್ಧಿ ಹೇಳಿದರೆ ರಾವಣ ಕೇಳದಾದ. ಆಗ ನಿರ್ವಾಹವಿಲ್ಲದೆ ಮಾರೀಚನು ಮಾಯಾಮೃಗವಾದ. ಆ ಮೃಗವು ರಾಮಾಶ್ರಮದೆದುರು ಸುಳಿದಾಡಿದಾಗ ಸೀತೆ ತನಗದು ಬೇಕೆಂದಳು. ತಮ್ಮನಿಗೆ ಆಶ್ರಮವನ್ನು ಕಾದಿರಲು ಹೇಳಿ ರಾಮ ಅದರ ಬೆಂಬತ್ತಿ ಹೋದ. ಅದು ಕೈಗೆಟುಕದಾದಾಗ ಅದಕ್ಕೆ ಬಾಣ ಬಿಟ್ಟ. ಅದು "ಹಾಲಕ್ಷ್ಮಣ" ಎಂದು ರಾಮಸ್ವರದಿಂದಲೇ ಕೂಗಿ ಸತ್ತಿತು. ಅದನ್ನು ಕೇಳಿ ಸೀತೆ ಲಕ್ಷ್ಮಣನನ್ನು ರಾಮರಕ್ಷಣೆಗಾಗಿ ಒತ್ತಾಯ ಮಾಡಿದಳು. ಅವ ಹೊರಟ–ಮನಸ್ಸಿಲ್ಲದ ಮನಸ್ಸಿನಿಂದ. ರಾವಣ ಸಂನ್ಯಾಸಿಯಾಗಿ ಸೀತಾಶ್ರಮಕ್ಕೆ ಭಿಕ್ಷೆಗೆ ಹೋದ. ಗಂಡಸರಿಲ್ಲದ ಮನೆಯ ಹೊಗೆನೆಂದು ಕಪಟ ಸಂನ್ಯಾಸಿ ಹೇಳಿದಾಗ ಸೀತೆಯು ಲಕ್ಷ್ಮಣ ಎಳೆದು ಹೋಗಿದ್ದ ಗೆರೆಯನ್ನು ದಾಟಿ ಭಿಕ್ಷೆ ಹಾಕಲು ಹೋದಳು. ಕೂಡಲೇ ರಾವಣನು ಅವಳನ್ನು ಹಿಡಿದುಕೊಂಡು ಆಕಾಶಕ್ಕೆ ಹಾರಿ ಪುಷ್ಪಕ ವಿಮಾನವನ್ನೇರಿ ಲಂಕೆಗೆ ಹೊರಟನು. ಸೀತೆ ಅತ್ತು ಕರೆದು ಸೋತಳು. ಅಷ್ಟರಲ್ಲಿ ಜಟಾಯು ಇದಿರಾದ; ಚೆನ್ನಾಗಿ ಹೋರಾಡಿದ; ಆದರೆ





ರಾವಣ ಕತ್ತಿಯಿಂದ ಅವನ ಬೆನ್ನನ್ನಿರಿದ. ಕೂಡಲೇ ಸೀತೆ ರಾಮ ಬರುವವರೆಗೆ ಅವನಿಗೆ ಜೀವವಿರಲಿ ಎಂದು ವರಕೊಟ್ಟಳು. ಆ ಮೇಲೆ ಸಂಪಾತಿ ಅಡ್ಡಗಟ್ಟಿದ. ಅವನ ಎಡಗಾಲ ಕೆಳಗೆ ನುಸುಳಿಕೊಂಡು ರಾವಣ ಲಂಕೆಗೆ ನಡೆದೇ ಬಿಟ್ಟ!


ತಾಯಿ ಕೈಕಸೆ ಸೀತೆಯನ್ನು ತಂದುದು ಕೇಡೆಂದು ಅವಳನ್ನು ವನದಲ್ಲಿ ಇಡಲು ರಾವಣನಿಗೆ ಹೇಳಿದಳು. ಅವನು ಹಾಗೇ ಮಾಡಿದನು. ಇತ್ತ ರಾಮಲಕ್ಷ್ಮಣರು ಮಾಯಾ ಮೃಗರೂಪದ ಮಾರೀಚನ ವಧೆಯ ಅನಂತರ ಆಶ್ರಮಕ್ಕೆ ತಿರುಗಿ ಹೋದಾಗ ಸೀತೆ ಕಾಣಿಸದುದರಿಂದ ಅತಿಯಾಗಿ ಗೋಳಿಟ್ಟರು. ಸೀತೆಯನ್ನಗಲಿದ ರಾಮ ವಿರಾಮನಾದ; ಅಲೆಯುತ್ತ ಹೋದಾಗ, ಜಟಾಯು ಸುದ್ದಿಯನ್ನರುಹಿ ಪ್ರಾಣಬಿಟ್ಟ; ಶಬರಿಯೂ ಹೇಳಿದಳು. ಅಲ್ಲಿಂದ ಮುಂದೆ ರಾಮಲಕ್ಷ್ಮಣರು ಪಂಪಾಸರೋವರವನ್ನು ಸಮೀಪಿಸಿದರು.


–೫–

ಮಂಗ ಪ್ರಸಂಗ

ತನ್ನ ಬೀಡಿನ ಸಮೀಪದಲ್ಲಿ ತಿರುಗುತ್ತಿದ್ದ ರಾಮ ಲಕ್ಷ್ಮಣರ ವೃತ್ತಾಂತವನ್ನು ತಿಳಿಯಲು ಕಿಷ್ಕಿಂಧೆಯೊಡೆಯನಾಗಿದ್ದ ವಾಲಿಯ ತಮ್ಮ ಸುಗ್ರೀವನು ತನ್ನ ವಸತಿಸ್ಥಾನವಾದ ಋಷ್ಯಮೂಕ ಪರ್ವತದಿಂದ ಹನುಮಂತನನ್ನು ಕಳಿಸಿದನು. ಮರದ ಕೆಳಗೆ ಬಳಲಿ ನಿದ್ರಿಸಿದ್ದ ರಾಮನಿಗೆ ತಾನು ನೀರಲ್ಲಿ ಮುಳುಗುತ್ತಿದ್ದಾಗ ಮಂಗವೊಂದು ಬಂದು ಬದುಕಿಸಿದ ಸ್ವಪ್ನಬಿದ್ದಿತು. ಲಕ್ಷ್ಮಣ ಅದು ಶುಭಸೂಚಕವೆಂದ. ಅಷ್ಟು ಹೊತ್ತಿಗೆ ಹನುಮಂತನು ತನ್ನ ತಾಯ ಉಪದೇಶದ ಪ್ರಕಾರ ನಿನ್ನ ಸೇವೆಗೆ ಬಂದೆನೆಂದು ರಾಮನಿಗೆ ಅಡ್ಡ ಬಿದ್ದ. ರಾಮನು ಹನುಮಂತನ ವೃತ್ತಾಂತವನ್ನು ಕೇಳಿದನು. ತಾನು ಕೇಸರಿ ಎಂಬ ಅತುಲಪರಾಕ್ರಮಿಯಾದ ವಾನರನ ಮಗನೆಂದೂ ತನ್ನ ತಾಯಿ ಹರ ಶಾಪದಿಂದ ವಾನರ ಸ್ತ್ರೀಯಾಗಿ ಜನಿಸಿದ ಪುಂಜಿಕೆ ಎಂಬ ಅಪ್ಸರಸ್ತ್ರೀ ಎಂದೂ ಕೇಸರಿಗೆ ಬಂದ ಮುನಿಶಾಪದಿಂದ ತಾನು ಹರಪುತ್ರನಾಗಿ ಅವಳಲ್ಲಿ ಜನಿಸಿದೆನೆಂದೂ ಹನುಮಂತನು ಹೇಳಿದನು. ಹರವೀರ್ಯವನ್ನು ವಾಯು ತಂದು ತನ್ನ ತಾಯಗರ್ಭ ಕೋಶದಲ್ಲಿಟ್ಟದ್ದರಿಂದ ತಾನು ವಾಯುಪುತ್ರನೆಂದು ಪ್ರಸಿದ್ಧನಾದೆನೆಂದೂ ಅವನು ಬಿತ್ತರಿಸಿದನು. ಗಿರಿಜಾನುಗ್ರಹದಿಂದ ತಾನು ವಜ್ರಕಾಯನಾದುದನ್ನೂ ಆತ ತಿಳಿಸಿದ. ಇಂದ್ರ–ಅಹಲ್ಯೆಯರ ಸಂಯೋಗದಿಂದ ವಾಲಿ ಜನಿಸಿದ್ದನ್ನೂ, ಸೂರ್ಯ–ಅಹಲ್ಯೆಯರ ಸಂಯೋಗದಿಂದ ಸುಗ್ರೀವ ಹುಟ್ಟಿದ್ದನ್ನೂ ಹನುಮಂತ ಬಿತ್ತರಿಸಿದ. ಮುಂದೆ ಅಹಲ್ಯೆಯ ಗಂಡ ಗೌತಮನಿಗೆ ಈ ವಿಷಯ ತಿಳಿದಾಗ ಅವನು ಇಂದ್ರ, ಸೂರ್ಯ, ಅಹಲ್ಯೆಯರಿಗೆ ಶಾಪ ಕೊಟ್ಟದ್ದಲ್ಲದೆ, ವಾಲಿ ಸುಗ್ರೀವರಿಗೂ ಕಪಿರೂಪದವರಾಗಿರಿ ಎಂದು ಶಾಪಕೊಟ್ಟನಂತೆ. ಆಮೇಲೆ ವಾಲಿಯು ತಪಸ್ಸು ಮಾಡಿ ವರ ಪಡೆದ. ಅದರಿಂದ ೧೦ ಯೋಜನ ವಿಸ್ತಾರದ ಮೈಯ ಕೋಣನಾಗಿದ್ದ ದುಂದುಭಿ ರಾಕ್ಷಸನನ್ನು ವಾಲಿ ಕೊಂದ. ಆಮೇಲೆ ಅವನ ಮಗ–ತಂದೆ ಕೋಟಿ ಕಾಡಾನೆಗಳ ಶಕ್ತಿಯುಳ್ಳವನಾಗಿದ್ದರೆ, ಇವನು ೧೦ ಕೋಟಿ ಕಾಡಾನೆಗಳ ಶಕ್ತಿಯಿಂದ ಕೂಡಿ–ವಾಲಿಯೊಡನೆ ಹೋರಾಡಿ ಬಂದ. ದುಂದುಭಿಯ ಶರೀರವನ್ನು ಮಾತಂಗ ಮುನಿ ತಪಸ್ಸಿಗೆ ಕೂತಿದ್ದ ಗಿರಿಗೆಸೆದದ್ದರಿಂದ ವಾಲಿ ಆ ಗಿರಿಯ ಮೇಲೆ ಕಾಲಿಟ್ಟರೆ ಅವನಿಗೆ ಸಾವು ಬರಲಿ

ಎಂದು ಆ ಮುನಿ ಶಾಪಕೊಟ್ಟ. ವಾಲಿಯು ಅವನ ಮಗನನ್ನು ಒಂದು ವರ್ಷ ಹೋರಾಡಿ ಸೋಲಿಸಿದ. ಆ ಮಗ ಮಾಯಾವಿಯು ಸೋತು ಒಂದು ಬಿಲದಲ್ಲಿ ಹೊಕ್ಕ. ತಮ್ಮ ಸುಗ್ರೀವನಿಗೆ ಬಿಲದ ಬಾಗಿಲಲ್ಲಿರಹೇಳಿ, ಬೆವರು ನೊರೆಗಟ್ಟಿ ಬಂದದ್ದು ಕಾಣಿಸಿದರೆ ತಾನು ಸತ್ತೆನೆಂದು ತಿಳಿದುಕೊಳ್ಳಬೇಕೆಂದು ಕುರುಹನ್ನು ತಿಳಿಸಿ ವಾಲಿಯು ಒಳಹೊಕ್ಕು ಮಾಯಾವಿಯನ್ನು ಕೊಂದ. ಬಿಲದ ಬಾಗಿಲಲ್ಲಿದ್ದ ಸುಗ್ರೀವನು ಮಾಯಾವಿಯ ಬೆವರು ನೊರೆಗಟ್ಟಿ ಹರಿದು ಬರಲು ಅದನ್ನು ವಾಲಿಯ ಬೆವರ ನೊರೆವೊನಲೆಂದು ತಿಳಿದು ಬಿಲದ ಬಾಗಿಲನ್ನು ಮುಚ್ಚಿ ಅಣ್ಣನ ಸಿಂಹಾಸನವನ್ನೇರಲು ಮಂತ್ರಿಗಳ ಒತ್ತಾಯದಿಂದ ಸಿದ್ಧತೆ ಮಾಡಿದನು. ಅಷ್ಟು ಹೊತ್ತಿಗೆ ವಾಲಿ ಬಂದು ತಮ್ಮನ ಅಧಿಕಾರ ಲಾಲಸೆಗೆ ಕುಪಿತನಾಗಿ ಹೊಡೆಯ ಹೋಗಲು ಸುಗ್ರೀವನು ವಾಲಿ ಮೆಟ್ಟಲಾರದ, ಮಾತಂಗ ಶಾಪದ ರಕ್ಷೆ ಇರುವ ಋಷ್ಯಮೂಕ ಪರ್ವತವನ್ನು ಹನುಮಂತನೊಡನೆ ಸೇರಿದನು. ರಾವಣನೆಂಬ ಕಾಳ ರಕ್ಕಸನೊಬ್ಬನು ಸದ್ಯದಲ್ಲೇ ಗೋಳಿಡುತ್ತಿದ್ದ ಸತಿಯೊಬ್ಬಳನ್ನು ಒಯ್ದುದುಂಟೆಂದೂ ಅವಳೇ ಸೀತೆಯಾಗಿರಬಹುದೆಂದೂ ಸುಗ್ರೀವನ ಮತ್ತು ಅವನ ದಳದ ನೆರವಿನಿಂದ ಸೀತಾವಿಮೋಚನೆ ಸಾಧ್ಯವೆಂದೂ ರಾವಣನಿಗೆ ವಾಲಿ ನೆಂಟನೆಂದೂ ವಾಲಿಯನ್ನು ಕೊಂದರೆ ಸುಗ್ರೀವನು ಸೇನೆಸಹಿತವಾಗಿ ಬೆಂಬಲಕ್ಕೆ ನಿಲ್ಲುವನೆಂದೂ ರಾಮನಿಗೆ ಹನುಮಂತ ಹೇಳೀದನು. ವಾಲಿಯು ಸಾಮಾನ್ಯನಲ್ಲ. ಸಾವಿರ ಅಕ್ಷೌಹಿಣೀ ಸೈನ್ಯದೊಡನೆ ರಾವಣನೊಮ್ಮೆ ದಿಗ್ವಿಜಯಕ್ಕೆ






ಬಂದಾಗ ವಾಲಿ ಅವನನ್ನು ತನ್ನ ಕಂಕುಳಲ್ಲಿಟ್ಟು, ಸಮುದ್ರ ಸ್ನಾನ ಮುಗಿಸಿಕೊಂಡು, ಮಗನಾದ ಅಂಗದನ ತೊಟ್ಟಿಲಿಗೆ ಅವನನ್ನು ಅನೇಕ ವರ್ಷಗಳವರೆಗೆ ಕಟ್ಟಿಟ್ಟಿದ್ದ! ರಾವಣ ಜೀವಭಿಕ್ಷೆ ಬೇಡಿದಾಗ ಅವನಿಗೆ ಯಾವಾಗಲೂ ತಾನು ನೆರವೀಯುವೆನೆಂದು ವಾಲಿ ವಚನ ಕೊಟ್ಟ. ಆದುದರಿಂದ ವಾಲಿಯನ್ನು ಮುಗಿಸದ ಹೊರತು ರಾವಣನನ್ನು ಗೆಲ್ಲಲು ಸಾಧ್ಯವಿಲ್ಲ ಎಂದು ಹನುಮಂತ ಹೇಳಿದ ಕೂಡಲೇ ರಾಮನು ವಾಲಿ ವಧೆಗೆ ಪ್ರತಿಜ್ಞೆ ಮಾಡಿದ.

–೬–

ಮಂಗ ಸೇನಾಪತಿಗಳು

ಹನುಮಂತನಿಂದ ರಾಮಪ್ರತಿಜ್ಞೆಯನ್ನು ತಿಳಿದ ಸುಗ್ರೀವನು ಸೀತೆ ಕೆಳಗೆ ತೂರಿದ್ದ ಆಭರಣಗಳನ್ನು ರಾಮನಿಗೆ ಕಾಣಿಕೆಯಾಗಿ ತೆಗೆದುಕೊಂಡು ಹೋದ. ಚರಣಕಮಲಗಳಿಗೆರಗಿದ, ವಾಲಿವಧೆ ಮಾಡುವ ಶಕ್ತಿಯಿದೆಯೆಂಬುದರ ಕುರುಹು ತೋರೆಂದು ಬೇಡಿದ. ಆಗ ರಾಮನು ದುಂದುಭಿಯ ಶರೀರವನ್ನು ಬಿಲ್ಲಿನ ತುದಿಯಿಂದೆತ್ತಿ ಯೋಜನದ (೯ಮೈಲಿ ದೂರ) ಆಚೆಗೆ ಎಸೆದ; ಏಳು ತಾಳೆಗಳನ್ನು (ಹನೆಮರಗಳನ್ನು) ಒಂದೇ ಬಾಣದಿಂದ ಮುರಿದೊರಗಿಸಿದ; ೨೭ ಮೈಲುದ್ದದ ಹಾವಿನ ತೆಕ್ಕೆಯ ಮೇಲೆ ಬೆಳೆದ ೬ ಹನೆಮರಗಳನ್ನು ಆ ಹಾವಿನ ಬಾಲದ ಮೇಲೆ ಬಿಲ್ಲಿಟ್ಟು ಹೆದೆಯೇರಿಸಿ ಅಂಬೆಸೆದು ಉರುಳಿಸಿದ! ಆಗ ಸುಗ್ರೀವನು ರಾಮನೊಡನೆ ಸಂಧಿ ಮಾಡಿಕೊಂಡನು; ವಾಲಿ ಸಂಹಾರಕ್ಕೆ ಪ್ರತಿಯಾಗಿ ಲಂಕೆಯಲ್ಲಿರುವ ಸೀತೆಯನ್ನು ರಾಮನಿಗೆ ತೋರಿಸುವ



ವ್ಯವಸ್ಥೆಮಾಡುವುದು ಅವನ ಕರಾರು. ರಾಮನು ಹಂಪೆಯ ವಿರೂಪಾಕ್ಷನೆದುರು ಆ ಕರಾರಿಗೆ ಒಪ್ಪಿಗೆ ಕೊಟ್ಟ.

ಆಗ ಸುಗ್ರೀವ ವಾಲಿಯೊಡನೆ ಹೋರಾಡಹೋದ. ಅವನನ್ನು ವಾಲಿಯಿಂದ ಬೇರೆಯಾಗಿ ಗುರುತಿಸಲಾರದೆ ರಾಮ ಸುಮ್ಮನಿದ್ದ. ಸುಗ್ರೀವನು ಸೋತು ಓಡಿ ಬಂದು ರಾಮನನ್ನು ದೂರಿದ. ಆಗ ಹೂಮಾಲೆ ಹಾಕಿಕೊಂಡು ಇನ್ನೊಮ್ಮೆ ಯುದ್ಧಮಾಡೆಂದ. ಸುಗ್ರೀವ ಹಾಗೇ ಮಾಡಿದ. ರಾಮ ವಾಲಿಯನ್ನು ಮರೆಯಲ್ಲಿದ್ದು ಬಾಣ ಬಿಟ್ಟು ಸಾಯುವ ಹಾಗೆ ಮಾಡಿದ. ಸಾಯುವ ಮೊದಲು ಮೋಸ ಮಾಡಿ ಕೊಂದೆಯೆಂದೂ ಹೇಳಿದ್ದರೆ ರಾವಣನನ್ನು ತಾನೇ ಕಡಿದೊಗೆದು ಬಿಡುತ್ತಿದ್ದೆನೆಂದೂ ರಾಮನಿಗೆ ವಾಲಿ ಹೇಳಿದ. ಅದು ನಿಜವಾದರೆ ತಾನು ಮತ್ತೆ ಬದುಕಿಸುವೆನೆಂದು ರಾಮ ವಾಲಿಗೆ ಹೇಳಿದಾಗ ಅವನು ತನಗೆ ಪುನರ್ಜನ್ಮ ಬೇಡವೆಂದೂ ಅಂದಿನಿಂದ ಮುಕ್ತನಾಗುವೆನೆಂದೂ ಹೇಳಿ ಸ್ವರ್ಗಕ್ಕೇರಿದನು.

ರಾಮನಾಗ ಸುಗ್ರೀವನಿಗೆ ಪಟ್ಟಾಭಿಷೇಕ ಮಾಡಿದನು. ಅನಂತರ ಒಂದು ವರ್ಷ ಕಳೆಯಿತು. ಸುಗ್ರೀವನಿಗೆ ಲಕ್ಷ್ಮಣನೂ ತಾರೆಯೂ ಕೊಟ್ಟವಚನವನ್ನು ನೆನಪು ಮಾಡಿಕೊಟ್ಟರು. ಆಗ ಸುಗ್ರೀವನು ಹನುಮಂತ, ನಳ, ನೀಲ, ಅಂಗದ, ಜಾಂಬವ, ಶರಭ, ಶತಬಲಿ, ಗಂಧಮಾದನ, ವೃಷಭ, ಸಂಪಾತಿ, ಪನಸ, ಗವಾಕ್ಷ, ಗವಯ, ಮೈಂದ, ಸುಷೇಣ, ತಾರಣರೆಂಬ ೧೬ ಸೇನಾನಾಯಕರನ್ನು ಅವರವರ ಸೈನ್ಯದೊಡನೆ ಕರೆಯಿಸಿದನು. ಅವರೆಲ್ಲರೂ ರಾಮನೆದುರು ನೆರೆದಾಗ ಫಣಿರಾಯನು ವೆಂಟಣಿಸಿದನು. ಭೂಮಿ ಕುಸಿದಿತು! ತಿಣುಕಿದನು ಫಣಿರಾಯ ರಾಮಾಯಣದ ಕಪಿಗಳ ಭಾರದಲಿ! ಸುಗ್ರೀವ–ದಧಿಮುಖರೂ ಸೇರಿದರೆ ೧೮ ಜನ ಸೇನಾನಾಯಕರು!

-೭-

ಹನುಮನ ಹಾರಿಕೆ

ಕಪಿಧ್ವಜರಾದ ಆ ಅಷ್ಟಾದಶ ದಾಕ್ಷಿಣಾತ್ಯ ದಂಡನಾಯಕರು ಒಬ್ಬೊಬ್ಬರೇ ಬಂದು ರಾಮನಿಗೆರಗಿದರು. ಕವಿ ಅವರನ್ನು ಕಪಿಗಳೆಂದದ್ದು ಅವರ ವನವಾಸಿ ನಾಗರಿಕತೆಯನ್ನು ಕಂಡು, ಅವರೂ ಆರ್ಯರೇ! ಆದರೆ ಬಹಳ ಹಿಂದೆಯೇ ವಲಸೆ ಬಂದು ನಾಗರಿಕತೆಯಲ್ಲಿ ಮುಂಬರಿಯದೆ ಸಂಸ್ಕೃತಿಯಷ್ಟನ್ನೇ ಉಳಿಸಿಕೊಂಡಿದ್ದುದರಿಂದ ಅವರು ವಾನರ (ನರರಂತೆ ತೋರುವರು) ರೆನ್ನಿಸಿಕೊಂಡರು! ಅವರು ಅಂದಿನ ಹಂಪೆಯ ಹರೀಶ್ವರರು (ಹರಿ ಎಂದರೆ ಕಪಿ). ಬ್ರಹ್ಮನ ಮಗನೆಂದು ಹೇಳಲಾದ ಜಾಂಬವನು ಕರಡಿಯನ್ನು ಧ್ವಜ ಚಿಹ್ನವಾಗಿ ಇಟ್ಟುಕೊಂಡ ಸುಗ್ರೀವನ ಸಾಮಂತ.

ಹನುಮಂತನಿಗೆ ಕರ್ತವ್ಯದ ಪಟ್ಟಕಟ್ಟಿ ೧೦ ದಿನಗಳೊಳಗಾಗಿ ಅವನು ಸೀತಾ ವೃತ್ತಾಂತವನ್ನು ತರಲು ರಾಮನು ಆಜ್ಞಾಪಿಸಿದನು. ಅವನೊಡನೆ ಇತರ ಕಪೀಶ್ವರರಲ್ಲಿ ಹಲವರು ಹೋದರು. ಕಾಡು-ಗುಡ್ಡಗಳನ್ನು ಹೊಕ್ಕ ಅವರು ಕಡಲ ತಡಿಯನ್ನು ಸೇರಿದರು. ರಾಮೇಶ್ವರದ ಎದುರಿನ ಕಡಲನ್ನು ದಾಟಿದರೆ ಲಂಕೆ ಸಿಕ್ಕುತ್ತದೆ. ಅಷ್ಟು ದೂರ ಹಾರುವವರಾರು?


ಆ ಈ ಕಪಿಗಳು ತಮ್ಮ ತಮ್ಮ ಲಂಘನ ಶಕ್ತಿಯನ್ನು ಹೇಳಿಕೊಂಡರು. ಒಬ್ಬ ಹತ್ತು ಯೋಜನ ಹಾರಿಯೇನು ಎಂದರೆ ಇನ್ನೊಬ್ಬ ಐವತ್ತು ಯೋಜನ ಹಾರಿಯೇನು ಎಂದ. ನಲವತ್ತು ಯೋಜನೆಗಳಾಚೆ ಹಾರಬಲ್ಲವರು ಅವರಲ್ಲಿದ್ದರೂ ನೂರು ಯೋಜನ ಕೂಡ ಅವರಲ್ಲಿ ಯಾರೂ ಹಾರಲಾರರೆಂಬುದು ತಿಳಿದು ಬಂತು. ಆಗ ಅವರೆಲ್ಲರೂ ಹನುಮಂತನ ಹತ್ತಿರ ಹೋಗಿ ನೀನೇ ಸರಿ ಲಂಕೆಗೆ ಹಾರಬಲ್ಲವ ಎಂದು ಬಿನ್ನವಿಸಿದರು. ಅದಕ್ಕೆ ಹನುಮಂತ ಒಪ್ಪಿದ. ಕೂಡಲೇ ಅವನು ಹೋಲಿಕೆಗೆ ಹೊರತಾಗಿ ಬೆಳೆದನು; ಆಗ ಭೂಮಿಗೆ ಕೀಲು ಕಳಚಿದಂತಾಯಿತು; ಮಹೇಂದ್ರಗಿರಿಯ ಶಿಖರ ಬಿರಿಯುವಂತೆ ಅದರ ಮೇಲೊಂದು ಕಾಲಿಟ್ಟ; ಬಾಲ ಚಕ್ರಾಕಾರದಲ್ಲಿ ಅವನ ಹಿಂದೆ ಸುರುಳಿಯಾಯಿತು; ಮತ್ತೊಂದು ಕಾಲನ್ನು ಬೆಟ್ಟದ ನೆತ್ತಿಯಲ್ಲಿಟ್ಟು ಸಾಗರ ದಾಟಲು ಜಿಗಿದ.

ಹನುಮಂತ ಗಿರಿಯನೆತ್ತಿಯನ್ನೊತ್ತಿ ಮೇಲೆ ಹಾರಿದ ಹೊಡೆತಕ್ಕೆ ಅಲ್ಲಿಯ ಭೂಮಿ ನೀರಲ್ಲಿ ಒಮ್ಮೆ ಮುಳುಗು ಹಾಕಿತು; ಬ್ರಹ್ಮಾಂಡವು ಆನೆಯಂತೆ ಘೀಳಿಟ್ಟಿತು. ದಿಗ್ಗಜಗಳು ತಲೆಕೊಡಹಿದವು; ಆದಿಶೇಷನು ಹೆದರಿ ಹಲವು ಹೆಡೆಗಳನ್ನು ಎತ್ತಿದನು! 'ಭಲೇ ಹನುಮಾ!' ಎಂದ ಸೂರ್ಯನೂ ಹೆದರಿ ಹೋದ; ಚಂದ್ರ ತಪಿಸಿದ; ತಾರೆಗಳು ದಿಕ್ಕಾಪಾಲದವು!

ಮನೋವೇಗದಿಂದ ಹನುಮಂತನು ಹಾರಿದಾಗ ದೇವತೆಗಳು ಪರೀಕ್ಷಿಸಲೆಂದು ಮಾಯಾದಳವನ್ನು ಎದುರು ಬಿಟ್ಟರು. ಅದರಲ್ಲಿದ್ದ ಸುರಸೆ ಬಾಯ್ದೆರೆದು ಅಬ್ಬರಿಸಿ ಚೀರಿದಳು. ಹನುಮ ಅವಳ ಮೇಲೆರಗಿದ. ಅವನ ಹೊಡೆತದಿಂದ ಅವಳ ಹಲ್ಲುಗಳು ಮುರಿದುರುಳಿದವು. ಅವಳನ್ನಾಗ ದೇವತೆಗಳು ತಿರುಗಿ ಕರೆದುಕೊಂಡರು.

ಅನಂತರ ಸಿಂಹಿಕೆ ಅಡ್ಡಗಟ್ಟಿದಳು. ಹನುಮಂತ ಅವಳ ಹೊಟ್ಟೆಯನ್ನು ಸೀಳಿ ಒಗೆದಾಗ ಆ ಸೀಳುಗಳು ಕಪಿಗಳ ಸೈನ್ಯ ಕಾಯುತ್ತಿದ್ದ ಕಡಲ ದಂಡೆಯಲ್ಲಿ ಬಿದ್ದವು. ಮಂಗವೀರರು 'ಭಲೇ, ಭೇಷ್' ಎಂದು ಹನುಮಂತನ ಪರಾಕ್ರಮವನ್ನು ಕೊಂಡಾಡಿದರು. ದಾರಿಯಲ್ಲಿ ಮೈನಾಕಪರ್ವತ ಕಡಲೊಳಗಿಂದ ಎದ್ದು ಬಂದು ಹನುಮಂತನಿಗೆ ಉಪಚಾರ ಮಾಡತೊಡಗಿದಾಗ ಅವನು ನೀನಾರೆಂದು ಪ್ರಶ್ನಿಸಿದನು. ತಾನು ಹಿಮಾಲಯನ ಮಗನೆಂದೂ ಹಿಂದೆ ದೇವೇಂದ್ರನು ಗಿರಿಗಳ ರೆಕ್ಕೆಗಳನ್ನು ಕತ್ತರಿಸತೊಡಗಿದಾಗ ಗಾಳಿ ಬಂದು ತನ್ನನ್ನಿಲ್ಲಿ (ಕಡಲ ನಡುವೆ) ಅಡಗಿಸಿಟ್ಟು ಕಾಯ್ದನೆಂದೂ ಆದ್ದರಿಂದ ಅವನ ಮಗನಾದ ನಿನ್ನನ್ನು ತಾನೀಗ ಸತ್ಕರಿಸಬಂದೆನೆಂದೂ ಮೈನಾಕ ಹೇಳಿದನು.

ಗಡಿಬಿಡಿಯಿಂದ ತಾನು ಸೀತಾನ್ವೇಷಣಕ್ಕೆ ಹೊರಟಿರುವೆನೆಂದೂ ಅದು ಮುಗಿದ ಮೇಲೆ ತಾನು ಮೈನಾಕನ ಉಪಚಾರವನ್ನು ಸ್ವೀಕರಿಸುವೆನೆಂದೂ ಹೇಳಿ ಹನುಮ ಹಾರಿದ. ಆಗ ತೃಣಬಿಂದು ಮುನಿ ಸಿಕ್ಕಿದ; ಅವನಿಗಡ್ಡಬಿದ್ದು ಲಂಕೆಯ ದಾರಿಯನ್ನು ಕೇಳಿದ. ಅದಕ್ಕೆ ಮುನಿ ಲಂಕೆಗೆ ಹೋಗುವುದು ಅಸಾಧ್ಯವೆಂದು ಹೇಳಿದ; ಲಂಕಿಣಿಯ ಕಾವಲು, ರಾವಣನ ಸೈನ್ಯ ಮುಂತಾದವುಗಳ ಭಯಂಕರತೆಯನ್ನು ಬಣ್ಣಿಸಿದ. ಆಗ ಹನುಮನೆಂದ "ಸುಡುವೆ ಲಂಕೆಯ ಸಹಿತವೆಲ್ಲರ, ಹಿಡಿದು ಮೂಪಿಡಿಗೊಳಿಸಿ ಹಣೆಯ ಬರಹವ ತೊಡೆವೆನು ಬಡಿವೆ ನೆರವಿಗೆ ಬಂದೊಡಮರರ!" ಮತ್ತು ಸೂರ್ಯ ಮಂಡಲಕ್ಕೆ ತಾಗುವಷ್ಟು ಎತ್ತರ ಬೆಳೆದ! ಅದರಿಂದ ಮುನಿಗಿವ ಸಮರ್ಥನೆಂಬುದು ಗೊತ್ತಾಯಿತು. ಆಗ ಹತ್ತಿರದಲ್ಲಿದ್ದ ತನ್ನ ಕನಕ ಕುಂಡಲವನ್ನು ತಾಯೆಂದ. ಹನುಮ ಕಷ್ಟಪಟ್ಟು ಅದನ್ನು ತಂದಾಗ ನಕ್ಕು ಮುನಿ ಅವನಿಗೆ ಲಂಕೆಯ ಮಾರ್ಗವನ್ನು ಹೇಳಿದನು. ಏಕೆಂದರೆ ಲಂಕೆಯ ತಾಣವನ್ನು ತಿಳಿಯದೆ ಹನುಮ ಮೊದಲನೆಯ ಜಿಗಿತಕ್ಕೆ ಅದಕ್ಕೂ ಮುಂದೆ ಹೋಗಿ ಲಂಕೆಯನ್ನು ಕಾಣಲಾರದೆ ಹಿಂದಿರುಗಿದ್ದ! ಮುನಿತೋರಿಸಿದಾಗ ಸಾವಿರ ಸೂರ್ಯರ ಪ್ರಕಾಶದಂತೆ ಲಂಕೆ ಹನುಮನಿಗೆ ಹೊಳೆದು ಕಾಣಿಸಿಕೊಂಡಿತು.



–೮–

ಲಂಕಾವತರಣ

ಹಾರಿದನು ಹನುಮಂತ ಲಂಕೆಗೆ; ಲಂಕೆಯನ್ನವ ಮುಟ್ಟುವಾಗ ಸಂಜೆಯಾಗಿತ್ತು; ಆಗ ಅವನನ್ನು ತಿನ್ನಲು ಲಂಕಿಣಿ ಎದುರಾದಳು! ಸುರೆಯಿಂದ ಅಸುರೆ ಕೊಬ್ಬಿದ್ದಳು; ಹನುಮನೆದುರಾದೊಡನೆ ಲಂಕಿಣಿ ಚೀರಿ ಬೊಬ್ಬಿರಿದಳು. ಅವನನ್ನು ನುಂಗಲು ಬಾಯ್ದೆರೆದಳು. ಆಗ ಅವನು ಅವಳ ಕೊರಳಿಗೆ ಬಾಲ ಸುತ್ತಿ ಎಳೆದನು. ಆಗ ನೆತ್ತರುಕಾರಿ ಅವಳು ಸತ್ತಳು. ಅವಳ ಬೆಂಬಲಕ್ಕಾಗಿ ಬಂದ ೧೦ ಸಾವಿರ ರಾಕ್ಷಸರನ್ನು ಅವನು ಬಾಲದಿಂದ ಸುತ್ತಿ ಶಿಲೆಗಪ್ಪಳಿಸಿಕೊಂದನು; ಲಂಕಿಣಿಯ ಹೆಣವನ್ನೆತ್ತಿಟ್ಟಾಗ ಅದರಡಿಯಲ್ಲಿ ಸಿಕ್ಕಿ ಉಳಿದ ಬೆಂಬಲಿಗರೆಲ್ಲರೂ ಆನೆ ತುಳಿದ ಕಾಗೆಹಣ್ಣಿನ ರಾಶಿಯಂತೆ ನಜ್ಜು ಗುಜ್ಜಾಗಿ ಸತ್ತು ಹೋದರು. ಶಾಪಗ್ರಸ್ತೆಯಾಗಿದ್ದ ಲಂಕಿಣಿಗೆ ತನ್ನ ಯಕ್ಷಿಣಿಯ ರೂಪ ಪ್ರಾಪ್ತವಾಯ್ತು. ಹರನಿಗೆ ಭಿಕ್ಷೆ ನೀಡದ ಫಲವಾಗಿ ಅವಳಿಗೆ ಶಾಪಬಂದಿತ್ತು; ಭಿಕ್ಷೆಗೆ ಬದಲಾಗಿ "ಮೂರಣ್ಣೆಗಲ್ಲನು" ಹರನಿಗೆ ಹಾಕಿದ್ದಳಂತೆ! ಹನುಮಂತನಿಂದ ಅವಳ ಶಾಪ ಪರಿಹಾರವಾಯ್ತು. ಅವಳು ವರಬೇಡೆಂದಾಗ ಪುನರ್ಜನ್ಮ ತನಗೆ ಬಾರದಿರಲೆಂದು ಅವನು ಬೇಡಿದನು; ಅವಳು ಹಾಗೇ ಆಗಲೆಂದು ಹರಸಿದಳು ಮತ್ತು ಯಕ್ಷಲೋಕಕ್ಕೆ ತೆರಳಿದಳು.

–೯–

ಸೀತಾಶೋಧ


ಲಂಕಿಣೀ ಸಂಹಾರದ ಸುದ್ದಿ ರಾವಣನ ಕಿವಿಗೆ ಬಿದ್ದರೆ ಅವನು ಮೊದಲು ನಂಬಲಾರದಾದ; ಆಣೆಮಾಡಿ ಸೇವಕರು ಹೇಳಿದಾಗ ನಂಬಿದ; ಯಮದಂಡ ಮೊದಲಾದ ನಾಯಕರನ್ನು ಇರುಳುಗಾವಲಿಗಾಗಿ ಕಳಿಸಿದ. ನೊಣ ಸುಳಿದರೂ ಅವರು ಕೊಚ್ಚಿ ಚೂರುಮಾಡುತ್ತಿದ್ದರು. ಆಗ ಹನುಮನು ಅಣುರೂಪತಾಳಿ ಒಳಹೊಕ್ಕ; ಒಂದು ದಿನವಿಡೀ ಅರಸಿದ. ಸೀತೆ ಕಾಣಲಿಲ್ಲ; ಈಶ್ವರ ದೇವಾಲಯವೊಂದರಲ್ಲಿ ಅಡಗಿ ಕುಳಿತು ರಾತ್ರಿಯಾದೊಡನೆಯೇ ಮತ್ತೆ ಎದ್ದ. ರಾಕ್ಷಸರ ಕೇರಿಗಳಲ್ಲಿ ಕಾವಲುಗಾರರು ಕಾಣದಂತೆ ಹುಡುಕಿದ. ಸೀತೆ ಎಲ್ಲೂ ಸಿಗಲಿಲ್ಲ. ಆಮೇಲೆ ರಾವಣನ ಅರಮನೆಯನ್ನು ಹೊಕ್ಕ. ಅಲ್ಲಿ ಅವನ ಸಿಂಹಾಸನ ಹೊಳೆಯುತ್ತಿತ್ತು; ಬಳಿಕ ಶೂರ್ಪಣಖೆಯ ಅರಮನೆಯನ್ನು ಹೊಕ್ಕ; ಅಲ್ಲಿ ಅವಳು ನಿದ್ದೆಗಣ್ಣಲ್ಲಿ ಕಳೆದುಕೊಂಡಿದ್ದ ಕಿವಿ ಮೂಗುಗಳನ್ನು ಕೈಯೆತ್ತಿ ಹುಡುಕುತ್ತಿದ್ದಳು! ಅಥವಾ ತನ್ನ ಮೊಗವನ್ನು ಓರಣಮಾಡಿಕೊಳ್ಳುತ್ತಿದ್ದಳು! ಇಲ್ಲವೇ ಯಾರೋ ಬಂದಿರುವರೆಂದು ತಿಳಿದು ಸರಸವಾಡುತ್ತಿದ್ದಳು! ಅದನ್ನು ನೋಡಿನಕ್ಕ ಆಂಜನೇಯನು ತನ್ನ ಅಣುರೂಪದಿಂದಲೇ ರಾವಣನ ಕೋಶಾಗಾರವನ್ನು ಪ್ರವೇಶಿಸಿದ; ಅಲ್ಲಿ ಕಾಣಿಸಿದ ಅನರ್ಘ್ಯಪಟ್ಟೆಪೀತಾಂಬರಗಳನ್ನು ಸುಟ್ಟರೆ ಒಳಿತಾದೀತೆಂದು ನೆನೆಯುತ್ತ ಅಲ್ಲಿಂದ ಹೊರಬಿದ್ದ. ಉಗ್ರಾಣದಲ್ಲಿ ನುಸಿದಾಗ ನವರತ್ನ ರಾಶಿಯು ಬೊಟ್ಟು ಬೊಟ್ಟಾಗಿ ಕಾಣಿಸಿದು. ಸೀತೆಗೆ ಮರುಳಾಗಿ ರಾವಣ ಈ ಐಶ್ವರ್ಯವನ್ನು ಅನುಭವಿಸಲು ಇನ್ನು ಬಹಳ ಕಾಲ ಉಳಿಯಲಾರ ಎನ್ನುತ್ತ ಅಲ್ಲಿಂದ ಹೊರಹೊರಟ. ಇತರ ವಿವಿಧ ಅರಮನೆಗಳಲ್ಲಿ ಕೆಲವೆಡೆ ಕೆಂದಳಿರಹಸೆ, ಕೆಲವೆಡೆ ಹೂವಿನ ಹಾಸಿಗೆ, ಕೆಲವೆಡೆ ಹವಳದ ಮಂಚಕೋಟೆಗಟ್ಟಲೆ ಇದ್ದವು. ರಾವಣನ ಆಡಳಿತದ ಸಿಬ್ಬಂದಿಯ ಎಲ್ಲ ಸೌಧಗಳನ್ನೂ ಹುಡುಕಿ ನೋಡಿದ; ಸೀತೆ ಕಾಣಿಸಲಿಲ್ಲ.

-೧೦-

ಅಶೋಕವನದ ಸೀತೆ

ಸೀತೆಯನ್ನು ಅರಸುತ್ತ ಹನುಮಂತ ಕುಂಭಕರ್ಣನ ಅರಮನೆಗೆ ಬಂದ. ಕೆಂಪುಮಂಚದ ಮೇಲೆ ಹೆಬ್ಬೆಟ್ಟದಂತೆ ಕುಂಭಕರ್ಣ ಗೊರಕೆಹೊಡೆಯುತ್ತ ಬಿದ್ದಿದ್ದ; ಬೆವರು ಸೋರಿ ಹರಿಯುತ್ತಿತ್ತು. ನುಸಿಯಾಗಿದ್ದ ಹನುಮ ಅವನ ಉಸಿರಿನಲ್ಲಿ ಸಿಕ್ಕಿ ಬಿದ್ದ. ಉಸಿರು ಬಿಟ್ಟಾಗ ತೊಲೆಗೆ ತಾಗುತ್ತಿದ್ದ, ಉಸಿರನ್ನವ ಒಳಗೆಳೆದುಕೊಂಡಾಗ ಅವನ ಮೂಗಿನೊಳಗೆ ಸಿಕ್ಕುತ್ತಿದ್ದ! ಆಗ ಹನುಮ ಅವನ ಮಂಚದ ಕಾಲನ್ನು ಅಪ್ಪಿ ಹಿಡಿದುಕೊಂಡು ಹೊರಬಿದ್ದ; ಮುಂದೆ ಇಂದ್ರಜಿತ್ತಿನ ಅರಮನೆಯ ಒಳ ಹೊಕ್ಕು ಅಲ್ಲಿಯ ವೈಭವವನ್ನು ಕಂಡು ಬೆಕ್ಕಸ ಬೆರಗಾದ. ಆ ರಾಜತಂತ್ರ ವಿಶಾರದನ ಹೆಮ್ಮನೆಯಲ್ಲಿ ಖೇಚರರು. ಕಿನ್ನರರು, ಸಿದ್ದರು, ವಿದ್ಯಾಧರರು, ಮಹೋರಗಲಾಂಛನರು, ಗಂಧರ್ವರು ಒಂದೊಂದು ಕಡೆ ಸೆರೆಮನೆವಾಸವನ್ನು ಅನುಭವಿಸುತ್ತಿದ್ದರು. ಅಲ್ಲಿ ಎಲ್ಲೂ ಸೀತೆ ಕಾಣಿಸಲಿಲ್ಲ. ಅನಂತರ ವಿಷ್ಣು ಮಂದಿರದಂತಿದ್ದ ವಿಭೀಷಣನ ಮನೆ ಸಿಕ್ಕಿತು. ಅಲ್ಲಿ ನಿಂತು ಹರಿಕಥೆ ಕೇಳಿ ಮಿಕ್ಕದಾನವರ ಮನೆಹೊಕ್ಕ ಪಾಪವನ್ನವ ಕಳೆದುಕೊಂಡ. ಆಮೇಲೆ ರಾವಣನ ಪುಷ್ಪಕ ವಿಮಾನವನ್ನು ಹೊಕ್ಕ; ಅಲ್ಲಿ ಉರಿಯನುಗುಳುವ ರತ್ನಮಂಚದಲ್ಲಿ ಮಲಗಿದ್ದ ರಾವಣನನ್ನು ಕಂಡ. ರಾವಣನ ತೊಡೆಗಳು ಅವಳಿ ಗಿರಿಗಳಂತೆದ್ದವು. ಜಂಭದ ಹತ್ತು ಕಲೆಗಳಂತೆ ಅವನ ಹತ್ತು ತಲೆಗಳು ತೋರಿದವು. ಅವನ ತೋಳುಗಳು ನೀಲಾಚಲದ ಬೀಳು (ಬಳ್ಳಿ) ಗಳಂತಿದ್ದವು.

ಅಂಥ ಪ್ರಚಂಡ ಪಾಪಿಯು ಸೀತೆಯನ್ನು ಕದ್ದು ತರುವುದು ಸಹಜವೆಂದು ತೋರಿತು ರುದ್ರಾಂಶ ಸಂಭೂತನಾದ ಹನುಮನಿಗೆ. ಅವನು "ದಾಡೆಯನುಳ್ಳ ಮಕರಧ್ವಜ ಮಹಾದೇವ" ಎಂಬಂತಿದ್ದನಂತೆ! ಮಂಡೋದರಿ ಅವನ ಪಕ್ಕದಲ್ಲಿ ಬೆಕ್ಕಿನ ಜೊತೆಗಿದ್ದ ಗಿಳಿಯಂತೆ ಮಲಗಿದ್ದುದೂ ಕಾಣಿಸಿತು. ಅವನು ಹುಲಿ, ಅವಳು ಹರಿಣ–ಎನ್ನಿಸಿತು ಆಂಜನೇಯನಿಗೆ. ಒಂದು ಸಲ ಕೊಂದೇಬಿಡಬೇಕೆನ್ನಿಸಿತವನಿಗೆ ರಾವಣನನ್ನು; ಆದರೆ ರಾಮಾಜ್ಞೆಯನ್ನು ನೆನೆದು ಸೆಳೆದ ಖಡ್ಗವನ್ನು ಹಿಂದೆಳೆದುಕೊಂಡ. ರಾವಣನ ಕನಕಮುದ್ರೆಯನ್ನು ಹನುಮ ಮುಟ್ಟಿದೊಡನೆಯೇ ಅವನ ಸೌಂದರ್ಯವೆಲ್ಲ ಹೋಗಿ ಕೋರೆ ದಾಡೆಗಳು ಕಾಣಿಸಿಕೊಂಡವು!



ಒಮ್ಮೆ ಸೀತೆ ಆತ್ಮಹತ್ಯೆ ಮಾಡಿಕೊಂಡಳೋ ಏನೋ ಎಂಬ ಹೆದರಿಕೆ ಅವನಿಗಾದ ಕೂಡಲೇ ಸೀತೆ ಸಿಗದಿದ್ದರೆ ಲಂಕೆಯನ್ನೇ ಕಿತ್ತು ಎತ್ತಿ ರಾಮನ ಪಾದಗಳೆದುರಿಡುವೆನೆಂದು ಹನುಮಂತ ಸಂಕಲ್ಪಿಸಿದ. ಹಾಗೆ ಕೀಳುವಾಗ ರಾಕ್ಷಸರಿದ್ದರೆ ಅವರೆಲ್ಲರನ್ನೂ ಕೊಂದುಹಾಕಿಬಿಡುವೆನೆಂದು ಕೊಂಡ. ಒಮ್ಮೆ ಬಾಲದಿಂದ ಲಂಕೆಯನ್ನು ಸುತ್ತತೊಡಗಿದ. ಆಗ ಅವನ ತಂದೆ ವಾಯುವು ಅಶೋಕವನದತ್ತ ಹೋಗಲು ಸನ್ನೆವಾಡಿದ. ಅಲ್ಲಿಗವ ಹೋದ; ರಾಮ ಭಜನೆಯನ್ನು ಕೇಳಿದ; ಸೀತೆಯನ್ನು ಕಂಡ! ವಿರಹಾರ್ತೆಯಾದ ಸೀತೆಯನ್ನು ನೋಡಿ ಕಡುನೊಂದ, ಬೆಂದ, ಮರುಕ ಪಟ್ಟ! ಆ ಹೊತ್ತಿಗೆ ದಣಿದು ಕಣ್ಣುಮುಚ್ಚಿದಾಗ ರಾಮಸೇವಕನಾದ ಕಪಿಯೊಬ್ಬ ಲಂಕೆಯನ್ನು ಸುಟ್ಟು ತನಗೆ ರಾಮಮುದ್ರೆಯ ಉಂಗುರವನ್ನು ಕೊಟ್ಟ ಕನಸು ಸೀತೆಗೆ ಬಿದ್ದಿತು. ಅವಳು ಕನಸಿನಿಂದ ಎಚ್ಚರಾಗುವಷ್ಟರಲ್ಲಿ ರಾವಣ ಅವಳೆದುರು ನಿಂತಿದ್ದ!

ಸೀತೆಗೆ ಅಂಥ ಅನುಕೂಲ ಕನಸುಬಿದ್ದಾಗ ರಾವಣನಿಗೆ ಪ್ರತಿಕೂಲ ಕನಸು ಬಿದ್ದು ಜೋಯಿಸರನ್ನು ಅರಮನೆಗೆ ಕರೆಸಿಕೊಂಡಿದ್ದ. ಜೋಯಿಸರು ಅವನ ದುಃಸ್ವಪ್ನಫಲದ ನಿವಾರಣೆಗಾಗಿ ಶಾಂತಿ ಮಾಡಿಸಲು ಹೇಳಿದರು. ಆದರೂ ಕೆಂಪು ಹೂ ಮುಡಿದು ತಲೆಗೆ ಎಣ್ಣೆ ಹಾಕಿಕೊಂಡು ತನ್ನೊಬ್ಬ ಮಗ ಕತ್ತೆಯೇರಿ ಹೋಗುವುದನ್ನು ರಾವಣ ಕನಸಿನಲ್ಲಿ ಕಂಡದ್ದು ಖಂಡಿತ ದುಷ್ಫಲಕಾರಿ ಎಂದು ಅವರು ಒತ್ತಿ ಹೇಳಿದ್ದರಿಂದ ಉದ್ವಿಗ್ನನಾಗಿ ಅವನು ಸೀತೆ ಇದ್ದ ಅಶೋಕವನದೆಡೆಗೆ ಧಾವಿಸಿದನು. ಅಲ್ಲಿ ಮಾಯಾರೂಪದಿಂದ ತನ್ನನ್ನು ಸುಂದರಿಸಿಕೊಂಡು ಎಷ್ಟು ಸಾಮೋಕ್ತಿಗಳನ್ನಾಡಿದರೂ ಸೀತೆ ಒಲಿಯದಾದಾಗ ಘೋರ ರೂಪ ತಾಳಿ ಕತ್ತಿ ಎತ್ತಿ ಅವಳನ್ನು ಅವನು ಕಡಿಯಹೋದ. ಕೂಡಲೇ ಅಲ್ಲಿ ಹನುಮಂತ ಪ್ರತ್ಯಕ್ಷನಾದ. ಸೀತೆ ಕೈಮಾಡಿ ತಡೆದಳು.

ರಾವಣ ಸೇವಿಕೆಯೊಬ್ಬಳಿಗೆ, ಸೀತೆಯನ್ನು ಒಲಿಸಿ ಕೊಟ್ಟರೆ ಬಹುಮಾನ ಕೊಡುವೆನೆಂದು ಹೇಳಿ ಹೊರಟು ಹೋದನು.

ಆಗ ಹನುಮಂತನು ಅವಳಿಗೆ ಕೈ ಮುಗಿದು ರಾಮನ ಮುದ್ರೆಯುಂಗುರವನ್ನು ಕೊಟ್ಟ. ಸೀತೆಗೆ ಆಶ್ಚರ್ಯಸಂತಸಗಳುಂಟಾದವು; ಹನುಮಂತನನ್ನು ಮಾಯಾರೂಪತಾಳಿದ ರಾಕ್ಷಸನಾಗಿರಬಹುದೆಂದು ಮೊದಲು ಶಂಕಿಸಿದಳು. ಆಗ ರಾಮನಾಣೆ ಹಾಕಿ ಅವನು ರಾಮ–ಸುಗ್ರೀವರಲ್ಲಿ ಸ್ನೇಹ ಉಂಟಾದ ಅವಧಿಯಿಂದ ನಡೆದ ವೃತ್ತಾಂತವೆಲ್ಲವನ್ನೂ ಬಿಡಿಸಿ ಹೇಳಿದನು; ಅಲ್ಲದೆ, ರಾಮ ಹೇಳಿದ ಸೀತಾರಾಮರಿಗಷ್ಟೇ ಗೊತ್ತಿದ್ದ ಕೆಲ ರಹಸ್ಯ ಘಟನೆಗಳನ್ನೂ ಹೇಳಿದ ಮೇಲೆ ಸೀತೆಗೆ ನಂಬುಗೆಯುಂಟಾಯ್ತು. ರಾಮನಿಗೆ ಹೋಗಿ ತನ್ನನ್ನು ಬಿಡಿಸಹೇಳೆಂದು ಅವನಿಗಾಗ ಸಂದೇಶವನ್ನಿತ್ತಳು; ರಾಮನ ವಿಯೋಗದುಃಖವನ್ನು ಕೇಳಿ ಮರುಗಿದಳು. ಆಗ ಹನುಮನು ರಾಮ ಅವಳನ್ನು ಬಿಡಿಸಿಕೊಂಡು ಹೋಗುವನೆಂದೂ ತಾನೀಗ ರಾಮಸೇವಕನಾಗಿ ಅವನ ಮತ್ತು ಅವನ ಸೈನ್ಯದ ಎಂಟನೆಯ ಒಂದರಷ್ಟು ಪ್ರತಾಪವನ್ನು ತೋರಲು ದನುಜರನ್ನು ಕೊಂದು ಲಂಕೆಯನ್ನು ಸುಟ್ಟು ಅಶೋಕ ವನವನ್ನು ಹಾಳುಗೆಡಹುವೆನೆಂದೂ ಹೇಳಿ ತನ್ನ ಬಾಲವನ್ನು ಬೆಳಸಿ ಮರಗಳನ್ನು ಮುರಿಯತೊಡಗಿದ.

–೧೧–

ಲಂಕಾದಹನದ ಮೂಲ

"ಹಿರಿಯರನು ಕರೆವಂತೆ, ಬನ್ನಿಯ ನರೆಯ ಹೊತ್ತವರಂತೆ, ಮತ್ತವ ಹರನ ವಾಹನದಂತೆ, ನಂದಿಯ ಮರನ ಕಪಿಕಿತ್ತ! ತರುಣಿಯರ ಕಿವಿಯಂತೆ ಹಾಲೆಯ ಹರಿಯ ಹಣೆಯಂತೆಸೆವ ತಿಲಕವ ಕರ ಬಡವನಂತೆಸೆವ ತಾರಿಯ ಮರನ ಕಪಿಕಿತ್ತ!"

ಫಲಪುಷ್ಪಗಳಿಂದ ತುಂಬಿದ ಹುಣಿಸೆ ಮರಗಳನ್ನು ಕಪಿ ಕಿತ್ತ; ಪ್ರಳಯದ ಗಾಳಿಯಂತೆ ತೆಂಗು, ಹಲಸು, ಖದಿರ, ಬಯನೆ, ನೇರೀಳೆ, ನುಗ್ಗೆ, ಮಾವಿನಮರಗಳನ್ನು ಕಪಿ ಕಿತ್ತ! ಎಕ್ಕೆ, ಬಾಗೆ, ಅಡಿಕೆ, ಮತ್ತಿ, ತೊಂಡೆಗಳನ್ನು ಬುಡಮೇಲುಮಾಡಿದ! ಈಳೆ, ಹೊಂಗೇದಗೆ, ಕಂಚಿ, ಬಾಳೆ, ಎಲೆಬಳ್ಳಿ, ಮೆಣಸಿನೋಳಿ, ದ್ರಾಕ್ಷೆ, ರಸದಾಳಿ, ದಾಳಿಂಬಗಳನ್ನು ಕಿತ್ತು ಹುಡಿ ಮಾಡಿದ!

ಕೂಡಲೇ ಹೆಂಡಕುಡಿದಿದ್ದ ದಾನವರು ಓಡಿಬಂದರು; ಹನುಮಂತನನ್ನು ಹಿಡಿದು ಕಟ್ಟಿ ರಾವಣ ಸಭೆಗೊಯ್ಯಲು ಹೊಂಚು ಹಾಕಿದರು. ಆ ಕಾವಲುಗಾರರ ಮುಖಂಡ ಜಂಬುಮಾಲಿ. ಅವನನ್ನು ಹೆಮ್ಮರವೊಂದರಿಂದ ಹೊಡೆದಪ್ಪಳಿಸಿ ಕೊಂದಕೂಡಲೇ ಅವನ ಅನುಯಾಯಿಗಳು ದೂರು ಕೊಡಲು ಧಾವಿಸಿದರು. "ಎಲೆಲೆ ಕಪಿ ಕಪಿ ಕೆಡಹು ಕೆಡಹೋ ಕೋಲಲು ಕೂಕೂ ಕೊಲ್ಲು ಕೊಲ್ಲೋಬಲೆಯನೊಡ್ಡೋ ಹುಯ್ಯಲಿಕ್ಕೋ ನಾಯಕರ ಕರೆಯೋ; ಕೊಲುವ ಕೋಡಗವಲ್ಲ ಮೊರೆಯೋ ಖಳರು ಸತ್ತರು ಹಲಬರೆಂಬಾ" ಕಳವಳದ ಕೇಳ್ದುಪ್ಪವಡಿಸಿದ ವೀರ ದಶಕಂಠ!

ರಾವಣನು ಗರ್ಜಿಸಿದೊಡನೆಯೇ ಅವನ ಮಗ ಅಕ್ಷಕುಮಾರನು ಹನುಮಂತನನ್ನು ಹಿಡಿಯಲು ಸನ್ನದ್ಧನಾದ. ಅವನ ಸೈನಿಕರೂ ಸಶಸ್ತ್ರರಾಗಿ ಅವನ ಹಿಂದೆ ಧಾವಿಸಿದರು. ಹನುಮಂತನು ಅಗಸೆಬಾಗಿಲ ತೊಲೆಗಳ ಮೇಲೆ ಅತ್ತಿಂದಿತ್ತ ತಿರುಗುತ್ತ ಹೆಮ್ಮರಗಳನ್ನು ಕಿತ್ತು ಅವುಗಳಿಂದ ಬಡಿದು ಅವರೆಲ್ಲರನ್ನೂ ಸರದಿಯಂತೆ ಯಮಲೋಕಕ್ಕೆ ಕಳಿಸುತ್ತಿದ್ದ.

ತುರಗ ಹರಿದವು, ಕರಿಗಳೋಡಿತು, ವರವರೂಥಗಳಚ್ಚು ಮುರಿದವು, ಹರಿಯ (ಕಪಿಯಾ) ಖುರಪುಟದಿಂದ ಹತ ಹತವಾಯ್ತು ಪಾಯದಳ; ಹರಿಗೆ ಹರಿದವು.

ಸಬಳ ಮುರಿದವು, ಶಿರಗಳೊಡೆದವು, ಕರಗಳುಡಿದವು, ಸಿರಿಯ ನೆಚ್ಚಿನ ಬಂಟ ಕೊಂದನು ರಾಕ್ಷಸಾಧಮರ!

ಆಮೇಲೆ ಅಕ್ಷಕುಮಾರ ಸ್ವತಃ ಎದುರಾದ. ಅವನ ಆನೆಯನ್ನೂ ಅವನ ತಲೆಯನ್ನೂ ಹನುಮ ಕಾಲಿಂದ ಒದೆದು ಝಾಡಿಸಿದ ಕೂಡಲೇ ಅವನ ತಲೆ ಮುಂಡದಿಂದ ಬೇರ್ಪಟ್ಟು ರಾವಣನ ಸಭೆಯಲ್ಲಿ ಬಿದ್ದಿತು! ರಾವಣನಾಗ ಕಾಲಾಗ್ನಿರುದ್ರನಂತಾದ! ಇಂದ್ರಜಿತ್ತು ಎದ್ದ! ಅವನೊಡನೆ ದೊಡ್ಡ ರಾಕ್ಷಸ ಪಡೆ ಸಾಗಿತು! ಚತುರಂಗ ಬಲಸಮೇತನಾದ ಇಂದ್ರಜಿತ್ತು (ಮೇಘನಾದ) ಹನುಮಂತನೊಡನೆ ದೇವತೆಗಳಂಜುವಂತೆ ಹೋರಾಡಿದ! ಆದರೆ ಹನುಮಂತ ಏನೆಂದ ಗೊತ್ತೇ? "ಸುರರ ಗೆಲಿದಿಹೆ ವರದ ಬಲದಲಿ, ನರರ ಗೆಲಿದಿಹೆ ಜನ್ಮಗುಣದಲಿ, ಸುರನರರ ಪರಿಯಲ್ಲ ವಾನರನೆನ್ನ ಪರಿ ಹೊಸತು; ಬಿರಿದು ಬಿರಿವುದು, ವೀರ ಹರಿವುದು, ಸುರಿವುದಪಜಯವೆನ್ನ ಕಂಡರೆ ಹುರುಳು ಗೆಡುವರು ವೀರ"ರೆಂದಪ್ಪಳಿಸಿದನು ಖಳನ!

ಇಂದ್ರಜಿತ್ತು ಗದೆ ಎತ್ತಿದರೆ ಅದನ್ನು ಕಸಿದುಕೊಂಡು ಅದರಿಂದಲೇ ಅವನ ತಲೆಯ ಮೇಲೆ ಹೊಡೆದು ಕಿರೀಟವನ್ನು ಉರುಳಿಸಿದ. ಆಗ ಇಂದ್ರಜಿತ್ತು ಬ್ರಹ್ಮಾಸ್ತ್ರವನ್ನು ಬಿಟ್ಟ. ಅದಕ್ಕೆ ಹನುಮನನ್ನು ಹಿಡಿಯಲಾಗದಿದ್ದರೂ ಅದು ಅವನ ಸುತ್ತಲೂ ತಿರುಗಲಾರಂಭಿಸಿತು. ಆಗ ಹನುಮ ಅವನ ಸುತ್ತಲೂ ತಿರುಗಲಾರಂಭಿಸಿತು. ಆಗ ಹನುಮ ಅದರಿಂದ ತಾನೇ ಕಟ್ಟಿಸಿಕೊಂಡ. ಅವನನ್ನು ತೇರಲ್ಲಿ ಕುಳ್ಳಿರಿಸಿಕೊಂಡು ರಾವಣ ಸಭೆಗೊಯ್ಯುವಾಗ ಅದು ಮುರಿಯಿತು; ವಜ್ರದ ತೇರನ್ನು ತರಿಸಿ ಅದರ ಮೇಲೆ ಅವನನ್ನು ಕೂರಿಸಿಕೊಂಡು ೧೦ ಸಾವಿರ ಮದದಾನೆಗಳಿಂದ ಎಳೆಯಿಸಿದಾಗಲೂ ತೇರು ಮುರಿದು ಆನೆಗಳು ರಕ್ತ ಕಾರುವಂತಾಯ್ತು. ಅಂತೂ ರಾವಣನಾಸ್ಥಾನಕ್ಕೆ ಅವನನ್ನು ಒಯ್ಯಲಾಯಿತು. ಅಲ್ಲಿ ಎಲ್ಲರೂ ಹನುಮನನ್ನು ಹೊಡೆಯಬಂದರು; ವಿಭೀಷಣ ಬೇಡವೆಂದ. ಯಾವ ಹೊಡೆತವೂ ಮಾರುತಿಗೆ ತಾಗಲಿಲ್ಲ. ಮಾರುತಿ ರಾವಣನನ್ನು ಕುರಿತು ತಾನು ಅವನಿಗೆ ಬ್ರಹ್ಮರಾಕ್ಷಸ ಎಂದ. ರಾವಣನು ತನ್ನ ತೋಟದ ಮರ ಏಕೆ ಕಿತ್ತೆ? ಎಂದು ಕೇಳಿದರೆ ಲಂಕೆ ಹೊಕ್ಕ ಕೂಡಲೇ ತನಗೆ ಹಾಗೆ ಮಾಡಬೇಕೆಂಬ ಹುಚ್ಚು ಹಿಡಿಯಿತು ಎಂದು ಹನುಮ ಉತ್ತರಿಸಿದ; ಜೊತೆಗೆ, ತಾನಲ್ಲ, ತನ್ನ ಬಾಲ ಆ ಮರಗಳನ್ನು ಕಿತ್ತೆಸೆದದ್ದು ಎಂದೂ ವಾದಿಸಿದ. ಕಡಲನ್ನು ಹೇಗಯ್ಯ ದಾಟಿದೆ? ಎಂದು ಕೇಳಿದರೆ, ಲಂಕೆಯನ್ನು ಸುಡುವ, ರಾವಣನನ್ನು ಕಡಿವ, ಭಕ್ತನಾದರೆ ಮುಕ್ತಿ ಕೊಡುವ ಮತ್ತು ಜಯಪಡೆವ ರಾಮನ ಕೃಪೆಯಿಂದ–ಎಂದು ಜವಾಬುಕೊಟ್ಟ!

–೧೨–


ಬಾಲದ ಪ್ರತಾಪ

ಹಸ್ತ, ಪ್ರಹಸ್ತ, ಸುರಾಂತಕ, ನರಾಂತಕ, ಕರಣಿಕ, ಮಂತ್ರಿ, ನಿಯೋಗಿ, ಮಾವುತ, ಮಲ್ಲ ಮುಂತಾದವರು ಬಟ್ಟೆ ಸುತ್ತಿ ಹನುಮನ ಬಾಲಕ್ಕೆ ಬೆಂಕಿ ಹಚ್ಚಲು ಶುರುಮಾಡಿದರು. ಅವನು ದಿಕ್ತಟಗಳು ಭೇದಿಸುವಂತೆ ಹಲ್ಲುಕಿರಿದು ಗರ್ಜಿಸಿದ, ಛೀಳಿಟ್ಟ! ಆದರೂ ಅವರು ಅವನ ಬಾಲಕ್ಕೆ ಬೆಂಕಿ ಹಚ್ಚಿ ನಗರದಲ್ಲೆಲ್ಲಾ ಮೆರವಣಿಗೆ ಮಾಡಿ ಮೋಟು ಬಾಲವನ್ನು–ಅವನು ಬದುಕಿ ಉಳಿದರೆ–ರಾಮನಿಗೆ ಹೋಗಿ ತೋರಿಸಲಿ–ಎಂದು ಅವನ ಬಾಲಕ್ಕೆ ಎಣ್ಣೆಯಲ್ಲದ್ದಿದ ಅರಿವೆಗಳನ್ನು ಸುತ್ತಲಾರಂಭಿಸಿದರು.

ಒಂದು ಸೀರೆಯ ತೊಯ್ದು ತೈಲದಿ ತಂದು ಸುತ್ತಲು ಕಪಿಯ ಬಾಲವು ಒಂದು ಮೊಳ ಮಿಗೆ, ಮುಂದೆ ಸುತ್ತಿದರೊಂದು ಹಚ್ಚಡವ; ತಂದರೆಣ್ಣೆಯ ಹಾಡಗಳ ಖಳರೊಂದೆರಡು ಮೂರೆಂದು ಸುತ್ತಲು ಮುಂದೆ ಗೇಣರೆಗೇಣು ಮೊಳ ತೋಳನಿತು ಬೆಳೆವುತಿರೆ; ಸುತ್ತಿದಿಮ್ಮಡಿ ಬೆಳೆವುತಿರೆ ಖಳ ಮತ್ತೆ ತರಿಸಿದ ನೆರಹಿ ಸೀರೆಯ ಹೊತ್ತು ಕೊಪ್ಪರಿಗೆಗಳಲೆಣ್ಣೆಯ ತಂದು ಸುರಿವುತಿರೆ; ಮತ್ತೆ ಬೆಳೆಯಲು ಕೆರಳಿ ರಕ್ಕಸ ಸುತ್ತು ಸುತ್ತೆನು ತಂದು ಸುತ್ತಲು ಹತ್ತು ಸಾವಿರ ಮೊಳವು ಸವೆದುದು ಮತ್ತೆ ಬೆಳೆವುತಿರೆ–ಲಂಕಾಪಟ್ಟಣದಲ್ಲಿದ್ದ ಎಲ್ಲ ಬಗೆಯ ವಸ್ತ್ರ ಹಾಗೂ ಎಣ್ಣೆ ಸಂಗ್ರಹಗಳು ತೀರಿದವು. ರಾವಣನಾಗಮಂಡೋದರಿಯ ಸೀರೆಯನ್ನು ಕೇಳ ಹೋದುದನ್ನು ಕಂಡು ಹನುಮ ನಕ್ಕು ಬಾಲ ಬೆಳೆಸುವುದನ್ನ ನಿಲ್ಲಿಸಿದ. ಕೂಡಲೇರಾಕ್ಷಸರು ಬಾಲಕ್ಕೆ ಬೆಂಕಿಯನ್ನು ಹೊತ್ತಿಸಿದರು! ಆಗ ಬಾಲ ಉರಿಸುಡತೊಡಗಿತು!

ಬಾಲವೋ ಮುರಿ ಮುರಿದು ಸುಡುವಾ ಶೀಲವೋ ಯಮಜಾಲವೋ ಹೃತ್ ಶೂಲವೋ ಕಡೆಗಾಲವೋ ಹಳೆಸಾಲವೋ ಶಿಖಿಗೆ (ಅಗ್ನಿಗೆ); ತಾಳದುಣಿಸೋ ಖಳರ ಸೆಣಸೋ ಧಾಳಿಯೋ ಸುಡುವಾಳಿಯೋ ಎನೆ ಗೋಳುಗುಟ್ಟಿಸಿತಂದು ಬಾಲವು ಖಳರಿಗುರಿ ಮಾರಿ! ಭುಗಿಲು ಭುಗಿ ಭುಗಿ ಭೋರು ಭೋರೆನೆ, ಧಗಿಲು ಧಗ ಧಗ ಚಿಟಿಲು ಚಿಟಿಲೆನೆ, ಒಗೆದು ದಳ್ಳುರಿ ಹೆಚ್ಚಿ ಕೆಂಡವು ಹೊಟ್ಟಿ ಹಾರುತಿರೆ; ಹೊಗೆಯ ಕತ್ತಲೆ, ಬಗೆಯ ಬತ್ತಲೆ, ಹಗೆ ವಿದಾರಣ, ದನುಜ ಮಾರಣ, ನಗೆಗೆ ಕಾರಣ,

ಮದನಿವಾರಣ, ಹನುಮ ಸುಡುತಿರ್ದ! ಅವನು ರಾವಣನ ಮೀಸೆಗಳನ್ನೂ ಬಿಡಲಿಲ್ಲ; ಕೆತ್ತಿ ತಿದ್ದಿದ ಗಡ್ಡ ಮೀಸೆಯು ಹತ್ತು ಮುಖದೊಳಗೊಪ್ಪುತಿರ್ದುದು; ಒತ್ತಿಬಾಲದಲೊರಸಿ ಎಣ್ಣೆಯನೂಡಿದಂತಾಯ್ತು. ಹೊತ್ತಿಸಿದೊಡಾರತಿಯ ಹೋಲಲು ಹತ್ತು ಕೈಯಲಿ ಹೊಡೆದು ನಂದಿಸೆ, ಮತ್ತು ಪವನಜ (ಹನುಮ) ಹೊತ್ತಿಸಲು ಖಳ ಹೊಡೆದು ನಂದಿಸಿದ!



ಅಷ್ಟರಲ್ಲಿ ಹೊಲೆಗೇರಿಯಲ್ಲಿ ಬೆಳೆದಿದ್ದ ತುಳಸಿಯ ವನವನ್ನು ಹನುಮ ಕಂಡ; ಕೂಡಲೇ ಅವು ಸುಟ್ಟುಹೋಗದಿರಲೆಂದು ಎತ್ತಿ ಕಡಲಿನ ಬಡಗಡೆಗಿಟ್ಟ. ಹಾಗೇ ಈಶ್ವರ ದೇವಾಲಯಗಳಿಗವನು ಬೆಂಕಿಯನ್ನು ಹಚ್ಚಲಿಲ್ಲ. ಕೈಕಸೆಯು ಬೇಡಿಕೆಯಂತೆ ಅವಳ ಮಗ ವಿಭೀಷಣನ ಅರಮನೆಯನ್ನು ಉಳಿಸಿದ. ಆಮೇಲೆ ಕಡಲಲದ್ದಿದನುರಿವ ಬಾಲವನ್ನು ಮತ್ತು ಅಶೋಕ ವನಕ್ಕೆ ಹೋಗಿ ಸೀತಾಮಾತೆಗೆ ತಾನು ಮಾಡಿದ ಲಂಕಾದಹನದ ಕತೆಯನ್ನು ಹೇಳಿ, ಅವಳಿಂದ ಚೂಡಾಮಣಿಯನ್ನು ಪಡೆದು, ಕಿಷ್ಕಿಂಧಾಭಿಮುಖವಾಗಿ ಹಾರಿದನು. ಕಡಲ ಹಾರಲು ಅವನು ತೆಗೆದುಕೊಂಡದ್ದು ಮೂರು ಗಳಿಗೆ. ಅಷ್ಟರೊಳಗೆ ಆತ ರಾಮನನ್ನು ನೋಡದಿದ್ದರೆ ರಾಮನು ಅಗ್ನಿ ಪ್ರವೇಶ ಮಾಡುತ್ತಿದ್ದ!

–೧೩–

ಹಂಪೆಯಲ್ಲಿ ಹನುಮ ವಿಜಯೋತ್ಸವ

ಹನುಮ ಕಡಲ ಹಾರಿ ಹಿಂದಿರುಗಲಾರಂಭಿಸಿದಾಗ ರಾವಣನಾಜ್ಞೆಯಂತೆ ಇಂದ್ರಜಿತ್ತು ಸೈನ್ಯಸಮೇತನಾಗಿ ಆಕಾಶ ಮಾರ್ಗದಲ್ಲಿ ಬೆನ್ನಟ್ಟಿ (ವಿಮಾನಗಳ ಮೂಲಕ) ಬರಲು, ತನ್ನ ಬಾಲವನ್ನು ಕಳಿಸಿ ಅವನ ಪಡೆಯನ್ನು ನುಚ್ಚು ನೂರು ಮಾಡಿದನು.

ಇಂದ್ರಜಿತ್ತಿನ ಪಡೆಯನ್ನು ಕೊಂದ ಮೇಲೆ ಹನುಮನು ಅವನನ್ನು ಕಟ್ಟಿ ನೀರಿನಲ್ಲಿ ಕಂತಿಸಿದನು. ಆಗ ಬದುಕಿದೆಯಾ ಬಡಜೀವವೇ! ಎಂದುಕೊಂಡು ಅವನು ಲಂಕೆಗೆ ಹಿಂದಿರುಗಿದ. ಹನುಮ ಹಾರಿದ ಕಿಷ್ಕಿಂಧೆಗೆ (ಹಂಪೆಗೆ)! ಅವನು ಮೊದಲು ವರದಿ ಒಪ್ಪಿಸಿದ್ದು ಕಪಿಸೇನೆಗಳ ಮುಖಂಡನಾಗಿದ್ದ ಜಾಂಬವನಿಗೆ!

ಅಷ್ಟರಲ್ಲಿ ಕಪೀಂದ್ರರೆಲ್ಲರೂ ಹನುಮನ ಸುತ್ತಲೂ ಕುಣಿದಾಡಿದರು. ಸುಗ್ರೀವಾಜ್ಞೆಯಂತೆ ದಧಿಮುಖ ಕಾಯುತ್ತಿದ್ದ ಮಧುವನದಲ್ಲಿ ಅಪ್ಪಣೆ ಇಲ್ಲದೆ ಹನುಮನೊಡನೆ ನುಗ್ಗಿ ಅವರು ಹಣ್ಣಿನ ಸಂತರ್ಪಣೆಯನ್ನು ಪ್ರಾರಂಭಿಸಿದರು. ದೋರೆವಣ್ಣರೆ ಗಚ್ಚಿ ಬಿಡುವರು, ಹೀರುವರು ತನಿವಣ್ಣ, ಕೆನ್ನೆಯ ಗೋರೆಗಳ ಹಿಂಗೈಯಲೊತ್ತುತ ಮನದ ಹೆಕ್ಕಳದಿ; ಮಾರುತಿಯ ಹರಸುತ್ತ ಕಾಯ್ಗಳ ಕಾರಿ ಬೆರಳಲಿ ತೋಡಿ ಮೂಸುತ ವೀರ ಮರ್ಕಟಸೇನೆ ದಣಿದುದು ಹನುಮ ಬಾಳೆನುತ! ಹತ್ತುವರು ತುದಿಗೊಮ್ಮೆ ಜೋಲುವರೆತ್ತಿ ಗೊಂಚಲನಲುಗಿ ತಿಂಬರು ಇತ್ತೆರದ ಬದಿ ಹಿಗ್ಗೆ ಬಳಲಿಕೆಯಾರಿತೆಲ್ಲರಿಗೆ; ಹೊತ್ತ ಸೊಪ್ಪಿನಲೈದೆ ದಧಿಮುಖ ಇತ್ತ ಹುಯ್ಯಲನೆಂದ ರವಿಜಗೆ ಚಿತ್ತವಿಸು ಹನುಮಂತ ಸೂರೆಯಗೊಂಡ ಮಧುವನವ! ದಧಿಮುಖನ ವರದಿಯನ್ನು ಕೇಳಿದ ಸುಗ್ರೀವನು ಎಲ್ಲರೂ ರಾಮನೆಡೆಗೆ ಹೋಗಬೇಕೆಂದು ಹೇಳಿ ಅಪ್ರತ್ಯಕ್ಷವಾಗಿ ಮಂಗ ಮಹಾರಾಯರು ತೋಟ ಹಾಳುಮಾಡಿದ ಅಪರಾಧವನ್ನು ಹನುಮಂತನಿಗಾಗಿ ಗಣನೆಗೆ ತೆಗೆದುಕೊಳ್ಳಲಿಲ್ಲ. ಹನುಮಂತನು ರಾಮನಿಗೆ ಸೀತಾವೃತ್ತಾಂತವನ್ನೂ ಲಂಕಾದಹನದ ಕತೆಯನ್ನೂ ಹೇಳಿ ಚೂಡಾಮಣಿಯನ್ನು ಸಮರ್ಪಿಸಿದನು. ಅನಂತರ ರಾಮನಾಜ್ಞೆಯಂತೆ ಕಪಿಸೇನೆಗಳು ಜಾಗ್ರತವಾದವು. ಕಡಲ ತೀರವನ್ನು ತಲುಪಿದವು.

–೧೪–
ವಿಭೀಷಣನ ಶರಣಾಗತಿ

ಇತ್ತ ಲಂಕೆಯಲ್ಲಿ ಕೈಕಸೆಯು ರಾವಣನಿಗೆ ಬುದ್ಧಿ ಹೇಳಲು ವಿಭೀಷಣನನ್ನು ಕಳಿಸಿದಳು. ಅವನನ್ನು ರಾವಣನು ಹೊಡೆದು ಓಡಿಸಿದನು. ಆಗ ಅವನು ಕಿಷ್ಕಿಂಧೆಗೆ ಹೋಗಿ ರಾಮನಿಗೆ ಶರಣಾಗತನಾದನು. ಅನಂತರ ಶುಕ–ಸಾರಣರೆಂಬ ದೈತ್ಯರನ್ನು ರಾವಣನು ಗಿಳಿಯ ರೂಪ ಧರಿಸಿ ಕಿಷ್ಕಿಂಧೆಗೆ ಗುಟ್ಟು ತಿಳಿಯಲು ಕಳಿಸಿದನು. ಕಪಿವೀರರು ವಿಭೀಷಣನಿಂದ ಅವು ಮಾಯಾಶುಕಗಳೆಂದು ತಿಳಿದು ಹಿಡಿದು ಅಪ್ಪಳಿಸಿದಾಗ ಶುಕ–ಸಾರಣರು ನಿಜರೂಪ ತಾಳಿದರು. ಅವರನ್ನು ಕಟ್ಟಿ ರಾಮನೆಡೆಗೊಯ್ದಾಗ ಅವರು ರಾವಣನೊಡನೆ ಯುದ್ಧ ಮಾಡುವುದು ಅಸಾಧ್ಯವೆಂದು ಹೇಳಿದರು. ಕಪಿವೀರರು ರಾಮ ಸಾಮರ್ಥ್ಯವನ್ನು ವರ್ಣಿಸಿದರು. ಅವರು ಲಂಕೆಗೆ ಹೋಗಿ ಅದನ್ನು ರಾವಣನಿಗೆ ಹೇಳಿದರು. ರಾವಣನು ಅವರ ವರ್ಣನೆಯನ್ನು ತಿರಸ್ಕರಿಸಿದ! ವಿಭೀಷಣನ ಶರಣಾಗತಿಯಿಂದ ಸಂತಪ್ತನಾದ!

–೧೫–

ಸೇತುಬಂಧ

ರಾಮನು ವಿಭೀಷಣನ ಶರಣಾಗತಿಯನ್ನು ಸ್ವೀಕರಿಸಿ ಮುಂದೆ ಲಂಕೆಗೆ ಅವನೇ ವಾರಸುದಾರನೆಂದು ಸಾರಿ, ವರುಣ ಮಂತ್ರವನ್ನು ಜಪಿಸಿದನು. ಆದರೆ ವರುಣನು ತನ್ನ ಅರಸುತನದ ಅಹಂಕಾರದಿಂದ ರಾಮನಲ್ಲಿಗೆ ಬರದಾದ. ಆಗ ರಾಮನು ಧನುಷ್ಟಂಕಾರ ಮಾಡಿ ಬಾಣಬಿಟ್ಟ. ಕೂಡಲೇ ವರುಣನ ರಾಜ್ಯವಾದ ಸಮುದ್ರದಲ್ಲಿ ವಡವಾನಲ ಎದ್ದು ನೀರನ್ನು ಕುದಿಸಿ ಜಲಚರಗಳನ್ನು ಬೇಯಿಸಿತು. ಆಗ ವರುಣ ಹೆದರಿ ತನ್ನ ಹೆಂಡತಿಯರಾದ ನದಿಗಳೊಡನೆ ನಡೆತಂದು ರಾಮನಿಗೆ ಕಪ್ಪಕಾಣಿಕೆಗಳನ್ನು ಕೊಟ್ಟನು ಮತ್ತು ರಾಮಬಾಣವು ಉತ್ತರ ದಿಕ್ಕಿನಲ್ಲಿರುವ ದ್ರುಮಶೂಲ್ಯದ ದಸ್ಯುಗಳಿಗೆ ಬಡಿಯಲಿ ಎಂದು ಪ್ರಾರ್ಥಿಸಿದ. ಆಗ ರಾಮನು ವರುಣನಿಗೆ ಅಭಯವನ್ನಿತ್ತು ವರುಣಾಸ್ತ್ರವನ್ನು ಬಿಟ್ಟ. ಅದರಿಂದ ಸಮುದ್ರವು ಮೊದಲಿನಂತೆ ತಣ್ಣಗಾಗಿ ಜಲಚರಗಳೆಲ್ಲ ಬದುಕಿದವು. ಆಮೇಲೆ ನಳನು ರಾಮಾಜ್ಞೆಯಂತೆ ಸಮುದ್ರಕ್ಕೆ ಸೇತುವೆ ಕಟ್ಟಲು ಪ್ರಾರಂಭಿಸಿದ.

ದೆಸೆ ದೆಸೆಗೆ ಹರಿಹರಿದು ಕಪಿಗಳು ವಸುಧೆಯೊಳಗಣ ನಗವ (ಪರ್ವತವ) ತರುತಿರೆ ಮುಸುಗಣಾಧಿಪ (ಕಪ್ಪು ಮೋರೆಯ ಬುಕ್ಕಗಳೊಡೆಯ) ಬಂದ ದಾರುಕನೆಂಬ ಕಪಿ ವೀರ; ಹಸಿದ ಮದಕರಿಯೊಡಲು ಹೂವಿನ ವಿಸರದಲಿ ತುಂಬುವುದೆಯೆನುತವೆ ಅಸಮಸಾಹಸಿ ನಗುತ ನೋಡಿದ ಶರಧಿಯಿದ್ದಡವ ಬೆಳೆಸಿ ನಿಜ ಬಾಲವನು ಶರಧಿಯ ವಲಯ ದಿತ್ತಡಿಗಳನು ಸೂತ್ರಿಸಿ ಅಳೆದ ನಗ್ಗದ ವೀರರೆಲ್ಲರು ಕಂಡು ಬೆರಗಾಗೆ; ವಲಿಮುಖನು ಹರಿದೈದು ಬಾಲದಲೆಳೆದು ಕಿತ್ತನು ಹೊತ್ತು ತಂದನು ಜಲಧಿ ಮಧ್ಯದ ಲಿಕ್ಕಲಗ್ಗದ ಮೀನು ನುಂಗಿದುದು! ಅದೇ ಪ್ರಕಾರ ತಂದ ಬೆಟ್ಟಗಳೆಲ್ಲವೂ ಮುಳುಗಲಾರಂಭಿಸಿದಾಗ ರಾಮನ ಅನುಗ್ರಹವನ್ನು ಕಪಿವೀರರು ಯಾಚಿಸಿದರು. ಆಮೇಲೆ ಬೆಟ್ಟಗಳ ಒಟ್ಟಿಲು ನೆಲೆನಿಲ್ಲುತ್ತ ಹೋಯ್ತು. ಭರದಲಾ ಹದಿನಾಲ್ಕು ಬೆಟ್ಟವ ತರುಚರೇಶ್ವರನೊಬ್ಬ ಬಲುಹಿಂ ಧರಣಿ ಕಂಪಿಸೆ ಕಿತ್ತು ತಂದನು ಬಾಲದಗ್ರದಲಿ; ಚರಣ ನಾಲ್ಕೆತ್ತುಗಳ ಹೋಲಲು ಗಿರಿಯ ಬೆನ್ನಲಿ ತಾಳಿ ಬಂಡಿಯ ಭರದಿ ಎಳೆವಾ



ನಳನು ಬಂಡಿಯು ಬೋವನೆಯ್ತಂದ. ಶಿರದಲ್ಯೆದನು ಹೆಗಲಲೆಂಟನು ಎರಡನಂಗೈಯಲ್ಲಿ ಧರಿಸಿದ ಭರದಿ ಕಕ್ಷದಲೆರಡ (ಕಂಕುಳಲ್ಲಿ ಎರಡನ್ನು) ದಂಡೆಯು ಸಂಧಿಯೊಳಗೊಂದ; ಉರದಲೊಂದೀರ್ಯೆದ ಬಾಲದಿ ಚರಣದಿಂದೊಂದು ಬೆಟ್ಟವ ಮರುತ

ಸುತ ಬತ್ತೀಸ (ಮೂವತ್ತೆರಡು) ಗಿರಿಗಳ ಹೊತ್ತು ಹರಿತಂದ! ಅಗಲ ಯೋಜನ ಹತ್ತರಳತೆಯ (ಸುಮಾರು ೯೦ ಮೈಲು ಅಗಲ) ಮುಗಿದನೈ ಮೂವತ್ತು ನೀಳವ (೨೭೦ ಮೈಲು ಉದ್ದ) ಬಿಗಿದನದ್ರಿಗಳಿಂದ ನಳನಾ ದಿನದ ಕಡೆಗೆನಲು; ಹಗೆಯ ದುರ್ಗವು ಕಾಣಬಂದುದು ಗಗನ ತೆರಪಾಯಾರುಯಿಲ್ಲದೆ ಮುಗಿಯೆ ಪದ್ಮಿನಿ ನಗಲು ಕುಮುದಿನಿಯಗಲೆ ಚಕ್ರಯುಗ (ಚಕ್ರವಾಕ ದಂಪತಿಗಳು)! ಅನಂತರ ಹಾಗೇ ಬೆಟ್ಟಗಳನ್ನು ತಂದು ಮೂರು ದಿನಗಳಲ್ಲಿ ಲಂಕೆಯವರೆಗೆ ಸೇತುವನ್ನು (ಒಡ್ಡನ್ನು) ಕಪಿಗಳು ಕಟ್ಟಿದರು. ಸೇತುವಿನ ಒಟ್ಟು ಉದ್ದ ೮೧೦ ಮೈಲುಗಳು. ಕಟ್ಟೆಯೋ ಹರಿಸೇನೆ ನಡೆವಾಬಟ್ಟೆಯೋ ರಾಘವನ ವೀರದ ಪಟ್ಟೆಯೋ ಎನಲೊಪ್ಪುತಿದ್ದುದು ಜನದ ಕಣುಮನಕೆ; ಬಿಟ್ಟಿಯೋ ಸಾಗರನು ನಡೆಸುವ ನಿಟ್ಟೆಯೋ ಕುಲಗಿರಿಯ ವಂಶದ ಕಟ್ಟೆದೆಯ ಪಕ್ಷವನು ಹೋಲಿತು ಸೇತು ಖಳಕೇತು!

–೧೬–

ರಾವಣನ ಮಾನಭಂಗ

ಶುಕನನ್ನು ಕಳಿಸಿ ರಾಮಬಲ ಪರೀಕ್ಷೆಯನ್ನು ರಾವಣ ಮಾಡಿಸಿದರೆ, ವಿಭೀಷಣ ರಾವಣ ಬಲವನ್ನು ರಾಮನಿಗೆ ವಿವರಿಸಿದ. ಅಷ್ಟರಲ್ಲಿ ಐದು ಸಾವಿರ ಯೋಜನ (೪೫,೦೦೦ ಮೈಲುದ್ದ) ರಾಮಸೈನ್ಯದ ಮೇಲೆ ನೆರಳು ಬೀಳುವಂತೆ ರಾವಣ ಮಾಡಿದ. ಅದರಿಂದ ಕಪಿಸೈನ್ಯಗಳಿಗೆ ಸೂರ್ಯ ಕಾಣಿಸದಾದ. ಆಗ ರಾಮ ಬಾಣಬಿಟ್ಟು ರಾವಣನ ಶ್ವೇತ ಚಕ್ರವನ್ನೂ ಕಿರೀಟಗಳನ್ನೂ ಉರುಳಿಸಿದ. ಸುಗ್ರೀವನು ಆ ಬಾಣದ ಜೊತೆಗೇ ಹಾರಿ ಆ ಕಿರೀಟಗಳನ್ನು ತಂದ. ರಾವಣ ಬೆಪ್ಪಾಗಿ ಹಿಂದಿರುಗಿದ.

ಸಿಡಿಲು ಹೊಡೆದಂತಸುರಸಭೆ ಕಂಗೆಡಲು ಮೆರೆದುದು ಬೋಳುದಲೆಗಳು ಕಡಿದ ಕೊಡೆಗಳ ಕಾವು ಮೆರೆದುದುದಂಟು ಕೋಲಂತೆ; ದಡಿಗ ಬಡ ಸನ್ಯಾಸಿಯಂದದಿ ನುಡಿಯ ಲಮ್ಮದೆ ಮೂಗವಟ್ಟನು ನಡುಗುತಿರಲಮರಾರಿ ಮೈಝುಮ್ಮಿಟ್ಟು ಬಿಸುಸುಯ್ದು! ನೋಡಬಂದನೊ ಗೌರವದಿ. ಬಲುಗೇಡುತಂದನೊ, ಹತ್ತು ಮಕುಟವ ನೀಡ ತಂದನೊ ಹರಿಯ ಚರಣಸರೋಜಯುಗಳಕ್ಕೆ, ಆಡಬಂದನೊ ಹಗರಣಂಗಳ, ಮಾಡಬಂದನೊ ಕುಲಕಕೀರ್ತಿಯ ನೋಡು ದೈತ್ಯನ ಹಲವು ಬೋಳುಗಳೆಸೆದುವಯ್ಯಯ್ಯ!

-೧೭-

ಅಂಗದನ ಸಂಧಾನ ಪ್ರತಾಪ

ಅನಂತರ ರಾವಣನು ರಾಮನ ಮಾಯಾ ಶಿರಸ್ಸನ್ನು ಸೀತೆಗೆ ತೋರಿಸಿ ಅವನು ಸತ್ತನೆಂದು ನಂಬಿಸಿ ತನ್ನನ್ನು ಮದುವೆಯಾಗಲು ಒಪ್ಪಿಸಬಹುದೆಂದು ಆಲೋಚಿಸಿ ಹಾಗೇ ಮಾಡಿದ. ಸೀತೆ ಅತ್ತಳು. ಆಮೇಲೆ ರಾಮನ ಮುದ್ರಿಕೆಯನ್ನು ಪರೀಕ್ಷಾರ್ಥವಾಗಿ ಅವಳು ಆ ರುಂಡಕ್ಕೆ ಮುಟ್ಟಿಸಿದ ಕೂಡಲೇ ಅದು ಮಾಯವಾಗಿ ಹೋಯ್ತು! ಆಗ ಆಕೆಗೆ ರಾಮ ನಿಜವಾಗಿ ಸತ್ತಿಲ್ಲವೆಂದು ಸಮಾಧಾನವಾಯ್ತು. ರಾಮನಿಗೆ ಈ ಸುದ್ದಿಯನ್ನು ಕೇಸರಿ ಎಂಬ ಕಪಿವೀರ ತಿಳಿಸಿದನು. ಆಮೇಲೆ ಅಂಗದನನ್ನು ರಾವಣನೊಡನೆ ಸಂಧಾನಕ್ಕೆಂದು ಅವನು ಕಳಿಸಿದನು. ಅವನನ್ನು ನೀನೇಕೆ ಬಂದೆ ಎಂದು ರಾವಣ ಕೇಳಿದನು. ಅದಕ್ಕೆ ಅಂಗದನು "ಎಲವೊ ರಾವಣ ಕೇಳು, ರಾಮನ ಬಲದೊಳೊಂದತಿವಾದ ಹುಟ್ಟಿತು; ಖಳನ ಕೊರಳೊಂದರಲಿ ತಲೆ ಹತ್ತೆಂದು ಕೆಲರೆನಲು; ಕೆಲರದಲ್ಲಾ ಕೊರಳು ಹತ್ತಕೆ ತಲೆಗಳೊಂದೊಂದೆನಲು ತಮ್ಮೊಳ ಛಲದಿ ಪಣವನು ಹೊತ್ತು ಕಳುಹಲು ನೋಡಲಾಂ ಬಂದೆ" ಎಂದುದಲ್ಲದೆ, ಸೀತೆಯನ್ನು ಬಿಟ್ಟು ಕೊಡೆಂದು ಬೋಧಿಸಿದನು. ಅದಕ್ಕೆ ಉತ್ತರವಾಗಿ ರಾವಣನು ವಿಭೀಷಣನ ಸ್ಥಾನವನ್ನು ಅವನಿಗೆ ಕೊಡುವುದಾಗಿಯೂ ವಾಲಿಯನ್ನು ಕೊಂದರಾಮನನ್ನು ನಂಬಬಾರದೆಂದೂ ಹೇಳಿದನು. ಅದಕ್ಕೆ ಅಂಗದ ಒಪ್ಪಲಿಲ್ಲ. ಆಗ ಅವನನ್ನು ದನುಜರು ಮುತ್ತಿದರು. ಅವರೆಲ್ಲರನ್ನೂ ಬಾಲದಿಂದ ಬಡಿದು ಅಂಗದ ಕೊಂದ. ಅಟ್ಟಿ ಬರುತಿಹ ಖಳರ ತಲೆಗಳ ಕುಟ್ಟಿ ಮುರಿದನು; ಮುಂದೆ ದಾರಿಯ ಕಟ್ಟಿದವದಿರನೊದೆದು ಬಿಸುಟನು ಸುಭಟನಂಗದನು; ಪಟ್ಟಣವ ಹೊರವಂಟು ಕಪಿಜಗಜಟ್ಟಿ ಬರುತಿರಲತ್ತ ದನುಜ ಘರಟ್ಟ ದೂರದಿ ಕಂಡು ನಸುನಗುತಿರ್ದ ಮನದೊಳಗೆ. ಸಂಧಿ ಸಾಧ್ಯವಾಗಲಿಲ್ಲವೆಂದು ಅಂಗದ ಹೇಳಿದಾಗ ರಾಮನು ಸಮರವೇ ಯೋಗ್ಯವೆಂದು ಅವನ ಬೆನ್ನು ಚಪ್ಪರಿಸಿದನು.

–೧೮–

ಯುದ್ಧಾರಂಭ

ಮರುದಿನ ಯುದ್ಧ ಪ್ರಾರಂಭವಾಯ್ತು. ಮೊದಲಿನ ಸೇನಾಪತಿ ಇಂದ್ರಜಿತ್ತು. ಅವನದು ಆಕಾಶಯುದ್ಧ; ಅದರಲ್ಲಿ ಅತುಲ ಪರಾಕ್ರಮವನ್ನು ತೋರಿಸಿದನು. ಅದಕ್ಕೆ ಪ್ರತಿಯಾಗಿ, ಕೆರಳಿ ಕೋದಂಡದಲಿ ರಘುಪತಿ ತರಣಿ ಬಾಣವ ಹೂಡಿ ತೆಗೆದಿಸೆ ಹರಿದು ತಿಮಿರವ ನುಂಗಿ ಬೆಳಕಿಗೆ ಬೆಳಕು ಪಸರಿಸಿತು; ದುರುಳ ದೈತ್ಯನನಂತರಿಕ್ಷದಿ ನೆರೆದ ಕಪಿ ಪಡೆ ಕಂಡು ಘೀಳಿಡೆ ಮರುತನಂದನ ಹಾರಿ ಮಕುಟವ ಕಿತ್ತ ಮಣಿ ಸರಿಯೆ! ಮಾರುತಿ–ರಾವಣಗಳ ಕದನವು ಬಹಳ ಬಿರುಸಿನದಾಯ್ತು. ಕೊನೆಗೆ ಹನುಮಂತನ ಹೊಡೆತದಿಂದ ರಾವಣ ನೆಲದಲ್ಲಿ ಉರುಳಿ ಬಿದ್ದ. ಆಗ ಆ ಇಂದ್ರ ಜಿತ್ತು ಹೋಮ ಮಾಡಲು ಕುಂಭಿನಿಯ ಬಿಲಕ್ಕೆ ಹೋದನು. ಹೋಮಕ್ಕೆ ಒಲಿದು ನಿಕುಂಭಿನಿ ಪ್ರತ್ಯಕ್ಷಳಾಗಿ ನಾಗಪಾಶವನ್ನೂ ಕೋದಂಡ ಕವಚವನ್ನೂ ಅವನಿಗೆ ದಯಪಾಲಿಸಿದಳು. ನಾಗಪಾಶದಿಂದ ಅವನು ಎಲ್ಲ ಕಪಿಗಳನ್ನೂ ಕಟ್ಟಲು ಸಮರ್ಥನಾಗಲಿಲ್ಲ. ಏಕೆಂದರೆ ಅವರು ರಾಮನಾಮವನ್ನು ಜಪಿಸುತ್ತಿದ್ದರು. ಆದರೆ ಕೆಲಕಪಿಗಳು ಹಾಗೂ ರಾಮ ಅದರ ಕಟ್ಟಿಗೆ ಒಳಗಾದರು. ಕೂಡಲೇ ಅವನನ್ನು ಕಾಯಲು ಸುದರ್ಶನ ಬಂತು. ಉರಿಯುಗುಳುವ ಆ ಚಕ್ರವನ್ನು ನೋಡಿ ಇಂದ್ರಜಿತ್ತು ಹೆದರಿ ಓಡಿದ. ಅಷ್ಟು ಹೊತ್ತಿಗೆ ನಾರದ ಅಲ್ಲಿಗೆ ಬಂದು ಗರುಡನನ್ನು ನೆನೆಯಲು ಹೇಳಿದ. ಗರುಡನು ಬಂದ ಕೂಡಲೇ ಅವರನ್ನು ಬಂಧಿಸಿದ ನಾಗಗಳು ಓಡಿಹೋದವು. ಅವುಗಳಲ್ಲಿ ಹಲವನ್ನು ಗರುಡ ತಿಂದ! ರಾಮನು ಅವನನ್ನು ಹರಸಿ ಕಳಿಸಿದನು.

–೧೯–

ಹನುಮ ಪ್ರತಾಪ

ರಾವಣನು ಇಂದ್ರಜಿತ್ತನ್ನು ಹೊಗಳುತ್ತಿದ್ದ. ಅಷ್ಟು ಹೊತ್ತಿಗೆ ಮತ್ತೆ ಕಪಿಸೈನ್ಯ ಮುತ್ತಿಗೆ ಹಾಕಿತು.

ಮುಸುಕಿಹೋಯಿತು ಲಂಕೆ ಕಪಿಗಳ ವಿಸರದಿಂದಯ್ಯಯ್ಯ ಹರಿಹರಿದಸುರಭಟರನು ಸಿಂಗಲೀಕರು ಸೀಳಿ ಬಿಡುತಿರಲು; ಮುಸುಗಣದ ಮುತ್ತಿಗೆಗೆ ಖಳ ಬೆಕ್ಕಸನೆ ಬೆರಗಾಗುತ್ತ ಸುಯ್ದನು ಸಸಿನೆ ರಾಗದಿ ಮಗನ ಮರುಳಾವರಿಸಿತೆನುತೆಂದ!

ಕೂಡಲೇ ಧೂಮ್ರಾಕ್ಷನೆಂಬ ರಾವಣ ಪುತ್ರ ಯುದ್ಧಕ್ಕೆ ಸಿದ್ಧನಾದ; ಜೊತೆಗೆ ಕಂಪನೂ ಎದ್ದ; ಪ್ರಹಸ್ತನೂ ಕೂಡಿದ. ಅವರ ಸೈನ್ಯ ಹೊರಟದ್ದು ಹೇಗೆ ಗೊತ್ತೇ?

ಕೆಲರು ತೋಳನ, ಕೆಲರು ಕತ್ತೆಯ, ಕೆಲರು ಸಿಂಹನ, ಹುಲಿಯ ಕೆಲವರು, ಕೆಲರು ಜಂಬುಕ ಸಾರಮೇಯನ (ನರಿ ನಾಯಿಗಳನ್ನು) ತಗರು (ಟಗರು) ಕೋಣಗಳ; ಕೆಲರು ಕರಡಿಯ, ಮೃಗನ, ಗವಯನ (ಕಾಡುಹಸುವಿನ) ಬಲುಹ ತೋರುವರೇರಿ ರಕ್ಕಸಬಲವು ಬರುತಿರಲರಸ ಕೇಳಿದನಾ ವಿಭೀಷಣನ!

ವಿಭೀಷಣನು ಮಾರುತಿಯಲ್ಲದೆ ಇನ್ನಾರಿಗೂ ಅವರನ್ನು ಕೊಲ್ಲಲು ಸಾಧ್ಯವಾಗದು ಎಂದ. ಮಾರುತಿ ಆಗ ತನ್ನ ಸೇನೆಯೊಡನೆ ಮುಂದಾದ.

ಕೆಲರು ಹೆಗ್ಗಲ್ಲುಗಳ ಕರೆದರು. ಕೆಲರು ಮರ ಮಟ್ಟುಗಳ ಸುರಿದರು. ಕೆಲರು ಪರ್ವತ ಕಲ್ಲುಗುಂಡನು ಕೆರಳಿಸುರಿವುತಿರೆ; ಖಳರು ಕಕ್ಕಡೆ ಪರಶು ಕೊಂತದಿ ಹೊಳೆವಡಾಯುಧ ಶೂಲ ಶರದಲಿ ಹಳಚಿ ಕಾದಿತು. ಕೇಡಪಡೆದುದು ದನುಜಪಾಯದಳ! ಮೊರೆದು ಗಿರಿಗಿರಿಗುಟ್ಟಿ ಮಾರುತಿ ಹರಿದು ಬಂದನು; ರಥವನೊದೆದನು. ಕೆರಳಿ ದನುಜನ (ಧೂಮ್ರಾಕ್ಷನ) ಹಿಡಿದು ಸರ್ರನೆ ತಿರುಹುತಪ್ಪಳಿಸಿ; ಹೊರಳಿದನು ಹಮ್ಮೈಸಿ ಮೂಗಿನಲರುಣವಾರಿಯ ಕಾರಿ ಧೈರ್ಯದಿ ಮರಳಿ ಡೆಂಡಣಿಸುತ್ತ ನೋಡಿದನಸುರನಾಲ್ದೆಸೆಯ! ಆಗ ಹನುಮ ಅವರನ್ನು ಹೊಡೆದು ಕೊಂದ! ಅಟ್ಟಿ ಮುರಿದನು ರಥವ ರಥದಿಂ ಕುಟ್ಟಿ, ಘೀಳಿಡುವಾನೆ ಘಟೆಗಳ ಥಟ್ಟುಗೆಡೆದನು

ಕರಿತುರಂಗದ ಕುಲವ ಕೂಗಿದನು; ಹಿಟ್ಟುಹಿಟ್ಟಾಯ್ತುಸುರರಮಮಾ ಕೊಟ್ಟು ಕಳುಹಿದರ ಸುವನತ್ತಲು ನೆಟ್ಟನಂತಕನೂರು ತುಂಬಿತು ಕಾಣೆನಿನ್ನೆಡೆಯ!

ಕಂಪಣ್ಣ ಅನಂತರ ಬಿಲ್ಲಿಗೆ ಅಂಬನ್ನೇರಿಸಿದ; ಕೆಲ ಕಪಿಗಳನ್ನು ಗೋಳುಗುಟ್ಟಿಸಿದ. ಕೂಡಲೇ ಮಾರುತಿ ಮಾರಾಂತು ಹೋರಾಡಿದ. ಘಡಘಡೆನುತಾ ಖಳನ ರಥವನು ತುಡುಕಿದರೆ ಹನುಮಂತ ದಾನವ ಸಿಡಿದು ಗಗನಕೆ ಗದೆಯಲಪ್ಪಳಿಸಿದನು ಮಾರುತಿಯ; ಕಡುಗಿ ಹುಲುನೊರಜೇರಿನಂತಾಯ್ತೊಡನೆ ಬಾಲವ ಬೀಸಿ ಹಿಡಿದನು; ಕೆಡಹಿ ತಲೆಯನು ಮುರಿದು ಮುಂಡವ ಸೀಳಿ ಬೀಸಾಟ! ಮಂತ್ರೀಶ್ವರನಾದ ಪ್ರಹಸ್ತ ಆಮೇಲೆ ಕತ್ತಿ ಹಿರಿದ. ಆಂಜನೇಯ ಎದುರಾದ.

ಮಾರುತಿ ಮುಳಿದು ಹೆಮ್ಮರನೊಂದ ಮುರಿತಂದೆಲೆಲೆ ಸೇನೆಯನ್ನಪ್ಪಳಿಸಿದರೆ ಕಳಚಿಬಿದ್ದವು ತೇರು ತುರುಗವನೆಳೆವ ಕುಂಭಿಗಳು; ತಲೆಯನೂರುತೆ ಕೆಡೆದುವಮಮಾ ಅಲಘ ಸಾಹಸಿ ಹೊಡೆದ ಗಾಯಕೆ ಖಳರ ಮುಂಡಗಳಾಡುತಿರ್ದುವು ಬಲವ ಬರುಗೆಯ್ದು! ಪ್ರಹಸ್ತನ ಸೈನ್ಯದ ದಳವಾಯಿಗಳೆಲ್ಲರನ್ನೂ ಹನುಮಂತ ಸಂಹರಿಸಿದ. ಅಷ್ಟು ಹೊತ್ತಿಗೆ ನೀಲ ಬಂದ; ಜಿಗಿದು ಹಿಡಿದನು ದೈತ್ಯಮಂತ್ರಿಯ ಬಿಗಿದ ಕವಚವ ಸೀಳಿ ಬಿಡುತವೆ ಉಗುರಲುರವನು ಬಗೆದ ನರಹರಿಯಂತೆ ದಾನವನ; ಹಗೆಯ ಕೊರಳನು ಅವನ ಖಡ್ಗದಿ ಉಗಿದು ಕೊಯ್ದನು ಹಗೆಯ ಕೊಂದನು ಬಗೆ ದಣಿಯೆ ಬಲು ಮಾರಿ ಮಸಣಿಗೆ ಉಣ್ಣಬಡಿಸಿದನು; ಆಗ ಮಂಡೋದರಿ ಇನ್ನಾದರೂ ಸೀತೆಯನ್ನು ರಾಮನಿಗೊಪ್ಪಿಸು ಎಂದಳು. ಅವನು ಕೇಳಲಿಲ್ಲ. ನಾಳೆ ಯುದ್ಧ ಮಾಡುತ್ತೇನೆ ಎಂದ.

–೨೦–

ವಿವಿಧ ಕಪಿ ವೀರರ ಸಾಹಸ


ಮರುದಿನ ಮತ್ತೆ ಯುದ್ಧ. ರಾವಣ ಸ್ವತಃ ನಿಂತ. ಕೊಂದರೈ ವನಚರರು ತನಯರ; ಇಂದು ನೋಡುವೆ ಕೊಲುವ ಪರಿಯನು; ಸಂದು ಸಂದನು ಕಡಿದು ಹರಹುವೆ ರಣದ ಭೈರವಿಗೆ; ಬಂದು ತಾನೇ ತೇರ ಹೂಡುತೆ ತಂದು ನಿಲಿಸಿದ ಸೂತ ನಾಯಕ ವೃಂದ ನಡೆಯಲಿ ರಣಕೊಡನೆ ಹೂಡೆ ಭೇರಿಗಳನೆಂದ! ಖುರದ ರಜದಲಿ ನಭವ (ಆಕಾಶವನ್ನು) ಮುಸುಕುತ. ಖರೆಯದಲಿ ದಿನಮಣಿಯ ಮೀರಲು ಉರದ ಗೆಜ್ಜೆಯ ಚರಣದಂಡೆಯ ಬಾಹುಪುರಿಗಳಲಿ ಸುರರ ಮೀಸೆಯ ತುಡುಕುವಂತಾ ಸುರದೆ ನೆಗೆವಾ ಕೊರಳಿನಗಣಿತ ತುರಗ ಥಟ್ಟುಗಳೈದೆ ಕವಿದುವು ಚತುರಗತಿಗಳಲಿ! ಇಂದುಮರ್ದನನೆಂಬ ಮಕುಟವ ಚಂದದಿಂದೀರೈದು ಧರಿಸಿದನಂದು ಪದಕವನಿಕ್ಕಿದನು ರವಿರಂಗ ಹರಳೆಂಬ; ಇಂದ್ರದಲ್ಲಣವೆಂಬ ನೀಲಗಳಿಂದ ತೋಳಿಪ್ಪತ್ತು ರಂಜಿಸಲಂದು ಖಳನೆಂಬತ್ತು ಬೆರಳಿಗೆ ಮುದ್ರಿಕೆಯನಿಟ್ಟ! ಕತ್ತಲೆಯ ಕಡೆಕಡೆದು ಮಾಡಿದ ಪುತ್ತಳಿಗಳೋ ಕಾಳಕೂಟದ ಬಿತ್ತುಗಳೊ ಹೊರವಡುವ ದೈತ್ಯರೊ ಯೆನಲುಹರಿ ಕಂಡು, ಹತ್ತಕರೆದು ವಿಭೀಷಣಾಂಕನ ಮತ್ತೆ ಬರುತಿಹ ಭಟರದಾರೆನೆ, ಚಿತ್ತವಿಸು ರಘುನಾಥ ರಾವಣ ಬಂದ ರಣಕಾಗಿ! ಮೃತ್ಯುವನು ಮುಕ್ಕುವರು, ಮಾರಿಯ ಹೆತ್ತು ಹೆಸರಿಟ್ಟವರು. ಕಾಲನ ಸತ್ತಿಗೆಯ ಟೊಣೆದವರು. ಕಡ್ಡಿಗೆ ಬಗೆಯರಂತಕನ; ಸತ್ಯಗಿತ್ಯದ ಘಸಣಿಯರಿಯರು, ಹತ್ತುಯುಗದವರೆಂಟು ಯುಗದವರೆತ್ತು ಕತ್ತೆಯಮಾಡಿ ದೇವರ ಹಿಂಡನಾಳ್ದವರು! ಈ ರಾಕ್ಷಸಬಲಕ್ಕಿದಿರಾಗಿ–

ಕೋಟಿಪಡೆಯಲಿ ಗಂಧಮಾದನ, ಕೋಟಿಯಲಿ ನಳನೀಲನರ್ಕಜ, ಕೋಟಿಯಲಿ ಜಾಂಬವನು, ಶತಬಲಿ ಕೋಟಿಯಲಿ ಪನಸ, ಕೋಟಿಯಲಿ ತಾರೇಯ ಕಂಪನು ಕೋಟಿಯಲಿ ದಧಿಮುಖನು ಕವಿದನು. ಕೋಟಿಯಲಿ ಖಳಪಡೆಯು ಹಳಚಿತು ಹತ್ತು ಮುಖದಲ್ಲಿ (ದಶದಿಕ್ಕುಗಳಲ್ಲಿ)!

ಹರೆಯ ಲಗ್ಗೆಯ ಕೂಡೆ ನುಂಗಿದುದರಚುತಿಹ ವನಚರರ ಗರ್ಜನೆ ಮೆರೆದುದದು ರಕ್ಕಸರ ನುಂಗುವ ಕೊಕ್ಕಸರಗಾದೆ; ಮುರಿದು ಹೆಮ್ಮರ ಕಲ್ಲುಗುಂಡಿಂದುರುವ

ಹೆಗ್ಗಿರಿಯಿಂದ ಕಪಿಗಳು ಬೆರಸಲಾ ರಣಧೂಳಿ ಮುಸುಕಿತ್ತು ಭಯ ಮೋಹರವ (ಎರಡು ಕಡೆಯ ಸೈನ್ಯಗಳನ್ನೂ)! ತರುಚರೇಂದ್ರರು ಕವಿದು ಹಾಯ್ದರು, ಪುರದ ಹೆಬ್ಬಾಗಿಲುಗಳಿಕ್ಕಿತು, ಬಿರುಬವನು (ಕಠಿನತನವನ್ನು, ಕಷ್ಟವನ್ನು) ಕೊಳಿಸಿತ್ತು ಕಂಗೆಟ್ಟೋಡೆನಾಯಕರು; ಹರಿದು ಬೆನ್ನಿಗೆ ಬರಲು ಕೆಲವರು ಹರಣ ಹರವರಿಯಾಯ್ತು (ಪ್ರಕಟವಾಗಿ ಹಾರಿ ಹೋಯ್ತು). ರಾವಣ ಕೆರಳಿದೊಂದೇ ರಥದಿ ಸೂಠಿಯಲಡ್ಡಗಟ್ಟಿದನು! ಹತ್ತು ಬರಸಿಡಿಲಂತೆ ಚೀರಿದ; ಹತ್ತು ಚಾಪದಿ ಸರಳ ಸುರಿದನು: ಮೃತ್ಯುವೋ ಕಾಲಾಗ್ನಿರುದ್ರನೊ, ಸಮರಭೈರವನೋ–ತೆತ್ತಿಸಿದನಮರಾರಿ; ಕಪಿಗಳು ಸತ್ತು ಸವೆಯದೆ ಕಾದುತಿರ್ದುದು; ಸುತ್ತ ಕರಗಸದಂತೆ ಸೀಳಿದ ಸೇನೆಗುರಿಮಾರಿ! ಕುಂಭಕರ್ಣನ ಮಗಕುಂಭನೂ ರಾವಣನ ಜೊತೆಗೆ ಕಪಿಸೈನ್ಯವನ್ನು ತರಿದೊಗೆಯಲಾರಂಭಿಸಿದ. ಆಗ ಸುಗ್ರೀವ ಎದುರಾದ, ನೀಲಬಂದ ಜಡಿದು ಖಡ್ಗದಲಸುರ ಬಾಲದಿ ಹೊಡೆಯೆ, ತಪ್ಪಿಸಿಕೊಂಡು ಕಡಿದುರೆ ಕೆಡೆದನುಬ್ಬಿನ ರಥತುರಂಗವನಹಹ ಸಂಭ್ರಮಕೆ; ಒಡನೆ ಹೊಸ ವಾಜಿಗಳ ಹೂಡುತ ದಡಿಗರಕ್ಕಸ ಹಲ್ಲುಗಡಿಯಲು, ತುಡುಕಿ ಸರ‍್ರನೆ ತಿರುಗಿ ರಥವನು ನಭಕೆ ಕಪಿಯಿಟ್ಟ!

ಇಟ್ಟೊಡಾ ರಥ ನುಚ್ಚುನೂರೆನೆ ಥಟ್ಟನವ ಪಡಿರಥವನೇರಲು, ದಿಟ್ಟ ಕಪಿ ಕೈದುಗಳ ಚೆಲ್ಲಿದ ಕೀಲ ಕಳಚಿದನು; ಅಟ್ಟಿಕೊಂತದಲಿರಿಯೆ ಕಪಿಜಗಜಟ್ಟಿ ಕೊಂತವ ಹಿಡಿದು ಜೋಲಲು, ಬಿಟ್ಟು



ಕೊಂತವ ನೀಲ ಮಕುಟದ ಮೇಲೆ ಮಂಡಿಸಿದ! ತಿರುವನಂತದಿ ಕಡಿಯಲಾ, ಖಳ ಕೆರಳಿ ಖಡ್ಗವ ಸೆಳೆಯೆ, ಕಪಿ ತಾನಿರದೆ ಹಲುಗಿರಿದೇಡಿಸುತ ಹುಬ್ಬಿಕ್ಕಿ ಫಳಫಳಿಸಿ, ಬೆರಳ ತುದಿಯಲಿ ಬದಿಯ ತುರಿಸುತ ತರುಚರೇಶ್ವರ ಬಲುವಿಕಾರದಿ ಮರುಳುಗೊಳಿಸಲು ನೋಡಿ ಹೊಗಳಿತ್ತುಭಯ ಬಲವಂದು! ಆದರೂ ನೀಲನು ಸೋತು ಬಿದ್ದನು.

ಆಗ ಮಿಕ್ಕ ಕಪಿವೀರರಿಗೆ ಕೋಪಬಂತು. ಅವರು ಇಟ್ಟು ಮುರಿದರು ತೇರು ತುರಗವನೊಟ್ಟಿದರು ಗಿರಿಗಳನು, ಕಪಿಭಟರಟ್ಟುಳಿಯು ನಾನುವರೆ ರಾವಣನೆನಿತರವನೆನಲು; ಬೆಟ್ಟ ಮರ ಕಲುಗುಂಡಗಳ ಮೊಗೆದೊಟ್ಟಿ ದನುಜನ ಮುಸುಕಿದರು ಜಗಜಟ್ಟಿಗಳು ರಾಘವನ ಮೋಹದ ಪಟ್ಟದಾನೆಗಳು! ರಾವಣ ಅವರನ್ನು ಸವರಿದ. ಅದನ್ನು ನೋಡಿ, ಕಡಲ ಮೊಗೆಮೊಗೆದೀಂಟಿ ತೀರಿಸಿ ಬಡಬನೇಳ್ವಂದದಲಿ ರಕ್ಕಸಪಡೆಯು ಕೊಲುತಿರೆ ವೀರವಿಜಯಸ್ತಂಭ ಹನುಮಂತ ಜಡಿದು ಪುಟನೆಗೆದಾರುತಿರ್ದಾ ಸಿಡಿಲ ಸಡಗರದಂತೆ ಭುಜವನು ಹೊಡೆದು ರಾಮಂಗೆರಗಿ ರಕ್ಕಸವಾರಿ ಹರಿತಂದ! ಬೀಸಿ ಬಾಲದಿ ಗೋಣ ಬಿಗಿದನು ಸಾಸಿಗದ ಶಿರ ಡೋರಿವೋದುವು. ಹಾಸಿ ಹರಹಿದ ತೋಳನೊಬ್ಬುಳಿ ಮಾಡಿ ಬಂಧಿಸಿದ; ವಾಸವಾರಿಯ ಕಣ್ಣುಗಳು ಹೊರಸೂಸೆ, ಬಾಯಲಿ ನೊರೆಗಳುಕ್ಕಲು, ಮೀಸೆಗಡಿವುತ್ತಿರಲು ಹಲುಗಿರಿದೇಡಿಸಿದ ಹನುಮ! ರಾವಣನಿಗೂ ಹನುಮಂತನಿಗೂ ಮುಷ್ಟಿಯುದ್ಧವು ನಡೆಯಲು ಹನುಮಂತ ಒಪ್ಪಿ ಅವನ ತೋಳುಗಳ ಬಂಧನವನ್ನು ಬಿಡಿಸಿದ. ಮುಷ್ಟಿಯುದ್ಧದಲ್ಲಿ ರಾವಣ ಬಿದ್ದ. ಅವನು ರಾಮನಿಂದಲೇ ಸಾಯಬೇಕಾಗಿದ್ದುದರಿಂದ ಹನುಮಂತನು ಅವನ ಬಾಯಿಗೆ ಉಸಿರ ತುಂಬಿ ನೇವರಿಸಿ ಬದುಕುವಂತೆ ಮಾಡಿದನು.



ಆದರೆ ಎಚ್ಚತ್ತ ರಾವಣನು ಹನುಮ, ಸುಗ್ರೀವ ನೀಲರನ್ನು ಸಿಟ್ಟಿನಿಂದ ಮೂರ್ಛೆಬರುವಂತೆ ಹೊಡೆದು ಮಲಗಿಸಿದ! ಕೂಡಲೇ ಲಕ್ಷ್ಮಣ ಯುದ್ಧಕ್ಕೆ ಬಂದ. ಸಾಮಾನ್ಯ ಯುದ್ಧದಿಂದ ಅವನನ್ನು ಗೆಲ್ಲಲಾರದೆ ರಾವಣನು ಮಾಯಾಸ್ತ್ರಗಳ ಇಂದ್ರಜಾಲ ಯುದ್ಧವನ್ನು ಆರಂಭಿಸಿದನು. ವಿಭೀಷಣ ಆಗ ಶಿತಿಕಂಠ ಬಾಣವನ್ನು ಬಿಡೆಂದು ಲಕ್ಷ್ಮಣನಿಗೆ ಹೇಳಿದ; ಅವನು ಬಿಟ್ಟ; ಮಾಯೆ ಮಾಯವಾಯ್ತು! ರಾವಣನಾಗ ತಮ್ಮನ ಮೇಲೆ ಕೆರಳಿ ಮಯನಿತ್ತ ಉಗ್ರಶಕ್ತಿ ಎಂಬ ಅಸ್ತ್ರವನ್ನು ಬಿಟ್ಟ. ಲಕ್ಷ್ಮಣ, ಸುಗ್ರೀವ ಮುಂತಾದವರು ಮೂರ್ಛೆಹೋದರು. ಆಗಿಂದಾಗ ರಾಮ ಎದುರಾದ.

ಹೇರಿದನು ಖಳರಸುವನಂತಕನೂರಿಗೆಲೆ, ನರಕಕ್ಕೆ ಮಿಕ್ಕರ ಸೂರೆಯಿತ್ತನು, ಭೂತಸಂತತಿ ತಿಂದು ಬೇಸತ್ತು ಸಾರಿದರು ತೆರಪಿಲ್ಲವೆಂದರೆ ಮೀರಿ ಜವಗುಂದಿದನು. ಬೊಮ್ಮನ ದೂರಿದನು ಹೊರಗೇರಿ ಕಟ್ಟಿಸು ಪುರವು ನೆರೆಯದಿರೆ!


ರಾವಣನು ಸೋತು, ಅವನ ಉಟ್ಟ ಬಟ್ಟೆ ಕಳಚಿ ಹೋದಾಗ ರಾಮ ಹೇಳಿದ್ದರಿಂದ ಹನುಮಂತನು ಅವನನ್ನು ಧರ್ಮಯುದ್ಧದ ನಿಯಮದಂತೆ ಕೊಲ್ಲದೆ ಬಿಟ್ಟ! ಲಕ್ಷ್ಮಣಾದಿಗಳು ಮೂರ್ಛೆಹೋದುದಕ್ಕಾಗಿ ರಾಮ ದುಃಖಿಸಿದ. ಆಗ ಜಾಂಬವನು ಹನುಮಂತನ ಹತ್ತಿರ ಮದ್ದು ತರಲು ಹೇಳಿದ. ಅವನು ಹಿಮಗಿರಿಯಿಂದ ಮೂಲಿಕೆಯನ್ನು ತಂದ. ಅದರ ಪ್ರಯೋಗದಿಂದ ಮೂರ್ಛಿತರೆಲ್ಲರೂ ಎಚ್ಚೆತ್ತರು! ಕಿರೀಟಗಳನ್ನು ಕಳೆದುಕೊಂಡ ರಾವಣ ಅಷ್ಟರಲ್ಲಿ ರಣರಂಗದಿಂದ ಹಿಂದಿರುಗಿದ್ದ. ಮಾಲ್ಯವಂತ ಅವನಿಗೆ ಬುದ್ಧಿ ಹೇಳಿದ. ಆದರೆ ರಾವಣ ಕೇಳಲಿಲ್ಲ. ಕೈಕಸೆ ಹೇಳಿದರೂ ಅವನು ಕೇಳಲಿಲ್ಲ; ಕುಂಭಕರ್ಣನನ್ನು ಯುದ್ಧಕ್ಕೆ ಎಬ್ಬಿಸಿರಿ ಎಂದು ಆಳುಗಳಿಗೆ ಆಜ್ಞಾಪಿಸಿದ. ಅವರೆಲ್ಲರೂ ಸೇರಿ ಅವನನ್ನು ಎಬ್ಬಿಸಹೋದರು:

–೨೧–

ಕುಂಭಕರ್ಣನ ಉತ್ಥಾಪನೆ

ಅರಚಿ ಕೂಗಿದರೆತ್ತಲೆಂದವನರಿಯನೊಯ್ಯನೆಗೊರೆವ ದನಿಯಲಿ ಮರೆಸಿ ಹೋಯಿತು ಖಳರು ಕೈಸನ್ನೆಯಲಿ ಮಾತಾಡೆ; ಹರೆಯ ಕೊಂಬಿನ ಶಂಖ ಕಹಳೆಯ ಬಿರುಬಿನಬ್ಬರದಿಂದ ದನುಜರು ಒರಲಿ ಸೋತರು; ಖಳನ ನಿದ್ದೆಯ ಭರವು ಬಲುವಾಯ್ತು! ಕೋಟಿ ಹರೆಗಳು, ಕೋಟಿ ನಿಃಸಳ, ಕೋಟಿ ಭೇರಿಯು, ಕೊಂಬುಕೋಟಿಯ, ಕೋಟಿ ತಿತ್ತಿರಿ ಡೌಡೆ ಗಿಡಿಬಿಡಿ ಪಟಹ ತಂಬಟವ, ಕೋಟಿ ಡಿಂಡಿಮಗಳನು ಬಾರಿಸೆ, ಗೋಟು ತುಂಬಿತು ಜಗದ ಕಿವಿಗಳ ಪಾಟಿ ಹೊಟ್ಟಿತು, ಕೇಳನಾ ಖಳ ಗೊರೆದು ತೆಕ್ಕುತಿರೆ. ಯಾವ ಗದ್ದಲಕ್ಕೂ ಕುಂಭಕರ್ಣ ಏಳದಾದ!

ಸರಳ ಕುಡಿಯಲಿ ಹೊಸೆದು ಕೆಲವರು ಹುರಿದ ಮರಳನು ಮೇಲೆ ಚೆಲ್ಲಲು, ಹರಹಿ ಸಾಸಿವೆ ಕಾಳರಸಗಳನುಪ್ಪು ಮೆಣಸುಗಳ ಹಿರಿಯ ಮೂಗಿನ ಹೋರು ತುಂಬಲು; ಭರದಿ ಬಿರುಸಿಂದವನು ಸೀತರೆ, ಗಿರಿಯ ತೋರದ (ಗಾತ್ರದ) ಭಟರು ತರಗೆಲೆಯಂತೆ ಹಾರಿದರು! ಒತ್ತಿ ದೃಢ ಮುಷ್ಟಿಯಲಿ ತಿವಿದರು ಸತ್ವವುಳ್ಳವರೆರಡು ಬದಿಯನು ಮತ್ತನಾಗಿರೆ ಮುಸಲ ಮುದ್ಗರ ಪಿಂಡಿವಾಳದಲಿ (ಒನಕೆ, ಗದೆ,





ಚಕ್ರಾಯುಧಗಳಿಂದ); ಇತ್ತರದ ತಿರುಗುತಿರೆ ಮೆಲ್ಲನೆ ಒತ್ತಿದಂತಾಯ್ತವಗೆ ಕನವರಿಸುತ್ತ ಖಳ ಸುಖಸುಪ್ತನಾದನು ಸೇನೆ ಬೇಸರಿಸೆ! ಬಲುಗಿರಿಯಲಪ್ಪಳಿಸೆ ಚಿಟುಕನು ತಳೆದ ಪರಿಯಾಯ್ತೇನ ಹೇಳುವೆ ತಲೆಯ ಕುರಿವಿಂಡಿನಲಿ ತುಳಿಸಲು ತುರಿಸಿದಂತಾಯ್ತು; ಶಿಲೆಯ ದಾಡೆಯ ಮೇಲೆ ಹೊಡೆಯಲು ಬಲದ ಕೈಯಲಿ ತೂರಿಕೊಂಡನು; ತಿಳಿಯದಾತನ ನಿದ್ದೆ ಅದಿರದ ಬೆಟ್ಟದಂತಿರಲು!

ದಾಂಡಿಗ ಕುಂಭಕರ್ಣನನ್ನು ಎಬ್ಬಿಸಲು ಯಾರಿಂದಲೂ ಸಾಧ್ಯವಾಗದಿರಲು ಶಿವ ನಾರದನನ್ನು ಕಳಿಸಿದ; ಅವನು ರಾವಣನೊಡನೆ ಕುಂಭಕರ್ಣನ ಹತ್ತಿರ ಹೋಗಿ ದಿವ್ಯವೀಣೆಯನ್ನು ಬಾರಿಸಿದ. ಆಗ ಕುಂಭಕರ್ಣನು ವನಚರರು ಪುರವನ್ನು ಮುತ್ತಿದ ಕನಸ ಕಂಡು ಮೈಮುರಿದು, ಆಕಳಿಸಿ ಕಣ್ದೆರೆದ! ಭರದಲೆದ್ದನು ಕುಂಭಕರ್ಣನು ಸುರಮುನೀಂದ್ರನದೃಶ್ಯನಾದನು ಸರಿದರಸುರರು ಮುಂದೆ ನಿಲ್ಲದೆ ಪ್ರಾಣಭೀತಿಯಲಿ; ಉರಿವ ಕಣ್ಣಿನ, ಕೋರೆದಾಡೆಯ ಕರಿಯ ಕಾಯದ ಜೋಲು ಬಸುರಿನ ಪರಮ ಮಂಗಳ ಮೂರ್ತಿ ಕುಳಿತನು ಕಣ್ಗೆ ಭಯವಾಗೆ!

-೨೨-

ಕುಂಭಕರ್ಣನ ಪರಾಕ್ರಮ ಮತ್ತು ಸಾವು

ಅವನು-ಮುಂದಣಡಗನು ಮೊಗೆದು ಮುಕ್ಕುತ, ತಿಂದನಾ ಕುರಿಕೋಣ ಕೋಟಿಯನೊಂದು ಕಡೆಯಿಹ ಸುರೆಯ ದೋಣಿಯ ಹಲವು ಬರಿಗೈದು; ತಂದು ಕೂಡಿಸಿದನಿತನೆಲ್ಲವನೊಂದನುಳಿಯದೆ ತಿಂದನಸುರನು ಬಂದು ಹೆದರುತ ನೀರನೆರೆಯಲು ತೊಳೆದ ಕೈಮೊಗವ! ರಾವಣನಾಗ ನಡೆದ ಸಂಗತಿಯೆಲ್ಲವನ್ನೂ ಹೇಳಿದ. ಕುಂಭಕರ್ಣನು ಸೀತೆಯನ್ನು ಒಪ್ಪಿಸುವುದೇ ನ್ಯಾಯ ಎಂದನು. ರಾವಣ ಅದಕ್ಕೆ ಪ್ರತ್ಯುತ್ತರವಾಗಿ ಅವನನ್ನು ಜರೆದ. ಅನಂತರ ಕುಂಭಕರ್ಣ ಯುದ್ಧಕ್ಕೆ ಹೊರಡಲು ಒಪ್ಪಿ ನಡೆದ. ಎಣಿಕೆಯಿಲ್ಲದ ಕುಂಭಕರ್ಣನು ರಣಕೆ ನೂಕಿದ ಹತ್ತು ಕೋಟಿಯ ಕುಣಿವ ಕುದುರೆಯ ಭದ್ರದಂತಿಯನೆಂಟು ಕೋಟಿಯನು; ಮಣಿವರೂಥಗಳಾರು ಕೋಟಿಯನೆಣಿಸಲರಿಯೆನು ಪಾಯದಳವನು; ಫಣಿಯ ಕೊರಳಳುಕಿತ್ತು! ದಿಗ್ಗಜ ತಲೆಯ ಕೊಡಹಿದವು. ರಕ್ಕಸನು ತನ್ನೆರಡು ಕೈಯಲಿ ಸಿಕ್ಕಿದನಿತನು ಮೊಗೆದು ಮುಕ್ಕುತ ಮರ್ಕಟಂಗಳ ನೊಕ್ಕಲಿಕ್ಕುತ ಮುಂದೆ ಬರುತಿರಲು; ದಿಕ್ಕುಗೆಟ್ಟುದು ಸೇನೆ ಸುರಿಯಲಿ ಸೊಕ್ಕಿದಾತನು ತನ್ನನರಿಯನು ಅಕ್ಕಟಾ ಕಪಿ ಸೇನೆ ಮುರಿದೋಡಿತ್ತು ದೆಸೆದೆಸೆಗೆ! ಆಗ ಹನುಮಂತ ಅವನ ಶೂಲವನ್ನು ಹೆಗ್ಗಲ್ಲಿನಿಂದ ಮುರಿದ. ಕುಂಭಕರ್ಣ ಗದೆಯಿಂದ ಹೊಡೆದು ಹನುಮಂತನನ್ನು ಬೀಳಿಸಿದ.

ಸುಗ್ರೀವ ಬೆಟ್ಟದಿಂದ ಹೊಡೆದ. ಕುಂಭಕರ್ಣ ಅವನನ್ನು ಕಂಕುಳಲ್ಲಿ ಅವುಚಿಕೊಂಡು ಹೋದ. ಸುಗ್ರೀವ ರಾಮನಾಮದ ಬಲದಿಂದ ಬಿಡಿಸಿಕೊಂಡು ಹೊರಬಿದ್ದ! ಹೊರಬೀಳುವಾಗ, ಕರೆಮನದ ರಕ್ಕಸಗೆ ನಾನೊಂದುರುವ ಕುರುಹನು ಮಾಡಿದಲ್ಲದೆ ಬರಿದೆ ಹೋಹುದು ನೀತಿಯಲ್ಲೆನುತೆರಡು ಕೈಗಳಲಿ ಹರಿದು ಕಿತ್ತನು ಕಿವಿಗಳೆರಡನು ಮೆರೆವ ಕುಂಡಲ ಸಹಿತ ಮೂಗನು ಹರಿದು ಬಾಯಲಿ ಕಚ್ಚಿಹಾರಿದನರರೆ ಕಪಿ ವೀರ! ಆಗ ಕುಂಭಕರ್ಣ ಕಪಿಗಳನ್ನು ಗುಳುಮ್ಮನೆ ನುಂಗತೊಡಗಿದ. ಲಕ್ಷ್ಮಣ ಅವನ ಹೊಟ್ಟೆಯಲ್ಲಿದ್ದ ಕಪಿಗಳನ್ನು ಬಿಡಿಸ ಹೋದ, ಅರ್ಧಚಂದ್ರಾಸ್ತ್ರದಿಂದ ಹೊಟ್ಟೆ ಬಗೆದಾಗ ೮ ಸಾವಿರ ಆನೆಗಳೂ ೮ ಲಕ್ಷ ಕಪಿಗಳ ಜೊತೆಗೆ ಹೊರಬಿದ್ದವು! ಆಗ

ಕುಂಭಕರ್ಣನು ಸೊಂಟಕ್ಕೆ ಬಿಗಿದುಕೊಂಡಿದ್ದ ಗಂಟೆ ಹರಿದು ಬಿದ್ದು ಅವರೆಲ್ಲರನ್ನೂ ಮುಚ್ಚಿಬಿಟ್ಟಿತು. ಆಗ ಹನುಮಂತನು ಬಾಲದಿಂದ ಗಂಟೆ ಎತ್ತಿ ಅವರನ್ನು ಬದುಕಿಸಿದ. ಕುಂಭಕರ್ಣ ಮತ್ತೆ ಸಿಟ್ಟಿನಿಂದ ಕಪಿಗಳನ್ನು ನುಂಗಲಾರಂಭಿಸಿದಾಗ ರಾಮ ಎದುರಾದ. ಕುಂಭಕರ್ಣ ಗದೆಯೆತ್ತಿದ. ರಾಮನು ಬಾಣದಿಂದ ಗದೆ ಹಿಡಿದ ಅವನ ಕೈಗಳನ್ನು ಕಡಿದ. ಬಿದ್ದ ಆ ಕೈಗಳ ಕೆಳಗೆ ನುಚ್ಚು ನೂರಾಗಿ ೮ ಸಾವಿರ ಕಪಿಗಳು ಸತ್ತರು! ಅನಂತರ ರಾಮ ಅವನ ತೋಳುಗಳನ್ನು ಕಡಿದ; ಕೊನೆಯದಾಗಿ ತಲೆಯನ್ನೂ ಕಡಿದ!

ಏಳಲು ಕುಂಭಕರ್ಣನಿಗೆ ೩ ದಿನ ಬೇಕಾಗಿತ್ತು, ಬೀಳಲೀಗ ೩ ದಿನ ಬೇಕಾಯ್ತು. ಅಷ್ಟರಲ್ಲಿ ಅವನು ೩೦ ಕೋಟಿ ಕಪಿಗಳನ್ನು ಅರೆಜೀವ ಮಾಡಿಬಿಟ್ಟಿದ್ದ. ಅವನು ಬಿದ್ದ ಹೊಡೆತಕ್ಕೆ ಕಡಲು ಮೇರೆವರಿದಿತು. ಲಂಕೆಯ ಮಹಾದ್ವಾರ ಉರುಳಿ ಬಿತ್ತು. ಕೋಟೆ ಹುಡಿಯಾಯ್ತು, ಮಹಾಶೇಷನ ತಲೆ ಗಿಮ್ಮೆಂದಿತು! ರಾವಣ ಅತ್ತ!

–೨೩–

ರಾವಣನ ಮಕ್ಕಳ ಹೋರಾಟ ಮತ್ತು ಸಾವು

ಆಮೇಲೆ ತ್ರಿಶಿರ, ದೇವಾಂತಕ, ನರಾಂತಕ, ಮಹಾಕಾಯ, ಮಹೋದರ, ಅತಿಕಾಯ ಎಂಬ ೬ ಜನ ರಾವಣ ಪುತ್ರರು ಯುದ್ಧಕ್ಕೆ ಹೋದರು; ತುರಗ ತುರಗದಲಪ್ಪಳಿಸಿದರು. ಕರಿಯ ಕರಿಯಿಂದೆರಗುತಿರ್ದರು, ಭರದಲರಿಗಳ ರಥವ ರಥದಲಿ ಜಪ್ಪಿ ಹುಡಿಮಾಡಿ; ಧುರದಲಡಬಿದ್ದವರ ಕೊಲುತವೆ ತರುಚರಂಗಳು ವೀರ ದನುಜರು ಬೆರಸಿ ಹೊಯ್ದಾಡಿದರು ಮುಷ್ಟಾ ಮುಷ್ಟಿ ಯುದ್ಧದಲಿ! ಕೋಟಿ ಮರ್ಕಟರು ಸತ್ತರು. ಆಗ ಕೋಪದಿಂದ ಅಂಗದನು ನರಾಂತಕನನ್ನು ಅಂತಕಾಲಯಕ್ಕೆ ಸೇರಿಸಿದನು. ದೇವಾಂತಕ, ಮಹೋದರ, ತ್ರಿಶಿರರೊಡನೆ ಅಂಗದನೊಬ್ಬನೇ ಹೋರಾಡುತ್ತಿದ್ದಾಗ ಹನುಮಂತ ಜಾಂಬವರು ಅಂಗದನ ನೆರವಿಗರಾಗಿ ಬಂದರು. ಹನುಮಂತನು ಕಾಲುಹಿಡಿದು ಸೀಳಿ ನೆಲಕಪ್ಪಳಿಸಿ ಮಹೋದರನನ್ನು ಮುಗಿಸಿದ. ಅಂಗದನು ಮುಷ್ಟಿ ಯುದ್ಧದಲ್ಲಿ ತ್ರಿಶಿರನನ್ನು ಕೊಂದ. ಜಾಂಬವನು ಮಹಾಕಾಯವನ್ನು ತೀರಿಸಿದನು. ಉಳಿದ ರಾವಣ ಪುತ್ರರೂ ಮಡಿದರು.

ಅತಿಕಾಯನೊಬ್ಬ ಉಳಿದ! ಇಂದ್ರಜಿತ್ತಿನಂತೆಯೇ ಅವನೊಬ್ಬ ದೊಡ್ಡ ಪರಾಕ್ರಮಿ. ಪಿತೃಭಕ್ತಿ–ರಾಮಭಕ್ತಿಗಳನ್ನು ಸಮನ್ವಯಿಸಲು ಅವನು ಯುದ್ಧಕ್ಕೆ ಬಂದದ್ದು; ಅವನು ಆರು ಸರಳಲಿ ನಳನ ಕೆಡಹಿದ; ಅವನ ಮೂರು ಶರದಲಿ ಜಾಂಬವನು ತಲೆಯೂರಿ ಬಿದ್ದನು; ನೀಲನೆಂಟಂಬಿಂದ ಹೊರಳಿದನು; ಅವನು ಊರುಗೆಡಿಸಿದ ಕುಮುದ ಮೈಂದನ; ಕಾರಿದನು ತನಿಗರುಳ ಪನಸನು; ಕೊನೆಗೆ ಅತಿಕಾಯನು ಹೇರಿದನು ಹದಿನೆಂಟು ಶರದಲಿ ಶರಭಶತ ಬಲಿಗಳನ್ನು! ಲಕ್ಷ್ಮಣ ಆಗ ಅತಿಕಾಯನಿಗೆದುರಾದ. ಹಿಡಿದ ಚಾಪವು ಚಕ್ರದಂತಿರೆ ತಡೆಯದೆಸುತಿರಲೊಬ್ಬರೊರು ತೊಡುವ ಬಿಡುವುದ ಕಾಣಲಾಗದು ಲಾಗುವೇಗದಲಿ; ತೊಡಲು ತೊಡುವನು, ಬಿಡಲು ಬಿಡುವನು, ತಡೆಯೆ ತಡೆವನು, ಹೆಣಗೆ ಹೆಣಗುವ, ಕಡಿಯೆ ಕಡಿಯುವ ವೀರಲಕ್ಷ್ಮಣನೊದಗಿ ಕಾದಿದನು! ಕೂಡಲೇ ಅತಿಕಾಯನು ಸಂಮೋಹನಾಸ್ತ್ರವನ್ನು ಬಿಟ್ಟು ಲಕ್ಷ್ಮಣನೂ

ಕಪಿವೀರರೂ ನಿದ್ರಾವಶರಾಗುವಂತೆ ಮಾಡಿದ. ರಾಮನಾಗ ಪ್ರತಿ ಸಂಮೋಹನಾಸ್ತ್ರವನ್ನು ಗುರುಕೌಶಿಕನನ್ನು ನೆನೆದು ಪ್ರಯೋಗಿಸಿದ. ಕೂಡಲೇ ಮಾಯೆಯ ಮಾಯೆ ನುಂಗಿತು! ಲಕ್ಷ್ಮಣನು ಬ್ರಹ್ಮಾಸ್ತ್ರವನ್ನು ಹೂಡಿ ಎಚ್ಚ; ಅದು ಅತಿ ಕಾಯನ ಕೊರಳನ್ನಿರಿಯಿತು. ಅವನ ತಲೆ ೨೭ ಮೈಲಾಚೆ ಸಿಡಿದುಬಿದ್ದರೂ ರಾಮಧ್ಯಾನ ಮಾಡುತ್ತ ರಾಮಪಾದಗಳೆಡೆಗೆ ಬಂದು ಬಿತ್ತು! ಅತಿಕಾಯನ ಜೀವಕ್ಕಂದು ಮುಕ್ತಿ ದೊರಕಿತು! ರಾವಣನು ರೋಧಿಸಿದನು!

–೨೪–

ಹನುಮನ ಪರ್ವತೋದ್ಧಾರ

ಭುಜಬಲ ಪರಾಕ್ರಮಿ ಇಂದ್ರಜಿತ್ತು ಕಾಳಗಕ್ಕೆ ಅನುವಾದ; ಮತ್ತೆ ಅವನು ಪ್ರಾಣಿಬಲಿಯ ಹೋಮಮಾಡಿದ; ತನ್ನ ಅಂಗಗಳನ್ನೇ ಒಂದೊಂದಾಗಿ ಕಡಿದು ಅಗ್ನಿಗಾಹುತಿ ಕೊಡುವ ಮಾರಣ ಹೋಮವನ್ನು ಮಾಡಿದ! ಕುಂಭಿನಿಯು ಪ್ರತ್ಯಕ್ಷಳಾದಳು. ಹಲವು ಮಂತ್ರಾಸ್ತ್ರಗಳೊಡನೆ ಅವಳಿಂದ ಆತನು ಮಹಾ ಸಂಮೋಹನಾಸ್ತ್ರವನ್ನೂ ಪಡೆದ, ಯುದ್ಧಕ್ಕೆ ನಡೆದ! ಸಂಮೋಹನಾಸ್ತ್ರ ಶತ್ರುಗಳು ಮೈಮರೆಯುವಂತೆ ನಿದ್ರೆಗೆ ಸಲ್ಲಿಸಿತು. ಕೆಲರು ಕೈದಂಡೆಗಳ ಬಾಲವ, ಕೆಲರು ಮರಮಟ್ಟುಗಳ ಶಿಲೆಗಳ, ಕೆಲರು ಮರಳನು ಬಿಗಿದು ತಲೆಗಿಂಬುಗಳನೆರೆಮಾಡಿ; ಕುಲಗಿರಿಯ ಸಾಲಿಟ್ಟು ಕೆಡಹಿದ ನೆಲೆಯ ಹೋಲಿತು ನಿದ್ರೆ ಸೇನೆಯಲುಲುಹು ಕಾಣದು; ಕೀಳು ಮೇಲೆಂದಿರದೆ ಮಲಗಿದುದು! ಹೊರಳಿ ಮಗ್ಗುಲೊಳವುಕಿ ಕೆಲವರು; ಮುರುಟಿಕೊಂಡರು ಕೆಲವರು ನೆಲನಳಿ; ಹೊರಳುತಿರ್ದರು ಉರುಳಿ ನರಳುವರುಬ್ಬೆಗಬ್ಬರಿಸಿ; ಭರದ ನಿದ್ರೆಯ ತಾಳಲನಿಬರು ಕರೆದರೈ ಕೇಡುಗಳ ಗೊರೆವುತೆ; ವರವ ತಾಳ್ದಗೆ ಹಗೆಯು ಮೈಮರೆದಿರಲು ಮಲಗಿರಲು! ದನುಜ ಇಂದ್ರಜಿತ್ತು ಸೂಚನೆ ಕೊಡಲು ಹೊಡೆದರು. ಕಪಿಗಳುರುಳಿದರು! ಗಂಧ ಮಾದನನು ನೆಲದಲ್ಲಿ ಹೂತುಹೋದ! ನಳನನ್ನು ಇಂದ್ರಜಿತ್ತು ೬ ಸರಳುಗಳಿಂದ ನೆಲಕ್ಕುರುಳಿಸಿದ, ಕಂಪನನ್ನು ಮುಸುಕಿದ, ಮೂರು ಸರಳಗಳಿಂದ ಜಾಂಬವನ್ನೆಚ್ಚ, ಪನಸನನ್ನು ೧೦ ಬಾಣಗಳಿಂದ ಗಾಯಗೊಳಿಸಿದ! ಏಳು ಬಾಣಗಳಿಂದ ಗವಯನನ್ನು ಗಾಸಿಗೊಳಿಸಿದ. ಶರಭ ಶತಬಲಿಗಳನ್ನು ೧೦ ಅಂಬುಗಳಿಂದ ಹಣಿದ, ಗವಾಕ್ಷನನ್ನು ೧೨ ಕಣೆಗಳಿಂದ ಚುಚ್ಚಿದ! ಹತ್ತುಬಾಣಗಳೇಟು ತಿಂದು ದಧಿಮುಖ ರಕ್ತಮುಖನಾದ! ಕೂಡಲೇ ಅಂಗದ ಹೋಗಿ ತನ್ನ ಬಾಲದಿಂದ ಇಂದ್ರಜಿತ್ತನ್ನು ಕಟ್ಟಿಕೆಡೆದ; ಉಳಿದ ಅಸುರರು ಅಂಗದನನ್ನು ಮುತ್ತಿದ ಕೂಡಲೆ ಅವನು ಬಾಲ ಬಿಡಿಸಿ ಅವರೊಡನೆ ಯುದ್ಧಕ್ಕೆ ಹೋದ. ಆಗ ಇಂದ್ರಜಿತ್ತೆದ್ದ. ಅಂಗದನನ್ನು ಸಾಯಿಸಿದ. ಹನುಮಂತ ಆ ಕ್ಷಣ ಇಂದ್ರಜಿತ್ತನ್ನು ಬಿಡದ ಮುತ್ತು ಅಲ್ಲೇ ಅಡಗಿದ! ರಾಘವ, ಲಕ್ಷ್ಮಣರೂ ಸಂಮೋಹನಾಸ್ತ್ರದಿಂದ ಮೂರ್ಛೆಹೋಗಿದ್ದರು. ಗೆಲುವಿನ ಹೆಮ್ಮೆಯಿಂದ ಅಷ್ಟು

ಹೊತ್ತಿಗೆ ಮಣಿರಥವೇರಿ ಇಂದ್ರಜಿತ್ತು ಅರಮನೆಗೆ ಹಿಂದಿರುಗಿದ. ಸೀತೆ ಈ ಸುದ್ದಿಯನ್ನು ಕೇಳಿ ಮಲ ಮಲ ಮರುಗಿದಳು. ವಿಭೀಷಣನು ರಾಮನನ್ನು ಹುಡುಕುತ್ತ ಬಂದ ಜಾಂಬವನನ್ನು ಕಂಡನು. ಮಾರುತಿಯಿಂದ ರಾಮಪಾಳೆಯದ ಮೂರ್ಛಿತ ವೀರರೆಲ್ಲರೂ ಬದುಕಿ ಏಳುವರೆಂದು ಆಕಾಶವಾಣಿಯಾಯ್ತು. ಆಗ ಜಾಂಬವನು "ಸಂಜೀವ ಕರಣಿ" ಎಂಬ ಮೂಲಿಕೆಯನ್ನು ತರಲು ಆಂಜನೇಯನಿಗೆ ಹೇಳಿದನು. ಅವನದನ್ನು ೧೮೮ ಲಕ್ಷ ಯೋಜನದಾಚೆ ಹಾರಿ ಬಡಗಣ ಅದ್ರಿಯ ತೀರದಿಂದ ತಂದ. ಅಲ್ಲಿ ಅವನಿಗೆ ತೊಂದರೆ ಕೊಟ್ಟ ಜವದಂಡನನ್ನೂ ಅವನ ಮಾಯೆಯನ್ನೂ ಅಮರರ ವಾಣಿಯ ಬಲದಿಂದ ಸೋಲಿಸಿ ಕಾರ್ಯ ಸಿದ್ಧಿಯನ್ನು ಅವನ ಕರಸ್ಪರ್ಶದಿಂದ ಮುಕ್ತಶಾಪಳಾದ ಅಪ್ಸರೆಯ ಮೂಲಕ ಮಾಡಿಕೊಂಡ. ಮೂಲಿಕೆ ಇದ್ದ ಗಿರಿಯನ್ನೇ ಲಂಕೆಗೆ ಹನುಮ ಹೊತ್ತು ತಂದ!

ಬಂದನೇ ಬಲ್ಲಾಳು ಭಲರೇ ಬಂದನೇ ಬಲ್ಲಾಳು ಮಝುರೇ ಬಂದನೇ ಜಗದಾಳು ಪೂತುರೆ ಭಲರೆ ಭಾಪೆನುತ; ಬಂದು ಬಿಗಿದಪ್ಪಿದನು ಜಾಂಬವನೊಂದು ಗೂಡಿದನೌಷಧಂಗಳ ತಂದು ಮಂತ್ರದಲೆರೆಯಲೆದ್ದರು ರಾಮಲಕ್ಷ್ಮಣರು! ಮದ್ದುಬೇರೆಲ್ಲರಿಗೆ ಮಾಡುವೊಡಿದ್ದ ದಿನಗಳು ಸಾಲದೆನುತವೆ ಮದ್ದ ನಣುವನು (ಹನುಮನು) ಬಾಲಕೂಡಿಯೆ ಬೀಸಲಾಕ್ಷಣಕೆ; ನಿದ್ದೆ ಗೈದವರೆದ್ದ ಪರಿಯಲಿ ಬಿದ್ದ ಕಪಿಭಟರೆಲ್ಲರೆದ್ದುದು; ಹೊದ್ದಿದರ ಹೊರೆವಾತ (ರಾಮ) ಹನುಮನನಪ್ಪಿ ಹರಸಿದನು ಮತ್ತು ಕಡಗ ಕೊಟ್ಟು ಗೌರವಿಸಿದನು!

–೨೫–

ಇತರ ದೈತ್ಯವೀರರ ಕಾಳಗ

ಮತ್ತೆ ಕಪಿಸೈನ್ಯವು ಧಾಳಿ ಮಾಡಲಾರಂಭಿಸಿತು. ಇಂದ್ರಜಿತ್ತು ರಾಮನು ವಿಷ್ಣುವಿನ ಅವತಾರವೆಂದು ತಂದೆಗೆ ತನ್ನ ಕಾಣ್ಕೆಯನ್ನು ಆಧರಿಸಿ ಹೇಳಿದನು. ಆದರೆ ರಾವಣ ಅದಾವುದನ್ನೂ ಲೆಕ್ಕಿಸದೆ ಮಗನಿಗೆ ಯುದ್ಧಕ್ಕೆ ಹೋಗೆಂದು ಆಜ್ಞಾಪಿಸಿದ. ಮತ್ತೆ ಇಂದ್ರಜಿತ್ತು ಕುಂಭಿನಿಯನ್ನು ಆರಾಧಿಸಿದ; ಆದರವಳು ಪ್ರತ್ಯಕ್ಷಳಾಗಲೇ ಇಲ್ಲ! ತನ್ನ ತಲೆಯನ್ನೇ ಕಡಿದು ಆಹುತಿಗೊಡಲು ಅವನು ಕತ್ತಿಯೆತ್ತಿದಾಗ ದೇವಿಯು ಪ್ರತ್ಯಕ್ಷಳಾಗಿ ಮಾಯಾಸೀತೆಯನ್ನು ನಿರ್ಮಿಸಿಕೊಟ್ಟು ಅಂತರ್ಧಾನ ಹೊಂದಿದಳು! ಇಂದ್ರಜಿತ್ತು ಭಾರಿ ಪರಾಕ್ರಮವನ್ನು ಪ್ರದರ್ಶಿಸಿದ. ಆಗ ಹನುಮ ರುದ್ರಾವತಾರಿಯಾಗಿ ಬಂದ. ಅದಕ್ಕಂಜಿ ಇಂದ್ರಜಿತ್ತು ಮಾಯಾಸೀತೆಯನ್ನು ತಂದು ಕಡಿದ. ರಾಮಾದಿಗಳು ನಿಜವಾದ ಸೀತೆಯೇ ಸತ್ತಳೆಂದು ಮರುಗುತ್ತಿದ್ದಾಗ, ವಿಭೀಷಣ ಬಂದು ಅವಳು ಮಾಯಾಸೀತೆ ಎಂದು ತಿಳಿಸಿ ಸಮಾಧಾನಗೊಳಿಸಿದನು. ರಾಮನು ಮುದ್ರಿಕೆಯನ್ನು ಮುಟ್ಟಿಸಿದ ಕೂಡಲೇ ಮಾಯಾಸೀತೆಯ ಹೆಣ ಮಾಯವಾಯ್ತು. ಹನುಮಂತ ಸ್ವತಃ ಹೋಗಿ ಅಶೋಕವನದಲ್ಲಿ ಸೀತೆ ಸುರಕ್ಷಿತೆಯಾಗಿರುವುದನ್ನು ಕಂಡು ಬಂದು ಹೇಳಿದ.

ಅನಂತರ, ಹಿಂದೆ ಹನುಮಂತ ಸುಟ್ಟು ಹಾಳುಮಾಡಿದ್ದ ಲಂಕಾಪಟ್ಟಣವನ್ನು ಮಯಾಸುರನು ಮತ್ತೆ ಮೊದಲಿನಂತೆಯೇ ಕಟ್ಟಿಕೊಟ್ಟಿದ್ದ. ಅದನ್ನಾಗ ನೀಲನು ಸೇನಾಬಲ ಸಮೇತನಾಗಿ ಕೊಳ್ಳಿಬೆಂಕಿಯಿಂದ ಸುಡಲಾರಂಭಿಸಿದ. ಕೋಟಿ ಯೆಪ್ಪತ್ತೇಳು ಸಾವಿರ ನೀಟಗೊಳ್ಳಿಯಲೊಮ್ಮೆ ದನುಜರ ಸೂಟಿಯಲಿ ಸುಡಲೆಂದು ಒಂದೇ ಲಗ್ಗೆವೊಮ್ಮನವು; ನೋಟಕರಿಗುತ್ಸವವು; ರುದ್ರ ಲಲಾಟಲೋಚನದಲ್ಲಿ ಕುರುಹಿನ ಬೇಟ ತಂದಂತಿರಲು ದೆಸೆ ದೆಸೆ ಕೊಳ್ಳಿ ಬೆಳಗಿದುವು! ಕೊಳ್ಳಿ ಬಾಲದಿ ಸುಟ್ಟ ಹನುಮನುವುಳ್ಳುದೆಲ್ಲವ ಹಿಂದೆಯಿದು ಮರಗೊಳ್ಳಿಯಾಯಿತು ಏನ ಹೇಳುವೆ ನೊಟ್ಟು ಸುಡುತಿಹುದು! ಈ ಕೊಳ್ಳಿಗಾಳೆಗಕ್ಕೆ ಕುಂಭ ಕರ್ಣನ ಮಗನಾದ ನಿಕುಂಭ ಪ್ರತಿಭಟಿಸ ಬಂದ, ವಿಭೀಷಣನ ಮಗ ಶಕ್ವರಿಯೂ ಮುಂದಾದ! ಎಡದಲಾನೋ ಬಲದಲಾನೋ

ಹಿಡಿಯೊ ಮುಖ್ಯರನೊರಸೊ ಮಿಕ್ಕರ ಕೆಡೆಯೊ ಕರಿಗಳನೊದೆಯೊ ಹಯಗಳ ಮುರಿಯೊತೇರುಗಳ; ಅಡಸಿ ತಿವಿ ತಿವಿ ಬದಿಯ ಮುಂದಲೆವಿಡಿದು ಯೆಳೆಯೆಳೆ ಹಿಂದೆ ಮೆಟ್ಟದಿರಡಿಯನೆಂದಾರಿತ್ತು (ಪರಾಕ್ರಮ ತೋರಿತ್ತು) ಮುತ್ತಿತು (ಮುತ್ತಿದರು) ವೀರಮರ್ಕಟರು! ದೈತ್ಯವೀರರೂ ಶಕ್ತಿಮೀರಿ ಹೋರಾಡಿದರು. ಆದರೆ ಮಂಗಪುಂಗವರು–ಮಣಿರಥವ ಮುರಿದಿಡುತ ರಣದಲಿ ಕುಣಿವ ಕುದುರೆಯ ಸದೆದು ಕಂಗಳ ಹಣುಗಿ ಕಾಲನು ಮೆಟ್ಟಿ ಸರ್ರನೆ ಸೀಳಿ ಬಿಸುಡುತ್ತ; ಒಣಮರದೊಳಪ್ಪಳಿಸಿ ದನುಜರ ಹಣೆಯ ಬರಹವ ತೊಡೆದು ರಣಶಾಕಿಣಿ ಯರರವಟ್ಟಿಗೆಯ ರಕ್ತದಿ ತಣಿದು ಹರಸುತಿರೆ! ೧೦ ಕೋಟಿ ರಾಕ್ಷಸರು ಸತ್ತರು. ಆದರೆ ದಧಿಮುಖ ರಕ್ತಮುಖನಾಗಿ ಹೊರಳಿದ; ಮತ್ತೆ ಮಾರಾಂತು ಹೋರಾಡಿ ಅವನು ನಿಕುಂಭನನ್ನು ಕೊಂದ. ಅಂಗದ ಶಕ್ವರಿಯನ್ನು ಯುದ್ಧ ಮಾಡಿ ತೀರಿಸಿದ. ಆಗ ರಾವಣನ ಆಜ್ಞೆಯಂತೆ ದೈತ್ಯ ಮಂತ್ರಿ ಮಾರೀಮುಖ ತನ್ನ ದಳಗಳೊಡನೆ ರಣರಂಗಕ್ಕಿಳಿದ!

–೨೬–

ಮಾರೀಮುಖನ ಮಥನ

ಬೀಸಿದರು ಕೈಗಳನು ಬಲವಾರಾಶಿ ಮೇರೆಯ ಮೀರಿದಂತಿರೆ ಆಸುರದಿ ಭಟರವುಕಿ ಹಿಡಿದರು ಚೂಣಿಗಾಳಗವ; ಘಾಸಿಯಾದುದು; ಧರಣಿ ಕುಸಿದುದು; ವಾಸುಕಿಯ ಕೊರಳೋಳಿ ನೆಗೆದುದು; ಕೇಸರದ ಕೆಂಧೂಳಿ ಕಪಿ ರಾಕ್ಷಸರ ಖುರಪುಟಕೆ!

ಮರನ ಮುರಿ ಮುರಿದಸುರ ಸೇನೆಯ ಮರುತನಂದನನೊಂದು ಕೋಟಿಯ ಕರಿಯ ಕರಿಯಿಂ ಸದೆದು ಕೊಂದನು ಮತ್ತೆ ಕೋಟಿಯನು; ಎರಡು ಚರಣದಲೊದೆದು ಕೊಂದನು ತುರಗ ಲಕ್ಷವ ಸುತ್ತಿ ಬಾಲದಿ ಧರಣಿಗೊಗೆದೊಗೆದಸುರಪಂಕ್ತಿಯ ಕೊಂದ ಹನುಮಂತ! ಇತ್ತ ಜಾಂಬವ ಸೀಳಿಬಿಸುಟನು ಹತ್ತು ಸಾವಿರ ತುರಗವನು ಕರಿ ಹತ್ತು ಸಾವಿರ ತೇರ ತಳಪಟಮಾಡಿ ರಣದೊಳಗೆ; ಮತ್ತೆ ಕಾಲಾಳಯುತವನು ಮುರಿದೊತ್ತಿ ಕೆಡಹಿದ; ಕಂಡು ರಕ್ಕಸನಿತ್ತಲತ್ತಲು ತಿರುಗು ಘಡ ಮುದುಗರಡಿ ತಿರುಗೆಂದ! ಆಗ ಮಾರೀಮುಖನನ್ನು ಜಾಂಬವ ಸೀಳಿ ಒಗೆದರೆ ಸೀಳುಗಳು ಮತ್ತೆ ಕೂಡಿಕೊಂಡವು! ಮಾರಿಮುಖನು ಗದೆಯಿಂದ ಹೊಯ್ದು ಜಾಂಬವನನ್ನು ಮೂರ್ಛೆಗೊಳಿಸಿದ. ಹನುಮಂತ ರೇಗಿ ಮೇಲ್ವಾಯ್ದು ಬಂದ. ಅವರಿಬ್ಬರಲ್ಲಿ ಮಲ್ಲಯುದ್ಧ ನಡೆಯಿತು. ಎರಗಿದನು ಗದೆಯಿಂದ ದಾನವನೊರಗಿದನು ಹನುಮಂತನಾತನ ಶಿರವನುಕ್ಕಿನ ಲಾಳವಿಂಡಿಗೆಯಿಂದ (ಅಗುಳಿ ಆಯುಧದಿಂದ) ಖಾತಿಯುಲಿ; ಎರಗುವವನು ಖಳನೊರಗುವನು ಖಳ ಎರಗುವನು ಕಪಿಯೊರಗುವನು–ಏನೊರೆವೆನಿಬ್ಬರ ಬಲುಹ ಶಿವ ಶಿವ ಕಾದಿದರು ಕಡುಗಿ! ಹನುಮಂತನನ್ನು ಬೀಳಿಸಿ ಮಾರೀಮುಖನು ರಾಮನಿಗೆದುರಾದ, ರಾಮನ ವಿಷ್ಣು ಸ್ವರೂಪವನ್ನು ಕಂಡ, ಅವನ ಸ್ತೋತ್ರವನ್ನು ಮಾಡಿದ ಮತ್ತು ಯುದ್ಧಕ್ಕೆ ಆಹ್ವಾನಿಸಿದ. ವಜ್ರಾವರ್ತಚಾಪದಲ್ಲಿ ಅಂಬನ್ನಿಟ್ಟು ಹೊಡೆದು ರಾಮನು ಮಾರೀಮುಖನ ತಲೆಯನ್ನು ಕಡಿದ. ಅವನ ಅನುಯಾಯಿಗಳು ಅದು ನೆಲಕ್ಕೆ ಬೀಳುವ ಮುನ್ನ ಮುಂಡದ ಮೇಲಿಟ್ಟರೆ ಅದು ಕೂಡಿಕೊಂಡಿತು! ಆಗ ವಿಭೀಷಣನು ಹರನ ವರದಿಂದ ಹಾಗಾಯ್ತೆಂದೂ ಪಾವಕಾಸ್ತ್ರ (ವಡವಾನಲಾಸ್ತ್ರ) ಬಿಟ್ಟರೆ ಅವನ ಕತೆ ಮುಗಿಯುವುದೆಂದೂ ಹೇಳಿದ. ರಾಮ ಹಾಗೇ ಮಾಡಿದ; ದೈತ್ಯ ಮಡಿದ, ಮುಕ್ತನಾದ.

–೨೭–

ನೀಲ–ಇಂದ್ರಜಿತ್ತುಗಳ ಕಾಳಗ

ಮರುದಿನ ನೀಲ–ಇಂದ್ರಜಿತ್ತುಗಳ ಕಾಳಗನಡೆಯಿತು. ಇಂದ್ರಜಿತ್ತು ಅನೇಕ ಕಪಿಗಳನ್ನು ಸಂಹರಿಸಿದಾಗ ನೀಲನು ಕದನ ತ್ರಿಣೇತ್ರನಾದ. ಮರನ ಮರಿದಿಟ್ಟಸುರ ಸೇನೆಯನೊರಸಿ ಕಾಲಲಿ ಬಾಲದಿಂದವೆ ಉರುಳನಿಕ್ಕುತ ಹೆಸರವೀರರ ಸದೆದು ವಹಿಲದಲಿ; ತಿರುಹಿದನು ಖಳ ಪಡೆಯಕೋಪದಿ ಉರಿದು ಕಿಡಿ ಕಿಡಿವೋಗಿ ನೀಲನು ಕೆರಳಿ ಕೊಂದನು ಬಾಯ್ಗೆ ಬಂದುದು ಬೆರಳು ಕೆಲ ಕೆಲರ! ಇಂದ್ರಜಿತ್ತು ಮಹಾಸ್ತ್ರಗಳಿಂದ ಭೀಕರವಾಗಿ ಎದುರಿಸಿದ; ನಳನ ಹೊಟ್ಟೆಯ ತಿವಿದ; ಶರಭನೊಡಲೊಳಗಂಬ ಬಿತ್ತಿದ, ಭರದಿ ಗವಯನ ಗಂಡುಗೆಡಿಸಿದ, ಬಗೆದ ನಡುಬೆನ್ನ; ಹುರುಳು ಗೆಟ್ಟನು ಗಂಧ ಮಾದನ; ಧರಣಿಗುರುಳಿದ ಮೈಂದ; ಕೇಸರಿ ಕರುಳು ಕಾರಿದ ಗವಯನಂಗದಗೇರು ಘನವಾಯ್ತು! ನೀಲನು ಇಂದ್ರಜಿತ್ತಿನ ಪರಾಕ್ರಮವನ್ನು ಮನಸಾರೆ ಹೊಗಳಿದ! ಕೂಡಲೇ ಮಾರಿಯಂತೆ ಇದ್ದಕ್ಕಿದ್ದ ಹಾಗೆ ಜಿಗಿದು ಬಂದು ಹಿಂದೆ ನಿಂತ ನೀಲನನ್ನು ಕಂಡು ಇಂದ್ರಜಿತ್ತು ಅವಾಕ್ಕಾದ! ಮಲ್ಲಯುದ್ಧ ಭೀಕರವಾಯ್ತು. ಹೊಡೆ ಮರಳಿ ಖಳನೇಳುವನ್ನಕ ತೊಡಚಿ ಕೈಕಾಲುಗಳ ಬಾಲದಲಿಡಿದು ಕಟ್ಟಿದ ಮತ್ತೆ ಕೊರಳಿಂದುರುಳನಿಕ್ಕಿದನು; ಬಿಡದೆ ಬಿಗಿದರೆ ಬಿಡಿಸಲಾರದೆ ಒಡಲಿನುಬ್ಬಸದಿಂದ ಕಂಗಳ ಬಿಡಲು ಹಲುಗಿರಿವುತ್ತ ನೀಲನು ಜಗವ ನಗಿಸಿದನು! ನೀಲನ ಯುದ್ಧ ಕೌಶಲವನ್ನು ಇಂದ್ರಜಿತ್ತು ಮನದುಂಬಿ ಹೊಗಳಿದ! ನಿರಾಯುಧನಾಗಿರುವುದರಿಂದ ಇಂದ್ರಜಿತ್ತನ್ನು ಕೊಲ್ಲಬೇಡವೆಂದು ವಿಭೀಷಣ ನೀಲನಿಗೆ ಹೇಳಿದ. ಆಗ ನೀಲನು ಅವನ ಕಿರೀಟವನ್ನು ಕಸಿದುಕೊಂಡು ಹಿಂದಿರುಗಲು ಬಿಟ್ಟ!

–೨೮–

ಮಕರಾಕ್ಷನ ಸಂಹಾರ

ಮಾರನೆಯ ದಿನ ರಾವಣನ ಸೋದರ ಅಳಿಯನಾದ ಮಕರಾಕ್ಷ ಕಾದಲು ಬಂದ. ಅವನು ತ್ರಿಶಿರನ ಮಗ, ಮಹಾಪರಾಕ್ರಮಿ, ಕಪಿಗಳು ಎಷ್ಟು ಶಕ್ತಿಮೀರಿ ಹೋರಾಡಿದರೂ ಅವನನ್ನು ಗೆಲ್ಲಲಾರದಾದರು. ಆಗ ರಾಮನೇ ಕೋದಂಡ ಧಾರಿಯಾಗಿ ಎದುರಾದ. ಆದರೂ ಹೆದರದೆ ಅದ್ಭುತವಾಗಿ ಮಕರಾಕ್ಷ ಹೋರಾಡಿದ; ಉಭಯ ಸೇನೆಗಳೂ ಅವನ ಪರಾಕ್ರಮವನ್ನು ಮೆಚ್ಚಿದವು. ರಾಮನು ಅವನ ಬಾಣ ತನ್ನ ಹೊಟ್ಟೆಗೆ ಚುಚ್ಚಿದ್ದನ್ನು ನೋಡಿ ಕಾಲಾಗ್ನಿರುದ್ರನಾದನು; ದಿವ್ಯಾಸ್ತ್ರವನ್ನು ಬಿಟ್ಟು ಅವನ ತಲೆಯನ್ನು ಕಡಿದೊಗೆದನು! ಅವನ ಸೈನಿಕರನ್ನು ಸಂಹರಿಸಿದನು. ಸಹಾಯಕ್ಕೆ ಬಂದಿದ್ದ ಇಂದ್ರಜಿತ್ತು ಓಡಿ ಹೋದನು, ಸೂರ್ಯ ಮುಳುಗಿದನು.

–೨೯–

ಲಕ್ಷ್ಮಣ ವಿಜಯ

ಇಂದ್ರಜಿತ್ತು ಮರುದಿನ ಸೈನ್ಯ ಸಾಗರದೊಡನೆ ಕದನಕ್ಕೆ ಬಂದ. ಹರಿಯ ಗೆಲಿದನ ತೋಟಿ ಬೇಡಾ, ಸಿರಿಯ ಸೊಬಗನ ತೋಟಿ ಬೇಡಾ, ಸುರರ ಸೆರೆವಿಂಡುಗಳ ನಾಳ್ದನ ತೋಟಿ ಬೇಡೆಲವೋ! ಹರಿ ಪಡೆಗೆ ಉರಿ ಮಾರಿಯೆನಿಸುವ ಬಿರುದ ರಾಯನ ತೋಟಿ ಬೇಡೆಂದಿರದೆ ಹೊಂಗಹಳೆಗಳು ಚೀರಲು ಬಂದನಿಂದ್ರಾರಿ! ೧೨ ವರ್ಷ ನಿದ್ರೆ–ಊಟಗಳನ್ನು ಬಿಟ್ಟವನು ಮಾತ್ರ ಇಂದ್ರಜಿತ್ತನ್ನು ಸೋಲಿಸಬಲ್ಲನೆಂದು ವಿಭೀಷಣ ಹೇಳಿದ. ಲಕ್ಷ್ಮಣನೊಬ್ಬ ಅಂಥ ವ್ರತವನ್ನು ಪಾಲಿಸಿದವನಾಗಿದ್ದನು. ಆದ್ದರಿಂದ ಅವನು ಇಂದ್ರಜಿತ್ತಿಗೆ ಎದುರಾಗಿ ಯುದ್ಧಕ್ಕೆ ಅನುವಾದನು. ಅಷ್ಟರಲ್ಲಿ ವಿಭೀಷಣ ಬಂದು ಅವನ ಖಡ್ಗವನ್ನು ಕಡಿದ. ಇಂದ್ರಜಿತ್ತು ಓಡಹೊರಟಾಗ ಲಕ್ಷ್ಮಣ ಬಾಣಗಳಿಂದ ತಡೆದ. ಭುಗಿಲು ಭುಗಿ ಭುಗಿ ಧಗಿಲು ಧಗಿಲೆಂದೊಗೆದು ದಳ್ಳುರಿಯುಗುಳಲಂಬರ ಕುಗಿದು ಜಿಗಿದುದು, ಮತ್ತೆ ಹರಿದುದು ಲೋಕ ಬೆದರುತಿರೆ; ಮೊಗೆದು ಮುಕ್ಕಿತು ಕೊರಳ ಕಡಿಯಲು ನೆಗೆದು ಹಾರಿತು ರುಂಡ, ಶೋಣಿತವೊಗುತ ಕುಣಿದುದು ಮುಂಡ, ಮುಕುತಿಯ ಕೊಂಡ ನಸುರೇಂದ್ರ! ಇಂದ್ರಜಿತ್ತನ್ನು ಸಂಹರಿಸಿದ ಲಕ್ಷ್ಮಣನನ್ನು ಕಂಡು ರಾಮನು ಪರಮ ಸಂತೋಷ ಹೊಂದಿದನು. ಮಗನ ಕೊಲೆಯಿಂದ ಸಂತಪ್ತನಾದ ರಾವಣನು ಅಶೋಕವನಕ್ಕೆ ಹೋಗಿ ಸೀತೆಯನ್ನು ಕಡಿಯಲು ಕತ್ತಿಯನ್ನೆತ್ತಿದನು. ಆಗ ಅವನ ಸಚಿವಪತಿಯಾದ ವಿರೂಪಾಕ್ಷನು ತಡೆದನು. ರಾವಣ ಅಲ್ಲಿಂದ ಹಿಂದಕ್ಕೆ ತಿರುಗಿ ರಣರಂಗಕ್ಕೆ ಧಾವಿಸಿದ. ಹೊಡೆವ ಹರೆನಿಸ್ಸಾಳ ಭೇರಿಯ ಗಡಣದಬ್ಬರ ಜಗವ ತುಂಬಲು, ಜಡಿದು ಕಪಿಗಳು ಕಲ್ಲು ಗುಂಡುಗಳಿಂದ ಕವಿದಿಡಲು; ಬಿಡುವರೇಳುವ ಮುರಿವ ಸಲೆ ಬೊಬ್ಬಿಡುವ ಕೂಗುವ ಗಿರಿಕು ಗುಟ್ಟುವ ಹೊಡೆವ ರಭಸದಲದ್ದಿ ಹೋಯಿತು ವಾದ್ಯ ನಿರ್ಘೋಷ!

–೩೦–

ರಾವಣನ ವೀರಾವೇಶ

ಚತುರಂಗ ಬಲ ಸಮೇತನಾಗಿ ರಾವಣ ಭೀಕರವಾಗಿ ಸಮರಕ್ಕಿಳಿಯಲು ಸುಗ್ರೀವ ಅವನನ್ನು ಎದುರಿಸಿದ. ಕಿತ್ತು ಹೆಮ್ಮರದಿಂದ ಕೆಡೆದನು ಹತ್ತು ಸಾವಿರ ಮತ್ತ ದಂತಿಯ ಮೊತ್ತ ಗಟ್ಟಿದ ರಥವ ಮುರಿದನು ಮೂರು ಸಾವಿರವ; ಪತ್ತಿಗಳನೊಂಬತ್ತು ಲಕ್ಷವ ಕುತ್ತಿ ಹೆಸರಿರದಂತೆ ಮಾಡಿದನುತ್ತಮದ ಹಯವೆರಡು ಲಕ್ಷವ ಕೊಂದ ಸುಗ್ರೀವ! ರಾವಣ ಸೇನಾಪತಿ ಮಹೀಧರ ಸತ್ತುಹೋದ! ಅಷ್ಟರಲ್ಲಿ ಸುಗ್ರೀವನ ಬೆಂಬಲಕ್ಕೆ ಅಂಗದ ಬಂದ. ಮಲ್ಲಯುದ್ಧ, ಮುಷ್ಟಿಯುದ್ಧಗಳಲ್ಲಿ ಅವನು ರಾವಣನನ್ನು ಬೀಳಿಸಿದನು. ಆಗ ಅವನ ಬಲ ಅಸಂಖ್ಯಾತವಾಗಿ ರಾಮ–ಲಕ್ಷ್ಮಣರನ್ನು ಮುತ್ತಿತು! ಲಕ್ಷ್ಮಣ ಅಂಬುಗಳ ಮಳೆಗರೆದ. ವಿಭೀಷಣನು ಎದ್ದು ಬಂದ, ರಾವಣನೊಡನೆ ಕತ್ತಿ–ಗುರಾಣಿಗಳಿಂದ ಯುದ್ಧ ಮಾಡಿದ. ರಾವಣನು ಶರವರ್ಷ ಮಾಡಲಾರಂಭಿಸಿದ. ರಾಮ ಕೂಡಲೇ ಪ್ರತಿಶರಗಳನ್ನು ಬಿಟ್ಟ. ರಾವಣ ಹಿಡಿದಿದ್ದ ಹತ್ತು ಧನುಸ್ಸುಗಳನ್ನೂ ಕಡಿದ; ಲಕ್ಷ್ಮಣ ರಾವಣನ ಧ್ವಜವನ್ನು ಕಡಿದು ತುಂಡು ಮಾಡಿದ, ಮನೋವೇಗದಿಂದ ಕುದುರೆ–ಸಾರಥಿಗಳನ್ನು ಕಡಿದು ಕೆಡಹಿದ! ಆಗ ರಾವಣನು ಮಿತಿಮೀರಿದ ಕೋಪದಿಂದ ಚಂಡಿಯಿಂದ ತಾನು ಪಡೆದಿದ್ದ ಶಕ್ತ್ಯಾಯುಧವನ್ನು ಬಿಟ್ಟನು; ಸುಗ್ರೀವಾದಿವಾನರರೆಲ್ಲರೂ ತಲ್ಲಣಿಸಿದರು. ಲಕ್ಷ್ಮಣನು ಅದಕ್ಕೆದುರಾಗಿ ಬಿದ್ದ. ರಾಮ ಕೂಡಲೇ ಸಂಮೋಹನಾಸ್ತ್ರವನ್ನು ಬಿಟ್ಟ. ರಾವಣನೂ ಅವನ ಸೈನಿಕರೂ ತೂಕಡಿಸುತ್ತ ಮನೆಕಡೆಗೆ ಹಿಂದಿರುಗಿದರು. ಅಷ್ಟರಲ್ಲಿ ಮಾರುತಿ ಮದ್ದು ತಂದು ಹಚ್ಚಿದ ಕೂಡಲೇ ಲಕ್ಷ್ಮಣ ಎದ್ದ!

–೩೧–

ರಾವಣನ ಮಾರಣ ಹೋಮ

ಮಂಡೋದರಿ ಚಿಂತಾಕ್ರಾಂತನಾಗಿದ್ದ ರಾವಣನಿಗೆ ಬುದ್ಧಿ ಹೇಳಿದಳು. ಆದರೆ ರಾವಣ ಕೇಳಲಿಲ್ಲ. ಇರುಳಲ್ಲಿ ಅವಳೊಡನೆ ಮಹಾ ಹೋಮವನ್ನು ಮಾಡಲಾರಂಭಿಸಿದ. ಆ ಯಜ್ಞ ಕುಂಡವು ೯ x ೯ಚದುರ ಯೋಜನಗಳಷ್ಟು ವಿಸ್ತಾರವಾಗಿತ್ತು. ಭೂತ, ಪ್ರೇತ, ಜಟ್ಟುಗ, ಮಾಣಿಭದ್ರ ಮುಂತಾದ ಕೀಳು ದೆವ್ವಗಳು ಬಲಿಗಾಗಿ ಕಾದಿದ್ದವು. ರಾವಣ ತನ್ನ ೯ ತಲೆಗಳನ್ನೂ ೧೮ ತೋಳುಗಳನ್ನೂ ಕಡಿದು ದೇವಿಗೆ ಆಹುತಿ ಹಾಕಿದ. ಅದರಿಂದ ಕೋಟಿ ರಾವಣರು ಹುಟ್ಟುವರೆಂದು ಕೂಡಲೇ ವಿಭೀಷಣನು ರಾಮನಿಗೆ ತಿಳಿಸಿದನು. ತತ್‌ಕ್ಷಣ ಹನುಮಂತನೂ ಅಂಗದನೂ ಕುಂಭಿನೀವನವನ್ನು ಹೊಕ್ಕು ಅಸುರರು ಶರಭ, ಹರಿ, ಶಾರ್ದೂಲ, ಕುರಿ, ಕೋಣಗಳನ್ನು ಕಡಿದು ಹೋಮ ಮಾಡುತ್ತಿರುವುದನ್ನು ಕಂಡು ಗಹಗಹಿಸಿ ನಕ್ಕರು! ಮುರಿದನುಕ್ಕಿನ ಮುಂದಣಗುಸೆಯ ತರಿದ ವಜ್ರದ ದಾರವಟ್ಟವ ತೆರೆಯಲವಸರವಾಗಿ ಮಾರುತಿ ಕಿತ್ತು ಬೀಸಾಟ! ರಾಯನಂಗದ ಬಿಲದ ಬಾಗಿಲ ಕಾಯೆ ನಿಂದನು ಜಪ್ಪಿ ದನುಜರ ವಾಯುಸುತ ಹೊಡೆ ಹೊಡೆದು ಕೊಂಡದಲೊಟ್ಟಿ ಸುಡುತಿರಲು; ಹಾಯೆನುತ ಹಾರುವರು (ರಾಕ್ಷಸ ಬ್ರಾಹ್ಮಣರು) ನೊಂದ ವೃಥಾಯಗೋಳಿಡೆ ಬಗೆಯ ರಕ್ಕಸ ರಾಯ ಕಂಗಳ ಮುಚ್ಚಿ ಬೇಳಿದನೇಕ ಚಿತ್ತದಲಿ! ಆಗ ರಾವಣನ ಏಕಾಗ್ರತೆಯನ್ನು ಕೆಡಿಸಲು ಅಂಗದನು ಮಂಡೋದರೀ ವಸ್ತ್ರಾಪಹಾರವನ್ನು ಮಾಡಿದ. ಕೂಡಲೇ ರಾವಣನು ಮಂಡೋದರಿಯ ಆರ್ತನಾದದಿಂದ ಕೆರಳಿ ಕಂದೆರೆದು ಶಕ್ತಿಯಿಂದ ಅಂಗದನನ್ನು ಸೀಳಿದ; ಹನುಮಂತನು ರಾವಣನ ಹೋಮವನ್ನು ಕೆಡಿಸಿ ತುಂಡಾದ ಅಂಗದನನ್ನು ಎತ್ತಿ ಒಯ್ದು ರಾಮನ ಮುಂದಿರಿಸಿದ. ರಾವಣ ನಾಚಿ ಮನೆಗೆ ಹೋದ. ರಾಮನ ಅಮೃತಹಸ್ತ ಸ್ಪರ್ಶದಿಂದ ಅಂಗದ ಜೀವಿಸಿ ಎದ್ದ! ಅಂಗದನ ಮೇಲಿನ ಪ್ರೀತಿಯಿಂದ ಅವನ ಮರಣಕ್ಕೆ ಹನುಮ ಕಾರಣನಾದನೆಂದು ರಾಮ ಹೇಳಿದಾಕ್ಷಣ ಹನುಮ ಬಹಳ ಮರುಗಿದ. ಕೂಡಲೇ ರಾಮ ಅವನನ್ನು ಸಂತೈಸಿದ. ಬೆಳಗಾಯಿತು!

–೩೨–

ಹನುಮಂತ ಮಾಡಿದ ಐರಾವಣ ಸಂಹಾರ

ಈ ನಡುವೆ ಮತ್ತೊಂದು ಕಂಟಕ ರಾಮ–ಲಕ್ಷ್ಮಣರಿಗೊದಗಿತು. ಪಾತಾಳಲಂಕೆಯಲ್ಲಿದ್ದ ಐರಾವಣನನ್ನು ರಾವಣ ನೆನೆದ; ಐರಾವಣ ಕೂಡಲೇ ರಾವಣನ ಆಸ್ಥಾನಕ್ಕೆ ಬಂದಿಳಿದ. ರಾವಣ ತನ್ನ ದುಃಖವನ್ನು ತೋಡಿಕೊಂಡ. ಆಗಿಂದಾಗ ಐರಾವಣನು ವಿಭೀಷಣನ ರೂಪವನ್ನು ಧರಿಸಿ ಹನುಮಂತನನ್ನು ರಾಮನೆಡೆಗೆ ಹೋಗ ಹೇಳಿ, ಕಪಿ ಸೈನ್ಯವನ್ನು ಸಂಮೋಹನಾಸ್ತ್ರದಿಂದ ಮಲಗಿಸಿದ್ದಲ್ಲದೆ, ನಿದ್ದೆಯಲ್ಲಿದ್ದ ರಾಮಲಕ್ಷ್ಮಣರನ್ನು ಕ್ಷಣಾರ್ಧದಲ್ಲಿ ಎತ್ತಿ ಹೊತ್ತು ಪಾತಾಳ ಲಂಕೆಯಲ್ಲಿದ್ದ ಕಂಕಣ ದೇವಿಯ ಗುಡಿಯಲ್ಲಿ ಬಲಿಕೊಡಲೆಂದು ತಂದಿಟ್ಟ. ಸೋದರಳಿಯ ನೀಲಮೇಘನು ರಾಜನಾಗುವನೆಂಬ ಭವಿಷ್ಯವಾಣಿಯನ್ನು ಕೇಳಿದ್ದ ಅವನು ಆತನನ್ನೂ ಅವರೊಟ್ಟಿಗೆ ಬಲಿಕೊಡಲು ತೆಗೆದುಕೊಂಡು ಬಂದ.

ಅಷ್ಟರಲ್ಲಿ ರಾಮಪಾಳೆಯದಲ್ಲಿ ವಿಭೀಷಣನು ಎಚ್ಚತ್ತ; ರಾಮಲಕ್ಷ್ಮಣರಿಲ್ಲವಾದುದನ್ನು ಸುಗ್ರೀವ–ಹನುಮನಿಗೆ ತಿಳಿಸಿದ. ಹನುಮಂತ ವಿಭೀಷಣ ಮೋಸಮಾಡಿದನೆಂದು ರೇಗಿದ. ವಿಭೀಷಣನಿಗಾಗ ತನ್ನ ರೂಪತಾಳಬಲ್ಲವನು ಐರಾವಣನೊಬ್ಬನೇ ಎಂಬುದು ನೆನಪಾಗಿ ರಾಮನಾಣೆ ಹಾಕಿ ತಾನು ಮೋಸಮಾಡಿದ್ದಲ್ಲ–ಅದು ಐರಾವಣನ ಮೋಸ ಎಂದು ತಿಳಿಸಿದಾಗ, ಹನುಮಾದಿಗಳು ಅವನನ್ನು ಸಂತವಿಟ್ಟು ಐರಾವಣನ ನೆಲೆಯನ್ನು ತಿಳಿಸಬೇಕೆಂದರು. ಲಂಕೆಯ ಒಳಕೋಟೆಯ ಕೆರೆಯೊಂದರಲ್ಲಿರುವ ಬಂಗಾರದ ತಾವರೆಯ ನಾಳದಲ್ಲಿ ಹೊಕ್ಕು ಕೆಳಗಿಳಿದರೆ ಅವನ ಠಾವಾದ ಪಾತಾಳ ಲಂಕೆಯನ್ನು ಮುಟ್ಟಬಹುದು ಎಂದು ವಿಭೀಷಣ ಹೇಳಿದ ಕೂಡಲೇ ಹನುಮಂತ ಕೆರೆಗಿಳಿದ. ಆ ಕ್ಷಣ ಅಲ್ಲಿದ್ದ ಮತ್ಸ್ಯ ಹನುಮ ಅವನನ್ನು ನುಂಗಿಬಿಟ್ಟ! ಯಾರು ನೀನೆಂದು ಹೊಟ್ಟೆಯೊಳಗಿಂದಲೇ ಹನುಮಂತ ಕೇಳಿದಾಗ ತಾನು ಹನುಮಂತನ ಮಗನೆಂದು ಮತ್ಸ್ಯ ಹನುಮ ಉತ್ತರ ಕೊಟ್ಟ! ತಾನೇ ಹನುಮಂತನೆಂದೂ ತನಗೆ ಹೆಂಡತಿಯೇ ಇಲ್ಲವೆಂದೂ ಅಪ್ಪ ಹೇಳಿದಾಗ, ಮಗನು–ಹನುಮಂತ ತನ್ನ ತಾಯ ವ್ರತಪಾಲನೆಗಾಗಿ ಸೂರ್ಯ ಮಂಡಲಕ್ಕೆ ಹಾರಿದಾಗ ಅವನ ಮೊಣಕಾಲಿಂದ ಕೆಳಗೆಬಿದ್ದ ಬೆವರನ್ನು

ತನ್ನ ತಾಯಾದ ತಿಮಿ ನುಂಗಿ ಗರ್ಭವತಿಯಾಗಿ ತನ್ನನ್ನು ಹಡೆದಳು ಎಂದ. ಮತ್ಸ್ಯ ಹನುಮನ ಮುಖ ಮೀನಿನದು. ಮೈ ಮಂಗನದು! ಅವನ ವೃತ್ತಾಂತವನ್ನು ಕೇಳಿದ ಹನುಮಂತನು ತಾನೇ ಹನುಮಂತ ಎಂದು ಮತ್ತೆ ನಂಬಿಸಿ ಹೇಳಿದ. ಆ ಕೂಡಲೇ ಮತ್ಸ್ಯ ಹನುಮನು ಅವನನ್ನು ಹೊಟ್ಟೆಯಿಂದ ಹೊರಗೆ ಉಗುಳಿ ಪಾದಗಳಿಗೆರಗಿದ! ಅವನಿಂದ ದಾರಿಯನ್ನು ಕೇಳಿಕೊಂಡು ಪಾತಾಳ ಲಂಕೆಗೆ ಹೋಗಿ ಐರಾವಣನ ತಂಗಿ ದುರುದುಂಬೆಯನ್ನು ಕಂಡ. ಅವಳು ತನ್ನ ಮಗ ನೀಲಮೇಘನನ್ನು ರಾಜಕುಮಾರರಿಬ್ಬರೊಡನೆ ತನ್ನಣ್ಣ ಬಲಿಕೊಡಲಿರುವನೆಂದು ಚಿಂತಾಕ್ರಾಂತಳಾಗಿದ್ದೇನೆ ಎಂದಳು. ಅವನನ್ನು ಮುಗಿಸಿ ಅವಳ ಮಗನಿಗೆ ಪಟ್ಟಗಟ್ಟುವೆನೆಂದು ಹನುಮ ಹೇಳಿದಾಗ ಅವಳು ತನ್ನ ಕೊಡದಲ್ಲಿ ಅಡಗಿಕೊ–ತಾನು ಪಾತಾಳ ಲಂಕೆಯ ಕೋಟೆಯೊಳಗೆ ಒಯ್ದು ಬಿಡುವೆನೆಂದಳು.




ಹೆಂಗಸರ ಹೊಟ್ಟೆಯಲ್ಲಡಗಿ ವೈರಿಗಳು ಬಂದಾರೆಂದು ಶಂಕಿಸಿ ಐರಾವಣನ ಬಂಟರು ಅವರನ್ನು ತೂಕಮಾಡಿ ಕೋಟೆಯ ಹೊರಗೆ ಹೋಗುವಾಗ ಇದ್ದಷ್ಟೇ ತೂಕ ಅವರಲ್ಲಿದೆಯೋ ಅಥವಾ ಒಳ ಹೋಗುವಾಗ ಅವರ ತೂಕ ಹೆಚ್ಚಾಗಿದೆಯೋ ಎಂದು ಪರೀಕ್ಷಿಸಿ, ಇದ್ದಷ್ಟೇ ತೂಕವಿದ್ದರೆ ಮಾತ್ರ ಒಳಗೆ ಬಿಡುತ್ತಿದ್ದರು! ದುರುದುಂಬೆಯ ನೀರಿನ ಕೊಡದಲ್ಲಿದ್ದ ಹನುಮಂತನು ಅವಳನ್ನು ತೂಕಮಾಡುವಾಗ ಕೊಡವೊಡೆವಂತೆ ಭೂತಾಕಾರ ತಾಳಿ ಬೆಳೆದು ಅಲ್ಲಿಂದ ಕೋಟಿದನುಜರನ್ನು ಕೊಂದ! ಅನಂತರ ಐರಾವಣನ ಹತ್ತಿರ ಹನುಮಂತನು ಕುಸ್ತಿಯಾಡಿದನು. ಅಪ್ಪನ ನೆರವಿಗೆಂದು ಮಗ ಮತ್ಸ್ಯ ಹನುಮ ಬಂದ. ಅವನ ಮೇಲೆ ಐರಾವಣನು ಎರಗಿದಾಗ, ಹನುಮಂತ ಐರಾವಣನ ಕೈಕಾಲುಗಳನ್ನು ಮುರಿದೊಗೆದ! ದುರುದುಂಬೆಯ ಮಗ ನೀಲಮೇಘನಿಗೆ ಪಟ್ಟಗಟ್ಟಿ, ಆಗಿಂದಾಗ ರಾಮಲಕ್ಷ್ಮಣರನ್ನು ಹೆಗಲೇರಿಸಿಕೊಂಡು ಲಂಕೆಗೆ ತಂದು ಬಿಟ್ಟ! ಎಚ್ಚೆತ್ತ ರಾಮನು ಸಂತೋಷದಿಂದ ಹನುಮಂತನ ಸಾಹಸಕ್ಕೆ ಮೆಚ್ಚಿ ವರವನ್ನಿತ್ತ. ಹನುಮನು ರುದ್ರನ ಅಥವಾ ಬತ್ತಲೇಶ್ವರನ ಅವತಾರವೆಂಬುದನ್ನು ಕವಿ ಈ ಸಂದರ್ಭದಲ್ಲಿ (೪೦ನೆಯ ಸಂಧಿಯ ಕೊನೆಯ ಅರ್ಥಾತ್ ೩೬ನೆಯ ಪದ್ಯದಲ್ಲಿ) ಹೇಳಿದ್ದಾನೆ. ಅಂದರೆ ಕವಿಯು ಬತ್ತಲೇಶ್ವರ, ಮಾರುತಿ ಅಥವಾ ರಾಮಭಕ್ತ–ಎಂಬುದು ಸೂಚಿತವಾಗಿದೆ; ಮಂಗ ಕವಿಯು ಮಹಾಕವಿಯಾದದ್ದು ರಾಮಭಕ್ತಿಯಿಂದ! ಮಹಾಕವಿ ರಾಮ (ದೈವ) ಭಕ್ತಿರಹಿತನಾದರೆ ಮಂಗನಾಗಿ ಕೀಳು ಕೃತಿಯನ್ನು ರಚಿಸಿ ಅಪಕೀರ್ತಿಗೆ ತುತ್ತಾಗುತ್ತಾನೆ!

–೩೩–

ರಾಮ ರಾವಣರ ಯುದ್ಧ

ಮರುದಿನ ಬೆಳಗಾದ ಕೂಡಲೇ ರಾಮ ರಾವಣರ ಯುದ್ಧ ಶುರುವಾಯ್ತು. ದೇವ ದೇವಘರಟ್ಟ ಜಯ ಜಯ, ದೇವ ಪಂಚಾನನ ದಶಾನನದೇವ ಕದನದ ಕಾಲ ಭೈರವ, ಶಕ್ರ ಮರ್ದನನೆ, ದೇವ ವಾನರ ಬಲ ಭಯಂಕರ, ದೇವ ಛಲದಂಕರ ಶಿರೋರುಹ, ರಾವು ರಾವಣ ಎಂಬ ಭಟ್ಟರ ಬೊಬ್ಬೆಯಬ್ಬರಿಸೆ! ಉಟ್ಟವೊಂಬಟ್ಟೆಯನು, ಭಾಳದಲಿಟ್ಟ ಕಸ್ತುರಿ ತಿಲಕ, ಕಿವಿಗಳಲಿಟ್ಟ ಒಪ್ಪುವ ಮಕರಕುಂಡಲ, ಕಾಂಚಿದಾಮವನು ತೊಟ್ಟು, ಕಪಿಪಡೆಗಭಯ ಹಸ್ತವನಿಟ್ಟು ವಾಮಾಂಘ್ರಿಯಲಿ ಪೆಂಡೆಯವಿಟ್ಟು ಸೊಬಗಿನ ದೇವ ರಣಕನುವಾಗಿ ನಡೆತಂದ! ನಳ, ನೀಲ, ಸುಗ್ರೀವ, ಗವಾಕ್ಷ, ಅಂಗದ, ಗಂಧಮಾನರು ೨೯ ಕೋಟಿ ದೈತ್ಯರನ್ನು ಕೊಂದರು. ಅದರಿಂದ ಕಿಡಿಕಿಡಿಯಾದ ರಾವಣನು ಗಂಧರ್ವಾಸ್ತ್ರ, ವನ್ನು ಬಿಟ್ಟು ಅಸಂಖ್ಯಾತ ಮಾಯಾ ರಾಮ ಮಾಯಾ ಲಕ್ಷ್ಮಣರನ್ನು ನಿರ್ಮಿಸಿದನು. ಅದರಿಂದ ರಾಮಬಲದ ಕೆಲ ಸೈನಿಕರು ನಿಜವಾದ ರಾಮ–ಲಕ್ಷ್ಮಣರು ದೈತ್ಯರ ಕೈಗೆ ಸಿಕ್ಕಿದರೆಂದು ದುಃಖಿಸಿದರೆ, ಮಿಕ್ಕ ಕೆಲವರು ನಿಜವಾದ ರಾಮ ಲಕ್ಷ್ಮಣರನ್ನು ಮಾಯಾ ರಾಮ ಲಕ್ಷ್ಮಣರೆಂದು ಮೋಸಹೋಗಿ ಹೊಡೆಯಲನುವಾದರು. ಕೂಡಲೇ ರಾಮನು ನಾನು ನನ್ನ ರೂಪದ ರಾಕ್ಷಸರನ್ನೂ ನೀನು ನಿನ್ನ ರೂಪದ ರಾಕ್ಷಸರನ್ನೂ ಹೊಡೆದುರುಳಿಸುವುದೀಗ ಕ್ರಮಪ್ರಾಪ್ತ ಎಂದನು. ದೇವೇಂದ್ರನು ಮಾತಲಿಯೊಡನೆ ತನ್ನ ರಥವನ್ನು ರಾಮನಿಗಾಗಿ ಕಳಿಸಿದನು. ಅದನ್ನೇರಿ ರಾಮನು ಅಮೋಘ ಅಂಬುಗಳನ್ನು ಬಿಡಲಾರಂಭಿಸಿದ. ರಾವಣನು ಪ್ರತ್ಯಸ್ತ್ರಗಳನ್ನು ಬಿಟ್ಟ!

ಬಿಡಲು ರಘುಪತಿ ತೊಡಲು ದಶಶಿರ ಬಿಡುವ ಹೋಗುವ ನಡುವೆ ಹಾಯ್ವುದಕೆಡೆಯೆ ಕಾಣದು ಶಸ್ತ್ರದಂತ್ಯವದಾರ ಕರ್ಣಗಳೋ! ನುಡಿಗೆ ತೆರಹಿಲ್ಲಮಮ ರಘುಪತಿ ಕಡುಗಿ ಕವಿ ಕವಿದೆಸಲು ರಕ್ಕಸ ಕಡಿಯಲಸದಳವೆನಲು ಕಡಿದನು ರಾಮ ತಲೆದೂಗೆ! ಆಗ ರಾವಣನ ಹತ್ತು ಬಿಲ್ಲುಗಳನ್ನೂ ರಾಮ ಕಡಿದ; ಅವನು ಹೊಸ




ಹತ್ತು ಬಿಲ್ಲುಗಳನ್ನು ತೆಗೆದುಕೊಂಡರೆ ಅವುಗಳನ್ನೂ ರಾಮ ಕಡಿದ! ಈ ಪ್ರಕಾರ ಸಾವಿರ ಬಿಲ್ಲುಗಳನ್ನು ರಾಮ ಕಡಿದೊಗೆದಾಗ ರಾವಣ ಗಾಬರಿಗೊಂಡ!

ರಾವಣನು ಚಂಡಿಯಿತ್ತ ಶಕ್ತ್ಯಾಯುಧವನ್ನು ಬಿಟ್ಟ. ರಾಮ ಅದನ್ನು ತುಂಡುಮಾಡಿದ. ರಾವಣ ವಾಯವ್ಯಾಸ್ತ್ರವನ್ನು ಬಿಟ್ಟ. ರಾಮ ಸರ್ಪಾಸ್ತ್ರದಿಂದ ಅದನ್ನು ತುಂಡರಿದ. ರಾವಣ ಆಗ್ನೇಯಾಸ್ತ್ರವನ್ನು ಬಿಟ್ಟ. ರಾಮ ವರುಣಾಸ್ತ್ರದಿಂದ ಅದನ್ನು ನಂದಿಸಿದ. ರಾವಣ ಸರ್ಪಾಸ್ತ್ರಬಿಟ್ಟ. ರಾಮ ಗರುಡಾಸ್ತ್ರದಿಂದ ಅದನ್ನು ತಣ್ಣಗೆ ಮಾಡಿದ!

ದಶಕಂಠ ಯಮಾಸ್ತ್ರವನ್ನು ಬಿಟ್ಟ; ಅಸಂಖ್ಯಾತ ಯಮರೂಪಿಗಳು ರಾಮಸೈನ್ಯಕ್ಕೆದುರಾದರು. ರಾಮನಾಗ ರುದ್ರಬಾಣವನ್ನು ಬಿಟ್ಟ. ಅದರಿಂದ ಅಸಂಖ್ಯಾತ ಹರ ಸ್ವರೂಪಿಗಳು ಹುಟ್ಟಿ ಆ ಅಂತಕರನ್ನು ಅಂತ್ಯಗೊಳಿಸಿದರು!

ದಶಾನನನು ಪರ್ವತಾಸ್ತ್ರವನ್ನು ಪ್ರಯೋಗಿಸಿದ. ರಾಮನು ವಜ್ರಾಸ್ತ್ರ (ಸಿಡಿಲಿನ ಅಸ್ತ್ರ) ದಿಂದ ಅದನ್ನು ಪುಡಿ ಪುಡಿ ಮಾಡಿದ. ಸಂಮೋಹನಾಸ್ತ್ರವನ್ನು ರಾವಣ ಬಿಟ್ಟರೆ ಕಪಿವೀರರ ರಾಮನಾಮ ಅದರಿಂದುಂಟಾದ ನಿದ್ರೆಯ ಬಂಧನದಿಂದ ಅವರನ್ನು ಮುಕ್ತಗೊಳಿಸಿತು!



–೩೪–

ರಾವಣನ ಸಂಹಾರ

ಎಸೆವ ಶಸ್ತ್ರಾಸ್ತ್ರಗಳ ಪ್ರಯೋಗವನ್ನು ಬಿಟ್ಟು ಲಂಕೇಶನು ಹಿಡಿದು ಹೊಡೆವ ಆಯುಧಗಳಿಂದ ಯುದ್ಧ ಮಾಡತೊಡಗಿದಾಗ, ರಾಮ ಅವನ ೨೦ ಕೈಗಳನ್ನೂ ಕಡಿದ! ಅವು ಮತ್ತೆ ಚಿಗುರಲು ಅವನ ಹತ್ತು ತಲೆಗಳನ್ನು ರಾಘವ ಕಡಿದ. ಅವು ಚಿಗುರಿದವು! ಅಷ್ಟರಲ್ಲಿ ಬೇಸತ್ತ ರಾಮನು ತನ್ನ ನಾರಾಯಣ ಸ್ವರೂಪವನ್ನು ರಾವಣನಿಗೆ ತೋರಿಸಿದ; ರಾವಣ ಹೆದರಿ ಆರುವ ದೀಪದಂತೆ ಉರಿದೆದ್ದ! ಅಗಸ್ತ್ಯನಷ್ಟು ಹೊತ್ತಿಗಲ್ಲಿಗೆ ಬಂದು ರಾಮನಿಗೆ ಆದಿತ್ಯ ಹೃದಯದ ಉಪಾಸನೆಯನ್ನು ನೆನಪು ಮಾಡಿಕೊಟ್ಟ. ಆದಿತ್ಯೋಪಾಸನೆಯಿಂದ ರಾಮನ ಆಸರ–ಬೇಸರಗಳಳಿದವು. ವಿಭೀಷಣ ಬಂದು ರಾವಣನ ಎದೆಯ ಬಲಭಾಗದಲ್ಲಿರುವ ಮೀನಿನಂಥ ಮಚ್ಚೆಗೆ ಗುರಿಯಿಟ್ಟು ಹೊಡೆಯ ಹೇಳಿದ. ರಾಮ ಕಲ್ಪಾಂತ ರುದ್ರನಂತೆ ಹೊಡೆದ. ಕೂಡಲೇ ರಾವಣನ ಹತ್ತು ತಲೆಗಳು ಮತ್ತೆ ಚಿಗುರದಂತೆ ಉದುರಿ ಹೋದವು. ಅಂದಿಗೆ ರಾಮಬಲ–ರಾವಣ ಬಲಗಳ ೬ ತಿಂಗಳ ಯುದ್ಧ ಕೊನೆಗೊಂಡಿತು. ನಾಶವಾದ ಅಸುರ ಪಡೆಗಳ ಸಂಖ್ಯೆ ೧೭೦೦ ಅಕ್ಷೌಹಿಣಿಗಳು! ಅಂದರೆ ೩,೭೧,೭೯,೦೦೦ ತೇರುಗಳು, ೩,೭೧,೭೯,೦೦೦ ಆನೆಗಳು ೧೧,೧೫,೩೭,೦೦೦ ಕುದುರೆಗಳು ಮತ್ತು ೧೮,೨೮,೯೫,೦೦೦ ಪದಾತಿಗಳು ಒಟ್ಟು ೩೭,೧೭,೯೦,೦೦೦!

ಮಡಿದ ರಾವಣಾಸುರನ ಬಳಗ ಗೋಳೆಂದು ಅತ್ತಿತು; ಅವನ ೧೬ ಲಕ್ಷ ಹೆಂಡಿರು ಹುಯ್ಯಲಿರಿಸಿದರು! ಮಂಡೋದರಿ ಸಂತಾಪದಿಂದ ವಿಭೀಷಣನನ್ನು ದೂರಿದಾಗ ಅವನು ದುಃಖದಿಂದ ಮೂರ್ಛೆಗೆ ಸಂದ. ರಾಮ ಸುಗ್ರೀವಾದಿಗಳು ಅವನನ್ನು ಸಂತವಿಟ್ಟರು. ರಾವಣನ ತಾಯಿಯಾದ ಕೈಕಸೆಗೆ ಕುಲಕಂಟಕ ಮಕ್ಕಳು ಸಾಯುವುದು ಸಮಾಧಾನಕರ ಎಂದು ರಾಮ ಬೋಧಿಸಿದ; ಅಯೋನಿಜೆಯಾದುದರಿಂದ ಸಹಗಮನ ಅಯುಕ್ತವೆಂದು ಮಂಡೋದರಿಗೆ ಹೇಳಿದ. ಅನಂತರ ಅಸುರವಿಪ್ರರು ರಾವಣನ ಶವಸಂಸ್ಕಾರವನ್ನು ನೆರವೇರಿಸಿದರು.

ಅನಂತರ ವಿಭೀಷಣನ ಬೇಡಿಕೆಯ ಮೇರೆಗೆ ರಾಮನು ಶೃಂಗರಿಸಿದ ಲಂಕಾನಗರದ ಸೊಬಗನ್ನು ನೋಡಲುಹೋದ; ರಾವಣನ ಐಶ್ವರ್ಯವನ್ನು ಕಂಡು ಬೆರಗಾದ ಮತ್ತು ಸೀತೆಯನ್ನಾಶಿಸಿ ಇದನ್ನು ಕಳೆದುಕೊಂಡ ಎಂದು ಉದ್ಗರಿಸಿ ಬೀಡಿಗೆ ತೆರಳಿದ.

–೩೫–

ಸೀತೆಯ ಅಗ್ನಿಪರೀಕ್ಷೆ ಮತ್ತು ಅಯೋಧ್ಯಾಗಮನ

ಮರುದಿನ ರಾಮಾಜ್ಞೆಯಂತೆ ಸೀತೆ ಅಗ್ನಿಪ್ರವೇಶ ಮಾಡಿದಳು. ಅಗ್ನಿಯು ಅಗ್ನಿಸ್ತಂಭ ವಿದ್ಯೆಯನ್ನು ಬಲ್ಲ ಸೀತೆಯನ್ನು ಸುಡದೆ ಎತ್ತಿ ಹಿಡಿದನು! ಹರನು ನಂದಿಯನೇರಿ ಭೂತಳ ಕಿಳಿದ ಸತೀಸಹಿತನಾಗಿ! ದೇವಯಾನದಿಂದ ಬ್ರಹ್ಮಾದಿಗಳೊಡನೆ ದಶರಥ ಸ್ವರ್ಗ ಬಿಟ್ಟು ಬಂದ! ಬ್ರಹ್ಮನು ರಾಮನಿಗೆ ಅವನ ನಾರಾಯಣಾತ್ಮಕತೆಯ ನೆನಪನ್ನು ಮಾಡಿಕೊಟ್ಟನು ಮತ್ತು ತಮ್ಮ ಭರತನು ಅಯೋಧ್ಯೆಯಲ್ಲಿ ಕಾದಿರುವುದನ್ನು ತಿಳಿಸಿದನು. ರಾಮನ ಬೇಡಿಕೆಯಂತೆ ದೇವತೆಗಳು ಸತ್ತ ಕಪಿಗಳನ್ನು ಬದುಕಿಸಿದರು. ರಾಮನು ವಿಭೀಷಣನ ಆತಿಥ್ಯವನ್ನು ಕಪಿವೀರರಿಗೆ ಕೊಡಿಸಿ, ಅವನ ಒಡ್ಡೋಲಗದಲ್ಲಿ ಒಂದು ದಿನವಿದ್ದು ಅವನನ್ನು ಹರಸಿ, ಅವನಿತ್ತ ಪುಷ್ಪಕವಿಮಾನವನ್ನೇರಿ ಅಯೋಧ್ಯೆಯತ್ತ ಹಾರಿದ! ಹಾದಿಯಲ್ಲಿ ತ್ರಿಕೂಟದ ಕೋಡುಗಲ್ಲಿನ ನಡುವೆ ಇದ್ದ ಲಂಕೆ, ಸತ್ತು ಬಿದ್ದಿದ್ದ ೯ ಮೈಲುದ್ದದ ಕುಂಭಕರ್ಣ ಶರೀರ, ನಳ ಕಟ್ಟಿದ ಸೇತುಗಳನ್ನು ರಾಮನು ಸೀತೆಗೆ ತೋರಿಸಿದ. ಅವನು ತನ್ನ ಧನುಸ್ಸಿನಿಂದ ಆಸೇತುವನ್ನು ಖಂಡಿಸಿದ ಕೂಡಲೇ ರಾವಣನ ನೆರಳು ಕಾಣಿಸಿತು. ಆ ಅಪಶಕುನದ ಪರಿಹಾರಕ್ಕಾಗಿ ಈಶ್ವರಲಿಂಗವನ್ನು ಪ್ರತಿಷ್ಠಾಪಿಸಲು ಜಾಂಬವ ಹೇಳಿದ. ಪ್ರತಿಯೊಬ್ಬ ಕಪಿವೀರನೂ ರಾಮನಂತೆ ಮಳಲಲಿಂಗಗಳನ್ನು ನಿರ್ಮಿಸಿದರು. ರಾಮಾಜ್ಞೆಯಂತೆ ಹನುಮಂತ ಉತ್ತಮ ಲಿಂಗವನ್ನು ಹೊತ್ತು ತಂದ; ಮಳಲ ಲಿಂಗವ ಕೀಳ ಹೋಗಿ ಸೋತ. ರಾಮ ಅವನನ್ನೆತ್ತಿ, ರಾಮಲಿಂಗವನ್ನು ನೋಡುವ ಮೊದಲು ಹನುಮಂತ ತಂದ ಬಾಣಲಿಂಗವನ್ನು ಯಾತ್ರಿಕರು ನೋಡಲಿ ಎಂದು ಹರಸಿದ. ಆಮೇಲೆ ವಿಮಾನವೇರಿದ ರಾಮಸೈನ್ಯವು ಕಿಷ್ಕಿಂಧೆಯ (ಹಂಪೆಯ) ದೃಶ್ಯಗಳನ್ನು ಆಕಾಶದಿಂದ ನೋಡಿತು. ರಾಮನು ಸೀತೆಗೆ ಅನಂತರ ಪಂಚವಟಿಯನ್ನು ತೋರಿಸಿದ. ಅಲ್ಲೇ ಅವಳನ್ನು ರಾವಣ ಹಿಂದೆ ಕರೆದ್ದೊಯ್ದದ್ದು! ಹತ್ತಿರದ ಆಗ ಸ್ತ್ಯಾಶ್ರಮವನ್ನು ಸೀತೆಗೆ ಅವನು ತೋರಿಸಿದನು. ಆಮೇಲೆ ತೋರಿಸಿದ್ದು ಚಿತ್ರಕೂಟವನ್ನು. ಅಲ್ಲಿ ಶರಭಂಗನ ಆಶ್ರಮ ಮೆರೆಯುತ್ತಿತ್ತು. ಮುಂದೆ ಕಂಡದ್ದು ಯಮುನಾ ನದಿಯನ್ನು; ಆಮೇಲೆ ಗಂಗೆಯನ್ನು ಸೀತಾರಾಮರು ಕಂಡರು. ಅಲ್ಲಿದ್ದ ಆಶ್ರಮಸ್ಥಭರದ್ವಾಜ ಮುನಿಗವರು ಎರಗಿದರು.



ಅವನವರಿಗೆ ತಡವಾಡದೆ ಭರತನನ್ನು ಸಮೀಪಿಸಲು, ಅಯೋಧ್ಯೆಗೆ ಹೋಗಲು ಹೇಳಿದನು. ಭರತನು ವಾಯಿದೆ ಮೀರುತ್ತಿದೆಯೆಂದು ಉರಿಯನ್ನು ಹೊಗಲು ಸಿದ್ಧನಾಗುತ್ತಿದ್ದಾಗ ರಾಮಾಜ್ಞೆಯಂತೆ ವಿಮಾನಕ್ಕಿಂತ ವೇಗದಿಂದ ಅದು ತಲುಪುವ ಮೊದಲೇ ಹನುಮಂತ ಭರತನತ್ತ ಧಾವಿಸಿದ! ಧಾವಿಸಿದವನೇ ಯಜ್ಞ ಕುಂಡಕ್ಕೆ ಮೂರು ಸುತ್ತು ಹಾಕಿದ್ದ ಭರತನನ್ನು ಎತ್ತಿಕೊಂಡು ಹಾರಿ ಪುಷ್ಪಕದಲ್ಲಿ ಬರುತ್ತಿದ್ದ ರಾಮಸೀತೆಯರನ್ನು ಅವನು ಭರತನಿಗೆ ತೋರಿಸಿದನು. ಆಗ ರಾಮ ಪುಷ್ಪಕದಿಂದಿಳಿದು ತಮ್ಮನನ್ನು ತಬ್ಬಿಕೊಂಡ; ಆನಂದಬಾಷ್ಪಗಳನ್ನು ಅಣ್ಣ ತಮ್ಮಂದಿರು ಸುರಿಸಿದರು!

–೩೬–

ಪಟ್ಟಾಭಿಷೇಕ ಮತ್ತು ಮಂಗ ವೀರರ ಪುರಸ್ಕಾರ

ಆಮೇಲೆ ಎಲ್ಲರೂ ಅಯೋಧ್ಯೆಯ ಅರಮನೆಯನ್ನು ಹೊಕ್ಕರು. ತಾಯಂದಿರಿಗೆ ಮಕ್ಕಳು ನಮಸ್ಕರಿಸಿದರು. ಸೀತೆಯನ್ನು ಅವಳ ಅತ್ತೆಯರು ಆನಂದ ಬಾಷ್ಪಸುರಿಸುತ್ತ ಎತ್ತಿ ಮನ್ನಿಸಿದರು. ವಸಿಷ್ಠ ಗುರು ವಿಶ್ವಾಮಿತ್ರಾದಿಗಳೊಡನೆ ಭರತನ ಬೆಂಬಲದಿಂದ ರಾಮಸೀತೆಯರಿಗೆ ಪಟ್ಟಾಭಿಷೇಕವನ್ನು ನೆರವೇರಿಸಿದ. ದಾನ ಧರ್ಮನಡೆಯಿತು. ರಾಮನು–

ತರಣಿಯಂತಿಹ ರತುನ ಪದಕವ
ತರಣಿನಂದನಗಿತ್ತ ಮಾಣಿಕ
ವಿರಚಿತಾಂಗವನಿತ್ತನಂಗದಗೊಲಿದು ವಿಭಿಷಣಗೆ।
ಸುರುಚಿ ಮುತ್ತಿನ ಹಾರವಿತ್ತನು
ಮೆರೆವ ಕುಂಡಲವೆರಡ ಹನುಮಗೆ
ಧರಣಿಸುತೆ ಲಕ್ಷ್ಮಣರಿಗಂಬರಭೂಷಣವನಿತ್ತ॥

ಮಾರುತಿಗೆ ಕೊಡಲೆಳಸಿ ಕಂಠದ
ಹಾರವನು ದೇವಿಯರು ತೆಗೆವುತ
ವೀರ ರಾಮನ ಮೊಗವ ನೋಡಲು ನಗುತ ಕೊಡು ಎಂದ।
ಬಾರೊ ಮಗನೇ ಸಿರಿಯೆ ಬಲ್ಲಿದ
ವೀರ ಮದಗಜವೈರಿ ಎನುತಾ
ಹಾರವನು ಕೊರಳಲ್ಲಿ ಹಿಡಿಯೆಂದಿತ್ತಳವನಿಸುತೆ॥

ಸಿರಿಯವಲ್ಲಭನೊಲಿದು ರಾಜ್ಯಾ
ಧ್ವರವನಾನಲು ಕಾಲಭಾಗ್ಯದ
ಭರವ ಬಣ್ಣಿಪನಾವ ಪರಮಾನಂದಮಯವಾಯ್ತು।
ಜರೆಮರಣಶೋಕಾದಿ ಭಯಗಳ
ಮರೆದು ಸುಖಸಂಪನ್ನರಾದರು
ಹರಸುತಿರ್ದುದು ರಾಮರಾಜ್ಯದೊಳಖಿಳ ಜನನಿವಹ॥

ಜೀವಯಾನ

(ಆತ್ಮಕಥೆ, ಜೀವನಚರಿತ್ರೆ ಮತ್ತು ಸಂಸ್ಮರಣೆ)

ಜೀವಯಾನ

ಜಯತಿ ಶ್ರೀನಿವಾಸೋ ಯಃ ಪ್ರಣವಾರುಣ ಪರ್ವತಃ
ಸಮಾಧಿ ಸಹಜತ್ವೇನ ಸಪಾತು ರಮಣೋಮುನಿಃ

ನಮ್ಮ ಕುಟುಂಬದ ಪೂರ್ವಜರು ಬಾರ್ಕೂರಿನಿಂದ ಬವಳಾಡಿಗೆ ಬಂದು ನೆಲೆಸಿದರು. ಬವಳಾಡಿಯ "ಹೆಬ್ಬಾರರ ಅಡಿ" ಎಂಬ ಸ್ಥಳವನ್ನು ಕೊಂಡು ಕೊಂಡು ಮನೆ ಕಟ್ಟಿ ವಾಸಮಾಡಿಕೊಂಡ ಕಾರಣದಿಂದ ನಮ್ಮ ಮನೆತನಕ್ಕೆ "ಹೆಬ್ಬಾರರು" ಎಂಬ ಹೆಸರು ಬಂದಿತು. ಇದು ೧೮ನೆಯ ಶತಮಾನದ ಆದಿ ಭಾಗದ ಕಥೆ. ಗೋವಿಂದ ಹೆಬ್ಬಾರರ ಕಾಲದ ಮೊದಲೇ ಹೆಬ್ಬಾರರ ಮನೆತನ ಪಾಲಾಗಿ ಹೋಗಿತ್ತು. ನಾಗೂರಲ್ಲಿ ಒಂದು ಮನೆತನ ಮತ್ತು ಬವಳಾಡಿಯಲ್ಲಿ ನಾಲ್ಕು ಮನೆತನಗಳಾಗಿ ಅದು ವಿಭಕ್ತವಾಗಿತ್ತು. ಬವಳಾಡಿಯ ನಾಲ್ಕು ಮನೆತನಗಳಲ್ಲಿ ಗೋವಿಂದ ಹೆಬ್ಬಾರರ ಮನೆತನವೊಂದು. ಅವರಿಗೆ ಮೂಡಲಗಿರಿ ಹೆಬ್ಬಾರರು ಮತ್ತು ಶಂಭು ಹೆಬ್ಬಾರರೆಂದು ಇಬ್ಬರು ಮಕ್ಕಳಿದ್ದರು. ಇವರಿಬ್ಬರೂ ಅವಿದ್ಯಾವಂತರು. ತಮ್ಮ ಶಂಭು ಹೆಬ್ಬಾರ ಮನೆ ಮಠ, ಆಸ್ತಿ–ಪಾಸ್ತಿಗಳೆಲ್ಲವನ್ನು ಕಳೆದುಕೊಂಡು ಕಾಲಾಧೀನರಾದರು. ಶಂಭು ಹೆಬ್ಬಾರರ ಧರ್ಮಪತ್ನಿ ಮಹಾಲಕ್ಷ್ಮಿ ಹೆಬ್ಬಾರತಿಯವರು ವಿದ್ಯಾವತಿಯರಾಗಿದ್ದರು. ಅವರನ್ನು ಕೇಳಿಯೇ ಕೊಡು ಕೊಳ್ಳು ವ್ಯವಹಾರದ ಲೆಕ್ಕವನ್ನು ಮೂಡಲಗಿರಿ ಹೆಬ್ಬಾರರು ಯಥಾ ಶಕ್ತಿ ತಿಳಿದುಕೊಳ್ಳುತ್ತಿದ್ದರು.

ಮಹಾಲಕ್ಷ್ಮಿ ಅಮ್ಮನವರು ೧೮ ಮಕ್ಕಳನ್ನು ಹಡೆದ ಮಹಾತಾಯಿಯವರು. ಕವಿತಾಶಕ್ತಿಯು ಅವರಿಗೆ ನಿಸರ್ಗದತ್ತವಾಗಿತ್ತು. ಅವರ ೧೮ ಮಕ್ಕಳಲ್ಲಿ ೫ ಜನರು ಮಾತ್ರ ಬದುಕಿ ಉಳಿದಿದ್ದರು. ಅವರೇ ೧) ಪಾರ್ವತಮ್ಮ ೨) ವೆಂಕಟರಮಣ ಹೆಬ್ಬಾರರು ೩) ಸರಸ್ವತಿಯಮ್ಮನವರು, ೪) ಹಿರಿಯಣ್ಣ ಹೆಬ್ಬಾರರು ೫) ಸೀತಾರಾಮ ಹೆಬ್ಬಾರರು. ಈ ಐವರಿಗೂ ತಾಯಿಯ ಕವಿತಾ ಶಕ್ತಿಯು ನಿಸರ್ಗತಃ ಕರಗತವಾಗಿತ್ತು. ಇವರಲ್ಲಿ ಹಿರಿಯರಾದ ಪಾರ್ವತಮ್ಮನವರು ಅಕ್ಷರಶಃ ಕುರಿತೋದದೆಯೂ ನಿರಕ್ಷರರಾಗಿಯೂ ಹಾಡುಹಸೆಗಳನ್ನು ರಚಿಸಿ ಮೊಮ್ಮಕ್ಕಳ ಹತ್ತಿರ ಬರೆದುಕೊಳ್ಳಲು ಹೇಳುತ್ತಿದ್ದರು. ಮತ್ತು ಊರ ಸುತ್ತಮುತ್ತಲಿನ ಹೆಣ್ಣು ಮಕ್ಕಳಿಗೆ ಹೇಳಿಕೊಡುತ್ತಿದ್ದರು.

ಅವರು ಮೊಗೇರಿಯ ಅಡಿಗಳ ಮನೆತನವನ್ನು ಮದುವೆಯಾಗಿ ಸೇರಿದ್ದರು. ಸರಸ್ವತಮ್ಮನವರು ಉಳ್ಳೂರ ಉಡುಪರ ಮನೆಗೆ ಮದುವೆಯಾಗಿ ಅಲ್ಲೇ ನೆಲೆಸಿದರು. ಸರಸ್ವತಮ್ಮ ಕುಂದಾಪುರದ ವರ್ಣನೆಯನ್ನು ವಾರ್ಧಕ ಷಟ್ಪದಿಯಲ್ಲಿ ಬರೆದಿದ್ದರು. ಅವರ ವ್ಯಕ್ತಿತ್ವ ಅಸಾಧಾರಣವಾಗಿತ್ತು. ಅವರ ಹಾಸ್ಯಪ್ರವೃತ್ತಿ ಮತ್ತು ಕರುಣೆ ಅದ್ವಿತೀಯವಾಗಿದ್ದವು. ಅವರ ತಂದೆಯ ಮನೆಗೂ ಗಂಡನ ಮನೆಗೂ ವಿದ್ಯಾಜ್ಯೋತಿಯನ್ನು ಹಿಡಿದ ಶಮದಮಾದಿ ಸದ್ಗುಣ ಮತ್ತು ವ್ಯಕ್ತಿತ್ವ ದಾರ್ಢ್ಯಗಳಿಂದ ಕೂಡಿದ ಹಾಗೂ "ಪರೋಪಕಾರಾರ್ಥಮಿದಂ ಶರೀರಂ" ಎಂಬ ತತ್ವದಂತೆ ಬಾಳಿದ, ಅಲ್ಲದೆ ಗಂಡಿಗೆ ಗಂಡು, ಹೆಣ್ಣಿಗೆ ಹೆಣ್ಣು ಎಂಬ ಸಮದರ್ಶಿತ್ವವನ್ನು ಬೆಳಗಿದ ಅಪೂರ್ವ ತೇಜಸ್ವಿನಿಯರಾಗಿದ್ದರು. ಅವರ ಮಗ ಮತ್ತು ಮಗಳಲ್ಲದೆ ಸೊಸೆ ಕೂಡಾ ಅವರ ಬಾಳ ಜ್ಯೋತಿಯನ್ನು ಮುಂದುವರಿಸಿಕೊಂಡು ಹೋಗಬಲ್ಲ ಗುಣ, ಶೀಲ, ವಿದ್ಯೆ ವರ್ತನೆಗಳುಳ್ಳವರಾಗಿದ್ದರು. ಅವರ ಮೊಮ್ಮಕ್ಕಳು ಕೂಡಾ ಅವರ ಸಭ್ಯತೆಯ ಆದರ್ಶವನ್ನು ಬಿಡದೆ ಪಾಲಿಸುತ್ತಾ ಬಂದಿದ್ದಾರೆ. ಪಾರ್ವತಮ್ಮನವರ ಮೂರು ಮಕ್ಕಳೂ ವಿದ್ವಾಂಸರಾಗಿ, ಕೀರ್ತಿಶಾಲಿಗಳಾಗಿ ಬದುಕಿ ದಿವಂಗತರಾದರು.

ಶಂಭು ಹೆಬ್ಬಾರರು ತೀರಿ ಹೋದ ಮೇಲೆ ತಮ್ಮ ಮೂವರು ಗಂಡು ಮಕ್ಕಳೊಡನೆ ಮಹಾಲಕ್ಷ್ಮಿ ಅಮ್ಮನವರು ಬವಳಾಡಿಯನ್ನು ಬಿಟ್ಟು ಕೊಲ್ಲೂರಿಗೆ ಹೋಗಿ ವಾಸ ಮಾಡತೊಡಗಿದರು. ಅಲ್ಲಿಯ ತಂಪು ಹವೆಯಿಂದ ವೆಂಕಟರಮಣ ಹೆಬ್ಬಾರರಿಗೆ ಶೀತ, ಹೊಟ್ಟೆನೋವು ಮುಂತಾದ ರೋಗಗಳು ಬಾಧಿಸತೊಡಗಿದವು. ಅವರ ತಮ್ಮಂದಿರನ್ನೂ ಅವು ಬಿಡಲಿಲ್ಲ. ಆಗ ಮೂವರಲ್ಲಿ ಅತಿನಿಶಿತಮತಿಗಳೂ ಗಂಭೀರ ಹಾಸ್ಯಪ್ರವೃತ್ತಿಯುಳ್ಳವರೂ ಆದ ವೆಂಕಟರಮಣ ಹೆಬ್ಬಾರರು ಕಾಯಿಲೆಯಲ್ಲಿರುವಾಗಲೇ ಯಾರೋ ಚಂದ್ರ ಬೊಕ್ಕೆಹಲಸಿನ ಹಣ್ಣನ್ನು ತಂದು ಕೊಟ್ಟರು. ಆಗ ಅದನ್ನು ಅವರ ತಾಯಿಯವರು ಮೂವರು ಮಕ್ಕಳಗೂ ಹಂಚಿಕೊಟ್ಟಾಗ ಕಾಯಿಲೆ ದುರ್ಧರವಾಗಿ ಹಿಡಿದಿದ್ದ ವೆಂಕಟರಮಣ ಹೆಬ್ಬಾರರು ಒಂದೊಂದೆ ತೊಳೆಯನ್ನು ತೆಗೆದು ಬಾಯಿಗೆ ಹಾಕಿಕೊಂಡು, ಚೆನ್ನಾಗಿ ಜಗಿದು, ರಸ ನುಂಗದೇ ಉಗುಳುತ್ತಿದ್ದರು. ಹೀಗೇಕೆ ಮಾಡುವೆ? ಎಂದು ನೆರೆಯ ಹುಡುಗರು ಕೇಳಿದಾಗ "ನೋಡಿ ಅದು ಗಂಟಲಿನಿಂದ ಕೆಳಗೆ ಹೋದರೆ ಅಪಥ್ಯವಾಗುತ್ತದೆ. ಗಂಟಲಿನಿಂದ ಈಚೆಗೆ ನಾಲಿಗೆ ಇದೆ. ಜಗಿಯುವುದರಿಂದ ಹಲಸಿನ ಹಣ್ಣಿನ ರುಚಿಯನ್ನು ನಾಲಿಗೆ ಸವಿಯುತ್ತದೆ. ಜಗಿದು ಉಗುಳುವುದರಿಂದ ಅಪಥ್ಯವಾಗುವುದು ತಪ್ಪುತ್ತದೆ" ಎಂದು ಹೇಳಿದಾಗ ಅವರ ವಯಸ್ಸು ೧೬ರನ್ನು ಮೀರಿರಲಿಲ್ಲ. ಅವರ ಈ ಮಾತನ್ನು ಕೇಳಿ ಹುಡುಗರು ನಕ್ಕರು ಮತ್ತು ದಂಗು ಬಡಿದು ಹೋದರು. ತಾಯಿ ತಮ್ಮಂದಿರಿಗೆ ಕೂಡಾ ಆಶ್ಚರ್ಯ ಸಂತೋಷಗಳು ಉಂಟಾದವು.

ಆಮೇಲೆ ಕಾಯಿಲೆಗಳ ಕಾಟ ಮುಗಿಯುದುದರಿಂದ ಕೊಲ್ಲೂರನ್ನು ಬಿಟ್ಟು, ಮಹಾಲಕ್ಷ್ಮಿ ಹೆಬ್ಬಾರಿತಿಯವರು ಬಂಧು ಮಿತ್ರರ ನೆರವಿನಿಂದ ಕೊಲ್ಲೂರು ಮೂಕಾಂಬಿಕಾ

ದೇವರಿಗೆ ಸೇರಿದ ಹೊಸ ಕೋಟೆ ಗ್ರಾಮದ ಜಮೀನು ಮನೆ ಸ್ಥಳಗಳನ್ನು ಮೂಲಗೇಣಿ ಪದ್ಧತಿಯಂತೆ ಪಡೆದುಕೊಂಡು ಹೊಸಕೋಟೆಯಲ್ಲೇ ಮನೆ ಕಟ್ಟಿಕೊಂಡು ವಾಸ ಮಾಡತೊಡಗಿದರು. ಬಡತನವು ಆ ಅಲ್ಪ ಜಮೀನಿನಿಂದ ಪರಿಹಾರ ಹೊಂದದಾಯಿತು. ಆಗ ಹಿರಿಯ ಮಗನಾದ ವೆಂಕಟರಮಣ ಹೆಬ್ಬಾರರು ಬೈಂದೂರಿನ ರೆವಿನ್ಯೂ ಇನ್ಸ್‌ಪೆಕ್ಟರ್‌ರ ಖಾಸಗಿ ಗುಮಾಸ್ತರೂ ತೈನಾತಿಗಳೂ ಆಗಿ ಕೆಲಸ ಮಾಡತೊಡಗಿದರು. ಅವರಿಗಾಗ ೧೭ ವರ್ಷ ವಯಸ್ಸಾಗಿತ್ತು. ತಾಯಿ ಮಹಾಲಕ್ಷ್ಮಿಯಾಗಿದ್ದರೂ ಅವರಿಗೆ ವರ ಕೊಟ್ಟಾಕೆ ವಾಗ್ದೇವಿ ಎನ್ನಿಸಿದ ಸರಸ್ವತಿ.

ಆ ಕಾಲದಲ್ಲಿ ವೆಂಕಟರಮಣ ಹೆಬ್ಬಾರರು ಸಂಸ್ಕೃತ, ಲ್ಯಾಟಿನ್, ಹಳಗನ್ನಡ, ನಡುಗನ್ನಡ, ಕಾವ್ಯಶಾಸ್ತ್ರ ಮುಂತಾದುವುಗಳನ್ನು ಬಿಡುವಿನ ವೇಳೆಯಲ್ಲಿ ಕುಂದಾಪುರ ತಾಲೂಕಿನ ವಿದ್ಯಾವೃದ್ಧ-ವಯೋವೃದ್ಧರಲ್ಲಿ ಹೋಗಿ ಅವರ ನೆಚ್ಚಿನ ಶಿಷ್ಯರಾಗಿ ಕಲಿತು ಕೊಂಡರು. ಆಗಲೇ ಅವರು ಸಂಸ್ಕೃತ ಮತ್ತು ಹಳಗನ್ನಡದಲ್ಲಿ ಕವಿತಾರಚನೆಯನ್ನು ಲೀಲಾಜಾಲವಾಗಿ ಮಾಡಬಲ್ಲವರಾದರು. ಹೊಸಗನ್ನಡದ ಅತಿ ಶುದ್ಧ ಮಾದರಿಯ ಹಾಡು ಹಸೆಗಳನ್ನು ತಮಾಷೆಯ ವೃತ್ತಗಳನ್ನು ಜಾತಿಗಳನ್ನು ಆಶು ಕವಿತ್ವದ ಮೂಲಕ ಬರೆದು ಓದಿ, ಹಿರಿಯರನ್ನು ಮೆಚ್ಚಿಸಿ, ಅವರ ಆಶೀರ್ವಾದ ಪಡೆಯಲು ಸಮರ್ಥರಾದರು. ಅಲ್ಲದೆ ತಮ್ಮಂದಿರ ಪೋಷಣೆ ವಿದ್ಯಾಭ್ಯಾಸಗಳಿಗೆ ಬೇಕಾದ ವ್ಯವಸ್ಥೆ ಮಾಡಲು ತಾಯಿಗೆ ಅವರು ನೆರವಾದರು.

ವೆಂಕಟರಮಣ ಹೆಬ್ಬಾರರು ಪ್ರಾಯಸ್ಥರಾದರು. ರೆವಿನ್ಯೂ ಇನ್ಸ್‌ಪೆಕ್ಟರರು ಕುಂದಾಪುರಕ್ಕೆ ವರ್ಗವಾಗಿ ಹೋದಾಗ, ಅವರೊಟ್ಟಿಗೆ ಇವರೂ ಅವರ ಗುಮಾಸ್ತರಾಗಿ ಕುಂದಾಪುರಕ್ಕೆ ಹೋದರು. ಅವರ ಮನೆಯಲ್ಲೇ ವಾಸಿಸುತ್ತಿದ್ದ ಈ ಬ್ರಹ್ಮಚಾರಿಗಳಿಗೆ ಒಂದು ಮೋಜಿನ ಪ್ರಸಂಗ ಒಮ್ಮೆ ಉಂಟಾಯಿತು. ಒಂದು ಸಲ ಬೆಳಗಿನ ಜಾವದಲ್ಲಿ ಹಿತ್ತಲ ಬಾಗಿಲನ್ನು ಇನ್ಸ್‌ಪೆಕ್ಟರರ ಹೆಂಡತಿ ತೆಗೆದು ಅನಂತರ ಬಾಗಿಲು ತಾಳು ಹಾಕಿ ಒಳಗೆ ಬಂದು ಮಲಗಿದರು. ಅದನ್ನು ಹಾಸಿಗೆಯಲ್ಲಿಯೇ ಮಲಗಿದ್ದ ಇನ್ಸ್‌ಪೆಕ್ಟರರು ತಿಳಿದು ಹೆಂಡತಿಯ ವರ್ತನೆಯ ಬಗ್ಗೆ ಸಂಶಯ ತಾಳಿ ಒಳಗೆ ಶತಪಥ ಹಾಕತೊಡಗಿದರು. ತರುಣ ಬೃಹಸ್ಪತಿಗಳಾದ ವೆಂಕಟರಮಣ ಹೆಬ್ಬಾರರು ಹೊರಗಿನ ಚಾವಡಿಯಲ್ಲಿ ಮಲಗಿದ್ದುದರಿಂದ ಅವರಿಗೆ ಈ ಅಂಶ ಹೇಗೋ ಗೊತ್ತಾಯಿತು, ಆಗ ಆ ಉಷಃ ಕಾಲದಲ್ಲಿ ಅವರು ತಮ್ಮ ಹಾಸಿಗೆಯಲ್ಲೇ ಎದ್ದು ಕುಳಿತು ಒಂದು ಸುಂದರವಾದ ಅಣಕವಾಡನ್ನು ರಚಿಸಿ ಸಣ್ಣ ಧ್ವನಿಯಲ್ಲಿ ಗುಣಗುಣಿಸತೊಡಗಿದರು. ಅದನ್ನು ಕೇಳಿದ ಇನ್ಸ್‌ಪೆಕ್ಟರರು ಬಾಗಿಲನ್ನು ತೆರೆದು ಚಾವಡಿಗೆ ಬಂದು. "ವೆಂಕಟರಮಣ ಏನು ಪದ ಹೇಳುತ್ತಿರುವೆಯಾ? ನೀನು ಕವಿ ಎಂಬುದು ನನಗೆ ಗೊತ್ತು. ದೇವರು ನಿನಗೆ ಒಳ್ಳೆಯದನ್ನು ಮಾಡಲಿ. ಆ ಪದವನ್ನು ನೀನೇ ರಚಿಸಿದೆ ಎಂಬುದು ನನಗೆ ಗೊತ್ತು. ಅದನ್ನು ಬುಡದಿಂದ ತಲೆಯವರೆಗೆ ಗಟ್ಟಿಯಾಗಿ ಹೇಳು" ಎಂದರು. ಆಗ ವೆಂಕಟರಮಣ ಹೆಬ್ಬಾರರು ಧೈರ್ಯ ತಂದುಕೊಂಡು ಆ ಕವಿತೆಯನ್ನು ಸುಸ್ವರದಿಂದ ಹಾಡಿ

ಮುಗಿಸಿದರು. ಆ ಪದ್ಯದಲ್ಲಿ ಇನ್ಸ್‌ಪೆಕ್ಟರರು ಕ್ಷುಲ್ಲಕ ಕಾರಣದಿಂದ ಆ ಗಳಿಗೆಯಲ್ಲಿ ತಮ್ಮ ಧರ್ಮಪತ್ನಿಯ ಬಗೆಗೆ ಸಂಶಯಪಟ್ಟಿದ್ದು ತಪ್ಪು ಎಂಬ ಅರ್ಥವು ಧ್ವನಿತವಾಗಿತ್ತು. ಅದರಿಂದ ಇನ್ಸ್‌ಪೆಕ್ಟರರು ಆಶ್ಚರ್ಯ ಸಮಾಧಾನಗಳನ್ನು ತಾಳಿ ಹೆಬ್ಬಾರರನ್ನು ಮೆಚ್ಚಿ ಕೊಂಡಾಡಿದರು. ಅದರಿಂದ ಅವರ ಗೃಹಸ್ಥ ಜೀವನವು ನಿರಾತಂಕವಾಗಿ ಮುಂದೆ ಸಾಗುವಂತಾಯಿತು. ಹೆಬ್ಬಾರರು ಅವರೊಡನೆ ನೌಕರಿ ಮಾಡುತ್ತಿರುವಾಗ ಗಣಿತದಲ್ಲಿ ವಿಶೇಷಜ್ಞತೆಯನ್ನು ಪಡೆದುದಲ್ಲದೆ, ಅವರ ಸಹ ಗುವಮಾಸ್ತರೆಲ್ಲರಿಗೂ ಆಶ್ಚರ್ಯವಾಗುವಂತೆ ತಮ್ಮ ಹೊಸ ಶೋಧದ ಮೂಲಕ ಸರ್ವೇಕ್ಷಣ ಮಾಡಿ ತೋರಿಸುತ್ತಿದ್ದರು.

ಕುಂದಾಪುರದಲ್ಲಿ ವೆಂಕಟರಮಣ ಹೆಬ್ಬಾರರು ನೌಕರಿಯಲ್ಲಿದ್ದಾಗ ಹೋಟೆಲಿನಲ್ಲಿ ಊಟ ಮಾಡುತ್ತಿದ್ದರು. ಆಗ ಉಡುಪಿಯ ಪ್ರದೇಶದ ನಂದಳಿಗೆ ಲಕ್ಷ್ಮೀನಾರಾಯಣಪ್ಪನವರು ಅಲ್ಲಿಯ ಶಾಲೆಯಲ್ಲಿ Physical Instructor ಅಥವಾ ಕುಸ್ತಿ ಮಾಸ್ತರರು ಎನ್ನಿಸಿ ಕೆಲಸ ಮಾಡುತ್ತಿದ್ದರು. ಅವರು ವಯಸ್ಸಿನಲ್ಲಿ ಸ್ವಲ್ಪ ಕಿರಿಯರಾಗಿದ್ದರೂ ನಿಸರ್ಗದತ್ತ ಕವಿತಾ ಶಕ್ತಿ ಸಂಪನ್ನರಾಗಿದ್ದರು. ಅವರು ಹೆಬ್ಬಾರರ ಸ್ನೇಹವನ್ನು ಗಳಿಸಲು ಆ ಹೋಟೇಲಿನಲ್ಲೇ ಊಟ ಮಾಡುತ್ತಿದ್ದುದು ಕಾರಣವಾಯಿತು. ಅವರು ತಾವು ಬರೆದ ಗದ್ಯ ಪದ್ಯಗಳನ್ನು ಸಂಸ್ಕೃತ ಕನ್ನಡ ಉಭಯ ಕವಿಗಳೂ ಸಾಹಿತ್ಯ, ಸಂಗೀತ, ತರ್ಕ, ವೇದಾಂತ, ಜ್ಯೋತಿಷ್ಯ, ಗಣಿತ, ದಾರುಶಿಲ್ಪ, ಯಕ್ಷನಾಟಕಗಳೆಂಬ ಅಷ್ಟವಿದ್ಯೆಗಳಲ್ಲಿ ಸಾಕಷ್ಟು ಪಳಗಿದವರೂ ವೈಯಾಕರಣೀಗಳೂ ಆಗಿದ್ದ ವೆಂಕಟರಮಣ ಹೆಬ್ಬಾರರಿಗೆ ತೋರಿಸಿ, ಅವರ ಸಹೃದಯ ವಿಮರ್ಶೆಯನ್ನು ಪ್ರೀತಿಯಿಂದ ಸ್ವೀಕರಿಸುತ್ತಿದ್ದರು. ಆ ವೇಳೆಯಲ್ಲಿ "ರಾಮ ಪಟ್ಟಾಭಿಷೇಕ" ವೆಂಬ ಪದ್ಯ ಕಾವ್ಯವನ್ನು "ಮುದ್ದಣ್ಣ" ಎಂದು ಅನಂತರ ಪ್ರಖ್ಯಾತರಾದ ಲಕ್ಷ್ಮೀನಾರಾಯಣಪ್ಪನವರು ರಚಿಸಿ ಮುಗಿಸುವ ಮೊದಲು ವೆಂಕಟರಮಣ ಹೆಬ್ಬಾರರೆದುರು ಅದನ್ನಿಟ್ಟು "ಪಟ್ಟಾಭಿಷೇಕದ ಪದ್ಯಗಳನ್ನು ಚೆನ್ನಾಗಿ ಬರೆದುಕೊಡಲು ನೀವೇ ಸಮರ್ಥರು. ದಯವಿಟ್ಟು ಬರೆದು ಕೊಡಿರಿ" ಎಂದು ಕೇಳಿದರು. ಆ ಕೃತಿಯನ್ನು ಆಮೂಲಾಗ್ರವಾಗಿ ಓದಿ ಹೆಬ್ಬಾರರು "ಜೈಮಿನಿ ಭಾರತದ ಪದ್ಯಗಳ ಗಂಭೀರ ಕ್ಲಿಷ್ಟತೆಗಳು ನಿಮ್ಮ ಪದ್ಯಗಳಲ್ಲಿಲ್ಲ. ಆದುದರಿಂದ ಆ ಕಾವ್ಯವನ್ನು ಮುಗಿಸಿ ಕೊಡಲು ನಾನು ಪಟ್ಟಾಭೀಷೇಕದ ೧೬ ವಾರ್ಧಿಕಗಳನ್ನು ಬರೆದು ಕೊಡುತ್ತೇನೆ. ಇನ್ನು ಮುಂದೆ ನೀವು ಗದ್ಯಕಾವ್ಯಗಳನ್ನೇ ಬರೆದರೆ ಜಯಶಾಲಿಗಳಾಗುವಿರಿ" ಎಂದು ಹೇಳಿ ಆ ೧೬ ನುಡಿಗಳನ್ನು ಬರೆದು ಅವರ ಕಾವ್ಯಕ್ಕೆ ಸೇರಿಸಿಕೊಟ್ಟರು. ಅತ್ಯಂತ ಸಂತೋಷದಿಂದ ನಾರಾಯಣಪ್ಪನವರು ಅದನ್ನು ಸ್ವೀಕರಿಸಿ ಹಸ್ತಪ್ರತಿಯನ್ನು ತಯಾರಿಸಿದ ಮೇಲೆ ಹೆಬ್ಬಾರರ ಹತ್ತಿರ ಬಂದು, "ನೋಡಿ, ಇದು ನಮ್ಮ–ನಿಮ್ಮ ಇಬ್ಬರ ಪದ್ಯಗಳಿಂದ ಕೂಡಿರುವುದರಿಂದ ಇದರ ಕರ್ತೃತ್ವವನ್ನು ಯಾರ ಹೆಸರಿಗೆ ಸಲ್ಲಿಸಬೇಕೆಂಬುದು ಗೊತ್ತಾಗದಂತಾಗಿದೆ. ಅಲ್ಲದೆ ಇದನ್ನು ಮೈಸೂರ ಕಡೆಯಲ್ಲಿ ಪ್ರಕಟಣೆ

ಕೊಡಬೇಕಾಗಿರುವುದರಿಂದ ಅವರು ನಮ್ಮಲ್ಲಿಯ ಜನರ ಬರಹಕ್ಕೆ ಅಷ್ಟು ಮನ್ನಣೆಯನ್ನು ಕೊಡಲಾರರು ಎಂಬ ಸಂಶಯವೂ ನನಗೆ ಇದೆ. ಆದುದರಿಂದ ಸ್ವೀಕೃತವೆಂದು ಇದನ್ನು ಪ್ರಕಟಣೆಗೆ ಕೊಟ್ಟರೆ ಸುಲಭವಾಗಿ ಪ್ರಕಟವಾದೀತು. ನನ್ನ ತಾಯಿಯ ಹೆಸರೂ ಮಹಾಲಕ್ಷ್ಮಿ ನಿಮ್ಮ ತಾಯಿಯ ಹೆಸರೂ ಮಹಾಲಕ್ಷ್ಮಿ ಆದುದರಿಂದ ಇದನ್ನು "ಮಹಾಲಕ್ಷ್ಮಿಕೃತ" ಎಂದು ಬರೆದು ಕಳಿಸಿದರೆ ನ್ಯಾಯವಾಗದೆ?" ಎಂದು ಕೇಳಿದರು. ಹೆಬ್ಬಾರರು ಸ್ವಲ್ಪ ಕಾಲ ಮೌನ ತಾಳಿ ಅನಂತರ "ನಿಮಗೆ ಅದು ಸರಿಯೆಂದು ತೋರಿದರೆ ಹಾಗೇ ಮಾಡಿರಿ" ಎಂದರು. ಆ ಪ್ರಕಾರ ಮಹಾಕವಿ ಮುದ್ದಣ್ಣರು ಹಾಗೇ ಮಾಡಿದರು. ಹಾಗೇ ಅದು ಮುದ್ರಿತವಾಗಿ ಪ್ರಕಟವಾಯಿತು. ಹೆಬ್ಬಾರರ ಪ್ರೇರಣೆಯಂತೆಯೇ ಲಕ್ಷ್ಮೀನಾರಾಯಣಪ್ಪನವರು ತಮ್ಮ ಮುದ್ದಣ್ಣ–ಮನೋರಮೆಯರ ಅದ್ವಿತೀಯ ಸಂವಾದವನ್ನೊಳಗೊಂಡ ಗದ್ಯ ಕಾವ್ಯವನ್ನು ಬರೆದರು. ಅವರ ಮರಣೋತ್ತರ ಕಾಲದಲ್ಲಿ ಹೆಬ್ಬಾರರು ಬಹಳ ವಯೋವೃದ್ಧರಾಗಿದ್ದಾಗ, ವಿದ್ವಾಂಸರಿಗೆ ರಾಮಪಟ್ಟಾಭಿಷೇಕದ ಪದ್ಯಶೈಲಿಯ ಭೇದದ ಮೂಲಕ ಸಂಶಯವುಂಟಾಗಿ ಅವರು ಬಂಧು ಬಾಂಧವರನ್ನು ಮೊಗೇರಿ, ಬವಳಾಡಿ, ಉಳ್ಳೂರುಗಳಲ್ಲಿ ಸಂದರ್ಶಿಸಿ ನಿಜ ಸಂಗತಿಯನ್ನು ತಿಳಿದುಕೊಂಡು, ವಿವರ ಪೂರ್ವಕವಾಗಿ ಅದನ್ನು ಪ್ರಕಟಿಸಿದರು. ಪಟ್ಟಾಭಿಷೇಕದ ೧೬ ಪದ್ಯಗಳನ್ನು ನನಗೆ ಬವಳಾಡಿ ಗದ್ದೆ ಬಯಲಿನ ಅಂಚಿನಲ್ಲಿ ಕುಳಿತು ಸ್ಮೃತಿ ಬಲದಿಂದ ಹೆಬ್ಬಾರರು ಹೇಳಿದರು. ಅದನ್ನು ಬರೆದುಕೊಂಡು ನಾನು ಬೆಂಗಳೂರಿನಲ್ಲಿ ಸಾಹಿತ್ಯ ಪರಿಷತ್ತು ಹೊರಡಿಸುತ್ತಿದ್ದ "ಕನ್ನಡ ನುಡಿ" ಎಂಬ ವಾರಪತ್ರಿಕೆಯಲ್ಲಿ ಪ್ರಕಟಿಸಿದೆನು. ಅಲ್ಲಿಗೆ ಅವುಗಳ ಕರ್ತೃತ್ವ ಇವರದೆಂಬುದು ಕನ್ನಡಿಗರೆಲ್ಲರಿಗೂ ಸ್ಪಷ್ಟವಾಗಿ ಗೊತ್ತಾಯಿತು.

ವೆಂಕರಮಣ ಹೆಬ್ಬಾರರು ಕುಂದಾಪುರವನ್ನು ಬಿಟ್ಟು ಹೋದದ್ದು ಅವರಿಗೆ ಮದುವೆ ಬಂದೊದಗಿದ್ದರಿಂದ. ನಾಗೂರಿನ ಅನಂತ ಹೆಬ್ಬಾರರ ಒಬ್ಬ ಮಗಳನ್ನು ಸೊರಬ ತಾಲೂಕಿನ ಅಂಡಿಗೆ ಗ್ರಾಮದಲ್ಲಿ ಜಮೀನುದಾರರಾಗಿದ್ದ ವೆಂಕಪ್ಪ ಜೋಯಿಸರಿಗೆ ಮದುವೆ ಮಾಡಿಕೊಡಲಾಗಿತ್ತು. ವೆಂಕಪ್ಪ ಜೋಯಿಸರ ಅಕ್ಕ ಗೌರಮ್ಮನವರು ಅವರನ್ನು ಮದುವೆಯಾದ ಹೆಬ್ಬಾರರು ಅಂಡಿಗೆಯಲ್ಲಿ ಮಾವನ ಮನೆಯಲ್ಲೇ (ಅಪ್ಪು ಜೋಯಿಸರ ಮನೆಯಲ್ಲೇ) ವಾಸಿಸತೊಡಗಿದರು. ಅಲ್ಲಿ ಅವರ ಓದು ಬರಹ ನಿರರ್ಗಳವಾಗಿ ಸಾಗಿತು. ಅಲ್ಲಿದ್ದಾಗ ಆ ಊರಿಗೆ ಒಂದು ಸಲ ಒಂದು ನಾಟಕ ಕಂಪೆನಿ ಬಂದಿತು. ಆ ಕಂಪೆನಿಯವರೆಲ್ಲರೂ ಜೋಯಿಸರ ಭವ್ಯವೂ ವಿಶಾಲವೂ ಆದ ಮನೆಯಲ್ಲಿ ಊಟ ವಸತಿ ಸೌಕರ್ಯವನ್ನು ಪಡೆದರು. ಆಗ ಹೆಬ್ಬಾರರು ಹೊರ ಚಾವಡಿಯಲ್ಲಿ ಒಂದು ಒರಗು ಬೆಂಚಿನ ಮೇಲೆ ಮಲಗಿದ್ದರು. ನಾಟಕದ ಕಂಪೆನಿಯ ಕೆಲ ನಟರು ನಾಟಕಕ್ಕೆ ಸೇರಿದ ಪದ್ಯಗಳನ್ನು ಅಭ್ಯಾಸಕ್ಕಾಗಿ ಹೇಳುತ್ತಿದ್ದರು. ಅದರಲ್ಲಿ ದೋಷ ಕಂಡಾಗ ಅದನ್ನು ಎತ್ತಿ ಹೇಳಿದರೆ ಅದರ ನಿರ್ದೇಶಕ "ನಿನಗೇನು ಗೊತ್ತು ನಾಟಕದ ವಿಷಯ?" ಎಂದು ಅಬ್ಬರಿಸಿದಾಗ ಸ್ವಲ್ಪ ಹೊತ್ತು ಸುಮ್ಮನೆ

ಎತ್ತಲೋ ನೋಡುತ್ತಾ ಕುಳಿತವರಂತೆ ಬಲಗಡೆಗಿದ್ದ ಕಿಟಕಿಗೆ ಮುಖಮಾಡಿ ಈ ಕೆಳಗಿನ ಪದ್ಯವನ್ನು ಆಗಿಂದಾಗ ರಚಿಸಿ ಹೇಳಿದರು. ಜಡರನೊರಲ್ದು ಹುಟ್ಟಿ ದುರಹಂ ಮದರಂ ಕೆರೆದೊಕ್ಕಲೆಕ್ಕ ಬಾಯ್ ಬಡಿಕರ.....

ಅದನ್ನು ಕೇಳಿದ ನಟನಾಯಕರು ಬೆಕ್ಕಸ ಬೆರಗಾಗಿ ತಾವು ಅಸಾಧಾರಣ ವಿದ್ವಾಂಸನೊಬ್ಬನನ್ನು ಅವಮಾನಿಸಿದ್ದು ಅಪರಾಧವಾಯ್ತೆಂದು ತಿಳಿದು ಹೆಬ್ಬಾರರಲ್ಲಿ ಕ್ಷಮೆ ಬೇಡಿದರು. ಇಂಥ ನಟಾದಿ ಪಂಡಿತಂಮನ್ಯರಿಂದು ಸರ್ವಕಲಾ ಕ್ಷೇತ್ರದಲ್ಲಿಯೂ ಬಹಳ ಹೆಚ್ಚಾಗುತ್ತಿರುವುದು ದುರ್ದೈವ. ನಿತ್ಯ ಸ್ತುತಿ ಪಾಠಕರನ್ನು ವಿಮರ್ಶಕರೆಂದು ತಿಳಿಯುವುದೂ ಒಂದೇ ಅತಿಸ್ತುತಿಪ್ರಿಯರನ್ನು ವಿದ್ವಾಂಸರೆಂದು ತಿಳಿಯುವುದೂ ಒಂದೇ. ಹಾಗೆ ನಿಂದಕರೆಲ್ಲರೂ ವಿಮರ್ಶಕರೆಂದು ಭಾವಿಸುವುದೂ ನಿಂದೆಯ ಸಹನೆಯ ಅತಿರೇಕವು ಗಂಭೀರ ವಿದ್ವತ್ತೆಯೆಂದು ತಿಳಿಯುವುದೂ ವಿಚಾರ ಮೂಢತೆ, ಅರಸಿಕತೆ. ಹೆಬ್ಬಾರರ ಕಾಲದ ಕಡಲುಗನ್ನಡ ಸೀಮೆ ಮಲೆನಾಡುಗಳ ಇಂಥ ದುರುದಾರಣೆಗಳಿಂದ ದುರ್ದೈವದಿಂದ ಮುಕ್ತವಾಗಿದ್ದದ್ದು ಅನುಕರಣೀಯ. ಹೆಂಗಸರ ಕೃತಿಗಳಾದರೆ ಪ್ರೋತ್ಸಾಹ ಸಿಕ್ಕುತ್ತದೆ ಎಂಬ ಪರಿಸ್ಥಿತಿ ಅಂದು ಇದ್ದದ್ದು ಯೋಗ್ಯತಾ ಪುರಸ್ಕಾರಕ್ಕೆ ವಿರುದ್ಧ.

ಅನಂತರ ಹೊಸಕೋಟೆಯಲ್ಲೇನಾಯಿತು? ಹಿರಿಯಣ್ಣ ಹೆಬ್ಬಾರರೇ ಮನೆಯನ್ನು ನೋಡಿಕೊಂಡಿರಬೇಕಾಯಿತು. ಅವರು ಸಂಸ್ಕೃತ ಕನ್ನಡಗಳಲ್ಲಿ ವಿದ್ವಾಂಸರೂ ಕವಿಗಳೂ ಎನ್ನಿಸಿಕೊಳ್ಳುವ ತರಬೇತನ್ನು ಪಡೆದರು. ಅವರ ತಮ್ಮ ಸೀತಾರಾಮ ಹೆಬ್ಬಾರರಿಗೆ ಕನ್ನಡವಷ್ಟೇ ಮೀಸಲಾಯಿತು. ಹಿರಿಯಣ್ಣ ಹೆಬ್ಬಾರರು ಹಟ್ಟಿಕುದುರಿನ ಹೆಣ್ಣನ್ನು ಮದುವೆಯಾದರು. ಅಷ್ಟರಲ್ಲೇ ತಾಯಿ ಮಹಾಲಕ್ಷ್ಮಮ್ಮ ತೀರಿಕೊಂಡಿದ್ದರು. ಕುಟುಂಬ ನಿರ್ವಹಣಕ್ಕೆ ಸೀತಾರಾಮ ಹೆಬ್ಬಾರರ ಕೃಷಿ ಕರ್ಮವೇ ಮುಖ್ಯಾಧಾರವಾಯಿತು. ಹಿರಿಯಣ್ಣ ಹೆಬ್ಬಾರರ ವ್ಯಕ್ತಿತ್ವ ದೊಡ್ಡದು. ಯಕ್ಷಗಾನ ಕವಿಯಾಗಿ, ರಾಷ್ಟ್ರೀಯ ಶಾಲೆಯ ಸಂಸ್ಕೃತ ಉಪಾಧ್ಯಾಯರಾಗಿ ಮತ್ತು ಯಕ್ಷಗಾನ ಭಾಗವತರೂ ಅರ್ಥಧಾರಿಗಳೂ ಮೃದಂಗವಾದಕರೂ ಧರ್ಮಶಾಸ್ತ್ರಜ್ಞರೂ ಆಗಿ ದಕ್ಷಿಣ ಕನ್ನಡದ ಉತ್ತರ ಭಾಗದಲ್ಲಿ ಪ್ರಸಿದ್ಧರಾದರು. ಅವರ ಮೂರ್ತಿ ಚಿಕ್ಕದಾಗಿದ್ದರೂ ಕೀರ್ತಿ ದೊಡ್ಡದಾಯಿತು. ಅವರು ಹತ್ತು ಜನರಿಗೆ ಬೇಕಾದವರಾಗಿ, ಒಂದು ವಿಧದ ಸಾಮಾಜಿಕ ಮುಖಂಡರಾದರು. ಅವರ ಪಂಚಾಯತಿದಾರಿಕೆಗೆ ಸುತ್ತಮುತ್ತಲಿನ ಜನರ ಮನ್ನಣೆ ದೊರಕಿತು. ಅವರ ಶಿಷ್ಯರೆಂದು ಕೊಳ್ಳಲು ನಾನಾ ವರ್ಗದವರು ತವಕ ಪಡುತ್ತಿದ್ದರು. ಶಾಲೆಗಳು ಅತ್ಯಂತ ವಿರಳವಾದ ಆ ಕಾಲದಲ್ಲಿ ಅವರು ತಿರುಗಾಡುವ ಶಾಲೆಯಾದರು. ತರುಣರೂ ಮಧ್ಯವಯಸ್ಕರೂ ಅವರಿಂದ ಯಕ್ಷಗಾನ, ಧರ್ಮಶಾಸ್ತ್ರ, ವ್ಯವಹಾರದ ಕಾಯದೆ ಕಾನೂನು ಮುಂತಾದವುಗಳನ್ನಲ್ಲದೆ ಸಂಸ್ಕೃತವನ್ನು ಕಲಿತುಕೊಂಡು ಹೋಗುತ್ತಿದ್ದರು. ಮೃದಂಗ ತಾಡನ ಪಟುವಾದ ಅವರ ಹಸ್ತ, ಹುಡುಗರ ಕಿವಿ ಹಿಂಡುವುದರಲ್ಲೂ ಪಳಗಿತು. ಅವರು ತಮ್ಮ ಸಮವಯಸ್ಕರೊಡನೆ ರಾಷ್ಟ್ರೀಯ

ಚಳುವಳದಲ್ಲೂ ಮುಂದಾಳುಗಳಾದರು. ರಾಷ್ಟ್ರಪ್ರೇಮದ ಮತ್ತು ದೈವಭಕ್ತಿಯ ಅನೇಕ ಸಂಸ್ಕೃತ ಕನ್ನಡ ಪದ್ಯಗಳನ್ನು ಬರೆದು ಹಾಡಿ, ಹೇಳಿಕೊಡುತ್ತಿದ್ದ ಅವರಿಗೆ ಒಮ್ಮೊಮ್ಮೆ ರಾತ್ರಿ ಮನೆಗೆ ಹಿಂದಿರುಗಲೂ ಪುರುಸೊತ್ತಾಗುತ್ತಿರಲಿಲ್ಲ. ನನ್ನ ತಂದೆಯವರಿಗೆ ಆಗ ಸುಮಾರು ೩೯ ವರ್ಷ ವಯಸ್ಸಾಗಿತ್ತು. ಅವರಿಗೆ ಮದುವೆಯಾಯಿತು. ಹಿರಿಯಣ್ಣ ಹೆಬ್ಬಾರರಿಗೆ ಮಾರ್ತಾಂಡ ಹೆಬ್ಬಾರರೆಂಬ ಮಗ ಹುಟ್ಟಿದ. ಅವನಿಗೆ ಸರಿಯಾದ ಶಿಕ್ಷಣವನ್ನು ಕೊಡಲಾಯಿತು. ಅವನು ಮಂಗಳೂರಿನಲ್ಲಿ ಶಿಕ್ಷಣವನ್ನು ಪಡೆಯಲು ವಿವಾಹಾನಂತರ ತೆರಳಿದನು. ತನ್ನ ತಂದೆ ಸೀತಾರಾಮ ಹೆಬ್ಬಾರರು ತಾಯಿ ನಾಗಮ್ಮನವರು ನನ್ನನ್ನು ಪಡೆದರು. ಕ್ರಿ.ಶ. ೧೯೧೮ನೆಯ ಇಸವಿಯಲ್ಲಿ ಏಪ್ರಿಲ್ ೨೪ರ ದಿನ. ತಾಯಿಯವರಿಗಾಗ ೧೮ ವರ್ಷಗಳು ತುಂಬಿದ್ದವು.

ಹೊಸಕೋಟೆಯಲ್ಲಿ ನಾವಿದ್ದದ್ದು ಹುಲ್ಲು ಗುಡಿಸಲಿನಲ್ಲಿ. ಅಡಿಕೆ, ತೆಂಗು, ಬಾಳೆ, ಮಾವು ಹಲಸುಗಳ ಹಿತ್ತಿಲು ಮನೆಗಿತ್ತು. ನನ್ನ ತಂದೆ ತಾಯಂದಿರು ಮುಗ್ಧರೂ, ಪ್ರಾಮಾಣಿಕರೂ ಕಷ್ಟ ಜೀವಿಗಳೂ ಕರುಣಾಳುಗಳೂ ಆಗಿದ್ದರು. ಜ್ಯೇಷ್ಠ ಭ್ರಾತೃಗಳು ಪಿತೃ ಸಮಾನರೆಂದು ನನ್ನ ತಂದೆಯವರು ತಿಳಿದು ನಡೆದುಕೊಳ್ಳುತ್ತಿದ್ದರು. ಹಿರಿಯಣ್ಣ ಹೆಬ್ಬಾರರ ಹೆಂಡತಿ ತೀರಿ ಹೋದುದರಿಂದ ನನ್ನ ತಾಯಿಯವರೇ ಮನೆಗೆಲಸದ ಮೇಲಾಧಿಕಾರಿಗಳೂ ಕೆಳ ಅಧಿಕಾರಿಗಳೂ ಆಗಬೇಕಾಯಿತು. ಕೃಷಿ, ಕುಟುಂಬಕ್ಕೆ ಬೇಕಾದ ದನಗಳ ಸಾಕಣೆ ಅವರ ಪಾಲಿಗೆ ಬಿದ್ದಿತು. ಅವರು ನೆರೆಹೊರೆಯ ಸಮ ವಯಸ್ಕ ಸ್ತ್ರೀಯರಿಗೆ ಹಾಡು ಹೇಳಿಕೊಡುತ್ತಿದ್ದರು. ಆ ಹಾಡುಗಳ ಕರ್ತರು ಹಿರಿಯಣ್ಣ ಹೆಬ್ಬಾರರು ಅಥವಾ ಸೀತಾರಾಮ ಹೆಬ್ಬಾರರು. ಗುಡ್ಡ, ಹಾಡಿ, ಬಯಲು, ಗದ್ದೆ, ತೋಟ, ಕೆರೆ, ಅರೆಕಲ್ಲುಗಳ ದೃಶ್ಯ ಹೊಸಕೋಟೆಗೆ ಸಹಜವಾಗಿತ್ತು. ಯಕ್ಷಗಾನ ತಾಳಮದ್ದಲೆಗಳ ನೇತಾರರಾಗಿ ಹಿರಿಯಣ್ಣ ಹೆಬ್ಬಾರರು ಸೀತಾರಾಮ ಹೆಬ್ಬಾರರೊಡನೆ ಅನೇಕ ಊರುಗಳನ್ನು ವರ್ಷಕ್ಕೊಮ್ಮೆ ಸಂಚರಿಸಿ ಯಥಾ ಶಕ್ತಿ ಸಂಪಾದನೆ ಮಾಡಿಕೊಂಡು ಬರುತ್ತಿದ್ದರು. ಸೀತಾರಾಮ ಹೆಬ್ಬಾರರೂ ಯಕ್ಷಗಾನ ಭಾಗವತರೂ ಅರ್ಥಧಾರಿಗಳೂ ಆದರು. ಹೊಸಕೋಟೆಯ ಗುಡ್ಡದಲ್ಲಿಯ ಕೋಟೆಯ ಚಾವಡಿಗಳ ಅವಶೇಷಗಳೆರಡು ಈ ಸೋದರರಲ್ಲಿ ಪುನರ್ಜನ್ಮಪಡೆದಂತೆ ಕಂಡವು. ಅವರ ತಾಳಮದ್ದಳೆ ತಿರುಗಾಟದ ಪ್ರದೇಶವೆಂದರೆ ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳ ಸುಸಂಸ್ಕೃತ ಗ್ರಾಮಗಳು.

ಹಿರಿಯಣ್ಣ ಹೆಬ್ಬಾರರ ಗುರುಕುಲ ಪದ್ಧತಿ ಬೈಂದೂರ ಡಿವಿಜನ್ನಿನಲ್ಲಿ ಸುಪ್ರಸಿದ್ಧವಾಯಿತು. ಅವರ ಭಾಗವತಿಕೆ ಇದ್ದರೆ ಮಾತ್ರ ತಾವು ಬಣ್ಣದ ವೇಷವನ್ನು ಆಟದಲ್ಲಿ ಕಟ್ಟುವೆವು ಎಂಬ ಮಹಾ ನಟರ ಪ್ರತಿಜ್ಞೆಗಳೂ ಕೇಳಿ ಬಂದವು. "ಉಪ್ರೊಳ್ಳಿ ಶೇಷ" ಎಂಬ ಮಹಾ ನಟ ಅಂಥವರಲ್ಲಿ ಅಗ್ರಗಣ್ಯ. ಮಾರನಕಟ್ಟೆಯ ಮೇಳದಲ್ಲಿ ಅವನು ಅಭಿನಯಿಸುತ್ತಿದ್ದನು. ಹಿರಿಯಣ್ಣ ಹೆಬ್ಬಾರರು ರಚಿಸಿದ ಹಲವಾರು ಯಕ್ಷಗಾನ ಪ್ರಸಂಗಗಳಲ್ಲಿ ಮುದ್ರಿತವಾಗಿ ಈಗಲೂ ಉಪಲಬ್ಧವಾಗಿರುವುದೆಂದರೆ ೧) ಪಾಂಡವ ವಿಜಯ, ೨) ವಿಶ್ವಾಮಿತ್ರ ಪ್ರತಾಪ ಮತ್ತು ದುಷ್ಯಂತ ಚರಿತ್ರೆ; ಹಾಗೂ ೩) "ಭಾನುಮತಿ

ಕಲ್ಯಾಣ". ಅವರ ಪದವಿನ್ಯಾಸ ಪದ್ಧತಿಯು ಮದ್ದಳೆಯ ಬಿಡ್ತಿಗೆಗಳನ್ನು ಕಲಾಮಯವಾಗಿ ಅನುಸರಿಸುತ್ತಿತ್ತು. ನೃತ್ಯ ಪ್ರಧಾನವಾದ ಯಕ್ಷಗಾನ ನಾಟಕಗಳಿಗೆ ಆ ಪದ್ಧತಿ ಅತ್ಯುಚಿತವಾಗಿರುತ್ತದೆ. ಭಾವಾವೇಷವನ್ನು ಹೊಡೆದೆಬ್ಬಿಸುವುದರಲ್ಲಿ ಅದು ಎತ್ತಿದ ಕೈಯಾಯಿತು. ಆದುದರಿಂದ ಅವರ ಯಕ್ಷಗಾನ ಸ್ತೋತ್ರ ಪದ್ಯಗಳನ್ನು ಉತ್ತರ ಕನ್ನಡ ಜಿಲ್ಲೆಯ ಇಡಗುಂಜಿ ಮೇಳದ ಹಾಗೂ ಇತರ ಮೇಳದ ಭಾಗವತರು ಉಚಿತ ಸನ್ನಿವೇಶಗಳಲ್ಲಿ ಸುಂದರವಾಗಿ ಹಾಡುತ್ತಾರೆ.

"ಭಾನುಮತಿ ಕಲ್ಯಾಣವು" ಯಕ್ಷನಾಟಕದ ಮೇಳಗಳಿಗೊಂದು ಅಪೂರ್ವವಾದ ರಣಾಹ್ವಾನ. ಅದರಲ್ಲಿ ಸುರಾಸುರಲ್ಲದೆ ಅರಣ್ಯದ ಕ್ರೂರ ಮೃಗಗಳೂ ಪಾತ್ರವಹಿಸುತ್ತವೆ. ಧಾರೇಶ್ವರದ ಸುಬ್ಬನು ಸಿಂಹವಾಗಿ ಮೆರೆದನೇನೋ ನಿಜ. ಆದರೆ ಹುಲಿ, ಕರಡಿ ಮೊದಲಾದ ಪ್ರಾಣಿ ಸಂಗ್ರಹಾಲಯಸ್ಥ ಜೀವಿಗಳ ಪಾತ್ರವನ್ನು ನಿರ್ವಹಿಸುವವರು ದುರ್ಲಭವಾದುದರಿಂದಲೂ ಯಕ್ಷಗಾನ ಭಾಗವತಿಕೆಯ ಸೂತ್ರಧಾರತ್ವವು ಭಾರತದ ರಾಷ್ಟ್ರಪತಿತ್ವ ದಿನೇ ದಿನೇ ದುರ್ಬಲವಾಗುತ್ತ ಹೋದಂತೆ ಇಳಿತಾಯಕ್ಕೆ ಬರುವಂತಾದುದರಿಂದಲೂ ಮೇಳಗಳು ಆ ಪ್ರಸಂಗವನ್ನು ರಂಗಸ್ಥಳಕ್ಕೆ ತರಲು ಧೈರ್ಯ ಮಾಡಲಿಲ್ಲ. ಆದರೆ ಅದರ ಪದ್ಯಗಳ ಗತ್ತು ಗಮಕಗಳು ಹೆಬ್ಬಾರರ ಪ್ರತಿಭೆಯ ಪೂರ್ಣ ಫಲಕಗಳಾಗಿವೆ. ಆದುದರಿಂದಲೇ ಅದನ್ನು ಮೈಸೂರಿನ "ಕಾವ್ಯಾಲಯವು" ಪ್ರಕಟಿಸಿತು.

ಅಂಡಿಗೆಯಲ್ಲಿ ವೆಂಕಟಪ್ಪ ಜೋಯಿಸ ದಂಪತಿಗಳು ತೀರಿಹೋದ ಕೂಡಲೇ ವೆಂಕಟರಮಣ ಹೆಬ್ಬಾರರು ಹೊಸಕೋಟೆಗೆ ಬಂದು ಮೂಲ ಕುಟುಂಬದ ಮನೆಯಲ್ಲಿ ಸಪತ್ನೀಕರಾಗಿ ವಾಸಿಸತೊಡಗಿದರು. ಮನೆಗೆ ಬಂದವರಿಗೆ ಪುಕ್ಕಟ್ಟೆಯಾಗಿ ಪಾಠ ಹೇಳುವುದನ್ನು ಬಿಟ್ಟರೆ ಅವರು ಇನ್ನೇನನ್ನೂ ಮಾಡುತ್ತಿರಲಿಲ್ಲ. ಅವರ ಪತ್ನಿ ಗೌರಮ್ಮನವರು ಅಡಿಗೆ ಮಾಡುವುದನ್ನು ಉಳಿದರೆ ಮತ್ತೇನನ್ನೂ ಮಾಡುತ್ತಿರಲಿಲ್ಲ. ಅವರ ದೊಡ್ಡಸ್ತಿಕೆಯ ದೆಸೆಯಿಂದಲೇ ವೆಂಕಟರಮಣ ಹೆಬ್ಬಾರರು ಮನೆಯನ್ನು ಪಾಲಿಗೆ ತೆಗೆದುಕೊಂಡರು, ಜಮೀನು ಪಾಲಾಯಿತು. ಸಾಲವನ್ನು ಮಾತ್ರ ಅವರ ತಮ್ಮಂದಿರಷ್ಟೇ ಪಾಲು ಮಾಡಿಕೊಂಡರು.

ಈ ಸಮಯದಲ್ಲಿ ನಾನು ಬಿಜೂರಿನ ಕನ್ನಡ ಶಾಲೆಯಲ್ಲಿ ೨ನೇಯ ಇಯತ್ತೆಯನ್ನು ಮುಗಿಸಿ ನಾಲ್ಕನೆಯ ಇಯತ್ತೆಗೆ ಉತ್ತೀರ್ಣನಾದೆನಷ್ಟೇ. ಹೊಸಕೋಟೆಯ ಮನೆಯಲ್ಲಿ ವೆಂಕಟರಮಣ ಹೆಬ್ಬಾರರ ದಂಪತಿಗಳಷ್ಟೆ ಉಳಿದರು. ಅವರಿಗಿದ್ದ ಒಬ್ಬಳೇ ಮಗಳಾದ ಸುಬ್ಬಮ್ಮ ಬವಳಾಡಿಯ ವಿಶ್ವೇಶ್ವರ ಉಡುಪರಿಗೆ ಮದುವೆಯಾಗಿ ಹೋಗಿದ್ದಳು. ಹಿರಿಯಣ್ಣ ಹೆಬ್ಬಾರರ ಮಗ ಮಾರ್ತಾಂಡ ಹೆಬ್ಬಾರರು ಕಾಯಿಲೆಯಿಂದ ಮೃತರಾಗಿ ಹೋಗಿದ್ದರು. ಆದುದರಿಂದ ಅವರು ತಮ್ಮ ಅಕ್ಕ ಸರಸ್ವತಿ ಅಮ್ಮನವರ ಮನೆಯಲ್ಲಿ ಕೊನೆತನಕ ಉಳಿದರು. ವೆಂಕಟರಮಣ ಹೆಬ್ಬಾರರು ಹೊಸಕೋಟೆಯನ್ನು ಬಿಟ್ಟು

ಸೊರಬದ ಹತ್ತಿರ ನಡಹಳ್ಳಿಯಲ್ಲಿ ಪತ್ನಿಯೊಡನೆ ವಾಸಿಸತೊಡಗಿ ಅಲ್ಲೇ ದಿವಂಗತರಾದರು.

ತಮ್ಮ ಪಾಲಿನ ಆಸ್ತಿಯೆಲ್ಲವೂ ಸಾಲ ತೀರಿಸಿಲು ಭೋಗ್ಯಾದಿ ಮಾಡಲ್ಪಟ್ಟುದರಿಂದ ನನ್ನ ತಂದೆ ಸೀತಾರಾಮ ಹೆಬ್ಬಾರರು ಓದು ಮುಗಿಸಲೆಂದು ನನ್ನನ್ನು ಬವಲಾಡಿಯ ಮಹಾಲಿಂಗ ಐತಾಳರ ಮನೆಯಲ್ಲಿ ಬಿಟ್ಟು ನನ್ನ ತಂಗಿ ರುಕ್ಮಿಣಿಯನ್ನು ತಾಯಿಯವರನ್ನೂ ಕರೆದುಕೊಂಡು ಎತ್ತಿನ ಗಾಡಿಯಲ್ಲಿ ಸಾಮಾನು ಹಾಕಿಕೊಂಡು ಅಂಡಿಗೆಗೆ ಹೋದರು. ಅಂಡಿಗೆಯ ಜಮೀನುದಾರಿಕೆಯು ಆಗ ವೆಂಕಟಪ್ಪ ಜೋಯಿಸರ ಮಗಳಾದ ಪುಟ್ಟಮ್ಮನ ಗಂಡ ಬಡಾಕೆರೆ ಆನಂದರಾಯರ ಕೈಗೆ ಹೋಗಿತ್ತು. ಆನಂದರಾಯರು ಸಾಗರದಲ್ಲಿ ವಕೀಲಿ ವೃತ್ತಿಯನ್ನು ಹಿಡಿದಿದ್ದರು. ಆದುದರಿಂದ ಅವರ ಅಂಡಿಗೆ ಮನೆಯಲ್ಲೆ ನನ್ನ ತಂದೆ, ತಾಯಿ, ತಂಗಿ ಇವರು ವಾಸಿಸತೊಡಗಿದರು.

ಕನ್ನಡ ನಾಲ್ಕನೆಯ ಇಯತ್ತೆಯನ್ನು ಬಿಜೂರು ಶಾಲೆಯಲ್ಲಿ ಮುಗಿಸಿದ ನಾನು ನನ್ನ ೧೦ನೆಯ ವಯಸ್ಸಿನಲ್ಲಿ ಅಂಡಿಗೆಗೆ ಹೋದೆನು. ಅಲ್ಲಿಯ ಮಲೇರಿಯಾಕ್ಕೆ ತುತ್ತಾಗಿ ಒಂದು ವರ್ಷ ಕಳೆದು ೧೧ನೆಯ ವಯಸ್ಸಿನಲ್ಲಿ ಅಂಡಿಗೆಯಿಂದ ನಾಲ್ಕು ಮೈಲಿ ದೂರದಲ್ಲಿದ್ದ ಸೊರಬದ ಮಿಡಲ್ ಸ್ಕೂಲಿಗೆ ಸೇರಿದೆನು. ಸೊರಬದ ನಾಡಿಗ ಲಕ್ಷ್ಮಣ ರಾಯರ ಮನೆಯ ಅಟ್ಟದ ಮೇಲೆ ಉಳಿದುಕೊಂಡು ವಾರಾನ್ನವನ್ನಾಧರಿಸಿ ಮೂರು ವರ್ಷಗಳವರೆಗೆ ಅಲ್ಲಿದ್ದು ಆ ಮಾಧ್ಯಮಿಕ ಶಾಲೆಯ ಮೂರು ವಾರ್ಷಿಕ ಪರೀಕ್ಷೆಗಳನ್ನು ಮುಗಿಸಿದೆನು. ಶನಿವಾರ ಅಂಡಿಗೆಗೆ ಹೋಗಿ ಸೋಮವಾರ ಸೊರಬಕ್ಕೆ ಮರಳುತ್ತಿದ್ದೆ.

ಅಂಡಿಗೆ ಕಾಡಿನ ನಾಡು. ಅದರ ಎರಡು ಕಡೆ ಗದ್ದೆ ಬೈಲು, ಮತ್ತೆರಡು ಕಡೆ ದಟ್ಟವಾದ ಕಾಡು. ಕಾಡಿನಲ್ಲಿ ನಾನಾ ಜಾತಿಯ ದೊಡ್ಡ ದೊಡ್ಡ ಮರಗಳೂ ಮುಳ್ಳುಗಿಡಗಳೂ ಬಿದಿರ ಮಟ್ಟಿಗಳೂ ಇದ್ದವು. ನಡು ನಡುವೆ ಬೇಕಾದಷ್ಟು ಗಂಧದ ಮರಗಳು ಇದ್ದವು. ಆಗ ಹುಲಿಗಳು ಅಲ್ಲಿ ನಿರ್ಭಯದಿಂದ ಓಡಾಡುತ್ತಿದ್ದವು. ಬೇಸಿಗೆಯಲ್ಲಿ ನೀರು ಕುಡಿಯಲು ಊರ ಕೆರೆಗಳಿಗೆ ಅವು ಬರುತ್ತಿದ್ದದ್ದಲ್ಲದೆ, ಕೊಟ್ಟಿಗೆಗಳಲ್ಲಿ ಹೊಕ್ಕು ದನಕರುಗಳನ್ನು ಕೂಡಾ ಕೊಂದು ತಿಂದು ಹೋಗುತ್ತಿದ್ದವು. ಕಾಡು ಹಂದಿಗಳು ಕಟ್ಟಿಗೆ ತರಲು ಕಾಡಿಗೆ ಹೋದವರಿಗೆ ಕಾಣಿಸಿಕೊಳ್ಳುತ್ತಿದ್ದವು. ಹುಲಿಗಳ ಕಾಟ ಹೆಚ್ಚಾದಾಗ ಬೋನಿನ ಮೂಲಕ ಅವುಗಳನ್ನು ಹಿಡಿದು ಗುಂಡು ಹೊಡೆದು ಬೇಟೆಗಾರರು ಕೊಲ್ಲುತ್ತಿದ್ದರು. ಕಾಡು ಹಂದಿಗಳ ಕಾಟ ಹೆಚ್ಚಾದಾಗ ಬಲೆ ಬೀಸಿ ಬೇಟೆನಾಯಿಗಳನ್ನು ಛೂ ಬಿಟ್ಟು ಜೀವ ಸಹಿತ ಅವುಗಳನ್ನು ಹಿಡಿದು ತಂದು ಕೊಂದು ಆಲೆಯ ಒಲೆಯಂಥ ಒಲೆಯಲ್ಲಿ ಹಾಕಿ ಬೇಯಿಸಿ ಅವುಗಳ ಮಾಂಸವನ್ನು ರೈತರು ಹಂಚಿಕೊಂಡು ತಿನ್ನುತ್ತಿದ್ದರು. ಮೊಲ, ನರಿ, ಕಾಡುಕೋಣ, ಸೀಳು ನಾಯಿ, ಕರಡಿ, ಮಂಗ, ಬುಕ್ಕ, ತೋಳ, ಜಿಂಕೆ ಮುಂತಾದ ಕಾಡು ಪ್ರಾಣಿಗಳು ಆ ಕಾಡಿನಲ್ಲಿ ನೆಲೆಸಿದ್ದವು. ಹಳೆಯ

ಮೈಸೂರಿನ ೮ ಜಿಲ್ಲೆಗಳಲ್ಲಿ ಒಂದಾದ ಶಿವಮೊಗ್ಗದಲ್ಲಿ ಸೊರಬ ತಾಲೂಕಿನ ಗ್ರಾಮವಾದ ಅಂಡಿಗೆ ಅದರ ಊರು ಮತ್ತು ಕಾಡು ಸೇರಿತ್ತು. ಇಂದು ಕಂಡವ ನಾಳೆ ಕಾಣದಾಗುತ್ತಿದ್ದ ಎಂಬಷ್ಟು ತೀವ್ರ ಮಲೇರಿಯಾ ಜ್ವರ ಜನರನ್ನು ಕಾಡುತ್ತಿತ್ತು. ಸುಮಾರು ನೂರು ಹಿಂದು ಮನೆಗಳೂ ಐವತ್ತು ಮುಸಲ್ಮಾನ ಮನೆಗಳೂ ಅಂಡಿಗೆಯಲ್ಲಿದ್ದವು. ಗ್ರಾಮದೇವತೆ ಹನುಮಂತ, ಮತ್ತೊಂದು ದೇವತೆ ವೀರಭದ್ರ, ಹನುಮಂತ ದೇವರ ಪೂಜೆಯನ್ನು ನನ್ನ ತಂದೆಯವರು ಮಾಡುತ್ತಿದ್ದರು. ವೀರಭದ್ರ ದೇವರ ಪೂಜೆಗೆ ಲಿಂಗಾಯತ ಪೂಜಾರಿಯೊಬ್ಬನಿದ್ದನು. ಪುಟ್ಟ ಜೋಯಿಸರು, ಶಾನುಭೋಗರು, ಗುರುಬಸಪ್ಪ ಗೌಡರು ಪಟೇಲರು. ಬತ್ತ–ಕಬ್ಬು–ನವ ಧಾನ್ಯಗಳ ಬೆಳೆ ಆ ಪ್ರದೇಶದಲ್ಲಿ ಸರ್ವ ಸಾಧಾರಣ. ಫಲವತ್ತಾದ ಭೂಮಿ, ನೀರು ತುಂಬಿದ ದೊಡ್ಡ ಕೆರೆ ಇವುಗಳ ದೆಸೆಯಿಂದ ಕಬ್ಬು–ಭತ್ತಗಳನ್ನು ರೈತರು ಬೇಕಾದಷ್ಟು ಚೆನ್ನಾಗಿ ಬೆಳೆಯುತ್ತಿದ್ದರು.

ನನ್ನ ತಂದೆಯವರು ನೋಡಿಕೊಳ್ಳುತ್ತಿದ್ದ ಆನಂದರಾಯರ ಜಮೀನು ಅಂಡಿಗೆ, ಉರಗನಹಳ್ಳಿ ಮತ್ತು ಎಲೆವಳ್ಳಿಗಳಲ್ಲಿ ಹಂಚಿ ಹೋಗಿತ್ತು. ಉರಗನ ಹಳ್ಳಿ ಇಡೀ ರಾಯರ ಜಮೀನೆಂದರೆ ಅತಿಶಯೋಕ್ತಿ ಆಗದು. ಉರಗನ ಹಳ್ಳಿಯಲ್ಲಿ ಎಲೆವಳ್ಳಿಯಲ್ಲಿ ಮತ್ತು ಅಂಡಿಗೆ ಮನೆಯಲ್ಲಿ ಹೀಗೆ ಮೂರು ದೊಡ್ಡ ದೊಡ್ಡ ಭತ್ತದ ಕಣಜಗಳಿದ್ದವು. ವಸೂಲಾದ ಭತ್ತವನ್ನು ಆ ಮೂರು ಸ್ಥಳಗಳಲ್ಲಿದ್ದ ಕಣಜಗಳಲ್ಲಿ ಅಥವಾ ಪಣತಗಳಲ್ಲಿ ತುಂಬಿಸಿ ಇಡಲಾಗುತ್ತಿತ್ತು. ಅಂತಹ ಮಲೆನಾಡಿನಲ್ಲಿದ್ದರೂ ಮಣ್ಣು ಗೋಡೆಗಳ ಪಣತಗಳಲ್ಲಿ ತುಂಬಿ ಬೀಗ ಹಾಕಿಟ್ಟ ಭತ್ತ ಕೆಡುತ್ತಿರಲಿಲ್ಲ. ಮಳೆಗಾಲದಲ್ಲಿ ಆ ಪಣತಗಳಿಂದ ನಮಗೂ ನಮ್ಮ ರೈತರಿಗೂ ಬೇಕಾದ ಪ್ರಕಾರ ಭತ್ತವನ್ನು ಅಳೆದು ತೆಗೆಯುತ್ತಿದ್ದೆವು. ಸುಗ್ಗಿಯ ಕಾಲದಲ್ಲಿ ಗದ್ದೆಯ ಕಣದಿಂದಲೇ ಮಾರಬೇಕಾದ ಭತ್ತವನ್ನು ಎತ್ತಿನ ಗಾಡಿಗಳಲ್ಲಿ ಸೊರಬ ಶಿರಾಳಕೊಪ್ಪಗಳಿಗೆ ಒಯ್ದು ಮಾರಿ ಉಳಿದಿದ್ದನ್ನು ಮಾತ್ರ ಪಣತಗಳಲ್ಲಿ ಬಳಕೆಗೆಂದು ಇಡಲಾಗುತ್ತಿತ್ತು. ರಾಯರ ಆಗಮನ ಮೂರು ಆರು ತಿಂಗಳಿಗೊಮ್ಮೆ. ಸುಗ್ಗಿಯ ವಸೂಲಿ ಕಾಲದಲ್ಲಿ ಒಂದು ತಿಂಗಳ ಕಾಲ ನಮ್ಮಲ್ಲಿ ಬಂದು ಇರುತ್ತಿದ್ದರು. ಅದು ಮೂರು ನೆಲೆಗಳ ಭದ್ರವಾದ ಹಂಚಿನ ಮನೆ.

ಮಳೆಗಾಲದ ಆರಂಭವಾಗುವುದು ಆಲಿಕಲ್ಲುಗಳನ್ನು ಸುರಿಯುವ ಒಂದೆರಡು ಜೋರಾದ ಮಳೆಗಳಿಂದ. ವೇದದ ಋಷಿಗಳು ಇಲ್ಲಿ ಕುಳಿತೇ ಪರ್ಜನ್ಯ ಸೂತ್ರಗಳನ್ನು ಬರೆದರೋ ಏನೋ ಎಂದು ನಮಗೆ ತೋರುತ್ತಿತ್ತು.

"ಪ್ರವಾತಾ ವಾಂತಿ ಪತಯಂತಿ ವಿದ್ಯುತಃ
ಉದೋಷಧೀರ್ಜಿಹತೇ ಪಿನ್ವತೇ ಸ್ವಃ"

ಎಂಬುದು ನಾಲ್ಕೈದು ತಿಂಗಳ ನಿತ್ಯಾನುಭವ. ಕೆರೆ, ಗದ್ದೆ, ಕಾಲುವೆ, ಚರಂಡಿ, ಹೊಂಡ, ಗುಂಡಿಗಳೆಲ್ಲವೂ ತುಂಬಿ ಹರಿಯುತ್ತಿದ್ದವು. ಊರ ಒಳಗೂ ಹೊರಗೂ

ಎಲ್ಲೆಲ್ಲೂ ಮರ–ಗಿಡ ಬಳ್ಳಿಗಳು ಮತ್ತು ಹುಲ್ಲು, ಕರಡ, ಮಟ್ಟಿಗಳು! ಅದು ನಿಜವಾಗಿ ನಿಸರ್ಗದ ಹಸಿರು ಕ್ರಾಂತಿ. ಕಾಲೂರಿತು ಮಳೆ, ತುಳುಕಿತು ಹೊಳೆ, ಮುಗಿಲನು ಮುಟ್ಟಿತು ಮರಗಳ ಬೆಳೆ, ಜಲಚರ, ತಲಚರ ತರುಚರ ಗಣಗಳ ಹಬ್ಬ ಹುಣ್ಣಿಮೆಗೆ ಬರಲು ಕಳೆ! ಎಂಬುದು ಕಾಡೂರ ಹಾಡು. ಅಥವಾ ಸಾಳ್ವ ಭಾರತ ವರ್ಣಿಸಿರುವಂತೆ

"ಮೀರಿ ಮುನಿಅದಿರೆರೇ ಶಿಖಿ ಹರುಷವೇರೆ ನಸೆ
ಯೇರೆ ಕುಂದವ್ರಜಕೆ ಕಡದಲರ ಸಿರಿಯ ಸೋರಿ
ಪೇರೆ ಕವಿ ರುಚಿ ತಣ್ಣನೇರೆ ಕೇತಕಿವನಂ
ಸುಳಿಯೇರೆ ಭಯವಂಚೆಗೆ
ಎರೆಗಲುವೆಣ್ಣಂಗ ಭವನ ನಿಡುದೋಳ್ದಲೆಯ
ನೇರೆ ವಿರಹಿ ವ್ರಾತಕಳಿವೇರೆ ಪೊಲಸಿ ಪಸು
ರೇರೆ ಸುರ ಹೊನ್ನೆ ಮಲ್ಲಿಗೆ ಸುರಯಿ ಬೇತಸಿರಿ
ಯರೇ ಕಾರ್ಮುಕವೇರಿತ್ತೈ"

ಅಥವಾ ಮಂಗರಸನು "ಜಯನೃಪ ಕಾವ್ಯದಲ್ಲಿ" ಹೇಳಿರುವಂತೆ––

"ಎರಲೆಯ ಬೀಡೆಕ್ಕಲನ ಕೊಟಾರಂ
ಕರಡಿಯ ಹಟ್ಟಿ ಕಡವೆಯೂರ್ ಚಮರಿಯ
ಹುರಮೆಂಟಡಿಯ ಹೊಳಲ್ ಕಾಟಿಯ ಕೊಟ್ಟಂ ಖಳ್ಗಿಯ ಪಳ್ಳಿ
ಅರಸು ಮಿಗದ ಪಟ್ಟಣ ಮಾನೆಯ ಮಟ
ಮೆಲರುಣಿಗಳ ನೆಲೆಯವನೆಯೆನಲತಿ ಬಂ
ಧುರ ಮಾದುದು ಭೀಮಾರಣ್ಯಮಗಣ್ಯ ಮೃಗಾಳಿ ಶರಣ್ಯಂ"

ಈ ಕವಿಗಳು ಅಂಡಿಗೆಯ ಕಾಡಿನಲ್ಲಿ ತಪಸ್ಸು ಮಾಡಿ ಹೋಗಿದ್ದರೇನೋ ಅನಿಸುತ್ತಿತ್ತು. ಹಲಸು ಮಾವುಗಳು ಊರ ತುಂಬ ಇದ್ದವು. ಕಸೆಯಲ್ಲದ ಕಾಡು ಮಾವಿನ ಜಾತಿಗಳು ಇಪ್ಪತ್ತು ಮೂವತ್ತು ಇದ್ದವು. ನಾನು ನನ್ನ ಅಂಡಿಗೆ ಗೆಳೆಯರೊಡನೆ ವಸಂತ ಕಾಲದಲ್ಲಿ ಮತ್ತು ಗ್ರೀಷ್ಮ ಕಾಲದಲ್ಲಿ ಊರು ಕಾಡುಗಳನ್ನು ಸುತ್ತುತ್ತಿದ್ದಾಗ–

ಗಿಣಿಮಾವು, ಕೆಂಡ ಮಾವು, ಉತ್ತುತ್ತಿ ಮಾವು, ಮೊಲೆ ಮಾವು, ಜೀರಿಗೆ ಮಾವು, ಕರಿ ಮಾವು, ಜೇನು ಮಾವು, ಬಾಳೆ ಮಾವು, ಮಿಡಿ ಮಾವು, ಅಪ್ಪೆ ಮಾವು, ಸೀಕರಣೆ ಮಾವು, ಹುಲಿ ಮಾವು, ಹೋರಿ ಮಾವು, ಹುಳಿ ಮಾವು, ಮುಂತಾದ ಹೆಸರುಳ್ಳ ಮಾವಿನ ಮರಗಳ ಪರಿಚಯ ನನಗೆ ದೊರಕಿತ್ತು. ಹಾಗೇ ಹಲಸಿನ ಮರಗಳ ಜಾತಿಗಳೂ ಅನೇಕ. ಒಂದು ಹಲಸಿನ ಮರ ವಟವೃಕ್ಷದಂತೆ ಬೆಳೆದು ಬೇರಿನಿಂದ ಟೊಂಗೆಗಳವರೆಗೂ ೨೦೦೦ ಕಾಯಿಗಳನ್ನು ಬಿಡುತ್ತಿತ್ತು.

ರೈತನೊಬ್ಬ ಅದರ ಕಾಯಿಗಳನ್ನು ಕೊಯ್ದು ತಂದು ವಾರಕ್ಕೊಮ್ಮೆ ಎತ್ತಿನ ಗಾಡಿಯ ಮೇಲೆ ಹೇರಿಕೊಂಡು ಹೋಗಿ ಎರಡು ತಿಂಗಳ ವರೆಗೆ ಮಾರುತ್ತಿದ್ದದ್ದನ್ನು ನೋಡಿದೆ. ಮುಳ್ಳು ಹಣ್ಣು, ಕಾರೇ ಹಣ್ಣು, ಕವಳಿ ಹಣ್ಣು, ಗೇರು ಹಣ್ಣು, ಪೇರಳೆ ಹಣ್ಣು, ಸೀತಾಪೇರಲೆ ಹಣ್ಣು, ಮಾವಿನ ಹಣ್ಣು, ಹಲಸಿನ ಹಣ್ಣು, ಸೇರಲಿ ಹಣ್ಣು, ಚಳ್ಳೆ ಹಣ್ಣು, ಜಾವೆ ಹಣ್ಣು, ಕರಿ ಮಡಕೆ ಹಣ್ಣು, ಜಿಳಲು ಹಣ್ಣು, ರಂಜಲು ಹಣ್ಣು, ಜೋರೆ ಹಣ್ಣು ಅಲ್ಲದೆ ಬಿದಿರಿನ ಕಳಲೆಗಳನ್ನು ಗೋಣಿಚೀಲಗಳಲ್ಲಿ ತುಂಬಿಕೊಂಡು ಮನೆಗೆ ಬರುತ್ತಿದ್ದೆವು. ನೆಲಂ ಬೆಸಲಿಯಾದುದೆಂಬಂತಿತ್ತು. ಆ ಪ್ರದೇಶದ ಗ್ರಾಮಗಳಿಗೆ ನಿಸರ್ಗ ಪ್ರತಿವರ್ಷವು ಕೊಡುತ್ತಿದ್ದ ಫಲಗಾಣಿಕೆ ಕಾಡುಗೆಣಸಿನ ಗಡ್ಡೆ ಇಷ್ಟಲ್ಲದೆ ಕುಮರಿಗಡ್ಡೆ ಮೊದಲಾದ ವಿವಿಧ ಗಡ್ಡೆಗಳನ್ನು ತಂದು ಅಡಿಗೆ ಮಾಡಿಸಿ ಊಟ ಮಾಡುತ್ತಿದ್ದೆವು.

ಅಂಡಿಗೆ ಚಳಿಗಾಲವು ಉಗ್ರ, ಬೆಳಿಗ್ಗೆ ಹತ್ತು ಗಂಟೆಯಾದರೂ ಚಳಿ ಹೋಗುತ್ತಿರಲಿಲ್ಲ. ಮಲೆನಾಡಿನಂತೆ ಅದು ಚಳಿ ನಾಡು ಆದಂತಿತ್ತು. ಬೆಳಿಗ್ಗೆ ಬೇಗ ಏಳುವುದು ಅಲ್ಲಿ ದುಷ್ಕರ. ರಸ್ತೆಯ ಎಡ ಬಲಗಳಲ್ಲಿ ದೊಡ್ಡ ದೊಡ್ಡ ಕುಳಿಗಳ ಅಗ್ಗಿಷ್ಟಿಕೆ ಮಾಡಿಕೊಂಡು ಜನರು ಮೈ ಕೈ ಕಾಯಿಸಿಕೊಳ್ಳುತ್ತ ಕುಳಿತುಕೊಳ್ಳುತ್ತಿದ್ದರು.

ಅಂಡಿಗೆಯಲ್ಲಿ ಹನುಮಂತ ದೇವಸ್ಥಾನದ ಹತ್ತಿರ ಒಂದು ಗರಡಿಯ ಮನೆಯಿತ್ತು. ಅದಕ್ಕೆ ಹಿಂದು ಮುಸಲ್ಮಾನ ತರುಣರೆಲ್ಲರು ಬರುತ್ತಿದ್ದರು. ಅದರ ಮಂತ್ರ "ಅಹುದನ ಮೌಲಾಲಿ, ಅಖಿಲ್ ಹನುಮಾನ್, ಜೈ ಭೀಮಸೇನ್". ಗುರು ಹಿಂದು. ಕಾಚ ಕಟ್ಟಿಕೊಂಡು ನಾನು ಕೆಮ್ಮಣ್ಣು ಬಳಿದುಕೊಂಡು ಕುಸ್ತಿ ಕಲಿಯಲು ಹೋಗಿದ್ದೆ. ಗರಡಿಯು ಹಿಂದು ಮುಸಲ್ಮಾನ್ ಭಾವೈಕ್ಯದ ಸಂಕೇತವಾಗಿತ್ತು. ಶಿರಾಳಕೊಪ್ಪದಿಂದ ಮುಸಲ್ಮಾನರು ಆಗೀಗ ಪ್ರೇರಣೆ ಪಡೆಯುತ್ತಿದ್ದರು. ಗರಡಿ ಹಿರಿಯರು ಹೇಳಿದ ಕೂಡಲೇ ಗಲಾಟೆಯನ್ನು ಮಾಡುವ ಪ್ರಯತ್ನವನ್ನು ಮುಸಲ್ಮಾನ ತರುಣರು ಬಿಟ್ಟು ಬಿಡುತ್ತಿದ್ದರು.

ಹಳ್ಳಿಯ ಸೇವಕನಾದ ರಾಜಾ ಸಾಹೇಬನು ಈಡುಗಾರ. ಹನುಮಂತ ದೇವರ ವಾರ್ಷಿಕೋತ್ಸವದಲ್ಲಿ ಪಾಲಿಕೆಯನ್ನೇರಿ ಹನುಮಂತ ದೇವರು ಊರ ಹೊರಗೆ ಒಂದು ಮೈಲು ದೂರದ ಮಾರಿಗುಡಿ ಎದುರಿನ ಕಾಡಿನೊಳಗಿನ ಬೀಡಿಕೆಯಲ್ಲಿ ಇಳಿದ ಕೂಡಲೇ ಆ ಉತ್ಸವ ಮೂರ್ತಿಯ ಎದುರು ಅರ್ಧ ಫರ್ಲಾಂಗಿನಲ್ಲಿ ಒಂದು ಬೆಣಚುಕಲ್ಲಿನ ಮೇಲೆ ತೆಂಗಿನ ಕಾಯಿಯನ್ನು ಪದ್ಧತಿಯಂತೆ ಪೂಜಕರಾದ ನನ್ನ ತಂದೆ ಇಟ್ಟ ಕೂಡಲೇ ಅರ್ಧ ಫರ್ಲಾಂಗು ದೂರದಿಂದ ಕೋವಿ ಹಿಡಿದು ರಾಜಾ ಸಾಹೇಬನು ಗುಂಡಿನಿಂದ ಅದನ್ನು ಒಡೆದು ಬಿಡುತ್ತಿದ್ದ. ಆಗ ಅವನಿಗೆ ನನ್ನ ತಂದೆ ಹರಿವಾಣದಲ್ಲಿ ತೆಂಗಿನಕಾಯಿ, ಬಾಳೆಹಣ್ಣು, ಹೂ ಮಂತ್ರಾಕ್ಷತೆಗಳನ್ನು ಕೊಟ್ಟು ಗೌರವಿಸುವುದು ಪ್ರತಿವರ್ಷದ ರೂಢಿ. ಹಾಗೇ ವೀರಭದ್ರ ಹನುಮಂತ ದೇವರುಗಳ ಭಕ್ತ ವರ್ಗದವರೆಲ್ಲರೂ ಉಭಯ ದೇವತೆಗಳಿಗೂ ಪಾಲಿಕೋತ್ಸವದಲ್ಲಿ ಹಣ್ಣು ಕಾಯಿ

ಆರತಿ ಮಾಡುತ್ತಿದ್ದರು. ಹಳ್ಳಿಯ ಹಬ್ಬದಲ್ಲಿ ಅಗ್ರಪೂಜೆ ನನ್ನ ತಂದೆಯರಿಗೆ ಅಥವಾ ನನಗೆ ಸಲ್ಲುವುದು ಪ್ರತಿವರ್ಷದ ಅಲಾಬಿ ಹಬ್ಬದ ನಿಯಮ. ಹನುಮಂತ ದೇವರ ಗುಡಿಯ ಕಾರ್ತೀಕದ ಪಂಚಕಜ್ಜಾಯ ಪ್ರಸಾದವನ್ನು ಮುಸಲ್ಮಾನ ತರುಣರು ಸ್ವೀಕರಿಸುತ್ತಿದ್ದರು. ಅವರಲ್ಲಿಯ ಒಬ್ಬ ತರುಣ ಒಂದು ದಿನ ಸ್ನಾನ ಮಾಡಿ ನನ್ನ ತಂದೆಯ ಮನೆಯಿಂದ ಹನುಮಂತ ದೇವರ ಗುಡಿಗೆ ಪೂಜೆಗೆಂದು ಹೋಗುತ್ತಿದ್ದಾಗ ನಾನಾಸಾಹೇಬನು ಮುಟ್ಟುತ್ತೇನೆಂದು ಅಡ್ಡಗಟ್ಟಿದನು. ಸೆಳಕೆ ತೆಗೆದು ನನ್ನ ತಂದೆ ಅವನಿಗೆ ಎರಡು ಏಟುಕೊಟ್ಟರು. ಅವನು ಓಡಿ ಹೋಗಿ ತನ್ನ ತಂದೆ ಕರಡಿ ಇಮಾಂ ಸಾಹೇಬನಿಗೆ ದೂರು ಕೊಟ್ಟ. ಅವನು ಬಂದು ನಮ್ಮ ಮನೆಯ ಎದುರು ನಿಂತು ಗದರಿಸಿದನು. ಆಗ ನಮ್ಮ ಚಾವಡಿಯಲ್ಲಿ ಪಂಚಾಯತರು ಸಭೆ ಸೇರಿ ಇಮಾಂ ಸಾಹೇಬನು ತಪ್ಪೊಪ್ಪಿಕೊಂಡ ಮೇಲೆ ಅವನಿಂದ ಒಂದು ರೂಪಾಯಿಯನ್ನು ಹನುಮಂತ ದೇವರಿಗೆ ಕಾಣಿಕೆಯನ್ನಾಗಿ ಪಡೆದರು. ಅದರಿಂದ ಉರ್ದು ಬಾರದ ಕಚ್ಚೆ ಪಂಚೆ ಉಡುವ ಆ ಮುಸಲ್ಮಾನನೂ ಅವನ ಬಳಗದವರೂ ಆದದ್ದು ಸರಿ ಎಂದು ಮನೆಗೆ ಮರಳಿದರು. ಈ ಉದಾಹರಣೆ ಭಾರತಕ್ಕೆ ಅನುಕರಣೀಯ.

ರಸದಾಳಿ ಕಬ್ಬುಗಳನ್ನೇ ಹೆಚ್ಚಾಗಿ ಬೆಳೆಯುತ್ತಿದ್ದ ಅಂಡಿಗೆ, ಮಾವಲಿ, ಉರಗನಹಳ್ಳಿ, ಎಲೆವಳಿಗಳಲ್ಲಿ ಆಲೆಯ ಮನೆಯಲ್ಲಿ ಅಚ್ಚಿನ ಬೆಲ್ಲವನ್ನು ಮೂರು ತಿಂಗಳುಗಟ್ಟಲೆ ಮಾಡುತ್ತಿದ್ದರು. ಅಲ್ಲಿ ಆ ರೈತರು ಮಾಡುವ ಅತಿಥಿ ಸತ್ಕಾರದಲ್ಲಿ ಕಬ್ಬು, ಅಂಟುಗೋಲು, ಹರಿವಾಣದಲ್ಲಿ ಬೆಲ್ಲದಲ್ಲಿ ಅದ್ದಿ ತೆಗೆದ ಗೇರುಹಣ್ಣು, ಕಬ್ಬಿನ ಹಾಲು, ಹೊಸ ಬೆಲ್ಲದ ಜಿಗುಟುಗಳು ಸೇರಿರುತ್ತಿದ್ದವು. ನನ್ನ ಎರಡನೆಯ ಮತ್ತು ಮೂರನೆಯ ತಂಗಿಯರಾದ ಸುಶೀಲೆ– ರಮೆಯರು ಅಂಡಿಗೆಯಲ್ಲಿಯೇ ಹುಟ್ಟಿದವರು. ಸುಶೀಲೆ ಮನೆ ಬಾಗಿಲಲ್ಲಿ ನಿಂತು ಎದುರಿನ ರಸ್ತೆಯಲ್ಲಿ ಹಾಯ್ದು ಹೋಗುವ ಕಬ್ಬಿನ ಗಾಡಿಯೊಂದರಿಂದ ೩–೪ ಕಬ್ಬುಗಳನ್ನು ಕಾಣಿಕೆಯಾಗಿ ಆ ರೈತ ಬಾಂಧವರಿಂದ ಪಡೆಯುತ್ತಿದ್ದುದರಿಂದ ಅವಳನ್ನು ಅವರು ತಮಾಷೆಯಿಂದ ಸುಶೀಲಮ್ಮ ಅಲ್ಲ, ಇವರ ಹೆಸರು ವಸೂಲಮ್ಮ ಎಂದು ಕರೆದು ಸಂತೋಷಪಡುತ್ತಿದ್ದರು. ಹಾಗೆ ವಸೂಲಾದ ಕಬ್ಬಿನ ರಾಶಿಯಿಂದ ನಾನೂ ನನ್ನ ತಂದೆಯವರೂ ೧ ಯಾ ೨ ಡಬ್ಬಿಯಷ್ಟು ಸಕ್ಕರೆಯಂತ ಬೆಲ್ಲವನ್ನು ಆಲೆಮನೆಗೆ ಹೋಗಿ ಪ್ರತಿ ವರ್ಷವೂ ಮಾಡಿಸಿಕೊಂಡು ಬರುತ್ತಿದ್ದೆವು. ಆನಂದರಾಯರು ನಮಗೆ ಇಡೀ ವರ್ಷದಲ್ಲಿ ಕೊಡುತ್ತಿದ್ದುದು ೨೦ ಚೀಲ ಭತ್ತ ಮತ್ತು ೧೫೦ ರೂಪಾಯಿಗಳನ್ನು. ಉರುವಲು, ಹುಲ್ಲು ಹೊಂಬಣ್ಣದ ಕಾಳು ಮುಂತಾದುವುಗಳನ್ನು ಹನುಮಂತ ದೇವರ ಕಾಣಿಕೆಯೆಂದು ಪ್ರತಿಯೊಬ್ಬ ರೈತನೂ ಸ್ವಲ್ಪ – ಅಂದರೆ ೨–೩ ಸೇರುಗಳನ್ನು – ಆಯಾ ಸುಗ್ಗಿಯಲ್ಲಿ ತಂದು ಕೊಟ್ಟು ಹೋಗುತ್ತಿದ್ದನು. ನಾನು ನನ್ನ ತಂದೆ, ನನ್ನ ತಾಯಿ ಮತ್ತು ನನ್ನ ಮೂವರು ತಂಗಿಯರಿದ್ದ ಕುಟುಂಬದ ೬ ಜನರು ಅದರಿಂದ ಜೀವನ ನಡೆಸುತ್ತಿದ್ದೆವು. ಶ್ರೀನಿವಾಸನೆಂಬ ತಮ್ಮನು ಹುಟ್ಟಿ ೩ ವರ್ಷಗಳ ಕಾಲ ಬದುಕಿದ್ದು ಅನಂತರ ಅಜ್ಞಾತವಾದ ವಿಚಿತ್ರ ಕಾಯಿಲೆ ಹಿಡಿದು

ಸತ್ತುಹೋದನು. ಅವನಿಗೆ ಬಾಳೆಯ ಹಣ್ಣು ಬಹಳ ಪ್ರೀತಿಯ ವಸ್ತುವಾಗಿತ್ತೆಂದು ತಿಳಿದ ನನ್ನ ತಾಯಿ ಅವನು ದಿವಂಗತನಾದ ಮೇಲೆ ಬಾಳೆಯ ಹಣ್ಣು ತಿನ್ನುವುದನ್ನು ಬಿಟ್ಟುಬಿಟ್ಟಳು.

ಅಂಡಿಗೆ ಊರಿನಲ್ಲಿ ನಮ್ಮ ಮನೆ – ಅದರೆದುರು ಪುಟ್ಟ ಜೋಯಿಸರ ಮನೆ – ಈ ಎರಡೇ ಹೊರಗಿನ ಅತಿಥಿಗಳಿಗೆ ಉಳಿದು ಹೋಗುವ ಸ್ಥಳಗಳಾಗಿದ್ದವು. ಜೋಯಿಸರ ಮನೆಗೆ ಹೋಗುವ ಅತಿಥಿಗಳು ಅವರ ನೆಂಟರಿಷ್ಟರು ಮಾತ್ರ. ನಮ್ಮ ಮನೆಗೆ ಸೊರಬ – ಶಿರಾಳಕೊಪ್ಪ – ಸಾಗರ – ಶಿವಮೊಗ್ಗಗಳ ಕೆಲ ವಿದ್ಯಾರ್ಥಿಗಳೂ ಸರಕಾರಿ ನೌಕರರೂ ಯಾವಾಗಲೂ ಬಂದು ಹೋಗುತ್ತಿದ್ದರು. ಹಾಗೆ ಬಂದು ಹೋಗುತ್ತಿದ್ದವರಲ್ಲಿ ಸೊರಬದ ಅಮಲ್ದಾರರಲ್ಲಿ ಒಬ್ಬರಾಗಿದ್ದ ರಾಜಶೇಖರ ಒಡೆಯರೆಂಬುವರು ನನ್ನ ಹಾಗೂ ನನ್ನ ತಂದೆ ತಾಯಂದಿರ ಹೆಚ್ಚಿನ ಆದರಕ್ಕೆ ಪಾತ್ರರಾಗಿದ್ದರು. ಆ ರಾಜಶೇಖರ ಒಡೆಯರ ಹೆಸರನ್ನೀಗ ನನ್ನ ಚಿರಂಜೀವಿ ರಾಜಶೇಖರ ಹೆಬ್ಬಾರನು ನೆನಪು ಮಾಡುತ್ತಿದ್ದಾನೆ.

ಹಳೇ ಮೈಸೂರಿನಲ್ಲಿ ಅಂದು (ಕ್ರಿ.ಶ. ೧೯೩೦–೪೨ರ ಅವಧಿಯಲ್ಲಿ) ಸರಕಾರಿ ನೌಕರರು ಗ್ರಾಮ ಪ್ರದೇಶಗಳಿಗೆ ಕುದುರೆ ಸವಾರಿಯಿಂದಲೇ ಹೋಗುತ್ತಿದ್ದರು. ಕಾರುಗಳ ಬಳಕೆ ಆಗ ಕಡಿಮೆ. ಯಾವುದಾದರೂ ಕುದುರೆಯನ್ನೇರಿ ಒಬ್ಬರು ಊರ ಆಗಸೇ ಬಾಗಿಲಿನಲ್ಲಿ ಕಾಣಿಸಿಕೊಂಡರೆಂದರೆ ಸಾಕು – ಅವರು ಸೇಕದಾರರೋ, ಅಮಲ್ದಾರರೋ, ಸಬ್ ಇನ್ಸ್‌ಪೆಕ್ಟರರೋ, ಆಗಿರುವುದು, ಅವರು ನಮ್ಮ ಚಾವಡಿಗೆ ಬಂದು ಸೇರುವುದೂ ನಮಗೆ ಖಾತ್ರಿಯಾಗಿ ಬಿಡುತ್ತಿತ್ತು. ನಮ್ಮ ಚಾವಡಿಯೇ ಅವರ ಆಫೀಸು. ರೈತರೂ ಇತರರೂ ಅವರನ್ನು ಭೇಟಿ ಮಾಡುವುದು ಹಗಲು ೧೦ ಗಂಟೆಯಿಂದ ರಾತ್ರಿ ೮ ಗಂಟೆಯವರೆಗೆ. ಒಂದು ದಿನ ನಾನು ನನ್ನ ತಂದೆಯವರ ಜೊತೆಗೆ ಎತ್ತಿನ ಗಾಡಿಯಲ್ಲಿ ಕಟ್ಟಿಗೆ ತುಂಡುಗಳನ್ನು ಕಡಿದು ಕಾಡಿನಿಂದ ತರುವಾಗ ಒಂದು ಗಂಧದ ಮರದ ಹಳೆಯ ಬೊಡ್ಡೆಯನ್ನು ತಂದಿದ್ದೆ. ಅದನ್ನು ಬಚ್ಚಲಿನ ಒಲೆಗೆ ಸ್ನಾನಕ್ಕೆ ನೀರು ಕಾಯಿಸಲೆಂದು ಹಾಕಿದ್ದೆ, ಅದೇ ದಿನ ಅಮಲ್ದಾರರು ಬಂದರು. ನಮ್ಮ ಮನೆಯಲ್ಲಿ ಉಳಿದರು. ಗಂಧದ ಹೊಗೆ ಬರುತ್ತಿದ್ದ ಬಚ್ಚಲು ಮನೆಯಲ್ಲಿಯೇ ಸ್ನಾನ ಮಾಡಿದರು. ಅವರೆಲ್ಲಾದರೂ ಗಂಧದ ತುಂಡನ್ನು ಅನಧಿಕೃತವಾಗಿ ನಾನು ತಂದದ್ದು ಅಪರಾಧವೆಂದು ಹೇಳುವರೇನೋ ಎಂದು ಸ್ವಲ್ಪ ಭಯ ಉಂಟಾಯಿತು. ಆದರೆ ಅವರು ಅತ್ತ ಲಕ್ಷ್ಯ ವಹಿಸಲೇ ಇಲ್ಲ. ನಾನು ಪಾರಾದೆನೆಂದುಕೊಂಡೆನು. ಆಗ ನಮ್ಮ ಮೇಷ್ಟ್ರು ಹೇಳಿಕೊಟ್ಟಿದ್ದ–

ಅತಿ ಪರಿಚಯಾದವಜ್ಞಾ
ಸಂತತ ಗಮನಾದನಾದರೋಭವತಿ
ಮಲಯೇ ಭಿಲ್ಲ ಪುರಂಧ್ರೀ
ಚಂದನ ತರುಕಾಷ್ಠಮಿಂಧನಂ ಕುರುತೇ

ಎಂಬ ಸುಭಾಷಿತ ನೆನಪಾಯಿತು. ನನ್ನಷ್ಟಕ್ಕೆ ನಾನು ನಕ್ಕು ಬಿಟ್ಟೆ.

ಸೊರಬದ ಮಿಡ್ಲ್‌ಸ್ಕೂಲಿನಲ್ಲಿ ಮೂರು ವರ್ಗಗಳಲ್ಲಿ ಓದುತ್ತಿದ್ದುದನ್ನು ಹೇಳಿದೆನಷ್ಟೇ. ಆ ಪುಟ್ಟ ಪಟ್ಟಣವನ್ನು ಮರೆಯಲು ಸಾಧ್ಯವಾಗದು. ನಾಡಿಗ ಲಕ್ಷ್ಮಣರಾಯರ ಮನೆಯಲ್ಲಿದ್ದಾಗ ಶಕುನಹಳ್ಳಿಯ ದಾಸು ಎಂಬ ವಿದ್ಯಾರ್ಥಿಯೂ ನನ್ನ ಜೊತೆಗಿದ್ದ. ಅವನೊಂದು ದಿನ ಹಿತ್ತಲ ಕಡೆಯ ಕಾಡಿನಿಂದ ಹೊರಗೆ ಬಂದಿದ್ದ ಹುಲಿಯ ಮರಿಯೊಂದನ್ನು ರಾತ್ರಿಯಲ್ಲಿ ಹಿಡಿದು ತಂದು ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದನ್ನು ಬೆಳಗಿನ ಜಾವದಲ್ಲಿ ಆ ಚಿಕ್ಕಮರಿಯ ತಾಯಿಯಾದ ಪಟ್ಟೆ ಬಾರಿ ಹುಲಿಯು ಕೊಟ್ಟಿಗೆಯ ಬಾಗಿಲು ಹೊರಗೆ ಬಂದು ಜೋರಾಗಿ ಆರ್ಭಟಿಸತೊಡಗಿತು. ಅದರಿಂದ ಎಚ್ಚೆತ್ತ ಲಕ್ಷ್ಮಣರಾಯರು ಆಳು ಕೆರೆಯನನ್ನು ಎಬ್ಬಿಸಿ ನೋಡಿಕೊಂಡು ಬರಲು ಹೇಳಿದರು. ಅವನು ಕಟ್ಟಿ ಹಾಕಿದ ಹುಲಿಯ ಮರಿಯ ಬಗ್ಗೆ ವರದಿಯನ್ನು ಒಪ್ಪಿಸಿದನು. ದಾಸುನನ್ನು ನಾಡಿಗರು ಕರೆದು ಕೇಳಿದಾಗ ಹೆದರುತ್ತಾ ಅವನು ತಾನು ತಂದು ಕಟ್ಟಿ ಹಾಕಿದುದನ್ನು ಅವರಿಗೆ ತಿಳಿಸಿದನು. ಅನಂತರ ಅವರ ಆಜ್ಞಾನುಸಾರ ಕೆರೆಯನು ಆ ಹುಲಿಯ ಮರಿಯನ್ನು ಬಿಡಿಸಿ ತೆಗೆದುಕೊಂಡು ಹೋಗಿ ಕಿಟಕಿಯ ಮೂಲಕ ಹೊರಗೆ ಬಿಟ್ಟನು. ಆಗ ದನಕರುಗಳ ಭಯಗ್ರಸ್ಥ ಕೂಗು ಕಡಿಮೆಯಾಯಿತು. ಲಕ್ಷ್ಮಣರಾಯರೂ ನಾನೂ ಇತರರೂ ಉಶ್ಯೆಂದು ಮತ್ತೆ ಮಲಗಿಕೊಂಡು ಅನಂತರ ಎದ್ದೆವು.

ಒಂದು ಶನಿವಾರ ಸಂಜೆ ನಾನು ಸೊರಬದಿಂದ ಅಂಡಿಗೆಗೆ ಮರಳುತ್ತಿದ್ದಾಗ ಕೆರೆ–ಕಾಡುಗಳ ಸನಿಹದ ಬೂರುಗದ ಮರವೊಂದರ ಕೆಳಗೆ ನಿಮಿಷಕ್ಕೊಮ್ಮೆ ಗರ್ಜಿಸುತ್ತಾ ಹುಲಿಯೊಂದು ನಿಂತಿತ್ತು. ನಾನು ನನ್ನ ತಂದೆಯವರು ಹೇಳಿಕೊಟ್ಟ ಪ್ರಕಾರ "ಹುಯ್ಯೋ ಹುಯ್ಯೋ" ಎಂದು ಕೂಗಿದೆನು. ೧೫ ನಿಮಿಷಗಳ ಕಾಲ ನಿಮಿಷ – ಎರಡು ನಿಮಿಷಗಳಿಗೊಮ್ಮೆ ರಸ್ತೆಯ ಮೇಲೆ ನಿಂತ ನಾನು ಕೂಗಿದ ಮೇಲೆ ರಸ್ತೆಯ ಅಂಚಿನ ಆ ಮರದ ಕೆಳಗೆ ನಿಂತಿದ್ದ ಹುಲಿಯು ಕಾಡನ್ನು ಹೊಕ್ಕು ಕಾಣದಾಯಿತು. ಅನಂತರ ನಾನು ೧ ಮೈಲು ನಡೆದು ಮನೆಗೆ ಮರಳಿದೆ. ನನಗೇನೂ ಅಪಘಾತವಾಗಲಿಲ್ಲವೆಂದು ನನ್ನ ಮಾತಾಪಿತೃಗಳು ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಿದರು.

ಸೊರಬದ ನಾಡಿಗ ಲಕ್ಷ್ಮಣರಾಯರ ಮನೆಯಲ್ಲಿ ಮೊದಲನೆಯ ಎರಡು ವರ್ಷ ಇದ್ದು ಅನಂತರ ಎದುರು ಸಾಲಿನಲ್ಲಿದ್ದ ಹೊಸಬಾಳೆ ಹೆಗಡೆಯವರ ಮನೆಯ ಅಟ್ಟದಲ್ಲಿ ಉಳಿಯಲು ನಮ್ಮ ತಂದೆಯವರು ಏರ್ಪಾಡು ಮಾಡಿದರು. ಅದು ವಿಶಾಲವಾದ ಮಹಡಿ. ಅದರ ಮಧ್ಯದಲ್ಲಿ ಗುಡಿಗಾರಿಕೆಗೆ ಹೆಸರಾದ ಹಿರಣ್ಣಪ್ಪನು ಹೊಸಬಾಳೆ ಸಹೋದರರಾದ ಪುಟ್ಟಪ್ಪ, ಸುಬ್ರಾಯಪ್ಪ ಮತ್ತು ಶೇಷಗಿರಿಯಪ್ಪನವರ ಆಜ್ಞಾನುಸಾರ ರಾಮಚಂದ್ರಾಪುರ ಮಠಾಧೀಶರಿಗೆ ಅರ್ಪಿಸಲೆಂದು ಒಂದು ದಂತಖಚಿತವಾದ ಬಂಗಾರದ ತಗಡನ್ನು ಬಡಿದ ಸಿಂಹಾಸನವನ್ನು ಮಾಡುತ್ತಿದ್ದನು.

ಅದು ಕ್ರಿ.ಶ. ೧೯೩೧ನೇಯ ಇಸವಿಯಾಗಿತ್ತು. ಪ್ರತಿದಿನ ಸಂಜೆ ಹಿರಣ್ಣಪ್ಪನು ಆ ಅಟ್ಟಕ್ಕೆ ಬಂದು ಕೈ ಚಳಕದ ತನ್ನ ಕೆಲಸವನ್ನು ಮಾಡಿಹೋಗುತ್ತಿದ್ದನು. ಸಿಂಹಾಸನದ ಸುತ್ತಲೂ ಚಿನ್ನದ ತಗಡು, ಅದರ ಮೇಲೆ ಮಹಾಭಾರತ–ರಾಮಾಯಣಗಳ ವಿವಿಧ ದೃಶ್ಯಗಳನ್ನು ಕೊರೆದ ಹಸ್ತಿದಂತದ ಬೊಂಬೆಗಳ ಚಾಕಗಳನ್ನು ಅಳವಡಿಸಲಾಗುತ್ತಿತ್ತು. ಅದರ ಮೇಲೆ ಕುಳಿತುಕೊಂಡವನಿಗೆ ಬೆಳ್ಳಿಯ ಕೊಡೆ ಮಾಡಿಸಲು ಯೋಜಿಸಲಾಗಿತ್ತು. ಅದಿನ್ನೂ ಪೂರ್ಣವಾಗಿಲ್ಲ. ಆಗ ಶಾಲೆಯಿಂದ ನಾನು ತಿರುಗಿ ಬಂದು ಸಂಜೆ ಸುಮಾರು ೬ ಗಂಟೆಯ ಹೊತ್ತಿಗೆ ನನಗೊಬ್ಬನಿಗೇ ಮೀಸಲಾಗಿದ್ದ ಆ ದೊಡ್ಡ ಉಪ್ಪರಿಗೆಯ ನಡುವೆ ಒಂದೇ ಒಂದಾಗಿ ನಿಂತಿದ್ದ ಸಿಂಹಾಸನವನ್ನು ಕುತೂಹಲಕ್ಕಾಗಿ ಹತ್ತಿ ಕುಳಿತೆ. ಕೈಯಲ್ಲಿ ಫುಟಬಾಲೊಂದನ್ನು ಹಿಡಿದುಕೊಂಡಿದ್ದೆ. ಆ ವೇಳೆಗೆ ಅಕಸ್ಮಾತ್ತಾಗಿ ಸುಬ್ರಾಯ ಹೆಗ್ಗಡೆ ಅವರು ಅಟ್ಟದ ಮೆಟ್ಟಿಲನ್ನು ಹತ್ತಿ ಬರುತ್ತಾ ಸಿಂಹಾಸನಾರೂಢನಾದ ನನ್ನನ್ನು ನೋಡಿ ನಕ್ಕು "ಏನೋ ಶ್ರೀಧರ, ಸ್ವಾಮಿಗಳ ಜಾಗದಲ್ಲಿ ನೀನು ಕುಳಿತುಬಿಟ್ಟೆಯಾ" ಎಂದು ಕೇಳಿದರು. ೧೩ ವರ್ಷ ವಯಸ್ಸಿನ ನನಗೆ ಆಗ ನನ್ನ ತಪ್ಪು ಗೊತ್ತಾಗಿ "ಹೆಗ್ಗಡೆಯವರೇ ನಾನು ತಿಳಿಯದೇ ಹೀಗೆ ಮಾಡಿದೆ, ತಪ್ಪಾಯಿತು, ಕ್ಷಮಿಸಿ" – ಎಂದು ದೀನಧ್ವನಿಯಿಂದ ಹೆದರುತ್ತಾ ಹೇಳಿದೆ. "ಏನೂ ಆಗಲಿಲ್ಲಾ ಮಾರಾಯ, ಹೆದರಿಕೊಳ್ಳಬೇಡ" ಎಂದು ದಯಾಳುಗಳಾದ ಸುಬ್ರಾಯ ಹೆಗ್ಗಡೆಯವರು ಹೇಳಿದ ಮೇಲೆ ಸಿಂಹಾಸನದಿಂದ ಇಳಿದು ನನ್ನ ಓದು ಮೇಜಿನತ್ತ ಹೊರಳಿ ಹೋದೆನು. ಅದು ೧೮ ಲಕ್ಷ ರೂಪಾಯಿ ಬೆಲೆಯ ಸಿಂಹಾಸನವಾಗಿ ಮುಂದೆ ಮೈಸೂರು ದಸರೆಯಲ್ಲಿ ಪ್ರದರ್ಶನಕ್ಕೆ ಇಡಲಾಯಿತು. ಅದೀಗ ತೀರ್ಥಹಳ್ಳಿಯ ರಾಮಚಂದ್ರಾಪುರ ಮಠದಲ್ಲಿದೆ.

ಮಿಡಲ್‌ಸ್ಕೂಲಿನಲ್ಲಿ ಹೆಡ್‌ಮಾಸ್ಟರ್ ದತ್ತೋಬ ರಾಯರು ಗಣಿತದ ಮೇಷ್ಟ್ರುಗಳಾಗಿದ್ದ ಮಂಗಳಮೂರ್ತಿ ರಾಯರು, ಇಂಗ್ಲೀಷನ್ನು ಕಲಿಸುತ್ತಿದ್ದ ಶೇಷಗಿರಿರಾಯರು, ಕನ್ನಡದ ಒವಜರಾಗಿದ್ದ ಅನವಟ್ಟಿ ಸೀತಾರಾಮ ರಾಯರು ಮತ್ತು ಕೃಷ್ಣಯ್ಯನವರು ನನ್ನನ್ನು ಹೆಚ್ಚಿನ ವಾತ್ಸಲ್ಯದಿಂದ ನೋಡಿಕೊಳ್ಳುತ್ತಿದ್ದರು. ನಾನು ಕ್ರಿಕೆಟ್ ಕ್ಯಾಪ್ಟನ್ ಗಿರಿಯನ್ನು ಬಿಟ್ಟದ್ದು ಶೇಷಗಿರಿರಾಯರು ಒಂದು ಕ್ರಿಕೆಟ್ ಪಂದ್ಯದಲ್ಲಿ ತಲೆಗೆ ಪೆಟ್ಟು ಮಾಡಿಕೊಂಡಿದ್ದನ್ನು ನೋಡಿದ ಆನಂತರ, ಅಂದಿನಿಂದ ನಾನು ಫುಟ್‌ಬಾಲ್ ಕ್ಯಾಪ್ಟನ್ನನಾದೆನು.

ಶಾಲೆಯಲ್ಲಿ ಪ್ರತಿಯೊಬ್ಬ ಉಪಾಧ್ಯಾಯರೂ ವಿದ್ಯಾರ್ಥಿಗಳ ಬಗ್ಗೆ ವೈಯಕ್ತಿಕ ಲಕ್ಷ್ಯವನ್ನು ಹಾಕುತ್ತಿದ್ದರು. ಅವರು ಆಟ–ಪಾಠ–ನಾಟಕ–ನೃತ್ಯ ಮುಂತಾದ ಸ್ಪರ್ಧೆಗಳಿಗೆ ತರಬೇತು ಮಾಡುತ್ತಿದ್ದರು. ಶಾಲೆಯ ಒಂದು ವಾರ್ಷಿಕೋತ್ಸವದ ರಾತ್ರಿಯಲ್ಲಿ ದಿ.ಎಂ.ಆರ್.ಶ್ರೀನಿವಾಸ ಮೂರ್ತಿಯವರು ಬರೆದ ವಿದ್ಯಾರಣ್ಯ ನಾಟಕದಲ್ಲಿ ನಾನು ವಿದ್ಯಾರಣ್ಯರ ಪಾತ್ರವನ್ನು ವಹಿಸಿ ಅಭಿನಯಿಸಿ ಉಪಾಧ್ಯಾಯರ ಮೆಚ್ಚುಗೆಯನ್ನು ಪಡೆದೆ. ಅದೇ ನಾನು ಭಾಗವಹಿಸಿದ ಮೊದಲ ನಾಟಕ. ಅದಾದ ಮೇಲೆ ನನಗೆ

ಯುರೋಪಿಯನ್ ಲೇಡಿಯ ವೇಷ ಹಾಕಿ ನೃತ್ಯ ಮಾಡಿಸಿದರು. ಅದೂ ತೃಪ್ತಿಕರವಾಗಿ ನಡೆಯಿತು. ಓದಿನಲ್ಲಿ ಇಂಗ್ಲೀಷು ವ್ಯಾಕರಣವನ್ನು ಕನ್ನಡ ಷಟ್ಪದಿಗಳನ್ನು ನಾನು ಬಾಯಿಪಾಠ ಮಾಡಿದ್ದು. ಅದರಿಂದಲೂ ನಾನು ಉಪಾಧ್ಯಾಯರಿಗೆ ಬೇಕಾದವನಾದೆ. ವೈಯಕ್ತಿಕ ಸಲಿಗೆಯ ದೆಸೆಯಿಂದ ಹಬ್ಬಹುಣ್ಣಿಮೆ ದಿನಗಳಲ್ಲಿ ಉಪಾಧ್ಯಾಯರು ನನ್ನನ್ನು ತಮ್ಮ ಮನೆಗೆ ಊಟಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಬುದ್ಧಿವಾದಗಳನ್ನು ಹೇಳುತ್ತಿದ್ದರು, ಪಾಠದ ಕಠಿನಾಂಶಗಳನ್ನು ವಿವರಿಸಿ ಹೇಳಿಕೊಡುತ್ತಿದ್ದರು.

ಒಂದು ಸಲ ರಜೆ ಬಂದಾಗ ಮಂಗಳಮೂರ್ತಿರಾಯರೂ ಧರ್ಮಪತ್ನಿಯವರೂ ನನ್ನನ್ನು ಕೆಳದಿಗೆ ಕರೆದುಕೊಂಡು ಹೋದರು. ಮಂಗಳಮೂರ್ತಿ ರಾಯರ ಮಾವನ ಮನೆ ಕೆಳದಿಯಲ್ಲಿತ್ತು. ಕೆಳದಿಯು ಸಾಗರದಿಂದ ೫ ಮೈಲು ದೂರದಲ್ಲಿರುವ ಒಂದು ಐತಿಹಾಸಿಕ ಹಳ್ಳಿ. ಅಲ್ಲಿಯ ರಾಮೇಶ್ವರ ದೇವಸ್ಥಾನವು ಪ್ರಸಿದ್ಧ. ಅದರ ಮೇಲ್ಛಾವಣಿಯಲ್ಲಿ ಕಲ್ಲಿನ ಗಂಡಭೇರುಂಡದ ಮೂರ್ತಿಯನ್ನು ಕೊರೆಯಲಾಗಿತ್ತು. ಮುಖಮಂಟಪದ ಒಂದು ಕಲ್ಲು ಹಲಗೆಯನ್ನು ಬಡಿದಲ್ಲಿ ಜಾಗಟೆಯನ್ನು ಬಾರಿಸಿದಂತೆ ಅದು ದನಿಗೂಡುತ್ತಿತ್ತು. ಕಿವಿ ಹಿಂಡಿ ಗಣಿತ ಕಲಿಸುತ್ತಿದ್ದ ಮಂಗಳಮೂರ್ತಿರಾಯರ ವಾತ್ಸಲ್ಯವು ಅವರ ಪತ್ನೀರೂಪದಲ್ಲಿ ಅವತರಿಸಿತ್ತು. ಗುರುಪತ್ನಿ ನನ್ನನ್ನು ತನ್ನ ಮಗನೆಂದೇ ಭಾವಿಸುತ್ತಿದ್ದುದರಿಂದ ಕೆಳದಿಯ ಅವರ ಮನೆಗೆ ನಾನು ಹೋದ ಆ ದಿನ ಬೆಳಿಗ್ಗೆ ನನ್ನ ಮೈಗೆಲ್ಲಾ ಕೈಯೆಣ್ಣೆ ಬಳಿದು, ತಲೆಗೂ ಹಾಕಿ ತಿಕ್ಕಿ, ಮಲೆನಾಡಿನ ಪದ್ಧತಿಯ ಪ್ರಕಾರ, ದೊಡ್ಡ ತಾಮ್ರದ ಹಂಡೆಯಲ್ಲಿ ಕಾಸಿದ್ದ ನೀರನ್ನು ಆ ಮನೆಯಲ್ಲಿರುವಷ್ಟು ದೊಡ್ಡದಾದ ತಾಮ್ರದ ಬಾನಿನಲ್ಲಿ ತುಂಬಿ, ಅದರಲ್ಲಿ ಕೌಪೀನ ಧಾರಿಯಾದ ನನ್ನನ್ನು ರಟ್ಟೆ ಹಿಡಿದು ಒಳಗೆ ಇಳಿಸಿದರು. ಆ ಕುದಿ ನೀರಿನಲ್ಲಿ ನಾನು ಬೆವತು ಹೋದೆ. "ನೀರೊಳಗಿರ್ದುಂ ಬೆಮರ್ದನುರಗ ಪತಾಕಂ" ಎಂಬ ಸ್ಥಿತಿ ನನ್ನದಾಯಿತು. ಆದರೆ ವೈಶಂಪಾಯನ ಸರೋವರದಲ್ಲಿದ್ದ ನೀರು ಕಾದಿರಲಿಲ್ಲ, ಕುದಿಯುತ್ತಿರಲಿಲ್ಲ. ಆದ್ದರಿಂದ ಕೌರವನಿಗೆ ನನ್ನ ಹಾಗೆ ಕೂಗಿಕೊಳ್ಳುವ ಅಗತ್ಯವುಂಟಾಗಿರಲಿಲ್ಲ. ನಾನು ಕೂಗಿಕೊಂಡ ಮೇಲೆ ಹೇಗೋ ಅಂತೂ ಕರುಣೆಯಿಂದ ಅವರು ನನ್ನನ್ನು ರಟ್ಟೆ ಹಿಡಿದು ಮೇಲಕ್ಕೆ ಎತ್ತಿದರು. ಬದುಕಿತು ಬಡಜೀವ. ಅದೊಂದು ಮರೆಯಲಾರದ ನೆನಪಾಯಿತು.

ಅಂಡಿಗೆಯಿಂದ ಸೊರಬದ ಸಂತೆಗೆ ಪ್ರತಿವಾರವೂ ಎಂಬಂತೆ ನನ್ನ ತಂದೆಯವರು ಬರುತ್ತಿದ್ದರು. ಆಗ ಹೊಸಬಾಳೆ ಹೆಗ್ಗಡೆಯವರ ಜವಳಿ ಅಂಗಡಿಯನ್ನು ಆ ಮೂವರಲ್ಲಿ ಹಿರಿಯ ಸಹೋದರರಾಗಿದ್ದ ಪುಟ್ಟಪ್ಪನವರು ನೋಡಿಕೊಳ್ಳುತ್ತಿದ್ದರು. ಪುಟ್ಟಪ್ಪನವರು ಯಕ್ಷಗಾನ ಪ್ರಿಯರು ಆದುದರಿಂದ ನನ್ನ ತಂದೆಯವರಿಂದ ಯಕ್ಷಗಾನದ ಪದ್ಯಗಳ ಬಗೆಗೆ ಬೇಕಾದ ವಿಶೇಷ ಮಾಹಿತಿಗಳನ್ನು ಪಡೆಯುತ್ತಿದ್ದರು. ಅಂಡಿಗೆಯಲ್ಲಿಯೂ ಭಟ್ಟರೆನ್ನಿಸಿದ್ದ ಸೀತಾರಾಮ ಹೆಬ್ಬಾರರು ಆನಂದ ರಾಯರಾದಿಯಾಗಿ ಎಲ್ಲ ಯಕ್ಷಗಾನ ಪ್ರಿಯರಿಗೂ ಆಗಾಗ ಯಕ್ಷಗಾನ ಪದ್ಯಗಳನ್ನು ಹಾಡಿ ತೋರಿಸುತ್ತಿದ್ದರು. ನನಗೆ

ಹಿರಿಯಣ್ಣ ಹೆಬ್ಬಾರರಿಂದಲೂ ತಂದೆಯವರಿಂದಲೂ ಸಾಕಷ್ಟು ಯಕ್ಷಗಾನ ಸಂಸ್ಕಾರ ದೊರಕಿತ್ತು.

ಆಮೇಲೆ ಆನಂದರಾಯರ ಇಷ್ಟದ ಪ್ರಕಾರ ನಾನು ಸೊರಬವನ್ನು ಬಿಟ್ಟು ಸಾಗರದ ಮಿಡಲ್ ಸ್ಕೂಲನ್ನು ಸೇರಿದೆ. ಅಂಡಿಗೆಯಿಂದ ಸಾಗರಕ್ಕೆ ೨೩ ಮೈಲು ದೂರ. ಆದುದರಿಂದ ವಾರಕ್ಕೊಮ್ಮೆ ಮನೆಗೆ ಬರುತ್ತಿದ್ದ ೧೪ ವರ್ಷ ವಯಸ್ಸಿನ ನನಗೆ ಮೊದಲು ಸ್ವಲ್ಪ ಬೇಸರವೆನ್ನಿಸಿತು. ಆದರೂ ಲೋಯರ್ ಸೆಕಂಡರಿ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾದೆನು. ವರ್ಷಕ್ಕೆ ಎರಡು ದೊಡ್ಡ ರಜೆಗಳಿರುತ್ತಿದ್ದವು. ಆಗ ಮಾತ್ರ ನಾನು ಸಾಗರದಿಂದ ಅಂಡಿಗೆಗೆ ಹೋಗುತ್ತಿದ್ದೆ.

ನಗರದಲ್ಲಿ ಮುನಸಿಪಲ್ ಹೈಸ್ಕೂಲನ್ನು ಸೇರಿದ ಮೇಲೆ ಅದರ ಮುಖ್ಯೋಪಾಧ್ಯಾಯರಾಗಿದ್ದ ಬಿ.ಎಸ್.ಭಾರದ್ವಾಜರೂ ಸಂಸ್ಕೃತ ಶಿಕ್ಷಕರಾಗಿದ್ದ ಅಳಸಿಂಗಳಾಚಾರ್ಯರೂ ನನ್ನ ಓದಿನ ಬಗೆಗೆ ಹೆಚ್ಚು ಆಸಕ್ತಿ ವಹಿಸಿ ಮಾರ್ಗದರ್ಶನ ಮಾಡುತ್ತಿದ್ದರು. ಹಾಗೇ ಡ್ರಾಯಿಂಗ್ ಶಿಕ್ಷಕರಾಗಿದ್ದ ಸುಬ್ರಹ್ಮಣ್ಯಾಚಾರ್ಯರು ಮಂಗಳಮೂರ್ತಿರಾಯರ ಭಾವಂದಿರಾಗಿದ್ದ ಅನಂತರಾಯರೂ ನನ್ನನ್ನು ಆಗಾಗ ವಿಚಾರಿಸಿ ನನ್ನ ಮೇಲೆ ವಾತ್ಸಲ್ಯ ತೋರುತ್ತಿದ್ದರು. ಹೈಸ್ಕೂಲಿನ ಪಠ್ಯೇತರ ಚಟುವಟಿಕೆಗಳಲ್ಲಿಯೂ ನಾನು ಎಂದಿನಂತೆ ಭಾಗವಹಿಸುತ್ತಿದ್ದೆ. ಎಸ್.ಎಸ್.ಎಲ್.ಸಿ. ವರ್ಗಕ್ಕೆ ಸೇರಿದ್ದಾಗ ನನಗೆ ಟೈಫಾಯ್ಡ್ ಜ್ವರ ಬಂದು ಬಹಳ ನರಳಿದೆ. ಮೂರು ದಿನ ಮೂರ್ಛೆ ಹೋಗಿದ್ದೆ. ಅಂತೂ ಅಂಡಿಗೆಗೆ ಹೋಗಿ ಆರೈಕೆ ಮುಗಿಸಿಕೊಂಡು ಮೂರು ತಿಂಗಳ ಮೇಲೆ ತಿರುಗಿ ಬಂದು ಹೈಸ್ಕೂಲಿಗೆ ಹೋಗಿ ಶಿವಮೊಗ್ಗ ಕೇಂದ್ರದಲ್ಲಿ ಕುಳಿತು ಹೇಗೋ ಅಂತೂ ಪರೀಕ್ಷೆಯಲ್ಲಿ ಪಾಸಾದೆನು. ಪಾಸಾದ ಮೇಲೆ ಏನು ಮಾಡಬೇಕೆಂಬುದನ್ನು ತಿಳಿಯದೆ ಕುಳಿತಿದ್ದಾಗ ಆನಂದರಾಯರು ತಾವು ೧೨ ರೂಪಾಯಿಗಳನ್ನು ಕೊಡುವೆನೆಂದೂ ತಂದೆಯವರಿಂದ ೧೩ ರೂಪಾಯಿಗಳನ್ನು ತೆಗೆದುಕೋ ಎಂದು ಆ ೨೫ ರೂಪಾಯಿಗಳೊಂದಿಗೆ ಮೈಸೂರಿಗೆ ಹೋಗಿ ಇಂಟರ್ ಮಿಡಿಯೆಟ್ ಕಾಲೇಜಿಗೆ ಸೇರು ಎಂದು ಹೇಳಿದರು.

ಮೈಸೂರಿಗೆ ಕೂಡಲೇ ಹೋಗಬೇಕು. ಒಂದು ದಿನ ತಡವಾದರೆ ನನಗೆ ಕಾಲೇಜಿನಲ್ಲಿ ಪ್ರವೇಶ ಸಿಕ್ಕದು ಎಂಬಂತಾಗಿದ್ದಾಗ, ಸಾಗರದ ಬಸ್‌ಸ್ಟಾಂಡಿಗೆ ಹೋದೆ. ಮಧ್ಯಾಹ್ನದ ೪ ಗಂಟೆಯ ಬಸ್ಸು ಆಗ ತಾನೇ ಅಂಡಿಗೆಯ ಮಾರ್ಗವಾಗಿ ಹೊರಟು ಹೋಗಿ ಬಿಟ್ಟಿತ್ತು. ಅದು ಕ್ರಿ.ಶ. ೧೯೨೬ನೇಯ ಇಸವಿಯ ಜೂನ್ ತಿಂಗಳಾಗಿತ್ತು. ಬಸ್ಸು ತಪ್ಪಿದ್ದು ಒಂದು ಅಪಶಕುನ ಎಂದೆನ್ನಿಸಿ ೨೩ ಮೈಲುಗಳನ್ನು ನಡೆದೇ ಹೋಗಲು ನಿರ್ಧರಿಸಿದೆ. ಹುಟ್ಟಿದಂದಿನಿಂದ ಆ ವರೆಗೆ ಅಂದರೆ ೧೮ನೆಯ ವಯಸ್ಸಾಗುವವರೆಗೆ ಅಷ್ಟು ದೂರ ನಡೆದುಹೋದ ಅನುಭವವೇ ನನಗಿರಲಿಲ್ಲ. ಆದರೂ ಕಣ್ಣು ಮುಚ್ಚಿಕೊಂಡು ನಿರ್ಧಾರಕ್ಕೆ ಬಂದು ನಡೆದೆ, ನಡೆದೆ, ನಡೆದೆ, ಹತ್ತು

ಮೈಲು ದೂರದಲ್ಲಿದ್ದ ಉಳವಿಗೆ ಹೋಗುವಷ್ಟರಲ್ಲಿ ಕತ್ತಲಾಗುವ ಹೆದರಿಕೆಯುಂಟಾಯಿತು. ಉಳವಿಯಲ್ಲಿ ಒಂದು ಬಿಲ್ಲೆಯನ್ನು ಕೊಟ್ಟು ಒಂದು ಬೆಂಕಿ ಪೆಟ್ಟಿಗೆಯನ್ನು ತೆಗೆದುಕೊಂಡೆನು. ರಾಜ ಮಾರ್ಗದಲ್ಲಿ ಹೋದರೆ ಅಂಡಿಗೆಗೆ ತಲುಪಲು ೧೩ ಮೈಲುಗಳಷ್ಟು ನಡೆಯಬೇಕು. ಅದರಿಂದ ತಪ್ಪಿಸಿಕೊಳ್ಳಬೇಕು – ೫ ಮೈಲಿನಷ್ಟು ದೂರವನ್ನು ಕಡಿಮೆ ಮಾಡಿಕೊಳ್ಳಬೇಕು ಎಂದು ಭಾವಿಸಿ, ಉಳವಿಯಿಂದ ಹೆಗ್ಗೋಡಿನ ಕಾಡನ್ನು ಹೊಕ್ಕೆನು. ಕತ್ತಲು ಕವಿದಿತು. ದಟ್ಟವಾದ ಕಾಡಿನ ಕಾಲುದಾರಿಯಲ್ಲಿ ನಡೆದೆ. ಅರ್ಥಾತ್ ಓಡಿದೆ. ಮೊಲ, ಮುಳ್ಳುಹಂದಿ, ಮಂಗ, ನರಿಗಳು ನನ್ನ ಓಟದ ಸದ್ದು ಕೇಳಿ ಅತ್ತಿತ್ತ ಓಡಿದಾಗ ಬೆಂಕಿ ಕಡ್ಡಿ ಕೆರೆದು ಒಂದು ಸಲ ಸುತ್ತ ಮುತ್ತಲೂ ನೋಡುತ್ತಿದ್ದೆ. ಮತ್ತೆ ಮುಂದೆ ಓಡುತ್ತಿದ್ದೆ. ಮರದ ಬೇರುಗಳು ಕಾಲಿಗಡ್ಡವಾದಾಗ ಹಾರಿದಾಟುತ್ತಿದ್ದೆ. ಅಂತೂ ರಾತ್ರಿ ಎಂಟು ಗಂಟೆಗೆ ನಾನು ಅಂಡಿಗೆ ತಲುಪಿ ಮಾತಾ ಪಿತೃಗಳ ಮುಖವನ್ನು ನೋಡಲು ಸಮರ್ಥನಾದೆ. ಆ ೮ ಮೈಲುಗಳನ್ನು ಕ್ರಮಿಸುತ್ತಿದ್ದಾಗ, ನನ್ನ ಮೇಲೆ ನನಗೆ ಪೂರ್ಣವಾಗಿ ಎಚ್ಚರವಿತ್ತೋ ಇಲ್ಲವೋ ನಾನೀಗ ಹೇಳಲಾರೆ. ಅಂತೂ ನನ್ನ ಪಾದಗಳ ಗಾಯಗಳಿಗೆ ನನ್ನ ತಾಯಿ ಎಣ್ಣೆ ಹಚ್ಚಿ ಊಟಕ್ಕೆ ಬಡಿಸಿ ಮಲಗಲು ಹೇಳಿದಳು. ಮಲಗಿದೆ. ಮಲಗಿದ್ದು ನೆನಪೇ ಇಲ್ಲ. ಬೆಳಿಗ್ಗೆ ತಂದೆಯವರಿಂದ ೧೩ ರೂಪಾಯಿಗಳನ್ನು ತೆಗೆದುಕೊಂಡು ದೇವರಿಗೂ ತಾಯ್ತಂದೆಯರಿಗೂ ನಮಸ್ಕಾರ ಮಾಡಿ ಬಸ್ಸು ಹತ್ತಿದೆ, ರಾತ್ರಿ ಮೈಸೂರನ್ನು ಸೇರಿದೆ.

ಮೈಸೂರನ್ನು ಮೊದಲು ನೋಡಿಯೇ ಇರಲಿಲ್ಲ. ಅಲ್ಲಿ ಶಿವಮೊಗ್ಗವನ್ನು ಬಿಟ್ಟು ಹೋದ ಬಡ ವ್ಯಾಪಾರಿಗಳಾದ ಸುಬ್ಬಯ್ಯನವರೊಬ್ಬರ ಅಲ್ಪ ಪರಿಚಯವಿತ್ತು. ಅವರ ಮನೆಯನ್ನು ಹೇಗೋ ಹುಡುಕಿಕೊಂಡು ಹೋದೆ. ಅವರಲ್ಲಿ ಉಳಿದೆ. ಮರುದಿನ ಕಾಲೇಜಿಗೆ ಸೇರಿದೆ. ಚರಿತ್ರೆ, ತರ್ಕ, ಸಂಸ್ಕೃತಗಳನ್ನು ಐಚ್ಛಿಕವಾಗಿ ತೆಗೆದುಕೊಂಡೆ. ಇಂಟರ್ ಮೀಡಿಯೆಟ್ ಅಂದರೆ ಇಂದಿನ ಯುವರಾಜ ಕಾಲೇಜಿನ ಸೂಪರಿಂಟೆಂಡೆಟ್ ಅವರ ದಯೆಯಿಂದ ಮತ್ತು ಸಂಸ್ಕೃತದಲ್ಲಿ ಹೆಚ್ಚಿನ ಗುಣ ಪಡೆದುದರಿಂದ ಶಿಷ್ಯ ವೇತನವನ್ನು ಪಡೆಯಬಹುದೆಂದೂ ಅದು ಕಾಲೇಜಿನ ಫೀಜಿಗೆ ಸಾಕಾಗುವಷ್ಟಾಗುವುದೆಂದೂ ತಿಳಿದುಕೊಂಡೆ. ಕೂಡಲೇ ಊಟಕ್ಕೆ ವಾರದ ಮನೆಗಳನ್ನು ಹುಡುಕಲಾರಂಭಿಸಿದೆ. ಕರ್ಮಧರ್ಮಸಂಯೋಗದಿಂದ ನನ್ನ ದೂರದ ಸಂಬಂಧಿಕರಾದ ಬಡಾಕೆರೆಯ ಕೃಷ್ಣ ಅಡಿಗರು ಸಿಕ್ಕಿದರು. ಅವರ ನೆರವಿನಿಂದ ಬುಧವಾರವೊಂದನ್ನು ಬಿಟ್ಟು ಮಿಕ್ಕ ಆರು ಮನೆಗಳು ಗೊತ್ತಾದವು. ಬುಧವಾರ ಮಾತ್ರ ಫಲಾಹಾರ. ಪಠ್ಯ ಪುಸ್ತಕವೊಂದೂ ಇಲ್ಲದೆ ಕೇವಲ ಸ್ನೇಹಿತರ ಮತ್ತು ಗ್ರಂಥಾಲಯದ ಪುಸ್ತಕಗಳ ಬಲದಿಂದ ೨ ವರ್ಷಗಳ ಇಂಟರ್‌ಮೀಡಿಯೆಟ್ ಪರೀಕ್ಷೆಯಲ್ಲಿ ಪಾಸಾದೆನು. ಪುನಃ ಸಂಸ್ಕೃತ ಮೇಜರ್ ಬಿ.ಎ. ಆನರ್ಸ್ ಎಂಬ ೩ ವರ್ಷದ ಪದವೀ ವರ್ಗವನ್ನು ಆಯ್ದುಕೊಂಡೆನು. ಅಷ್ಟು ಹೊತ್ತಿಗೆ ಕಾಲೇಜಿನಲ್ಲಿ ಹೆಚ್ಚಿನ ಮೊತ್ತದ್ದೆನ್ನಿಸಿದ ನವೀನಂ ರಾಮಾನುಜಾಚಾರ್ಯ ಸಂಸ್ಕೃತ ಶಿಷ್ಯವೇತನ ತಿಂಗಳಿಗೆ ೨೨ ರೂಪಾಯಿಗಳಂತೆಯೂ

ಸಬ್ಜೆಕ್ಟ್ ಸ್ಕಾಲರ್‌ಷಿಪ್ ತಿಂಗಳಿಗೆ ೫ ರೂಪಾಯಿಗಳಂತೆಯೂ ದೊರಕುವಂತಾಯಿತು. ಅದರಿಂದ ನನ್ನ ತಂದೆಯವರ ಕಷ್ಟ ಪರಿಹಾರಕ್ಕೆಂದು ತಿಂಗಳಿಗೆ ೧೫ ರೂಪಾಯಿಗಳನ್ನು ಕಳುಹಿಸಲು ಶಕ್ತನಾದೆ. ಅತೃಪ್ತಿಕರವಾದ ಬಾಡಿಗೆ ವಸತಿ ಸ್ಥಳಗಳಿಂದ ಮುಕ್ತಿ ದೊರೆತು ಪೋಲೀಸ್ ಇನ್ಸ್‌ಪೆಕ್ಟರ್ ಬಿ.ಎಸ್.ಸದಾಶಿವರಾಯರು ತಮ್ಮ ಮನೆಯಲ್ಲೇ ತಮ್ಮ ಮಕ್ಕಳಿಗೆ ಪಾಠ ಹೇಳಿಕೊಂಡಿರು ಎಂದು ಒಂದು ಒಳ್ಳೆಯ ಕೊಠಡಿಯನ್ನು ನನಗೆ ಕೊಟ್ಟರು. ಪ್ರಾಧ್ಯಾಪಕರ ವೈಯಕ್ತಿಕ ಪರಿಚಯವೂ ಹೆಚ್ಚುತ್ತ ಹೋಯಿತು. ಮತ್ತೊಂದೆರಡು ಕಡೆ ಖಾಸಗಿ ಪಾಠ ಹೇಳಿಯೂ ಹತ್ತಾರು ರೂಪಾಯಿಗಳನ್ನು ತಿಂಗಳಿಗೆ ಸಂಪಾದಿಸಲು ಕಲಿತೆ. ಆದರೆ ಬೆಳಿಗ್ಗೆ ೧೦ಕ್ಕೆ ಮನೆ ಬಿಟ್ಟು ಹೊರಟರೆ ಮನೆಗೆ ಹಿಂದಿರುಗುವುದು ರಾತ್ರಿ ಹತ್ತಕ್ಕೆ ಎಂಬುದು ನನ್ನ ದೈನಿಕ ಅವಶ್ಯಕತೆಯಾಯಿತು. ನಾಲ್ಕಾರು ಬೀದಿಗಳ ಮಕ್ಕಳ ದೃಷ್ಟಿಯಲ್ಲಿ ನಾನಾಗ ಟ್ಯೂಶನ್ ಹೇಳುವ ಮೇಷ್ಟ್ರಾದೆನು.

ನನ್ನ ಕಾಲೇಜು ಮೇಷ್ಟ್ರುಗಳಲ್ಲಿ ಸಿ.ಆರ್.ನರಸಿಂಹಶಾಸ್ತ್ರಿಗಳು ಎ.ಎನ್.ನರಸಿಂಹಯ್ಯನವರು, ಏ.ಆರ್.ಕೃಷ್ಣಶಾಸ್ತ್ರಿಗಳು, ಎಂ.ಎಚ್.ಕೃಷ್ಣರು, ಡಿ.ಎಲ್.ನರಸಿಂಹಾಚಾರ್ಯರು, ಎಸ್.ಶ್ರೀಕಂಠಶಾಸ್ತ್ರಿಗಳು; ಡಿ.ವಾಸುದೇವಾಚಾರ್ಯರು, ಕೆ.ವೆಂಕಟಪ್ಪನವರು, ನಾ.ಕಸ್ತೂರಿಗಳು, ಸತ್ಯಗಿರಿನಾಥನ್ನರು ಮತ್ತು ಜೆ.ಸಿ.ರಾಲೊ ಎಂಬುವರು ನನ್ನ ವಿದ್ಯೆ, ಶೀಲ, ಪುರೋಭಿವೃದ್ಧಿಗಳ ಬಗೆಗೆ ವಿಶೇಷ ಲಕ್ಷ್ಯ ಹಾಕಿದರು. ಆದುದರಿಂದ ಅವರೊಡನೆ ನಾನು ಕಳೆದ ಕಾಲ ಅಧಿಕ.

ಸಿ.ಆರ್.ನರಸಿಂಹ ಶಾಸ್ತ್ರಿಗಳು ಎ.ಆರ್.ಕೃಷ್ಣಶಾಸ್ತ್ರಿಗಳೂ ಮೈಸೂರಿನ ಸಂಸ್ಕೃತ ವಿದ್ವಾಂಸರ ಪರಂಪರೆಯ ದೊಡ್ಡ ಪ್ರತಿನಿಧಿಗಳು ಮತ್ತು ಅಸಾಧಾರಣ ಮೇಧಾವಿಗಳು. ನರಸಿಂಹ ಶಾಸ್ತ್ರಿಗಳು ಸಂಸ್ಕೃತದಲ್ಲೂ ಇಂಗ್ಲೀಷಿನಲ್ಲೂ ಫಸ್ಟ್‌ಕ್ಲಾಸ್ ಎಂ.ಎ. ಆಗಿದ್ದರು. ಸಂಸ್ಕೃತದ ಪ್ರಧಾನ ಆಚಾರ್ಯರೂ ಆಗಿದ್ದರು. ಕೃಷ್ಣಶಾಸ್ತ್ರಿಗಳು ಸಂಸ್ಕೃತ, ಕನ್ನಡ, ಬಂಗಾಳಿ ವಿದ್ವಾಂಸರಾಗಿದ್ದರು. ಕನ್ನಡದ ಪ್ರಧಾನ ಆಚಾರ್ಯರೂ ಆಗಿದ್ದರು. ಎ.ಎನ್.ನರಸಿಂಹಯ್ಯನವರು ಸಂಸ್ಕೃತದಲ್ಲಿ ಎಂ.ಎ. ಮತ್ತು ಲಂಡನ್ ಪಿ.ಎಚ್.ಡಿ., ಅವರು ಕಲಿಸುತ್ತಿದ್ದುದು ಭಾಷಾ ಶಾಸ್ತ್ರವನ್ನು. ಎಂ.ಎಚ್.ಕೃಷ್ಣರು ಚರಿತ್ರೆ ಮತ್ತು ಪ್ರಾಚ್ಯವಸ್ತು ಸಂಶೋಧನ ಶಾಖೆಗಳ ಮುಖ್ಯಸ್ಥರಾಗಿದ್ದರು. ಅವರು ಎಂ.ಎ. ಡಿ.ಲಿಟ್ ಪದವೀಧರರು. ಡಿ.ಎಚ್.ನರಸಿಂಹಾಚಾರ್ಯರೂ ತೀ.ನಂ.ಕಂಠಯ್ಯನವರೂ ಕನ್ನಡದ ಆಚಾರ್ಯರಾಗಿದ್ದರು. ಅವರದು ಉದ್ದಾಮ ಪಾಂಡಿತ್ಯ ಶ್ರೀಕಂಠಯ್ಯನವರು ಕನ್ನಡದಲ್ಲಲ್ಲದೇ ಇಂಗ್ಲೀಷ್‌ನಲ್ಲೂ ಫಸ್ಟ್‌ಕ್ಲಾಸ್ ಎಂ.ಎ. ಸಂಸ್ಕೃತ ತಜ್ಞರೂ ಆಗಿದ್ದರು. ನರಸಿಂಹಾಚಾರ್ಯರು ಚರಿತ್ರೆ, ಕಲೆ ಮುಂತಾದುವುಗಳಲ್ಲೂ ವಿಶೇಷ ಅಭ್ಯಾಸ ಮಾಡಿದ್ದವರಾಗಿದ್ದರು.

ಎಸ್.ಶ್ರೀಕಂಠಶಾಸ್ತ್ರಿಗಳೂ ಅಷ್ಟಾದಶಭಾಷಾ ಕೋವಿದರಾದ ಇತಿಹಾಸಾಚಾರ್ಯರು. ಅನೇಕ ಶಾಸ್ತ್ರಗಳನ್ನೋದಿದ ಘನ ವಿದ್ವಾಂಸರು. ಬಹಳ ಸರಳ ಜೀವಿಗಳು. ವಿದೇಶಗಳಲ್ಲಿ ಅವರ ಕೀರ್ತಿ, ಸ್ವದೇಶದಲ್ಲಿ ಅಷ್ಟಕ್ಕಷ್ಟೇ. ಆದರೆ ಶಿಷ್ಯವಾತ್ಸಲ್ಯ ಬಹಳ.

ಡಿ.ವಾಸುದೇವಾಚಾರ್ಯರು ದರ್ಶನಾಚಾರ್ಯರು. ಮಡಿ ಎಷ್ಟಿತ್ತೋ ಅಷ್ಟೇ ನಿಶಿತ ಮತಿತ್ವ ಮತ್ತು ಲಘು ಹಾಸ್ಯಪ್ರವೃತ್ತಿ ಅವರಲ್ಲಿತ್ತು. ಘನ ವಿದ್ವಾಂಸರೂ ತರ್ಕಶಾಸ್ತ್ರ ಕೋವಿದರೂ ಆಗಿದ್ದರು. ಕೆ.ವೆಂಕಟರಾಮಪ್ಪನವರು ಕನ್ನಡದೊವಜರು, ಗಂಭೀರ ಪ್ರವೃತ್ತಿಯುವರು. ಸತ್ಯ ಗಿರಿನಾಥನ್ನರೂ ಹಾಗೇ. ಸತ್ಯಗಿರಿನಾಥನ್ನರು ನಾ.ಕಸ್ತೂರಿಯವರಂತೆಯೇ ಚರಿತ್ರೆಯ ಪ್ರಾಧ್ಯಾಪಕರು.

ಜೆ.ಸಿ.ರಾಲೋ ಮಹಾರಾಜ ಪದವಿ ಕಾಲೇಜಿನ ಪ್ರಿನ್ಸಿಪಾಲರು. ಮೂಲತಃ ಸ್ಕಾಟ್ಲ್ಯಾಂಡಿನವರು. ವಿದ್ವಾಂಸರೂ ಸಜ್ಜನರೂ ಆಗಿದ್ದ ಅವರಿಗೆ ಶಿಷ್ಯ ವಾತ್ಸಲ್ಯ ಬಹಳ. ಅವರು ಇಂಗ್ಲೀಷ್ ಕಲಿಸುತ್ತಿದ್ದರು. ಕಾಲೇಜಿನಲ್ಲಿ ಶಿಸ್ತು ಕಾಯ್ದುಕೊಂಡಿದ್ದರೂ ಉಗ್ರ ನರಸಿಂಹರೆನ್ನಿಸಿರಲಿಲ್ಲ.

ಕಾಲೇಜಿನಲ್ಲಿ ಹೆಚ್ಚಾಗಿ ಭಾಷಾ ಪ್ರಾಧ್ಯಾಪಕರ ಒಗ್ಗಟ್ಟು ಆದರ್ಶ ಸ್ವರೂಪದ್ದಾಗಿತ್ತು. ಇಂಗ್ಲೀಷ್, ಕನ್ನಡ, ಸಂಸ್ಕೃತ, ಉರ್ದು, ಭಾಷೆಗಳ ಪ್ರಾಧ್ಯಾಪಕರದೇ ಒಂದು ಬಳಗವಾಗಿತ್ತು. ಕಸ್ತೂರಿಯವರು ಎಲ್ಲ ಬಳಗಗಳಲ್ಲೂ ಇದ್ದವರು. ಅವರ ಪರಿಹಾಸ ವಿಜಲ್ಪನಗಳು ಸುಪ್ರಸಿದ್ಧ. ಆದರೆ ಆ ಶಕ್ತಿಯು ನರಸಿಂಹ ಶಾಸ್ತ್ರಿಗಳಲ್ಲಿದ್ದದ್ದು ಅಷ್ಟು ಪ್ರಸಿದ್ಧವಾಗಿಲ್ಲ.

ನಾನು ಜೂನಿಯರ್ ಬಿ.ಎ. ಆನರ್ಸ್ ಮೊದಲನೆಯ ವರ್ಷದಲ್ಲಿ ಓದುತ್ತಿದ್ದಾಗ ಜಯಚಾಮರಾಜ ಒಡೆಯರು ಸೀನಿಯರ್ ಬಿ.ಎ.ಕ್ಲಾಸಿನಲ್ಲಿ ಓದುತ್ತಿದ್ದರು. ಅವರು ತಮ್ಮ ಸರಳತನ ಮತ್ತು ಪಾಂಡಿತ್ಯಗಳಿಂದ ಮೇಷ್ಟ್ರುಗಳಿಗೂ ಸಹಪಾಠಿಗಳಿಗೂ ಬಹಳ ಬೇಕಾದವರಾಗಿದ್ದರು. ಡಿ.ಜವರೇಗೌಡರು ನನ್ನ ಕ್ಲಾಸ್‌ಮೇಟ್, ಅವರು ಆ ವರ್ಷ ೧೯೩೮ರಲ್ಲಿ ಕಲಿಯಲಾರಂಭಿಸಿದ್ದು ಕನ್ನಡ ಮೇಜರ್ ಬಿ.ಎ. ಆನರ್ಸ್ ಕ್ಲಾಸಿನಲ್ಲಿ.

ಮಹಾರಾಜಾ ಕಾಲೇಜು ಅಂದು ಒಂದು ಮಂಗಳದ ಅಂಗಳವಾಗಿತ್ತು. ಅದರ ಭವಂತಿಯಲ್ಲಿ ಒಂದು ದೊಡ್ಡ ಮರ. ಕಾರ್ಯಕ್ರಮಗಳಾಗುವುದೆಲ್ಲಾ ಅದರ ಕೆಳಗಡೆ ಇರುವ ವೇದಿಕೆಯಲ್ಲಿ. ಅಂದು ಆ ಮರದ ತುಂಬಾ ಸಂಜೆಯ ಹೊತ್ತಿನಲ್ಲಿ ವಿದ್ಯುದ್ದೀಪಗಳ ವರ್ಣರಂಜಿತ ಅಲಂಕಾರವಿರುತ್ತಿತ್ತು. ಕಡೆಂಗೋಡ್ಲು ಶಂಕರಭಟ್ಟರ ಕ್ಷಮೆ ಕೇಳಿ–

"ಅನುಭವವು ಸವಿಯಿತ್ತು, ಅದರ ನೆನಪೂ ಸವಿಯು
ಅದ ಕದ್ದು ಮೇಯದೇ ಮನವು"

ಎಂದು ಹೇಳುವುದು ಈ ಸಂದರ್ಭಕ್ಕೆ ಉಚಿತ. ಚರ್ಚಾಕೂಟಗಳು, ಭಾಷಣಗಳು, ಕಾವ್ಯವಾಚನಗಳು ಮುಂತಾದ ಕಾರ್ಯಕ್ರಮಗಳು ಆ ವೇದಿಕೆಯಲ್ಲಿ ನಡೆಯುತ್ತಿದ್ದವು. ಚಿಕ್ಕ ಕಾರ್ಯಕ್ರಮಗಳಿದ್ದರೆ ಮಾತ್ರ ಅವುಗಳನ್ನು ಜೂನಿಯರ್ ಅಥವಾ ಸೀನಿಯರ್ ಬಿ.ಎ. ವರ್ಗದ ಆಸನನಿಃಶ್ರೇಣಿಯುಳ್ಳ ಪಡಸಾಲೆಗಳಲ್ಲಿ ನಡೆಸಲಾಗುತ್ತಿತ್ತು. ಆಗ

ಈಗ, ಹೊರಗಿನ ಮಹಾಅತಿಥಿಗಳ ಭಾಷಣಗಳಾಗುತ್ತಿದ್ದವು. ಸಿನೇಮಾ ತಾರೆಯರನ್ನೂ ಒಮ್ಮೊಮ್ಮೆ ಕರೆಯಿಸಲಾಗುತ್ತಿತ್ತು. ಕಾಲೇಜ್ ಯೂನಿಯನ್ನಿನ ಪರವಾಗಿ, ೧೯೩೮ಕ್ಕೂ ೧೯೪೨ಕ್ಕೂ ನಡುವಿನ ಅವಧಿಯಲ್ಲಿ ಸ್ಮರಣೀಯರಾದ ಕಲ್ಕತ್ತ ವಿಶ್ವವಿದ್ಯಾಲಯದ ತತ್ವಜ್ಞಾನದ ಆಚಾರ್ಯರಾಗಿದ್ದ ಹುಮಾಯೂನ್ ಕಬೀರರನ್ನು, ಇಂಗ್ಲೆಂಡಿನ ಮುಖ್ಯಮಂತ್ರಿ ಚರ್ಚಿಲ್ಲರ ಗೌರವಕ್ಕೆ ಪಾತ್ರರಾಗಿದ್ದ ಮದ್ರಾಸಿನ ದಿ ರೈಟ್ ಅನರಬಲ್ ಶ್ರೀನಿವಾಸ ಶಾಸ್ತ್ರಿಗಳನ್ನು, ಸುಭಾಷ್ ಚಂದ್ರ ಬೋಸರನ್ನು ಮೈಸೂರಿನ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್‌ರನ್ನು ಬೆಂಗಳೂರು ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಬಿ.ಎಂ.ಶ್ರೀಕಂಠಯ್ಯನವರನ್ನು ವರಕವಿ ದ.ರಾ.ಬೇಂದ್ರೆಯವರನ್ನು – ಹೀಗೆ ಎಷ್ಟೋ ಜನ ಪಂಡಿತೋತ್ತಮರನ್ನು ಕವಿಗಳನ್ನೂ ಭಾಷಣಕಾರರನ್ನು ಕರೆಯಿಸಲಾಗಿತ್ತು. ಶ್ರೀನಿವಾಸ ಶಾಸ್ತ್ರಿಗಳು ವಿದ್ಯಾರ್ಥಿ ಮಹಾಸಭೆಯನ್ನುದ್ದೇಶಿಸಿ ಮಾತನಾಡಲು ಹೊರಟಾಗ ಮುನ್ನುಡಿದದ್ದು ಈಗಲೂ ಮರೆಯದಾಗಿದೆ.

"ಈ ಕಾಲೇಜಿನಲ್ಲಿದ್ದಷ್ಟು ಶುಚಿ ರುಚಿ ಸಂಪನ್ನ ಉಡುಪುಗಳನ್ನು ಧರಿಸಿದ ವಿದ್ಯಾರ್ಥಿಗಳನ್ನು ನಾನೆಲ್ಲೂ ಕಂಡಿಲ್ಲ" ಎಂದ ಶ್ರೀನಿವಾಸ ಶಾಸ್ತ್ರಿಗಳು ಮೊದಲೇ ಕರತಾಡನಗಳ ಗೌರವವನ್ನ ಪಡೆದರು. ದ.ರಾ.ಬೇಂದ್ರೆಯವರು ತಮ್ಮ ಸ್ವರ ಬಿದ್ದು ಹೋಗಿದೆ ಎಂದರೂ ಕೇಳದೆ ಇನ್ನೊಂದು ಮತ್ತೊಂದು ಎಂದು ಅವರಿಂದ ಕವನಗಳನ್ನು ಒತ್ತಾಯಮಾಡಿ ಹಾಡಿಸಿದ್ದು ಅವಿಸ್ಮರಣೀಯ. ಹಾಗೇ "ಶಾಂತಾ ಆಪ್ಟೆ" ಎಂಬ ಸಿನೆಮಾ ತಾರೆ ಬಂದಾಗ ಸಭಾಧ್ಯಕ್ಷರಾಗಿದ್ದ ನರಸಿಂಹಶಾಸ್ತ್ರಿಗಳು "ಸಭಿಕರಲ್ಲಿ ಇಂದು ಹೆಣ್ಣು ಮಕ್ಕಳ ಸಂಖ್ಯೆಯೇ ಅಧಿಕ ಅವರಿಗೆಲ್ಲಾ ತಮ್ಮ ವರ್ಗಕ್ಕೆ ಸೇರಿದ ಶಾಂತಾ ಆಪ್ಟೆಯ ದೆಸೆಯಿಂದ – ಆಕೆಯ ಕಲಾ ಪ್ರತಿಭಾ ದೆಸೆಯಿಂದ – ತುಂಬಾ ಅಭಿಮಾನ ಹೆಮ್ಮೆ ಮುಖಗಳಲ್ಲಿ ಮೂಡಿ ಬಂದಂತೆ ತೋರುತ್ತದೆ" ಎಂದು ಕರತಾಡನದ ಮಳೆಗರೆಯುವಂತೆ ಹೇಳಿದ್ದು ಒಂದು ಸವಿನೆನಪು. ಎ.ಆರ್.ಕೃಷ್ಣಶಾಸ್ತ್ರಿಗಳು ರವೀಂದ್ರನಾಥ ಠಾಕೂರರು ಸ್ವರ್ಗಸ್ಥರಾದಾಗ ಅವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಲು ಕರೆದ ಸಭೆಯಲ್ಲಿ ಠಾಕೂರರ ಹಾಸ್ಯ ಪ್ರವೃತ್ತಿಗೆ ಒಂದು ನಿದರ್ಶನವನ್ನು ಕೊಟ್ಟಾಗ ಎಲ್ಲ ವಿದ್ಯಾರ್ಥಿಗಳೂ ನಕ್ಕರು. ನನಗೆ ಚೆನ್ನಾಗಿ ಕೇಳಿಸದಾಗ "ಅದೇನು ತಮಾಷೆ?" ಎಂದು ನನ್ನ ಎದುರಿನ ಮೂರು ಬೆಂಚುಗಳಲ್ಲಿ ಕುಳಿತ ೨೦–೩೦ ವಿದ್ಯಾರ್ಥಿಗಳನ್ನು ಕೇಳಿದಾಗ ಅವರು "ತಮಗೂ ಸರಿಯಾಗಿ ಕೇಳಿಸಲಿಲ್ಲ – ಎಲ್ಲರೂ ನಕ್ಕರೆಂದು ನಾವು ನಕ್ಕೆವು" ಎಂದು ಹೇಳಿದ್ದು ಮರೆಯಲಾಗದ ಸ್ವಾರಸ್ಯ. ಕರ್ನಾಟಕ ಸಂಘದ ಕಾವ್ಯಮಂಥನ ಕಾರ್ಯಕ್ರಮವೊಂದರಲ್ಲಿ ನಾನು ಓದಿದ್ದು 'ಚಹಾಸೂಕ್ತ' ಎಂಬ ತಮಾಷೆಯ ಕವನವನ್ನು "ಕನ್ನಡದಲ್ಲಿ ಏನಿದೆ? ಏನಿಲ್ಲ?" ಎಂಬ ವಿಷಯವನ್ನು ಸ್ವಾರಸ್ಯವಾಗಿ ವೆಂಕಟರಾಮಪ್ಪನವರು ವಿವರಿಸ ಹೊರಡುವ ಮೊದಲು ವಿದ್ಯಾರ್ಥಿಗಳನ್ನು "ನನ್ನ ಪ್ರಿಯ ಕಾಫೀ ಕದನದ ಕಟ್ಟಾಳುಗಳೇ, ಎಂದು ಕರೆದು ಚಪ್ಪಾಳೆ ಮಳೆಗರೆಸಿಕೊಂಡಿದ್ದು ಒಂದು. ಹಾಗೇ ಕನ್ನಡವು ಕಾಲೇಜಿನಲ್ಲಿ ಬೋಧಕ ಭಾಷೆಯಾಗಬೇಕು ಎಂಬ

ವಿಷಯದ ಮೇಲಿನ ಚರ್ಚೆಗೆ ಶಿವಮೊಗ್ಗದ ವಕೀಲರಾಗಿದ್ದ ಪುಟ್ಟ ನಂಜಪ್ಪನವರು ಅಧ್ಯಕ್ಷರಾಗಿದ್ದಾಗ – ಕಾರ್ಯದರ್ಶಿ ಕುಮಾರಸ್ವಾಮಿ "ವಿರೋಧಿ ಪಕ್ಷದ ಮುಖಂಡರಾಗಲು ಮತ್ತಾರೂ ಇಲ್ಲ ನೀವೇ ಆಗಬೇಕು'' ಎಂದು ಒತ್ತಾಯಿಸಿ ನನ್ನನ್ನು ಜಿ.ಮರುಳಸಿದ್ಧಯ್ಯನವರ ಎದುರು ವಾದಿಯನ್ನಾಗಿ ನಿಲ್ಲಿಸಿದಾಗ ನಾನು ಕಾರ್ಯಕ್ರಮದ ಅಗತ್ಯಕ್ಕೆ ತಕ್ಕಂತೆ ವಕೀಲವಾದ ಹೂಡಿದ್ದು ಹೀಗೆ:

''ಕನ್ನಡವೊಂದು ಭಾಷೆಯಲ್ಲ. ಆದ್ದರಿಂದ ಅದು ಕಾಲೇಜಿನಲ್ಲಿ ಶಿಕ್ಷಣ ಮಾಧ್ಯಮವಾಗಲಾರದು. ಏಕೆಂದರೆ, ಕನ್ನಡದ ಒಬ್ಬ ಆದಿ ಕವಿ ಪಂಪ ತನ್ನನ್ನು ತಾನೇ ಬಣ್ಣಿಸಿಕೊಂಡ ಕಂದ ಪದ್ಯಗಳನ್ನು ಸಮೀಕ್ಷಿಸಿರಿ ಆಮೇಲೆ ಹೇಳಿರಿ."

> **''ಕದಳಿ ಗರ್ಭ ಶ್ಯಾಮಂ ಮೃದು ಕುಟಿಲ ಶಿರೋರುಹಂ ಸರೋರುಹವದನಂ**
> **ಮೃದು ಮಧ್ಯಮತನು ಹಿತ ಮಿತ ಮೃದು ವಚನಂ ಲಲಿತ ಮಧುರ ಸುಂದರ**
> **ವೇಷಂ"**
> **ಕೇರಳ ವಿಟೀಕಟೀ ಸೂತ್ರಾರುಣ ಮಣಿ ಮಲಯವತಿ ದರ್ಪಣ ಸಾಂಧ್ರೀ**
> **ನೀರಂಧ್ರ ಬಂಧುರಸ್ತನಹಾರಸುದಾರ. ಸರಸ್ವತೀ ಮಣಿಹಾರಂ.**
> **''ವನಿತಾ ಕಟಾಕ್ಷಕುವಲಯ ವನಚಂದ್ರಂ ಯುವತಿ ಜಘನ ಕಾಂಬೀ ರತ್ನಂ**
> **ಸ್ತನಭರವಿನಮ್ರಗಣಿಕಾ ಸ್ತನತಟ ಹಾರಂ ಸರಸ್ವತೀ ಮಣಿಹಾರಂ** – ಇತ್ಯಾದಿ.

ಇವುಗಳಲ್ಲಿ ಪದಗಳ ವಿಭಕ್ತಿ ಪ್ರತ್ಯಯವೊಂದನ್ನುಳಿದರೆ ಮಿಕ್ಕೆಲ್ಲಾ ಸಂಸ್ಕೃತವಲ್ಲವೇ? ಹಾಗೇ–

> ಕನ್ನಡದಲ್ಲಿ ದೇವರಿಲ್ಲ, ಧರ್ಮವಿಲ್ಲ, ಆತ್ಮವಿಲ್ಲ ಪರಮಾತ್ಮನಿಲ್ಲ,
> ದೀಪವಿಲ್ಲ, ಧೂಪವಿಲ್ಲ, ನೈವೇದ್ಯವಿಲ್ಲ, ಮಂಗಳಾ ರಾತ್ರಿಕವಿಲ್ಲ, ಶಾಕವಿಲ್ಲ,
> ಪಾಕವಿಲ್ಲ, ಭಕ್ಷ್ಯವಿಲ್ಲ, ಭೋಜ್ಯವಿಲ್ಲ, ರಾಜ್ಯವಿಲ್ಲ, ಪ್ರಜ್ಞೆಯಿಲ್ಲ, ಅನ್ನವಿಲ್ಲ,
> ನೀರಿಲ್ಲ, ಪಾಯಸವಿಲ್ಲ, ಪಾನಕವಿಲ್ಲ, ಕನ್ನಡದಲ್ಲಿ ಮಹಾಪ್ರಾಣಗಳಿಲ್ಲ–

ಇಲ್ಲಿ ಎಲ್ಲರೂ ಅಲ್ಪ ಪ್ರಾಣಿಗಳೇ – ಭಾಷಾ ಶಾಸ್ತ್ರದ ಪ್ರಕಾರ – ಎಂದು ಒಗ್ಗರಿಸಿದಾಗ ಎದುರು ಪಕ್ಷದ ಮಾತುಗಾರರು ಸುಸ್ತು ಹೊಡೆದರು. ನೀರು ಕನ್ನಡ ಪದವೆಂಬುದು ಅಂತಿಮವಾಗಿ ಎಲ್ಲರೂ ಒಪ್ಪಿಕೊಂಡಿಲ್ಲ. ಹಾಗೇ 'ಅನ್ನ' ಉಳಿದಿದೆಯಲ್ಲದೆ 'ಕೂಳು' ಗೌರವಸ್ಥರ ಬಳಕೆಯಲ್ಲಿ ಉಳಿದಿಲ್ಲ. ಎಂಬುದನ್ನು ಬಿಡಿಸಿ ಹೇಳಿದೆ. ಅಧ್ಯಕ್ಷರು – ''ನಾನು ಪ್ರತಿವಾದಿಗಳಿಗೆ ಮತ ಕೊಡಲಾರೆ, ಆದರೆ ಅವರ ವಾದದ ಎಲ್ಲ ಅಂಶಗಳಿಗೂ ಉತ್ತರವನ್ನು ಸಮರ್ಪಕವಾಗಿ ಕೊಡುವುದು ಕಷ್ಟ" ಎಂದದ್ದು ಸಭೆಯಲ್ಲಿ ನನಗೆ ಮತ ಸಿಕ್ಕದಿದ್ದರೂ ಒಂದು ಸಮಾಧಾನವನ್ನು ತಂದು ಕೊಟ್ಟಿತು. ಆ ಚರ್ಚೆಗೆ ಪರಿಸೀಮಿತವಾಗಿ "ಪ್ರಬುದ್ಧ ಕರ್ಣಾಕದಲ್ಲಿ" ಹಿಂದೆಯೇ ಕನ್ನಡಕ್ಕೆ ಪ್ರಥಮ ಸ್ಥಾನ ಸಿಕ್ಕಬೇಕೆಂದು.

"ಕನ್ನಡದ ಮನೆಯಲ್ಲಿ ಕನ್ನಡತಿ ಯಜಮಾನಿ
ಮಿಕ್ಕ ಹೆಂಗಸರೆಲ್ಲ ಒಕ್ಕಲಷ್ಟೇ."

ಎಂದು ಸಾರಿ ಹೇಳಿದ್ದುಂಟು. ಆದರೆ ಸಂಸ್ಕೃತದ ಹಿನ್ನೆಲೆಯಿಲ್ಲದ ಕನ್ನಡ ಪಾಂಡಿತ್ಯ ಅಪೂರ್ಣ ಎಂಬುದು ಈಗಲೂ ನನ್ನ ಅಭಿಪ್ರಾಯ. ಈ ಅಭಿಪ್ರಾಯಕ್ಕೆ ಕನ್ನಡದ ಪದ್ಯಗಳನ್ನು ಬರೆಯುತ್ತಿರುವವರ ಅನುಭವವೇ ಆಧಾರ.

ಪಾಠ ಮುಗಿದ ಮೇಲೆ ಸಂಜೆಯ ಹೊತ್ತಿನಲ್ಲಿ ನನ್ನನ್ನು ಕರೆದುಕೊಂಡು ತಮ್ಮ ಮನೆಯವರೆಗೂ ಹೋಗುವಾಗ ತಮ್ಮ ಅಪಾರ ಜ್ಞಾನ ಭಂಡಾರದ ರತ್ನಗಳನ್ನು ತೆರೆದು ತೋರಿಸುತ್ತಿದ್ದವರಲ್ಲಿ ಡಿ.ಎಲ್.ನರಸಿಂಹಾಚಾರ್ಯರಿಗೆ ಪ್ರಥಮ ಸ್ಥಾನ. ೨ನೇಯ ಸ್ಥಾನ ಶ್ರೀಕಂಠಶಾಸ್ತ್ರಿಗಳಿಗೆ. ಆಮೇಲೆ ನರಸಿಂಹಶಾಸ್ತ್ರಿಗಳು ಮತ್ತು ಕೃಷ್ಣಶಾಸ್ತ್ರಿಗಳು, ಕಸ್ತೂರಿಯವರು, ವೆಂಕಟ ರಾಮಪ್ಪನವರು, ಶ್ರೀಕಂಠ ಶಾಸ್ತ್ರಿಗಳು ಮತ್ತು ಎಂ.ಎಚ್.ಕೃಷ್ಣರು ಬರುತ್ತಾರೆ. ಈ ವಿದ್ವನ್ಮಣಿಗಳು ಕ್ಲಾಸಿನಲ್ಲಿ ಹೇಳಿದ ಪಾಠಗಳಿಗಿಂತ ಕ್ಲಾಸು ಬಿಟ್ಟು ಅನಂತರ ನನಗೆ ಹೇಳಿ ಕೊಟ್ಟದ್ದೇ ಹೆಚ್ಚು. ಅವರೆಲ್ಲರಿಗೂ ನಾನು ಚಿರ ಋಣಿಯಾಗಿದ್ದೇನೆ.

ವರ್ಷಕ್ಕೊಮ್ಮೆ ಒಂದು ವಾರದವರೆಗೆ ಪ್ರತಿದಿನವೂ ನಡೆಯುತ್ತಿದ್ದ ಬೇರೆ ಬೇರೆ ಭಾಷೆಗಳ ನಾಟಕಗಳಲ್ಲಿ ಸಂಸ್ಕೃತ ನಾಟಕವೂ ಇತ್ತು. ಸಂಸ್ಕೃತ ನಾಟಕಗಳಲ್ಲಿ ಪ್ರತಿವರ್ಷವೂ ನಾನು ಭಾಗವಹಿಸುತ್ತಿದ್ದೆ. ಅದರ ದೇಖಾವೆ ಒಂದು ರಾತ್ರಿಯಲ್ಲಿ ಎರಡು ಸಲ ನಡೆಯುತ್ತಿತ್ತು. ನಾಟಕ ಸಭಾಗೃಹ ಕೇವಲ ೫೦೦ ಜನರಿಗೆ ಮಾತ್ರ ಕುಳಿತುಕೊಳ್ಳಲು ಅವಕಾಶ ಕೊಡುತ್ತಿದ್ದುದರಿಂದ, ಸಂಸ್ಕೃತ ನಾಟಕ ಆಗ ಬಹಳ ಜನಪ್ರಿಯವೆನಿಸಿತ್ತು. ಕಾಲೇಜಿನ ಆವರಣದಲ್ಲಿ ಉರ್ದು ಭಾಷೆಗೆ ಭಾಷಾಂತರಿಸಲಾದ ಕಾಳಿದಾಸನ "ಅಭಿಜ್ಞಾನ ಶಾಕುಂತಲ" ನಾಟಕವನ್ನು ಉರ್ದು ಆಚಾರ್ಯರು ತಮ್ಮ ಶಿಷ್ಯರ ಮೂಲಕ ಆಡಿಸಿದರು. ಕಸ್ತೂರಿಯವರ "ಗಗ್ಗಯ್ಯನ ಗಡಿಬಿಡಿ" "ವರಪರೀಕ್ಷೆ" ಮತ್ತು "ಕಾಡಾನೆ" ಎಂಬ ಆಶುನಾಟಕಗಳನ್ನು ಕಾಲೇಜಿನಲ್ಲಿ ಆಡಿದ ಮೇಲೆಯೇ "ಪ್ರಬುದ್ಧ ಕರ್ನಾಟಕದಲ್ಲಿ" ಪ್ರಕಟಿಸಲಾಯ್ತು ಆಮೇಲೆ ಪುಸ್ತಕಗಳ ರೂಪದಲ್ಲಿ ಅವು ಹೊರಬಿದ್ದವು.

ಕಸ್ತೂರಿಯವರ ಹಾಸ್ಯ ಪ್ರವೃತ್ತಿಗೆ ನರಸಿಂಹಶಾಸ್ತ್ರಿಗಳ ಚತುರೋಕ್ತಿಗಳು ಎದುರು ನಿಲ್ಲುವಂತಿದ್ದವು. ಒಮ್ಮೆ ಕಸ್ತೂರಿಯವರು ನರಸಿಂಹ ಶಾಸ್ತ್ರಿಗಳು ಕೊಂಡು ಕೊಂಡ ಹಳೆಯ ಕಾರನ್ನು ಕಾಲೇಜಿಗೆ ತರದಿದ್ದಾಗ– "ನರಸಿಂಹ ಶಾಸ್ತ್ರಿಗಳು ತಮ್ಮ ಲೇಡಿ ಸಿಂಪ್ಸನ್ ಕಾರನ್ನು ಎಲ್ಲಿ ಬಿಟ್ಟು ಬಂದರು?" ಎಂದು ಕೇಳಿದ್ದಕ್ಕೆ ಉತ್ತರವಾಗಿ ಶಾಸ್ತ್ರಿಗಳು, ಕಸ್ತೂರಿಯವರು ಮಾತೃಭಾಷೆಯಾದ ಮಲಯಾಳಿಯನ್ನು ಬಿಟ್ಟು ಕನ್ನಡದಲ್ಲಿ ಹಾಸ್ಯನಾಟಕಗಳನ್ನು ಬರೆಯುತ್ತಿದ್ದುದನ್ನು ಗುರಿ ಮಾಡಿ, "ಕಸ್ತೂರಿ ತನ್ನ ಸ್ವಂತದ

ಮನೆಯನ್ನು ಬಿಟ್ಟು ಬಾಡಿಗೆ ಮನೆಯಲ್ಲಿ ಎಷ್ಟು ದಿನ ಕಾಲ ಹಾಕುತ್ತಾನೆ?" ಎಂದು ಮಾರುತ್ತರವಿತ್ತರು. ಎಲ್ಲರೂ ಸ್ಟಾಫ್‌ರೂಮಿನಲ್ಲಿ ನಕ್ಕರು. ಹಾಗೇ ಕೇರಳದ ಗೋದವರ್ಮನ್ ಎಂಬುವರು ಸಂಸ್ಕೃತದ ಎಂ.ಎ.ಯ ಮೌಖಿಕ ಪರೀಕ್ಷೆಗೆ ಪರೀಕ್ಷಕರಾಗಿ ಬರುವ ಮೊದಲು ನರಸಿಂಹಶಾಸ್ತ್ರಿಗಳಿಗೆ ಒಂದು ಪತ್ರ ಬರೆಯುವಾಗ ವಿಳಾಸವನ್ನು–

"ಸಿ.ಆರ್.ನರಸಿಂಹಶಾಸ್ತ್ರಿ ಸಂಸ್ಕೃತ ಆಚಾರ್ಯ ಮಹಾರಾಜ ಕಾಲೇಜು, ಮೈಸೂರು" ಎಂದು ಬರೆದುದಕ್ಕೆ ಉತ್ತರವಾಗಿ ಶಾಸ್ತ್ರಿಗಳು, ಅವರು ಪರೀಕ್ಷೆಯ ದಿನ ಕಾಲೇಜಿನ ಸ್ಟಾಫ್ ರೂಮಿಗೆ ಬಂದು ಸ್ವಲ್ಪ ವಿಶ್ರಮಿಸಿದ ಅನಂತರ, "ಡಾಕ್ಟರ್ ಗೋದವರ್ಮರೇ, ನೀವು ವಿಳಾಸ ಬರೆಯುವಲ್ಲಿ ನನ್ನನ್ನು ಕಾಳಿದಾಸ, ಷೇಕ್ಸ್‌ಪಿಯರ್, ಡಾಂಟೆ, ಗಯ್ಟೆ ಮುಂತಾದವರ ಸಾಲಿಗೆ ಸೇರಿಸಿದ್ದೀರಿ" ಎಂದ ಕೂಡಲೇ ಗೋದವರ್ಮರಿಗೆ ತಾವೆಂಥ ತಪ್ಪು ಮಾಡಿದೆವೆಂಬುದೇ ತಿಳಿಯದಂತಾಗಿ ಕಕ್ಕಾಬಿಕ್ಕಿಯಾಗಿ ನೋಡತೊಡಗಿದರು. ಆಗ ಶಾಸ್ತ್ರಿಗಳು ತಮಗೆ ಅವರು ಬರೆದ ಪತ್ರದ ಲಕೋಟೆಯ ಮೇಲಿದ್ದ ವಿಳಾಸವನ್ನು ತೋರಿಸಿ, "ನೋಡಿ, ನನ್ನ ಹೆಸರಿನ ಹಿಂದೆ ಶ್ರೀ ಇಲ್ಲ, ಮಿಸ್ಟರ್ ಇಲ್ಲ – ಹೀಗೆ ಯಾವುದನ್ನೂ ಇಲ್ಲದಂತೆ ಮಾಡಿದ್ದರಿಂದ ನನ್ನ ಮಟ್ಟ ಕಾಳಿದಾಸಾದಿಗಳ ಮಟ್ಟಕ್ಕೆ ಏರಿತು – ಕಾಳಿದಾಸಾದಿಗಳ ಹೆಸರುಗಳನ್ನು ಬರೆಯುವಾಗ ಅಂಥ ಯಾವ ಪದವನ್ನು ಹಿಂದೆ ಸೇರಿಸುವುದಿಲ್ಲ ಅಲ್ಲವೇ?" ಎಂದು ಕೇಳಿದಾಗ ಗೋದವರ್ಮರಿಗೆ ತಮ್ಮ ಅವಿನಯದ ಅರಿವಾಗಿ ಶಾಸ್ತ್ರಿಗಳ ಹತ್ತಿರ ಕ್ಷಮೆಯನ್ನು ಯಾಚಿಸಿದರು. ಇಂಥ ಎಷ್ಟೋ ಚತುರ ಪ್ರತ್ಯುತ್ತರಗಳು ಶಾಸ್ತ್ರಿಗಳ ಬಾಯಿಂದ ದಿನವೂ ಹೊರಬೀಳುತ್ತಿದ್ದವು.

ಒಂದು ದಿನ ನನ್ನ ಸಂಸ್ಕೃತ ಕ್ಲಾಸ್‌ಮೇಟ್ ನಂಜನಗೂಡಿನ ಸುಬ್ರಹ್ಮಣ್ಯನ ಹತ್ತಿರ, ಪಾಠ ಮುಗಿದು ಗಂಟೆ ಹೊಡೆದ ಕೂಡಲೇ ಶಾಸ್ತ್ರಿಗಳು "ಈ ಕವರನ್ನು ಮಡಿಸಿ ಅಂಟಿಸು" ಎಂದು ಮೇಜಿನ ಮೇಲಿದ್ದ ಪೋಸ್ಟಲ್ ಕವರನ್ನು ಅದರೊಳಗಿಡತಕ್ಕ ಪತ್ರವನ್ನು ಅವನತ್ತ ಸರಿಸಿ ಕೋಣೆಯಲ್ಲಿದ್ದ ತಮ್ಮ ಪುಸ್ತಕದ ಕಪಾಟಿನತ್ತ ತಿರುಗಿ ನಿಂತರು. ಸುಬ್ರಹ್ಮಣ್ಯನು ಆ ಕವರನ್ನು ಅಂಟಿಸಿ ಕೋಣೆಯಿಂದ ಹೊರಟನು. ನಾನು ಮಾತ್ರ ಅಲ್ಲೇ ಇದ್ದೆ. ಶಾಸ್ತ್ರಿಗಳು ಮೇಜಿನತ್ತ ತಿರುಗಿ ನನ್ನನ್ನು ನೋಡಿ – ಸುಬ್ರಹ್ಮಣ್ಯನು "ಕಂಟಕಾರಿ ಕಷಾಯ ಮಾಡಿದನು" ಎಂದರು. "ಹಾಗಂದರೇನು ಸಾರ್?" ಎಂದು ಕೇಳಿದೆ. ಅದಕ್ಕವರು – ಒಂದೂರಿನಲ್ಲಿ ಹಿಂದೆ ಒಬ್ಬ ಸಂಸ್ಕೃತ ಪಂಡಿತರೂ ಆಯುರ್ವೇದ ಪಂಡಿತರೂ ಒಂದು ಅಂಗಳದ ಎದುರು ಬದುರು ಮನೆ ಕಟ್ಟಿಕೊಂಡಿದ್ದರು. ಒಂದು ದಿನ ಸಂಸ್ಕೃತ ಪಂಡಿತರಿಗೆ ಜ್ವರ ಬಂತು, ಅವರು ಆಯುರ್ವೇದ ಪಂಡಿತರನ್ನು ಕೇಳಿದಾಗ "ಅದೇನು ಮಹಾ ಕಂಟಕಾರಿ ಕಷಾಯ ಮಾಡಿ ಮೂರು ದಿನ ಕುಡಿದರಾಯಿತು" ಎಂಬ ಉತ್ತರ ಸಿಕ್ಕಿತು. ಕೂಡಲೇ ಆ ಅಂಗಳದಲ್ಲಿ ಒಂದು ಮಡಿಕೆಯಲ್ಲಿ ನೀರಿಟ್ಟು, ಸಂಸ್ಕೃತ ಪಂಡಿತರು, ಹಳೆ ಪಾದರಕ್ಷೆಯ ಚರ್ಮವನ್ನು ಕಿತ್ತು ಅದನ್ನು ಚೂರು ಚೂರು ಮಾಡಿ ಅದಕ್ಕೆ ಹಾಕಿ ಬೆಂಕಿ ಹೊತ್ತಿಸಿ

ಕುದಿಸತೊಡಗಿದರು. ಅದು ಕುದಿಯುತ್ತಿರುವ ಸದ್ದನ್ನು ಕೇಳಿ ಆಯುರ್ವೇದ ಪಂಡಿತರು ತಮ್ಮ ಮನೆಯ ಒಳಗಿನಿಂದ ಹೊರಗೆ ಹೊರಟು ಅಂಗಳಕ್ಕಿಳಿದು, "ಪಂಡಿತರೇ ಇದೇನು ಮಾಡುತ್ತಿದ್ದೀರಿ? ಚರ್ಮದ ಚೂರುಗಳನ್ನು ಏಕೆ ಕುದಿಸುತ್ತಿದ್ದೀರಿ? ನಾನು ಹೇಳಿದ್ದು ಕಂಟಕಾರಿ ಎಂಬ ಗಿಡ ಮೂಲಿಕೆಯ ಕಷಾಯವನ್ನು ಸೇವಿಸಬೇಕೆಂದು" ಎಂದಾಗ ಸಂಸ್ಕೃತ ಪಂಡಿತರು ನಾಚಿಕೆಯಿಂದ ತಲೆತಗ್ಗಿಸಿ "ಮುಳ್ಳಿನ ಶತ್ರು ಎಂದರೆ ಮೆಟ್ಟೆಂದು ಅರ್ಥ ಮಾಡಿ ಮೋಸ ಹೋದೆ – ಎಂದು ಆ ಮಡಿಕೆಯ ನೀರನ್ನು ಚೆಲ್ಲಿ ಅನಂತರ ಗುಳ್ಳ ಬದನೆ ಅಥವಾ ಬೃಹತಿಯೆಂಬ (ಸಿದಿಗ್ಧಿಕಾ ಸ್ಪರ್ಶೀ ವ್ಯಾಘ್ರೀ ಬೃಹತೀ ಕಂಟಕಾರಿಕಾ, ಪ್ರಚೋದನೀ ಕುಲೀಕ್ಷುದ್ರಾ ದುಃಸ್ಪರ್ಶಾ ರಾಷ್ಟ್ರೀಕೇತ್ಯಪಿ – ಅಮರ ೨ನೆಯ ಕಾಂಡ, ಅರಣ್ಯವರ್ಗ ೯೪ನೆಯ ಶ್ಲೋಕ) ಗಿಡಮೂಲಿಕೆಯನ್ನು ತಂದು ಕಷಾಯಕ್ಕಿಟ್ಟರು. ಆ ಕಷಾಯ ಸೇವನೆಯಿಂದ ಅವರ ಜ್ವರ ಕಡಿಮೆಯಾಯಿತು. ಅಂದರೆ ಸುಬ್ರಹ್ಮಣ್ಯನು ಹೇಳಿದ್ದಷ್ಟನ್ನೇ ಅಕ್ಷರಶಃ ಮಾಡಹೋಗಿ ಹಾಸ್ಯಾಸ್ಪದನಾದನು. ಪತ್ರವನ್ನು ಹೊರಗೆ ಬಿಟ್ಟು ಕವರನ್ನು ಮುಚ್ಚಿ ಅಂಟಿಸಿಬಿಟ್ಟನು, ಗೊತ್ತಾಯಿತೇ?" ಎಂದರು. ನಾನು ಯಥೇಚ್ಛವಾಗಿ ನಕ್ಕೆ. ಹೊರಗೆ ಹೋಗಿ ಸುಬ್ರಹ್ಮಣ್ಯನಿಗೆ ಈ ಸಂಗತಿಯನ್ನು ತಿಳಿಸಿದಾಗ ಅವನ ಮುಖ ಸಪ್ಪೆಯಾಯಿತು.

ಒಂದು ಸಲ ಪರೀಕ್ಷೆಯಾದ ಮೇಲೆ ನಮ್ಮ ಉತ್ತರ ಪತ್ರಿಕೆಗಳನ್ನು ಸತ್ಯಗಿರಿ ನಾಥನ್ನರ ಕ್ಲಾಸಿನಲ್ಲಿ ಕೊಡಬೇಕೆಂದು ಕೇಳಿದಾಗ ಗ್ಲಾಕ್ಸೋ ಬಿಸ್ಕತ್ತಿನಂತೆ ನಿಮ್ಮ ಉತ್ತರ ಪತ್ರಿಕೆಗಳನ್ನು ಮನುಷ್ಯ ಹಸ್ತ ಸ್ಪರ್ಶ ಮಾಡಿಯೇ ಇಲ್ಲ ಎಂದು ಚತುರೋಕ್ತಿಯ ಮೂಲಕ ತಾವಿನ್ನೂ ಅವುಗಳನ್ನು ನೋಡಿಲ್ಲ ಎಂಬ ಅರ್ಥವನ್ನು ಸೂಚಿಸಿದ್ದು ಅನೇಕರ ನೆನಪಿನಲ್ಲಿ ಉಳಿಯುವ ಹಾಗಾಯಿತು.

ಕಾಲೇಜ್ ಹಾಸ್ಟೆಲ್‌ನಲ್ಲಿ ಒಂದು ರಾತ್ರಿ ಇಂಗ್ಲೀಷಿನಲ್ಲಿ ಪ್ರೋಫೆಸರರು ಮಾತ್ರ ಭಾಗವಹಿಸುವ ಚರ್ಚಾಕೂಟವನ್ನು ವಿದ್ಯಾರ್ಥಿಗಳನ್ನು ಬೀಳ್ಕೊಡುವುದಕ್ಕೆ ಏರ್ಪಡಿಸಿದ ಭೋಜನ ಸಮಾರಂಭಕ್ಕೆ ಮೊದಲು ಏರ್ಪಡಿಸಲಾಗಿತ್ತು. "ಈ ಸಭೆಯು ಕೊಬ್ಬಿದ ಮನುಷ್ಯರನ್ನು ಪರಿತ್ಯಾಜ್ಯರೆಂದು ಸಾರುತ್ತದೆ" ಎಂಬುದು ಚರ್ಚಾ ವಸ್ತುವಾಗಿತ್ತು. ನರಸಿಂಹ ಶಾಸ್ತ್ರಿಗಳು ಪ್ರತಿವಾದಿಗಳ ಮುಖಂಡರು ಮತ್ತು ಇಂಗ್ಲೀಷ್ ಲೆಕ್ಚರರು ಟಿ.ಎಸ್.ಶ್ಯಾಮರಾಯರು ವಾದಿಗಳ ಮುಖಂಡರು. ಒಬ್ಬರು ಧಡೂತಿದೇಹದವರಾದರೆ ಇನ್ನೊಬ್ಬರು ಕಡ್ಡಿ ಪೈಲ್ವಾನರು. ವಿದ್ಯಾರ್ಥಿಗಳು ಬಹಳ ಕುತೂಹಲಿಗಳಾದರು. ಪ್ರತಿಯೊಬ್ಬ ಪ್ರೊಫೆಸರರೂ ಅವರವರು ಕಲಿಸುತ್ತಿದ್ದ ವಿಷಯಗಳ ಇತಿಹಾಸದಿಂದಲೇ ತಮ್ಮ ತಮ್ಮ ಪಕ್ಷದ – ಅಂದರೆ ಬಡಕಾಟಿಗಳ ಮತ್ತು ದಪ್ಪನಾಗಿರುವವರ ಬಗೆಗೆ ಉದಾಹರಣೆಗಳನ್ನು ಕೊಟ್ಟು ಸಮರ್ಥಿಸಿಕೊಳ್ಳುತ್ತಿದ್ದದ್ದು ಅಪೂರ್ವವಾಗಿತ್ತು. ನರಸಿಂಹ ಶಾಸ್ತ್ರಿಗಳು ಇಂಗ್ಲೀಷ್–ಸಂಸ್ಕೃತ ಸಾಹಿತ್ಯಗಳ ಪ್ರೌಢಿಮೆ ದೆಸೆಯಿಂದ "ಜ್ಯೂಲಿಯಸ್ ಸೀಸರ್" ಎಂಬ ನಾಟಕದಿಂದ ಸೀಜರನು –"ನನ್ನ ಸುತ್ತಲೂ ದಪ್ಪನಾದ ಮನುಷ್ಯರು ಇರಲಿ. ಕ್ಯಾಶಿಯಸ್ಸನ್ನು ಬಡಕಲಾಗಿಯೂ ಹಸಿದು ದಣಿದ ಮುಖವುಳ್ಳವನೂ ಆಗಿದ್ದಾನೆ.

ಅಂಥವರು ಅಪಾಯಕಾರಿ ಜನರು" ಎಂಬ ಮಾತನ್ನು ಉದ್ಧರಿಸಿ ಹೇಳಿದ್ದು ಒಂದು ಉದಾಹರಣೆ. ಅದಕ್ಕೆ ಪೋಷಕವಾಗಿ ಚರಿತ್ರೆಯ ಪ್ರಾಧ್ಯಾಪಕರಾಗಿದ್ದ ನರಸಿಂಹ ಶಾಸ್ತ್ರಿಗಳಂತೆಯೇ ದಪ್ಪನೆಯವರೂ ಆಗಿದ್ದ ಸತ್ಯಗಿರಿನಾಥನ್ನರು ಜಗತ್ ಪ್ರಸಿದ್ಧ ಸುಂದರಿಯೆನಿಸಿದ್ದ ಕ್ಲಿಯೋಪಾತ್ರ ಎಂಬ ರಾಣಿಯು ದಪ್ಪವಾಗಿದ್ದುದನ್ನು ಉದಾಹರಿಸಿದರು. ಬಡಕಾಟಿಗಳನ್ನು ಟಿ.ಎಸ್.ಶ್ಯಾಮರಾಯರೂ ಅವರ ಸಂಗಡಿಗರೂ ಸಾಹಿತ್ಯದ ವಿವಿಧ ವಿಷಯಗಳಿಂದೆತ್ತಿ ಹೇಳಿದ ಉದಾಹರಣೆಗಳ ಮೂಲಕ ಸಮರ್ಥಿಸಿದ್ದು ಅಭೂತಪೂರ್ವವೆನ್ನಿಸಿತ್ತು. ಅದೊಂದು ಅವಿಸ್ಮರಣೀಯ ಹಬ್ಬದ ದಿನವೆಂದು ಎಲ್ಲ ವಿದ್ಯಾರ್ಥಿಗಳೂ ಹೊಟ್ಟೆ ತುಂಬಾ ನಕ್ಕರು.

ಕ್ರಿ.ಶ. ೧೯೪೧ರಲ್ಲಿ ನಾನು ಬಿ.ಎ. ಆನರ್ಸ್ ಪಾಸಾದೆ. ಮೈಸೂರು ರಾಜ್ಯಕ್ಕೆ ಸಂಸ್ಕೃತದಲ್ಲಿ ಮೊದಲಿಗನೆಂದು ನನಗೆ ಶ್ರೀ ಪೂರ್ಣಕೃಷ್ಣರಾವ್ ಬಂಗಾರದ ಪದಕ ಮತ್ತು ನವೀನಂ ರಾಮಾನುಜಾಚಾರ್ಯ ಬಂಗಾರದ ಪದಕ ದೊರೆತವು. ಹಾಗೆ ಕನ್ನಡದಲ್ಲಿ ಫಸ್ಟ್ ಕ್ಲಾಸ್ ಬಂದದ್ದಲ್ಲದೇ ಹೊನ್ನಸೆಟ್ಟಿ ಪ್ರೈಜ್ ಎಸ್ಸೇ ಕಾಂಪಿಟೇಷನ್ನಲ್ಲಿ 'ಕವಿಯೂ ವಿಜ್ಞಾನಿಯೂ' ಎಂಬ ನನ್ನ ಕನ್ನಡ ಪ್ರಬಂಧಕ್ಕೆ ಕ್ಯಾಶ್ ಪ್ರೈಜ್ ಬಂದಿತು. ಇದರಿಂದ ನನ್ನ ಹಿತಚಿಂತಕರಾದ ಉಪಾಧ್ಯಾಯರಿಗೂ, ಅನ್ನದಾತೃಗಳಿಗೂ ಇಷ್ಟಮಿತ್ರರಿಗೂ ಬಹಳ ಸಂತೋಷವುಂಟಾಯಿತು. ಅದೇ ಸಮಯದಲ್ಲಿ ನನ್ನ ತಾಯಿಯವರಿಗೆ ತೀವ್ರ ಕಾಯಿಲೆ ಎಂಬ ಪತ್ರ ತಂದೆಯವರಿಂದ ಬಂದಿತು. ಆಗ ನಾನು ಆಲೋಚಿಸಿದೆ : ನಾನು ಮೈಸೂರಿನಿಂದ ಹೋಗಿ ಬರುವ ಖರ್ಚಿನ ಹಣವನ್ನು ತಂದೆಯವರಿಗೆ ಕಳುಹಿಸಿದರೆ ಔಷಧೋಪಚಾರಕ್ಕಾದರೂ ನೆರವಾದೀತು. ನಾನು ಹೋದರೆ ಅದಕ್ಕೆ ಕೊಡಲು ನನ್ನಲ್ಲಿ ದುಡ್ಡಿಲ್ಲವಲ್ಲಾ: ಎಂದು ಚಿಂತಿಸಿ ದೇವರ ಮೇಲೆ ಭಾರ ಹಾಕಿ ಹಾಗೆ ಮಾಡಿದೆ. ಅಮ್ಮನಿಗೆ ಹುಶಾರಾಯಿತು. – ಎಂಬ ಕಾಗದ ೧೫ ದಿನಗಳ ಮೇಲೆ ತಂದೆಯವರಿಂದ ಬಂತು. ನಿಟ್ಟುಸಿರುಬಿಟ್ಟೆನು.

ಅನಂತರ ಎಂ.ಎ. ಕ್ಲಾಸಿಗೆ ಸೇರಲು ದುಡ್ಡಿಲ್ಲವಾದುದರಿಂದ ಬೆಂಗಳೂರಿಗೆ ಹೋಗಿ ಸರ್ ಪುಟ್ಟಣ್ಣ ಶೆಟ್ಟಿ ಸ್ಮಾರಕ ಪುರಭವನದ ಸಮೀಪದಲ್ಲಿದ್ದ ವಿಜಯಲಕ್ಷ್ಮಿ ವಿಲಾಸ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಅನಿಶ್ಚಿತ ಸಂಬಳಕ್ಕೆ ಒಪ್ಪಿ ಕೆಲಸಕ್ಕೆ ಸೇರಿದೆನು. ಅಲ್ಲಿ ಗುಮಾಸ್ತಗಿರಿ, ಕರಡೋದುವುದು ಮುಂತಾದ ಕೆಲಸಗಳನ್ನು ದಿನವಿಡೀ ಮಾಡುತ್ತಾ ಒಂದು ವಾರವನ್ನು ಕಳೆದೆನು. ಅಷ್ಟರಲ್ಲಿ ಎ.ಆರ್.ಕೃಷ್ಣಶಾಸ್ತ್ರಿಗಳ ಮಮತೆಯ ಕರೆಯೋಲೆ ಬಂತು. ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ನಡೆಯಲಿರುವ ಸಂಸ್ಕೃತ – ಕನ್ನಡ ಕವಿ ಸಮ್ಮಿಲನಕ್ಕೆ ಅತಿಥಿಯಾಗಿ ಬರಲು ಆ ಕರೆಯೋಲೆಯಲ್ಲಿ ತಿಳಿಸಲಾಗಿತ್ತು. ಆಗ ಪ್ರೆಸ್ಸಿನವರಿಂದ ಒಂದು ರೂಪಾಯಿಯನ್ನು ತೆಗೆದುಕೊಂಡು ಅದರಲ್ಲಿ ೧೪ ಆಣೆಗಳನ್ನು ಖರ್ಚು ಮಾಡಿ ಕನ್‌ಸೆಶನ್ ದರದಂತೆ ರೈಲು ಹತ್ತಿ ಮೈಸೂರಿಗೆ ಹೋದೆನು. ಆ ಸಮಾರಂಭದಲ್ಲಿ ನಾನು ಕಂದ ಛಂದಸ್ಸಿನಲ್ಲಿ ಬರೆದ ಸಂಸ್ಕೃತ ಪದ್ಯವನ್ನು ಓದಿದೆನು. ಸಭೆಗೆ ಬಿ.ಎಂ.ಶ್ರೀಕಂಠಯ್ಯನವರು ಕನ್ನಡದ ಪರವಾಗಿ

ಮತ್ತು ಮಹಾ ವಿದ್ವಾನ್ ವಿದ್ವನ್ಮಣಿ ಗೋಪಾಲಕೃಷ್ಣಾಚಾರ್ಯರು ಸಂಸ್ಕೃತದ ಪರವಾಗಿ ಅಧ್ಯಕ್ಷತೆ ವಹಿಸಿದ್ದರು. ಹತ್ತಾರು ಜನ ಕನ್ನಡ – ಸಂಸ್ಕೃತ ಕವಿಗಳು ನನ್ನೊಡನೆಯೇ ತಮ್ಮ ತಮ್ಮ ಪದ್ಯಗಳನ್ನು ಓದಿದ ಮೇಲೆ ಬಿ.ಎಂ.ಶ್ರೀಕಂಠಯ್ಯನವರು ಇನ್ನೂ ಮುದ್ರಿತ ಪುಸ್ತಕ ರೂಪದಲ್ಲಿ ಪ್ರಕಟವಾಗದಿದ್ದ ತಮ್ಮ "ಕನ್ನಡ ಬಾವುಟ" ಎಂಬ ಪದ್ಯವನ್ನು ಸ್ವಾರಸ್ಯವಾಗಿ ಓದಿದರು. ಆ ಮೇಲೆ ಗೋಪಾಲಕೃಷ್ಣಾಚಾರ್ಯರು ತಮ್ಮ ಆಶುಕವಿತ್ವ ಶಕ್ತಿಯಿಂದ ಅಲ್ಲಿಂದಲೇ ಸ್ರಗ್ಧರಾವೃತ್ತದಲ್ಲಿ ೧೬ ಪದ್ಯಗಳನ್ನು ರಚಿಸಿ ಆ ಮೂಲಕ ಸಾಹಿತ್ಯದ ಸೌಂದರ್ಯಾಂಶಗಳ ಬಗೆಗೆ ವಿಮರ್ಶಾತ್ಮಕವಾಗಿ ತಮ್ಮ ಅಭಿಪ್ರಾಯವನ್ನು ರಸವತ್ತಾಗಿ ಹೇಳಿದರು. ಸಭೆ ಹರ್ಷೋದ್ಗಾರದಿಂದ ಮುಗಿಯಿತು. ಸಂಸ್ಕೃತ ಪದ್ಯವನ್ನು ಕನ್ನಡ ಕಂದಚ್ಛಂಧದಲ್ಲಿ ಬರೆಯಲು ನನಗೆ ಪ್ರೇರಣೆ ದೊರಕಿದ್ದು ಆದಿ ಕವಿ ಪಂಪನಿಂದ. ಅದರಿಂದಲೇ ಆ ನಂತರ ಕೆಲ ವರ್ಷಗಳ ಮೇಲೆ ವಿ.ಕೃ.ಗೋಕಾಕರ ಕರೆಯ ಮೇರೆಗೆ ಇಂಗ್ಲೀಷಿನಲ್ಲಿ ಪಂಪನ ಕಾವ್ಯ ಸೌಂದರ್ಯದ ಬಗೆಗೆ ದಸರಾ ವಿಶೇಷ ಸಂಚಿಕೆಯಲ್ಲಿ ಒಂದು ಚಿಕ್ಕ ಪ್ರಬಂಧವನ್ನು ಬರೆದು ಪ್ರಕಟಿಸಿದೆ. ಇಂದಿಗೂ ನನಗೆ ಪಂಪ, ರನ್ನ, ಲಕ್ಷ್ಮೀಶ, ಕುಮಾರವ್ಯಾಸರ ಕೃತಿಗಳ ಬಗೆಗೆ ಬಹಳ ಆದರೋತ್ಸಾಹಗಳು ಉಳಿದಿವೆ. ಅವರು ಕೊಟ್ಟ ಸ್ಫೂರ್ತಿಯೇ ಮೂಲತಃ ನನ್ನನ್ನು ಬರಹಗಾರನನ್ನಾಗಿ ಮಾಡಿತು.

ನನ್ನ ೧೯ನೆಯ ವಯಸ್ಸಿನಲ್ಲಿ ನಾನು ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಓದುತ್ತಿದ್ದಾಗ ಬೆಂಗಳೂರಿನ "ಸುಭೋಧ" ರಾಮರಾಯರ ಕರೆಯ ಮೇರೆಗೆ ಬರೆದು ಪ್ರಕಟಿಸಿದ ಚಂಪಕಮಾಲಾ ವೃತ್ತದಲ್ಲಿದ್ದ ಕವನವೇ ಪ್ರಕಟವಾದ ನನ್ನ ಮೊದಲನೆಯ ಕವನ. ಆ ನಂತರ ಎ.ಆರ್.ಕೃಷ್ಣಶಾಸ್ತ್ರಿಗಳ ಮಾರ್ಗದರ್ಶನದಿಂದ ಬರೆದ ಕವಿತೆಗಳು "ಪ್ರಬುದ್ಧಕರ್ಣಾಟಕದಲ್ಲಿ" ಪ್ರಕಟವಾದವು. ಆ ಮೇಲೆ ವರ್ಷ ಕಳೆದಂತೆ "ಜಯ ಕರ್ನಾಟಕ", "ಜಯಂತಿ" ಮುಂತಾದ ಮಾಸ ಪತ್ರಿಕೆಗಳಲ್ಲಿ ನನ್ನ ಭಾವಗೀತೆಗಳು ಪ್ರಕಟವಾದವು. ನಾನು ಗದ್ಯಪದ್ಯಗಳೆರಡನ್ನೂ ಬರೆಯುತ್ತಿದ್ದೆ. ಯಾವುದರ ಬಗೆಗೂ ನನಗೆ ಪೂರ್ವಗ್ರಹವಿರಲಿಲ್ಲ. ಆದುದರಿಂದ ಮೈಸೂರಿನಿಂದಲೇ ಆರಂಬಿಸಿದ ನನ್ನ ವಿಡಂಬನ ಚಂಪೂ ಲೇಖನಗಳು ಬೆಂಗಳೂರಿನ "ನಗುವನಂದ"ದಲ್ಲಿ ಮುಂದೆ ೧೪ ವರ್ಷಗಳವರೆಗೆ ಪ್ರತಿ ತಿಂಗಳೂ ಪ್ರಕಟವಾಗುತ್ತಾ ಹೋದವು. ಅವುಗಳಿಂದ ಆಯ್ದ ಚಂಪುಗಳ ಸಂಗ್ರಹವೇ ದಿವಂಗತ ಹರಿದಾಸರಾವ್ ಹುಬ್ಬಳ್ಳಿಯಲ್ಲಿ ಪ್ರಕಟಿಸಿದ ನನ್ನ "ಬೇತಾಳಗಳ ಕುಣಿತ" ಎಂಬ ವಿಡಂಬನೆ ಸಂಗ್ರಹ. ಅಂದು ಮರುಳಸಿದ್ಧ, ಪರಮಾಚಾರ್ಯ ಬಾಲಪುರಂದರ ಮುಂತಾದವುಗಳು ನನ್ನ ಲೇಖನೀ ನಾಮಗಳಾಗಿದ್ದವು. ಆ ಮೇಲೆ ಮೈಸೂರಿನ "ಸಾಹಿತ್ಯಮಂದಿರ" ಪ್ರಕಾಶನದ ದೊರೆಸ್ವಾಮಿ ಅವರು ನನ್ನ ಮೊದಲನೆಯ ಕವನ ಸಂಗ್ರಹವಾದ "ಮೇಘನಾದವನ್ನು" ಪ್ರಕಟಿಸಿದ್ದು, ಅದನ್ನು ಬೆಂಗಳೂರಿನ ಗಾಂಧಿ ಬಜಾರದ ಕಟ್ಟಡ ಒಂದರಲ್ಲಿ ನಾನೇ ಒಂದು ಸಭೆಯಲ್ಲಿ ಓದಿ ಮಿತ್ರವೃಂದದ ಪ್ರೋತ್ಸಾಹವನ್ನು ಪಡೆದೆನು.

ನಾನು ಎಂ.ಎ. ಪಾಸಾದದ್ದು ಸಿ.ಆರ್.ನರಸಿಂಹಶಾಸ್ತ್ರಿಗಳೂ, ಎ.ಎನ್.ನರಸಿಂಹಯ್ಯನವರೂ ಎ.ಆರ್.ಕೃಷ್ಣಶಾಸ್ತ್ರಿಗಳೂ ೧೯೪೧ರಲ್ಲಿ ದುಡ್ಡುಕೊಟ್ಟು ಕಾಲೇಜಿಗೆ ಸೇರಿಸಿದ್ದರಿಂದ. ನನ್ನ ಓದಿಗೆ ಬರಹಕ್ಕೆ ನಾನು ಉಳಿದುಕೊಂಡಿದ್ದ ಪೋಲೀಸ್ ಇನ್ಸ್‌ಪೆಕ್ಟರ್ ಬಿ.ಎಸ್.ಸದಾಶಿವರಾಯರೂ ಅವರ ಧರ್ಮಪತ್ನಿ ಅವರೂ ಮೈಸೂರಿನಲ್ಲಿ ಹೆಚ್ಚಿನ ಆಧಾರ ಸ್ತಂಭಗಳಾಗಿದ್ದರು. ಅವರ ವಾತ್ಸಲ್ಯ, ಪ್ರೋತ್ಸಾಹ, ಮಾರ್ಗದರ್ಶನ ನೆರವುಗಳು ನಾನಾ ವಿಧಗಳಾಗಿದ್ದವು. ಅವರ ಜ್ಯೇಷ್ಠ ಪುತ್ರ ಕೃಷ್ಣಸ್ವಾಮಿರಾವ್ ಅವರ ದ್ವಿತೀಯ ಪುತ್ರ ಅನಂತಸ್ವಾಮಿರಾವ್ ಎಂಬುವರು ನನಗಿಂತ ಕಿರಿಯರಾದರೂ ನನ್ನ ಸ್ನೇಹಿತರಾಗಿ ಜೊತೆಗೂಡಿ ಇರುತ್ತಿದ್ದರು. ಅವರ ಮಗಳಂದಿರಾದ "ಲೀಲಾ ಮತ್ತು ಸ್ವರ್ಣಲತಾ" ಎಂಬುವರಿಗೂ ನಾನು ಮನೆ ಮೇಷ್ಟ್ರೇ ಆಗಿದ್ದೆ. ನನ್ನನ್ನು ಆ ದಂಪತಿಗಳು ತಮ್ಮ ಹಿರಿಯ ಮಗನಂತೆ ನೋಡಿಕೊಳ್ಳುತ್ತಿದ್ದರು. ಅವರ ಮತ್ತು ಅವರ ಇಲಾಖೆಯ ಬಲದಿಂದ ಹೋಟೆಲಿನ ಕಾಫಿ ತಿಂಡಿಗಳನ್ನುಳಿದ ಮತ್ತೆ ಎಲ್ಲಾ ಅನುಕೂಲಗಳೂ ನನಗೆ ಉಚಿತವಾಗಿ ದೊರಕುತ್ತಿದ್ದವು. ಹ್ಯಾಮಿಲ್ಟನ್ ಬಿಲ್ಡಿಂಗಿನಲ್ಲಿ ಕೊನೆಗೆ ಇದ್ದ ಅವರೂ ಅವರ ಸಹೋದ್ಯೋಗಿಗಳಾದ ಸುಬ್ಬಣ್ಣನವರೂ ಅಂದರೆ ಎ ಡಿವಿಜನ್ ಮತ್ತು ಬಿ ಡಿವಿಜನ್ ಇನ್ಸ್‌ಪೆಕ್ಟರರಿಬ್ಬರೂ ನನ್ನನ್ನು ತಮ್ಮ ಕುಟುಂಬಕ್ಕೆ ಸೇರಿದವನೆಂಬಂತೆ ನಡೆಸಿಕೊಂಡದ್ದು ಭಾಗ್ಯವೆಂದೇ ತಿಳಿದಿರುತ್ತೇನೆ.

ಮೈಸೂರಿನಲ್ಲಿ ಕಳೆದ ೬ ವರ್ಷಗಳಲ್ಲಿ ಮೈಸೂರಿನ ಮತ್ತು ಸುತ್ತಮುತ್ತಲಿನಲ್ಲಿರುವ ಪ್ರೇಕ್ಷಣೀಯ ಸ್ಥಳಗಳೆಲ್ಲವನ್ನೂ ಬೇಕಾದಷ್ಟು ಸಲ ನೋಡಿ ಬಂದೆ. ಪ್ರತಿ ಶುಕ್ರವಾರವೂ ಕೃಷ್ಣರಾಜ ಒಡೆಯರು ಕಾವೇರಿ ಚಾಮುಂಡೀ ದರ್ಶನಕ್ಕೆ ಹೋಗುತ್ತಿದ್ದರೆ, ನಾನು ಚಾಮುಂಡೀ ಬೆಟ್ಟದ ಸಾವಿರ ಮೆಟ್ಟಿಲುಗಳನ್ನು ಹತ್ತಿ ಹೋಗಿ ಅಮ್ಮನವರ ದರ್ಶನ ಮಾಡಿಕೊಂಡು ಬರುತ್ತಿದ್ದೆನು. ರಾತ್ರಿ ಹೊತ್ತು ಬೆಟ್ಟದ ಹತ್ತಿರದ ಆಂಜನೇಯ ದೇವಸ್ಥಾನದ ವಿಶಾಲವಾದ ಉಪವನದಲ್ಲಿ ೧೦ ಗಂಟೆಗಳವರೆಗೆ ವಿದ್ಯುದ್ದೀಪಗಳ ಕೆಳಗೆ ಓದುತ್ತಾ ಕುಳಿತಿರುತ್ತಿದ್ದೆ. ಇತರ ಸಂದರ್ಭಗಳಲ್ಲಿ "ಸುಬ್ರಾಯನ ಕೆರೆ ಅಥವಾ ಅಂಬಳೆ ಅಣ್ಣಯ್ಯ ಪಂಡಿತ ಪಾರ್ಕ್" ಎಂಬಲ್ಲಿ ಸಾರ್ವಜನಿಕ ವಿದ್ಯುದ್ದೀಪಗಳ ಕಂಬಗಳ ಕೆಳಗೆ ಹಸಿರು ಹುಲ್ಲಿನ ಮೇಲೆ ಕುಳಿತು ಓದುತ್ತಿದ್ದೆನು. ಬಾಯಾರಿದಾಗ ಬೀದಿಯ ಹತ್ತಿರದಲ್ಲಿರುತ್ತಿದ್ದ ಹ್ಯಾಮಿಲ್ಟನ್ ಬಿಲ್ಡಿಂಗ್, ನಜರ್‌ಬಾದ್ ಪಾರ್ಕ್, ಥಂಡಿ ಸಡಕ್ ಚಾಮುಂಡೀ ಬೆಟ್ಟ, ದೊಡ್ಡ ಕೆರೆ, ಚಾಮುಂಡೀ ಎಕ್ಸೆಟೆನ್‌ಶನ್, ಸುಣ್ಣದ ಕೇರಿ, ಅಮೃತಾಬಾಯಿಯ ಸಮಾಜ, ಕಾಲೇಜು, ಪಬ್ಲಿಕ್ ಲೈಬ್ರರಿ, ರೈಲ್ವೇ ಸ್ಟೇಷನ್ ಮುಂತಾದವುಗಳು.

ನಾನು ಹ್ಯಾಮಿಲ್ಟನ್ ಬಿಲ್ಡಿಂಗಿಗೆ ಹೋಗುವ ಮೊದಲು ಇದ್ದದ್ದು ಸುಬ್ಬಯ್ಯನವರ ಮನೆ, ಶಂಕರ ಮಠ, ಪರಮೇಶ್ವರ ವೈದ್ಯರ ಮನೆ, ಸಂಜೀವ ರಾಜ ಅರಸರ ಬಂಗಲೆ, ಸದಾಶಿವರಾಯರಿದ್ದ ಲಕ್ಷ್ಮೀಪುರದ ಎರಡು ಮನೆಗಳು. ಸಂಜೀವ ರಾಜ

ಅರಸರಿಗೆ ಮೂವರು ಮಕ್ಕಳು. ಒಂದು ಹೆಣ್ಣು ಇಬ್ಬರು ಗಂಡು ಮಕ್ಕಳು, ಪತ್ನಿ ದಿವಂಗತರಾಗಿದ್ದರು. ಅವರ ಕೋಟೆ ಬಂಗಲೆಯಲ್ಲಿ ಒಂದು ಅತ್ಯಂತ ವಿಶಾಲವಾದ ಪಡಸಾಲೆಯನ್ನು ನನಗೆ ಬಿಟ್ಟುಕೊಟ್ಟಿದ್ದರು. ಅವರ ಮಕ್ಕಳಿಗೆ ಮನೆ ಮೇಷ್ಟ್ರಾಗಿದ್ದಾಗ ಒಮ್ಮೆ ಪಾಠ ಒಪ್ಪಿಸದಿದ್ದಕ್ಕಾಗಿ ಕಿರಿಯ ಹುಡುಗನ ಕಿವಿ ಹಿಂಡಿ ನನ್ನ ಎಡಗೈಯನ್ನು ಪಾಠ ಮುಗಿಯುವವರೆಗೆ ಹಾಗೆ ತೊಡೆಯ ಮೇಲಿಟ್ಟುಕೊಂಡು ಆಮೇಲೆ ಎದ್ದು ಹೋಗಿ ಕೈ ತೊಳೆದುಕೊಂಡು ಬಂದೆ. ಏಕೆ ಗೊತ್ತೇ? ಅಷ್ಟು ಬೆವರು ಧೂಳು ಅವನ ಕಿವಿಗೆ ಅಂಟಿಕೊಂಡಿದ್ದವು. ಅರಸರು ಒಳ್ಳೆಯವರು, ದಿವಂಗತ ಜಯಲಕ್ಷ್ಮಮ್ಮಣ್ಣಿಯವರ ಭಾವಂದಿರಾಗಿದ್ದರು. ಅವರಿತ್ತ ನೆರವನ್ನು ಇಲ್ಲಿ ನಾನು ಸ್ಮರಿಸಿಕೊಳ್ಳುತ್ತಿದ್ದೇನೆ.

ಸಬ್ ಇನ್ಸ್‌ಪೆಕ್ಟರ್ ಸದಾಶಿವರಾಯರ ಮಕ್ಕಳಾದ ಲೀಲಾ, ವಿದ್ಯಾಶಂಕರ್, ಭವಾನಿಶಂಕರರು ನನ್ನ ಜೊತೆಗೆ ತಿರುಗಾಡುತ್ತಿದ್ದುದರಿಂದ ಸಿನಿಮ ಮಂದಿರಗಳು ಇತರರ ಪಾಲಿಗೆ ಮುಚ್ಚಿದಂತಿದ್ದು ಮಹಾರಾಜರ ಕುಟುಂಬದವರಿಗಷ್ಟೇ ನೋಡಲು ಮೀಸಲಾಗಿದ್ದಾಗಲೂ ನಾನು ಆ ಯಾವ ಸಿನಿಮಾ ಮಂದಿರವನ್ನು ನನ್ನ ಶಿಷ್ಯರೊಂದಿಗೆ ಹೊಕ್ಕು ಸಿನೇಮಾ ನೋಡಿಕೊಂಡು ಬರುತ್ತಿದ್ದೆ. ದರಬಾರ್ ಡ್ರೆಸ್ಸಿನಿಂದ ಅರಮನೆಯ ದರ್ಬಾರಿಗೂ ಹೋಗಿದ್ದೆ. ಜಗನ್ಮೋಹನ ಬಂಗಲೆಯಲ್ಲಿ ೧೯೪೧ರಲ್ಲಿ ಜಯಚಾಮರಾಜ ಒಡೆಯರ ಸ್ವಹಸ್ತದಿಂದಲೇ ನಾನು ಪೂರ್ವೋಕ್ತ ಬಂಗಾರದ ಮೆಡಲುಗಳನ್ನು ತೆಗೆದುಕೊಂಡದ್ದು. ಅಗತ್ಯವಾದಾಗ ಪೋಲೀಸ್ ಇಲಾಖೆಯ ಬೈಸಿಕಲ್ಲನ್ನು ಹತ್ತಿಕೊಂಡು ತಿರುಗಲು ನನಗೆ ಅವಕಾಶ ಸಿಕ್ಕಿತು. ಕಳ್ಳರ ತನಿಖೆ, ಪೋಲೀಸರ ತನಿಖೆಗಳೆರಡನ್ನೂ ಅನೇಕ ಸಲ ನೋಡಿದೆ. ಸದಾಶಿವರಾಯರ ಕೃಪೆಯಿಂದ.

ನಾಲ್ವಡಿ ಕೃಷ್ಣರಾಜ ಒಡೆಯರು ಸ್ವರ್ಗಸ್ಥರಾದಾಗ ದೊಡ್ಡ ಕೆರೆ ಏರಿಯನ್ನು ಹಾಯ್ದು ಅವರ ಶವವನ್ನು ಒಯ್ಯುವಾಗ ಆಬಾಲವೃದ್ಧ ಸ್ತ್ರೀ ಪುರುಷರು ಅತ್ತದ್ದನ್ನೂ ಅದಕ್ಕೂ ಮೊದಲು ಜಯಚಾಮರಾಜೇಂದ್ರ ಒಡೆಯರು ಸತ್ಯಪ್ರೇಮಾದೇವಿಯನ್ನು ವೈಭವದಿಂದ ಮದುವೆಯಾದಾಗ ನಗರದ ಶ್ರೀಮಂತ ಬಡವರೆಲ್ಲರೂ ಆನಂದ ಬಾಷ್ಪ ಸುರಿಸುತ್ತ ಹೆಮ್ಮೆಯಿಂದ ರಾಜಕುಮಾರ ದಂಪತಿಗಳನ್ನು ನೋಡುತ್ತಿದ್ದ ಕಾಲದಲ್ಲಿ ಉತ್ಸಾಹೋದ್ಗಾರ ಮಾಡಿದ್ದನ್ನು ಕಣ್ಣಾರೆ ಕಂಡಿದ್ದೆ. ಅದರಿಂದ ಮೈಸೂರು ರಾಜಮನೆತನದ ಜನಪ್ರಿಯತೆ ಎಷ್ಟು ಸತ್ಯವಾದುದು ಎಂಬುದನ್ನು ನನಗೆ ಕಂಡುಕೊಳ್ಳಲು ಸಾಧ್ಯವಾಯಿತು. ಮೈಸೂರು ನಗರ ಅಂದು ನಂದನವನಗಳ ಇಂದ್ರ ವೈಭವದ ಸೌಂದರ್ಯದಿಂದ ಕೂಡಿತ್ತು. ಜನರು ಕಲಾಭಿಮಾನಿಗಳೂ, ವಿದ್ಯಾಪಕ್ಷಪಾತಿಗಳೂ, ದಾನಶೂರರೂ, ಉದಾರಿಗಳೂ, ಗೌರವಸ್ಥರೂ, ದಯಾಪರರೂ, ಸಭ್ಯರೂ ಆಗಿದ್ದರೆಂದು ನನಗೆ ವರ್ಷ ವರ್ಷ ಹೆಚ್ಚು ಹೆಚ್ಚಾಗಿ ಅನುಭವಕ್ಕೆ ಬಂದಿತು.

ಎಂ.ಎ. ಆಯಿತು. ಅನಂತರ ನೌಕರಿಯ ಪ್ರಶ್ನೆ. ಎಲ್ಲಿ ಹೋದರೂ "ನಿಮ್ಮ ಜನಿವಾರ ಅಡ್ಡ ಬರುತ್ತದೆ" ಎಂಬ ಮಿತ್ರರೇ ಕಂಡು ಬಂದರು. ೧೯೪೧ರಲ್ಲಿ

ಬೆಂಗಳೂರಿಗೆ ಹೋದಾಗ ಮಲ್ಲೇಶ್ವರದಲ್ಲಿ "ಬ್ರಾಹ್ಮಣರಿಗೆ ಮನೆಯನ್ನು ಬಾಡಿಗೆಗೆ ಕೊಡಲಾಗುವುದಿಲ್ಲ" ಎಂದು ಬೋರ್ಡು ಹಾಕಿದ್ದನ್ನು ನೋಡಿದ್ದೆ. ಹಿಂದುಸ್ತಾನ್ ಏರ್ ಕ್ರಾಫ್ಟಿನಿಂದ ಬಂದ ಅರ್ಜಿ ಫಾರಮ್ಮಿನಲ್ಲಿ ಸ್ವಪ್ರಶಂಸೆ ಬರೆದುಕೊಳ್ಳುವ ಸಂದರ್ಭದಿಂದ ನಾಚಿದೆ. ಅದರ ಒಂದು ಕಾಲಮ್ಮಿನಲ್ಲಿ "ನೀನು ಕ್ರಿಮಿನಲ್ ಅಪರಾಧಿಯೇ?" ಎಂದು ಕೇಳಿರುವುದನ್ನು ಓದಿ ಆ ಫಾರಮ್ಮನನ್ನು ಹರಿದೊಗೆದುಬಿಟ್ಟೆ. ಅಷ್ಟರಲ್ಲಿ ರಾಲೋ ಸಾಹೇಬರಿಂದ ೨ನೆಯ ಮಹಾಯುದ್ಧ ಆರಂಭವಾಗಿದ್ದುದರಿಂದ, "ನೀನು ಬ್ರಿಟಿಷರ ಪರವಾಗಿ ಯುದ್ಧ ಪ್ರಚಾರಕನ ಹುದ್ದೆಯನ್ನು ಸ್ವೀಕರಿಸುವೆಯಾ?" ಎಂಬ ಕಾಗದ ಬಂತು. ನನ್ನ ಮನೆತನದವರೆಲ್ಲಾ ಕಾಂಗ್ರೆಸ್ಸಿಗೆ ಸೇರಿ ಬ್ರಿಟಿಷರ ವಿರುದ್ಧ ಪ್ರಚಾರ ಮಾಡುತ್ತಿರುವಾಗ ನನಗೆ ಆ ಹುದ್ದೆ ತ್ಯಾಜ್ಯವೆನಿಸಿತು. "ದಯವಿಟ್ಟು ಕ್ಷಮಿಸಿರಿ– ನಿಮ್ಮ ಉಪಕಾರಕ್ಕೆ ಕೃತಜ್ಞ, ನಾನು ಆ ಹುದ್ದೆಯನ್ನು ಸ್ವೀಕರಿಸಲಾರೆ" ಎಂದು ಉತ್ತರ ಬರೆದೆ. ಓರಿಯಂಟಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಅಸಿಸ್ಟೆಂಟ್ ಕ್ಯೂರೇಟರ್ ಹುದ್ದೆಗೂ, ಬೆಂಗಳೂರಿನ ಟ್ರಾನ್ಸ್‌ಲೇಟರ್ ಶಾಖೆಯ ಹುದ್ದೆಗೂ ನನ್ನ ಬ್ರಾಹ್ಮಣತ್ವ ಅಡ್ಡ ಬಂದಿತ್ತು. ಏನು ಮಾಡಲೆಂದು ತಿಳಿಯದೆ ಇದ್ದಾಗ ಪತ್ರಿಕೆಯ ಜಾಹೀರಾತನ್ನೋದಿ ಪುಣೆಯಲ್ಲಿಯ ಫೀಲ್ಡ್ ಕಂಟ್ರೋಲರ್ ಆಫ್ ಮಿಲಿಟರಿ ಎಕೌಂಟ್ಸ್ ಆಫೀಸಿನ ಗುಮಾಸ್ತಗಿರಿಗೆ ಅರ್ಜಿ ಹಾಕಿದೆ. ಮರುಟಪ್ಪಾಲಿಗೆ ಆಮಂತ್ರಣವೂ ರೈಲ್ವೇ ಪಾಸೂ ಬಂತು. ನರಸಿಂಹಶಾಸ್ತ್ರಿಗಳಿಂದ ೪೦ ರೂಪಾಯಿಗಳನ್ನು ಸಾಲವಾಗಿ ತೆಗೆದುಕೊಂಡು ರೈಲನ್ನು ಹತ್ತಿದೆ. ಪುಣೆಯನ್ನು ತಲುಪಿದೆ. ದವೆ ಹೋಟೆಲ್‌ನಲ್ಲಿ ಊಟ ಮಾಡಿದೆ. ಹೋಟೆಲಿನಿಂದ ಹೊರ ಬರುವಾಗ ನನ್ನ ಸಹಪಾಠಿಗಳಾಗಿದ್ದ ಕೆ.ಎಸ್.ಕೃಷ್ಣಮೂರ್ತಿ ಮತ್ತು ನರಸಿಂಹಾಚಾರಿ ಸಿಕ್ಕಿದರು. ಅವರು ನನ್ನ ಹಾಗೆ ನಿರುಪಾಯರಾಗಿ ಉಕ್ತ ಗುಮಾಸ್ತಗಿರಿಯನ್ನು ಪಡೆಯಲು ಬಂದಿದ್ದರೆಂಬುದು ಅಲ್ಲೇ ಗೊತ್ತಾಯಿತು. ನಾವು ಮೂವರು ಸೇರಿ ಪುಣೆಯ ಕಂಟೋನ್ಮೆಂಟ್‌ನಲ್ಲಿದ್ದ ಸೇಠಜಿಯೊಬ್ಬರ ಮನೆಯ ಅಟ್ಟದಲ್ಲಿ ಒಂದು ಕೋಣೆಯನ್ನು ೩ ದಿನ ಸುತ್ತಾಡಿ ಬಾಡಿಗೆಗೆ ಪಡೆದವು.

ಆ ಕೋಣೆಯೋ – ತಗಣಿಗಳ ಸಾಮ್ರಾಜ್ಯವಾಗಿತ್ತು. ಆದ್ದರಿಂದ ಅದರ ಬಾಗಿಲಿಗೆ *"ರಾಜಮತ್ಕುಣ" ಎಂಬ ಬೋರ್ಡನ್ನು ತಗುಲಿಸಿದೆ. ಅದಕ್ಕೆ ಹೋಗುವ ಕೊಳಕು ಅಡ್ಡ ಹಾದಿಗೆ "Paradise street- ಸ್ವರ್ಗ ಮಾರ್ಗ" ಎಂದು ಹೆಸರಿಟ್ಟೆ. ಅದರಲ್ಲೇ ನಾವು ಸ್ವಯಂ ಪಾಕ ಮಾಡಿಕೊಳ್ಳಲು ಆರಂಭಿಸಿದೆವು. ಬೆಳಿಗ್ಗೆ ಮಿಲಿಟರಿ ಎಕೌಂಟ್ಸ್ ಆಫೀಸಿಗೆ ಹೋದರೆ ಸಾಯಂಕಾಲ ತಿರುಗಿ ಬರುವುದು ನಮ್ಮ ದಿನಚರಿಯಾಗಿತ್ತು. ಮಧ್ಯಾಹ್ನ ಕ್ಯಾಂಟೀನ್‌ನಲ್ಲಿ ತಿಂಡಿ ತಿಂದುಕೊಂಡು ಇರಬೇಕಾಯ್ತು. ತಿಂಗಳಿಗೆ ೬೨ ರೂಪಾಯಿಗಳ ಸಂಬಳ. ಕೆಲಸಕ್ಕೆ ಸೇರಿದ್ದು ೧೯೪೧ರ ಆಗಸ್ಟ್ ತಿಂಗಳಲ್ಲಿ. "ಅಧಿಕ ಕೆಲಸ ಅಲ್ಪ ಸಂಬಳ" ಎಂಬ ಸ್ಥಿತಿ ನಮ್ಮದಾಗಿತ್ತು. ಆದರೆ ನಮ್ಮಂತೆಯೇ ಅಲ್ಲೇ ಸುಮಾರು ೨೦೦೦ ಭಾರತೀಯರು ಜೀತದಾಳುಗಳಂತೆ ದುಡಿಯುತ್ತಿದ್ದುದನ್ನು ಕಂಡೆವು. ಆದರೆ ಅವರೆಲ್ಲರೂ ಕಾಂಗ್ರೆಸ್ ಫಂಡಿಗೆ ತಮ್ಮ ಸಂಬಳದಲ್ಲಿ ಒಂದು

ರೂಪಾಯಿ ದೇಣಿಗೆಯನ್ನು ಸಲ್ಲಿಸುತ್ತಿದ್ದರು ನಾವೂ ಹಾಗೆ ಮಾಡಲಾರಂಭಿಸಿದೆವು. ಅದೊಂದು ನಮಗೆ ಸಮಾಧಾನ. ಉಳಿದೆಲ್ಲವೂ ಅಸಮಾಧಾನಕರವೇ ಎಂದು ಹೇಳಬಹುದಾಗಿದ್ದರೂ ಕಂಟೋನ್ಮೆಂಟ್ ವರ್ತಕರು ನಮ್ಮ ಮೇಲೆ ನಂಬಿಗೆಯಿಟ್ಟು ಉದ್ದರಿಗೆ ಸಾಮಾನುಗಳನ್ನು ಕೊಡುತ್ತಿದ್ದುದು ಒಂದು ವಿಶೇಷ. ಎಲ್ಲೆಲ್ಲೂ "ಚಿಲ್ಲರೆ ಇಲ್ಲ" ಎಂಬ ಬೋರ್ಡುಗಳು ಆದರೆ ರೂಪಾಯಿಯಷ್ಟಾದ ಕೂಡಲೇ ಆ ಸಮ ಮೊತ್ತದ ಬಾಕಿಯನ್ನು ನಾವು ಅಂಗಡಿಗೆ ಕೊಡುತ್ತಿದ್ದೆವು. ನಾವೇ ಲೆಕ್ಕ ಇಟ್ಟುಕೊಳ್ಳುತ್ತಿದ್ದೆವು. ಅಂಗಡಿಯವರು ಇಟ್ಟುಕೊಳ್ಳುತ್ತಿರಲಿಲ್ಲ. ನಮ್ಮ ವಿಶ್ವಾಸಾರ್ಹತೆ ನಮಗೊಂದು ಸಮಾಧಾನ.

ಅದು ಹಿಟ್ಲರನ ಪಕ್ಷಕ್ಕೆ ಸೇರಿದ್ದ ಜಪಾನು ಬ್ರಹ್ಮದೇಶದ ಮೇಲೆ ದಾಳಿ ಮಾಡುತ್ತಿದ್ದ ಕಾಲ. ಮಹಾತ್ಮಗಾಂಧಿಯವರು "ಕ್ವಿಟ್ ಇಂಡಿಯಾ" ಘೋಷಣೆ ಮಾಡಿದ ಕಾಲ. ಭಾರತ ದೇಶದ ವಿಭಜನೆಯ ಮಾತುಕತೆಗಳು ನಡೆಯುತ್ತಿದ್ದ ಕಾಲ. ಆಫೀಸಿನಲ್ಲಿರುವ ಅತಿ ಬಹುಸಂಖ್ಯಾತ ಭಾರತೀಯರೆಲ್ಲರಿಗೂ ಕಳವಳ. ಆದರೂ ನಮ್ಮ ಮೂಕ ಪ್ರಾರ್ಥನೆ ದೇಶ ವಿಭಜನೆಯಾಗದಿರಲಿ, ಸ್ವಾತಂತ್ರ್ಯ ಬರಲಿ ಎಂಬುದೇ ಆಗಿತ್ತು. ಆಗ ರಾಜಾಜಿ ಪುಣೆಗೆ ಬಂದು ಹೋದರು. ಕಾಲೇಜುಗಳ ವಿದ್ಯಾರ್ಥಿಗಳು ಕಾಂಗ್ರೆಸ್ಸಿಗೆ ಜಯವಾಗಲಿ ಎಂದು ಬಹಿರಂಗವಾಗಿ ಘೋಷಿಸುತ್ತಿದ್ದರು. ಗುಮಾಸ್ತರಾಗಿದ್ದ ಬೇರೆ ಬೇರೆ ಪ್ರಾಂತಗಳಿಂದ ಬಂದ ನಾವೆಲ್ಲರೂ ಸಂಘಟಿತರಾಗುತ್ತಿದ್ದೆವು. ಮರಾಠಿಗಳು, ಕನ್ನಡಿಗರು, ಬಂಗಾಳಿಗಳು, ಪಂಜಾಬಿಗಳು, ಶೇಖರು, ತಮಿಳರು, ತೆಲುಗರು– ಎಲ್ಲರೂ ಆ ಮುಖ್ಯ ಕಛೇರಿಯಲ್ಲಿದ್ದೆವು. ನಮ್ಮ ಭಾವೈಕ್ಯವು ಸ್ವಾಭಾವಿಕವಾಗಿತ್ತು ಫೀಲ್ಡ್ ಕಂಟ್ರೋಲರ್ ವಿಲ್ಸನ್ ಮಾತ್ರ ಆಂಗ್ಲರು. ಅವರ ಡೆಪ್ಯುಟಿಗಳಿಬ್ಬರೂ ಭಾರತೀಯರು. ಮಿಕ್ಕ ಎಲ್ಲರೂ – ಜವಾನರವರೆಗೆ ಹೆಚ್ಚಾಗಿ ಭಾರತೀಯರೇ ಆಗಿದ್ದರು. ದೇಶದಲ್ಲಿದ್ದ ಸೈನಿಕ ಅಧಿಕಾರಿಗಳಲ್ಲಿ ಬ್ರಿಟಿಷ್ ಕಮೀಷನ್ನಿನವರು, ಭಾರತೀಯ ಕಮೀಷನ್ನಿನವರು ಎಂಬ ಎರಡು ಬಗೆಯವರಿದ್ದರು. ಎರಡು ಕಮೀಷನ್ನಿನಲ್ಲಿಯೂ ಬ್ರಿಟಿಷರೂ, ಭಾರತೀಯರೂ ಬೆರೆತಿದ್ದರು. ಕಂಟೋನ್ಮೆಂಟಿನಲ್ಲಿ ಸ್ಥಳೀಯ ಕುಟುಂಬಗಳಿದ್ದ ಪ್ರದೇಶಗಳಿಗೆ ಸೈನಿಕರು ಹೋಗಕೂಡದೆಂಬ ಕಟ್ಟಾಜ್ಞೆಯಿತ್ತು. ಒಂದು ಸಂತೆಯ ದಿನ ಇಳಿ ವಯಸ್ಸಿನ ಆಂಗ್ಲ ಮುದುಕಿಯು ಬುಟ್ಟಿಯೊಂದನ್ನು ಬಗಲಲ್ಲಿಟ್ಟುಕೊಂಡು ಹತ್ತಿರದ ದಾರಿ ಎಂದು ಮುಖ್ಯ ರಸ್ತೆಯನ್ನು ಬಿಟ್ಟು ಕುಟುಂಬಸ್ಥರಿದ್ದ ಅಡ್ಡಕೇರಿಯನ್ನು ಹೊಕ್ಕಳು. ನಾನು ನಮ್ಮ ಅಟ್ಟದ ಮೇಲಿನ ಕೋಣೆಯಿಂದ ನೋಡುತ್ತಿದ್ದೆ. ನೆರೆಮನೆಯ ನಾಮದೇವ ಸಿಂಪಿಯಾಕೆಯೊಬ್ಬರು ಮನೆ ಬಾಗಿಲು ತೆರೆದು ಹೊರಗೆ ಬಂದು ಒಮ್ಮಿಂದೊಮ್ಮೆ ಕಸಬರಿಗೆಯಿಂದ ಆ ಮುದುಕಿಯನ್ನು ಥಳಿಸಲಾರಂಭಿಸಿದರು. ಇವಳದು ಮರಾಠಿ ಬೈಗುಳ, ಅವಳದು ಇಂಗ್ಲೀಷ್ ರೋದನ. ಕೂಡಲೇ ನಾನು ಕೆಳಗಿಳಿದು ಹೋಗಿ ಆ ಮರಾಠಿಗಳನ್ನು ತಡೆದೆ. "ಆ ಬ್ರಿಟಿಷ್ ಹೆಂಗಸು ಯುದ್ಧ ಮಾಡುವವಳಲ್ಲ. ಅವರು ತರಕಾರಿ ಕೊಳ್ಳಲು ಹೋಗುತ್ತಿದ್ದಾಳೆ. ಅವಳನ್ನು

ಹೊಡೆಯಬೇಡ" ಎಂದು ಮರಾಠಿಯಲ್ಲಿ ಪದೇ ಪದೇ ಹೇಳಿದ ಬಳಿಕ ಅವಳು ಮುದುಕಿಯನ್ನು ಬಿಟ್ಟಳು. ಆದರೂ ಗೊಣಗುತ್ತಾ ಮನೆಯೊಳಕ್ಕೆ ಆ ಸಿಂಪಿಯಾಕೆ ನಡೆದಳು. ಇನ್ನೊಂದು ಪ್ರಕರಣ: ಶನಿವಾರ ಸಾಯಂಕಾಲ ನಾನೂ ನನ್ನ ಇಬ್ಬರು ಸ್ನೇಹಿತರು ಆಫೀಸಿನಿಂದ ಬರುತ್ತಿದ್ದಾಗ ನಮ್ಮ ಮನೆಯ ಹತ್ತಿರದ ಚಿಕ್ಕ ಬಯಲಿನಲ್ಲಿ ಒಬ್ಬ ಮರಾಠಿ ರಿಕ್ಷಾಚಾಲಕನು ಬಾರುಗೋಲಿನಿಂದ ಬ್ರಿಟಿಷ್ ಆಫೀಸರನ್ನು ಥಳಿಸುತ್ತಿದ್ದನು. ಇಂಗ್ಲೀಷಿನಲ್ಲಿ ಅವನು ಆರ್ತನಾದಗೈದನು. ನಮ್ಮ ಲಕ್ಷ್ಯ ಅತ್ತ ಹರಿದ ಕೂಡಲೇ ಹತ್ತಿರದಲ್ಲಿ ಹೋಟೆಲು ಮಾಲೀಕನಾದ ಗುಜರಾತಿಯೊಬ್ಬನನ್ನು ಕರೆದುಕೊಂಡು ಮರಾಠಿ ರಿಕ್ಷಾ ಚಾಲಕನನ್ನು ತಡೆದೆವು. ಎರಡು ಫರ್ಲಾಂಗಿನಷ್ಟು ದೂರದಲ್ಲಿರುವ ಸಿನೇಮಾ ಮಂದಿರಕ್ಕೆ ಹೋಗಲು ರಿಕ್ಷಾಚಾಲಕ ೧೦ ರೂಪಾಯಿ ಕೊಡಬೇಕೆಂದು ಆ ಸೈನ್ಯಾಧಿಕಾರಿಗೆ ಹೇಳುತ್ತಿದ್ದ. ಅಧಿಕಾರಿ ಅದು ಹೆಚ್ಚಾಯಿತು ಏನಾದರೂ ಹೊಂದಿಕೆ ಮಾಡಿಕೊಳ್ಳೋಣ ಎಂದು ಕಾಲನ್ನು ರಿಕ್ಷಾವಾಹನದಲ್ಲಿಟ್ಟಿದ್ದ. ದರ ನಿರ್ಣಯವಾಗುವ ಮೊದಲೇ ರಿಕ್ಷಾ ಹತ್ತಿದ್ದು ತಪ್ಪೆಂದು ರಿಕ್ಷಾ ಚಾಲಕ ಬೈಯುತ್ತ ಚಾವಟಿಯಿಂದ ಹೊಡೆಯಲಾರಂಭಿಸಿದ್ದ. ಅಷ್ಟು ಹೊತ್ತಿಗೆ ಆ ಚಾಲಕನನ್ನು ಬೆಂಬಲಿಸಲು ಸುಮಾರು ೫೦ ಸ್ಥಳೀಯ ಜನರು ಅಲ್ಲಿ ನೆರೆದಿದ್ದರು. ಅವರೆಲ್ಲರಿಗೂ ನಮ್ಮ ಗುಜರಾತಿ ಕಷ್ಟದಿಂದ ಸಮಾಧಾನ ಮಾಡಿದನು. ಆ ಮೇಲೆ ಆ ಅಧಿಕಾರಿ ನಮಗೆ ನಮಸ್ಕಾರ ಮಾಡಿ ಕೃತಜ್ಞತೆ ಸೂಚಿಸಿ ನಡೆಯುತ್ತಲೇ ಸಿನಿಮಾ ಗೃಹಕ್ಕೆ ಹೊರಟುಹೋದನು. "ತುಂ ಕೌನ್ ಹೋ? ಮೈ ಮರಾಠಾ ಹೂಂ" ಮತ್ತು "ಶಿವಾಜಿನೇ ಕ್ಯಾ ಕಿಯಾ?" "ಲಡಾಯಿ ಕಿಯಾ" ಎಂಬ ರಿಕ್ರೂಟ್‌ಮೆಂಟ್ ಬೋರ್ಡಿನ ಪ್ರಚಾರ ಘೋಷಣೆಯ ಅರ್ಥ ನಮಗೆ ಆ ಘಟನೆಯಿಂದ ಮನದಟ್ಟಾಯಿತು.

ಭಾರತ ದೇಶದಲ್ಲಿ ಕಲ್ಕತ್ತ ಅತಿ ಹೊಲಸಾದ ನಗರಗಳಲ್ಲಿ ಅಗ್ರಗಣ್ಯ ಎನ್ನಿಸಿದ್ದರೆ ಪುಣೆಯೂ ಪುಣ್ಯ ನಗರ ಅಂಥವುಗಳಲ್ಲಿ ಎರಡನೆಯ ಸ್ಥಾನ ಪಡೆದಿತ್ತು. ಅಲ್ಲಿ ಹರಿಯುವ ಮಾಥಾ ನದಿಯು ನಗರದ ಮೂರು ಕಡೆಗಳನ್ನೂ ಆವರಿಸಿತ್ತು. ಬೇಸಿಗೆಯಲ್ಲಿ ಕೆಲವು ಕಡೆ ಅದರಲ್ಲಿ ಕೇವಲ ಮೊಣಕಾಲು ಮಟ್ಟದ ನೀರಿರುತ್ತಿತ್ತು. ಅದರ ಹತ್ತಿರ ಊರ ಹೊರಗೆ "ಬಂಡ್ ಗಾರ್ಡನ್" ಎಂಬ ಚಿಕ್ಕ ನಗರಸಭಾ ಕೈತೋಟವಿತ್ತು. ಒಂದು ಆದಿತ್ಯವಾರದ ದಿನ ನಮ್ಮ ವಿಭಾಗದ ಸೂಪರಿಟೆಂಡೆಂಟ್ ಶಿವನಾಥವೈದ್ಯರು ನನ್ನನ್ನು ವನಭೋಜನಕ್ಕೆ ಆಮಂತ್ರಿಸಿದರು. ಅವರು ಪಂಜಾಬಿನ ವರ್ತಕರು. ಅವರ ಆಮಂತ್ರಣ ಸ್ವೀಕರಿಸಿದ ನಾನು, ಅವರು ನಿರ್ಧರಿಸಿದ್ದ ಒಂದು ಗಂಟೆಗಿಂತ ಸ್ವಲ್ಪ ಮೊದಲೇ ಆ ಉದ್ಯಾನವನಕ್ಕೆ ಹೋಗಿ ಕಲ್ಲು ಬೆಂಚಿನ ಮೇಲೆ ಮಾಥಾ ನದಿಗೆದುರಾಗಿ ಕುಳಿತಿದ್ದೆ. ಮಾಥಾ ನದಿ ಒಂದು ದೊಡ್ಡ ಚರಂಡಿಯಂತೆ ಹರಿಯುವುದು ಕಾಣಿಸಿತು. ನಾನು ನೋಡುತ್ತಿದ್ದ ಹಾಗೆ ದುರ್ಗಂಧದ ಗಾಳಿ ಆ ಹೊಳೆಯತ್ತಣಿಂದ ಉಪವನಕ್ಕೆ ಬೀಸಿತು. ಕೂಡಲೇ ಅಲ್ಲಿಗೊಂದು ಕಾರು ಬಂತು. ಕಾರಿನಿಂದ ಶ್ರೀಮಂತ ಯುವಕ–ಯುವತಿ ದಂಪತಿಗಳು ಕೆಳಗಿಳಿದರು. ನಾನು ಕುತೂಹಲದಿಂದ ಅತ್ತ

ನೋಡುತ್ತಿರುವಾಗಲೇ ಅವರು ಕೈ ಸನ್ನೆ ಮಾಡಿ ದೋಣಿಯವನೊಬ್ಬನನ್ನು ಕರೆದು ಅವನ ದೋಣಿಯನ್ನು ಹತ್ತಿ, ಆ ನದಿಯಲ್ಲಿ ಜಲಯಾನ ಮಾಡತೊಡಗಿದರು. "ಅಬ್ಬಾ" ಎಂದೆ. "ಮೆಚ್ಚಿದವನಿಗೆ ಮರಣವೂ ಸುಖಕರ" ಎಂಬುದಕ್ಕಿದು ಉದಾಹರಣೆ ಎಂದುಕೊಂಡೆ. ಆ ಶ್ರೀಮಂತ ದಂಪತಿಗಳ ಜಲವಿಹಾರ ವೈತರಣಿಯಲ್ಲಿ ನಡೆದರೂ ಅವರಿಗೆ ಪರಿವೆಯಿಲ್ಲ ದಾಂಪತ್ಯ ಯಾತ್ರೆ ಲಭಿಸಿದ್ದೇ ಅವರಿಗೆ ಮುಖ್ಯ. ಆದಿ ಪಂಪನು ತನ್ನ "ವಿಕ್ರಮಾರ್ಜುನ ವಿಜಯದಲ್ಲಿ" ಹಿಡಿಂಬೆ ಭೀಮನನ್ನು ಮದುವೆ ಮಾಡಿಕೊಂಡ ಮೇಲೆ ಅವನನ್ನೆತ್ತಿಕೊಂಡು ಗಗನ ಮಾರ್ಗಗಾಮಿನಿಯಾಗಿ ನಾನಾ ಪ್ರದೇಶಗಳಲ್ಲಿ ಇಳಿದು ರಮಿಸಿದ್ದನ್ನು ಹೀಗೆ ವರ್ಣಿಸಿದ್ದಾನೆ:

"ಎಲ್ಲಿ ಕೊಳನೆಲ್ಲಿ ತಣ್ಬುಳಿ–
ಲೆಲ್ಲಿ ಲತಾಗೃಹಮದೆಲ್ಲಿ ಧಾರಾಗೃಹಮೆಂ
ಕಲ್ಲಿಯ ನಿಂತಲ್ಲಿಯೆ ಕುಳಿ–
ತಲ್ಲಿಯೆ ರಮಿಯಿಸಿದಳಾಕೆ ಮರುದಾತ್ಮಜನೋಳ್"

ಎಂದದ್ದಾಗ ನನಗೆ ನೆನಪಾಯಿತು. ಆದರೆ ಅವರು ತನ್ನ ಪತಿರಾಜನನ್ನು ಆ ಮಾಥಾ ನದಿಯ ದುರ್ಗಂಧ ಸೇವನೆಗೆ ಬೇಸಿಗೆಯಲ್ಲಿ ಕರೆದುಕೊಂಡು ಹೋದದ್ದು ಸುಳ್ಳು!

ಇನ್ನು ವನಭೋಜನ. ಹುಬ್ಬಳ್ಳಿ ನಗರದ ಉಪವನದ ಕೌಟುಂಬಿಕ ಕೈತುತ್ತಿನ ವನಭೋಜನ ಅದಾಗಿರಲಿಲ್ಲ. ಚಪಾತಿಯ ಬುಟ್ಟಿ, ಪಲ್ಯದ ಬುಟ್ಟಿ, ಹುಳಿಯ ಪಾತ್ರೆ ಒಂದು ಅತ್ಯಗಲವಾದ ಊಟದ ಬಟ್ಟಲು ಒಂದು ಮೇಜಿನ ಮೇಲೆ ಕಾಣಿಸಿದವು. ವೈದ್ಯರೂ ಅವರ ಧರ್ಮಪತ್ನಿಯೂ ಇಬ್ಬರೂ ಮಕ್ಕಳು ಕಾರಿನಿಂದ ಇಳಿದು, ಆ ನಾಲ್ಕು ಸಾಮಾನುಗಳನ್ನು ಬುಟ್ಟಿಯಲ್ಲಿ ಮುಚ್ಚಿಕೊಂಡು ಅಲ್ಲಿ ತಂದಿಟ್ಟಿದ್ದರು. ನನ್ನನ್ನು ಕೈಸನ್ನೆ ಮಾಡಿ ಊಟಕ್ಕೆ ಕರೆದರು. ನಮ್ಮ ಊಟ ವ್ಯಕ್ತಿ ಪ್ರತ್ಯೇಕತೆಯನ್ನು ಆಧರಿಸಿತ್ತು. ಅವರದ್ದಾದರೋ "ಅಕ್ಷರಶಃ ಸಹನೌ ಭುನಕ್ತು" ಆಗಲಾರಂಭಿಸಿದ್ದನ್ನು ಕಂಡೆ. ಏಕೆಂದರೆ ಚಪಾತಿ, ಪಲ್ಯ, ಹುಳಿಗಳನ್ನು ಆ ಹೆಬ್ಬಟ್ಟಲೊಂದರಲ್ಲಿ ಬಡಿಸಿ ಅದರ ಸುತ್ತಲೂ ಅವರು ನಾಲ್ಕು ಜನರೂ, ನಾನೂ ಕುಳಿತುಕೊಳ್ಳುವ ವ್ಯವಸ್ಥೆಯಾಯ್ತು.

ಕನಕದಾಸರ,

"ಎಂಜಲೆಂಜಲು ಎಂಬರಾ ನುಡಿ
ಎಂಜಲಲ್ಲವೆ ವಾರಿ ಜಲಚರ
ದೆಂಜಲಲ್ಲವೆ ಹಾಲು ಕರುವಿನ ಎಂಜಲೆನ್ನಿಸದೆ
ಎಂಜಲೆಲ್ಲಿಯದೆಲ್ಲಿಯುಂ ಪರ

ರೆಂಜಲಲ್ಲದೆ ಬೇರೆ ಭಾವಿಸ–
ಲೆಂಜಲುಂಟೇ? ದೇವ ರಕ್ಷಿಸು ನಮ್ಮನನವರತ"

ಎಂಬ ಪದ್ಯ ನೆನಪಾಗಿ ಆ ಭೂಮದೂಟದ ಬಗ್ಗೆ ಹೆದರಿದೆ. ಕೂಡಲೇ ನಾನು ಚಪಾತಿಗಳನ್ನು ಮೊಟ್ಟಮೊದಲು ಕೈಗೆತ್ತಿಕೊಂಡು ಅವುಗಳ ಮೇಲೆ ಆ ಪಲ್ಯ ಹುಳಿಗಳನ್ನು ಬಡಿಸಿಕೊಂಡು ಪ್ರತ್ಯೇಕವಾಗಿಯೇ ಆ ಮೇಜಿನ ಸುತ್ತಲಿದ್ದ ಶಿಲಾಸನವನ್ನು ಆಕ್ರಮಿಸಿ ತಿನ್ನತೊಡಗಿದೆ. ಬಟ್ಟಲಗಲದ ತೆಳ್ಳಗಿನ ಚಪಾತಿಗಳು, ಅವಕ್ಕೆ ತಕ್ಕ ಪಲ್ಯ ಹುಳಿಗಳು. ನಾನು ಬಹಳ ನಿಧಾನವಾಗಿ ತಿನ್ನತೊಡಗಿದೆ. ಏಕೆಂದರೆ ಬೇಗನೆ ಮುಗಿಸಿದರೆ ತಾವು ತಿನ್ನುತ್ತಿದ್ದ ಆ ತಟ್ಟೆಯಿಂದಲೇ ಎತ್ತಿ ನನಗೆ ಚಪಾತ್ಯಾದಿಗಳನ್ನು ಅವರು ಬಡಿಸಿ ಬಿಡುತ್ತಿದ್ದರು. ಆ ನಾಲ್ಕು ಜನರೂ ಒಂದೇ ಬಟ್ಟಲಲ್ಲಿ ಒಂದೊಂದು ಬದಿಗೆ ಒಂದಿಷ್ಟನ್ನು ಸರಿಸಿಕೊಂಡು ತಿನ್ನುತ್ತಿದ್ದರು. "ಶ್ರೀಧರ್ ಸಾಬ್ ಫಿರ್ ಲೀ ಜೀಯೇ" ಎಂದು ಎರಡು ಸಲ ವೈದ್ಯರು ಹೇಳಿದರೂ ನಾನು "ನನ್ನ ಊಟ ಇನ್ನೂ ಮುಗಿಯಲಿಲ್ಲ– ಮುಗಿದ ಮೇಲೆ ನೋಡೋಣ" ಎಂದು ಉತ್ತರ ಕೊಟ್ಟು ಜಾರಿಕೊಂಡೆ. ಇದೂ ಒಂದು ಅನುಭವ. ಆದರೆ ಆ ದಂಪತಿಗಳ ಸೌಜನ್ಯ ಮತ್ತು ಅತಿಥೇಯತೆಗಳನ್ನು ಯಾರೂ ಟೀಕಿಸುವಂತಿಲ್ಲ.

ಶಿವನಾಥವೈದ್ಯರ ಆಫೀಸಾಡಳಿತ ಕೂಡಾ ಪ್ರಾಮಾಣಿಕವೂ ದಕ್ಷವೂ ಆಗಿತ್ತು. ಆಫೀಸಿಗೆ ಹೋದ ಕೂಡಲೇ ತಮ್ಮ ಸುತ್ತ ಕುಳಿತ ಆರು ಜನ ಗುಮಾಸ್ತರನ್ನುದ್ದೇಶಿಸಿ, ಐದು ನಿಮಿಷ ಕಾಲ ಗೀತೆಯ ಒಂದು ಶ್ಲೋಕವನ್ನು ಎತ್ತಿಕೊಂಡು, ಅದರ ಅರ್ಥವನ್ನು ಹಿಂದಿಯಲ್ಲಿ ವಿವರಿಸಿ, ಕಾರ್ಯಮಗ್ನರಾಗುತ್ತಿದ್ದರು. ಇದು ಅವರ ದೈನಿಕ ಕ್ರಮ. ಅದೇ ಮೇರೆಗೆ ಒಂದು ದಿನ ನನಗಿಂತಲೂ ಒಂದು ನಿಮಿಷ ಮೊದಲೇ ಆಫೀಸಿಗೆ ಹೋಗಿ ತಮ್ಮ ಐದು ಜನ ಗುಮಾಸ್ತರೆದುರು, ತಮ್ಮ ಆಸನದಲ್ಲೇ ಕುಳಿತು ಭಾಷಣವನ್ನು ಆರಂಭಿಸಿದರು.

"ಭಾಯಿಯೋ, ಭಗವದ್ಗೀತಾಮೇ ಶ್ರೀ ಕೃಷ್ಣ ಪರಮಾತ್ಮಜೀನೇ ಕ್ಯಾ ಕಹಾ? ಕೀ– ಕಾಮ್ ಕರೋ ನಿಷ್ಕಾಮ್ ನಹೋ"

"ಸಮಝೋ?" ಎಂದು ಹೇಳುತ್ತಿದ್ದಾಗ ನಾನು ಅವರ ಪಕ್ಕದಲ್ಲಿದ್ದ ನನ್ನ ಆಸನದಲ್ಲಿ ಕುಳಿತೆ. "ಸ್ವಾಮಿ, "ಕಾಮ್ ಕರೋ" ಎಂದು ಭಗವಂತ ಹೇಳಿರಬಹುದು. ಆದರೆ ನಿಷ್ಕಾಮ್ ನಹೋ ಎಂದು ಅವನು ಹೇಳಿದಂತಿಲ್ಲ" ಎಂದೆ. ಆ ಕೂಡಲೇ ಸಂಸ್ಕೃತವನ್ನು ತಿಳಿದಿದ್ದ ಅವರು ಅವಾಕ್ಕಾದರು. ನಿಷ್ಕಾಮವೆಂಬುದು ಸಂಸ್ಕೃತದಲ್ಲೂ ಕಾಮರಹಿತತೆ. ಹಿಂದಿಯಲ್ಲಿ ಕಾಮ್ ಎಂದರೆ ಕೆಲಸ. ವೈದ್ಯರ ಇಂಗಿತದ ಪ್ರಕಾರ ನಿಷ್ಕಾಂ ಎಂದರೆ ಕೆಲಸವಿಲ್ಲದೆ ಅಲೆದಾಡುವುದು. ಕರ್ತವ್ಯ ವಿಮುಖನಾಗಿರುವುದು ಎಂಬುದು ಅದರ ಅರ್ಥವಾಗಬೇಕು. ಆದರೆ ಹಿಂದಿಯು ಸಂಸ್ಕೃತದವಲಂಬಿಯಾದುದರಿಂದ ಸಮಸ್ತ

ಪದವೊಂದರಲ್ಲಿರುವ ಎರಡು ಪದಗಳಲ್ಲಿ ಒಂದನ್ನು ಸಂಸ್ಕೃತದಂತೆಯೂ ಇನ್ನೊಂದನ್ನು ಹಿಂದಿ ದೇಶ್ಯದಂತೆಯೂ ಅರ್ಥ ಮಾಡಲು ಸಾಧ್ಯವಿಲ್ಲ. ಈ ಅಂಶವನ್ನು ಕೂಡಲೇ ಅರಿತ ಅವರು ನನ್ನ ನೋಡಿ "ಮಾಫ್ ಕೀ ಜಿಯೆ. ಆಪ್ ಕೋ ಮೈ ಕೃತಜ್ಞ ಹೂಂ" ಎಂದರು.

ಹಾಗೆ ಕನ್ನಡದಲ್ಲಿ–

"ಕಳಾ ವಿಳಾಸ" ಎಂಬುದೂ ಎಂದೂ ಕಲೆಯ ವಿಳಾಸ ಅಥವಾ ಪತ್ತೆ ಎಂದಾಗದು.

"ಸೀಮಾಪುರುಷ" ಎಂಬುದು ಎಂದೂ ಗಡಿಯ ನಿವಾಸಿ ಅಥವಾ ಗಡಿ ಕಾವಲುಗಾರ ಎಂದಾಗದು.

"ಸೇಕ ಪಾತ್ರ" ಎಂಬುದು ಎಂದೂ ಶಾಖ ಕೊಡುವ ಪಾತ್ರೆ ಅಥವಾ ಶಾಖ ಕೊಡಲು ಪಾತ್ರನು ಎಂದಾಗದು.

ಬ್ರಿಗೇಡಿಯರರಂಥ ದೊಡ್ಡ ಸೈನ್ಯಾಧಿಕಾರಿಗಳು ವಿರಳವಾಗಿ ನಮ್ಮ ಆಫೀಸಿನ ಸಪ್ತಕಗಳಿಗೆ (ಸೂಪರಿಂಟೆಂಡೆಂಟ್ ಮತ್ತು ೬ ಗುಮಾಸ್ತರು) ಭೇಟಿ ನೀಡುತ್ತಿದ್ದರು. ಒಂದು ಕುರ್ಚಿ ಇದ್ದರೂ ಅದನ್ನು ಬಿಟ್ಟು ಮೇಜಿನ ಮೇಲೆ ಕುಳಿತುಕೊಂಡು ತಮ್ಮ ಸಂಬಳ ಸಾರಿಗೆಗಳ ಬಾಕಿ ಮುಂತಾದ ವಿಷಯಗಳ ಬಗೆಗಿನ ಮಾಹಿತ್ಯವನ್ನು ನಮ್ಮಿಂದ ಕೇಳಿ ತಿಳಿದುಕೊಳ್ಳುತ್ತಿದ್ದರು. ಅಂಥ ಒಬ್ಬ ಆಂಗ್ಲ ಬ್ರಿಗೇಡಿಯರನು ನಮ್ಮ "ಡಿ" ಸೆಕ್ಷನ್ನಿಗೆ ಹೋಗಿ ಮೇಜನ್ನೇರಿ ಕುಳಿತು ಸಿಗರೇಟ್ ಪ್ಯಾಕನ್ನು ಜೇಬಿನಿಂದ ಹೊರತೆಗೆದು ಅದರಿಂದ ಒಂದು ಸಿಗರೇಟನ್ನು ಎತ್ತಿ ಹಿಡಿದು ಎದುರಿಗಿದ್ದ ಸೂಪರಿಂಟೆಂಡೆಂಟ್‌ರಿಗೆ ಕೊಡಹೋದಾಗ ಅವರು "ನನಗೆ ಸಿಗರೇಟು ಸೇದುವ ಅಭ್ಯಾಸವಿಲ್ಲ, ಕ್ಷಮಿಸಿರಿ" ಎಂದರು. ಆ ಕೂಡಲೇ ಕ್ರುದ್ಧನಾದ ಆ ಬ್ರಿಗೇಡಿಯರನು–

"ಎಲಾ ಕ್ರೂರ ಭಾರತೀಯರೆ, ನೀವು ಹೊಗೆಬತ್ತಿ ಸೇದುವುದಿಲ್ಲ,
ನೀವು ಮಧ್ಯಪಾನ ಮಾಡುವುದಿಲ್ಲನೀವು ವ್ಯಭಿಚಾರ ಮಾಡುವುದಿಲ್ಲ."

ಎಂದು ಗದ್ದರಿಸಿದನು. ಅದನ್ನು ಕೇಳಿದ ಸೂಪರಿಟೆಂಡೆಂಟರೂ, ಗುಮಾಸ್ತರೂ ಅಲ್ಲಿಂದೆದ್ದು ನೇರವಾಗಿ ಎಫ್.ಸಿ.ಎಂ. ವಿಲ್ಸನ್ನರಲ್ಲಿಗೆ ಹೋಗಿ ದೂರಿಕೊಂಡರು. ಅವರು ಆಗಿಂದಾಗ್ಯೆ ಬ್ರಿಗೇಡಿಯರನನ್ನು ಕರೆಯಿಸಿ ತಪ್ಪಾಯಿತು ಎಂದು ಅವನಿಂದ ಹೇಳಿಸಿದರು. ನಮ್ಮ ಗುಮಾಸ್ತ ವರ್ಗದ ಈ ಭಾರತೀಯರಾಭಿಮಾನ ಗೆದ್ದದ್ದನ್ನು ನೋಡಿ ನಮಗೆಲ್ಲಾ ಬಹಳ ಸಂತೋಷವಾಯಿತು. ಆದರೆ ಈಗ ಭಾರತೀಯರ ಗಣನಾಯಕರಲ್ಲೇ ಎಷ್ಟೋ ಜನ ಈ ಮೂರಕ್ಕೂ ಹೆಚ್ಚಿನ ಭ್ರಷ್ಟಾಚಾರಗಳನ್ನು ಮಾಡುವವರು ಸಿಕ್ಕುತ್ತಾರೆ. ಇಂದಿನ ಕಾಲದಲ್ಲಿ ಆ ಬ್ರಿಗೇಡಿಯರ್ ಇಲ್ಲಿ ಇದ್ದಿದ್ದರೆ– ನಮ್ಮಲ್ಲಿ ಹುಟ್ಟಿರುವ ಭ್ರಷ್ಟಾಚಾರ ಸ್ವರೂಪದ ಭೂತ, ಬೇತಾಳ, ಬ್ರಹ್ಮರಾಕ್ಷಸರನ್ನು

ಕಂಡು ಕಂಗಾಲಾಗಿ ಮೂರ್ಛೆ ಹೋಗುತ್ತಿದ್ದನೋ ಏನೋ.

ಪುಣೆಯು "ಸ್ತ್ರೀ ಮಲಯಾಳ" ಎಂದು ಯಾರಾದರೂ ಹೇಳಿದರೆ ಆಗ ತಪ್ಪಾಗುತ್ತಿರಲಿಲ್ಲ. ಪುರುಷರು ಕೇವಲ ದುಡಿಮೆಗಾರರು. ಸ್ತ್ರೀಯರು ದುಡಿಮೆಗಾರ್ತಿಯರಾಗಿರುತ್ತಿದ್ದುದೂ ಉಂಟು. ಅದರ ಜೊತೆಗೆ ಮನೆಯ ಆರ್ಥಿಕ, ಸಾಮಾಜಿಕ ವ್ಯವಹಾರಗಳೆಲ್ಲವನ್ನೂ ಅವರು ನೋಡಿಕೊಳ್ಳುತ್ತಿದ್ದರು. ಆ ನಗರದ "ಲಕಡೀಪೂಲ್" ಎಂಬ ಸೇತುವು "ಲಡಕೀಫೂಲ್" ಎಂಬ ಉಪನಾಮ ಪಡೆದಿದ್ದು ಸಾಲು ಸಾಲಾಗಿ ಸಂಜೆ ಕಾಲೇಜಿನಿಂದ ಮನೆಗೆ ಹೋಗುತ್ತಿದ್ದ ಮಹಿಳೆಯರು ಬಸ್ಸು ಮುಂತಾದ ಯಾವ ವಾಹನ ಬಂದರೂ ಅಡ್ಡ ಸರಿಯದೆ ಅವುಗಳೇ ನಿಂತೋ ಅಡ್ಡ ಸರಿದೋ ಹೋಗಬೇಕಾಗುತ್ತಿದ್ದುದರಿಂದ ಸ್ತ್ರೀಯರ ಎದೆಗಾರಿಕೆ–ಹೊಣೆಗಾರಿಕೆಗಳು ಈಗಲೂ ಮಹಾರಾಷ್ಟ್ರದಲ್ಲಿ ಕಂಡಷ್ಟು ನಮ್ಮಲ್ಲಿ ಕಾಣದು.

ಪುಣೆಯ ವಾಸದ ಕಾಲದಲ್ಲೇ ನನಗೆ ಕುಜರಾಹು ಸಂಧಿ. ಕೆಲಸ ಬಿಟ್ಟು ಮನೆಗೆ ಬರಬೇಕೆಂದೂ ತಾವು ಶಾಂತಿ ಮಾಡಿಸುವುದಾಗಿಯೂ ತಂದೆಯವರು ಕಾಗದ ಬರೆದರು. ಆದರೆ ನಾನು ಹೋಗಲಿಲ್ಲ. ಏಕೆಂದರೆ ಅವರೇ ನನಗೆ ಹೇಳಿಕೊಟ್ಟಿದ್ದ ಎರಡು ಶ್ಲೋಕಗಳನ್ನು ಅವರಿಗೆ ಬರೆದು ಹಾಕಿದೆ. ಅವು ಯಾವುವೆಂದರೆ–

ಸ್ವಯಂ ಧನೇಶಃ ಶ್ವಶುರೋ ನಗೇಶಃ
ಸಖಾ ಧನೇಶಃ ತನಯೋ ಗಣೇಶಃ
ತಥಾಪಿ ಭಿಕ್ಷಾಟನ ಮೇವ ಶಂಭೋಃ
ಬಲೀಯಸೀ ಕೇವಲಮೀಶ್ವರೇಚ್ಛಾ
ವೈದ್ಯಾ ವದಂತಿ ಕಫಪಿತ್ಥ ಮರುದ್ವಿಕಾಂವ್
ಜ್ಯೋತಿರ್ವಿದೋ ಗ್ರಹಗತಿಂ ಪರಿವರ್ತಯಂತಿ
ಭೂತಾಭಿಷಂಗ ಇತಿ ಭೂತವಿದೋ ವದಂತಿ
ಪ್ರಾಚೀನ ಕರ್ಮ ಬಲವನ್ ಮುನಯೋ ವದಂತಿ

ಅವರು ಅಂಡಿಗೆಯಲ್ಲೇ ಶಾಂತಿ ಮಾಡಿಸಿ ಪ್ರಸಾದವನ್ನು ಟಪ್ಪಾಲು ಮೂಲಕ ಕಳುಹಿಸಿಕೊಟ್ಟರು. ನನಗೆ ದುರಾಹಾರ, ದುಃಸಹ ದುಡಿಮೆ, ದುರ್ಗೃಹವಾಸ ಮುಂತಾದವುಗಳ ದೆಸೆಯಿಂದ ನಿದ್ರಾನಾಶ, ರಕ್ತ ಭೇದಿ ಮುಂತಾದ ರೋಗಗಳು ತಲೆದೋರಿದವು. ಅಷ್ಟರಲ್ಲಿ ೧೦ ತಿಂಗಳುಗಳು ಕಳೆದಿದ್ದವು. ಪುಣ್ಯವಾಸವನ್ನು ಮುಗಿಸಬೇಕಾಗಿ ಬಂತು. ಪರಮೇಶ್ವರ ವೈದ್ಯರು ಕಾಗದ ಬರೆದರು. ನಾನು ಭಟ್ಕಳಕ್ಕೆ ಹೋದೆ. ಅಲ್ಲಿಯ ಇಸ್ಲಾಮಿಯಾ ಆಂಗ್ಲೋ ಉರ್ದುಸ್ಕೂಲಿನಲ್ಲಿ ಅಧ್ಯಾಪಕನಾದೆ.

ಭಟ್ಕಳವೂ ನನಗೆ ಮೊದಲು ಅಪರಿಚಿತ ಸ್ಥಳವಾಗಿತ್ತು. ಆಮೇಲೆ ಸುಪರಿಚಿತವಾಯಿತು.

೮ನೇಯ ಶತಮಾನದಲ್ಲಿದ್ದ ೧ನೆಯ ಭಟ್ಟಾಕಲಂಕ ಗುರುವಿನ ಹೆಸರಿನಿಂದ ಅದು ಭಟ್ಟಾಕಲಂಕವಾಗಿ ಅನಂತರ ಭಟ್ಕಳವಾಯಿತು. ಅಲ್ಲಿ ಹಿಂದುಗಳ ಮೂರು ಪಟ್ಟು ನವಾಯತರಿದ್ದಾರೆ. ನವಾಯತರಲ್ಲಿ ಸ್ವಲ್ಪ ಜನರು ಬಹಳ ಶ್ರೀಮಂತರು, ಸಭ್ಯರು ಮತ್ತು ಉದಾರಿಗಳು. ಅವರು ಸ್ಥಾಪಿಸಿದ ತಂಜೀಂ ಸಂಸ್ಥೆ ಹೈಸ್ಕೂಲನ್ನು ನಡೆಸುತ್ತಿತ್ತು. ಅವರು ಸ್ಥಳೀಯ ಜೈನರೆಂದೂ ಅವರು ಮತಾಂತರ ಹೊಂದಿದ್ದು ೧೮ನೆಯ ಶತಮಾನದಲ್ಲಿ ಎಂದು ತಿಳಿದು ಬಂದಿದೆ. ಹೈಸ್ಕೂಲಿನ ೭ ಇಯತ್ತೆಗಳಲ್ಲಿ ಮೊದಲಿನ ನಾಲ್ಕು ಉರ್ದು ಮಾಧ್ಯಮ, ಉಳಿದ ೩ಕ್ಕೆ ಇಂಗ್ಲೀಷ್ ಮಾಧ್ಯಮ. ಮೊದಲಿನ ಎರಡು ವರ್ಷ ತಿಂಗಳಿಗೆ ೭೨ ರೂಪಾಯಿಗಳ ಸಂಬಳದ ಮೇಲೆ ಅಸಿಸ್ಟೆಂಟ್ ಮಾಸ್ತರಾಗಿದ್ದೆ. ಮೂರನೆಯ ವರ್ಷ ಅಫಿಷಿಯೇಂಟಿಂಗ್ ಹೆಡ್ ಮಾಸ್ತರ್ ಆದೆ. ಭಟ್ಕಳದ ಜನರಿಗೆ ಮನುಷ್ಯ ಸಂಬಂಧ ಗಣ್ಯ. ಆದುದರಿಂದ ಅವರು ನನ್ನನ್ನು ಚೆನ್ನಾಗಿ ನೋಡಿಕೊಂಡರು. ಅಲ್ಲಿಯ ಹನುಮಂತ ದೇವಸ್ಥಾನದಲ್ಲಿ ಒಂದು ಕರ್ಣಾಟಕ ಸಂಘವನ್ನು ಸಂಘಟಿಸಿದೆ. ಅದಕ್ಕೆ ಹಿಂದು ಮುಸಲ್ಮಾನ್ ಭೇದವಿಲ್ಲದೆ ಅನೇಕರು ದೇಣಿಗೆ ಕೊಟ್ಟು ಪ್ರೋತ್ಸಾಹಿಸಿದರು. ಶ್ರೀ ಆರ್. ಎಂ. ಕಲ್‌ಗಲ್ ಕಾರ್ಯದರ್ಶಿಯಾಗಿ ಬಹಳ (ಕೆ.ಇ.ಬಿ. ಉಕ್ತ ಚೇರ್ಮನ್) ಉತ್ಸಾಹದಿಂದ ಕೆಲಸ ಮಾಡಿದರು. ನಾನದರ ಅಧ್ಯಕ್ಷನಾಗಿದ್ದೆ. ಶ್ರೀ ಆರ್.ವಿ.ಶಾನಭಾಗರ ಮನೆಯಲ್ಲಿ ವಾಸವಾಗಿದ್ದು ಹನುಮಂತ ದೇವರ ಅರ್ಚಕರಾದ ತಮ್ಮಣ್ಣ ಭಟ್ಟರ ಮನೆಯಲ್ಲಿ ಊಟ ಮಾಡುತ್ತಿದ್ದೆ. ಆಗ ನನ್ನ ಮಾತಾ ಪಿತೃಗಳಿಗೆ ಪುಣೆಯಿಂದ ಹೋಗೋ ಹಾಗೆ ಪ್ರತಿ ತಿಂಗಳೂ ತಕ್ಕಮಟ್ಟಿಗೆ ಹಣವನ್ನು ಕಳುಹಿಸಲು ಸಾಧ್ಯವಾಯಿತು. ನನ್ನ ಹೆಡ್‌ಮಾಸ್ತರ್ ಗಿರಿ ಜನಪ್ರಿಯವಾಯಿತು. ನನ್ನ ಉಪನಾಮ "ಎಂ.ಎ. ಮಾಸ್ತರ್" ಎಂದಾಯಿತು. ಅಲ್ಲಿ ನಾನು ಕೆಲ ಮಟ್ಟಿಗೆ ಉರ್ದುವನ್ನು ಕಲಿತೆನು. ಕುರಾನ್ ಗ್ರಂಥವನ್ನು ಭಾಷಾಂತರ ರೂಪದಲ್ಲಿ ಓದಿದೆನು. ಇಂಗ್ಲೀಷ್, ಕನ್ನಡ, ಸಂಸ್ಕೃತ, ಚರಿತ್ರೆ, ಭೂಗೋಳಗಳನ್ನು ನಾನಲ್ಲಿ ಮೇಲಿನ ಮೂರು ಇಯತ್ತೆಗಳಿಗೆ ಕಲಿಸುತ್ತಿದ್ದೆನು. ಪಠ್ಯೇತರ ಚಟುವಟಿಕೆಗಳನ್ನು ಉರ್ದು ಮತ್ತು ಕನ್ನಡಗಳಲ್ಲಿ ಮಾಡಿಸಿದೆ. ಶಿಸ್ತನ್ನು ಕಾಪಾಡಿಕೊಳ್ಳುವುದಕ್ಕೆ ಬೆತ್ತವನ್ನು ಬಳಸಿದೆ. "ಇನ್ಸ್‌ಪೆಕ್ಷನ್ ರಿಪೋರ್ಟು" ಅನುಕೂಲವಾಗಿ ಬಂದದ್ದರಿಂದ ನನಗೆ ಆಡಳಿತ ಮಂಡಲಿ ೧೫೦ ರೂಪಾಯಿಗಳ ಬೋನಸ್ಸನ್ನು ಕೊಟ್ಟಿತು. ನಾಲ್ಕನೆಯ ವರ್ಷ ಮುಸಲ್ಮಾನ್ ಹೆಡ್‌ಮಾಸ್ತರರನ್ನು ನೇಮಿಸಲಾಯಿತು. ಆದರೂ ನನ್ನ ವಿಶ್ವಾಸ್ಯತೆಗೆ ಯಾವ ಧಕ್ಕೆಯೂ ಉಂಟಾಗಲಿಲ್ಲ. ಆಗ ಪಾಕಿಸ್ತಾನ ಸ್ಥಾಪನೆಯ ಬಗ್ಗೆ ಉತ್ತರಭಾರತದಿಂದ ಪ್ರಚಾರಕರು ಬರುತ್ತಿದ್ದರು. ಅವರಿಗೆ ಭಟ್ಕಳ ನವಾಯತರು ದೇಣಿಗೆ ಕೊಟ್ಟು ಕಳುಹಿಸುತ್ತಿದ್ದರು. ದಿವಂಗತ ಜೆ.ಎಚ್. ಶಂಸುದ್ದೀನ್ ಜುಕಾಕೋ ಬಿ.ಎ. ಎಲ್.ಎಲ್.ಬಿ. ಅವರು ನನ್ನ ಅಧ್ಯಕ್ಷತೆಯಲ್ಲಿ ಶಾಲೆಯ ಅಟ್ಟದ ಮೇಲೆ ಪಾಕಿಸ್ಥಾನ ಪರ ಭಾಷಣ ಮಾಡಿದರು. ಆಗ ಅಧ್ಯಕ್ಷಸ್ಥಾನದಿಂದ ನಾನು ಮಾಡಿದ ವಿಡಂಬನೆಗೆ ಎಲ್ಲರೂ ನಕ್ಕರಲ್ಲದೆ, ಬೇಸರ ಪಡಲಿಲ್ಲ. ನನ್ನ ನವಾಯತ ಶಿಷ್ಯರು

ಪಳ್ಳಿಗಳಿಗೂ ತಮ್ಮ ಮದುವೆಗಳಿಗೂ, ಮಹಮ್ಮದರ ವರ್ದಂತಿಯ ಹಬ್ಬಕ್ಕೂ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ಅವರ ಅತಿಥ್ಯವು ಆತ್ಮೀಯವಾಗಿರುತ್ತಿತ್ತು. ಆದರೆ ಆಡಳಿತ ಮಂಡಳಿ ೨ ವರ್ಷಗಳ ಹಿಂದೆಯೇ ಪೂರ್ಣ ಸಂಬಳದ ಮೇಲೆ ನನ್ನನ್ನು ಬಿ.ಟಿ. ಓದಲು ಕಳುಹಿಸುತ್ತೇನೆ ಎಂದು ಠರಾವು ಮಾಡಿದ್ದರೂ ಕಳುಹಿಸದಿದ್ದುದರಿಂದ ನಾನು ಭಟ್ಕಳವನ್ನು ಬಿಡಬೇಕಾಯಿತು.

ಇದೇ ವೇಳೆಯಲ್ಲಿ ನನ್ನ ತಂದೆಯವರ ಒತ್ತಾಯದಿಂದ ೧೯೪೨ರಲ್ಲಿ ನನ್ನ ಮದುವೆ ಬವಳಾಡಿ ಮಾಧವ ಹೆಬ್ಬಾರರ ಮನೆಯಲ್ಲಿ ನಡೆಯಿತು. ಅದರ "ಪಾರ್ಟಿ"ಯನ್ನು ಭಟ್ಕಳ ಶಾಲೆಯ ಅಟ್ಟದ ಮೇಲೆ ನಡೆಸಲಾಯಿತು. ಅನಂತರ ನಾನು ಹುಬ್ಬಳ್ಳಿಗೆ ಹೋಗಿ ದಿವಂಗತ ಮೊಹರೆ ಹನುಮಂತರಾಯರಿಗೆ ಬ್ರಹ್ಮಾವರದ ಮಾಧವರಾಯರ ತಮ್ಮ ಕೃಷ್ಣಮೂರ್ತಿಗಳು ಬರೆದ ಪತ್ರವನ್ನು ತೋರಿಸಿ ಸಂಯುಕ್ತ ಕರ್ಣಾಟಕದ ಕಛೇರಿಯ "ಕರ್ಮವೀರ" ವಿಭಾಗದಲ್ಲಿ ಉಪ ಸಂಪಾದಕನಾಗಿ ತಿಂಗಳಿಗೆ ನೂರೈವತ್ತು ರೂಪಾಯಿಗಳ ಸಂಬಳದ ಪ್ರಕಾರ ಸೇರಿದೆನು. "ಕರ್ಮವೀರ"ದ ಕೆಲಸ ಪುಣೆಯ ಕೆಲಸದಷ್ಟೇ ಭಾರವುಳ್ಳದ್ದಾಗಿರುತ್ತಿತ್ತು. ಎಷ್ಟು ಹೊತ್ತು ಕೆಲಸ ಮಾಡಿದರೂ ಕಡಿಮೆಯೇ. "ಕರ್ಮವೀರಕ್ಕೆ" ರಾಯಲ ಸೈಜಿನ ೧೬ ಪುಟಗಳು ಅದರಲ್ಲಿ ಸಂಪಾದಕರಾಗಿದ್ದ ದಿವಂಗತ ಹ.ರಾ.ಪುರೋಹಿತರು ಮೊದ ಮೊದಲು ೮ ಪುಟಗಳಷ್ಟು ವಿಷಯಗಳನ್ನು ಬರೆಯುತ್ತಿದ್ದರು. ಕೊನೆಗೆ ಅವರ ದೇಣಿಗೆ ಸಂಪಾದಕೀಯ, ರಾಜಕೀಯ ಟಿಪ್ಪಣಿ, ವಾರ ಭವಿಷ್ಯ ಮುಂತಾದವುಗಳಿಗಷ್ಟೇ ಸೀಮಿತವಾಯಿತು. ಆದುದರಿಂದ ನಾನು ಮತ್ತೊಬ್ಬ ಉಪ ಸಂಪಾದಕರು ಅಗತ್ಯವೆಂದು ಹೇಳಿದೆ. ಆ ಪ್ರಕಾರ ಶ್ರೀ ಪಿ.ವಿ. ಆಚಾರ್ಯರನ್ನು ತೆಗೆದುಕೊಳ್ಳಲಾಯಿತು. ನಾನೂ ಅವರೂ ೧೨ ಪುಟಗಳನ್ನು ತುಂಬುವ ಜವಾಬುದಾರಿಯನ್ನು ಹೊತ್ತೆವು. ವಾರದ ಕಥೆ ಒಂದು ಪುಟದಷ್ಟು ಅದಕ್ಕೆ ೫ ರೂಪಾಯಿಗಳನ್ನು ಕೊಟ್ಟು ಇತರ ಲೇಖಕರಿಂದ ಬರೆಸುತ್ತಿದ್ದೆವು. ಅದರ ಬದಲು ಈಗ ಹಾಸ್ಯ ವಿಡಂಬನೆಗಳನ್ನು ಬರೆಯಿಸಿ ಪ್ರಕಟಿಸುತ್ತಿದ್ದೆವು. ಪ್ರಥಮ ಪುಟದ ಲೇಖನ, ರಾಜಕೀಯ ವಿಚಾರ, ವಿಜ್ಞಾನಾದಿಗಳ ವಿವಿಧ ಪ್ರಪಂಚ, ಪುಸ್ತಕ ವಿಮರ್ಶೆ, ಮಕ್ಕಳ ಪುಟ, ಸ್ತ್ರೀಯರ ಪುಟ ಇವುಗಳು ನನ್ನ ಪಾಲಿಗೆ ಬಂದವು. ಆಚಾರ್ಯರು ಓದುಗರೊಡನೆ ಹರಟೆಯನ್ನು ಬರೆಯಲಾರಂಭಿಸಿದರು. ಪುಸ್ತಕ ವಿಮರ್ಶೆಯಲ್ಲಿ ಪಾಲ್ಗೊಂಡರು ಮತ್ತು ಇತರ ವಿಷಯಗಳ ಮೇಲೆ ಬರೆಯಲಾರಂಭಿಸಿದರು. ನನ್ನ ಕೆಲಸ ಸ್ವಲ್ಪ ಹಗುರವಾಯ್ತು.

ನಾನು ಹುಬ್ಬಳ್ಳಿಗೆ ಹೋದದ್ದು ೧೯೪೭ರಲ್ಲಿ. ಅಲ್ಲಿ ನಾಲ್ಕಾರು ತಿಂಗಳನ್ನು ಕಳೆದ ಮೇಲೆ ಬಡೀಗೇರ ಓಣಿಯ ಸಾವಂತ್ರಕ್ಕನ ಮನೆಯ ಭಾಗವನ್ನು ಬಾಡಿಗೆಗೆ ತೆಗೆದುಕೊಂಡೆ. ಅದೇ ಒಂದೆರಡು ತಿಂಗಳಲ್ಲಿ ಕನಕಪುರದಿಂದ ರಮಾದೇವಿ ಆಗಮಿಸಿದಳು. ಮತ್ತೆರಡು ಮೂರು ತಿಂಗಳಲ್ಲಿ ಪರಮೇಶ್ವರ ವೈದ್ಯರು ಮದುವೆಯಾಗಿ ಹೋಗಿದ್ದ ರುಕ್ಮಿಣಿಯನ್ನೂ, ಇನ್ನೊಬ್ಬ ತಂಗಿ ಸುಶೀಲೆ ಮತ್ತು ಕಿರಿಯ ತಂಗಿ

ರಮೆಯನ್ನು ಮಾತಾಪಿತೃಗಳನ್ನೂ ಅಂಡಿಗೆಯಿಂದ ಹುಬ್ಬಳ್ಳಿಯಲ್ಲಿರುವ ನಮ್ಮ ಮನೆಗೆ ತಂದು ಬಿಟ್ಟರು. ನನ್ನ ತಂದೆಯವರಿಗಾಗ ೬೮ ವರ್ಷ ವಯಸ್ಸು, ತಾಯಿಯವರಿಗೆ ೪೯ ವರ್ಷ ವಯಸ್ಸಾಗಿತ್ತು.

ಎರಡು ವರ್ಷ ನಾವು ಸಾವಂತ್ರವ್ವನ ಮನೆಯಲ್ಲಿ ವಾಸಿಸಿದೆವು. ಮೊದಲನೆಯ ೬ ತಿಂಗಳೊಳಗೆ ತಂದೆಯವರಿಗೆ ದೊಡ್ಡ ಕರುಳ ಬಾವು ಉಂಟಾಯಿತು. ಯಾವ ಔಷಧಿಯನ್ನು ಕೊಟ್ಟರೂ ಗುಣವಾಗಲಿಲ್ಲ. ಆಪರೇಷನ್ನಿಗೆ ವಯಸ್ಸು ದೇಹ ದೌರ್ಬಲ್ಯಗಳು ಅಡ್ಡ ಬಂದವು. ಜೊತೆಗೆ ಬೆಳ್ಳುಳ್ಳಿ ತಿಂದ ನಾಲ್ಕು ಮನೆಯವರ ಪಾಯಖಾನೆಗೆ ಹೋಗಿ ಬರುವ ನರಕಾನುಭವದಿಂದ ಅವರಿಗೆ ಜಿಗುಪ್ಸೆಯುಂಟಾಗಿತ್ತು. ಆದುದರಿಂದ ಅವರನ್ನೂ ಅಮ್ಮನನ್ನೂ ಊಳ್ಳೂರತ್ತೆಯ ಮನೆಗೆ ಆರೈಕೆಗೆಂದು ಕಳುಹಿಸಿಕೊಟ್ಟೆ. ಎರಡು ವರ್ಷಗಳವರೆಗೆ ಅಲ್ಲೇ ಇದ್ದು ಅವರು ಚಿಕಿತ್ಸೆ ಪಡೆಯುತ್ತಿದ್ದರು. ಆದರೂ ರೋಗ ಗುಣವಾಗಲಿಲ್ಲ. ಅನಂತರ ಅಮ್ಮನು ಉಪ್ಪುಂದದ ಅಳಿಯನ ಮನೆಗೆ ಅರ್ಥಾತ್ ಪರಮೇಶ್ವರ ವೈದ್ಯರ ಮನೆಗೆ ಹೋದರು. ಅಲ್ಲಿ ಚಿಕಿತ್ಸೆ ನಡೆಯುತ್ತಿತ್ತು. ಒಂದು ವರ್ಷ ಮುಗಿಯುವಷ್ಟರಲ್ಲಿ ವೇದನೆ ತಾಳಲಾರದೆ ಅವರು ವೈದ್ಯರ ಮನೆಯಲ್ಲಿ ಪ್ರಾಯೋಪವೇಶದಿಂದ ದೇಹತ್ಯಾಗ ಮಾಡಿದರು. ಅನಂತರ ಮೂರು ದಿನಗಳ ಮೇಲೆ ನಾನು ಹುಬ್ಬಳ್ಳಿಯಿಂದ ಬಂದು ಅವರ ಉತ್ತರ ಕ್ರಿಯೆಯನ್ನು ಹಿಡಿದು ಮೊಗೇರಿಯಲ್ಲಿ ಅವರ ಉತ್ತರಕ್ರಿಯೆಯನ್ನು ಮುಗಿಸಿದೆನು. ನೀತಿಪರ್ವತರೆನಿಸಿದ್ದ ಹಾಗೂ ನಿಷ್ಪಕ್ಷಪಾತ ನ್ಯಾಯ ವಿಮರ್ಶಕರಾಗಿದ್ದ ಅವರ ಇಹ ಜೀವನ ಅಂದು ಕೊನೆಗೊಂಡಿತು. ದೇಶದ ನೀತಿಮತ್ತೆಯೂ ಅದರ ಜೊತೆ ಅಧಃಪತನವಾಗತೊಡಗಿತು. ಹುಬ್ಬಳ್ಳಿಯಲ್ಲಿ ಸಂಯುಕ್ತ ಕರ್ನಾಟಕ ಕಚೇರಿಯು ನನ್ನ ಅಮೃತ ಬಿಂದು ಎಂಬ ಕವನ ಸಂಕಲನವನ್ನು ಮುದ್ರಿಸಿ ಪ್ರಕಟಿಸಿತು.

ಅನಂತರ ಅಮ್ಮ ಹುಬ್ಬಳ್ಳಿಗೆ ಬಂದಳು ದೀನವದನೆಯಾಗಿ. ನಾವಾಗ ಹುಬ್ಬಳ್ಳಿಯ ಚನ್ನಪಟ್ಟಣ ಬಜಾರದಲ್ಲಿ ವಾಸವಾಗಿದ್ದೆವು. ಪ್ರತಿಭಾ ಹುಟ್ಟಿದ್ದು ಚೆನ್ನಪಟ್ಟಣ ಬಜಾರದ ಮನೆಯಲ್ಲಿ. ಆ ಮನೆ ಬ್ರಾಹ್ಮಣರಿಗೆ ಮೀಸಲಾಗಿತ್ತು. ಅಲ್ಲಿ ಎರಡು ವರ್ಷಗಳು ಕಳೆದು ಹೋದವು. ಅಷ್ಟರಲ್ಲಿ ಕುಮಟೆಯ ಕಾಲೇಜಿನಿಂದ ಕರೆ ಬಂದು ಹಾಗೂ ಪ್ರಿನ್ಸಿಪಾಲ್ ಎಲ್.ಎಸ್. ಕಾಮತರು ಬಂದು ನನ್ನನ್ನು ಸಂಸ್ಕೃತ ಲೆಕ್ಚರರನ್ನು ಮಾಡಲು ಕರೆದುಕೊಂಡು ಹೋದ ಘಟನೆ ನಡೆಯಿತು. ಈ ಎಲ್ಲವೂ ಅನಿರೀಕ್ಷಿತ ಅಕಲ್ಪಿತ ತಾಯಿಯವರೂ ನಾನೂ ರಮಾದೇವಿಯೂ ಪ್ರತಿಭೆಯೂ ಕುಮಟೆಗೆ ಹೋದೆವು. ತಿಂಗಳಿಗೆ ೧೫೦ ಸಂಬಳ ಮತ್ತು ೫೦ ರೂಪಾಯಿ ತುಟ್ಟಿಭತ್ಯೆ.

ಕುಮಟೆಯ ಕುಂಬವಾಟ–ಅರ್ಥಾತ್–ಯಜ್ಞ ಮಾಡುವ ಊರಿನ ಪಕ್ಕದ ಮಾನ ವಸತಿಸ್ಥಳ ಹೈಗುಂದದಲ್ಲಿಯೂ ಗೋಕರ್ಣದಲ್ಲಿಯೂ ವೈದಿಕರು ಆಗ ವೇದೋಕ್ತ ಯಜ್ಞಗಳನ್ನು ಮಾಡುತ್ತಿದ್ದರು.

ಭಟ್ಕಳದಂತೆಯೇ ಕುಮಟೆ ಸೆಕೆಯೂರು, ತಡೆಯಲಾರದ ಸೆಕೆ. ಪ್ರತಿಭೆಗೆ ಬಿಸಿಲು ಬೊಕ್ಕೆಯೆದ್ದು ಮೂರು ತಿಂಗಳಿದ್ದು ಆ ಮೇಲೆ ವಾಸಿಯಾಯಿತು. ವಿಜಯ–ರಾಜ, ರಾಜೇಶ್ವರಿ ಹುಟ್ಟಿದ್ದು ಅಲ್ಲೇ. ನಮ್ಮ ಕುಟುಂಬದಲ್ಲಿ ಆಗ ಏಳು ಜನರಾದೆವು.

ಕುಮಟೆಯ ಕಾಲೇಜಿಗೆ ನನ್ನ ಜೂನಿಯರ್ ಸಹಪಾಠಿಯಾಗಿದ್ದ ಕೆ. ಕೃಷ್ಣಮೂರ್ತಿಯನ್ನು ನಾನು ಕರೆಯಿಸಿಕೊಂಡದ್ದು ನನಗೆ ತಿರುಗುಬಾಣವಾಯಿತು. ೧೯೬೧ರಲ್ಲಿ ಅವನು ಕರ್ಣಾಟಕ ವಿಶ್ವಾವಿದ್ಯಾಲಯಕ್ಕೆ ಹೊರಟು ಹೋದನು.

ಕುಮಟೆಯಲ್ಲಿದ್ದಾಗ ನನ್ನಿಂದ ಮಂಜುಗೀತ, ಮಾನಸದರ್ಪಣ, ಅರವಿಂದ ವಾಙ್ಮಯದ ಭಾಷಾಂತರ, ಟಿ.ಎಸ್.ಎಲಿಯೆಟ್ ಹಾಗೂ ಬೇಂದ್ರೆ ಎಂಬ ವಿಮರ್ಶೆ ಪುಸ್ತಿಕೆಗಳು ಪ್ರಕಟವಾದವು. ಬಾಲಕರಿಗಾಗಿ ರಮಣ ಮಹರ್ಷಿ, ಮುತ್ತು ರತ್ನ ಎಂಬ ಕವನ ಸಂಗ್ರಹಗಳು ಪ್ರಕಟವಾದವು. ಹಿಂದೆ ಸಂಯುಕ್ತ ಕರ್ಣಾಟಕದಲ್ಲಿ ನನ್ನ ಅಮೃತ ಬಿಂದು ಪ್ರಕಟವಾಯಿತು. ಮತ್ತು ಅದಕ್ಕೂ ಹಿಂದೆ ಬೆಂಗಳೂರಿನಲ್ಲಿ ಕಿನ್ನರಗೀತ ಎಂಬ ಕಥನ ಕವನಗಳ ಕಿರು ಹೊತ್ತಿಗೆ ಪ್ರಕಟವಾಗಿದ್ದವು. ಕರ್ನಾಟಕ ವಿಶ್ವವಿದ್ಯಾಲಯವು ಭಾರತೀಯ ನಾಗರೀಕತೆಗೆ ಮನುವಿನ ಕೊಡುಗೆ ಎಂಬ ನನ್ನ ಪುಸ್ತಿಕೆಯನ್ನು ಪ್ರಕಟಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಪಂಚಮುಖಿ ಎಂಬ ಪ್ರಬಂಧ ಸಂಗ್ರಹವೂ ಆಗ ಉಡುಪಿಯಲ್ಲಿ ಅಚ್ಚಾಯಿತು. ಸ್ವಾತಂತ್ರ್ಯಮೀಮಾಂಸೆ ಮತ್ತು ವಿದೇಶದ ತಿಳುವಳಿಕೆಗಳು ಕುಮಟೆಯಲ್ಲೇ ಪ್ರಕಟವಾದವು. ಕುಮಟೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲಿ ಅನೇಕರು ಆತ್ಮೀಯರಾದರು. ಅಂಥವರಲ್ಲಿ ಎಂ.ವಿ. ಭಟ್ಟ, ಸರಸ್ವತಿ, ಜಿ.ವಿ. ಭಟ್ಟ ಜಯಶ್ರೀ ನನಗೆ ಅಚ್ಚುಮೆಚ್ಚಿನವರಾದರೂ, ಎಸ್.ಪಿ. ಭಟ್ಟ, ವೀಜೀನಾಯಕ ಮತ್ತು ಕುಸುಮಾರಾವ್ ವಾತ್ಸಲ್ಯ ಪಾತ್ರರಾದರು. ವಿನಯಾ ಶಾನುಭಾಗಳೂ ಆ ಪಂಕ್ತಿಗೆ ಸೇರಿದಳು. ಜಿ.ಜಿ. ಯಾಜಿ, ಎನ್.ಎಂ. ನಾಯಕ ಮುಂತಾದ ಇನ್ನೂ ಹಲವಾರು ವಿದ್ಯಾರ್ಥಿಗಳು ಅವಿಸ್ಮರಣೀಯರಾಗಿದ್ದಾರೆ. ಕಾಲೇಜಿನ ಪ್ರಿನ್ಸಿಪಾಲಿಕೆ ಅತೃಪ್ತಿಕರವಾಗಿದ್ದುದರಿಂದ ಅಲ್ಲಿ ಅನೇಕ ದುಶ್ಚೇಷ್ಟೆಗಳು ನಡೆದವು. ಆದ್ದರಿಂದ ಕುಮಟೆಯನ್ನು ಬಿಟ್ಟು ೧೯೬೨ರಲ್ಲಿ ಶಿರಸಿಗೆ ಬಂದೆ. ೧೯೬೨ ರಿಂದ ೧೯೭೬ ರವರೆಗೆ ಶಿರಸಿಯ ಕಾಲೇಜಿನಲ್ಲಿ ಉಪಪ್ರಾಚಾರ್ಯಗಿರಿ ಮತ್ತು ಸಂಸ್ಕೃತ ಉಪನ್ಯಾಸಕ ಹುದ್ದೆ. ಶ್ರೀ ಎಲ್.ಟಿ.ಶರ್ಮಾ ಅಂದಿನ ಪ್ರಾಚಾರ್ಯರು.

ಸಾಹಿತ್ಯ ಕೃಷಿ

೧೯೬೨ ರಿಂದ ೧೯೬೯ರ ಅವಧಿಯಲ್ಲಿ ಭಾಷಣ ಭೈರವರ ಒಡ್ಡೋಲಗ ಎಂಬ ವಿಡಂಬನ ಪುಸ್ತಿಕೆ, ಕಾವ್ಯ ಸೂತ್ರವೆಂಬ ವಿಮರ್ಶಶಾಸ್ತ್ರ ಗ್ರಂಥ, ಜ್ಞಾನಸೂತ್ರವೆಂಬ ತತ್ವಜ್ಞಾನದ ತುಲನಾತ್ಮಕ ವಿಮರ್ಶಗ್ರಂತ ರಸಯಜ್ಞ ಎಂಬ ಕವನ ಸಂಕಲನ,

ಕವೀಂದ್ರರವೀಂದ್ರರೆಂಬ ಪರಿಚಯಾತ್ಮಕ ಗ್ರಂಥ, ಕುಂದಮಾಲೆ ಎಂಬ ಭಾಷಾಂತರಿತ ನಾಟಕ, ಮನುಸ್ಮೃತಿಯ ಏಳನೆಯ ಅಧ್ಯಾಯದ ಕನ್ನಡ ಭಾಷಾಂತರ, ಬನವಾಸಿಯ ಕದಂಬರು ಎಂಬ ಚಾರಿತ್ರಿಕ ಗ್ರಂಥ, ಉತ್ತರ ಕನ್ನಡ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳು ಎಂಬ ಕಿರು ಹೊತ್ತಿಗೆ ಅಂಥದೇ ಒಂದು ನೆಹರು ಉವಾಚ ಎಂಬ ಉದ್ಧೃತವಾಕ್ಯ ಸಂಗ್ರಹ, ಸಂಸ್ಕೃತ ಸುಭಾಷಿತಗಳು ಎಂಬ ಕನ್ನಡ ಭಾಷಾಂತರಿತ ಗ್ರಂಥ ಮುಂತಾದವುಗಳು ನನ್ನ ಕೈಯಿಂದ ಹೊರಬಿದ್ದವು. ಅವುಗಳಲ್ಲಿ ರಸಯಜ್ಞಕ್ಕೆ ದೇವರಾಜ ಬಹದೂರ ಬಹುಮಾನವೂ ಕಾವ್ಯ ಸೂತ್ರಕ್ಕೆ (೧) ಸಾಹಿತ್ಯ ಅಕಾಡೆಮಿಯ, (೨) ಮೈಸೂರು ವಿಶ್ವವಿದ್ಯಾಲಯದ ಬಂಗಾರದ ಹಬ್ಬದ ಮತ್ತು (೩) ತೀ.ನಂ.ಶ್ರೀ ಸ್ಮಾರಕದ ಬಹುಮಾನಗಳು ದೊರೆತವು. ಆದರೆ ನನ್ನ ೧೭ನೆಯ ವರ್ಷದಲ್ಲಿ ಹೊರಕೆರೆ ಚಿದಂಬರಯ್ಯನವರ ಆರ್ಯಾಧರ್ಮಾಪ್ರದೀಪದಿಂದ ಜರುಗಿದ ಶ್ರೇಯೋಭಿಮಾನವು ಒಳಗಿಂದೊಳಗೆ ಚಿಗುರುತ್ತಲಿದ್ದು ೧೯೭೬ರ ಹೊತ್ತಿಗೆ ದೃಢವಾಗಿ ಬೇರೂರಿದ ಗಿಡವಾಯಿತು.

ಸಿದ್ಧಾಪುರದ ಪ್ರಾಚಾರ್ಯರಾಗಿ

ಸಿದ್ಧಾಪುರದ ವಾಸ ೧೯೬೯ ರಿಂದ ೧೯೭೬ರ ಜೂನ್ ೧೦ರವರೆಗೆ. ಸಿದ್ಧಾಪುರದ ಕಾಲೇಜಿನ ಪ್ರಿನ್ಸಿಪಾಲಗಿರಿಯು ಎಷ್ಟು ಸಮರ್ಪಕವಾಗಿ ನಡೆಯಬೇಕೋ ಅಷ್ಟು ಸಮರ್ಪಕವಾಗಿ ನಡೆಯದಿರಲು ಅಲ್ಲಿನ ಸಾಧನ ಸಂಪತ್ತಿನ ನ್ಯೂನತೆಯೇ ಕಾರಣ. ಅಲ್ಲಿದ್ದಾಗಲೇ ರಾಷ್ಟ್ರಸೂತ್ರಕ್ಕೆ ಸರಕಾರದ ಅನುದಾನ ದೊರೆಕಿದ್ದು, ದರ ಮುದ್ರಿತ ಪ್ರತಿಗಳು ಹುಬ್ಬಳ್ಳಿಯ ದಾಜೀಬಾನ ಪೇಟೆಯಲ್ಲಿ ಜ್ಞಾನೇಶ್ವರ ಪ್ರೆಸ್ಸಿನಲ್ಲಿ ಹಾಯಾಗಿ ಮಲಗಿದೆ. ಬೆಂಗಳೂರಿನ ಐಬಿಹೆಚ್ ಪ್ರಕಾಶನ ಸಂಸ್ಥೆಯು ಮಕ್ಕಳಿಗಾಗಿ ನನ್ನಿಂದ "ಮಯೂರಶರ್ಮ ಮತ್ತು "ಕೌಶಿಕ ರಾಮಾಯಣ ಸಂಗ್ರಹ"ಗಳನ್ನು ಬರೆಯಿಸಿ ಪ್ರಕಟಿಸಿತು. ಜನ್ನನ ಯಶೋಧರ ಚರಿತ್ರೆಯ ಮೇಲಿನ ನನ್ನ ವಿಮರ್ಶೆ ಪ್ರಬಂಧವನ್ನು ಅದು ಪ್ರಕಾಶಕ್ಕೆ ತಂದಿತು.

ಶಿರಸಿಯಲ್ಲಿದ್ದಾಗಲೇ ಪ್ರತಿಭೆ, ವಿಜಯ, ರಾಜಶೇಖರರ ವಿದ್ಯಾಭ್ಯಾಸ ಮುಗಿಯಿತು. ಸಿದ್ಧಾಪುರದಲ್ಲಿ ರಾಜೇಶ್ವರಿ ಓದು ಮುಗಿಸಿ ಧಾರವಾಡಕ್ಕೆ ಹೋಗಿ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಎಂ.ಎ. ಫಸ್ಟ್‌ಕ್ಲಾಸ್ ಪಡೆದಳು. ಪ್ರತಿಭೆ ಸಿದ್ಧಾಪುರದಲ್ಲಿ ಹೈಸ್ಕೂಲ್ ಶಿಕ್ಷಕಿಯಾದಳು. ಬಿ.ಎಸ್.ಸಿ. ಫಸ್ಟ್‌ಕ್ಲಾಸಾದ ವಿಜಯ ಶಿರಸಿಯ ಪೋಸ್ಟಾಫಿಸಿನಲ್ಲಿ ನೌಕರಳಾದಳು. ಸಿದ್ಧಾಪುರದಲ್ಲಿದ್ದಾಗ ಕೊನೆಯ ಅವಧಿಯಲ್ಲಿ ರಾಜಶೇಖರನಿಗೆ ಸಿಂಡಿಕೇಟ್ ಬ್ಯಾಂಕಿನ ನೌಕರಿ ದೊರಕಿತು. ನಾನು ಸಿದ್ಧಾಪುರದಲ್ಲಿ ನಿವೃತ್ತನಾದದ್ದು ೧೯೭೬ರ ಜೂನಿನಲ್ಲಿ.

ಈ ನಡುವೆ ಶಿರಸಿಯಲ್ಲಿದ್ದಾಗಲೇ ಮೈಸೂರಿನ ಪ್ರಬುದ್ಧ ಕರ್ನಾಟಕವು ಮೂರು ಸಂಚಿಕೆಗಳಲ್ಲಿ ನನ್ನ ಕದಂಬ ವೈಭವ ಸಾಂಗತ್ಯವನ್ನು ಪ್ರಕಟಿಸಿದ್ದು. ಅದರ ಐತಿಹಾಸಿಕತೆ ಮತ್ತು ಗೇಯತೆ ಮುಂದೆ ಜನಪ್ರಿಯವಾಗದೇ ಉಳಿಯದು.

ನಿವೃತ್ತ ಶಾಂತ ಜೀವನ

ಅನಂತರ ಮತ್ತೆ ಶಿರಸಿಗೆ ಮರಳಿದೆ. ಶಿರಸಿಯ ಮಾಡರ್ನ್ ಎಜುಕೇಶನ್ ಸೊಸೈಟಿಯ ಗೌರವ ವ್ಯವಸ್ಥಾಪಕನಾದೆ. ಇಲ್ಲಿ ಕಟ್ಟಿ ವಾಸಿಸತೊಡಗಿದ ಮನೆ ರಮಾದೇವಿ–ರಾಜಶೇಖರರದ್ದು. ರಮಾದೇವಿ ಜೀವನದುದ್ದಕ್ಕೂ ನನ್ನ ಶ್ರೇಯೋಭಿಮಾನವು ಬೆಳೆಯಲು ಗಣ್ಯಕಾರಣಳಾದಳು. ಅವಳಿಗೆ ನಾನು ಕೃತಜ್ಞ. ಅನಂತರ ಗುಪ್ತ ಗುರುವಾಗಿದ್ದು ಮನದಲ್ಲಿ ಸ್ಫುರಿಸಿ ಕ್ರಮೇಣ ಪ್ರಕಟವಾದ ಶ್ರೀ ರಮಣಮಹರ್ಷಿಗಳಿಗೆ ನಾನು ಕೃತಜ್ಞ.

ಪುಣೆಯಲ್ಲಿ passing show ಎಂಬ ಸಿಗರೇಟಿನ ಹೆಸರನ್ನು ಕೇಳಿದಾಗ Life is a passing show ಜೀವನವೊಂದು ತೋರಿಯಡಗುವ ನಾಟಕವೆನಿಸಿತ್ತು. ಅನಂತರ some people show to live and some other live to show ಕೆಲವರು ಬದುಕಲಿಕ್ಕಾಗಿ ಮಾತ್ರ ಪ್ರದರ್ಶನ ಕಲಾವಿದರಾದರೆ ಇನ್ನು ಕೆಲವರು ಪ್ರದರ್ಶನಕ್ಕಾಗಿಯೇ ಬದುಕಿರುತ್ತಾರೆ ಎಂಬ ಅನುಭವವೀಗ ಬಂತು. ಸ್ವಪ್ನ ಜಾಗರಣೆಗಳ ಅಂತರದಂತೆಯೇ ಪ್ರದರ್ಶನ–ದರ್ಶನಗಳ ಅಂತರ. ಅದನ್ನು ಇದೆಂದೂ ಇದನ್ನು ಅದೆಂದೂ ತಿಳಿಯುವವರೇ ಅಧಿಕ. ಈ ಕುರುಡ ಮೆಳ್ಳರಿಬ್ಬರ ಅವಸ್ಥೆಯನ್ನೂ ಮೀರಿದ್ದು ರಮಣ ಮಹರ್ಷಿತ್ವ.

ಪ್ರತಿಭಾ ವಿಜಯಾ ಭವೇತ್ತ ಭೂತಾ
ಪ್ರತಿಮಾಯಸ್ಯಚ ರಾಜಶೇಖರಸ್ಯ
ಪ್ರಥಿತಾ ರಮಯಾ ಭವೇತ್ತಥಾ ಸಾ
ಧೃತ ರಾಜೇಶ್ವರಿ ನಾಮಿಕಾ ಕವಿಶ್ರೀಃ
ಪ್ರತಿಭಾ ವಿಜಯಾ ರಾಜಾ ರಮಾ ರಾಜೇಶ್ವರೀ ಯತಃ
ಮಮ ಭಾಭೃತಸ್ತೋಧ್ಯೋದದಾತ್ವಿಷ್ಣಂ
ಗುರುಸ್ತತಃ
ಭಾರದ್ವಾಜ ಶ್ರೀಧರೇಣ ಸೀತಾರಾಮ ಸುತೇನ ಚ
ಯುದುಕ್ತಂ ತೇನ ಸುಪ್ರೀತಾ ಭವೇನ್ಮಾತಾ
ದಿವಂಗತೌ

ಬೇಂದ್ರೆಯವರು ಮತ್ತು ನಾನು

ಹಿರಿಯಣ್ಣ

ಬೇಂದ್ರೆಯವರು ನನ್ನ ಜೀವನದ ಆಗುಹೋಗುಗಳಲ್ಲಿ ಶಾಂತಿ ಸಮಾಧಾನಗಳನ್ನು ಆಗಾಗ ಹೇಳಿ ನನ್ನ ಧೈರ್ಯ ಕುಸಿಯದಂತೆ ಮಾಡುತ್ತಿದ್ದುದರಿಂದ ಅವರೊಬ್ಬ ಅಣ್ಣನೇ ಆಗಿದ್ದರು ನನಗೆ ಎಂದರೆ ಅತಿಶಯೋಕ್ತಿಯಾಗಲಾರದು. ಆದ್ದರಿಂದ ಅವರ ಜೀವನದ ಕಷ್ಟ ಸುಖಗಳನ್ನು ಕಾಲಕಾಲಕ್ಕೆ ಕೇಳುವ ಹಕ್ಕು ನನಗೆ ಪ್ರಾಪ್ತವಾಗಿತ್ತು. ಆದ್ದರಿಂದ ಅವರ ಜೀವನದ ಈ ಘಟನೆಯೊಂದು ಉದಾಹರಣೆ. ಹುಬ್ಬಳ್ಳಿಯಲ್ಲಿ ದಿ. ತಿ.ರು.ನೇಶ್ವಿಯವರು ನವಯುಗ ಪತ್ರಿಕೆಯನ್ನು ನಡೆಸುತ್ತಿದ್ದಾಗ ಒಮ್ಮೆ ಬೇಂದ್ರೆಯವರನ್ನು ಬರಹೇಳಿ, "ನಿಮಗೆ ಒಂದು ಅಭ್ಯಾಸದ ಕೋಣೆಯನ್ನೂ ಗ್ರಂಥ ಭಂಡಾರವನ್ನೂ ಮಾಡಿಕೊಡುತ್ತೇವೆ. ನೀವು ನಮ್ಮ ಪತ್ರಿಕೆಯ ಸಾಪ್ತಾಹಿಕ ಪುರವಣಿಗೆಗೆ ಶ್ರೀ ಅರವಿಂದರ ತತ್ವಗಳ ಬಗ್ಗೆ ವಿಶೇಷ ಲೇಖನಗಳನ್ನು ಬರೆದು ಕೊಡಬೇಕು" ಎಂದು ಕೇಳಿಕೊಂಡಾಗ ಅದಕ್ಕೆ ಒಪ್ಪಿ ಬೇಂದ್ರೆಯವರು ನೇಶ್ವಿಯವರು ಗೊತ್ತುಮಾಡಿದ ಕೋಣೆಯಲ್ಲಿ ಮೂರು ದಿನಗಳ ಕಾಲ ಹಾಜರಾಗಿದ್ದರು. ಆಗ ಯಾವ ಮನುಷ್ಯನೂ ಅಲ್ಲಿಗೆ ಬರಲಿಲ್ಲ! ಗ್ರಂಥಗಳನ್ನು ತಂದಿಟ್ಟಿರಲಿಲ್ಲ. ಆದ್ದರಿಂದ ನಾಲ್ಕನೇ ದಿನದಿಂದ ಬೇಂದ್ರೆಯವರು ಆ ಕೋಣೆಗೆ ಹೋಗಲಿಲ್ಲ. ಈ ಅನುಭವವನ್ನು ಬೇಂದ್ರೆಯವರು ನನಗೆ ಹೇಳಿದ್ದರು.

ಬೇಂದ್ರೆ ಹುಟ್ಟಾ ಡಾಕ್ಟರ್

ಇನ್ನು ಬೇಂದ್ರೆಯವರಿಗೆ ಬಾಲ್ಯದಿಂದಲೂ ಅನುಭವಕ್ಕೆ ಬಂದಿದ್ದ ಬಡತನದ ಸಂಗತಿ ಎಲ್ಲರಿಗೂ ಗೊತ್ತಿದೆ. ಮಾಸ್ತಿಯವರು ಕೆಲ ವರ್ಷಗಳವರೆಗೆ ಬೇಂದ್ರೆಯವರು ಎಂ.ಎ. ಆಗಿ ನೌಕರಿ ದೊರಕದೆ ಇದ್ದಾಗ ತಮ್ಮ ಸಂಬಳದಿಂದ ತಿಂಗಳಿಗೆ ೨೫ ರೂಪಾಯಿಗಳನ್ನು ಕೊಡುತ್ತಲಿದ್ದರೆಂಬುದೂ ಹಲವರಿಗೆ ತಿಳಿದ ಸಂಗತಿ. ಜೊತೆಗೆ ಅವರಿಗೆ ಕನ್ನಡ ಎಂ.ಎ. ಪರೀಕ್ಷೆಯಲ್ಲಿ ಮೂರನೆಯ ಶ್ರೇಣಿಯಲ್ಲಿ ಉತ್ತೀರ್ಣತೆ ದೊರಕಿದ್ದೂ ವಿಚಿತ್ರವಾದುದು. ಅವರಿಗೆ ಬೇರೆ ವಿಶ್ವವಿದ್ಯಾಲಯವು ಡಾಕ್ಟರೇಟನ್ನು ಕೊಟ್ಟು ಗೌರವಿಸಿದ ಬಳಿಕ ತಡವಾಗಿ ಕರ್ನಾಟಕ ವಿಶ್ವವಿದ್ಯಾಲಯವು ಡಾಕ್ಟರೇಟನ್ನು

ಕೊಡಲು ಸಭೆ ಕರೆದಿದ್ದಾಗ, ಸಹಜ ಹಾಸ್ಯ ಪ್ರವೃತ್ತಿಯಿಂದ ಬೇಂದ್ರೆಯವರು "ಈ ಬೇಂದ್ರೆಗೆ ಯಾಕ್ ಡಾಕ್ಟರೇಟ್ ಪದವಿ ಬೇಕಾಗ್ಯದ? ಅಂವಾ ಹುಟ್ಟಾ ಡಿ. ಆರ್. (ಡಾಕ್ಟರ್) ಬೇಂದ್ರೆ ಇದ್ದಾನೆ. ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಯಾತಕ್ ಇಂಥ ಆಲೋಚನೆ ಈಗ ಬಂತು?" ಎಂಬ ಅಭಿಪ್ರಾಯವನ್ನು ಸಾರ್ವಜನಿಕವಾಗಿ ಹೇಳಿ ಕುಳಿತವರನ್ನೆಲ್ಲ ನಗಿಸಿದ್ದು ವೃತ್ತಪತ್ರಿಕೆಗಳಲ್ಲಿ ಬಂದಿದೆ.

ಬೇಂದ್ರೆಯವರು ಭಕ್ತ ಕವಿಗಳು. ಅವರ ಶ್ರದ್ಧೆ-ಭಕ್ತಿಗಳು ಮೊದಲಿನಿಂದಲೂ ಶ್ರೀ ಅರವಿಂದರಲ್ಲಿ ಮತ್ತು ಮಾತೆಯವರಲ್ಲಿ ಅಚಲವಾಗಿದ್ದವು. ಅವರಿಗೆ ಮೊತ್ತಮೊದಲು ಧಾರವಾಡದಲ್ಲಿ ಸತ್ಕಾರ ಮಾಡಿ ಸಾರ್ವಜನಿಕರು ೧೦,೦೦೦ ರೂ. ಹಮ್ಮಿಣಿ ಅರ್ಪಿಸಿದಾಗ ಪಾಂಡಿಚೇರಿಗೆ ಬರೆದು, ಅಲ್ಲಿಂದ ಮಾತೆಯವರು ಹೇಳಿದ ವ್ಯವಸ್ಥೆಯಂತೆ ಆ ಹಣವನ್ನು ಪಾಲು ಮಾಡಿ ವ್ಯಯಿಸಿದ ಸಂಗತಿ ಅವಿಸ್ಮರಣೀಯ. ಅಕ್ಷರಶಃ ಅವರ ಶ್ರದ್ಧೆ ಅಚಲ, ಅಸೀಮ. ಜೀವನದಲ್ಲಿ ಕೊನೆಯುಸಿರು ಎಳೆಯುವವರೆಗೂ, ಅವರು ಹಾಗೆಯೇ ಇದ್ದದ್ದು ಅವರ ಮೇಲಿನ ನನ್ನ ಗೌರವಾದರಗಳನ್ನು ಹೆಚ್ಚುವಂತೆ ಮಾಡಿತು. ಅವರ ಅದಮ್ಯ ಧೈರ್ಯ, ಉತ್ಸಾಹ, ಸ್ವಾಭಿಮಾನ, ಚಾತುರ್ಯ, ಮಾಧುರ್ಯ, ಮಾನವ್ಯ ಅನುಕಂಪ, ಗಂಡುಗಲಿತನಗಳು ನನಗೆ ಅವರ ನಡೆಯಲ್ಲಿ ಎದ್ದುಕಾಣುತ್ತಿದ್ದವು.

ಬೇಂದ್ರೆಯೊಡನೆ ಮಧುರ ಕ್ಷಣಗಳು

ಬೇಂದ್ರೆಯವರ ಅನುಭವಗಳಲ್ಲಿ ಅನೇಕ ಕಟು ಮತ್ತು ಅನೇಕ ಮಧುರ. ಅವರ ಕಟು ಅನುಭವಗಳಲ್ಲಿ ಹಲವನ್ನು ನಾನು ಅರಿತಿದ್ದರಿಂದ ಅವರ ಕಟೂಕ್ತಿಗಳು ಅವರ ವ್ಯಕ್ತಿತ್ವಕ್ಕೆ ಕಾಠಿಣ್ಯದ ಕಪ್ಪನ್ನು ಹಚ್ಚುವುದಿಲ್ಲ ಎಂಬುದನ್ನು ಅರ್ಥಮಾಡಿಕೊಂಡೆ! ಈ ಅಂಶ ಅರ್ಥವಾಗದವರು ಈಗಲೂ ಇರಬಹುದು. ಆದುದರಿಂದ ನಾನು ಕುಮಟಾವಾಸಿಯಾಗಿದ್ದಾಗ ಉಡುಪಿಯ ಎಂ.ಜಿ.ಎಂ. ಕಾಲೇಜಿನಲ್ಲಿ ಕೊಟ್ಟ ಉಪನ್ಯಾಸದಲ್ಲಿ "ಬೆಂದರೆ ಬೇಂದ್ರೆಯಾದಾನು" ಎಂದು ಹೇಳಿದೆ. ವ್ಯಕ್ತಿತ್ವವು ಪಕ್ವವಾಗಬೇಕಾದರೆ ಮಾಗಬೇಕಾದರೆ ಬೇಂದ್ರೆಯವರಂತೆ ಮನುಷ್ಯನಿಗೆ ಅನುಭವಗಳ ಆಳವನ್ನು ಅರಿತು ಅರ್ಥಮಾಡಿಕೊಳ್ಳುತ್ತ ಹೋಗುವ ಪ್ರವೃತ್ತಿ ಇರಬೇಕು. ಅವುಗಳ ಬಗೆಗೆ ಔದಾಸಿನ್ಯ ತಾಳುವ ಅಥವಾ ಅವುಗಳನ್ನು ವಿಚಾರಿಸದೆ ತಿರಸ್ಕರಿಸುವ ಪ್ರವೃತ್ತಿ ಜೀವನದ ಪಕ್ವತೆಗೆ ಅನುಕೂಲವಾಗದು. ಅವರಿಗೆ ಶಿವಮೊಗ್ಗ ಸಾಹಿತ್ಯ ಸಮ್ಮೇಳನದಲ್ಲಿ ಮೊದಲಿನ ದಿನದ ಮಧ್ಯಾಹ್ನದ ಕಾರ್ಯಕ್ರಮಾರಂಭದಲ್ಲಿ ಆದ ವಿಚಿತ್ರ ಅನುಭವವನ್ನು ನಾನು ಹತ್ತಿರವಿದ್ದೇ ನೋಡಿದ್ದೇನೆ. ಬೆಳಿಗ್ಗೆ ಅವರನ್ನು ಕಂಡಿದ್ದರೂ ಸಮ್ಮೇಳನದ ಮಂಟಪದ ದ್ವಾರಪಾಲಕರು ಅವರನ್ನು ಸಭಾಮಂಟಪದೊಳಗೆ ಬಿಡದಿದ್ದ ಪ್ರಕರಣ. ನನ್ನ ಹತ್ತಿರ ಪ್ರತಿನಿಧಿಗಳ "ಪಾಸ್" ಆದರೂ ಇತ್ತು. ಅವರ ಹತ್ತಿರ ಅದೂ ಇರಲಿಲ್ಲ.

ಆ ದ್ವಾರಪಾಲಕರ ವೈಶಿಷ್ಟ್ಯವೆಂದರೆ ಬೇಂದ್ರೆಯವರನ್ನು ಬೆಳಗಿನ ಸಮಾರಂಭದಲ್ಲಿ ವೇದಿಕೆಯಲ್ಲಿ ನೋಡಿದ್ದರೂ ಅವರ ಗುರುತು ಮಧ್ಯಾಹ್ನ ಅವರಿಗಾಗದಿರುವುದು! ಈ ವಿಚಿತ್ರ ಪರಿಸ್ಥಿತಿಯಲ್ಲಿ ಸಮಯಾವಧಾನದಿಂದ ಬೇಂದ್ರೆಯವರು "ನಾನು ಬೇಂದ್ರೆಯವರ ಕಡೆಯ ಮನುಷ್ಯ. ಅವರ ಪುಸ್ತಕವೊಂದನ್ನು ಅವರಿಗೀಗ ಕೊಡಬೇಕಾಗಿದೆ. ಅದಿಲ್ಲದೆ ಅವರು ಭಾಷಣ ಮಾಡುವಂತಿಲ್ಲ." ಎಂದು ಹೇಳಿದ ಮೇಲೆ ಅವರನ್ನು ಒಳಗೆ ಬಿಟ್ಟರು. ನನಗಂತೂ "ಪಾಸ್" ಇತ್ತು. ಅವರ ಜೊತೆಗೇ ವೇದಿಕೆಗೆ ತೆರಳಿದೆ. ಅಂತೂ ಕಾರ್ಯಕ್ರಮ ಪ್ರಾರಂಭವಾಯಿತು. ಬೊಂಬಾಯಿಯಲ್ಲಿ ಕೂಡಾ ಮಾಸ್ತಿಯವರ ಅಧ್ಯಕ್ಷತೆಯಲ್ಲಿ ನಡೆಯುತ್ತಿದ್ದ ಸಮಾರಂಭದಲ್ಲಿ ಭಾಷಣಕಾರರಾದ ಬೇಂದ್ರೆಯವರಿಗೆ ಅಲ್ಲಿಯ ದ್ವಾರಪಾಲಕರಿಂದ ಇಂಥ ಸ್ವಾಗತವೇ ದೊರಕಿತ್ತಂತೆ. ಹಾಗೆ ಗೋಕಾಕ್ ಹೈಸ್ಕೂಲಿಗೆ ಆಮಂತ್ರಣದಂತೆ ನಿಲ್ದಾಣದಲ್ಲಿ ಬೇಂದ್ರೆಯವರನ್ನು ಗುರುತಿಸಲಾಗದೆ ಅವರು ಬರಲಿಲ್ಲವೆಂದು ವರದಿ ಒಪ್ಪಿಸಿದಾಗ, ಶಾಲೆಯ ಮುಖೋಪಾಧ್ಯಾಯರು ಸಭೆಗೆ ಬೇರೆ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿ ಸಭಾ ಕಾರ್ಯಕ್ರಮವನ್ನು ಆರಂಭಿಸಿಬಿಟ್ಟರು. ಅಷ್ಟು ಹೊತ್ತಿಗೆ ಬೇಂದ್ರೆಯವರು ಸಭೆಯೊಳಗೆ ಹೋದರು ಮತ್ತು ಮುಖ್ಯೋಪಾಧ್ಯಾಯರು ಸಪ್ಪೆ ಮೋರೆ ಹಾಕಿಕೊಂಡದ್ದನ್ನು ನೋಡಿ "ಅವರ ಅಧ್ಯಕ್ಷತೆಯಲ್ಲಿಯೇ ಸಭೆ ಜರುಗಲಿ ನಾನು ಭಾಷಣಕಾರನಾಗಿ ಮಾತಾಡುತ್ತೇನೆ, ನನಗೆ ಅಧ್ಯಕ್ಷನಾಗದಿರುವುದರಿಂದ ಬೇಸರವಿಲ್ಲ" ಎಂದು ಸಮಾಧಾನ ಮಾಡಿ ಅನಂತರ ಭಾಷಣ ಮಾಡಿದ್ದನ್ನು ಬೇಂದ್ರೆಯವರು ನನ್ನ ಹತ್ತಿರ ಒಮ್ಮೆ ಹೇಳಿದ್ದರು.

ದ.ರಾ.ಬೇಂದ್ರೆಯವರ ನಿಕಟ ಪರಿಚಯ ಲಭಿಸಿದ್ದು ನಾನು ಪುಣೆಯಲ್ಲಿದ್ದಾಗ.

ಮೊದಲ ಭೇಟಿ

ಸಾಕರ್‌ಚಂದ್ ಮಗನ್‌ಲಾಲ್‌ಶೇಟ್, ಪ್ರೊಪ್ರೈಟರ್, ಇಂಡೋಫಾರಿನ್ ಸ್ಟೋರ್ಸ್, ಸಚ್ಚಾಪೀರ್‌ಸ್ಕೇರ್, ಕಂಟೋನ್‌ಮೆಂಟ್, ಪೂನಾ ಅವರ ೩೫೩ ನಂ.ದ ಮನೆಯ ಮೊದಲ ಅಂತಸ್ತಿನ ಮೂಲೆಯ ಕೋಣೆಯಲ್ಲಿ ನಾನು ನನ್ನ ಇನ್ನಿಬ್ಬರು ಸ್ನೇಹಿತರೊಡನೆ ವಾಸವಾಗಿದ್ದಾಗ (ರೂಂ ಬಾಡಿಗೆ ರೂ. ೭೦ ತಿಂಗಳೊಂದಕ್ಕೆ) ಪ್ರತಿ ಭಾನುವಾರವೂ ಕೇಸರಿ ಆಫೀಸಿರುವ ರಸ್ತೆಯ ಮೂಲಕ ಡೆಕ್ಕನ್, ಜಿಂಖಾನಾ ಪ್ರದೇಶವನ್ನು ಸಂಚರಿಸಿ ತಿರುಗಿ ಬರುತ್ತಿದ್ದೆವು. ಅಂಥ ಒಂದು ದಿನ ನಾನು ನನ್ನ ಗೆಳೆಯ ಚೌಹಾಣ್ ಮತ್ತು ದೇಶಪಾಂಡೆ ಎಂಬುವರನ್ನು ಭೇಟಿಯಾಗಲು ಸಹವಾಸಿಗಳಾದ ನನ್ನ ಸಹೋದ್ಯೋಗಿಗಳೊಡನೆ ಕೇಸರಿ ಆಫೀಸನ್ನು ಸಮೀಪಿಸುತ್ತಿರುವಾಗ ನನ್ನ ಎದುರುಗಡೆಯಿಂದ "ಯಾರವರು? ಇಷ್ಟು ಧೈರ್ಯವಾಗಿ ಈ ಮರಾಠಿ ಜಗತ್ತಿನಲ್ಲಿ ಕನ್ನಡ ಮಾತನಾಡುತ್ತಾ ಬರುವವರು?" ಎಂದು ಉಚ್ಚಕಂಠದಿಂದ ನಮಗೆ ಸವಾಲು

ಹಾಕಿದ್ದು ಯಾರೆಂದು ಗೊತ್ತಾಗದಿದ್ದರೂ ನಾವು ಹತ್ತಿರವಾದಂತೆ ನಮ್ಮನ್ನು ಕೂಗಿ ಕರೆದದ್ದು ಪ್ರಶ್ನಿಸಿದ್ದು "ಗರಿ" ಎಂಬ ಸುಂದರ ಕವನ ಸಂಗ್ರಹ ಬರೆದು ಪ್ರಸಿದ್ಧರಾಗಿದ್ದ ಶ್ರೀ ಅಂಬಿಕಾತನಯದತ್ತ ಪ್ರೊ. ದ.ರಾ. ಬೇಂದ್ರೆ, ಕನ್ನಡ ಪ್ರಾಧ್ಯಾಪಕರು, ಫರ್ಗುಸನ್ ಕಾಲೇಜ್ ಪೂನಾ ಎಂಬುದು ಕೆಲವೇ ನಿಮಿಷಗಳಲ್ಲಿ ನಮಗದು ಗೊತ್ತಾಯಿತು. ಬೇಂದ್ರೆಯವರಲ್ಲಿದ್ದ ಹಾಸ್ಯ ಚಾತುರ್ಯ, ಕರುಣೆಯ ಕಾರಂಜಿಗಳು ನನ್ನನ್ನು ಸೆರೆ ಹಿಡಿಯಲು ಆರಂಭವಾದದ್ದು ೧೯೪೦-೪೧ ರಿಂದಲೇ. ಅಂದರೆ ಅವರು ಶಿವಮೊಗ್ಗದಲ್ಲಿ ನಡೆದ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದಂದಿನಿಂದಲೇ ಎನ್ನಬಹುದು.

ಕಾವ್ಯಗುರು

ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ ತಮ್ಮ ಒಬ್ಬರು "ಕೇಸರಿ" ಆಫೀಸಿನ ಸಾಲಿನ ಒಂದು ಮನೆಯಲ್ಲಿ ವಾಸಿಸುತ್ತಿದ್ದರು. ಅವರ ಮನೆಯಲ್ಲಿದ್ದು ಇವರು ಫರ್ಗುಸನ್ ಕಾಲೇಜಿಗೆ ಹೋಗಿ ಬರುತ್ತಿದ್ದರು. ಅವರೂ ನಾವೂ ಭಾನುವಾರದ ದಿನ ಗೋಖಲೆ ಕರ್ನಾಟಕ ಸಂಘದಲ್ಲಿ ಸೇರುತ್ತಿದ್ದುದೂ ಉಂಟು. "ನಮೋ ಎಂಬೆ ಕವಿ ಗುರುವೆ" ಎಂಬ ನನ್ನ ಪದ್ಯವನ್ನು ಬರೆದು ಅವರ ಎದುರಿಟ್ಟು ನಾನು ನಮಸ್ಕರಿಸಿದ್ದು ಅಲ್ಲಿಯೇ! ನನ್ನ ಹತ್ತಿರ ಇದ್ದದ್ದು ನನ್ನ "ಮೇಘನಾದ" ಕವನ ಸಂಕಲನ; ಅವರ ಹತ್ತಿರ ಆಗ ಇದ್ದದ್ದು "ಗರಿ" ಎಂಬ ಕವನ ಸಂಕಲನ. ಆಮಂತ್ರಿತರಾಗಿ ಕಾವ್ಯವಾಚನ ಮಾಡಿದ್ದು ಶ್ರೀ ಟಿ.ವಿ. ಮಯ್ಯ ಎಂಬುವರ ಮನೆಯಲ್ಲಿ. ಟಿ.ವಿ ಮಯ್ಯ ದಂಪತಿಗಳು ಕುಂದಾಪುರ ಕಡೆಯವರು. ಅವರು ಅಲ್ಲಿ ಅಕೌಂಟ್ಸ್ ಆಫೀಸರರಾಗಿದ್ದರು. ಅವರು ಮತ್ತು ಅವರ ಪತ್ನೀ ಪುತ್ರರೇ ನಮ್ಮ ಶ್ರಾವಕರು. ಅವರ ಉಪಾಹಾರದ ಆತಿಥ್ಯವು ಜೀರ್ಣವಾಗುವವರೆಗೆ ಅಂಬಿಕಾತನಯದತ್ತರ ಮತ್ತು ನನ್ನ ಕಾವ್ಯವಾಚನ ಮಧ್ಯಾಹ್ನ ೪ ರಿಂದ ೭ರವರೆಗೆ ನಡೆಯಿತು. ಅದೇ ಮೇರೆಗೆ ಅನಂತರ ಪ್ರತಿ ಭಾನುವಾರದಂದೂ ಪುಣೆಯಲ್ಲಿದ್ದ ಕನ್ನಡ ರಸಿಕರ ಮನೆಗೆ ನಾನೂ ಬೇಂದ್ರೆಯವರೂ ಆಮಂತ್ರಿತರಾಗಿ ಹೋಗಿ ಕಾವ್ಯವಾಚನ ಮಾಡಿಬರುವ ಪರಿಪಾಠ ಉಂಟಾಯಿತು. ಬೇಂದ್ರೆಯವರ ಬಾಲ್ಯದ ಕೌಮಾರದ ಮತ್ತು ಯೌವನದ ಅವಧಿಯ ದಾರಿದ್ರ್ಯಾದಿ ವಿವಿಧ ಅನುಭವಗಳನ್ನು ಅವರ ಬಾಯಿಯಿಂದಲೇ ಕೇಳಿ ನನ್ನ ಕರುಳು ಕರಗುತ್ತಿತ್ತು. ನನ್ನ ಹುಟ್ಟಿನಿಂದ ಆವರೆಗೆ ನಾನು ಪಡುತ್ತಾ ಬಂದ ಕಷ್ಟ ಕಾರ್ಪಣ್ಯಗಳನ್ನು ಕೇಳಿ ಅವರ ಹೃದಯವೂ ಕರಗಿ ಹೋಗುತ್ತಿತ್ತು. ಈ ಸಂಬಂಧವೇ ಅವರು ದಿವಂಗತರಾಗುವ ತಿಂಗಳ ಆದಿಯ ಅವಧಿಯಲ್ಲಿ ಅವರನ್ನು ನಾನು ಕಂಡು ಗಂಟೆಗಟ್ಟಲೆ ಧಾರವಾಡದಲ್ಲಿದ್ದ ಅವರ ಮನೆಯಲ್ಲೇ ಮಾತನಾಡಿದುದರವರೆಗೂ ಏಕರೂಪವಾಗಿ ಗಂಗೆಯಂತೆ ಹರಿಯುತ್ತಿತ್ತು.

ಬೇಂದ್ರೆಯವರ ಅನುಭವಗಳ ಕಠಿಣತೆ ವಿವಿಧ ಮತ್ತು ವ್ಯಾಪಕ. ಅವರ ಅಂತಃಕರಣವು ಶ್ರೀ ಅರವಿಂದರ ಮತ್ತು ಮಾತೆಯವರ ಉಪದೇಶಗಳಿಂದ ಪಳಗುತ್ತಿತ್ತು. ನಾನು ಪುಣೆಯಲ್ಲಿಯ ನನ್ನ ಉದ್ಯೋಗವನ್ನು ಬಿಟ್ಟು ಭಟ್ಕಳಕ್ಕೆ ಹೊರಡುವ ಮುಂಚಿನ ದಿನ ಬೇಂದ್ರೆಯವರು ತಮ್ಮ ತಮ್ಮನ ಮನೆಗೆ ಕರೆದು ಒಂದಿಷ್ಟು ಅವಲಕ್ಕಿಯನ್ನು ತರಿಸಿ ಒಂದೇ ತಟ್ಟೆಯಲ್ಲಿಟ್ಟು ನನ್ನೊಡನೆ ತಿಂದದ್ದು ಅವಿಸ್ಮರಣೀಯ! ಅವರ ವಾತ್ಸಲ್ಯದ ಹಾರ್ದಿಕತೆ ನನಗೆ ಜೀವನದಲ್ಲಿ ಅಪಾರ ಧೈರ್ಯವನ್ನು ತಂದುಕೊಟ್ಟಿತು.

ಕಾವ್ಯವಾಚನ

ಭಟ್ಕಳ ವಾಸ ಮುಗಿದ ಬಳಿಕ ನಾನು ೧೯೪೩ರಲ್ಲಿ ಹುಬ್ಬಳ್ಳಿಯ "ಸಂಯುಕ್ತ ಕರ್ನಾಟಕ" ಕಾರ್ಯಾಲಯದಲ್ಲಿ ಕೆಲಸ ಮಾಡತೊಡಗಿದಾಗ ನಮ್ಮ ಮನೆ ಬಡಿಗೇರ ಓಣಿಯಲ್ಲಿ ಪ್ರಾರಂಭವಾಯಿತು. ಅದೇ ಕಾಲದಲ್ಲಿ ಬೇಂದ್ರೆಯವರು ಪುಣೆಯನ್ನು ಬಿಟ್ಟು ಸೊಲ್ಲಾಪುರದ ಡಿ.ಎ.ಪಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾದರು. ಆಗ ವರ್ಷದಲ್ಲಿ ಬರುವ ಮೂರು ದೀರ್ಘ ರಜೆಗಳಲ್ಲೂ ಅವರು ಹುಬ್ಬಳ್ಳಿಗೆ ಬರುತ್ತಿದ್ದರು. ಅವರು ಹುಬ್ಬಳ್ಳಿಗೆ ಬಂದರೆ ಸಭೆ ಸೇರುವುದು ವೆಂಕೋಬಾಚಾರ್ಯರ ಅಟ್ಟದ ಮೇಲೆ. ದಿ.ದೇಸಾಯಿದತ್ತಮೂರ್ತಿ ಮತ್ತು ದಿ. ನರೇಗಲ್ ಪ್ರಹ್ಲಾದರಾಯರು ಎಲ್ಲಿದ್ದರೂ ಅಲ್ಲಿ ಹಾಜರಾಗಿಬಿಡುತ್ತಿದ್ದರು. ನನಗೂ ಕರೆ ಬರುತ್ತಿತ್ತು. ಕಾವ್ಯವಾಚನ ಮತ್ತು ವಿಮರ್ಶೆಗಳಲ್ಲದೆ ಶ್ರೀ ಅರವಿಂದರ ಉಪದೇಶಗಳ ವಿವರಣೆಯನ್ನೂ ಬೇಂದ್ರೆಯವರು ಲೀಲಾಜಾಲವಾಗಿ ನಮ್ಮ ಮುಂದೆ ಇಡುತ್ತಿದ್ದರು. ಅವರ ಮಾತೆಂದರೆ ವಾಗಿಂದ್ರಜಾಲ ಎಲ್ಲಾ ಆಶುಭಾಷಣ. ಮಾತನ್ನು ಮಾತು ಅಂಬನಂಬಟ್ಟುವಂತೆ ಸುಸಂಗತವಾಗಿ ಹಿಂಬಾಲಿಸಿ ಹೋಗುತ್ತಿದ್ದುದು ಆಹ್ಲಾದಕಾರಿಯಾಗಿರುತ್ತಿತ್ತು. ಸ್ಫೂರ್ತಿದಾಯಕವಾಗಿರುತ್ತಿತ್ತು. ಒಮ್ಮೆ ಸಂಜೆ ಅಕಸ್ಮಾತ್ತಾಗಿ ಬೇಂದ್ರೆಯವರು ಹುಬ್ಬಳ್ಳಿಗೆ ಬಂದರು. ಅಂದು 'ಮಾತೆ'ಯವರ ಜನ್ಮದಿನವಾಗಿತ್ತು. ದಿ. ವೆಂಕೋಬಾಚಾರ್, ನರೇಗಲ್, ದತ್ತಮೂರ್ತಿ ಮುಂತಾದ ನಾವೆಲ್ಲರೂ ಅಲ್ಲಿ ಹಾದಿಯ ಪಕ್ಕದಲ್ಲಿದ್ದ ಮಿತ್ರರೊಬ್ಬರ ಮನೆಯ ಅಟ್ಟದಲ್ಲಿ ಕುಳಿತೆವು. ಮಾತೆಯವರ ಛಾಯಾಚಿತ್ರವನ್ನು ವ್ಯಾಸಪೀಠದಲ್ಲಿಟ್ಟು ಊದುಬತ್ತಿ ಹೊತ್ತಿಸಿ ಬೇಂದ್ರೆಯವರು ಕುಳಿತರು. ಒಂದುವರೆ ತಾಸಿನವರೆಗೆ ಚಾತುರ್ವಣ್ಯದ ಮಾನಸಶಾಸ್ತ್ರೀಯ ಹಾಗೂ ಆಧ್ಯಾತ್ಮಿಕ ವಿವರಣೆಗಳನ್ನು ಧಾರಾವಾಹಿಯಾಗಿ ವಿವರಿಸಿದರು. ಅವರ ಪ್ರಕಾರ ಆ ನಾಲ್ಕೂ ಜೀವಾತ್ಮನ ಸಂಸ್ಕಾರದ ನಾಲ್ಕು ಮಾದರಿಗಳು. ವ್ಯಕ್ತಿತ್ವದ ನಾಲ್ಕು ಮಾದರಿಗಳು. ಜನ್ಮವು ಸರ್ವತ್ರ ಅದಕ್ಕೆ ನಿಕಷವಲ್ಲ. ಅದೇ ವೇರೆಗೆ ಮತ್ತೊಂದು ಜನ್ಮದಿನಾಚರಣೆಯು ದಿ. ವೆಂಕೋಬಾಚಾರ್ಯರ ಮನೆಯ ಅಟ್ಟದ ಮೇಲೆ ನಡೆದಾಗ ಸಾಧಕರ ಶೀಲ,

ಜ್ಞಾನ, ಭಕ್ತಿಗಳ ಬಗೆಗೆ ಎರಡು ತಾಸು ಬಹುಚತುರೋಕ್ತಿಗಳಿಂದ ಕೂಡಿದ ಭಾಷಣ ಬೇಂದ್ರೆಯವರಿಂದ ಗದ್ಯಕಾವ್ಯವಾಗಿ ಹರಿಯಿತು. ಕಾವ್ಯದ ಗೊತ್ತುಗುರಿಗಳ ಬಗೆಗೂ ಭಕ್ತಿಯ ರಸತ್ವದ ಬಗೆಗೂ ವಿಚಾರ ಪೂರ್ವಕವಾಗಿ ಚರ್ಚಿಸಿ ವಿವೇಚಿಸಿ ಶ್ರೀ ಅರವಿಂದರ "Future Poetry ಭವ್ಯ ಕಾವ್ಯ" ಗ್ರಂಥದಲ್ಲಿ ಬರೆದ ಕೆಲ ಅಭಿಪ್ರಾಯಗಳ ಸರಸ, ಸೋದಾಹರಣ ಉಲ್ಲೇಖವನ್ನು ಅವರ ಬಾಯಿಂದ ಕೇಳಿದೆವು. ಆಗ ಅವರು "ಸಖೀಗೀತ"ದಲ್ಲಿ ಹೇಳಿದ "ಕೊಟ್ಟಿದ್ದೆ ರೂಪವು ಇಟ್ಟದ್ದೆ ನಾಮವು" ಎಂಬ ಪ್ರಸನ್ನ ಕವಿತಾ ಲಕ್ಷಣದ ಗುರುತುಗಳನ್ನು ನಾವು ಅವರ ವಾಗ್ಝರಿಯಲ್ಲಿ ಗುರುತಿಸಿದೆವು. ಆಮೇಲೆ ನಮ್ಮ ಮನೆಗೆ ಬೇಂದ್ರೆಯವರನ್ನು ಮಧ್ಯಾಹ್ನದ ಊಟಕ್ಕೆ ಕರೆದುಕೊಂಡು ಹೋಗುತ್ತಿರುವಾಗ ಒಂದು ವಿಚಿತ್ರ ವಾದವು ಶುರುವಾಯಿತು. ಗೃಹಿಣಿಯು ಕೆಲವೊಮ್ಮೆ ಸುಳ್ಳು ಹೇಳಬೇಕಾಗುತ್ತದೆ. ಅಂಥ ವಿಶಿಷ್ಟ ಸಂದರ್ಭಗಳಲ್ಲಿ ಅವರು ಆಡಿದ ಸುಳ್ಳು ಕ್ಷಮ್ಯ ನ್ಯಾಯ ಅವಶ್ಯಕ ಎಂಬುದು ಅವರ ವಾದ. ನಾನು ಪ್ರತ್ಯುತ್ತರ ಕೊಟ್ಟದ್ದೆಲ್ಲ ಅವರಿಗೆ ಅತೃಪ್ತಿಕರವಾಯಿತು, ತಮ್ಮ ವಾದದ ಸಮರ್ಥನೆಗಾಗಿ.

ಧ್ವನಿ ಮುದ್ರಿತ ಮಾತುಗಳು

ಸಾಮಾನ್ಯವಾಗಿ ಶ್ರೀಧರರ ಸಂಭಾಷಣೆ ಹೇಗಿರುತ್ತದೆ ಎಂಬುದಕ್ಕೆ ಒಂದು ಉದಾಹರಣೆ. ೧.೧೧.೧೯೮೮ರಂದು ಬಾರಕೂರಿನಲ್ಲಿ ಅವರಿಗೆ ಶಿವರಾಮಕಾರಂತರಿಂದ ಸನ್ಮಾನ ಕಾರ್ಯಕ್ರಮವಿತ್ತು. ಆ ಸಂದರ್ಭದಲ್ಲಿ ಸದಾಶಿವ ಕಲ್ಲೂರರ ಮನೆಯಲ್ಲಿ ಮಧ್ಯಾಹ್ನ ೩ ರಿಂದ ರಾತ್ರಿ ೧೧ ರವರೆಗೆ ನಡೆದ ಸಂಭಾಷಣೆಯನ್ನಿಲ್ಲಿ ನೀಡುತ್ತಿದ್ದೇವೆ. ಇವು ಧ್ವನಿ ಮುದ್ರಿತ ಕ್ಯಾಸೆಟ್‌ನಿಂದ ಆಯ್ದ ಸಂಭಾಷಣೆಗಳು.

ಆಚಾರರು: "ಇವರಿಲ್ಲಿ ಬಂದದ್ದರಿಂದ ಬಿ.ಎಚ್.ಶ್ರೀ. ಪರಿಚಯ ಆಯ್ತು" ಆಗ ಬಿ. ಎಚ್.ಶ್ರೀ "ಪರಿಚಯ ಏನೂ ಮಾಡಿಸಬೇಕಿಲ್ಲ, ಋಣಾನುಬಂಧ ರೂಪೇಣ... ಎಂಬಂತೆ ನಾವು ಇಷ್ಟು ಸಲಿಗೆಯಿಂದ ಮಾತಾಡುತ್ತೀವಲ್ಲ, ನಾವೇನು ಒಟ್ಟಿಗೆ ಶಾಲೆಗೆ ಹೋದವರೇ?" ಎಂದು ತಟ್ಟನೆ ಕೇಳಿದರು!

ಬಿ.ಎಚ್.ಶ್ರೀ: ಶಿರಸಿಗೆ ಕಾರಂತರು ಬಂದಾಗ ವಿಶ್ವಾಮಿತ್ರ ವಕೀಲರು ವಾಸಿಷ್ಠ ಗಣಪತಿ ಮುನಿಗಳು ಬರೆದ ಉಮಾ ಸಹಸ್ರ ಎಂಬ ಪುಸ್ತಕವನ್ನು ಕಾರಂತರಿಗೆ ಕೊಟ್ಟರು. ಆಗ 'ಶ್ರೀಧರರೇ ಈ ಪುಸ್ತಕ ನನ್ನತ್ರ ಮಾತಾಡುವುದಿಲ್ಲ. ಇದು ನಿಮಗೆ' ಎಂದು ನೀಡಿದರು! ಕಾರಂತರ ನಿಷ್ಕಪಟತೆಯೇ ನನ್ನನ್ನು ಕಾರಂತರೆಡೆಗೆ ಸೆಳೆದದ್ದು. ಯಕ್ಷಗಾನ ಬಯಲಾಟ ಬರೆಯುವಾಗ ಬೇಕಾದಷ್ಟು ಪತ್ರ ವ್ಯವಹಾರವಾಗಿತ್ತು..."

ಬಿ.ಎಚ್.ಶ್ರೀ: "ಹಾಗೆಯೇ ನಾನು ಬೇಂದ್ರೆಯವರ ಜೊತೆಗೆ ಸಾಕಷ್ಟು ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸಿದ್ದೆ. ಒಂದು ಸಾಹಿತ್ಯ ಸಮ್ಮೇಳನದಲ್ಲಿ (ಉಡುಪಿ) ಕವಿಗೋಷ್ಠಿಯಲ್ಲಿ ಕವನ ಓದಲು 'ನಾನು ನಾನು' ಎಂದು ತುಂಬಾ ಜನ ಹೆಸರು ನೀಡಿದರು. 'ಈ ಕವಿಗಳಿಗೆಲ್ಲ ಜಾಗ ಕೊಟ್ಕೊಂಡು ಕಾರ್ಯಕ್ರಮ ಹೇಗೆ ಪೂರೈಸುವುದು ಮಾರಾಯ್ರೆ?' ಎಂದು ನನ್ನನ್ನು ಕೇಳಿದರು. ನಾನಂದೆ–ನೀವು ಹೇಳಿದ್ರೆ ಯಾರೂ ಇಲ್ಲ ಅನ್ನುವುದಿಲ್ಲ. ಒಂದು ಮಾತು ಹೀಗೆ ಅಂತ ಹೇಳಿಬಿಡಿ, ಅಂತಂದೆ. ಅವರು ಚತುರೋಕ್ತಿಯಲ್ಲಿ ಚತುರರು. ಆಗ 'ನೋಡಿ ನಿಮ್ಮೂರಲ್ಲಿ ಸಾಹಿತ್ಯ ಸಮ್ಮೇಳನ ಆದರೆ ನಾವೆಲ್ಲಾ ಅತಿಥಿಗಳು, ನಮ್ಮೂರಲ್ಲಿ ಸಾಹಿತ್ಯ ಸಮ್ಮೇಳನ ಆದ್ರೆ ನೀವೆಲ್ಲಾ

ಅತಿಥಿಗಳು, ಆಗ ನೀವು ಅಲ್ಲಿ ಬಂದು ಕವನ ಓದುವುದು ಸೂಕ್ತವಲ್ಲವೆ?' ಎಂದು ಒಪ್ಪಿಸಿದರು! ಇಷ್ಟು ಮಾತಾಡೋ ಸಂಸ್ಕಾರವಿತ್ತು ಅವರಿಗೆ!"

"ನಾನು ನಾಸ್ತಿಕರು ಆಸ್ತಿಕರು ಒಂದೇ ಅಂತ ಸಿದ್ಧಮಾಡಿ ತೋರಿಸ್ತೀನಿ. ಅಯ್ಯಾ! ಒಬ್ಬ ಮನುಷ್ಯನಿಗೆ ಒಂದು ಮನಸ್ಸು ಅಂತ ಇರುತ್ತದೋ ಇಲ್ಲವೋ, ಅವನ ಮನಸ್ಸಿನಲ್ಲಿ ದಿವಸಕ್ಕೆ ಇಪ್ಪತ್ತನಾಲ್ಕು ತಾಸಿನಲ್ಲಿ ಹೆಚ್ಚು ಹೊತ್ತು ಯಾವ ವಿಷಯದ ಬಗ್ಗೆ ಹೆಚ್ಚು ಚಿಂತನ ಇರುತ್ತದೆಯೋ ಅದು ಅವನಿಗೆ ದೇವರು. ಇದನ್ನು ಶಂಕರಾಚಾರ್ಯರೂ ಹೇಳಿದ್ದಾರೆ. ಹೌದು ನಮ್ಮ ದೇವರಿಗೆ ಕೈ ಇಲ್ಲ, ಕಾಲಿಲ್ಲ, ತ್ರಿಗುಣಾತೀತ ಅಂತ! ಹಾಗಾದ್ರಿಂದ ಮನಸ್ಸಿನ ಆಲೋಚನೆಯ ರೂಪವೇ ದೇವರು. ವೆಂಕಟ್ರಮಣ ಹೆಬ್ಬಾರರಿಂದ ನಮ್ಮ ಹಿರಿಯರಿಂದ ದೂರದಿಂದ ಆಶೀರ್ವಾದ ಪಡೆದದ್ದೇ ಹೊರತು ನೇರವಾಗಿ ವಿದ್ಯಾಭ್ಯಾಸ ಮಾಡಿದವನಲ್ಲ ನಾನು. ಯಾಕೆಂದರೆ ಆಗ ನಾನು ಸಣ್ಣ ಹುಡುಗನಾಗಿದ್ದೆ. ಹತ್ತೇ ವರ್ಷಕ್ಕೆ ಘಟ್ಟ ಹತ್ತಿದ್ದು ಅಂದ್ನಲ್ಲ. ಆನಂದರಾವ್ ಮನೆಗೆ ಅಂಡಿಗೆಗೆ ಹೋದದ್ದು, ಅಲ್ಲಿಂದ ಸಾಗರ, ಮೈಸೂರು... ಅಲ್ಲಾ, ಮೈಸೂರ್ನಲ್ಲಿ ನನಗೆ ಅತ್ಯಂತ ದೊಡ್ಡ ವಿದ್ವಾಂಸರು ಗುರುಗಳಾಗಿ ಸಿಕ್ಕಿದ್ದು ನನ್ನ ಪುಣ್ಯ. ತಂದೆಯಂತೆ ನೋಡ್ಕೊಂಡಿದ್ರು. ಇದರಲ್ಲಿ ಅತಿಶಯೋಕ್ತಿ ಇಲ್ಲ, ಈಗ ನೆನಪಿಸಿಕೊಂಡರೆ ಕೃತಜ್ಞತೆಯ ಕಣ್ಣೀರು ಬರುತ್ತೆ, ಹೊಟ್ಟೆಗೆ ಅನ್ನ, ಮನಸ್ಸಿಗೆ ಪಾಠ ಎರಡನ್ನೂ ನೀಡಿದ್ದರು. ಎ.ಆರ್.ಕೃಷ್ಣಶಾಸ್ತ್ರಿಗಳು ಮೂರು ಮೂರು ವಿಷಯದಲ್ಲಿ ವಿದ್ವಾಂಸರು, ತೀ.ನಂ.ಶ್ರೀಕಂಠಯ್ಯನವರೂ ಇವುಗಳಲ್ಲಿ ತಜ್ಞರು. ಆ ಮೇಲಿಂದ ನರಸಿಂಹ ಶಾಸ್ತ್ರಿಗಳು, ಫಸ್ಟ್‌ಕ್ಲಾಸ್ ಎಂ.ಎ. ಸಂಸ್ಕೃತ ಮತ್ತು ಇಂಗ್ಲೀಷ್ ಇಂತಿಂಥ ವಿದ್ವಾಂಸರು, ಅಂತಃಕರಣಿಗಳು... ಆ ಕಾಲಕ್ಕೆ ಮುಗಿಯಿತದು! ನನ್ನ ಕಾಲ ಅಂತೀನಿ, ಆ ತಲೆಮಾರಿಗೇ ಮುಗಿಯಿತು. ಈಗ ಒಬ್ಬನೂ ಅಂಥವ ಸಿಗೋಲ್ಲ. ವಿದ್ಯಾರ್ಥಿಗಳ ಸಂಖ್ಯೆಯೂ ಕಡಿಮೆಯಿತ್ತು. ಆ ಮೇಷ್ಟ್ರುಗಳ ಪರಿಚಯ ಇಷ್ಟಾಯ್ತು. ನಿಮಗೆ ಹೇಳಿದರೆ ಅತಿಶಯೋಕ್ತಿ ಅನಿಸಬಹುದು. ನರಸಿಂಹ ಶಾಸ್ತ್ರಿಗಳು ಸಂಸ್ಕೃತ ವಿಭಾಗದ ಮುಖ್ಯಸ್ಥರು. ಅಧಿಪತಿಗಳು, ಅವರು ಹಾಸ್ಯಪ್ರವೃತ್ತಿಯವರು, ಸ್ವಲ್ಪ ತಮಾಶೆ ಮಾಡೋದು ಜಾಸ್ತಿ. ಅವರು ಆದಿತ್ಯವಾರದ ದಿವಸ ಮನೆಗೆ ಕರೆದುಕೊಂಡು ಹೋಗಿ ಊಟ ಹಾಕೋದು, ಹಬ್ಬ ಹುಣ್ಣಿಮೆ ದಿವ್ಸನೂ ಊಟಕ್ಕೆ ಕರೆಯೋದು, ಅವರ ಹೆಂಡತಿ ನಮ್ಮೂರಲ್ಲಿ ಮಾಡಿದ ಹಾಗೇ ಮಾಡುವುದು ಏನು? ಎಲೆ ಮೇಲೆ ಹಾಕಿದ್ದು ಸಾಲದು ಅಂದ್ಕೋಂಡು, ಚಕ್ಲಿ ಗಿಕ್ಲಿಯೆಲ್ಲ ಪೊಟ್ನ ಕಟ್ಟಿ ಕಿಸೆಯೊಳಗೆ ಹಾಕಿ, ನನ್ನಜ್ಜಿ ಹಾಂಗೆ, ನಡೆದುಕೊಂಡಿದ್ರು! ಯಾವ ಋಣ ಇದು? ನಮ್ಮ ಜಾತಿ ಅಲ್ಲ, ನಮ್ಮ ಊರಲ್ಲ, ಏನೇನೂ ಅಲ್ಲ. ಅದಕ್ಕಾಗಿಯೇ ನಾನು ದೈವವನ್ನು ನಂಬುತ್ತೇನೆ."

"ಕಾರಂತರು ನಾಸ್ತಿಕರು ಹಾಗೆ ಹೀಗೆ ಎಂದು ಯಾರು ಏನೇ ಹೇಳಲಿ– ನಾನವರ ಅಂತಃಕರಣವನ್ನು ನೋಡಿದ್ದೇನೆ. ಒಮ್ಮೆ ಶಿರಸಿ ಮಾರಿಕಾಂಬಾ ದೇವಸ್ಥಾನದಲ್ಲಿ

ಕಾರ್ಯಕ್ರಮ ಇದ್ದಿತ್ತು. ಆಗ ವರ್ಷಕ್ಕೆ ೫೦೦ ರೂಪಾಯಿ ಪ್ರಿಂಟಿಂಗ್ ಖರ್ಚಿಗೆಂದು ಹಾಸಣಗಿ ಗಣಪತಿ ಭಟ್ಟರು ಕಾರಂತರಿಗೆ ಕೊಡುತ್ತಿದ್ದರು. ಕಾರಂತರು ನಾಸ್ತಿಕತೆ ಪರವಾಗಿಯೂ, ಹಾಸಣಗಿ ಗಣಪತಿ ಭಟ್ಟರು ಆಸ್ತಿಕತೆ ಬಗ್ಗೆ ಭಾಷಣ ಮಾಡಿದರು. ಕಾರಂತರು ಕೊನೆಗೆ ಏನು ಹೇಳಿದರು ಗೊತ್ತಾ? 'ರಮಣ ಮಹರ್ಷಿಗಳು, ಶಂಕರಾಚಾರ್ಯರಂಥವರು, ಒಂದು ನಾಲ್ಕಾರು ಸಾವಿರ ವರ್ಷಗಳಲ್ಲಿ, ಈ ಲೋಕದಲ್ಲಿ ಹುಟ್ಟಬಹುದು ನಾನು ನಂಬುತ್ತೇನೆ. ಆದರೆ ಹೆಜ್ಜೆ ಹೆಜ್ಜೆಗೆ ನಾನು ಯೋಗಿ, ನಾನು ಸ್ವಾಮಿ ಅಂತ ಬರುವವರನ್ನು ನಾವು ನಂಬುವುದಿಲ್ಲ' ಎಂದು ಘಂಟಾ ಘೋಷವಾಗಿ ದೇವರ ಮುಂದೆ ಹೇಳಿದ್ದಾರೆ! ಆ ನಂಬಿಗೆ ಕಾರಂತರಿಗಿದೆ. ಇನ್ನೊಮ್ಮೆ ಕಾರಂತರು ನಮ್ಮ ದೇಶದಲ್ಲಿ ದೇವರನ್ನೇ ತೆಗೆದರೆ ನೂರಕ್ಕೆ ೮೫ ಜನ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂದರು. ಅವರ 'ನಂಬಿದವರ ನಾಕ' ಓದಿದರೆ ಗೊತ್ತಾಗುತ್ತೆ. ಅವರು ನಂಬಿದವರನ್ನು ಹೀನ ಎಂದು ನೋಡುವುದಿಲ್ಲ. ಶುದ್ಧ ವೈದಿಕ ಸಂಸ್ಕೃತಿ ಎಂದರೆ ಆ ಲೆಕ್ಕದಲ್ಲಿ ಕಾರಂತರದ್ದೇ ಆಗಿದೆ. ಅಹಿಂಸಾ, ಸತ್ಯ, ಆಸ್ತೇಯ ಶೌಚ, ಇಂದ್ರಿಯನಿಗ್ರಹ, ಈ ಪಂಚ ಮಹಾಧರ್ಮಗಳು ಸರ್ವ ಧರ್ಮಗಳಿಗೂ ಬೀಜ. ಅಹಿಂಸಾ ಸತ್ಯಮಸ್ತೇಯ ಶೌಚಮಿಂದ್ರಿಯ ನಿಗ್ರಹ... ಮನುಷ್ಯನಾದವನಿಗೆ ಇವಿಷ್ಟೂ ಇರಬೇಕು. ಕಾರಂತರು ಇವಿಷ್ಟನ್ನೂ ಪಾಲಿಸ್ತಾರಲ್ಲ!"

ಡಿ.ಎಲ್. ನರಸಿಂಹಾಚಾರ್ಯರು

"ನಾನು ಎಂಥ ವಿಚಿತ್ರ ಮನುಷ್ಯ ಅಂದ್ರೆ, ಆಡು ಮುಟ್ಟದ ಸೊಪ್ಪಿಲ್ಲ– ಅಂದ್ಹಂಗೆ! ನಾನು ಮೈಸೂರಿಗೆ ಹೋಗುವವರೆಗೆ ತೀರಾ ಮುಗ್ಧನು ಹಳ್ಳಿಯವನೇ ಆಗಿದ್ದೆ. ಅಲ್ಲಿ ಹೋದ ನಂತರ ಈ ವಿದ್ವಾಂಸ ಮೇಷ್ಟ್ರುಗಳ ಸಂಪರ್ಕದಿಂದ ಬೌದ್ಧಿಕವಾಗಿ ಬೆಳೆದದ್ದು. ಅವರಿಗೆ ನಾನು ಗುರುಕುಲದಂತೆ ಸೇವೆ ಮಾಡ್ತಿದ್ದೆ. ಕಾಲೇಜು ಬಿಟ್ಟ ನಂತರವೂ ಅವರ ಮನೆಗೆ ಹೋಗುವುದು, ವಿಚಾರ ವಿನಿಮಯ ನಡೆಯುತ್ತಿತ್ತು. ನನ್ನ ವಿಷಯ ಸಂಸ್ಕೃತ, ಕನ್ನಡ, ಇತಿಹಾಸ, ತರ್ಕ ಇತ್ಯಾದಿ. ಆದರೆ ನನಗೆ ಹತ್ತು ವಿಷಯಗಳಲ್ಲಿ ಆಸಕ್ತಿ! ಹಾಗಾಗಿ ಅವರ ಜತೆ ಮನೆಗೂ ಹೋಗ್ತಿದ್ದೆ. ಡಿ.ಎಲ್. ನರಸಿಂಹಾಚಾರ್ಯರು ತುಂಬಾ ಆತ್ಮೀಯರಾಗಿದ್ದರು. ಅವರಿಗೆ ಸಂಸ್ಕೃತ, ಆರ್ಕ್ಯಾಲಜಿ (ಪುರಾತನ ವಸ್ತುಶಾಸ್ತ್ರ), ಭೂಗರ್ಭ ಶಾಸ್ತ್ರ, ಚರಿತ್ರೆ, ಕಲೆ ಮುಂತಾದವುಗಳ ಅಭ್ಯಾಸ ಇತ್ತು. ಆಗ ಒಂದು ಹಾಸ್ಯ ಪ್ರಸಂಗ. ಅವರು ಮೂರು ನಾಮ ಹಾಕಿಕೊಳ್ಳದೇ, ಒಂದೇ ನಾಮ ಹಾಕಿಕೊಳ್ಳುತ್ತಿದ್ದರು. ವಿದ್ಯಾರ್ಥಿಗಳೆಲ್ಲ ಸೇರಿ ಒಂದು ಅಭಿನಂದನ ಗ್ರಂಥ ಕಾಣಿಕೆಯಾಗಿ ಕೊಟ್ಟೆವು. ನಾನು, ಅವರು ಹಾಕಿಕೊಳ್ಳುವ ನಾಮ, ಪರ್ಪೆಂಡಿಕ್ಯುಲರ್ ಅಂದರೆ ೯೦ ಅಂಶದ ಕೋನದಂತೆ ನೇರವಾಗಿದ್ದು, ಇದು ಅವರ ನ್ಯಾಯ ನಿಷ್ಠುರತೆಯ ಸಂಕೇತ ಎಂದು ಬರೆದೆ. ಅವರು ತಮಗೆ ತಿಳಿದ ಎಲ್ಲಾ ಜ್ಞಾನವನ್ನೂ

ನನಗೆ ಉಪದೇಶ ಮಾಡುವುದೇ? ಆ ರೀತಿ ದಿನವೂ ನನ್ನನ್ನು ಮನೆಗೆ ಕರೆದೊಯ್ದು ವಿಸ್ತಾರವಾಗಿ ವಿಷಯ ತಿಳಿಸುತ್ತಿದ್ದರು. 'ಗೊತ್ತಿದೆಯೇನಯ್ಯಾ? Anchorite ಅಂದ್ರೆ ಏನು?,' 'ಇಲ್ಲಾ ಸಾರ್' ಅಂತ ನಾನಂದಾಗ, 'ನಾಳೆ ನೀನು ಗ್ರಂಥಾಲಯಕ್ಕೆ ಹೋಗಿ ನೋಡಿಕೊಂಡು ಬರಬೇಕು' ಎನ್ನುತ್ತಿದ್ದರು. ನಾನು ಹಾಗೆಯೇ ನೋಡಿಕೊಂಡು ಬರುತ್ತಿದ್ದೆ. Anchorite ಅಂದ್ರೆ ಚೀನಾ ದೇಶದಲ್ಲಿರುವ ಪ್ರಸಿದ್ಧ ದೇವಸ್ಥಾನ! ಇಂಥದ್ದನ್ನೆಲ್ಲ ಹೇಳಿ ತಲೆಗೆ ಅಭ್ಯಾಸ ಮಾಡಿಸುತ್ತಿದ್ದರು. ಒಂದು ದಿನ ಏನು ತಮಾಶೆ ಆಯ್ತು ಅಂದ್ರೆ, ಹೀಗೆ ಮಾತಾಡ್ತಾ ಮೂರು ನಾಲ್ಕು ಸಲ ಕಾಲೇಜಿನಿಂದ ಮನೆಗೆ, ಮನೆಯಿಂದ ಕಾಲೇಜಿಗೆ ತಿರುಗಿ, ಅವರ ಮನೆ ಒಳಗೆ ಬಂದ ಕೂಡಲೇ ಅವರ ಮನೆಯವರು ಅಲ್ಲ, ಅವರನ್ನು ಎಷ್ಟು ದಣಿಸುತ್ತೀರಿ ನೀವು? ಅಂತಂದ್ರು, ಆಗ ಡಿ.ಎಲ್.ಎನ್ ಇಲ್ಲೇ ಹಾಕ್ಬಿಡೇ ಊಟಕ್ಕೆ, ದಣಿಸೋದು ಏನು ಬಂತು? ಅವನು ಕೇಳ್ಬೇಕು ಅಂತಾನೆ, ನಾನು ಹೇಳ್ಬೇಕೂ ಅಂತೀನಿ ಅಂತ ಹೀಗೆ ಹೇಳಿದರು! ಇಷ್ಟು ಸಲಿಗೆ ಇತ್ತು. ಆದ್ರೆ ಈಗ ಆ ಗುರು ಶಿಷ್ಯರ ಪರಂಪರೆ ಹೋಯ್ತು."

ಕೃಷ್ಣರಾಜ ಒಡೆಯರ್

'ಪ್ರಜಾಪ್ರಭುತ್ವದ ಬಗ್ಗೆ ನನಗೆ ಕೆಲವು ಭಿನ್ನಾಭಿಪ್ರಾಯಗಳಿವೆ. ಯಾಕೆಂದರೆ, ಕೃಷ್ಣರಾಜ ಒಡೆಯರ್ ನಡತೆಯನ್ನೂ ನೋಡಿದ್ದೇನೆ. ಪ್ರತಿ ಶುಕ್ರವಾರ ಅವರು ಕಾರ್‌ನಲ್ಲಿ ಚಾಮುಂಡಿ ದೇವಸ್ಥಾನಕ್ಕೆ ಹೋಗುತ್ತಿದ್ದರು. ನಾನು ಅಲ್ಲಿದ್ದ ಆರು ವರ್ಷವೂ, ಪ್ರತಿ ಶುಕ್ರವಾರ ನಡೆದುಕೊಂಡೇ ಆ ಸಾವಿರ ಮೆಟ್ಟಿಲನ್ನು ಹತ್ತುತ್ತಿದ್ದೆ. ಹೀಗಾಗಿ ಬರುವಾಗ ಅವರ ಕಾರು ಸಿಗುತ್ತಿತ್ತು. ಕಾರಿಂದ ಇಳಿದು ಎಲ್ಲಿಗೆ ಹೋಗ್ತಾರೆ ಅಂದ್ರೆ, ಮಧುವನ ಅಂತ ಇದೆ, ಅಲ್ಲಿ ಅವರ ತೋಟ, ಸ್ವಂತ ಆಸ್ತಿ ಎಲ್ಲಾ ಇದೆ. ಒಂದೊಂದು ಸಲ ಒಬ್ಬೊಬ್ಬ ರೈತನ ಮನೆಗೆ ಹೋಗೋದು, ಜಗಲಿಯ ಮೇಲೆ ಕೂತುಕೊಳ್ತಾರೆ, ಆತ ನಮ್ಮೂರಲ್ಲಿ ಹೇಳಿದ ಹಾಗೆ ಒಡೆಯಾ, ಬಂದ್ರಾ ಅಂತ ಹೇಳ್ತಾನೆ. ಸ್ವಲ್ಪ ಮೈಸೂರೀ ಶೂದ್ರರ ಮಾತು ಅಷ್ಟೇ. ಒಂದು ಲೋಟ ಹಾಲು ತಂದು ಕೊಡ್ತಾನೆ. ಇವರು ಕುಡಿಯುತ್ತಾರೆ. ಮಕ್ಕಳು, ಮನೆಯವರ ಯೋಗಕ್ಷೇಮ ಕೇಳುತ್ತಾರೆ. ಪ್ರತಿ ಶುಕ್ರವಾರವೂ ಒಬ್ಬಲ್ಲ ಒಬ್ಬ ರೈತರ ಮನೆಗೆ ಹೋಗುತ್ತಿದ್ದರು. ಇದನ್ನು ನಾನು ಆರು ವರ್ಷಗಟ್ಲೆ ನೋಡಿದ್ದೇನೆ. ಹೀಗೆ ಹಿಂದಿನ ಮಹಾರಾಜರಲ್ಲಿ ಅನೇಕರು ಧರ್ಮವೇ (ನ್ಯಾಯವೇ) ಪ್ರಧಾನ ಅಂತ ಇಟ್ಕೊಂಡು ಅಹಂಕಾರರಹಿತರಾದ ಅನೇಕರು ಜನಪ್ರಿಯರಾಗಿದ್ದರು. ಹಾಗಾಗಿ ಪ್ರಜೆಗಳಿಗೆಲ್ಲ ಅಷ್ಟು ಆತ್ಮೀಯರು. ಒಮ್ಮೆ ತುಮಕೂರಿಗೆ ಹೋದರು ಒಬ್ಬ ಶಾನುಭಾಗನ ಹಾಗೆ, ದರ್ಬಾರ್ ಬಕ್ಷೀನ ಕರಕೊಂಡು ಹೋದರು. ಊರಿನ ಪಟೇಲಶಾನುಭಾಗರು ಬರ್ತಾರೆ, ಅಡಿಗೆಯವನನ್ನು ಇವರು ಕರಕೊಂಡೇ ಹೋಗಿರ್ತಾರೆ. ಅವರಿಗೆ 'ಸಿದಾ' ಕೊಟ್ಟಿದ್ದರು (ಅಂದರೆ ಅಕ್ಕಿ, ಬೇಳೆ

ಇತ್ಯಾದಿ ಅಡಿಗೆ ಸಾಮಾನುಗಳು). ಆ ಪಟೇಲರ ಮನೆಯಲ್ಲಿ ಉಳಿದುಕೊಂಡು, ಅದೂ ಚಾವಡಿ ಮೇಲೆ, ಒಂದು ಬದಿಯಲ್ಲಿ ಅಡಿಗೆಯವ ಅನ್ನ ಬೇಯ್ಸಿಹಾಕ್ತಾನೆ. ಮಧ್ಯಾಹ್ನದ ಮೇಲೆ ಇವರ ದರ್ಬಾರು. ಊರಿನ ಮುಖಂಡರನ್ನೆಲ್ಲ ಕರೆಸುತ್ತಾರೆ. ಅವರೆಲ್ಲ ಅಹವಾಲನ್ನು ಹೇಳ್ತಾರೆ. 'ಮಹಾಪ್ರಭುಗಳೇ, ನಮ್ಮೂರ ಕೆರೆಗೆ ಈ ವರ್ಷ ಮಣ್ಣು ತುಂಬಿಕೊಂಡಿದೆ, ನೀರು ಕಡಿಮೆಯಾಗಿದೆ, ಗದ್ದೆಗೆ ಸಾಲುತ್ತಿಲ್ಲ, ಮಣ್ಣು ತೆಗೆಸಲು ಹಣ ಬೇಕು" ಅನ್ನುತ್ತಾರೆ. ತಕ್ಷಣ ಐದು ನೂರು ರೂಪಾಯಿ ಹಣ ನೀಡುತ್ತಾರೆ. ಟೆಂಡರ್ ಇಲ್ಲ, ಲಂಚ ಇಲ್ಲ, ಸಮಸ್ಯೆ ಪರಿಹಾರವಾಯ್ತು. ಇದನ್ನೆಲ್ಲ ಪ್ರತ್ಯಕ್ಷಕಂಡ ನನಗೆ ಮಹಾರಾಜ ಅಂತ ಆದ ಕೂಡಲೇ ಘಟಿಂಗ ಅಂದ್ಕೋಳ್ಳೋಕೆ ತುಂಬ ಕಷ್ಟ ಆಗುತ್ತೆ.

ಬರೋಡಾದ ಮಹಾರಾಜರು

"ಇನ್ನು ಎಲ್ಲ ಮಹಾರಾಜರೂ ಒಳ್ಳೆಯವರೋ? ಕೇಳಿ. ಇಪ್ಪತ್ತು ತುಂಡರಸರ ದಿವಾನನಾದವನು ಬರೆದ ಪುಸ್ತಕ 'ಮಹಾರಾಜಾ' ನನ್ನ ಹತ್ತಿರ ಇದೆ. ಎಷ್ಟೆಷ್ಟು ಹಲ್ಕಾ ಕೆಲಸಗಳನ್ನು ಮಾಡ್ತಿದ್ರು, ಅದಷ್ಟನ್ನೂ ಬರೆದಿದ್ದಾನೆ. ಬರೋಡಾ ಮಹಾರಾಜನ ಘಟನೆಯನ್ನೇ ನೋಡಿ. ಅವನು ಫ್ರಾನ್ಸಿಗೆ ಹೋಗಿ ಯಾರೋ ಒಬ್ಬ ಮೂರನೇ ದರ್ಜೆ ಹೆಂಗಸನ್ನು ಮದುವೆ ಮಾಡಿಕೊಂಡು ಕರೆತಂದ. ಬಂದ ಕೂಡ್ಲೆ ಅವನ ರಾಣಿ ಬ್ರಿಟಿಷರಿಗೆ ದೂರು ನೀಡಿದಳು. ಆಗ ವೈಸ್‌ರಾಯರು ರಾಣಿ ಇದಕ್ಕೆ ಒಪ್ಪದಿದ್ದರೆ ನಿನಗೆ ರಾಜ್ಯಾಧಿಕಾರ ಹೋಗುತ್ತೆ' ಎಂದು ತಿಳಿಸಿದರು. ಆತ ಕೊನೆಗೆ ಆ ಹೆಂಗಸನ್ನು ಬಿಡಬೇಕಾಯ್ತು! ಮತ್ತೆ ರಾಣಿ ಜೊತೆಗೆ ಇದ್ದ ರಾಜ್ಯಾಧಿಕಾರನೂ ಉಳಿಯಿತು. ನನ್ನ ಕಿರಿ ಮಗಳು ರಾಜೇಶ್ವರಿ ಇರುವುದು ಕೊಚಿನ್‌ನಲ್ಲಿ. ಅಲ್ಲಿ ಮಹಾರಾಜರನ್ನು ನೋಡಿದರೆ ನಮಸ್ಕಾರ ಮಾಡುವ ಅನ್ಸುತ್ತೆ. ಆ ಮುದುಕ ಒಂದು ಶಲ್ಯ ಹೊದ್ಕೊಂಡು ಅನಂತಶಯನ ದೇವಸ್ಥಾನಕ್ಕೆ ಬರ್ತಿದ್ದ. ನೈವೇದ್ಯ ಮಂಗಳಾರತಿ ಆಗುವವರೆಗೂ ಕುಳಿತಿರುತ್ತಿದ್ದ. ಇದು ಪ್ರತಿನಿತ್ಯದ ಸಂಗತಿ. ಈ ರೀತಿ ಸಭ್ಯರನ್ನು ಆ ಘಟಿಂಗ ರಾಜರೊಡನೆ ಸೇರಿಸಿ ಬಯ್ಯೊದು ನಮಗೆ ಹಿಡಿಸೋಲ್ಲ. ಇದೆಲ್ಲಾ ಮರೆತು ಪ್ರಜಾಪ್ರಭುತ್ವವೇ ಶ್ರೇಷ್ಠ ಅಂತ ವಾದ ಮಾಡುವುದು ತಪ್ಪು"

ಮಾಸ್ತಿ ಕನ್ನಡದ ಆಸ್ತಿ

"ನಾನು ಮಾಸ್ತಿ ಕನ್ನಡದ ಆಸ್ತಿ ಅಂತೀನಿ. ಯಾಕೆಂದರೆ ಮಾಸ್ತಿಯವರು ನನಗೆ ಗೊತ್ತು. ಬೆಂಗಳೂರಿಗೆ ಹೋದಾಗ ಅವರ ಮನೆಗೆ ಹೋಗಿ ಊಟ ಮಾಡದೆ ಹೋದರೆ ಅವರಿಗೆ ಸಿಟ್ಟು ಬರುತ್ತಿತ್ತು. ಪರಿಷತ್ತಿನ ಅಧ್ಯಕ್ಷರಾಗಿದ್ದ ಕಾಲಕ್ಕೆ ನನ್ನ ಕೈ ಹಿಡ್ಕೊಂಡೇ ಸಭೆಗೆ ಹೋಗುತ್ತಿದ್ದರು. ಅಂತಹ ನಿರ್ವ್ಯಾಜ ಪ್ರೇಮ ಇತ್ತು.

ಬೇಂದ್ರೆಯವರೂ ಹಾಗೆಯೇ ಅವರ ಮನೆಯಲ್ಲಿ ಊಟ ಮಾಡಿ ಹರಟೆ ಹೊಡೆದು ಆಮೇಲೆ ಕಾಫಿ ಕುಡ್ಕೊಂಡೇ ಹೊರಡಬೇಕು. ಹಾಗಾಗಿ ನಾನು ಮಾಸ್ತಿಯವರು ಸಾಯುವ ಮೂರು–ನಾಲ್ಕು ತಿಂಗಳ ಹಿಂದೆ ಬೆಂಗಳೂರಿಗೆ ಹೋಗಿ ನಮಸ್ಕಾರ ಹಾಕಿದೆ. ಕೂಡಲೇ 'ಒಳ್ಳೆದಾಗಿದ್ದೀಯಾ ಮಗೂ' ಎಂದು ಎರಡೂ ಕೈ ತಲೆ ಮೇಲಿಟ್ಟರು. ನೆಟ್ಟಗೆ ನಿಂತುಕೊಂಡಿದ್ದರು. ಎಲ್ಲೋ ಹೊರಗೆ ಹೊರಟಿದ್ದರು. ಕೂತುಕೋ ಅಂತ ಕೂಡ್ಸಿಬಿಟ್ಟು ಕಾಫಿ ಕೊಟ್ಟು 'ಒಳ್ಳೆಯದಾಗಲಿ' ಅಂತ ತಲೆ ಮೇಲೆ ಕೈ ಇಟ್ಟು ಕಳಿಸಿಕೊಟ್ಟರು. ಅವರಿಗೆ 'ರಾಜಸೇವಾ ಪ್ರಸಕ್ತ' ಅಂತ ಬಿರುದು ಬಂದಿದ್ದು ಅವಮಾನವಲ್ಲ. ಬಹುಮಾನ. ಅವರು ಶಿಸ್ತಿನ ಶಿವಪ್ಪನಾಯಕನಂತಿದ್ರು ಅಂತ ನಾನು ನೋಡಿದ್ದೇನೆ. ಮಾಸ್ತಿಯವರು ವಿಲ್ ಬರೆದಿಟ್ಟು ಹೋಗಿದ್ದರು. ಹಾಗಾಗಿ ಒಂದು ಸಾವಿರ ರೂಪಾಯಿಯ ಚೆಕ್‌ನ್ನು ನನಗೆ ಕಳಿಸಲಾಯಿತು. ಆಗ ಕಳಿಸಿದವರಿಗೆ ನನಗೇನೂ ಕೊಡಬೇಕಾದ್ದಿಲ್ಲ ಅಂತ ಬರೆದೆ. ಅದಕ್ಕುತ್ತರವಾಗಿ 'ಮಾಸ್ತಿಯವರು ನೀವು ಜೀವನ ಪತ್ರಿಕೆಯಲ್ಲಿ ಬರೆದ ಲೇಖನ ಮಾಲೆಗಳನ್ನು ಗಣಿಸಿ ಒಂದು ಸಾವಿರ ರೂಪಾಯಿಯನ್ನು ನಿಮಗೆ ಕೊಡಬೇಕು ಅಂತ ವಿಲ್ ಮೃತ್ಯುಪತ್ರ ಬರೆದಿದ್ದರಿಂದ ನಿಮಗೆ ಕಳಿಸಿದ್ದೇವೆ' ಎಂದು ಬರೆದರು. ಇಷ್ಟು ನೆನಪಿತ್ತು ಮಾಸ್ತಿಯವರಿಗೆ! 'ಮಗನಂತೆ ನಾನು ತಂದೆಯಂತೆ ಅವರು ಇದ್ದೆವು.'

ಇನ್ಸ್‌ಪೆಕ್ಟರ್ ಸದಾಶಿವರಾಯರು

"ನನಗೊಬ್ಬ ಇನ್‌ಸ್ಪೆಕ್ಟರ್ ಸಿಕ್ಕಿದ್ದರು. ಸದಾಶಿವರಾಯರು ಅಂತ, ಅವರು ಭದ್ರಾವತಿಯವರು. ಸಾಗರದಲ್ಲಿದ್ದಾಗ ಅಲ್ಲೇ ಹೈಸ್ಕೂಲು ಓದಿದವ ನಾನು. ಆನಂದರಾಯರ ಮನೆ ಪಕ್ಕದಲ್ಲಿ ಇವರಿದ್ದು, ನನ್ನನ್ನು ಮನೆ ಮನುಷ್ಯನ ಹಾಗೆ ನೋಡಿಕೊಳ್ಳುತ್ತಿದ್ದರು. ಅವರ ಮನೆ ಮಕ್ಕಳೆಲ್ಲಾ ನನ್ನತ್ರ 'ಟ್ಯೂಶನ್' (ಮನೆಪಾಠ) ಹೇಳಿಸಿಕೊಳ್ಳುತ್ತಿದ್ದರು. ಇವರು ಯಾರು? ಅಂತ ಕೇಳಿದ್ರೆ ಅವರ ಹೆಂಡತಿ ಇವರು ನನ್ನ ತಮ್ಮ ಅಂತ ಹೇಳ್ತಿದ್ರು. ಎಲ್ರೂ ನನ್ನ ಮೇಲೆ ಅಷ್ಟು ಅಭಿಮಾನ ಇಟ್ಟುಕೊಂಡಿದ್ರು, ಸದಾಶಿವರಾಯರು ತುಂಬ ನ್ಯಾಯನಿಷ್ಠುರ ಇನ್ಸ್‌ಪೆಕ್ಟರರಾಗಿದ್ದರು. ಒಂದು ಸಲ ಅವರ ಮನೆಗೆ ಲಂಚ ಕೊಡಲು ಬಂದ ಒಬ್ಬನನ್ನು ಚೆನ್ನಾಗಿ ಗದರಿಸಿ ಬೆವರಿಳಿಸಿ ಕಳಿಸಿದ್ದನ್ನು ನಾನು ನೋಡಿದ್ದೇನೆ. ಹಾಗೆಯೇ ಅವರ ಪತ್ನಿ ಮುಟ್ಟಾದಾಗ ನಾನೂ, ಅವರೂ, ಅವರ ಮಕ್ಕಳೂ ಸೇರಿ ಅಡುಗೆ ಮಾಡಿದ್ದೇವೆ. ಆಗ ಸದಾಶಿವರಾಯರಿಂದ "ಭೇಷ್, ಪರವಾಗಿಲ್ಲ. ಶ್ರೀಧರ ಚೆನ್ನಾಗಿ ಅಡಿಗೆ ಮಾಡಿದ್ದಾನೆ!" ಎಂದು ಹೊಗಳಿಸಿಕೊಂಡಿದ್ದೆ. ಆಗ ಅವರ ಪತ್ನಿ ಅನಸೂಯಾ 'ಬಹುಶಃ ಹೆಚ್ಚು ಬೇಳೆ ಕಾಳು ಹಾಕಿರ್ಬೇಕು, ಹೆಂಗಸರಿಗೆ ಹಾಗೆ ಮಾಡಲು ಆಗೋಲ್ಲ' ಎಂದು ಹೇಳಿದರು. ಅದಕ್ಕೆ ನಾನು 'ನಳಪಾಕ ಅಂತ ಇದೆಯೇ ಹೊರತು ದಮಯಂತಿ ಪಾಕ ಅಂತ ಇಲ್ವಲ್ಲ'

ಅಂದೆ. ಎಲ್ಲರೂ ನಕ್ಕರು. ಹೀಗೆ ನನ್ನನ್ನು ತಂದೆ–ತಾಯಿಯರಂತೆ ನೋಡಿಕೊಂಡಿದ್ದರು. ಹಾಗಾಗಿಯೇ ಅವರು ಮುದುಕರಾಗಿ ಅಸ್ವಸ್ಥರಾಗಿದ್ದಾರೆ ಅಂತ ಅವರ ಮಗ ಪತ್ರ ಬರೆದಾಗ ದೈವಪ್ರೇರಣೆಯಿಂದ ಬೆಂಗಳೂರಿಗೆ ಹೋಗಿದ್ದು. ಹೀಗೊಂದು ಮಂಚ, ಹಾಗೊಂದು ಮಂಚ ಹಾಕಿದ್ರು. ಇಬ್ಬರ ಪಾದಕ್ಕೂ ನಮಸ್ಕಾರ ಮಾಡ್ದೆ. 'ನೋಡಿದೆಯಾ ಅನಸೂಯಾ! ನಮ್ಮ ಶ್ರೀಧರ ಬಂದಿದ್ದಾನೆ!' ಅಂತ ಆನಂದಬಾಷ್ಪ ಕರೆದರು. ನನಗೆ ಇದಕ್ಕಿಂತ ಹೆಚ್ಚಿನ ಸನ್ಮಾನ ಬೇಡ ಅಂತನ್ನಸ್ತು."

ರಾಜಗೋಪಾಲ ಅಯ್ಯಂಗಾರರು

ಮೊದಲು ಎರಡು ವರ್ಷ ವಾರಾನ್ನ ಮಾಡಿಕೊಂಡೇ ಇದ್ದೆ. ತೀರಾ ಕಷ್ಟಪಟ್ಟೆ. ಆದರೆ ವಾರದ ಮನೆಯವರೂ ನನ್ನನ್ನು ತುಂಬಾ ಚೆನ್ನಾಗಿ ನೋಡಿಕೊಂಡರು. ರಾಜಗೋಪಾಲ ಅಯ್ಯಂಗಾರರು ಅಂತ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಅವರ ಮನೆಯಲ್ಲಿ ವಾರಾನ್ನಕ್ಕೆ ಹೋಗುತ್ತಿದ್ದೆ. ೧೯೪೧ನೇ ಇಸ್ವಿಯಲ್ಲಿ ಸಂಸ್ಕೃತ ವಿಷಯದಲ್ಲಿ ಇಡೀ ರಾಜ್ಯಕ್ಕೆ ಪ್ರಥಮವಾದೆ ಅಂತ ಎರಡು ಬಂಗಾರದ ಪದಕಗಳು ಬಂದಿದ್ದು, ಅವರು ಅದನ್ನು ತೆಗೆದುಕೊಂಡು ಹೋಗಿ ನಮ್ಮನೆ ರಾಜಲಕ್ಷ್ಮಿ ಮೇಷ್ಟ್ರಿಗೆ ಮೆಡಲ್ ಬಂದಿದೆ ಅಂತ ಅಕ್ಕಪಕ್ಕದ ಮನೆಗೆಲ್ಲಾ ತೋರಿಸಿಕೊಂಡು ಬಂದಿದ್ರು. ಇಂಥ ಜನರನ್ನು ನಾನು ಹ್ಯಾಗೆ ಮರೆಯೋದು? ಮೂರು–ನಾಲ್ಕು ವರ್ಷಕ್ಕೆ ಒಮ್ಮೆಯಾದರೂ ಮೈಸೂರು–ಬೆಂಗಳೂರಿಗೆಲ್ಲ ಹೋಗಿ ನೋಡಿಕೊಂಡು ಬರ್ತಿದ್ದೆ. ಈಗ ಆರೋಗ್ಯ ಕೆಟ್ಟ ನಂತರ ಆರೋಗ್ಯ ಚೆನ್ನಾಗಿಲ್ಲ ದಯವಿಟ್ಟು ಕ್ಷಮ್ಸಿ, ಬರೋಕಾಗಲ್ಲ ಅಂತ ಬರೆಯೋದು ಮಾಡ್ಕೊಂಡೆ.

ರಾಮರಾವ್

ನನ್ನ ರೂಂಮೇಟು ರಾಮರಾವ್ ಅಂತ. ಕನ್ನಡ ಎಂ.ಎ. ತುಂಬಾ ಒಳ್ಳೆಯವನು. ದೊಡ್ಡ ವಿದ್ವಾಂಸ ಅಂತಲ್ಲ. ಅವನನ್ನು ರಾಮಣ್ಣ ಅಂತಲೇ ಕರೆಯೋದು. ಅವನು ತನ್ನ ಮದುವೆಗೆ ನನಗೂ ಆರತಿ ಮಾಡಬೇಕು, ತನ್ನ ಜೊತೆನೇ ಕೂಡಿಸಿಕೊಂಡಿದ್ದ. ಕಾಳಿದಾಸ ಹೇಳಿದ ಹಾಗೆ ಭಾವವಿಶೇಷವಾಗಿತ್ತು.

ಮೊದಲು ಮೈಸೂರು ಕಾಡೋ, ಊರೋ ಗೊತ್ತಿರಲಿಲ್ಲ. ಆ ಮೇಲೆ ಅಲ್ಲಿಗೆ ಹೋದ ನಂತರ ಊರಿಗಿಂತಲೂ ಹೆಚ್ಚು ಪ್ರಿಯವಾಯ್ತು. ನನಗೆ ಮದುವೆಯಾದ ನಂತರ ನಾರಾಯಣರಾವ್ ಮನೇಲಿ, ಸದಾಶಿವರಾಯರ ಮನೇಲಿ ಆರತಕ್ಷತೆ ಮಾಡಿದ್ದರು. ಈ ಥರದ ಸೌಕರ್ಯ ದೇವರು ಕೊಟ್ಟ, ದುಡ್ಡು ಕೈಯಲ್ಲಿ ಇಲ್ದೇ ಹೋದ್ರೂ ಈ ಅವಕಾಶಗಳನ್ನು ದೇವರು ಒದಗಿಸಿಕೊಟ್ಟಿದ್ದಕ್ಕೆ ಎಂದೆಂದಿಗೂ ನಾನು

ಕೃತಜ್ಞ. ದೇವರು ಅಂದರೂ ಒಂದೇ, ನಿಸರ್ಗ ಅಂದರೂ ಒಂದೇ. ಎಲ್ಲರ ಅಡ್ಡವಾದವನ್ನು ಖಂಡಿಸುವ ಶಕ್ತಿ ನನಗಿದೆ. ಆದರೆ ಗೌರವದಿಂದ ಸಭೇಲಿ ಅವರ ಮರ್ಯಾದೆ ತೆಗೆಯೋದಿಲ್ಲ!

ನಮ್ಮ ತಂದೆಯಂತೂ ಪ್ರೈಮರಿ ಸ್ಕೂಲ್ ಮೇಷ್ಟ್ರಿಗೂ ಉದ್ದಂಡ ನಮಸ್ಕಾರ ಹಾಕ್ತಿದ್ರು. ಸುಬ್ರಾಯ ಮೇಷ್ಟ್ರು ಅನ್ನುವವರಿಗೆ ನಾನು ಹಾಗೇ ನಮಸ್ಕಾರ ಮಾಡಲು ಹೋಗಿ ಮೊಣಕಾಲಿಗೆ ಗಾಯ ಮಾಡಿಕೊಂಡಿದ್ದೆ. ಅಮ್ಮ ಇದನ್ನು ನೋಡಿ ನಗೆಯಾಡುತ್ತಿದ್ದಳು! ಅಂಥಾ ಮುಗ್ಧನು ನಾನು! ಅಂಥವನಿಗೆ ಮೈಸೂರಿನಲ್ಲಿ ಮುಂದೆ ಸಿಕ್ಕಿದ ಸೌಕರ್ಯ ಎಂಥದಂದ್ರೆ, ನರಸಿಂಹಯ್ಯ ಅನ್ನುವವರು ಭಾಷಾ ಕೋವಿದರು, ನನಗೆ ನನ್ನ ಸ್ನೇಹಿತನಿಗೆ (ಇದ್ರೆ ಆಗ ವಿಶೇಷಾಭ್ಯಾಸಿಗಳು) ಕಾಫಿ ತರಿಸಿಕೊಟ್ಟು ಪಾಠ ಹೇಳುತ್ತಿದ್ದರು. ಅಲ್ಲದೇ ಇಡೀ ಯೂನಿವರ್ಸಿಟಿ ಲೈಬ್ರರಿಯ ಕೀಲಿಕೈಯನ್ನೇ ನನಗೆ ಕೊಟ್ರು! ಆಗ "ಮೈಸೂರಿಗೆ ಹೇಗೂ ಬಂದಿದೀನಿ. ಇಷ್ಟು ದೊಡ್ಡ ಪುಸ್ತಕ ಭಂಡಾರ ಇನ್ನೆಲ್ಲೂ ಸಿಗೋಲ್ಲ ಏನು ಮಾಡ್ಲಿ ಸಾರ್?" ಅಂತಂದೆ. ಅವರು "ನೀನೇ ಕೀಲಿಕೈ ತಗೋಳೋ" ಎಂದರು. ಅವರು ಹೆಡ್ ಆಫ್ ದಿ ಲೈಬ್ರರಿ, ಹಾಗಾಗಿ ಸಾಧ್ಯವಾಯ್ತು. ನಾನು ಓದುತ್ತಾ ೮ ಗಂಟೆ ರಾತ್ರಿಯಾದ ಕೂಡಲೇ ಜವಾನನಿಗೆ ನಿದ್ರೆ ಬಂತು. "ಸಾರ್, ನಿದ್ದೆ ಬರುತ್ತೆ" ಅಂದ. ನಾನು "ನೋಡು, ನಾನು ಕೃಷ್ಣಮೂರ್ತಿಪುರದಲ್ಲಿದ್ದೇನೆ, ನಿನ್ನ ಮನೆನೂ ಹತ್ರ ಇದೆ, ಬೆಳಿಗ್ಗೆ ಹೋಗ್ತಾ ನನ್ನ ರೂಮಿಗೆ ಬಂದು ಕೀಲಿಕೈ ಇಸ್ಕೊಂಡು ಹೋಗು' ಅಂದೆ. ಹೀಗೆ ಪ್ರತಿದಿನ ರಾತ್ರಿ ೧೨ ರಿಂದ ೧ ಗಂಟೆಯವರಿಗೂ ಓದು ಸಾಗಿತ್ತು. ನನಗೆ ಯಾವ್ಯಾವುದರಲ್ಲಿ ಆಸಕ್ತಿ ಉಂಟೋ ಎಷ್ಟೆಷ್ಟು ಆಧಾರ ಗ್ರಂಥಗಳಿವೆಯೋ ಅವುಗಳ ನೋಟ್ಸ್ ತಗೊಂಡದ್ದು ಈಗಲೂ ಇದೆ. ನನಗೆ ಮರೆತು ಹೋಗಬಹುದಾದನ್ನು ಮಾತ್ರ ಬರೆದುಕೊಳ್ಳುವುದು, ಇಲ್ಲದಿದ್ದರೆ ಕಾಪಿ ಮಾಡಿ ಪೂರೈಸುತ್ತದೆಯೇ? ಹೆಚ್ಚಾಗಿ ಇಂಗ್ಲೀಷ್, ಸಂಸ್ಕೃತ, ಕನ್ನಡ ಪುಸ್ತಕಗಳಿಂದ ಟಿಪ್ಪಣಿ ಬರೆದುಕೊಳ್ಳುತ್ತಿದ್ದೆ. ಒಮ್ಮೆ ಆವೇಶ ಬಂದು ಹಳಗನ್ನಡ ಶಬ್ದಕೋಶವನ್ನೇ ನಕಲು ಮಾಡಿಕೊಂಡಿದ್ದೆ! ಅದರಲ್ಲಿ ಸುಂದರವಾದ, ಕಾವ್ಯಮಯವಾದ ಶಬ್ದಗಳಿದ್ದವು. ನಮಗೆ ವಾರಕ್ಕೆ ಆರು ಪುಸ್ತಕಗಳನ್ನು ಕೊಡುತ್ತಿದ್ದರು. ಆಗಿನ ಕಾಲಕ್ಕೆ ಐದನೂರೇ ವಿದ್ಯಾರ್ಥಿಗಳಾದುದ್ದರಿಂದ ಪುಸ್ತಕ ತೆಗೆದುಕೊಳ್ಳುವವರು ಕಡಿಮೆ ಆಗಿದ್ದರಿಂದ ಈ ವಿಶೇಷ ಸೌಲಭ್ಯ ಇತ್ತು. ಆ ಇಡೀ ಶಬ್ದಕೋಶವನ್ನು ನಕಲು ಮಾಡಿದ್ದು ಇಂದಿಗೂ ನನ್ನ ಹತ್ತಿರ ಇದೆ. ಅದು ಇನ್ನೂ ಅಚ್ಚಾಗಿಲ್ಲ. ಇಂಥದ್ದರಿಂದಲೇ ನಾನೀಗ ಕೊಡಲಿ ರಾಮನಾಂಗೆ, ಹೈಕೋರ್ಟ್ ಜಸ್ಟೀಸ್ ಬಂದ್ರೂ ಉತ್ತರ ಕೊಡುವ ಶಕ್ತಿ ಇದೆ, ಆಧಾರ ನನ್ನತ್ರ ಇದೆ. ಕನ್ನಡ ಭಾಷೆಯ ಸಂಪತ್ತು ಎಷ್ಟು? ಅಂತ ನನ್ನ ಕನ್ನಡ ಸಂಸ್ಕೃತ ಬಾಂಧವ್ಯ ಪುಸ್ತಕ (ಸಂಸ್ಕೃತ ಪರಿಷತ್ತು ಪ್ರಕಟಿಸಿತ್ತು)ದ ಬಿಡುಗಡೆ ಸಮಯದಲ್ಲಿ ಇಂಥ ಆಧಾರಗಳನ್ನಾಧರಿಸಿಯೇ ಉತ್ತರ ಕೊಟ್ಟಿದ್ದೇನೆ.

ಎರಡು ಬಗೆಯ ಭಾಷಣಗಳು

ಭಾಷಣದಲ್ಲಿ ಎರಡು ಬಗೆ, ಪೂರ್ವ ತಯಾರಿಯ ಭಾಷಣ, ಆಶುಭಾಷಣ, ನಮ್ಮ ಬಿ.ಎಂ. ಶ್ರೀಕಂಠಯ್ಯನವರ ಭಾಷಣವನ್ನು ೬ ವರ್ಷ ಕೇಳಿದ್ದೇನೆ. ಒಮ್ಮೆ ಶೇಕ್ಸ್‌ಪಿಯರ್ ಬಗ್ಗೆ ಉಪನ್ಯಾಸವನ್ನು ಇಂಗ್ಲೀಷಿನಲ್ಲಿ ನೀಡಿದ್ದರು. ಆಗಿನ ಕಾಲದಲ್ಲಿ Silver Tongued Orator ಎಂಬ ಕೀರ್ತಿ ಇತ್ತು. ಮಹಾವಾಗ್ಮಿ ಆತ. ಅವರ ಭಾಷಣ ಶೈಲಿಯಂದ್ರೆ, ಒಂದು ಎರಡು. ಮೂರು... ಪಾಯಿಂಟ್ಸ್ ಬರೆದುಕೊಂಡು ಅದರಂತೆ ಘಂಟೆಗೆ ಸರಿಯಾಗಿ ಭಾಷಣ ಮಾಡುತ್ತಿದ್ದರು. ಇದೊಂದು ಬಗೆ.

ಬೇಂದ್ರೆ

ಆದರೆ ಬೇಂದ್ರೆಯವರದ್ದು ತದ್ವಿರುದ್ಧ. ಪೂರ್ವತಯಾರಿ ಅಂಬೋದೇ ಇಲ್ಲ. ನಿಂತಮಟ್ಟಿಗೆ ಆಶುಭಾಷಣ, ಅದರಲ್ಲೂ ಕನ್ನಡ ಇರಲಿ, ಮರಾಠಿ ಇರಲಿ, ಆವೇಶ ಬಂತು ಅಂದ್ರೆ, ಪುಂಖಾನುಪುಂಖವಾಗಿ ಮಾತು ಹೊರಡುತ್ತಿತ್ತು! ಆಶ್ಚರ್ಯವೆಂದರೆ ಪೂರ್ವತಯಾರಿ ಇಲ್ಲದಿದ್ದರೂ ಸುಸಂಬದ್ಧವಾಗಿರುತ್ತಿತ್ತು! ಒಂದು ದಿನ ವರ್ಣಾಶ್ರಮ ಧರ್ಮದ ಬಗ್ಗೆ ಮೂರು ತಾಸು ಭಾಷಣ ಮಾಡಿದ್ದರು. ಹಾಗೆಯೇ ಇನ್ನೊಮ್ಮೆ ಸಾಹಿತ್ಯದ ಬಗ್ಗೆ ಹೇಳ್ತಾ ಹೋಗಿ, ಕನ್ನಡ ಸಾಹಿತ್ಯ ಮರಾಠಿ ಸಾಹಿತ್ಯ ಹಿಂದಿ ಸಾಹಿತ್ಯ ಸಂಸ್ಕೃತ ಸಾಹಿತ್ಯ ಇವುಗಳ ನಡುವೆ ಇರುವ ಸಂಬಂಧ ಇದನ್ನೆಲ್ಲ ಮೂರು ತಾಸು ಹೇಳಿದಾಗ ಕುಳಿತವರೆಲ್ಲ ಮಂತ್ರಮುಗ್ಧರಾಗಿ ಹೋದರು. ಸಾರ್ವಜನಿಕ ಸಭೆ ಅಲ್ಲ. ನೆರೆ ಹೊರೆಯ ೩೫೦ ಜನರಿದ್ದರು. ಇಂಥದ್ದು ನೂರಾರು ಘಟನೆಗಳಿವೆ. ಅವರ ಪದ್ಯದಲ್ಲಿ ಮಾತಿನಲ್ಲಿ ಇಂಥ ವಿಚಿತ್ರವನ್ನು ಬೇಕಾದಷ್ಟು ಕಾಣಬಹುದು. ಅವರ ಮನೆಯಲ್ಲಿ ಊಟಕ್ಕೆ ಕುಳಿತಾಗ ಮಾತಾಡುತ್ತಾ ಒಂದು ತಾಸಾಗಿ, ಎರಡು ತಾಸಾಗಿ, ಕೈಯಲ್ಲಿ ಅನ್ನ ಒಣಗಿ ಹೋಗುತ್ತಿತ್ತು. ಅವಾಗ ಅವರ ಪತ್ನಿ ಬಂದು "ಏನ್ರೀ? ಎಷ್ಟು ಹೊತ್ತು ಅವರನ್ನು ಕಾಯಿಸ್ತೀರಿ" ಎಂದಾಗ ಅವರು "ನೀನು ಹೋಗು, ಊಟ ಮಾಡು ನಾನು ಅವರೂ ನೋಡ್ಕೋತೀವಿ" ಎನ್ನಬೇಕೆ?

ಪದ್ಮನಾಭ ಅಡಿಗರು

ಪದ್ಮನಾಭ ಅಡಿಗರು (ಗೋಪಾಲಕೃಷ್ಣ ಅಡಿಗರ ಚಿಕ್ಕಪ್ಪ) ಜ್ಯೋತಿಷ್ಯ ಶಾಸ್ತ್ರ ಪಂಡಿತರು. ಬೇಂದ್ರೆಯವರು ಒಮ್ಮೆ ಅವರನ್ನು ಹಣ್ಣುಗಾಯಿ, ನೀರುಗಾಯಿ ಮಾಡಿದ್ದರು! ಪದ್ಮನಾಭ ಅಡಿಗರನ್ನು, ಅವರ ಮಗ ಮಂಜುನಾಥ ಅಡಿಗರನ್ನು ಕರೆದುಕೊಂಡು ಬೇಂದ್ರೆಯವರ ಮನೆಗೆ ಹೋಗಿದ್ದೆ, ಸುಮಾರು ಎರಡು ತಾಸು ಜ್ಯೋತಿಷ್ಯದ ಬಗ್ಗೆ ಚರ್ಚೆಯಾಯ್ತು. ೨೭ ನಕ್ಷತ್ರಗಳೋ ೨೮ ನಕ್ಷತ್ರಗಳೋ ಎಂದು. ಮರಾಠಿ ಸಂಶೋಧಕರು

೨೮ ಎನ್ನುತ್ತಾರೆ. ಇದಕ್ಕೆ ಆಧಾರ ಏನು ಎಂದು ಪ್ರಶ್ನಿಸಿದಾಗ ಬೇಂದ್ರೆಯವರು ಋಗ್ವೇದ ತಂದು ಮಂತ್ರ ಓದಿದರು. ಆಗ ಪದ್ಮನಾಭ ಅಡಿಗರು "ನೀವು ಹಿರಿಯರು ನಿಮ್ಮತ್ರ ತರ್ಕ ಮಾಡಿದರೆ ನಿಮಗೆ ಬೇಸರವಾಗುತ್ತೆ ಎಂದು ತರ್ಕಿಸುವುದಿಲ್ಲ" ಎಂದರು ಆಗ ಬೇಂದ್ರೆ 'ಹಾಗೆಲ್ಲ ಹೇಳ್ಬೇಡಯ್ಯಾ ನೀನು ವೈದಿಕ ಮನೆತನದವರು ಅಂತ ನಾನು ಒಪ್ಕೋತೇನೆ, ನಾನು ವೈದಿಕ ಮನೆತನದವನು ಅಂತ ನೀನು ಒಪ್ಪಿಕೋ, ನೀನು ಮನೆಗೆ ಹೋಗಿ ನಾನು ನೋಡಿದ್ಹಾಂಗೆ ಗ್ರಂಥ ನೋಡು, ೨೮ ಆಗ್ತದೋ ಅಂತ ನೋಡು' ಎಂದರು. ನಾನು ನಂತರ ವಿಷ್ಣು ಧರ್ಮಪುರಾಣ ಗ್ರಂಥವನ್ನು ನೋಡಿ, ಅದರಲ್ಲಿ ೩೧ ನಕ್ಷತ್ರಗಳಿವೆ ಎಂದೂ ಆದರೆ ಪ್ರಚಲಿತವಿಲ್ಲ ಎಂದು ಪದ್ಮನಾಭ ಅಡಿಗರಿಗೆ ಬರೆದೆ. ಶಾಸ್ತ್ರದಲ್ಲಿದೆ ಆದರೆ ಬೇಂದ್ರೆಯವರ ಮನೆಯಲ್ಲಿ ನೀವು ೨೭ ಅಂತ ಯಾಕೆ ಹಟಮಾಡಿದಿರಿ? ಅಂತ ಬರೆದೆ. ಅಡಿಗರು ನಮ್ಮ ಜ್ಯೋತಿಷ್ಯದ ಲೆಕ್ಕಾಚಾರಕ್ಕೆ ೨೭ ನಕ್ಷತ್ರಗಳು ಸಾಕಾದ್ದರಿಂದ ೨೭ ಅಂತ ಇಟ್ಟುಕೊಂಡಿದ್ದೇವೆ, ಅಷ್ಟೇ ಹೊರತು, ನೀನು ಬರೆದಂತೆ ವಿಷ್ಣುಧರ್ಮ ಪುರಾಣದಲ್ಲಿ ೩೧ ಇರುವುದು ನಿಜ ಅಂತ ಬರೆದರು.

ಬೇಂದ್ರೆಯವರು ಒಮ್ಮೆ ನಮ್ಮ ಮನೆಗೆ ಬಂದಾಗ "ಅಂಧಃಕಾರ" ಅಂತ ಪದ್ಯ ಓದಿದರು. ಆಗ 'ಅಂಧಃಕಾರ' ಅಂತ ಪದ ಇಲ್ಲ ಬೇಂದ್ರೆಯವರೇ' ಎಂದು ನಾನಂದೆ. "ನಮ್ಮ ಕಡೆ ಎಲ್ಲ ಹಾಂಗೇ ಹೇಳ್ತಾರಲ್ಲ" ಎಂದರು. ಆಗ ಕೂಡಲೇ ಸಂಸ್ಕೃತ ಶಬ್ದಕೋಶ ತೆಗೆದು ತೋರಿಸಿದೆ. ನೋಡಿದರು. ಎಲ್ಲಿ ಹುಡುಕಿದರೂ ಅಂಧಃಕಾರ ಇಲ್ಲ. ಆಗ–ಹೌದಪ್ಪಾ, ನೀ ಹೇಳಿದ್ಹಾಂಗೇ ಸರಿ, ನನಗೆ ತಪ್ಪು ರೂಢಾ ಆಗೇದ ತಿದ್ಕೋತೇನಿ ಎಂದರು. ಈ ಸೌಜನ್ಯಕ್ಕೆ ನಾನು ಗೌರವ ಕೊಡ್ತೇನೆ. (ಸರಿಯಾದ ಶಬ್ದ ಅಂಧಕಾರ ಎಂಬುದಾಗಿ.) ಹಾಗೆಯೇ ಡಿ.ಎಲ್. ನರಸಿಂಹಾಚಾರ್ಯರು ತೀ.ನಂ.ಶ್ರೀಕಂಠಯ್ಯನವರನ್ನು ತಿದ್ದಿದ್ರು. ಆಗ ನಾನೂ ಅವರ ಮನೆಯಲ್ಲಿದ್ದೆ. 'ಶ್ರೀಕಂಠಯ್ಯಾ ಶಬ್ದ ಮಣಿದರ್ಪಣವನ್ನು ತೆಗೆದುಕೊಂಡು ಬಾ' ಎಂದರು. ತಂದಕೂಡಲೇ ಬಲ್ಲೆ ಎಂಬ ಶಬ್ದವನ್ನು ಪೆನ್ಸಿಲ್‌ನಿಂದ ಅಂಡರ್‌ಲೈನ್ ಮಾಡಿದರು. ಬಲ್ಲೆ ಎಂದರೆ ಗೊತ್ತೆಂದು (ತಿಳಿದಿರುವೆ) ಬರೆದುಕೊಂಡಿತ್ತು. 'ಇದು ಅಲ್ಲವೋ ಅರ್ಥ, ಬಲ್ಲೆ ಎಂದರೆ ಪೊದೆ, ಕಾರಂತರ ಕಾದಂಬರಿ ಓದಿದರೆ ಅರ್ಥವಾಗುತ್ತೆ' ಎಂದರು. ಕೂಡಲೇ ತಿದ್ದುಕೊಂಡರು. ಅವರು ದೊಡ್ಡಗುಣವುಳ್ಳ ದೊಡ್ಡವರು ಅಂತೀನಿ. ಸೇಡಿಯಾಪು ಕೃಷ್ಣಭಟ್ಟರು, ಪ್ರಬುದ್ಧ ಕರ್ನಾಟಕಕ್ಕೆ ಕನ್ನಡಕ್ಕೆ ಸಹಜವಾದುದು ಪಂಚಮೀ ಭಕ್ತಿ (ದೆಸೆಯಿಂದ) ಸಹಜ ಎಂದು ಬರೆದರು. ಇದಕ್ಕೆ ಪ್ರತಿಯಾಗಿ ತೀ.ನಂ.ಶ್ರೀಯವರು ತೃತಿಯಾ ವಿಭಕ್ತಿಯೇ ಸಹಜ ಎಂದು ಬರೆದರು. ಉತ್ತರವಾಗಿ ಪಂಚಮಿಯೇ ಸ್ವಾಭಾವಿಕ ಎಂದು ಆಧಾರಪೂರ್ವಕವಾಗಿ ಖಂಡಿಸಿ ಸೇಡಿಯಾಪು ಬರೆದರು. ಆಗ ನಾನು, ನನ್ನ ಸ್ನೇಹಿತ ರಾಮರಾವ್, ತೀನಂಶ್ರೀ ಮನೆಗೆ ಹೋದೆವು. ಅವರು ತುಂಬ ಮೃದು ಸ್ವಭಾವದವರು. ತಾನು ಎಷ್ಟಂದ್ರೂ ಶಾನುಭೋಗರ ಮಗ ತನಗೆ ಅಷ್ಟೆಲ್ಲಾ

ಗೊತ್ತಿಲ್ಲ ಎಂದೆಲ್ಲ ಹೇಳಿಕೊಂಡರೂ, ತುಂಬಾ ಜ್ಞಾನಿಗಳು ಎಂದು ನನಗೆ ಗೊತ್ತಿತ್ತು. ಹಾಗಾಗಿ ಏನು ಹೇಳುತ್ತಾರೆ ನೋಡುವ, ವಿದ್ವನ್ಮತ್ಸರ ಎಷ್ಟಿದೆ ನೋಡುವ ಎಂದುಕೊಂಡು ಹೋದೆವು. 'ಏನು ವಿಶೇಷ? ಈ ಬಿಸಿಲು ಹೊತ್ತಿನಲ್ಲಿ ಬಂದಿರಲ್ಲ?' ಎಂದು ಕೇಳಿದರು. 'ಸೇಡಿಯಾಪು ಪ್ರಬುದ್ಧ ಕರ್ನಾಟಕದಲ್ಲಿ ಬರೆದದ್ದು ನಿಮ್ಮ ಲೇಖನದ ಸಂಪೂರ್ಣ ಖಂಡನೆಯಾಗಿದೆ ಅಂತ ನಮಗನ್ನಿಸ್ತು. ನಿಮಗೇನನ್ನಿಸ್ತು ಕೇಳಿಕೊಂಡು ಹೋಗೋಣ ಅಂತ, ಅಲ್ಲದೆ ಅವರು ಕೊಟ್ಟ ಆಧಾರ ಸರಿಯೋ ತಪ್ಪೋ ತಿಳಿದುಕೊಳ್ಳುವ ಆಳವಾದ ಅಭ್ಯಾಸ ನಮಗಿಲ್ಲ. ನಿಮ್ಮತ್ರ ತಿಳಿದುಕೊಂಡು ಹೋಗುವ ಎಂದು ಬಂದೆವು ನಮಗೆ ಕನ್ನಡ ಕಲಿಸಿದ ಗುರುಗಳು ತಾವಾದ್ದರಿಂದ ನಿಮ್ಮ ಬಳಿ ನಮಗೇನು ದಾಕ್ಷಿಣ್ಯ?' ಎಂದೆವು. 'ಕೂತುಕೊಳ್ಳಿ ಹೇಳ್ತೀನಿ' ಎಂದು ಕಾಫಿ ತರಿಸಿಕೊಟ್ಟು, 'ಅವರು ಆಧಾರ ಕೊಟ್ಟ ಪ್ರತಿ ಅಕ್ಷರವೂ ಸತ್ಯ ನಾನು ಕೊಟ್ಟದ್ದೂ ಸತ್ಯ. ಐತಿಹಾಸಿಕ ಕಾರಣಗಳಿಂದ ಪರಸ್ಪರ ವಿರೋಧಗಳಾದವು, ಅಷ್ಟೇ ಹೊರತು ಅವರ ಬಗ್ಗೆ ನನಗೆ ಮತ್ಸರವಿಲ್ಲ, ಅವರಿಗೆ ನಾನು ಮೆಚ್ಚುಗೆ ಸೂಚಿಸಿ ಪತ್ರ ಬರೆದಿದ್ದೇನೆ, ಬೇಕಾದ್ರೆ ಅವರಿಗೆ ಬರೆದು ತಿಳಿದುಕೊಳ್ಳಿ' ಎಂದರು. ನಮೋ ನಮಃ ಎಂದೆವು. ವಿದ್ವತ್ ಅಂದರೆ ಹೀಗಿರಬೇಕು ಎನ್ನಿಸಿತು.

ಗೋಕಾಕರು

ಗೋಕಾಕರ ಮಹಾಕಾವ್ಯಕ್ಕೀಗ ಜ್ಞಾನಪೀಠ ಪ್ರಶಸ್ತಿ ಬಂದಿದೆ. ನನಗೆ ಅದರಿಂದ ಏನು ದುಃಖವಾಗೋಲ್ಲ, ಬೇಜಾರಾಗೋಲ್ಲ, ಸಿಟ್ಟು ಬರೋಲ್ಲ, ಲೋಕವೇ ಹಾಗಿದೆ! ಭಾರತ ಸಿಂಧು ರಶ್ಮಿ ಈ ಮೂರು ಶಬ್ದಕ್ಕೂ ಕಾವ್ಯಮಯ ಲಕ್ಷಣ ಇಲ್ಲ. ಅದಕ್ಕಿಂತ ದೇವುಡು ನರಸಿಂಹ ಶಾಸ್ತ್ರಿಗಳ ಮಹಾಬ್ರಾಹ್ಮಣ ಪುಸ್ತಕವನ್ನು ಓದಿದರೆ ಮೈಮರೆತು ಹೋಗುತ್ತದೆ. ವೈದಿಕ ಕಾಲದ ಚಿತ್ರ ಎಷ್ಟು ಚೆನ್ನಾಗಿ ಕೊಟ್ಟಿದ್ದಾರೆ. ಮಹಾಕ್ಷತ್ರಿಯ ಮಹಾದರ್ಶನ ಎಲ್ಲ ಕಾದಂಬರಿಗಳೂ ಉತ್ತಮವಾಗಿವೆ.

ನನಗೆ ಅಷ್ಟು ಸಲಿಗೆಯಿದೆ ಅವರನ್ನು ದಾದಾ ಅಂಥ ಕರೀತಿದ್ದೆ. ಅವರ ಅರವಿಂದೊ ಸರ್ಕಲ್ ಮೆಂಬರ್ ನಾನು. ಮಾಳವಾಡರು, ಗೋಕಾಕರು, ನಾನು ಮತ್ತೊಬ್ಬ ವಕೀಲರು ಹುಬ್ಬಳ್ಳಿಯ ಅರವಿಂದೊ ಸರ್ಕಲ್‌ನ ಸದಸ್ಯರು. ಮೊದಲು ತಾಯಿಯವರ ಪ್ರಾರ್ಥನೆ ಹೇಳೋದು, ಕಣ್ಮುಚ್ಚಿ ಕುಳಿತು ಧ್ಯಾನ ಮಾಡುವುದು, ಆಮೇಲೆ ಬಂದವರಿಗೆಲ್ಲ ಸಿಹಿ ಹಂಚುವುದು. ನನಗೆ ಉಪಕಾರ ಮಾಡಬೇಕು ಅಂತ, ಕೆಲಸ ಕೊಡಿಸಲು ವೀಸನಗರಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಅವರು ಪ್ರಿನ್ಸಿಪಾಲರಾಗಿದ್ದರು. ಒಳ್ಳೆಯ ಅಂತಃಕರಣ ಇತ್ತು. ಬುದ್ಧಿ ಸೂಕ್ಷ್ಮ ಕಡಿಮೆ. ಇದು ಸತ್ಯ. ಆದರೆ ತುಂಬಾ ಒಳ್ಳೆಯವರು. ಮಾಸ್ತಿಯವರಿಗೆ, ಬೇಂದ್ರೆಯವರಿಗೆ, ಕಾರಂತರಿಗೆ ಇವರು ಅಧ್ಯಕ್ಷರಾಗಿರುವಾಗಲೇ ಜ್ಞಾನಪೀಠ ಪ್ರಶಸ್ತಿ ಬಂದದ್ದು ಯೋಗ್ಯತಾವಂತರಿಗೇ

ಕೊಡಿಸಿದ್ದು ಒಳ್ಳೆಯದೇ ಆಯ್ತು. ಆದರೆ ಕೇವಲ ದುಡ್ಡಿನ ಮೇಲೆ ಅಳೆಯೋದಾದರೆ ಮುದ್ದಣ್ಣನಿಗೆ ಯಾರು ಎಷ್ಟು ಲಕ್ಷ ಹಣದ ಪ್ರಶಸ್ತಿ ಕೊಟ್ಟಿದ್ದರು? ಹಾಗಾಗಿ ಅದರದರ ಬೆಲೆ ಕಾಲ ಕಳೆದಂತೆ ತಾನೇ ಸ್ವಚ್ಛವಾಗಿ ಹೊಳೆಯುತ್ತದೆ.

ಗೋಪಾಲಕೃಷ್ಣ ಅಡಿಗರು

ಗೋಪಾಲಕೃಷ್ಣ ಅಡಿಗ ನನ್ನ ಸೋದರಳಿಯ. ನವ್ಯಾವತಾರದ ಮೊದಲು ಬರೆದ ಗೀತೆಗಳು ಚೆನ್ನಾಗಿಯೇ ಇದ್ದವು. ಅವರ ಪೂರ್ವ ಸಂಸ್ಕಾರ ಚೆನ್ನಾಗಿಯೇ ಇತ್ತು. ಬಾಲ್ಯದಲ್ಲಿ ಅಮರಕೋಶ ಗಟ್ಟು ಹಾಕಿಸಿದ್ದರು. ಕೊನೆಗೆ ಅಡಿಗರ ಗುಂಪೇ, ಅಡಿಗರು ವೈದಿಕ ಮನೆತನದವರಾದ್ದರಿಂದ ವೈದಿಕ ಪರಂಪರೆಯ ಧ್ವನಿಯು ಇವರ ಕಾವ್ಯದಲ್ಲಡಗಿದೆ ಅಂತ ಅವರ ಶಿಷ್ಯ ಕಂಬಾರರು ಬರೆದರು. 'ಅಪಾತ್ರೇರಮತೆ ನಾರಿ' ಎಂಬಂತೆ ಅಡಿಗರ ಸ್ಥಿತಿ ಆಯ್ತು. ನಾನು ಪತ್ರ ಬರೆದಿದ್ದೆ, ನೀನು ಶಿಷ್ಯರನ್ನು ತಯಾರು ಮಾಡಿದ್ದೀಯಲ್ಲ, ಇವರೇ ನಿನ್ನನ್ನು ನುಂಗುತ್ತಾರೆ ಎಂದು. ಮೊದಲು ಸಮಾಜದಲ್ಲಿ ಸಂಸ್ಕೃತ ದ್ವೇಷ ಇರಲಿಲ್ಲ. ಈ ಗುಂಪುಗಾರಿಕೆಯಿಂದ ಜನಿವಾರ, ಸಂಸ್ಕೃತ, ಬ್ರಾಹ್ಮಣ ಮೂರನ್ನೂ ಒಂದೇ ಎಂದು ದ್ವೇಷಿಸುತ್ತಿರುವುದು ನಡೆದು ಬಂದಿದೆ.

ಉತ್ತರ ಕನ್ನಡದ ಯಕ್ಷಗಾನ

ನಮ್ಮ ದೊಡ್ಡಪ್ಪನ ವಿಶ್ವಾಮಿತ್ರ ಮೇನಕೆ ಪ್ರಸಂಗವನ್ನು ಶಿವರಾಮ ಹೆಗಡೆ (ವಿಶ್ವಾಮಿತ್ರ) ಮಹಾಬಲ ಹೆಗಡೆ (ಮೇನಕೆ) ಮಾಡಿದ್ದರು. ಅದನ್ನು ನಾನೆಂದಿಗೂ ಮರೆಯಲಾರೆ. ಕಾರಂತರು ಬಂದಾಗ ಇವರೆಲ್ಲರ ಪರಿಚಯ ನಾನೇ ಮಾಡಿಸಿದ್ದೆನು. ಹಾಗಾಗಿ ಇಡಗುಂಜಿ ಮೇಳ ಅಂದರೆ ನನ್ನ ಮೇಳವೇ ಎಂಬಂತೆ ಆಯ್ತು! ವರದ ಹಾಸ್ಯಗಾರರು ಮಾತ್ರ ಕಾರಂತರಿಗೆ ಗೊತ್ತಿತ್ತು. ಅವರು ಕುಣಿತದಲ್ಲಿ ಹೆಸರಾದವರೇ ಹೊರತು ಮಾತಿನಲ್ಲಲ್ಲ. ಮಾರ್ನಕಟ್ಟೆ ಮೇಳದ ರಾಮಪ್ಪ ಅಡಿಗಳು, ವೀರಭದ್ರ ಇವರ ಕಾಲ ಮುಗಿಯಿತು. ಹಾಗಾಗಿ ಈಗ ತೋರಿಸೋದಾದ್ರೆ ಇಡಗುಂಜಿ ಮೇಳವನ್ನೇ ತೋರಿಸಬೇಕು ಎಂದುಕೊಂಡು ಶಂಭುಶಾಸ್ತ್ರಿ ನಾಜಗಾರ ಅವರ ಮನೆ ಎದುರಿಗೆ ಕಾರಂತರಿಗೋಸ್ಕರ ಸುಧನ್ವ ಕಾಳಗ ಆಡಿಸಿಯಾಯ್ತು. ಈ ಜಿಲ್ಲೆಯಲ್ಲಿ ಉತ್ತಮ ಕಲೆಯಿದೆ ಎಂದು ಕಾರಂತರಿಗೆ ಅರ್ಥವಾಯ್ತು. ಕೊನೆಗೆ ಈ ಮೇಳದವರನ್ನು ಸೇರಿಸಿಕೊಂಡು ದೇಶವಿದೇಶಗಳ ಪ್ರವಾಸ ಮಾಡಿಸಿದರು.

...ಹೀಗೆ ಕೇವಲ ಒಂದು ತಾಸಿನ ಧ್ವನಿಮುದ್ರಿತ ಮಾತುಗಳು ಶ್ರೀಧರರ ವ್ಯಕ್ತಿತ್ವದ ಹೊಳಪನ್ನು ಬಿಂಬಿಸಲು ಸಾಕು...! ಇಂಥ ಸರಳ ಸುಂದರ, ನಿಷ್ಕಪಟ, ಮುಗ್ಧ

ಮಾತುಗಳೂ ಕಠಿಣವೆನಿಸಿದರೆ, ಅದಕ್ಕೆ ಒಂದೇ ಉತ್ತರ–ನಾವು ಚಿಕ್ಕ ಪಾತ್ರೆಯನ್ನು ಹಿಡಿದು ಸಮುದ್ರವನ್ನು ತುಂಬಿಸಿಕೊಳ್ಳುತ್ತೇನೆಂದು ಹೊರಟು ಸಮುದ್ರ ಸಿಗಲಿಲ್ಲ ಎಂದು ಅತ್ತರೆ, ಚಿಕ್ಕ ಪಾತ್ರೆ ಹಿಡಿದು ಹೊರಟದ್ದು ನಮ್ಮ ತಪ್ಪೇ ವಿನಃ ಸಮುದ್ರ ಇದಕ್ಕೆ ಹೊಣೆಯಲ್ಲ! ಎಂಬುದು. ಶ್ರೀಧರರ ಮಾತು–ಬರಹಗಳೆಲ್ಲ ನೇರ ಮತ್ತು ಖಚಿತ. ಅಲ್ಲಿ ಗೊಂದಲಕ್ಕೆಡೆಯಿಲ್ಲ. ಅವರು ನಿಂದಾ–ಸ್ತುತಿಗಳಿಗೆ ಅತೀತರಾಗಿದ್ದುದೇ ಇದಕ್ಕೆ ಕಾರಣ

೫೧೩ ✦

ಸಹ್ಯಾದ್ರಿ ದರ್ಶನ

ಬಿನ್ನಹ

"ನೀನು ನಿನ್ನ ಅಸ್ತಿತ್ವವು ನಿತ್ಯವೂ ನಿರ್ವಿಕಾರವೂ ಅಸೀಮವ್ಯಾಪಕವೂ ಆನಂದಮಯವೂ ಅನನ್ಯಪರತಂತ್ರವೂ ಅಶರೀರವೂ ಅಬಾಧಿಕಪ್ರಪಂಚವೂ ಆಗಿದೆ ಎಂದು ತಿಳಿ–ಎಂದರೆ ಯಾರು ತಿಳಿಯಬಲ್ಲರು? ತಿಳಿದುಕೊಳ್ಳಲು ಉಪದೇಶಿಸಿದ ಗುರು, ಉಪದೇಶಕರ್ತ, ಪರಾವಿದ್ಯಾತ್ಮಕನಾದ ಈಶ್ವರ, ಪುರುಷೋತ್ತಮ–ಇಚ್ಛಾ ಸಮಾಧಿಯುಳ್ಳ ಯೋಗೇಶ್ವರ!

ಪ್ರಪಂಚವು ವ್ಯಾಪ್ಯ, ಪಂಚೇಂದ್ರಿಯ ಗ್ರಾಹ್ಯ, ಅದರ ಅಸ್ತಿತ್ವವು ನಿತ್ಯಾನಂದಕರವಲ್ಲ, ನಮಗೂ ಅದಕ್ಕೂ ಇರುವ ಸಂಬಂಧವು ನಶ್ವರ ಮತ್ತು ಸದಾ ಸುಖಕರವಲ್ಲ ಎಂಬ ಅನುಭವ ನಮಗಿದೆ. ಅದು ಪರಿಣಾಮಿ (Transformative) ಸತ್ಯ. ವಿಜ್ಞಾನವೀಗ ಪಾರಿಭಾಷಿಕ ಪರಿಣಾಮಿತ್ವವನ್ನು (ಹಾಲು ತುಪ್ಪದ ಸ್ಥಿತಿಗೆ ತಲುಪಿದ ಅನಂತರ, ಆ ತುಪ್ಪವನ್ನು ಮೊದಲಿನಂತೆ ಹಾಲಿನ ರೂಪಕ್ಕೆ ತರಲು ಸಾಧ್ಯವಿಲ್ಲ) ಪ್ರಯೋಗ ಪರೀಕ್ಷೆಯಿಂದ ಸುಳ್ಳು ಎಂದು ತೋರಿಸಿತು!

ಬದಲಾಗುತ್ತಿರುವುದಕ್ಕೆ ಒಂದು ವಸ್ತು ಬೇಕಾಯಿತಲ್ಲವೇ? ಅದು ಬದಲಾವಣೆಯಲ್ಲಿ ಏನನ್ನೂ ಕಳೆದುಕೊಳ್ಳಲಿ ಅಥವಾ ಕೂಡಿಸಿಕೊಳ್ಳಲಿ ಇಲ್ಲವೇ ಗುಣಾಂತರ ಹೊಂದಲಿ; ಅದರ "ಅದುತನ" ಅವ್ಯಕ್ತವಾಗಿಯಾದರೂ ಉಳಿಯದೇ ಹೋದರೆ, ತಾನು ಬದಲಾಗುತ್ತಿದ್ದೇನೆ ಎಂಬ ಅರಿವೂ ಅದಕ್ಕಿಲ್ಲದೇ ಹೋದರೆ, ಅದು ಬದಲಾದುದರಿಂದ ನಮಗೆ ಅನುಕೂಲ–ಪ್ರತಿಕೂಲಗಳು ಉಂಟಾದರೂ ಅವು ಅನಿತ್ಯವಾಗಿ ತೋರಿದಾಗ ಅದರೊಡನೆ ನಾವು Identity ಐಕಾತ್ಮ್ಯವನ್ನು ಅನುಭವಿಸಬಲ್ಲೆವೇ? ಕರ್ತೃವಿನ ಕ್ರಿಯೆಯನ್ನೇ ಕರ್ತೃವೆಂದು ಭಾವಿಸಬೇಕೇ? ಆ ಕ್ರಿಯೆಯನ್ನೇ ಕರ್ಮ (object) ಎಂದು ತಿಳಿಯಬೇಕೇ? Nothing is lost when a candle burns ಮೇಣದ ಬತ್ತಿ ಉರಿದು ಸುಟ್ಟು ಹೋದರೆ ಅದರ ಯಾವ ಅಂಶವೂ ಶೂನ್ಯವಾಗದು.

ನಾವು ಇಂಥ ಇಡೀ ಪ್ರಪಂಚವೋ, ಬಿಡಿ ಪ್ರಪಂಚವೋ? ನಾವು ಪರಸ್ಪರ ಇಡಿ–ಬಿಡಿಗಳಲ್ಲಿ ಸಂಬಂಧ ಉಳ್ಳವರೋ? ನಾವು ಸತ್ತ ಮೇಲೆ ಏನಾಗುವೆವು?

ಶೂನ್ಯವಾಗುವವೇ? No zero is an absolute. ಯಾವ ಸೊನ್ನೆಯೂ ಅಭಾವವೂ ನಿರಪೇಕ್ಷವಲ್ಲ. ಸೊನ್ನೆ ಯಾ ಅಭಾವ ಒಂದು ವಿಚಾರ, ಆಲೋಚನೆ, ಕಲ್ಪನೆ. ನಮ್ಮಲ್ಲಿ ಎಷ್ಟು absolute ಸರ್ವ ಸಂಬಂಧ ಮುಕ್ತ ಪದಾರ್ಥ ಕಲ್ಪನೆಗಳಿವೆ ಎಂದು ತರ್ಕಶುದ್ಧವಾಗಿ (ಹೇತ್ವಾಭಾಸರಹಿತವಾಗಿ) ಹೇಳಲು ಯಾರಾದರೂ ಬರುತ್ತೀರೋ?

ಯಾವ ಪ್ರತ್ಯೇಕ ಪದಾರ್ಥಗಳ ನಿತ್ಯತೆಯನ್ನು ಸ್ವೀಕರಿಸಿದರೂ ಅವುಗಳ ಬಹುತ್ವದ ದೆಸೆಯಿಂದ ಅವುಗಳಲ್ಲಿ ಒಂದಲ್ಲಾ ಒಂದು (ಅಥವಾ ಹಲವು) ನಿತ್ಯ ಸ್ವರೂಪದ ಸಂಬಂಧವಿರಬೇಕಾಯ್ತು ಮತ್ತು ಸಂಬಂಧ ಯಾವ ತರಹದ್ದಾದರೂ ಪರಸ್ಪರಾವಲಂಬನದ ಅರ್ಥವನ್ನು ಅರ್ಥ ವ್ಯಾಪ್ತಿಯಲ್ಲಾದರೂ ಹೊಂದಿರಲೇಬೇಕು. ಅಪರಸ್ಪರ ಸಂಬಂಧದ ಅನೇಕ ಪದಾರ್ಥವಾದವು ಕೇವಲ ಹಠ. Independent Truth ಸ್ವತಂತ್ರ ಸತ್ಯ (ಪರಮಾತ್ಮ) ಎಂದೂ ತದಿತರ ಪದಾರ್ಥ ಆಳಾಗಿಯಾದರೂ ಅಸ್ತಿತ್ವದಲ್ಲಿ ಇದೆ ಎಂಬ ಜ್ಞಾನ ಅದಕ್ಕೆ (ಅವನಿಗೆ) ಇರುವವರೆಗೆ ಅದು (ಅವನು) ಪರಿಪೂರ್ಣ ಸ್ವತಂತ್ರವ(ನ)ಲ್ಲ. ನಮಗೆ ಇಷ್ಟಿದ್ದರೆ ಸಾಕು ಎನ್ನುವುದು ಕೇವಲ ಅನುಕೂಲಸಿಂಧು ನ್ಯಾಯ; ತರ್ಕಶುದ್ಧವಲ್ಲ, ಸತ್ಯಶೋಧನೋದ್ದೇಶವುಳ್ಳ ಮಾತಲ್ಲ.

"A perfect being can come when man is exceeded or overpassed and some other being takes his place" – ಮಾನವನು ತನ್ನ ಮಾನವತ್ವವನ್ನು ತನ್ನಲ್ಲಿ ಖಾಲಿ ಮಾಡಿಕೊಂಡ ಮೇಲೆ, ಮೀರಿದ ಮೇಲೆ, ದಾಟಿ ಮೇಲೆ ಹೋದ ಬಳಿಕ, (ಅವನಿಗಿಂತ ಹೆಚ್ಚಿನ) ಇನ್ನೊಂದು ಮಹಾಸತ್ವವು ಆ ಖಾಲಿ ಜಾಗವನ್ನು ತುಂಬಿಕೊಂಡಾಗ, ಅವನು ಪೂರ್ಣನಾಗುವನು. (P.2 service letter of Sri Aurobindo Ashram, Pondicherry-605002, No. 127, dated 1-7-1983)". ಅಂಥವನು ಮಾನವಾತೀತನಾದ ಯೋಗಿ, ಜೀವನ್ಮುಕ್ತ; ಅವನಲ್ಲಿ Aspiration, call and response = ಪರಮಾರ್ಥ ಸಾಧನೆಯ ಉತ್ಕಟೇಚ್ಛೆ, ಆಧ್ಯಾತ್ಮಿಕ ಅಂತಃಪ್ರೇರಣೆ ಮತ್ತು ಆ ಪ್ರೇರಣೆಗೆ ತಕ್ಕ ಪ್ರತಿಕ್ರಿಯೆಗಳು ಅಂಥ ಸಿದ್ಧಾರ್ಥನಲ್ಲಿ, ಪೂರ್ಣನಲ್ಲಿ ಸಮಾನ ಮಟ್ಟದಲ್ಲಿರುತ್ತದೆ. ಪೂರ್ಣತ್ವದಲ್ಲಿ ನಾಶವಿಲ್ಲ. Receptivity– ಆಧ್ಯಾತ್ಮಿಕ ಶಕ್ತಿಯ ಸ್ವೀಕಾರಬುದ್ಧಿಯು ಸಾಧಕನಲ್ಲಿ ಕೆಲಸ ಮಾಡುತ್ತಿರುವ ಆ ಶಕ್ತಿಯ ಪರಿಮಾಣ–ಪ್ರಕಾರಗಳಿಗೆ ಸಮಾನವಾಗಿರುತ್ತದೆ. ಪರಮಾರ್ಥ ಸಿದ್ಧಿಯ ಈ ಸ್ವರೂಪವು ಶ್ರೀ ರಮಣ, ಮಾತೃಶ್ರೀ, ಶ್ರೀ ಅರವಿಂದ ಮತ್ತು ಶ್ರೀ ವಾಸಿಷ್ಠ ಗಣಪತಿ ಮುನಿಗಳಿಗೆ ಒಪ್ಪಿಗೆಯಾದದ್ದೆಂಬ ಅಭಿಪ್ರಾಯವನ್ನು ಉಕ್ತ "ಸೇವಾ ಪತ್ರವನ್ನು" ಆಮೂಲಾಗ್ರವಾಗಿ ಓದಿದರೆ ಹೊಳೆಯುತ್ತದೆ.

"ರಿಕ್ತ: ಸರ್ವೋಭವತಿ ಹಿ ಲಘುಃ ಪೂರ್ಣತಾ ಗೌರವಾಯ" ಎಂದದ್ದು ಕಾಳಿದಾಸ. ಮಾನವರಾದ ನಮಗೆ ಯಾವ ಯಾವುದು ಅಪೂರ್ಣಗಳು (Imperfections) ಎನ್ನಿಸುವುದೋ ಅವೆಲ್ಲವನ್ನೂ ಕಳೆದುಕೊಳ್ಳುವುದೇ ಪೂರ್ಣಾವಸ್ಥೆ;

ಆಂಶಿಕತೆಯೇ ನಮ್ಮ ರಿಕ್ತತೆ. ಆ Relativism ಸಾಪೇಕ್ಷತೆ ಹೊರಟು ಹೋದಾಗ ನಮ್ಮಲ್ಲಿ ಪೂರ್ಣತ್ವ (ಸಚ್ಚಿದಾನಂದತ್ವ) ನೆಲೆ ನಿಲ್ಲುವುದಂತೆ.

"ಯೋಗರತೋ ವಾ ಭೋಗರತೋ ವಾ
ಸಂಗರತೋ ವಾ ಸಂಗವಿಹೀನಃ ।
ಯಸ್ಯ ಬ್ರಹ್ಮಣಿ ರಮತೇ ಚಿತ್ತಂ
ನಂದತಿ ನಂದತಿ ನಂದತ್ಯೇವ" ॥

ಎಂಬುದು ಪೂರ್ಣತ್ವದ ಬಗ್ಗೆ ಶ್ರೀ ಶಂಕರಾಚಾರ್ಯರಿತ್ತ ವಿವರಣೆ; ಶ್ರೀ "ರಮಣರ ಸಹಜ ಸಮಾಧಿ" ಎಂಬುದು ಈ ಪೂರ್ಣತ್ವವುಳ್ಳ ಬ್ರಹ್ಮದಲ್ಲಿ ತಿರುಗಿ ಬಾರದಂತೆ ಸ್ಥಿರವಾಗಿ ನೆಲೆನಿಂತಿರುವುದು. ಈ ಬ್ರಹ್ಮದೃಷ್ಟಿಯಿಂದ ನಮ್ಮನ್ನೂ ನಮ್ಮ ಈ ಜಗತ್ತನ್ನೂ ನೋಡುವ ಶಕ್ತಿಯನ್ನು ಪಡೆಯುವುದೊಂದೇ ನಾನಾ ನ್ಯೂನತೆಗಳ ಬಾಧೆಯಿಂದ ಮುಕ್ತರಾಗುವ ಉಪಾಯ.

ಸತ್ ಸಂಗತ್ವೇ ನಿಃಸಂಗತ್ವಂ
ನಿಃಸಂಗತ್ವೇ ನಿರ್ಮೋಹತ್ವಂ ।
ನಿರ್ಮೋಹತ್ವೇ ನಿಶ್ಚಿಂತತತ್ವಂ
ನಿಶ್ಚಿಂತತತ್ವೇ ಜೀವನ್ಮುಕ್ತಿಃ॥

ಎಂಬುದು ಅದೇ ತಾತ್ಪರ್ಯವುಳ್ಳ ಇನ್ನೊಂದು ಶಾಂಕರ ಸೂತ್ರ. "ನಾನು" ಎಂದು ಏನನ್ನು ಮಾನವರಾದ ನಾವು ವ್ಯಾವಹಾರಿಕವಾಗಿ ತಿಳಿದುಕೊಂಡಿದ್ದೇವೋ ಅದರ ಕತ್ತನ್ನು ಹಿಡಿದು ಜಗ್ಗಿ ಕೇಳುತ್ತಲೇ ಹೋದಾಗ ಈ ನಾನು (=ಮಾನವತ್ವ=ನ್ಯೂನತೆಗಳ ಸಮಾಹಾರ) ಮಾಯವಾಗಿ ಹೋಗಿ, ಅದರ ಜಾಗದಲ್ಲಿ ಅಪ್ರಮೇಯವಾದ, ಅದ್ವಿತೀಯವಾದ, ಅಲ್ಲಾಡಿಸಲಾಗದ ಪೂರ್ಣಶಕ್ತಿ (ಪೂರ್ಣಸತ್ವ, ಪೂರ್ಣಸತ್ಯ, ಪೂರ್ಣಜ್ಞಾನ, ಯಾವುದರಿಂದಲೂ ವಿಘ್ನಿತವಾಗದ, ಬಾಧಿತವಾಗದ, ಯಾವ ಕರಾರಿಗೂ ಬದ್ಧವಲ್ಲದ, ಗಡಿಮಿತಿ ಇಲ್ಲದ, ಜಗತ್ತೆಂಬ ಹಿರಣ್ಮಯ ಪಾತ್ರದಲ್ಲಿ ಹುದುಗಿದ್ದ ಅಮೃತಶಕ್ತಿ) ಅನಾವೃತವಾಗುತ್ತದೆ – ಜಯಶೀಲ ಸಾಧಕನಿಗೆ!

ಈ ಶ್ರುತದಲ್ಲಿ ಶ್ರದ್ಧೆಯನ್ನಿಟ್ಟ – ಆದರೆ ಅದರಿಂದ ಬಹಳ ದೂರದಲ್ಲಿರುವಂತೆ ಭಾಸವಾಗುತ್ತಿರುವ ನನಗೆ– ನಾನಾತ್ವದೃಷ್ಟಿಯ ಒತ್ತಡವಳಿದು ಕ್ರಮಮುಕ್ತಿಯನ್ನಾದರೂ ಶ್ರೀ ಭಗವಾನ್ ಅರುಣಾಚಲ ರಮಣ ಗುರು ಕೃಪೆ ಮಾಡಲಿ– ಎಂಬ ತರ್ಕಾಂತ ನಿಗಮನಕ್ಕೆ ಬದ್ಧನಾಗಿ, ಈ ನವಖಂಡಗಳಲ್ಲಿ ಮನಸ್ಸಿಗೆ ತೋರಿದ್ದನ್ನೆಲ್ಲಾ ಬರೆದಿದ್ದೇನೆ. ಇದು ನನಗೆ ಸಹ್ಯವಾದ ಅದ್ರಿ, ನಾನು ವರ್ತಮಾನ ಕಾಲದಲ್ಲಿ ಹೊರಬಲ್ಲ ಬೆಟ್ಟ.

॥ ತದಿದಂ ಸರ್ವಂ ಶ್ರೀ ರಮಣಾರ್ಪಿತಮಸ್ತು॥

"ಸಾಪೇಕ್ಷತ್ವಾದನಾದಿತ್ವಾದ್ವೈಚಿತ್ರ್ಯಾದ್ವಿಶ್ವ ವೃತ್ತಿತಃ
ಪ್ರತ್ಯಾತ್ಮನಿಯಮಾದ್ ಭುಕ್ತೇರಸ್ತಿ ಹೇತುರಲೌಕಿಕಃ – ಉದಯನಾಚಾರ್ಯ

೧. ತೇನ ವಿನಾ ತೃಣಮಪಿ ನ ಚಲತಿ

೨. ನೈಷಾ ತರ್ಕೇಣ ಮತಿರಾಪನೇಯಾ

೩. ಯತೋವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ– ಉಪನಿಷತ್

೪. The Philosophy of India takes its stand on the spirit which is above mere logic, and holds that culture based on mere logic or science may be efficient, but cannot be inspiring"-P.25, Indian Philosophy by S. Radha Krishanan Volume II

ನವಖಂಡ ವಿವರಣೆ

ಪೃಥ್ವಿಗೆ ಜಲಾವರಣ, ಜಲಕ್ಕೆ ತೇಜಸ್ಸಿನ ಆವರಣ, ತೇಜಸ್ಸಿಗೆ ವಾಯುವಿನ ಆವರಣ, ವಾಯುವಿಗೆ ಆಕಾಶ ಆವರಣ ಎಂಬುದು ಸುಪ್ರಸಿದ್ಧ.

ಆಕಾಶಕ್ಕೆ ಕ್ರಿಯಾಜಾತವಾದ ಕಾಲವು ಸಮಕಾಲೀನವಾದ ಅವಿನಾಭಾವಿ. ದಿಕ್ಕು ಆಕಾಶ–ಕಾಲಗಳಲ್ಲಿ ಅಂತರ್ಗತ. ಮನಸ್ಸು ಏತತ್ ಸರ್ವಗತ, ಅಂತರ್ಬಹಿರ್ವ್ಯಾಪಿ. ಅದರ ಸೃಷ್ಟಿ, ಸ್ಥಿತಿ, ಲಯ, ನಾಶಗಳಿಗೆ ಕಾರಣವಾದದ್ದು ಆತ್ಮ ಯಾ (ಪರ)ಬ್ರಹ್ಮ. ಮನಸ್ಸು ನಷ್ಟವಾದರೆ subject, object ಕರ್ತಕರ್ಮಗಳಲ್ಲದೆ predicate ಕ್ರಿಯೆಯೂ ಇಲ್ಲ. ಆತ್ಮವು ಸತ್ ಉಳಿದೆಲ್ಲವೂ ತ್ಯತ್.

ಪಾರ್ಥಿವ ಮನಸ್ಸು ತಾನು ಮರು ಮರೀಚಿಕೆ ಎಂಬುದನ್ನು ತಿಳಿದ ಮೇಲೆ ತನ್ನನ್ನು (ದೇಹಾಭಿಮಾನಿಯನ್ನು) ನುಂಗಿ ನೀರುಕುಡಿ ಎಂದು ಗುರುವನ್ನು (ಪೂರ್ಣಾತ್ಮನನ್ನು) ಬೇಡುತ್ತದೆ. ಪಾಂಚಭೌತಿಕ ಶರೀರದಲ್ಲಿ ಪಾರ್ಥಿವಾಂಶ ಅಧಿಕ.

ಜೀವನ (ಜಲ)ಮನಸ್ಸು ತಾನು ನೀರ ಮೇಲಣ ಗುಳ್ಳೆಯಂತೆ ಇರುವುದನ್ನು ತಿಳಿದ ಮೇಲೆ ನೀರಿಗೆ ಅಂಶತಃ ಹೋಲಿಕೆಯುಳ್ಳ ಶಾಂತಿರಸವನ್ನು ಕುಡಿಸೆಂದು ಗುರುವನ್ನು ಯಾಚಿಸುತ್ತದೆ.

ತೇಜೋಮಯ ಮನಸ್ಸು ತನ್ನ ಮತಿ ಎದುರಿಗಿಡುವ ವಿವಿಧ ವಾದಗಳಲ್ಲಿ ಸಿಕ್ಕಿ ಒದ್ದಾಡುವ ಮೇಧಾವಿತ್ವವನ್ನು ಮನೋಬುದ್ಧಿಯ ಬಲದಿಂದ ತಿಳಿದು ಗುರುವಿಗೆ ಶರಣವೊಗೆಂದು ತನ್ನ ಮತಿಗೆ ಹೇಳುತ್ತದೆ.

ವಾಯುಮಯ ಮನಸ್ಸು ಪ್ರಾಣದ ದೌರ್ಬಲ್ಯಗಳನ್ನು (ಪರಾಧೀನತೆಯನ್ನು) ಅರಿತುಕೊಂಡು ಜೀವ ಹೋದ ಮೇಲೆ ಯಾವುದರ ನೆನಪು ಇರುವುದೋ ಇರುವುದಿಲ್ಲವೋ ಎಂಬುದನ್ನರಿಯಲು ಸಾಧ್ಯವಿಲ್ಲದುದರಿಂದ–ಹಾಗೂ ಹೀಗೂ–ಗುರುಚರಣ ಸ್ಮರಣೆ ಉಳಿಯಬೇಕೆಂದು ನಮಸ್ಕಾರ ಮಾಡಿ ಗುರುವನ್ನು ಬೇಡುತ್ತದೆ.

ಆಕಾಶಮಯ ಮನಸ್ಸಿಗೆ ಇಡೀ ಬ್ರಹ್ಮಾಂಡದಲ್ಲಿಯ ಅಸ್ತವ್ಯಸ್ತತೆ ಗೊತ್ತಾದ

ಮೇಲೆ, ಹಾಗೆ ಗೊತ್ತಾಯಿತೆಂಬ ಮೂಲಕ ಅದು ಸದಾ ಸುವ್ಯವಸ್ಥಿತವಾದ ಗುರುಸ್ಥಿತಿ (ಪೂರ್ಣತ್ವ) ಬೇಕೆಂಬ ಮುಮುಕ್ಷುತ್ವವನ್ನು ಧ್ವನಿಸುತ್ತದೆ.

ಕಾಲದಂಗಡಿಯನ್ನು ಹೊಕ್ಕ ಮನಸ್ಸಿಗೆ ಕಾಲದ ಕ್ರಿಯಾಧೀನತ್ವ, ಆಕಾಶಾಧೀನತ್ವಗಳ ಅರಿವಾಗಿ ಅದು ಮಾಯಾರೂಪದ ನೀನು ಹೋಗು ಎಂಬ ಮಾತಿನ ಮೂಲಕ, "ಗುರುವೇ ಕಾಲ ಮಾಯೆಯಿಂದ ನನ್ನನ್ನು ಮುಕ್ತಗೊಳಿಸು" ಎಂದು ಧ್ವನಿಸುತ್ತದೆ.

ದಿಕ್ಕೆಂಬುದನ್ನು ಆಕಾಶದಲ್ಲಿರುವ ಅಸಂಖ್ಯಾತ ಕೇಂದ್ರಗಳಿಂದ ನೋಡಬಹುದು. ಎಲ್ಲಿಂದ ನೋಡಿದರೂ ಅದು ಹತ್ತು. ಆ ಹತ್ತೂ ಆಕಾಶಾಧೀನ (In the total unmeasured space of the multiverse)

ದಿಙ್ಮಯ ಮನಸ್ಸು ಮುಂದೆ ಅದನ್ನೂ ಕಳಚಿ ಹಾಕಿದಾಗ ಪಂಚೇಂದ್ರಿಯಯುಕ್ತ ಬುದ್ಧಿ (ಅದರಲ್ಲೂ ಅಹಂಬುದ್ಧಿ) ಎಂದಾಗುವುದು. ಸಂಕಲ್ಪ–ವಿಕಲ್ಪಾತ್ಮಕವಾದ, ದೇಹಾಭಿಮಾನಿಯಾದ, ಜ್ಞಾನೇಂದ್ರಿಯಗಳ ಮೂಲಕ ಕರ್ಮೇಂದ್ರಿಯಗಳಿಂದ ಕೆಲಸ ಮಾಡಿಸಬಲ್ಲ ಮುಮ್ಮಿದುಳಿದ ಮಧ್ಯಬಿಂದು (CENTRE of the CEREBRUM). ಅದಕ್ಕೆ ನಡುಮಿದುಳಿನ (CEREBELLUM) ಮತ್ತು ಹಿಮ್ಮಿದುಳಿದ (MEDULLA OBLONGATA) ಮೇಲೆ ಅಧಿಕಾರವಿಲ್ಲ. ಇದನ್ನು ಸಾಮಾನ್ಯವಾಗಿ ಮನಸ್ಸಿನ ಮನಸ್ತ್ವವೆಂದು ತಿಳಿದುಕೊಳ್ಳಲಾಗುತ್ತದೆ.

ಮನಸ್ಸಿನ (ಈವರೆಗೆ ಹೇಳಿದ) ಅಷ್ಟದೃಷ್ಟಿಗಳೂ (Attitudes) ಲೌಕಿಕ, ಪ್ರಾಪಂಚಿಕ, ಸ್ವಾರ್ಥದೇಹಿತ್ವವುಳ್ಳ 'ಜೀವ' ಶಬ್ದದಿಂದ ವೇದ್ಯ. COGNITION, CONATION, EMOTION ಪದಾರ್ಥಗಳನ್ನು ಗುರುತಿಸುವುದು, ಅವು ಬೇಕು ಅಥವಾ ಬೇಡ ಎನ್ನುವುದು ಮತ್ತು ಅವುಗಳ ಭೋಗ್ಯತೆಗೆ ಕರ್ತೃ (ಭೋಕ್ತೃ)ವಾಗುವುದು ಹಾಗೂ ಅವುಗಳಲ್ಲಿ ಕೈಯಲ್ಲಾದವುಗಳನ್ನು ನಿರ್ಮಿಸುವುದು (ಕರ್ತೃ) ಅದು ಲೋಕದಲ್ಲಿ ನಂಬಿಕೆಯಿಟ್ಟು ಮಾಡುವ ಪೃಥಕ್ತ್ವಜ್ಞಾನಜನ್ಯವಾದ ದೈನಂದಿನ ವ್ಯವಹಾರ. ಇದಕ್ಕೆ ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳಿರುತ್ತದೆ. ಮರಣವು ಸುಷ್ತಿ ಸದೃಶ, ಆದರೆ ತದ್ಭಿನ್ನ. ಶಾಸ್ತ್ರವು ಅದರ ಅನುಭವದ ತಾರ್ಕಿಕ ಸೃಷ್ಟಿ, ಕಾವ್ಯವು ಪ್ರಾತಿಭ ಸೃಷ್ಟಿ. ದುಃಖ, ಜನ್ಮ, ಪ್ರವೃತ್ತಿ, ದೋಷ, ಮಿಥ್ಯಾಜ್ಞಾನಗಳಿಂದ ತಾನು ತುಂಬಿರುವುದು ತಿಳಿದಾಗ ಅದು ಆತ್ಮರತವಾಗುವುದು.

ಆತ್ಮವು ಚಿತ್ತಿನ (ಶುದ್ಧಪ್ರಜ್ಞೆಯ) ನಿತ್ಯತ್ವ ಮತ್ತು ವಿಭುತ್ವಗಳ ಅಸ್ತಿತ್ವದ ಅಪರೋಕ್ಷ ಜ್ಞಾನ. ದೇಹ, ಇಂದ್ರಿಯ, ಅಂತರಂಗ, ಅಹಂಕಾರ, ಪ್ರಾಣ, ಬುದ್ಧಿ ಮತ್ತು ಪ್ರಾಪಂಚಿಕ ಸಂಬಂಧಗಳ ಬಂಧದಿಂದ ಯಾವಾಗಲೂ ಮುಕ್ತ (ಪರಬ್ರಹ್ಮ, ಪರಮಾತ್ಮ, ಸರ್ವಮೂಲ, ಸರ್ವಪ್ರಭು, ಸರ್ವಾಂತರ್ಯಾಮಿ, ಅಲೌಕಿಕ, ಈಶ್ವರೀಯ, ದೈವಿಕ, ಪೂರ್ಣ, ನಿರ್ವಿಕಲ್ಪ, ಪಂಚಕೋಶಾತೀತ, ಸದಸದ್ವಿಲಕ್ಷಣ, ಸದಸದಾಧಾರ, ನಿರುಪಾಧಿಕ) ಚೈತನ್ಯ

ಶಕ್ತಿ. ಶರೀರದಲ್ಲಿ ನಡುಮಿದುಳಿನ ಕೇಂದ್ರಬಿಂದುವಿನಲ್ಲಿ ಅವ್ಯಕ್ತವಾಗಿ ಇರುವ ಸ್ವತಂತ್ರ, ನಿರ್ವೈಯಕ್ತಿಕ ಸ್ವಾರ್ಥ ಸಂಪನ್ನ, ಅವಿವರಣೀಯ ಉದ್ದೇಶವುಳ್ಳ, ಅದ್ವಿತೀಯ, ಅನಾದ್ಯನಂತ ತುರೀಯ ಪ್ರಜ್ಞೆ–ಅಚಂಚಲಾನುಭೂತಿ–ಎಂಬುದೇ ಆತ್ಮ. ಅದರ ಕಾರ್ಯಗಳೆಲ್ಲಾ ದಿವ್ಯ ಪ್ರಾತಿಭ (DIVINELY INTUITIVE). ಅದು ಈ ಹಿಂದೆ ಹೇಳಿದ ನವದ್ರವ್ಯಗಳನ್ನು (ನವಗುಣಗಳನ್ನು ಯಾ ಘಟಕಗಳನ್ನು) ಅಥವಾ ತನ್ಮಯ ದೃಷ್ಟಿಗಳನ್ನು ಜೇಡರ ಹುಳುವಿನಂತೆ ಖುಶಿಬಂದಾಗ ಅಂಶತಃ ಯಾ ಪೂರ್ಣವಾಗಿ ತನ್ನೊಳಗೆ ಎಳೆದುಕೊಳ್ಳಬಲ್ಲದು ಮತ್ತು ಹಾಗೇ ಒಳಗಿನಿಂದ ಹೊರಗೆ ಹಾಕಬಲ್ಲುದು. ಅದರ ಕೃಪೆಯಿಂದ ಅಹಂಕಾರದಿಂದ ಅವಚ್ಛಿನ್ನವಾದ ಜೀವವು (ಪ್ರತ್ಯೇಕ ವ್ಯಕ್ತಿತ್ವವುಳ್ಳ ಮನೋಮಯ ಮನುಷ್ಯನು) ತತ್ಸೂಚಿತ ಮಾರ್ಗಗಳಿಂದ ಅವಿದ್ಯಾಕಾಮಕರ್ಮಗಳಿಂದ ಮುಕ್ತವಾಗಿ ತನ್ನ ಮನೋರೂಪವನ್ನು (ಸರ್ವವಾಸನೆಗಳ ಸಹಿತ) ಕೊನೆಯದಾಗಿ ಕಳೆದುಕೊಂಡು ತದೈಕ್ಯಸ್ವರೂಪದ ಸಮಾಧಿಯಲ್ಲಿರಬಹುದು, ತತ್ಕರಣವಾಗಿ ತದಿಷ್ಟವಾದ ಏನನ್ನೂ ಮಾಡಬಹುದು. ಆದರದು ತನ್ನ ನಿತ್ಯಮುಕ್ತತೆಯಿಂದ ಯಾವಾಗಲೂ ಮುಕ್ತವಾಗದು.

ಪೃಥ್ವೀಖಂಡ ೧

ಶ್ರೀರಮಣ ವಾಸಿಷ್ಠವಂದಿತ
ಮಾರಹರನವತಾರ ವಿದ್ಯಾ
ವಾರಿಧಿಯೆ ಕರುಣಾಮೃತ ಪ್ರಾವೃಟ್ ಚಿದಾನಂದ ।
ಕಾರಣಿಕ ಕಲ್ಯಾಣ ಗುಣಮಂ
ದಾರ ಜಗದಾಧಾರ ವಿಘ್ನವಿ
ದಾರಕನೆ ಸಾಧಕರ ಕಾಯುವ ನಿನಗೆ ಶರಣೆಂಬೆ ॥ ॥೧॥

ಅದ್ವಿತೀಯ ಬ್ರಹ್ಮಬಲನೆ ಸ
ಮೃದ್ಧ ಸಹಜ ಸಮಾಧಿವಂತನೆ
ಚಿದ್ವಿಕಾರ ನಿಯಾಮಕನೆ ಮೌನೇಂದುಶೇಖರನೆ ।
ಹೃದ್ಯತಮ ಶಾಂತಿಸ್ವರೂಪನೆ
ಹೃದ್ಗತನೆ ನಿದ್ರೆಯಲಿ ಮುಳುಗಿದ
ಬದ್ಧರನ್ನೆಬ್ಬಿಸುವ ಗುರುವೇ ನಿನಗೆ ಶರಣೆಂಬೆ ॥ ॥೨॥

ದೇಹವಿದ್ದೂ ದೇಹಿಯಾಗದೆ
ಮೋಹಸಾಗರವನ್ನು ದಾಟಿದ
ಕೋಹಮೆಂಬ ಪ್ರಶ್ನೆಗುತ್ತರ ಕೊಟ್ಟ ಧುರಧೀರ ।
ಸೋऽಹಮಾದ ಮಹಾಮಹಿಮ ಸಂ

ದೇಹಪರ್ವತವಜ್ರ ನಿನಗೀ
ದೇಹದಭಿಮಾನವನು ಬಿಡಿಸೆಂದಂಗಲಾಚುವೆನು ॥ ॥೩॥

ಗುರುತಮತ್ವದೊಳಿರುವ ನಿನಗೀ
ಲಘುತಮನ ಸಾಷ್ಟಾಂಗವಂದನೆ
ಹರಿದು ತಾಮಸಕಾಂಡಪಟವನು ಕಣ್ಣತೆರೆಯಿಸಲು ।
ಮರೆಯದಿರು ನಾನೆಂಬ ಮಾನಸ
ದಘವಿಲೇಪನವನ್ನು ತೊಳೆತೊಳೆ
ಹರಿಹರಬ್ರಹ್ಮಾಧಿಕನೆ ನಿನ್ನಡಿಗಳೆನಗೆ ಗತಿ ॥ ॥೪॥

ಅರಿಯೆನಾತ್ಮದ ನೈಜರೂಪವ
ಹರಿಯುತಿದೆ ಮನನೂರುದೆಸೆಗ
ಳ್ಗರಿಷಡಂಗದ ತಂತ್ರದಿಂ ಬಿಡಿಸೆನ್ನ ಹುಲುನರನ ।
ಮೊರೆಯ ಕೇಳ್ ದಿಕ್ಕಾಲಪರಿಮಿತ
ತಿರೆಯೊಳಗೆ ತಿರುಗಾಡಿ ಸೋತಿಹ
ಮರಣಪಾತ್ರನನುದ್ಧರಿಸು ಮೃತ್ಯುಂಜಯಾತ್ಮನೇ ॥ ॥೫॥

ಬರೆದೆನೋದಿದೆನುರಿದೆನಾರಿದೆ–
ನರಿತೆ ಮರೆತೆ ಪದೇಪದೇ ಭೂ
ಚರರ ನಡುವಿನ ಬಾಳಿನಲಿ ಹೋರಾಡಿ ಹೋರಾಡಿ ।
ಜರಠನಾದೆ ಜಗನ್ನಿಯಾಮಕ
ಕರವ ಜೋಡಿಸಿ ಕೇಳುವೆನು ನೀ
ನರುಹಿ ಪಾಲಿಸು ಯಾರು ನಾನೆಂಬುದನು ಲೋಕದಲಿ ॥ ॥೬॥

ನನ್ನ ಗುರುತಿಸಲಾರೆ ನಾನೀ
ಗನ್ನಗತಕದ ಬಾಳ ಜೈಲಿನ
ದೊಣ್ಣೆ ಹೊಡೆತವ ಸಹಿಸಲಾರದೆ ಮೂರ್ಛೆಹೊಂದಿದೆನು ।
ನಿನ್ನನುಸ್ಮರಣೆಯನ್ನು ಮಾಡುವು
ದನ್ನು ಕಲಿಸೋ ಗುರುವರೇಣ್ಯನೆ
ಇನ್ನು ಮರಣ ಸಮಿಪಿಸುತ್ತಿದೆಯೆನ್ನ ದೇಹಕ್ಕೆ ॥ ॥೭॥

ಅವರಿವರ ನಂಬಿದೆನು ದೇಹದ
ವಿವರದೊಳಗಡೆ ಸಿಲುಕಿ ಕೆಟ್ಟೆನು
ಬವರ ಬಾಲ್ಯದೆ ಮುಪ್ಪು ದೇಹವ ನುಂಗುವೀವರೆಗೆ ।
ಶವದನುಭವವ ಪಡೆದೆ ನಿನ್ನೀ

ಧವಳ ಯಶ ತಾನಾಗಿ ಹೃದಯವ
ಕವಳಿಸುವವರೆಗೀಯನಾಥನ ನಾಥ ನಿನ್ನಿದಿರೇ ॥ ॥೮॥

ನಿನಗರಿಯದೇನೀ ಜಗತ್ತಿನ
ಜನನ ಸಂಸ್ಥಿತಿ ಮರಣ ಕಾರಣ?
ಕನಿಕರಿಸಿ ನೋಡಿತ್ತಲೀ ದುರ್ವಾರ್ಯ ಮಾಯೆಯಲಿ ।
ಕನಕಸಂಕೋಲೆಗಳ ಧರಿಸಿದ
ಜನತೆ ಸಂಭ್ರಾಂತಿಯ, ಭಯದ ಕಾ–
ಮನೆಯ, ಗರ್ವದ ದುರ್ಗಮಾರಣ್ಯದಲಿ ತಿರುಗುವುದ ॥ ॥೯॥

ಕೋಟೆ ಮೂರ್ಖತೆಯೆಂದೊಳಗೆ ಕೂ–
ಗಾಟ ಮಾಡುವ ಮಾನಿಸರ ಭಂ–
ಡಾಟವೊಂದೇ? ಎರಡೆ? ತಿಳಿದೂ ಶಾಂತಿ ಶತ್ರುಗಳ ।
ಮಾಟಕೊತ್ತೆಯನಿಟ್ಟು ತಮ್ಮನೆ
ಚೋಟರು ಪರಸ್ಪರರ ಹೀರುವ
ನೋಟ ಮೈಜುಮ್ಮೆನ್ನಿಸುತ್ತಿದೆ, ಕಾಣೆ ಪರಿಹಾರ ॥ ॥೧೦॥

ಧೃತಿವಿಹೀನಮನವನು ನಿರ್ಮಿಸಿ
ಮತಿಯನಾಳುವ ಹಮ್ಮ ಕೂಡಿಸಿ
ಖತಿಗೊಳಿಸುವ ಸಮಾಹಿತತ್ವಕ್ಕಿಳಿಸಿ ಜೀವಿಗಳ ।
ಪತನಕರ ಭೋಗಾಭಿಲಾಷೆಯ
ಮಿತಿಯ ಮೀರಿಸಿ ನಗುವ ಮಾಯೆಯ
ಹತಿಬಲಕೆ ಬೇರಾವುದಯ್ಯಾ ಹೇಳು ಗುರುರಾಜ ॥ ॥೧೧॥

ದಿತಿಯದಿತಿಗಳ ಸಂತತಿಗಳಿಗೆ
ಸತತ ಹೋರಾಟದ ಮನಸ್ಕತೆ
ವಿತತಗೊಳಿಸಿದ ಲೀಲೆ ಲೀಲೆಯೆ? ನಿನ್ನ ಮೇಲಾಳ್ಕೆ ।
ವಿತಥವಾಗುವುದೇನು ಹಲ ಸಲ?
ಮತಿಗರಿಯದೀಯೆನ್ನನೆಂದೇ
ಪತಿತನಾದೆನು ನಿನ್ನ ಪಾದಾಂಬುಜ ಯುಗಲದಲ್ಲಿ ॥ ॥೧೨॥

ಯಾರು ನಾನೆಂದೆಷ್ಟು ಹುಡುಕಿದ
ರಾರುಭಟಿಸಿದರೂ ಪ್ರಯೋಜನ
ತೋರದೋ ಪರಮಾತ್ಮ ನನ್ನ ರಹಸ್ಯ ನಿನ್ನೊಳಗೇ ।
ಸೇರಿಕೊಂಡಿದೆಯೆನಿಸುತಿದೆ ದು–

ವಾರ್ಯ ಮಾಯಾವಿದ್ಯನೇ ನೀ
ನಾರು? ನಿನಗೇತಕ್ಕೆ ದಯೆ ಬಾರದು? ವಿಲಪಿಸಿದರೂ ॥ ॥೧೩॥

ಬೇರ ಹರಿದೊಗೆವೊಡೆ ವಿಕಾರಗ–
ಳಾರುಮರಗಳ ಶಕ್ತಿ ಸಾಲದು
ತಾರಕಾಸುರನನ್ನು ಮಿರಿಸಿದಂಥ ಮಾನಸದ ।
ಕಾರಭಾರವಸಹ್ಯನೆನಿಸಿದೆ
ಶೂರತನ ನನಗಿಲ್ಲದಾಗಿದೆ
ನೀರಜಾಕ್ಷ ನಿರೀಕ್ಷಿಸುತ್ತಿದೆ ನಿನ್ನ ಬರವನ್ನು ॥ ॥೧೪॥

ಕೋಟಿಗಟ್ಟಲೆ ಮಿದುಳುಗಳು ಕೊ–
ಟ್ಟೇಟುಗಳ ತಿನ್ನುತ್ತ ಮಾನಸ
ಮಾಟಕೊಳಗಾದಂತೆ ಬಿದ್ದಿದೆ ಭಯದಿ ನಡುಗುತ್ತ ।
ಆಟನೋಡುತ್ತಿರುವೆಯೇ? ಯೋ–
ಗಾಟವಿಕ ನಿರ್ದಯತೆಯನು ಬಿಡು
ಭೇಟಿ ನೀಡೀಯೆದೆಗೆ ಶೀಲಾದಿತ್ಯ ಶಿವರೂಪ ॥ ॥೧೫॥

ನಾಕ ನರಕಾನುಭವಗಳನ್ನೀ
ಲೋಕದಲ್ಲೇ ತೋರಿಸಿದ ಮಾ–
ಯಾ ಕಲಾಪವ ನಿಲ್ಲಿಸುವ ಬಲ ನಿನಗೆ ಮಾತ್ರವಿದೆ
ಕಾಕದಂತಗವೇಷಣ ವ್ರತ
ಸಾಕು ನನಗೆನ್ನಿಸಿದೆ ದೇವ ಮ–
ಯೂಖ ಬರಲೆನ್ನೆಡೆಗೆ ನಿನ್ನ ಜ್ಞಾನದಿನಕರನ ॥ ॥೧೬॥

ಯೋಗಗಳು ಕರಕಷ್ಟ ತಾಪಸ–
ನಾಗುವುದು ಕಷ್ಟಕರ ಧೇನಿಸ–
ಲಾಗದೋ ನಿನ್ನನ್ನು ಚಿತ್ತದ ಚಂಚಲತೆಯಿಂದ ।
ಮಾಗದಿದೆ ಮಾನಸ ಮನೋಹರ–
ನಾಗು ಬೇಗ ಮಹಾಮಹಿಮ ಭವ–
ರೋಗವೆನಿಸಿದೆ ಚಿತ್ರಹಿಂಸಾನುಭವಗಣದಿಂದ ॥ ॥೧೭॥

ಆಸೆಗಳ ಕೊಲ್ಲಲು ನಿರಾಶಾ
ಪಾಶ ಯತ್ನಿಸಿ ಸೋತು ಹೋಗಿದೆ
ದೇಶದಲ್ಲಿಹ ಕೊಳಚೆದಾಣಗಳೆದ್ದು ಕಾಣುತಿವೆ
ಮಾಸದಾಗಿದೆ ಚಿತ್ರ ದುರ್ಜನ

ದಾಸೆ ಫಲಿಸುತ್ತಿರುವ ಮನದಲಿ
ಶೋಷ್ಯ–ಶೋಷಕರೆಲ್ಲರೂ ಸಮರಾದರೇ ನಿನಗೆ ॥ ॥೧೮॥

ಕರ್ತ ನೀನಲ್ಲೆಂಬೆ ಬೇರೆಯ
ಕರ್ತ ಕಾಣಿಸನೇ ಜಗತ್ತಿಗೆ
ಸುತ್ತುಸುತ್ತಿನ ಮಾತುಗಳನಾಡಿರುವೆ ಗೀತೆಯಲಿ।
ಶಕ್ತಿ ಶಕ್ತಿಮತೋರಭೇದಃ
ಶಕ್ತರಗ್ರೇಸರನೆ ನೀನೇ
ಯುಕ್ತಿಯಿಂದೆನಗೊರೆದೆಯೇವೆನದೇವೆನಿದ ಕೇಳಿ ॥ ॥೧೯॥

ನಿನ್ನ ಪದತಲದಲ್ಲಿ ಹೊರಳಲಿ
ನನ್ನ ತಲೆಯೆಂದಾಶಿಸುವುದನು
ಬಿನ್ನವಿಪೆ ಬಿಡಲಾರೆ ಮುಚ್ಚಿಡಲಾರೆ ನಿನ್ನಿಂದ ।
ಸನ್ಯಸಿಸಲೂಬಾರದೆಲ್ಲವ
ನಿನ್ನ ಬಿಟ್ಟನ್ಯರನು ಭಜಿಸುವ
ಸಣ್ಣತನದಾಲೋಚನೆಗಳನು ದೂರಸರಿಸೆನ್ನ ॥ ॥೨೦॥

ಅಣ್ಣ ನೀನರಿತವರನಾತ್ಮವ
ಕಣ್ಣು ನೀ ಮೂರನೆಯ ರುದ್ರನ
ಮಣ್ಣುಮುಕ್ಕಿಸಲೀ ಷಡರಿಗಳ ಸುಟ್ಟು ಬೊಟ್ಟೆಟ್ಟು।
ಎನ್ನಿಸಿದೆಯದರಿಂದಲೇ ನಿ–
ನ್ನನ್ನೆ ತಲೆಗಾಪಿಂಗೆ ಕರೆವೇನು
ಮನ್ನಿಸೆಲ್ಲಾ ತಪ್ಪನೆಂಬಧಿಕಾರವೆನಗೀಯೆ॥ ॥೨೧॥

ಕೊಡಲು ನೀನಿರಬಹುದು ಬೇಡುವ
ನುಡಿನಡೆಗಳೌಚಿತ್ಯವೆಲ್ಲವ
ಬಿಡಿಸಿ ಹೇಳುವ ಮಾಡಿಸುವ ಕರ್ತೃತ್ವನಿನ್ನದಲಾ।
ಅಡವಿಗನು ಸಾಧನೆಯ ನಾಡಿನ
ಮಡಿ ಮತಾಚಾರಗಳನರಿಯದ
ಬಡವ ಮಾಡೆ ಮನೋಬಲವನೂ ಪಡೆಯದಾಗಿಹೆನು॥ ॥೨೨॥

ಚಿಂತಿಸಿದೆ ಚಿಂತಿಸಿದೆ ಚಿಂತಿಸ–
ಲಿಂತು ಪರಿಪರಿಯಿಂದ ತೋರಿದ–
ಚಿಂತ್ಯತೆಯ ನಿನ್ನಮಲತಮ ಲೀಲಾವಿನೋದಗಳ।
ಪಂಥದ ಪ್ರಭು ಕಾರಣವನ–

ತ್ಯಂತಗೂಢ ಪ್ರಕಟವಾಗಪ–
ರಾಂತ ನಿಕಟಸ್ಥಲಕೆ ಬಿದ್ದುಸಿರಾಡುವೀಯನಗೆ ॥ ॥೨೩॥

ಕಲ್ಪಿಸಲು ಬಾರದ ಮಹಾತ್ಮನ–
ನಲ್ಪಿಸುವುರಿತಿಮಿತಿಗಳೊಳಗಿ–
ಟ್ಟಲ್ಪಮತಿ ಬಣ್ಣಿಸಲು ಹೊರಟರೆ ನನ್ನ ಹಾಗೀಗ।
ಶಿಲ್ಪಿ ನೀನೇ ನನ್ನ ಕಡೆದಿಹ
ಕಲ್ಪನಾಬಲವಿತ್ತು ಕಳುಹಿದ–
ರಲ್ಪವಾಯ್ತಾ ಬಲ ತಿರುಗಿನಿನಗರ್ಪಿಸುವೆನದನು॥ ॥೨೪॥

ಸದಸದಾತ್ಮಕವಾದ ಜೀವನ–
ವಿದರೊಳಾವನು ಸತ್ತನೊಂದನೆ–
ಹುದುಗಿರುವುದೆಂದರಸಿಗೆದ್ದಾನಯ್ಯ ಗುರುರಾಯ।
ಸದಸದೆರಡೂ ತೋರಿಯಡಗುವ
ವಿಧಿಗೆ ಬದ್ಧವವೆರಡ ಮಿಾರಿದ
ಚದುರ ನೀನೊಬ್ಬಾತನೇ ನಿನ್ನೊಳಗಿರಿಸೊ ಈ ಎನ್ನ॥ ॥೨೫॥

ತೋರಿಯಡಗುವುದಷ್ಟನೇ ಕಂ–
ಡಾರಿಗೂ ನೀನೂಹ್ಯನಲ್ಲ ವಿ–
ಚಾರಕೆಟುಕದ ನಿತ್ಯಸತ್ಯನೆ ಬದಲದಿಹಬಲವೇ।
ಚಾರನೆಂದೂಳಿಗವನಿತ್ತಿಹೆ
ತೋರಿಯಡಗುವ ಜಗದೊಳದಕಾ–
ಧಾರನಾಗಿರುವುದರಿಂದೇ ನಿನಗೆ ಶರಣೆಂಬೆ॥ ॥೨೬॥

ಅಖಿಲಬಲನೀಯೆನಗೆ ನೀನೇ
ಸಕಲಪುಣ್ಯಾಧಿಕ ಪರಾತ್ಪರ
ಭಕುತಿಯುತ್ಸಾಹಕ್ಕೆ ಕಾರಣ ನನ್ನತನವನ್ನೇ।
ಯುಕುತಿಯಿಂ ಮರೆಯಿಸಿ ವಿಸರ್ಜಿಸಿ
ಶಕುತಿಯಿಂ ಸ್ವಾತ್ಮೈಕ್ಯಗೊಳಿಸಿಕೊ
ನಿಕಟದೂರತ್ವಗಳ ದೂರೀಕರಿಸಿ ಸತತ ಗುರೋ॥ ॥೨೭॥

ಸಾಕುಸಾಕೀಲಘುತೆಯಿಲ್ಲಿಹ
ಸೂಕರತೆ ನಿರ್ಮಾಲ್ಯದಂತಿದು
ಸೋಕದಿರಲೆಂದೆಂದಿಗೂ ಶರಣಾಗತರ ಕಡೆಗೆ।
ಮೂಕವಿಸ್ಮಯಕರ ಮಹಾ ನಿ–

ರ್ಮೋಕದಂತಹ ಬಂಧನವ ನಿ–
ರ್ವ್ಯಾಕುಲದೆ ಬಿಟ್ಟೆಯ್ದುವುದು ನಿನ್ನೊಳಗೆ ಗುರುದೇವ॥ ॥೨೮॥

ಕೇಳಿ ನಿನ್ನ ವಿಭೂತಿಯನು ಮೈ
ದಾಳಿ ಭಕ್ತ್ಯಾವೇಶದಿಂದ ಸು–
ರಾಳಿ ಕೂಡಾ ಕೀರ್ತಿಸಿ ಸ್ಮರಿಸೀತು ಸೇವಿಸುತ।
ಬಾಳೊಳರ್ಚಿಸಿ ನಮಿಸಿ ದಾಸ್ಯವ–
ನಾಳಿ ಸಖ್ಯವ ಬೆಳೆಸಿ ನಿನ್ನೊಳು
ಹೂಳಿ ಹೋಗಲು ಬಯಸಿ ಗೆಲ್ಲುಗು ರಮಣಋಷಿರಾಜ॥ ॥೨೯॥

ಸರ್ವಭೇದಾತೀತ ಮೋದದ
ಚರ್ವಣ ಸ್ಥಿತಿಯಾದ ಗುರುವೇ
ದುರ್ವಿಚಾರದೆ ದೂರವಿರಿಸೆನ್ನನು ದಯಾಸಿಂಧೋ।
ಉರ್ವಿಗುರ್ವಿಯೆ ನಿನ್ನೊಳೈಕ್ಯವ
ಚರ್ವಿಸಲಿ ಸಹಜಾಭಿರಾಮನೆ
ನಿರ್ವಿಕಲ್ಪ ಸಮಾಧಿಯರಸನೆ ದೇವದೇವಧುರ॥ ೩೦॥

ಅಚ್ಚರಿಗೆ ನೀನಚ್ಚರಿ ಕಣಾ
ವೆಚ್ಚಮಾಡುವ ಹಾಗೆ ತೋರಿಸಿ
ವೆಚ್ಚಮಾಡದೆ ನಿನ್ನನೀನವತಾರ ಕೋಟಿಯಲಿ।
ಉಚ್ಚ ನೀಚಗುಣಂಗಳಿಗೆ ಮೈ
ಹಚ್ಚಿ ತಿರುಗುವೆವೆಂಬ ಭಾವದ
ಹುಚ್ಚ ಹಿಡಿಸುವೆಯೇತಕೋ ನಾಕಾಣೆ ಜಗದೀಶ॥ ॥೩೧॥

ಹಿಡಿಸಿದೀಹುಚ್ಚನ್ನು ಬಿಡಿಸಲು
ಮೃಡನೆ ನೀನೆ ಜಲಾಪಭೇಷಜ
ಕಡಿದರೂ ಹೋಗದಿದು ಕತ್ತಿಯನ್ನೆತ್ತಿ ಕೈಯಿಂದ।
ದೃಢತೆ ನಿನಗೋ ಇದಕೊ ತಿಳಿಯದು
ಕಡೆದರೂ ಮಾನಸದಿ ಮತಿಯ–
ನ್ನೊಡೆದರೂ ಹೃದಯವನು ಕಟ್ಟುಗ್ರಾವಹತಿಯಿಂದ॥ ॥೩೨॥

ನೋಡಿಯೂ ಸುಮ್ಮನಿಹ ಸಾಕ್ಷಿಯ
ಮಾಡಿಯೂ ಹೊಣೆಹೊರದ ಕರ್ತನ
ಬೇಡಿಯೂ ಬರಿಗೈಯ ಹೊತ್ತೇ ತಿರುಗಿಸುವ ಗುರುವು ।
ಹೇಡಿಗಳ ತರಬೇತಿಗಾಗಿಯೆ

ಮಾಡಿರುವ ಹಂಚಿಕೆಯೆ ಸರಿ, ಕೊಂ–
ಡಾಡುವೆನು ಕೃಪೆಯನ್ನು ಗುರುವಿನ ಭಕ್ತವತ್ಸಲನ॥ ॥೩೩॥

ಎಂಟುಗೇಣಿನ ದೇಹದಲಿ ನೂ–
ರೆಂಟು ಕಟ್ಟುಗಳನ್ನು ಕಟ್ಟಿ ಮು–
ರುಂಟಿ ತಾನೇಕುಳಿತು ಚೈತನ್ಯಸ್ವರೂಪದಲಿ।
ಪಂಟುಹೊಡೆಸಿಯಹಮ್ಮಿನಿಂದ ಸ–
ಕಂಟಕವನದ ಮಾಡಿ ದಣಿಸುವ
ನಂಟು ನಂಟೇ ಹೇಳು ಸಕಲಧ್ಯೇಯ ಗುರುರಾಯ॥ ॥೩೪॥

ಏನನೂ ಹೇಳದಿರಯ್ಯ ಹೇಳಿದ–
ರೇನು ತಿಳಿಯುವುದೇ ನನಗೆ ನಾ–
ನಾನಿದಲ್ಲವಿದಲ್ಲ ತೀರಾ ಕ್ಷಣಿಕವಾಗಿರುವ।
ಮಾನವತ್ವದ ಬೇನೆ ಸಾಕು ಕೃ–
ಪಾಣವಾಗಿದಕಡಿದು ದಿವ್ಯ
ಧ್ಯಾನಮಯನನ್ನಾಗಿ ಮಾಡೆಂದರಚಿಕೊಳ್ಳುವೆನು॥ ॥೩೫॥

ಜೀವನಖಂಡ ೨

ನಂಬದಿರಾಗದಾಯ್ತು ಕಡುನಂಬಿದರಾಯ್ತನುಭೂತಿ ಮೋಸದ
ಶಂಬರ ವೈರಿ ಸನ್ನುತ ಸದಾಶಿವ ಮಾನವಜೀವಿಯಂ ನಿರಾ–
ಲಂಬತೆಯಿಂದ ಬಾಳುವುದಸಾಧ್ಯ ನರಂಗೆ ನರಾಧಿನಾಯಕ
ಪಂಬಲಪೂರ್ಣಮಿಾತಗೆ ಮಹರ್ಷಿ ಮಹೋದಯನ ಪ್ರಭಾವದ॥ ॥೧॥

ದೇಹದೊಳಿಕ್ಕಿ ಸೊಕ್ಕಿಸಿಸತಾಯಿಸಿ ಜೀವಮನೀ ವಿಸೃಷ್ಟಿ ಯೊಳ್
ಮೋಹಮದಾದಿಯಿಂದೆರೆದು ಮದ್ದನಭಾವವಿರಕ್ತಿಗೀಡುಗೈ
ದಾಹಿತವಿಘ್ನನಂ ವಿಹಿತಕರ್ಮವಿಚಾರವಿಹೀನನಂ ನಿರು–
ತ್ಸಾಹದೊಳಿದ್ದಿ ಸಾಯಿಸದೆ ಸಾಯಿಸಲೇತಕೆ ವಿಶ್ವ ಕಾರಣಾ॥ ॥೨॥

ಕಾರಣಕಾರ್ಯಚಕ್ರದಡಿಯೊಳ್ ತುಳಿತಕ್ಕೆಡೆಯೀವ ಬುದ್ಧಿಯಂ
ತೂರಿದೆ ಮಂಡೆಯೊಳ್ ಮುಸಲದಿಂದೆನೆ ಜೀವನ ಲಬ್ಧಜೀವನಂ।
ಮಾರಕವಾಯ್ತದೇ ಸರಳ ಮುಕ್ತಿಯ ಸಾಧನೆಗೇವೆನಾಯಣಮಾ–
ಧಾರ ಜಗತ್ತಿನೀ ನಿನಗೆ ಜನ್ಮಶತಾಗತವಾಸನಾಗಣಂ॥ ॥೩॥

ಭೂತದ ವರ್ತಮಾನದ ಭವಿಷ್ಯದ ಭೋಗ್ಯಗಳಾವುಮಂ ಜಗ–
ನ್ನಾಥ ಮಮೇತಿ ನಂಬೆನಪಹಾಸ್ಯಮಿದೆಲ್ಲಮವರ್ಣನೀಯ ಮ–
ಪ್ರಾರ್ಥಿತಮಾಗಿ ನೀನೆರೆದೆಗಂಟಲೊಳೆನ್ನತನಕ್ಕೆ ಮಿಾಸಲಿ–
ಟ್ಟಾರ್ತನನೆನ್ನನೀಶ್ವರಭಿದಾವಿಲನಂ ರಿಪುರಜ್ಜುಬದ್ಧನಂ॥ ॥೪॥

ವ್ಯಾಪೃತೆ ಸಾಕು ಸೋಲಿಸಲು ಮಾನವಜೀವಿಯನಾವಗಂ ಸ್ಪೃಹಾ
ಚಾಪಲನಂ ನಿಸರ್ಗಮಿತಶಕ್ತ್ಯನಭಿಜ್ಞನನಪ್ರಮೇಯ ಸದ್–
ರೂಪ ವಿರೂಪನಂ ವಿವಿಧ ನಾಮ ಪತಾಕನನೀರಿತಾಕ್ಷನಂ
ಕೋಪವಿಲಾಪನಮ್ಯನದೃಷ್ಟದ ದಾಸನನೂಹನೀಯನಂ॥ ॥೫॥

ಅಚ್ಯುತನೆಂದು ನಂಬದೆನಗನ್ಯವಿಕಲ್ಪಮೆತೋರದಾಯ್ತು ಕೇ–
ಳಚ್ಛಪರಾತ್ಮನಂ ಪ್ರಣವ ನಿನ್ನನಪಾರಕೃಪಾಸಮುದ್ರನಂ।
ಪ್ರಚ್ಯುತನಾದೆನೆಂದು ಪದಪಂಕಜಯುಗ್ಮದಿನಯ್ಯ ನಿನ್ನ ಮೇ–
ಣಚ್ಚರಿಯಾಯ್ತುದಾವ ವಿಧಿಯಿಂದಮನಂತಚಿದುತ್ತಮೊತ್ತಮ॥ ॥೬॥

ನೀಂ ಪರನಾದೆಯೆಂತು ನನಗಾಂಪರನೆಂತರುಣಾಚಲೇಶ್ವರ
ಸಾಂಪ್ರತಮದ್ಭುತಂ ನಿನಗೆ ಯಾರಿವನೀಪರಿಕೇಳ್ವ ಜೀವಿ ನೈ
ಳಿಂಪದೃಗವ್ಯಯ ಪ್ರಣತಪಾಲ ಪರಾಪರಭೇದವುಂಟೆ ಪಾ–
ರಂಪರಿಕರ್ಗೆ ನಿನ್ನ ನಿರುಪಾಧಿಕ ಭಾವದೊಳಾಶುವಿಕ್ರಮ॥ ॥೭॥

ಉಪಧಿಗಳಾಗಿ ಕಾಡಿದವುಪಾಧಿಗಳಿಂದುಮದೇಪ್ರಕಾರದಿಂ
ಚಪಲಚರಾಚರಂಗಳಳಿಬಾಳಿನ ತಾಳ್ಮೆಯನಡ್ಡಗಟ್ಟೆ ನೀನ್।
ಉಪಲತೆಯಿಂ ಪೊದಳ್ದು ನಿಲುನಿಲ್ ಜಡಬಾಧೆಯ ಬಲ್ಮೆಯಲ್ಪವೇಂ
ಲಪಿಸುವೆಯೇತಕೆಂದುಸಿರ್ದು ಬಾಧಿಪುದಾರೊ ಕೃತಾಂತಕಾಂತಕ॥ ॥೮॥

ಯಾಂತ್ರಿಕ ವೈದಿಕತ್ವದ ಪರಂಪರೆಯಾಗ್ರಹದಿಂದೆ ಮುಕ್ತಿಯ
ಪ್ರಾಂತವನಾಂತೆನಾದೊಡೆ ವಿನೂತನ ದುರ್ವ್ಯವಾಹಾರನೀತಿಯಿಂ ।
ಶ್ರಾಂತಿಯೊಳಳ್ದಿದೆಂ ಸಹಚರರ್ಕಗಳ ಷಡ್ರಿಪುಸೇನೆ ಸುತ್ತಿತೋ–
ರಂತೆ ಮಹಾಪ್ರಭೋ ಸಲಹು ಶಂಕರ ಜಂಬುಕತಂತ್ರಜಾಲದಿಂ॥ ॥೯॥

ಸತ್ ಕೃತಿಯಿಂದೆ ದುರ್ಗತಿಯನೈದಿದೆನೇನಿದು ಬಾಳಬಟ್ಟೆಯೊಳ್
ಸತ್ಯಕೆ ಸಾವೆ? ಲೋಕವಿಹಿತಾವಿಹಿತಂಗಳ ನಾಂ ವಿವೇಚಿಸಲ್ ।
ಶಕ್ತನೆ? ಷಡ್ರಿಪುಗ್ರಥಿತ ಮಾನಸಮೆಂತಮಲತ್ವಕೇರ್ಗುಮಾ–
ರಕ್ತಗಿರೀಂದ್ರಲಿಂಗ ರಮಣಾಂಕಿತ ಭಕ್ತನಳಲ್ ಸುಪೇಯಮೇ?॥ ॥೧೦॥

ಅತ್ತೊಡೆ ಮಾತ್ರಮೇಂ ಭಕುತಿ ಪಕ್ವಮೆ, ಭೀಮನಳಲ್ದನೇ ಶಿವ?
ದುಃಖಕೆ ಬಾಗದಾತನ ಸಮರ್ಪಣ ಶಕ್ತಿ ಕಲಂಕಮಕ್ಕೆ? ನಿರ್–
ವಿತ್ತನ ದಾನಕೇಂ ಬೆಲೆಯೆ ಇಲ್ಲವೆ ನೋಳ್ಪೆಯದೇನನೀಶ್ವರ
ಪಕ್ಕಕೆ ನಿಂತು ಮಾಯೆಯಪರಾಧಗಳಂ ಕೆಡೆದೊಕ್ಕಲಿಕ್ಕದೆ?॥ ॥೧೧॥

ಬಾಗಿದೆನಾಗಿ ಜಾಠರತೆಯಿಂ ಧನಹೀನತೆಯಿಂ ಸುದುರ್ಬಲಂ
ಲೋಗರೊಳುರ್ಕಿ ಸೊರ್ಕಿ ಮೆರೆವಲ್ಪರಿದಿರ್ ಪ್ರಕೃತಿಪ್ರಭಾವದಿಂ।
ಗೋಗರೆದೆಂ ಮಹಾಗುರು ಮರುಳ್ವಿಡಿದೀವರೆಗಂ ಸಸಂಶಯಂ
ಭಾಗವತತ್ವಕೇರದೆ ಮಹಾಕ್ಷಮಿನಾಂವರ ರಕ್ಷರಕ್ಷಮಾಂ॥ ॥೧೨॥

ಭೇದಿಗೆ ಕೊಟ್ಟವೊಲ್ ಪೊರಮಡುತ್ತಿವೆ ನುಂಗಿದ ಕಷ್ಟನಷ್ಟಗಳ್
ವಾದಿಭಯಂಕರತ್ವದೆ ದಯಾಘನ ಮಾತಿನ ರೂಪದಿಂದ ನಿರ್–
ವೇದಮನಟ್ಟಿ ದೂರಕೆ ಧರಾಧರ ಧೈರ್ಯದೆ ನಿಂತೆನಿಂದು ದುರ್–
ವ್ಯಾಧರ್ಸದೃಕ್ಷರಂ ಸಹಿಸದಿರ್ಪುದೆ ಧರ್ಮಮೆನಿಕ್ಕುಮಿಾಶ್ವರ॥ ॥೧೩॥

ಪಥ್ಯಮಪಥ್ಯಮೆಂದುಸಿರ್ವ ವೈದ್ಯರ ಜಾಠರತಂತ್ರದಿಂದೆ ನಿರ್–
ಮತ್ಸರ ಭಾವಮಂ ತೆಗಳ್ದ ಮಚ್ಚರಮೆಂದುಪಜೀವಿಸಿರ್ಪ ದುರ್–
ವಿತ್ತರ ಮರ್ದನಕ್ಕೆನಗನುಜ್ಞೆಯನಿತ್ತೆಯದೇ ಪ್ರಕಾರದಿಂ
ಸತ್ತ್ವನಿಂದ ಮಾಡಿಸುವ ಶಕ್ತಿಯನೀವುದು ಕಾರ್ಯಮಂ ಶಿವ॥ ॥೧೪॥

ಕತ್ತೆಯನೊಂದು ರಾಜ್ಯದೊಳಧೀಶ್ವರರಾಜ್ಞೆಯನಿತ್ತು ಕೊಲ್ಲಿಸಲ್
ಹತ್ಯೆಯ ಧರ್ಮಮಂಪಿಡಿದರಂತೆ ಸುರಕ್ಷಿತಮಾಗಿಡಲ್ ಬುಭು–
ಕ್ಷತ್ವಕೆ ಪಾತ್ರಮಾದಿತರ ಜೀವಿಗಳಂ ನರರರ್ಥಸಿದ್ಧಿಯೀ
ತತ್ವಮೆ ಧರ್ಮಮಕ್ಕು ತನುಭಾಂಡಗತರ್ಗೆ ನಿಸರ್ಗಮಕ್ಷರಂ ॥ ॥೧೫॥

ಸಾಧ್ಯಮೆ ಸರ್ವದೇಹಿತೆಯ ಮಿಾರಲು ಜೀವಿಸಿರಲ್ ನಿಸರ್ಗದಿಂ
ಬಾಧಿತನಾದ ಜೀವಿಗೆ ವಿರಾಗಮೆ ಕಂಟಕಮಪ್ಪುದುಂಟು ಭಿ–
ಕ್ಷಾಧೃತನಾದವಂಗಮೊಸೆದೀಯದಿರಲ್ ಗೃಹಿಗಳ ಕದನ್ನದಾ–
ದಾನದೆ ರೋಗಮುಲ್ಬಣಿಸಲಲ್ಲಿಯೆ ಬಿದ್ದಸುನೀಗಬೇಕಲಾ॥ ॥೧೬॥

ಪ್ರಾಣಮೆ ದುರ್ಬಲತ್ವಕೆಡೆಮಾಡುಗು ನಿನ್ನಕೃಪಾವಲೋಕನಂ
ಮಾಣದೆ ಕಾಯ್ದುಮೆಂಬುದಪನಂಬುಗೆಗಾಕರಮಾಯ್ತು ಪಾಪಮಂ।
ಕಾಣದ ಕಾಗೆಗೂಗೆಗಳಿಗುಂ ರಿಪುಭೀತ್ಯುಪವಾಸನಾಶಗಳ್
ಪ್ರಾಣಿತೆಯಿಂದಲೇ ಬರುವುದೆಂದೆನೆ ಮಾನಿಸನೇನನೆಂಬನಾಃ॥ ॥೧೭॥

ನಿನ್ನ ವಿಭೂತಿ ನಿರ್ಮಿಸಿದ ಮಾಯೆಯ ಗೆಲ್ವವನಾವನಯ್ಯ ನಿ–

ನ್ನನ್ಯತೆಯಿಂದ ಬಾಧೆಗಳನೇಕಮುಗುರ್ವಿಸುತಿರ್ಪವಾವಗಂ।
ಅನ್ನೆಯಮಲ್ತೆ ಮಾನಿಸಗೆ ಮಾನಸದನ್ಯತೆಯಂ ತೊಡರ್ಚಿ ನೀ
ಧನ್ಯತೆಯೊಳ್ ಮುಳುಗಿಹುದು ಯೋಗಸಮಾಧಿ ಸಮೃದ್ಧನಾಗಿಯೇ॥ ॥೧೮॥

ಜಾಲಮನ್ನೆತ್ತಿನೂಂಕಿ ನೊಣಮಂಪಿಡಿದುಂಬತಿಜಾಣ ಜೇಡನಂ
ಪೋಲುವ ನೀತಿ ನೀತಿಯೆ? ನಿಸರ್ಗಕುಚೇಷ್ಟೆಯನೇಕವಾಗಿದೆ।
ಕಾಲಗೆ ಕಾಲನಾದ ಶಿವ ನೀಂ ಮುನಿಯಲ್ ಪ್ರಕೃತಿ ಪ್ರಭಾವಮಂ
ಕೆಳ್ವವರಾರ್ ನಿಸರ್ಗಪತಿ ನೀನೆ ನಿರಂತರಮಾಗಿಸಾಗುವ॥ ॥೧೯॥

ನಿನ್ನನೆ ನೋಡಿ ನೋಡಿ ವರಮಂತ್ರಿಗಳುಂ ಪರಬುದ್ಧಿಯಿಂ ಜನಂ
ತನ್ನೊಳಗೇ ತಗುಳ್ದು ಕೊಲೆಗೆಯ್ದೊಡಮಿಪ್ರಜೆಗಳ್ ಮತಂಗಳಂ
ತಣ್ಣಗೆ ಕೊಟ್ಟರಾಯ್ತಿವರನೇಂ ಪರಿಪಾಲಿಸಲಾವು ಬಾಧ್ಯರೇ?
ಎನ್ನುವುದೀ ದಿನಂಗಳೊಳದೇಂ ಕರಮಚ್ಚರಿಯೇ ಗುಹೇಶ್ವರ॥ ॥೨೦॥

ಕರ್ತೃತೆ–ಭೋಕ್ತೃತಾದಿಗಳನಂಟಿಸಿಕೊಳ್ಳದ ಮುಕ್ತನೆಂದು ನೀಂ
ಭರ್ತನೆ ಗೀತೆಯೊಳ್ ಬರಿದೆ ಪೇಳಿದೆಯೇಂ ಪರಮಾತ್ಮನಾಗಿ ನಿಷ್
ಕರ್ತೃಗೆ ಭೋಗಮಂ ಕುಡುವೆಯಲ್ಪನಿಗೆ ಪ್ರಕೃತಿ ಪ್ರಣೇಯಗೆಂ–
ಬರ್ಥಕೆ ಬಾಧೆಯುಂಟೆ? ಮರುಳ್ಮಾಡಿದೆಪಾರ್ಥನನಂದು "ಶಂಬಿಸಿ"॥ ॥೨೧॥

ಮಾತಿಗೆ ಮಾತು ಟೀಕೆ ನುತಿನಿಂದೆ ಮನುಷ್ಯರ ಮಾತಿಗಿರ್ಕುಮೀ
ಕೋತಿಜಗತ್ತಿನೊಳ್ ಪರಮಪಾವನ ನಿರ್ಮಿಸಿ ಕಾಯಲಾಗದೆ।
ಸೋತವತಾರಮಂ ಬಿಸುಟು ಪೋದೆ ಪಲಾಯನವಾದಮೆಂದು ನೀ–
ನೋತುಸಿರ್ದೀಶ್ವರತ್ವಮಪಹಾಸ್ಯಕೆ ಪಾತ್ರಮದಾಯ್ತು ನೋಡೆಯಾ॥ ॥೨೨॥

ಆಮರಣಂ ಮನುಷ್ಯನವತಾರಿಯೆ ಗಾಂಧಿಯುಸಿರ್ದರೀತಿಯಿಂ
ಮಾಮರನಾದೊಡಂ ಮುನಿಕುಲೇಶ್ವರನಾದೊಡಮಂತ್ಯಕಾಲದೊಳ್।
ಬೇನೆಯನಾಂತು ಸಾಯದಿರನೊಂದು ಚಣಂ ಜಾತದೇಹವಾಸಿ ತಾ–
ನೂನನೆ ಅಲ್ಲ ಬೊಮ್ಮನೆನುತಿರ್ದೊಡೆಯುಂ ನಿರುಪಾಧಿಭಾವದೊಳ್॥ ॥೨೩॥

ಬಲ್ಲವನೆಲ್ಲಮಂ ಗುರು ಮೃತತ್ವದ ಭಾವದರೆಕ್ಷಣಂ ಸಕೃತ್
ಕ್ಷುಲ್ಲಕಮೆಂದೊಡಂ ಕಡೆಗೆ ಮೇಣ್ ಮೊದಲಾರ್ತತೆಯಂಟಿಕೊಂಡಿರಲ್।
ಅಲ್ಲಮಿದಲ್ಲ ಸಾವೆನಗೆತಾಗದು ದೇಹಕಿದೆಲ್ಲಮೆಂದೊಡಂ
ಪಲ್ಲಟಮಕ್ಕೆ ಮರ್ತ್ಯತೆ ಮಹಾತ್ಮನಿಗಂ ಬಿಡುವಾಗ ದೇಹಮಂ ॥ ॥೨೪॥

ವಿಸ್ಮೃತಿಯೆಲ್ಲಬಲ್ಲವನಿಗಿಲ್ಲಮದಿರ್ದೊಡನಾತನೆಂತು ತಾಂ
ಜನ್ಮಕೆ ಬಂದವಂ ಮನುಜರೂಪದಿನೆಲ್ಲಮನೆಂತು ಬಲ್ಲೆನೆಂ–

ದುಣ್ಮವನಾಂತು ದೇಹಮನತೀಂದ್ರಿಯ ಶಕ್ತಿಯನುಳ್ಳೊಡಂ ಗುರೋ
ಮತಿಪ್ರದ ಮಾನವರ್ಗೆ
ಸನ್ಮತಿದೋರಿದ್ದೈ ತಳೆದು ಮೌನಮನಾವರಣಾರ್ಥದಟ್ಟಿರಲ್॥ ॥೨೫॥

ವ್ಯಾಹತಿಯಿಲ್ಲದಾವುದಿದೆ ತರ್ಕ ಮಹೋ ಗುರುಸಾರ್ವಭೌಮ? ಗಂ–
ಧಾವಹಮಲ್ಲದಿರ್ಪನಿಲನಿರ್ಪನೆ? ದೇವರ ದೇವನಾದೊಡಂ।
ಬಾಹುಸಹಸ್ರಮಂ ತಳೆದೊಡಂ ಜಗಮಂ ಸ್ವನಿಯಂತ್ರಣಕ್ಕೆ ತಂ–
ದೀವುದು ಸಾಧ್ಯಮೇ ನಿರತಮಾಶ್ರಿತವತ್ಸಲ ನೀನೆ ನೀನಲಾ॥ ॥೨೬॥

ಲೋಕಮಿದಿಲ್ಲಮೆಂಬನುಭವಾಮೃತಮೊಂದೆ ವಿಮುಕ್ತಿ ಲೋಕದಾ
ಲೋಕನದಿಂದೆ ಬಂಧದವಸ್ಥೆಯನೊಂದುವನೀನರಂ ಮಹಾ–
ಶೋಕಮಿದೆಂದು ಭಾವಿಸಿ ವಿರಕ್ತಿಯೊಳಿಳ್ದಿದಮೆಲ್ಲಮಂ ಬಿಡಲ್
ವ್ಯಾಕುಲಕಿಲ್ಲ ಬೀಜಮದೆ ವಿಸ್ಮೃತಿ ನಿತ್ಯತೆ ವಿಶ್ವವಿಷ್ಟರ॥ ॥೨೭॥

ತದಹಮಿದಲ್ಲ ಮಿಲ್ಲಮಿದಸತ್ಯಮನೂಹ್ಯಪರಂಪರಾಗತಂ
ದಧಿಘೃತಭಕ್ಷಪಾಯಸಗಳೆಲ್ಲಮಪಥ್ಯಕರಂ ಮುಮುಕ್ಷುಗೆ।
ಕ್ಷುಧೆ ತೃಷೆ ಲಿಂಗಕಾಮಗಳ ತರ್ಪಣಕಂತಮೆ ಇಲ್ಲಮೆಂದಿರಲ್
ಪದುಳಮದೊಂದೆ ವಿಸ್ಮೃತಿ ವಿಕಾರ್ಯದ ವೇದದವಾದದಬ್ಧಿಯ॥ ॥೨೮॥

ಅದಿರದಿದಿರ್ಚಿ ಚಿಂತೆಗಳ ಸಂತತಿಯಂ ಬದಿಗೊತ್ತಿ ಚಿತ್ತಮಂ
ಸದಮಲತೇಜದೊಳ್ ನಿಲಿಸಿ ನಿನ್ನ ವಶಕ್ಕಿಳಿವಂತೆ ಮಾಡುವೀ
ಚದುರನಲಭ್ಯಮಂ ಲಭಿಸುವಂತೆಸಗಯ್ಯ ವಿರಾಗಚಕ್ರಿಯೇ
ಮಧುರತೆಯಿಂ ಪೊದಳ್ದು ಕೃಪೆ ಮಾಡರುಣಾಚಲ ಚಿಹ್ನ ಸೂಚ್ಯನೇ॥ ॥೨೯॥

ಅವರಿವರಂ ಪೊಗಳ್ದು ರಿಪುಷಟ್ಕದ ದಾಸರನಾಸೆಗಂಗಳಿಂ
ತವಕದೆ ನೋಳ್ಪ ದುಃಸ್ಥಿತಿಯನೆನ್ನ ಗುರೂತ್ತಮ ದೂರ ಮಾಡು ಮಾ–
ಧವ ವಿಧಿ ಶಂಕರರ್ಗಮತಿರಿಕ್ತನೆ ಸತ್ಯಕೆ ಸತ್ಯನಪ್ಪ ನಿರ್
ಭವ ನಿರುಪಾಧಿಕಶ್ರುತಮಹಾಮಹಿಮ ಪ್ರಭು ಸಾರ್ವಭೌಮನೇ॥ ॥೩೦॥

ಮತಿಯಧಿನಾಥ ಮಾನಸವಿನಾಶಕ ಸದ್ಗತಿದರ್ಶಕ ಪ್ರಜಾ–
ಪತಿನುತಪಾದಪಂಕಜನೆ ಪಾಮರಭಕ್ತನನೆನ್ನನೀಕ್ಷಿಸೋ।
ಶ್ರುತಿಶತಸೂಚಿತಾತ್ಮ ಶುಭದಾಯಕ ತರ್ಕಕರಾತಿರಿಕ್ತ ನಿರ್–
ವೃತ ನಿರಪೇಕ್ಷ ನಿಸ್ತುಲನಿರಾಮಯ ನಿತ್ಯ ನಿತಾಂತ ವತ್ಸಲ॥ ॥೩೧॥

ಕ್ಷರನನಮುಕ್ತನಂ ಸಕಲರೋಗನಿದಾನನನಳ್ತಿಯಿಂ ಪರಾ–
ತ್ಪರ ಪರಿತುಷ್ಟ ಪಾಲಿಸು ಪರಾನ್ನಕೆ ಬಿದ್ದ ಪರಾವಲಂಬಿಯಂ।

ದುರಿತವಿಪಾಕದಗ್ಧಮನನಂ ಶತವಾಸನಬದ್ಧನಂ ಗುರೋ
ಚರನನನಾಥನಂ ಕರಣಷಟ್ಕಸಮರ್ಪಣಶೀಲನಂ ವಿಭೋ॥ ॥೩೨॥

ಅರಿತಪದಂಗಳೆಲ್ಲಮತಿ ಶುಷ್ಕಮಜಾತನೆ ನಿನ್ನನೆಂತು ನಿರ್–
ಜ಼ರತಮ ಬಣ್ಣಿಪೆಂ ಪರಮಪಾವನ ನಿರ್ಗುಣ ನಿಷ್ಪ್ರಪಂಚ ನಿ–
ಷ್ಠುರತೆಯನಾಂತು ನಿಲ್ಲದಿರಿದೋ ಮಣಿದೆಂ ದಣಿದೆಂ ಶರೀರ ಭೃತ್–
ಕರುಣಿ ಕರಾವಲಂಬನನೆ ಕಾಯೊ ವಿಷಣ್ಣನನೆನ್ನನಾತ್ಮಭೂ॥ ॥೩೩॥

ಅಜ್ಞನನಲ್ಪನಂ ಶತಭಿದಾಹತನಂ ಶಿವಶಕ್ತಿಹೀನನಂ
ಕಜ್ಜದೊಳಿರ್ಪನಂ ಕ್ರಮವಿಮುಕ್ತಿಪದಾರ್ಹನನೆನ್ನನೀಶ್ವರ
ಬಿಜ್ಜೆಯನಿತ್ತು ಬಂಧಪರಿಹಾರದ ಭಾವಿಕನಂ ಬೃಹತ್ತಮ
ಸಜ್ಜನಸಂಗಭಾಗ್ಯದೆ ಕೃಪಾಕರ ಪಾಲಿಸು ಪರ್ವತಾಧಿಕ॥ ॥೩೪॥

ಬಂಧದ ಕಾರಣಂ ತಿಳಿಯದಾಯ್ತು ಮರುತ್ತಮನಾಗಿ ಬಂದು ನಿರ್–
ಬಂಧಿಸಿ ಮೋಕ್ಷಶತ್ರುಗಳನೆನ್ನೊಳಗಿರ್ಪ ಸುಕರ್ಮವೇತ್ತ ಸಂ
ಬಂಧಗಳಂ ವಿಶಾಲತಮಮಾಗಿಸಿ ಪೋಗಿಸಿ ಭಿನ್ನಭಾವಮಂ
ಚಂದ್ರಿಕೆಯಾಗಿ ಶಾಂತಿರಸಮಂ ಕುಡಿಸೋ ಪರಮಾದ್ಭುತಕ್ರತೋ॥ ೩೫॥

ಜಾತವೇದ ಖಂಡ ೩

ಸತ್ತದ್ದು ಮತ್ತೆ ಬದುಕದು ಬದುಕಿದುದನು ಹೆ–
ಗ್ಗತ್ತಿಯಿಂ ಕಡಿದರೂ ಸಾಯದೋ ದೇಹಕ್ಕೆ
ನಿತ್ಯತ್ವವೆಂದಿಗೂ ಬಾರದೋ ಪರಿವರ್ತನೀಯ ಕಣಗಳ ಕೂಟದ
ವ್ಯತ್ಯಾಸವೇ ಹುಟ್ಟು ಬಾಳು ಸಾವುಗಳು ಪಾ–
ವಿತ್ರ್ಯಾದಿ ಸುಗುಣ ಮಲಿನತ್ವಾದಿ ದುರ್ಗುಣ ವಿ–
ರಕ್ತ ನೈಸರ್ಗಿಕ ಜಡತ್ವವಶದಿಂದ ಜೀವಾತ್ಮನಿಂ ಭಿನ್ನವಾದ॥ ॥೧॥

ಸಾವು ನೋವುಗಳ ಸುಖಭೋಗಾದಿಗಳ ಕೇಂದ್ರ
ಜೀವವೇ ನಾಲ್ಕಾರುಪಾಧಿಭಾವಗಳಿಂದ
ತಾವೆನಿಸಿದಂಥ ಸಂವೇದನೆಗಳಿಗೆ ಬಾಹ್ಯವಸ್ತು ಸಂಪ್ರೇರ್ಯಮಾದ
ದೇವತ್ವದಿಂ ನೀನೆ ತೋರಗೊಟ್ಟಿರುವೆಯದ
ರಾವಯವಿಕತೆ ಭೂತಭಾಗಂಗಳಿದಾಯ್ತು
ಹಾವನಾಗಿಸಿದಂತೆ ಹಗ್ಗಮನನಿರ್ವಾಚ್ಯ ಮಾಯಾಪ್ರಯೋಗದಿಂದ॥ ॥೨॥

ಅಸ್ತಿಭಾತಿಗಳಿಂದ ನಾಮರೂಪಗಳಿಂದ
ವಸ್ತುಸಂಪ್ರೀತಿಯಿಂ ಜೀವಪುತ್ತಲಿಗಳಂ
ಸುತ್ತಿಸುತ್ತಿಹೆ ಜಗದ್ರಂಗದೊಳ್ ಕುಣಿಯಿಸುತ ನಾನಾಪ್ರಕಾರದಿಂದ
ಅತ್ತಕರ್ತೃತ್ವ ಮತ್ತಿತ್ತ ಭೋಕ್ತೃತ್ವ ಸಂ–
ಯುಕ್ತಮಾಗಿರೆ ಜೀವಗಳ್ ಸತತ ಸಾಪೇಕ್ಷ
ಸತ್ತೆಯನ್ನಪ್ಪಿ ನರಳಾಡುತಿವೆ ಲೀಲೆಯೋ ಚಿತ್ರಹಿಂಸೆಯೋ ಪೇಳ್ವರಾರ್॥ ॥೩॥

ಅತ್ಯಪೂರ್ಣತೆಯಲ್ಲಿ ತೃಪ್ತಿಯಂ ಹುಡುಕುತಿಹ
ಮರ್ತ್ಯಜೀವಾತ್ಮ ಮುಟ್ಠಾಳ ತಾನೆಂಬುದಂ
ಸತ್ತು ಹುಟ್ಟಿದರೂನು ಕೋಟಿಸಲ ತಿಳಿಯನೋ ತಿಳಿದರೂ ಮರೆವನಹಹಾ।
ವೃತ್ತಿಯಾವೃತ್ತಿ ಸಂತೃಪ್ತಿ ವಿಪ್ರತಿಪತ್ಯ
ತೃಪ್ತಿಗಳ ತಾರಂಗ ಮಾಲೆಗಳ ಹೊಡೆತದಿಂ
ತತ್ತರಿಸುತ್ತಿರುವನಾ ಪಾತ್ರ ಬಂದಿತ್ತೀಗ ನನಗೆ ನಾ ತಾಳಲಾರೆ॥ ॥೪॥

ಪ್ರತ್ಯುಪಾಯಗಳೆಲ್ಲವೂ ಜೀವಿಗಳು ಮಾಳ್ಪ
ಸತ್ಯದಾಧಾರವುಳ್ಳವುಗಳಾಗದೆ ಹೋಗಿ
ಮಿಥ್ಯಾತ್ವವೆನ್ನಿಸಿರೆ ಜೀವತ್ವವೇ ಮೊದಲಿನಿಂದ ಜೀವಾತ್ಮಗಣಕೆ।
ಅತ್ಯಂತ ಶಿಥಿಲ ಸಂಘಟನೆ ಜೀವತ್ವಕ್ಕೆ
ಕುತ್ತಾಗಿರುವುದಯ್ಯ ಬದಲಾಗದಿಚ್ಛೆಯಿಂ–
ದತ್ತರೂ ಕರೆದರೂ ಸಂಮಿಶ್ರಭಾವ ವೈರಿತ್ವ ತತ್ವಸ್ಥಮಾಗಲ್॥ ॥೫॥

ಜೀವಾವಯವಗಳಲ್ಲುಂಟು ಭೇದಾಭೇದ
ಯಾವುದೂ ಸ್ಥಿರವಲ್ಲ ಹಾಗೊಮ್ಮೆ ಹೀಗೊಮ್ಮೆ
ಯಾವುದಕ್ಕೋ ಯಾಜಮಾನ್ಯದಾಭಾಸ ಬಂದೊಕ್ಕಟ್ಟು ಮುರಿದೊಗೆವುದು
ಯಾವುದೂ ಜೀವತ್ವವನ್ನು ಕೊನೆಗೊಳಿಸದಿರೆ
ಮಾವಾದರೇನು ಮಲ್ಲಿಗೆ ಯಾದರೇನು ತಾ
ಭೀವಶ್ಯನಾಗಿಯೇ ಬಾಳಬೇಕೀ ಜೀವ ಪಾರ್ಟಿಸರ್ಕಾರದಂತೆ॥ ॥೬॥

ಮನಬುದ್ಧ್ಯಹಂಕಾರ ಚಿತ್ತಗಳ ಸಂಯುಕ್ತ–
ವನಧಿಕೃತ ಜೀವಕಧಿಕಾರಮಂ ಕೊಟ್ಟಿಹುದು
ತನುಭೃತ್ತಿಗಿದು ಮಾಯೆಯಿದರ ಹಿನ್ನೆಲೆ ಸತ್ಯ ಸಚ್ಚಿದಾನಂದವೆಂದು।
ಅನುಮಾನಿಸದೆ ಹೇಳಿದವನೆ ರಿಸಿಯದರಿಂದ
ಕನಕ–ಕನಕಾಭರಣ ಸಂಬಂಧ ದೃಷ್ಟಾಂತ
ಜನಕ–ಜಾತದ ಭೇದಮಂ ವಿವರಿಸುವುದಯ್ಯ ಸತ್ಯ–ಮಿಥ್ಯೆಗಳರ್ಥಮಂ॥ ॥೭॥

ಕಾರಣಕೆ ನಿತ್ಯತ್ವ ಕಾರ್ಯಕ್ಕನಿತ್ಯತ್ವ
ಹೇರಿದ್ದದೆಂತೆಂಬ ಯಾರೆಂಬ ಸಂಶಯಗ–
ಳಾರುಭಟಿಸುವುವು ಸಂಶೋಧಕನ ಕಣ್ಣಡ್ಡ ಗೋಡೆಯೊಂದನ್ನು ನಿಲಿಸಿ।
ಸಾರಿ ಹೇಳುವೆನು ಜಗದೀಶ್ವರರ ಸಂಬಂಧ
ತೋರದೋ ಮಾನಿಸರ ಬುದ್ಧಿಗಂತ್ಯೋತ್ತರವಿ–
ದಾರಯ್ಯೆ ಮತಿಯ ಹೃದ್ಗತಿಯ ಹಿಗ್ಗಿಸಿ ಸಾವಿರಾರು ವರ್ಷಂಗಳಿಂದ॥ ॥೮॥

ಜ್ಞಾತೃ–ಜ್ಞೇಯ–ಜ್ಞಾನದಾಧಾರವಾಗಿರುವ
ಪಾತ್ರವೊಂದೇ ಮುಖತ್ರಯವಿರುವ ದೇಹಿಯೊಳ್
ವಾತಚೈತನ್ಯ ಮೇಣ್ ಪ್ರಕೃತಿಯೆಂಬೆರಡೆಂದು ಹೇಳಿ ನರನಹಮಿಕೆಯನು
ನೂತನ ಮತಿಪ್ರಧಾನ ಪದಾರ್ಥವೆಂದುಸಿ–
ರ್ದಾತುಮನ ಭಾಗಿಸಿಶ್ರೀರಂಗನೆಂದುದನು
ಮಾತಾಡಬೇಕೆಂಬ ಜಾಣನಧ್ಯಾತ್ಮದಲಿ ತಿಳಿಯುವುದಗತ್ಯವೆಂಬೆ॥ ॥೯॥

ಮತ್ಯಹಂಭಾವವೇ ಜೀವಾತ್ಮನಾಗಿರಲ್
ಕರ್ತೃತ್ವವಿಲ್ಲದುಸಿರದರ ಸಂರಕ್ಷಣೆಯ
ವೃತ್ತಿಯಲಿ ಮನುಜನಂ ಪ್ರಕೃತಿ ತೊಡಗಿಪುದೆಂದು ಕರ್ತೃತ್ವವನ್ನರಿಯದೆ
ಸತ್ಯವಿಶ್ಲೇಷಕಂ ನುಡಿದರೂ ಕೊನೆಗವೀ–
ಶತ್ವಕಾಶ್ರಯಮಾದ ಸಚ್ಚಿದಾನಂದನ ಗೃ–
ಹಸ್ಥಿಕೆಯ ಹೊಣೆಗೆ ಸೇರದೆ ಪೋಗದೆಂಬ ನಿಶ್ಚಯಮದಿರದೆದೆಯ ನಿರಿಗು॥
॥೧೦॥

ಸಾಕ್ಷಿಯಾದೊಡೆಯುಮಿಾಶಂ ಶಕ್ತಿಯುತನಾದ
ಪ್ರಾಕ್ಸತ್ಯದರ್ಶಿಯಾತನ ಶಕ್ತಿಯೇ ಪ್ರಕೃತಿ
ತಾತ್ಕ್ಷಣ್ಯವುಳ್ಳಹಂಕಾರದಸ್ತಿತ್ವಕ್ಕೆ ಹೇತು ತಾನಾಗದಿಹಳೇ?
ಏತರಿಂದೀ ಜೀವವಾಯ್ತಹಮಿಕೆಯನುಳಿದು?
ಬೇತಾಳ ಮಾಡಿದನೆ ದೇವಬಲವುಳ್ಳಂಥ?
ಪಾತಾಳಕಿಳಿದರೂ ತರ್ಕದೊಳ್ ಮೂಲಸತ್ ಪ್ರಾಣ ಹೊಣೆಕಳೆದುಕೊಳದು॥
॥೧೧॥

ಈಶನೀಶತ್ವಕ್ಕೆ ಮಿತಿಯುಂಟೆ? ಇದ್ದರವ–
ನೀಶನೇ? ಪ್ರಕೃತಿಯೊಡೆಯಂ ಪ್ರಕೃತಿ ನಿರ್ಮಿಸದ
ದೇಶಕಾಲಗಳುಂಟೆ? ಜೀವ ಜಡವಸ್ತುಗಳ ರಾಶಿಯುಂಟೇ ಜಗದೊಳು।
ಈಶನಿರ್ದ್ವಂದ್ವನಾಗಿರಬಹುದು ನಾನಾತ್ವ–

ಕೇಶನಲ್ಲದೆ ತಂದೆಯಾರ್ ತಾಯಗಂಡನಾರ್?
ಭಾಷೆಬಲ್ಲ ಮತಿಪ್ರಧಾನನುತ್ತರ ಕೊಡಲಿಕೂದಲಂಸೀಳಿಸೀಳಿ॥ ॥೧೨॥

ನಿಃಸೀಮತತ್ವನೇ ಬ್ರಹ್ಮನೇ ಸದ್ಗುರುವೆ
ವಶ್ಯಮಲ್ತೇ ನಿಸರ್ಗ–ತದುತ್ಥವಸ್ತುಗಳ್?
ಕಶ್ಯಪನೆ ಚಿಪ್ಪುಗಳೊಳಗೆ ಕುಳಿತ ಕಚ್ಛಪನೆ ನೀನೆ ಮಾಡಿರ್ಪ ನಿನ್ನ।
ಋಷ್ಯಾದಿಮೂಢಾಂತ ದೇಹಿಗಳಹಂತ್ವಕ್ಕೆ
ಮುಷ್ಯಮಾಣೇಂದ್ರಿಯ ಶರೀರಾಭಿಮಾನಕ್ಕೆ
ನಿಃಸಾರ ಕೊನೆಗೆ ಸಂಸಾರವೆಂದೆನಿಸಲ್ಕೆ ನೀನೆ ಕಾರಣ ನಿರುಪಮ॥ ॥೧೩॥

ಜಾಗ್ರತ್ ಸುಷುಪ್ತ್ಯವಸ್ಥೆಗಳಲ್ಲದೇ ಸ್ವಪ್ನ–
ಸಾಗರಂಗಳ್ ತುರೀಯಾವಸ್ಥೆಯೊಳ್ ನಿಂದ
ರೋಗಜ್ಞ ನಿನಗರಿಯದೆಂಬವಂಗಿರ್ಪುದೇ ಮತಿ ನೀನು ದಾನಕೊಟ್ಟ।
ಯೋಗಶಕ್ತಿಯದೊಂದೆ ಪೋಗುಪೋಗೋ ರಮಣ–
ರಾಗದೊಳ್ ಮುಳುಗು ಮೇಲೇಳದಂತೆಂದಿಗುಂ
ನಾಗೇಂದ್ರನಂತೆ ಶಯ್ಯಾವತಾರಮನಾಂತು ಸೇವಿಸಾರ್ತತ್ರಾಣನ॥ ॥೧೪॥

ಆಗುಹೋಗುಗಳೆಲ್ಲವೂ ನಿನ್ನ ಸಂಕಲ್ಪ–
ಮಿಾಗುಟ್ಟನರಿಯದವನೆಂಥ ಸಾಧಕನವನ
ಲಾಗಾಟಮೆಲ್ಲಮಭಿನಯಮಕ್ಕು ನೋಳ್ಪರ್ಗೆ ತನ್ನತಾನರಿವ ತವಸ।
ಶ್ರೀಗುರುಪ್ರಭುರಮಣ ಪೇಳ್ದಿರಲ್ ಸುಲಭವಾ–
ವಾಗುರಾಚ್ಛನ್ನ ಪ್ರಯೋಗಗಳಿಗಿಂತಲೂ
ಲಾಘವ ಕ್ರಮವನುಳಿದನ್ಯಪಥ ಹಿಡಿಯುವನೆ ಮೇಧಾವೀಜಗದೊಳು॥ ॥೧೫॥

ನೀನು ನಾನೆಂದರೀಗಳ್ ದಾಂಭಿಕತೆಯಕ್ಕು
ನೀನಾದಮೇಲೆ ನಾನೆಂದರದು ಬರಿ ಸೊಕ್ಕು
ನಾನಿರುವೆನೆಂದರದು ದೇಹಕೆ ಪುರಸ್ಕಾರ, ದೇಹ ಜಡ ಮಾಂಸಖಂಡ।
ನಾನಿಲ್ಲವೆಂದಾಗ ದೇಹಕೆ ತಿರಸ್ಕಾರ
ಭಾನುತೋರಿಸುವನದರಿರುವಿಕೆಯನೀಗ ವಿ–
ಜ್ಞಾನ ಬರಿಯೂಹೆಯನುಭವವಲ್ಲ ದೇಹಾತಿರಿಕ್ತ ನಾನಿರುವೆನೆನಲು॥ ೧೬॥

ಸಹಕಾರಿ ಸಂಘದಂತಿರುವ ದೇಹದ ಕಾರ್ಯ
ವಿಹಿತ ವಿಧಿಯಿಂದ, ವಿಧಿಗಾಗದಂತಾದಾಗ
ನಿಹತವಕ್ಕಿನ್ನಿಲ್ಲವಿನ್ನಿಲ್ಲವೆಂದು ಪತ್ರಿಕೆ ಹೇಳಿ ಮುಗಿಸಿಬಿಡುಗು।
ಸಹಿಸಿದೊಡಮೊಂದೆ ಸಹಿಸದೆ ಪೋದೊಡವೊಂದೆ

ಕಹಿಸಿಹಿಗಳನುಭವದ ಕಂಪನಿಯೆ ಮುಳುಗುವುದು
ದಹಿಸಿದೊಡನೆಯ ದೇಹವನ್ನು ಷಟ್ಕರಣಯುತ ನಿರ್ಗತಪ್ರಾಣವಾಗಲ್॥ ॥೧೭॥

ನೆನಹುವಾಸನೆಯದಕೆ ನಿತ್ಯತ್ವವಿಲ್ಲ ಕಾ–
ಲನ ಹೊಟ್ಟೆಯನ್ನುಹೊಕ್ಕಳಿವುದೆಂದಾದರೂ
ಘನನಿದ್ರೆಯಲ್ಲಿರದೆ ಸಾವಿನಲ್ಲೆಂತಿರುಗು? ಮೂಡಿ ಮುಳುಗುವಹಮ್ಮಿಗೆ
ಕೊನೆಯಿದ್ದರೇನಿಲ್ಲದಿದ್ದರೇನಿದ್ದರದೆ
ತನುರಹಿತ ಪರಮಾತ್ಮನೆಂದು ಗುರುತಿಸಬಹುದು
ಮನನದಿಂ ತಿಳಿದರಿದನಾವನಲ್ಲೆಂದಾನು ನಿಃಸ್ಪೃಹತ್ವನೊಂದಿರೆ॥ ॥೧೮॥

ಚಲವಸ್ತುಗಳ ಮೇಲಿನಾಸೆಯೇ ಬಂಧಕಂ
ಚಲಿಸದಹಮನುದಿನಂ ಚಲಿಪ ಮಾನಸದ ದುರ್–
ವಲಯದಿಂ ದೂರವಿರೆ ನಿರುಪಾಧಿಕತ್ವಮಹಮಹಮಿಕೆತಾಳ್ದಗತಿಯ ಮುಕ್ತಿ।
ಸಲಿಸಲಾಸೆಗಳಹಮರಿಯತ್ನಿಸದಿರಲ್ ಭೇದ
ಮಳಿಗುಮಿಳ್ದುಂ ನಿಷ್ಫಲತ್ವಮಂತಾಳ್ಗುಮಾ–
ಕಲನಮೇದಾಸ್ಯಕರಮಕ್ಕು ಸಂನ್ಯಾಸಮೊಂದೇ ಸಾಧನಂ ಮುಕ್ತಿಗೆ॥ ॥೧೯॥

ನಾನಾ ಪದಾರ್ಥಗಳ ಸೆಳೆತದಿಂದೂರಮಿ–
ರ್ದೇನನುಂ ನಂಬದವಲಂಬಿಸದ ಸಂಸ್ಥಿತಿ
ಸ್ವಾನುಭವಮನ್ಯತಾನುಭವವರ್ಜಿತಮಲ್ತೆ? ಧ್ಯೇಯಮದೆ ಜೀವಿಗಳಿಗೆ
ತಾನೆಂದೆ ತಿಳಿದೆಲ್ಲಮಂ ಸಹಿಸಿಕೊಳ ಕಲಿತ
ಮಾನಸದ ನಿರಪೇಕ್ಷತಾ ನಿಷ್ಠೆಯೊಳ್ ಕುಳಿತು
ತಾನೆ ತಾನಾದಹಂ ತನ್ನನಷ್ಟೇನೆನೆಗುಮಾತ್ಮಸಂತೃಪ್ತಮಾಗಿ॥ ॥೨೦॥

ತನ್ನನಷ್ಟೇ ತಿಳಿದು ಕುಳಿತಿರ್ಪ ಗುರುವಿಂಗೆ
ಬನ್ನಮಂ ತೋಡಿಕೊಂಡೊಡೆ ಮಾಳ್ಪನೇನನೆನೆ
ಚಿನ್ಮಯತ್ವದೆ ಸೀಮೆಯಿರದ ಸರ್ವವ್ಯಾಪಕತ್ವದಿಂದಾ ಗುರುವರಂ।
ತನ್ನೈಕ್ಯಮಂ ಜ್ಞಾಪಿಸುವುದರಿಂದ ಮುಮುಕ್ಷು
ನಿನ್ನೆ ಮೊನ್ನೆಗಳನೆಲ್ಲಾ ಮರೆತು ನಿಮಿಷದೊಳ್
ತನ್ಮಯತೆಯಂ ಪೊಂದಿ ತಾನೆತಾನಾದಪಂ ಶ್ರೀರಮಣನುಸಿರಿದಂತೆ॥ ॥೨೧॥

ಶ್ರೀರಮಣನೇ ನಾನು ಮುಕ್ತ ಸ್ವರೂಪದೊಳ್
ಶ್ರೀರಮಣನೇ ಜ್ಞಾಪಿಸಲ್ ಬದ್ಧನಾದವಂ
ಶ್ರೀರಮಣನೇ ದೇವಗುರುಪಿತೃಪಿತಾಮಹಂ ನಾನೆ ತಾನೆಂಬುದನ್ನು।
ಶ್ರೀರಮಣನೇ ಅನುಗ್ರಹಿಸಬೇಕಲ್ಲದೊಡೆ

ಪಾರಮಂ ಕಾಣೆನೀ ಸಂಸಾರಸಾಗರದ
ಖಾರದಿಂ ಸುಟ್ಟುಪೋಪೆಂ ನರಕಕೀಟಬಾಧಾಸಹಸ್ರಾರದಿಂದಂ॥ ॥೨೨॥

ಏತಕೆಂಬುದನೆಂದಿಗುಂ ಕೇಳಬೇಡವೀ–
ಯಾತುಮಕ್ಕಸ್ತಿತ್ವವೊಂದೇ ಮಹಾಧ್ಯೇಯ–
ಮಿಾತಿಮಿರಲೋಕದಸ್ತಿತ್ವಮೆಂದುಂ ಮನ್ನಣೆಯ ಪಡೆಯದಾತ್ಮನಿಂದೆ।
ಮಾತಾಡಬಲ್ಲ ಮತಿಯೇ ಮಾತು ಮುಟ್ಟದಾ–
ವಾತನಂ ವಾತಪಿತನಂ ಭೂತನಾಥನಂ
ಜೋತುಬೀಳಾತಂಗಹರ್ನಿಶಂ ರಕ್ತಾದ್ರಿವಾಸಸಂಕೇತಿತಂಗೆ॥ ॥೨೩॥

ಪ್ರಶ್ನೋತ್ತರದ್ವಂದ್ವ ಮತಿಮನ್ಮನಕ್ಕಷ್ಟೆ
ವಿಶ್ವೋತ್ತರಸ್ಥೈಕಮೇವಾದ್ವಿತೀಯಂಗೆ
ಪ್ರಶ್ನೋತ್ತರಗಳೊಂದೆ ತಾನೊಂದೆ ನೀನೊಂದೆ ಮತಿ ಮಹಾರಾಜಕೇಳೋ।
ಅತ್ತಿತ್ತಲೆಂಬುದೇ ಇಲ್ಲಮದ್ವೈತಂಗೆ
ದತ್ತಮೆಲ್ಲಂ ದೇಯಮಿಲ್ಲಮೆಂದಾತನೊಳ್
ಪತ್ತೆಯಾಗದವೊಲ್ ಮುಳುಂಗೋ ಮುಳುಂಗುನೀನತ್ಯಯಂಗಳನು ಮರೆತು॥
॥೨೪॥

ಮರೆತು ಬಿಡವಿದ್ಯೆಯಂ ಮಾಯೆಯಂ ನಿನ್ನನು–
ದ್ಧರಿಸವವು ಬಂಧಿಸಲ್ ಪುಟ್ಟಿರ್ಪವವು ನಿನ್ನ–
ನರ್ಥಕ್ಕೆ ನಿಲ್ಲಿಸಿರ್ಪವು ನುಂಗಿ ಬಿಟ್ಟುದಷ್ಟೇಪೆರ್ಚು ನಿನ್ನರ್ಥಮಂ।
ಸ್ಪರ್ಧಿಸಲ್ ನಿಲ್ಲವವು ನುಣುಚಿಕೊಂಡೋಡು ನೀ–
ನಿರ್ದ ಭಾಗಮನರ್ಪಿಸಲ್ ಗುರುಗೆ ಬಿಡಿಸುತಿ–
ನ್ನರ್ಥಮಂ ತನ್ನೊಳೈಕ್ಯಂಗೊಳಿಪನಾತಂಗೆ ಮಿಥ್ಯೆಯೀವಸ್ತುದ್ವಯಂ॥ ॥೨೫॥

ಅಮರಂಗೆ ಮರಭೀತಿಯಿಲ್ಲ ಮದ್ವೈತಚಿ–
ತ್ತಮಸಿಂಗವಿದ್ಯೆ ಮಾಯೆಗಳ ಕಾಟಗಳಿಲ್ಲ
ಮಮಿತಬಲನಮಿತಲೀಲಾವಿನೋದನನೂಹ್ಯನಾನಂದ ಸೌಧಾಂಬುಧಿ।
ಪ್ರಮಿತಮತಿ ಸಾಸಿವೆಯ ಕಾಳಿಗಂ ಕಿರಿದು ನಿ–
ರ್ಮಮನಿದಿರ್ ಸಾವಿರಾರ್ ಮಮಗಳಂ ಕಟ್ಟಿಕೊಂಡಂಥ ನೀನಾರದಾರ್ ಪೇಳ್॥
॥೨೬॥

ದೇಹಿತ್ವಸಂರಕ್ಷಣಪ್ರಯತ್ನಗಳಿಂದೆ
ಮೋಹಾಂಧಕಾರಮಪ್ಪುದು ಸಾಂದ್ರ ಸಾಂದ್ರಕರ–
ಮಾಹಾರರಕ್ಷಣೆಗಳಾಸೆ ಮುಗಿಯದು ಮತ್ತೆ ಮತ್ತೆ ಬೇಕಾಗುವುದಲಾ।

ದೇಹಿಯ ವಕಾಲತ್ತು ವಹಿಸಿ ಗೆಲಲಾರೆ ನೀ–
ನೂಹಿಸಿದ್ದೆಲ್ಲ ಸುಳ್ಳಕ್ಕಂತ್ಯದೊಳ್ ಮತಿಯೆ
ದಾಹಕ್ಕೆ ದಾಹಮಂ ನುಂಗುನೀನೆಂಬುದೇ ನಿರ್ದಯೋತ್ತರ ಲೋಕದೊಳ್॥
॥೨೭॥

ಧಿಕ್ಕರಿಸದಿರ್ಪಮತಿಗೆಲ್ಲಿಧೀರತ್ವಮಾ–
ಧಿಕ್ಯ ನಿನ್ನಲ್ಲಿಲ್ಲ ಬಲದ, ಮಾಯಾವಿದ್ಯೆ–
ಯೊಕ್ಕಲಿಕ್ಕದೆ ಬಿಡವು ನಿನ್ನ ನೆಲೆ ಸಂಭ್ರಾಂತ ನಾನಾಗಿ ತೋರುತಿರ್ಪ।
ಮಿಕ್ಕಿಂದ್ರಿಯಗಳಧಿಪತಿ ಕರಂ ನೀನಲ್ಲ–
ಮೊಕ್ಕಾಲುಗುಂಟ ನಿದ್ರಾಮೃತಿಗಳೊಳ್ ಶೂನ್ಯ–
ವಕ್ಕುವಕೆ ಬೆಲೆಯಿಲ್ಲ ನಿನ್ನ ಬಡಜೀವಿಯೇ ಸೊಕ್ಕು ದುಕ್ಕಕ್ಕೆ ಮೂಲಂ॥ ॥೨೮॥

ಭಾವನೆಗಳೆಂಬ ಪತ್ನಿಯರೊಳವನರಿಯದೆಯೆ
ಜೀವನದ ಚಾವಡಿಯ ಮೇಲೆ ದರ್ಬಾರ್ ನಡೆಸಿ
ಕೇವಲಾದಿಗಳಾದ ದೇವಿಯರ ಸಂತೈಸಲಾಗದಾದೊಡೆ ಸೋಲುವ।
ವಾವದೂಕನೆ ಮುಚ್ಚುಬಾಯ ವಿಜ್ಞಾನಾತ್ಮ
ನೋವಿಗಂಜುವ ಪೆಂಡಿರಿಂದೆ ಸಂತಾನಮಂ
ಯಾವನಾದೊಡೆಯುಮಿಾಲೋಕದೊಳ್ ಪಡೆವನೇ? ಗರುಡ ಪಾವ್ಗೊಳವಪ್ಪೆಯ?॥
೨೯॥

ಧೀವರರವಿದ್ಯೆಗಳ್ ಪತಿಯ ವಂಚಿಸಿ ಮಾಯೆ
ಯಾವುದೋಗಳಿಗೆಯೊಳ್ ಪಡೆದು ಬೆಳೆಯಿಸಿ ವಿಷಯ
ಭಾವನೆಗಳಂ ಮಾಡಿಯವುಗಳಂ ಕಟ್ಟಿದಳ್ ನಿನಗೆ ಮತಿ ಪತಿತೆಯುಳ್ಳ।
ಬೇವನುಣಿಸುವರೊಮ್ಮೆ ಬೆಲ್ಲವುಣಿಸಿದ ಮೇಲೆ
ಜಾವಗೋಳಿಯ ವೋಲೆಚ್ಚೆತ್ತಿದ್ದರೂ ತಮ್ಮ
ಮಾವನೊಡ ನಿರ್ದುಬರ್ಪರ್ ತಾಯಬಲದಿಂದ, ತಾಯ್ಮೋಹಮಾವಚಿತ್ತ
॥ ೩೦॥

ಎಲೆ ನವದ್ರವ್ಯಗಳ್ ನಿನಗಿರುವ ರಂಧ್ರಗಳ್
ಲಲನೆಯರ್ ಭಾವನೆಗಳವರಿಗಿನ್ನೊಂದಧಿಕ
ಕಲಲಕಾರಕ ಶುಕ್ಲ ಕಣ ಮನೊಳಗೊಂಬ ಮೇಲ್ಮೇಲೆ ತಾನೊಲ್ಲೆನೆಂಬ।
ಬಲವಂತರನ್ನಾಯ್ವಜಾರೆಯರ್; ಬಲಿಗಳೋ?
ಹಲವರೊಮ್ಮೊಮ್ಮೆಯಾಬ್ಬೊಬ್ಬರ್ ಮತೀಶ್ವರರ್
ಕಲಹಪ್ರಿಯರ್ ನಿನ್ನ ಸೋಲಿಸಲ್ ಕಾದಿರುವ ಮಿತ್ರಾಭಶತ್ರುವರ್ಯರ್॥ ॥೩೧॥

ಆ ಮತಿಯ ಮಾತ ಕೇಳ್ದೀ ಮತಿಯ ನಾಶ್ರಯಿಸೆ
ನೇಮವಿಲ್ಲದ ಮರ್ಕಟತ್ವಮಂ ಪೊರ್ದುವೆ ಸು–
ಧಾಮ ನಿನಗಿರ್ಪಾಶ್ರಯಂದೃಢಂ ರಮಣಗುರುದೇವನಾಶ್ರಮಮದ್ಭುತಂ।
ಪ್ರೇಮ ಭಾವನೆಯಲ್ಲ, ಭಗವದೈಕ್ಯದ ಬುದ್ಧಿ
ನಾಮರೂಪಾತೀತಮಪ್ರಮೇಯಾತ್ಮಕಂ
ಭೀಮಮೌನದ ಶಾಂತಿಯಚಲಸ್ಥಿತಿಪ್ರದಂ ನಿರ್ವಿಕಾರಸ್ವರೂಪಂ॥ ॥೩೨॥

ಬೆಚ್ಚುವಿಕೆ ಬೆದರುವಿಕೆ ಭಾವನೆಗಳವುಗಳಂ
ತುಚ್ಛೀಕರಿಸಿ ನಿಲ್ಲು ದೃಷ್ಟಿಯೊಳ್ ಗುರುವರನ
ಬಿಚ್ಚಿ ಬಿಸುಟಾವರಣರೂಪದ ವಿಚಾರಗಳನುತ್ತುಂಗ ರಕ್ತಗಿರಿಯ।
ಉಚ್ಚಶಿಖರದ ತುತ್ತ ತುದಿಯ ಪರಮಾಣುವಿನ
ನುಚ್ಚನುಂ ಮಿಾರಿ ಮೇಲೇರಿ ಕುಳ್ಳಿರುವಂಥ
ಕಚ್ಛಪಾಕಾರ ಸಂಕೇತಿತನ ಪಾದಾಕ್ಷದೊಳಹೊಕ್ಕು ವಿರಮಿಸೆಂಬೆ॥ ॥೩೩॥

ಅಕ್ಷಪಾದದ ಮೆಟ್ಟಿನಿಂದ ಪಾದಾಕ್ಷನವ
ನಕ್ಷಿ ಭಕ್ಷಿಸದಿರ್ಪ ವಸ್ತುವೇ ಇಲ್ಲ ನಿ–
ನ್ನಕ್ಷಮತೆಯವನಿಗುಂಟೇ ಜಗನ್ನಾಯಕಗೆ ದೇವರ್ಷಿಗುರುಯೋಗಿಗೆ।
ಶಿಕ್ಷೆಯವನೊಲಿದಿತ್ತ ರಕ್ಷೆ ನಿನಗೆನ್ನಿಸುಗು–
ಮಕ್ಷಿಕಾತ್ಮಕ ಮತಿಯ ಲಕ್ಷಿಸೋಲಕ್ಷಿಸೀ–
ಯಕ್ಷರಂಗಳನಾತನೇ ಬರೆಯಿಸಿರ್ಪಂಥ ಪಕ್ಷಾತಿರಿಕ್ತಮಾದ॥ ॥೩೪॥

ನೀ ತಿಳಿದುದಕ್ಕಿಂತ ಮುಂದಿನಾಕೃತಿಯಿಂದೆ
ನೇತಿನೇತಿಗಳಾಚೆಗೊಯ್ದು ನಿಲ್ಲಿಸುವ ವಿ–
ಖ್ಯಾತಮಹಿಮಂ ನಿಷ್ಪ್ರತಿಷ್ಠಂ ಪ್ರತಿಷ್ಠಾನಮಾಗಿರ್ಪನದ್ಭುತಕ್ಕೆ।
ಓತೆನ್ನೊಡನೆ ಪೋಗು ದಿವ್ಯವಾಹನನಾಗಿ
ಮಾತಾಡದಿದ್ದು ಸಾಷ್ಟಾಂಗ ಪ್ರಣಾಮದಿಂ
ಸೋತೆನೆಂದುದ್ದಂಡನಂ ಖಂಡನಾತೀತನಂ ಮರೆವೊಗಮೃತಭಿಕ್ಷೋ॥ ॥೩೫॥

ಪ್ರಾಣ ಖಂಡ ೪

ಎಣಿಸಲಾರೆನೋ ಕಲ್ಪನಾಂಶಗಳ ವರ್ಣಭೇದದಿಂದ
ಕಣವ ನೊಡೆದು ಭಸ್ಮಾಸುರರ್ಕಳಂ ಕಂಡೆ ಹುಟ್ಟಿಬಂದ।
ತ್ರಿಣಯನಾತ್ಮ ಸತ್ಯಸ್ಯ ಸತ್ಯ ಕಣಶಕ್ತಿ ಕರ್ಮದಿಂದ
ತಣಿಸಹೊರಟುಮೇಣ್ ದಣಿಸುತಿರುವುದೋ ಪರಿಮಲಾನುಬಂಧ॥ ॥೧॥

ಯುದ್ಧದಿಂದಲೇ ಶಾಂತಿ ಶಾಂತಿ ಯುದ್ಧಕ್ಕೆ ಬೀಜವೆಂಬ
ವಿದ್ಯೆಯಷ್ಟೆನರಲೋಕದಲ್ಲಿ ಸುಪ್ರಚುರ ಬಾಯಿ ತುಂಬ
ಮದ್ಯವಾಸನೆಯ ಬಿಡುವ ಪಂಡಿತರನೆದುರಿಸುವವ ಹುಂಬ
ಸದ್ಯ ಸುಖ ಸಾಕೆಂಬ ದೃಷ್ಟಿಯವನಲ್ಲವಲ್ಲಕೊಂಬ॥ ॥೨॥

ನೀತಿ ವಚನಗಳನೇಕೆ ಹಾಡುವರು ವಿರುದ್ಧಾರ್ಥವುಳ್ಳ
ಖ್ಯಾತ ಬಾನುಲಿಗಳಿಂದ ಕನ್ನಡದ? ಮಾರಲಳೆವ ಬಳ್ಳ
ತೂತುಯೆಂದು ತುಲೆ ಹಿಡಿದರೇನು? ದರ ಗಗನಕೇರಿಸುತ್ತ
ಕೂತ ಮಾರಿ ಕಿರಿದೊಳ್ಳ ಬೆಳೆಸುವವನೆತ್ತ ವಚನವೆತ್ತ?॥ ॥೩॥

ಹೇಳಿ ಶಾಸ್ತ್ರಗಳ ಹಾಕಿಗಾಳಗಳ ಜೀವಹಿಂಸೆ ಮಾಳ್ಪ
ದಾಳಗುದುರೆಗಳ ಲೆತ್ತದಿಂದ ಬರುವಂಥ ಸಿರಿಯಕೂರ್ಪ
ಲೋಲಲೋಚನರೆಯರೊಡನೆ ವೀಕ್ಷಿಸುವ ಮಂತ್ರಮುಖ್ಯದರ್ಪ
ಹೇಳಿಕೇಳಿ ಮಾಮೂಲು ಎಂದು ಜನಕೊಂಡರಂಥ ತುರ್ಫ॥ ॥೪॥

ರಾಜಮಾರ್ಗ ಹಿಡಿದೋಡಿಹೋಗುವುದು ಚೋರಗಾಯ್ತು ಸುಲಭ
ರಾಜಿಯಿಂದ ಕೋತವಾಲರೊಡನೆ ಸಂವಿತರಣ ಮಾಡಿ ಲಾಭ
ಸೋಜಿಗಂಗಳಿಲ್ಲದೆಯೆ ದೊರಕುವುದು ಶಾಸಕೈಕ್ಯ ಗೌಪ್ಯ
ಈಜಬಲ್ಲವರೆ ಮುಳುಗಿ ತಾರರೇ ಕೋಟಿ ಕೋಟಿ ರೌಪ್ಯ॥ ॥೫॥

ಚಿನ್ನ ಬೆಳ್ಳಿ ವೈಡೂರ್ಯ ಮುತ್ತು ರತ್ನಗಳ ಹೊತ್ತ ಕಲ್ಲ
ಬನ್ನ ಬಡುವ ಬಡವರೂ ಪೂಜಿಸಲು ಹಾತೊರೆಯವರಲ್ಲಾ!
ಕನ್ನೆ ಬಟ್ಟೆಗಳನರ್ಘಬಿಚ್ಚಿ ಮಣಿಸರಗಳನ್ನು ಹೊತ್ತು
ಕಣ್ಣನಿದಿರಸಲ್ ಕಾಣಲಾಶಿಸುವ ಜನರ ಸುತ್ತು ಸುತ್ತೂ॥ ॥೬॥

ದೇವ ಬಡವನೋ ನಾವು ಬಡವರೋ ಯಾವುದರೊಳು ಯಾರು?
ದೇವ ಕೊಡುವನೋ ನಾವು ಕೊಡುವೆವೋ ಹೋಗಿ ಕೊಡಿರಿ ತಾರು।
ನೀವು ತಿರುಪತಿಗೆ, ಭಕ್ತಿಯೋಗ ಪರಮಾತ್ಮನಿಂಗೊ ನಮಗೋ
ಯಾವ ಭಕ್ತಿ ಯಾರ್ಮೆಲೆ ಹೆಚ್ಚು ಯಾತಕ್ಕೆ ತಿಳಿದು ತೂಗೋ॥ ॥೭॥

ದೇವಗೆಂದು ಕಸಿದುಂಬ ಜಂಬುಕನ ಪಾದಪೂಜೆ ಮಾಳ್ಪ
ದೇವಭಕ್ತನೆನೆ ಕೋವಿ ಹಿಡಿದು ಸುಲಿದುಂಡು ಮತ್ತೆ ಬೇಳ್ಪ
ರಾವಣಾಧಿಕನ ಪೂಜೆಯಲ್ಲಿ ಪಾಲ್ಗೊಂಬ ಬಡವರನ್ನು
ಕಾವ ದೇವನವತರಿಸಲಿಲ್ಲ ಮತ್ತವತರಿಸನೆಂದಿಗಿನ್ನು॥ ॥೮॥

ಕಪ್ಪೆಕಪ್ಪೆಗಳ ಪಾವು ಪಾವುಗಳ ಮನುಜ ಮನುಜರನ್ನು
ತಿಪ್ಪೆಯಿಂದಲೂ ಎತ್ತಿತಿಂದು ಹೊಡೆದಾಡಿ ಬದುಕುವುದನು
ಹಪ್ಪುಕಳ್ಳರುಪ್ಪರಿಗೆಮನೆಯ ಕಟ್ಟಿಸುವರಿದನು ಕಂಡೂ
ಜಪ್ಪಿ ಮಾಡಿಸುವಳಿಂತು ಮಾಯೆ ಸುಮ್ಮನಿರುವ ದೇವ ಗಂಡು॥ ॥೯॥

ಹಳಿವರುಂಟು ದೇವರನು ಮಾಯೆಯನು ತಿಳಿಯದವರ ನಂಟ
ಗಳಿಸಿ ದೇವರಿಲ್ಲೆಂದು ಮಾಯೆಯನು ಬಳಸಿ ದೊಡ್ಡ ಗಂಟ
ಕಳೆದುಕೊಂಡು ನಂಬಿಗೆಯ ದತ್ತ ಧನಧಾನ್ಯರಂತ್ಯದಲ್ಲಿ
ಹಳೆಯ ಗಂಡ ಸಿಗದಂತೆ ಸಿಕ್ಕನಾ ದೇವನವರಿಗಿಲ್ಲಿ॥ ॥೧೦॥

ಎಲೆಲೆ ಗಾರುಡಿಗರಯ್ಯ ನೀವು ನಾಸ್ತ್ಯಸ್ತಿವಾದಗಳಲಿ
ಪಳಗಿದವರು ವಾಗ್ಜಾಲ ಸಾಧನರು ಕೊಟ್ಟುದಾಹೃತಿಯಲಿ
ತಲೆಯ ಕೆಡಿಸಿ ನಿಃಶ್ರದ್ಧರಾಗಿ ಪರಶಾಂತಿಹಾನಿ ಮಾಡಿ
ಬಲೆಗೆ ಬೀಳುವವರನ್ನು ಸುಲಿಯುವಿರ ಮಾತನಾಡಿಯಾಡಿ॥ ॥೧೧॥

ಕಾಲಹೊಸತುಯೆಂದೆಂಬ ಮಾತು ಯಾವಾಗ ಯಾರಿಗಲ್ಲ?
ಕಾಳಿದಾಸನಿಂ ಕಣವಿಗಿಣವಿಗಳವರೆಗೆ ಬಂದಿತಲ್ಲಾ!
ಹಾಲು ಹಾಲೆ ಕೋಲ್ಜೇನು ಜೇನೆ ಕಾಲಪ್ರವೃತ್ತಿಯಲ್ಲಿ
ಹೇಳಿದಂತೆ ರುಚಿ ಬದಲದಯ್ಯ ರಸರಸಿಕಲೋಕದಲ್ಲಿ॥ ॥೧೨॥

ಕಾಜಾಣ ಜಾಣ ಶುಕ ಜಾಣ ವೊಪ್ಪಿಕೊಳ್ಳೋಣ ಮಾತಿಗಾಗಿ
ಮಾಜಾಣನಾವ ಕೋಗಿಲೆಯ ಪಂಚಮಸ್ವರದ ಪುಂಸ್ತ್ವಕಾಗಿ
ಈಜಾಡಿ "ಲ್ಯಾಬೊರೆಟರಿಯಲಿ" ಬದಲು ಮಾಡ್ಯಾನೆ ಬೀಜದಣುವ
ಗೌಜಳ್ಳಿಯನ್ನು ಕೂಜಳ್ಳಿಯೆನಲು ಬದಲಿಸುವುದೇನು ಗುಣವ?॥ ॥೧೩॥

ಸ್ವಪ್ರಮಾಣದಂತಸ್ಥಶಕ್ತಿಯನು ಹರಿತಗೊಳಿಸಿಕೊಳದ
ಸುಪ್ರಮತ್ತರಪಭಕ್ತಿಬೋಧದಂತೆಯೇ ಯುಕ್ತಿಯೊಳದ
ಅಪ್ರತಿಷ್ಠಿತತೆಯನ್ನು ತಿಳಿಯದವರೆಂಥ ಪೂಜ್ಯರಯ್ಯ
ಸ್ವಪ್ರತಿಷ್ಠೆಯುಳಿದೀತದೆಷ್ಟು ದಿನ ಹುಚ್ಚು ಹಿಡಿದ ತಲೆಯ?॥ ॥೧೪॥

ಶ್ರುತವ ಪೂರ್ಣಶೋಧಿಸಲೆ ಇಲ್ಲ ವಿಜ್ಞಾನತಜ್ಞನಿನ್ನೂ
ಶ್ರುತಿಯ ಶೋಧಿಸದ ಭಕ್ತಿಬೋಧಕರತಂಡವಿರ್ಪುದಿನ್ನೂ।
ಶ್ರುತವ ಮೀರಿದಶ್ರುತವ ಕಂಡ ಮುನಿರಾಜರಮಣನನ್ನು
ನುತಿಸಿ ಬಾಗು ನೀ ಮತ್ತೆ ಕೊಡದಿರನು ಹೊಸಾಕಂಗಳನ್ನು॥ ॥೧೫॥

ನಮೋ ದೇವರಿಗೆ ದೇವ, ಕವಿಗೆ ಕವಿ, ಭಕ್ತರಿಂಗೆ ಭಕ್ತ
ನಮೋ ದೈತ್ಯರಿಗೆ ದೈತ್ಯ, ಗುರುಗಳಿಗೆ ಗುರು, ಮಹಾವಿರಕ್ತ
ನಮೋಯೆಂದು ನೀ ನಮಿಸಹಂಕೃತಿಯೆ ನಿನ್ನ ನಮನಯಜ್ಞ
ಭ್ರಮಾತೀತ ಸತ್ಯದಲಿ ಮುಳುಗಿಸುಗು ಬೇಡ ಬೇರೆ ತಜ್ಞ॥ ॥೧೬॥

ನನ್ನ ಮತಿಯಹಂಕಾರವನ್ನು ರಮಣೋಕ್ತಿಯಲ್ಲಿ ತೇಯ್ದು
ಬಣ್ಣವನೆಗಳನು ಮಾತಿನಿಂದಲೇ ಕಟ್ಟಿದವರನೊಯ್ದು।
ತಣ್ಣಗಿರಿಸಲಧಿಕಾರವಡೆದೆನಾ ಪುಣ್ಯ ಪುರುಷನನ್ನು
ಬೆನ್ನು ಹಿಡಿದು ಧೇನಿಸುವೆ ಕೊಟ್ಟನವನಂಥ ಶಕ್ತಿಯನ್ನು॥ ॥೧೭॥

ಅಪ್ರಮೇಯನೂ ಸುಪ್ರಮೇಯನವನಳವ ಪಡೆದ ಮೇಲೆ
ವಿಪ್ರನಪ್ಪನೇ? ಪಡೆಯದಾತನಸ್ಪೃಶ್ಯ! ಕಡಲ ಬೇಲೆ
ತೆಪ್ಪವನ್ನು ನಡೆಸೀತೆ ಮಳಲಿನಲಿ ನೀರಿಗಿಳಿಸದದನು
ಸಪ್ಪೆಯೆಲ್ಲವೀ ವಿಶ್ವಚಿತ್ರಗಳು ಮರೆಯೆ ಪರದೆಗಳನು॥ ॥೧೮॥

ಭೂತಜನ್ಮಗಳ ಚಿಂತೆಯೇಕೆ? ಮೇಣ್ ಭವಿಷ್ಯಜ್ಜನನದ
ಭೀತಿಯೇಕೆಯೀ ಮುಕ್ತ ಕಲ್ಪನಿಗೆ ರಮಣ ಮಗ್ನನಾದ
ಆತಗೀತಗಾರಮಣ ನೋಡಿ ಕೊಳಲಿದ್ದಮೇಲವದಿರ
ಊತಿ ಲಭಿಸದಿರದೆಂದಿಗಾದರೂ ನನ್ನ ಹೊರೆಯು ಹಗುರ॥ ॥೧೯॥

ಸಾವುನೋವು ಸಂತೋಷ ದುಃಖ ಸನ್ಮಾನ ಮಾನನಾಶ
ರಾವಣೋಪಮರಿಗಷ್ಟೆ ರಾಮರಿಂಗಿಲ್ಲವಂಥ ಪಾಶ
ದೇವದಾನವಾದಿಗಳು ಕಥೆಗಳಲಿ ಮೂಡಿ ಮುಳುಗುತಿರಲಿ
ಯಾವನಿದ್ದರೂ ಇಲ್ಲದಿದ್ದರೂ ಒಂದೆ ಲೋಕದಲ್ಲಿ॥ ॥೨೦॥

ಪತಿವ್ರತೆಗೆ ಪತಿಯೊಬ್ಬ ಸಾಕು ಪೂಜಾರ್ಹನನ್ಯನಿಹನೆ?
ವ್ರತಸ್ಥಂಗೆ ಗುರುವೊಬ್ಬ ಸಾಕು ಮತ್ತಾವನೊದಗಿಬಹನೆ?
ಸ್ಥಿತಪ್ರಜ್ಞೆಯನ್ನುಳಿಸಿಕೊಳ್ಳಲಿನ್ನಾರ ಹಂಗು ನನಗೆ?
ಶತೋಪಾಸನೆಗಳೆಲ್ಲ ತಲುಪುವುದು ರಮಣನಿಗೇ ಕೊನೆಗೆ॥ ॥೨೧॥

ರಮಣನಾಮ ಸಂಕೇತ ಪರಮಸತ್ಯಕ್ಕೆ ಪಾವನತೆಗೆ
ರಮಣ ನಿರ್ವಿಕಲ್ಪತ್ವ ನಿರ್ವಿಕಾರತ್ವ ಚಿಂತೆಯುರಿಗೆ
ರಮಣನಮೃತಧಾರಾ ಪ್ರವಾಹ ರಮಣೀಯ ಚಿತ್ರಗಳಿಗೆ
ರಮಣನಾದ ನಸು ದೃಷ್ಟಿ ಭಸ್ಮ ಧೇನಿಸುತ್ತಿರುವವರೆಗೆ॥ ॥೨೨॥

ಸಪ್ತಋಷಿಗಳೇಕಾನುಭೂತಿ ರಮಣತ್ವವಾಯಿತಿಂದು
ಶುಕ್ತಿ ರಜತದಲಿ ಮಾಯವಾಯ್ತು ಹಗ್ಗದಲಿ ಹಾವು ಬಂದು
ಮುಕ್ತಿ ಕಲ್ಪನಾ ಭೇದವೆಂಬ ಕರ್ಪೂರ ಸುಟ್ಟು ಹೋಯ್ತು
ಭಕ್ತಿ ಯುಕ್ತಿ ಯುಕ್ತತ್ವದಿಂದ ಗುರುಪಾದ ಸೇರಿತಿಂತು॥ ॥೨೩॥

ಕರ್ತೃಕರ್ಮಕರಣಾದಿ ಸಪ್ತವೈಭಕ್ತಿಕಾರ್ಥಗಳಿಗೆ
ಪ್ರತ್ಯಯಂಗಳೇ ಸಿಕ್ಕವವುಗಳಿಗೆ ಬಂತು ಮೃತ್ಯುಗಳಿಗೆ
ಪಥ್ಯವೌಷಧಾರೋಗ್ಯವೊಂದೆ ಧೀರತ್ವದೊಂದೆ ಗುಳಿಗೆ
ನಿತ್ಯನಿಂತಿರಲು ಹೃದಯದಲ್ಲಿ ರಮಣ ಪ್ರಮಾಣದೊಳಗೆ॥ ॥೨೪॥

ಮರ್ತ್ಯಗಳನು ಧಿಕ್ಕರಿಸುವಂಥ ವೈರಾಗ್ಯಕಿಲ್ಲ ತಾಣ
ಅತ್ಯಮೋಘರಮಣತ್ವವವುಗಳಲ್ಲಿ ಕಾಣುತಿರಲನೂನ
ಮರ್ತ್ಯವೆಲ್ಲವಂತನಿಸದಿರಲು ಕಲಿಬಿಡುವುದನ್ನು ನರನೇ
ಸ್ವಾರ್ಥಸಾಧನೆಗೆ ಬಿಟ್ಟದನ್ನು ದುಡಿಸಲಹಲೊಳ್ಳಿದರನೇ॥ ॥೨೫॥

ಹುಟ್ಟುಸಾವುಗಳ ಕಟ್ಟಿನೊಳಗೆ ಪರಿವೃತ್ತಿಶೀಲದಿಂದ
ಕೊಟ್ಟು ಕೊಂಡು ಸವೆದಳಿವ ಘಟಕಗಳನಿಯಮ ಮಾತ್ರದಿಂದ
ತೊಟ್ಟು ಶಪಥವನ್ನವುಗಳಡಿಯೊಳಿಹ ನಿತ್ಯಸತ್ಯವನ್ನು
ದಿಟ್ಟನಾವನೆದೆ ತಟ್ಟಿಯಳೆದೆನೆಂದಾನತೀತವನ್ನು॥ ॥೨೬॥

ಸತ್ಯವಿತ್ತ ಸತ್ಯಮತಿ ಶುದ್ಧತೆಯ ತಾಳಿ ನೋಡಿದಾಗ
ಸತ್ಯಕಿಲ್ಲಿ ವಿಶ್ವಾವಯವದ ಸಂಬಂಧ ಕೂಡದಾಗ
ಮರ್ತ್ಯಬುದ್ಧಿ ಸೋಲಲೇಬೇಕು ನಾನಾತ್ವಬದ್ಧವಾದ
ಮಿಥ್ಯೆಯೊಡೆಯನೀಶಾನ ಬೇರೆ ನಿಸ್ತರ್ಕಸಿದ್ಧನಾದ॥ ॥೨೭॥

ಸರ್ವಸುತ್ತುಗಳ ವಾಸನಾದಿಗಳ ಸುಟ್ಟು ಹಾಕಬೇಕು
ಗರ್ವಬಿಟ್ಟು ಶರಣಾಗಿ ಗುರುವಿನಡಿಗಳಿಗೆ ಬೇಡ ಬೇಕು
ಸರ್ವಶಕ್ತ ಸರ್ವಜ್ಞ ಕೊಡುಬಲವ ಶುದ್ಧ ಮಾಡೆ ಮತಿಯ
ನಿರ್ವಿವಾದ ನಿರ್ವಿಷಯ ನಿಲ್ಲಿಸೋ ವಾಸನಾ ಪ್ರಹತಿಯ॥ ॥೨೮॥

ಗತಿಮಯಪ್ರಪಂಚದಲಿ ಸುಸ್ಥಿತಿಯ ಹುಡುಕಹೋಗಿ ಸೋತೆ
ಸ್ಥಿತಿಯ ಭಾಸ ಸಾಪೇಕ್ಷವಿಲ್ಲಿ ಭೂಮಾತೆ ಕೂಡ ಭೀತೆ
ಇತರ ಕಾಯಗಳ ಹಾಗೆ ಜೊತೆಯ ರವಿಯನ್ನು ಸುತ್ತುತಿಹಳು
ಪತನ ಹೊಂದದುತ್ಥಾನವಿಲ್ಲ ಪಕ್ಕದಲೆ ಕೋಟಿಗಗುಳು॥ ॥೨೯॥

ಎಲುಬುಮಾಂಸಮಜ್ಜೆಗಳ ರಕ್ತಲಾಲಾರಸಂಗಳಿಂದ
ಬೆಳೆದು ಮಧ್ಯವಯ ಮುಗಿದ ಮೇಲೆ ಯೆಣಿಸುತ್ತ ಕತೆಯ ಕಳೆದ
ಅಳಿವಿನತ್ತ ಸಾಗುವುದ ನಿಲ್ಲಿಸುವ ವೈದ್ಯರಾಜನಿಲ್ಲ
ಗಳಿಕೆಯುಳಿಕೆಯಳಿಕೆಗಳನುಕ್ರಮವ ಬಿಡಲಾದವ ಬಲ್ಲ?॥ ॥೩೦॥

ಕೋಟಿಕಾಲ ಕಳೆದರೂ ತಪ್ಪದೀ ಭ್ರಮಣ, ವಿಸ್ಮೃತಿಗಳ
ಮಾಟದಿಂದ ಹೊಸದಾಗಿ ತೋರುವುದು ನಾಮರೂಪಯುಗಳ
ಆಟವಾಡಿಸಿತ್ತೆನ್ನ ಹಲವು ಹಾರೈಕೆಗೀಡು ಮಾಡಿ
ಮೋಟನಿಂದ ಚೆಂಡನ್ನು ಹಿಡಿಸುವೊಣತಂತ್ರವನ್ನು ಹೂಡಿ॥ ॥೩೧॥

ಪ್ರಕೃತಿ ಮುಂಡೆ ಪರಮಾತ್ಮ ಸಚಿವೆಯಧಮೋತ್ತಮತೆಗಳಿಂದ
ಸ್ವಕೃತದೇಹಿಗಳ ದಂಗು ಬಡಿಸುವುದಕಂತ್ಯವಿಲ್ಲವೆಂದ
ಪ್ರಕೃತ ಸುಕೃತಬಲದಿಂದ ದೊರೆತ ಗುರುವವನೆ ಹೀಲಿ ಬೆಂಡು
ವಿಕೃತಿವೀಚಿಗಳ ಕಡಲ ದಾಟಲಿಲ್ಲಿಂದ ಮಿಾಸಿಕೊಂಡು॥ ॥೩೨॥

ಭಾನುಕೋಟಿ ಬೆಳಗುವ ವಿಯದ್ಗಣಗಳೊಳಗೆ ಹೊರಗೆ ಹೊಕ್ಕು
ಫೇನದೋರಿ ಮತ್ತೊಳಗೆ ಸೆಳೆವ ಕಡಲಂತೆ ಮಾಯೆಯುರ್ಕು
ನೀನು ಸುಮ್ಮನಿರೆ ನಡೆಯುತಿಹುದು ಸಂಕಲ್ಪ ಮಾಡುದೊರೆಯೆ
ಕಾಣಲಾರೆನನುಭವಿಸಲಾರೆ ಪೊರೆಯೆಮ್ಮ ತೆರೆದು ತೆರೆಯ॥ ॥೩೩॥

ತನುಮನಂಗಳಾಕ್ರಮಣದಿಂದ ಕೈ ಕಾಲು ಮುರಿದು ಕೊಂಡ
ಹನುಮನಾದ ಮತಿ ಲಂಕೆಗೆಯ್ದುವುದು ಹೇಗೆ ನಿನ್ನ ದಂಡ
ನನಗೆ ದೊರೆತರೆ ನಿನ್ನ ಸತ್ಯಸೀತೆಯನು ಕಾಣಬಲ್ಲೆ
ಘನಮಹಾತ್ಮ ಯೋಗೇಶ ರಮಣಗುರು ನಿಲ್ಲಲಾರೆನಿಲ್ಲೆ॥ ॥೩೪॥

ಪರತೆಯಿರುವನಕ ಪಾರತಂತ್ರ್ಯಭಯ ಹೋಗದೆಂದಿಗೂನೂ
ನರತೆಯಿರುವನಕ ನಾನು ಯಾರುಯೆಂದರಿಯಲಾರೆ ನಾನು।
ಅರಿತರೇನು ಮರೆವರಿವನುಂಗುತಿರೆ ಚಣಚಣಕ್ಕೆ ರಮಣ
ಸ್ಮರಣಕಿಲ್ಲ ಸಾತತ್ಯವಾದರೂ ಸ್ಮರಿಪೆ ಮಾಡಿ ನಮನ॥ ॥೩೫॥

ಆಕಾಶ ಖಂಡ ೫

ತೆರೆಯಲ್ ಕಂಗಳನೇಂ ಮಹಾಮುನಿಗಳಂತಾಂ ಮುಚ್ಚಲೇನಾತ್ಮಕೇ
ಸರಿಯಂ ಕಾಣೆನವಿದ್ಯೆಯೆಂಬ ವನದೊಳ್ ಸುತ್ತಾಡಿ ಸುತ್ತಾಡಿ ಸಾ–
ವಿರ ವಿದ್ಯಾಗುಹೆಯೊಳ್ ಮುನೀಂದ್ರರತುಲರ್ ನಿನ್ನಂ ನಿದಿಧ್ಯಾಸಿಸು
ತ್ತಿರುವಾಶ್ಚರ್ಯಮನೂಹಿಸಲ್ ಬರುವುದೇನಿರ್ದಲ್ಲೆ ನಾನಿರ್ಪೆನಾಃ॥ ॥೧॥

ಭೂಲೋಕಕ್ಕಿಳಿವಾಗಲೇ ಸಪರಿವಾರಂ ಬಂದೆನೆಂತೋ ಸ್ಮೃತಿ
ಪ್ರಾಲೇಯ ಪ್ರತಿರುದ್ಧಮಾಯ್ತು ವಿದ್ಯೆಯಿನಹಂಕಾರಂ ಚಿಗುರ್ದತ್ತು ಪಾ–
ತಾಲಾಂತರ್ಗತಕೂಪದಿಂದೆನೆ ಮನಃಕೇಂದ್ರಾನ್ಮತಿ ಪ್ರಸ್ಥಿತಂ
ಕಾಲಾದಿಪ್ರತಿಬಂಧದಿಂದ ಗುರುಕೇಳ್ ಮಾಯಾವಿ ನೀನಲ್ತೆ ಪೇಳ್॥ ॥೨॥

ನೀನೇ ಮಾಯೆಯೊ ಮಾಯೆ ನೀನೊ ಮತಿಗಂದಾಜಾಗದೋ ನಿಃಸ್ಪೃಹಂ
ನೀನೋ ಮಾಯೆಯೊ ನಿನ್ನ ಚಿನ್ಮಹಿಮೆಯೋ ನಿನ್ನಿಷ್ಟವೋ ಅಲ್ಲವೋ
ನಾನಾನೆಂಬುದನೆಂತು ಯಾಕೆ ಕಲಿಸಿರ್ಪೈ ಜೀವಿಗೀ ದೇಹದೊಳ್
ನೀನೆಲ್ಲೆಂಬುದು ತೋರದೇತಕೆ ಪುನರ್ಜನ್ಮಂ ದುರೂಹ್ಯಂಗಡ॥ ॥೩॥

ಕರ್ಮಕ್ಕಾಶ್ರಯ ಕೊಟ್ಟುದೇಕೆ ಭಗವನ್ ನಿನ್ನಿಚ್ಛೆಯಂತಾ ಜಡಂ
ಚರ್ಮಕ್ಕಂಟಿದೆಯಲ್ತೆ? ನೀಂಬಿಡಲಹೋ ಶೂನ್ಯೋಪಮಂ ಕರ್ಮಮೆಂ–
ದರ್ ಮಾದೇವ ಸಮಾಹಿತರ್ ಶ್ರುತಿವಿದರ್ ಮೌನೀಂದ್ರ ಮರ್ಮಜ್ಞ ಮ–
ದ್ಧರ್ಮಂ ಸಂದೆಯದಿಂದ ಸುತ್ತುವರಿದಿರ್ಕೇಂಗೈವೆ ಸರ್ವೇಶ್ವರ॥ ॥೪॥

ಅಪರಾಧಿಪ್ರಥಮಂ ಮನುಷ್ಯನೆನೆ ನಾನೊಪ್ಪೆ ನಿಸರ್ಗೋದ್ಭವಂ
ಚಪಲೋನ್ಮತ್ತಮನಂ ಬಹಿರ್ಮುಖತಯಾ ಸೃಷ್ಟಂ ನಿಸರ್ಗೇಶ್ವರ।
ಅಪಮಾನಾಸ್ಪದಮಲ್ತೆ ಹಿಂಸಿಸುವುದೀ ಪುತ್ರಾಭನಂ ಮುಕ್ತಿಗಾ–
ಲಪಿಸುತ್ತಿರ್ಪವನಂ ವಿಷಾದಹತನಂ ಕರ್ತವ್ಯಮೂಢಾತ್ಮನಂ॥ ॥೫॥

ಔಪಾಧಿಕ್ಯಮೊ ಕಾಲವಶ್ಯತೆಯೊ ಮೇಣ್ ಸ್ವಾಯತ್ತ ಮೂರ್ಖತ್ವಮೋ
ಶಾಪಗ್ರಸ್ತತೆಯೋ ಅದೇನಿದೆಯೋ ಈ ದೌರ್ಬಲ್ಯ ಕೇಂದ್ರಾತ್ಮಗೆ।
ಕೃಪೆಯುಂ ನಿನ್ನ ಗದಕ್ಕೆಯನ್ನ ಪರಿಹಾರೋಪಾಯಮೇನಾಗದೇ?
ಉಪದೇಶೇಽಜನುನಾಸಿಕಂ ಶ್ರುತಿಗೆ ಕೇಳ್ವಂತಾಗದೇ ಪೋದುದೇ॥ ॥೬॥

ಶೋಚ್ಯತ್ವಂ ನನಗಿಲ್ಲವೇಂ ಪ್ರಮುಖ ಸರ್ವಾರಾಧ್ಯರೊಳ್ ಶ್ರೀಗುರೋ
ನೈಚ್ಯಕ್ಕಾಮೆನಿತಾಗಬೇಕು ಪರಹಿಂಸೋದ್ದೇಶಸಂಪನ್ನರಾ।
ವಾಚ್ಯಂ ವೇಧ್ಯಮಪಾಕೃತಂ ಸುಮತಿಗಳೆಂತೆಂಬುದೇ ತೋರದೋ
ಪ್ರಾಚ್ಯೋಕ್ತ್ಯಾ ಗತಪಾಪಕೃತ್ಯವಿವಿಧ ವ್ಯಾಖ್ಯಾನ ಮಗ್ರಾಹ್ಯಮೋ॥ ॥೭॥

ಪಂಕೇಲಗ್ನಗಜೋಪಮಂ ತುಳಿದು ಮುಳ್ಳಂ ಕಾರ್ಯನಿರ್ವಾಹದೊಳ್
ಶಂಕಾರೂಪದ ಬುದ್ಧಿಯೋಗಬಲದಿಂ ಪೇಳ್ದೆಲ್ಲ ಶಾಸ್ತ್ರಂಗಳೊಳ್।
ಸಂಕೇತಪ್ರಚಿತಂ ಗುರೋತವ ಪದದ್ವಂದ್ವಂ ಸ್ವಮಿತ್ರೇಣ ನಿಃ–
ಶಂಕಂ ಮಾಂ ಕುರು ಮುಕ್ತಿಯಿಂದೊ ಮುನಿಸಂಬಿಟ್ಟೋ ಧುರೀಣೇಶ್ವರಾ॥
॥೮॥

ಪೋಗೆನ್ ರಕ್ತಕುಲಾಚಲಕ್ಕೆ ಹಿಮವತ್ಪಾದಕ್ಕೆ ದೇಶಾಂತರ
ಕ್ಕಾಗೆನ್ ಯಾತ್ರಿಕ ನಾಂ ಪೊದಳ್ದಿರೆ ಶಿವಂ ನೀಂ ಸರ್ವಹೃದ್ವ್ಯೋಮದೊಳ್।
ನಾಗೇಂದ್ರಂಬೊಲಶಾಂತನಂಕುಶಹತಂ ನಿನ್ನಂ ನಿರಾಕಾರನಂ
ಯೋಗೇನಾತ್ರಭಜಾಮಿ ಸಂತತಮಿದೇ ಸರ್ವಾರ್ಪಣ ಪ್ರಕ್ರಿಯೆ॥ ॥೯॥

ಹರಿದಾವಾರಮನೆಲ್ಲಮಂ ವಿಕಸಿಸಲ್ ವ್ಯಕ್ತಿತ್ವಮಂ ಯತ್ನಿಸು–
ತ್ತಿರಿದೆಂ ನಿನ್ನಗಲಕ್ಕೆ ಪೋಗಲೆಡರ್ಗಳ್ ದುರ್ವಾರ್ಯಗಳ್ ಸಾಸಿರಂ।
ತಿರಿದುಂ ವಿದ್ಯೆಗೆ ಸಾಲದೆಂಬುದನುಮಾತತ್ವಂಬರಂ ನೋಡಿದೆಂ
ಪರಮಾರ್ಥಂ ಬಹುದೂರಮಾಯ್ತೆಟುಕದೆಂದಾಯಾಸದೊಳ್ ಬಿದ್ದೆನೋ॥ ॥೧೦॥

ಅರಿತೆಂ ನ್ಯಾಯಮನಿಂದ್ರಿಯಾರ್ಥಗಳೊಳತ್ಯಾಜ್ಯಂಗಳಂ ಬೇಡಿ ನಾಂ
ನುರಿತೆಂ ಲೋಕದಸತ್ಯಚರ್ಯೆಯಳವಂ ಪೊಕ್ಕಂತರಂಗಸ್ಥ ದುಶ್
ಚರೆ ತಂದೊಡ್ಡಿದ ವಿಘ್ನ ವಾರಿಧಿಗಳೊಳ್ ಷಡ್ವೈರಿವೃಂದೋದರೆ
ಪರನಲ್ಲಂ ಪರನೆಂದು ಭಾವಿಸಿ ಪರಂ ನಾನಾದೆನೀ ಬಾಳಿನೊಳ್॥ ॥೧೧॥

ಪುಣ್ಯಾತ್ಮರ್ ಗತಿಸಲ್ ಪುರಾಣಗತರಾಗಲ್ ತ್ರಿಂಶವರ್ಷಂಗಳೊಳ್
ಗಣ್ಯರ್ ಭಾರತದೇಶದೊಳ್ ಗಣಿಸದಾದರ್ ಧರ್ಮಮರ್ಮಂಗಳಂ।
ಧನ್ಯತ್ವಕ್ಕೆ ದುರಾಗ್ರಹಂ ದುರುಪಧಿನ್ಯಾಸಂ ಸದಾ ಸಾಧನಂ
ಪಣ್ಯಾಪಣ್ಯ ವಿವೇಕವರ್ಜಿತರಿಗೆಂದಾಯ್ತೇ ಕಿದಂ ಪೇಳ್ವರಾರ್॥ ॥೧೨॥

ಇವರೇ ಶೋಚ್ಯರೆ ನಾನೆ ಪೇಳ್ ತಿಳಿಯದಂತಮೌನಮಂ ತಾಳ್ದಿದೆಂ
ಪವನಂ ಪಾವನನಿರ್ಪವೊಲ್ ಮನದೊಳಾನಿರ್ಪೆಂ ಸದಾ ನಿರ್ಮಲಂ।
ಅವನೀಜಾತರ ಮಧ್ಯದೊಳ್ ನೆನೆಯುತಾನಿನ್ನಂಘ್ರಿ ಪದ್ಮಂಗಳಂ
ಶಿವನೀಂಪ್ರೇರಿಸಿದಂತೆ ಮಾಳ್ಪೆಪಥಮಂ ನಾನನ್ಯಮಂಕಾಣೆನೋ॥ ॥೧೩॥

ಶವನೋ ನಾಂ ಶಿವನೋ ವಿಶಾಲಮನನೋ ಸಂಕೋಚಬದ್ಧಾತ್ಮನೋ
ಭವಿಯೋ ನಾಂಕವಿಯೋ ಕಠೋರಕರಣವ್ಯಾಪಾರನೋ ಸೌಮ್ಯಕ–
ರ್ಮವನೇ ಮಾಳ್ಪ ಪರೋಪಕಾರರತನೋ ನಾಂ ಶತ್ರುವೋ ಮಿತ್ರನೋ
ಧವ ನೀನೇ ಕೊಡಲಾರ್ಪೆಯಯ್ಯಬಿರುದಂ ಲೋಕಂ ಕೊಡಲ್ ಕೊಳ್ಳೆ ನಾಂ॥
॥೧೪॥

ಹವಿಯೇ ನಾಂ ನಿನಗಗ್ನಿರೂಪನೆ ಗುರೋ ಶುದ್ಧತ್ವಮಂ ಕಾಯ್ವುದು
ಹವಿಯಂ ಸ್ವೀಕರಿಪಂಗೆ ಮಿಾಸಲಿದು ಮತ್ಸತ್ಯರ್ಥಸಾರಂ ಗುರು
ಸ್ತವನಂ ಶ್ರದ್ಧೆಯ ಮೂಲಮ ಪ್ರತಿಹತಂ ನಿನ್ನಿಂದ ಮಧ್ಯಾತ್ಮಸಂ–
ಸ್ರವಣ ಪ್ರಾಣದ ಪಥ್ಯ ತಥ್ಯ ಶರಣಂ ನೀನೇ ಸದಾನಂದಧೀ॥ ॥೧೫॥

ನಾಶ್ಯಂ ಕಾಲವಶೇನ ಯಾವುದದನೀಂ ನಿತ್ಯತ್ವಕೊಯ್ದಿರ್ಪೆಯಾ?
ಭಾಷ್ಯಂ ನೀನಮೃತತ್ವಕಾದೆ ಗುರುವೇ ನೀನಲ್ಲದಿನ್ನಾವುದು।
ನಾಶಾತೀತಮನಾದ್ಯನಂತ ಸದಸದ್ಧರ್ಮಾತಿರಿಕ್ತಪ್ರಭೋ
ಶ್ವಾಸೋಚ್ಛ್ವಾಸ ನಿಯಾಮಕ ಪ್ರಕೃತಿರಾಡಾನಂದ ಚಂದ್ರಪ್ರಭ॥ ॥೧೬॥

ಸದಸಜ್ಜಾಗರಕಾರಣಂ ಪ್ರಥಮತಃ ಪ್ರಾಣಾತ್ಮಗಳ್ ಮೂಡಲೀ
ಗದಿತೋರ್ವೀತಲದೊಳ್ ಸ್ವಭಾವಗುಣದಿಂ ನಿನ್ನಿಚ್ಛೆಯೆಂದೆಂಬರಾ।–
ಸ್ಪದಮಾದ ತ್ರಿಗುಣಂಗಳಿಂಗೆ ಭವಬೀಜಂಗಳ್ಗವೇ ಪ್ರಾಕೃತಂ
ವಿಧಿ ನೀನೇ ಹರಿ ನೀನೆ ರುದ್ರನಧಿಕಂ ನೀನೇ ಸ್ವತಃ ಪ್ರೇರಕಂ॥ ॥೧೭॥

ಅಸಮಾಧಾನಕರಂ ವಿದಗ್ಧವರರಿಂಗೀ ಮಿಶ್ರತತ್ವೋದಿತಂ
ಪಶುವರ್ಗಂ ತ್ರಿಗುಣಾತ್ಮಕಂ ಸ್ವಪರಭೇದಜ್ಞಾನಜಂ ಕಾಲಿಕಂ।
ವಿಷಪೀಯೂಷ ಸಮಾನ ಮಿಶ್ರಣಮಿದೆಂದುಂ ತೃಪ್ತಿಯಂ ನೀಡದೋ
ಪೊಸತಂ ನೀಂ ಕೊಡಲಾರೆಯಾ ನರರಿಗೋ ವಿಜ್ಞಾನ ಸರ್ವೇಶ್ವರಾ॥ ॥೧೮॥

ನಿನಗಂ ಮೇಣ್ ಜಗಕಂ ನಿಸರ್ಗಗತಿಗಂ ಸಂಬಂಧಮಂ ಶಾಸ್ತ್ರಗಳ್
ಕೊನೆಗಂ ಸ್ಪಷ್ಟತೆಯಿಂದ ಪೇಳದಿರಲೇಗೈವೆಂ ಮಿದುಳ್ ಜೀರ್ಣಿಸಲಾ
ಘನ ಯತ್ನಗಳನೆಷ್ಟು ಮಾಡಿದೊಡೆಯುಂ ಶ್ರೀಗೌಡಪಾದೋಕ್ತಮಾ
ವನರಾಜಂಬೊಲಜಯ್ಯಮಪ್ರತಿಹತಂ ಪರ್ದಿಂಗೆ ಬಿರ್ದಿಕ್ಕುಗುಂ॥ ॥೧೯॥

ಧರಣೀಮಂಡಲದೊಳ್ ವಿಚಾರಮತಿಗಳ್ ವ್ಯಾಘಾತಕೀಡಾಗದೆ
ಪರಮಾಚಾರ್ಯತೆಯಿಂದೆ ಪೂಜ್ಯರೆನಿಸಲ್ ಯತ್ನಂಗಳಂ ಮಾಡಿ ಸೋ–
ತಿರಲಾಕಾಶದ ಬೇಲಿಯಾಚೆಗಿದೆ ನಿನ್ನಂತಃಸ್ವರಂ ನಿನ್ನೊಳೇ
ಅರತದ್ಭುತವೇದವೇದ್ಯ ಗುರುರಾಡ್ ಗುಟ್ಟಿಂಗೆ ಪೂರ್ಣತ್ವಮೇ?॥ ॥೨೦॥

ನಿನಗಷ್ಟೇ ನಿಜದರ್ಶನಂ ನಮಗೆ ನೀಂ ನೀನಾಗಿಯೇ ಇರ್ಪೆಯಾ?
ಮನಮಂ ಶೂನ್ಯತೆಗಿಕ್ಕಲೀನರತೆಯಂ ದೇವತ್ವಕೆತ್ತಲ್ ಸದಾ।
ದಿನನಾಥೇಶ್ವರ ಬೇಡಿ ಕಾಡಿದೊಡೆಯುಂ ಬ್ರಹ್ಮತ್ವಮಂ ನೀಡೆಯಾ?
ಶನಿಗಂಜಿ ಪ್ರತಿ ಕಾರ್ಯಮಂ ನಡೆಸಬೇಕೇ ವಿಂಧ್ಯ ಪಾದೇಶ್ವರಾ?॥ ॥೨೧॥

ವಿನತಾನಂದನನಂತೆ ನಾಂ ಪೊರಲೆ ನಿನ್ನಂ ಸೇವಿಸಲ್ ನಂದಿವೊಲ್
ಹನುಮಂತಂಬೊಲಜಯ್ಯನಾಗಲೆ? ವಿಭೋ ಕೊಟ್ಟಿಲ್ಲಮಾಶಕ್ತಿಯಂ।
ದನದಂತಿಲ್ಲದ ಕೆಚ್ಚಲಿಂದ ತನಿವಾಲನ್ನೀಯಲೇನಪ್ಪುದೇ?
ಮನಮನ್ನೀಯಲದಕ್ಕೆ ವಿಘ್ನ ಶತಮಂ ಮುಂದಿಟ್ಟೆ ವಿದ್ಯೇಶ್ವರಾ॥ ॥೨೨॥

ನಯದಿಂದಾದ್ಯನೆ ಬಾನೊಳಿರ್ಪವಿಭುವೇ ನಾನಾದೆಯೋತೋರ್ದೆಯೋ
ಭಯಕೇಂ ಬಾನ್ ಕೊಡೆಯೇನದಕ್ಕೆ ಗುರುರಾಣ್ನಿನ್ನಂತೆ ಸಂರಕ್ಷಿಸಲ್?
ಬಯಲೇ ಬಾಹುವೆ? ಸಾಧ್ಯವಿಲ್ಲ ಮಚಲಂ ಬಾನ್ ಬೆಟ್ಟು ನೀನಾದೊಡಂ
ವ್ಯಯಮಿಲ್ಲಂ ನಿನಗೊಬ್ಬಗೇ ಬಲದ ನೀನಾಧಾರ ಸರ್ವಂಕರ॥ ॥೨೩॥

ಸಂಭಾವ್ಯಂ ಸಕಲಂ ಭವಿಷ್ಯಕಥನಾದ್ ಭುಕ್ಕುಂಡನಂ ಮೆಚ್ಚಿ ತಾಂ
ಜಂಭಾರಿ ಪ್ರತಿಮಂ ಪುರಸ್ಕರಿಸಿದಂ ಶ್ರೀಭೋಜರಾಡೆಂದೊಡೆ।
ಪಂಡಾಢ್ಯರ್ ಪರಮಾರ್ಥಿಗಳ್ ಹುಡುಕಿದರ್ ಸತ್‌ಕೋಶಮಂ ಕಾಣದಾ
ಗಂಡರ್ ನಕ್ಕು ಕೃತಾರ್ಥರೆಂದರಿತೊಡಂ ಬಾಳ್ "ಭಬ್ಬ"ಮೇ ಆದುದೋ॥
॥೨೪॥

ಇಷ್ಟಂ ಚಂಚಲಮಿಾಶ ನಿನ್ನ ನಿಸದಂ ಚಾಂಚಲ್ಯಮಿಲ್ಲಾದೊಡಾ–
ಕಷ್ಟಂ ದುರ್ಯಜಮಾನಕಿಂಕರಗೆ ವರ್ಗಂ ಲಭ್ಯಮಿಲ್ಲೆಂಬವೊಲ್।
ನಷ್ಟಶ್ರದ್ಧನ ಬಾಳೆ ನಿತ್ಯನರಕಂ ಪ್ರತ್ಯಾಶಯಾ ವರ್ಜಿತಂ
ಶಿಷ್ಟೇಷ್ಟಪ್ರದ ನಿನ್ನನುಗ್ರಹಮಹೋ ಸರ್ವಾಧಿಕಾರಪ್ರದಂ॥ ॥೨೫॥

ಸತ್ಯಂತ್ಯದ್ ಗುಣವತ್, ತ್ಯದಾದಿರಹಿತಂ ನೈಷ್ಕರ್ಮ್ಯಸಿದ್ಧಿಪ್ರದಂ
ತ್ಯತ್ತಾಸಂಭೃತಮಕ್ಕುನೀರನೊರೆವೊಲ್ ತಾತ್ಕಾಲಿಕಂ ವಂಚಕಂ।
ಸತ್ಯದ್‌ಭೇದಮಚಿಂತ್ಯಮಾಗಿರಲದಿರ್ಕೊ್ ಇಲ್ಲವೋ ಮುಕ್ತಿಯೇ
ತ್ಯತ್ತಾಬಾಧಿತಮಕ್ಕು ಸತ್ಯ ಸಹವಾಸಂ ನಿತ್ಯಮೇ ತೃತ್ತಿಗೆ?॥ ॥೨೬॥

ದುರ್ಭೇದ್ಯಂ ತ್ಯದುಪಗ್ರಹಂಗಳಬಲಂ ಮಾಯಾಪ್ರವಾಹಾಸ್ಪದಂ
ನಿರ್ಭಾಗ್ಯಂಗಡ ನೋಡದಿರ್ದಪನವಿದ್ಯಾರಂಧ್ರಮಂ ಮಾಯೆಯೊಳ್।
ಸದ್‌ಬೋಧಾಹತಮಕ್ಕವಿದ್ಯೆ ಗುರುಕಾರುಣ್ಯೇಂದ್ರಜಾಲಂ ಸದಾ
ಸದ್ ವಿದ್ಯಾಮೃತದೋಯಸಿಸ್ ಮರುವಿನೊಳ್ ಮಾಯಾಜಗದ್ದುಸ್ಸಹಂ॥ ॥೨೭॥

ಲುಚ್ಚರ್ ಹುಚ್ಚರದೇ ಪ್ರವಾಹದೊಳಗಿರ್ಪುಚ್ಚರ್ ತಥಾಪ್ಯುತ್ತಮರ್
ಬಚ್ಚಲ್ ಮಯ ಚರಂಡಿಗಳ್ ಗುಡಿಸದಿರ್ಪನ್ನರ್ ಸದಾ ದುಃಖಿಗಳ್
ಉಚ್ಚರ್ ತಪ್ಪದೆ ಯತ್ನದಿಂ ಗುಡಿಸುವರ್ ನೈರ್ಮಲ್ಯಕೇಬದ್ಧರೆಂ–
ಬೆಚ್ಚರ್ ಕಾಯ್ವವೊಲಿಟ್ಟು ಸಾಕು ಗುರುವೇ ಚೈತನ್ಯಸೂರ್ಯಪ್ರಭ॥ ॥೨೮॥

ಯತ್ನಂ ದೇಹಿ ತಥೈವ ತಾಮಸಹರ ಪ್ರತ್ಯೇಕತಾ ಬುದ್ಧಿಯಂ
ಯುಕ್ತಿತ್ಯಾಗಕೆ ನೂಕದಿರ್ ವಿಪದನಾರೋಗ್ಯಾದಿ ವಿಘ್ನಂಗಳಿಂ
ಪ್ರತ್ಯುತ್ಪನ್ನಮತಿತ್ವಮಂ ಕೊಡು ಜಗತ್ ಸರ್ವಂ ತ್ವದಿಚ್ಛಾ ಬಲಾತ್
ತತ್ತ್ವೈಕ್ಯಕ್ಕೆರವಾಗದಂತೆಸಗಿದೇ ಮದ್ಯಾಚನಂ ಶ್ರೀಗುರೋ॥ ॥೨೯॥

ಆಯಾಮಕ್ಕಿತಿಯುಂಟೆ ನಿನ್ನ ವಿಭವಕ್ಕಾಯಾಮಮತ್ಯುನ್ನತಂ
ಮಾಯಾನಂತತೆಯುಂ ಸುದೀರ್ಘತೆಯ ಚಿಹ್ನಂ ನಿನ್ನ ನಿಂತಿರ್ಪೆಯೆಂ–
ದಾಯಾಸಂಬಡದಿರ್ಪೆನೆತ್ತಿ ಪಿಡಿದೀ ಕಾವ್ಯಪ್ರಯೋಗಂಗಳೊಳ್
ಶ್ರೇಯಃ ಪೂರ್ಣತೆ ನಿನ್ನದೀ ಬಗೆಯದೇ ಶ್ರದ್ಧಾಲುತಾಕಾರಣಂ॥ ॥೩೦॥

ಯೋಗಭ್ರಂಶಮನಿಂತು ನೀಗು ಪರಮಪ್ರಾಚಾರ್ಯ ನನ್ನೊಳ್ ಶ್ರುತ
ತ್ಯಾಗಕ್ಕಂಜದ ಧೈರ್ಯಮಂ ಪಡೆದೆ ಸಂದೇಹಂ ಬಡೆನ್ ವಿಶ್ವರಾಟ್।
ತ್ಯಾಗಕ್ಕೇನಿರದಂತೆ ಮಾಡು ಬುವಿಯೊಳ್ ಸ್ವಾಮ್ಯಂ ಸದಾ ನಿನ್ನದೆಂ–
ದೀಗಳ್ ಕೂಗುವೆ ವಾಕ್ ಚತುರ್ದಶೆಗಳಿಂ ಸಂಕಲ್ಪಕೇನಿನ್ನಿದೇ?॥ ॥೩೧॥

ದಾನಾದಾನಫಲೈಕ್ಯಯೋಗಜಮತಿರ್ನಿರ್ಣಾಮರೂಪಾಸ್ಪದಂ–
ದಾನೀಯತ್ವದಪಸ್ಥಿತಿಪ್ರಶಮನಂ ದಾನಿತ್ವದ ಪ್ರೇರಕ
ನಾಂನೀನೆಂಬಸಮಾನಮಂ ಕಳೆಯೆ ನೀಂ ಮಧ್ಯಸ್ಥನೆಲ್ಲಿರ್ಪನೀ
ನಾನಿಲ್ಲಿನ್ನಭಿಮಾನಕಾವ ನೆಲೆಯುಂಟಾನಂದ ಮಂದಾನಿಲ॥ ॥೩೨॥

ಅಭಿಮಾನಕ್ಕೆ ಪರತ್ವವುಂಟುದಿದರ ಪ್ರಾಪಂಚಿಕಾರ್ಥಂಗಳ
ನೃಭಯಂ ದ್ವೇಷಮನಾಥತಾವಧಿಕ ದುಃಖಂ ದುರ್ವಿಚಾರಾಗ್ರಹಂ।
ವ್ಯಭಿಚಾರಂ ವಿಷಯಾಂತರಂ ಬರಲದಕ್ಕಿರ್ಪಂಥ ಪಾತ್ರತ್ವಕೆ
ನಭದಂತಿರ್ಪುದೆ ಸರ್ವಧರ್ಮಮಕುಟಂ ನಿರ್ಭೀತಿದಂ ನೀರವ॥ ॥೩೩॥

ಅಶರೀರತ್ವಮನಾಂತೆ ನೀಂ ತನುವಿನೊಳ್ ಬಿಟ್ಟಂತೆತೋರ್ಪಾಗಳುಂ
ಶಿಶುಹಾಸಂಬೊಲನನ್ಯನಾದೆ ಕೊನೆಗಂ ಸಚ್ಚಿತ್ ಪರಾನಂದನಾ–
ದೆ ಶಿವ ಶ್ರೀರಮಣ ಪ್ರಣಮ್ಯನನುಕಾರ್ಯಂ ಸತ್ ಪ್ರಜಾ ಕೋಟಿಗೀ–
ದಶೆಯೊಳ್ ಕ್ಷಾತ್ರದ ಶೋಷಕತ್ವಮಗುರ್ತಾಕಾಶಂಬರಂ ಗರ್ಜಿಸಲ್॥ ॥೩೪॥

ತಲೆಯಂ ಬಾಡಿಗೆಗಿತ್ತು ಬಾಳ್ವರನಿಬರ್ ಸತ್ಯಕ್ಕೆ ಸಾವಂ ತರಲ್
ಪಲವುಂ ನಾಲಗೆಯಿಂದೆ ನೂರುಸಿರ್ದಪರ್ ಮದ್ಯಾರ್ಥಿಗಳ್ ಸ್ವಾರ್ಥಿಗಳ್
ಕೆಲರಿಂದಾಗಿ ಕಬಂಧರುಚ್ಚಕುಲಜರ್ ಮರ್ಯಾದೆಯಂ ಮಾರುವರ್
ದಲಿತರ್ ದೂಷಿತಕರ್ಮರಾಗಿ ಮೆರೆವರ್ ಸರ್ವಾಧಿಕಾರಿತ್ವದೊಳ್॥ ॥೩೫॥

ಕಾಲಖಂಡ ೬

ಇರಿವರು ಬೆನ್ನಿಗೆ ತಾಮಸ ಸತಿಯರು
ಕೊರೆವರು ಮಕ್ಕಳು ಕರುಳನ್ನು।
ಅರಿಷಡ್ವರ್ಗವ ಬಳಸಿದ ಮಿತ್ರರು
ನರಿತನದಿಂದಾಕ್ರಮಿಸುವರು॥ ॥೧॥

ವಿದ್ಯೆಯ ನಂಬದವಿದ್ಯೆಯ ನಂಬುವ
ಬದ್ಧರು ಬುದ್ಧತೆಯಿಂ ಮೆರೆವರ್
ಖದ್ಯೋತಗಳೆಂಬವು ಸೂರ್ಯರು ತಾವ್
ಕದ್ದಪ್ಪರ್ ಶ್ರೀಮಂತರುಗಳ್॥ ॥೨॥

ಕಳ್ಳರು ಸುಳ್ಳರು ಕಾಕರು, ಪೋಕರು
ದಲ್ಲಾಲಿಗಳೆಂದೆನಿಸಿಹರು
ಅಲ್ಲಲ್ಲಿಹ ಸಜ್ಜನಧನಮಾನಗ–
ಳೆಲ್ಲವ ಕಬಳಿಸ ಹೊರಟಿಹರು॥ ॥೩॥

ವಾಸ್ತವವಪ್ರಿಯ, ಕಾಣದೆ ಬರೆಯುವ–
ರಾಸ್ತಿಗಳಾದರು ಕನ್ನಡಕೆ
ಮಾಸ್ತಿಗಳನು ಮೂಲೆಗೆ ತಳ್ಳುವ ಜನ–
ರಾಸ್ಥೆಗೆ ಪೋಷಣೆಯಾಳ್ವವರ॥ ॥೪॥

ಪ್ರತ್ಯಕ್ಷವ ಸುಳ್ಳೆಂದಪ್ರತ್ಯಕ್ಷವು
ಸತ್ಯಾಶ್ರಯರೆದೆ ಮೆಟ್ಟುತಿದೆ
ನಿತ್ಯವ್ಯವಹಾರದ ದಿನಗಳಲಿ ಸ–
ಮಿತ್ತಗ್ನಿಯ ತಾ ನುಂಗುತಿದೆ॥ ॥೫॥

ಅಭ್ಯುತ್ಥಾನವಧರ್ಮಕೆ ಜಗದಲಿ
ಸಭ್ಯರ ಹೀರಲು ಸರ್ವಕರ।
ದುರ್ಭಾಗ್ಯರ ದುಮ್ಮಾನಕೆ ದೂಡುವ
ದರ್ಬಾರ್ ಭಾರತ ಭೂಷಣರ॥ ॥೬॥

ಮೋಹನದಾಸ ಸುಭಾಷತಿಲಕರಿಗೆ
ಬಾಹ್ಯಸ್ತುತಿಯಂತರ್ದ್ರೋಹ।
ಕಾವರ ಕೊಲ್ಲುವ ಕಾರ್ಯವೆ ವಲ್ಲಭ
ದೇವರ ಪೂಜೆ! ಸುಜನದಾಹ॥ ॥೭॥

ಇದ್ದಷ್ಟು ಪ್ರೀತಿಯ ರುಚಿ ನೋಡದೆ
ಕದ್ದುಂಬವಸರ ಶಾಸಕಗೆ
ಸದ್‌ಬುದ್ಧಿಯ ಜನರಲ್ಲಿಡಗೊಡದಿಹ
ಸದ್ಯೋವರ್ತನೆ ಸಚಿವನಿಗೆ॥ ॥೮॥

ರಾವಣ ರಾಮನ ವೇಷವ ಧರಿಸುವ
ಮಾಯಾವಿತ್ವದೆ ನೋಯುತಿಹ
ದೇವರಮಣ ಭಾರತವನು ನೋಡೆಯ
ನಾವೂ ಬೇಡವೆ ನಿನಗೆ ಸಹ॥ ॥೯॥

ಸುಖವೂ ಕನಸಿನವೋಲ್ ದುರುಪಾಹಿತ
ದುಃಖವು ಮೂರ್ಖರು ಕೊಟ್ಟ ವರ।
ಅಖಿಲವು ತಾತ್ಕಾಲಿಕ ತಾದ್ದೇಹಿಕ
ಆದರೆ ಲಯಿಸನದೇಕೆ ಹರ?॥ ॥೧೦॥

ಏಕೆಂಬುದಕೇಳಲೆ ಬೇಡವೊ ಎಂ–
ಬಾಕೂತವ ಶಿಷ್ಯನಿಗೊರೆದೆ
ಬೇಕಾದುದನಾಶ್ರಮದಿಂದೊಯ್ಯಿರಿ
ಪೋಕರಿಗಂದುಪದೇಶಿಸಿದೆ॥ ॥೧೧॥

ಯೋಗಭ್ರಷ್ಟರ ಮರೆತಂತುಸಿರಿದ
ಯೋಗಿಯೆ ಯೋಗವದೆಂಬರಲಾ
ಮಾಗದ ಬುದ್ಧಿಯ ಸಾಧುಗಳೋ ಗುರು
ನಾಗಮದೀಯಗೆ ಬಾಯೆ ಬಲ॥ ॥೧೨॥

ಮೃಗಮಿಾನ್ ಸಜ್ಜನರೀಗಳೆ ದೇಶವ
ನಗಲಲಿ–ಎಂಬೆಯ? ನಾನರಿಯೆ।
ನಗುವೆಯ ಸುಜನಾಹಂಕೃತಿಯತ್ತಲ್
ಭಗವನ್ ಕೇಡಿಗೆ ಬಹುಸಿರಿಯೆ?॥ ॥೧೩॥

ಕೇಳಲು ನಾನಾರ್ ಮುಚ್ಚುವೆ ಬಾಯನು
ಹೇಳಿದುದಷ್ಟನ್ನೇ ಹಿಡಿದು
ಬಾಳಿನೊಳೀಗಲೆ ಪಾತಕಲಿಸ ಬಾ
ನಾಳಿಗೆ ದೂಡದರುಹು ಬಡಿದು॥ ॥೧೪॥

ನ್ಯಾಯವಿಲಂಬನವನ್ಯಾಯಕೆ ಮಿಗಿ–
ಲಾಯಿತು ದೇಶದೊಳಿಂದು ಗುರೋ
ಮಾಯೆಯ ಕಲ್ಪನೆ ಬಹುಕಿರಿದಾಯಿತು
ಮಾಯಿಗಳಾದಧಿರಥರೆದುರು॥ ॥೧೫॥

ಸ್ವಾತಂತ್ರ್ಯವೆ ಬರಿ ಮಾಯೆಯಿದೆನಿಸಿರೆ
ಮುಕ್ತಿಯ ಸತ್ಯವ ನಂಬುವರೇ?
ಕಾತಂತ್ರಕ್ಕೂ ಕಾಲವನೀಡಿರೆ
ನಿನ್ನಿಚ್ಛೆಗೆಯೆದುರಾಡುವರೇ?॥ ॥೧೬॥

ಸೊಕ್ಕುವ ಬಿಕ್ಕುವ ಯೆರಗುವ ಮರುಗುವ
ಲೆಕ್ಕಿಗ ಮಾಡಿಹ ಬೇರೀಜು
ಲಕ್ಷಾಂತರವರ್ಷಗಳಲ್ಲೂ ಸರಿ–
ಯಕ್ಷರವಿತಿಹಾಸದ ಮೋಜು!॥ ॥೧೭॥

ನಿನ್ನಿತಿಹಾಸವೆನನ್ನಿತಿಹಾಸವು
ಮಾಯಾದೇಹವ ಹೊತ್ತೆಮೊದಲ್।
ಅನ್ನೆಯ ತಾಳದೆ ನೀನರುಣಾಚಲ
ಚಿಹ್ನನನಪ್ಪಿದ ಕಥೆಯೆತೊದಲ್?॥ ॥೧೮॥

ತೊದಲೀ ಜಗವೆಂದೆನಿಸಿದ ಮೇಲೇ
ಸಹಜ ಸಮಾಧಿಯೆ ಸಹಜವಲಾ।
ಬದಲಿಸಲಾರನು ರಮಣನು ಕೂಡಾ
ಸೂರ್ಯ ಕುಟುಂಬವ ಕ್ರಾಂತಿಬಲ॥ ॥೧೯॥

ಅತಿವಿರಲಪ್ರತಿಭಟನಾಜಯವೊಳಿತಿಗೆ
ಅದು ಕೂಡಾ ಕೆಲ ಕಾಲ ಚಿರ
ಪೃಥು ವೈಕುಂಠವ ಬುವಿಗಿತ್ತರದೂ
ಕ್ಷತವಾಯ್ತೀಗಳ್ ಪಾಪಭರ॥ ॥೨೦॥

ಜಗದತಿತರವಿಂದರಮುಕ್ತಿ ಯು ಸಹ
ಯುಗ ಮುಗಿದೊಡನೆಯೆ ಅದರ ಬರ
ಭಗವದ್ರಮಣನ ಕೃಪೆ ಕೊಟ್ಟದ್ದೂ
ಮುಗಿದಿತ್ತೊಬ್ಬ ವ್ಯಕ್ತಿಪರ॥ ॥೨೧॥

ನಾವೇ ನಮ್ಮ ಶ್ರದ್ಧೆವೊಲಪ್ಪೆವು
ನೀವೋ ನಿಮ್ಮ ಶ್ರದ್ಧೆವೊಲು
ಶ್ರದ್ಧಾಹೀನನ ಚಪಲಶ್ರದ್ಧನ
ಬುದ್ಧಿಯು ನೀರಿನ ಗುಳ್ಳೆವೊಲು॥ ॥೨೨॥

ಈ ಜನ್ಮದೊಳೀಶ್ರದ್ಧೆ ಫಲಿಸಲೂ–
ಬಹುದಪರೂಪಕೆ; ಫಲಿಸದಿರೆ
ಜನ್ಮಾಂತರಗಳ ನಂಬುವುದೊಂದೇ
ಮಾನವನಿಗೆ ಶಿವ ಕೊಟ್ಟ ಬರೆ॥ ॥೨೩॥

ಪ್ಲಾಟಿನಮೆದೆಯನು ಗುರುರಮಣನೆ ಕೊಡು
ನಾಟವು ಬರಿಯುಪದೇಶಗಳು
ಪ್ಲಾಟಿನಮನ್ನೇ ಸುಟ್ಟಿಡು ಬರೆಗಳ
ಕೆಡಹಲು ಚಿಂತಾವಾಸಗಳ॥ ॥೨೪॥

ಅಟ್ಟರೆ ಬೇಯದ ಸುಟ್ಟರೆ ನಶಿಸದ
ಬಟ್ಟೆಯ ಕಲೆ ಭೂ ಸಂಸ್ಕಾರ
ಅಟ್ಟುಣ್ಣಲು ಬಾರದ ಮುಪ್ಪಡಸಿರೆ
ದೃಷ್ಟಿಗೆ ತೋರದು ನಿನ್ನ ವರ॥ ॥೨೫॥

ಯತಿತತಿಮತಿವಜ್ರಾಯುಧರೂಪನೆ
ಅತಿಭಗವಂತೆ ತಿರುಗಿತ್ತ
ಸತತಾರಾಧಾನ ಶಕ್ತಿಯ ನಿನ್ನ–
ಪ್ರತಿಮತೆಯೀಯಲಿ ಗುರಿಹೊತ್ತ॥ ॥೨೬॥

ನೀನೇ ಗುರಿ ನಿನ್ನವತಾರವೆ ಗುರಿ
ನಿನ್ನಂತೇವಾಸಿತ್ವ ಗುರಿ
ನಿನ್ನಿಚ್ಛೆಯ ಬಲ ಸರ್ವಾಧಿಕ ಛಲ
ನಿನ್ನ ಸಮಾಧಿಯೆ ನನ್ನ ಗುರಿ॥ ॥೨೭॥

ನಾನಾನೆನ್ನಲು ಕಲಿಸಿದ ಗುರುವೇ
ನಾನಲ್ಲದ ಕಲ್ಪನೆಗಳನು
ನೀನೇ ದಹಿಸಲು ಶಕ್ತ ಕೃಪಾಕರ
ನಾನನುಕರಿಸಿದೆ ಪಶುಗಳನು॥ ॥೨೮॥

ಸೂರ್ಯಗೆ ಬೆಳಕನು ಕೊಟ್ಟವ ನೀನೇ
ಧೈರ್ಯವನೀ ದುರ್ಬಲ ನರಗೆ
ಕೋರಲು ಹೇಳಿದ ದಿವ್ಯಕಶಾಧರ
ತೋರಿದೆ ದಾರಿಯನಹಮಿಕೆಗೆ॥ ॥೨೯॥

ನಾನಹಮಿಕೆ ದುರ್‍ಯೋಧನದುಶ್ಛಲ
ನೀನದ ಗೆಲ್ಲಲು ನಿಂತಿರುವೆ
ಜ್ಞಾನದ ಜೊತೆಗಜ್ಞಾನವ ಬೆರೆಸಿದ
ಪೂರ್ಣನೆ ನೀ ಹೊಣೆ ಹೊತ್ತಿರುವೆ॥ ॥೩೦॥

ಹೊರಲೊಲ್ಲದೆ ನೀ ದೂರಕೆ ಸರಿದರೆ
ಬರುವೆನು ಬೆನ್ನಿಗೆ ಬಿಡೆನಮರ
ಮರೆಯಿಸಿದರೆ ತಪ್ಪಿಗೆ ನೀನೇ ಹೊಣೆ
ಗುರುಗಳ ದೊರೆ ಪರಮಾತ್ಮ ಶರ॥ ॥೩೧॥

ಇದೆ ತಪವಿದೆ ಜಪವಿದೆ ನೀ ಕಲಿಸಿದ
ಬಿಡಲಾಗದ ಹಿಡಿಯಲು ಬರದ
ಮದವಾರಣ, ಮೋಕ್ಷಸ್ಥಿತಿ ಕಾರಣ
ಹೃದಯಂಭರ ಅರುಣಾದ್ರಿಬುಧ॥ ॥೩೨॥

ನೀನವನವನಜ್ಞಾನದ ಪರದೆಯ
ಮಾನವನಾದೆನ್ನೆದುರಿಟ್ಟ
ದೀನದಯಾಪರ ರಮಣ ಮುನೀಶ್ವರ
ನೀನೇ ತೆರೆವೇಷವ ತೊಟ್ಟ॥ ॥೩೩॥

ಕಣ್ಣೀರಿನೊಳಿಭಿಷೇಕವ ಮಾಡುವ
ಪುಣ್ಯದ ಬಲ ನನಗಿಲ್ಲ ಶಿವ
ಅನ್ಯಾಯ ಪ್ರತಿಭಟನ ತಪಸ್ವಿಗೆ
ನಿನ್ನಾಣೆಯಿದೋ ಪೂಜಿಸುವ॥ ॥೩೪॥

ಆನಂದಾಶ್ರುಗಳೂ ಸಹ ಭಕ್ತಿ
ಜ್ಞಾನನ್ಯೂನತೆಯೊಳಗುರುಹು।
ಆನಂದಾಮೃತ ಆಶ್ರಿತವತ್ಸಲ
ನೀ ನಿನ್ನಂತಿಹೆ ಸಕಲಕಲ॥ ॥೩೫॥

ಸಾಮಗ್ರೀಬಾಹುಳ್ಯದ ಕಾರಣ
ನೀನಲ್ಲ, ನಿಜಕ್ಕೂ ನಿನಗೆ
ನೀನೇ ಕಾರಣ, ಮಾಯಾಸ್ತ್ರದೆ ಬಹು–
ಧಾ ನವನವಿಸುವೆ ನುತಿ ನಿನಗೇ॥ ॥೩೬॥

ದಿಕ್ ಖಂಡ ೭

ಸಂಖ್ಯಾಪರಿಮಿತಿಯೊಳಗಿರಲೂ ಸಹ
ಸಂಖ್ಯಾನಕ್ಕೊಳಗಾಗದ ಕಣಗಳ–
ನಂಕೆಯೊಳಿಟ್ಟತಿ ಮಾನವ–ಮಾನವ ದಾನವ–ಘಟಕಗಳ।
ಪಂಕೇರುಹದಿಂದಣಬೆಗಳನಕ ನಿ–
ರಂಕುಶ! ತೋರಿಸುತಿಹೆ ಮಾನವರಿಗೆ
ಸಂಕಟ ಸುಖದಾವರ್ತದಗರ್ತಗಳನುಭವ ಮಾಡಿಸಿದೆ॥ ॥೧॥

ವಿಜ್ಞಾನೋದರದೊಳಗಿಹ ಪೊರೆಗಳ
ತಜ್ಞರ್ ಬಾನಿನ ನೀಹಾರಿಕೆಗಳ
ಭಗ್ನಂಗೈದೊಳ ಹೊಕ್ಕರು "ಸಿಕ್ಕದೆನರ್ಜಿಯ" ಮೂಲಗಳ।
ವಿಘ್ನೇಶ್ವರ ನೀ ತೋರಿಸದಿಹೆ ಧ–
ರ್ಮಘ್ನರಿದಿರ್ ಧರ್ಮಘ್ನರ ನಿಲಿಸಿಹೆ
ಮಗ್ನರ್ ನಾವು ಬಹಿರ್ಮುಖಶರಣರ್ ಹುಟ್ಟಿಂದೇ ಗುರುವೇ॥ ॥೨॥

ಧೃತರಾಷ್ಟ್ರರ್ ತಾವೆಂಬುದನರಿತೂ
ಪ್ರಥೆ ಧನ ಮಾನಂಗಳ ವೈಯಕ್ತಿಕ
ರತಿಯಿಂ ಪ್ರಾಮಾಣಿಕರಂ ದುಡಿಸುತ್ತಿಹ ವಂಚಕವರರ।
ರಥವೇರಿದ ಸಚಿವೇಂದ್ರರ್ ಪ್ರಜೆಗಳ
ಮತಿಗೆಡಿಸುವ ಮಾದಕಗಳ ಮಾರಿಸಿ
ಕೊತವಾಲ್ಗಿರಿ ನಡೆಸುತ್ತಿರೆ ಸಾಕೇ ಸಾಕ್ಷಿತ್ವಂ ನಿನಗೆ?॥ ॥೩॥

ಮಿಥ್ಯೆಯಿದೆಲ್ಲ ವಿಚಾರಗಳೆಂದು ಜ–
ಗತ್ತಂ ತ್ಯಜಿಸುವ ಸಂಕಲ್ಪದ ಧೃತಿ
ಹತ್ತಿದರೂ ಗೌರೀಶಂಕರವನು ಹೃದಯದೊಳೇಳದಿರೆ।
ಇತ್ತಂತರ್ಮುಖರಾಗಲು ಬಾರದೆ
ಸತ್ತಂತಿರುವೆವು ಭಾರತ ದೇಶದ

ವಿತ್ತಾಧಿಕರಿಂದಧಿಕಾರವ ಪಡೆ–
ದತ್ಯುನ್ನತಪದವೇರಿದ ಶಾಸಕರಾಳ್ಕೆಯ ಹಿಂಸೆಯಲಿ॥ ॥೪॥

ಹೋರಾಡರ್ಜನ ಪಾಪವ ಗಣಿಸದೆ
ಮಾರಾಂತವರಾದೊಡೆದೇಂ ಬಂಧು ಗ–
ಳೇರೇರ್ ತೇರನ್ನೆಂದವ ನೀನೇ ಕೃಷ್ಣನ ಪಾತ್ರದಲಿ।
ಸಾರಲ್ ಮೊದಲಿನ ರಾಷ್ಟ್ರಾಧ್ಯಕ್ಷರ್
ಸಾರಜ್ಞರ್ ನಿನ್ನೆಡೆಗೆ ಗುರೂತ್ತಮ
ತೋರಿಸಿ ಮೋಹನದಾಸ ಮಹಾತ್ಮನನನುಸರಿಸೆಂದೆಯಲಾ॥ ॥೫॥

ಕಾರ್ಯವು ನಿನ್ನ ಪ್ರೇರಣೆಯಾತನ
ಧೈರ್ಯವು ನಿನ್ನದೆಯೆಂದ ಮಹಾಮುನಿ
ತೋರಿದೆ ದಾರಿಯನಿಲ್ಲಿಯವರೆಗೂ ಗೊತ್ತಿರದಂತೆನಗೆ॥
ಸೇರಿಸಿ ಪಾದದಧೂಳಿಯೊಳೆನ್ನನು
ಹಾರಿಸುತಿಹೆ ಬೇಕಾದೆಡೆಗೆಲೆ ಗುರು
ನಾ ರಾಜಸತಾಮಸ ಸಾತ್ವಿಕರೊಳದಾವನೊ ನೀ ಬಲ್ಲೆ॥ ॥೬॥

ಕಾರಣಲಕ್ಷಣವರಿಯದ ರಸೆಲರ್
ಪೇರಿಸಿದರ್ ತರ್ಕಂಗಳ ಮೂಲಕ–
ದಾರೀವರ್ "ಪ್ರೂಫುಗಳಂ" ಮನಸಿನ ಮಂಡಿಗೆಗಳಿಗೆಲ್ಲಾ?
ಆರಾಧಾಧವ ಬಯಲ್ಗೆಳೆದಂ ಪೂ–
ರ್ವಾರೂಢಾಭಿಪ್ರಾಯಗಳಿಲ್ಲದ–
ದಾರ್ ವಾದಿಗಳಗ್ರೇಸರರಪ್ಪರ್ ಲೋಕತ್ರಯದೊಳಗೆ?॥ ॥೭॥

"ವಿಂಶತಿಮಿಾರಿದಿಲೆಕ್ಟ್ರಿಕ್ ಚಾರ್ಜ್‌ಗಳ"
ವಂಶದ ಬೀಜವದೆಲ್ಲಿದೆಯೆನ್ನಲ್
ಮಾಂಸಾದರೊಳಾರುಂ ಬಾಯ್ದೆರೆಯದೆ ಕುಳಿತಿಹರೀತನಕ।
ಪ್ರಾಂಶುತ್ವಕೆ ಭೀಕರಬಾಂಬ್ ಸಂಗ್ರಹ–
ದಾಂಶಿಕ ದೇವತ್ವವು ಸಾಕೆನುತ ನಿ–
ರಂಶುಕ ನಾರಿಯ ನರ್ತನ ದರ್ಶನ ಸುಖಕರವೆಂಬರಹೋ॥ ॥೮॥

ಒಡೆದಾಳುವ ಬಡಿದಾಡಿಸಿ ನೋಡುವ
ಪೆಡೆನಾಗರ ರಾಷ್ಟ್ರಗಳಾಚಾರವೆ
ಮಡಿಯೆಂದೀ ಬಡಭಾರತದೊಡೆಯರ್ ಪಾಲಿಸತೊಡಗಿಹರು।
ಗಡಪರಿಹಾಸಕ್ಕೀಡರುಣಾಚಲ–

ದೊಡೆಯನೆ! ನಿನಗೀ ವಿಕಟ ನಟೇಶರ
ಪಡಿಯರರಂ ಬೆಂಬಲಿಸುವ ಮೋಜೇ? ನಗೆ ಬರುತಿದೆ ನನಗೆ॥ ॥೯॥

ಹಗೆಗಾರುವ ಸಹವೃತ್ತಿಯ ಜನಗಳ
ಮೊಗೆದೀಂಟುತ್ತಿಹೆಯರಿಯರ್ ಪತ್ರಿಕೆ
ಹೊಗಳಲ್ ಧನಮಾನಂಗಳ ನೀಡಲ್ ದೂರಾಜಕರಾಳ್ಕೆ।
ಮೊಗೆದೀವೆಂ ನಿನಗೆನ್ನೆಲ್ಲಮುಮಂ
ಹಗುರರೊಳೊಂದಾಗಲ್ ನಾಂ ಬಯಸೆನು
ಜಗದೀಶ್ವರ ಸೋಲರಿಯದ ಹಾಗೆನ್ನನು ಸಂಸ್ಕರಿಸಿರುವೆ॥ ॥೧೦॥

ಯುಗಗಳ ನಡೆಸುವ ಲಘುಗಳ ನುಡಿಸುವ
ಸಗರರ ಮಕ್ಕಳ ಭಸ್ಮೀಕರಿಸುವ
ಭಗವಂತನೆ ನೀಂ ಮಾಡದೆ ಮಾಡಿಸಿ ನನ್ನಂ ಮೋಹಿಸಿದೆ।
ಬಗೆಯನ್ನೋಡಿಸಿ ಚಣಗಾಲಂ ನಿರ್–
ಮ್ರ್ಯಗ ದೃಷ್ಟಿಯ ನೀ ನಿತ್ತಿರಲೆನಗೆ ಸು–
ಭಗ ನಾಂ ನನ್ನನೆ ನೋಡಿದೆ ನಾವಿಯ ಹಾಗದು ಮರೆಯಾಯ್ತು॥ ॥೧೧॥

ನಿಮಿಷಾರ್ಧದ ತಲ್ಲೀನತೆ ಸಾಲದು
ಶಮದಮವುಪರತಿ ಶೀತೋಷ್ಣಗಳಿಗೆ
ನಮಿಸದದಮ್ಯತಿತಿಕ್ಷೆ ಶ್ರದ್ಧೆ ಸಮಾಹಿತತೆಗಳ ಕೊಡು।
ಅಮಿತವಿಭೂತಿಯೆ ನಿನಗೀ ಸುಲಭ
ಕ್ಷಮತೆಯಿಹುದು ಲುಬ್ಧತ್ವವ ಬಿಡು ಬಿಡು
ಭ್ರಮರತ್ವವ ಕಳೆ ಮಾನಸದೊಳಗಿಹ ಗುರುಮಹರಾಜವಿಭೋ॥ ॥೧೨॥

ಮತಿಮಾನಸಗಳ ನಡುವಿನಹಂತೆಯ
ಮಿತಿಮಿೂರಿದ ಚೇಷ್ಟೆಗೆ ಬರೆಕೊಡು ಕಾ–
ರಿತನಲ್ಲದೆ ಕಾರಕನಾನಲ್ಲಮಿದಂ ತಿಳಿದಿಹೆನೀನತುಲ।
ಕತೆ ನಾನಾರೆಂದನುದಿನ ಶೋಧಿಪ
ಚತುರತೆಯದನೂ ಕೊಡುವವ ನೀನೇ
ವ್ರತನಿಯಮಂಗಳ ಪಾಲಿಸಿ ಗೊತ್ತಿರದೀ ನನಗೆ॥ ॥೧೩॥

ಕೂಟಸ್ಥಾಚಲ ಶಿಖರವು ಕಾಣದು
ನೋಟ ಕೃಪಾಮಯ ನಿನ್ನದು ತೋರದು
ಪಾಟಿತ ಹೃದಯದ ಜೀವಿಯೆನಿಪ್ಪೆನಗೀ ತನುವಿನೊಳಿರುವ
ಜಾಠರ ಶೈಶ್ನಿಕ ದೈಹಿಕ ರಕ್ಷೆಯ

ಕೋಟಲೆಗಳ ನೀ ಬಿಡಿಸದೆ ಹೋದರೆ
ಪಾಠಗಳಷ್ಟೂ ವ್ಯರ್ಥ ಮಹಾಗುರು ನೀನೆನಗುಸಿರಿರ್ಪ॥ ॥೧೪॥

ನನ್ನ ವಿಭಕ್ತಿಪ್ರತ್ಯಯಗಳ ಬಿಡ–
ಲೆನ್ನಿಂದಾಗದು ನೆರವೀಯದೆ ನೀ
ಮನ್ನಿಸು ನಿನ್ನನ್ನೆಲ್ಲಕ್ಕೂ ಹೊಣೆ ಮಾಡಲು ನೀನಿತ್ತ।
ಭಿನ್ನತೆ ಕಾರಣವಲ್ಲವೆ? ಮಾಯ್ಯಾ
ಭಿನ್ನತೆಯಿಂದ, ಗುರೂತ್ತಮನೀನಿ–
ದ್ದನ್ಯತೆಯಂ ನಮಗಿತ್ತಾಹುತಿ ಮಾಡಿದ್ದೇತಕ್ಕವಳ॥ ॥೧೫॥

ಇಷ್ಟಾದರು ಹೀಗಾದರು ಕೂಡಾ
ದಿಟ್ಟನೆ ನೀನೇ ಶರಣೆಮಗಾಗಿಹೆ
ಮುಟ್ಟರದಾರೂ ನನ್ನಿಗರನ್ನೆಡಗೈಯಿಂದಾಳುವರು।
ಪಟ್ಟದ್ದನ್ನೂ ಪಡುವುದನೂ ನಿ–
ನ್ನಷ್ಟಕೆ ಸರಿಯೆಂದೇ ಭಾವಿಸಿದೆಂ
ದುಷ್ಟತೆಗಿಳಿಯದೆ ನಿನ್ನಾಗಮನವ ಕಾಯುವೆ ಗುರುದೇವ॥ ॥೧೬॥

ಎಷ್ಟಿಹವೋ ನನ್ನಲ್ಲವಗುಣಗಳ–
ವೆಷ್ಟಿದ್ದೊಡದೇಂ ಪ್ರೇರಿತವಲ್ಲವೆ?
ಅಷ್ಟೂ ನಶಿಸುವುವರೆನಿಮಿಷದಿ ನೀ ದಿಟ್ಟಿಯ ತೆರೆದೊಡನೆ।
ಕಷ್ಟಾರ್ಜಿತವೂ ಸುಲಭಾರ್ಜಿತವೂ
ಎಷ್ಟಿದ್ದರದೆಲ್ಲಾ ನಿನಗರ್ಪಿತ
ನಷ್ಟಶರೀರತೆಯನು ದಯಪಾಲಿಸು, ಮತ್ತೇನಾದೇಶ?॥ ॥೧೭॥

ಅಲ್ಪನ ಶೂನ್ಯೀಕರಿಸುವುದೊಂದೇ
ಶಿಲ್ಪದಯಾರ್ಹತೆಗೆನ್ನ ಮಹರ್ಷಿಯೆ.
ಕಲ್ಪನೆನೀನೊರೆದದಿಂದ ನಾನೆಂಬಹಮಿಕೆ ದೇಹಿಗಳ।
ದುಷ್ಪಾತ್ರತೆಯದರಿಂದವರನುನೀ–
ನಸ್ಪೃಶ್ಯರ ಸಾಲಿಗೆ ಸೇರಿಸುತಿಹೆ
ನಿಷ್ಫಲ ಜೀವನ ನಿನ್ನೊಲವಿಲ್ಲದ ನಿತ್ಯಾನಂದ ಗುರೋ॥ ॥೧೮॥

ಸಾಂಕ್ರಾಮಿಕವಾ ಕಾಲರವಂತೆಯೆ
ಸಾಂಕ್ರಾಮಿಕ ರೇಸ್ ಲಾಟರಿ ಮೋಸಿಗ–
ಳಂಕಗಳೆನಿಸಿ ಧನಾಗಮ ಕೆಳಸುವ ದುರ್ವೃತ್ತಿಗಳವೊಲು
ಮಂಕತನಂ ಮದ್ಯವ ಕುಡಿದಾಡಿ ನಿ–

ರಂಕುಶ ಚೇಷ್ಟೆಯ ಮಾಳ್ಪಂತೆಯೆ ಜನ–
ರಂ ಕಡಿದಾಭರಣಾದಿಗಳಂ ಕಸಿದೊಯ್ವರಿಗೆಡೆ ಬಹಳ॥ ॥೧೯॥

ಸಾಲಕೆ ಬಡ್ಡಿಯ ಕೊಡುವುದು ಹೋಗಲಿ
ಸಾಲವನೇ ಮರುಪಾವತಿ ಮಾಡದ
ಜೈಲಿಗೆ ಹೋಗದ ಹಾಗಿಡಲಾಗಿದೆ ದುರ್ಜನ ನಿಕರವನು।
ಬಾಲಕರಂತಿಹ ಮುಗ್ಧರ ಸುಲಿವ ದ–
ಲಾಲರ ಸಾಕುವ ಸರಕಾರಗಳಿಗೆ
ಸೋಲುವ ಜನಗಳ ಮಧ್ಯದಿ ಬಾಳುವ ಗತಿಯೆನಗೇಕಿಂತು?॥ ॥೨೦॥

ಸೋಲ್ ಸೋಲಲ್ಲ ಗೆಲುವು ಗೆಲವಲ್ಲ ಹಿ–
ಮಾಲಯದ ತಪಸ್ವಿಗಳಿಗೆ ನಿಲೆನಾ–
ಡಾಲಯಗಳಲಪಮಾನಿತರಾಗವುದಲ್ಲದೆ ದೈನ್ಯದಲಿ।
ಕಾಲದ ಕಾಲಿಗೆ ಬೀಳುತ ಬದುಕುವ–
ಗಾಲೋಚನೆಗವಕಾಶ ಸಿಗುವುದೇ
ಹೇಳು ರಮಣ ನಿನ್ನನ್ನು ಸ್ಮರಿಸುವ ಜೀವಾತ್ಮನಿಗೀಗ॥ ॥೨೧॥

ಪರರಾಕ್ರಮಣ ಪರಾಕ್ರಮ, ಪರ ಮು–
ಷ್ಕರ ಹೂಡಲು ಸಂಘಟಿಸಲು ಬಾರದ
ಕರುಣಾಜನಕ ಕುಟುಂಬಿ ಸದಾಚಾರವ್ರತಿಯನ್ನೇ ತುಳಿವರ್।
ಅರಿಮಿತ್ರರುಗಳ ಭೇದವ ಮರೆತಿ–
ಬ್ಬರನೂ ವಂಚಿಸಿ ಭೋಗವಿಷಯಗಳ
ತೆರೆಗಳೊಳೀಸುವ ಮುಳುಗುವ ಭೀತಿಯ ತಳೆದೂ ಧೀರರಲಾ॥ ॥೨೨॥

ಯಾವ ಪುರಾಣದ ಪುಟಗಳ ತೆರೆದರೆ
ಕಾವವರೇ ಕೊಲ್ಲುವ ಕತೆ ದೊರಕುಗು?
ಸಾವೂ ಬಾರದು ನೋವೂ ತೀರದು ಪ್ರಾಮಾಣಿಕರಿಂಗೆ।
ಜೀವನ ನಡೆಸಲು ವೃತ್ತಿಗಳೆಟುಕದ
ಠಾವಿನೊಡೆಯರ ಪೋಲೀಸ್ ದರ್ಪದ
ಹಾವಿನ ಹೆಡೆನೆರಳಲಿ ದೇವರ ನೆನಹೆಂತುದ್ಭವಿಸುವುದು?॥ ॥೨೩॥

ಜೀವದಯಾಪರ ಜಿನನಂ ಮೀರಿದ
ಪಾವನತಮ ನಿನ್ನಭಯವ ಹೊಗಳುವ
ದೈವೀಶಕ್ತಿಯದೆಷ್ಟು ಜನರ್ಗಿದೆ ಹೇಳು ಶ್ರೀರಮಣ।
ಆ ವಿವಶರ ಕಾಯ್ ಮೊದಲು ಮಹೇಶ್ವರ

“ಧಾವಿಸು” ನನ್ನನು ದೇಹದೊಳಿಟ್ಟು ಪ್ರ–
ರಾವರ ತೋರಿಸಲೇಕೀ ದೃಶ್ಯವ ನೀನೇ ಪ್ರೇರಿಸಿಹ॥ ॥೨೪॥

ಮಧ್ಯದ ಕಾರಣದಲ್ಲತೆಯೇ ನಿ–
ನ್ನಾದ್ಯನ ಕರ್ತೃತ್ವದ ಫಲ ನಿನಗಿ–
ನ್ನಾದಿಯೆ ಇರದಿರಲಿನ್ನೂ ಬಾಧ್ಯತೆ ಹೆಚ್ಚುವುದೊ ರಮಣ।
ವಾದ್ಯದವರ ಭಕ್ತಿಸ್ತುತಿಗಾಯನ–
ಸಾಧ್ಯನು ನೀನಲ್ಲೆಂದೇ ಕೇಳುವೆ
ಸಾಧುಪ್ರಣವರ್ ನಿನ್ನಕ್ಷಿಗಳನು ನೋಡೆಂದುದ ಮರೆಯೆ॥ ॥೨೫॥

ಪುರುಷೋತ್ತಮ ನೀನೀಶ್ವರನೆಂದೇ
ಹರುಷದಿನೀ ಅಹವಾಲುಗಳನು ನಾ
ಗುರುವೇ ನಿನ್ನಿದಿರಿಟ್ಟಿಹೆ, ನೀನೇ ಪ್ರತಿನಿಧಿಯಾದೊಡೆಯುಂ।
ಹರನಿಂದೇನಂ ಮಾಡಿಸಬೇಕೋ
ಪರಮಬ್ರಹ್ಮನೆ ಮಾಡಿಸು ಬೇಡುವೆ
ಶರಣಾಗತವತ್ಸಲ ನೀನಾಗಲೆಬೇಕೋ ಒತ್ತಾಯಿಪೆ ನಿನ್ನ॥ ॥೨೬॥

ಶರಣಾಗತ ನೀನಲ್ಲದೆ ಹೋದರೆ
ಶರಣಾಗತನಾದವಗಿದು ಮಿಾಸಲು
ಪರಮೇಶ್ವರ ಪರಮಾತ್ಮ ಪರಾತ್ಪರ ಗುರು ನೀನೇ ಎಂಬೆ।
ಧುರಧೀರನೆ ದುರಿತಾಗ್ನಿಜಲಾಸ್ತ್ರನೆ
ಕೆರಳಿಸದಿರು ಜನ್ಮಾಂತರಗಳ ನೀ
ಮರುಳಗೆ ವಿವರಿಸಿ ನಿನ್ನಂ ನಂಬಿದ ನಿಲುಮೆಯ ಕೆಡಿಸದಿರು॥ ॥೨೭॥

ಇರವಿಗೆ ಮರೆವಿಗೆ ಕನಸಿಗೆ ಕಲ್ಪಿಸಿ
ದರಿವಿಗೆ ಜಾಗರ ನಿದ್ರಾ ಸ್ವಪ್ನಕೆ
ಪರಮಸಮಾಧಿಗೆ ನೀನೇ ಕಾರಣ ಜನನ ಮರಣಗಳಿಗೆ।
ಸುರನಿದ್ದರು ಸರಿ ನರನಿದ್ದರು ಸರಿ
ಕರಣಂಗಳ ಕೈಗೆಟುಕದಿರಲು ಸರಿ
ಅರುಣಾಚಲ ಸಂಕೇತ ನಮೋಸ್ತು ಪ್ರೇರಿಸು ಸನ್ಮತಿಯ॥ ॥೨೮॥

ನೀನಿಲ್ಲದೆ ನಾನೇ ಇಹುದಾದರೆ
ನನಗೇ ಸರ್ವಾತ್ಮನಿಗೇ ಪ್ರಾರ್ಥನೆ
ಘನ ಮಹಿಮೆಯನುಳ್ಳಾತಗೆ ಪೂತಗೆ ನಾನಂತಿರೆ ನಿಜಕೂ।
ನಾನಾರೆಂಬುದನರಿಯದ ಬಾಲನ

ನಾನಾಚಿಂತನದಲೆಗಳ ನೋಡಿದೊ
ನಾನಾತ್ಮತ್ವದ ದರ್ಶನಬದ್ಧನ ಲೀಲೆಯಿದೆಂದು ತಿಳಿ॥ ॥೨೯॥

ಈ ಲೀಲೆಯ ಗಾಂಭೀರ್ಯವು ನಿರುಪಮ
ಹೋಲಿಸೆ ನೀನೇ ಬರಬೇಕಿಲ್ಲಿಗೆ
ಪಾಲಕ ಚಿಂತಕರೆಲ್ಲಾ ಮತ್ಸಮ ಸಂದೇಹಾತ್ಮಕರು।
ಲೋಲಕ ಮಿದುಳಿನ ನೀನೊಲಿದಿತ್ತಿಹ
ವೇಲೋಪಾಹಿತ ವೃತ್ತದ ಹೊರಗಡೆ
ಯೋಲಾಡದು ಮದ್ವರ ಜೀವದವೊಲ್ ಮುಕ್ತಿಯ ಬಯಲಲ್ಲೊ॥ ॥೩೦॥

ಇಲ್ಲೊ ದಾಸರು ಅಲ್ಲೊ ದಾಸರು
ಬಲ್ಲಿದನಿರ್ಪಲ್ಲಿಯವರೆಗೂ ಮಿ–
ಕ್ಕೆಲ್ಲ ಜನರೂದಡ್ಡರು ದೇವರೆ, ಧನಿಕನೆ, ಗುರುತಮನೆ।
ಎಲ್ಲವರೂ ಬಲ್ಲಿದರಾದಂದು
ಕ್ಷುಲ್ಲಕ ಕಾರಣದಿಂದ ವಿವಾದಗ–
ಳೆಲ್ಲೆಲ್ಲೂ ಗರ್ಜಿಸುವುವು ಶಾಂತಿಗೆ ಗೋರಿಯ ಕಟ್ಟುವರು॥ ॥೩೧॥

ಸರ್ವತ್ರ ಸದಾ ಸಕ್ರಿಯತೆಯೊಳೇ
ನಿರ್ವೃತಿ, "ಡೈನಮಿಸಂ"ಯೆನೆ ದೇವರು
ಸರ್ವಕ್ರಿಯೆಯಣುಘಟಕ ಕ್ಷಣಿಕತೆಯನುಸರಿಸುವ ವೇಗ।
ಸರ್ವಾನೂಹ್ಯವದತ್ಯುತ್ತಮಗತಿ
ಯುರ್ವಿಯ ಜನರ್ಗಿಲ್ಲಂ ಪರ್ಯಾಯವೆ
ಸರ್ವಜ್ಞರ್ ನಾವೇ ಎಂಬಜ್ಞರ ಸಾಕುತ್ತಿಹೆ ನೀನು॥ ॥೩೨॥

"ಕಾಣದ ಕೇಳದ ಲಕ್ಷಣಿಸದ ದುರ್–
ಮಾಣಾದೇಯ ಪ್ರಕೃತಿಯೆ ಕರ್ತ್ರಿಯು
ಕೋಣರ್ ದೇವರ ನಂಬುವ, ನಿನ್ನಂ ದೇವರ ಮಾಡಿರುವ।
ಮಾಣವಕರ್ ಮೂಢರ್ ಕ್ಷುದ್ರಾತ್ಮರ್
ನಾನಕೆಡಮಿಯಧಿಪತಿ ನಾ ಕಂಡ
ದ್ದನ್ಯರ್ ನಂಬಿದರೇನೇ ಧನ್ಯರ್" ಮಾತಿದು ನಾಯಕರ॥ ॥೩೩॥

ನೀನೇ ನುಡಿಸಿದೆಯವರಿಂದೀ ವಿ–
ಜ್ಞಾನ ಮಹಾ ವಾಕ್ಯಂಗಳನದರಿಂ
ಮಾನಿಸರಾದರೆ ಮರುಳರ್ ನಗುವುದು ಕಾರುಣ್ಯದ ಕುರುಹೆ?।
ಭಾನುಸಹಸ್ರಾರ್ಚಿತ ಸತ್ತತ್ವನೆ

ಏನೋಯೇನೋ ಬೋಧಿಸಿ ಮತ್ತಿ
ನ್ನೇನೇನ್ನೋ ಮಾಡಿಸುತಿಹೆಯೆಂದೆನಿಸಿದರೆ ಕ್ಷಮಿಸು॥ ॥೩೪॥

ಕಾರಣ ಕಾರಣ ನೀನೇ ಜ್ಞಾನದ
ಪಾರಂಗಳನಳೆದವ ನಿನ್ನಿಚ್ಛೆ ವಿ–
ಚಾರ ಪ್ರೇರಕ, ವುತ್ಸರ್ಗಕ್ಕಪವಾದವ ತೊಡಿಸಿರುವ।
ಭಾರಿ ಕಲಾವಿದನಾಶ್ಚರ್ಯಾತ್ಮಕ
ಮಾರನ ನಿರ್ಮಿಸಿ ಸಂಹರಿಸುವ ದುರ್–
ವಾರ್ಯ ನಟೇಶ್ವರ ನಿನ್ನಂ ನೀನರಿದೇರಿದೆ ಗುರುಪದವ॥ ॥೩೫॥

ಅಭಯ ಭಯಪ್ರದ ದುರಹಂಕಾರಿಗೆ
ವಿಬುಧರ ಕುಣಿಸುವ ಬುಧರಂ ದಣಿಸುವ
ಶುಭದರ್ಥವ ಸಾಂದರ್ಭಿಕಗೊಳಿಸಿದ ಜಗದಾಡಳಿತದಲಿ।
ಅಬಕಡ ಮಾಡಿದ ರಕ್ತಾದ್ರೀಶ್ವರ
ಶಿಬಿಕರ್ಣದಧೀಚಿಗಳಂ ತೋರಿಯು–
ಮಭಿನವ ರಾವಣರಂ ತೋರಿಸುತಿಹ ನಿನಗೆ ನಮಸ್ಕಾರ॥ ॥೩೬॥

ಮನಃ ಖಂಡ ೮

ಹಳಗನ್ನಡ ಹೊಸಗನ್ನಡ–
ಗಳಂ ಕುವೆಂಪ್ವಾದಿ ಕವಿಗಳುರೆ ಬಳಸಿದುದಂ।
ತಿಳಿಯದನುಕರಣ ಮಾಡಿದ
ಗೆಳೆಯರ್ ಸಂಮಿಶ್ರ ಶಾಸನಕ್ಕೆಡೆಗೊಟ್ಟರ್॥ ॥೧॥

ಇದು ಭಾರತಚರಿತಂ ಲೋ–
ಕದ ಚರಿತದ್ದೊಂದು ಭಾಗ; ಕರ್ಣಾಟಕದ।
ಉದಯವ ಬಯಸುವ ಸರ್ವೋ–
ಪಧಿಪ್ರತೀಕಾರಕಾರಿ ರಮಣನ ನೆನೆವೆಂ॥ ॥೨॥

ಇದಹಂಕಾರ ವಿನಾಶದ
ಸುಧೀರ ಯತ್ನಂ ಮಹರ್ಷಿಪಾದಂಗಳಿದಿರ್।
ಬುಧರನುಕಂಪವನಾಶಿಸಿ
ಪದಾರ್ಥ ವಿಶ್ಲೇಷಣಕ್ಕೆ ತೊಡಗುವೆ ಗುರುವೇ॥ ॥೩॥

ಪೂರ್ಣಂ ಗುರುವೂನಂ ಲಘು
ಮೌನಂ ಗುರುವಾಗ್ ಲಘೂತ್ತಮರ್ ಶ್ರುತಿಕಾರರ್।
ತಾನಾರೆಂಬುದನರಿಯದ
ಮಾನವ ಮಾತಾಡಿ ಮನೆಗಳಂ ಕಟ್ಟಿದಪಂ॥ ॥೪॥

ಅರ್ಥವನರಿಯದಬೋಧರ್
ಸ್ವಾರ್ಥಮನಿದರೊಳ್ ಸದೈವ ಹೆಕ್ಕುವರಲ್ತೇ?
ವರ್ತುಲ ವರ್ತನೆ ಲೋಕದೊ–
ಳಾರ್ತಂಗರ್ಥಾರ್ಥಿಗಂ ಸಮಾನಮವೇದ್ಯಂ॥ ॥೫॥

ಜ್ಞಾನದ ಮಟ್ಟದ ಭೇದಂ
ದಾನವನಾಯಕತೆಯಲ್ಲಸಂಖ್ಯಾತವಲಾ।
ಸಾನುಕ್ರೋಶಂನನ್ನೊಳ್
ನ್ಯೂನತೆಯದ ಕಿತ್ತರನಿಬರಾಕ್ರೋಶಾರ್ಥಂ॥ ॥೬॥

ಯಾರೇನೆಂದರು ಬಿಡದೀ
ಮಾರಿ ಮಹಾಭೇರಿ ಬಾರಿಸುವ ವೈಖರಿಯಂ।
ಶ್ರೀರಮಣನಡಿಗೆರಗಿ ನಾಂ
ತೋರಿದುದಂ ಪೇಳ್ವೆನುತ್ತಮಾಂಗಕ್ಕೆನ್ನ॥ ॥೭॥

ತರತಮಭಾವ ನಿಸರ್ಗದ
ಧರೆಯೊಳ್ ತನ್ನೊಂದು ಮಾರ್ಗದೊಳ್ ಚಲಿಸುತಿರಲ್।
ಮರಣಾತೀತನ ಪಾದವೆ
ಶರಣೆಂಬೀ ಕಿತವ ಕಡಿಮೆ ಮಾಡಲೆಳಸುವಂ॥ ॥೮॥

ಹಿತವಂ ರಮಣರ್ ಪೇಳ್ದಿರೆ
ಕಿತವಂಗೇನ್ ಕೆಲಸ? ಕಿತವರೆಲ್ಲಾ ಕವಿಗಳ್।
ಸುತ ದಶರಥನ ಮಾಡಿದುದನೇ
ಪೃಥಾ ಸುತಂ ಮಾಡಿದಂ ಮಹಾಭಾರತದೊಳ್॥ ॥೯॥

ಮುಕ್ತನ ಮಾತಿಗೆ ಬದ್ಧ
ವ್ಯಕ್ತಿಯದೆಂತರ್ಥವಿವರಣೆಯ ಕೊಡಬಲ್ಲಂ।
ವಿತ್ತಪ್ರಸಿದ್ಧಿದಾಸಗೆ
ವಸ್ತುಸ್ಥಿತಿಯರ್ಥಮಪ್ಪುದೇ ಜೀವನದೊಳ್॥ ॥೧೦॥

ಸಂಮಿಶ್ರಾರ್ಥದ ಪದ್ಧತಿ
ದಮ್ಮಿಳಿಸಿತು ನೆಹರುವಾದಮಂ ನಂಬಿದರ।
ನಮ್ಮಾಳ್ವರ ಹಮ್ಮಿಳಿವುದು
ತಮ್ಮನ್ನೇ ಸುಲಿಯಲನ್ಯದೇಶೀಯರ್ಕಳ್॥ ॥೧೧॥

ವೀರರ್ ಶೈವರ್ ಶಾಕ್ತರ್
ವೀರರ್ ಶ್ರೀವೈಷ್ಣವರ್ ಪರಬ್ರಹ್ಮನ ಸಾ–
ಕಾರದ ಮೇಲಿನ ಭಕ್ತಿಯ
ನೋರಂತುಸಿರ್ದರ್ ತತಃಪರಂ ಶ್ರೀರಮಣಂ॥ ॥೧೨॥

ಆಕೃತಿ ಪರಿಮಿತಿಯಾಚೆ ನಿ–
ರಾಕೃತಿ ಶುದ್ಧಾತ್ಮ ಸಚ್ಚಿದಾನಂದಮಯಂ।
ಪ್ರಾಕೃತಿಕ ಶಕ್ತಿನಾಥಂ
ವ್ಯಾಕೃತಿಮೂಲಂ ಚರಾಚರಂಗಳ ಗಣದ॥ ॥೧೩॥

ಶಕ್ತಮಭಿನ್ನಂ ಬಲದಿಂ
ಮುಕ್ತಂ ಬ್ರಹ್ಮಂ ಸ್ವಭಾವಮವನಿಗೆ ಶಕ್ತಿ।
ಶಕ್ತಿ ಪ್ರಕೃತಿಗಳೆಂತೋ
ಯುಕ್ತಂ ಮಾಯಾಭಿಧಾನಮವನ ಬಲಕ್ಕೆ॥ ॥೧೪॥

ಅವಿಕಲ್ಪನವಂ ಗುರುರಾಡ್
ಭವರಹಿತಂ ಶಕ್ತಿಯಂತೆ ಬದಲಿಪನಲ್ಲಂ।
ಅವನಿಚ್ಛೆ ಶಕ್ತಿ ಬದಲಿಸ–
ಲವನಿಗಳಂ ಸೃಜಿಸಿ ಪಾಲಿಸಲ್ ಲಯಗೊಳಿಸಲ್॥ ॥೧೫॥

ಸ್ವಪ್ನಂ ಸತ್ಯಂ ತದ್ವತ್
ಸ್ವಪ್ನೇತರ ನಿದ್ರೆ ಸತ್ಯಮೆಚ್ಚರ್ ಸತ್ಯಂ।
ಸ್ವಪ್ನಾದಿಭಿನ್ನ ಸತ್ಯಮ–
ನಾಪ್ತಂ ನಿರ್ನಶ್ವರಂ ತುರೀಯನಿದಾನಂ॥ ॥೧೬॥

ಅರುಣಾಚಲಾದ್ರಿ ಸೂಚಿತ
ಗುರೂತ್ತಮಂ ದೇಹವಾಸಿಯಾಗಿರ್ದುಂ ತಾಂ।
ನಿರತಂ ಜೀವನ್ಮುಕ್ತಂ
ಪೊರೆದಂ ಜನರಂ ವಿದೇಹ ಮುಕ್ತಿಗೆ ನಡೆದಂ॥ ॥೧೭॥

ಅವನ ವಿಭೂತಿ ಗರಿಷ್ಠಂ
ವ್ಯವಾಯರಹಿತಂ ಮಹಾತ್ಮಶಕ್ತಿಪ್ರವಣಂ।
ಅವನಪರಂ ಸಚ್ಚಿಷ್ಯರ–
ನವಿನಾಶಕ್ಕೊಯ್ವ ದಿವ್ಯಕರುಣಾಪಾಂಗಂ॥ ॥೧೮॥

ಅಶ್ರದ್ಧಧಾನರೆಲ್ಲರ್
ವಿಶ್ರುತರೆನ್ನಂ ಕ್ಷಮಾತಪತ್ರದೆ ಕಾಯಲ್।
ರಕ್ಷಕವರೇಣ್ಯ ಗುರುವೆ ಸ–
ಮೀಕ್ಷಿಸಿ ಸೂಚಿಸಿದನಾತನಿರದೇನಿರ್ಕು?॥ ॥೧೯॥

ಐಕ್ಯಜ್ಞಾನಂ ಜ್ಞಾನಂ
ಸಾಕ್ಷಾತ್ಕಾರಂ ಪ್ರಮಾಣ ಮನ್ಯನ್ನ್ಯೂನಂ।
ಈಕ್ಷೆಗಳೆಲ್ಲಂ ಚಂಚಲ–
ಮಾಕ್ಷೇಪಾರ್ಹಂ ಮನುಷ್ಯ ಮಾನಸಜಾತಂ॥ ॥೨೦॥

ಚಾಂಚಲ್ಯಮನವಲಂಬ್ಯಂ
ಪಾಂಚೇಂದ್ರಿಯದರ್ಶನಂ ವಿಭಕ್ತಂ ಸತತಂ।
ಲಾಂಛಿತಭಿದೆಯಿಂದಂ ಪ್ರಾ–
ಪಂಚಿಕಮೆಲ್ಲಂ ಪುಟೀತ್ರಯೋದ್ಭವ ಚಿತ್ರಂ॥ ॥೨೧॥

ಅದರಿಂದೆ ಲೋಕದರ್ಶನ
ವಿಧಾನದೊಳ್ ವ್ಯಕ್ತಿಗಳ್ ಪ್ರಭೇದಮನೆಣಿಪರ್।
ಅದನನ್ವಯಿಸುವ ತಾತ್ವಿಕ
ಪದಂ ವಿಮುಕ್ತಿ ಪ್ರಕಾರಭೇದಕೆ ಪಾತ್ರಂ॥ ॥೨೨॥

ಐಕ್ಯದೊಳನೈಕ್ಯಮಿಲ್ಲಂ
ಸಾಕಾರದನೈಕ್ಯಮಿಲ್ಲ ನಿರ್ಗುಣಪದದೊಳ್।
ಐಕ್ಯಕೆ ವಿಶೇಷಮಿಲ್ಲಂ
ಲೌಕಿಕಭಾವಂಗಳೈಕ್ಯಮಲ್ತೆ ಸರೂಪಂ?॥ ॥೨೩॥

ರೂಪಾಕಾರಪೆಸರ್ಗಳ್
ಲೋಪಾದೇಶಾಗಮಂಗಳಿಗೆ ತುತ್ತಲ್ತೇ?
ರೂಪಂ ನಿರ್ಗುಣಕಿಲ್ಲಂ
ವ್ಯಾಪ್ತಿಗೆ ಗಡಿಯಿಲ್ಲಮಲ್ತೆ ಮುಕ್ತಾತುಮನ?॥ ॥೨೪॥

ಲಕ್ಷಣಗಳಲ್ಲ ಗುಣಗಳ್
ಪ್ರಕ್ಷಿಪ್ತಂಗಳ್ ವಿಶೇಷಣಂಗಳ್ ಚಿತ್ತಂ।
ಲಕ್ಷಿಸದವ್ಯಾಪಕತಾ–
ಲಕ್ಷ್ಯಕೆ ಗುರಿಮಾಳ್ಪವಲ್ತೆ? ಪರಿಹಾರ್ಯಂಗಳ್॥ ॥೨೫॥

ಮುಕ್ತತ್ವಮನಾಶ್ರಯಿಸಿದ
ಯುಕ್ತಿಯೆ ಧರ್ಮಂ ಸಮಾಜಜೀವಿಗೆ ಜಗದೊಳ್।
ಯುಕ್ತಾಯುಕ್ತ ವಿವೇಕದ
ಶಕ್ತಿಯಪೂರ್ಣಂ ವಿಮುಕ್ತಿಯಡಿಗಲ್ಲಿರದ॥ ॥೨೬॥

ಆಂಶಿಕತೆ ಮುಕ್ತಿಗಿಲ್ಲಂ
ವಾಂಶಿಕ ಕೌಟುಂಬಿಕರ್ಗದಿದೆ ಭೂತಳದೊಳ್।
ದೇಶಾಭಿಮಾನಮನ್ಯತಂ
ವಂಶದ ಭಾಷೆಯ ದುರತ್ಯಯಾಸಕ್ತಿಯಿರಲ್॥ ॥೨೭॥

ದೇಹಮೆ ದೇವಂ ಸ್ವಾರ್ಥಿಗೆ
ಮೋಹಂ ಜ್ಞಾನಂ ಪ್ರತಾರಕತೆ ಚಾತುರ್ಯಂ।
ನೇಹಂ ಕೂಡಾ ಪಣ್ಯಂ
ದ್ರೋಹಂ ತಂತ್ರಂ ಪರಸ್ವದಪಹಾರಕ್ಕೆ॥ ॥೨೮॥

ಈ ವಿಧದ ನಾಯಕರ ಸಂ–
ಭಾವಿತತೆ ಪ್ರಾಣ ಮಾನ ಧರ್ಮಾದಿಗಳಂ
ಪಾವಾಗಿ ನುಂಗುತಿರೆ ಸ–
ಜ್ಜೀವಿಗಳಿಂಗಿಲ್ಲೆ ನರಕದನುಭವಮಕ್ಕು॥ ॥೨೯॥

ಜ್ಞಾನಾಧಾರದ ಭಕ್ತಿಯ
ಕಾಣಿಕೆ ತಾಯ್ನಾಡಿಗಿಲ್ಲಮಾಗೆ ವಿತಂಡಾ–
ಧ್ವಾನದ ಶಿರ್‌ಪಕಡೊಗಳಾ–
ಸ್ಥಾನಮನೇರ್ದಪರಹೋಮಹಾತಾತ್ವಿಕರ॥ ॥೩೦॥

ಹೋರಾಟಕರ್ಥಮಿಲ್ಲಂ
ದ್ವಾರಕೆಯಧಿನಾಥನಂಥನಾಯಕನಿರದೆ!
ಜಾರಾಧರ್ಮಪರಾಯಣ–
ರಾರುಭಟಕ್ಕಂಜಿ ರಮಣನಂ ಮರೆವೊಕ್ಕೆಂ॥ ॥೩೧॥

ಅಜಜಂಬುಕ ಚಾರಿತ್ರರ್
ಪ್ರಜಾಪ್ರಭುತ್ವಕ್ಕೆ ಮಾರಕರ್ ವೈರಾಗ್ಯಂ।
ದ್ವಿಜರಿಗನಿವಾರ್ಯಮೀಗಳ್
ಕುಜಾತರೆಲ್ಲರ್ ಕುಕಾರ್ಯಮಗ್ನರ್ ನಾಡೊಳ್॥ ॥೩೨॥

ಆತ್ಮಖಂಡ ೯

ಹರಕೊಟ್ಟ ಬಲವನ್ನು
ಗುರುಕೊಟ್ಟ ದೀಕ್ಷೆಯನು
ಪರಿಮಿತಿಗಳೆಷ್ಟಿದ್ದರಷ್ಟರೊಳಗೇ।
ಅರಿತಾಂತರಿಕಹಗೆಗ–
ಳಿರವ ಕಡಿದೊಗೆ ಮತಿಯೆ
ಪರವೈರಿಗಳ ಗೆಲ್ಲಬಲ್ಲೆಯಾಗ॥ ॥೧॥

ಸ್ವಾಚ್ಛಂದ್ಯ ನಿನಗಿಲ್ಲ
ಪಾಶ್ಚಾತ್ಯ ಬಲವಿಲ್ಲ
ನೈಚ್ಯಾನುಸಂಧಾನಕಿಷ್ಟವಿಲ್ಲ।
ಸಾಚಾತನದುಪಾಯ
ಯೋಚಿಸಲಹಿಂಸೆಯೊಂ–
ದೇಚಿತ್ತ ನಿನಗೆ ಹೋರಾಟದಸ್ತ್ರ॥ ॥೨॥

ಯಾಚನೆಗೆ ಪಾತ್ರ ಗುರು
ಪೇಚಾಡದಿರು ಮತಿಯೆ
ಆಚೀಚಿನವರ ಕುಹಕಂಗಳಿಂದ।
ಗೀಚ ಹೊರಡುವ ಮೊದಲು
ವಾಚಿಸು ಮಹಾವೀರ–
ರಾಚಾರ ಚರಿತೆಯನು ನಿಷ್ಠೆಯಿಂದ॥ ॥೩॥

ಯತ್ನಶಕ್ತಿಯನಿತ್ತು
ದತ್ತ ಭಕ್ತಿಯ ಹೊತ್ತು
ನಿತ್ಯಾತ್ಮಧರ್ಮವನು ಪಾಲಿಸೆಂದು।
ಉತ್ತಮೋತ್ತಮನಾಯ–
ಕತ್ವದಿಂದಾ ಕೃಷ್ಣ
ಮತ್ತೆ ಮತ್ತುಸಿರ್ದುದನು ಮರೆಯಬೇಡ॥ ॥೪॥

ವ್ಯವಹಾರಕೂ ಬೇಕು
ದಿವಿಜತ್ವಕೂ ಬೇಕು
ಕವಿಕರ್ಮಕೂ ಬೇಕು ಗುರುಕರುಣೆಯು।
ಅವರಿವರನಾಧರಿಸಿ
ಜವನನೆದುರಿಸಲಕ್ಕೆ?
ಹವನ ಮಾಡೋ ದೇಹದಭಿಮಾನವ॥ ॥೫॥

ಪ್ರಾಣಭಯ ಮಾನಭಯ
ಕಾಣದಜ್ಞಾನ ಭಯ
ಕೋಣನಂತೆದುರಾಗಿ ತಿವಿಯಬಹುದು।
ಜಾಣತನವಚ್ಚರಿಗೆ
ಗೋಣಬಗ್ಗಿಸದಿಹುದೆ?
ನಾನಾತ್ವದಲ್ಲೈಕ್ಯ ದುರ್ಲಭವದಲಾ॥ ॥೬॥

ಒಂದೈಕ್ಯ ಘಟಕಕಕಿ
ನ್ನೊಂದೈಕ್ಯ ಘಟಕವೆದು–
ರೊಂದ ನಿನ್ನೊಂದು ತಿಂದೋಡಬಹುದು।
ಒಂದು ರಾಷ್ಟ್ರವನು ಮ–
ತ್ತೊಂದು ನುಂಗಲು ಹೊಂಚಿ
ನಿಂದ ಸಂಶೋಧನೆಯ ಮಾಡುತಿಹುದು॥ ॥೭॥

ಪಾಪಿಷ್ಠರುರಿದಾಟ
ಕಾಪಟ್ಯಮಯ ಕಾರ್ಯ
ನಾಪಿತರ ಮಿರಿಸುವ ಹಾಗೆ ಮಾಳ್ಪ
ವ್ಯಾಪಾರವಾಡಳಿತ
ಕಾಮಗಾರರ ಕೂಡಿ
ಚೀಪುತಿವೆ ಜನರೆಲುಬ ನಾಯ್ಗಳಂತೆ॥ ॥೮॥

ಈ ಸ್ವರಾಜ್ಯಾಸ್ಥಾನ
ದೈಶ್ವರ್ಯ ಸಾಲದಿಂ
ಪಾಶ್ಚಾತ್ಯರಿಂ ಪಡೆದ ಚಟಗಳಿಂಗೆ
ಬೇಸರಕ್ಕಿನ್ನುಂಟೆ
ದೇಶದಲಿ ಜಾಗ, ದುಃ–
ಶಾಸನಕ್ಕೆಣೆಯುಂಟೆ ನೇತಾರರ?॥ ॥೯॥

ಬುದ್ಧ ಜಿನ ಶಂಕರರ್
ಹದ್ದುಕಾಗೆಗಳಿಗಿಹ
ಹೃದ್ರೋಗ ಜನಗಳಲಿ ಮುಂದೆ ಕೂಡಾ।
ಎದ್ದವದಿರಂತೆಯೇ
ಸ್ವದ್ರೋಹಕಿಳಿದಿಲ್ಲಿ
ಯುದ್ಯಾನಗಳ ಮಸಣಗೈವರೆಂದು॥ ॥೧೦॥

ಬುದ್ಧಿಯೋಡಿಸಿ ತಮ್ಮ
ಸಿದ್ಧಾಂತಗಳೊಳವದಿ
ರಧ್ಯಾತ್ಮ ಸಾಧನೆಯ ಬೋಧಿಸಿದರು।
ಉದ್ಧಾರವೆಂದರೀ
ಮದ್ಯಮಾಂಸಾದರ–
ನ್ನಿದ್ದಲ್ಲಿಯೇ ಬಿಟ್ಟು ಪೋಪುವೆಂದರ್॥ ॥೧೧॥

ಇದ್ದರೂ ಇರದಂತೆ
ಬದ್ಧರಾಗದೆ ಮನಃ–
ಶುದ್ಧಿಗೆ ತಿಲಾಂಜಲಿಯ ಕೊಟ್ಟ ಜನರ
ಮಧ್ಯದಲಿ, ಸಂಬಂಧ–
ವಿದ್ದರಷ್ಟೇ ಬಂಧ
ಸದ್ಯಃಸುಖಕ್ಕೆಳಸಬೇಡಿರೆಂದರ್॥ ॥೧೨॥

ಜೀವಿಸಿದ್ದೂ ಮುಕ್ತ
ಭಾವ ತಾಳಿರಿ ಎಂದು
ಯಾವೈತಿಹಾಸಕಾಲದೊಳೆಂದರೋ।
ಆ ವೇಳೆ ಮತ್ತೆ ಬಂ–
ದಾವರಿಸುತಿದೆ ನಮ್ಮ
ಕಾವ ಪರಮಾತ್ಮನವತರಿಸದಿಹನು॥ ॥೧೩॥

ವಿಶ್ವಮಾನವರು ನಾವ್
ವಶ್ಯರಲ್ಲವೆ ಅಲ್ಲ
ದುಃಶಾಸಕರಿಗೆಂಬ ಸಂದೇಶವ
ವಿಶ್ವಾಸದಿಂದುಸಿರಿ
ನಶ್ವರದ ಸಂಬಂಧ
ಕಶ್ಮಲವಿದೆಂದರೀ ಗುರುರಮಣರು॥ ॥೧೪॥

ಇಂದಿಗೂ ಸತ್ಯವಾ
ಸಂದೇಶವೆನಿಸುವೊಲು
ನಿಂದಿರುವುದಾಡಳಿತ ವೃಂದ ನಮ್ಮ
ಕೊಂದರೂ ಕೇಳದೆಯೆ
ಮಂದಹಾಸವ ಬೀರಿ
ನಂದಿಸಲು ನಟಿಸುತಿದೆ ಬೆಂಕಿ ಹಚ್ಚಿ॥ ॥೧೫॥

ನೂರರಲ್ಲೊಬ್ಬನುಪ–
ಕಾರಿ ದೊರಕಲುಬಹುದು
ದಾರಿಹೋಕರು ಮೆಚ್ಚಬಹುದಾತನ।
ಜಾರಚೋರರ ಜೊತೆಗೆ
ಸೇರಿ ಸಿರಿಯನ್ನಾಳ್ವ
ನಾರಾಯಣರ ಹಿಂಸೆ ತಾಳಲರಿದು॥ ॥೧೬॥

ಅಶರೀರಭಾವದಲಿ
ಸಶರೀರರಿರಬೇಕು
ಪಶುಶೀಲವಿಲ್ಲದವರೀನಾಡಿನ।
ದೆಸೆ ದೆಸೆಗಳಲ್ಲಿವುಪ–
ದೇಶ ಮಾಡಿದ್ದವುಪ–
ನಿಷದಾದಿ ಶಾಸ್ತ್ರಗಳ ಸುಳ್ಳೆನಿಸುವ॥ ॥೧೭॥

ಅಪರಾಧವನು ಹಣಕೆ
ಹಪಹಪಿಸುವವ ಮಾಡ–
ನುಪರಿಚರನೂ ಸ್ವಾಧಿಕಾರ ಮತ್ತ।
ಅಪವಾದವೇ ವಾದ
ವಿಪರೀತವೇ ಸಹಜ
ಕುಪಿತನಾಗದಿರೆಂದವವು ಸುಭಗಗೆ॥ ॥೧೮॥

ನನ್ನಲ್ಲಿರುವ ವಿಷ್ಣು
ನಿನ್ನಲ್ಲಿರುವನು ತಾಂ
ಕನ್ನಹಾಕುವ ಕಳ್ಳನಲ್ಲಿರುವನು।
ಎನ್ನುವುದು ಸತ್ಯವೋ
ಗನ್ನಗತಕದ ಮಾತೊ?
ಭಿನ್ನವಿದ್ದರೆ ಸತ್ಯ ಹೇಳಿರದನು॥ ॥೧೯॥

ಅಣಕವಲ್ಲವಿದಲ್ಲ
ಪಣತೊಟ್ಟು ಸಾಧಿಸುವೆ
ಜನತಾ ಪ್ರಭುತ್ವವಿಹ ರಾಷ್ಟ್ರಗಳನು।
ಇಣಿಕಿ ನೋಡಿರಿ ಕೊಂಚ
ಹಣದ ಬಲ ಬಲದ ಹಣ
ದಣಿಸುತ್ತಿಹುದು ಸುಳ್ಳೆ ನೀತಿಯುತರ॥ ॥೨೦॥

ಇದು ವಿಡಂಬನೆಯಲ್ಲ
ಹೃದಯ ಹೇಳಿದ ಮಾತು
ಮಿದುಳ ಕಲ್ಪನೆಯಲ್ಲ, ಗುರುರಮಣನ।
ಪದದಾಣೆ ಪರಮಾತ್ಮ
ವಿಧಿಸಿದರಿವಿನನುಜ್ಞೆ–
ಯಿದಕಿದೆಯಿದಾಭಾಸವೋ ಭಾಸವೋ॥ ॥೨೧॥

ವಿದ್ಯೆಯೊಳಗೆರಡು ವಿಧ
ಬುದ್ಧಿಯೊಳಗೆರಡು ವಿಧ
ನಿದ್ದೆಯೊಳಗೆರಡು ವಿಧ ಸತ್ಯ ಮಿಥ್ಯ।
ಅದ್ವೈತಭೇದ ನಿರ್–
ಬುದ್ಧಿಗುಂಟೇ? ಶುದ್ಧ
ಬುದ್ಧಿಯಾಚೆಗಶುದ್ಧ ಭೂಮಿಯುಂಟೇ॥ ॥೨೨॥

ಸಾಧಕರಿಗಾಗಿ ಸಂ–
ಪಾದಕರು ಗಳಿಸಿಟ್ಟ
ಬೋಧೆಗೆಲ್ಲೂ ಇಲ್ಲ ವಾಚ್ಯಾರ್ಥವು।
ವೇದ್ಯವೇತ್ತರಿಗಲ್ಲ
ಮಾದ್ಯಚಿತ್ತರಿಗಲ್ಲ
ಬಾಧಕವೆ ಲಕ್ಷ್ಯಾರ್ಥ ವಾಚ್ಯಾರ್ಥದ॥ ॥೨೩॥

ಲಕ್ಷಿತಂ ಸೂಚಿತಂ
ಲಕ್ಷ್ಮವಿಡಿ ಸತ್ಯಕ್ಕೆ
ಪಕ್ಷಿನೋಟದ ಚಿತ್ರದಿಗ್ದರ್ಶನ।
ಅಕ್ಷಯ್ಯವಾದ ಗುರು–
ವೀಕ್ಷಣವು ಮಾಡಿಸುವ
ಸೂಕ್ಷ್ಮಾನುಭವದಿದಿರ್ ವಾದವಿಲ್ಲ॥ ॥೨೪॥

ವಾದದಲ್ಲೇ ಹೂತು
ಹೋದರಿಹವೂ ಇಲ್ಲ
ನಾದಬಿಂದುಕಲಾತಿರಕ್ತವಾದ।
ಮೋದವೂ ಇಲ್ಲ ಗುರು
ಬೋಧವನ್ನಾಚರಿಸ–
ಲಾದರಂತೇವಾಸಿ ಧನ್ಯವಪ್ಪ॥ ॥೨೫॥

ಬುದ್ಧಿಯೋಗಿಗಳು ತಾವ್
ಯುದ್ಧ ಮಾಡಲೆ ಬೇಕು
ಶುದ್ಧ ಧರ್ಮ ಸ್ಥಾಪನೆಗೆ ಲೋಕದ।
ಬುಧ್ಯತೀತ ಧ್ಯಾನ–
ಕದ್ಯಾಧಿಕಾರವಿರೆ
ಸದ್ಯದ ವ್ಯವಹಾರ ಬಿಡಲೆಬೇಕು॥ ॥೨೬॥

ದೇಶಭಾಷಾಭ್ಯಾಸ
ಕೋಶವೃದ್ಧ್ಯಾವೇಶ
ಮಾಸದಿಹ ಸತ್ಕೀರ್ತಿ ಸಂಪಾದನೆ।
ದಾಸ್ಯ ಮೋಚನಯತ್ನ
ಲೇಸನೀಯಲು ಜನ–
ಕ್ಕೀಶಾಜ್ಞೆಯೆಂದು ನಾವ್ ಮಾಡಬೇಕು॥ ೨೭॥

ಪಾತ್ರತ್ವವಿಲ್ಲದವ
ಪಾತ್ರ ವಹಿಸಿದ ನಾಟ್ಯ
ಶಾಸ್ತ್ರ ಸಂಮತವಲ್ಲ, ಹೇಯವೆಲ್ಲ।
ಸೂತ್ರಧಾರನ ಕಡೆಗೆ
ನೇತ್ರವನು ಹರಿಸದಿರೆ
ತೋತ್ರದೇಟಿಗೆ ಪಾತ್ರ ನೋಡುವವರ॥ ೨೮॥

ಶೋಚ್ಯರಾರೆಂಬುದು ವಿ–
ವೇಚ್ಯ ರಾಷ್ಟ್ರದೊಳಿಂದು
ನೀಚರೋ ನೀತಿಯಲಿ ಪರಿಶುದ್ಧರೋ।
ದೋಚಿ ದೊಡ್ಡವರಾದ
ಪಾಚಕರೊ ಪಾಚ್ಯರೋ
ಬೇಚಾರಿಗಳೊ ಜಾತಿಮತಭಜಕರೋ॥ ೨೯॥

ಜಾತಿಜಾತತೆಯಿಂದ
ನೀತಿ ಬಾಧಿತವಲ್ಲ
ಪಾತಕಿಗಳಿಗೆ ಮತಾಚಾರವಿಲ್ಲ।
ಆತ್ಮಾಷ್ಟಗುಣವಿರದ
ವೀತಲಜ್ಜರ ಕರೆದು
ಜೀತದಾಳ್ತನಕಿಳಿಸು ದೇಶಭಕ್ತ॥ ೩೦॥

ಅಷ್ಟದೋಷಗಳಿಂದ
ಮುಷ್ಟಿಬಲದೋರುತ್ತ
ಪುಷ್ಟನಾದವ ದೇಶಭಕ್ತನಹುದೇ?
ಶಿಷ್ಟರನ್ನವ ಮೊದಲೆ
ದುಷ್ಟರೆಂದಪಮಾನ
ದೊಟ್ಟಿಲಿಗೆ ನೂಕದೆಂದೂ ಬಿಡನಲಾ!॥ ೩೧॥

ಗಾಂಧೀಜಿಯಂಥ ಗುರು
ನಿಂದಿಸದ ರಾಷ್ಟ್ರೀಯ
ಬಾಂಧವರ ಮತದಾನದಿಂದ ಗೆದ್ದ।
ಸ್ಕಾಂದ ತೇಜಸ್ವಿಗಳ್
ಬಂದರಧಿಕಾರಕ್ಕೆ
ವಂದ್ಯರೆಂದೂ ನಿಂದ್ಯರಾಗರಿಲ್ಲಿ॥ ೩೨॥

ಧರ್ಮಾವಿರುದ್ಧಾರ್ಥ
ಕರ್ಮ, ಕರ್ಮದೆ ಭಕ್ತಿ
ಮರ್ಮಜ್ಞರಾರಾಧನಾಪ್ರಕಾರ।
ನಿರ್ಮಲ ಮನಸ್ಕತೆಯ
ವರ್ಮವನು ಕೊಟ್ಟಾಗ
ಜನ್ಮಭಯದಿಂ ಮುಕ್ತಿ ಲಭ್ಯ ಜನಕೆ॥ ೩೩॥

ಓನ್ನಮೋ ಭಗವತೇ
ಚಿನ್ಮಯ ಶಿವಾತ್ಮನೇ
ಮನ್ಮನೋಹರ ಪೂರ್ಣಸತ್ಯಾಯ ತೇ।
ಮನ್ಮಥಾಂತಕ ಜಗ–
ನ್ಮಾನ್ಯಾಯ ಸದಸದ್ ವಿ–
ಭಿನ್ನಾಯ ಕಾಲಸ್ಯ ಕಾಲಾಯತೇ॥ ೩೪॥

അസമർപ്പിതം നാസ്തി
വിഷമസ്ഥിതിർന്നാസ്തി
പശുശരീരാഭിമാനം നാസ്തി മേ।
ബിസജാക്ഷ വീക്ഷണാ–
ദ്വശവർത്തിനം കുരു
പ്രശമനാർത്ഥിനമേനമരിഗണസ്യ॥ ೩೫॥

ಪ್ರಾರ್ಥನಾ

ತ್ವತ್ಕೃಪಾಪಾತ್ರತಾಂ ದೇಹಿ ಸದ್ಗುರೋ ರಮಣಾಭಿಧ।
ನಾಮರೂಪಾಕೃತಿಮತೇ ಮಹ್ಯಂ ನಿರ್ದ್ವಂದ್ವ ನಿರ್ಗುಣ॥

ಮೂರ್ತಾಜ್ಞಾನಂ ನರಂ ಮಾಂ ಭೋದುರ್ಬಲಂ ಪಾಹಿ ಪಾವನ।
ಶಮಾದಿ ಶಕ್ತಿಂ ದತ್ವಾ ಮೇ ರಮಣಶ್ರೀಧರಾಧಿಕ॥

ದುಸ್ತ್ಯಾಜ್ಯ ಮಾಯಾಮೂಢಂ ಮಾಂ ಚಿಂತಾಶತಹತಂ ನರಮ್।
ಚಂಚಲಂ ಚಾಪಲಹತಂ ತೃಣಾಭಂ ಜಗದೀಶ್ವರ॥

ಪಾಹಿ ಪಾಮರಮಾತ್ಮತ್ವಾದ್ದೂರೀಕೃತಮನುತ್ತಮ।
ಗುರೋ ಶತಭಯಾವಿಷ್ಟಂ ಸಂಕಲ್ಪಬಲವರ್ಜಿತಮ್॥

ಅದೃಢಂ ಸಂಶಯಗ್ರಸ್ತಂ ಪ್ರಕೃತ್ಯಾಬದ್ಧಮದ್ಭುತ।
ನಾನಾರ್ಥದರ್ಶನಹತಂ ರಕ್ಷಾರುಣಗಿರೀಶ್ವರ॥

ಸಾಪೇಕ್ಷತ್ವಾನ್ಮಮತ್ವಸ್ಯ ಸರ್ವಸ್ವಾಸ್ಯ ಮಹಾಗುರೋ।
ಅಪೂರ್ಣತಾಹತಮತಿರ್ಧ್ಯಾಯಾಮಿ ತ್ವಾಮಹಂ ಪ್ರಭೋ॥

ಅಹಂ ಲಘುತಮಃ ಪ್ರಾಜ್ಞ ಜಗತ್ಯಸ್ಮಿನ್ ಪರಾತ್ಪರ।
ಶ್ರದ್ಧಾಮೇಧಾಯಶಃ ಪ್ರಜ್ಞಾಬಲೇಷು ಭಜಕೇಷುತೆ॥

ಅಪ್ರಾಜ್ಞತ್ವಾದ್ದಧೀರತ್ವಾಅಬಲಿತ್ವಾದಹರ್ನಿಶಮ್।
ಅಶಾಂತ್ಯಾಕ್ರಾಂತಮನಸಾ ಧ್ಯಾಯಾಮಿ ತ್ವಾಂ ಗುರೂತ್ತಮ॥

ವೈರಾಗ್ಯಾಭ್ಯಾಸಹೀನತ್ವಾತ್ ದಾರಿದ್ರ್ಯಾದಪಮಾನತಃ।
ಹತಃ ಸರ್ವತ್ರ ಜಗತಿ ಯಾಚನಾಲೋಚನಾಶತಾತ್॥

ಸರ್ವದಾರಿದ್ರ್ಯಶಮನಂ ಸರ್ವಾಧೈರ್ಯಾಪನೋದನಮ್।
ರಮಣಂ ಶ್ರೀಧರಂ ಸತ್ಯಮನಂತಂ ಭಾವಯಾಮ್ಯಹಮ್॥

ರಮಣಾಯ ನಮಸ್ತುಭ್ಯಂ ಶ್ರೀಧರಾಯ ಮಹಾತ್ಮನೇ।
ಬ್ರಹ್ಮಣೇಪರತತ್ವಾಯ ಸರ್ವಬಾಧಾಪಹಾರಿಣೇ॥

ಅಹಂಕಾರಾನುಗಾಂ ಚಿಂತಾಮರ್ಪಯಾಮಿ ಮಹಾಪ್ರಭೋ।
ತುಭ್ಯಂ ನಾಸ್ತ್ವನ್ಯದಸ್ಮಿಂಶ್ಚ ನರೇ ಪುತ್ರೇತವೇಶ್ವರ॥

ಅಚಿಂತ್ಯಾವ್ಯಕ್ತರೂಪಾಯ ನಿರ್ಗುಣಾಯ ಗುಣಾತ್ಮನೇ\
ಸಮಸ್ತಜಗದಾಧಾರಮೂರ್ತಯೇ ಬ್ರಹ್ಮಣೇ ನಮಃ॥

ಅರುಣಾಚಲಶೃಂಗಾಯ ರಮಣಸ್ಯ ಮಹಾಮುನೇಃ।
ನೇತ್ರದ್ವಯಾಯ ಮನಸಾ ಮಾಂ ದದಾಮಿ ಜಪಾಮಿ ತಮ್॥

ಓಂ ನಮೋ ವಿಶ್ವಗುರವೇ ರಮಣಾಯಾರುಣಾಚಲೇ।
ಸ್ಥಿತಾಯ ಕರುಣಾನಂದನೇತ್ರಾಯಾತ್ಯಂತ ಸಾಧವೇ॥

ಅನಾಸಕ್ತಿಮಲಿಪ್ತತ್ವಂ ನಿಶ್ಚಿಂತತತ್ವಂ ಪ್ರದೇಹಿ ಮೇ।
ಭಗವನ್ ಗುರುರಾಜೇಂದ್ರ ಸಚ್ಚಿದಾನಂದಮದ್ಭುತಮ್॥

ನಾಮರೂಪಶತೇನಾಪಿ ದುರೂಹ್ಯ ಪರಮೇಶ್ವರ।
ತ್ವದೀಯ ಜಪಶಕ್ತಿಂ ಮೇ ಪ್ರದೇಹಿ ನಿರುಪಾಧಿಕ॥

ಮುಮುಕ್ಷುತ್ವಂಚ ಮೋಕ್ಷಂ ಚ ದೇಹಿ ಮೆ ಜಗದೀಶ್ವರ।
ಭಗವನ್ ರಮಣ ಪ್ರಾಜ್ಞ ದಯಾಸಿಂಧೋರುಣಾಚಲ॥

ಶಿವಶಾಂತ ಜಗನ್ನಾಥ ಲೋಕಾನುಗ್ರಹಕಾರಕ।
ಅರುಣಾಚಲ ವಿಶ್ವಸ್ತ ನಮಸ್ತೇ ವಿಶ್ವಭೇಷಜ॥

ಮರಾಮರಗಣಾಧ್ಯಕ್ಷ ಮರಣಾತೀತ ಮಂಗಲ
ಸತ್ಯಜ್ಞಾನಾನಂತರೂಪ ನಮಸ್ತೇಗುರವೇ ಮಮ

ಕೋऽಹಂ ಕೋऽಹಂ ಕಿಮರ್ಥಂಚ ಭೇಧಜ್ಞಾನಂ ಮಯೀಶ್ವರ।
ನ ಜಾನೆ ಮೋಘಚಿಂತೋಽಹಂ ತ್ವತ್ಪ್ರಸಾದಸ್ಯ ಯಾಚಕಃ॥

ವಿಭೂತಿಮತ್ಸು ಸರ್ವೇಷು ಶ್ರೇಷ್ಠ ಶ್ರೀರಮಣ ಪ್ರಭೋ।
ಭಕ್ಷಯೇದಮಹಂಕಾರಜಡಂ ಮೇ ಮಾನಸಂ ಚಲಮ್॥

ಸವಿಕಲ್ಪಕಭಾವಂ ಚ ಹರ ಮತ್‌ಸ್ಥಂ ಮನೋಹರ।
ಗುರುದೇವ ಲಘುತ್ವಾಂನ್ಮಾಂ ಮೋಚಯ ಪ್ರಣವೇಶ್ವರ॥

ಲೋಕಧರ್ಮಾನುಸಾರೇಣ ವರ್ತಮಾನಃ ಪ್ರಭುದ್ಧಿಮಾನ್।
ಕಿಮಹಂ ಸರ್ವಕಾರ್ಯೇಷು ವಿಘ್ನಿತೋದುಃಖಮಾಶ್ರಯೇ॥

ನ ಜಾನೇ ಪ್ರಕೃತೇಃ ಕೃತ್ಯಂ ತವ ಗುಪ್ತಂ ಮಯೀಶ್ವರ।
ಪ್ರತ್ಯೇಕತಾ ಪ್ರತಿಕ್ಷಣಂ ಹಂತಿ ಮಾಮಜ್ಞಮಕ್ಷಮಮ್॥

ವಿಚ್ಛೇದತಾಪ್ರಜ್ಞಯಾಹಂ ನಾಸ್ಮಿ ಚಾಸ್ಮಿ ದಿನೇ ದಿನೇ।
ಅರ್ಥೋನರ್ಥೇನ ಭಾತ್ಯತ್ರ ಸರ್ವಾವಸ್ಥಾಸು ಸರ್ವದ॥

ಗ್ರಾಹ್ಯತಾ ತ್ಯಾಜ್ಯತಾ ವಸ್ತುನ್ಯತ್ರ ನೋ ಸಾರ್ವಕಾಲಿಕಾ।
ಸಾರ್ವದೇಶಿಕತ್ವಾಪ್ಯತ್ರ ನಾಸ್ತಿ ತಸ್ಮಿನ್ನವಾಂತರೇ॥

ಪರಿಣಾಮಪ್ರಕಾರಾಶ್ಚ ಬಿನ್ನಾ ವಸ್ತುಷು ದೃಶ್ಯತೆ।
ಪರಿಮಾಣವಸ್ತ್ವನೇಕೇಷು ಕಾರ್ಯಕಾರಣಭಾವತಃ॥

ಭಾವನಾನಾತ್ವಕರಣಾಹ್ಯನುಭೂತಿರಿಹ ಪ್ರಭೋ।
ನಾನಾರ್ಥಪರಿಹಾರೇಣ ಶಾಂತಿರ್ಲಭ್ಯಾನಿರಂತರಾ॥

ತ್ವಮೇವ ಶಾಂತಿಃ ಶಕ್ತಿಶ್ಚ ಶಿವಃ ಸತ್ಯಸ್ಯ ಪೂರ್ಣತಾ।
ತ್ವಯ್ಯೇವ ಗುರುರಾಜೇಂದ್ರ ತಸ್ಮಾತ್ ತ್ವಂ ಶರಣಂ ಮಮ॥

ಶ್ರೀಧರಃ ಶ್ರೀಕರಃ ಶ್ರೇಯಃ ಸತ್ಯಸ್ವಾಮೀ ಸಮಾಹಿತಃ।
ರಮಣೋರಕ್ತಗಿರಿಜಃ ಸಾಕ್ಷೀ ಸರ್ವಸ್ಯ ಸರ್ವದಾ॥

ಸರ್ವತಾ ತೇನ ದೃಶ್ಯಾಹಿ ಸರ್ವತ್ವಸ್ಯಾಪನೋದನಮ್।
ತೇನೈವ ಗುರುಣಾ ಸತ್ವಂ ಭಾಸತೆ಼ಶಾಂತಿಕಾರಿಕಾ॥

ನಾಹಂ ತ್ವಮಿತಿ ವಿಜ್ಞಾಯ ದುಃಖತಪ್ತಃ ಸ್ಮರಾಮ್ಯಹಮ್।
ಧ್ಯಾಯಾಮಿ ತ್ವಾಂ ದೀನಚೇತಾ ಭ್ರಾಂತಃ ಶ್ರಾಂತೋ ಸಮಾಹಿತಃ॥

ವ್ಯಾಪ್ತಮಜ್ಞಾನತಮಸಾ ಜ್ಞಾನಂ ತವ ಮಯೀಶ್ವರ।
ವ್ಯಾಪ್ಯತೇ ಚ ಕಥಂ ಸೂರ್ಯಸ್ತಿಮಿರೇಣ ವಿಭಾಕರ॥

ತೇಜಸೋಽಭಾವತಾ ದೃಶ್ಯಾ ಯಥಾ ನೇತ್ರವತೋಸ್ತಥಾ।
ಅಪೂರ್ಣಭಾವಃ ಸತ್ಯಸ್ಯ ತವ ದೃಶ್ಯಾ ಮಯೀಶ್ವರ॥

ಅದರ್ಶನಮಪೂರ್ಣಸ್ಯ ಮಮತಾ ಮಮ ವಿಶ್ವರಾಟ್।
ಭವೇನ್ಮಯಿ ಝಟಿತ್ಯಾಶು ಕೃಪಯಾ ತವ ಸದ್ಗುರೋ॥

ಗುರೋ ಗುಹಾಪಿನಿಹಿತ ಪ್ರತ್ಯಕ್ಷೀಭವ ಮೇವಿರಾಟ್।
ಅಪಾತ್ರತ್ವಂ ಪರಿಹರ ಮಮ ತ್ವದ್ದರ್ಶನಸ್ಯ ಚ॥

ಬೋಧಯಸ್ವ ಮಹಾದೇವ ಸಮರ್ಪಣಕಲಾಂ ತ್ವಯಿ।
ಮಮತ್ವಸ್ಯ ಮಹಾಲಸ್ಯಮಯಸ್ಯಾಸ್ಯ ಚ ಮಾಂ ಗುರೋ॥

ಅನುಭೂತಿರಶಕ್ತೇಶ್ಚ ಸರ್ವದಾ ಮಮ ಸರ್ವಥಾ।
ಸರ್ವತ್ರ ಪರಿಹರ್ತವ್ಯಾ ಗುರುಣಾ ದಯಯಾ ತ್ವಯಾ॥

ದಾನೀ ದತ್ತಶ್ಚ ಭಕ್ತೇಭ್ಯೋ ಭಗವನ್ ತ್ವಂ ಸ್ವಯಂ ದಯಾ।
ಸ್ವಾಮಿಷ್ಟತಮ ತಸ್ಮಾತ್ತೇ ನಮಃ ಸರ್ವಜ್ಞ ಸರ್ವಗ॥

ಸಮಗ್ರೈಕ್ಯ ಪ್ರಭಾವಿತ್ವಾತ್ ಸಮತ್ವೇನ ಬಿಭಾಸ್ಯಹೋ।
ತವೈವೋಕ್ತಾ ಲೋಕಗುರೋ ತ್ವಾಮಸ್ಮಿ ಶರಣಾಗತಃ॥
ತ್ವದಧೀನಮಿದಂ ಸರ್ವಂ ಮನಸಾ ದೃಷ್ಟಮತ್ರ ಭೋಃ।
ತ್ವಮೇವಸರ್ವಂ ಸತ್ಯೇನ ತಸ್ಮಾತ್ ತ್ವಾಮೇವ ಸಂಶ್ರಯೇ॥

ಶರೀರೇ ಜರ್ಜರಿಭೂತೇ ವ್ಯಾಧಿಗ್ರಸ್ತೇ ಕಲೇವರೇ।
ಮಾನಸೇ ಚ ಮಹಾದೇವ ಬುದ್ಧ್ಯಾ ತ್ವಾಮೇವ ಸಂಶ್ರಯೇ॥

ಸರ್ವಭಾವೇನ ಸರ್ವತ್ರ ಸರ್ವಕಾಲೇಷು ಸರ್ವರಾಟ್।
ತ್ವಮೇವ ಪಾಲಕಶ್ಚಸ್ಯ ದೇಹಿನಃ ಪರಮಾರ್ಥತಃ॥

ತ್ವತ್ ಕಾರುಣ್ಯಂ ವಿನಾ ನಾಹಂ ಜೀವನೇ ಮರಣ್ಯೇಪಿಚ।
ಮೋಕ್ಷೇಪಿ ಶಾಂತಿಂ ವಿಂದಾಮಿ ತತಸ್ತ್ವಾಮೇವ ಸಂಶ್ರಯೇ॥

ತ್ವಂ ನಿತ್ಯಸತ್ಯಂ ಸರ್ವಜ್ಞ ತ್ವಮೇವಾಧಾರ ಜ್ಞತ್ಯಪಿ।
ಜಾನಾಮಿ ತ್ವತ್ತೋನಾಸ್ತ್ಯತ್ರ ಪರಃ ಪರಮ ಸದ್ಗುರೊ॥

ಅನಾದ್ಯನಂತಂ ರಮಣಂ ಭಜೆ್ಯಫ ಪ್ರದೊಷಿತಾಹಂ ತ್ವ ನಿವಾರಣಾಯ।
ಪ್ರತಾರಕಾಣಾಂ ದಮನಾಯ ದಸ್ಯುಪ್ರತಾರಣಾಯಾದ್ಯ ಚ ದಂಡನಾಯ॥
ಯತಶ್ಚಲತ್ವೇಸ್ಥಿತಚಾಲಕಾಯ ಪ್ರಣಾಮ ಏಷೋ ರಮಣೇಶ್ವರಾಯ।
ತತಸ್ತಮೋಹಾರಿ ಚ ಯಸ್ಯ ತೇಜಃ ಸ್ವತಸ್ತಮೀಡೇ ಭುವನಸ್ಯಚಾಸ್ಯ॥

ಮನಶ್ಚ ಬುದ್ಧಿಂ ಕರಣಾನಿ ಪಂಚ
ಪ್ರತಾರಯಂತೀಹ ಸದಾ ಮನುಷ್ಯಾಃ।
ತತಸ್ತಮಿಂದ್ರಂ ಗುರುಲೋಕ ಸೂರ್ಯಂ
ಪ್ರಯಾಚತೇಯಂ ರಮಣಂ ವಿಚಾರ್ಯ॥

ಅಣೋರಣೀಯೊ ಮಮ ಮಾನಸಂ ಯತ್
ತದೀಶ ರಕ್ಷೇತಿ ಚ ಶೂನ್ಯತಾಯಾಮ್।
ನಿಮಜ್ಜನೇನಾಪಿ ಚ ಯೇನ ಕೇನ
ಪ್ರಕಾರತೋವಾ ಗುರುರಾಜರಾಜ॥

ವಿನಾಹಿ ಕಾರುಣ್ಯಬಲೇನ ಲೋಕೇ
ನಕೋಪಿ ಬದ್ಧಃ ಪರಿಮುಚ್ಯತೇ ಚ।
ನ ಕಿಂಚಿದತ್ರ ಪ್ರಚಲತ್ಯನೇನಂ
ವಿನಾ ಗುರೋರೀಶ್ವರತಾ ಕುತಃ ಸ್ಯಾತ್॥

ಸ ಈಶ್ವರಃ ಸಾಧುರನೂಹ್ಯ ಶಕ್ತಿಃ
ಪರಾತ್ಪರಃ ಸರ್ವನಿಯಾಮಕಶ್ಚ॥
ಸದಾಶಿವಃ ಸದ್ಗುರುರಿತ್ಯಜಸ್ರಂ
ನಮಾಮಿ ಸದ್ಬುದ್ಧಿದಮದ್ವಿತೀಯಮ್॥

ವಿದೇಹಮಜ್ಞಾನಹರಂ ಪ್ರಸನ್ನಂ
ಮನೋಹರಂ ದುಃಖವಿನಾಶಹೇತುಮ್।
ಅಹಂ ಗುರುಶ್ರೀರಮಣಂ ನಮಾಮಿ
ಪರಾತ್ಮದೃಷ್ಟಿಪ್ರದಮಪ್ರಮೇಯಮ್॥

ಶರೀರಿತಾ ಸಂಕಟಕೋಟಿಕಾರಣಂ
ಮಯಿ ಪ್ರಭೊ ಸಂಶಯಕೋಟಿಧಾರಣಮ್।
ತಯೈವ ಸಾ ಕಿಂ ನ ಜಹಾತಿ ಮಾಮಹೋ
ಗುರೋ ಕೃಪಾಲೋ ಬಹುನಿರ್ಬಲಂ ನರಮ್॥

ಅಪೂರ್ಣತಾ ಬುದ್ಧಿದೃಶಾ ಹಿ ದೃಷ್ಟಾ
ಮಮ ಪ್ರಪಂಚಸ್ಯ ಮಮತ್ವಹೇತೋ।
ಅತೃಪ್ತಿದಾ ಕಾಲದಿಶಾನಿಬದ್ಧಾ
ಪರಾತ್ಪರ ಪ್ರಾಪಯ ಪೂರ್ಣತಾಂ ಮೇ॥

ಅರಾತಯೋ ಮೇ ಬಹವಃ ಪ್ರಪಂಚೇ
ಸ್ವಮಾನಸಾಶ್ಚನ್ಯ ಮನೋಭವಾಶ್ಚ।
ಅಶಾಂತಿದಾಸ್ತಾನ್ ಹರ ವಿಶ್ವಮಾಯಾ–
ಪ್ರಭೋ ಮಹಾದೇವ ಗುರೋ ಮಹಾತ್ಮನ್॥

ಭ್ರಮಂ ಹರ ಭ್ರಾಮಕಮಸ್ತಿ ಯತ್ತತ್
ಪರಾಜಿತಂ ಸ್ಯಾದ್ದಯಯಾ ತವೈವ।
ಜಗದ್ಗುರೋ ಜನ್ಮಜರಾಮೃತೀನಾಂ
ನಿಬಂಧನಾನ್ಮೋಚಯ ಮಾಂ ತ್ವದೀಯಮ್॥

ಅನಾಮಿಕೋಽಹಂ ಬಹುವಿಘ್ನಬದ್ಧಃ
ಪ್ರವಾಹಮಧ್ಯೇ ಪತಿತೋಜಗತ್ಯಾಃ
ಅರಣ್ಯವಾಸೀವ ಪುರೇ ವಸಾಮಿ
ಪ್ರಣಮ್ಯ ಪಾದೌ ತವ ಸದ್ಗುರೋಮೇ॥

ಅರೂಪಮಲ್ಪಂ ಚಲಬುದ್ಧಿಮಜ್ಞಂ
ಪ್ರಲಾಪಶಕ್ತಂ ಪತಿತಂ ರಿಪೂಣಾಮ್।

ಪದಸ್ಥಲೇ ಭಗ್ನಶತಾಶಮೇನಂ
ಸಮುದ್ಧರ ಶ್ರೀಧರ ಸದ್ಗುರೋ ಮಾಮ್॥

ಜಾನಾಮಿ ನ ತ್ವನುಭವಾಮಿ ವಿಚಿಂತತಾಂ ಭೋಃ
ಪ್ರಾಣೇಶ್ವರ ಪ್ರಥಿತ ಸದ್ಗುರುರಾಜರಾಜ॥
ಶಕ್ತಿಂ ಪ್ರದೇಹಿ ಪರಮೇಶ್ವರ ಪಾಹಿ ಪಾಹಿ
ಪ್ರತ್ಯೇಕತಾನಿಹಿತ ಬುದ್ಧಿರಹಂ ಪ್ರಯಾಚೇ॥

ಉದ್ವೇಜಯತ್ಯತಿಶಯಂ ಹೃದಯಂ ತುದಂತಿ
ವಿಘ್ನಪ್ರದಾವಿವಿಧಕರ್ಮಸು ಸಂಪ್ರವೃತ್ತಾಃ।
ಸತ್ಯಂ ವದಾಮಿ ಸಮತಾಂ ಮಯಿ ಭೋವಿಧೇಹಿ
ವಿಘ್ನೇಶ್ವರ ಪ್ರಣವರೂಪ ಗುರೋ ಪ್ರಸನ್ನ॥

ಜೀವಾಮ್ಯಹಂ ಕಥಮಹೋ ಕಿಮಿತಿ ಪ್ರಜಾನೇ
ನಾಹಂ; ಮನುಷ್ಯಕುಲಜಃ ಸುಕುಮಾರಚೇತಾಃ।
ನ್ಯಾಯಪ್ರವೃತ್ತಿಯುತತಾ ಕಿಮಿಯಂ ಪ್ರಮಾದ–
ಪ್ರಾಯಾ ವಿನಮ್ರಮನಸಾಹ್ಯನುಯೋಜಯಾಮಿ॥

ಮೂಲೇಽಸಿ ಮೇ ಬಹಿರಸಿ ಪ್ರಭುತಾ ತವೇವ
ಸರ್ವತ್ರಚಾಂತರಪಿ ಕಾ ಭ್ರಮರೂಪಮಾಯಾ।
ತ್ವತ್‌ಸೇವಿಕಾ ತವ ಪದಾಂಬುಜಧೂಲಿರೂಪಾ
ಕರ್ತಾ ತ್ವಮೇವ ನ ತು ಸಾ ಗುರುದೇವದೇವ॥

ದೇವಸ್ತ್ವಮೇವ ಗುರುರಾಜ ಮುನಿಸ್ತ್ವಮೇವ
ಯೋಗೀ ತ್ವಮೇವ ಪರಮಪ್ರಭುರಪ್ರಮೇಯಃ।
ನಾನಾರ್ಥತಾ ನಹಿ ಸಮಸ್ತ ಪದ್ಯೈಃ ಸ್ತುತಸ್ತ್ವಂ
ತ್ವಯ್ಯೀಶ ವಿಶ್ವವಿಭವೋ ರಮಣಾಭಿಧಾನೇ॥

ನಾನಾವಿಧ್ಯೈಃ ಪ್ರಹರಸಿ ಪ್ರಮಿತಂ ಮನುಷ್ಯಂ
ನಿರ್ವೇದರೋಗಹತಮಾನಸಮಾತ್ಮಶೂನ್ಯಮ್।
ಕರ್ಮೇತಿ ಮೇ ವದಸಿ ಕಾರಯಿತಾ ಚ ಭೂತ್ವಾ
ಬ್ರಹ್ಮಪ್ರತಾರಣಮಿದಂ ಪರಿದೃಶ್ಯತೇ ತೇ॥

ಸತ್ಯಂ ತ್ವಮೀಶ್ವರ ಸುರಮ್ಯಮಿದಂ ಪ್ರಪಂಚಂ
ಜಾನೇ ನ ವಾ ಪ್ರಕೃತಿಸೂತ್ರಗಣೇನ ಬದ್ಧಃ।
ಶ್ರುತ್ವಾ ಶ್ರುತ ಪ್ರಭುವರ ಪ್ರಣಮಾಮಿ ದೀನೋ
ಭೂತ್ವಾಽಸಹಾಯಕತಯಾಹಮಚಿಂತ್ಯ ತತ್ವ॥

ಜ್ಞಾತಾ ಮಮತ್ವಮತಿತಾಹ್ಯನಯಾ ಕಿಮಾಪ್ಯಂ
ನಿರ್ನಿತ್ಯವಸ್ತು ಸುಖದುಃಖಫಲಂ ಮನೋಮೇ।
ತಪ್ತಂ ತತಃ ಪ್ರತಿದಿನಂ ನಿರುಪಾಧಿಬದ್ಧ
ತ್ವತ್ತಾ ಹಿ ನಿತ್ಯಸುಖದಾ ಶ್ರುತಿತರ್ಕಲಬ್ಧಾ॥

ತಸ್ಮಾದನಂತ ನಿರುಪದ್ರವ ನಿರ್ವಿಕಲ್ಪ
ಮಾಮಗ್ರತೊ ನಿರ್ಗೃಣ ಷಡ್ರಿಪುಪುಷ್ಟಚಿತ್ತಮ್।
ಪೀಡಾಸಹಸ್ರಹತಬುದ್ಧಿವಿಕಲ್ಪಜಂತುಂ
ಬೇಭೀಯಮಾನ ತರಲಂ ಕರುಣಾರ್ಹಜೀವಮ್॥

ಶೋಶುಭ್ಯತೇ ತವ ಗುರೋ ವಿಭುದಾಗ್ರಗಣ್ಯ
ಶಕ್ತಸ್ಯ ತೇ ಕ್ಷಮಿತುಮಸ್ತ್ಯಪರಾಧರಾಶಿಃ।
ಯದ್ಯಸ್ತಿ ಮಯ್ಯತುಲ ಕಾರಣ ಕಾರಣತ್ವಾತ್
ಸರ್ವಸ್ಯಚಾಸ್ಯ ಜಗತಸ್ತವಪುತ್ರಕೇಽಸ್ಮಿನ್॥

ವಂದೇ ವಿನಾಯಕಮನಾಯಕಲೋಕಜೀವೀ
ತ್ವಾಮೀಶ ಸದ್ಗುರುಗಣೇಶ್ವರ ತರ್ಕಸಿದ್ಧ।
ಸಾಪೇಕ್ಷತಾವಿಹಿತ ಮಂದಮತಿರ್ನರೋಽಹಂ
ದ್ವಂದ್ವಾದ್ರಿಶೃಂಗನಿಹಿತೊ ಭಯಸಂಶಯಾಢ್ಯಃ॥

ಧ್ಯಾನಂ

ಶುದ್ಧಬ್ರಹ್ಮ ಪರಾತ್ಪರರಾಮೋ

ರಾಮನ್ ರಮಣೋ ವೇಂಕಟಪೂರ್ವಃ
ಶಂಕರಶಕ್ತಿಃ ಕೃಷ್ಣಾತ್ಮಾ ಯೋ
ವಂದ್ಯಃ ಸ ಗುರುಸ್ತಾರಕನೇತ್ರಃ

ಸರ್ವಮಿದಂ ಜಗದೀಶ್ವರ ನೇತ್ರಂ
ಸರ್ವಮಿದಂ ತದ್ದರ್ಶನ ಪಾತ್ರಂ
ಸರ್ವಂ ಗುರುಪುರುಷೇಕ್ಷಣಜಾತಂ
ಸರ್ವಂ ತಲ್ಲೀನತ್ವೇನೋತಂ

ದುರ್ಗಂಧ ಸುಗಂಧಾದಿ ವಿಭೇದಸ್
ತದ್ದತ್ತ ಸ್ತನ್ನಿಗರಣ ವಸ್ತು
ಸೋಹಂತಾ ಮುಕ್ತಸ್ಥಿತಿರಿತ್ಯೋಂ
ಭಾವೋನಿರ್ಭಯಕಾರಣ ಮಸ್ತು

ನ್ಯೂನತ್ವವಿಭಾವೇನ ಹತೋऽಹಂ
ಜೀವತ್ವೇನ ನಿಬದ್ಧೋ ಗುರುಣಾ
ಲಾಘವ ಪತಿತಶ್ಚಿಂತಾದಗ್ಧೋ
ವ್ಯಾಧಿವಶಂಗತದೇಹಾಸ್ತರಣಃ

ಅಶರೀರತ್ವೇ ತಿಷ್ಠಂತಂ ತಂ
ಪಶುಪತಿರೂಪಂ ಪರಮಪವಿತ್ರಂ
ಗತಿಮತಿಪತಿಸುಸ್ಥಿತಿನಿಯತಿಕರಂ
ವ್ರತಧಾರ್ಯಹಮಭಿವಂದೇ ಸುಕರಂ

ಯಾತಾಯಾತಾಘಾತಹತತ್ವಾತ್
ಮೋಚಯಿತಾ ಸದ್ಗುರು ರಮಾಣಾಂಕಃ।
ನೇತಾಮೇ ನಿಸ್ತುಲ ನಿರ್ಭಿತಸ್
ಶಾಸ್ತಾ ಸರ್ವಬಲಾಢ್ಯಶ್ಚತುರಃ

ರಮಣಶ್ರೀಧರದೇವಃ ಸತ್ಯ
ಸ್ವಾಮಿಾ ಸತ್ಪಥದರ್ಶನಕಾರೀ
ಸತ್ವಸ್ಥೈರ್ಯಾನಂದ ಸಮುದ್ರೋ
ರಕ್ಷತಿ ಮಾಮಪಮಾನಾಚ್ಛಾರೀ

ಅರುಣಾಚಲ ಸೂರ್ಯಾಚಲಧಾರೀ
ವರುಣಾಂತಃಕರಣಃಸುವಿಚಾರೀ
ಪರಮಾತ್ಮಾ ನಿರ್ಗತಿಕೋದ್ಧಾರೀ
ಗುರುರಮಣಃ ಪಾತಕಸಂಹಾರೀ

ಅಪರಾಜಿತಶಕ್ತಿಃ ಕರುಣಾಲುಃ
ಶ್ವಪಚಸಮಂ ಮಾಮುದ್ಧರತಿ ಖಲು।
ಅಪರೂಪಂ ವಿಪರೀತ ಮನಸ್ಕಂ
ತ್ರಪಯಾ ಜರ್ಜರಿತಂ ದುಸ್ತರ್ಕ್ಯಂ

ಮೋಕ್ಷ ಶ್ರೀಧರ ಸತ್ಯಸ್ವಾಮಿಾ
ಅರುಣಾಚಲರಮಣಃ ಪ್ರಣಿಧಾನೀ
ಲೋಕಗುರುಃಪಾಲಯತಿ ನರಂಮಾಂ
ತಂ ವಂದೇ ಜಗದೀಶ ಮನಂತಂ

ವಂದೇ ವಂದೇ ಶ್ರೀರಮಣಗುರುಂ
ವೃಂದಾರಕಗಣದೇವಂ ಪರಮಂ
ಮಂದಾರೋಜ್ವಲ ತೇಜಃಪುಂಜಂ
ವಂದೇ ರಕ್ಷಣ ಚತುರಂ ವಿರಜಂ

ವಂದೇ ವ್ಯಾಧಿಹರಂ ಭಿಷಗಿಂದುಂ
ವಂದೇ ಭವಭಯಹರ ಭೇರುಂಡಂ
ವಂದೇ ಗುರುರಾಜೇಂದ್ರಂ ರಮಣಂ
ವಂದೇ ಮುಕ್ತಿದಮಮರಪದಸ್ಥಂ

ವ್ಯೋಮಾತೀತಂ ವ್ಯೋಮಭರಂ ತಂ
ಶ್ರೀಮದ್ರಮಣಂ ಶಿವಮಾನಂದಂ

ಕಾಮಾತೀತಂ ಕಾಮಾಧಾರಂ
ವಂದೇऽರುಣಗಿರಿ ಕೂಟಾಧೀಶಂ

ಸರ್ವಪ್ರೇರಣಕಾರಮಭವಂ
ವಂದೇ ನಿರ್ವೇದಗ್ಲಾನಿಹರಂ
ಸರ್ವಜ್ಞೇಂದ್ರ ಸರಸ್ವತಿ ಹೃದಯಂ
ಸರ್ವೈಕ್ಯಾನಂದಾಮೃತವರದಂ

ಪಾರಾವಾರಾಧಿಕವಿಸ್ತಾರಂ
ಮಾರಾಯಣದುಃಖಹರಂ ಧೀರಂ
ವಂದೇ ಹರಹರ್ಯಜ ಸಂಸಾರಂ
ವಂದೇ ನಿರ್ಮಲ ಶಾಂತಿ ಸುಧಾರಂ

ಶಮದಂ ದಮದಂ ಚೋಪರತಿಪ್ರದ
ಗುರುರಾಜಂ ಚ ತಿತಿಕ್ಷಾಬಲದಂ
ಶ್ರದ್ಧಾಭಕ್ತಿ ಸಮಾಧಿ ಶ್ರೀದಂ
ವಂದೇ ರಮಣಂ ಕರುಣಗುಣಾಲುಂ

ರೋಧನ ಭಕ್ತಿ ಸ್ತ್ಯಾಜ್ಯಾತಾವ
ದ್ಯೋಧಮದಾವಿಲ ಭಕ್ತಿ ಸ್ತ್ಯಾಜ್ಯಾ
ಸರ್ವಸಮತ್ವೋದ್ಭೂತ ಪ್ರೇಮ್ಣಾ
ತಸ್ಮಾತ್ತಾವದ್ವಂದೇ ರಮಣಂ

ಆಶ್ರಯದಾತಾ ಸತ್ಪಥನೇತಾ
ನಾತಿಶಯಾವೇಶಪ್ರಿಯ ಧಾತಾ
ಮಾತೃಹೃದಂಬುಜ ಪೀಯೂಷಾತ್ಮಾ
ತ್ರಾತಾಮೇರಮಣಃ ಪರಮಾತ್ಮಾ

ಸರ್ವೋಪಾಧ್ಯಂತರ್ನಿಹಿತಾತ್ಮಾ
ಸರ್ವೋಪಾಧಿಬಹಿಃಸ್ಥಿತಚೇತಾಃ
ಸರ್ವೋಪಾಧಿನಿಯಾಮಕ ಶಕ್ತಿಃ
ಸರ್ವಶ್ರೀರಮಣೋಮಮತಾ ಮೇ

ಅರ್ಥೋ‌ರಮಣಃ ಕಾಮೋ ರಮಣೋ
ಧರ್ಮೋ ರಮಣೋ ಮೋಕ್ಷೋರಮಣಃ।
ಸರ್ವಾರ್ಥಾತೀತಃ ಶ್ರೀರಮಣಃ
ಸರ್ವಾಧರಃ ಸವಿತಾ ನಿರ್ಭ್ರಮಣಃ॥

ದಿಕ್ಕಾಲಭ್ರಮನಿರಸನಬೀಜಂ
ದಿಕ್ಕಾಲಸ್ಥಂ ರಕ್ಷತಿ ಭಕ್ತಂ
ಭಕ್ತೇಷ್ವವಿಭಕ್ತಂ ಶ್ರೀರಮಣಂ
ಭಕ್ತೋಹಂ ವಂದೇ ಭಯಹರಣಂ

ಜ್ಞಾನರವೀಂದ್ರಂ ಲೋಕಕವೀಂದ್ರಂ
ಕಾರಣ ಕಾರಣ ಮಾದಿಮನಾದಿಂ
ಮಾರಕ ಶಕ್ತೇರ್ದಮನ ಬಲೀಂದ್ರಂ
ತಾರಕಮೀಶಂ ವಂದೇ ರಮಣಂ

ಅನಿಮಿಷನಯನಂ ಪರಮಪವಿತ್ರಂ
ಶರಣಾಗತವತ್ಸಲ ಮತಿ ಚಿತ್ರಂ
ಗುರುರಮಣಂ ವಿಧಿಹಂ ಹರಮೂಲಂ
ಭಜರೇಮಾನಸ ನಿತ್ಯಪರಾರ್ಥಂ

ಸತ್ಯಂ ಜ್ಞಾನ ಮನಂತಂ ಸಂತಂ
ಹೃತ್ಕುಹರಸ್ಥಂ ವಿಶ್ವವಿರಕ್ತಂ
ಭಕ್ತೋದ್ಧಾರೇ ನಿತ್ಯಾಸಕ್ತಂ
ವಂದೇ ರಮಣಂ ಶಿವಕರುಣರಸಂ॥

Appeal

I am a human being as I am made to know so by my co-living beings. I am an ego-centric psychophysical biped. The collective spirit is weaker than the individual spirit in me.

The sense of separateness or mental ego-bound individuality; or consciousness of possessivity or of an embodied ownership; the recognition of the difference between the subject and the objects or of power to assure various roles (collective in addition to the unconsciously assumed individual agency) these have not given me the satisfaction of living like the Perfect Being as described to me by my elders.

Dissatisfaction with my modern mode of living has led me to revise the series of thoughts that constituted me as I am now, has shocked me to such an extent. And it is this strong feeling that wanders in search of full satisfaction.

This wanderer has come to know himself as a mental being depending upon many perishable objects and ideas and so he thinks of a thing that is imperishable. Bhagavan 'Sree Ramana' tells that this wandering ego-mind (cognetive-conative-emotive-intuitive) should know to whom he was born and what elements he is composed of. The wanderer finds that his root is in Atman and his nature is that of an appearance similar to the appearance of twinkling (when we look at a star)

On examination, I find that I am not self-luminous, self-conscious but conscious of a self-like appearance which is not experienced in sleep or death. So I cannot depend upon myself (As this self is not strong enough to remain conscious of himself in sleep, death or swoon.)

So, I have no constant awareness of myself: I forget myself many times without my knowledge (Pre-intimation), It means, I am made to

forget whether I wish or not. I remember myself (after the period of forgetfullness) without previous knowledge. I cannot will to remember myself or forget myself whenever I want. When I am not felt by myself, at times, how can there be my will or anything that belongs to me?

I do not know the identity of the power that makes me do this or that under the circumstances in which I am placed. But I know that It is the cause of all that makes me able or unable to create, control or manipulate things in space, time and relations. I have neither any reason to call it by any name nor to attribute any form to it . It is that the Guru speaks of as identical with his spirit, power, knowledge and everything in one without a second.

Wandering wares away one's strength and patience as his mind is a matter of limited energy. It ends. I pray to my Guru Sree Ramana: let me fall at your feet as soon as I am tired. I am tired often and I fall into a state of sleep, dream or chaos which torments me further. This cannot go on for long. Remove my dubious identity as a wandering cow tied with a long rope to a central pole. Let me be like a child on your immortal lap before I pass into nothingness as a shadow vanishes at night in its source. I bow to you, I pray to you, I surrender to you, I meditate upon you and I sink in you, the Supreme Reality, never to rise out of you, even as a shadow, under your Grace. Amen!

B.H. Sridhar

Symbols

'Ra' in 'Ramana' stands for the heat of penance; un shaken, uninterrupted observation of the spatio-temporal point where the ego first rises soon after one wakes up from sleep.

'Ra' is effecting the end of the pursuit of this human ego when it totally vanishes like a veil, enabling us to see our Self.

'Ra' is the true Self which is the eternal brightness of pure consciousness.

'Ra' is the divine love or affection of Sri Ramana towards his pupils. It is the Grace that grants success to an ascetic who pursues the enquiry into the nature of the human self.

Ma stands for the magic formula of 'Sri Ramana's grace which is omnipotent. It is the moon of the ambrosia that trickles down his divine smile upon his devotee.

'Ma' is the authority of 'Sri Ramana that proves his universal selfhood of the non-spatio-temporal consciousness and Life-Force.

'Ma' is Brahma-Vishnu-Maheshwara or Para-Vidya that obeys 'Sri Ramana if he wills any one's immediate release from all the types of bondages.

'Ma' is eternal happiness or Aananda. 'Ma' is the measure of 'Sri Ramana; ie, Silence; 'Ma' is the Transcendental Knowledge that Sri Ramana happens to be. 'Ma' is the time-space-continuum in which Sri Ramana appeared in Arunachala as the Great Savior of the world.

'Na' stands for Knowledge,ie, Shiva, the lord of Arunachala. Hence Ramana is one whose penance granted us the magic formula of "who am I?" to attain the status of Shiva the Supreme, Absolute Spirit of Liberation.

ಜೀವನ ಚರಿತ್ರೆ

ಬಾಳ ಸಂಗಾತಿಯ ದೃಷ್ಟಿಯಲ್ಲಿ....

–ಶ್ರೀಮತಿ ರಮಾದೇವಿ ಶ್ರೀಧರ

ನಾನು ಹೈಸ್ಕೂಲು ೨ನೆಯ ವರ್ಷದಲ್ಲಿದ್ದಾಗ ನನ್ನ ತಂದೆಯವರು ಆಗಿನ ಪದ್ಧತಿಯಂತೆ ಮದುವೆಗೆಂದು ವರಶೋಧನೆ ಆರಂಭಿಸಿದ್ದರು. ನನ್ನ ತಾಯಿಯ ತಂದೆಯವರಾದ ಸೂರಪ್ಪ ಹೆಬ್ಬಾರರು 'ಈ ಮೊಮ್ಮಗಳ ಮದುವೆ ತಮ್ಮದೇ ಜವಾಬ್ದಾರಿ'ಯೆಂದು, ಹೇಳಿ 'ತಮಗೆ ಬಿ.ಎಚ್.ಶ್ರೀಧರರು ಚೆನ್ನಾಗಿ ಪರಿಚಿತರೆಂದು ಹೇಳಿ, ೧೯೪೬ರಲ್ಲಿ ಬಿ.ಎಚ್. ಶ್ರೀಧರರೊಡನೆ ಮದುವೆ ಮಾಡಿದರು. ಒಂದು ವರ್ಷ ತವರಿನಲ್ಲೇ ನನ್ನನ್ನು ಬಿಟ್ಟು ನಂತರ ಹುಬ್ಬಳ್ಳಿಗೆ ಕರೆತಂದರು. ಆಗ ಬಿ.ಎಚ್.ಶ್ರೀ. ಕರ್ಮವೀರ ಪತ್ರಿಕೆಯ ಉಪಸಂಪಾದಕರಾಗಿದ್ದರು. ನನಗಾಗ ನಾನು ಎಷ್ಟು ದೊಡ್ಡ ವ್ಯಕ್ತಿಯೊಡನೆ ಬಾಳಬೇಕಾಗಿದೆ ಎಂಬ ಕಲ್ಪನೆಯೂ ಇರಲಿಲ್ಲ!

ಹುಬ್ಬಳ್ಳಿಯಲ್ಲಿ...

ಹುಬ್ಬಳ್ಳಿಯಲ್ಲಿ ನಾವಿದ್ದ ಮನೆ ತುಂಬ ಚಿಕ್ಕದಾಗಿತ್ತು. ಅಲ್ಲದೇ ಸೊಳ್ಳೆ, ಚಿಕ್ಕಾಟಗಳೂ ನಮ್ಮ ಸಂಗಾತಿಗಳಾಗಿದ್ದವು! ಹಾಗಾಗಿ ರಾತ್ರಿ ಸರಿಯಾಗಿ ನಿದ್ದೆ ಬರದೇ ನಾನು ಏಳುವಾಗ ಸ್ವಲ್ಪ ತಡವಾಯ್ತು. ಅಷ್ಟರಲ್ಲಿ 'ಇವರು' ಮತ್ತು ಗಣೇಶ ಅಡಿಗ (ಕವಿ ದಿ.ಗೋಪಾಲಕೃಷ್ಣ ಅಡಿಗರ ತಮ್ಮ ಆಗ ನಮ್ಮ ಮನೆಯಲ್ಲಿದ್ದರು) ಇಬ್ಬರೂ ಸೇರಿ ತಿಂಡಿ ಕಾಫಿ ಮಾಡಿ ನಮ್ಮನ್ನು ಎಬ್ಬಿಸಿದರು! ನನಗೆ ತುಂಬಾ ನಾಚಿಕೆಯಾಯ್ತು. ಅಂದಿನಿಂದ ಎಂದೂ ಅಂತಹ ಪ್ರಸಂಗ ಬರದಂತೆ ಎಚ್ಚರ ವಹಿಸಿದೆ. ಅದೇ ಸಮಯದಲ್ಲಿ 'ಏಳು ರಮೆ ಏಳು ಸುಪ್ರಭಾತ, ವಾತ ಬೀಸಿದೆ...' ಎಂಬ ಪದ್ಯ ಬರೆದ ತಮಾಷೆಯ ಪ್ರಸಂಗ.

ಇನ್ನೊಮ್ಮೆ ಆಫೀಸಿನಿಂದ ಸಂಜೆ ಬಂದು ಕಾಫಿಯಾದ ನಂತರ ನಾವಿಬ್ಬರೂ ತಿರುಗಾಡಿಬರಲು 'ವಾಕಿಂಗ್' ಹೋಗುವ ವಾಡಿಕೆ. ಆಗ ನಮ್ಮತ್ತೆ, ಮಾವ, ನಾದಿನಿ ರಮಾ ನಮ್ಮ ಜೊತೆ ಇರುತ್ತಿದ್ದರು. ಅತ್ತೆ ಮತ್ತು ನಾದಿನಿ ಅಂದು ಅಕ್ಕಿ ಆರಿಸುತ್ತಿದ್ದರು. ಅವರು ಕೆಲಸ ಮಾಡುತ್ತಿರುವಾಗ ನಾನು ಆ ಕೆಲಸ ಬಿಟ್ಟು ಹೊರಡುವುದು ಹೇಗೆ ಸಾಧ್ಯ? ಅದನ್ನು ಮುಗಿಸಿ ಹೋದಾಗ 'ಇವರು' (ಬಿ.ಎಚ್.ಶ್ರೀ) ಇರಲೇ ಇಲ್ಲ!

ಬೇಸರವಾಯಿತೆಂದು ತಿಳಿಯಿತು. ಅಂತೂ ರಾತ್ರಿ ೯ ಘಂಟೆಗೆ ಬಿ.ಎಚ್.ಶ್ರೀ ಬಂದರು. ನೋಡಿದರೆ ಒಂದು ಹಾಳೆಯಲ್ಲಿ ಪದ್ಯ ಬರೆದು ತಂದಿದ್ದರು! 'ಇಡಕೂಡದು ಇಡಕೂಡದು ನಿಜ ಕೂರ್ಮೆಯನೆಂದೂ, ನಿಜ ನಂಬಿಗೆಯೆಂದೂ, ಬಡ ಮಾನವನೆದೆ ತಾಳದು ಆಕೂರ್ಪನ್ನೆಂದೂ, ಆ ತೀರ್ಪನ್ನೆಂದೂ' ಎಂಬ ಪದ್ಯ.

ಹೀಗೆ ಸ್ವಲ್ಪ ಹೆಚ್ಚು ಕಡಿಮೆಯಾದರೂ ಕಷ್ಟವೇ. ಜೊತೆಯಲ್ಲಿ ಹುಟ್ಟಾ ಮಾಸ್ತರರೇ 'ಅವರು', ತಪ್ಪಾಗಲಿ, ಒಪ್ಪಾಗಲಿ, ಅದರ ಸಾಧಕ, ಬಾಧಕ, ಲಾಭ, ನಷ್ಟ ಇತ್ಯಾದಿಗಳನ್ನು ತರ್ಕ ಮಾಡಿ ರಾತ್ರಿ ೩–೪ ಘಂಟೆಯಾದರೂ ಮನದಟ್ಟು ಮಾಡಿಸದೆ ಬಿಡರು! ನಿದ್ದೆಗೆಟ್ಟು ತಮ್ಮ ಆರೋಗ್ಯ ಹಾಳಾದರೂ ಲಕ್ಷ್ಯವಿರುತ್ತಿರಲಿಲ್ಲ. ಇನ್ನೊಮ್ಮೆ ನಾನು, ನನ್ನ ನಾದಿನಿ ರಮಾ ಇಬ್ಬರೂ ಇಂಗ್ಲೀಷ್ ಹಾಗೂ ಸಂಸ್ಕೃತ ಕಲಿಯುವ ದುಸ್ಸಾಹಸ ಕೈಗೊಂಡೆವು! ಜೊತೆಗೆ ಜೈಮಿನಿ ಭಾರತ ಪಾಠ, ಅರ್ಥ ಬರೆಯುವಷ್ಟರಲ್ಲಿ ಸುಸ್ತು ಹೊಡೆದೆವು. ಕಾರಣ ಇಷ್ಟೆ. ಪ್ರೌಢಶೈಲಿಯಲ್ಲಿ ಕಲಿಸುವಿಕೆ, ಸ್ವಲ್ಪ ತಪ್ಪಿದರೂ ಬೈಗುಳದ ಸುರಿಮಳೆ, ಜೊತೆಗೆ ಮನೆಗೆಲಸ ಇತ್ಯಾದಿಗಳು. ಜೈಮಿನಿ ಭಾರತದ ೩–೪ ಸಂಧಿಗಳನ್ನು ಕಂಠಪಾಠ ಮಾಡಿದೆವು. ಅರ್ಥ ಬರೆದೆವು.

ಜೈಮಿನಿ ಭಾರತ ಕಂಠಪಾಠ ಮಾಡಿದ್ದು ಇಂದಿಗೂ ಉಪಯುಕ್ತವಾಗಿದೆ. ಬೆಳಿಗ್ಗೆ ಈ ಪದ್ಯಗಳನ್ನು ಹೇಳಿಕೊಂಡರೆ ಇಂದಿಗೂ ಸಂತೋಷವಾಗುತ್ತದೆ. ಆ ಸಮಾಧಾನ ದೊರೆಯುತ್ತದೆ. ಇಷ್ಟು ವಿದ್ಯಾಭ್ಯಾಸ ನಡೆಯುವಷ್ಟರಲ್ಲಿ ನಾದಿನಿಯ (ರಮಾ ಕಾರಂತ, ಈಗ ಉತ್ತಮ ಕತೆಗಾರ್ತಿ) ಮದುವೆ ಗಡಿಬಿಡಿಯು ಆರಂಭವಾಯ್ತು. ವಿದ್ಯಾಭ್ಯಾಸ ಮುಕ್ತಾಯ ಹಾಡಿತು! ಆದರೆ ಅಂದಿನ ಆ ದಿನಗಳನ್ನು ನೆನೆಯುವುದೇ ಒಂದು ರೀತಿಯ ಸಂತಸ (Meloncholy-pleasure), ಈಗ ಇಲ್ಲವಲ್ಲಾ ಎಂಬ ದುಃಖಮಿಶ್ರಿತ ಸಂತಸ.

'ಬೇಂದ್ರೆ' ಒಡನಾಟ

ನಾವು ಮನೆಮಾಡಿದ ಹೊಸದರಲ್ಲಿ 'ಇವರು' ಬೇಂದ್ರೆಯವರನ್ನೊಮ್ಮೆ ಕರೆದುಕೊಂಡು ಬಂದಿದ್ದರು. ಅವರಿಗೆ ಹಾಲು, ಹಣ್ಣು ಕೊಟ್ಟು ನಮಸ್ಕರಿಸಿದೆವು. ನಮ್ಮಿಬ್ಬರಿಗೂ ಅವರು ಹಿತೋಪದೇಶ ಮಾಡಿ ಆಶೀರ್ವದಿಸಿದರು. ಇವರಿಗೆ "ಶ್ರೀಧರಾ, ಕಿಸೆದಾಗ ಒಂದು ಕನ್ನಡಿ ಇಟ್ಟುಕೋ, ಆಫೀಸು ಬಿಟ್ಟು ಮನೆಗೆ ಬರೋ ಮುಂದ ಕನ್ನಡಿ ನೋಡಿಕೊಂಡು ಅಲ್ಲಿಯ ಬೇಸರ, ಅಲ್ಲೇ ಬಿಟ್ಟು ಮನೆಗ್ ಬರಬೇಕು' ಎಂದೂ, ನನಗೆ – "ಮಾರಿ (ಮುಖ) ಮ್ಯಾಲಿನ ನಗೂ ಬಾಡದ ಹಂಗ ನೋಡಿಕೊಬೇಕು" ಎಂದು ಹೇಳಿದ ಕವಿ ಮಾತಿಗೆ ಎಷ್ಟು ದೊಡ್ಡ ಅರ್ಥವಿದೆ ಎಂದು ಆಗ ತಿಳಿದಿರಲಿಲ್ಲ. ಈಗ ಅದನ್ನು ಎಣಿಸಿದರೆ ಅಂಥ ಪ್ರತಿಭಾನ್ವಿತರ ಆಶೀರ್ವಾದ, ಸಲಹೆ, ಒಡನಾಟ ಸಿಕ್ಕಿದ ನಾವು ನಿಜವಾಗಿಯೂ ಧನ್ಯರು ಎನ್ನಿಸುತ್ತದೆ.

ಬೇಂದ್ರೆಯವರು ಬಂದಾಗ 'ಇವರ' ಹತ್ತಿರ ಯಾವುದಾದರೂ ವಿಷಯದ ಬಗ್ಗೆ ಮಾತು ಆರಂಭವಾದರೆ "ಒಂದು ಒಪ್ಪತ್ತಾದರೂ ಮುಗಿಯುತ್ತಿರಲಿಲ್ಲ. ಕಾರ್ಯ-ಕೆಲಸಗಳ ಒತ್ತಡದಿಂದ ೫-೬ ತಿಂಗಳು ಒಬ್ಬರನೊಬ್ಬರು ಭೇಟಿಯಾಗಲಾಗುತ್ತಿರಲಿಲ್ಲ. 'ಶ್ರೀಧರಾ, ಹಿಂದ್ ಭೆಟ್ಟಿ ಆಗಿದ್ದಾಗ ಹೀಂಗ್ ಹೇಳಿದ್ನಲ್ಲಾ....' ಎಂದು ಹಿಂದಿನ ಮಾತನ್ನು ನೆನಪಿಟ್ಟುಕೊಂಡು ಆ ಮಾತನ್ನು ಮುಂದುವರಿಸುತ್ತಿದ್ದರು! ಆ ನೆನಪಿನ ಶಕ್ತಿಯನ್ನು ಈಗ ನೆನೆದು ನಮೋ ಎನ್ನುವಂತಾಗುತ್ತದೆ. ಅಂತಹವರನ್ನು ನೋಡಿ ಧನ್ಯತೆ ಪಡೆಯುವ ಭಾಗ್ಯ 'ಇವರಿಂದ' ಸಿಕ್ಕಿತಲ್ಲ ಎಂದು ಆನಂದವಾಗುತ್ತದೆ.

'ಮಿತ್ರ ವೃಂದ'

ನಾವು ಚೆನ್ನಪೇಟೆ (ಹಳೇ ಹುಬ್ಬಳ್ಳಿ)ಯ ಮನೆಯಲ್ಲಿದ್ದಾಗ ನಮ್ಮ ನೆರೆಮನೆಯವರಾದ ದೇಸಾಯಿ ದತ್ತಮೂರ್ತಿಯವರೂ ಕವಿಗಳು. 'ದೇವದತ್ತ' ಎಂಬ ಹೆಸರಿನಲ್ಲಿ ಬರೆಯುತ್ತಿದ್ದರು. ದತ್ತಮೂರ್ತಿ ಮತ್ತು 'ಇವರು' ಪ್ರತಿ ಭಾನುವಾರ ಸೇರಿ ಯಾವುದಾದರೂ ಸಂಸ್ಕೃತ ಅಥವಾ ಹಳೆಗನ್ನಡ ಅಥವಾ ಪ್ರಿಯವಾದ ಪುಸ್ತಕ ಓದುವುದು, ಅದರ ಬಗ್ಗೆ ಚರ್ಚೆ, ವಿಮರ್ಶೆ ನಡೆಸುತ್ತಿದ್ದರು. "ಗೀತಗೋವಿಂದ" ಪುಸ್ತಕವನ್ನೋದಿ 'ಇವರು' ಒಮ್ಮೆ ಅರ್ಥ ಹೇಳಿದ್ದರು, ಇನ್ನೊಮ್ಮೆ "ರನ್ನನ ಗದಾಯುದ್ಧ". ಹೀಗೆ ಒಂದು ತರಹದ ಆರೋಗ್ಯಕರ ವಾತಾವರಣವಿತ್ತು. ಗಂಗಪ್ಪ ವಾಲಿಯವರೂ ಆಗಾಗ ಬರುತ್ತಿದ್ದರು. ಅವರೂ ಪದ್ಯ ಓದುತ್ತಿದ್ದರು. ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ದ.ಬಾ. ಕುಲಕರ್ಣಿ, ಎಂ.ಹರಿದಾಸರಾವ್, ಪಾಂಡೇಶ್ವರ ಗಣಪತಿರಾಯರು (ಆಗ 'ನವಯುಗ' ಪತ್ರಿಕೆಯ ಸಂಪಾದಕರಾಗಿ ಹುಬ್ಬಳ್ಳಿಯಲ್ಲಿದ್ದರು.) ಪಾ.ವೆಂ. ಆಚಾರ್ಯರು ಹೀಗೆ ಅನೇಕ ಸಹೃದಯರ ಮಿತ್ರವೃಂದ ಮುದ ನೀಡುತ್ತಿತ್ತು. ಮೃದು ಹೃದಯಿ, ಮೃದುಭಾಷಿ ಸಾಲಿ ರಾಮಚಂದ್ರರಾಯರು ಅಲ್ಲಿ ಬರುತ್ತಿದ್ದರು. ಅವರ ಮೊಮ್ಮಗಳ ಮನೆ ಶಿರಸಿಯಲ್ಲಿ ಇದೆ, ಅಲ್ಲಿ ಬಂದಾಗಲೆಲ್ಲ ತಪ್ಪದೆ ನಮ್ಮ ಮನೆಗೆ ಬರುತ್ತಿದ್ದರು. ಅವರಿಗೆ 'ಇವರ' ಮೇಲೆ ಅಪಾರ ಪ್ರೇಮ, ಗೌರವವಿತ್ತು.

ಭಟ್ಕಳದ ಘಟನೆಗಳು

ಭಟ್ಕಳದ ಹೈಸ್ಕೂಲಿನಲ್ಲಿದ್ದಾಗಿನ ಕೆಲವು ಘಟನೆಗಳನ್ನು 'ಇವರು' ಹೇಳುತ್ತಿದ್ದರು.... ಆಗ ಸ್ವಾತಂತ್ರ್ಯ ಸಿಕ್ಕಿ, ಹಿಂದುಸ್ತಾನ್, ಪಾಕಿಸ್ತಾನ್ ವಿಭಾಗವಾಗಬೇಕೋ ಬೇಡವೋ ಎಂಬ ವಿವಾದ ನಡೆಯುತ್ತಿದ್ದ ಸಮಯ. ಇವರು ಇದ್ದದ್ದು ಅಂಜುಮಾನ್ ಮುಸ್ಲಿಂ ಶಾಲೆ. ಭಟ್ಕಳದಲ್ಲಿ ಮುಸಲ್ಮಾನರ ಸಂಖ್ಯೆ ಜಾಸ್ತಿ. ಒಂದು ದಿನ ಎಂದಿನಂತೆ ಬೆಳಿಗ್ಗೆ ಇವರು ಪಾಠ ಹೇಳಲು ತರಗತಿಗೆ ಹೋದರು. ಆಗ ಗೋಡೆ, ಬಾಗಿಲು, ಬೋರ್ಡ್,

ನೆಲ – ಹೀಗೆ ಎಲ್ಲೆಡೆಯಲ್ಲಿಯೂ "ಪಾಕಿಸ್ತಾನ್ ಜಿಂದಾಬಾದ್" ಎಂದು ವಿದ್ಯಾರ್ಥಿಗಳು ಬರೆದಿದ್ದರು! ಮಾಸ್ತರರು ಈಗ ಏನು ಮಾಡುತ್ತಾರೆ? ನೋಡೋಣ ಎಂದು ವಿದ್ಯಾರ್ಥಿಗಳೆಲ್ಲರೂ ಒಬ್ಬರ ಮುಖ ಒಬ್ಬರು ನೋಡುತ್ತಾ ಮೌನವಾಗಿ ಕುಳಿತಿದ್ದರು. 'ಇವರು' ಎಲ್ಲರನ್ನೂ ಒಮ್ಮೆ ನೋಡಿ "ನೀವು ಎಲ್ಲ ಕಡೆಯೂ ಬರೆದಿದ್ದೀರಿ, ಆದರೆ ಒಂದುಕಡೆ ಮಾತ್ರ ಬರೆಯಲು ಮರೆತಿರಿ, ಎಲ್ಲಿ? ಎಂದು ಆಲೋಚಿಸಿ" ಎಂದರು. ಎಷ್ಟು ಆಲೋಚಿಸಿದರೂ ಯಾರಿಗೂ ಹೊಳೆಯಲಿಲ್ಲ. ಆಗ ಇವರು "ನಿಮ್ಮ ನಿಮ್ಮ ಹಣೆಯಮೇಲೆ ಬರೆದುಕೊಂಡಿಲ್ಲವಲ್ಲ!" ಎಂದರು. ವಿದ್ಯಾರ್ಥಿಗಳೆಲ್ಲ ನಾಚಿ 'ಮಾಫ್ ಮಾಡಿ ಸರ್' ಎಂದರು. ಆಮೇಲೆ ಆ ವಿದ್ಯಾರ್ಥಿಗಳೇ ಎಲ್ಲ ಕಡೆ ಬರೆದುದನ್ನು ಅಳಿಸಿದರು.

ಆರ್.ಎಂ.ಕಲ್ಗಲ್

ಭಟ್ಕಳದಲ್ಲಿ ಕರ್ನಾಟಕ ಸಂಘ ಸ್ಥಾಪಿಸಿದಾಗ ಅದರ ಕಾರ್ಯದರ್ಶಿಯಾಗಿ ಆರ್.ಎಮ್.ಕಲ್ಗಲ್ ಎಂಬ ಹುಡುಗ ಆಗಿದ್ದನು. ಈತ ಅಲ್ಲಿಯ ಶಾಲೆಯಲ್ಲಿ ಇವರ ವಿದ್ಯಾರ್ಥಿಯಾಗಿದ್ದನು. ಅತ್ಯಂತ ವಿನಯಶೀಲನೂ, ಸೂಕ್ಷ್ಮಮತಿಯೂ, ದಕ್ಷನೂ ಆದ ವಿದ್ಯಾರ್ಥಿಯೆನ್ನಿಸಿದ್ದನು. ಮುಂದೆ ಕರ್ನಾಟಕ ವಿದ್ಯುತ್ ಮಂಡಳ (ಕೆಇಬಿ)ದ ಚೇರ್‌ಮನ್ ಆಗಿ ದಕ್ಷವಾಗಿ ಕೆಲಸ ಮಾಡಿ ನಿವೃತ್ತನಾದ. ಇವರಿಗಿಂತ ಮೊದಲೇ ಹೃದಯಾಘಾತದಿಂದ ನಿಧನ ಹೊಂದಿದ್ದು ವಿಷಾದದ ಸಂಗತಿ. ಈಗಿನ ಕಾಲದಲ್ಲಿಯೂ ಲಂಚ, ವಂಚನೆಯ ವಿಷವರ್ತುಲದಲ್ಲಿ ಸಿಲುಕದೆ ಬದುಕಿ, ತನಗೆ ತಕ್ಕ ಗುರುಕಾಣಿಕೆ ಸಲ್ಲಿಸಿದನೆಂದು 'ಇವರು' ಸ್ಮರಿಸುತ್ತಿದ್ದರು.

ಭಟ್ಕಳದಲ್ಲಿ ಒಮ್ಮೆ ಪ್ರಥಮ ಬಾರಿ ಹಿಂದು ಮುಸ್ಲಿಂ ದಂಗೆಯಾಗುವ ಸಂಭವವಿತ್ತಂತೆ, ಆಗಲೂ ಭಟ್ಕಳ ಊರಿನಲ್ಲಿ ಮುಸಲ್ಮಾನರೂ, ಸುತ್ತಲಿನ ಹಳ್ಳಿಯಲ್ಲಿ ಹಿಂದೂಗಳೂ ಜಾಸ್ತಿ ಸಂಖ್ಯೆಯಲ್ಲಿದ್ದರು. ಹೈದರಾಬಾದಿನಿಂದ ಬಂದ ಮುಲ್ಲಾ ಒಬ್ಬರಿಂದ ಪ್ರಚೋದಿತಗೊಂಡು ಘರ್ಷಣೆಯ ಸಂಭವವಿತ್ತಂತೆ. ಆಗ ಅಲ್ಲಿದ್ದ ಮಡಿ ಡಾಕ್ಟರರು, ಇವರು, ಕೊಲಂಬೊ ಸಾಹೇಬ (ಆಗರ್ಭ ಶ್ರೀಮಂತ ಹಾಗೂ ಮುಖ್ಯ ವ್ಯಕ್ತಿಯೆನ್ನಿಸಿದ್ದರು)ರನ್ನು ಭೇಟಿಯಾಗಿ ಹೀಗೆ ಭಾವಾವೇಶಕ್ಕೊಳಗಾಗಿ ಪಾಕಿಸ್ತಾನಪರ ಭಾವನೆಯಿಂದ ನಾವಿರುವ ಸ್ಥಳ ಭಾರತವೆಂದು ಮರೆಯುವುದು ಅವಿವೇಕ ಎಂದೂ ಒಪ್ಪಿಸಿ, ಕೊನೆಗೆ ಒಂದು ಸಭೆ ಸೇರಿಸಿ ಹಿಂದೂ ಮುಖ್ಯಸ್ಥರು ಹಾಗೂ ಮುಸಲ್ಮಾನರ ಮುಖ್ಯಸ್ಥರ ನಡುವೆ ರಾಜಿ ಮಾಡಿಸಿ ನಡೆಯಬಹುದಾಗಿದ್ದ ಗಲಭೆ, ಹಿಂಸೆಯನ್ನು ತಪ್ಪಿಸಿದರಂತೆ.

ಎಸ್.ಜಿ.ಬೈಲೂರು ಮಾಸ್ತರರು

ಭಟ್ಕಳದ ಇವರ ಸಹೋದ್ಯೋಗಿ ಎಸ್.ಜಿ.ಬೈಲೂರು ಮಾಸ್ತರರ ಸುದ್ದಿಯನ್ನು ಅನೇಕ ಬಾರಿ ಹೇಳುತ್ತಿದ್ದರು. ಅವರ ವ್ಯಂಗ್ಯೋಪಮೆಗಳನ್ನೂ ಉದಾಹರಿಸುತ್ತಿದ್ದರು. ಯೋಗ್ಯತೆ ಇಲ್ಲದಿದ್ದವರ ಹೆಮ್ಮೆ ಹೇಗಿರುತ್ತದೆ ಎಂದರೆ "ಗೊಬ್ಬರಗುಂಡಿಯ ತುತ್ತತುದಿಯಲ್ಲಿ ಹುಂಜವೊಂದು ನಿಂತುಕೊಂಡು ಹೆಮ್ಮೆಯಿಂದ ಬೀಗುತ್ತಾ ಕೋಳಿಯನ್ನು ಕಂಡು 'ಕೊಕ್ಕೊಕ್ಕೋ' ಎಂದು ಕೂಗಿದಂತೆ ಇರುತ್ತದೆ!" ಹೀಗೆ ಹಾಸ್ಯ–ಪರಿಹಾಸಗಳಿಂದ ಈರ್ವರ ಸಂಭಾಷಣೆಗಳೂ ತುಂಬಿರುತ್ತಿತ್ತು. ನಂತರ ಭದ್ರಕಾಳಿ ಹೈಸ್ಕೂಲು ಗೋಕರ್ಣದಲ್ಲಿ ಕೆಲಸ ಮಾಡಿ ಬೊಂಬಾಯಿಯಲ್ಲಿ ನಿವೃತ್ತ ಜೀವನ ನಡೆಸಿ ದಿವಂಗತರಾದರು.

ಭಟ್ಕಳದಲ್ಲಿದ್ದಾಗ ಅಲ್ಲಿ ಮಹಿಳಾ ವೈದ್ಯರು ಇರಲಿಲ್ಲವಂತೆ. ಇವರ ಸಹೋದ್ಯೋಗಿ ಮುಸ್ಲಿಂ ಅಧ್ಯಾಪಕರೊಬ್ಬರು ತನ್ನ ಮಗಳನ್ನು ವೈದ್ಯೆಯನ್ನಾಗಿಸಿ ಈ ಕೊರತೆ ನೀಗುವಂತೆ ಮಾಡುತ್ತೇನೆ ಎನ್ನುತ್ತಿದ್ದರಂತೆ. ನಾವು ಮುಂದೆ ಕುಮಟಾದಲ್ಲಿದ್ದಾಗ ಅವರ ಮಗಳು "ತಾಜ್ ಉನ್ನೀಸಾ" ಎಂಬವಳನ್ನು ಇಂಟರ್‌ಮೀಡಿಯಟ್ ಸೈನ್ಸ್ ಓದಿಸಲು ಕೆನರಾ ಕಾಲೇಜಿಗೆ ಕಳಿಸಿದ್ದರು. ಭಟ್ಕಳದ ಅನುಕೂಲಸ್ಥ ಮುಸ್ಲಿಮರೆಲ್ಲ ಅವಳ ಓದಿಗೆ ಧನಸಹಾಯ ಮಾಡುತ್ತಿದ್ದರು. ಅವಳು ತಂದೆಯ ಹೇಳಿಕೆಯಂತೆ 'ಬುರುಖಾ' ಹಾಕಿಕೊಂಡೇ ಕಾಲೇಜಿಗೆ ಹೋಗಬೇಕಾಗಿತ್ತು. ಆದರೆ ಬುರುಖಾ ಹಾಕಿಕೊಂಡರೆ, ಹುಡುಗರಲ್ಲಿ ಕೆಲವರು 'ಚೌದವಿಕಾ ಚಾಂದ್' ಎಂದು ಹಾಸ್ಯ ಮಾಡುತ್ತಿದ್ದರು. ಕೊನೆಗೆ ಸಮಸ್ಯೆ ಪರಿಹರಿಸಿರೆಂದು ಇವರನ್ನು ಕೇಳಿದಳು. ಆಗ ಇವರು ನಮ್ಮ ಮನೆ ಕಾಲೇಜಿನ ಹತ್ತಿರ ಇರುವುದರಿಂದ ನಮ್ಮಲ್ಲಿ ಬುರುಖಾ ತೆಗೆದಿರಿಸಿ, ಕಾಲೇಜಿಗೆ ಹೋಗಲು ಹೇಳಿದರು. ಹಾಗೂ ಕಾಲೇಜು ಮುಗಿಸಿ ಹೋಗುವಾಗ ಬುರುಖಾ ಹಾಕಿಕೊಂಡು ಹೋಗಲು ಸಲಹೆ ನೀಡಿದರು. ಹೀಗೆ ಅವಳ ಸಮಸ್ಯೆಯನ್ನು ಬಗೆಹರಿಸಿದರು.

ತಿಮ್ಮಣ್ಣ ಭಟ್ಟರು

ಭಟ್ಕಳದಲ್ಲಿ ಇವರು ರಾಮನಾಥ ಶಾನಭಾಗರ ಮನೆಯಲ್ಲಿ ವಾಸವಾಗಿದ್ದು ತಿಮ್ಮಣ್ಣ ಭಟ್ಟರ ಮನೆಯಲ್ಲಿ ಎರಡೂ ಹೊತ್ತು ಊಟ ಮಾಡುತ್ತಿದ್ದರು. ಆಗ ಒಮ್ಮೆ ಒಂದು ತಮಾಷೆ ಪ್ರಸಂಗ. ಒಂದು ದಿನ ಊಟಕ್ಕೆ ಕೆಸುವಿನ ಸೊಪ್ಪಿನ ಪತ್ರೊಡೆಯನ್ನು ಮಾಡಿದ್ದರಂತೆ. ಆಗ ತಿಮ್ಮಣ್ಣ ಭಟ್ಟರಿಗೆ ಮೊದಲು ಹಾಕಿದ ಕೂಡಲೇ "ಅಯ್ಯೋ ಬಾಯಿ ತುರಸುತ್ತದಲ್ಲ!" ಎಂದರಂತೆ. ಕೊನೆಗೆ ಎಲ್ಲರೂ 'ಹೌದೇನೋ' ಎಂದುಕೊಂಡು ಹೆಚ್ಚು ಹಾಕಿಸಿಕೊಂಡು ತಿನ್ನಲಿಲ್ಲವಂತೆ. ಕೊನೆಗೆ ರಾತ್ರಿಯೂಟದ ಸಮಯಕ್ಕೆ ತಿಮ್ಮಣ್ಣ ಭಟ್ಟರು "ಶ್ರೀಧರರೆ, ಹೇಗೆ ನನ್ನ ಉಪಾಯ? ಹೀಗೆ ತುರಿಸುತ್ತದೆ ಎಂದು ಹೇಳದಿದ್ದರೆ ರಾತ್ರಿ ತಿನ್ನಲು ಉಳಿಸಿಕೊಳ್ಳಲಾಗುತ್ತಿತ್ತೆ?" ಎಂದು ನಕ್ಕರಂತೆ.

ಹೀಗೆ ವಿದ್ಯಾರ್ಥಿಗಳು, ಬಾಲಕರು, ಬಾಲೆಯರು, ತರುಣರು, ಆಬಾಲ–ವೃದ್ಧರೂ 'ಇವರೊಂದಿಗೆ' ತಮ್ಮ ಸುಖ–ಕಷ್ಟಗಳನ್ನು ಹೇಳಿಕೊಳ್ಳುವುದು, ಸಮಸ್ಯೆಗಳಿಗೆ ಸಲಹೆಗಳನ್ನು ಕೇಳುವುದು ಹೃದಯಬಿಚ್ಚಿ ಮಾತನಾಡುವುದು – ಇದನ್ನು ಅವರು ಹೇಳುತ್ತಾ ನಾನು 'ವಾಲ್ಮೀಕಿ ಹುತ್ತ' ಎಂದು ತಮ್ಮನ್ನು ಒಬ್ಬರು ವಿಶ್ವಾಸವಿರಿಸಿ ಹೇಳಿದ ಮಾತನ್ನು ಕೇಳಿ ತಮ್ಮಲ್ಲೇ ಇರಿಸಿಕೊಳ್ಳುವ ಶಕ್ತಿಯುಳ್ಳವರೆಂದು ವಿವರಿಸಿ ವರ್ಣಿಸುತ್ತಿದ್ದರು. ಹಾಗೆಯೇ ಅಸತ್ಯ, ವಂಚನೆ, ಕ್ರೌರ್ಯ ಇತ್ಯಾದಿಗಳನ್ನು ಜಮದಗ್ನಿಯಂತೆ ಕೋಪದಿಂದ ಖಂಡಿಸುತ್ತಿದ್ದರು. "ವಜ್ರಾದಪಿ ಕಠೋರಾಣಿ ಮೃದುನಿ ಕುಸುಮಾದಪಿ" ಎಂಬ ಆದರ್ಶವನ್ನು ಕೆಟ್ಟದ್ದಕ್ಕೆ ವಜ್ರದಂತೆ ಕಠೋರವಾಗಿಯೂ, ಒಳ್ಳೆಯದಕ್ಕೆ ಕುಸುಮ ಕೋಮಲವಾಗಿಯೂ ವರ್ತಿಸಿ ಪಾಲಿಸಿದರು. ಹಾಗೆಯೇ ಪಶ್ಚಾತ್ತಾಪವೂ ಇಲ್ಲದೆ ತಪ್ಪನ್ನೆಸಗುವವರನ್ನು "ಶಾಪಾದಪಿ ಶರಾದಪಿ" ಎಂದು ಶಿಕ್ಷಿಸುತ್ತಿದ್ದರು.

ಹಿರೊ ಹಿಚಿ ಯಮಾ ಗೂಚಿ

ಕುಮಟೆಯಲ್ಲಿದ್ದಾಗಿನ ಒಂದು ವಿಷಯ ನೆನಪಾಗುತ್ತಿದೆ. ಜಪಾನಿನಿಂದ ಒಬ್ಬನು ಬಂದಿದ್ದ. ಅವನು ತನ್ನ ಹೆಸರು ಹಿರೊ ಹಿಚಿ ಯಮಾ ಗೂಚಿ ಎಂದನು. ಅವನು ಮಧ್ಯಮ ವರ್ಗದ ಜನರ ಹಬ್ಬಹುಣ್ಣಿಮೆಗಳು, ಮದುವೆ ಮುಂಜಿಗಳು ಇವುಗಳನ್ನು ನಡೆಸುವ ಕ್ರಮ, ಮಂತ್ರಗಳ ಇತ್ಯಾದಿಗಳ ಅರ್ಥ, ಊಟ–ತಿಂಡಿಗಳ ವಿವರ, ತಯಾರಿಕೆ, ಟಿಪ್ಪಣಿ ಮಾಡಿಕೊಂಡು ಅಭ್ಯಸಿಸಲು ಭಾರತಕ್ಕೆ ಬಂದವನು. 'ಇವರನ್ನು' ಮಂತ್ರಗಳು ಹಾಗೂ ಅವುಗಳ ಅರ್ಥವನ್ನೂ, ಹಿನ್ನೆಲೆಯನ್ನೂ ಕೇಳಿ ತಿಳಿದುಕೊಂಡು ನಂತರ ಟಿಪ್ಪಣಿ ಮಾಡಿಕೊಂಡು 'ಇವರ' ವಿವರಣೆಯಿಂದ ತೃಪ್ತನಾಗಿ ತುಂಬ ಸಂತುಷ್ಟನಾದನು. ಆಮೇಲೆ ನಾವು ತಿನ್ನಲು ಕೊಟ್ಟ ದೋಸೆ–ಚಟ್ನಿಗಳನ್ನು ಪ್ರೀತಿಯಿಂದ ತಿಂದು ಚಪ್ಪರಿಸಿದನು! ನಮ್ಮ ಮನೆಯಲ್ಲಿ ಕೆಳಗೆ ಕುಳಿತು ತಿನ್ನಬೇಕಾದುದರಿಂದ ನಮ್ಮಂತೆ ಪದ್ಮಾಸನದಲ್ಲಿ ಕುಳಿತುಕೊಳ್ಳಲು ಪ್ರಯತ್ನಿಸಿದನು. ಆದರೆ ಸಾಧ್ಯವಾಗಲಿಲ್ಲ! ಕೊನೆಗೆ ಎರಡೂ ಕಾಲುಗಳನ್ನು ಒಂದೇ ಕಡೆ ಸೇರಿಸಿ ಕುಳಿತು, ತಿಂದು ಮುಗಿಸಿದನು. ನಮ್ಮ ಮಕ್ಕಳೆಲ್ಲರ ಹೆಸರು ಕೇಳಿ ಅದರ ಅರ್ಥವನ್ನೂ ಬರೆದುಕೊಂಡನು. ತನ್ನ ಹೆಸರಿನ ಅರ್ಥವನ್ನೂ ಹೇಳಿದ್ದ, ನನಗೀಗ ಮರೆತುಹೋಗಿದೆ.

ದೇವುಡು ನರಸಿಂಹ ಶಾಸ್ತ್ರಿಗಳು

ಮಹಾಬ್ರಾಹ್ಮಣ, ಮಹಾಕ್ಷತ್ರಿಯ ಮುಂತಾದ ಅತ್ಯುತ್ತಮ ಕಾದಂಬರಿಗಳ ಕರ್ತ ದೇವುಡು ನರಸಿಂಹ ಶಾಸ್ತ್ರಿಗಳು ಕುಮಟಾದಲ್ಲಿದ್ದಾಗಲೇ ಒಮ್ಮೆ ಭಾಷಣ ಮಾಡಲು ಬಂದಿದ್ದರು. ಆಗ ನಮ್ಮ ಮನೆಯಲ್ಲೇ ಉಳಿದಿದ್ದರು ಅಷ್ಟು ದೊಡ್ಡ ವಿದ್ವಾಂಸರಾದರೂ

ಒಂದು ಚೂರೂ ಜಂಭ (Head weight) ಇರಲಿಲ್ಲ! ತುಂಬ ಸರಳವಾಗಿ ಎಲ್ಲರೊಂದಿಗೆ ಹಾಸ್ಯ ಚಟಾಕಿ ಭರಿತವಾದ ಸಂಭಾಷಣೆ ನಡೆಸುತ್ತಿದ್ದರು. 'ಇವರು' ಒಮ್ಮೆ ಬೆಂಗಳೂರಿಗೆ ಹೋದಾಗ ದೇವುಡು ಅವರು ತಮ್ಮ ಕಾಲನ್ನು ಆಪರೇಶನ್ ಮಾಡಿ ಕತ್ತರಿಸಿದ ವಿಷಯ ಹೇಳಿ "ಶ್ರೀಧರಾ, ನಾನೀಗ 'ಪಂಗು' (ಕುಂಟ) ಆಗಿಬಿಟ್ಟೆ" ಎಂದು ತುಂಬಾ ನೊಂದುಕೊಂಡು ನುಡಿದರಂತೆ. ಇಂಥ ನೋವು, ನಲಿವಿನ ಕ್ಷಣಗಳನ್ನು ನಮ್ಮೆಲ್ಲರೊಂದಿಗೆ ಹಂಚಿಕೊಳ್ಳುವ ಸ್ವಭಾವ, ಅತ್ಯಂತ ಸುಂದರ ಶೈಲಿಯಿಂದ ಬಣ್ಣಿಸುವ ಶಕ್ತಿ 'ಇವರಿಗೆ,' ಶಕ್ತಿ ಶಾಲಿ ನೆನಪಿನ ಜೊತೆಗೆ ಪ್ರಕೃತಿ ನೀಡಿದ್ದರಿಂದ ಕೆಲವನ್ನಾದರೂ ಈಗ ಬರೆಯಬಹುದಾಗಿದೆ.

ಪಾಸು ಮಾಡದಿದ್ದರೆ ನಿರಶನ!

ಕುಮಟಾದಲ್ಲಿದ್ದಾಗ ಕರ್ನಾಟಕ ವಿಶ್ವ ವಿದ್ಯಾಲಯ ಆಗಿರಲಿಲ್ಲ. ಕೆನರಾ ಕಾಲೇಜು ಪೂನಾ ಬೋರ್ಡ್‌ನ ಮೇಲ್ವಿಚಾರಣೆಯಲ್ಲಿ ನಡೆಯುತ್ತಿತ್ತು. 'ಇವರಿಗೆ' ಇಂಟರ್ ಮೀಡಿಯೆಟ್ ಕ್ಲಾಸಿನ ಉತ್ತರ ಪತ್ರಿಕೆಗಳನ್ನು ಪರಿಶೀಲಿಸಿ ಅಂಕಗಳನ್ನು ಹಾಕಬೇಕಾದ ಸಮಯ. ಆಗ ಒಬ್ಬ ನಾನು ಶ್ರೀಮಂತ ಪುತ್ರ ಬೇರೆ ಊರಿನಿಂದ ಬಂದು "ಸಂಸ್ಕೃತ ಉತ್ತರ ಪತ್ರಿಕೆಯನ್ನು ಚೆನ್ನಾಗಿ ಬರೆದಿಲ್ಲವಾದರೂ ದಯವಿಟ್ಟು ನಾನು ಕೊಡುವ ರೂ. ೫೦೦ ನ್ನು ತೆಗೆದುಕೊಂಡು ಪಾಸು ಮಾಡಿ, ನೀವು ಪಾಸು ಮಾಡದಿದ್ದರೆ ಇಲ್ಲೇ ನಿರಶನವ್ರತ ಮಾಡುತ್ತೇನೆ" ಎಂದು ಹಟ ಹಿಡಿದು ಕುಳಿತೇಬಿಟ್ಟನು! ಇವರು "ಹಾಗೆಲ್ಲ ಪಾಸು ಮಾಡಲು ಸಾಧ್ಯವಿಲ್ಲ, ಚೆನ್ನಾಗಿ ಉತ್ತರ ಬರೆಯದಿದ್ದ ಮೇಲೆ ಹೇಗೆ ಹೆಚ್ಚು ಅಂಕಗಳನ್ನು ನೀಡಲಿ?" ಎಂದರು. ಆಗ ಆತ "ಸರ್ ನೀವು ಉತ್ತರ ಹೇಳಿರಿ, ನಾನು ಉತ್ತರ ಪತ್ರಿಕೆಯಲ್ಲಿ ಬರೆಯುತ್ತೇನೆ. ಆಮೇಲೆ ಅಂಕಗಳನ್ನು ನೀಡಿ. ಯಾರಿಗೂ ತಿಳಿಯುವುದಿಲ್ಲ" ಎಂದನು! ನಾವೆಲ್ಲ ಜೊತೆಗೆ 'ಇವರೂ' ಇದನ್ನು ಕೇಳಿ ದಂಗಾದೆವು. ಆದರೆ 'ಇವರ' ಬಳಿ ಇದೆಲ್ಲ ಮಾಡಲು' ಮನ ಒಪ್ಪುವ ಸಾಧ್ಯತೆಯೇ ಇಲ್ಲವಾಗಿತ್ತು. ಹಾಗಾಗಿ 'ಇವರು' "ನೀನು ನಮ್ಮ ಮನೆಯಲ್ಲೇ ಇರು, ಊಟ, ತಿಂಡಿ ಕೊಡುತ್ತೇನೆ, ಪಾಠ ಹೇಳುತ್ತೇನೆ, ಅಕ್ಟೋಬರ್ ಪರೀಕ್ಷೆಯಲ್ಲಿ ಪಾಸಾಗುವಷ್ಟು ಅಂಕ ಗಳಿಸಲು ಸಾಧ್ಯವಾಗುತ್ತದೆ. ಅಲ್ಲದೇ ನಿನ್ನ ಉತ್ತರ ಪತ್ರಿಕೆಯನ್ನು ಈಗಾಗಲೇ ಪರಿಶೀಲಿಸಿ ಕಳಿಸಿಯಾಗಿದೆ" ಎಂದು ಹೇಳಿ ಜಾರಿಕೊಳ್ಳಬೇಕಾಯ್ತು! ಇಂಥ ಅದೆಷ್ಟೋ ಘಟನೆಗಳಲ್ಲಿ ನೈತಿಕತೆಯನ್ನು ಉಳಿಸಿಕೊಂಡಿದ್ದಾರೆ. ಇದಕ್ಕೆ ಕಾರಣ ತನ್ನ ತಂದೆ ಹಾಗೂ ನೈತಿಕತೆ ಹಾಗೂ ಪಾಂಡಿತ್ಯದ ಮೇರುಪರ್ವತಗಳಂತಿದ್ದ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ 'ಇವರಿಗೆ' ಕಲಿಸಿದ ಪ್ರೊಫೆಸರರು ಕಾರಣ ಎಂದು ಅವರೊಡನೆ ಕಳೆದ ಅನೇಕ ಘಟನೆಗಳನ್ನು ನೆನೆಸಿಕೊಳ್ಳುತ್ತಿದ್ದರು. ಆಗ ಎಷ್ಟೋ ಸಲ ಕಣ್ಣು ತೇವವಾಗುತ್ತಿತ್ತು. ಧ್ವನಿ ಗದ್ಗದಿತವಾಗುತ್ತಿತ್ತು.

ಸರ್ವಧರ್ಮ ಸಮ್ಮೇಳನ

ಕುಮಟಾದಲ್ಲಿದ್ದಾಗ ರತ್ನವರ್ಮ ಹೆಗ್ಗಡೆಯವರು ಆಗ ಧರ್ಮಸ್ಥಳದ ಧರ್ಮಾಧಿಕಾರಿಯಾಗಿದ್ದರು. 'ಸರ್ವಧರ್ಮ ಸಮ್ಮೇಳನದಲ್ಲಿ ಭಾಷಣ ಮಾಡಲು 'ಇವರಿಗೆ' ಆಮಂತ್ರಣ ಬಂದಿತ್ತು. ಆಗ ಸರ್ವಧರ್ಮ ಸಮ್ಮೇಳನ ಕಾರಂತರ ನೇತೃತ್ವದಲ್ಲಿ ನಡೆಯುತ್ತಿತ್ತು. ನಾನೂ ನಮ್ಮ ಒಂದು ವರ್ಷದ ಮಗು ರಾಜುವನ್ನು ಕರೆದುಕೊಂಡು ಹೋಗಿದ್ದೆ. ರಾಜರತ್ನಂ ಹಾಗೂ ಅವರ ಪತ್ನಿ ಸೀತಕ್ಕ ಅವರ ಮಗು ಎಲ್ಲರೂ ಬಂದಿದ್ದರು. ಭಾಷಣ ಮುಗಿದ ಮೇಲೆ ಕಾರಂತರೊಡನೆ ನಾವೆಲ್ಲರೂ ಪುತ್ತೂರಿನ ಮನೆಗೆ ಹೋಗಿ ಅಲ್ಲಿ ಒಂದು ದಿನ ಇದ್ದು ಕಾರಂತರ ಲೀಲಕ್ಕನ ಹಾಸ್ಯ ಸಂತೋಷದ ಸಲ್ಲಾಪದ ಆನಂದವನ್ನು ಪಡೆದೆವು. ಅದೇ ಕಾಲದಲ್ಲಿ ಲೀಲಕ್ಕ ಮರದಿಂದ ಬಿದ್ದು ಪೆಟ್ಟಾದ ಅಳಿಲನ್ನು ಔಷಧೋಪಚಾರ ಮಾಡಿ ಗುಣಪಡಿಸಿದ್ದರಿಂದ ಅವರು ಹೋದಲ್ಲೆಲ್ಲಾ ಓಡಾಡಿ ಹಿಂದೆಯೇ ಇರುತ್ತಿತ್ತು! ಅವರ ಈ ಪುಟ್ಟ ಸಂಗಾತಿಯೆಂದರೆ ಅವರಿಗೂ ಇಷ್ಟವಾಗಿತ್ತು.

ಅಂತಯ್ಯ ಶೆಟ್ಟಿ

ಉಳ್ಳೂರಿನಿಂದ ಅಂತಯ್ಯ ಶೆಟ್ಟಿ ಎಂಬವನು ನಾವು ಕುಮಟಾದಲ್ಲಿದ್ದಾಗ ಬಂದಿದ್ದನು. ಅವನು ಅಕ್ಷರವನ್ನು ಬರೆಯಲು ಬಾರದವನಾದರೂ ಒಳ್ಳೆ ಯಕ್ಷಗಾನ ಕಲಾವಿದನಾಗಿದ್ದ. ನಮ್ಮ ಮನೆಗೆ ಬಂದಾಗ ಅವನ ಆರೋಗ್ಯ ಸರಿಯಿರಲಿಲ್ಲ. ಕ್ಷಯ ರೋಗದಿಂದ ಬಳಲುತ್ತಿದ್ದ. ಚಿಕಿತ್ಸೆಗಾಗಿ ಮಿರಜ್‌ಗೆ ಹೋಗುವವನಿದ್ದನು. ಹಿರಿಯ ಸಾಹಿತಿ ನಾ. ಕಸ್ತೂರಿಯವರೂ ಆಗ ನಮ್ಮ ಮನೆಗೆ ಬಂದಿದ್ದರು. ಅಂತಯ್ಯ ಶೆಟ್ಟಿ ಯಕ್ಷಗಾನದ ಅರ್ಥ ಅಂದು ನಮ್ಮ ಮನೆಯಲ್ಲಿ ಹೇಳಲು ಆರಂಭಿಸಿದ. ಆಗ ಅರ್ಥ ಹೇಳಿ ಮುಗಿಸುವವರೆಗೂ ಒಂದು ಕೆಮ್ಮು ಬರಲಿಲ್ಲ! ಆತನು ಅನಕ್ಷರಸ್ತನಾದರೂ ಸುಂದರವಾಗಿ ಹಾಡಿ ಅರ್ಥವನ್ನು ಹೇಳಿದ್ದನ್ನು ಕಂಡು ಕಸ್ತೂರಿಯವರೂ ದಂಗಾಗಿ ಹೋದರು.

ಉಪ ಪ್ರಾಚಾರ್ಯರಾಗಿ ಶಿರಸಿಗೆ

ಕುಮಟದಲ್ಲಿ ನಾವಿರುವಷ್ಟು ಕಾಲವೂ ವಿದ್ಯುಚ್ಛಕ್ತಿ ಬಂದಿರಲಿಲ್ಲ. ಅಲ್ಲಿಯ ತಡೆಯಲಾಗದ ಸೆಕೆ ನಮಗೆಲ್ಲ ತುಂಬ ಹಿಂಸೆ ಕೊಡುತ್ತಿತ್ತು. ಹಾಗಾಗಿ ೧೯೬೧ರಲ್ಲಿ ಶಿರಸಿ ಕಾಲೇಜಿನ ಆಡಳಿತ ವರ್ಗದ ಆಮಂತ್ರಣದಂತೆ ಬಂದು ಉಪಪ್ರಾಚಾರ್ಯರಾದರು. ಹಾಗಾಗಿ ನಾವೆಲ್ಲ ಎಸ್.ಜಿ. ಹೊಂಕಣ ಕಂಪನಿ

ನಡೆಸುತ್ತಿರುವ ಶ್ರೀಯುತ ಚಿಲ್ಲಾಳ ಕರ್ನಲ್ಲಿಯವರ ಮನೆಯಲ್ಲಿ ಬಾಡಿಗೆಗೆ ಉಳಿದೆವು. ಹೀಗೆ ಹತ್ತು ವರ್ಷದ ಕುಮಟಾವಾಸ ಮುಗಿದು ಶಿರಸಿವಾಸ ಆರಂಭವಾಯ್ತು. ಜೊತೆಗೆ ಎಸ್.ಪಿ. ಹಳಕಾರ, ಎಸ್.ಜಿ. ಭಟ್, ಎಚ್.ವಿ. ಹೆಗಡೆ, ಎಲ್.ಆರ್.ಭಟ್, ಜಿ.ವಿ.ಭಟ್, ಟಿ.ಎಸ್. ಹೆಗಡೆ, ಜ್ಯೋತ್ಸ್ನಾ ಕಾಮತ್, ವಿಜಯಾ ಅಡಕೋಳಿ, ವಿನಯಾ ಶಾನಭಾಗ, ಜಯಶ್ರೀ ಶಾನಭಾಗ, ಶಿವ ಶ್ಯಾನುಭಾಗ, ಎಂ.ವಿ. ಭಟ್, ಟಿ.ಕೆ. ಭಟ್, ಎನ್. ಎಂ. ನಾಯ್ಕ, ಸುಶೀಲ... ಹೀಗೆ ಕುಮಟಾ ಮನೆಗೆ ಬಂದು ಹೋಗುತ್ತಿರುವವರ (ಎಷ್ಟೋ ಹೆಸರು ನೆನಪಾಗುತ್ತಿಲ್ಲ) ನೆನಪು ನಮ್ಮ ಆಸ್ತಿಯಾಯ್ತು.

ಕತೆಗಾರ್ತಿ ರಮಾ ಕಾರಂತ

೧೯೬೨ರಲ್ಲಿ ಇವರ ಕಿರಿಯ ತಂಗಿ ರಮಾ ಕಾರಂತ ಕ್ಷಯರೋಗ ಬಂದು ನಮ್ಮ ಮನೆಗೆ ಬಂದಳು. ಅವಳಿಗೆ ಸಾಹಿತ್ಯ, ಇತಿಹಾಸದಲ್ಲಿ ತುಂಬಾ ಆಸಕ್ತಿ. ಇನ್ನೂ ಹೆಚ್ಚಿನ ಪ್ರೋತ್ಸಾಹ ಸಿಕ್ಕಿದರೆ ಕವನ, ಕತೆಗಳನ್ನು ದೊಡ್ಡ ಪ್ರಮಾಣದಲ್ಲಿ ರಚಿಸಬಲ್ಲವಳು. ಆಕೆ ನಮ್ಮಲ್ಲಿ ಒಂದು ಕಾಲು ವರ್ಷವಿದ್ದು ಚಿಕಿತ್ಸೆ ಪಡೆದು ಗುಣಮುಖಳಾದಳು. ಆಕೆಯ ಕಥೆಗಳು ಸಂಯುಕ್ತ ಕರ್ನಾಟಕ, ಕಸ್ತೂರಿಗಳಲ್ಲಿ ಪ್ರಕಟಗೊಂಡಿವೆ. ಅನೇಕ ಕವನಗಳು ಯುಗಪುರುಷದಲ್ಲಿ ಪ್ರಕಟಗೊಂಡಿವೆ. ಆಕೆ 'ಇವರು' ತೀರಿಹೋದಾಗ ಬರೆದ ಕವನ ಇಲ್ಲಿ ಪ್ರಕಟಿಸುವುದು ಔಚಿತ್ಯಪೂರ್ಣ ಎನ್ನಿಸುತ್ತದೆ.

ಹಿರಿಯ ಚೇತನ

ಹೋಯಿತೊಂದು ದಿವ್ಯ ಜ್ಯೋತಿ
ಬಾಳನಿತ್ತ ನೂಕಿ
ಪಡೆಯಿತೇನೊ ಹೊಸತು ಜನ್ಮ
ಮುಗಿಸಲುಳಿದ ಬಾಕಿ
ಬದುಕಿನುದ್ದಕೂ ಸಾಲುಗಟ್ಟಿ ಕಷ್ಟಗಳ ದಂಡೆ ಬರಲು
ಎದೆಯೊಡ್ಡಿ ನಿಂದು, ಛಲದಿಂದ ಮೆರೆದು
ಧೀಮಂತನಾಗಿ ಬೆಳೆದು
ಹಿಮಾಲಯದ ಔನ್ನತ್ಯವನ್ನು ಮೀರಿಸುವ
ಧೀರ ಭಾವ
ಶರಧಿಯೊಳವನು ಅಳೆಯಬಲ್ಲ ಕಣ್ಣೋಟ
ವಾಕ್ಪ್ರವಾಹ
ಉಂಡ ಕಷ್ಟಗಳ ನೋವ ಬೇನೆ ಅನುಭವದ
ತೈಲವಾಗಿ

ಪರರ ಕಷ್ಟಗಳ ಹರಿಸಲುರಿದಿತ್ತು ಜ್ಞಾನದೀಪವಾಗಿ
ಸೋತ ನೊಂದೆದೆಗೆ ಧೈರ್ಯ ಸಾಂತ್ವನವ
ತುಂಬಿದಮೃತ ಬಿಂದು
ಮಾತಾಡದೇಕೆ ನೀ ಮೌನವಾಂತಿಹೆ–
ಯಗಾಧ ಜ್ಞಾನಸಿಂಧು
ರಸಋಷಿಯೆ ನಿನ್ನ ಗಂಭೀರ ಕಂಠದಿಂದ
ಹರಿದ ಕಾವ್ಯಧಾರೆ
ಇನ್ನೊಮ್ಮೆ ಕೇಳುವೆನೆ ಎಂಬ ನೆನಹೆ
ಹರಿಸುವುದು ಅಶ್ರುಧಾರೆ
ತಂದೆಯಾಗಿ ಮೇಣ್ ಅಣ್ಣನಾಗಿ, ಗುರುವಾಗಿ
ಮಾತೆಯಾಗಿ
ಬೆಂಗಾವಲಾಗಿ ನೀ ನಿಂದೆ ನಾನು ಬಂದಾಗ
ಸೋತು ಸೊರಗಿ

ಧೀಶಕ್ತಿಯಲ್ಲಿ, ಪಾಂಡಿತ್ಯದಲ್ಲಿ, ನಿನ
ಗಾರು ಸಾಟಿಯಹರು
ವಿಶ್ವಕೋಶವೇ, ಮೌನವಾಗಿ ಸರಿದಿತ್ತು
ನಿನ್ನ ಇದಿರು
ಅನ್ಯಾಯಕೆಂದು ಮಣಿಯದಿಹ ಮನವು
ನಡೆ ನುಡಿಯು ನೇರ ಸರಳ
ನೀನಂದೆ ಎಂದೆ 'ತೊಲಗತ್ತ ಕೀರ್ತಿ ಶನಿ'
ನೀ ಚಾಚಬೇಡ ನೆರಳ

ಕರುಣೆ ದೈವ, ಪರಹಿತವೆ ದೈವ
ಕರ್ತವ್ಯವಧಿಕ ದೈವ
ಸತತ ಸಾಧನೆಯೆ ಪರಮದೈವ
ಕೃತಿರಚನೆ ಪೂಜೆ ದೈವ
ನಮೋ ಎಂಬೆ ಓ ಹಿರಿಯ ಚೇತನವೆ
ಭಕ್ತಿ ಭಾವದಿಂದ
ನೀನಳಿದರೇನು ನೆನಹೆನಗೆ ಸ್ಫೂರ್ತಿ
ಕರುಣಾಳು, ಬೆಳಕಿನಂದ

ತಂಗಿ ರುಕ್ಮಿಣಿ, ಸುಶೀಲೆಯರು

'ಇವರ' ತಂಗಿಯರಾದ ರುಕ್ಮಿಣಿ ಹಾಗೂ ಸುಶೀಲೆಯರು ಜೀವನದಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಿ ಪಕ್ವವಾದವರು, ಅವರ ಕಷ್ಟದ ಕ್ಷಣಗಳಲ್ಲೆಲ್ಲ ಈ 'ಅಣ್ಣನ' ಅಮೂಲ್ಯ ಸಹಾಯ, ಸಲಹೆಗಳು ಇದ್ದೇ ಇರುತ್ತಿತ್ತು. ನಾನು 'ಇವರೊಡನೆ' ಬಾಳು ಆರಂಭಿಸಿದಾಗ ಬಂದ ಸಂಬಳ ರೂ. ೧೫೦ ನ್ನು ನನ್ನ ಕೈಯ್ಯಲ್ಲಿರಿಸಿ "ಖರ್ಚುಗಳನ್ನೆಲ್ಲ ತೂಗಿಸಿಕೊಂಡು ಹೋಗಬೇಕು. ನನ್ನ ತಾಯಿ, ತಂಗಿಯರನ್ನೆಲ್ಲ ನಿನ್ನವರೆಂದು ತಿಳಿದು ಆದರಿಸಬೇಕು" ಎಂದು ಹೇಳಿದ್ದರು. ಇದನ್ನು ಕಾಯಾ–ವಾಚಾ–ಮನಸಾ ನಡೆಸಿಕೊಂಡು ಬಂದಿದ್ದೇನೆ. ಬಡತನ, ಜವಾಬ್ದಾರಿ, ಮನೆಯಲ್ಲಿ ಎಡೆಬಿಡದೆ ನಡೆದ ಸಾವು–ನೋವುಗಳನ್ನು ಎದುರಿಸಿದ ದಿಟ್ಟ ಮನೋಭಾವ ಇವರದ್ದು. ಇಂದು ಅಸಂಗತ ಬದುಕನ್ನು ಬದುಕುವ ಪ್ರತಿಯೊಬ್ಬ ಮಾನವನಿಗೂ ಇದು ಬೇಕು ಎನ್ನಿಸುತ್ತದೆ.

ಶಿರಸಿ ಕಾಲೇಜಿಗೆ ಧನಸಂಗ್ರಹ

ಶಿರಸಿ ಕಾಲೇಜಿಗೆ ಆಗ ಕಟ್ಟಡವಿರಲಿಲ್ಲವಾದ್ದರಿಂದ ಕಟ್ಟಡಕ್ಕೆ ಹಾಗೂ ಸರಕಾರಿ ದಾನದ ಹಣ ಕಡಿಮೆ ಬಿದ್ದುದರಿಂದ ಭರಿಸಬೇಕಾದ ಖರ್ಚಿಗಾಗಿ ಸಾರ್ವಜನಿಕರಿಂದ ಹಣ ಸಂಗ್ರಹಿಸಬೇಕಾಗಿತ್ತು. ಆ ಕೆಲಸ ಇವರ ಪಾಲಿಗೇ ಬಂತು. ಆಗ ಕಡವೆ ಶ್ರೀಪಾದ ಹೆಗಡೆಯವರು ಅಧ್ಯಕ್ಷರಾಗಿದ್ದ ಕಾಲ. ಅವರೊಂದಿಗೆ ಜೀಪಿನಲ್ಲಿ ಶಿರಸಿಯ ಸುತ್ತಮುತ್ತಲಿನ ಹಳ್ಳಿಗಳನ್ನೆಲ್ಲ ಸುತ್ತಿ ಲಕ್ಷಾಂತರ ಹಣ ಸಂಗ್ರಹಿಸಿದರು. ಆಗ ಕಾಲೇಜು ಶಿರಸಿಗೆ ಬೇಕು ಹಾಗೂ ಮುಖ್ಯವಾಗಿ ಹಳ್ಳಿಯವರಿಗೆ ಇದರಿಂದ ಉಪಕಾರವಾಗುತ್ತದೆ ಎಂಬುದನ್ನು ಹಳ್ಳಿಗರ ಮನಸ್ಸಿನಲ್ಲಿ ಬಿಂಬಿಸುವುದು ಸುಲಭವಾಗಿರಲಿಲ್ಲ. ಸಾಕಷ್ಟು ಕಂಠ ಶೋಷಣೆ. ದೈಹಿಕ ಶ್ರಮವೂ ಆಗುತ್ತಿತ್ತು. ಇವೆಲ್ಲದಕ್ಕಿಂತಲೂ ಹಳ್ಳಿಗರ ಅತಿಥ್ಯ ಮಾತ್ರ ಸುಸ್ತು ಹೊಡೆಸುತ್ತಿತ್ತು! ಮನೆಮನೆಗೆ ಹೋಗಿ ಅವಲಕ್ಕಿ, ಉಪ್ಪಿಟ್ಟು, ಕೇಸರಿಬಾತ್ ಸಮಾರಾಧನೆ, ಸ್ವಲ್ಪವಾದರೂ ತಿನ್ನದೇ ಹೋದರೆ ಮನೆ ಯಜಮಾನರಿಗೆ ಬೇಸರ, ದಾನಸಂಗ್ರಹಿಸಲು ಹೊರಟಮೇಲೆ ಯಜಮಾನರಿಗೆ ಬೇಸರಪಡಿಸುವಂತೆಯೇ ಇಲ್ಲ! ಹೀಗೆ ಹತ್ತಾರು ಮನೆಗಳನ್ನು ಸುತ್ತಿ ರಾತ್ರಿ ಕಡವೆಯವರ ಮನೆಯಲ್ಲಿ 'ಅಜೀರ್ಣವಾಗಿ ಊಟ ಬೇಡ' ಎಂದು ಮಲಗಿಕೊಂಡರು. ಆಗ ಸ್ವಲ್ಪ ಸಮಯದಲ್ಲೇ ಅವರ ಮನೆಯವರೊಬ್ಬರು ಬಂದು "ಶ್ರೀಧರರೆ, ನೀವು ಊಟ ಮಾಡದಿದ್ದರೆ ಚಿಂತೆಯಿಲ್ಲ, ಸ್ವಲ್ಪ ಅವಲಕ್ಕಿ ಮಜ್ಜಿಗೆ ತಿನ್ನಿ, ಅಜೀರ್ಣ ಹೋಗುತ್ತದೆ" ಎಂದು ಮೆಲುದನಿಯಲ್ಲಿ ಹೇಳಿ ಒಂದು ಪಾತ್ರೆಯಲ್ಲಿ ಇರಿಸಿ ಹೋಗಬೇಕೇ?" ಇಲ್ಲಿಯ ಜನರ ಅತಿಥಿಸತ್ಕಾರವನ್ನು ಅವರು ತುಂಬ ಮೆಚ್ಚಿದ್ದರು. ಹಳ್ಳಿಗರ ನಿರ್ವ್ಯಾಜ ಪ್ರೇಮ ಇವರ ಮನಸೆಳೆದಿತ್ತು. ಅದಕ್ಕೆ ಸರಿಯಾಗಿ ವಿದ್ವಾನ್ ಸರ್ವತ್ರ ಪೂಜ್ಯತೆ ಎಂಬಂತೆ 'ಇವರ' ಪಾಂಡಿತ್ಯ ಹಾಗೂ ಸರಳತೆಯಿಂದಾಗಿ ಇಂದಿಗೂ "ಶ್ರೀಧರರು ತಮ್ಮ ಮನೆಗೆ ಬಂದಿದ್ದರು..." ಎಂದು ನೆನಪುಮಾಡಿಕೊಳ್ಳುತ್ತಾರೆ!

ಯಾಣ... ಪ್ರಯಾಣ..

ಇನ್ನೊಮ್ಮೆ ಶಿವರಾಮ ಕಾರಂತರು, ಇವರು ಎಲ್.ಟಿ. ಶರ್ಮಾ ಎಲ್ಲರೂ ಸೇರಿ ಯಾಣಕ್ಕೆ ಹೋದ ಪ್ರಸಂಗ. ಹೋಗುವಾಗ ಅಲ್ಲಿಯ ಹೆಬ್ಬಂಡೆಗಳನ್ನು ನೋಡುವ ಉತ್ಸಾಹದಲ್ಲಿ ಕಾಲುನೋವು, ದೈಹಿಕ ಶ್ರಮ ತಿಳಿಯದಿದ್ದರೂ ಆ ಸುಂದರ ದೃಶ್ಯದ ಆನಂದ ಅನುಭವಿಸಿ ಮರಳುವಾಗ ಮಾತ್ರ ಎಲ್ಲರಿಗೂ ಸುಸ್ತೋ ಸುಸ್ತು! ಮನೆಗೆ ಬರುವಾಗ ರಾತ್ರಿ ೧೦ ಘಂಟೆಯಾಗಿತ್ತು! ಊಟ ಮುಗಿಸಿದ ಮೇಲೆ ಕಾರಂತರಿಗೆ ಕಾಲುಜಗಿತ ಆರಂಭವಾಯ್ತು. ಆಗ ಅವರು "ಶ್ರೀಧರರೆ, ಈಗ ತಿಳಿಯಿತು, ಯಾಣಕ್ಕೆ ಹೋದರೆ ಯಮನ ಬಾಧೆಯಿಲ್ಲ ಎಂದು ಹೇಳುವ ಮಾತಿನ ಅರ್ಥ. ಯಮಲೋಕದಲ್ಲಿ ಆಗುವ ಶಿಕ್ಷೆಯೆಲ್ಲ ಇಲ್ಲೇ ಆಗಿಬಿಡುತ್ತದೆ ಅಲ್ಲವೇ?" ಎಂದು ಹೇಳಿ ಎಲ್ಲರನ್ನೂ ನಗಿಸಿದರು.

ಬನವಾಸಿ ಕದಂಬರು

ಥೇಡಿಸುವವರ ವಿರುದ್ಧ ಬಂಡೆದ್ದ ವೀರ ಮಯೂರನೆಂದರೆ ಇವರಿಗೆ ಅಪಾರ ಪ್ರೇಮ. ಹಾಗಾಗಿ ಕರ್ನಾಟಕದ ಅಂದಿನ ರಾಜಧಾನಿಯಾದ ಬನವಾಸಿ ಅದರಲ್ಲೂ ಮಧುಕೇಶ್ವರ ದೇವಸ್ಥಾನ ಬಾವಲಿಗಳ ಬೀಡಾದದ್ದು ಇವರ ಮನಸ್ಸಿಗೆ ತುಂಬಾ ನೋವನ್ನುಂಟುಮಾಡಿತ್ತು. ಆಗ 'ಇವರು' ಈ ವಿಷಯವನ್ನು ತಿಳಿಸಿ ಪ್ರಾಚ್ಯವಸ್ತು ಸಂಶೋಧನಾ ಇಲಾಖೆಗೆ ಪತ್ರ ಬರೆದರು. ಆಗ ತಾನೆ ಅಧಿಕಾರ ವಹಿಸಿಕೊಂಡಿದ್ದ 'ಇವರ' ಸಹಪಾಠಿ ಎಸ್. ಆರ್. ರಾವ್ ಅವರು ಇವರ ಪತ್ರ ನೋಡಿ "ನಿಮ್ಮ ಪತ್ರ ದೊರಕಿದೆ. ವಿಷಯ ತಿಳಿಸಿದ್ದಕ್ಕೆ ಧನ್ಯವಾದಗಳು, ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ" ಎಂದು ಬರೆದದ್ದಲ್ಲದೆ ದೇವಸ್ಥಾನ ಸ್ವಚ್ಛಮಾಡಿಸಿ ವಿದ್ಯುದ್ದೀಪ ಹಾಕಿಸಿ ಇಲಾಖೆಯ ಸಂರಕ್ಷಣೆಯಲ್ಲಿರಿಸಿದರು. ಅದೇ ಸಂದರ್ಭದಲ್ಲಿ ಎಸ್.ಆರ್. ರಾವ್ ನಮ್ಮ ಮನೆಗೆ ಬಂದಿದ್ದರು. ಇಡೀ ವಿಶ್ವದಲ್ಲಿ ರಾವ್ ಅವರಿಗೆ ಮಾತ್ರ ಹರಪ್ಪಾ ಮೊಹೆಂಜೊದಾರೊ ಲಿಪಿ ಓದಲು ಬರುವುದು. ರಾವ್ ಸಂದರ್ಶನ ಬಿ.ಬಿ.ಸಿಯಲ್ಲಿ ಬಿತ್ತರಿಸಲಾಗಿತ್ತು. ಈಗ ರಾವ್ ಗೋವಾದ ಸಾಗರಗರ್ಭ ಸಂಶೋಧನಾ ವಿಭಾಗದ ಮುಖ್ಯಸ್ಥರು. 'ಇವರು' ಇದೇ ಸಂದರ್ಭದಲ್ಲಿ ಬನವಾಸಿ ಕೈಪಿಡಿ, ಬನವಾಸಿಯ ಕದಂಬರು ಎಂಬ ಪುಸ್ತಕಗಳನ್ನು ಬರೆದರು. ಮುಂದೆ ಐ.ಬಿ.ಎಚ್. ಪ್ರಕಾಶನ 'ಮಯೂರಶರ್ಮ' ಎಂಬ ಪುಸ್ತಕವನ್ನು ಯುಗಪುರುಷ ಪ್ರಕಟನಾಲಯ ಮೂಯೂರ ಎಂಬ ಮಕ್ಕಳ ನಾಟಕವನ್ನು ಪ್ರಕಟಿಸಿತು.

ಶ್ರೀಧರರ ತರಬೇತಿ ಶಿಬಿರ

ಕುಮಟಾದಲ್ಲಿರುವಾಗ ಕಾಲೇಜು ವಾರ್ಷಿಕೋತ್ಸವ ಬಂದಾಗಿನ ಸಂಭ್ರಮ ನೆನಪಾಗುತ್ತಿದೆ. ಆಗ ಕಸ್ತೂರಿಯವರ "ಗಗ್ಗಯ್ಯನ ಗಡಿಬಿಡಿ" ನಾಟಕದ ತರಬೇತಿ ನಡೆಯುತ್ತಿತ್ತು. ನಾಟಕದ ತರಬೇತಿ ನಮ್ಮ ಮನೆಯಲ್ಲಿಯೇ! ಹಾಗಾಗಿ ಬಂದು ಹೋಗುವ ವಿದ್ಯಾರ್ಥಿಗಳು ಕಾಫಿ ಸರಬರಾಜಿನ ಸಂಭ್ರಮ, 'ಇವರ' ಗುರಿ ಮಾತ್ರ ನಾಟಕ ಯಶಸ್ವಿಯಾಗಬೇಕೆನ್ನುವುದಾಗಿತ್ತು. ಆಗಲೇ ಕೂಜಳ್ಳಿಯ ಎಂ.ವಿ. ಭಟ್ ಬಂದಾಗ ನೋಡು ಇವನ ಹೆಸರು ಎಂ.ವಿ. ಭಟ್ಟ "ಜಾಣ" ಪರೀಕ್ಷೆಗೆ ಕುಳಿತು ಕಾರವಾರ ಜಿಲ್ಲೆಗೆ ಫಸ್ಟ್ ಬಂದ ಹೆಜ್ಜಾಣ" ಎಂದು ಪರಿಚಯಿಸಿದ್ದರು! ಇವರ ಹರಕ ನಿಜವಾಯಿತೆನ್ನಿ. ಅವರು ಮುಂದೆ ಕರ್ನಾಟಕದ ಅಕೌಂಟೆಟ್ ಜನರಲ್ ಆಗಿ ನಿವೃತ್ತರಾದರು.

ಶಿರಸಿಯಲ್ಲಿಯೂ ಕಾಲೇಜು ವಾರ್ಷಿಕೋತ್ಸವ ಬಂದರೆ ಕಾಲೇಜು ಹುಡುಗರ ದಂಡು ನಮ್ಮ ಮನೆಗೆ ದೌಡಾಯಿಸುತ್ತಿತ್ತು. 'ವರಪರೀಕ್ಷೆ' ನಾಟಕದ ತರಬೇತಿ ನಮ್ಮ ಮನೆಯಲ್ಲಿಯೇ ಟಿ.ಪಿ. ಭಟ್ (ಈಗ ದೆಹಲಿಯಲ್ಲಿದ್ದಾನೆ). ಜಿ.ಎಸ್.ಭಟ್ (ಮಾನಸ ಗಂಗೋತ್ರಿ ಮೈಸೂರು) ಇವರೆಲ್ಲ ಆಗ ನಟರು! ಅಲ್ಲದೇ ಸಂಸ್ಕೃತ ನಾಟಕ ಬೇರೆ ನಿರ್ದೇಶಿತವಾಗಬೇಕು. ದೀಕ್ಷಿತ್, ಎಸ್.ಜಿ. ಭಟ್ ಕೆಕ್ಕಾರ್ ಮುಂತಾದವರೆಲ್ಲ ಕಾಲೇಜುರಂಗದ ನಟರಾಗಿದ್ದರು! ಈ ಶಿಷ್ಯ ವಾತ್ಸಲ್ಯವೇ ಅವರ ಕಳ್ಳಭಟ್ಟಿ ಶಿಷ್ಯರನ್ನು ಬೀಳ್ಕೊಡುವಾಗ' ಎಂಬ ಪದ್ಯ ಜನಪ್ರಿಯವಾಗಲು ಕಾರಣ. ಅದರ ಒಂದೆರಡು ನುಡಿಗಳನ್ನು ನೋಡಬಹುದು 'ರಸಯಜ್ಞದ' ಈ ವಿಡಂಬನೆ ಪದ್ಯದಲ್ಲಿ.

ನೀವೆಲ್ಲಿ ಹೋದರೂ ಒಂದೇ
ಜಾತಿ
ಓ ಕಳ್ಳಭಟ್ಟಿಯವರೇ
ನೋಟ್ಸುಗಳ ತೂರಿ ಗೈಡುಗಳ ಕಾರಿ ಪಾಸನ್ನು ಮಾಡಿದವರೇ।
ನನ್ನ ನೆಚ್ಚಿನರೆಗಲಿಕೆಯಾಳುಗಳೆ ಪಾಠ ಹೇಳಿ ಹೇಳಿ
ಬೆಣ್ಣೆಯಂಥ ಆ ನಿಮ್ಮ ಮಿದುಳ ನೋಯಿಸಿದ ಪ್ರಶ್ನೆ ಕೇಳಿ।
ಗುಲ್ಲುಗಾರರೇ ಗೊರಕೆಯೊಡೆಯರೇ ಗುಳ್ಳಗಲ್ಲದವರೇ
ಅಲ್ಲದಹುದು ಎಂಬೆಲ್ಲವನ್ನು ಮರೆದೇಳಿ ಹರೆಯದವರೇ ॥
ಕಳಬೇಡಿರಣ್ಣ ಕೊಲಬೇಡಿರಣ್ಣ ಪೋಲೀಸ ಕಾಂಬ ಹಾಗೆ
ನಿಲಬೇಡಿರಣ್ಣ ನಿಂತಲ್ಲಿ ಲಂಚವನು ಜೇಬಿಗಿಟ್ಟಮೇಲೆ ॥
ಹಲಮಾತನಾಡಿ ವಾದಕ್ಕೆ ಸಿಲುಕದಿರಿ ಬುದ್ಧಿವಂತರಲ್ಲಿ
ಹುಲು ಶೀಲವಂತಿಕೆಗೆ ಸಿಲುಕಬೇಡಿ ಈ ಸುಳ್ಳು ಬದುಕಿನಲ್ಲಿ ॥

ಉಳಿವೆ ನಾನು ಹೊತ್ತಗೆಯ ಹೊಂಡದಲಿ ಮತ್ತೆ ಮತ್ತೆ ಬರುವ
ಎಳೆಯರೆದುರು ಉಸಿರನ್ನು ಖರ್ಚು ಮಾಡುತ್ತ ರೊಕ್ಕ ತೆರುವ ।
ಹಳೆಯ ತಂದೆತಾಯಿಗಳ ನಂಬಿಸುವ ಹಗಲು ವೇಷದಲ್ಲಿ
ಮಳಲಿನಿಂದ ತೈಲವನು ತೆಗೆವ ಈ ವ್ಯರ್ಥಯತ್ನದಲ್ಲಿ ॥

ಶ್ರೀಧರ ಎಂಬವನು ಹೀಗೇ ಆಗಲಿಲ್ಲ!

'ಇವರಿಗೆ' ಸಿದ್ಧಾಪುರದಲ್ಲಿ ಸನ್ಮಾನಿಸಿದ ಸಂದರ್ಭ. ಸಾಲಿ ರಾಮಚಂದ್ರರಾಯರೆಂದಂತೆ ಬೇಂದ್ರೆಯವರೊಂದು 'ಮಹಾಚೇತನ.' ಈ ಬೇಂದ್ರೆಯವರು ಸನ್ಮಾನ ಕಾರ್ಯಕ್ರಮದ ಅಧ್ಯಕ್ಷರು. ಬೇಂದ್ರೆಯವರಿದ್ದಲ್ಲಿ ಮಾತಿನ ಹೊಳೆ ಹರಿಯುತ್ತದೆ! ಪದ್ಯದ ಮಳೆ ಬರುತ್ತದೆ! 'ಇವರು' ಅವರನ್ನು `Man of flashes,' ಎನ್ನುತ್ತಿದ್ದರು. ಧಾರವಾಡದಿಂದ 'ಇವರ' ಸನ್ಮಾನ ಕಾರ್ಯಕ್ರಮಕ್ಕೆಂದು ಹೊರಟವರು ಆರಂಭಿಸಿದ ಮಾತು, ಸಿದ್ಧಾಪುರ ತಲುಪುವವರೆಗೂ ಮಾತು, ಆಮೇಲೆ ಇವರೊಡನೆ ಮಾತು, ಸಂಜೆ ನಾಲ್ಕು ಘಂಟೆ ಸಭೆಯಲ್ಲಿ ಮಾತು, ಏಳು ಘಂಟೆಗೆ ಸಾಯಿ ಮಂದಿರದಲ್ಲಿ ಮಾತು, ರಾತ್ರಿ ಶಿರಸಿಯಲ್ಲಿ ನಮ್ಮ ಮನೆಗೆ ಬಂದಮೇಲೆ ಮಾತು, ಊಟವಾಗಿ ರಾತ್ರಿ ಒಂದು ಘಂಟೆಯಾದರೂ... ಮಾತು! ಅದೂ ನಾವೂ ನೀವು ಆಡುವ ಸಾಮಾನ್ಯ ಸಂಭಾಷಣೆಗಳಲ್ಲ, ಕಾವ್ಯ, ತತ್ವ, ಅನುಭವಗಳ ದರ್ಶನ! ನಾನು, ಇವರಿಗೆ, ಬೇಂದ್ರೆಯವರಿಗೆ ಮಾತಾಡಿ ಸುಸ್ತಾಗಿರಬೇಕೆಂದೆನಿಸಿ, ದೀಪ ಆರಿಸಿ, ಇನ್ನು ಎಲ್ಲರೂ ಮಲಗಿರಿ ಎಂದೆ. ಬೇಂದ್ರೆಯವರು "ಲೈಟ್ ಆರಿಸಿದರೂ ಬಾಯಿ ಹ್ಯಾಂಗ್ ಬಂದ್ ಆಗ್ತದ?" ಎಂದು ಪ್ರಶ್ನಿಸಬೇಕೇ! ಸರಿ, ಮತ್ತೆರಡು ಘಂಟೆ ಮಾತಾಡಿ ಮಲಗಿಕೊಂಡರು. ಆಗ ಅವರೊಡನೆ ದೇಸಾಯಿ ದತ್ತಮೂರ್ತಿಯವರೂ ಇದ್ದರು. ಬೇಂದ್ರೆಯವರ 'ಸಖಿಗೀತ' ಪುಸ್ತಕದಲ್ಲಿಯ ಅವರ ಫೋಟೋದ ಕೆಳಗೆ 'ಇವರು' ಬರೆದ ಕವನ ನೆನಪಾಗುತ್ತದೆ–

"ಕವಿ ಹೇಂಗಿದ್ದಾನ ನೋಡ ಈತ ಬರೆದ ಸಖಿಗೀತ । ಬಲ್ಲ ಸವಿಮಾತ ಇವನ ಕಂಡು ಕವಿತೆ ಉಕ್ಕೋತ॥"

ಬೇಂದ್ರೆಯವರು ತಮ್ಮ ಸುಖ, ಕಷ್ಟ, ಅನುಭವ, ಸಂಸಾರದ ಕಥೆ ಇತ್ಯಾದಿಗಳನ್ನು ಹೇಳಿಕೊಂಡಂತೆ, ಇವರೂ ಕವಯಿತ್ರಿ ಮಹಾಲಕ್ಷ್ಮಿ ಅಮ್ಮನವರ, ವೆಂಕಟರಮಣ ಹೆಬ್ಬಾರರು, ಹಿರಿಯಣ್ಣ ಹೆಬ್ಬಾರರ ಮುಂತಾದ ನಮ್ಮ ವಂಶದ ಮಹಾನ್ ವಿದ್ವಾಂಸರುಗಳ ವಿಷಯವನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸಿದಾಗ, ಬೇಂದ್ರೆಯವರು "ಶ್ರೀಧರಾ, ಶ್ರೀಧರ ಎಂಬುವವನು ಹೀಗೆ ಆಗಲಿಲ್ಲ, ಅವನ ಹಿನ್ನೆಲೆ ಹೀಗಿತ್ತು. ಇದು ಜನಕ್ಕೆ ಗೊತ್ತಾಗಬೇಕು, ಒಂದಿಷ್ಟು ಬರೀ" ಎಂದಿದ್ದರು! ಈಗ 'ಜೀವಯಾನ' ಸ್ವಲ್ಪಮಟ್ಟಿಗಾದರೂ ಅವರ

ಮಾತನ್ನು ಸತ್ಯವಾಗಿಸಿದೆ. ಬರೆದರೆ ೫೦೦ ಪುಟಗಳೂ ಮೀರುವಷ್ಟು ಬರೆಯುವ ಶಕ್ತಿ, ನೆನಪು ಇವರಿಗಿದ್ದರೂ ಪ್ರಕಟಿಸಿ ಪ್ರಕಾಶಿಸುವವರ ಅಭಾವದಿಂದ ಅದು ಸಾಧ್ಯವಾಗಲಿಲ್ಲವೇನೋ, ಕೊನೆಕಾಲದಲ್ಲಿ ಸಾಗರದಲ್ಲಿ ಪ್ರೊಫೆಸರ್ ಆಗಿರುವ ಜಿ.ಕೆ. ಹೆಗಡೆಯವರು ಮುಂದೆ ಬಂದರೂ, ಆಗ ಇವರಿಗೆ ಬರೆಯುವ ಉತ್ಸಾಹ ಕಡಿಮೆಯಾಗಿತ್ತು. ಈ 'ಜೀವಯಾನ' ವನ್ನು ಬರೆದದ್ದು ಮಗ ರಾಜುವಿನ ಒತ್ತಾಯದಿಂದ, ಕ್ಯಾಸೆಟ್‌ನಲ್ಲಿ ರಿಕಾರ್ಡ್ ಮಾಡಿಕೊಳ್ಳುವ ನೆವದಲ್ಲಿ... ಹಾಗಾಗಿ ಇಷ್ಟಾದರೂ ವಿವರಗಳು ಸಿಕ್ಕಿವೆ.

ಹಾಸಣಗಿ ರಾಮಚಂದ್ರ ಭಟ್ಟರು

ಹಾಸಣಗಿ ರಾಮಚಂದ್ರ ಭಟ್ಟರು 'ಪ್ರಾಣಸ್ನೇಹಿತರು' ಎಂದು ಶಿರಸಿಯ ರಂಗ ಸಂಗದ ಸನ್ಮಾನದಲ್ಲಿ 'ಇವರಿಂದ' ಕರೆಯಲ್ಪಟ್ಟವರು. ಮೈಸೂರಿನಲ್ಲಿ ರಾಮಚಂದ್ರ ಭಟ್ಟರು ಸಂಸ್ಕೃತ ಕಾಲೇಜಿನಲ್ಲಿ ಓದುತ್ತಿರುವಾಗಲೇ ಸ್ನೇಹಿತರು. ಇವರು ಶಿರಾಳಕೊಪ್ಪದಲ್ಲಿರುವಾಗ 'ಇವರು' ಅವರ ಮನೆಗೆ ಹೋಗಿದ್ದರು. ಆಗ ಅಲ್ಲಿಯ ಬಳ್ಳಿಗಾವಿಯ ಸುಂದರ ದೇವಾಲಯಕ್ಕೆ, ಬಲಿಸ್ತಂಭಕ್ಕೆ ಭಟ್ಟರು ಕರೆದುಕೊಂಡು ಹೋಗಿದ್ದರು. ಹಳೆಬೀಡಿನ ದೇವಸ್ಥಾನದಂತೆ ಸುಂದರ ಶಿಲ್ಪಕಲೆಯ ಬೀಡು ಈ ಬಳ್ಳಿಗಾವಿಯ ದೇವಸ್ಥಾನ. ರಾಮಚಂದ್ರ ಭಟ್ಟರು ಸಂಸ್ಕೃತ ವಿದ್ವಾಂಸರು, ಯಕ್ಷಗಾನಪ್ರಿಯರು ಕೂಡ ಹೌದು. ಮೊನ್ನೆ ಮೊನ್ನೆವರೆಗೂ ಯಕ್ಷಗಾನ ನೋಡಲು ಶಿರಸಿಗೆ ಬಂದರೆ ನಮ್ಮಲ್ಲಿಗೆ ಬರುತ್ತಿದ್ದರು. ಈಗ ಮುಂಡಗೋಡಿನಲ್ಲಿ ಮಗ ಅಮರನಾಥರೊಂದಿಗೆ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

ನವರಾತ್ರಿ ಸಂಭ್ರಮ

ನವರಾತ್ರಿ ಬಂತೆಂದರೆ ನಮಗೆಲ್ಲ ಸಂಭ್ರಮ. ಸಾಹಿತಿಗಳ ದಂಡು! ಮಾರಿಕಾಂಬಾ ದೇವಸ್ಥಾನದ ಕಾರ್ಯಕ್ರಮಕ್ಕೆ ಆಗಮಿಸಿದವರು ನಮ್ಮ ಮನೆಗೂ ಬರುತ್ತಿದ್ದರು. ತುಂಬ ಆರೋಗ್ಯಕರವಾದ ವಾತಾವರಣವಿತ್ತು. ಬೇಂದ್ರೆ, ಚಿದಾನಂದಮೂರ್ತಿ, ಬಿ.ಎಸ್. ರಾಮಾಚಾರ್, ರಾಮರಾವ್, ಗೌರೀಶ ಕಾಯ್ಕಿಣಿ ಮುಂತಾದ ಸಾಹಿತಿಗಳು, ಮೂರುವರ್ಷ 'ಇವರು' ಬೇಲೂರರು,' ಧಾಕಪ್ಪನವರು ಸೇರಿ ಕರೆಸಿದಾಗ ಬಂದಿದ್ದರು. ಇನ್ನೊಮ್ಮೆ ಶಿವರಾಮ ಕಾರಂತರು ತಮ್ಮ ಯಕ್ಷಗಾನ ತಂಡವನ್ನು ತಂದು ಮಾರಿಗುಡಿಯಲ್ಲಿಯೇ ಪ್ರಯೋಗ ನಡೆಸಿದ್ದರು.

ಹಲಸಂಗಿ ಕಾರ್ಯಕ್ರಮ

ಶಿರಸಿಯಲ್ಲಿದ್ದಾಗಲೂ ಅದೆಷ್ಟೋ ಸಭೆಗಳು, ಕಾರ್ಯಕ್ರಮಗಳು, ಅಧ್ಯಕ್ಷತೆಗಳು ಇಂಥವುಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಒಂದು ಕಡೆ, ಅನಾರೋಗ್ಯ ಅರೆನಿದ್ರೆಗಳಿದ್ದರೆ, ಇನ್ನೊಂದೆಡೆ ಕಾರ್ಯಕ್ರಮ ಕಾಲೇಜುಗಳ ಮೇಳ. "ಅಲ್ಲಿ ಸಭೆ... ಇಲ್ಲಿ ಸಭೆ... ಬರಿಯ ದಬದಬೆ" ಎಂದು ಬರೆದರೂ ದಾಕ್ಷಿಣ್ಯದಿಂದ ಒಪ್ಪಿಕೊಂಡು ಬಿಡುತ್ತಿದ್ದರು. ಆಮೇಲೆ ಆಹಾರ ಅಪಥ್ಯವಾಯಿತೆಂದು ಮನೆಗೆ ಬಂದು ನರಳುವುದು ತುಂಬ ಸಾಮಾನ್ಯವಾಗಿತ್ತು. ಇವರಿಗೆ ತಿಂಡಿ–ಊಟದ ವಿಚಾರವಾಗಿ ಒತ್ತಾಯ ಮಾಡಿದಾಗಲೆಲ್ಲ "ನೋಡಿ ನೀವು ಒತ್ತಾಯ ಮಾಡಿದಿರಿ ಅಂತ ತಿಂದರೆ, ಒಂದು ಅಜ್ಜಿ ಬಾಗಿಲು ಹಾಕಿಕೊಂಡು ಕುಣಿತಿತ್ತು... ಎಂಬ ಅವಸ್ಥೆ ನನ್ನದಾಗುತ್ತದೆ!" ಎಂದು ಹಾಸ್ಯ ಮಾಡುತ್ತಿದ್ದರು. ಸಭೆ–ಸಮಾರಂಭಗಳಿಗೆ ಹೋಗುವಾಗ ಇಂದಿನ ಕೆಲವು ಥಳಕು–ಬಳಕಿನ ಸಾಹಿತಿಗಳಂತೆ 'ನನಗೆ ಕಾರು ಕಳಿಸಿದರೆ ಮಾತ್ರ ಬರುತ್ತೇನೆ ಎನ್ನುವುದು, ಪತ್ರಕ್ಕೆ ಉತ್ತರವನ್ನು ಹಾಕದಿರುವುದು, ಕೊನೆಕ್ಷಣದಲ್ಲಿ ಕೈಕೊಡುವುದು' ಇಂಥ ದುಃಸ್ವಭಾವ 'ಇವರಿಗೆ' ತಿಳಿದೇ ಇರಲಿಲ್ಲ. ಮಾತು ಕೊಟ್ಟರೆ ಅದಕ್ಕೆ ಮುಟ್ಟಿಕೊಳ್ಳುವ ಸ್ವಭಾವ. ಎಂದೂ ಗುಂಪುಗಾರಿಕೆ, ಸಲಾಮುಹಾಕಿ ಪಡೆವ ಸ್ಥಾನಮಾನದ ಗೊಡವೆಗೆ ಹೋದವರಲ್ಲ – Honest, Intelligent and single ಎಂಬಂತೆ ಆತ್ಮಬಲದಿಂದ ಬದುಕಿದವರು. ಹಾಗಾಗಿ ಅವರು ಪಡೆದ ಬಹುಮಾನ, ಪ್ರಸಿದ್ಧಿಗಳು ವಿಶಿಷ್ಟವಾದವುಗಳು. ಅವರು ಹಲಸಂಗಿ ಕಾರ್ಯಕ್ರಮಕ್ಕೆ ಶಿರಸಿಯಲ್ಲಿದ್ದಾಗಲೇ ಹೋಗಿದ್ದರು. ಆಗ 'ಭಾರತೀಯ ತತ್ವಜ್ಞಾನ' ಎಂಬ ವಿಷಯ, ಆದರೆ ಸೇರಿದ ಜನ ಮಾತ್ರ ಅಮಾಯಕರು, ಅನಕ್ಷರಸ್ಥರು ಆದರೆ 'ಇವರಿಗೆ' ಸಭೆ ನೋಡಿ ಮಾತಾಡುವ ಜಾಣತನವಿದ್ದದ್ದರಿಂದ, ಕಥೆ–ಪದ್ಯಗಳಿಂದ ಕೂಡಿದ ಭಾಷಣ ಮಾಡಿ ಚಪ್ಪಾಳೆ ಗಿಟ್ಟಿಸಿದರೆನ್ನಿ! ಏಕೆಂದರೆ 'ಇವರು' ಆಶುಭಾಷಣಕಾರರಾಗಿದ್ದರು. ಆಗ ಹಲಸಂಗಿಯ ಒಬ್ಬ ಅಜ್ಜ ಹಲಸಂಗಿ ಲಾವಣಿಯನ್ನು ಬಹಳ ಸುಂದರವಾಗಿ ಹೇಳಿದ ಎಂದು ಹೇಳಿದ್ದರು. ಇವರು ಹಲಸಂಗಿ ಲಾವಣಿಗಳನ್ನು ಹಾಡಿದ ಕ್ಯಾಸೆಟ್‌ಗಳು ನಮ್ಮ ಮನೆಯಲ್ಲಿವೆ.

ಸೀತಾರಾಮ ಹೆಬ್ಬಾರರು

ಸೀತಾರಾಮ ಹೆಬ್ಬಾರರೆಂದರೆ 'ಇವರ' ತಂದೆ ಹಾಗೂ ನನ್ನ ಮಾವನವರು. ತುಂಬ ಮೃದು ಸ್ವಭಾವದವರು. ಯಾವುದೇ ವಿಚಾರವನ್ನೂ ಮನೆಯವರಿಂದ ಮುಚ್ಚಿಟ್ಟವರಲ್ಲ. ಎಲ್ಲಿಗೇ ಹೋಗಿ ಬರಲಿ, ಯಾವ ಕೆಲಸವನ್ನೇ ಮಾಡಿರಲಿ, ಎಂಥ ವಿಷಯವೇ ಆಗಿರಲಿ, ಹೆಂಡತಿ–ಮಕ್ಕಳು, ಮನೆಯವರೊಡನೆ ವಿವರಿಸಿ ಹಂಚಿಕೊಳ್ಳುತ್ತಿದ್ದರು. ಈ ಸುಖ–ದುಃಖ ಹಂಚಿಕೊಳ್ಳುವ ಸ್ವಭಾವ 'ಇವರಿಗೆ' ತಂದೆಯವರ ಕೊಡುಗೆ. ಇಂಥ ಬಿಚ್ಚು ಮನಸ್ಸಿನ ಸುಖವನ್ನುಂಡ 'ಇವರು' ಕೊನೆಯವರೆಗೂ

ಭಾಷಣಕ್ಕೆ ಹೋಗಿ ಬರಲಿ, ಯೂನಿವರ್ಸಿಟಿಗೆ ಹೋಗಿಬರಲಿ, ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ ಬಂದಿರಲಿ... ಮನೆಯಿಂದ ಹೊರಟು ಕೆಲಸ ಮುಗಿಸಿ ತಿರುಗಿ ಮನೆ ತಲುಪಿದವರೆಗಿನ ಪ್ರತಿಯೊಂದು ವಿವರವನ್ನೂ ಕಣ್ಣಿಗೆ ಕಟ್ಟುವ ಹಾಗೆ, ಕಾವ್ಯಮಯವಾಗಿ ವರ್ಣಿಸುತ್ತಿದ್ದರು! ಹಾಗಾಗಿಯೇ ನನಗೆ 'ಇವರನ್ನು' ಕುರಿತು ಬರೆಯಲು ಸಹಾಯವಾದದ್ದು. ಹಾಗಾಗಿ 'ಅವರು' ಬರೆದದ್ದು ತೀರಾ ಸಂಕ್ಷಿಪ್ತವಾಯಿತೆನ್ನಿಸಿದ ವಿಷಯವನ್ನು ಮಾತ್ರ ವಿವರಿಸುವ ಕರ್ತವ್ಯವನ್ನು ಮಾಡುತ್ತಿರುವುದು. ೧೯೪೭ನೇ ಇಸವಿಯವರೆಗೂ ಸೀತಾರಾಮ ಹೆಬ್ಬಾರರು ಸೊರಬ ತಾಲೂಕಿನ ಅಂಡಿಗೆ ಎಂಬ ಗ್ರಾಮದಲ್ಲಿ ಆನಂದರಾಯರ ಜಮೀನನ್ನು ನೋಡಿಕೊಂಡು ಪತ್ನಿಯೊಡನೆ ಸಂಸಾರ ಸಾಗಿಸುತ್ತಿದ್ದರು. ಹಳ್ಳಿಯ ಜನರೆಲ್ಲರೂ ಕಾಳುಕಡಿ ಮಾರಿಬಂದ ಹಣವನ್ನು ಸೀತಾರಾಮ ಹೆಬ್ಬಾರರ ಬಳಿ ನೀಡುತ್ತಿದ್ದರು. ವಂಚನೆ, ಕಪಟ, ಲೋಭವಿರದ ಅಂತಃಕರಣ ಶುದ್ಧಿಯುಳ್ಳವರು ಎಂಬುದನ್ನು ಜನ ತಿಳಿದುದರಿಂದಲೇ ವಿಶ್ವಾಸವಿರಿಸಿ ಇವರ ಬಳಿ ಹಣವಿಡುತ್ತಿದ್ದರು. ಅಂದರೆ ಅಂದಿನ ಕಾಲದ 'ಬ್ಯಾಂಕ್' ಸೀತಾರಾಮ ಹೆಬ್ಬಾರರಾಗಿದ್ದರು! ನನ್ನ ಮಾವನವರ ಬಗ್ಗೆ ಅಷ್ಟು ನಂಬಿಗೆ ಆ ಜನಕ್ಕೆ! ಹಾಗಾಗಿ ಖರ್ಚಿಗೆ ಹಣವಿಲ್ಲದಿದ್ದರೂ ಕೈಯಲ್ಲಿ ಹಣ ಓಡಾಡುತ್ತಿತ್ತು. ೧೯೪೮ನೇ ಇಸವಿಯಲ್ಲಿ ನಮ್ಮ ಹುಬ್ಬಳ್ಳಿಯ ಮನೆಗೆ ಅತ್ತೆ ಮಾವರೀರ್ವರು ಬಂದರು. ಮಾವನವರಿಗೆ ಎಲ್ಲವೂ ಚೊಕ್ಕವಾಗಿರಬೇಕು. ಅಚ್ಚುಕಟ್ಟಾಗಿರಬೇಕು. ಹಾಗಾಗಿ ಹುಬ್ಬಳ್ಳಿಯ ಬಾಡಿಗೆಮನೆ ಅವರಿಗೆ ಹಿತವೆನಿಸಲಿಲ್ಲ. ಆದರೂ ಎಲ್ಲ ಅಲ್ಪಸ್ವಲ್ಪ ಕುಂದು ಕೊರತೆಗಳನ್ನು ಸಹಿಸುತ್ತಿದ್ದರು. ಸಾಮಾನು ತರುವ ಕೆಲಸ ನನ್ನ ಮಾವನವರದ್ದಾಗಿತ್ತು. ಮಾವನವರು, ಅತ್ತೆ, 'ಇವರು' ಎಲ್ಲರೂ ವೀಳ್ಯದೆಲೆ ತಿನ್ನುವ ಅಭ್ಯಾಸವಿದ್ದವರಾಗಿದ್ದರು. ಸಾಮಾನೆಲ್ಲವನ್ನೂ ತಂದ ನಂತರ ಮಾವನವರು ಲೆಕ್ಕ ಬರೆದು ಎಲೆಗಳನ್ನು ಎಣಿಸಿ ಇಡುವುದು ಪದ್ಧತಿ. ಒಂದು ಸಲ ಹೀಗೆ ಎಣಿಸಿದಾಗ ೨೫ ಎಲೆ ಜಾಸ್ತಿಯಿದ್ದುದು ತಿಳಿಯಿತು. ಕೂಡಲೇ ಶರಟು ಹಾಕಿಕೊಂಡು ಅವುಗಳನ್ನು ಹಿಂತಿರುಗಿಸಲು ಹೊರಟೇಬಿಟ್ಟರು. ಅಲ್ಲಿ ಹೋಗಿ ಎಲೆಯವನ ಹತ್ತಿರ '೨೫ ಎಲೆ ಜಾಸ್ತಿ ಕೊಟ್ಟಿದ್ದೀಯೆ ತೆಗೆದುಕೊ.' ಎಂದು ಹಿಂತಿರುಗಿಸಿದರು. ಆ ಉರಿವ ಬಿಸಿಲಿನಲ್ಲಿ ಹಿಂತಿರುಗಿಸಲು ಬಂದ ಮಾವನವರನ್ನು ಕಂಡು ಆತ "ರಾಯರು ಕೃತಯುಗದವರು, ಈ ಯುಗದವರಲ್ಲ! ನಾ ಖುಶಿಯಾಗಿ ಈ ಎಲೆ ಕೊಟ್ಟೀನಿ, ಒಯ್ಯಿರಿ" ಎಂದು ಹೇಳಿದನಲ್ಲದೇ ಯಾವಾಗಲೂ ನಮ್ಮ ಮಾವನವರು ಎಲೆ ತರಲು ಹೋದಾಗ ೨೫ ಎಲೆ ಹೆಚ್ಚು ನೀಡುತ್ತಿದ್ದ! ೪೦ ವರ್ಷಗಳ ಹಿಂದಿನ ಕಾಲ, ಅಲ್ಲದೇ ಬಯಲು ಸೀಮೆಯ ಗುಣಗ್ರಾಹಿ ಜನ, ಈಗ ಇಂಥ ಸರಳತೆಗೆ ಎಷ್ಟು ಬೆಲೆ ಕೊಟ್ಟಾರು? ಆದರೆ ಒಂದು ಮಾತು ನಿಜ, ಬೆಲೆ ಕೊಡಲಿ ಬಿಡಲಿ, ಕಳ್ಳನಿಗೂ ಒಳ್ಳೆಯವನನ್ನು ಗುರುತಿಸುವ ಶಕ್ತಿ ಮಾತ್ರ ಇರುತ್ತದೆ ಎಂದು 'ಇವರು' ಹೇಳುತ್ತಿದ್ದ ಮಾತು ಮಾತ್ರ ನಿಜ.

ಅಪ್ಪ–ಮಗಂದಿರ ವಾದ ವಿವಾದ!

'ಇವರು' ಹುಬ್ಬಳ್ಳಿಯ 'ಕರ್ಮವೀರ' ವಾರಪತ್ರಿಕೆಯ ಉಪಸಂಪಾದಕರಾಗಿ ಕೆಲಸ ಮಾಡುತ್ತಿರುವಾಗ 'ಹಾಫ್ ಪ್ಯಾಂಟ್' ಹಾಕುತ್ತಿದ್ದರು. ಇದು ನನ್ನ ಮಾವನವರಿಗೆ ಸರಿ ಎನಿಸುತ್ತಿರಲಿಲ್ಲ. ಸರಿ, ತಂದೆ ಮಗನಿಗೆ ವಾದ ವಿವಾದ, ತರ್ಕ–ವಿತರ್ಕ ಆರಂಭವಾಗುತ್ತಿತ್ತು. ಕೊನೆಗೆ ನಾನು ನಡುವೆ ಪ್ರವೇಶಿಸಿ ಕದನ ವಿರಾಮಕ್ಕೆ ಪ್ರಯತ್ನಿಸುತ್ತಿದ್ದೆ. ಹಿರಿಯರಿಗೆ ಏಕೆ ನೋವು ಮಾಡಬೇಕು? ಎನ್ನುತ್ತಿದ್ದೆ. ಆಗ ನನ್ನ ಮೇಲೂ ಗದಾಪ್ರಹಾರ (ಮಾತಿನಲ್ಲಿ!) ಆಗ ಮಾವನವರು ಅವಳಿನ್ನೂ ಚಿಕ್ಕವಳು, ಏಕೆ ಜೋರಾಗಿ ಹೇಳಿ ನೋಯಿಸುತ್ತೀಯೆ? ಎನ್ನುತ್ತಿದ್ದರು. ಇಂಥ ಘಟನೆಯನ್ನು ಕಂಡು 'ಇವರು' ನನ್ನನ್ನು 'ಮಾವನ ಮುದ್ದಿನ ಸೊಸೆ' ಎಂದು ಕರೆದು ಹಾಸ್ಯಮಾಡುತ್ತಿದ್ದರು. ನನ್ನ ಮಾವನವರು ಇಂಥ ವಾದಗಳಿಗೆಲ್ಲ ಶ್ರೀಧರಾ, ಇದಕ್ಕೆಲ್ಲ ಹಿರಿಯಣ್ಣ ಇದ್ದಿದ್ದರೆ ಉತ್ತರ ಕೊಡುತ್ತಿದ್ದ ಎಂದು ಉದ್ಗರಿಸಿ ಸುಮ್ಮನಾಗುತ್ತಿದ್ದರು.

ಸೀತಾರಾಮ ಹೆಬ್ಬಾರರ ಕವಿತ್ವ

ಸೀತಾರಾಮ ಹೆಬ್ಬಾರರ ಅಣ್ಣಂದಿರಾದ ವೆಂಕಟರಮಣ ಹೆಬ್ಬಾರರು ಮತ್ತು ಹಿರಿಯಣ್ಣ ಹೆಬ್ಬಾರರಂತೆ ವಿದ್ವಾಂಸರಾಗಲು ಸಾಧ್ಯವಾಗದಿರಲು ಮನೆ ನೋಡಿಕೊಳ್ಳುವ ಜವಾಬ್ದಾರಿ ಬಿದ್ದುದೇ ಕಾರಣ. ಆದರೆ ಸೀತಾರಾಮ ಹೆಬ್ಬಾರರಲ್ಲೂ ಕವಿ ಹೃದಯ ಇತ್ತು.

ಸುಖ ದುಃಖಗಳನು ಅರಿಯದೆ ಕೆಡಬೇಡ ಮನವೆ ॥
ನಾರಿ ಸುತ ಗೃಹಭಾಗ್ಯವು ದುಃಖವು ।
ಯಾರಿಲ್ಲದ ಜೀವನವೂ ದುಃಖವು ॥
ಸೇರಿದರೆರಡು ಸಮವೆಂಬುದೆ ಸುಖವು ॥...
ಎಂಬ ತತ್ವ ಪದ,
ವಾರಣವದನನ ಭಜಿಸಿ ಭಕ್ತಿಯಲಿ
ನೀರಜ ನಯನನ ನುತಿಸಿ ಚಿತ್ತದಲಿ ॥
ಸಾರಸಭವ ರುದ್ರರಡಿಗಳ ನೆನೆದು
ಸಾರಸುನೀತಿ ಮಾರ್ಗವ ಪೇಳ್ವೆನೊಲಿದು ॥

ಎಂಬ ಜೋಗುಳವು ಅವರ ಕವಿತಾಶಕ್ತಿಗೆ ಪ್ರಮಾಣಗಳು. 'ಇವರ' ಕವಿತ್ವ ಹಾಗೂ ಹೃದಯವಂತಿಕೆ ನನ್ನ ಮಾವನವರ ಕೊಡುಗೆ.

ನಾಗಮ್ಮ

ನಾಗಮ್ಮ 'ಇವರ' ತಾಯಿ ಹಾಗೂ ನನ್ನ ಅತ್ತೆಯವರು. ಅತ್ತೆಯವರಿಗೆ ಮದುವೆಯಾದಾಗ ೧೦ ವರ್ಷ ವಯಸ್ಸು. ಮಾವನವರಿಗೆ ೩೧ ವರ್ಷ ವಯಸ್ಸು! ನಾಗಮ್ಮ ಅನಕ್ಷರಸ್ಥೆಯಾದರೂ ಮಾವನವರಿಂದ ಕಲಿತದ್ದು ಅನೇಕ, ದೇವರ ಪೂಜೆ ಮಂತ್ರದಿಂದ ಹಿಡಿದು, ಮಹಾಭಾರತ, ರಾಮಾಯಣ, ಕೃಷ್ಣಾವತಾರ, ಭಾಗವತ, ಪುರಾಣದ ಕಥೆಗಳು... ಒಂದೇ ಎರಡೇ? ಅಪಾರ ಧೈರ್ಯ, ಮನೋಬಲ ಇವರದ್ದು, ಇದೇ ಗುಣಗಳು 'ಇವರಿಗೂ' ಬಂದಿವೆ. ನಾಗಮ್ಮ ಉಳ್ಳೂರಿನಲ್ಲಿರುವಾಗ ಪಕ್ಕದ ಮನೆಯವರೊಡನೆ ಮಾತನಾಡುತ್ತಾ ನಿಂತಿದ್ದರಂತೆ, ಆಗ ನಾಗರ ಹಾವೊಂದು ಇವರ ಕೈ ಮೇಲೆಯೇ ಹರದು ಹೋಯಿತಂತೆ, ವಿಷಯ ತಿಳಿದಾಗಲೂ, "ನಾಗಪ್ಪ, ನನಗೇನು ಮಾತನಾಡುತ್ತಾನೆ?" ಎಂದು ನಿಶ್ಚಿಂತರಾಗಿದ್ದರು. ಅಂಡಿಗೆಯಲ್ಲಿರುವಾಗ ೧ ಫರ್ಲಾಂಗ್ ದೂರದಿಂದ ನೀರು ತರಬೇಕಾಗುತ್ತಿತ್ತು. ಅಲ್ಲದೆ ೨೧ ಹಸು, ಕರು, ಎತ್ತುಗಳಿರುವ ದೊಡ್ಡ ಕೊಟ್ಟಿಗೆಯನ್ನು ನೋಡಿಕೊಳ್ಳಬೇಕಾಗುತ್ತಿತ್ತು. ಪ್ರಾಣಿದಯೆಯುಳ್ಳ ನಾಗಮ್ಮನವರಿಗೆ ಹಸು, ಎತ್ತುಗಳ ಸೇವೆಯೆಂದರೆ ಅಪಾರ ಪ್ರೀತಿಯಾಗಿತ್ತು. ಮೊಮ್ಮಕ್ಕಳಿಗೆಲ್ಲ ನಾಗಮ್ಮ ದೊಡ್ಡಮ್ಮ. ಎಲ್ಲರೂ ಸದಾ ಅವರನ್ನು ಸುತ್ತುವರಿದಿರುತ್ತಿದ್ದರು. ಕತೆ ಹೇಳುವ ದೊಡ್ಡಮ್ಮನೆಂದರೆ ಮಕ್ಕಳಿಗೆಲ್ಲ ಪಂಚಪ್ರಾಣ. ಹಾಗೆಯೇ ಮಕ್ಕಳೆಂದರೆ ದೇವರ ಸಮಾನ ಎಂದು ನಂಬಿದ ನಾಗಮ್ಮನವರಿಗೆ ಮಕ್ಕಳೆಂದರೆ ಪ್ರಾಣ. ನನ್ನ ಮಕ್ಕಳು ನನ್ನ ಮಡಿಲಲ್ಲಿ ಬೆಳೆದುದಕ್ಕಿಂತ 'ದೊಡ್ಡಮ್ಮ'ನ ಕಥೆ, ಬುದ್ಧಿವಾದಗಳ ನಡುವೆಯೇ ಬೆಳೆದವರು. ಅಷ್ಟೇ ಅಲ್ಲ, ಕುಮಟಾದಲ್ಲಿರುವಾಗ ಮೊಮ್ಮಕ್ಕಳನ್ನು ಕರೆದುಕೊಂಡು ಪ್ರೊ. ಆರ್. ಎ. ಹೆಗಡೆಯವರ ಊರಾದ ಬಗ್ಗೋಣ (ಇವರ ತಮ್ಮಂದಿರೆಲ್ಲರೂ ನಮಗೆ ಆತ್ಮೀಯರು) ಎಂ. ವಿ. ಭಟ್ಟರ ತಮ್ಮನ ಮನೆ ಕೂಜಳ್ಳಿ, ಎಲ್. ಆರ್. ಭಟ್ಟರ ಊರಾದ ತೆಪ್ಪ, ಹಳ್ಕಾರ್ ಡಾಕ್ಟರರ ಮನೆ, ಮೂರೂರು... ಹೀಗೆ ಕರೆದುಕೊಂಡು ಹೋಗಿ public relation officer ಕೂಡಾ ಆಗಿದ್ದರು! ಕಾಲೇಜು ಹುಡುಗರೆಲ್ಲರಿಗೂ "ದೊಡ್ಡಮ್ಮ." ಕೊನೆಗೆ ೮೦ ವರ್ಷದವರೆಗೆ ಬಾಳಿದ ನಾಗಮ್ಮನವರು, ಸಾಯುವದಿನ ಕೂಡ ಮೊಮ್ಮಗಳ ಮಗನಿಗೆ ಕಥೆ ಹೇಳಿದ್ದರು!

To the vile dust from whence he sprang, unwept, un honoured & Unsung...!! ಎಂಬಂತೆ ಈ ವಿಶಾಲವಾದ ವಿಶ್ವದಲ್ಲಿ ಎಷ್ಟೋ ಮಹಾತ್ಮರು ಗತಿಸಿದ್ದಾರೆ ಅಲ್ಲವೇ?

ಮೂಕಜ್ಜಿ

ಇತ್ತೀಚೆಗೆ ದಕ್ಷಿಣ ಕನ್ನಡದಲ್ಲಿ ಅಲ್ಲಲ್ಲಿ ಸನ್ಮಾನಿಸಲ್ಪಟ್ಟ 'ಮೂಕಜ್ಜಿ' ಅಥವಾ ಮುಕಾಂಬಕ್ಕ 'ಇವರ' ಸೋದರತ್ತೆಯ ಮಗಳು. ಈಗ ಅವರಿಗೆ ೮೭ ವರ್ಷಗಳಾಗಿವೆ.

ಈಗಲೂ ಜನಪದ ಪದ್ಯಗಳನ್ನು ನಿಂತ ಮೆಟ್ಟಿಗೆ ರಚಿಸುತ್ತಾರೆ! ರಚಿಸಿದ್ದು ಕಂಠಪಾಠವಾಗಿ ಬಿಡುತ್ತದೆ. ಯಾರು ಕೇಳಿದರೂ ಬೇಸರವಿಲ್ಲದೆಯೇ ಹೇಳುತ್ತಾರೆ. ನಾವು ಅವರಿರುವ ಉಳ್ಳೂರಿಗೆ ಹೋದಾಗಲೆಲ್ಲ ಅವರ ಬಳಿ ಕುಳಿತು ಇಂಥ ಪದ್ಯಗಳನ್ನು ಕೇಳಿ ಸಂತೋಷಪಡುತ್ತೇವೆ. ಅವರು ಶಾಲೆಗೆ ಹೋದವರಲ್ಲ, ಮನೆಯಲ್ಲಿಯೇ ತಾಯಿ ಸರಸ್ವತಮ್ಮ ಜೈಮಿನಿ ಭಾರತ, ಕುಮಾರ ವ್ಯಾಸ ಭಾರತ ಇತ್ಯಾದಿಗಳನ್ನು ಕಲಿಸಿದ್ದರು. ಇವರ ಬಗ್ಗೆ 'ಮೂಕಜ್ಜಿ' ಬದುಕು ಸಾಹಿತ್ಯ ಎಂಬ ಗಾಯತ್ರೀ ನಾವಡರು ಬರೆದ ಪುಸ್ತಕ, ಸಂಕ್ಷಿಪ್ತವಾಗಿ ಇವರ ಬದುಕು ಹಾಗೂ ಸಾಹಿತ್ಯವನ್ನು ಪರಿಚಯಿಸುತ್ತದೆ. ಈ ಪುಸ್ತಕ ಆಡುಭಾಷೆಯಲ್ಲಿದ್ದು ಮೂಕಜ್ಜಿಯ ಬದುಕು, ಪರಿಸರ, ಜೋಗುಳ ಝಾನ್ಸಿರಾಣಿ, ಗಾಂಧಿ ಚರಮಗೀತೆ, ಹಳ್ಳಿಯ ಸ್ಟೋರು, ದ್ವಾರಕ್ಕವುಂಚುಟ್, ಕುಂದಾಪ್ರೀಗ್ ನಾನೀಗಳ್ ಹೋಯ್ಕ್, ನಾನೊಬ್ಬ ಮೀನಿನ ವ್ಯಾಪಾರಿ, ರಂಬ್ಯಂತ ಚೆಲ್ವಿಯೆ, ಯುವಜನಾಂಗ, ಮಿತಸಂತಾನ ಮುಂತಾದ ಪದ್ಯಗಳನ್ನೂ, ಅನೇಕ ನೀತಿ ಕಥೆಗಳನ್ನೂ ಹೊಂದಿದೆ. ಒಂದು ರೀತಿಯಲ್ಲಿ ಕಾರಂತರ ಮೂಕಜ್ಜಿಗೆ ಹತ್ತಿರ ಹತ್ತಿರದ ವ್ಯಕ್ತಿತ್ವ ಎನ್ನಬಹುದು. ಈ ಗ್ರಂಥಕ್ಕೆ 'ಇವರ' ಬೆನ್ನುಡಿಯಿದೆ. ಅದರಲ್ಲಿ ಮೂಕಜ್ಜಿ ಹಾಗೂ ಸರಸ್ವತಮ್ಮನವರು ಪಂಡಿತಪಾಮರರಿಗೆ ಪದ್ಯ ರಚನೆ ಮಾಡುವ ಶಕ್ತಿಯುಳ್ಳವರೆಂದು ಬಣ್ಣಿಸಿದ್ದಾರೆ. ಮೂಕಜ್ಜಿಯ ಪದ್ಯಗಳ ಒಂದೆರಡು ಸ್ಯಾಂಪಲ್ ನೋಡಿ.

ಝಾನ್ಸಿ ರಾಣಿ

ನೂರಾರ್ ವರ್ಷದ ಹಿಂದೆ
ಮೋರೊಪಂತನೆಂಬ
ಹಾರುವನ ಮಡದಿ ಬಸುರಿಯು
ಹಾರುವನ ಮಡದಿ
ಬಸುರಿ ಬಾಗೀರಥಿ
ಸೂರ್ಯನ ತೆರದಿ ಹೊಳೆದಳು
....

ನನ್ನ ಬದುಕು

ಹತ್ತು ವರುಷಕೆ ಮದುವೆ ಮಾಡಿದರು ಎನಗೆ
ಅತ್ತೆ ಮೃತ್ಯುವಿನಂತೆ ಹೊಡೆಯುತಿಹರೆನಗೆ
ಮತ್ತೆ ಹದಿನೈದು ವರುಷಕೆ ಬಸುರಿಯಾಗೆ
ಹೆತ್ತ ಶಿಶು ಗಂಡು ಮಗು ಅದು ಕೆಟ್ಟಗಳಿಗೆ....
ಒಂಟಿ ಬಾಳಾದೆನಗೆ ವೈಧವ್ಯ ಬಂತು.

ಎಳೆಯ ವಯಸ್ಸಿನಲ್ಲೇ ವಿಧವೆಯಾದರೂ ಒಂದು ಬೆಳಿಗ್ಗೆಯಿಂದ ಕೆಲಸ ಆರಂಭಿಸಿದರೆ ಮಲಗುವುದು ರಾತ್ರಿಯೆ. ಜೀವನದ ವಿವಿಧ ಮುಖಗಳನ್ನು ಕಂಡೂ ದಿಟ್ಟತನದಿಂದ ಬದುಕುತ್ತಿರುವ ಕರ್ಮಯೋಗಿನಿ ಈ ಮೂಕಜ್ಜಿ. ಈ ಮೂಕಜ್ಜಿಯ ಅಣ್ಣನ ಮಗಳೂ ಮೂಕಾಂಬಿಕೆ, ಸಹೃದಯಿ, ಮೃದು ಭಾಷಿನಿ. ಈ ಇಬ್ಬರನ್ನು 'ಇವರು' "ಮೂಕಾಂಬಿಕಾದ್ವಯರು" ಎಂದು ತುಂಬ ಗೌರವಿಸುತ್ತಿದ್ದರು. ಇವರೀರ್ವರಿಗೂ ಈ ಸಹೋದರನೆಂದರೆ ನಿರ್ವ್ಯಾಜ್ಯ ಪ್ರೇಮ. ಇಂದಿನ ಪ್ರಚಾರ ಯುಗದಲ್ಲಿ ಇಂಥ ಅದೆಷ್ಟು ಪ್ರತಿಭೆಗಳು ಕಾಡಬೆಳದಿಂಗಳಾಗಿರುವವೋ... ಎಂದು ಬೇಸರವೆನ್ನಿಸಿದರೂ ಕನಿಷ್ಠ ವೈಯಕ್ತಿಕ ದೃಷ್ಟಿಯಿಂದಲೂ ಇದು ಖಂಡಿತ ಸಾರ್ಥಕ ಬದುಕು.

ಪ್ರಾಚಾರ್ಯರಾಗಿ ಸಿದ್ದಾಪುರಕ್ಕೆ

ಸಿದ್ದಾಪುರದಲ್ಲಿ ಮಹಾತ್ಮಾಗಾಂಧಿ ಶತಾಬ್ದಿ ಕಾಲೇಜು ಆರಂಭವಾಗಿದ್ದರಿಂದ ಶ್ರೀಮಾನ್ ಗಣೇಶ ಹೆಗಡೆಯವರ ಕರೆಯ ಮೇರೆಗೆ ಶಿರಸಿಯ ವ್ಯವಸ್ಥಾಪಕ ಮಂಡಳಿಯು 'ಇವರನ್ನು' ಪ್ರಾಚಾರ್ಯರಾಗಿ ಕಳಿಸಿತು. ಹೊಸ ಕಾಲೇಜು ಜವಾಬ್ದಾರಿ, ಅಲ್ಲಿಯೂ ಸರಕಾರ ಕೊಡುವ ಅನುದಾನ ಸಾಲದೆ ಹಳ್ಳಿಗರಿಂದ ಹಣ ಸಂಗ್ರಹಿಸಬೇಕಾಯ್ತು. ನಂತರ ಸರಕಾರದ ಹಣದಿಂದ ಒಂದು ಕಟ್ಟಡ ನಿರ್ಮಾಣವಾಯ್ತು. ಆಗ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರು ಬಂದಿದ್ದರು. ಕಾಲೇಜಿನ ಕಾರ್ಯಕ್ರಮಗಳಿಗೆ ಅಂದಿನ ರಾಜ್ಯಪಾಲರಾದ ಧರ್ಮವೀರರು, ಕಾದಂಬರಿಕಾರ ತ.ರಾ.ಸು. ಉದಯಕುಮಾರ ಕೆ. ವಿ. ಸುಬ್ಬಣ್ಣ ಮುಂತಾದ ಮಹನೀಯರೆಲ್ಲರೂ ಬಂದಿದ್ದರು.

ಕೆಕ್ಕಾರು ಗಣೇಶಭಟ್ಟರು

'ಇವರು' ಕೊನೆ ಎರಡು ವರ್ಷ ನಮ್ಮೆಲ್ಲರನ್ನೂ ಸಿದ್ದಾಪುರಕ್ಕೆ ಕರೆಸಿಕೊಂಡು ಗೋವಿಂದ ಶಾನಭಾಗರ ಅಣ್ಣನ ಮನೆಯ (ಬಾಡಿಗೆಗೆ) ಲ್ಲಿ ವಾಸವಾದಾಗ ನಮ್ಮ ಮನೆಯ ಎದುರು ಕೆಕ್ಕಾರು ಗಣೇಶ ಭಟ್ಟರು 'ಮುನ್ನಡೆ'ಯ ಸಂಪಾದಕರಾಗಿ ಕೆಲಸ ಮಾಡುತ್ತಿದ್ದರು. ಹಿಂದೆ ಕೆಕ್ಕಾರು ಶಾಲೆಯ ಹೆಡ್‌ಮಾಸ್ತರರಾಗಿ ತುಂಬ ಒಳ್ಳೆಯ ಹೆಸರು ಗಳಿಸಿದವರು. ಸಜ್ಜನರು, ಮೃದು ಭಾಷಿಗರು, ಸಾಕಷ್ಟು ವಿದ್ಯಾರ್ಥಿಗಳಿಗೆ ವಿದ್ಯಾದಾನ ಗೈದು ದಾರಿ ತೋರಿದವರು. ಅವರ ಪತ್ನಿ ಸುಬ್ಬಕ್ಕ ಸಹೃದಯರೂ, ಜ್ಯೋತಿಷ್ಯಶಾಸ್ತ್ರ ಬಲ್ಲವರೂ ಆಗಿದ್ದರು. ಆದರೆ ಪಾಪ, ಅದೇನೋ ವಿಶ್ಲೇಷಣೆಯಾಗದ ರೋಗದಿಂದ ಹಾಸಿಗೆ ಹಿಡಿದಿದ್ದರು. ಮೂರು-ನಾಲ್ಕು ದಶಕಗಳಾದರೂ ವಾಸಿಯಾಗಲಿಲ್ಲ. ಅವರ ಹೆಚ್ಚಿನ ದೇಖರೇಖೆಯನ್ನು ಗಣೇಶ ಭಟ್ಟರು ತಿಲಮಾತ್ರವೂ ಬೇಸರವಿಲ್ಲದೇ ನೋಡಿಕೊಳ್ಳುತ್ತಿದ್ದರು. 'ಇವರು' ಇದನ್ನು ಯಾವಾಗಲೂ ಎಲ್ಲರೆದುರು

ಮೆಚ್ಚಿ ಹೊಗಳುತ್ತಿದ್ದರು. ರೋಗಿಯ ಶುಶ್ರೂಷೆ ಜಗತ್ತಿನಲ್ಲೇ ಮಾನ್ಯತೆ ಪಡೆದ ಮಾತಲ್ಲವೇ? ಫ್ಲಾರೆನ್ಸ್ ನೈಟಿಂಗೇಲ್ ಇದಕ್ಕಾಗಿಯೇ ಪ್ರಸಿದ್ಧಳು. ನಮ್ಮತ್ತೆಗೂ ಬಿ.ಪಿ., ಸಿಹಿಮೂತ್ರ, ಅರ್ಧಾಂಗ ವಾಯು ಎಲ್ಲ ಖಾಯಿಲೆಗಳು, ಇಬ್ಬರೂ ಬೇಸರ ಬಂದಾಗಲೆಲ್ಲ ಭೇಟಿಯಾಗುತ್ತಿದ್ದರು. ಸುಬ್ಬಕ್ಕ ಆಗ ರೇಡಿಯೋದಲ್ಲಿ ಬರುತ್ತಿದ್ದ ಹಾಡನ್ನು ಪರಿವರ್ತಿಸಿ "ನಮ್ಮ ಸಂಸಾರ ರೋಗ ಸಾಗರ, ಗುಳಿಗೆ ಔಷಧಿಗಳೇ ನಮಗಾಧಾರ..." ಎಂದು ಹಾಡಿ ತಮಾಷೆ ಮಾಡುತ್ತಿದ್ದರು. ಇತ್ತೀಚೆಗಷ್ಟೇ ತೀರಿಹೋದರು. ಗಣೇಶ ಭಟ್ಟರು ಹಿರಿಯ ಮಗನೊಂದಿಗೆ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಹಿಂದಿನ ಸ್ವಾತಂತ್ರ್ಯ ಹೋರಾಟಗಾರ ಅಪ್ಪಾಶಾಸ್ತ್ರಿಯನ್ನು ಈ ಜಿಲ್ಲೆ ಮರೆತಿದೆ ಎಂದು 'ಇವರು' ಯಾವಾಗಲೂ ಹೇಳುತ್ತಿದ್ದರು. ಇಂಥ ಸಜ್ಜನರನ್ನು ಜನ, ಜಿಲ್ಲೆ ಮರೆಯುವುದು ಅಕ್ಷಮ್ಯ ಅಪರಾಧ, ಹಾಗಾಗದಿರಲಿ ಎಂದು ಆಶಿಸೋಣ.

ಸಿದ್ಧಾಪುರದಲ್ಲಿರುವಾಗಲೇ ಸಾಹಿತ್ಯ ಕ್ಷೇತ್ರದ ದಿಗ್ಗಜಗಳೆನಿಸಿದ ಡಾ. ದ.ರಾ. ಬೇಂದ್ರೆ ಹಾಗೂ ಡಾ. ಶಿವರಾಮ ಕಾರಂತರಿಂದ 'ಇವರಿಗೆ' ಸನ್ಮಾನವಾಯ್ತು. ನನ್ನ ದೃಷ್ಟಿಯಲ್ಲಿ ಈ ಸನ್ಮಾನಗಳೆದುರು ಯಾವ ಪ್ರಶಸ್ತಿ, ಬಿರುದುಗಳೂ ಚಿಕ್ಕವು, ಏಕೆಂದರೆ ಎಂಥ ವ್ಯಕ್ತಿಗಳು ಸನ್ಮಾನಿಸಿದ್ದಾರೆ ಎನ್ನುವುದು ತೀರಾ ಮುಖ್ಯ. ಸಿದ್ದಾಪುರದಲ್ಲಿರುವಾಗಲೇ 'ಇವರು' ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾಗಿ ಯಲ್ಲಾಪುರದಲ್ಲಿ ಅಧ್ಯಕ್ಷೀಯ ಭಾಷಣ ಮಾಡಿದ್ದು ನವ್ಯ ಸಾಹಿತ್ಯಕ್ಕೆ 'ಚಾಟಿ ಏಟು' ನೀಡಿದ್ದು. ಕುಮಟಾದಲ್ಲೊಮ್ಮೆ ನಾಯಿಯೊಂದು ಕೂಗುತ್ತಾ ಬೇಂದ್ರೆಯವರೆಡೆಗೆ ಬಂದಾಗ "ಇದೇನು? ನವ್ಯ ಕಾವ್ಯ ಇದ್ದಂಗದ ಅಲ್ಲಾ ಇದು, ಕಟ್ಟಿಲ್ಲ! ಕಾವಲಿಲ್ಲ! ಎಂದು ಉದ್ಗರಿಸಿದಂತೆ, 'ಇವರೂ' ಘಂಟಾಘೋಷವಾಗಿ ನವ್ಯಕಾವ್ಯ ಓದುಗರ ಅಭಿರುಚಿ ಹಾಳುಮಾಡಿದ್ದನ್ನು, ಗುಂಪುಗಾರಿಕೆ ನೈತಿಕತೆ ಹಾಳುಮಾಡಿದ್ದನ್ನು, ಗುಂಪುಗಾರಿಕೆಯನ್ನು ನವ್ಯರು ಸೃಷ್ಟಿಸಿದ್ದನ್ನು ಖಂಡಿಸಿದರು.

ಮರಳಿ ಶಿರಸಿಗೆ

ಸಿದ್ಧಾಪುರದ ವಾಸ ಹೆಚ್ಚು ಕಡಿಮೆ 'ಇವರ' ಪಾಲಿಗೆ ಏಳು ವರ್ಷಗಳಾದರೂ 'ಇವರು' ನಮ್ಮನ್ನೆಲ್ಲ ಕರೆದುಕೊಂಡು ಹೋದದ್ದು ಸಿದ್ದಾಪುರದಲ್ಲಿ ಐದು ವರ್ಷ ಕಳೆದನಂತರ. ಹೋದ ಹೊಸತರಲ್ಲಿ 'ಇವರು' ಒಬ್ಬರೇ ಇದ್ದವರು, ನಂತರ ಮಗಳು ಪ್ರತಿಭೆಯೊಡನೆ ವಾಸಿಸತೊಡಗಿದರು. ಪ್ರತಿಭಾ ಅಲ್ಲಿಯ ಎಸ್. ವಿ. ಗರ್ಲ್ಸ್ ಹೈಸ್ಕೂಲಿನಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಳು. ನಾನು, ಉಳಿದ ಮಕ್ಕಳ ಕಾಲೇಜು ಶಿಕ್ಷಣ ಮುಗಿಯದಿದ್ದುದರಿಂದ ಅತ್ತೆಯೊಡನೆ ಹಾಗೂ ಮಕ್ಕಳೊಡನೆ ಶಿರಸಿಯಲ್ಲೇ ಇದ್ದೆ. ನಂತರ ಅಂದರೆ ೪ ವರ್ಷಗಳು ಇವರೊಡನೆ ಇದ್ದ ಪ್ರತಿಭೆಗೆ ಮದುವೆ ಗೊತ್ತಾಗಿ ಮದುವೆ ನಂತರ ಆಕೆ ಪತಿಯೊಡನೆ ಬೆಂಗಳೂರಿಗೆ ಹೋದಳು.

ಇತ್ತ ಮಕ್ಕಳ ವಿದ್ಯಾಭ್ಯಾಸ ಹೆಚ್ಚಿನ ಪಾಲು ಮುಗಿದಿತ್ತು. ಹಾಗಾಗಿ ಆಗ 'ಇವರೊಡನೆ' ಸಿದ್ದಾಪುರದಲ್ಲಿ ಎರಡೂವರೆ ವರ್ಷ ವಾಸಿಸಿದ್ದು. ಸಂಭಾಷಣೆಗಳು ನಡೆದಿದ್ದರೂ ನನ್ನ ನೆನಪು ಹಾಗೂ ಬರವಣಿಗೆಗೆ ಮಿತಿ ಇಲ್ಲಿ ಅವಶ್ಯವಾದುದರಿಂದ ಸಿದ್ಧಾಪುರದಿಂದ ಇವರು ಪ್ರಾಚಾರ್ಯತ್ವದಿಂದ ನಿವೃತ್ತರಾಗಿ ಪುನಃ ಶಿರಸಿಗೆ ಬಂದ ನಂತರದ ಕೆಲವು ಆಕರ್ಷಕ ಘಟನೆಗಳನ್ನು ಬಣ್ಣಿಸುತ್ತೇನೆ. ಶಿರಸಿಗೆ ಎಸ್.ಆರ್. ಹೆಗಡೆ ಕಡವೆಯವರ ಕರೆಯ ಮೇರೆಗೆ ಇಲ್ಲಿಯ ಕಾಲೇಜಿನ ವ್ಯವಸ್ಥಾಪಕ ಮಂಡಳಿಯಲ್ಲಿ ವ್ಯವಸ್ಥಾಪಕರಾಗಿ ಕೆಲಸ ಆರಂಭಿಸಿದರು. ಅಷ್ಟರಲ್ಲಿ ಮಗ ರಾಜುವಿಗೆ ಸಿಂಡಿಕೇಟ್ ಬ್ಯಾಂಕಿನಲ್ಲಿ ಇವರು ಸಿದ್ದಾಪುರದಲ್ಲಿ ನೌಕರಿ ದೊರೆಯಿತು. ಮಗಳು ವಿಜಯೆ ಹಾಗೂ ಮಗ ರಾಜು ಅಲ್ಲಿಯೇ ವಾಸವಾಗಿದ್ದರು. ನಾನು, ಅತ್ತೆ ಮತ್ತು ಅನಂತರಾಜು ಎಂಬವರ ಮನೆಯಲ್ಲಿ ಬಾಡಿಗೆಗೆ ಉಳಿದೆವು. ಮನೆ ಚಿಕ್ಕದಾಗಿತ್ತು ಹಾಗೂ ನೀರಿನ ತೊಂದರೆಯೂ ಇತ್ತು.

ಅದೇ ಸಮಯದಲ್ಲಿ ಅತ್ತೆಯವರಿಗೆ ಸಿಹಿಮೂತ್ರ ತೀರ ಹೆಚ್ಚಾಗಿ 'ಕೋಮಾ' ಉಂಟಾಯ್ತು. ಆಗ ಅವರನ್ನು ಹುಬ್ಬಳ್ಳಿಯ Polyclinic ಎಂಬ ಆಸ್ಪತ್ರೆಗೆ ಸೇರಿಬೇಕಾಯ್ತು. ಜೊತೆಯಲ್ಲಿ 'ಇವರೂ' ಇದ್ದರು. ಹುಬ್ಬಳ್ಳಿಯಲ್ಲಿ ೧೦ ದಿನದವರೆಗೂ ಆಸ್ಪತ್ರೆ ವಾಸವಾಯ್ತು. ಹಾಗಾಗಿ 'ಇವರ' ಆರೋಗ್ಯವೂ ಕೆಟ್ಟಿತು. ಇಬ್ಬರ ಆರೈಕೆಯನ್ನು ಮಾಡುವ ಪ್ರಸಂಗ ಬಂದುಬಿಟ್ಟಿತು. ಆ ಸಮಯ ಪಾ. ವೆಂ. ಆಚಾರ್ಯರ ಪತ್ನಿ ಲಕ್ಷ್ಮಕ್ಕ ಅಥವಾ ಅವರ ಹಿರಿಯ ಸೊಸೆ ಊಟ–ತಿಂಡಿಗಳನ್ನು ತಂದುಕೊಡುತ್ತಿದ್ದರು. ಲಕ್ಷ್ಮಕ್ಕ ಗಂಡನಿಗೆ ತಕ್ಕ ಹೆಂಡತಿ, ಕರುಣೆ, ಔದಾರ್ಯಗಳುಳ್ಳವರು. ಅವರ ಸಹಾಯವನ್ನು ನಾನೆಂದಿಗೂ ಮರೆಯಲಾರೆ. ಅತ್ತೆಗೆ ಗುಣವಾಯ್ತು. ಪುನಃ ಶಿರಸಿಗೆ ಕರೆದುಕೊಂಡು ಬಂದೆವು. ಅನಂತರ ಬಾಡಿಗೆ ಮನೆವಾಸ ಬೇಸರವಾಗಿ ಸ್ವಂತ ಮನೆ ಕಟ್ಟುವ ಆಲೋಚನೆ ಇವರಿಗೆ ಬಂದಿತು. ಕೈಯಲ್ಲಿ ೧೮ ಸಾವಿರ ರೂ. ಹಿಡಿದುಕೊಂಡು "ಅಲ್ಲಿದೆ ನಮ್ಮನೆ, ಇಲ್ಲಿ ಬಂದೆ ಸುಮ್ಮನೆ" ಎನ್ನದೇ ಸ್ವಂತ ಮನೆಯ ವಾಸವನ್ನಾರಂಭಿಸಿದೆವು! ನಮ್ಮ ಅತ್ತೆಗೆ ಸ್ವಂತ ಮನೆಯಾದದ್ದು ತುಂಬ ಸಂತಸ ನೀಡಿತು.

ಸ್ಥಿತಪ್ರಜ್ಞತ್ವ...

'ಇವರ' ಒಂದು ವಿಶೇಷ ಸ್ವಭಾವವೆಂದರೆ ಯಾರು ಏನು ಕೇಳಿದರೂ ಬೇಸರವಿಲ್ಲದೆ ವಿವರಿಸಿ ಹೇಳುತ್ತಿದ್ದರು. ನಮ್ಮ ಅತ್ತೆಯವರಿಗೆ ಓದಲು ಬರೆಯಲು ಬರುತ್ತಿರಲಿಲ್ಲ. ಆದರೆ ಯಾವ ವಿಷಯವನ್ನಾಗಲಿ ಕೇಳಿ ತಿಳಿದುಕೊಳ್ಳುವುದೆಂದರೆ ಇಷ್ಟ. ಅತ್ತೆಯವರಿಗೆ 'ಇವರು' ದಿನವೂ ದಿನಪತ್ರಿಕೆಯ ಸುದ್ದಿಯನ್ನು ಓದಿ ಹೇಳುತ್ತಿದ್ದರು.

ಹೀಗೆಯೇ ಒಮ್ಮೆ ಇಬ್ಬರು ಕಾಲೇಜು ಹುಡುಗರು ಚರ್ಚಾಸ್ಪರ್ಧೆಗೆ ವಿಷಯ ಕೇಳಿಕೊಂಡು ಹೋಗಲು ಬಂದಿದ್ದರು. 'ಇವರು' ಎರಡು ಘಂಟೆಯ ತನಕ

ವಿಷಯಗಳನ್ನು ವಿವರವಾಗಿ ತಿಳಿಸಿದರು. ಐದು ಘಂಟೆಯಿಂದ ಏಳು ಘಂಟೆಯವರೆಗೆ ವಿವರಿಸಿ, ಕಾಫಿ, ಕಷಾಯಗಳ ಸಮಾರಾಧನೆಯೂ ಆಯ್ತು. ಆಮೇಲೆ ಆ ಹುಡುಗರು ನಮ್ಮ ಮನೆಯ ಗೇಟು ದಾಟಿದ ಕೂಡಲೆ "ಅಬ್ಬಾ! ಬೋರು ಆಗಿಬಿಟ್ಟಿತು" ಎಂದು ಹೇಳುತ್ತಾ ಹೋಗುವುದು ನನಗೆ ಕೇಳಿಸಿತು. ಇದರಿಂದ ನನಗೆ ತುಂಬ ಬೇಸರವನ್ನೆಸಿ, 'ಇವರ' ಹತ್ತಿರ – "ನೀವು ಇಷ್ಟು ಹೊತ್ತು ಆ ಹುಡುಗರಿಗೆ ಹೇಳಿದ್ದು ಬೋರ್ ಆಯಿತಂತೆ, ಯಾಕೆ ಸುಮ್ಮನೆ ತೊಂದರೆ ತೆಗೆದುಕೊಂಡಿರಿ?" ಎಂದೆ. ಆಗ 'ಇವರು'– "ಹುಡುಗರಿಗೆ ಬೋರ್ ಆದರೆ ಒಳ್ಳೆಯದೇ ಆಯ್ತು. ಇನ್ನೊಮ್ಮೆ ಬರುವುದಿಲ್ಲ. ಆಸಕ್ತಿ ಇದ್ದರೆ ಮತ್ತೆ ಬರುತ್ತಾರೆ. ಅದರಲ್ಲೇನೂ ನಷ್ಟವಿಲ್ಲ" ಎಂದು ಸ್ಥಿತಪ್ರಜ್ಞರಂತೆ ಹೇಳಿದ್ದು ಕೇಳಿ ನನಗೆ ಆಶ್ಚರ್ಯವಾಯ್ತು.

ಈ ನಡುವೆ ರಾಷ್ಟ್ರಸೂತ್ರ ಗ್ರಂಥಕ್ಕೆ, ಮೂರು ಸಾವಿರ ಮಠದ ಬಹುಮಾನ, ಭಾರತೀಯ ಧರ್ಮ ಸಮ್ಮೇಳನದಲ್ಲಿ ಭಾರತೀಯ ಕನ್ನಡ ಸಾಹಿತ್ಯ ರತ್ನ ಪ್ರಶಸ್ತಿ, ಶಿರಸಿಯ ರಂಗಸಂಗ ಹಾಗೂ ಕಲಾರಂಗದ ಸನ್ಮಾನ, ರೋಟರಿ ಕ್ಲಬ್‌ನ ಸನ್ಮಾನ, ಬಾರಕೂರಿನಲ್ಲಿ ಶಿವರಾಮ ಕಾರಂತರಿಂದ ಸನ್ಮಾನ, ಕಿನ್ನಿಗೋಳಿಯಲ್ಲಿ ಯುಗಪುರುಷ ಬಳಗದವರಿಂದ ಸನ್ಮಾನ, ಕುಂದಾಪುರದ ಸಾಹಿತ್ಯೋತ್ಸವದ ಅಧ್ಯಕ್ಷತೆ... ಹೀಗೆ ಎಡೆ ಬಿಡದ ಸಾರ್ವಜನಿಕ ಸನ್ಮಾನಗಳು, ಸಮಾರಂಭಗಳು ಇದ್ದೇ ಇದ್ದವು.

ಸ್ಟೀಫನ್ ಹ್ಯೂಲರ್

ಸ್ಟೀಫನ್ ಹ್ಯೂಲರ್ ಎಂಬ ಅಮೇರಿಕನ್ ಸಂಶೋಧಕ Terracotta Figurines (ಅರಲು ಮಣ್ಣಿನ ಮೂರ್ತಿಗಳು) ಕುರಿತು ಸಂಶೋಧಿಸಲು ಸಹಾಯ ಯಾಚಿಸಿ ಬಂದನು. ವೃದ್ಧಾಪ್ಯದಲ್ಲೂ ಆತನೊಡನೆ ಕುಂಬಾರಕೊಪ್ಪಕ್ಕೆ ಕರೆದುಕೊಂಡು ಹೋಗಿ ಆ ಮೂರ್ತಿಗಳನ್ನು ತೋರಿಸಿ, ಮಾಹಿತಿ ನೀಡಿದರು. ಆಗ ಇವರ ನೆನಪಿನಶಕ್ತಿ, ತರ್ಕಶಕ್ತಿ, ಪಾಂಡಿತ್ಯಗಳಿಗೆ ಬೆರಗಾದ ಆತ 'ನಿಮಗಿದ್ದ ನೆನಪಿನ ಶಕ್ತಿ ನನಗಿದ್ದಿದ್ದರೆ, ಅದೆಷ್ಟೋ ಸಿದ್ಧಾಂತಗಳನ್ನು ಮಂಡಿಸುತ್ತಿದ್ದೆ!' ಎಂದು ಉದ್ಗರಿಸಿದ. ಕೊನೆಗೆ ಇಂಡಿಯಾ ಮ್ಯೂಸಿಯಂ (ದೆಹಲಿ) ಮುಖ್ಯಸ್ಥನಾಗಿದ್ದಾಗ, ಇವೆಲ್ಲ ಮಾಹಿತಿಗಳನ್ನೂ ಚಿತ್ರಗಳನ್ನೂ ಒಳಗೊಂಡಿದ್ದ Village India (ಹಳ್ಳಿಯ ಭಾರತ) ಎಂಬ ೧೨೭ ಛಾಯಾಚಿತ್ರಗಳುಳ್ಳ ೨೭೨ ಪುಟಗಳ ಬೃಹತ್ ಗ್ರಂಥವನ್ನು ಕಳಿಸಿದನು. ಅದರಲ್ಲಿ – "For the professor Sreedhara who was so kind to me and helpful in my research in Karnataka" - ಎಂದು ಸ್ಮರಿಸಿದ್ದಾನೆ. ತನ್ನ ಸ್ಮರಣೆಗೆಂದು ಒಂದು ಎಲೆಕ್ಟ್ರಾನಿಕ್ ಗಡಿಯಾರ ನೀಡಿದ್ದನು, ಅದು ಈಗಲೂ ನಮ್ಮ ಮನೆಯಲ್ಲಿದೆ.

ಸೂರ್ಯಾಸ್ತ

'ಇವರ' ೭೨ ವರ್ಷಗಳ ಬದುಕಿನಲ್ಲಿ ಸುಖವೆಷ್ಟು, ದುಃಖವೆಷ್ಟು ಎಂದು ಲೌಕಿಕರು ಚಿಂತಿಸಿದರೆ, 'ಬಡತನ ಚಿರಸಂಗಿಯಾಗಿ ಕಾಡಿತ್ತು' ಎಂದುಬಿಡಬಹುದು. ಆ ಬಡತನದಲ್ಲೂ ಆ ಕಾಡುಗಳು (ಅಂಡಿಗೆ ಎಂಬ ಹಳ್ಳಿಯಲ್ಲಿ ಬಾಲ್ಯ ಕಳೆದಾಗ) ಹಣ್ಣು ಹಂಪಲುಗಳು, ಕಲಬೆರಕೆಯಿಲ್ಲದ ಮನುಷ್ಯರು (ಮೈಸೂರಿನಲ್ಲಿ ಕಳೆದ ದಿನಗಳು) ಪದಾರ್ಥಗಳು ಯಥೇಚ್ಛ ದೊರಕಿತ್ತು! 'ಬಡತನಕ್ಕಿಂತ ಬೌದ್ಧಿಕ ಬಡತನ ಬಹಳ ಕೆಟ್ಟದ್ದು' ಎಂದು ಇವರು ಹೇಳುತ್ತಿದ್ದುದು ಗಾದೆಯಂತಿದೆ. ಇಂಥದ್ದೇ ಮಾತುಗಳು 'ಮಾಸ್ತಿ ಕನ್ನಡದ ಆಸ್ತಿ,' 'ಬೆಂದರೆ ಬೇಂದ್ರೆಯಾದಾನು,' 'ಕನ್ನಡದ ಮನೆಯಲ್ಲಿ ಕನ್ನಡತಿ ಯಜಮಾನಿ, ಮಿಕ್ಕ ಹೆಂಗಸರೆಲ್ಲ ಒಕ್ಕಲಷ್ಟೇ' 'ಕನ್ನಡದ ನೆಲ ಕಾದರೆ ಸಾಲದು, ನಾಲಿಗೆಯನ್ನೂ ಕಾಯಬೇಕು' ಇಂದಿನ ಓದದೇ ಬರೆಯುವವರನ್ನು ಕಂಡು 'ಕನ್ನಡದ ಕತ್ ತುರಿಗಳು' ಎಂದು ಹಾಸ್ಯ ಗೈಯುತ್ತಿದ್ದರು. ಇವರ ಕನ್ನಡವನ್ನು ನಡುವಿಲ್ಲದ ಕನ್ನಡ ಎಂದು ತಮಾಷೆ ಮಾಡುತ್ತಿದ್ದರು. ಇನ್ನು ಮೈಸೂರಿನಲ್ಲಿ ವಾರಾನ್ನ, ಆಶ್ರಯ ಸಮಸ್ಯೆ, ಕಾಲೇಜು ಶುಲ್ಕ ಕಟ್ಟುವ ಸಮಸ್ಯೆ (ಎಂ. ಎ. ಪರೀಕ್ಷೆಗೆ ಶುಲ್ಕ ಕಟ್ಟಲು ಹಣವಿಲ್ಲದೆ ಬಿ. ಎ. ಆನರ್ಸ್‌ನಲ್ಲಿ ದೊರೆತ ಎರಡು ಬಂಗಾರದ ಪದಕಗಳಲ್ಲಿ ಒಂದನ್ನು ಮಾರಿದರು) ಒಂದೆಡೆಯಾದರೆ ಅಕ್ಕರೆಯ ಮಳೆಗರೆಯುತ್ತಿದ್ದ ಪ್ರಕಾಂಡ ಪಂಡಿತರೂ, ಹೃದಯವಂತರೂ, ಸಚ್ಚಾರಿತ್ರ್ಯ ಸಂಪನ್ನರೂ ಆದ ಗುರುಗಳ ಸಹವಾಸ, ಶಿಕ್ಷಣ, ಗ್ರಂಥಾಲಯದ ಪುಸ್ತಕಗಳನ್ನೋದುವ ಭಾಗ್ಯ ಇನ್ನೊಂದೆಡೆ. 'ಇವರ' ವ್ಯಕ್ತಿತ್ವವನ್ನು ಬದಲಾಯಿಸಿ ಬೆಳೆಸಿದ್ದು ಗಮನಾರ್ಹ! 'ಇವರ' ಈ ಎಲ್ಲೂ ನಿಲ್ಲದೇ ಹರಿಯುತ್ತಿದ್ದ ಜೀವನೋತ್ಸಾಹವನ್ನು ಕಂಡು ಇವರ ಗುರುಗಳಾದ ಡಿ.ಎಲ್. ಎನ್. 'ಶ್ರೀಧರಾ, ನಿನ್ನದು buoyant personality (ಉತ್ಸಾಹಶೀಲ ವ್ಯಕ್ತಿತ್ವ) ಅದನ್ನು ಉಳಿಸಿಕೋ' ಎಂದು ವಿಶ್ಲೇಷಿಸಿ ಹೇಳಿದ್ದರು. ಈ ಶಿಷ್ಯ ಅದನ್ನು ಕೊನೆತನಕ ಉಳಿಸಿಕೊಂಡಿದ್ದರು. ಅದು ನಮ್ಮ ನಿಮ್ಮಂಥವರಿಗೆ ಒಗಟಾಗುವುದು ಸಹಜ.

> "ಬಡತನ ಒಡೆತನ ಕಡೆತನಕುಳಿದಾವೇನ?
> ಎದೆ ಹಿಗ್ಗು ಕಡೆ ಮಟ್ಟ
> ಬಾಳಿನ ಕಡಲಾಗ ಅದನ ಮುಳುಗಿಸಬ್ಯಾಡ
> ಕಡಗೋಲು ಹಿಡಿಹುಟ್ಟ"

ಬೇಂದ್ರೆಯವರ ಈ ತತ್ವಜ್ಞಾನವೇ ಅವರನ್ನು ಬೆಳೆಸಿದ್ದು, ಉಳಿಸಿದ್ದು, ಜ್ಞಾನ ನೀಡುವ ಜೀವನ ಸಾರ್ಥಕ್ಯದ ಮನೋಭಾವದಿಂದ ದುಃಖ, ನಿರಾಸೆಗಳ ಪರಿಣಾಮವು ಗೌಣವೂ ತಾತ್ಕಾಲಿಕವೂ ಆಗಿ ಬಿಡುತ್ತದೆ. ಸುಖ–ದುಃಖಗಳಿಗೆ, ತಿರಸ್ಕಾರ–ಪುರಸ್ಕಾರಗಳಿಗೆ ವಿಶೇಷ ಅರ್ಥಗಳು ಉಳಿಯುವುದಿಲ್ಲ, ಏಕೆಂದರೆ ಯೋಗಿಗಳೆನ್ನುವಂತೆ "ದೇಹ ಸತ್ತ ನಂತರ ಆತ್ಮ ಕೊಂಡೊಯ್ಯುವುದು ಕೇವಲ ಪ್ರಭಾವಗಳನ್ನು (Impres-

sions)" ಅಲ್ಲವೇ? ೧೯೮೮ರ ಕೊನೆಯಿಂದ ೧೯೮೯ರ ಅಕ್ಟೋಬರ್‌ವರೆಗೆ ದೇಹ ದುರ್ಬಲವಾಗುತ್ತಾ ಬಂದಿತ್ತು. ಆಗ ಮಗ ರಾಜುವು ಹೆಚ್ಚುಕಡಿಮೆ ಒಂದು ವರ್ಷ Story of Philosophy, Introduction to Philosophy, Indian Philosophy, ಸದ್ಧರ್ಮ ಭಾಷ್ಯ, Illusion and Reality, Swami Vivekananda's works, Personality, Tagore Einstein, Secret of Vedas, Life Divine, Ramana, Common Sense of Science, National value of Art, Indian Art, Anjali, Shankara's Teachings in his own words, Essays on philosophy, Life after death... ಮುಂತಾದ ಪುಸ್ತಕಗಳನ್ನು ಅವರೆದುರು ಓದಿ, ಅವರೊಡನೆ ಗುರು–ಶಿಷ್ಯ ಸಂಬಂಧವನ್ನು ಸ್ಥಾಪಿಸಿದ್ದ. ಈ ಓದು ಅವರಿಗೆ ತುಂಬಾ ಸಮಾಧಾನ ತಂದಿತ್ತು. ಆದರೆ ಅವಿಶ್ರಾಂತವಾಗಿ ದುಡಿದ ದೇಹ ಸವೆದಿತ್ತು. ಕೊನೆಗೆ Blood Urea ಖಾಯಿಲೆಗೆ ತುತ್ತಾದರು. ಹುಬ್ಬಳ್ಳಿಯ ವಿವೇಕಾನಂದ ಆಸ್ಪತ್ರೆ, ಸಂಜೀವಿನಿ ಆಸ್ಪತ್ರೆ, ಮಂಗಳೂರಿನ 'ಭಟ್ಸ್ ನರ್ಸಿಂಗ್ ಹೋಂ'ನ ಚಿಕಿತ್ಸೆಗಳಾದವು. ಕೊನೆಗೆ ಸುಖ–ದುಃಖಗಳನ್ನು ಸ್ಥಿತಪ್ರಜ್ಞನಂತೆ ಸಹಿಸಿ, ನೀಲಕಂಠನಂತೆ ನುಂಗಿ, ಜ್ಞಾನ, ನೀತಿ, ಹೃದಯ ಸಂಪತ್ತುಗಳ ಆಗರವಾದ ಜೀವ ೨೪.೪.೧೯೯೦ ರ ರಾತ್ರಿ ೧೨ ಘಂಟೆಗೆ ತನ್ನ ಯಾನ ಮುಗಿಸಿತ್ತು... ಕೊನೆ ಉಸಿರೆಳೆಯುತ್ತಿರುವಾಗ ರಾಜು ಹೇಳಿದಂತೆ ನಾನು "... ಜಗತ್ತುಚ್ಛಮೇತತ್ ಸಮಸ್ತಮ್ ತದನ್ಯತ್, ತದೇಕೋವಶಿಷ್ಟಃ ಶಿವಃ ಕೇವಲೋಹಂ..." ಎಂಬ ಶ್ಲೋಕವನ್ನು ಹಾಡಿ ಈ ಮಹಾನ್ ಆತ್ಮವನ್ನು ಬೀಳ್ಕೊಟ್ಟೆನು. ಇದೇ ಶ್ಲೋಕವನ್ನು 'ಇವರೂ ಕಂಚಿನ ಕಂಠದಿಂದ ಹಾಡುತ್ತಿದ್ದರು. ಈಗಷ್ಟೇ ಕೇಳಿದಂತಿದೆ. ಹೊರನೋಟಕ್ಕೆ 'ಇವರು' ಸಾಮಾನ್ಯರಂತೆ ಕಂಡರೂ ಇವರ ಒಳಗಿನ ಆಳವನ್ನು ಅರಿಯಲು ಸ್ವಲ್ಪವಾದರೂ ಲೋಕೋತ್ತರ ದೃಷ್ಟಿ ನಮಗೂ ಬೇಕು. ಬರುವ ಸುಖವಾಗಲೀ, ದುಃಖವಾಗಲೀ ಇಂಥ ಮನಃಸ್ಥಿತಿಗೆ ತರುವುದಾದರೆ ಅವುಗಳಿಗೆ 'ನಮೋ' ಎನ್ನೋಣವೇ? ಇವರೇ ಬರೆದಂತೆ – "ಒಲುಮೆ ಉಂಡು ಉಲಿಯುವಾ, ಹಕ್ಕಿ ನಾವು ನಲಿಯುವಾ, ನಾವು, ದೇವ ಹರಸಿ ಹಾರಬಿಟ್ಟ ಗಿಳಿಗಳು" ಎಂದು ಜೀವಯಾನದುದ್ದಕ್ಕೂ ಹಾಡಿದ ಶ್ರೀಧರಗಾನವೇ ನಮ್ಮೆಲ್ಲರಿಗೂ ಸ್ಫೂರ್ತಿಯ ಸೆಲೆ, ಜ್ಞಾನ ಜನ್ಯ ವಿವೇಕದ ಶ್ರುತಿಯಲ್ಲಿ...!!

ಎಲ್ಲೊ ಇಲ್ಲ ಎದೆಯಲ್ಲೆ ಇರುವಿರಿದೊ
ಎಲ್ಲಕೂ ಸಾಕ್ಷಿಯಾಗಿ
ಜೊಳ್ಳು–ಕಾಳು ಬರಿಸುಳ್ಳು–ಸತ್ಯ
ಕಾಣಿಸಲು ಅಕ್ಷಿಯಾಗಿ
ನಿಮ್ಮ ಬಾಳಸಂದೇಶ ತಲುಪಿತಿದೊ
ಪಡೆದೆ ಯಕ್ಷಿಯಾಗಿ!

ಸಂಸ್ಮರಣೆ

ಪ್ರೊ. ಬಿ.ಎಚ್.ಶ್ರೀಧರ ಕುರಿತು

ಶ್ರೀಧರ್ ಅವರ ಬರಹ ದೊಡ್ಡದು, ತಮ್ಮ ೭೨ ವರ್ಷದ ಜೀವನದಲ್ಲಿ ಕಾವ್ಯ, ನಾಟಕ, ವಿಮರ್ಶೆ, ವೈಚಾರಿಕ, ವಿನೋದ, ವಿಡಂಬನೆ, ಭಾಷಾಂತರ, ಆಧಾರ ಸಾಹಿತ್ಯ, ಹೀಗೆ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಕೃಷಿ ಮಾಡಿ ಪ್ರಶಸ್ತಿ ಮತ್ತು ಗೌರವಗಳಿಗೆ ಪಾತ್ರರಾಗಿದ್ದಾರೆ ಎನ್ನುವುದು, ಒಂದು ರೀತಿಯಲ್ಲಿ ಅವರ ಸಾಮಾನ್ಯ ಪರಿಚಯ. ಈ ಪರಿಚಯ ಕನ್ನಡ ಜನತೆಯ ಭಾವ ಮತ್ತು ಬುದ್ಧಿಗಳ ಲೋಕಕ್ಕೆ ಏನನ್ನಾದರೂ ಸೇರಿಸುತ್ತದೆ ಎಂದು ನಾನು ಅಂದುಕೊಂಡಿಲ್ಲ. ಆದರೆ ಅವರು ಸಾಗಿಸಿದ ನಿರ್ವ್ಯಾಜ, ಪ್ರಜ್ಞಾಪೂರ್ವ ಮತ್ತು ತಪಸ್ಸಿನಂಥ ಬದುಕು ಇಂದು ರಿಂಗಣಗಳನ್ನು ಸೃಷ್ಟಿಸಿದೆ ಎನ್ನುವುದು ಮುಖ್ಯವಾಗಬೇಕು. ಒಂದು ಕ್ಷಣ ಪ್ರೊ॥ ಬಿ.ಎಚ್. ಶ್ರೀಧರ್ ರಚಿಸಿದ ಸಾಹಿತ್ಯವನ್ನ ಗಮನಿಸಿದರೆ ನಮಗೆ ಅಚ್ಚರಿ ಹುಟ್ಟುವುದು. ಅವರು ಆಯ್ದುಕೊಂಡ ವಿಚಾರ ಮತ್ತು ವಿಷಯಗಳನ್ನು ಗಮನಿಸಿದಾಗ, ಎಲ್ಲ ಕಾಲಕ್ಕೂ ಮಾರ್ಗದರ್ಶಿಯಾಗಬಲ್ಲ ಬದುಕಿನ ಎಲ್ಲಾ ಆಯಾಮಗಳಿಗೂ ಮೂಲ ಎನಿಸಬಲ್ಲ ಚಿರಮೌಲಿಕ ವಿಷಯಗಳನ್ನೇ ಕೇಂದ್ರವಾಗಿರಿಸಿಕೊಂಡೆ ಅವರು ಸಾಹಿತ್ಯ ಕೃಷಿ ಕೈಗೊಂಡಿದ್ದಾರೆ. ಇಂಥ ಒಂದು ಆಯ್ಕೆಯ ಕಾರಣ ಅವರನ್ನು ರೂಪಿಸಿದ ಶಿಕ್ಷಣ ಮತ್ತು ಶಿಕ್ಷಕರು.

ವಾಹನ ಸೌಕರ್ಯಗಳಿಲ್ಲದ ಆ ದಿನಗಳಲ್ಲಿ ಒಂದು ದಿಕ್ಕಿನಿಂದ ಇನ್ನೊಂದು ದಿಕ್ಕಿಗೆ ಹತ್ತಾರು ಮೈಲಿ ನಡೆದುಕೊಂಡು ಹೋಗಿ, ಬಡತನದಲ್ಲಿ ಬೆಂದು, ಸರಳತೆಯನ್ನು ಮೈಗೂಡಿಸಿಕೊಂಡು, ಪರೋಪಕಾರ್ಥಂ ಮಿದಂ ಶರೀರಂ ಎನ್ನುವುದನ್ನೆ ಧ್ಯೇಯ ವಾಕ್ಯವಾಗಿಸಿಕೊಂಡು, ಮಾರಣಾಂತಿಕ ಕಾಯಿಲೆ ಕಸಾಲೆಗಳಿಂದ ಜೀವ ರಕ್ಷಿಸಿಕೊಂಡು ಅವರು ಗೈದ ಸಾಧನೆ ಎಂಥವರಲ್ಲೂ ಅಚ್ಚರಿಯನ್ನ ಮೂಡಿಸುತ್ತದೆ. ಪ್ರೊ॥ ಬಿ.ಎಚ್. ಶ್ರೀಧರ್ ಅವರನ್ನು ರೂಪಿಸಿದ ಮಹಾನುಭಾವರುಗಳೇ ಅಂಥವರು. ಸಿ.ಆರ್. ನರಸಿಂಹ ಶಾಸ್ತ್ರಿಗಳು, ಎ.ಎಸ್. ನರಸಿಂಹಯ್ಯನವರು, ಎ.ಆರ್. ಕೃಷ್ಣಶಾಸ್ತ್ರಿಗಳು, ಎಂ.ಎಚ್.ಕೃಷ್ಣರು, ಡಿ.ಎಲ್. ನರಸಿಂಹಚಾರ್ಯರು, ಎಸ್. ಶ್ರೀಕಂಠಶಾಸ್ತ್ರಿಗಳು, ಡಿ. ವಾಸುದೇವಾಚಾರ್ಯರು, ಕೆ. ವೆಂಕಟಪ್ಪನವರು, ನಾ. ಕಸ್ತೂರಿಗಳು, ಸತ್ಯಗಿರಿನಾಥನ್ನರು ಮತ್ತು ಕೆ.ಸಿ. ರಾಲೊ ಇವರು ಬಿ.ಎಚ್. ಶ್ರೀಧರ್‌ರನ್ನು ಅಷ್ಟೇ ಅಲ್ಲ, ಇದೇ ಕನ್ನಡ ಬೌದ್ಧಿಕತೆಯನ್ನು, ವೈಚಾರಿಕತೆಯನ್ನು ಸಂಸ್ಕೃತಿಯನ್ನು ನಿರ್ದೇಶಿಸಿದ ಮಹಾನುಭಾವರುಗಳು. ಇನ್ನೊಂದೆಡೆ

ಬೇಂದ್ರೆ, ಕಾರಂತ, ಡಿ.ವಿ.ಜಿ., ವಿ.ಕೃ. ಗೋಕಾಕ್, ಗೋಪಾಲಕೃಷ್ಣ ಅಡಿಗ, ಮಾಸ್ತಿ ಡಿ.ಎಲ್. ನರಸಿಂಹಚಾರ್, ಸದಾಶಿವರಾಯರು, ರಾಮರಾವ್, ಬಿ.ಎಚ್. ಶ್ರೀಧರ್ ಅವರ ಸಾಹಿತ್ಯ ಲೋಕದ ಸಹಪಾಠಿಗಳು. ಈ ಗುಂಪು ಅಷ್ಟೇ, ಇದು ಇಡೀ ನವೋದಯ, ನವ್ಯ ಕನ್ನಡ ಸಾಹಿತ್ಯದ ಆಶೋತ್ತರಗಳನ್ನು ನಿರ್ಧರಿಸಿದ ಮನಸ್ಸು. ಬಿ.ಎಚ್. ಶ್ರೀಧರ್ ಈ ಎರಡು ಗುಂಪುಗಳ ಮಧ್ಯ ತಮ್ಮ ಜೀವನ ಮತ್ತು ಸಾಹಿತ್ಯದ ದಾರಿಯನ್ನು ನಿರ್ಧರಿಸಿಕೊಂಡು ಈ ಎರಡು ಗುಂಪುಗಳ ಗೌರವವನ್ನು ಹೆಚ್ಚಿಸುವ ನಿಟ್ಟಿನಲ್ಲಿಯೇ ತಮ್ಮ ಸಾಹಿತ್ಯವನ್ನ ಸೃಷ್ಟಿಸಿದ್ದಾರೆ. ಅವರ ಬರಹ ಎನುವುದು ಒಂದು ರೀತಿಯಲ್ಲಿ ವ್ಯಸನವಲ್ಲದ ದಾರಿ. ಬರಹದ ತುಡಿತಕ್ಕಿಂತ ಭವಿಷ್ಯದ ಕಾಳಜಿ ಇಲ್ಲಿ ಎದ್ದು ಕಾಣುತ್ತದೆ. ಸಾಹಿತ್ಯದ ವ್ಯಾಪಾರಕ್ಕಿಂತ ಅದರ ಮೌಲ್ಯಗಳು ಅವರಿಗೆ ಪ್ರಶ್ನೆಗಳಾಗಿ ಕಾಡಿದಂತಿದೆ.

– ಡಾ. ರಾಜಶೇಖರ ಮಠಪತಿ (ರಾಗಂ)

ಮಲೆನಾಡಿನ ಜ್ಞಾನಸಿರಿ : ಶಿರಸಿಯ ಪ್ರೊ.ಬಿ.ಎಚ್.ಶ್ರೀಧರ

ನಾಡಿನ ಹಿರಿಯ ಸಾಹಿತಿ ಕವಿಯತ್ರಿ ಶ್ರೀಮತಿ ಸುಮಿತ್ರಾ ಹಲವಾಯಿ ಅವರಿಗೆ ಬಿ.ಎಚ್.ಶ್ರೀಧರ ಅವರ ಕಾವ್ಯ ಪ್ರಯೋಗಗಳನ್ನು, ಶೈಕ್ಷಣಿಕ ಆಶಯಗಳನ್ನು, ಸಮಗ್ರ ಸಾಹಿತ್ಯವನ್ನು ಭವ್ಯ ಸಂಪುಟದಲ್ಲಿ ಪ್ರಕಟಿಸುವ ಬೃಹದಾಸೆ. ಸುಮಾರು ಐದು ಸಾವಿರದ ಎರಡುನೂರು ಪುಟಗಳಷ್ಟು ಸಾಗುವ ಓಟ ಅವರದಾಗಿದೆ. ಏಕೆಂದರೆ ಶ್ರೀಮತಿ ಸುಮಿತ್ರಾ ಹಲವಾಯಿ ಅವರು ಪ್ರೊ॥ ಶ್ರೀಧರ ಅವರ ಆಶೀರ್ವಾದದ ಛತ್ರದಲ್ಲಿ ಬೆಳೆದ ಶಿಷ್ಯೆ. ತನ್ನ ಗುರುವಿನ ಬಗ್ಗೆ ಸುಮಿತ್ರಾ ಅವರಿಗೆ ಅನನ್ಯ ಗೌರವ. ಅವರ ಮಾರ್ಗದರ್ಶನವು ಸುಮಿತ್ರಾ ಅವರಿಗೆ ಚೇತನ ನೀಡಿದೆ, ಈಗ ಹಿರಿಯ ಮಹಿಳಾ ಸಾಹಿತಿಯನ್ನಾಗಿ ಮಾಡಿದೆ. ಶ್ರೀಮತಿ ಸುಮಿತ್ರಾ ಅವರು ಪ್ರಾಧ್ಯಾಪಕ ವೃತ್ತಿಯೊಂದಿಗೆ ಕಲೆ ಸಾಹಿತ್ಯದ ಸೇವೆಯನ್ನೂ ಮಾಡಿದ್ದಾರೆ. ನಾಡಿನ ಹಾಗೂ ರಾಷ್ಟ್ರದ ಪ್ರಶಸ್ತಿಗಳು ಅವರನ್ನು ಹುಡುಕಿ ಬಂದಿವೆ. ಸುಮಾರು ೩೦ಕ್ಕೂ ಹೆಚ್ಚು ಪುಸ್ತಕಗಳು ಅವರಿಂದ ಸಾರಸ್ವತ ಲೋಕಕ್ಕೆ ಕೊಡುಗೆಯಾಗಿವೆ. ಅಂಥ ಶ್ರೀಮತಿ ಸುಮಿತ್ರಾ ಅವರು ಪ್ರೊ॥ ಶ್ರೀಧರ ಬಿ.ಎಚ್. ಅವರ ಬಗ್ಗೆ ಒಂದೆರಡು ಅನಿಸಿಕೆಗಳನ್ನು ಬರೆಯಲು ನನ್ನನ್ನು ಕೋರಿದ್ದರು. ಪುರಾತತ್ವವಿದನಾದ ನನ್ನ ಕ್ಷೇತ್ರ ಸಾಹಿತ್ಯವಾಗಲಾರದು. ಆದರೂ ಸುಮಾರು ಮೂರು ದಶಕಗಳಷ್ಟು ಹಿಂದೆ ಪ್ರೊ.ಬಿ.ಎಚ್.ಶ್ರೀಧರ ಅವರು ಶಿರಸಿ ಕಾಲೇಜಿನ ಪ್ರಿನ್ಸಿಪಾಲರಾಗಿದ್ದಾಗ, ಆ ವಿದ್ಯಾಸಂಸ್ಥೆಯ ಯಾವುದೋ ಒಂದು ಸಮಾರಂಭಕ್ಕೆ ಡಾ॥ ಎಸ್.ಆರ್.ರಾವ್, ಹಿರಿಯ ಖ್ಯಾತ ಪುರಾತತ್ವವಿದರೂ ಹಾಗೂ ನನ್ನ ಪ್ರಾಚ್ಯ ವಿದ್ಯಾಗುರುಗಳೂ ಆದಂಥ, ಅವರೊಂದಿಗೆ ನಾನೂ ಕೂಡ ಬನವಾಸಿ ಕ್ಷೇತ್ರಕಾರ್ಯ ಮುಗಿಸಿ, ಆ ಮಹಾವಿದ್ಯಾಲಯಕ್ಕೆ ಹೋಗಿದ್ದೆ. ಆಗ ನನ್ನ ಹಾಗೂ ಪ್ರೊ॥ ಬಿ.ಎಚ್.ಶ್ರೀಧರ ಅವರ ಭೆಟ್ಟಿ ಕ್ಷಣಿಕ ಕಾಲ. ಆಗ ನಾನು ಕಂಡುದು ಪ್ರೊ.ಶ್ರೀಧರರಲ್ಲಿ ಗಾಂಭೀರ್ಯ, ವಿದ್ಯಾಪಕ್ವತೆ, ವಾಕ್–ಪಟುತ್ವ, ಸಾಹಿತ್ಯ ಸಂಪದ, ಘನಶಬ್ದ ಭಂಡಾರ, ಈ ತರಹದ ಗಟ್ಟಿ ಪಾರ್ಶ್ವದಲ್ಲಿ ತಮ್ಮ ಶೈಕ್ಷಣಿಕ ಪಾತ್ರವಹಿಸಿದ ಪ್ರೊ.ಶ್ರೀಧರ ಅವರು ಸಾರಸ್ವತ ಲೋಕಕ್ಕೆ ಕೊಟ್ಟ ಕೊಡುಗೆ, ಸಾಹಿತ್ಯ, ವಾಙ್ಮಯ, ಗಟ್ಟಿ ಗಟ್ಟಿಯಾದ ಕಬ್ಬಿಣದ ಕಡಲೆ, ಅರ್ಥೈಸುವುದು ಅಷ್ಟು ಸುಲಭವಲ್ಲ. ಸರಳ ಭಾಷೆಯಲ್ಲ, ಶ್ರೇಷ್ಠ ಭಾಷೆ. ಉದ್ದಾಮ ಪಂಡಿತರೂ, ಶ್ರೇಷ್ಠ ಲೇಖಕರೂ, ಪರಿಣಿತ ಪ್ರಾಧ್ಯಾಪಕರೂ ಆದ ಪ್ರೊ॥ ಬಿ.ಎಚ್.ಶ್ರೀಧರ ಅವರ ಕಾವ್ಯ ಕೃತಿಗಳ ಬಗ್ಗೆ ಅಭಿಪ್ರಾಯಗಳನ್ನು ಕನ್ನಡ ಕಾವ್ಯ ದಿಗ್ಗಜರು – ಹಳೆ ತಲೆಮಾರಿನ ಡಾ॥ ರಂ.ಶ್ರೀ.ಮುಗಳಿ, ಡಾ॥ ದ.ರಾ.ಬೇಂದ್ರೆ,

ಡಾ॥ ಜಿ.ವೆಂಕಟಸುಬ್ಬಯ್ಯ, ಡಾ॥ ಹಾ.ಮಾ.ನಾಯಕ, ಡಾ॥ ಸ.ಸ.ಮಾಳವಾಡ, ಡಾ॥ ಡಿ.ಎಸ್.ಕರ್ಕಿ ಮುಂತಾದವರು ವ್ಯಕ್ತಪಡಿಸಿದ್ದಾರೆ. ಅವುಗಳನ್ನು ಈ ಗ್ರಂಥದಲ್ಲಿ ಎಲ್ಲೋ ಕಾಣಬಹುದು.

ಡಾ॥ ಬಿ.ಎಚ್.ಶ್ರೀಧರ ಅವರಿಗೂ ಶಿಕ್ಷಣಕ್ಕೂ ತಳಕು ಮಳಕು, ಆದಾಗಿ, ಪ್ರಾಚೀನ ಶಿಕ್ಷಣದಲ್ಲಿ ಒಂದು ಇಣುಕು.

ಭಾರತದ ಪ್ರಾಚೀನ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ರೀತಿಯ ವ್ಯವಸ್ಥೆಗಳಿದ್ದವು. ಅಗ್ರಹಾರ, ಘಟಿಕಾಸ್ಥಾನಗಳು, ಬ್ರಹ್ಮಪುರಿಗಳು, ದೇವಾಲಯಗಳು, ಮಠಗಳು ಮುಂತಾದವು ಈ ದಿಶೆಯಲ್ಲಿ ಮುಖ್ಯ ಪಾತ್ರವಹಿಸಿದ್ದವು. ಬೌದ್ಧ ಕಾಲದಲ್ಲಿ ಬುದ್ಧವಿಹಾರಗಳು, ಬೌದ್ಧ ವಿಶ್ವವಿದ್ಯಾಲಯಗಳು – ತಕ್ಷಶಿಲಾ, ನಾಲಂದಾ, ಸಾಂಚಿ, ಬನವಾಸಿ, ನಾಗಾರ್ಜುನ ಕೊಂಡ – ಇತ್ಯಾದಿಗಳು ವ್ಯಕ್ತಿಚಿಂತನೆಯ ಜೊತೆಗೆ ಹೊಂದಿದ ನಿರ್ಮಾತೃ ಪರಾಶಕ್ತಿಯ ವ್ಯಾಪ್ತಿಯ ಬಗ್ಗೆ ಪರಾಮರ್ಶೆ ಕೈಕೊಂಡ ಆಧ್ಯಾತ್ಮ ಚಿಂತನದ ಮೈಲುಗಲ್ಲುಗಳಿವು. ಅವುಗಳೆಲ್ಲ ಶಿಕ್ಷಣ ಕೇಂದ್ರಗಳಾಗಿ ಅಜ್ಞಾನ–ವಿಪರೀತ ಜ್ಞಾನಗಳನ್ನು ಹೋಗಲಾಡಿಸಿ ತತ್ವಜ್ಞಾನದಿಂದ ಆಯಾ ವ್ಯಕ್ತಿಗೆ ಯೋಗ್ಯವಾದ ಸ್ವರೂಪಾನಂದವನ್ನು ಅನುಭವಕ್ಕೆ ತಂದು, ಆತನನ್ನು ಅನುಭಾವಿಯನ್ನಾಗಿ ಮಾಡಿವೆ.

ಇದೇ ತರಹದ ಪರಂಪರೆಯನ್ನು, ಶೈಕ್ಷಣಿಕ ಚೇತನವನ್ನು ಹೆಚ್ಚು ಕಡಿಮೆ ನಮ್ಮ ಸಮಕಾಲೀನರ ವರೆಗೂ, ಭಾರತದ ಆಯಾ ಪ್ರಾದೇಶಿಕ ಸೀಮೆಗಳಲ್ಲಿ ಕಾಯ್ದುಕೊಂಡು ಬಂದುದು ಸಂಸ್ಕೃತಿಯ ಜೀವಂತಿಕೆ ಲಕ್ಷಣವಾಗಿದೆ. ಹೆಚ್ಚು ಹಸುರಿನ ಮಲೆನಾಡಿನ ಮಧ್ಯದಲ್ಲಿ ಆಧುನಿಕ ಶಿಕ್ಷಣ ಕೇಂದ್ರವೊಂದು ಬೆಳೆದಿದೆ. ಅದು ಪ್ರೊ॥ ಬಿ.ಎಚ್.ಶ್ರೀಧರ ಅವರ ಶಿರಸಿಯ – ಉತ್ತರ ಕನ್ನಡ ಜಿಲ್ಲೆಯ ಶಿರಸ್ಸಿನಂತಿರುವ ಕಲಾ ಮಹಾವಿದ್ಯಾಲಯ. ಸಮರ್ಪಣ ಭಾವದ ಶಿಕ್ಷಣವೆತ್ತ ಪ್ರೊ॥ ಶ್ರೀಧರ ಅವರು ನೀರೂಡಿಸಿ ಬೆಳೆಸಿದ ಈ ಶಿಕ್ಷಣ ಕೇಂದ್ರ ವೃಕ್ಷ ದೊಡ್ಡದಾಗಿ ಬೆಳೆಯುತ್ತ, ಅನೇಕ ವಿದ್ವಾಂಸರನ್ನು, ಕಲಾವಿದರನ್ನು, ಸಂಶೋಧಕರನ್ನು, ಶಿಕ್ಷಕರನ್ನು ನಿರ್ಮಿಸಿ, ನಾಡಿಗೆ ಹಾಗೂ ದಿಗ್ದೇಶಗಳಿಗೆ ಕೀರ್ತಿ ತಂದಿದೆ. ಈ ಸಂಸ್ಥೆ ಹಾಗೂ ಅಲ್ಲಿಯ ಗುರುಶಿಷ್ಯರ ಸಂಬಂಧಗಳು, 'ವರ್ಣಮಾತ್ರಂ ಕಲಿಸಿದಾತಂ ಗುರು' ಎಂಬ ಭಾವಗಳೊಂದಿಗೆ ಬೆಳೆದಿವೆ. 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮೂಕುತಿ' ಎಂಬಂತೆ ಅಲ್ಲಿಯ ಶಿಷ್ಯಂದಿರರ ಭಾವ. 'ಪರಾಜಿತನಾಗಿ' ತನ್ನಗಿಂತಲೂ ತನ್ನ ಶಿಷ್ಯ ಮುಂದೆ ಹೋಗಬೇಕೆಂಬ ಭಾವ ಆ ಸಂಸ್ಥೆಯ ಎಲ್ಲಾ ಗುರುಗಳಲ್ಲಿ. ಈ ಶಿಕ್ಷಣದ ಮೂಲ ನಾಡಿಯನ್ನು ಹಿಡಿದವರು, ಬೆಳೆಸಿದವರು ಪ್ರೊ॥ ಬಿ.ಎಚ್.ಶ್ರೀಧರ ಅಂತಹವರು.

"......ದೊಡ್ಡವರು! ದೊಡ್ಡವರದೆಲ್ಲವೂ ದೊಡ್ಡದೆಂಬುವ ಮಾತು ಸಹ
......ಅವರ ಕೃತಿ ಘನ, ಅವರ ವಿಕೃತಿ ಘನ, ಎಲ್ಲವೂ ಘನ!
ದೊಡ್ಡವರು..." (ಡಾ.ದ.ರಾ.ಬೇಂದ್ರೆ ನೆನಪಿನೊಂದಿಗೆ)

ಡಾ॥ ಎಸ್.ಕೆ.ಜೋಶಿ

ನನ್ನ ಶ್ರೀಧರರು

ಸ್ವತಃ ಲೇಖಕಿಯೂ, ಶಿಕ್ಷಕಿಯೂ ಆಗಿ ಸಾಕಷ್ಟು ಅನುಭವವುಳ್ಳ ಮತ್ತು ಕನ್ನಡ ಸಾಹಿತ್ಯದಲ್ಲಿ ತನ್ನದೇ ಅಚ್ಚು ಮೂಡಿಸಿ ಖ್ಯಾತಳಾದ, ನನ್ನ ಅಭಿಮಾನಿ ವಿದ್ಯಾರ್ಥಿನಿ, ಶ್ರೀಮತಿ ಸುಮಿತ್ರಾ ಹಲವಾಯಿ, ತನ್ನ ಪರಿಶ್ರಮದಿಂದ ಪ್ರಕಟಿಸುತ್ತಿರುವ ಕನ್ನಡದ ಶ್ರೇಷ್ಠ ಸಾಹಿತಿ, ಶ್ರೀಯುತ ಬಿ.ಎಚ್.ಶ್ರೀಧರರ ಸಮಗ್ರ ಸಾಹಿತ್ಯ ಒಂದು ಅವಿಸ್ಮರಣೀಯ ಹಾಗೂ ಆಗಲೇ ಬೇಕಾದ ಕಾರ್ಯವೆಂಬುದರಲ್ಲಿ ಎರಡು ಮಾತಿಲ್ಲ. ಅದೊಂದು ಅತ್ಯಂತ ಶ್ಲಾಘನೀಯ ಕಾರ್ಯ.

ಶ್ರೀಯುತ ಬಿ.ಎಚ್.ಶ್ರೀಧರರ ನಿಕಟವರ್ತಿಯಾಗಿ, ಸಹೋದ್ಯೋಗಿಯಾಗಿ, ಅಭಿಮಾನಿಯಾಗಿ ನಾನು ಪಡೆದ ಅಮೂಲ್ಯ ಅನುಭವ ಎಂದೂ ಮಾಸಲಾರದು. ಶ್ರೀಧರರು ಕನ್ನಡ, ಸಂಸ್ಕೃತ ಮತ್ತು ಆಂಗ್ಲ ಭಾಷೆಗಳಲ್ಲಿ ಉದ್ದಾಮ ಪಂಡಿತರಾಗಿದ್ದರು. ಅವರೋರ್ವ ಉತ್ತಮ ವಾಗ್ಮಿಗಳೂ ಆಗಿದ್ದರು. ಅವರು ಬೈಠಕ್‌ನಲ್ಲಿದ್ದಾಗ ಅವರು ಹೊಡೆಯುವ ಹರಟೆ ಒಂದು ವಿಶ್ವಕೋಶವನ್ನು ಪ್ರತಿನಿಧಿಸುತ್ತಿತ್ತು. ಅವರು ಹೇಗೆ ಅಪೂರ್ವ ಸಾಹಿತಿಗಳಾಗಿದ್ದರೋ ಅಂತೆಯೇ ಅವರು ಒಂದು ಜ್ಞಾನಕೋಶವೇ ಆಗಿದ್ದರು.

ಅವರ ಸಮಗ್ರ ಸಾಹಿತ್ಯ ಹೊರಬರುತ್ತಿರುವ ಈ ಸಂದರ್ಭ ಅವರ ಒಂದು ಕವನ ಸಂಗ್ರಹ, "ರಸಯಜ್ಞ"ದ ಪ್ರಕಟಣೆ, ಅನುವಾದ ನನ್ನ ಪಾತ್ರವನ್ನು ನಾನು ಸ್ಮರಿಸಿಕೊಳ್ಳುತ್ತೇನೆ. ಶ್ರೀಯುತ ಬಿ.ಎಚ್.ಶ್ರೀಧರರು ಅಪಾರ ಅನುಭವದ ಹೃದಯ ಸಂಪನ್ನರು, ಅವರ ಔದಾರ್ಯ, ಅವರು ಮಾಡುತ್ತಿರುವ ಅತಿಥಿಸತ್ಕಾರಗಳು ಅವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಲಿಲ್ಲ. ಆ ಕಾರಣದಿಂದ ಅವರ ವಿಪುಲ ಸಾಹಿತ್ಯ ಸೃಷ್ಟಿ ಅಚ್ಚುಗಾಣಲಿಲ್ಲ. ಬಿ.ಎಚ್.ಶ್ರೀಧರರ 'ಕಾವ್ಯಸೂತ್ರ', 'ಜ್ಞಾನಸೂತ್ರ' ಹಾಗೂ 'ರಾಷ್ಟ್ರಸೂತ್ರ ಸರಿಸಾಟಿಯಿಲ್ಲದ ಕೊಡುಗೆಗಳು. 'ಕಾವ್ಯಸೂತ್ರ'ದ ಕುರಿತು ನಾನು ಹಾಗೂ ಶ್ರೀಧರರು ಆತ್ಮೀಯವಾಗಿ ಚರ್ಚಿಸಿದ್ದೇವೆ. ನನ್ನದೂ ಹಾಗೂ ಅವರದೂ ಈ ವಿಷಯವಾಗಿ ಹಾಗೂ ಅವೇ ಉಳಿದ ವಿಷಯಗಳಿಗಾಗಿ ಸ್ವಾರಸ್ಯಕರ ಹಾಗೂ ಸಲಿಗೆಯ ಜಗಳಗಳಾಗಿವೆ. ಆ ಜಗಳಗಳು ನಮ್ಮನ್ನು ಮತ್ತಷ್ಟು ಹತ್ತಿರ ತಂದಿವೆ. ಅವರ ಒಡನಾಟದಿಂದ ಶಿವರಾಮ ಕಾರಂತ, ವಿ.ಸಿ., ಗೋಪಾಲಕೃಷ್ಣ ಅಡಿಗ ಮತ್ತು ಬೇಂದ್ರೆಯವರಂತಹ ದಿಗ್ಗಜಗಳ ಪರಿಚಯ ಮತ್ತು ಒಡನಾಟ ಪಡೆದಿದ್ದೇನೆ. ಒಂದೇ

ಮಾತಿನಲ್ಲಿ ಹೇಳುವುದಾದರೆ ಬಿ.ಎಚ್.ಶ್ರೀಯವರ ಆಪ್ತ ಸಂಬಂಧ ನನ್ನ ಅನುಭವವನ್ನು ವಿಸ್ತರಿಸಿದೆ ಮತ್ತು ನನ್ನನ್ನು ಶ್ರೀಮಂತಗೊಳಿಸಿದೆ.

ಶ್ರೀಯುತ ಬಿ.ಎಚ್.ಶ್ರೀಧರರನ್ನು ಕುರಿತು ನನ್ನನ್ನು ಮತ್ತೊಮ್ಮೆ ಆಲೋಚಿಸಲು ತೊಡಗಿಸಿದ ಸುಮಿತ್ರಾಳಿಗೆ ನಾನು ಕೃತಜ್ಞ. ಅವಳು ಮಾಡುತ್ತಿರುವ ಕಾರ್ಯವನ್ನು ನಾನು ಹೃತ್ಪೂರ್ವಕವಾಗಿ ಬೆಂಬಲಿಸುತ್ತೇನೆ ಮತ್ತು ಅಭಿನಂದಿಸುತ್ತೇನೆ.

ಶಿರಸಿ **ಪ್ರೊ.ಪಿ.ಎಂ.ಹೆಗಡೆ**

೧೭–೭–೨೦೧೧

ಲೇಖಕ ಶ್ರೀಧರರು

ಬಿ.ಎಚ್.ಶ್ರೀಧರ ಅವರು ನಮ್ಮ ನವೋದಯದ ಎರಡನೆಯ ಪೀಳಿಗೆಗೆ ಸೇರಿದ ಲೇಖಕರು. ಕಾವ್ಯ, ಯಕ್ಷಗಾನ, ನಾಟಕ, ಹರಟೆ, ವಿಮರ್ಶೆ, ವಿಚಾರಸಾಹಿತ್ಯ, ಮಾನವಿಕಗಳು, ಅನುವಾದ – ಹೀಗೆ ಅವರ ಆಸಕ್ತಿಯ ಕ್ಷೇತ್ರಗಳು ಬಹುಮುಖವಾಗಿವೆ. ಹಾಗೆ, ನಮ್ಮ ನವೋದಯದ ಎಲ್ಲ ಹಿರಿಯ ಲೇಖಕರಂತೆ ಅವರದೂ ಬಹುಮುಖ ಪ್ರತಿಭೆ. ತಾವು ಅಧ್ಯಾಪನ ಮಾಡಿದ ಸಂಸ್ಕೃತದ ಜೊತೆಗೆ ಅವರಿಗೆ ಕನ್ನಡ, ಇಂಗ್ಲೀಷುಗಳಲ್ಲಿಯೂ ಅಪಾರ ವಿದ್ವತ್ತು ಇತ್ತು. ಅವರು ತಮ್ಮ ಬರಹದ ಉದ್ಧರಿಸುವ ಕೃತಿಗಳನ್ನು ನೋಡಿದರೆ ಅವರ ಓದಿನ ವಿಸ್ತಾರ ಗೊತ್ತಾಗುತ್ತದೆ. ಅವರ ಕನ್ನಡ ಮತ್ತು ಇಂಗ್ಲೀಷಿನ ಓದುಗಳಂತೂ ಅವರ ಕಾಲದವರೆಗೂ ಹರಡಿಕೊಂಡಿವೆ.

ಶ್ರೀಧರ ಅವರ ಆರಂಭದ ಕಾವ್ಯದಲ್ಲಿ ಮತ್ತು "ಬೇಂದ್ರೆ", "ಪ್ರತಿಭೆ", "ಹೊಸಗನ್ನಡ ಸಾಹಿತ್ಯಶೈಲಿ"ಯಂಥ ಗದ್ಯಕೃತಿಗಳಲ್ಲಿ ಈ ವಿದ್ವತ್ತಿನ ಭಾರ ಅಷ್ಟಾಗಿ ಕಾಣುವದಿಲ್ಲ. "ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ"ಯಂಥ ವೈಚಾರಿಕ ಕೃತಿಯಲ್ಲಿಯೂ ಅಷ್ಟೇ. ಆದರೆ ಬರಬರುತ್ತ ಅವರ ಕಾವ್ಯ, ಗದ್ಯಗಳೆರಡೂ ಪೆಡಸಾಗುತ್ತ ಹೋದವು. ಅಲ್ಲೆಲ್ಲ ಸಂಸ್ಕೃತ, ಇಂಗ್ಲೀಷುಗಳ ಹಾವಳಿ ವಿಪರೀತವಾಗಿ, ಅವರ ಕನ್ನಡವನ್ನು ಅರ್ಥಮಾಡಿಕೊಳ್ಳುವದೇ ಕಷ್ಟವಾಗಿದೆ.

ಅವರ ಕಾಲದಲ್ಲಿಯೇ ಕನ್ನಡದಲ್ಲಿ ನವ್ಯಕಾವ್ಯ ಆರಂಭವಾಗಿತ್ತು. ಇಂಗ್ಲೀಷ್ ನವ್ಯಕಾವ್ಯ ಅವರು ಚೆನ್ನಾಗಿ ಓದಿಕೊಂಡಿದ್ದರು. ಎಲಿಯಟ್‌ನ ಕಾವ್ಯವನ್ನು ಕುರಿತು ಎಂ.ಸಿ.ಬ್ರ್ಯಾಡ್‌ಬ್ರೂಕ್ ಬರೆದ ಪುಸ್ತಿಕೆಯೊಂದನ್ನು – "ಟಿ.ಎಸ್.ಈಲಿಯಟ್"– ಕನ್ನಡಕ್ಕೆ ಅನುವಾದಿಸಿದ್ದರು. ಕನ್ನಡ ನವ್ಯಕಾವ್ಯವನ್ನು ಅವರು ಓದಿಕೊಂಡಿದ್ದರು. ಆದರೆ ಕನ್ನಡ ನವ್ಯಕಾವ್ಯದ ಬಗ್ಗೆ ಅವರಲ್ಲಿ ತೀವ್ರ ವಿರೋಧವಿತ್ತು. ಅದು ಪೂರ್ವಗ್ರಹವಾಗಿ ಅವರ ವಿಮರ್ಶೆಯನ್ನು ಆವರಿಸಿತು. ನವ್ಯಕಾವ್ಯದ ಮುಕ್ತ ಛಂದಸ್ಸಿನಲ್ಲೂ ಮಾತ್ರೆ ಲೆಕ್ಕಾಚಾರ ಮಾಡಿ ಅದರಲ್ಲಿ ಛಂದಸ್ಸು–ಲಯಗಳು ಇಲ್ಲವೆಂದು ವಾದಿಸಿದರು. ಅದರ ವೈಚಾರಿಕವಂತೂ ಅವರಿಗೆ ಸರಿಬರಲೇ ಇಲ್ಲ. ಅದನ್ನು ಉಗ್ರವಾಗಿ ವ್ಯಂಗ್ಯ, ಕಟಕಿ, ಸಿಟ್ಟುಗಳನ್ನೆಲ್ಲ ಬಳಸಿಕೊಂಡು ಟೀಕಿಸಿದರು.

ಈ ಟೀಕೆಯ ಹಿಂದೆ ಕನ್ನಡದ ಸಾಹಿತ್ಯಪರಂಪರೆ, ಸಂಸ್ಕೃತಿ ಪರಂಪರೆಗಳನ್ನು ಉಳಿಸಿ ಮುಂದುವರಿಸಬೇಕೆಂಬ ಅದಮ್ಯ ಆಶೆ ಅವರಿಗಿತ್ತು. ಹಿಡಿತವಿಲ್ಲದೆ ಪಶ್ಚಿಮದ

ಕಡೆಗೆ ಓಡುತ್ತಿದ್ದ ಆಧುನಿಕ ವೈಚಾರಿಕತೆಯನ್ನು ನಿಗ್ರಹಿಸಬೇಕೆಂಬ ಉದ್ದೇಶ ಅವರದಾಗಿತ್ತು. ಹಾಗೆಂದು ಪಶ್ಚಿಮ ಆವಿಷ್ಕರಿಸಿದ ಹೊಸ ಸಂಶೋಧನೆ, ವೈಚಾರಿಕತೆಗಳನ್ನು ಅವರು ಪೂರ್ತಿಯಾಗಿ ತಿರಸ್ಕರಿಸಿರಲಿಲ್ಲ. ...... ಮನಶ್ಶಾಸ್ತ್ರಜ್ಞರಾದ ಫ್ರಾಯಿಡ್, ಯೂಂಗ್‌ರನ್ನು, ಅನೇಕ ತತ್ವವೇತ್ತರನ್ನು ಒಪ್ಪಿಗೆಯೊಂದಿಗೆ ಉದ್ಧರಿಸಿ ''ಕಾವ್ಯಸೂತ್ರ''ದಲ್ಲಿ ಎಲಿಯಟ್‌ನಂತೂ ಹೆಜ್ಜೆಹೆಜ್ಜೆಗೆ ಕಾಣಿಸಿಕೊಳ್ಳುತ್ತಾನೆ. ಆದರೂ ಅವರಿಗೆ ಭಾರತೀಯ ಪರಂಪರೆಯ ಕಡೆಗೆ ಒಲವಿತ್ತು.

ಈ ಕಾರಣದಿಂದಾಗಿಯೇ ಅವರು ''ಕಾವ್ಯಸೂತ್ರ''ದಲ್ಲಿ ಭಾರತೀಯ ಕಾವ್ಯಮೀಮಾಂಸೆಯ ತಮ್ಮ ಪುನರ್ಮನನ ಮಾಡಿದರು. ಈ ಉದ್ದೇಶ ಒಳ್ಳೆಯದೇ. ಆದರೆ ಈ ಹೊತ್ತಿಗೆ ಅವರ ಬರವಣಿಗೆ ಭಾಷೆ ಬಹಳ ಪೆಡಸಾಗಿಬಿಟ್ಟಿತ್ತು. ಇದು ವಿಚಾರಗಳ ಸಂಕೀರ್ಣತೆಯಿಂದ ಬಂದ ತೊಡಕಾಗಿರದೆ, ಭಾಷೆಯ ತೊಡಕಿನಿಂದ ಬಂದುದಾಗಿದೆ. ಅವರು ತಮ್ಮ ವಿಚಾರಗಳನ್ನು ಉದಾಹರಣೆಗಳೊಂದಿಗೆ ಸರಳವಾಗಿ ಮಂಡಿಸಿದ್ದರೆ ಅವುಗಳ ಪ್ರಭಾವ ನಮ್ಮ ಕಾಲದ ವೈಚಾರಿಕತೆಯನ್ನು ಒಂದಿಷ್ಟಾದರೂ ಬೇರೆ ದಿಕ್ಕಿಗೆ ತಿರುಗಿಸಬಹುದಾಗಿತ್ತೋ ಏನೊ!

ಈಗ ಶ್ರೀಧರರ ಕೃತಿಗಳೆಲ್ಲ ಸಮಗ್ರ ಸಂಪುಟಗಳಲ್ಲಿ ಪ್ರಕಟವಾಗುತ್ತಿರುವದು ಸಂತೋಷದ ವಿಷಯ. ಶ್ರೀಮತಿ ಸುಮಿತ್ರಾ ಹಲವಾಯಿಯವರು ಅವರ ವಿದ್ಯಾರ್ಥಿಯಾಗಿದ್ದವರು. ಶ್ರೀಧರರ ಮೇಲಿನ ಗೌರವದಿಂದ ಶ್ರೀಧರಸಾಹಿತ್ಯವನ್ನು ಸಂಗ್ರಹಿಸಿ ಸಂಪಾದಿಸಲು ಮುಂದಾಗಿದ್ದಾರೆ. ಅವರಿಗೆ ಶುಭ ಕೋರುತ್ತೇನೆ.

ಮುಂದೆ ಶ್ರೀಧರರ ಬರವಣಿಗೆಯನ್ನು ಯಾರಾದರೂ ಸಮರ್ಥರಾದವರು ಸರಿಯಾಗಿ ಅಭ್ಯಾಸ ಮಾಡಿ, ಅವರ ವಿಚಾರಗಳನ್ನು ಸಾರವತ್ತಾಗಿ ಸಂಗ್ರಹಿಸಿ ಕೊಟ್ಟರೆ ಮುಂದಿನ ಪೀಳಿಗೆಗೆ ಉಪಯೋಗವಾದೀತು.

ಗಿರಡ್ಡಿ ಗೋವಿಂದರಾಜ

ಪ್ರೊ.ಬಿ.ಎಚ್. ಶ್ರೀಧರರು

ಶ್ರೀ ಬಿ.ಎಚ್. ಶ್ರೀಧರರ 'ಜೀವಯಾನ' ಅವರ ಆತ್ಮಕಥೆಯ ಸಂಕ್ಷಿಪ್ತ ರೂಪವಾಗಿದೆ. ಅವರ ಮನೆತನದಲ್ಲಿಯೇ ವಂಶಪಾರಂಪರ್ಯವಾಗಿ ನೆಲೆಸಿದ ಸರಸ್ವತಿಯ ಆರಾಧನೆ ಶ್ರೀ ಬಿ.ಎಚ್. ಶ್ರೀಧರ ಅವರಲ್ಲಿ ಒಡಮೂಡಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಹತ್ತೊಂಬತ್ತನೆಯ ಶತಮಾನದ ಕೊನೆಯ ಎರಡು ದಶಕಗಳಲ್ಲಿ ಮತ್ತು ಇಪ್ಪತ್ತನೆಯ ಮೊದಲ ಎರಡು ದಶಕಗಳಲ್ಲಿ ಕನ್ನಡದ ಅನೇಕ ಅನರ್ಘ್ಯ ರತ್ನಗಳು ಜನಿಸಿದವು. ಕನ್ನಡ ಸಾಹಿತ್ಯದ ಕನ್ನಡ ಭಾಷೆಯ ಪರ್ವಕಾಲವೇ ಹುಟ್ಟಿ ಬಂದಿತ್ತು. ಆ ನಾಲ್ಕು ದಶಕಗಳಲ್ಲಿ ಜನಿಸಿದ ಮಹನೀಯರು ಕನ್ನಡದ ಸೇವೆಯಲ್ಲಿ ಮನಃಪೂರ್ವಕವಾಗಿ ಕೈಗೊಂಡರು. ಹೆಸರುಗಳ ಪಟ್ಟಿಯನ್ನು ಉಲ್ಲೇಖಿಸಲು ಸಾಧ್ಯವಿಲ್ಲ ಅಂಥ ಅತಿರಥ ಮಹಾರಥದ ಕಾಲದಲ್ಲಿಯೇ ಶ್ರೀ ಬಿ.ಎಚ್. ಶ್ರೀಧರರು ಬಾಳಿದರು. ಹೀಗಾಗಿ ಅವರಿಗೆ ಜೀವನದುದ್ದಕ್ಕೂ ಅನೇಕ ಪ್ರತಿಭಾವಂತರ ಒಡನಾಟವಿತ್ತು. ಅವರೂ ಸಹಿತ ಸಾಹಿತ್ಯಸೇವೆಯನ್ನು ಅಸಿಧಾರಾ ವ್ರತದಂತೆ ನಡೆಸಿಕೊಂಡು ಬಂದರು.

೧೯೧೮ರ ಏಪ್ರಿಲ್ ೨೪ ರಂದು ತಂದೆ ಸೀತಾರಾಮ ಹೆಬ್ಬಾರರ ಮತ್ತು ತಾಯಿ ನಾಗಮ್ಮನವರ ಪುತ್ರನಾಗಿ ಜನಿಸಿದರು. ಹೊಸಕೋಟೆಯ ಹಳ್ಳಿಯಲ್ಲಿಯೇ ಪ್ರಾಥಮಿಕ ಶಿಕ್ಷಣವನ್ನು ಪ್ರಾರಂಭಿಸಿದರು. ಅಲ್ಲಿಂದ ಪ್ರಾರಂಭವಾದ ಅವರ ಶಿಕ್ಷಣ ೧೯೪೩ರಲ್ಲಿ ಎಂ. ಎ. ಪಾಸಾಗುವುದರೊಂದಿಗೆ ಮುಕ್ತಾಯವಾಯಿತು. ಶಿಕ್ಷಣದ ಪ್ರತಿ ಹಂತದಲ್ಲಿಯೂ ಅಡೆತಡೆಗಳು ಬರುವದು ಮತ್ತು ನಿವಾರಣೆಯಾಗುವದು ಇದ್ದೇ ಇತ್ತು. ಅದೆಲ್ಲವನ್ನು ಮೀರಿ ಛಲದಿಂದ ಮುಂದೆ ಬರುವ ಗುರಿಯನ್ನು ತಲುಪಿದ್ದು ಶ್ರೀಧರರ ನಿಷ್ಠೆಯನ್ನು ತೋರಿಸುತ್ತದೆ. ಶ್ರೀಧರರು ಕನ್ನಡ ಸಾಹಿತ್ಯವನ್ನು ಕನ್ನಡದ ಶುದ್ಧತೆಯನ್ನು ತಳಮುಟ್ಟ ಶೋಧಿಸಿ ಸರಿಯಾದುದನ್ನು ಯಾರ ಮುಲಾಜಿಲ್ಲದೆ ನೇರವಾಗಿ ಹೇಳುವವರಾಗಿದ್ದರು. ಮತ್ತು ತಮ್ಮ ಅಭಿಪ್ರಾಯವನ್ನು ಇತರರಿಗೆ ಮನಗಾಣಿಸಿ ಕೊಡುವವರಾಗಿದ್ದರು.

ಬಿ.ಎಚ್.ಶ್ರೀಧರರ ಸಾಹಿತ್ಯ ಕೃಷಿ ವಿಪುಲವಾಗಿದ್ದರೂ, ಅವರ ಜೀವಮಾನದಲ್ಲಿ ಅವರ ಯೋಗ್ಯತೆಗೆ ತಕ್ಕಂತೆ ಪ್ರತಿಫಲ ಮತ್ತು ಪ್ರಾಮುಖ್ಯತೆ ದೊರೆಯಲಿಲ್ಲವೆಂದು ನನ್ನ ಅನಿಸಿಕೆ. ಆದರೂ ಅವರ ನಂತರ ಬಿ.ಎಚ್. ಶ್ರೀಧರ ಸಾಹಿತ್ಯ ಪ್ರಶಸ್ತಿ ಸಮಿತಿಯನ್ನು ಸ್ಥಾಪಿಸಿ, ಪ್ರತಿವರ್ಷ ಅವರ ಹೆಸರಿನಿಂದ ಸಾಹಿತಿಗಳಿಗೆ ಪ್ರಶಸ್ತಿ ನೀಡಿ ಸನ್ಮಾನಿಸುವ ಕಾರ್ಯದಿಂದ ಬಿ.ಎಚ್.ಶ್ರೀಧರರ ಹೆಸರನ್ನು ಅಜರಾಮರವನ್ನಾಗಿಸುವ

ಕಾರ್ಯಸ್ತುತ್ಯವಾದದ್ದು. ಈಗ ಅವರ ಸಮಗ್ರ ಸಾಹಿತ್ಯವನ್ನು ಮತ್ತೆ ಪುನರ್ ಮುದ್ರಿಸಿ ಕನ್ನಡ ಸಾಹಿತ್ಯ ಲೋಕದ ಮುಂದೆ ತಂದಿರಿಸಿ ಅವರ ಸಾಹಿತ್ಯವನ್ನು ಪರಾಮರ್ಶಿಸುವ ಕಾರ್ಯದಲ್ಲಿ ತೊಡಗಿದ ಶ್ರೀಮತಿ ಡಾ. ಸುಮಿತ್ರಾ ಹಲವಾಯಿಯವರಿಗೆ ಯಶಸ್ಸು ದೊರೆಯಲಿ ಎಂದು ಹಾರೈಸುತ್ತೇನೆ.

ಸಮುದ್ರದ ಗಾಂಭೀರ್ಯ, ಪರ್ವತಗಳ ಘನತೆ, ಕಾಡಿನ ವೈವಿಧ್ಯತೆ, ಹರಿವ ನದಿಯ ನೀರಿನ ಲೌಲಿತ್ಯ ಇವೆಲ್ಲವೂ ದಕ್ಷಿಣ ಕನ್ನಡ ಜಿಲ್ಲೆಯ ಜನರ ಜೀವನದಲ್ಲೂ ವ್ಯಕ್ತಿತ್ವದಲ್ಲೂ ಹಾಸು ಹೊಕ್ಕಾಗಿದೆ.

ಬಡವನಿರಲಿ ಶ್ರೀಮಂತನಿರಲಿ ಅವನ ಮಾತು ನಡೆ ಎಲ್ಲದರಲ್ಲೂ ತೂಕವಿದೆ. ಪರಶುರಾಮ ಸೃಷ್ಟಿಯ ಈ ನೆಲದಲ್ಲಿ ಛಲವಿದೆ, ಕೆಚ್ಚಿದೆ, ಸತ್ಯವಿದೆ. ಸತ್ಯ ಇದ್ದಲ್ಲಿ ನಿಷ್ಠುರತೆ ಇದೆ. ಮಾತಿನಲ್ಲಿ ನಯವೂ ಇದೆ. ಆತಿಥ್ಯಕ್ಕೆ ಇನ್ನೊಂದು ಹೆಸರು ದಕ್ಷಿಣ ಕನ್ನಡ, ದಕ್ಷಿಣ ಕನ್ನಡ ಎಂದೊಡನೆ ಥಟ್ಟನೆ ನೆನಪಾಗುತ್ತದೆ. ಡಾ. ಶಿವರಾಮ ಕಾರಂತರ ಹೆಸರು ಅಂತೇ ನೆನಪಾಗುತ್ತಾರೆ. ಆ ನಾಡಿನ ದಿಗ್ಗಜರು ಈ ಸಾಲಿಗೆ ಸೇರಿದವರು ಖ್ಯಾತ ಸಾಹಿತಿ, ವಿಮರ್ಶಕ ಬಿ.ಎಚ್. ಶ್ರೀಧರ ಅವರು.

೨೪ ಏಪ್ರಿಲ್ ೧೯೧೮ರಲ್ಲಿ ದಕ್ಷಿಣ ಕನ್ನಡದ ಬಿಜೂರು ಗ್ರಾಮದಲ್ಲಿ ಹುಟ್ಟಿದ ಶ್ರೀಧರ್ ಅವರು ಸೊರಬ, ಸಾಗರ, ಶಿವಮೊಗ್ಗೆ, ಮೈಸೂರು, ಕುಮಟಾ, ಭಟ್ಕಳ್, ಶಿರಸಿ, ಹುಬ್ಬಳ್ಳಿ ಹೀಗೆ ಕರ್ನಾಟಕದ ತುಂಬ ಬೆಳೆದವರು. ಬಿ.ಎಚ್. ಶ್ರೀ ಅವರ ಕೆಲಸದಲ್ಲಿ ಅಚ್ಚುಕಟ್ಟುತನವಿತ್ತು. ಪ್ರಾಮಾಣಿಕತೆ ಇತ್ತು. ಅವಿರತ ಶ್ರಮವಿತ್ತು. ಅವರಿತ್ತ ಒಂದೊಂದು ಕೃತಿಯೂ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ. ಶ್ರೀಧರರು ಸಾಹಿತ್ಯದಲ್ಲಿ ಆಯ್ದುಕೊಂಡದ್ದು ವಿಮರ್ಶೆ ಮತ್ತು ವಿಚಾರ ಸಾಹಿತ್ಯದಂಥ ಗಂಭೀರ ವಿಷಯವನ್ನಾದರೂ ಅವರ ಅಭಿಮಾನಿಗಳ ಬಳಗ ಬಹುದೊಡ್ಡದು. ಅಂತೆಯೇ ಅವರ ನಿಧನಾನಂತರ ಅವರ ಅಭಿಮಾನಿಗಳು ಅವರ ಕುಟುಂಬದವರು ೧೯೯೯ರಲ್ಲಿ ಬಿ.ಎಚ್. ಶ್ರೀಧರರ ಹೆಸರಿನಲ್ಲಿ ರಾಜ್ಯದ ಶ್ರೇಷ್ಠ ಕೃತಿಗಳಿಗೆ ಪುರಸ್ಕಾರ ನೀಡುವ ಸಂಪ್ರದಾಯ ಬೆಳೆಸಿಕೊಂಡು ಬಂದಿದ್ದಾರೆ.

ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಪ್ರಶಸ್ತಿ ಹಾಗೂ ಪ್ರಶಸ್ತಿ ಪಡೆದ ಕೃತಿಯ ಕುರಿತು ವಿಶ್ಲೇಷಣೆ ಇದು ಈ ಪ್ರಶಸ್ತಿಯ ವಿಶೇಷತೆ. ಕಾರ್ನಾಡ, ಕಾಯ್ಕಿಣಿ, ಮೊಗಸಾಲೆ, ಗಿರಡ್ಡಿ ಹೀಗೆ ಈ ಪ್ರಶಸ್ತಿಯಿಂದ ಪುರಸ್ಕೃತರಾದವರು "ಶ್ರೀಧರರ ಹೆಸರಿನಲ್ಲಿ ಒಳ್ಳೆಯ ಕೆಲಸ ನಡೆದಿದೆ" ಎಂದು ಮುಕ್ತವಾಗಿ ಅಭಿನಂದಿಸಿದ್ದಾರೆ.

ಶ್ರೀಧರರು ಭೌತಿಕವಾಗಿ ನಮ್ಮೊಡನಿಲ್ಲದಿದ್ದರೂ ಚೈತನ್ಯರೂಪದಲ್ಲಿ ನಮ್ಮೊಡನಿದ್ದು ನಮಗೆ ಮಾರ್ಗದರ್ಶನ ಮಾಡುತ್ತಿದ್ದಾರೆ.

ರಂಜನಾನಾಯಕ್

ಪಂಡಿತ ಸಿರಿಗೆ ನಮಿಸುತ್ತ

ಪ್ರೊ. ಬಿ. ಎಚ್. ಶ್ರೀಧರ ಸಾಹಿತ್ಯದ ಸಮಗ್ರ ಸಂಪುಟವನ್ನು ತರುವ ಈ ಸಂದರ್ಭದಲ್ಲಿ ಕುಂದಾಪುರ ತಾಲೂಕಿನವರೇ ಆದ ಆ ಘನ ಪಂಡಿತೋತ್ತಮರ ಕುರಿತು ನಾಕು ಸಾಲು ಬರೆಯಬೇಕೆಂದು ಶ್ರೀಮತಿ ಸುಮಿತ್ರಾ ಹಲವಾಯಿಯವರು ಹೇಳಿದರು. ಪಂಡಿತಯುಗದ ಮೇರು ವ್ಯಕ್ತಿಗಳಲ್ಲೊಬ್ಬರಾದ ಅವರ ಕುರಿತು ನನ್ನದೇನಿದ್ದರೂ ಕಿರುತಿಳುವಳಿಕೆ. ಆದರೆ ಶ್ರೀಮತಿ ಸುಮಿತ್ರಾ ಹಲವಾಯಿಯವರ ಮಾತಿನಂತೆ ಅದಷ್ಟನ್ನೇ ಬರೆಯುವೆ.

ಶ್ರೀ ಬಿ.ಎಚ್. ಶ್ರೀಧರ ಅವರ ನೇರ ಸಂಪರ್ಕವಿಲ್ಲದಿದ್ದರೂ ಅವರ ವಿದ್ವತ್ತಿನ ಬಗ್ಗೆ ಆಗಾಗ ಕೇಳುತ್ತಲೆ ಇದ್ದೆ. ಮೂಲತಃ ಬಾರಕೂರಿನವರಾದ ಅವರ ಪೂರ್ವಜರು ಮುಂದೆ ಕುಂದಾಪುರ ಸಮೀಪದ ಬವಲಾಡಿಯಲ್ಲಿ ಬಂದು ನೆಲೆಸಿದವರು. ಯಕ್ಷಗಾನ ಪ್ರಸಂಗಕರ್ತರ ಅರ್ಥಧಾರಿಗಳ ಕವಿಗಳ ವಿದ್ವಾಂಸರ, ಒಟ್ಟು ಹೇಳಬೇಕೆಂದರೆ ಸಾಹಿತ್ಯ ಮಾರ್ಗದ ಕುಟುಂಬವದು ಅಂತೆಲ್ಲ ಅವರ ಹೆಸರಿನೊಂದಿಗೇ ನಮಗೆ ಕೇಳಿಬರುತ್ತಿದ್ದ ವಿವರಗಳು. ಆಶು ಕವಯಿತ್ರಿ ಉಳ್ಳೂರು ಮುಕಾಂಬಿಕಮ್ಮ, ಕವಿ ಮೊಗೇರಿ ಗೋಪಾಲಕೃಷ್ಣ ಅಡಿಗ ಅವರೆಲ್ಲ ಶ್ರೀಧರರ ಹತ್ತಿರದ ಬಂಧುಗಳು.

ಹುಟ್ಟಿದೂರು ಒಂದಾದರೆ ಸಾಕಿದೂರು ಇನ್ನೊಂದೇ ಆಗುವುದು ಸಾಮಾನ್ಯವಷ್ಟೆ? ಹಾಗೆ ಶ್ರೀಧರರು ಊರಲ್ಲಿ ತಮ್ಮ ಬಾಲ್ಯವನ್ನು ಮಾತ್ರ ಕಳೆದವರು. ನಂತರ ನೀರಿನ ಋಣ ಕರೆದಲ್ಲಿಗೆ ತೆರಳಿದ ಹೆತ್ತವರ ಸಂಗತೆ ಘಟ್ಟವೇರಿದರು. ಅಂಡಿಗೆ, ಸೊರಬ, ಸಾಗರದ ಸೀಮೆಯಲ್ಲಿ ವಿದ್ಯಾಭ್ಯಾಸ ಮುಗಿಸಿ ಮೈಸೂರು ತಲುಪಿದ ಅವರ ಈ ಯಾತ್ರೆಯ ಕತೆ ವಿದ್ಯಾರ್ಜನೆಗಾಗಿ ಊರು ಬಿಟ್ಟು ಎಲ್ಲಿಂದ ಎಲ್ಲಿಗೋ ತೇಲಿ ಹೋಗುತ್ತಿದ್ದ, ಆರ್ಥಿಕವಾಗಿ ನಾನಾ ರೀತಿಯ ಸವಾಲುಗಳನ್ನು ಎದುರಿಸಿಯೂ ಶಿಕ್ಷಣದ ಕನಸನ್ನು ಬಿಡದ, ಛಲ, ಸಾಧನೆ ಮತ್ತು ಕಷ್ಟ ಸಹಿಷ್ಣುತೆಯ ಜ್ಞಾನಪಿಪಾಸಿಗಳ ಯುಗದ ಕತೆಯೇ ಆಗಿದೆ.

ನಮ್ಮ ಪಂಡಿತ ಸೇಡಿಯಾಪು ಕೃಷ್ಣಭಟ್ಟರ 'ಸೇಡಿಯಾಪು ನೆನಪುಗಳು' ಕೃತಿಯಲ್ಲಿ ಆ ಕಾಲದ ಗಂಡುಮಕ್ಕಳು ಶಾಲೆಗೆ ಹೋಗುವ ಆಕಾಂಕ್ಷೆಯನ್ನು ಸಾಧಿಸಿಕೊಳ್ಳಲು ಪಟ್ಟ ಪಡಿಪಾಟಲುಗಳು ದಾಖಲಾಗಿವೆ. ಶ್ರೀಧರರ ಬದುಕಿನಲ್ಲಿಯೂ ಅವೆಲ್ಲವೂ

ಇನ್ನೊಂದೇ ರೂಪದಲ್ಲಿ ಕಾಣಸಿಗುತ್ತವೆ. ಏನಂದರೂ ಅವರು ಮೈಸೂರು ತಲುಪಿ ಅಲ್ಲಿ ಅಂದಿನ ಮಹಾಮಹಾ ವಿದ್ವಾಂಸರ ಮಡಿಲು ಸೇರಿದ್ದೇ ಒಂದು ದೊಡ್ಡ ಘಟನೆ ಎನ್ನಬೇಕು. ಅಲ್ಲಿಂದ ಶ್ರೀಧರರ ಚಿಂತನಾಮಾರ್ಗ ತೆರೆದುಕೊಂಡಿತು.

ನಾನು ಅವರ ಕುರಿತು ತಿಳಿಯುವ ಹೊತ್ತಿಗೆ ಅವರು ಪ್ರಕಾಂಡ ಪಂಡಿತರಾಗಿ, ಅನುಪಮ ಪ್ರಾಧ್ಯಾಪಕರಾಗಿ. ಕವಿ, ವಿಮರ್ಶಕರಾಗಿ, ಬೇಂದ್ರೆಯವರ ಆಪ್ತರಾಗಿ ಪ್ರಸಿದ್ಧರಾಗಿದ್ದರು. ಅವರು ಸಿರ್ಸಿಯಲ್ಲಿಯೇ ಇದ್ದಿದ್ದರಿಂದ ಮೂಲತಃ ಅಲ್ಲಿನವರೇ ಎಂದು ನಾನು ಮೊದಲು ತಿಳಿದಿದ್ದೆನು. ಬಿ ಎಂಬುದು ನಮ್ಮೂರಿನ ಬವುಲಾಡಿ ಗ್ರಾಮವೆಂದೂ ಎಚ್ ಎಂಬುದು ಇಲ್ಲಿನ ಹೆಬ್ಬಾರ ಕುಟುಂಬ ನಾಮವೆಂದೂ ತಿಳಿದದ್ದು ಬಹಳ ತಡವಾಗಿಯೇ. ಅವರ ತಂಗಿ ರಮಾ ಕಾರಂತ ಕುಂದಾಪುರದ ಪ್ರಸಿದ್ಧ ಕೋಣಿ ಕಾರಂತರ ಮನೆಗೆ ಮದುವೆಯಾಗಿ ಬಂದವರು. ಕಾವ್ಯ ಪ್ರಿಯೆ, ಸ್ವತಃ ಕವಿತೆಗಳನ್ನು ಬರೆಯುತ್ತಿದ್ದರು ಕೂಡ. ಆ ಘಾಸಲೆಯಲ್ಲಿ ಎಲ್ಲಿ ಸಾಹಿತ್ಯ ಕಾರ್ಯಕ್ರಮವಾದರೂ ತಪ್ಪದೆ ತಾನು ಹಾಜರಿರಲೇ ಬೇಕು, ಅಂತಹ ಸಾಹಿತ್ಯ ಪ್ರೀತಿಯವರು. ರಮಾ ಅವರ ಮಗ ಶ್ರೀ ಗಣೇಶ ಕಾರಂತರು (ಜಿ.ವಿ. ಕಾರಂತ) ಕುಂದಾಪುರದಲ್ಲಿ 'ಸಮುದಾಯ'ದ ಚಟುವಟಿಕೆಗಳನ್ನು ಈಗಲೂ ನಡೆಸಿಕೊಂಡು ಬರುತ್ತಿದ್ದಾರೆ. ಮತ್ತು ಇನ್ನೊಬ್ಬ ಮಗ ಕವಿ ಶ್ರೀ ಉಮೇಶ ಕಾರಂತರು ತಾಯಿಯಂತೆಯೇ ಕಾವ್ಯಪ್ರಿಯರು. ಶ್ರೀಧರರ ಹತ್ತಿರದ ಬಂಧುಗಳಾಗಿ ನನಗೆ ತಿಳಿದವರನ್ನು ನೆನೆವಾಗ ಇವರೆಲ್ಲ ನೆನಪಾದರು. ತಂಗಿ ರಮಾಕಾರಂತರು ಇತ್ತೀಚೆಗಷ್ಟೇ ತೀರಿಕೊಂಡರು. ಸುದ್ದಿ ಕೇಳಿದವಳಿಗೆ ತಮ್ಮ ಅಣ್ಣ ಬಿ. ಎಚ್ ಶ್ರೀಧರ್ ಅಂತ ಅಥವಾ ತಾನು ಬಿ.ಎಚ್ ಶ್ರೀಧರರ ತಂಗಿ ಅಂತಲೂ ಅವರು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದುದು ಮೇಲಿಂದ ಮೇಲೆ ನೆನಪಾಯಿತು. ನಾನು ಪ್ರೊ. ಶ್ರೀಧರರನ್ನು ಕಂಡದ್ದು ಒಂದೆರಡು ಬಾರಿ ಮಾತ್ರ ಕುಂದಾಪುರದಲ್ಲಿ ನಡೆದ ಕಾರ್ಯಕ್ರಮಗಳಲ್ಲಿ. ನಾನು ಕಂಡ ಶ್ರೀಧರರ ಮುಖಭಾವ ಅತ್ಯಂತ ಗಂಭೀರವಿತ್ತು. ನಿಷ್ಠುರ ದೃಢ ಧೋರಣೆಯವರಾಗಿ ತನ್ನ ಧೋರಣೆಯಿಂದ ಅತ್ತಿತ್ತ ಕದಲದವರಂತೆ ಬಿಗಿಯಾಗಿತ್ತು. ಸಂಸ್ಕೃತಪಂಡಿತರಾದ ಅವರು ಅರ್ಥಶಾಸ್ತ್ರ, ಭೌತಶಾಸ್ತ್ರ ಮುಂತಾಗಿ ಅನೇಕ ಇತರ ಜ್ಞಾನಶಾಖೆಗಳನ್ನೂ ಸ್ವಪ್ರಯತ್ನದಿಂದಲೇ ಓದಿ ತಿಳಿದವರಂತೆ. ಮೈಸೂರಿನಲ್ಲಿ ಓದುತ್ತಿದ್ದಾಗ ವಾಚನಾಲಯದ ಬೀಗದ ಕೈಯನ್ನೇ ಅವರಿಗೆ ಕೊಟ್ಟುಬಿಡುತ್ತಿದ್ದರಂತೆ. ಕನ್ನಡ ಕಾವ್ಯಪ್ರೇಮಿಯೂ ಕಾವ್ಯಕೃಷಿಕರೂ ಆಗಿ, ಬೇಂದ್ರೆಯವರಿಗೆ ಬಹಳ ಬೇಕಾದವರೂ ಆಗಿದ್ದ ಅವರು ಖಚಿತ ಅಭಿಪ್ರಾಯವುಳ್ಳ ವ್ಯಕ್ತಿಯಾಗಿದ್ದರಂತೆ. ಸತ್ಯ ನಿಷ್ಠುರತೆ ಅವರ ಮೊತ್ತ ಮೊದಲ ಗುಣವಾಗಿಯೂ ಬೇಗ ಅರ್ಥವಾಗುವ ಪೈಕಿ ಅಲ್ಲವಾಗಿಯೂ ತಮ್ಮ ಶಿಷ್ಯರ ಅಪಾರ ಗೌರವವನ್ನು ಸೂರೆಗೊಂಡವರಂತೆ. ಅಂತೆ ಅಂತೆ ಏಕೆಂದರೆ ಅವರು ನನಗೆ ತಲುಪುವ ಹೊತ್ತಿಗೆ ದಂತಕತೆಯೇ ಆಗಿ ಬಿಟ್ಟಿದ್ದರು. ಸಿರ್ಸಿಯಲ್ಲಿಯೇ ಹೆಚ್ಚುಕಾಲ ಕಳೆದದ್ದರಿಂದ ತನ್ನ ಮೂಲ ಊರಿನ ಜನರ ಸಂಪರ್ಕಕ್ಕೆ ಅವರು ಹೆಚ್ಚು ಸಿಗದೇ ಹೋಗಿದ್ದೂ

ಒಂದು ಕಾರಣವೇನೊ. ಅವರ ಪತ್ನಿ ಶ್ರೀಮತಿ ರಮಾದೇವಿ ಅವರ ಸಜ್ಜನಿಕೆ ಮತ್ತು ಸಹಿಷ್ಣುತೆಯನ್ನಂತೂ ಅವರ ಮನೆಗೆ ಹೊಕ್ಕು ಹೊರಡುತ್ತಿದ್ದ ಅನೇಕ ಮಂದಿ ಇಂದಿಗೂ ಅಕ್ಕರೆಯ ಸವಿನೆನಪಾಗಿ ಜೋಪಾನವಾಗಿ ಕಾದುಕೊಂಡಿದ್ದಾರೆ.

ಸಾಹಿತ್ಯದ ಹಲವು ಹನ್ನೊಂದು ಪ್ರಕಾರದಲ್ಲಿ ಸಮಾನ ಶ್ರದ್ಧೆ ಮತ್ತು ನಿಮಗ್ನತೆಯಿಂದ ತಮ್ಮನ್ನು ತೊಡಗಿಸಿಕೊಂಡವರು ಅವರು. ನಾನು ಅವರ ಕೃತಿರಾಶಿಯಲ್ಲಿ ಕೆಲವನ್ನಷ್ಟೆ ಓದಿಕೊಂಡವಳು. ಓದಿನಲ್ಲಿ ದಕ್ಕಿದಷ್ಟರ ಮಟ್ಟಿಗೆ ಹೇಳುವುದಿದ್ದರೆ ಅವರು ಕವಿಗಿಂತ ಹೆಚ್ಚು ವಿಮರ್ಶಕರಾಗಿ ನನಗೆ ಕಾಣಿಸಿಕೊಂಡರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹುಟ್ಟಿ, ಶಿವಮೊಗ್ಗ ಜಿಲ್ಲೆಯಲ್ಲಿ ಪ್ರೌಢಶಿಕ್ಷಣಪಡೆದು, ಮೈಸೂರಿನಲ್ಲಿ ಸ್ನಾತಕೋತ್ತರ ಪದವಿ ಪಡೆದು ಸಿರ್ಸಿಯನ್ನು ತನ್ನ ಕರ್ಮಭೂಮಿಯಾಗಿ ಮಾಡಿಕೊಂಡವರು; ಸರಕಾರೀ ಕಚೇರಿಯಲ್ಲಿ ಗುಮಾಸ್ತ, ಪತ್ರಿಕೋದ್ಯಮ, ಉಪಾಧ್ಯಾಯ, ಪ್ರಾಧ್ಯಾಪಕ, ಪ್ರಿನ್ಸಿಪಾಲ–ಹೀಗೆ ನಾನಾ ಕಡೆ, ನಾನಾ ವೃತ್ತಿನೆಲೆಯಲ್ಲಿ, ನಾನಾ ಕಷ್ಟಸುಖಗಳಲ್ಲಿಯೂ, ನುರಿದು ಜೀವನದುದ್ದ ಸಾಗಿ ಬಂದವರು ಪ್ರೊ. ಬಿ. ಎಚ್. ಶ್ರೀಧರರು. ಹರಿವ ನದಿಗೆ ಹೋಲಿಸುವುದು. 'ಜೀವನ ನದಿ' ಎಂದು ಕರೆಯುವುದು ಇಂಥ ಬದುಕನ್ನೆ ಅಲ್ಲವೆ?

ಕನ್ನಡ ಸಾಹಿತ್ಯಪರಂಪರೆಯ ಸಿರಿಗಳಲ್ಲಿ ಒಬ್ಬರಾದ ಪ್ರೊ. ಬಿ. ಎಚ್. ಶ್ರೀಧರರ ನೆನಪಿಗೆ ಗೌರವಪೂರ್ಣ ನಮನ ಸಲ್ಲಿಸುತ್ತಿರುವೆ.

–ವೈದೇಹಿ

ಶ್ರೀಧರರ ಕುರಿತು

ಶ್ರೀ ಶ್ರೀಧರರು ಸಂಸ್ಕೃತ ವಿಭಾಗಾಧ್ಯಕ್ಷರಾಗಿ ಎಮ್. ಎಮ್ ಆರ್ಟ್ಸ್ ಅಂಡ ಸಾಯನ್ಸ್ ಕಾಲೇಜ) ನಮ್ಮ ಕಾಲೇಜದಲ್ಲಿ ಇದ್ದಾಗ ದೇಶದ ಮೂಲೆ ಮೂಲೆಗಳಿಂದ ವೇದಗಳಿಂದ ಪ್ರಾರಂಭಿಸಿ ಇಂದಿನವರೆಗಿನ ಅನೇಕ ಸಂಸ್ಕೃತ ಪುಸ್ತಕಗಳವರೆಗೆ ಎಲ್ಲ ಗ್ರಂಥಗಳನ್ನು ತರಿಸಿ ಐದಾರು ವರ್ಷಗಳೊಳಗೆ ಸಂಸ್ಕೃತ ವಿಭಾಗವನ್ನು ಸುಸಮೃದ್ಧಗೊಳಿಸಿದ್ದರು. ಅಂತೆಯೇ ಪಾದಚಾರಿಯಾಗಿ ಸಮಗ್ರ ಭಾರತವನ್ನು ಸಂಚರಿಸಿದ ಕಂಚೀಪೀಠದ ಶತಾಯುಷಿ ಶ್ರೀ ಶ್ರೀಗಳವರು ನಮ್ಮ ಮಹಾವಿದ್ಯಾಲಯದ ಸಂಸ್ಕೃತ ಪುಸ್ತಕಗಳ ಸಂಗ್ರಹವನ್ನು ನೋಡಿ ಹೊಗಳಿದ್ದರು. ಈ ಶ್ರೇಯಸ್ಸು ಶ್ರೀ ಶ್ರೀಧರರದ್ದೇ.

ಇವರು ಮುಂದಿನ ಪೀಳಿಗೆಯವರಿಗೆ ಆದರ್ಶವ್ಯಕ್ತಿಗಳೆಂದು ಹೇಳಲು ನನಗೆ ಅಭಿಮಾನವೆನಿಸುತ್ತದೆ.

ಡಾ. ಆರ್. ಆರ್. ಮುಂಡರಗಿ

ಶ್ರೀತ್ರಯರಲ್ಲಿ ಬಿ.ಹೆಚ್.ಶ್ರೀ

ಕನ್ನಡ ನುಡಿಯ ಶ್ರೀಮಂತಿಕೆಯನ್ನು ಗಣನೀಯವಾಗಿ ಹೆಚ್ಚಿಸಿದವರು ಬಿ.ಎಮ್. ಶ್ರೀ, ತೀ.ನಂ.ಶ್ರೀ ಬಿ.ಹೆಚ್. ಶ್ರೀಗಳೆಂಬ ಶ್ರೀತ್ರಯರು. ಈ ಶ್ರೀ ತ್ರಿಮೂರ್ತಿಗಳಲ್ಲಿ ಬಿ.ಎಮ್.ಶ್ರೀಯವರು ೧೯ನೆಯ ಶತಮಾನದ ಉತ್ತರಾರ್ಧ ೨೦ನೆಯ ಶತಮಾನದ ಪೂರ್ವಾರ್ಧದವರಾದರೆ ಉಳಿದಿಬ್ಬರೂ ಪೂರ್ತಿಯಾಗಿ ೩೦ನೆಯ ಶತಮಾನದವರು. ಈ ಶ್ರೀತ್ರಯರಲ್ಲಿ ಬಿ.ಎಮ್. ಶ್ರೀ ಸಾಕಷ್ಟು ಅನುಕೂಲವಿದ್ದ ಕುಟುಂಬದಲ್ಲಿ ಜನಿಸಿ ಉತ್ತಮಸ್ಥಿತಿಯಲ್ಲಿ ವಿದ್ಯಾಭ್ಯಾಸ ಪಡೆದು ಇಂಗ್ಲೀಷ್ ಪ್ರಾಧ್ಯಾಪಕರಾಗಿ ಆಂಗ್ಲಸಾಹಿತ್ಯದ ನೆರಳಿನಲ್ಲಿ ಕುಳಿತು ಛಂದಶ್ಶಾಸ್ತ್ರಕ್ಕೆ ತುಲನಾತ್ಮಕ ಕೊಡುಗೆಯೊಂದಿಗೆ ಕನ್ನಡ ಕಾವ್ಯಕ್ಷೇತ್ರದಲ್ಲಿ ನವೋದಯದ ಆಚಾರ್ಯರೆನಿಸಿ ಕವನಗಳನ್ನು ರುದ್ರನಾಟಕಗಳನ್ನೂ ಕನ್ನಡ ಸಾಹಿತ್ಯ ಪರಂಪರೆಗೆ ಸೇರಿಸಿದವರು; ತೀ.ನಂ.ಶ್ರೀಯವರು ಸಾಮಾನ್ಯ ಅನುಕೂಲದ ಕುಟುಂಬದಲ್ಲಿ ಜನಿಸಿ ಉತ್ತಮ ರೀತಿಯಲ್ಲಿ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿ ಕನ್ನಡ ಪ್ರಾಧ್ಯಾಪಕರಾಗಿ ಅಮೇರಿಕೆಯ ರಾಕ್‌ಫೆಲರ್ ಪ್ರತಿಷ್ಠಾನದ ವಿಶೇಷ ಗೌರವ ವೇತನದೊಂದಿಗೆ ಅಮೇರಿಕೆಗೂ ಹೋಗಿ ಇದ್ದು ಅನಂತರ ಯೂರೋಪ್ ಪ್ರವಾಸವನ್ನೂ ಮಾಡಿ ಸಾಕಷ್ಟು ವಿಶಾಲವಾದ ಅನುಭವದೊಂದಿಗೆ ಬರವಣಿಗೆಯೊಂದಿಗೆ ಮರಣೋತ್ತರ ಪಂಪ ಪ್ರಶಸ್ತಿಯನ್ನು ಗಳಿಸಿಕೊಟ್ಟ 'ಭಾರತೀಯ ಕಾವ್ಯ ಮೀಮಾಂಸೆ' ಎಂಬ ಉನ್ನತ ಕೃತಿಯುನ್ನು ರಚಿಸಿ ಕನ್ನಡವನ್ನು ಶ್ರೀಮಂತಗೊಳಿಸಿದವರು. ಇವರಿಬ್ಬರೂ ವಿಶ್ವವಿದ್ಯಾಲಯಗಳ ಆಶ್ರಯದಲ್ಲಿ ಕರ್ನಾಟಕದಲ್ಲಿಯೇ ಪ್ರಥಮ ದ್ವಿತೀಯ ದೊಡ್ಡ ಪಟ್ಟಣಗಳಾದ ಬೆಂಗಳೂರು ಮೈಸೂರುಗಳಲ್ಲಿ ತಮ್ಮ ಕಾರ್ಯಕ್ಷೇತ್ರಗಳನ್ನು ಕಂಡುಕೊಂಡವರು.

ಆದರೆ ಈ ಶ್ರೀತ್ರಯರಲ್ಲಿ ಮೂರನೆಯವರಾದ ಬಿ.ಹೆಚ್. ಶ್ರೀಧರರ ಬಾಲ್ಯ ವಿದ್ಯಾಭ್ಯಾಸ ಕರ್ತವ್ಯ ಸ್ಥಳಗಳು ಮೇಲಿನ ಶ್ರೀದ್ವಯರಿಗಿಂತ ತುಂಬ ಭಿನ್ನ. ಬಡತನ ಅಲೆದಾಟ ಕಷ್ಟ ಕಾರ್ಪಣ್ಯಗಳೇ ತುಂಬಿದ್ದ, ಆದರೆ ಪ್ರತಿಭೆಯಲ್ಲಿ ವ್ಯುತ್ಪತ್ತಿಯಲ್ಲಿ ಜಾನಪದ ಕಲೆಯಾದ ಯಕ್ಷಗಾನ ಪ್ರಪಂಚದಲ್ಲಿ ಹೃದಯವಂತಿಕೆಯಲ್ಲಿ ಆಗರ್ಭ ಶ್ರೀಮಂತಿಕೆಯಿಂದ ತುಂಬಿಕೊಂಡ ತುಂಬು ಕುಟುಂಬದಲ್ಲಿ ಜನಿಸಿದ ಬಿ.ಎಚ್. ಶ್ರೀಧರರು ವಿದ್ಯೆಗಾಗಿ ಊರೂರು ಅಲೆಯುತ್ತ, ಊಟಕ್ಕಾಗಿ ವಾರಾನ್ನದ ಅನ್ವೇಷಣೆಯನ್ನು ನಡೆಸುತ್ತ, ಮನೆಪಾಠ ಸ್ಕಾಲರ್ ಶಿಪ್‌ಗಳಲ್ಲಿ ತಮ್ಮ ಬವಣೆಗಳನ್ನು ಹೇಗೋ ನೀಗಿಸಿಕೊಳ್ಳುತ್ತ

ಜೊತೆ ಜೊತೆಗೆ ತಂದೆ ತಾಯಿಯರಿಗೂ ನೆರವಾಗುತ್ತ ತಮ್ಮ ವಿದ್ಯಾಭ್ಯಾಸ ಜೀವನವನ್ನು ನಡೆಸಿದವರು. ಇವರು ಸಂಸ್ಕೃತ ಪ್ರಾಧ್ಯಾಪಕರಾಗಿ ಪ್ರಾಂಶುಪಾಲರೂ ಆಗಿ ವಿಶ್ರಾಂತರಾದವರು. ಆದರೆ ಇವರ ಪ್ರಾಧ್ಯಾಪಕತ್ವವೂ ಸಹ ಅಲೆದಾಡುತ್ತ ಯಾವು ಯಾವುದೋ ಅನಿಶ್ಚಿತವಾದ ಸಾಮಾನ್ಯ ಉದ್ಯೋಗಾವಲಂಬನಾ ನಂತರವೇ ದೊರಕಿದ್ದು ಅನ್ನುವುದು ತುಂಬ ನೋವಿನ ಸಂಗತಿ.

ಇಷ್ಟೆಲ್ಲ ಕಷ್ಟಗಳ ಮಧ್ಯೆಯೂ ಬಿ.ಹೆಚ್. ಶ್ರೀಧರರು ಸಂಸ್ಕೃತ ಕನ್ನಡ ಇಂಗ್ಲೀಷ್ ಮೂರೂ ಭಾಷೆಗಳಲ್ಲಿ ಅಸಮಾನ ಪಾಂಡಿತ್ಯವನ್ನು ಗಳಿಸಿಕೊಂಡವರು. ಇಷ್ಟೇ ಅಲ್ಲ ಪಾಶ್ಚಾತ್ಯ ಪೌರ್ವಸ್ತ್ಯ ರಾಜ್ಯಶಾಸ್ತ್ರ ಧರ್ಮಶಾಸ್ತ್ರ ಸಮಾಜಶಾಸ್ತ್ರ ಮನಶ್ಶಾಸ್ತ್ರ ತರ್ಕಶಾಸ್ತ್ರ ಮುಂತಾದ ಅನೇಕಾನೇಕ ವಿಷಯಗಳಲ್ಲಿ ಆಳವಾದ ಪಾಂಡಿತ್ಯವನ್ನು ಪಡೆದವರು ಹಾಗೂ ಈ ಎಲ್ಲ ವಿಷಯಗಳ ಅನೇಕಾನೇಕ ಲೇಖಕರ, ವಿಮರ್ಶಕರ ವಾಕ್ಯಗಳನ್ನು ಪುಂಖಾನುಪುಂಖವಾಗಿ ತಮ್ಮ ಮಾತುಗಳಲ್ಲಿ ಮತ್ತು ಕೃತಿಗಳಲ್ಲಿ ಉದ್ಧರಿಸುತ್ತ ಕೇಳುಗರನ್ನು, ಓದುಗನನ್ನು, ಚರ್ಚೆಗೆಳೆಸಿದವನನ್ನು ಮೂಕ ವಿಸ್ಮಿತನನ್ನಾಗಿ ಮಾಡಿ ಬಿಡುವ ಕಲೆ ಇವರಿಗೆ ಕರತಲಾಮಲಕವಾಗಿತ್ತು. ಆಬಾಲವೃದ್ಧರವರೆಗೆ ಯಾರೇ ಅವರನ್ನು ಭೆಟ್ಟಿಯಾಗಲಿ ಅವರೊಡನೆ ಸರಳವಾಗಿ, ನಿಷ್ಕಲ್ಮಶ ಮನಸ್ಸಿನಿಂದ ಯಾವುದೇ ವಿಷಯವಿರಲಿ ವ್ಯವಹಾರಿಕ ವಿಷಯವೊಂದನ್ನು ಬಿಟ್ಟು (ಏಕೆಂದರೆ ವ್ಯವಹಾರದ ವಿಷಯದಲ್ಲಿ ಅವರು ಏನನ್ನೂ ತಲೆಗೆ ಹಾಕಿಕೊಂಡವರೇ ಅಲ್ಲ.) ತಾಸುಗಟ್ಟಲೆ ಮಾತನಾಡುತ್ತ ಅವರಿಗೆ ಬೇಕೆನಿಸಿದ್ದಕ್ಕಿಂತ ಮೂರು ಪಟ್ಟು ಹೆಚ್ಚಿನ ಮಾಹಿತಿಗಳೊಂದಿಗೆ ಅವರನ್ನು ಕೃತಾರ್ಥರನ್ನಾಗಿ ಮಾಡುತ್ತಿದ್ದರು ಬಿ.ಹೆಚ್.ಶ್ರೀ.

ಬಿ.ಹೆಚ್.ಶ್ರೀಧರರ 'ಕಾವ್ಯಸೂತ್ರ' 'ಜ್ಞಾನಸೂತ್ರ' 'ರಾಷ್ಟ್ರಸೂತ್ರ'ಗಳು ಕನ್ನಡ ಸಾಹಿತ್ಯಾಕಾಶದಲ್ಲಿ ಸದಾ ಮಿನುಗುವ ಮೂರು ಧ್ರುವತಾರೆಗಳು. ಈ ಮೂರರಲ್ಲಿಯೂ ಪಾಶ್ಚಾತ್ಯ ಪೌರ್ವಸ್ತ್ಯ ಸಿದ್ಧಾಂತಗಳ ಜ್ಞಾನ ವಿಜ್ಞಾನಗಳ ಆರೋಗ್ಯಕರ ಮಾಹಿತಿ ವಿವೇಚನೆ ವಿಮರ್ಶೆಗಳಿವೆ. ಈ ಮೂರು ಕೃತಿಗಳಿಂದಾಗಿ ಇವರೆಡೆಗೆ ರಾಷ್ಟ್ರಮಟ್ಟದ ಪ್ರಶಸ್ತಿಗಳ ಪ್ರವಾಹ ಹರಿದು ಬರಬೇಕಾಗಿತ್ತು. ಆದರೆ ನಿಷ್ಠುರ ಸ್ವಭಾವದ ಬಿ.ಹೆಚ್.ಶ್ರೀಯವರು ಯಾವುದೇ ಪ್ರಚಾರದ, ಲಾಬಿಯ, ಕೀರ್ತಿಯ, ಧನದಾಶೆಯ ಬಲೆಗೆ ಎಂದೂ ಬಿದ್ದವರಲ್ಲ; ಆದರೂ ಸಾಹಿತ್ಯ ಅಕೆಡೆಮಿ ಪ್ರಶಸ್ತಿಯೇ ಮುಂತಾದ ಕೆಲವು ಅನಿವಾರ್ಯವಾಗಿ ಇವರಿಗೆ ಸಂದಿವೆ. ಬೇಂದ್ರೆಯವರಿಂದ ಹಾಡಿ ಹೊಗಳಲ್ಪಟ್ಟ ಇವರ ನಿರ್ಭಿಡೆಯ ಜೀವನ–ಕಾವ್ಯ–ವಿಮರ್ಶೆ–ಸಂಸ್ಕೃತಿ–ಅಭಿರುಚಿಗಳೆಂಬ ಪಾಂಚ ಜನ್ಯದ ಧ್ವನಿಯು ಲಾಲಸೆ–ಲಾಬಿ–ಸ್ವಾರ್ಥಗಳನ್ನು ಸೀಳುತ್ತ ಮೊಳಗಿದ್ದರಿಂದಾಗಿ ಹಾಗೂ ಕೀರ್ತಿ ಶಿಖರದ ಉತ್ತುಂಗದಲ್ಲಿರಬೇಕಾಗಿದ್ದ ಇವರ ಸಾಹಿತ್ಯಕ್ಕೆ ಸಮಕಾಲೀನರ ಅವಜ್ಞೆಯಿಂದಾಗಿ ಮತ್ತು ಪ್ರಚಾರದ ಕೊರತೆಯಿಂದಾಗಿ ಅಸಹಾಯಕ ಸ್ಥಿತಿಯೊದಗಿದ್ದು ಶೋಚನೀಯವೇ ಸರಿ. ಇನ್ನಿಬ್ಬರು ಶ್ರೀಯವರಿಗೆ ಲಭಿಸಿದ ಬೆಂಗಳೂರು–ಮೈಸೂರುಗಳಂತಹ ಕಾರ್ಯಕ್ಷೇತ್ರಸ್ಥಾನವು ಇವರಿಗೆ ಅಲಭ್ಯವಾಗಿ ಸಿರಸಿ–ಸಿದ್ಧಾಪುರ

ಕುಮಟಾಗಳಂತಹ ಸಿಟಿಗಳಿಂದ ಬಹುದೂರದ ಚಿಕ್ಕ ಪಟ್ಟಣಗಳ ವಾಸವೂ ಇಲ್ಲಿ ಕಾರಣವಿರಲೂಬಹುದು. ಆದರೆ ಇವರ ಕೃತಿಗಳಲ್ಲಿಯ ಸತ್ವವು ಇವರನ್ನು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಚಿರಕೀರ್ತಿಶಾಲಿಗಳನ್ನಾಗಿ ಅವಶ್ಯವಾಗಿ ನಡೆಸಿಕೊಂಡು ಹೋಗುವುದರಲ್ಲಿ ಸಂಶಯವಿಲ್ಲ.

ಶಿಲ್ಪಶಾಸ್ತ್ರದಲ್ಲಿ ಬಿ.ಹೆಚ್. ಶ್ರೀಯವರ ಪ್ರಾವೀಣ್ಯತೆಯು ಇವರ 'ಭಾರತೀಯ ಮೂರ್ತಿಶಿಲ್ಪ'ದಲ್ಲಿ ಒಡಮೂಡಿದರೆ 'ಪ್ರತಿಭೆ,' 'ದರಾಂಕಿತಬೇಂದ್ರೆ,' 'ಸಂಸ್ಕೃತ ಕನ್ನಡಗಳ ಬಾಂಧವ್ಯ' 'ಭಾವನಾ ಸಮನ್ವಯ' 'ವೇದ ರಹಸ್ಯಸಾರ', 'ಹೊಸಗನ್ನಡ ಸಾಹಿತ್ಯ ಶೈಲಿ' 'ಮುಂತಾದವುಗಳು ಇವರ ಬಹುಮುಖದ ಪಾಂಡಿತ್ಯ ಸಾಮರ್ಥ್ಯಗಳಿಗೆ ಕೈಗನ್ನಡಿಗಳಾಗಿವೆ. 'ಜಾತವೇದ,' 'ರಸಯಜ್ಞ,' ಮುಂತಾದ ಕವನಸಂಕಲನಗಳು ಇವರ ಕಾವ್ಯ ಪ್ರತಿಭೆಯ ದ್ಯೋತಕಗಳಾಗಿವೆ. ಯಕ್ಷಗಾನ, ನಾಟಕ, ಆತ್ಮಕಥೆ ಮುಂತಾದ ಎಲ್ಲ ಪ್ರಕಾರದ ಸಾಹಿತ್ಯ ಕೃತಿಗಳೂ ಇವರಿಂದ ಒಡಮೂಡಿ ಬಂದಿವೆ.

ನಾನು ಪಿಯುಸಿ ಹಾಗೂ ಬಿ.ಎ. ಪದವಿಯ ಪ್ರಥಮ ವರ್ಷ ಹೀಗೆ ಎರಡು ವರ್ಷ ಬಿ.ಹೆಚ್.ಶ್ರೀಧರರ ಶಿಷ್ಯನಾಗಿದ್ದೆನೆಂಬ ಹೆಮ್ಮೆ ನನಗಿದೆ. ಕ್ಲಾಸಿನಲ್ಲಿ ಪಾಠಗಳ ಮಧ್ಯೆ ಅವರು ತರದೇ ಇರುವ ವಿಷಯವೇ ಇರುತ್ತಿರಲಿಲ್ಲ. ಶ್ರೀಧರರ ಕ್ಲಾಸೆಂದರೆ ವಿಶ್ವಕೋಶ ಶ್ರವಣವೇ ಆಗಿತ್ತು. ಅವರ ಮನೆಗೆ ಆಗ ಮಾತ್ರವಲ್ಲದೆ ಮುಂದೆಯೂ ಸಹ ಸಿರ್ಸಿಗೆ ಹೋದಾಗಲೆಲ್ಲ ಹೋಗಿ ಬರದಿದ್ದಲ್ಲಿ ಏನನ್ನೋ ಕಳೆದುಕೊಂಡ ಅನುಭವ ನನ್ನದಾಗಿರುತ್ತಿತ್ತು. ಶ್ರೀಧರರು ನನ್ನನ್ನು ತಮ್ಮ ಅಧ್ಯಾತ್ಮ ಪುತ್ರನೆಂದು ಸ್ವೀಕರಿಸಿದ್ದಾಗಿ ಹೇಳಿ ನನ್ನನ್ನು ಧನ್ಯನನ್ನಾಗಿ ಮಾಡಿದ್ದರು. ನನ್ನದೇ ಹೊಸ ಸಿದ್ಧಾಂತವಾದ 'ಶ್ಲೇಷಸಿದ್ಧಾಂತ' ಕ್ಕೆ ಅವರು ತುಂಬ ಪ್ರೋತ್ಸಾಹಿಸಿದ್ದು ಮಾತ್ರವಲ್ಲದೆ 'ಪಸರಿಪ ಕನ್ನಡಕ್ಕೊಡೆಯನೀಗ ದರಾಂಕಿತ ಬೇಂದ್ರೆ' ಎಂಬ ತಮ್ಮ ಕೃತಿಯ ೨೪ನೆಯ ಪುಟದ ಅಡಿ ಟಿಪ್ಪಣಿಯಲ್ಲಿ ನನ್ನ 'ಶ್ಲೇಷಸಿದ್ಧಾಂತ' ಕೃತಿಯನ್ನು ಓದಬೇಕೆಂದು ತಮ್ಮ ಓದುಗರಿಗೆ ಸೂಚಿಸಿದ್ದು ಇದೆ. ಬಿ.ಹೆಚ್.ಶ್ರೀಧರರ ಶ್ರೀಮತಿ ರಮಾ ಅಮ್ಮನವರು ಶ್ರೀಧರರ ಶಿಷ್ಯರನ್ನು ಪುತ್ರ ವಾತ್ಸಲ್ಯದಿಂದ ಕಾಣುತ್ತ ಅವರ ಮನೆಗೆ ಹೋದಾಗಲೆಲ್ಲ ಅಮೃತಮಯ ತಿಂಡಿ ತಿನಿಸು ಪಾನೀಯಗಳಿಂದ ತೃಪ್ತಿ ಪಡಿಸುತ್ತ ಆ ತೃಪ್ತಿಯಲ್ಲಿ ತಮ್ಮ ಧನ್ಯತೆಯನ್ನು ಕಾಣುತ್ತಿದ್ದುದನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ತಾವೂ ನ್ಯಾಯನಿಷ್ಠುರರಾಗಿ ಬದುಕಿದಂತೆ ನನ್ನಂತಹ ಶಿಷ್ಯರಿಗೂ ಹಾಗೆಯೇ ಬದುಕಲು ಪ್ರೇರೇಪಿಸುತ್ತ ಸರ್ವೇ ಜನಾಃ ಸುಖಿನೋ ಭವಂತು' ಅನ್ನುವ ತತ್ವದಲ್ಲಿ ತಾವು ಬಾಳಿ ಬದುಕಿ ನನ್ನಂತಹ ಅನೇಕರನ್ನು ಆ ತತ್ವದೆಡೆಗೆ ಕೊಂಡೊಯ್ದು ಬಿ.ಹೆಚ್.ಶ್ರೀಧರರು ಶ್ರೀತ್ರಯರಲ್ಲೊಂದಾಗಿ ಚಿರಕೀರ್ತಿಶಾಲಿಗಳಾಗಿ ಭೂತ-ವರ್ತಮಾನ-ಭವಿಷ್ಯತ್ ಕಾಲಗಳಲ್ಲಿಯೂ ಶೋಭಿಸುವುದರಲ್ಲಿ ಸಂದೇಹವಿಲ್ಲ.

ಪ್ರೊ॥ ಗುರುಪಾದ ಕೆ.ಹೆಗಡೆ

ಪ್ರೊ. ಬಿ.ಎಚ್.ಶ್ರೀಧರ – ಒಂದು ನೆನಪು

ಬದುಕಿನಲ್ಲಿ ನಾನು ಭಾಗ್ಯವಂತನೆಂದು ಹೆಮ್ಮೆಪಟ್ಟುಕೊಳ್ಳುವಂಥ ಅನೇಕ ಸಂಗತಿಗಳು ಅನುಭವದಲ್ಲಿವೆ. ಅವುಗಳಲ್ಲಿ ಪ್ರೊ.ಬಿ.ಎಚ್.ಶ್ರೀಧರ ಅವರ ಶಿಷ್ಯನಾಗಿ, ಅವರ ಕೈಕೆಳಗಿನ ಉದ್ಯೋಗಿಯಾಗಿ ಕಳೆದ ಕ್ಷಣಗಳು ಅಂಥವು. ಅವರ ವಿದ್ವತ್ತು–ವ್ಯಕ್ತಿತ್ವಗಳೆರಡೂ ನನ್ನ ಮೇಲೆ ಗಾಢವಾದ ಪ್ರಭಾವವನ್ನು ಬೀರಿದವೆಂಬುದನ್ನು ನಿಸ್ಸಂಕೋಚವಾಗಿ ಹೇಳಬಹುದು. ಅದರಲ್ಲಿ ನನಗೆ ದಕ್ಕಿದ್ದು ಎಷ್ಟೆಂಬುದು ಗೊತ್ತಿಲ್ಲ.

ಶಿರಸಿಯ ಕಾಲೇಜಿನಲ್ಲಿ ಅವರು ಪ್ರಾಧ್ಯಾಪಕರಾಗಿದ್ದ ಸಮಯದಲ್ಲಿಯೇ ನಾನು ಕಾಲೇಜಿಗೆ ಸೇರುವಂತಾದುದು ಭಾಗ್ಯ. ಅನಂತರ ಸಂಸ್ಕೃತವನ್ನೇ ಪ್ರಧಾನ ವಿಷಯವನ್ನಾಗಿ ಆಯ್ದುಕೊಂಡೆ. ಅದು ವಿಶಿಷ್ಟ ಅನುಭವ. ಪ್ರೊ.ಶ್ರೀಧರ ಪಾಠ ಮಧ್ಯಾಹ್ನ ೨–೩೦ರಿಂದ ೫–೩೦ರ ವರೆಗೆ ಸಾಗುತ್ತಿತ್ತು. ನಮಗೆ ಆ ಅವಧಿಯಲ್ಲಿ ಬೇರೆ ತರಗತಿಗಳಿರಲಿಲ್ಲ. ಅವರು ಪಾಠ ಪ್ರಾರಂಭಿಸಿದ ಮೇಲೆ ಗಂಟೆಯ ಕಾಟವಿರಲಿಲ್ಲ. ಆ ಮೂರು ತಾಸಿನಲ್ಲಿ ಅವರು ಪ್ರಪಂಚವನ್ನೆಲ್ಲ ಸುತ್ತಾಡುತ್ತಿದ್ದರೆಂದು ನೆನಪು. ಪಾಠ್ಯದಿಂದ ಪಾಠ ಪ್ರಾರಂಭವಾಗುತ್ತಿತ್ತು. ಅವರ ಅದ್ಭುತವಾದ ವಿಶ್ವಕೋಶಸದೃಶವಾದ ಪಾಂಡಿತ್ಯದ ಕಾರಣದಿಂದ ಬೇರೆ ಬೇರೆ ವಿಷಯಗಳೆಲ್ಲ ಅಲ್ಲಿ ಸೇರಿಕೊಳ್ಳುತ್ತಿದ್ದವು ನಮಗೆ ಅರ್ಥವಾಗುತ್ತದೆಯೋ ಇಲ್ಲವೋ ಎಂಬ ಬಗೆಗೆ ಅವರು ಚಿಂತಿಸುತ್ತಿರಲಿಲ್ಲ. ಕೆಲವೊಮ್ಮೆ ನಮಗೆ ತಲೆ–ಬುಡ ಹತ್ತುತ್ತಿರಲಿಲ್ಲ. ಆದರೆ ಕೇಳುವವರಿಗೆ ಬೇಸರ ಬರದಂತೆ ಹಾಸ್ಯ, ವಿನೋದ, ಕತೆ, ಕವಿತೆಗಳೆಲ್ಲವೂ ಅಲ್ಲಿ ಸೇರಿಕೊಳ್ಳುತ್ತಿದ್ದವಾದ ಕಾರಣ ಸಮಯ ಸರಿದದ್ದು ಗೊತ್ತಾಗುತ್ತಿರಲಿಲ್ಲ.

೧೯೬೩ರಲ್ಲಿ ನಾನು ಸಿದ್ಧಾಪುರ ಕಾಲೇಜಿಗೆ ಅಧ್ಯಾಪಕನಾಗಿ ನಿಯುಕ್ತಗೊಳ್ಳುವಾಗ ಅವರೇ ಪ್ರಾಂಶುಪಾಲರು; ಅವರೇ ಸಂದರ್ಶಕರಾಗಿ ಕುಳಿತು ಕೇಳಿದ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಪಡೆದು ಸಂತೃಪ್ತರಾಗಿ ನನ್ನನ್ನು ನೇಮಿಸಿಕೊಂಡವರು ಅವರೇ. ಸಿದ್ಧಾಪುರದಲ್ಲಿ ವಸತಿ ಸೌಕರ್ಯಕಷ್ಟವಾಗಿತ್ತು. ಆಗ ಶ್ರೀಧರರು ಒಂದು ದೊಡ್ಡಮನೆಯಲ್ಲಿ ವಾಸವಾಗಿದ್ದರು. ಅವರ ಜೊತೆಯಲ್ಲಿ ಮಗಳು ಮಾತ್ರ. ಮನೆಯ ಮಹಡಿಯ ಮೇಲೆ ವಿಶಾಲವಾದ ಸ್ಥಳವಿದೆ, ಅಲ್ಲಿಯೇ ನೀನು ಉಳಿಯಬಹುದೆಂದು ಸೂಚಿಸಿದರು. ನಾನು ಒಂದು ವರ್ಷ ಅವರ ಮನೆಯಲ್ಲಿಯೇ ಇದ್ದೆ. ಅವರೊಡನೆ ಮಾತಿಗೆ ಸಿಗದಂತೆ ಎಚ್ಚರ ವಹಿಸುತ್ತಿದ್ದೆ. ಯಾಕೆಂದರೆ ಅವರೊಂದಿಗೆ ಮಾತಿಗೆ

ಕುಳಿತರೆ ಸುಲಭದಲ್ಲಿ ಬಿಡುಗಡೆಯಿಲ್ಲವೆಂಬುದು ನನ್ನ ಅನುಭವ. ಸಾಕಷ್ಟು ವಿರಾಮವಿದ್ದರೆ ಮಾತ್ರ ಮಾತಿಗಿಳಿಯಬಹುದು. ಮಾತಿಗಿಳಿಯುವುದೆಂದರೆ ಹೂಂಗುಟ್ಟುವುದು ಎಂದರ್ಥ. ಮಧ್ಯದಲ್ಲಿ ಒಂದೆರಡು ವಾಕ್ಯಗಳನ್ನು ಸೇರಿಸಲು ಅವಕಾಶ ದೊರೆತರೆ ಅದೇ ನಮ್ಮ ಪುಣ್ಯ.

ಶ್ರೀಧರರು ಶೀಘ್ರಕೋಪಿಗಳು. ಸಿಟ್ಟು ಬಂದಷ್ಟೇ ವೇಗದಲ್ಲಿ ತಣ್ಣಗಾಗುತ್ತಿತ್ತು. ಅವರು ಸರಳಸ್ವಭಾವದವರು. ಅವರನ್ನು ನಂಬಿಸುವುದು ಸುಲಭ. ಇದು ನಮ್ಮ ಕೆಲವು ಸಹೋದ್ಯೋಗಿಗಳಿಗೆ ಗೊತ್ತಿತ್ತು. ಅದನ್ನು ಬಳಸಿಕೊಂಡು ನನ್ನ ವಿರುದ್ಧ ಕಿವಿಯೂದಿದರು. ಶ್ರೀಧರರು ಅದನ್ನು ನಂಬಿ ನನ್ನನ್ನು ಕರೆಸಿ ಚೆನ್ನಾಗಿ ಬಯ್ದರು. ನಾನು ಮಾಡಿದ್ದು ತಪ್ಪು; ತಕ್ಷಣದಲ್ಲಿ ಅದನ್ನು ತಿದ್ದಿಕೊಳ್ಳುವಂತೆ ಗದರಿಸಿದರು. ನನ್ನ ನಿಲುಮೆ ಸ್ಪಷ್ಟವಾಗಿತ್ತು. ನಾನು ಸಂಗತಿಯೆಲ್ಲವನ್ನೂ ವಿವರಿಸಿ ನಾನು ಯಾವ ತಪ್ಪನ್ನು ಮಾಡಲಿಲ್ಲವೆಂದು ವಿವರಿಸಿದರೂ ಕೇಳದೆ ಅವರು ಹಟಹಿಡಿದಾಗ ನಾನೂ ಕೆರಳಿದೆ. ರಾಜೀನಾಮೆಯನ್ನು ಕೊಡಲು ಸಿದ್ಧ'; ಎಂದು ಹೇಳಿ ಹೊರಬಂದೆ. ಮನೆಗೆ ಬಂದು ರಾಜೀನಾಮೆಯ ಪತ್ರವನ್ನು ಬರೆಯುವ ಹವಣಿಕೆಯಲ್ಲಿದ್ದೆ. ಶ್ರೀಧರರು ಮನೆಗೆ ಬಂದವರೇ ನನ್ನನ್ನು ಕರೆದು. "ನೀನು ಸರಿಯಾಗಿದ್ದಿ. ನಂಬಿದ ಸಿದ್ಧಾಂತಕ್ಕಾಗಿ ರಾಜೀನಾಮೆ ಕೊಡುವುದಕ್ಕೂ ಸಿದ್ಧನಾಗಿರುವುದು ನಿನ್ನ ನಿಷ್ಠೆ" ಎಂದೆಲ್ಲ ಹೇಳಿ ನನ್ನ ಬೆನ್ನು ತಟ್ಟಿದರು. ಅಂದಿನಿಂದ ನಾನು ಕಿರಿಯನಾಗಿದ್ದರೂ ನನ್ನ ಕಿರಿತನವನ್ನು ಗಣಿಸುತ್ತಿರಲಿಲ್ಲ. ಮತ್ತೆಂದೂ ನನ್ನ ವಿರುದ್ಧದ ಮಾತುಗಳಿಗೆ ಕಿವಿಗೊಡಲಿಲ್ಲ.

ನಾನು ಬ್ರಹ್ಮಸೂತ್ರ ಚತುಃ ಸೂತ್ರಿಯೆಂಬ ಹೆಸರಿನಲ್ಲಿ ಶಾಂಕರಭಾಷ್ಯವನ್ನು ಅನುವಾದಿಸಿ ಟಿಪ್ಪಣಿಗಳೊಂದಿಗೆ ಪ್ರಕಟಿಸಿದ್ದೆ. ಅದನ್ನು ಶ್ರೀಧರರಿಗೆ ತೋರಿಸಿರಲಿಲ್ಲ. ನನಗೆ ಸಂಕೋಚ; ಅಳುಕು. ಆಗಲೇ ಅವರು ನಿವೃತ್ತರಾಗಿ ಶಿರಸಿಯಲ್ಲಿ ನೆಲಸಿದ್ದರು. ಇಡಗುಂಜಿ ಮೇಳದ ಆಟವೊಂದರಲ್ಲಿ ನಾನು ಭಾಗವಹಿಸಲು ಒಂದು ಚೌಕಿಗೆ ಹೋದಾಗ ಗುರುಗಳನ್ನು ಕಂಡು ನಮಸ್ಕರಿಸಿದೆ. ಅವರು ಹೇಳಿದರು, "ನಿನ್ನ ಬ್ರಹ್ಮಸೂತ್ರ ಚತುಃಸೂತ್ರಿಯನ್ನು ನೋಡಿದೆ." ನನಗೆ ಎದೆ ಹೊಡೆದುಕೊಳ್ಳಲಾರಂಭಿಸಿತು. ಪೆದ್ದುಪೆದ್ದಾಗಿ ಅವರತ್ತ ನೋಡುತ್ತಲಿದ್ದೆ. "ಅನುವಾದ ಚೆನ್ನಾಗಿದೆ. ಎಷ್ಟು ಚೆನ್ನಾಗಿ ಬಂದಿದೆ ಅಂದರೆ It is a model for others. ಟಿಪ್ಪಣಿಗಳೂ ಚೆನ್ನಾಗಿವೆ. ಮಾಸ್ತರುಗಳಿಗೆ ಬೇರೆ ಪುಸ್ತಕವೇ ಬೇಕಿಲ್ಲ." ನಾನು ನಿಟ್ಟುಸಿರು ಬಿಟ್ಟೆ. ಅವರ ಮಾತುಗಳು ಧೈರ್ಯ ತುಂಬಿದವು. ಮುಂದೆ ಅಂಥ ಕಾರ್ಯಗಳಲ್ಲಿ ತೊಡಗಲು ಪ್ರೇರಕವಾದವು.

ಅವರ ವಿದ್ವತ್ತು–ಪಾಂಡಿತ್ಯಗಳು ಪ್ರಸಿದ್ಧ. ಆದರೆ ನನಗೆ ಅವರ ಹೃದಯವಂತಿಕೆ ಇಷ್ಟ. ಅವರ ಪ್ರಖರವಾದ ಪಾಂಡಿತ್ಯಕ್ಕೆ ಸರಿಸಮವಾದದ್ದು ಅವರ ನಡವಳಿಕೆ. ಅವರು ಪರೋಪದೇಶ ಪಂಡಿತರಾಗಿರಲಿಲ್ಲ. ತಾವಾಡುವ ಮಾತುಗಳಿಗೆ ತಕ್ಕಂತೆ ನಡೆದುಕೊಂಡವರು. ಅಂತರಂಗ ಬಹಿರಂಗಗಳಲ್ಲಿ ಶುಚಿತ್ವವನ್ನು ಕಾಪಾಡಿಕೊಂಡವರು.

ವ್ಯಕ್ತಿಗಳ ಕುರಿತು ಮತ್ಸರ–ದ್ವೇಷಗಳನ್ನಿಟ್ಟುಕೊಂಡವರಲ್ಲ. ಅವರಿಗೆ ಸಿಟ್ಟು ಬಂದಾಗ ಚೆನ್ನಾಗಿ ಬಯ್ಯುತ್ತಿದ್ದರು. ಆದರೆ ಹಗೆತನವನ್ನು ಸಾಧಿಸುವ ಸ್ವಭಾವದವರಾಗಿರಲಿಲ್ಲ. ಗುಣವನ್ನು ಕಂಡಾಗ ಮೆಚ್ಚಿಕೊಳ್ಳುವಲ್ಲಿ ಕಾರ್ಪಣ್ಯವಿರಲಿಲ್ಲ. ಕಪಟ–ವಂಚನೆಗಳಿಗೆ ಅವರ ಹೃದಯದಲ್ಲಿ ಸ್ಥಾನವಿರಲಿಲ್ಲ. ಅವರ ವಾತ್ಸಲ್ಯ–ಹೃದಯವಂತಿಕೆಗಳ ಮಾಧುರ್ಯ ಅಪೂರ್ವವಾದುದು. ಅಂಥವರ ಬಳಿಯಲ್ಲಿ ಕೆಲವು ಕಾಲವನ್ನು ಕಳೆಯುವ ಅವಕಾಶ ದೊರೆತದ್ದು ಸುದೈವ.

ಪ್ರೊ. ಎಂ.ಎ. ಹೆಗಡೆ
ನಿವೃತ್ತ ಪ್ರಾಂಶುಪಾಲರು
ವರ್ಧುಕಂಪೌಂಡ, ಬನವಾಸಿ ರಸ್ತೆ, ಶಿರಸಿ (ಉ.ಕ.)

ಬಿ.ಎಚ್.ಶ್ರೀಧರರೊಡನೆ ನನ್ನ ಸಾಹಚರ್ಯ – ಗುರುಶಿಷ್ಯ ಬಾಂಧವ್ಯ

ಎತ್ತಣ ಮಾಮರ ಎತ್ತಣ ಕೋಗಿಲೆ, ಎತ್ತಣ ಮಾಂಗಾಯ್ ಎತ್ತಣ ಮಹಾಸಾಗರ, ಎತ್ತಣಿಂ ಎತ್ತಣ ಸಂಬಂಧ?! ಅಲ್ಲವೆ? ಹೌದು ನಾನು ಒಂದು ಹರಳುಪ್ಪು, ಬಿ.ಎಚ್.ಶ್ರೀಧರರು ಮಹಾ ಮೇರು. ಆದರೂ ನನ್ನನ್ನು ಅಂತರಾಳದಲ್ಲಿ ಸೇರಿಸಿಕೊಂಡರು. ಇದು ನಾನು ಪಡೆದುಕೊಂಡು ಬಂದ ಭಾಗ್ಯ.

ನಾನು ಕುಮಟಾ ಕೆನರಾ ಕಾಲೇಜು (ಈಗ ಎ.ಪಿ.ಬಾಳಿಗಾ ಆರ್ಟ್ಸ್ ಎಂಡ್ ಸೈನ್ಸ್ ಕಾಲೇಜು) ಸೇರಿದಾಗ ನಾನೊಂದು ಮಹಾಸಾಗರದಲ್ಲಿ ತೇಲುವ ಸಣ್ಣ ಕಸವೆಂದೇ ನನಗನಿಸುತ್ತಿತ್ತು. ಆಗ ಕಾಲೇಜಿನಲ್ಲಿ ಕಲಿಸುವ ಗುರು ವೃಂದವು ಮಹಾಮಹಾ ಮೇಧಾವಿಗಳ ಸಮೂಹ. ಡಾ। ಕೆ.ಕೃಷ್ಣಮೂರ್ತಿ, ಪ್ರೊ.ಬಿ.ಎಚ್.ಶ್ರೀಧರ, ಪ್ರೊ.ಜಿ.ಎಸ್.ಆಮೂರ, ಪ್ರೊ.ಗೋಪಾಲಕೃಷ್ಣ ಅಡಿಗ, ಪ್ರೊ.ಎನ್.ಆರ್.ರಾವ್, ಪ್ರೊ.ಎಲ್.ಆರ್.ಹೆಗಡೆ, ಪ್ರೊ.ಕೆ.ಜಿ.ಶಾಸ್ತ್ರಿ, ಪ್ರೊ.ಲಿಂಗೇಶ ಶರ್ಮಾ, ಪ್ರೊ.ಎನ್.ಎ.ಹನುಮಂತರಾವ್ ಇತ್ಯಾದಿ. ನಾನು ಕನ್ನಡದ ಮಾಧ್ಯಮದಲ್ಲಿ ಕಲಿತವನು. ಕಾಲೇಜು ಪ್ರವೇಶಿಸಿದೊಡನೆ ಎಲ್ಲಾ ಇಂಗ್ಲೀಷ್‌ಮಯ. ನನಗೆ ೨–೩ ತಿಂಗಳು ಜೀರ್ಣಿಸಿಕೊಳ್ಳುವುದು ಕಷ್ಟವಾಯಿತು. ನನ್ನಂತೆ ಕೆಲವರಿಗಾದರೂ ಈ ಅರಿವಾಗಿರಬಹುದೆಂಬ ಗ್ರಹಿಕೆ ನನ್ನದು. ನಾನು ರಣರಂಗದಿಂದ ಓಡಿ ಬರುವುದು ಸರಿಯಲ್ಲ. ನನ್ನ ಮೇಲೆ ನಂಬಿಗೆಯಿಟ್ಟು ಕಾಲೇಜಿಗೆ ಕಳಿಸಿದ ನನ್ನ ತಂದೆತಾಯಿಗಳಿಗೆ ನಿರಾಸೆ, ನನ್ನ ನೆಂಟರಿಷ್ಟರ ಎದುರಿಗೆ ನನ್ನ ಮಾನಕ್ಕೆ ಮುಕ್ಕು, ನನ್ನ ಕಲಿಯಲೇ ಬೇಕೆಂಬ ಮಹತ್ವಾಕಾಂಕ್ಷೆಯ ಬೇರನ್ನು ಲಡ್ಡಾಗಿಸುವುದು, ಇವು ಯಾವವೂ ನನಗೆ ಬೇಡವಾದ ಸಂಗತಿ. ಕ್ಲಾಸಿನಲ್ಲಿ ಕುಳಿತಾಗ ಮೈ ಬೆವರುತ್ತಿತ್ತು. ಕಣ್ಣಿಗೆ ಕತ್ತಲೆ ಕಟ್ಟಿದಂತಾಗುತ್ತಿತ್ತು. ನಾನು ಇಲ್ಲಿ ಸಲ್ಲುವವನಲ್ಲವೆಂದೇ ಅನಿಸುತ್ತಿತ್ತು. ಆದರೆ ನಮ್ಮ ಗುರುಗಳಲ್ಲಿ ಒಬ್ಬೊಬ್ಬರೂ ಪಾಠಮಾಡುವ ಕ್ರಮ ಮಾತ್ರ ರೋಮಾಂಚನವನ್ನುಂಟು ಮಾಡುತ್ತಿತ್ತು; ಕಾಲೇಜಿನಲ್ಲಿ ಹಿಡಿದಿಟ್ಟಿತು.

ಇವರಲ್ಲೆಲ್ಲ ನನಗೆ “ಅಚ್ಚುಮೆಚ್ಚಿನವರೆಂದರೆ ಪ್ರೊ.ಬಿ.ಎಚ್.ಶ್ರೀಧರರು. ಶ್ರೀಧರರು ಕಲಿಸುವ ಕ್ರಮವೇ ವಿಶಿಷ್ಟವಾಗಿತ್ತು. ಅವರು ಜ್ಞಾನದ ಮಹಾಸಾಗರವೇ ಸೈ. ಅವರು

ಕಲಿಸುವ ವಿಷಯ ಸಂಸ್ಕೃತ. ನಮಗೆ ಕಾಲೇಜಿನ ಪ್ರಥಮ ವರ್ಷದಲ್ಲಿ ಹಚ್ಚಿದ್ದು ಕಾಲಿದಾಸನ ರಘುವಂಶ. ಅವರು ಮೊದಲು ವಿದ್ಯಾರ್ಥಿಗಳ ಮನದಾಳವನ್ನು ಸೇರುವ ಪರಿಯೇ ಅಮೋಘ. ಅವರಲ್ಲಿರುವ ಪರಕಾಯ ಪ್ರವೇಶ ಶಕ್ತಿಯೇ ನಮ್ಮನ್ನು ತನ್ಮಯಗೊಳಿಸಿ ವಿಷಯವನ್ನು ತಿಳಿಗೊಳಿಸಿ ಸಂಮೋಹಿಸಿ ಬಿಡುತ್ತಿತ್ತು. ಹಾಗೆ ನೋಡಿದರೆ ಅವರು ಒಂದು ಶ್ಲೋಕವನ್ನೆತ್ತಿಕೊಂಡು ಅದನ್ನು ವಿವರಿಸಲು ಹೊರಟರು ಎಲ್ಲಿಂದ ಎಲ್ಲಿಗೋ ಹೋಗಿ ಪುನಃ ಎಲ್ಲಿಂದ ಹೊರಟಿದ್ದರೋ ಅಲ್ಲಿಗೇ ತಂದು ನಿಲ್ಲಿಸುವ ಕ್ರಮವೇ ಒಂದು ಬೆರಗು. ವಿಷಯವನ್ನ ಹತ್ತಿರಗೊಳಿಸಿ ಅಲ್ಲೇ ಅಲ್ಲಿಯೇ ಸೃಷ್ಟಿಸ್ಥಿತಿಲಯಗಳ ದರ್ಶನ ಮಾಡಿಸುತ್ತಿದ್ದರು. ಕಾಲೇಜಿನ ಪಾಠಕ್ರಮವೇ ಒಂದು ದರ್ಶನ ತಮ್ಮ ದರ್ಶನವನ್ನು ಶಿಷ್ಯರಲ್ಲಿ ದರ್ಶಿಸುವ ಗುರುವೇ ನಿಜವಾದ ಗುರು. 'ತತ್ಪದಂ ದರ್ಶಿತಂ ಯೇನ ತಸ್ಮೈ ಶ್ರೀ ಗುರವೇ ನಮಃ' ಇಂಥ ಗುರು ಇವರು. ಹೀಗಾಗಿ ಬಿ.ಎಚ್.ಶ್ರೀಧರರು ಜನಪ್ರಿಯ – ಶಿಷ್ಯಸ್ತೋಮ ಪ್ರಿಯರಾಗಿದ್ದರು.

ಅವರು ಶಿಷ್ಯರಲ್ಲಿ ಎಷ್ಟು ಜನಪ್ರಿಯರಾಗಿದ್ದರು? ಅವರಲ್ಲಿ ಕಲಿತವರೆಲ್ಲರಿಗೆ ಅವರು ಅಚ್ಚು ಮೆಚ್ಚು – ಅವರಲ್ಲಿ ಅಪಾರವಾದ ಗುರುಭಕ್ತಿ. ನಾವು ಇಂಟರ್ ಮಿಡಿಯೆಟ್‌ನಲ್ಲಿ (ಕಾಲೇಜಿನ ದ್ವಿತೀಯ ವರ್ಷ), ಓದುತ್ತಿರುವಾಗ, ಬಿ.ಎಚ್.ಶ್ರೀಧರರನ್ನು ಕಾಲೇಜಿನಿಂದ ಹೊರಕಳಿಸುವ ಹುನ್ನಾರ ನಡೆಯಿತು. ಬಿ.ಎಚ್.ಶ್ರೀಧರರೇ ಕರೆತಂದ ಅವರ ಆಪ್ತಮಿತ್ರರೂ ಅವರ ಸಹಪಾಠಿಗಳೂ ಇವರ ನಂತರ ಬಂದು ಸೇರಿಕೊಂಡವರೂ ಇವರಿಗೆ ಅಪಚಾರ ಮಾಡಿ ಪ್ರಾಂಶುಪಾಲರಿಗೆ ಏನೇನೋ ಹೇಳಿ ತಾನು ಸೀನಿಯರ್ ಪೋಸ್ಟ ಪಡೆದುದಲ್ಲದೆ, ಇವರಿಗೆ ಮೇಲಿನ ಕ್ಲಾಸುಗಳಿಗೆ ಪಿರಿಯಡ್ ಕೊಡದೆ, ಪ್ರಥಮ ಮತ್ತು ದ್ವಿತೀಯ ವರ್ಷಗಳಿಷ್ಟೇ ಪಿರಿಯಡ್ ಕೊಟ್ಟು, ಅವಮಾನಿತರಾಗಿ ತಾವೇ ಕಾಲೇಜು ಬಿಟ್ಟು ಹೋಗುವ ಮುಜುಗರದ ವಾತಾವರಣವನ್ನು ನಿರ್ಮಿಸಿಬಿಟ್ಟರು. ಒಡನೆಯೇ ಇಡೀ ಕಾಲೇಜಿನ ವಿದ್ಯಾರ್ಥಿಗಳು ಮುಷ್ಕರ ಮಾಡಿದರು. ಆಗ ಪ್ರಾಚಾರ್ಯರು, ಉಪಪ್ರಾಚಾರ್ಯರು ಎಷ್ಟೇ ಬೆದರಿಕೆ ಒಡ್ಡಿದರೂ ಹೆದರಲಿಲ್ಲ. ಕ್ಲಾಸುಗಳಿಗೆ ಹೋಗಲೇ ಇಲ್ಲ. ಇದು ೧೯೫೫–೫೬ರ ಸಮಯ. ಆಗ ಮುಷ್ಕರ ಗಿಷ್ಕರಗಳೆಲ್ಲ ಶಾಲೆ ಕಾಲೇಜುಗಳಲ್ಲಿ ಕನಸು. ಬಿ.ಎಚ್.ಶ್ರೀಧರರಿಗೆ ಯಥಾ ಸ್ಥಿತಿಯನ್ನು ನೀಡುವರೆಗೆ ಯಾರೂ ಕ್ಲಾಸಿಗೆ ಹೋಗುವುದಿಲ್ಲವೆಂದು ಖಡಾಖಂಡಿತವಾಗಿ ಸ್ಟೂಡೆಂಟ್ಸ್ ಯೂನಿಯನ್ ಮುಖಂಡ ಎನ್.ಎಮ್.ನಾಯ್ಕರು ಪ್ರಾಚಾರ್ಯರಿಗೆ ತಿಳಿಸಿದರು. ಎನ್.ಎಮ್.ನಾಯ್ಕ ಆದರ್ಶ ನೇತಾರ. ಆ ಎಳಮೆಯಲ್ಲೇ ಅವನಲ್ಲಿ ಒಬ್ಬ ದಿಟ್ಟ ಮುಖಂಡನಿದ್ದ. ಮುಂದೆ ಇವನು ಮುಂಬೈಯಲ್ಲಿ ಪ್ರಸಿದ್ಧ ಟ್ರೇಡ್ ಯೂನಿಯನ್ ಮುಖಂಡನಾದನೆಂದು ಕೇಳಿದ್ದೇನೆ. ನಾನು ಇವನ ಬೆನ್ನಿಗೆ ಗಟ್ಟಿಯಾಗಿ ನಿಂತವರಲ್ಲಿ ಒಬ್ಬ. ನಾನು ನ್ಯಾಯಾನ್ಯಾಯಗಳನ್ನು ತೂಕ ಮಾಡಿದವನಲ್ಲ. ಪ್ರಾಯಶಃ ನನಗೆ ಆ ತೂಕಮಾಡುವ ಪ್ರಜ್ಞೆಯೂ ಇದ್ದಂತಿಲ್ಲ. ಬಿ.ಎಚ್.ಶ್ರೀಧರರ ಮೇಲಿನ ಅಭಿಮಾನ ಹಾಗೂ ಗೌರವ ನನ್ನಲ್ಲಿ ಅಷ್ಟು ತೀವ್ರವಾಗಿತ್ತು. ಎನ್.ಎಮ್.ನಾಯ್ಕ ಗಟ್ಟಿಗನೆಂಬ

ದೃಢ ವಿಶ್ವಾಸವಿತ್ತು. ಅಂತೂ ನಮ್ಮ ಚಳುವಳಿಗೆ ಜಯ ಸಿಕ್ಕಿತು. ನನ್ನ ಮೆಚ್ಚಿನ ಗುರುಗಳು ಮಾನಮನ್ನಣೆಗಳೊಡನೆ ಸ್ಥಾನಾಪನ್ನರಾದರು.

ಮುಂದೆ ಇಂಥ ಸಮಸ್ಯೆಗಳುಂಟಾದರೆ ಇರಲಿ ಎಂದು ಭಾರಿ ಮುಂದಾಲೋಚನೆಯುಳ್ಳ ಎನ್.ಎಮ್.ನಾಯ್ಕ ನಾವೆಲ್ಲ ಸೇರಿ ಒಂದು ಯೂನಿಯನ್ ಮಾಡೋಣ ಎಂದು ನಮ್ಮನ್ನೆಲ್ಲ ಹುರಿದುಂಬಿಸಿದ. ಆ ಕಾಲದಲ್ಲಿ ಇದಕ್ಕೆ ಅವಕಾಶ ಇತ್ತೋ ಇಲ್ಲವೋ ಗೊತ್ತಿಲ್ಲ. ಯಾವ ಕಾರಣಕ್ಕೋ ಏನೋ 'ಸ್ಟುಡೆಂಟ್ಸ ಸ್ಟಡಿ ಸರ್ಕಲ್' ಎಂಬ ಹೆಸರಿನ ಒಂದು ಸಂಘಟನೆಯನ್ನು ಎನ್.ಎಮ್.ನಾಯ್ಕ ಹುಟ್ಟು ಹಾಕಿದ. ಎನ್.ಎಮ್.ನಾಯ್ಕನ ಅಣ್ಣ ಕಂದಾಯ ಇಲಾಖೆಯಲ್ಲಿ ಅಧಿಕಾರಿಯಾಗಿದ್ದ. ಬಹುಶಃ ಅವರ ಉದ್ಯೋಗಕ್ಕೆ ತೊಂದರೆ ಆಗಬಾರದೆಂದೂ ಇದ್ದಿರಬಹುದು. ಆ ಕಾಲದಲ್ಲಿ ಸರಕಾರಿ ಉದ್ಯೋಗ ತುಂಬಾ ಸೂಕ್ಷ್ಮ ಸಂವೇದಿಯಾಗಿತ್ತೆಂದು ಕಾಣುತ್ತದೆ. ಆ ಸಂಘಟನೆಯಲ್ಲಿ ಕುಮಟೆಯ ಪ್ರಸಿದ್ಧ ವೈದ್ಯರಾದ ಡಾ। ಎಸ್.ಕೆ.ಭಟ್ಟ ಹಳಕಾರ (ಹಳಕಾರ ಡಾಕ್ಟರರೆಂದೇ ಪ್ರಖ್ಯಾತರು), ಇವರ ಮಗ ತುಳಸಿದಾಸ, ಎಮ್.ವಿ.ಭಟ್ಟ ಕೂಜಳ್ಳಿ, ಎಸ್.ಜಿ.ಭಟ್ಟ ಕೆಕ್ಕಾರ, ನಾನು, ಆರ್.ಎಸ್.ಪ್ರಭು, ಎಸ್.ಜಿ.ಶಾನಭಾಗ ಹೀಗೆ ಎಷ್ಟೋ ವಿದ್ಯಾರ್ಥಿಗಳು ಸೇರಿಕೊಂಡೆವು. ಎನ್.ಎಮ್.ನಾಯ್ಕ ಒಳ್ಳೇ ಸಂಘಟಕ, ಆಪ್ತಮಿತ್ರ, ಚುಂಬಕ ಶಕ್ತಿಯ ಮುಂದಾಳು. ಡಾ॥ ಹಳಕಾರ ಅವರ ಅಂಗಡಿಗಳ ಕಾಂಪ್ಲೆಕ್ಸ ಮಾಳಿಗೆಯ ಮೇಲಿನ ಒಂದು ಕೋಣೆಯನ್ನು ಇವರ ಮಗ ತುಳಸಿದಾಸ ಒದಗಿಸಿಕೊಟ್ಟ. ಕುಮಟೆಯ ಸುಪ್ರಸಿದ್ಧ ವ್ಯಕ್ತಿಗಳ ಮಕ್ಕಳೆಲ್ಲ ಈ ಸಂಘಟನೆಯ ಸದಸ್ಯರು. ಹೀಗಾಗಿ ಇದೊಂದು ಬಲವಾದ ಸಂಸ್ಥೆಯೇ ಆಗಿತ್ತು. ಇನ್ನು ಮುಂದೆಂದಾದರೂ ಕೆನರಾ ಕಾಲೇಜ ಸಂಸ್ಥೆ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿದರೆ ಹೋರಾಡಲಿಕ್ಕಾಗೇ ಹುಟ್ಟಿಕೊಂಡ ಸಂಸ್ಥೆ ಇದು. ಪ್ರಾಯಶಃ ಬಿ.ಎಚ್.ಶ್ರೀಧರರ ರಕ್ಷಣೆಗಾಗಿ ಹುಟ್ಟಿಕೊಂಡ ಬ್ರಹ್ಮಾಸ್ತ್ರ. ಮುಂದೆಂದೂ ಬಿ.ಎಚ್.ಶ್ರೀಧರರ ಉದ್ಯೋಗಕ್ಕೆ ತೊಂದರೆ ಬರದಿದ್ದುದು ಗಮನಾರ್ಹ.

ಇಂಟರಮಿಡಿಯಟ್ ಮುಗಿದೊಡನೆ ನಾನು ನನ್ನ ಮನೆಯ ಬಡತನದಿಂದಾಗಿ ವಿದ್ಯಾಭ್ಯಾಸವನ್ನು ನಿಲ್ಲಿಸಿದೆ. ೧೫–೨೦ ಮೈಲು ಆಚೆಗಿರುವ ಅಘನಾಶಿನಿ ತೀರದ ಒಂದು ಕುಗ್ರಾಮದಲ್ಲಿ ನಾನೇ ಒಂದು ಪ್ರಾಥಮಿಕ ಶಾಲೆಯನ್ನು ಸ್ಥಾಪಿಸಿ ಶಿಕ್ಷಕನಾದೆ. ನನ್ನೊಬ್ಬನ ಊಟ ತಿಂಡಿಯ ಹೊರೆಯಾದರೂ ಕಡಿಮೆ ಆಯಿತಲ್ಲ, ಅಂಥ ಬಡತನ ನಮ್ಮದಾಗಿತ್ತು. ನಾನು ಶಿಕ್ಷಕ ವೃತ್ತಿಯಲ್ಲಿ ತನ್ಮಯನಾದೆ. ಇತ್ತ ನನ್ನ ಸ್ನೇಹಿತರಿಂದ ದೂರವಾದೆ. ಆ ಕಾಲದಲ್ಲಿ ನನ್ನ ಸ್ನೇಹಿತರಲ್ಲಿ ಪ್ರಸಿದ್ಧರು. ಎನ್.ಎಸ್.ರೇವಣ್ಣ, ಎನ್.ಎಂ.ನಾಯ್ಕ, ತುಳಸೀದಾಸ, ಆರ್.ಎಸ್.ಪ್ರಭು, ಜಿ.ವಿ.ಭಟ್ಟ, ಮಿರ್ಜಾನಿ, ಅಸದ್ದಿ, ಎಸ್.ಜಿ.ಭಟ್ಟ, ಎಮ್.ವಿ.ಭಟ್ಟ, ಎಸ್.ಜಿ.ಶಾನಭಾಗ ಇವರಲ್ಲಿ ಹಲವರೊಡನೆ ನನ್ನ ಸ್ನೇಹ ಕಳಚಿ ಹೋಯಿತು. ಸಂಸಾರವೆಂದರೇ ಹೀಗೆ, ಹರಿಯುವ ನದಿ, ಅದು

ಟಿಸಿಲೊಡೆದು ಬೇರೆ ದಿಕ್ಕಿನಲ್ಲಿ ಹರಿಯಿತು. ಅಲ್ಲಿ ಬೇರೆಯವರೇ ಸಂಗಾತಿಗಳು. ಆದರೆ ಬಿ.ಎಚ್.ಶ್ರೀಧರರ ಸಾಹಚರ್ಯವನ್ನು ಕಳಚಿಕೊಳ್ಳದಾದೆ. ಅವರ ವಿದ್ವತ್‌ಕಾಂತತ್ವವೇ ಹಾಗೆ. ಆಗ ಈಗ ಬಿಡುವಾದಾಗ ಅವರ ಮನೆಯಲ್ಲಿ ಹೋಗಿ ಅವರ ಎಡೆಯಲ್ಲೇ ಕುಳಿತು ಅವರ ಮಾತನ್ನಾಲಿಸುತ್ತಿದ್ದೆ. ಸಹಜವಾಗಿ ಮಾತಾಡುತ್ತಿದ್ದರೂ ಅವರ ಮಾತಿನಲ್ಲಿ ತಾತ್ವಿಕ ಚಿಂತನೆಗಳಿರುತ್ತಿದ್ದವು. ವೇದಾಂತವಿರುತ್ತಿತ್ತು. ಶಾಸ್ತ್ರಗಳ ವಿಸ್ತರಣೆಗಳಿರುತ್ತಿದ್ದವು. ಮಹಾಪುರುಷರ ತೌಲನಿಕ ಪರಾಮರ್ಶೆಗಳಿರುತ್ತಿದ್ದವು. ಪ್ರಜಾಪ್ರಭುತ್ವದ ಲಕ್ಷಣ, ಹಿಂದು ಮುಂದುಗಳ ಕುರಿತು ವಿಶ್ಲೇಷಣೆ ಇರುತ್ತಿದ್ದವು. ಪ್ರಾಮಾಣಿಕತೆ, ಸತ್ಯ, ನೀತಿ, ನ್ಯಾಯಗಳ ಕುರಿತಾದ ಯಥಾರ್ಥ ಜ್ಞಾನ ಗಂಗೆಯು ಅಲ್ಲಿ ಹರಿಯುತ್ತಿತ್ತು. ಸಾಹಿತ್ಯ, ಕಲೆ, ವಿಜ್ಞಾನ, ತಮಾಷೆ, ಆಧುನಿಕ ಕನ್ನಡ ಸಾಹಿತ್ಯ, ಪ್ರಾಚೀನ ಸಾಹಿತ್ಯ ಇವುಗಳ ಮೇಲೆ ಬೆಳಕು ಚೆಲ್ಲುವ ಇವರ ಮಾತಿನ ಮೋಡಿಯಲ್ಲಿ ನಾನು ಮೈಮರೆಯುತ್ತಿದ್ದೆ. ನಾನು ಸಾಮಾನ್ಯವಾಗಿ ರವಿವಾರವೇ ಅವರ ಮನೆಗೆ ಹೋಗುತ್ತಿದ್ದುದು. ನಾನು ಇದ್ದ ಹಳ್ಳಿಯ ಕೊಂಪೆಯಲ್ಲಿರುವ ಗ್ರಾಮೀಣ ಜನರಲ್ಲಿ ಅನೇಕರು ಸುಸಂಸ್ಕೃತರಾಗಿದ್ದರು. ಬದುಕನ್ನು ಚನ್ನಾಗಿ ಅರಿತಿದ್ದರು. ಅವರಿಂದ ನಾನು ಯಕ್ಷಗಾನದ ಆಳ ಇತಿಮಿತಿಗಳನ್ನು ಕಲಿತೆ. ತಾಳಮದ್ದಳೆಯಲ್ಲಿ ಅರ್ಥ ಹೇಳಲು ಕಲಿತೆ. ನನ್ನ ವಾಗ್ಝರಿಯನು ಕೇಳಿ ಅವರು ಹರ್ಷತುಂದಿಲರಾಗುತ್ತಿದ್ದರು. ಹೀಗಾಗಿ ನನ್ನನ್ನು ತುಂಬಾ ಮೆಚ್ಚಿಕೊಂಡರು. ಅವರಲ್ಲಾಗುವ ಯಾವುದೇ ಪೂಜೆ ಪುನಸ್ಕಾರಗಳಿದ್ದರೂ ನನ್ನನ್ನು ಕರೆದು ಸುಗ್ರಾಸಾನ್ನ ಭೋಜನವಿತ್ತು ಮೇಲಿಂದ ಕಾಯಿದಕ್ಷಿಣೆ ಪಂಚೆಗಳನ್ನು ಕೊಡುತ್ತಿದ್ದರು. ಹೀಗಾಗಿ ದೀವಗಿ ತಾರಿ ದಾಟಲು ದೋಣಿಯವನಿಗೆ ಕೊಡಲು ಪರದಾಡಬೇಕಾಗಿದ್ದಿಲ್ಲ. ಮೇಲಿಂದ ಉಳಿದ ಹಣ, ತೆಂಗಿನಕಾಯಿಗಳು ಮನೆಯ ಕಷ್ಟಕ್ಕೆ ನೆರವಾಗುತ್ತಿತ್ತು. ತಂದೆ ತಾಯಿ ತಂಗಿ ತಮ್ಮಂದಿರಿಗೆ ತುಸು ನೆರವಾಯಿತು. ಹೊರಡುವಾಗ ಮಾಸ್ತರ್ರಿಗೇಂತ ಅಡಿಕೆ, ಬಾಳೆಕಾಯಿ, ಹಲಸಿನಕಾಯಿ, ಏನಾದರೂ ತರಕಾರಿಯ ಹೊರೆ ಕೊಡುತ್ತಿದ್ದರು. ಅವುಗಳಲ್ಲಿ ಅರ್ಧವನ್ನು ನಾನು ಬಿ.ಎಚ್.ಶ್ರೀಧರರ ಮನೆಗೊಯ್ದು ಕೊಡುತ್ತಿದ್ದೆ. ಏಕೆಂದರೆ ನಾನು ಹೋದೊಡನೆ ತಿಂಡಿ ತೀರ್ಥ ಅವರಲ್ಲಿಯೇ. ಶ್ರೀಧರರು ಮಾತಾಡಲು ಹತ್ತಿದರೆ ಅವರಿಗೆ ವೇಳೆಯ ಪರಿವೆಯೇ ಇರುತ್ತಿರಲಿಲ್ಲ. ಎದುರಿಗೆ ಕುಳಿತ ಪಾತ್ರನಿಗೆ ಈ ವಿಷಯ ಹಿಡಿದೀತೇ? ಅರ್ಥವಾದೀತೇ? ಅವನಿಗೆ ಬೇಕಾದ ವಿಷಯವಿದೊ? ಎಂಬಿತ್ಯಾದಿ ಯಾವ ಪರಿವೆಯೂ ಇಲ್ಲದೆ ಏಕಸಮ ಬ್ರೇಕ್ ಇಲ್ಲದ ರೋಯಲ್ ಮೇಲ್ ಥರ ಇರುತ್ತಿತ್ತು, ಅವರ ವಾಕ್ಸರಣಿ. ಬಿರುಗಾಳಿ ಬೀಸಿದಾಗ ಅಲೆಗಳು ಮೇಲೆ ಮೇಲೆ ಉಬ್ಬರಿಸಿ ಬರುವಂತೆ ನಿರರ್ಗಳ ಅವರ ಅಸ್ಖಲಿತ ವಾಣಿ. ವಿದ್ವತ್ಪೂರ್ಣ ಮಾತು, ಶುದ್ಧ ಸಾಹಿತ್ಯ ವೇದಾಂತ ಯಾರಿಗೆ ಬೇಕು? ಎಂದು ಅನೇಕರು. ಅವರ ಮನೆಗೆ ಹೋಗಲು ಹೆದರುತ್ತಿದ್ದರು. ಅವರಲ್ಲಿಗೆ ಹೋಗುವಾಗ ಕಮ್ಮಿಕಮ್ಮಿ ಎಂದರೆ ೪–೫ ತಾಸು ಬಿಡುವುದು ಮಾಡಿಕೊಂಡೇ ಹೋಗಬೇಕಾಗಿತ್ತು. ನನಗಂತೂ ಅವರ

ಮಾತು ರಸಗವಳ ತದೇಕ ಚಿತ್ತನಾಗಿ ನಾನು ಆಲಿಸುತ್ತಿದ್ದೆ. ನನ್ನಲ್ಲಿ ತಾತ್ವಿಕ ಚಿಂತನೆ, ವೇದಾಂತ ಲಹರಿ, ಸಾಹಿತ್ಯಿಕ ಶಕ್ತಿಯನ್ನು ತುಂಬಿದವರೇ ಅವರು. ಅವರು ಆಗಸದಲ್ಲಿ ನಡೆಯುತ್ತಿದ್ದರು, ನಾನು ಭೂಮಿಯಲ್ಲಿ ಅವರ ನೆರಳನ್ನು ಹಿಡಿದು ಧಾವಿಸುತ್ತಿದ್ದೆ, ಉಬ್ಬಸ ಬಿಡುತ್ತಿದ್ದೆ. ದಣಿವಾಗಿ ಬಾಯ್ಬಿಡುತ್ತಿದ್ದೆ. ಎಷ್ಟೋ ವಿಷಯಗಳು ಕಬ್ಬಿಣದ ಕಡಲೆಯೂ ಆಗುತ್ತಿದ್ದವು. ಪ್ರಶ್ನೆ ಕೇಳಲು ತವಕಿಸುತ್ತಿದ್ದರೂ ಅವರ ವೇಗೋತ್ಕರ್ಷದಲ್ಲಿ ಲಯವಾಗೇ ಹೋಗುತ್ತಿದ್ದೆ. ಸ್ಪುಟ್ನಿಕ್ನಿಂದ ಉರುಳಿದ ಹಾಗೆ, ಆಗಸದ ಬಯಲಿನಲಿ ಬರೇ ಬೆರಗು ಬೆರಗು ಬೆರಗು. ಒಟ್ಟಾರೆ ಉಳಿದದ್ದೇನು? ಕೇವಲ ಸಂಸ್ಕಾರ. ಅಷ್ಟಕ್ಕೆ ೩–೪ ತಾಸು ಅವರ ಆಖ್ಯಾನ ಉಪಖ್ಯಾನಗಳು ನಡೆದಿರುತ್ತಿದ್ದವು.

ಆಗ ಅವರ ಶ್ರೀಮತಿ ರಮಾದೇವಿಯವರು ಊಟಕ್ಕೆ ಬನ್ನಿ ಎಂದು ಕರೆಯುತ್ತಿದ್ದರು. ಶ್ರೀಧರರ ಜೊತೆಗೆ ಯಾರೇ ಇರಲಿ, ಎಷ್ಟೇ ಜನರಿರಲಿ, ಅವರನ್ನು ನೋಡಿಯೇ ರಮಾದೇವಿಯವರು ಅಡಿಗೆ ಮಾಡಬೇಕಿತ್ತು. ಇದು ಶ್ರೀಧರರ ಜಾಯಮಾನ. ಅದು ರಮಾದೇವಿಯವರ ಜಾಯಮಾನ. ರಮಾದೇವಿಯವರು ವಾಸ್ತವವಾಗಿ ಹೇಳುವುದಾದರೆ ತಾಯಿ ಅನ್ನಪೂರ್ಣೇಶ್ವರಿ, ಅಥವಾ ಮಂಡನ ಮಿಶ್ರರ ಮಡದಿ ಭಾರತೀದೇವಿ, ಹಾಗೆ ಮಂಡನ ಮಿಶ್ರರನ್ನು ಮದುವೆಯಾಗಿ ಭಾರತೀದೇವಿ ಖ್ಯಾತಳೋ? ಭಾರತೀದೇವಿಯ ವಿವಾಹದಿಂದ ಮಂಡನ ಮಿಶ್ರರು ಪಾವನಗಾತ್ರರೋ ಭಾಗ್ಯವಂತರರೋ? ಒಟ್ಟಿಗೆ ಅವರ ಮನೆ ಒಂದು ಧರ್ಮಛತ್ರ ಒಂದು ಪವಿತ್ರ ಧರ್ಮದೇವತೆಯ ಮಂದಿರ. ಅದಕ್ಕಾಗಿಯೇ ನಾನು ಗುರುಗಾಣಿಕೆ ಎಂತ ಬಾಳೆಕಾಯಿ, ತರಕಾರಿ ವಗೈರೆಗಳನ್ನು ಒಯ್ಯುತ್ತಿದ್ದೆ. ವಾಸ್ತವಿಕವಾಗಿ ಅವು ನನ್ನವಲ್ಲ. ನನಗೆ ಬಂದ ಗುರುಕಾಣಿಕೆ, ಕೆರೆಯ ನೀರು ಕೆರೆಗೆ. ಏನೇ ಸಿಗಲಿ ಅದರಲ್ಲಿ ಅರ್ಧವನ್ನು ತಪ್ಪದೆ ಭಕ್ತಿಯಿಂದ ಒಯ್ಯುತ್ತಿದ್ದೆ. ಇದು ಶ್ರೀಧರರಿಗೆ ಗೊತ್ತಾಗುತ್ತಿದ್ದಿಲ್ಲ. ಅದನ್ನು ಹೊರಗಿಂದ್ಹೊರಗೇ ಒಳಗೆ ಮುಟ್ಟಿಸುತ್ತಿದ್ದೆ. ಅವರ ಮನೆಯ ವಾಸ್ತುವೇ ಹಾಗಿತ್ತು. ಊಟಕ್ಕೆ ಕುಳಿತಾಗಲು ಮತ್ತೆ ಮಾತು. ಬಾಕಿ ಉಳಿದ ಮಾತು, ಕೈತೊಳೆಯುವಾಗಲೂ ಮಾತು. ಊಟ–ಮಾತು, ಮಾತು–ಊಟ, ಊಟವಾದ ಮೇಲೂ ಮಾತು; ಅದು ತಂತು ಹರಿಯದ ಮಾತು, ಬರಿಯೇತ ನೇತಾಡಿದಂತಲ್ಲ ಇದು ಇಹಕೂ ಪರಕೂ, ಅತಳವಿತಳ ಸುತಳ ರಸಾತಳಗಳನೆಲ್ಲ ಆವರಿಸಿ......... ತಪೋಲೋಕ ಸತ್ಯಲೋಕಗಳ ಆವರಣ ಹೊಳೆಸುವ ಸುವರ್ಣ ಸೇತು. ನನ್ನ ಮನೆಯ ಯಾವುದೋ ಕರ್ತವ್ಯ ನನ್ನನ್ನು ಕರೆಯಿತು. ಊಟವಾದೊಡನೆ ಕೈತೊಳೆದವನೇ ಹೊರಗಿಂದ ಹೊರಗೇ ಹೊರಟುಬಿಟ್ಟೆ. ಇಲ್ಲವಾದರೆ ನನ್ನ ನೆಚ್ಚಿನ ಗುರುಗಳು ವಿಶ್ರಾಂತಿಯಿಲ್ಲದೆ ಒಡ್ಡೋಲಗ ನಡೆಸುತ್ತಾರೆ. ಇದು ಖಾತ್ರಿ!

ಒಮ್ಮೆ ನಾನು ನನ್ನ ಗುರುಗಳನ್ನು ನನ್ನ ಮನೆಗೆ ಕರೆದುಕೊಂಡು ಹೋಗಬೇಕೆಂದು ಆಶಿಸಿದೆ. ಅವರು ಬರಲೊಪ್ಪಿದರು, ನನ್ನ ಪುಣ್ಯ. ವಿದ್ಯಾರ್ಥಿಗಳೆಂದರೆ ಅವರಿಗೆ

ಪಂಚಪ್ರಾಣ. ಉಳಿದ ಪ್ರಾಧ್ಯಾಪಕರಾರೂ ಇಷ್ಟು ಆಳವಾಗಿ ಶಿಷ್ಯರ–ಅಂತರಂಗದ ಆಳಕ್ಕೆ ಇಳಿದವರಿದ್ದಿಲ್ಲ. ಎಲ್ಲರೂ ಸ್ವಲ್ಪ ಅಂತರ ಕಾಯ್ದುಕೊಳ್ಳುವವರೇ. ಇವರೋ ನಿರಾಡಂಬರ, ನಿತ್ಯಶುದ್ಧ, ಬುದ್ಧ. ಬಿ.ಎಚ್.ಶ್ರೀಧರರಿಗೆ ಯಾವಾಗಲೂ ಒಡನಾಡಿ ಬೇಕು. ಅವನು ಯಾರೇ ಇರಬಹುದು. ನಿರ್ಬುದ್ಧಶುದ್ಧನಿದ್ದರೂ ಅವರಿಗೆ ಅವನು ಬುದ್ಧನೇ. ವಿಕಾರಿಯಾಗಿದ್ದರೂ ಅವರಿಗೆ ನಿರ್ವಿಕಾರಿ. ಕಲ್ಲನ್ನಾದರೂ ಅರಳಿಸಿ ಹೂವಾಗಿಸುವ ಶಿಲ್ಪಿ ಮಾತಿನ ಮಲ್ಲ ಇವರು. ನಮ್ಮ ಮನೆಯಲ್ಲೊ ನನ್ನ ತಂದೆ, ಅವರು ಏನೇನೋ ನೂರೆಂಟು ಕೆಲಸದವರು, ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಯ ಸೋಪಜ್ಞತೆಯನ್ನು ನಾನು ನಿರೀಕ್ಷಿಸಿದ್ದಿಲ್ಲ ಅವರಲ್ಲಿ. ಪರಿಪೂರ್ಣ ವೈದಿಕರವರು. ಮತ್ತೆ ನನ್ನ ತಾಯಿ, ಅಜ್ಜಿ, ಚಿಕ್ಕವರಾದ ಸಹೋದರ ಸಹೋದರಿಯರು ಆದರಾತಿಥ್ಯ ಅತಿಥಿ ಸತ್ಕಾರವಷ್ಟೇ ಅವರ ಸೀಮೆ. ಅತಿ ಗ್ರಾಮೀಣ ಸಂಸ್ಕೃತಿ ನಮ್ಮ ಮನೆ. ಅದಕ್ಕಾಗಿ ಬಿ.ಎಚ್.ಶ್ರೀಧರರ ಜೊತೆಗೆ ಕೂಜಳ್ಳಿ ಎಂ.ವಿ.ಭಟ್ಟ, ಕೆಕ್ಕಾರ ಎಎಸ್.ಜಿ.ಭಟ್ಟ, ಕೆಕ್ಕಾರ ಶಿವ, ತುಳಸೀದಾಸರಿಗೆ ಬರಲು ಹೇಳಿದೆ. ಅವರೆಲ್ಲ ಕೂಡಿ ಹೊರಟೆವು. ದಾರಿಯೋ? ಕಾಲೇಜಿನಿಂದ ಹತ್ತಿಳಿಯುತ್ತಾ, ಏರುತ್ತಾ, ಕಿರುಸಂದಿಯಲಿ ನುಸುಳುತ್ತ ಬಂದೆವು. ಇದು ಹತ್ತಿರ ದಾರಿ, ರಸ್ತೆಯಲ್ಲಿ ಬಂದರೆ ಸುತ್ತು ಬಳಸು ಸುಮಾರು ೫–೬ ಮೈಲು ದೂರವೆಂದೆ. ಅಂದರೆ, ಇದು Short Cut ಅಲ್ಲವೇ? ಎಂದು ಪ್ರಶ್ನಿಸಿದರು. “ಹೌದು” ಎಂದೆ. ಹಾಗಾದರೆ ನಮ್ಮನ್ನೂ ಇದು Short ಆಗಿ ಕಟ್ಟ ಮಾಡೀತು, ಅಂದ ಹಾಗಾಯ್ತು? ಎಂದು ಹೇಳಿದರು. ನಾವು ನಿತ್ಯ ಕಾಲೇಜಿಗೆ ಹೋಗುವ ದಾರಿಯೇ ಇದು, ಎಂದೆ. “ನೀವೂ Cut Short ಆಗಿದ್ದೀರಿ, ಎಂದ ಹಾಗೇ?” ಎಂದರು. ಅವರ ಮಾತಿನಲ್ಲಿ ಧ್ವನಿಯಿರುತ್ತಿತ್ತು. ವ್ಯಂಜಕಗಳಿರುತ್ತಿದ್ದವು. ಲೋಕ ರಂಜನೆಯ ಉಪಮೆಗಳು ದೃಷ್ಟಾಂತಗಳು ಇರುತ್ತಿದ್ದವು. “ಹಾಗಾದರೆ ನಿಮ್ಮ ಮನೆಯ ದಾರಿಗೂ ಭಗೀರಥನು ಗಂಗೆಯನು ಧರೆಗಿಳಿಸಿ ತಂದ ದಾರಿಗೂ ಸರಿಯಾಯಿತು ಬಿಡು”, – ಎಂದರು. “ಹೌದೇನೋ?” ಎಂದೆ. ಬೇಂದ್ರೆಯವರ ಗಂಗಾವತರಣ ಕವನವನ್ನು ಉದ್ಧರಿಸಿದರು. ಅದು ನಮಗೆ ಎಸ್.ಎಸ್.ಸಿ. – (ಈಗಿನ ಎಸ್.ಎಸ್.ಎಲ್.ಸಿ.) ಯಲ್ಲಿ ಪಠ್ಯವಾಗಿತ್ತು. ಆಗ ನನಗದು ಸರಿಯಾಗಿ ಅರ್ಥವಾಗದ ಕಗ್ಗಂಟಾಗಿತ್ತು. ಈಗ ಬಿ.ಎಚ್.ಶ್ರೀಧರರಿಂದ ಹೊರಬಂದ ಮೇಧಾಸೂಕ್ತವಾದ ಗಂಗಾವತರಣ ಕವನ ನನಗೆ ಸರಿಯಾದ ಗ್ರಾಸ ನೀಡಿತು. ಜೊತೆಗಿದ್ದ ಸ್ನೇಹಿತರಿಗೂ ಇದೇ ಹೊಸ ಅನುಭವವಾಯಿತು. ಶ್ರೀಧರರಿಂದ ಹೊರಬಂದ ಮುಕ್ತಕಗಳೆಲ್ಲ ಹೊಸ ಅನುಭವದ ಪರಿಪಾಕಗಳೇ ಆಗಿರುತ್ತಿದ್ದವು. ಇದೇ ರೀತಿ ಅವರ ಸಾಹಿತ್ಯ ರಸಾಯನ.

ನಮ್ಮ ಮನೆಯಲ್ಲಿ ವಿಪರೀತ ಶಕೆ. ಅದು ರಾತ್ರಿಯಾಗಿತ್ತು. ನಮ್ಮ ಮನೆಯ ಕರಿ ಈಷಾಡ ಮಾವಿನ ಹಣ್ಣಿಗೆ ತುಂಬಾ ಪ್ರಸಿದ್ಧಿ. ಅದರ ರಸಾಯನ ತುಂಬಾ ಪಸಂದು. ಬರೇ ಹಣ್ಣಿನ ರಸಕ್ಕೆ ಒಂದಿಷ್ಟು ಹಾಲನ್ನು ಸೇರಿಸಿ ರಸಾಯನ ಮಾಡುತ್ತಿದ್ದರು. ನನ್ನ ತಾಯಿಯು ಮಾಡುವ ರಸಾಯನ ಪೂರಿ, ನನ್ನಜ್ಜಿ ಮಾಡಿದ ಅಡಿಗೆ ತುಂಬಾ

ಸೊಗಸಾಗಿದೆ ಎಂದು ಶ್ರೀಧರರು ಅವರನ್ನು ತುಂಬಾ ಶ್ಲಾಘಿಸಿದರು. ಅವರಿಗೆಲ್ಲ ಹಿಗ್ಗೇ ಹಿಗ್ಗು. ಊಟವೇನೋ ಸೊಗಸಾಗಿತ್ತು.

"ಇಲ್ಲಿ ಎಲ್ಲರೂ ಶಕಪುರುಷರೇ!" "ಆಗಂತುಕರೂ ಕೂಡಾ!" ಅಂದೆ. "ಸಂಸ್ಕಾರ ಫಲ!" ಎಂದೇ ಬಿಟ್ಟರು. ಬಿ.ಎಚ್.ಶ್ರೀಧರರು ಅವರ ರಿಮಾರ್ಕುಗಳೆಲ್ಲ ಹೀಗೇ ಇರುತ್ತಿದ್ದವು, ಎಲ್ಲವೂ ರಿಮಾರ್ಕೆಬಲ್.

ಅದು ಮೇ ತಿಂಗಳಿನ ಶಕೆಗಾಲ. ಹಾಸಲಿಕ್ಕೂ 'ಶಕೆ, ಹೊದೆಯಲಿಕ್ಕೂ ಶಕೆ. "ಈ ಶಕೆಗೇನು ಮಾಡುತ್ತಿ ಮಾರಾಯ? ಗಾಳಿಯ ಸುಳಿವೂ ಇಲ್ಲ. ನೀನೊಬ್ಬ ಮಹಾಶಕ ಪುರುಷನಯ್ಯಾ!" ಎಂದರು. ಅದು ಸತ್ಯ. ನಮ್ಮ ಮನೆಯ ಎದುರಿಗೆ ಅಘನಾಶಿನಿ ನದಿಯ ಹಿನ್ನೀರಿದೆ. ಅದಕ್ಕೆ 'ಗಜನಿ' ಎನ್ನುತ್ತಾರೆ. ಅಲ್ಲಿ ಬುರುಬುರು ಗಾಳಿ ಬೀಸುತ್ತದೆ. ಒಮ್ಮೆ ಗಜನೀ ತೀರದಲ್ಲಿ ಸುತ್ತಾಡಿ ಬರೋಣ", ಎಂದೆ.

ಆ ಕಾಲದಲ್ಲಿ ಎಲ್ಲೂ ವಿದ್ಯುತ್ತಿದ್ದಿಲ್ಲ– ದೀಪವೂ ಇಲ್ಲ, ಗಾಳಿಯೂ ಇಲ್ಲ.

"ಅದೇ ಸರಿ" – ಎಂದು ಅವರು ಅಪ್ಪಣೆ ಕೊಡಿಸಿದೊಡನೆ ಎಲ್ಲರೂ ಗಜನಿಯೆಡೆಗೆ ಸಾಗಿದೆವು. ಅದು ಹುಣ್ಣಿಮೆಯೋ ಅಥವಾ ಸಮೀಪದ ದಿನವೋ ಆಗಿತ್ತು. ಹಾಲು ಸುರಿದಂತೆ ಬೆಳದಿಂಗಳು ಹರಿದಿತ್ತು. ಗಜನಿಯ ಆಸುಪಾಸೆಲ್ಲ ಸುತ್ತಾಡಿದೆವು. ಈ ರಾತ್ರಿಯಲ್ಲಿ ಗಜನೀ ತಟದಲ್ಲೇ ಮಲಗೋಣ. ಒಳ್ಳೇ ಗಾಳಿ ಬೀಸುತ್ತಿದೆ. ಶಕೆಯೇ ಇಲ್ಲ ಎಂದರು. (ಗಜನಿ ಅಘನಾಶಿನಿ ನದಿಯ ಹಿನ್ನೀರು ಪ್ರದೇಶ)

"ಹಾಗಾದರೆ ಶಕ ಪುರುಷನ ಗತಿಯೇನು?" ಎಂದೆ. "ಅವನಿಗೂ ಇಲ್ಲೇ ನಿವಾಸ, ಇದರಿಂದ ಅವನ ಶಕೆ ಇಲ್ಲಿ ಘನೀಭೂತ" ಎಂದರು.

ಎಲ್ಲರಿಗೂ ಅಲ್ಲೇ ಹಾಸಿಗೆ ಹೊತ್ತುಕೊಂಡು ಹೋಗಿ ಹಾಸಿ ಕೊಟ್ಟೆ. ಗಜನಿ ನಮ್ಮ ಮನೆಯಿಂದ ಅನತಿ ದೂರದಲ್ಲಿ. ಆದರೆ ಅಲ್ಲಿ ಮಾತ್ರ ಬೆಳಗು ಬೇಗನೇ ಆಗುತ್ತದೆ. ಇದೇ ನನಗೆ ಚಿಂತೆ. ಅಂತೂ ಅವರಿಗೂ ಬೇಗ ಬೆಳಗಾಯ್ತು.

"ಅಂತೂ ನೀನು ತಾತ್ಕಾಲಿಕವಾದರೂ ನಮ್ಮನ್ನು ಗಜನೀ ಮಹಮ್ಮದರನ್ನಾಗಿ ಮಾಡಿದೆ" ಎಂದರು.

"ಆದರೆ ಅವನು ಮೂರ್ತಿ ಭಂಜಕ; ನೀವು ಮೂರ್ತಿ ರಂಜಕರು" ಎಂದೆ. ಅಂತೂ ನಮ್ಮ ಗುರುಗಳಿಗೆ ನಮ್ಮ ಮನೆಯ ವಾಸ ಸುಖಕರವಾದುದಕ್ಕೆ ನನಗೆ ಪರಮಾನಂದವಾಯ್ತು. ನಮ್ಮ ಮನೆಗೆ ಬಂದಂತೆ ಬಿ.ಎಚ್.ಶ್ರೀಧರರು ತಮ್ಮ ವಿದ್ಯಾರ್ಥಿಗಳ ಮನೆಗೆ, ಸ್ನೇಹಿತರ ಮನೆಗೆ ಆತ್ಮೀಯವಾಗಿ ಕರೆದಲ್ಲಿ ಬಿಡುವಿದ್ದಾಗ ಹೋಗುತ್ತಿದ್ದರು. ಅವರಲ್ಲಿ ಅಹಂಕಾರದ ಲವಲೇಶವೂ ಇದ್ದಿಲ್ಲ. 'ಎಲ್ಲರೊಳು ಒಂದಾಗು

ಮಂಕುತಿಮ್ಮ'. ಎನ್ನುವ ಜೀವನ ಸಿದ್ಧಾಂತವನ್ನು ಅವರಲ್ಲಿ ನಾನು ಕಾಣುತ್ತಿದ್ದೆ. ಇದು ನನ್ನೊಬ್ಬನ ಅನುಭವವಲ್ಲ. ಅವರನ್ನು ಒಮ್ಮೆ ಕಂಡು ಮಾತಾಡಿದವನು, ಮತ್ತೆ ಮತ್ತೆ ಅವರನ್ನು ಕಾಣಬೇಕು, ಮಾತಾಡಬೇಕೆಂದು ಸಹಜವಾಗಿ ಆಶಿಸುತ್ತಿದ್ದ. ಅಂಥ ಋಷಿ ತೇಜಸ್ಸು ಅವರ ಮುಖದಲ್ಲಿ ಮುಕ್ಕುಳಿಸುತ್ತಿತ್ತು. ಅವರ ಅಗಾಧ ಜ್ಞಾನ ಶಿಖರದ ಎದುರು ವಾದಿಸುವ ಶಕ್ತಿ ವಿದ್ಯಾರ್ಥಿ ವೃಂದದಲ್ಲಿ ಎಂ.ವಿ.ಭಟ್ಟನಿಗಿತ್ತು. (ಇವನು ಮುಂದೆ ಐ.ಎ.ಎಸ್. ಪರೀಕ್ಷೆ ಪಾಸಾಗಿ, ಎಕೌಂಟಂಟ್ ಜನರಲ್ ಆದ.) ಎಸ್.ಜಿ.ಭಟ್ಟ ಕೆಕ್ಕಾರ ಈತನಿಗಿತ್ತು (ಇವನು ಮುಂದೆ ಬೆಂಗಳೂರು ಹೈಕೋರ್ಟ್‌ನಲ್ಲಿ ನ್ಯಾಯವಾದಿಯಾಗಿ ಖ್ಯಾತ) ಮತ್ತೆ ನಾನು ತಿಳಿದಂತೆ ಡಿ.ಎನ್.ಶಾನಭಾಗನಿಗಿತ್ತು (ಇವನು ಮುಂದೆ ಪಿಎಚ್.ಡಿ. ಪಡೆದು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಪ್ರಾಧ್ಯಾಪಕನಾಗಿ, ಮುಖ್ಯಸ್ಥನಾಗಿ ಖ್ಯಾತನು.) ನಾನು ಮಾತ್ರ ಅಂಬೆಗಾಲಿಡುವ ಅಮಾಯಕನಾಗಿ ಆ ಮಹಾತೇಜಸ್ಸಿನ ಎದುರಿಗೆ ಕೇವಲ ಬೆರಗಿನ ಮಗು. ಈ ವಿಷಯ ಇಲ್ಲಿಗೆ ಇರಲಿ.

ಉದರನಿಮಿತ್ತಂ ಬಹುಕೃತವೇಷಂ ಮಾಡುತ್ತ – ಮುಂದೆ ನಾಲ್ಕು ವರ್ಷಗಳ ವನವಾಸದ ನಂತರ ಪುನಃ ನಾನು ಕಾಲೇಜು ಸೇರಿದೆ. ಪದವಿ ವರ್ಗದಲ್ಲಿ ದಾಖಲಾದೆ. ನಾನು ಸಂಸ್ಕೃತವನ್ನೇ ಮುಖ್ಯ ವಿಷಯವಾಗಿ ಅಧ್ಯಯನ ಮಾಡಬೇಕೆಂದು ಬಿ.ಎಚ್.ಶ್ರೀಧರರು ಹೇಳಿದರು. ಪುನಃ ಅವರ ನಿಕಟ ಶಿಷ್ಯನಾಗುವ ಭಾಗ್ಯ ನನಗೆ ದೊರೆತಿದ್ದು ಪೂರ್ವಜನ್ಮದ ಪುಣ್ಯವಿಶೇಷ. ಬಿ.ಎಚ್.ಶ್ರೀಧರರು ಕಲಿಸುವ ವಿಧಾನವೇ ಅನನ್ಯವಾದುದು. ತುಲನಾತ್ಮಕವಾಗಿ ಹೇಗೆ ಅಭ್ಯಾಸ ಮಾಡಬೇಕೆಂಬುದನ್ನು ಅವರು ಪ್ರತ್ಯಕ್ಷ ಕಲಿಸುತ್ತಿದ್ದರು. ಕಾವ್ಯ ಶಾಸ್ತ್ರಾಧ್ಯಾಯನಕ್ಕೆ ನಮಗಿರುವ ಪಠ್ಯ ಮಮ್ಮಟನ ಕಾವ್ಯ ಪ್ರಕಾಶ. ಇದೊಂದು ಕಬ್ಬಿಣದ ಕಡಲೆ. ಇದನ್ನು ಸರಳಗೊಳಿಸುತ್ತ ಶ್ರೀಧರರು ಕಾವ್ಯಾದರ್ಶದಲ್ಲಿ ಈ ವಿಷಯ ಹೀಗೆ ಹೇಳಲ್ಪಟ್ಟಿದೆ, ಆನಂದ ವರ್ಧನ ಹೀಗೆ ಹೇಳಿದ್ದಾನೆ, ರಸಗಂಗಾಧರದಲ್ಲಿ ಈ ರೀತಿ ಇದೆ, ಹೀಗೆ ಹಲವಾರು ಕಾವ್ಯ ಶಾಸ್ತ್ರ ವಿದ್ವನ್ಮಣಿಗಳ ಗ್ರಂಥಗಳನ್ನು ನಮ್ಮೆದುರಿಗೆ ಇಟ್ಟು, ಅವರು ನೀಡಿದ ಉದಾಹರಣೆಗಳನ್ನು ಸೂತ್ರ ಸಹಿತ ವಿವರಿಸಿ, ಕಲಿಸುತ್ತಿದ್ದರು. ಈ ತೌಲನಿಕ ಅಧ್ಯಯನ ಕ್ರಮ ಸ್ವಲ್ಪ 'ದೀರ್ಘ ಸೂತ್ರ', ಆದರೂ ಜ್ಞಾನಾರಾಧನೆಗೆ ಅಗತ್ಯ ಕ್ರಮ. 'ಜ್ಞಾನ ಸೂತ್ರ'ಯಾಗಿತ್ತು. ಈ ಸಮಯದಲ್ಲಿ ಅವರು ಪಾಶ್ಚಾತ್ಯ ಸಾಹಿತ್ಯದಲ್ಲಿ ವಿವರಿಸಿದ ಕಾವ್ಯಸೂತ್ರಗಳನ್ನು ಆಧರಿಸಲು ಮರೆಯುತ್ತಿದ್ದಿಲ್ಲ. ಏಕಕಾಲದಲ್ಲಿ ನಾವು ಕಾವ್ಯಮೀಮಾಂಸೆಯ ಆಕರ ಗ್ರಂಥಗಳನ್ನೂ ಆ ಮಹಾಮಹಾ – ವಿದ್ವಾಂಸರ ಆಳ ಎತ್ತರಗಳನ್ನೂ ಅರಿಯುತ್ತಿದ್ದೆವು. ಅಬ್ಬ! ಅದೆಂಥ ಪ್ರಕಾಂಡ ಪಾಂಡಿತ್ಯ! ನಾವು ಬಿ.ಎ.ಯಲ್ಲಿ ಸಂಸ್ಕೃತ ಅಧ್ಯಯನ ಮಾಡುವವರು. ಈರ್ವರೇ ವಿದ್ಯಾರ್ಥಿಗಳು. ಕೇವಲ ಈರ್ವರೆಂದು ತಿಳಿಯದೆ ತಮ್ಮ ಜ್ಞಾನ ಸಾಗರದ ಅಲೆಅಲೆಗಳಲಿ ನಮ್ಮನ್ನು ತೋಯಿಸುವಾಗ ಅವರಿಗೆ ವೇಳೆಯ ಕಡೆಗೆ ಗಮನವಿರುತ್ತಿದ್ದಿಲ್ಲ. ಅದು ಎರಡು ಮೂರು ತಾಸಾದರೂ ಆಯಿತು. 'ಧ್ವನಿರಾತ್ಮಾ

ಕಾವ್ಯಸ್ಯ' – ಈ ವ್ಯಾಖ್ಯೆಯನ್ನು ಬಿ.ಎಚ್.ಶ್ರೀಧರರು ಹೇಳಿದೊಡನೆ ನನಗೆ ದಿಗಿಲಾಯಿತು. ಮನುಷ್ಯರಲ್ಲಿ 'ಆತ್ಮ' ಎಂಬುದನ್ನು ಕೇಳಿದ್ದೆ. ಈ ಕುರಿತು ಸಹ ನನಗೆ ಗೊಂದಲವೇ ಇತ್ತು. ಭಗವದ್ಗೀತೆಯಲ್ಲಿ ಆತ್ಮದ ಕುರಿತು ವಿವರಣೆ ಬರುತ್ತದೆ. ಈ ಕುರಿತು ಅಲ್ಪಸ್ವಲ್ಪ ಅರಿವು ಮಾಡಿಕೊಂಡಿದ್ದ ನನಗೆ ನನ್ನ ಆತ್ಮದ ಕುರಿತಾಗಿಯೇ ಸ್ಪಷ್ಟ ನೆಲೆಯಿಲ್ಲವಾಗಿತ್ತು – ಇದು ನನ್ನ ಪ್ರಾಂಜಲ ಮನಸ್ಸಿನ ಅಭಿಪ್ರಾಯ. ಆದರೆ ಕಾವ್ಯಕ್ಕೊಂದು ಆತ್ಮ ಇರುತ್ತದೆಯೇ? ಧ್ವನಿ ಅದರ ಆತ್ಮವೇ? ನನಗೆ ಅರ್ಥವಾಗದ ಕಗ್ಗಂಟು. ಧ್ವನಿ ಎಂದರೆ ನನಗೆ ಗೊತ್ತಿದ್ದ ಮಟ್ಟಿಗೆ ಸಪ್ಪಳ, ಶಬ್ದ – ಗುಡುಗಿನ ಧ್ವನಿ, ಸಿಂಹದ ಧ್ವನಿ, ರಾಕ್ಷಸರ ಧ್ವನಿ, ಮಂಜುಳ ಧ್ವನಿ, ಇಂಪಾದ ಧ್ವನಿ, ಅಂದರೆ ಕಿವಿಗೆ ಕೇಳುವ ಸಪ್ಪಳ ಇಷ್ಟಕ್ಕೇ ಸೀಮಿತವಾಗಿತ್ತು ನನ್ನ ಅರಿವು. ನನಗೆ ಸಂದೇಹವನ್ನು ಶೀತಲಗೊಳಿಸಲು ಸಾಧ್ಯವಿಲ್ಲದೆ, – ಸರ್ ಕಾವ್ಯಕ್ಕೂ ಆತ್ಮವಿರುತ್ತದೆಯೇ? ಧ್ವನಿಯೇ ಅದರ ಆತ್ಮವಾದರೆ ಆ ಧ್ವನಿಯ ಪರಿಕಲ್ಪನೆಯೇನು?" ಎಂದು ಪ್ರಶ್ನಿಸಿದೆ. ಅವರಿಗೆ ಬೇಕಾಗಿದ್ದೂ ಅದೇ ಆಗಿತ್ತು. ಆಗ ಅವರು ಅನೇಕ ಉದಾಹರಣೆಗಳನ್ನು ಕೊಟ್ಟರು. ಅನೇಕ ಕಾವ್ಯಶಾಸ್ತ್ರಗಳಲ್ಲಿ ಕಾವ್ಯದ ಆತ್ಮದ ಕುರಿತಾಗಿ ವಿವರಿಸಿದ ಬೇರೆ ಬೇರೆ ಆಯಾಮಗಳನ್ನು ಅವರು ಬಳಸಿದ ಪಾರಿಭಾಷಿಕ ಪದಗಳೊಡನೆ ವಿವರಿಸಿದರು. ಕೊನೆಗೆ ಒಂದು ಮಾತು ಹೇಳಿದರು, – "ಅಂದು ನಾನು ನಿಮ್ಮ ಮನೆಗೆ ಹೋಗಿದ್ದೆನಷ್ಟೇ? ನಿನ್ನ ತಂದೆ, ತಾಯಿ, ಅಜ್ಜಿ ಅದೆಂಥ ಔತಣ ನೀಡಿದರು! ನಿನ್ನ ಸಹೋದರಿಯರು ಆ ಆರೋಗಣೆಯಲ್ಲಿ ಹಿರಿಯರ ತನ್ಮಯತೆಯಲ್ಲಿ ಸಹಭಾಗಿಗಳಾಗಿದ್ದರು! ನಿನ್ನ ತಂದೆ ಅದೆಂಥ ವೇದವೇದಾಂತ ವಿದ್ವಾಂಸರು! ಅದನ್ನವರು ಅರೆಕ್ಷಣದಲ್ಲೂ ತೋರಿಸಿಕೊಳ್ಳಲಿಲ್ಲವಲ್ಲ! ಆಗಲೇ ಊಹಿಸಿದ್ದೆ, ಅವರೊಬ್ಬ ಅತ್ರಿಮುನಿ, ನಿನ್ನ ತಾಯಿ ಅನಸೂಯಾದೇವಿಯಂತೆ, ನಿನ್ನಜ್ಜಿ ಹೆಸರಿಗೆ ತಕ್ಕಂತೆ ಕಾತ್ಯಾಯಿನಿಯೇ! ಇವರು ಚಿಕ್ಕವರಿಗೆ ಕೊಡುತ್ತಿದ್ದ ಅತಿಥಿ ಸಂಸ್ಕಾರ, ಅಭ್ಯಾಗತರಿಗೆ ನೀಡುವ ಸತ್ಕಾರ ಇದೇ ಸನಾತನ ಧರ್ಮ. ಈ ಸನಾತನ ಧರ್ಮವು ಅವ್ಯಕ್ತವಾಗಿ ಅವರ ಆಚರಣೆಯಲ್ಲಿ ಅಮಾಯಕವಾಗಿ ಧ್ವನಿಸಿದ್ದು. ಈ ಧ್ವನಿ ಕಿವಿಗೆ ಕೇಳುವುದಿಲ್ಲ, ಮನಸ್ಸನ್ನು ಮುಟ್ಟುತ್ತದೆ, ಹೃದಯವನ್ನು ತಟ್ಟುತ್ತದೆ. ಅವರಿಗೆ ಅದರಿಂದ ಆನಂದ, ಆ ಸತ್ಕಾರದಿಂದ ನಮಗಾನಂದ. ಈ ಆನಂದವೂ ಸಹ ವಾಚ್ಯವಲ್ಲ. ಅನಿರ್ವಚನೀಯ, ಶಬ್ದಾತೀತ, ಎಲ್ಲಾದರಿಂದ ಅತೀತ. ಹೀಗೆ ಹಲವು ಉದಾಹರಣೆಗಳನ್ನು ನಾವು ನಿತ್ಯಜೀವನದಲ್ಲಿ ಕಂಡುದನ್ನು, ಉಂಡುದನ್ನು ವಿವರಿಸಿದಾಗ ಮನದಟ್ಟಾಯಿತು. ನನ್ನ ಸಹಪಾಠಿ ನನ್ನ ಕುಂಡೆಯನ್ನು ಚೂಟಿದ. ನಾನು ಅವನೆಡೆಗೆ ಸ್ವಲ್ಪ ದೃಷ್ಟಿಹಾಯಿಸಿದೆ. ಟಾಯಂ ಆಯಿತು ಎಂದು ಸೂಚಿಸಿದ. ಅವನು ನನ್ನ ಅಂತೆ ವಾಸಿನ್ ಆತ್ಮೀಯ ಸ್ನೇಹಿತ; ಹೌದು ಒಂದೊಂದು ತಾಸಿನ ೩ ಪಿರಿಯಡ್ ಕಲಿಸಿದ್ದರು. ಅವರು ಕಲಿಸಿದ್ದು ಮಹಾಸಾಗರ ಜ್ಞಾನ ನನಗೆ ಪೂರ್ಣ ಅರ್ಥವಾಗಲಿಲ್ಲ ನಿಜ. ಸಂದೇಹ ಬಗೆ ಹರಿಸಿಕೊಳ್ಳುತ್ತ ನನಗೂ ಗಂಟೆ ಹೊಡೆದಿದ್ದು ಕೇಳಲೇ ಇಲ್ಲ. ನನ್ನ ಸ್ನೇಹಿತನ

ಸೂಚನೆಯಂತೆ ನಾನು, "ಸರ್! ಗಂಟೆಯಾಯಿತು," ಎಂದೆ. "ಓ ಹೌದೇ?" ಎನ್ನುತ್ತ ವಾಚನ್ನು ನೋಡಿಕೊಂಡರು? "ಸಂಸ್ಕೃತ ಕ್ಲಾಸಿಗೆ ಗಂಟೆಯ ಬೇಲಿ ಇರಬಾರದು" ಎಂದರು. ಹಿಂದಿನ ಗುರುಕುಲದಂತೆಯೇ ಎಂಬುದು ಅವರ ಆಶಯ, ಧ್ವನಿ. ಆದರೆ ವ್ಯಾವಹಾರಿಕವಾಗಿ ಕಾಲೇಜುಗಳಲ್ಲಿ ಬೇರೆ ವಿಷಯಗಳನ್ನೂ ಕಲಿಯಬೇಕಲ್ಲವೇ? ಬಿ.ಎಚ್.ಶ್ರೀಧರರಿಗೆ ಕಲಿಸಿ ಆಯಾಸವಾಯಿತು ಎಂಬುದೂ ಇಲ್ಲ. ಕಲಿಸಿ ಬರಿದಾಯಿತೆಂಬುದೂ ಇಲ್ಲ. ಅದೊಂದು ಮಹಾಸಾಗರ. ಆದರೆ ನಾವು ಒಯ್ದದ್ದು ಒಂದು ಗಿಂಡಿ; ತರುವುದೂ ಅಷ್ಟೇ. ನನಗೆ ಅವರ ಜ್ಞಾನ ಸಾಗರವನ್ನು ಮೊಗೆ ಮೊಗೆದು ಕುಡಿಯಬೇಕೆಂಬ ತವಕವೇನೋ ಇತ್ತು. ಆದರೆ ಜೀರ್ಣಿಸಿಕೊಳ್ಳುವ ಸಾಮರ್ಥ್ಯ ಅಷ್ಟಕ್ಕಷ್ಟೆ. ನನ್ನ ಪರಿಮಿತಿಯ ಸ್ಪಷ್ಟ ಅರಿವು ನನಗಿತ್ತು. ಶ್ರೀಧರರು ತುಂಬಾ ಸೂಕ್ಷ್ಮಮತಿಗಳೂ, ಹರಿತವಾದ ಬುದ್ಧಿಯವರು, ತೀಕ್ಷ್ಣ ಭಾಷೆಯ ಮಲ್ಲರು, ಅವರು ನನ್ನ ಆಸಕ್ತಿಯನ್ನು ಗಮನಿಸಿ ಕೈ ಹಿಡಿದು ಎತ್ತರಕ್ಕೆ ಏರಿಸಲು ನಿರಂತರ ಸಹಾಯ ಮಾಡಿದ್ದನ್ನು ಎಂದೂ ಮರೆಯಲಾರೆ.

ಅಂದು ಕುಮಟೆ ತೇರು; ರಥ ಸಪ್ತಮಿಯ ದಿನ. ಕಾಲೇಜಿಗೆ ರಜೆ ಕೊಟ್ಟಿದ್ದರು. ನಮಗೆ ಸ್ಪೆಶಲ್ ಕ್ಲಾಸಿಟ್ಟಿದ್ದರು. ಬಿ.ಎಚ್.ಶ್ರೀಧರರು, ಕಾಲೇಜಿನ ನೆಲ ಮಾಳಿಗೆಯಲ್ಲಿ ಸಂಸ್ಕೃತ ಲೈಬ್ರೆರಿ ಇದೆ. ಎಂ.ಆರ್.ತೇಲಂಗ ಎಂಬ ಮಹಾ ಸಂಸ್ಕೃತದ ಮಹಾವಿದ್ವಾಂಸ ಮುಂಬೈಯ್ಯವರು, ತಾನು ಓದಿದ ಅಪಾರ ಸಂಸ್ಕೃತ ಪುಸ್ತಕಗಳ ಭಂಡಾರವನ್ನು ಅವರು ಕೆನರಾ ಕಾಲೇಜಿಗಾಗಿ ತನ್ನ ಹಯಾತಿ ನಂತರ ದಾನ ಮಾಡಿದ್ದರು. ಸುಮಾರು 40' x 60'ದ ದೊಡ್ಡ ಹಾಲಿನಲ್ಲಿ ನಾಲ್ಕು ಸಾಲಿನಲ್ಲಿ ಅಚ್ಚುಕಟ್ಟಾಗಿಟ್ಟ ಮರದ ಕನ್ನಡಿ ಕಪಾಟಿನಲ್ಲಿ ಜೋಡಿಸಿಟ್ಟ ಪುಸ್ತಕಗಳ ಪರ್ವತವೇ ಆ ಲ್ಯಾಬ್ರರಿ. ಆ ಪುಣ್ಯಾತ್ಮ ತನ್ನ ಜೀವಮಾನದಲ್ಲಿ ಅವೆಲ್ಲ ಪುಸ್ತಕಗಳನ್ನು ಹೇಗೆ ಓದಿದರು? ಹೇಗೆ ಜೀರ್ಣಿಸಿಕೊಂಡರು? ನನಗೆ ನಿಬ್ಬೆರಗು. ಆದರೆ ಒಂದು, ಆ ಪುಸ್ತಕಗಳ ನಡುವೆ ಕುಳಿತು ನಾವು ಸಂಸ್ಕೃತದ ಅಧ್ಯಯನ ಮಾಡುವ ಭಾಗ್ಯ ದೊರೆಯಿತಲ್ಲ! ಕಾಶಿವಿಶ್ವನಾಥನ ದರ್ಶನ, ಗಂಗಾ ಸ್ನಾನ, ನಮ್ಮ ಪಾಪವನೆಲ್ಲ ತೊಳೆದು ಮೋಕ್ಷಕ್ಕೆ ಕೊಂಡೊಯ್ಯುತ್ತದಂತೆ.' ಅದೇ ಪುಣ್ಯ ವಿಶೇಷ ಈ ಸರಸ್ವತಿಯ ರತ್ನ ಭಂಡಾರದಲ್ಲಿ ಕುಳಿತು ಓದಿದಾಗ ನನ್ನಲ್ಲಿ – 'ಎಷ್ಟಾದರೂ ವಾಗ್ವಿಶೇಷವನು', ಉಂಟುಮಾಡೀತೆಂದೆನಿಸದಿರದು. ಅಲ್ಲಿಯೇ ಕೆಲ ಮಹಾಮಹಾ ವಿದ್ವನ್ಮಣಿಗಳಾದ ನಮ್ಮ ಪ್ರಾಧ್ಯಾಪಕರಲ್ಲಿ ಕೆಲವರಿಗೆ ಒಂದೊಂದು ಚೇಂಬರ ಮಾಡಿಕೊಟ್ಟಿದ್ದಾರೆ. ಇದನ್ನು ಅವರ ಸ್ವಾಧ್ಯಾಯತೆ ಹಾಗೂ ವಿಶ್ರಾಂತಿಗಾಗಿ ಮೀಸಲಿಟ್ಟಿದ್ದರು. ಆ ಕಾಲದ ಪ್ರಾಧ್ಯಾಪಕರೆಲ್ಲರೂ ಈ ವಿಶಿಷ್ಟ ಕೊಠಡಿಯನ್ನು ಸದುಪಯೋಗಪಡಿಸಿಕೊಂಡು ತಮ್ಮ ಮೇಧಾಶಕ್ತಿಯನ್ನು ಉಜ್ವಲಗೊಳಿಸಿಕೊಂಡರು. ಅವರೆಲ್ಲ ರಸ–ಋಷಿಗಳು, ಪ್ರಾತಃಸ್ಮರಣೀಯರು. ಈ ಕಾಲದಲ್ಲೂ ನಾನು ಶಿಕ್ಷಣ ಕ್ಷೇತ್ರವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇನೆ. ಆ ಕಾಲದಲ್ಲಿ ಪ್ರಾಧ್ಯಾಪಕರಿಗೆ ಅಂಥ ದೊಡ್ಡ ಸಂಬಳವೇನೂ ಇರುತ್ತಿದ್ದಿಲ್ಲ. ಆದರೆ ಅವರೆಂದೂ ಗೊಣಗುತ್ತಿದ್ದಿಲ್ಲ. ಖಾಸಗಿ

ಶಿಕ್ಷಣವಂತೂ ಹೇಳ ಹೆಸರಿದ್ದಿಲ್ಲ. ಒಬ್ಬೊಬ್ಬರೂ ಒಂದೊಂದು ಋಷಿ ಮಂಡಲ. ತಾವು ಕಲಿಸುವ ವಿಷಯದ ಉದ್ದ ಆಳ ಅಗಲಗಳನ್ನು ಅಳೆದವರು, ಇದು ಹೀಗೇ ಎಂದು ಖಚಿತವಾಗಿ ಹೇಳಬಲ್ಲ ಪ್ರಗಲ್ಭ ಪಂಡಿತರಾಗಿದ್ದರು. ಈಗ? ಸಂಬಳ, ಸಾರಿಗೆ, ಭತ್ತೆ, ನಿವೃತ್ತಿವೇತನ ಸೌಲಭ್ಯ ಇತ್ಯಾದಿ ಇತ್ಯಾದಿಗಳಿಗೆ ಕಡಿಮೆ ಇಲ್ಲ. ಆದರೆ ಎಷ್ಟು ಪ್ರಾಧ್ಯಾಪಕರು ಪ್ರಾಧ್ಯಾಪಕರಾಗಲು ಯೋಗ್ಯರು? ಎಷ್ಟು ಜನರಿಗೆ ಆಳವಾದ ಅಧ್ಯಯನದ ಸಾಮರ್ಥ್ಯವಿದೆ? ಕುರಿತೋದುವವರು ಎಷ್ಟು ಜನರು? ಶಿಷ್ಯ ಚಿತ್ತಾಪಹಾರಕರು ಎಷ್ಟು ಜನರು? ಎಷ್ಟು ಜನ ಸ್ವಾಧ್ಯಾಯ ನಿರತರು? ಅವರೇ ಆತ್ಮಾವಲೋಕನ ಮಾಡಿಕೊಳ್ಳಬೇಕು. ಈಗಲೂ ಇದ್ದಾರೆ, ಮಹಾಮಹೋಪಾಧ್ಯಾಯರು, ಗುರು ಎನಿಸಿಕೊಳ್ಳಲು ಯೋಗ್ಯರು. ಸ್ವಾಧ್ಯಾಯ ಪ್ರವಚನಗಳಲ್ಲಿ ನಿರತರು. ಆದರೆ ಇವರ ಸಂಖ್ಯೆ ಕಡಿಮೆ. ಹೆಚ್ಚಿನ ಸಂಖ್ಯೆಯವರ ಬೊಬ್ಬಿರಿತ ಜಾಸ್ತಿ. ಗೌರೀಶ ಕಾಯ್ಕಿಣಿಯವರು ಹೇಳಿದಂತೆ, 'ಇವರೇ ಗುರುಬ್ರಹ್ಮರು– ನಾಲ್ಕು ದಿಕ್ಕುಗಳಿಗೂ ಮೋರೆ, ಪಾಠದ ಕೋಣೆಯಲ್ಲಿ ಮಾತ್ರ ಇಲ್ಲ, ಅಥವಾ ಪಾಠ ಮಾಡುತ್ತಿದ್ದಂತೆ ಇವರ ಲಕ್ಷ್ಯವೆಲ್ಲ ಹೊರಗೆ. ಪಾಠದಲ್ಲಿ ಮಾತ್ರ ಇಲ್ಲ; ಬ್ರಹ್ಮ ಎಂದರೆ ಶೂನ್ಯವಲ್ಲವೆ? ಗುರುರ್ವಿಷ್ಣು; ಈ ಹೆಗ್ಗುರುಗಳು ಹಾಲಿನ ಸಾಗರದಲ್ಲಿ ಶ್ರೀಮನ್ನಾರಾಯಣನು ಶೇಷಶಾಯಿಯಾಗಿ ಮಲಗಿದಂತೆ ಕೆಲವರು ಹಾಲಿನ ಹಿಂದೆ 'ಅಲ್ಕೊ' ಉಪಸರ್ಗ ಸೇರಿಸಿಕೊಂಡರೆ ಹೇಗೋ ಹಾಗೆ ಆ ಮಹಾಸಾಗರದಲ್ಲಿ ತೇಲುವವರು. ಜೊತೆಗೆ ತಮ್ಮ ಶಿಷ್ಯರನ್ನೂ ಬೇಕಾದರೆ ಸೇರಿಸಿಕೊಳ್ಳುತ್ತಾರೆ. ಅಷ್ಟರ ಮಟ್ಟಿಗೆ ಅಗ್ಗವಾದವರು. ಗುರುರ್ದೇವೋ ಮಹೇಶ್ವರ:– ಆ ಕೈಲಾಸವಾಸಿ ಲಯಕರ್ತ. ಈ ಕೆಲವು ಶಿಕ್ಷಣ ಮಹಾಶಯರು ವಿದ್ಯೆಯನ್ನೆ ಲಯ ಮಾಡಿ ತಾಂಡವ ನಾಟ್ಯ ಮಾಡುವವರು. ಗುರುರ್ಶಿವೋ ಜಗತ್ಸರ್ವಂ – ಜಗದಗಲದಲ್ಲೆಲ್ಲ ಈ ಗುರುಗಳೇ, ಶಾಲೆಯಲ್ಲಿ ಇವರ ಉಜ್ಜುಗವಿಲ್ಲ ಅಷ್ಟೆ. 'ತಸ್ಮೈ ಶ್ರೀ ಗುರವೇ ನಮಃ!' ಈ ಗುರುಗಳಿಗೆ ನಮೋನ್ನಮಃ ಹೇಳದಿದ್ದರೆ, ಬಲವಂತದಿಂದ ಹೇಳಿಸುತ್ತಾರೆ. ನಿಮ್ಮ ಮೇಲೆ ಯುದ್ಧ ಸಾರುತ್ತಾರೆ, ಎಂದು ಹೇಳುತ್ತಿದ್ದರು. ನಾವು ಪುಣ್ಯವಂತರು. ಆ ಜ್ಞಾನ ಸಾಗರದ ತಿಮಿಂಗಲಗಳು ನಮಗೆ ಗುರುಗಳಾಗಿದ್ದರು.

ಬಿ.ಎಚ್.ಶ್ರೀಧರರು ಕುಮಟೆ ತೇರಿನ ದಿನ ನಮಗೆ ಸಂಸ್ಕೃತದ ಸ್ಪೆಶಲ್ ಕ್ಲಾಸಿಟ್ಟಿದ್ದರೆಂದು ಹೇಳಿದೆನಲ್ಲವೇ? ನಾವು ಅವರ ಬೆನ್ನಿಗೆ ಹೊರಟಿದ್ದೆವು. ನೆಲಮಾಳಿಗೆಗೆ ಇಳಿಯುವಲ್ಲಿ ೮–೧೦ ಕಾಲೇಜು ಹುಡುಗರು ೫–೬ ಹುಡುಗಿಯರು ನಿಂತು ಹರಟೆ ಹೊಡೆಯುತ್ತಿದ್ದರು. ಶ್ರೀಧರರನ್ನು ಕಂಡೊಡನೆ ಸ್ತಬ್ಧರಾದರು. ಅವರನ್ನೆಲ್ಲ ಒಮ್ಮೆ ವಿಹಂಗಮವಾಗಿ ವೀಕ್ಷಿಸಿದರು. ಹಾಗೇ ನಮ್ಮ ಸಂಸ್ಕೃತ ಕ್ಲಾಸು ನೆಲಮಾಳಿಗೆಯಲ್ಲಿದ್ದುದರಿಂದ ಕೆಳಗಿಳಿದೆವು. 'ಪಾತಾಳ ಲೋಕಂ ವಿಶಾಮಃ' 'ಪಾತಾಳ ಲೋಕವನ್ನು ಸೇರುತ್ತಿದ್ದೇವೆ' ಎಂದು ನಾನು ಹೇಳಿದೆ. 'ನತು' – ಎಂದರು. ನನ್ನ ಸಹಾಧ್ಯಾಯಿಯೂ ಸಂಸ್ಕೃತದಲ್ಲಿ ಬಹಳ ಚುರುಕು, ಅವನು "ಕಿಂನತು?" ಎಂದ.

ಹಾಗಲ್ಲ ಏಕೆ? 'ಏತತ್ ರಸಾತಲಃ – ಇದು ರಸಾತಲ' 'ನತು ಪಾತಾಲಃ – ಪಾತಾಳವಲ್ಲ" ಎಂದರು. "ಏಕೆ ಇದು ರಸಾತಲ?" ಎಂದು ನಾನು ಕೇಳಿದೆ. ಶ್ರೀಧರರು–

"ನಾವೀಗ ಸಂಸ್ಕೃತವನ್ನು ಕಲಿಯಲಿಕ್ಕೆ ಹೊರಟಿದ್ದೇವೆ. ಸಂಸ್ಕೃತ ಭಾಷೆಯೇ ರಸ. 'ರಸೋ ವೈ ಸಃ' – ಆ ಪರಮಾತ್ಮ ತತ್ವವೇ ರಸ. ರಸದ ಅನುಭೂತಿಯೇ ಅಧ್ಯಾತ್ಮದ ಎತ್ತರದ ದರ್ಶನ. ಈ ದರ್ಶನ ಮೀಮಾಂಸೆ ಸಂಸ್ಕೃತಾಭ್ಯಾಸದಿಂದ ಸಾಧ್ಯ. ನೀವೀಗ ವಿಶ್ವದ ಮಹಾ ಸಾಹಿತ್ಯ ಸಾಗರವಾದ ಸಂಸ್ಕೃತದ ರಸಾಧ್ಯಯನ ಮಾಡಲಿಕ್ಕಿದ್ದೀರಿ" ಎಂದರು. ಅಂದು ವಾಸ್ತವಿಕವಾಗಿ ನಾವು ಕಾವ್ಯದಲ್ಲಿ ರಸದ ಕುರಿತು ಕಲಿಯಲಿಕ್ಕೂ ಇತ್ತು. ಅದಲ್ಲದೆ ಅವರು ವಿವರಿಸಿದ್ದು ಇನ್ನೂ ಚಮತ್ಕಾರವಾಗೇ ಇತ್ತು. ಹಿಂದೆ ಅಜಾಮಿಳನು ಸಾಯುವ ಗಳಿಗೆಯಲ್ಲಿ 'ನಾರ್ಯಾ' ಎಂದು ತನ್ನ ಮಗನನ್ನು ಕರೆದನಂತೆ. ಅದು ನಾರಾಯಣ ಎಂಬ ನಾಮದ ಅಪಭ್ರಂಶ. ಅದಕ್ಕಾಗಿ ಅವನು ವೈಕುಂಠ ಲೋಕದ ಅಭ್ಯಾಗತನಾಗುವ ಭಾಗ್ಯ ಪಡೆದನು. ಹಾಗೇ ರಸಾತಲ ಎಂಬ ಶಬ್ದ ಮಾತ್ರ ಸ್ಮರಣೆಯಿಂದ ಸಂಸ್ಕೃತ ಸಾಹಿತ್ಯ ರಸಾಸ್ವಾದನೆಯ ಭಾಗ್ಯ ನಮಗೆ ಲಭಿಸುತ್ತದೆ ಎಂದು ಹೇಳಿದರು.

ಬಿ.ಎಚ್.ಶ್ರೀಧರರು ನಮಗೆ ಸುಮಾರು ಮೂರು ತಾಸು ರಸ ಪ್ರಕರಣದ ಕುರಿತು ಕಲಿಸಿದರು. ಅವರೊಂದು ಜ್ಞಾನ ಸಿಂಧು ಎನ್ನಬೇಕೋ? ನಡೆದಾಡುವ ವಿಶ್ವಕೋಶ ಎನ್ನಬೇಕೊ? ಅವರು ತೌಲನಿಕವಾಗಿ ಕಲಿಸುತ್ತ ಕಲಿಸುತ್ತ ನಮ್ಮನ್ನು ಒಂದು ಹೆಗ್ಗಾಡಿನ ನಡುವೆ ಬಿಟ್ಟಂತೆ ಅನಿಸುತ್ತಿತ್ತು. ಇದನ್ನೆಲ್ಲ ಅರಿಯುವ ಸಾಮರ್ಥ್ಯ ನಮಗಿಲ್ಲವೆಂಬ ಭೀತಿಯ ಭೂತ ನಮ್ಮನ್ನು ಆವರಿಸುತ್ತಿದ್ದ ಹಾಗೇ ಗಗನ ಮಂಡಳಕ್ಕೆ ಜಿಗಿಯುತ್ತಿದ್ದರು. ಪಾತಾಳದಾಳಕ್ಕೆ ಇಳಿಯುತ್ತಿದ್ದರು. ರಸಾತಳದಲ್ಲಿ ವಿಹರಿಸಿ – ರಸೋ ವೈಸಃ ಎಂದು ಎಲ್ಲಿಂದ ಹೊರಟಿದ್ದರೋ ಅಲ್ಲಿಗೇ ಬಂದು ನಿಲ್ಲುತ್ತಿದ್ದರು. ಆಯ್ತು ಆಯ್ತು ಇವರು ಹಕ್ಕಲು ಬಿದ್ದರು ಎಂದು ನನ್ನ ಸ್ನೇಹಿತ ನನಗೆ ಪಿಸುದನಿಯಲ್ಲಿ ಹೇಳುತ್ತಿದ್ದ. ನಾನು ಸುಮ್ಮನೆ ಮುಗುಳ್ನಗುತ್ತಿದ್ದೆ. ನನಗೆ ಬಿ.ಎಚ್.ಶ್ರೀಧರರ ಮೇಲೆ ಅಂಧಭಕ್ತಿ. ಈ ಗುರುದೇವ – "ಅಖಂಡಮಂಡಲಾಕಾರ' ಎಂಬ ವಿಶ್ವಾಸವೇ ನನ್ನನ್ನು ತೇಲಿಸುತ್ತಿತ್ತು. "ಇಷ್ಟೆಲ್ಲ ಏಕೆ ಸರ್? ಇಷ್ಟೂ ಬೇಕೇ?" ಎಂದು ಕೇಳುತ್ತಿದ್ದೆ. "ನೀವೆಲ್ಲ ಆನರ್ಸಿಗೆ ಓದುತ್ತಿದ್ದವರು. ಇಷ್ಟು ವ್ಯಾಪಕವಾದ ಅಧ್ಯಯನ ತೀರ ಅಗತ್ಯ" ಎನ್ನುತ್ತಿದ್ದರು.

ಹೌದು ಆಗ ಅವರು ಅಷ್ಟು ಹೇಳಿದ್ದರಲ್ಲಿ ಅಷ್ಟೊ, ಇಷ್ಟೋ ಈಗ ಇದೆ. ಈ ಕಗ್ಗಲ್ಲನ್ನು ಅರಳಿಸಿ ಮೂರ್ತಿ ಮಾಡಿದವರು ಅವರು. ಹೇಗೆ ಓದಬೇಕು ಎಂಬುದನ್ನೂ ಕಲಿಸಿದರು. ಪರೀಕ್ಷೆಯ ದೃಷ್ಟಿಯಿಂದ ಓದಿದರೆ ಪರೀಕ್ಷಾರ್ಥಿ, ಜ್ಞಾನೋಪಾಸನೆಯ ದೃಷ್ಟಿಯಿಂದ ಓದಿದರೆ ವಿದ್ಯಾರ್ಥಿ ಎಂದು ಅವರು ಅಂದಿದ್ದು ಸತ್ಯ. ಕೃಷ್ಣನು

ಮಧುರೆಗೆ ಹೋಗುವಾಗ ದಾರಿಯಲ್ಲಿ ಸಿಕ್ಕಿದ ಕುಬ್ಜೆಯ ಪಾದವನ್ನು ಮೆಟ್ಟಿ, ಕೈಯನ್ನು ಹಿಡಿದೆತ್ತಿದನಂತೆ. ಆ ಕುಬ್ಜೆ ಆಳೆತ್ತರಕ್ಕೆ ಬೆಳೆದ ಸುರ ಸುಂದರಿಯಾದಳಂತೆ! ಬಿ.ಎಚ್.ಶ್ರೀಧರರು ನಮ್ಮನ್ನು ಹಿಡಿದೆತ್ತಿ ಉದ್ಧರಿಸಿದರು. ಅವರ ಕರಗಳಿಗೆ ಆ ಶಕ್ತಿ ಇತ್ತು, ಅವರ ದೃಷ್ಟಿಗೆ, ಮಾತಿಗೆ ಆ ಪ್ರಭಾವವಿದ್ದವು. ಇದು ನನ್ನೊಬ್ಬನ ಅನುಭವವಲ್ಲ ಅವರನ್ನು ಬಲ್ಲ, ಒಡನಾಡಿದ ಶಿಷ್ಯರಾಗಲಿ, ಸ್ನೇಹಿತರಾಗಲಿ, ಅವರ ಸಾಹಚರ್ಯವನ್ನು ಮತ್ತೆ ಮತ್ತೆ ಬಯಸುತ್ತಿದ್ದುದಕ್ಕೆ ಕಾರಣ ಅವರಲ್ಲಿರುವ ವಿದ್ವತ್ತಿನ ಅಯಸ್ಕಾಂತ ಶಕ್ತಿ. ಅವರು ಮಹಾ ಪ್ರತ್ಯುತ್ಪನ್ನ ಮತಿಗಳು, ಅಸ್ಖಲಿತ ಚಿತ್ತರು, ಅಸಾಧಾರಣ ಸ್ಮರಣಶಕ್ತಿಯುಳ್ಳವರು. ಅವರೇ ಒಮ್ಮೆ ನನ್ನೊಡನೆ ಮಾತಾಡುತ್ತ ತನಗೆ ಮೂರನೇ ವರ್ಗದಲ್ಲಿ ಕಲಿತ ವಿಷಯಗಳೆಲ್ಲವೂ ಈಗಲೂ ಭಿತ್ತಿಯ ಬರಹ, ಎಂದು ಹೇಳಿದರು.

ಮನೆಯ ಖರ್ಚನ್ನು ಅದು ಹೇಗೆ ತೂಗಿಸಿಕೊಳ್ಳುತ್ತಿದ್ದರು; ಇದೊಂದು ಪವಾಡ. ಮನೆಯಲ್ಲಿ ಶ್ರೀಧರರು, ಅವರ ಶ್ರೀಮತಿ ರಮಾದೇವಿ, ತಾಯಿ (ಎಲ್ಲರಿಗೂ ಅವರು ದೊಡ್ಡಮ್ಮ) ಶ್ರೀಧರರಿಗೆ ಐವರು ಮಕ್ಕಳು (ನಾಲ್ವರು ಹೆಣ್ಮಕ್ಕಳು ಒಬ್ಬ ಮಗ), ಶ್ರೀಧರರ ತಂಗಿ ಹಾಗೂ ಅವರ ಈರ್ವರು ಮಕ್ಕಳೂ ಸಹ ಇವರ ಜೊತೆಗೇ ಇದ್ದರು. ಈ ತುಂಬಿದ ಕುಟುಂಬದ ಜೊತೆಗೆ ಅವರ ಮನೆಗೆ ಬಂದು ಹೋಗುವ ನನ್ನಂಥ ಶಿಷ್ಯರು ಹಲವರು, ಮಾತ್ರವಲ್ಲದೆ ಅವರ ಸ್ನೇಹಿತರಾದ ಅನೇಕ ಮಹಾಮಹಾವಿದ್ವಾಂಸರು, ಕವಿಗಳು ಅತಿಥಿಗಳಾಗಿ ಅಭ್ಯಾಗತರಾಗಿ ಬರುವವರು ಹಲವರು. ಇವರೆಲ್ಲರಿಗೆ ಸಮಾನವಾಗಿ ನಿತ್ಯ ಸುಗ್ರಸಾನ್ನ ಭೋಜನ ಆಗುತ್ತಿತ್ತು. ಶ್ರೀಧರರಿಗೆ ಸಾಂಸಾರಿಕ ಜವಾಬ್ದಾರಿಯ ಕಡೆಗೆ ಕಾಳಜಿ ಇಲ್ಲವೇ ಇಲ್ಲವೆಂದರೆ ಸತ್ಯಕ್ಕೆ ಹತ್ತಿರವಾಗುತ್ತಿತ್ತೇನೋ. ಅವರಿಗೆ ಅಧ್ಯಯನ, ಅಧ್ಯಾಪನ, ಚಿಂತನ, ಬರವಣಿಗೆ. ಆಗಲೇ ಅವರು ಕವಿಯಾಗಿ ಖ್ಯಾತರಾಗಿದ್ದರು, ಅಲ್ಲಿ ಇಲ್ಲಿ ಅವರನ್ನು ಉಪನ್ಯಾಸಕ್ಕೆ ಕರೆಸುತ್ತಿದ್ದರು. ಇದರಿಂದಲೂ ಅವರಿಗೆ ಸಾಂಸಾರಿಕ ಜವಾಬ್ದಾರಿಯೆಡೆಗೆ ಬಹುಶಃ ಗಮನಹರಿಸಲಿಕ್ಕೆ ಆಗುತ್ತಿದ್ದಿಲ್ಲ. ಅವರ ಶ್ರೀಮತಿ ರಮಾದೇವಿ ಸಾಕ್ಷಾತ್ ಅನ್ನಪೂರ್ಣೆ. ಅವರ ಸಾಂಸಾರಿಕ ಜವಾಬ್ದಾರಿಯನ್ನೆಲ್ಲ ಹೊರಬಲ್ಲವರಾಗಿದ್ದರು. ಅವರು ಅಡಿಗೆ ಮಾಡುವುದರಲ್ಲೂ ಮಹಾಪ್ರವೀಣೆ, ಅವರ ಮನೆಗೆ ಆಗ ಈಗ ಬಂದು ೨–೩ ದಿನ ಉಳಿಯುವವರೆಂದರೆ ದ.ರಾ.ಬೇಂದ್ರೆಯವರು, ಶಿವರಾಮ ಕಾರಂತರು, ಪಾ.ವೆಂ.ಆಚಾರ್ಯರು (ಲಾಂಗೂಲಾಚಾರ್ಯರು), ಪ್ರಸಿದ್ಧ ಕವಿ ವಿ.ಜಿ.ಭಟ್ಟರು, ಸಾಲಿರಾಮಚಂದ್ರ ರಾಯರು, ಆಗ ಈಗ ಬಂದು ಹೋಗುವ ಮಹಾನುಭಾವರಲ್ಲಿ ಗೌರೀಶ ಕಾಯ್ಕಿಣಿ, ಗಣಪತಿ ರಾವ್ ಪಾಂಡೇಶ್ವರರು, ಹೀಗೆ ಎಷ್ಟೋ ಜನರಿದ್ದರು. ನನಗೆ ಗೊತ್ತಿದ್ದವರಿಷ್ಟೇ. ಇವರ ಹೊರತಾಗಿ ಕಲಾವಿದರು, ಸಮಾಜದಲ್ಲಿ ಪ್ರತಿಷ್ಠರು ಸಹ ಬಂದು ಶ್ರೀಧರರ ಅಮೃತವಾಣಿ ಕೇಳಿ ಪುಳಕಗೊಳ್ಳುತ್ತಿದ್ದರು. ಇಂಥ ಒಂದು ಸಂಸಾರ ಎನ್ನುವುದಕ್ಕಿಂತ ಪ್ರಪಂಚವನ್ನೇ ಬೆನ್ನಿಗೆ ಕಟ್ಟಿಕೊಂಡು ಕೊಂಕು ಕೊರಗಿಲ್ಲದೆ ನಗುನಗುತ್ತ ಸವಿಯೂಟ ಬಡಿಸುತ್ತಿದ್ದ ರಮಾದೇವಿ ನಿಜವಾಗಿ ಕ್ಷಮೆಯಲ್ಲಿ ಭೂದೇವಿ.

ಅವರಿಗೆ ಅನ್ನಪೂರ್ಣೆ ನೀನು ಸದಾಪೂರ್ಣೆ ಎಂದು ಬೇಂದ್ರೆಯವರು ಬಂದಾಗೆಲ್ಲ ಹೇಳುತ್ತಿದ್ದ ಮಾತು ಸತ್ಯಸ್ಯ ಸತ್ಯ. ದ.ರಾ.ಬೇಂದ್ರೆಯವರು, ಕಾರಂತರು ಬಂದರೆಂದರೆ ಹಗಲು ರಾತ್ರಿಯೆನ್ನದೆ ಮಾತು ಮಾತು ಮಾತು. ಈ ಮೂವರು ಆಧುನಿಕ ಕಾಲದ ರಸಋಷಿಗಳು. ಆ ಮಾತುಗಳು ಯಾವವೂ ಜಳ್ಳಲ್ಲ, ಹರಳುಕಲ್ಲು. ಅವುಗಳನು ರೆಕಾರ್ಡ ಮಾಡಿಟ್ಟಿದ್ದರೆ ಅದೊಂದು ಮಹಾ ಉಪನಿಷತ್ತೊ, ಕಾವ್ಯಮೀಮಾಂಸೆಯೋ ಆಗಿ ಆಧುನಿಕ ಸಾಹಿತ್ಯಲೋಕಕ್ಕೊಂದು ಅಮೂಲ್ಯ ಕೊಡುಗೆಯಾಗುತ್ತಿತ್ತು. ಆ ರಸಾಸ್ವಾದನೆ ಮಾಡುವ ಸುಯೋಗ ದೊರೆಯುತ್ತಿತ್ತು. ಬೇಂದ್ರೆಯವರು ಬರುತ್ತಾರೆ ಬಾ, ನೀನೂ ಇಲ್ಲಿಯೇ ಇರು ಎಂದು ಸಲಿಗೆಯಲ್ಲಿ ನನ್ನ ಹತ್ತಿರ ಮಾತ್ರ ಹೇಳುತ್ತಿದ್ದರು. ಕಾರಂತರು ಬಂದಾಗಲೂ ಅಷ್ಟೇ. ನನ್ನಲ್ಲಿ ಅಂಥಾ ಮಹಾ ಏನನ್ನೂ ಗುರುತಿಸದಿದ್ದರೂ ನನ್ನಲ್ಲಿ ಒಬ್ಬ ಶ್ರದ್ಧೆಯ ಕೇಳುಗನಿರುವುದನ್ನಂತೂ ಅವರು ಗುರುತಿಸಿದ್ದರು. ನಾನು ಅವರ ನಿರೀಕ್ಷೆಯಂತೆ ರಸಗವಳ ಸವಿದೆನೋ ಇಲ್ಲವೋ ಗೊತ್ತಿಲ್ಲ, ಹಾಗೆಲ್ಲಾ ಮಾತಾಡುವವರೇ ಅಲ್ಲ ಶ್ರೀಧರರು. ಅಂತೂ ರಾಮಾಯಣ ವಾಚನವೋ ಪ್ರವಚನವೋ ನಡೆಯುವಲ್ಲಿ ಹನುಮಂತನಿರುತ್ತಾನಂತೆ. ಹಾಗೇ ನಾನು ಆಂಜನೇಯನ ಪಾತ್ರ ಮಾಡಿದ್ದಂತೂ ಸರಿ. ನನಗೆ ಕಾಲಾಂತರದಲ್ಲಿ ಶ್ರೀಧರರು ಹಿಡಿದ ಸಾಣೆ ತುಂಬಾ ಪ್ರಯೋಜನಕಾರಿಯಾಯಿತು. ನಾನು ಇಂದು ಹೀಗಿದ್ದುದು ಅವರಿಂದಲೇ.

ಶಿವರಾಮ ಕಾರಂತರು 'ಯಕ್ಷಗಾನ ಬಯಲಾಟ'ವೆಂಬ ಪುಸ್ತಕ ಬರೆದರು. ಆ ಪುಸ್ತಕಕ್ಕೆ ಬಹುದೊಡ್ಡ ಪ್ರಶಸ್ತಿಯೂ ಬಂತು. ಈ ಪುಸ್ತಕ ಸಮಗ್ರವಾಗಲಿಲ್ಲವೆಂದು ಬಿ.ಎಚ್.ಶ್ರೀಧರರು ಕಾರಂತರಿಗೆ ಬರೆದರು. ಆ ಕಡಲ ಭಾರ್ಗವನಿಗೆ ಆ ರೀತಿ ಬರೆದು ದಕ್ಕಿಸಿಕೊಳ್ಳುವ ಸಾಮರ್ಥ್ಯ ಅವರಿಗಿತ್ತು. ಕನ್ನಡ ನಾಡಿನ ಬೆರಳೆಣಿಕೆಯ ಸುಪ್ರಸಿದ್ಧ ವಿದ್ವಾಂಸರಲ್ಲಿ ಬಿ.ಎಚ್.ಶ್ರೀಧರರೊಬ್ಬರೆಂದು ಕಾರಂತರು ಉದ್ಗಾರವೆತ್ತುತ್ತಿದ್ದರು. ಬಿ.ಎಚ್.ಶ್ರೀಧರರೂ ಅಷ್ಟೇ ಕಾರಂತರೂ ಅಷ್ಟೇ ಮಹಾ ವಿದ್ವಾಂಸರೂ, ಕನ್ನಡ ಸಾಹಿತ್ಯದ ದಿಗ್ಗಜರು. ಪರಸ್ಪರರಲ್ಲಿ ಅಪಾರ ಗೌರವಾದರಗಳು. ಇಬ್ಬರೂ ನಿಶಿತಮತಿಗಳು, ಪ್ರಸ್ಫುರಿತ ವಾಗ್ಮಿಗಳು. ಖಚಿತ ನಿರ್ಧಾರವನ್ನು ತಾರ್ಕಿಕವಾಗಿ ಸುಸಂಬದ್ಧವಾಗಿ ತೆಗೆದುಕೊಳ್ಳುವವರು. ಈರ್ವರೂ ದಕ್ಷಿಣ ಕನ್ನಡ ಜಿಲ್ಲೆಯವರು. ಕಾರಂತರ ಊರು ಕುಂದಾಪುರದ ಸಮೀಪದ ಕೋಟ. ಶ್ರೀಧರರ ಊರು ಬೈಂದೂರಿನ ಸಮೀಪದ ಬವಲಾಡಿ. ಶಿವರಾಮ ಕಾರಂತರು "ಯಕ್ಷಗಾನ ಬಯಲಾಟ"ದಲ್ಲಿ ಉತ್ತರ ಕನ್ನಡ ಜಿಲ್ಲೆಯ ಹೆಸರನ್ನೇ ಎತ್ತಿದ್ದಿಲ್ಲ. ಇಲ್ಲಿಯ ಸುಪ್ರಸಿದ್ಧ ಯಕ್ಷರಂಗದ ಧ್ರುವತಾರೆಗಳನ್ನು ಅವರು ಗಮನಿಸಲೇ ಇಲ್ಲವಾಗಿತ್ತು. ಶ್ರೀಧರರು ಇದನ್ನು ನೇರವಾಗಿ ಕಾರಂತರ ಜೊತೆಗೆ ಆಕ್ಷೇಪಿಸಿದ್ದರು. ಕಾರಂತರು ತಮಗೆ ತಿಳಿದಿರಲಿಲ್ಲ ಎಂದು ಬರೆದರು. ಇಬ್ಬರೂ ಪರಿಶುದ್ಧ ಆತ್ಮರಾದುದರಿಂದ ಅವರ ಸ್ನೇಹಕ್ಕೆ ಭಂಗ ಬಂದಿದ್ದಿಲ್ಲ. ಒಮ್ಮೆ ಕಾರಂತರು ಕಾರಣಾಂತರಗಳಿಂದ ತಮ್ಮ ಪತ್ನಿ ಲೀಲಾ ಕಾರಂತರೊಡನೆ ಕೆಲ ದಿನದ ವಾಸಕ್ಕಾಗಿ ಕುಮಟೆಗೆ ಬಂದು ಶ್ರೀಧರರ ಮನೆಯಲ್ಲೇ ಉಳಿದಿದ್ದರು. ಆಗ ಬಿ.ಎಚ್

ಶ್ರೀಧರರು ತಮ್ಮ ಪಟ್ಟು ಬಿಡದೆ ಆ ಕಾಲದಲ್ಲಿ ಯಕ್ಷಗಾನದ ಮೇರುನಟ, ಕಲಾತಪಸ್ವಿ, ಕೆರೆಮನೆ ಶಿವರಾಮ ಹೆಗಡೆಯವರನ್ನು ಕರೆಸಿ ನಿಮ್ಮಿಂದ ಒಂದು ಆಟಕ್ಕೆ ಸಿದ್ಧತೆಯಾಗಬೇಕೆಂದು ಹೇಳಿದರು. ಅಲ್ಲಿ ನಿಮ್ಮ ಕಲಾಪ್ರತಿಭೆ ಶಿವರಾಮ ಕಾರಂತರ ಮುಂದೆ ತೋರಿಸಲ್ಪಡಬೇಕು ಎಂದರು. ಹಾಗೂ ವೀರ ರೌದ್ರರಸವೇ ಇಲ್ಲದ ಪ್ರಸಂಗವನ್ನಿಡಬೇಕೆಂದರು. ಶಿವರಾಮ ಹೆಗಡೆಯವರಿಗೆ ಕೀರ್ತಿ ತಂದುಕೊಟ್ಟ ಪ್ರಸಂಗಗಳಲ್ಲೊಂದಾದ 'ಚಂದ್ರಾವಳಿ ವಿಲಾಸ' ವೆಂಬ ಪ್ರಸಂಗವನ್ನು ಆ ದಿನ ಆಡಿದರು. ಅದರಲ್ಲಿ ಶಿವರಾಮ ಹೆಗಡೆಯವರ ರಾಸಲೀಲೆಯ ಕೃಷ್ಣನ ಪಾತ್ರ. ಕೆರೆಮನೆ ಶಿವರಾಮ ಹೆಗಡೆ ಕೃಷ್ಣ ಪಾತ್ರದಲ್ಲಿ ವೈವಿಧ್ಯಮಯವಾದ ನಾಟ್ಯದಿಂದಲೂ ರಸೋತ್ಕರ್ಷ ಅಭಿನಯದಿಂದಲೂ ಮೆರೆದು ಬಿಟ್ಟರು. ಶಿವರಾಮ ಕಾರಂತರು ಪ್ರಸಂಗ ಮುಗಿದ ಮೇಲೆ ಶಿವರಾಮ ಹೆಗಡೆಯವರನ್ನು ಬಿಗಿದಪ್ಪಿಕೊಂಡು "ನೀವು ನಿಜವಾಗಿ ಯಕ್ಷಗಾನ ಕ್ಷೇತ್ರದ ಗೌರೀಶಂಕರ, ನಿಮ್ಮಂಥವರಿಗೆ ರಾಜ್ಯ ಪ್ರಶಸ್ತಿಯನ್ನು ಕೊಡಿಸಲು ನಾನು ಅಪಸ್ವರ ಎತ್ತಿ ತಪ್ಪು ಮಾಡಿದೆ. ಅ.ನ.ಕೃಷ್ಣರಾಯರು ಹಟಮಾಡಿ ನಿಮಗೇ ಕೊಡಿಸಿ ಒಳ್ಳೆಯದು ಮಾಡಿದರು. ನಿಮ್ಮ ಈ ವೇಷವನ್ನು ನೋಡಿ ನಾನು ಮೈಮರೆತೆ. ವೀರ ರಸದ ಹೊರತಾಗಿ ಯಕ್ಷಗಾನವನ್ನು ಅಭಿನಯಿಸಲು ಸಾಧ್ಯವಿಲ್ಲವೆಂಬ ನನ್ನ ತಪ್ಪು ಗ್ರಹಿಕೆಯನ್ನು ನಾನು ತಿದ್ದಿಕೊಳ್ಳುವಂತೆ ಮಾಡಿದಿರಿ. ಕೇವಲ ಶೃಂಗಾರ ರಸವನ್ನೇ ಪ್ರತಿಪಾದಿಸುವ 'ಚಂದ್ರಾವಳಿ ವಿಲಾಸ'ವನ್ನು ನೀವು ಅಭಿನಯಿಸಿ ಸೈ ಸೈ ಎನಿಸಿದಿರಿ. ಅದೆಂಥ ನವಿರಾದ ನರ್ತನ, ಅದೆಂಥ ಆಂಗಿಕಾಭಿನಯ! ಸ್ವರ ಚೇತನ! ಮಾತ್ರವಲ್ಲದೆ ನಿಮ್ಮ ಕೆರೆಮನೆ ಮಹಾಬಲ ಹೆಗಡೆ ಅದೆಂಥ ಅದ್ಭುತ ಕಲಾವಿದ! ಅವರ ಹಾಡುಗಾರಿಕೆ ಅದೆಂಥ ಮನೋಜ್ಞ,ತಾಳಲಯಬದ್ಧ ಕುಣಿತ. ಅವರನ್ನೂ ಸಹ ಚನ್ನಾಗಿ ತಯಾರು ಮಾಡಿದ್ದೀರಿ. ನಿಮಗೆ ಶತಶತ ಅಭಿನಂದನೆಗಳು. ನಿಮಗೆ ರಾಷ್ಟ್ರ ಪ್ರಶಸ್ತಿಯೂ ಸಿಗಬೇಕು. ಇದಕ್ಕೆಲ್ಲ ಕಾರಣರು ಬಿ.ಎಚ್. ಶ್ರೀಧರರು. ಅವರನ್ನು ನಾನು ಎಷ್ಟು ಅಭಿನಂದಿಸಿದರೂ ಕಡಿಮೆಯೇ. ಅವರಂಥ ನಿಷ್ಪಕ್ಷಪಾತಿ ನಿರ್ಭೀತ ನಿಲುವಿನ ವಿದ್ವಾಂಸರೇ ನನ್ನನು ತಿದ್ದಿದವರು" ಎಂದು ಹೇಳಿದ್ದಲ್ಲದೆ ಮುಂದೆ ಕುಮಟೆಯಲ್ಲಿ ಕೆರೆಮನೆ ಮಹಾಬಲ ಹೆಗಡೆಯವರಿಂದ ವಿವಿಧ ಮಟ್ಟುಗಳ ರಾಗಗಳ ಯಕ್ಷಗಾನದ ಹಾಡುಗಳನ್ನು ರೆಕಾರ್ಡ್‌ಮಾಡಿಕೊಂಡು ತಮ್ಮ ಯಕ್ಷಗಾನ ತರಬೇತಿ ಕೇಂದ್ರದಲ್ಲಿ ಅವರಿಗೆ ತರಬೇತಿಯನ್ನು ಕೊಟ್ಟರು. ಈ ಉದ್ದಕ್ಕೂ ಬಿ.ಎಚ್.ಶ್ರೀಧರರ ಜೊತೆಗೆ ಅವರಿಗೆ ಸಹಾಯಕ ಭಕ್ತನಾಗಿ ನಾನಿದ್ದೆ. ನಮಗೆಲ್ಲ ಗೆಲುವಿನ ಹರ್ಷ ಉಂಟಾಯಿತು. ಇದರಿಂದ ಕಾರಂತರು ಮತ್ತು ಶ್ರೀಧರರಲ್ಲಿ ಮೊದಲಿನ ಸಾಮರಸ್ಯ ಮತ್ತೂ ವೃದ್ಧಿಯೇ ಆಯಿತು. ಮಹಾಪುರುಷರ ಲಕ್ಷಣವೇ ಹೀಗೆ.

ಬಿ.ಎಚ್.ಶ್ರೀಧರರಿಗೆ ಯಕ್ಷಗಾನದ ತಾಳ, ಲಯ, ಶ್ರುತಿಗಳಲ್ಲೂ ಗತಿಯಿದೆ ಎಂಬುದನ್ನು ನಾನು ಅರಿತೆ. ಇದೊಂದು ವಿಸ್ಮಯ. ಕಾರಂತರಂತೂ ಬೇರೆ ಬೇರೆ

ರಾಗಗಳಲ್ಲಿರುವ ಪದ್ಯಗಳನ್ನೆಲ್ಲ ತಾಳಲಯ ಶ್ರುತಿ ಸುಭಗವಾಗಿ ಹಾಡುತ್ತಿದ್ದರು. ಕಿನ್ನೀರ ನಾರಾಯಣ ಹೆಗಡೆ ಅವರ ಮೃದಂಗವಾದನವನ್ನು ಕಾರಂತರು ತುಂಬಾ ಮೆಚ್ಚಿಕೊಂಡರು. ಕೆರೆಮನೆ ಮಹಾಬಲ ಹೆಗಡೆ ಅವರ ವೇಷಗಳನ್ನಷ್ಟೇ ನೋಡಿ ನಾನು ಮೆಚ್ಚಿಕೊಂಡಿದ್ದೆ. ಕಾರಂತರಿಂದ ಭೇಷ್ ಎನಿಸಿಕೊಳ್ಳುವಷ್ಟು ಅವರು ಚೆನ್ನಾಗಿ ಹಾಡಿದ್ದನ್ನು ಕೇಳಿ ನನಗೆ ಬೆರಗು. ಅಂತೂ ಉತ್ತರ ಕನ್ನಡ ಜಿಲ್ಲೆಯ ಯಕ್ಷಗಾನ ಶ್ರೇಷ್ಠಮಟ್ಟದ್ದೆಂದು ಕಾರಂತರ ಬಾಯಿಂದ ಬಿ.ಎಚ್.ಶ್ರೀಧರರು ಹೇಳಿಸಿಯೇ ಬಿಟ್ಟರು. ಇದು ಬಿ.ಎಚ್.ಶ್ರೀಧರ! ಈ ದಿಗ್ಗಜಗಳ ಸ್ಪರ್ಧೆಯಲ್ಲಿ ಅತಿ ಹೆಚ್ಚು ಲಾಭ ಪಡೆದವನು ನಾನು. ನನಗೆ ಕೈಂಕರ್ಯದಿಂದ ಯಕ್ಷಗಾನದ ವೈಭವವನ್ನು ಅರ್ಥಮಾಡಿಕೊಳ್ಳುವಂತಾಯಿತು. ಮುಂದೆ ಯಕ್ಷಗಾನ ಬಯಲಾಟದಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನು ಕಾರಂತರು ಹೆಸರಿಸಿದರು. ಶಿವರಾಮ ಹೆಗಡೆ ಅವರಿಗೆ ರಾಷ್ಟ್ರ ಪ್ರಶಸ್ತಿಯೂ ಬಂತು, ಅದಕ್ಕೆ ಅವರು ಅರ್ಹರೇ ಸೈ. ಇದು ಶಿವರಾಮ ಕಾರಂತರಿಂದ ದೊರೆಯುವಂತಾಯಿತೋ? ಅ.ನ. ಕೃಷ್ಣರಾಯರೇ ಈ ಪ್ರಶಸ್ತಿ ಕೊಡಿಸಲು ಕಾರಣರಾದರೋ? ಗೊತ್ತಿಲ್ಲ ಆ ಬಡಪಾಯಿ ಹಳ್ಳಿ ಬಿಟ್ಟು ಮುಂದೆ ಹೋದವರಲ್ಲ. ಯಕ್ಷಗಾನದಲ್ಲಿ ವಿಶ್ವಮನ್ನಣೆಯ ಮಟ್ಟಯೇರುವಂಥ ಶ್ರೇಷ್ಠ ಕಲೆಯಿದೆ ಎಂಬುದು ದಿಲ್ಲಿಯ ದೊರೆಗಳಿಗೆ ಹೇಗೆ ಗೊತ್ತಾಗಬೇಕು? ಅ.ನ.ಕೃಷ್ಣರಾಯರಂತೂ ಶಿವರಾಮ ಹೆಗಡೆಯವರ ವೇಷಗಳನ್ನು ನೋಡಿ ಮಂತ್ರ ಮುಗ್ಧರಾಗಿದ್ದರು. ಅಂತೂ ಹಳ್ಳಿಯ ಕಲಾಸಾರ್ವಭೌಮ ದಿಲ್ಲಿಯಲ್ಲಿ ಮಿಂಚಿ ಮೆರೆದಿದ್ದು ಈ ಕಲೆಗೊಂದು ಕಿರೀಟ, ಇದರ ಹಿನ್ನೆಲೆಯ ನಾಯಕರು ಬಿ.ಎಚ್.ಶ್ರೀಧರರೆಂಬುದನ್ನು ಮರೆಯುವಂತಿಲ್ಲ. ಶಿವರಾಮ ಹೆಗಡೆ ಅವರೂ ಸಹ ಯಕ್ಷಗಾನ ಕಲೆಯಲ್ಲಿ ನಾನಾ ಪ್ರಯೋಗಗಳನ್ನು ಮಾಡಿ ಈ ಪ್ರಾಚೀನ ಕಲೆಗೆ ಚಿನ್ನದ ಮೆರುಗನ್ನು ನೀಡಿದವರು. ಹೊಸ ಹೊಸ ಪ್ರಸಂಗಗಳನ್ನು ರಂಗಸ್ಥಳಕ್ಕೆ ತಂದು ಯಶಗಳಿಸಿದರು. ಉದಾಹರಣೆಗೆ ಗದಾಯುದ್ಧ, ಚಂದ್ರಾವಳಿ ವಿಲಾಸ ಮುಂತಾದವು ಶಿವರಾಮ ಹೆಗಡೆಯವರಿಗೆ ಹೇಳಿ ಮಾಡಿಸಿದ ಪ್ರಸಂಗಗಳು.

ಈ ನಡುವೆ ಒಂದು ಸ್ವಾರಸ್ಯದ ಘಟನೆ ನಡೆಯಿತು. ಶಿರಸಿಯ ಸಮೀಪದ ಮತ್ತಿಗಾರ ಪ್ರಾಥಮಿಕ ಶಾಲೆಯಲ್ಲಿ ಗಣರಾಜ್ಯೋತ್ಸವದ ಮುಖ್ಯಾತಿಥಿಯಾಗಿ ಅಲ್ಲಿಯ ಮುಖ್ಯಾಧ್ಯಾಪಕ ಶ್ರೀ ಶಂಕರನಾರಾಯಣ ಮಾಸ್ತರರು ಬಿ.ಎಚ್. ಶ್ರೀಧರರನ್ನು ಒತ್ತಾಯ ಪೂರ್ವಕವಾಗಿ ಆಮಂತ್ರಿಸಿದರು. ಅದಕ್ಕೆ ತನ್ನ ಜೊತೆಗೆ ಬರಲು ನನ್ನನ್ನು ಶ್ರೀಧರರು ಕರೆದರು. "ಅಯ್ಯೋ ಸರ್ ಆ ಕುಗ್ರಾಮಕ್ಕೆ ಹೋಗಲು ಏಕೆ ಒಪ್ಪಿಕೊಂಡಿರಿ?" ಎಂದು ಕೇಳಿದೆ.

"ನೋಡು ಅವರು ಸಂಭಾವಿತರು. ಅನೇಕ ಸಲ ಬಂದು ಬಂದು ಕರೆದರು. ಊರಿನ ಜನರ ಒತ್ತಾಯ" ಎಂದರು. "ನಾನು ಸಾಂಸ್ಕೃತಿಕ ಲೋಕದ ಒಬ್ಬ ಕೃಷಿಕ.

ಆ ಊರಿನಲ್ಲಿ ಸಾಹಿತ್ಯ ಸಂಸ್ಕೃತಿಗಳ ಬಿತ್ತನ್ನು ಬಿತ್ತುವ ಒಂದು ಅವಕಾಶ. ಅದು ಸಣ್ಣೂರು ದೊಡ್ಡೂರು ಎಂದು ಸಂಕೋಚಿಸುವುದು ಹಿಗ್ಗಿಸುವುದು ಏಕೆ? ಈಗ ದೊಡ್ಡ ದೊಡ್ಡ ಪಟ್ಟಣದಲ್ಲಿ ಸಾಹಿತ್ಯಿಕ ಕಾರ್ಯಕ್ರಮವಾದರೆ ಮಹಾ ಮಹಾ ಸಾಹಿತಿಗಳನ್ನು ಕರೆಸಿದರೂ ಬರುವವರೆಷ್ಟು ಎಂದು ಗೊತ್ತಾ? ಮೂರೋ ಮತ್ತೊಂದೋ ಜನ. ಮಹಾ ಸಾಹಿತಿ, ಅಸಾಧಾರಣ ವಾಗ್ಮಿ, ಪ್ರಕಾಂಡ ಪಂಡಿತ ಅನಕೃ ಹುಬ್ಬಳ್ಳಿಗೆ ಬಂದಾಗ ಎಷ್ಟು ಜನರು ಬಂದಿದ್ದರು. ಗೊತ್ತಾ? ನೂರಾರು ಜನ (೧೦೦ + ೬ = ೧೦೬ ಮಾತ್ರ) ನಾನು ಆಗ ಕರ್ಮವೀರ ಪತ್ರಿಕೆಯ ಉಪ ಸಂಪಾದಕನಾಗಿದ್ದೆ. ಯಥಾವತ್ ನೂರಾರು ಜನರು ಸೇರಿದ್ದರು ಎಂದೇ ಬರೆದು ಬಿಟ್ಟೆ. ಇದು ಪ್ರಿಯವಾದ ಸತ್ಯ. ನೂರಾರು ಶಬ್ದಕ್ಕೆ ಅರ್ಥವೇನು? ಅನೇಕರು ಎಂದೇ ಅಲ್ಲವೇ ಹೀಗಿದೆ. ಸತ್ಯಂ ಬ್ರೂಯಾತ್, ಪ್ರಿಯಂ ಭ್ರೂಯಾತ್" ಎಂದು ಹೇಳಿದರು. ಇದು ಜೀವ ಇದುವೆ ಜೀವನ. ಅವರ ದೃಷ್ಟಿಯಿಂದ ಹಿರಿದು ಕಿರಿದು ಎಂಬುದೇ ಇಲ್ಲ. ಯಾರನ್ನೂ ಯಾವುದನ್ನೂ ಹೀನವಾಗಿ ಕಾಣುವವರೇ ಅಲ್ಲ. ಅವರನ್ನು ಕಾಲೇಜಿನಿಂದಲೇ ಕಿತ್ತೆಸೆಯುವ ಹುನ್ನಾರ ನಡೆಯಿತು. ಅದು ಅವರ ಜೀವನ ವೃಕ್ಷವನ್ನೇ ಬುಡಮೇಲು ಮಾಡುವಂಥ ಕಠಿಣ ಪ್ರಸಂಗ. ಆಗಲೂ ಅವರು ವಿಚಲಿತರಾಗಲಿಲ್ಲ ಮುಖದಲ್ಲಿ ವಿವರ್ಣರಾಗಲಿಲ್ಲ. ಎಂದಿನಂತೆ ಪ್ರಸನ್ನ ಮುಖದಲ್ಲೇ ಇದ್ದರು. ಆಗ ವಿದ್ಯಾರ್ಥಿಗಳನ್ನು ಅವರು ಎತ್ತಿ ಕಟ್ಟಲಿಲ್ಲ. ಹುರಿದುಂಬಿಸಿ ಸತ್ಯಾಗ್ರಹ ಹೂಡಲು ಪ್ರೇರೇಪಿಸಲಿಲ್ಲ. ಸತ್ಯಾಗ್ರಹ ಸ್ವಯಂ ಪ್ರೇರಿತ. ಅದರಲ್ಲಿ ವಿದ್ಯಾರ್ಥಿಗಳಿಗೆ ಗೆಲುವಾಯಿತು. ಆ ಮೇಲೆ ನಾವೆಲ್ಲ ಅವರ ಮನೆಗೆ ಹೋಗಿ "ಸರ್! ನಮಗೆ ಗೆಲುವಾಯಿತು. ಪ್ರಾಂಶುಪಾಲರು ನಿಮ್ಮನ್ನು ಕೈಬಿಡುವುದಿಲ್ಲವೆಂದರು" ಎಂದೆವು. ಆಗ ಅವರು ಅದೇ ಪ್ರಸನ್ನ ಭಾವದಲ್ಲೇ ಇದ್ದರು. ಕೇವಲ "Good!" ಎಂದು ಪ್ರತಿಕ್ರಿಯಿಸಿದರು. ಎಂದಿನಂತೆ ತಮ್ಮ ಸಾಹಿತ್ಯ ಮೀಮಾಂಸೆಯ ಜೋಗದ ಜಲಪಾತವನ್ನು ಸುರಿಸಿದರು. ಆಕಾಶ ಹರಿದು ತಲೆಯ ಮೇಲೆ ಬಿದ್ದರೂ ಒಂದೇ, ಗಗನದಿಂದ ಬಂಗಾರದ ಮಳೆ ಬಿದ್ದರೂ ಒಂದೇ. ಇದು ಬಿ.ಎಚ್.ಶ್ರೀಧರ! ಸಂಪತ್ತೇಚ ವಿಪತ್ತೇಚ ಮಹತಾಂ ಏಕ ರೂಪತಾ' ಸಂಪತ್ತು ಬಂದಾಗಲೂ ಒಂದೇ, ವಿಪತ್ತು ಬಂದಾಗಲೂ ಒಂದೇ, ಮಹಾತ್ಮರು ಒಂದೇ ರೀತಿ ಇರುತ್ತಾರೆ. ಇದೇ ರೀತಿ ಅವರು ಶಿರಸಿಯ ಸಣ್ಣ ಹಳ್ಳಿ ಶಾಲೆ ಮತ್ತೀಗಾರಿಗೆ ಹೊರಟಿದ್ದು. ಆದರೆ ನಾನು ಆಗ ಒಂದು ವರ್ಷದ ಟ್ರೇನಿಂಗಿನಲ್ಲಿದ್ದೆ. ನಾನು ಕಾಲೇಜಿನಲ್ಲಿ ಮುಖ್ಯಮಂತ್ರಿ. ಎಲ್ಲರ ಪ್ರತಿನಿಧಿಯಾಗಿ ಧ್ವಜವಂದನೆಯ ಕಾಲಕ್ಕೆ ಧ್ವಜಕಟ್ಟೆಯ ಬುಡದಲ್ಲಿ ನಿಲ್ಲಬೇಕು. ಕಾಲೇಜ್ ಪ್ರಿನ್ಸಿಪಾಲರನ್ನು ವಂದಿಸಿ ಕರಕೊಂಡು ಬಂದು ಧ್ವಜಾರೋಹಣ ಮಾಡಿಸಬೇಕು. ಹೀಗೆ ಅತಿ ಮುಖ್ಯ ಕೆಲಸ, ಸಂಭ್ರಮದ ದಿನ. ಜೀವಮಾನದಲ್ಲಿ ದೊರೆಯುವ (ನನ್ನಂಥ ಅಲ್ಪರು ತಿಳಿಯುವಂತೆ) ಅಪೂರ್ವ ಕ್ಷಣ. ಆ ದಿನವಿಡೀ ವಿವಿಧ ಕಾರ್ಯಕ್ರಮಗಳಲ್ಲಿ ಮುಖ್ಯಮಂತ್ರಿಯ ಪಾತ್ರ ಪ್ರಮುಖ. ನನ್ನ ನೆಚ್ಚಿನ ಗುರುಗಳು ತನ್ನ ಜೊತೆಗೆ ಬಾ ಎಂದರು ಏನು ಮಾಡಬೇಕು? ಒಂದು

ಕ್ಷಣ ವಿಚಲಿತನಾದೆ. ಒಂದು ಕರ್ತವ್ಯ ಕರ್ಮ, ಒಂದು ಕರ್ತವ್ಯ ಧರ್ಮ. ನಾನು ಧರ್ಮಕ್ಕೇ ಒತ್ತು ಕೊಟ್ಟೆ. ಗುರುಗಳ ಬೆನ್ನಿಗೆ ಹೊರಟೆ.

ಅಂದು ಮತ್ತಿಗಾರ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳು ಪಾಲಕರು ತುಂಬಿ ತುಳುಕಿದ್ದರು. ಭಾಷಣದ ನಂತರ ಮನರಂಜನೆ ಕಾರ್ಯಕ್ರಮವಿದೆ. ಅಲ್ಲಿ ನೇಪಥ್ಯದಲ್ಲಿ ತಯಾರಿಯ ಗೌಜಿ ಮುಂದೆ ವಿದ್ಯಾರ್ಥಿಗಳ ಗೌಜಿ, ಪಾಲಕರೆಲ್ಲ ತಮ್ಮ ಸಾಂಸಾರಿಕ ಜೀವನದ ಹರಟೆ ಹೊಡೆಯುತ್ತಿದ್ದರು. ಸಭಾ ಕಾರ್ಯಕ್ರಮ ಪ್ರಾರಂಭವಾಯಿತು. ಮುಖ್ಯ ಅತಿಥಿ ಬಿ.ಎಚ್. ಶ್ರೀಧರರ ಪರಿಚಯವನ್ನು ಯಥಾ ಯೋಗ್ಯವಾಗಿ ಶಂಕರನಾರಾಯಣ ಮಾಸ್ತರರೇ ಮಾಡಿ "ಈಗ ಸಾಹಿತ್ಯ ಸರಸ್ವತಿಯ ಪುತ್ರ ಬಿ.ಎಚ್. ಶ್ರೀಧರರು ನಿಮ್ಮನ್ನು ಕುರಿತು ಮಾತಾಡುತ್ತಾರೆ. ನೀವೆಲ್ಲ ಶಾಂತಚಿತ್ತರಾಗಿ ಅವರ ಅಮೋಘ ಭಾಷಣ ಕೇಳಿ ಪುನೀತರಾಗಿರಿ", ಎಂದು ಹೇಳಿ ಕುಳಿತುಕೊಂಡರು. ಅವರು ಆ ಸಂತೆಯಲ್ಲಿಯೇ ತಮ್ಮ ಪ್ರಾಸ್ತಾವಿಕ ಮಾತಾಡಿ ಮುಗಿಸಿದರು. ಅವರಿಗೆ ಪ್ರಾಥಮಿಕ ಶಾಲೆಯ ಮಕ್ಕಳ ಗದ್ದಲದಲ್ಲಿ ಮಾತಾಡಿ ಅಭ್ಯಾಸ ಇತ್ತು.

ಬಿ.ಎಚ್.ಶ್ರೀಧರರು ಮಾತಿಗೆ ನಿಂತರು. ಅಸಾಧಾರಣ ಪ್ರತಿಭಾ ಸಂಪನ್ನರಾದ ವಿದ್ವನ್ಮಣಿಗಳು, ಅವರು ಮಹಾ ವಾಗ್ಮಿಗಳು, ಪ್ರಾರಂಭದಲ್ಲೇ ಅವರು "ನಾನೀಗ ಸಮುದ್ರದ ಬೇಲೆಯ ಮೇಲೆ ನಿಂತಿದ್ದೇನೆ. ಸಮುದ್ರದ ಅಲೆಗಳ ಬೋರ್ಗರೆತ ನನ್ನನ್ನು ಅಪ್ಪಳಿಸುತ್ತಿದ್ದಂತೆ, ನಿಮ್ಮನ್ನೂ ಅಪ್ಪಳಿಸುತ್ತಿರಬೇಕು. ಇದರಿಂದ ನಾನು ಇಲ್ಲಿಗೆ ನನ್ನ ಮಾತು ಮುಗಿಸುತ್ತಿದ್ದೇನೆ. ನನ್ನ ಶಿಷ್ಯ ಎಲ್.ಆರ್. ಭಟ್ಟನು ಈಗ ಮಾತಾಡುತ್ತಾನೆ" ಎಂದು ಹೇಳಿದವರು ನನ್ನನ್ನು ನೋಡಿ, ಎರಡು ಮೂರು ಮಾತಿಗೇ ವಿರಮಿಸಿದರು. ನನಗೆ ದಿಕ್ಕು ತೋರದಂತಾಯಿತು. ಯಾವ ತಯಾರಿಯೂ ಇಲ್ಲ. ಏನು ಮಾತಾಡಬೇಕು? ಅದರಲ್ಲೂ ವಾಗ್ಝರಿ ಸಂಪನ್ನ, ವಿದ್ವತ್ತಿನ ವಿದ್ಯುದಾಗರವಾದ ನನ್ನ ಗುರುವಿನ ಎದುರಿನಲ್ಲಿ ಏನು ಮಾತಾಡಬೇಕು? ಎರಡು ಸೇನೆಗಳ ನಡುವೆ ನಿಂತು ವಿಷಾದಗೊಂಡ ಅರ್ಜುನನ ಸ್ಥಿತಿ ನನ್ನದಾಯಿತು. ನಾನೇನು ಮಾತಾಡಿದೆ ನನಗೆ ಗೊತ್ತಿಲ್ಲ. ನನ್ನ ಗುರುವಿನ ಆಜ್ಞೆ ನನಗೆ ಶಿರಸಾಮಾನ್ಯ. ಅದು ಪ್ರಸಾದ. 'ಕರಿಷ್ಯೆ ವಚನಂ ತವ' ಎಂಬ ಭಾವದಿಂದ ಆಡಿದ ಮಾತದು. "ನೀನು ಚೆನ್ನಾಗಿ ಮಾತಾಡಿದೆ" ಎಂದು ಗುರುಗಳೆಂದರು. ನನ್ನಲ್ಲಿ ವಾಸ್ತವವಿಕವಾಗಿ ಗುರುಗಳೇ ಆವಾಹನೆಗೊಂಡಿದ್ದರು. ನಾನು ಏನು ಮಾತಾಡಿದೆನೆಂಬುದೇ ನನಗೆ ಗೊತ್ತಿಲ್ಲ. ಆ ಸಮುದ್ರದಲ್ಲಿ ಮಳೆಯಂತೂ ಸುರಿದಿರಬೇಕು. ಅಲ್ಲಿ ಕುಳಿತವರೆಲ್ಲ ನೀವು ಚೆನ್ನಾಗಿ ಮಾತಾಡಿದಿರಿ ಎಂದು ಹೇಳಿದರು. ಈ ಪ್ರಸಂಗವನ್ನು ಯಾಕೆ ಹೇಳುತ್ತಿದ್ದೇನೆಂದರೆ ಶ್ರೀಧರರು ತಮ್ಮ ಶಿಷ್ಯರನ್ನು ಹೇಗೆ ಕಟೆದು ನಿಲ್ಲಿಸುತ್ತಿದ್ದರೆಂಬುದಕ್ಕೆ ಒಂದು ದೃಷ್ಟಾಂತ ಕೊಡಲಿಕ್ಕೆ ಅಷ್ಟೆ.

ಬಿ.ಎಚ್.ಶ್ರೀಧ'ರರು ಕೆಲ ವರ್ಷಗಳು ಶಿರಸಿ ಕಾಲೇಜಿನ ಉಪ ಪ್ರಾಚಾರ್ಯರಾಗಿಯೂ ನಂತರ ಸಿದ್ಧಾಪುರ ಕಾಲೇಜಿನ ಪ್ರಾಚಾರ್ಯರಾಗಿಯೂ ಕಾರ್ಯ ನಿರ್ವಹಿಸಿದರು. ನಾನು ವೃತ್ತಿ ಜೀವನದ ನೌಕೆಯನ್ನು ಅಂಕೋಲೆಯ ಪಿ.ಎಂ. ಹೈಸ್ಕೂಲಿಗೆ ತಂದು ನಿಲ್ಲಿಸಿಕೊಂಡೆ. ಆ ಕಾಲದಲ್ಲಿ (೨೦ನೇ ಶತಮಾನದ ೭-೮ನೇ ದಶಕಗಳು) ಸಾರಿಗೆ ಸೌಕರ್ಯ ಹೆಚ್ಚಿರಲಿಲ್ಲ. ಹೀಗಾಗಿ ನನ್ನ ಅವರ ಸಂಪರ್ಕ ಕೇವಲ ಪತ್ರ ಮುಖೇನವೇ ಆಯಿತು. ಆದರೆ ಆಗಾಗ ಅವರಲ್ಲಿಗೆ ಹೋಗಿ ಅವರೊಡನೆ ಒಂದೆರಡು ದಿನವಿದ್ದು ಬರುತ್ತಿದ್ದೆ. ನಿನ್ನ ಕುಟುಂಬದ ಫೋಟೋ ಒಂದನ್ನು ತಂದುಕೊಡು ಎಂದು ಒಂದಿನ ಹೇಳಿದರು. ಅವರಿಗಾಗಿ ಒಂದು ಫೋಟೋ ತೆಗೆಸಿಕೊಂಡು ಹೋಗಿ ಕೊಟ್ಟೆ. ಅದನ್ನು ತಾವು ಕುಳಿತುಕೊಳ್ಳುವೆಡೆಯ ಮುಂದೇ ತೂಗು ಹಾಕಿಕೊಂಡರು. ನನಗಿಂತ ಹಿರಿಯರೂ ಪ್ರಬುದ್ಧರೂ, ಪ್ರಸಿದ್ಧರೂ, ಆದ ಅನೇಕ ಶಿಷ್ಯರು ಅವರಿಗಿದ್ದರು. ಅವರಿಗೆ ನನ್ನ ಕುಟುಂಬದ ಫೋಟೋವೇ ಏಕೆ ಬೇಕಾಯಿತೋ ಗೊತ್ತಿಲ್ಲ. ನಾನು ಪುಣ್ಯವಂತ. ನನ್ನ ಗುರುಗಳಿಗೆ ನನ್ನ ಕುಟುಂಬದ ಭಾವಚಿತ್ರ ಹತ್ತಿರವಾಯಿತಲ್ಲ! ಇದಕ್ಕಿಂತ ಭಾಗ್ಯಬೇಕೆನು?

ಬಿ.ಎಚ್.ಶ್ರೀಧರರು ಆಸ್ತಿಕರೆ? ನಾಸ್ತಿಕರೆ? ಕಮ್ಯೂನಿಸ್ಟರೇ? ಕಾಂಗ್ರೆಸ್ಸಿಗರೇ? ಜನಸಂಘದವರೇ? ಶೈವರೇ? ವೈಷ್ಣವರೇ? ಸ್ಮಾರ್ತರೇ? ಶಾಂಕರರೇ? ಮಾಧ್ವರೇ? ವಿಶಿಷ್ಟಾದ್ವೈತವಾದಿಗಳೇ? ಬೌದ್ಧರೇ? ಏನೂ ಅಲ್ಲವೇ? ಅವರು ಹೀಗೆ ಎಂದು ಹೇಳಲಿಕ್ಕಾಗದಷ್ಟು ನಿಗೂಢರಾಗಿದ್ದರು. (ಅವರು ನೀತಿ ಮತ್ತು ನ್ಯಾಯಪರರು ಯಾವುದೇ ಪಂಥವಿರಲಿ, ಪಕ್ಷವಿರಲಿ, ತಪ್ಪನ್ನು ಖಂಡಿಸುವ ನ್ಯಾಯ ನಿಷ್ಠುರರು) ಅವರು ನಮಗೆ ಬ್ರಹ್ಮಸೂತ್ರ ಕಲಿಸಿದರು. ಕಾವ್ಯ ಮೀಮಾಂಸೆ ಕಲಿಸಿದರು. ಉತ್ತರ ಮೀಮಾಂಸೆ ಕಲಿಸಿದರು. ಒಂದು ದೃಷ್ಟಿಯಿಂದ ಅವರು ಕಠಿಣರಿಗೆ ಕಠಿಣರು, ಮೃದು ಜನರಿಗೆ ಮೃದು. ನನ್ನ ಮಕ್ಕಳನ್ನು ಕಂಡೊಡನೆ ಮುದ್ದು ಮಾಡುತ್ತಿದ್ದರು. ಮಕ್ಕಳು ಅವರನ್ನು 'ಶ್ರೀಧರಜ್ಜ' ಎಂದೇ ಕರೆಯುತ್ತಿದ್ದರು. ನನ್ನ ಹೆಂಡತಿ (ಸಾಹಿತಿ ಭಾರತೀಸುತರ ಮಗಳು) ನಳಿನಿಯನ್ನು ಮಗಳೆಂದೇ ಪ್ರೀತಿಸುತ್ತಿದ್ದರು. ಆದರೆ ಎಲ್ಲಿಯೂ ಅತಿಯಿಲ್ಲ. ಎಲ್ಲದ್ದರಿಂದ ಅತೀತರು.

ಶ್ರೀಧರರು ಪೂಜೆ ಪುನಸ್ಕಾರಗಳನ್ನು ಮಾಡಿದ್ದು ನಾನು ಕಾಣಲಿಲ್ಲ. ಅವರು ಮಾನವೀಯತೆಯ ಸಾಕಾರರೂಪ. ತಪ್ಪುಗಳನ್ನು ನಿರ್ದುಷ್ಟವಾಗಿ ಎದುರೆದುರೇ ಉದಾಹರಣೆ ಕೊಟ್ಟು ತರ್ಕಬದ್ಧವಾಗಿ ಖಂಡಿಸುತ್ತಿದ್ದರು. ನಿರ್ಭಯವಾಗಿ ಸತ್ಯ ನುಡಿಯುತ್ತಿದ್ದರು. ಅವರ ಮಾತುಗಳೆಲ್ಲ ಪ್ರಭುಸಂಹಿತೆ. ಅವರ ಕಾವ್ಯವಾಗಲೀ, ಗ್ರಂಥಗಳಾಗಲೀ, ಲೇಖನಗಳಾಗಲೀ ನಾಳಿಕೇರ ಪಾಕ, ಅವರು ಯಾರನ್ನೂ ವಂಚಿಸಲಿಲ್ಲ. ಆತ್ಮವಂಚನೆ ಅವರ ಸಮೀಪಕ್ಕೂ ಸುಳಿಯಲಿಲ್ಲ. ಬೆಳ್ಳಗಿದ್ದದ್ದೆಲ್ಲ ಹಾಲೆಂದೇ ನಂಬಿದ್ದರು.

ಶ್ರೀಧರರು ಪ್ರಾಚೀನ ಭಾರತದ ಸಂಸ್ಕೃತಿ, ಧರ್ಮ, ನೀತಿ, ತತ್ವಾದರ್ಶಗಳ ವಿಮರ್ಶಾತ್ಮಕ ಜ್ಞಾನದ ಕುರಿತು ನಿರರ್ಗಳವಾಗಿ ವಿವರಿಸುತ್ತಿದ್ದರು. ರಾಮಕೃಷ್ಣ ಪರಮಹಂಸ, ವಿವೇಕಾನಂದರ ಬೋಧನೆಗಳ ಪರಾಮರ್ಶೆ ಮಾಡುತ್ತಿದ್ದರು. ಮಹರ್ಷಿ ಅರವಿಂದ, ರಮಣ ಅವರ ಮೇಲೆ ತುಂಬಾ ಪ್ರಭಾವ ಬೀರಿದ ಅಧ್ಯಾತ್ಮ ಚಿಂತಕರು, ವೇದಗಳು, ಉಪನಿಷತ್ತುಗಳು, ಅರಣ್ಯಕಗಳು, ಅವರ ಚಿಂತನೆಯ ಬಿತ್ತು. ಅಂತೆಯೇ ಬರ್ಟ್ರಂಡ್ ರಸೆಲ್, ಬರ್ನಾಡ್ ಶಾ, ಟಾಲ್‌ಸ್ಟಾಯ್, ಗಾಂಧಿ ಚಿಂತನೆಗಳನ್ನೂ ಬಲ್ಲವರು. ಮಹಾಕಾವ್ಯಗಳು, ಕಾಲಿದಾಸ, ಭವಭೂತಿ, ಬಾಣ, ಭಾರವಿ, ದಂಡಿ, ಹೀಗೆ ಅವರ ಜ್ಞಾನ ಶಿಖರದಿಂದ ಇಳಿದು ಬರುವ ಗೀತಗಂಗೆ. ನಮಗೆ ಪಠ್ಯವನ್ನು ಮೀರಿದ ಜ್ಞಾನ ಸಂಗ್ರಹ, ಅವರಿಂದ ದೊರೆಯುತ್ತಿತ್ತು. ಅವರ ಮೇಲೆ ಪ್ರಭಾವ ಬೀರಿದ ಆಧುನಿಕ ಕವಿಗಳೆಂದರೆ ಬೇಂದ್ರೆಯವರು. ಅವರ ಕವನಗಳನ್ನು ನಮ್ಮೆದುರಿಗೆ ಹಿಂಜಿ ಹಿಂಜಿ ಮಾಡುವ ವಿವರಣೆಯೇ ಒಂದು ಮಹಾಕಾವ್ಯ. ನಮಗೆ ರಸದೌತಣ. ಅವರ ದೇಶಪ್ರೇಮ, ಪ್ರಾಮಾಣಿಕತೆಯ ಮೇಲೆ ಮಾಡುವ ವ್ಯಾಖ್ಯಾನ ಸತ್ಯಧರ್ಮದಂತೆ ನಡೆಯುವ ಬದುಕು ಅವಿಸ್ಮರಣೀಯ. ಮಹಾಕಾವ್ಯದ ರಸಧಾರೆಯಂತೆ ಹೊರಹೊಮ್ಮುವ ಅವರ ವಾಕ್ ಸರಣಿಯ ಅಮೋಘ ವರ್ಷವನ್ನಾಲಿಸಿದವರು ಅವರು ಆರ್.ಎಸ್.ಎಸ್ ಜನಸಂಘದ ಅನುಯಾಯಿಯೆಂದೇ ತಿಳಿದಿದ್ದರು. ಆದರೆ ಇದು ಅಲ್ಲವೇ ಅಲ್ಲ. ಅವರು ಯಾವ ರಾಜಕೀಯ ಪಕ್ಷ ಸಂಘಸಂಸ್ಥೆಗಳಿಂದ ಬಹುದೂರ. ಜಾತಿಮತ, ಪಂಥಗಳಿಂದ ಅತೀತರು, ಅವರಷ್ಟೇ ಅಲ್ಲ ಅವರ ಶ್ರೀಮತಿಯವರು ತಾಯಿ ಹಾಗೂ ಮಕ್ಕಳು ಕೂಡ. ಇದು ಅವರ ಮೇಲೆ ಹೇರಲ್ಪಟ್ಟ ಅಭಿಪ್ರಾಯವಲ್ಲ, ಒತ್ತಡವೂ ಅಲ್ಲ. ಅವರನ್ನು ಕಂಡವರು ಯಾರೇ ಇರಲಿ ಮಹಾಮಹಾವಿದ್ವಾಂಸರೂ ಅನಕ್ಷರಸ್ಥರೂ ಮುಗ್ಧರೂ ಜಿಜ್ಞಾಸುಗಳೆಲ್ಲಾ ಅವರೊಡನೆ ಸಖ್ಯ ಬೆಳೆಸುವವರೇ, ಪ್ರಭಾವಿತರೇ, ಗೌರವಿಸುವವರೇ ನಾನಂತೂ ಅವರಿಂದ ಪಡೆದದ್ದು ಅಪಾರ.

ನಾನು ಹಳಿಯಾಳ ತಾಲೂಕಿನ ಸಾಹಿತ್ಯ ಸಮ್ಮೆಲನದ ಅಧ್ಯಕ್ಷನಾದಾಗ ನನ್ನನ್ನು ಟೀಕಿಸುವ ಭರದಲ್ಲಿ ಒಬ್ಬ ಪತ್ರಿಕಾ ಸಂಪಾದಕ ನಾನು ಸಾಹಿತಿಯೇ ಅಲ್ಲ, ನಾನು ಬರೆದ ಸಾಹಿತ್ಯವಿರಲಿ, ಕವನಗಳಿರಲಿ, ಪ್ರಬಂಧಗಳಿರಲಿ, ಲೇಖನಗಳಿರಲಿ ಅವೆಲ್ಲ ಬಿ.ಎಚ್ ಶ್ರೀಧರರು, ಭಾರತೀಸುತರ ಅನುಗ್ರಹ ಎಂದು ಉಗ್ರವಾಗಿ ಟೀಕಿಸಿದ್ದ. ಈ ಟೀಕೆ ವಾಸ್ತವಿಕವಾಗಿ ನನ್ನ ಗುಣಗಾನ! ನನ್ನ ಸಾಹಿತ್ಯಕ್ಕೆ ತೊಡಿಸಿದ ಕಿರೀಟ. ನನ್ನ ಹಿರಿಮೆಯ ಕುರಿತ ಗುಣಗಾನ! ಇದು ಆ ಮಹಾಮರಿಗೆ ಗೊತ್ತಾಗದೆ ಗುಣವನ್ನು ಗೌರವಿಸಿದ್ದಾರೆ. ಹೌದು! ನನ್ನಿಂದ ಹೊರಹೊಮ್ಮಿದ್ದೆಲ್ಲ ಬಿ.ಎಚ್. ಶ್ರೀಧರರು ಹಾಗೂ ಭಾರತೀಸುತರು. ನನ್ನಂತರಂಗದಲಿ ಕುಳಿತು ಕನ್ನಡಿಸುತ್ತಿಹ ಸಾಹಿತ್ಯ ಶಕ್ತಿ ಬಿ.ಎಚ್.ಶ್ರೀಧರ ನಾನು ಹೇಳಬೇಕಾದುದನ್ನು ಆ ಪುಣ್ಯಾತ್ಮಾ ನುಡಿದ. ಕೆಲವೊಮ್ಮೆ ಆ ಮಹಾನುಭಾವ ಸತ್ಯವನ್ನೂ ನುಡಿಯುತ್ತಾನೆ.

ಬಿ.ಎಚ್.ಶ್ರೀಧರರು ನನ್ನ ಪರಮಪೂಜ್ಯ ಗುರುಗಳು. ಅವರು ಈಗ ಈ ಲೋಕದಲ್ಲಿಲ್ಲ. ಹಿಂದೊಮ್ಮೆ ಅವರು ದಂಪತಿಯ ಭಾವಚಿತ್ರವನ್ನು ನನಗೆ ಪ್ರೀತಿಯಿಂದ ಆಶೀರ್ವಾದ ಪೂರ್ವಕ ಕೊಟ್ಟಿದ್ದು ಮಾತ್ರ ನನ್ನ ಜೊತೆಗಿದೆ. ಅವರು ನನ್ನ ಆರಾಧ್ಯದೇವತೆ ಎಂಬುದನ್ನು ಯಾವ ಶಬ್ದಗಳಿಂದ ವರ್ಣಿಸಲಿ? ಅವರ ವಿಷಯವಾಗಿ ಮಾತಾಡುವಾಗ ನಾನು ಭಾವಪರವಶನಾಗುತ್ತೇನೆ. ಇದೇ ಅವರು ನನ್ನಲ್ಲಿಯೇ ಇದ್ದಾರೆಂಬುದಕ್ಕೆ ನನ್ನಲ್ಲಿರುವ ಸಾಕ್ಷಿ.

ಎಲ್.ಆರ್.ಭಟ್ಟ

ಬಹುಶ್ರೀಕ ಬ.ಹೇ.ಶ್ರೀ.

'You have all the attributes of Bendre, without their water of crystallization!' ಎಂದು ಒಮ್ಮೆ ಪ್ರಿಯ ಪ್ರಾ. ಬಿ. ಎಚ್. ಶ್ರೀಧರರಿಗೆ ಕೌತುಕದಿಂದ ಹೇಳಿದ್ದೆ. ಅವರು "ಪ್ರತಿವಾದಿ ಭಯಂಕರ"ರು. ಆದರೂ ನನ್ನ ಸುದೈವವಿರಬೇಕು. ಅವರು ನನಗೆ ಪ್ರತ್ಯುತ್ತರಿಸಲಿಲ್ಲ. ಸುಮ್ಮನೆ ನಕ್ಕು ತಾಳಿಕೊಂಡರು! ನನ್ನ ಮಾತಿನಲ್ಲಿ ಕೌತುಕದೊಂದಿಗೆ ಕೊಂಚ ವಿನೋದದ ಅಂಶವಿತ್ತು. ಆದರೂ ಅದು ನನ್ನ ಮಟ್ಟಿಗೆ ಅಪ್ಪಟ ಸತ್ಯವಾಗಿತ್ತು.

ಅವರು ಇದ್ದದ್ದೂ ಹಾಗೆಯೇ. ವೈಚಾರಿಕತೆಯಲ್ಲಿ, ವಾಗ್ಮಿತೆಯಲ್ಲಿ, ನಡೆನುಡಿಯಲ್ಲಿ, ನಯವಿನಯಗಳಲ್ಲಿ, ವಿಷಯ ವೈವಿಧ್ಯ–ವೈಚಿತ್ರ್ಯಗಳಲ್ಲಿ, ಪ್ರತ್ಯುನ್ನತಿಯ (ready witted) ಮಾತಿನ ಚಕಮಕಿಯಲ್ಲಿ ಬ.ಹೇ.ಶ್ರೀ.ಯವರ ಪ್ರತಿಭೆ ಅಕ್ಷರಶಃ ಬಹುಶ್ರೀಕವಾಗಿತ್ತು. ಅವರೊಂದಿಗೆ ಮಾತು ಬಂದಾಗ ಸೋತು ಹೋದವನು ಜಾಣನಾಗುತ್ತಿದ್ದನು. ಇದು ನನ್ನದೇ ಅನುಭವ. ಕಾಳಿದಾಸನ ನಾಟಕದಲ್ಲಿ ಕಣ್ವನ ಕುರಿತು ಅವನ ಶಿಷ್ಯ ಹೇಳುತ್ತಾನೆ. 'ನಾಸ್ತಿ ಕಶ್ಚಿತ್ ಅವಿಷಯೋ ನಾಮ ಧೀಮತಾಂ.' ಈ ಉದ್ಗಾರ ಶ್ರೀಧರರ ಕುರಿತು ತದ್ರೂಪವಾಗಿ ಅನ್ವಯಿಸುತ್ತದೆ. ಯಾವ ವಿಷಯ, ಪ್ರಮೇಯ, ಪ್ರಶ್ನೆ ಮುಂದಿಟ್ಟರೂ ಶ್ರೀಧರರ ಪ್ರತಿಕ್ರಿಯೆ ಅಷ್ಟೇ ನಿಖರ, ಅಷ್ಟೇ ಚತುರ, ಕೆಲವೊಮ್ಮೆ ಅಷ್ಟೇ ಪ್ರಖರ! ವಿಚಾರವಿರಲಿ, ವಿಕಾರವಿರಲಿ ಶ್ರೀಧರರ ಪ್ರತಿಸ್ಪಂದನ ನಿರರ್ಗಳ, ಅಸ್ಖಲಿತ ಮತ್ತು ಅನೇಕ ಸಲ ನಿರುತ್ತರಗೊಳಿಸುವಂತಹದಿತ್ತು. "He may not convince you but could and did silence you" (ಹಿರಿಯರಾದ ಶ್ರೀರಂಗರಲ್ಲೂ ಇದೇ ಪ್ರತ್ಯುತ್ಪನ್ನಮತಿತ್ವವಿತ್ತು). ನಾವೆಲ್ಲಾ ಭಾಸ ಕವಿಯು ಬಣ್ಣಿಸುವಂಥ 'ಅನುತ್ಪನ್ನ ಕಾರ್ಯ ಪಂಡಿತ'ರು. ಯಾವುದೇ ಕಾರ್ಯ ಮಾಡುವ ಮುನ್ನ ಅದರ ಕುರಿತು ಬುದ್ಧಿವಂತಿಕೆ ತೋರಿಸುವವರು. ಆದರೆ ಜ್ಞಾನಿಗಳಾದ ಶ್ರೀಧರರು ಆ ಜಾತಿಯವರಲ್ಲ. ಅವರ ಜಾಯಮಾನ ನಿತಾಂತ ವಿದಗ್ಧವ್ಯುತ್ಪನ್ನಮತಿಯವರದು. ಅವರ ಈ ಮತಿತ್ವ ಮುಗ್ಧವಾಗಿರಲಿಲ್ಲ. ಕೆಲವೇ ಮಾತಿನಲ್ಲಿ ಹೊರಬರುತ್ತಿತ್ತು. "He would rather lose a friend than miss a joke" ಎಂಬಂತೆ ಅವರಿಗೆ ಹೊತ್ತಿಗಾಡಿದ ಮಾತು ಮುಖ್ಯವಾಗಿತ್ತು. ಅದು ಸತ್ತವನು ಎದ್ದಂತೆ ಆಗಲಿ, ಇದ್ದವನು ಸತ್ತಂತೆ ಆಗಲಿ! ಇದು ವಾದ ವಿವಾದಗಳ ಸಂದರ್ಭಕ್ಕೆ ಸಲ್ಲುವ ಅವರ ಶೈಲಿ. ಆದರೆ ಮನಸಾ

ಅವರು ನಿಷ್ಕಲ್ಮಷರು. ನಿರ್ಮಲ ಸ್ನೇಹಮಯರು. ವ್ಯಕ್ತಿಶಃ ಅವರು ಯಾರನ್ನೂ ಎಲ್ಲರನ್ನೂ ಸ್ವಾಗತಿಸುತ್ತಿದ್ದರು.

ವಿದ್ಯಾರ್ಥಿಗಳೊಂದಿಗೆ ಅವರು ಬಹಳ ಆತ್ಮೀಯರಾಗಿದ್ದರು. ಆರ್ತರೂ, ಊನಾಂಗರೂ, ದೀನದಲಿತರೂ ಆದ ವಿದ್ಯಾರ್ಥಿಗಳಲ್ಲಿ ಅವರಿಗೆ ವಿಶೇಷ ಅಂತಃಕರಣವಿತ್ತು. ಅಂಥ ಜ್ಞಾನಾರ್ಥಿಗಳನ್ನು ಅವರು ಮನೆಯಲ್ಲಿಯೇ ಆಶ್ರಯಕೊಟ್ಟು ಸಂದರ್ಭ ಬಂದರೆ ಅವರ ಶುಶ್ರೂಷೆಯನ್ನು ಸ್ವತಃ ಮಾಡಿ ಅವರ ಸರ್ವಾಂಗೀಣ ವಿಳಾಸಕ್ಕೆ ಕಾರಣರಾಗುತ್ತಿದ್ದರು. ಅಂಥವರು ಮುಂದೆ ಅವರಿಗೆ ಎರಡು ಬಗೆದರೂ ಸ್ಥಿತಪ್ರಜ್ಞರಾಗಿ ಸಹಿಸಿಕೊಳ್ಳುತ್ತಿದ್ದರು.

ಹೀಗೆ ಬಿ.ಎಚ್. ಶ್ರೀಧರರು ವಿಶಾಲವಾದ ಅರ್ಥದಲ್ಲಿ ಕವಿಗಳಾಗಿದ್ದರು. ಅವರ ಈ ಕಾವ್ಯ ವೈಖರಿ ಸುಲಿದ ಬಾಳೆಯ ಹಣ್ಣಿನಂದದ್ದಲ್ಲ–ಅದು ದ್ರಾಕ್ಷಾಪಾಕವಲ್ಲ. ನಾರಿಕೇಳಪಾಕ. ಅವರು ಮೆಚ್ಚಿದವರಿಗೆ ಉಣಬಡಿಸಿದ್ದು ಭೀಮಪಾಕವೂ ಅಲ್ಲ, ನಳಪಾಕವೂ ಅಲ್ಲ. ಅದು ಭೀಮ ಹಸ್ತದಿಂದ ಉಣಿಸಿದ ನಳಪಾಕವೆನ್ನಬಹುದು. ಪ್ರತ್ಯಕ್ಷ ಮೃದುವಾದಿಗಳಾಗಿ ಪರೋಕ್ಷ ಕಾರ್ಯ ಹಂತಾರರಾಗುವ ಪರಿಪಾಠ ಅವರದಲ್ಲ. ವ್ಯಾವಹಾರಿಕ ಚಾತುರ್ಯ, ಪ್ರಭಾವ ಬೀರಲಿಕ್ಕಾಗಿಯೇ ಮೆರೆಯುವ ಚಾಕಚಕ್ಯತೆಗಳಿಂದ ಅವರು ಗಾವುದ ದೂರ. ಕಾಲೇಜಿನಲ್ಲಿ ಕಲಿಸುವಾಗ ಈ ಪ್ರಾಧ್ಯಾಪಕರು ಅಧ್ಯಾಪನೆಯ ಪಠ್ಯವನ್ನು ಮೀರಿ ಅಥವಾ ಬದಿಗೊತ್ತಿ ಗಂಟೆಗಟ್ಟಲೆ ಮಾತಾಡಿ ವರ್ಗವನ್ನು ಮಂತ್ರಮುಗ್ಧವಾಗಿಸಿ ಬಿಡುತ್ತಿದ್ದರು. ಪಠ್ಯಕ್ರಮಕ್ಕೆ ಕುಂದು ಬೀಳುತ್ತಿತ್ತು. ಆದರೆ ಅವರು ಅದರೊಂದಿಗೆ ಬಿಟ್ಟ ಸಾಹಿತ್ಯ ಸಂಸ್ಕಾರ ಅವಿಸ್ಮರಣೀಯವಾಗಿತ್ತು. ಅಂಥ ವ್ಯತಿಕ್ರಮ ಅವಿವೇಕದ್ದಲ್ಲ. ಅದು ಕಾವ್ಯಶಾಸ್ತ್ರ ವಿನೋದದ ವ್ಯಾಮೋಹ. ಇದು ವ್ಯಾವಹಾರಿಕ ಯಶಸ್ಸನ್ನು ಮೀರಿದ, ಲೌಕಿಕ ಶ್ರೇಯಸ್ಸನ್ನು ಗಮನಿಸದ ಒಂದು ಬಗೆಯ ಪ್ರತಿಭೆ.

ನನ್ನ ಮತ್ತು ಶ್ರೀಧರರ ಸಂಪರ್ಕ ಹೀಗೆ ತಿಕ್ಕಾಟದಿಂದಲೇ ಆರಂಭವಾಯಿತು. ಅಯಸ್ಕಾಂತದ ಸಜಾತೀಯ ಧ್ರುವಗಳ ಸಮಾಗಮದಂತೆ! ಆಗ ಅವರು ಪೂನಾದಲ್ಲಿ ಚಾಕರಿಗೆ ಇದ್ದರು. 'ಜಯಂತಿ' ಮಾಸಿಕದಲ್ಲಿ ನನ್ನ ಒಂದು ಬರೆಹಕ್ಕೆ ಅವರು ಖಾರವಾಗಿಯೇ ಪ್ರತಿಕ್ರಿಯಿಸಿ ಬರೆದರು–ಉತ್ಕಟ ಸಂಸ್ಕೃತ ಅಭಿಮಾನದ ಅಭಿವೇಶದಲ್ಲಿ ಅದಕ್ಕೆ ನಾನೂ ಹಾಗೆಯೇ ಪ್ರತಿಕ್ರಿಯಿಸಿದೆ. ಅವರು ಸಂತಾಪಗೊಂಡಂತೆ ಕಾಣಲಿಲ್ಲ. ಮುಂದೆ ಅವರು ಭಟ್ಕಳದ ಹೈಸ್ಕೂಲಿಗೆ ಶಿಕ್ಷಕರಾಗಿ ಬಂದರು. ಆಗ ಅವರ ಮಿತ್ರರೂ ಸಹಶಿಕ್ಷಕರೂ ಆದ ಶ್ರೀ ಬೈಲೂರರೆಂಬ ಇಂಗ್ಲೀಷ್ ಸಾಹಿತ್ಯ ಪ್ರೇಮಿಗಳೂ ಲೇಖಕರೂ ನಮ್ಮ ಗೋಕರ್ಣ ಹೈಸ್ಕೂಲಿಗೆ ಮುಖ್ಯಾಧ್ಯಾಪಕರಾಗಿ ಬಂದು ಸೇರಿದರು. ಅವರ ಅವಧಿಯ ವರ್ಷಗಳಲ್ಲಿ ನನಗೆ ಶ್ರೀಧರರ ಸಂಪರ್ಕ ಹೆಚ್ಚಾಯಿತು. ನಿಕಟವಾಯಿತು. ಅವರೂ ನಾನೂ 'ಸಮಾನ ಧರ್ಮಿ'ಗಳೆಂದು ಕಂಡುಕೊಂಡೆವು. ಅವರ ಸಂಸ್ಕೃತ ವಿದಗ್ಧವಾಙ್ಮಯದ ಪಾಂಡಿತ್ಯ ಘನವಾಗಿತ್ತು. ನನಗೆ ಉಸಿರು ಕಟ್ಟುವಂತಿತ್ತು. ಆಗಲೇ

ಅವರು ಕುಮಟಾ ಕಾಲೇಜಿಗೆ ಸಂಸ್ಕೃತ ಪ್ರಾಧ್ಯಾಪಕರಾಗಿ ಪ್ರತಿಷ್ಠಿತರಾಗಿದ್ದರು. (ಈ ಮೊದಲು ಅವರು 'ಕರ್ಮವೀರ' ಸಾಪ್ತಾಹಿಕದ ಉಪ ಸಂಪಾದಕರಾಗಿ ಬಹುಮುಖದ ಪತ್ರಿಕೋದ್ಯಮದ ಸೇವೆಯಲ್ಲಿ ಮಿಂಚಿದ್ದರು). ಬ್ರಹ್ಮಸೂತ್ರ, ಭಗವದ್ಗೀತೆ, ಸಾಂಖ್ಯಕಾರಿಕೆ, ಸಂಸ್ಕೃತ ನಾಟಕಗಳು–ಇತ್ಯಾದಿ ವಿವಿಧ ವ್ಯಾಸಂಗಗಳಲ್ಲಿ ಅವರ ಪರಿಶ್ರಮ ಪ್ರಗಾಢವಾಗಿತ್ತು. ಹಿತೋಕ್ತಿ, ಸುಭಾಷಿತಗಳ ಅವರ ಸಂಗ್ರಹವೂ ಅಷ್ಟೇ ವಿಪುಲವಾಗಿತ್ತು. ನಮ್ಮ ಪ್ರಥಮ ಭೆಟ್ಟಿಯಲ್ಲಿಯೇ ನಾನು ಅವರ ಪ್ರಗಲ್ಭತೆಗೆ ಪರವಶನಾದೆ. ಅವರು ಒಂದು 'ಸುಭಾಷಿತ'ವನ್ನು ಉದಾಹರಿಸಿದಾಗ – ಅದು ಇನ್ನೂ ನೆನಪಿದೆ–ಅದು ವಣಿಕ ವೃತ್ತಿಯ ಬಗೆಗೆ–

'ಆದೌ ನಮ್ರಃ ಪುನರ್ ವಕ್ರಃ ಕಾರ್ಯಕಾಲೇಚ ನಿಷ್ಠುರಃ
ಎವತಂತೀಚ ಪುನರ್‌ನಮ್ರಃ ಶಿಶ್ನತುಲ್ಯ ವಣಿಕ ಜನಃ"

ವಣಿಕ ವೃತ್ತಿಯವರ ಕುರಿತು ಎಂಥ ಪೂರ್ಣೋಪಮೆ! ಅದೇ ರೀತಿ ಅವರು ಇನ್ನೊಂದು ಪದ್ಯವನ್ನು ಹೇಳಿದರು. ಅದು ಇನ್ನೂ ಚಮತ್ಕಾರವಾಗಿತ್ತು–

"ಅತ್ತಿಗೆ ಹೇಳಿ ಸಂಗೀತಂ
ತಂಗೀ ತಮ್ಮನ ಸಾಹಸಂ।
ಭಾವ ಕೇಳಿ ಮದೋಲ್ಲಾಸಂ
ನಾದಿನಿ ಬಿಸಿ ನೀರ ತಾ॥

ನನಗೆ ಅರ್ಥವಾಗಲಿಲ್ಲ. ಇದು "ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತ"ವೂ ಅಲ್ಲ! ಅನಿಸಿತು. ಆದರೆ ಶ್ರೀಧರರು ಅಂದರು– 'ಅರೇ ಇದು ಕನ್ನಡವೇ ಅಲ್ಲ. ಸಂಸ್ಕೃತ ಪದ್ಯ! ಅದರ ಸ್ವರೂಪ ಹೀಗೆ–ಅತ್ತಿಗೇಹೇ ಅಲಿ ಸಂಗೀತಂ। ತಂ ಗೀತಂ ಮನಸಾಹಸಮ್॥ ಭಾವ ಕೇಳಿ ಮದೋಲ್ಲಾಸಂ। ನ ಅದಿನೀ ಬಿಸಿನೀರತಾ॥ ಮಾತಿನಲ್ಲಿ ಮನೆಯಲ್ಲಿ ತುಂಬಿಯು (ಅತ್ತಿ=ನುಂಗು, ತಿನ್ನು) ಆ ಗೀತವನ್ನು ಮನಸ್ಸಿನಲ್ಲೇ ನಗುತ್ತಾ ಭಾವನೆಯ ಆಟದ ಉಲ್ಲಾಸದಲ್ಲಿದೆ. ಅದು ತಾವರೆ (ಬಿಸಿನಿ) ರತವಾಗಿರುವುದಿಲ್ಲ. ಆದ್ದರಿಂದ (ಜೇನು) ತಿನ್ನುವುದಿಲ್ಲ (ನ ಅದಿನೀ) ಹೀಗಿತ್ತು ಬಹೆಶ್ರೀ ಅವರ ವಿದ್ವತ್ತಿನ ಬಹುಶ್ರೀ!

ಕವಿವರ್ಯ ಬೇಂದ್ರೆಯವರಿಗೆ ಶ್ರೀಧರರು ಅಚ್ಚುಮೆಚ್ಚಿನವರಾಗಿದ್ದರು. ಅವರು ಇವರನ್ನು 'ಪ್ರಚಂಡ'ರೆಂದು ಕರೆದರು. ಆದರೆ ತಮ್ಮದೇ ಪ್ರಭಾವಳಿಯನ್ನು ಕಟ್ಟಿಕೊಳ್ಳುವ ಹವ್ಯಾಸವಾಗಲಿ, ಅವಕಾಶವಾಗಲಿ, ಆಸಕ್ತಿಯಾಗಲಿ ಶ್ರೀಧರರಿಗೆ ಇದ್ದಿಲ್ಲ. ಅವರು ಏಕಾಕಿಯಾಗಿಯೇ ಸಾಹಿತ್ಯದಲ್ಲಿ ಏಕಲವ್ಯರಾದರು. ಅವರ ಗದ್ಯ ಸಂಸ್ಕೃತ ಭೂಯಿಷ್ಠ

ಅಲ್ಲದೇ ಕೆಲ ಸಲ Inspiration ಗಿಂತ Irritation (ಅದು ದೀರ್ಘ ಕಾಲದ ಪತ್ರಿಕಾ ಲೇಖನದ ಚಾಳಿಯಿಂದಿರಬೇಕು). ಅವರು 'ಕಾವ್ಯಸೂತ್ರ' ವೆಂಬ ಗ್ರಂಥ ಬರೆದರು. ತುಂಬ ಪ್ರಬುದ್ಧ ಕೃತಿ. ಆದರೆ ಅದರ ಹೆಚ್ಚಿನ ಆಶಯ ಅಡಿಗರ ಹಾಗೂ ತಾತ್ಕಾಲಿಕ ನವ್ಯ ಕಾವ್ಯದ ಕುರಿತ ಅಸಹನೆ ಪ್ರತಿಭಟನೆಯ ವಿನ್ಯಾಸವೇ ಆಗಿತ್ತು. ಸೂತ್ರವೆಂದು ಕರೆದರೂ ಅದು ಅಥವಾ 'ರಾಷ್ಟ್ರಸೂತ್ರ' ಮುಂತಾದವು ಅಷ್ಟು ಸುಸೂತ್ರವಾಗಿರಲಿಲ್ಲ– ಗಡಸಾದ ಗದ್ಯ, ಸಂಕೀರ್ಣ ವಿವೇಚನೆ 'ಅಡಗು ಬಾಣ'ದ ಪ್ರಯೋಗ ಈ ರೀತಿಯ ಗದ್ಯವನ್ನು ಶ್ರೀಧರರು ನಿರಂತರ ಬರೆದರು. ಆದರೆ ಅಷ್ಟು ಗಮನ ಸೆಳೆಯಲಿಲ್ಲ. ವಿವೇಕವನ್ನು ವಾಗ್ಮಿತೆಯು ಆವರಿಸಿತ್ತು. ಅವರ ಕಾವ್ಯವೂ ಹಾಗೆಯೇ. ತುಂಬ ಸಹೃದಯರೂ, ಕಾವ್ಯಶಾಸ್ತ್ರ ವಿಶಾರದರೂ, ಅನನ್ಯ ಶಬ್ದ ಸಂಪನ್ನರೂ ಅನೇಕ ಬಗೆಯ ರಚನಾ ಚಾತುರ್ಯ ಕೋವಿದರೂ ಆದ ಶ್ರೀಧರರು "ಮೇಘನಾದ" "ಅಮೃತಬಿಂದು" ಮುಂತಾದ ಹಲವು ಕವನ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಅವರು ಸಿದ್ಧಹಸ್ತದ ಶುದ್ಧ ಅಭಿರುಚಿಯ ದೀಕ್ಷಾಬದ್ಧ ಕವಿಗಳೆಂಬುದು ಸಾಕಷ್ಟು ಪ್ರಸಿದ್ಧವಾಗಿದೆ. ಆದಾಗ್ಯೂ ಡಾ। ಕೀರ್ತಿನಾಥ ಕುರ್ತಕೋಟಿಯಂತಹ ಆಧುನಿಕ ಅಧಿಕಾರವಾಣಿಯ ವಿಮರ್ಶಕರೂ ಶ್ರೀಧರರ ಕಾವ್ಯದ ಬಗ್ಗೆ ಅಂತಹ ಗಮನ ವಿವೇಚನೆಗೆಡೆಗೊಡಲಿಲ್ಲ! ಅವರ 'ನಡೆದುಬಂದ ದಾರಿ'ಯ ಪ್ರಖ್ಯಾತ ಪ್ರಬಂಧಗಳಲ್ಲಿ ಬಿ.ಎಚ್. ಶ್ರೀಧರರ ಪಾಲಿಗೆ ಒಂದು ಪುಟವೂ ಬರಲಿಲ್ಲ. ನಮ್ಮಲ್ಲಿಯ ಗುಣಗ್ರಾಹಕತೆಯನ್ನು ವ್ಯಾಪಿಸಿದ ಹಿಡಿದ ಗ್ರಹಣವಿದು! (ಆದರೆ ಈಚೆಗೆ ಶಿರಸಿಯಲ್ಲಿ ಬಂದಾಗ ಡಾ। ಕೀರ್ತಿನಾಥರು ಶ್ರೀಧರರು 'ಕಾವ್ಯಸೂತ್ರ'ದಂಥ ಕೃತಿಗಳ ಪರಿಶೀಲನೆ ಆಗಬೇಕು ಎಂದು ಉದ್ಗಾರ ತೆಗೆದರು!)

ಪ್ರಾ. ಬಿ.ಎಚ್. ಶ್ರೀಧರರು ಸ್ವಯಂ ಒಬ್ಬ ಸೂಕ್ಷ್ಮ ದೃಷ್ಟಿಯ ತೀಕ್ಷ್ಣ ಆಲೋಚನೆಯ ಸುಶ್ಲಿಷ್ಟ ವಿಮರ್ಶಕರು. ಮನಸ್ಸು ಮಾಡಿದರೆ ಅಷ್ಟೇ ಪ್ರಸನ್ನ ಲಲಿತ ಶೈಲಿಯ ಲೇಖಕರು. ಇದಕ್ಕೆ ಉತ್ತಮ ನಿದರ್ಶನ ಅವರು ಬರೆದ ಬೇಂದ್ರೆ ಕಾವ್ಯದ ಕುರಿತ ಒಂದು ಪುಟ್ಟ ಪರಿಚಯ ಪುಸ್ತಕ. ಅವರ ಕಾವ್ಯ ವೈಖರಿಯೂ ಹಾಗೆಯೇ. ಅದು ವಜ್ರಾದಪಿ ಕಠೋರವಾಗಬಲ್ಲದು ಕುಸುಮಾದಪಿ ಮೃದುವೂ ಆಗಬಲ್ಲದು. ಅವರಷ್ಟು ವಿವಿಧ ಛಂದೋವೃತ್ತಗಳಲ್ಲಿ ಪ್ರಜ್ಞಾಪಾತಳಿಗಳಲ್ಲಿ ಕವನಗಳನ್ನು ಅಷ್ಟೂಧ್ಯಾನ ನಿಬಿಡವಾಗಿ ಅಭ್ಯಾಸ ಜಡವಲ್ಲದೆ ನಿರ್ಮಿಸಿದ ಕವಿ ಪ್ರತಿಭೆ ತುಸು ವಿರಳವೇ ಸರಿ.

ಇದೇ ಬಗೆಯ ಪಾಂಡಿತ್ಯ ಲಾಲಿತ್ಯಗಳ ಸಮನ್ವಯ ಸಾಧಿಸಿದ ಇನ್ನೊಂದು ಪ್ರತಿಭೆ ನಮ್ಮ ಪಾಂಡೇಶ್ವರ ಗಣಪತಿರಾಯರದು. ಈ ಉಭಯುತರು ದಕ್ಷಿಣೋತ್ತರ ಕನ್ನಡ ಸಂಸ್ಕೃತಿಗಳ ಸಮನ್ವಯದ ಸೇತುವನ್ನು ಕಟ್ಟಿದ ಮಂದಾರ ಸ್ತಂಭಗಳು. ಇವರಿಬ್ಬರಲ್ಲಿ ಬ.ಹೆ.ಶ್ರೀ ನಿಜವಾಗಿಯೂ ನಮ್ಮ ಭಾಗ್ಯಕ್ಕೆ ಸಾಹಿತ್ಯ ಶ್ರೀಯ "ಸುಕುಮಾರ ಪ್ರಹರಿ" ಮತ್ತು "ಅಲಂಕಾರಂ ಸ್ವರ್ಗಸ್ಯ"!

ಒಟ್ಟಿನಲ್ಲಿ ಯಶಸ್ಸು ತಪ್ಪಿದ ಶ್ರೇಯಸ್ಸು ಪ್ರಭಾವಿಯಾಗದ ಪಾಂಡಿತ್ಯಗಳಲ್ಲಿಯೇ ಶ್ರೀಧರರು ರಾಮಗಿರಿಯ ಯಕ್ಷನಂತೆ ಫಲಾಶಾರಹಿತ ಕರ್ಮಯೋಗಿಯಂತೆ ಗಂಧದ ಕೊರಡಿನಂತೆ ಜ್ಞಾನಸಾಧನೆಯ ಉಗ್ರ ತಪಸ್ಸಿನಲ್ಲಿ ಅಹರ್ನಿಶಿ ಬಾಳನ್ನು ಸವೆಸಿದರು. ಸಂಕಲ್ಪ ಮತ್ತು ಸಿದ್ಧಿಗಳ ನಡುವೆ ಶಾಪಿತ ದೇವತೆಯಂತೆ ತೂಗಾಡಿದರು. ನವೋದಯದಲ್ಲಿ ವೈಫಲ್ಯವನ್ನು ಕಾಣದೆ ನವ್ಯ ಕಾವ್ಯದಲ್ಲಿ ಸಾಫಲ್ಯವನ್ನು ನಂಬದೆ ನರಕವಿಯಾಗಿ ನಿಲ್ಲದೆ ವರಕವಿತ್ವಕ್ಕೆ ಸಿಲುಕದೆ ಚೆಲ್ಲುವರಿದ ಚಾರುತ್ವದಲ್ಲಿ ತಮ್ಮ ಚಾರಿತ್ರ್ಯವನ್ನು ಚಂಚಲಗೊಳಿಸದೆ ಉನ್ನತ ವೈಚಾರಿಕರಾಗಿ, ಉತ್ತಮ ಗೆಳೆಯರಾಗಿ ಎಲ್ಲಕ್ಕೂ ಮಿಗಿಲಾಗಿ ನಿಜವಾದ ಪಂಡಿತ ಕವಿಯಾಗಿ, ಭಾವಜೀವಿಯಾಗಿ ನಿದ್ದೆಯಿಲ್ಲದ ಇರುಳುಗಳಲ್ಲಿಯೂ ಉನ್ನತ ತತ್ವದ ಚಿಂತನೆಯಲ್ಲಿ, ಲೋಕ ಸಂಗ್ರಹದ ಸಂಭ್ರಮದಲ್ಲಿಯೂ ಏಕಾಂತ ಜೀವಿಯಾಗಿ, ಬಿ.ಎಚ್.ಶ್ರೀಧರರು ನನ್ನ ಪರಮ ಮಿತ್ರರಲ್ಲಿ ಒಬ್ಬರಾಗಿ, ದೂರಸ್ಥರಾದರೂ ಸಮೀಪಸ್ಥರಂತೆ ನಡೆದರು, ನನ್ನನ್ನು ತನ್ನವನನ್ನಾಗಿ ಕಂಡರು. ಸಂಸ್ಕೃತದಲ್ಲಿ ಅಪಾರ ಪ್ರೇಮ, ಸಂಸ್ಕೃತಿಯಲ್ಲಿ ಅಗಾಧ ಅಭಿಮಾನ ಮತ್ತು ಸಂಸ್ಕಾರ ನೀಡುವುದರಲ್ಲಿ ಅಪ್ರತಿಮ ತತ್ಪರತೆ ಈ ಗುಣತ್ರಯಗಳಿಂದ ಶ್ರೀಧರರು ತಮ್ಮ ಕೃತಿಗಳಿಗೂ ಹಿರಿದಾದ ಕವಿಗಳಾಗಿ ಮನುಷ್ಯರಾಗಿ ಬದುಕಿದರು. ಇಂದಿಗೂ ಸಂಸ್ಕರಣೀಯರಾಗಿ ನನ್ನ ಹೃದಯದಲ್ಲಿ ಬದುಕಿರುತ್ತಾರೆ.

ನನ್ನ ಈ ಶಬ್ದ ಚಿತ್ರಣ ಆನೆ ಹಾದು ಹೋದ ಮೇಲೆ ಅದರ ಹೆಜ್ಜೆ ಗುರುತುಗಳಿಂದ ಅದರ ಬೃಹದಾಕಾರವನ್ನು ಕಲ್ಪಿಸಲು ಹೆಣಗಿದಂತೆ.

ಗೌರೀಶ ಕಾಯ್ಕಿಣಿ

ಬಿ.ಎಚ್. ಶ್ರೀಧರ: ಕೆಲವು ನೆನಪುಗಳು

ಬ.ಹೆ. ಶ್ರೀಧರ ಅವರ ಹೆಸರನ್ನು ನನ್ನ ವಿದ್ಯಾರ್ಥಿ ದೆಸೆಯಿಂದಲೂ ಕೇಳಿ ಬಲ್ಲವನಾಗಿದ್ದರೂ ಅವರ ಪ್ರತ್ಯಕ್ಷ ಪರಿಚಯ ನನಗಾದದ್ದು ನಾನು ಇಂಗ್ಲೀಷ್ ಅಧ್ಯಾಪಕನೆಂದು ಕೆನರಾ ಕಾಲೇಜನ್ನು ಸೇರಿದ ನಂತರವೇ. ನನ್ನ ಅಧ್ಯಾಪಕ ವೃತ್ತಿಯನ್ನು ಶ್ರದ್ಧೆಯಿಂದ ನಿರ್ವಹಿಸುತ್ತಿದ್ದ ಆ ದಿನಗಳಲ್ಲಿ ನನ್ನ ಪ್ರಮುಖ ಆಸ್ಥೆಯ ವಿಷಯ ಇಂಗ್ಲೀಷ್ ಆಗಿದ್ದಿತು. ಆಗಾಗ ಅನಿವಾರ್ಯವಾಗಿ ಮಾಡಲೇಬೇಕಾಗಿ ಬಂದ ಭಾಷಣಗಳನ್ನು ಬಿಟ್ಟರೆ ಕನ್ನಡ ನನ್ನ ಬೌದ್ಧಿಕ ಅಥವಾ ಸೃಜನಶೀಲ ಅಭಿವ್ಯಕ್ತಿಯ ಮಾಧ್ಯಮವಾಗಿರಲಿಲ್ಲ. ಎಷ್ಟರಮಟ್ಟಿಗೆಂದರೆ ಕನ್ನಡ ಲೇಖಕನೆಂದು ನಾನು ಇತ್ತೀಚೆಗೆ ಗಳಿಸಿದ ಹೆಸರು ಆಗಿನ ನನ್ನ ವಿದ್ಯಾರ್ಥಿಗಳಿಗೆ ಇನ್ನೂ ಆಶ್ಚರ್ಯದ ವಿಷಯವಾಗಿಯೇ ಉಳಿದಿದೆ.

ಇದಕ್ಕೆ ವಿರುದ್ಧವಾಗಿ ಪ್ರೊ. ಶ್ರೀಧರರು ಕನ್ನಡ ಸಾಹಿತ್ಯದ ಕ್ಷೇತ್ರದಲ್ಲಿ ಕವಿಯೆಂದು, ವೈಚಾರಿಕ ಲೇಖಕನೆಂದು, ಭಾಷಣಕಾರನೆಂದು ಪ್ರಸಿದ್ಧರಾಗಿದ್ದರು. ಬೇಂದ್ರೆ, ಕಾರಂತ, ಕಾಯ್ಕಿಣಿ ಮೊದಲಾದ ಲೇಖಕರೊಡನೆ ಅವರಿಗೆ ನಿಕಟವಾದ ಸಂಪರ್ಕವಿತ್ತು. ಅವರ ಮನೆ ಆತಿಥ್ಯಕ್ಕೆ ಹೆಸರಾದ ಮುಕ್ತಗೃಹ. ಶಿವರಾಮ ಕಾರಂತರನ್ನು ಅವರ ಮನೆಯಲ್ಲಿ ಕಂಡು ಹಲವಾರು ವಿಷಯಗಳನ್ನು ಅವರೊಡನೆ ಚರ್ಚಿಸಿದ ಸಂದರ್ಭ ಇನ್ನೂ ನನ್ನ ನೆನಪಿನಲ್ಲಿದೆ.

ಪ್ರೊ. ಶ್ರೀಧರ ಅವರು ಕಾಲೇಜಿನ ಜನಪ್ರಿಯ ಅಧ್ಯಾಪಕರಲ್ಲೊಬ್ಬರಾಗಿದ್ದರು. ಹಲವಾರು ಪ್ರತಿಭಾವಂತ ವಿದ್ಯಾರ್ಥಿಗಳೊಡನೆ ಅವರಿಗೆ ಸಲಿಗೆಯ ಸಂಬಂಧವಿತ್ತು. ಹೀಗಿದ್ದರೂ ಅವರ ವಿರುದ್ಧ ನಡೆದ ಸಂಚಿನ ಪರಿಣಾಮವಾಗಿ ಅವರನ್ನು ಕೆನರಾ ಕಾಲೇಜನ್ನು ಬಿಡಿಸುವ ಪ್ರಯತ್ನ ಆಡಳಿತ ಮಂಡಳಿಯಿಂದ ನಡೆಯಿತು. ಆದರೆ ಆಗಿನ ಅಧ್ಯಾಪಕ ಮಂಡಳಿಯ (ಒಂದೆರಡು ಅಪವಾದ ಬಿಟ್ಟರೆ) ಒಗ್ಗಟ್ಟಿನಿಂದಾಗಿ ಹಾಗೂ ವಿದ್ಯಾರ್ಥಿವೃಂದದ ಒತ್ತಾಯದಿಂದಾಗಿ ಈ ದುರ್ಧರ ಪ್ರಸಂಗದಿಂದ ಅವರು ಪಾರಾದರು. ನಂತರ ಅವರು ಶಿರಸಿ ಕಾಲೇಜಿಗೆ ಹೋಗುವವರೆಗೂ ಅಲ್ಲಿಯೇ ಉಳಿದರು.

ಶ್ರೀಧರರೊಡನೆ ಹಲವಾರು ಸಭೆಗಳಲ್ಲಿ ಭಾಗವಹಿಸಬೇಕಾಗಿ ಬಂದಾಗ ಅವರ ವ್ಯಕ್ತಿತ್ವದ ಪರಿಚಯವೂ ನನಗೆ ದೊರೆಯಿತು. ಆ ಕಾಲದ ಬಹಳಷ್ಟು ಸಾಹಿತಿಗಳಂತೆ

ಅವರು ಗಂಟೆಗಟ್ಟಲೇ ಮಾತಾಡುತ್ತಿದ್ದರು. ಒಂದು ಪ್ರಸಂಗದಲ್ಲಿ ಅವರ ಜೊತೆ ಭಾಷಣಕಾರರಾಗಿದ್ದ ಎಲ್.ಟಿ.ಶರ್ಮಾರಿಗೂ, ನನಗೂ ಐದು ಮಿನಿಟಿನ ಅವಕಾಶ ಕೂಡ ದೊರೆಯಲಿಲ್ಲ. ಸಭೆಯಲ್ಲಿ ಅನಕ್ಷರಸ್ಥರೇ ಹೆಚ್ಚಾಗಿದ್ದುದರಿಂದ ನನಗಂತೂ ಇದರಿಂದ ಸಂತೋಷವೇ ಆಯಿತು. ಪ್ರೊ. ಶ್ರೀಧರರು ಮಾತ್ರ ತಮ್ಮ ಅಗಾಧ ಸ್ಮೃತಿಯನ್ನು ಕೆದರಿ ಕೆದರಿ ಮ್ಯಾಕ್ಸ್ ಮುಲರ್‌ರಂಥ ಹಲವಾರು ವಿದ್ವಾಂಸರ ಅಭಿಪ್ರಾಯಗಳನ್ನು (ಅದೂ ಇಂಗ್ಲಿಷಿನಲ್ಲಿ) ವಿವರಿಸಿದರು!

ಪ್ರೊ. ಶ್ರೀಧರರನ್ನು ನೆನೆಸಿಕೊಂಡಾಗಲೆಲ್ಲ ಅವರ ಹಸನ್ಮುಖ ಎದುರಿಗೆ ಬರುತ್ತದೆ. ಅವರು ಯಾರೊಡನೆಯೂ ಮನಸ್ತಾಪ ಮಾಡಿಕೊಂಡ ಪ್ರಸಂಗಗಳು ನನಗೆ ಗೊತ್ತಿಲ್ಲ. ಯಾವಾಗಲೂ ಅವರು ಶಾಂತಿಯಿಂದಲೇ ಇದ್ದವರು. ಅವರಿಗೆ ಮಾತು ಪ್ರಿಯವಾಗಿದ್ದರೂ ಅವರ ವಾಚಾಳಿತನದಲ್ಲಿ ಅಧಿಕಪ್ರಸಂಗವಾಗಲಿ, ಎರಡನೆಯವರ ಮನಸ್ಸನ್ನು ನೋಯಿಸುವ ಉದ್ದೇಶವಾಗಲಿ ಇರಲಿಲ್ಲ.

೧೯೫೮ರಲ್ಲಿ ನಾನು ಕೆನರಾ ಕಾಲೇಜು ಬಿಟ್ಟು ಗದುಗಿನ ತೋಂಟದಾರ್ಯ ಕಾಲೇಜು ಸೇರಿದೆ. ನಂತರ ಹಲವಾರು ವರ್ಷ ಮಹಾರಾಷ್ಟ್ರದಲ್ಲಿ ಕಳೆದೆ. ಕೆನರಾ ಕಾಲೇಜಿನಲ್ಲಿ ಒಂದೆರಡು ವರ್ಷ ನಮ್ಮೊಡನೆ ಇದ್ದ ಅಡಿಗರನ್ನು ನಾನು ಮೇಲಿಂದ ಮೇಲೆ ಬೆಂಗಳೂರಿನಲ್ಲಿ ಕಾಣುತ್ತಿದ್ದೆ. ಆದರೆ ಶ್ರೀಧರ ಅವರನ್ನು ಮತ್ತೆ ಕಾಣುವ ಪ್ರಸಂಗಗಳೇ ಬರಲಿಲ್ಲ.

ನವ್ಯರ ಭರಭರಾಟೆ ಪ್ರಾರಂಭವಾದ ಮೇಲೆ ಶ್ರೀಧರ, ಪಾಂಡೇಶ್ವರ ಶ್ಯಾನಭಾಗ ಮೊದಲಾದವರ ಹೆಸರುಗಳು ಹಿಂದೆಬಿದ್ದವು. ಇವರ ಸಾಹಿತ್ಯದ ಸಮರ್ಪಕವಾದ ಮೌಲ್ಯಮಾಪನ ನಡೆಯಲೇ ಇಲ್ಲ. ಈಗ ಅವರ ಹೆಸರಿನಲ್ಲಿ ಒಂದು ಟ್ರಸ್ಟ್ ಇರುವುದು ಸಂತೋಷದ ಸಂಗತಿ. ಈ ಟ್ರಸ್ಟಿನ ಪಾರಿತೋಷಕ ಪಡೆದವರಲ್ಲಿ ನಾನೂ ಒಬ್ಬ ನಮ್ಮಲ್ಲಿ ಬಹಳಷ್ಟು ಜನ ಗ್ರಾಮಾಂತರ ಪ್ರದೇಶದಲ್ಲಿಯೇ ಹುಟ್ಟಿದ್ದರೂ ನಮ್ಮ ಕಾರ್ಯಕ್ಷೇತ್ರ ನಗರವಾಯಿತು. ಆದರೆ ಪ್ರೊ. ಶ್ರೀಧರ ಅವರಂಥ ಕೆಲವರು ಕುಮಟಾ, ಶಿರಸಿ, ಸಿದ್ಧಾಪುರಗಳ ಪರಿಸರದಲ್ಲಿಯೇ ಉಳಿದು ಆ ಪ್ರದೇಶದ ಶೈಕ್ಷಣಿಕ, ಬೌದ್ಧಿಕ, ಸಾಮಾಜಿಕ ಮಟ್ಟವನ್ನು ಎತ್ತರಿಸುವುದಕ್ಕಾಗಿ ಶ್ರಮಿಸಿದರು. ಅವರ ಈ ನಿಸ್ವಾರ್ಥ ಸೇವೆಗಾಗಿ ಕರ್ನಾಟಕದ ಜನತೆ ಕೃತಜ್ಞರಾಗಿರಬೇಕು.

ಜಿ.ಎಸ್. ಆಮೂರ

ಶ್ರೀಧರ ಸ್ಮರಣೆ

ನಮ್ಮ ಹಿರಿಯ ಲೇಖಕರಲ್ಲಿ ಒಬ್ಬರಾಗಿದ್ದ ಪ್ರೊಫೆಸರ್ ಬಿ.ಎಚ್. ಶ್ರೀಧರ ಅವರು ತೀರಿಕೊಂಡು (ಏಪ್ರಿಲ್ ೨೪) ಆಗಲೇ ತಿಂಗಳಾಗುತ್ತಾ ಬಂತು! ಈ ಹಿರಿಯ ಮಿತ್ರರ ಸಾವಿನ ವಿಚಾರ ನನಗೆ ತಿಳಿದದ್ದೇ ತುಂಬಾ ತಡವಾಗಿ, ಆ ದಿನಗಳಲ್ಲಿ ನಾನು ಊರಿನಲ್ಲಿರಲಿಲ್ಲವಾಗಿ ಅವರ ನಿಧನ ವಾರ್ತೆಯನ್ನು ಓದುವುದಾಗಿರಲಿಲ್ಲ. ಹತ್ತು ಹನ್ನೆರಡು ದಿನಗಳ ನಂತರ ಈ ಸುದ್ದಿಯನ್ನು ನನಗೆ ಮುಟ್ಟಿಸಿದ ಮಿತ್ರರು, ಶ್ರೀಧರರ ಸಾಧನೆ ಸಿದ್ಧಿಗಳಿಗೆ ಅನುಗುಣವಾದ ರೀತಿಯಲ್ಲಿ ಸುದ್ದಿ ಪ್ರಕಟಗೊಂಡಿರಲಿಲ್ಲವೆಂದೂ ಹೇಳಿದರು. ಒಂದೆರಡು ಸಾಲಿನ ವಾರ್ತೆ ಮಾತ್ರ ಅಚ್ಚಾಗಿತ್ತಂತೆ. ಸಾಯುವವರು ತಮ್ಮ ಸಾವಿನ ವಾರ್ತೆ ಹೇಗೆ ಅಚ್ಚಾಗುತ್ತೆಂಬುದನ್ನು ನಿರೀಕ್ಷಿಸುವುದಿಲ್ಲ; ಅದು ಹೇಗೆ ಅಚ್ಚಾದರೂ ಅದನ್ನು ನೋಡಲು ಅವರಿಗೆ ಸಾಧ್ಯವಾಗುವುದಿಲ್ಲ. ಆದರೆ ಬದುಕಿರುವವರು ಆ ಸುದ್ದಿ ಹೇಗೆ ಪ್ರಕಟಗೊಳ್ಳುತ್ತದೆಂಬುದನ್ನು ನೋಡಬೇಕು; ತಮ್ಮ ತಮ್ಮ ಹೃದಯಗಳನ್ನು ತಡಕಿ ನೋಡಿಕೊಳ್ಳಬೇಕು. ಏಕೆಂದರೆ ಅದು ಋಣ ಸಂದಾಯದ ಒಂದು ರೀತಿ. ಕಾರಣ ಏನೇ ಇರಲಿ, ಈ ಅಂಕಣದಲ್ಲಿ ಶ್ರೀಧರರಿಗೆ ಶ್ರದ್ಧಾಂಜಲಿ ಸಲ್ಲಿಸುವುದು ತಡವಾಗಿದೆ; ಸಲ್ಲಿಸದಿದ್ದರೆ ದೊಡ್ಡ ಲೋಪವಾಗುತ್ತದೆ ಎಂದು ನನ್ನ ಭಾವನೆ. ಶ್ರೀಧರ ನಿರ್ಲಕ್ಷ್ಯಕ್ಕೆ ಒಳಗಾಗುವಂಥ ಲೇಖಕರಾಗಿರಲಿಲ್ಲ.

ಶ್ರೀಧರ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿಗೆ ಸೇರಿದವರು. ಆದರೆ ಅವರು ಉತ್ತರ ಕನ್ನಡ ಜಿಲ್ಲೆಯವರೇ ಆಗಿ ಹೋಗಿದ್ದರು. ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯವನ್ನು ಕುರಿತು ಬರೆಯುವಾಗ ಅವರನ್ನು ಕೈ ಬಿಡುವುದು ಸಾಧ್ಯವೇ ಆಗುತ್ತಿರಲಿಲ್ಲ. 'ಪ್ರಜಾವಾಣಿ'ಯ ಕಳೆದ ದೀಪಾವಳಿ ಸಂಚಿಕೆಯಲ್ಲಿ ಅವರನ್ನು ಕುರಿತು ನಾನು ಹೀಗೆ ಬರೆದಿದ್ದೆ: "ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರಾಗಿದ್ದುದನ್ನು ಮರೆಸಿ ಉತ್ತರ ಕನ್ನಡದವರಾಗಿರುವುದು ಕವಿ, ವಿಮರ್ಶಕ, ವಿದ್ವಾಂಸ ಬಿ.ಎಚ್.ಶ್ರೀಧರರ ವೈಶಿಷ್ಟ್ಯ. ಹಲವಾರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ; ಅನೇಕ ಬಹುಮಾನ ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಇವರು ಮಾಡಿರುವ ಸಾಹಿತ್ಯಿಕ ಕೆಲಸ ಬಹುಮುಖವಾದದ್ದು. ಆದರೆ ಅದಕ್ಕೆ ಅನುಗುಣವಾದ ಮಾನ್ಯತೆ ಅವರಿಗೆ ದೊರೆಯದೆ ಹೋದದ್ದು ಖೇದದ ಸಂಗತಿ." ಈ ಮಾತುಗಳನ್ನು ಓದಿ ಉತ್ತರ ಕನ್ನಡ ಜಿಲ್ಲೆಯ ಇನ್ನೊಬ್ಬ ಹಿರಿಯ ಲೇಖಕ ಡಾ. ಎಲ್.ಆರ್. ಹೆಗಡೆ ನನಗೆ ಬರೆದರು: "ಶ್ರೀಧರರ ವಿಷಯವಾಗಿ ನೀವು

ಹೇಳಿರುವುದು ತುಂಬ ಸರಿಯಾಗಿದೆ. ಅದು ಅವರಿಗೆ ಸ್ವಲ್ಪವಾದರೂ ಸಮಾಧಾನವನ್ನು ತಂದೀತು." ಶ್ರೀಧರ ನಿರ್ಲಕ್ಷ್ಯಕ್ಕೆ ಒಳಗಾದ ಲೇಖಕರಲ್ಲಿ ಒಬ್ಬರು. ಅದು ನನಗೆ ಯಾವತ್ತೂ ವ್ಯಥೆಯನ್ನುಂಟುಮಾಡಿರುವ ಸಂಗತಿ. ಈಗ ಅವರ ಸಾವಿನ ಸುದ್ದಿಯಾದರೂ ಅದಕ್ಕೆ ಅನುಗುಣವಾದ ರೀತಿಯಲ್ಲಿಯೇ ಪ್ರಕಟವಾಗಿದೆ! ಶ್ರೀಧರರನ್ನು ತಕ್ಕಷ್ಟು ಸನಿಯದಿಂದ ಬಲ್ಲವನಾಗಿದ್ದ ನನಗೆ ಅವರ ಪ್ರತಿಕ್ರಿಯೆ ಇಂಥ ಸಂದರ್ಭದಲ್ಲಿ ಹೇಗಿರುತ್ತದೆಂದು ಊಹಿಸಲು ಕಷ್ಟವಾಗುವುದಿಲ್ಲ.

ಅಧ್ಯಯನ, ಅನುಭವ, ಪ್ರತಿಭೆಗಳು ಶ್ರೀಧರರಲ್ಲಿ ಸಂಗಮಿಸಿದ್ದವು. ಸಂಸ್ಕೃತ, ಕನ್ನಡ, ಇಂಗ್ಲೀಷ್ ಭಾಷೆ ಸಾಹಿತ್ಯಗಳನ್ನು ಅವರು ಚೆನ್ನಾಗಿ ಬಲ್ಲವರಾಗಿದ್ದರು. ಅವರಲ್ಲಿ ಒಂದು ಸಮನ್ವಯ ದೃಷ್ಟಿ ನಿಚ್ಚಳವಾಗಿತ್ತು. ಅವರಿಗೆ ಹಳೆಯದರ ಬಗೆಗೆ ವಿನಾಕಾರಣ ಮೋಹವಿರಲಿಲ್ಲ; ಹೊಸತನ್ನು ಚೆನ್ನಾಗಿಯೇ ತಿಳಿದಿದ್ದರು. ಅವೆರಡನ್ನೂ ಹೊಂದಿಸಿಕೊಂಡು ಹೋಗುವುದರಲ್ಲಿ ಅವರು ಆಸಕ್ತರಾಗಿದ್ದರು. ಇಹದಲ್ಲಿ ಅವರಿಗೆ ಜಿಗುಪ್ಸೆಯಿರಲಿಲ್ಲ; ಪರದ ಬಗೆಗೆ ವಿಶೇಷ ಆಕರ್ಷಣೆಯೂ ಇರಲಿಲ್ಲ. ಋಜು ಜೀವನದ ವಿಷಯದಲ್ಲಿ ಅವರು ಸದಾ ಉತ್ಸುಕರಾಗಿದ್ದರು.

ಅವರು ಹುಟ್ಟಿದ್ದು (ಏಪ್ರಿಲ್ ೨೪, ೧೯೧೮) ಪಾಂಡಿತ್ಯ ಪ್ರತಿಭೆಗಳ ಪರಿಸರದಲ್ಲಿ. ಅವರ ಅಜ್ಜಿ ಮಹಾಲಕ್ಷ್ಮಿ ಆ ಪ್ರದೇಶದಲ್ಲಿ ಪ್ರಸಿದ್ಧಿ ಹೊಂದಿದ ಕವಯಿತ್ರಿಯಾಗಿದ್ದರು. ಆಕೆ ಅದೆಷ್ಟೋ ಹಾಡುಗಳನ್ನು ಕಟ್ಟಿ ಹಾಡುತ್ತಿದ್ದರು. ಆಕೆಗೆ ಐವರು "ಕವಿತಾ ಶಕ್ತಿ ಸಂಪನ್ನ"ರಾದ ಮಕ್ಕಳಿದ್ದರು. ಇಬ್ಬರು ಹೆಣ್ಣುಮಕ್ಕಳು; ಮೂವರು ಗಂಡು ಮಕ್ಕಳು. ಐವರಲ್ಲಿಯೂ ಕಾವ್ಯರಚನೆಯ ಶಕ್ತಿಯಿತ್ತು. ಹೆಣ್ಣು ಮಕ್ಕಳು ಭಕ್ತಿ ಗೀತೆಗಳನ್ನೂ, ಆರತಿ ಹಾಡುಗಳನ್ನೂ ರಚಿಸಿದ್ದರು. ಗಂಡು ಮಕ್ಕಳಾದರೂ ಹಳಗನ್ನಡ ಸಂಸ್ಕೃತಗಳನ್ನು ಚೆನ್ನಾಗಿ ಓದಿದ್ದರು. ಬಗೆ ಬಗೆಯ ಸಾಹಿತ್ಯ ರಚನೆಯಲ್ಲಿ ತೊಡಗಿದ್ದರು. ಯಕ್ಷಗಾನ ಪ್ರಸಂಗಗಳನ್ನು ರಚನೆ ಮಾಡುವುದಷ್ಟೇ ಅಲ್ಲ ಅವುಗಳ ಅರ್ಥ ಹೇಳುವುದರಲ್ಲಿಯೂ ಹೆಸರುವಾಸಿಯಾಗಿದ್ದರು. ಹೀಗೆ ಶ್ರೀಧರರಿಗೆ ಸಾಹಿತ್ಯ ಶಕ್ತಿ ಪಿತ್ರಾರ್ಜಿತವಾಗಿ ಲಭಿಸಿತ್ತು! ಅವರು ಅದನ್ನು ಬಹುಮುಖವಾಗಿ ಬೆಳೆಸಿಕೊಂಡರು.

ಶ್ರೀಧರರ ಮೊದಲನೆಯ ಪದ್ಯ ಪ್ರಕಟವಾದಾಗ ಅವರಿಗೆ ಕೇವಲ ಹದಿನಾಲ್ಕು ವರ್ಷ ವಯಸ್ಸಾಗಿತ್ತು. ಆಗ ತಾನೆ ಅವರು ವಿಜಯನಗರದ ಚರಿತ್ರೆಯನ್ನು ಓದಿ ಕರ್ನಾಟಕದ ಗತವೈಭವವನ್ನು ಮೆಲುಕು ಹಾಕುತ್ತಿದ್ದರು. ಕಳೆದು ಹೋದ ವೈಭವದೊಡನೆ ಕಣ್ಣೆದುರಿಗಿನ ಪರಿಸ್ಥಿತಿಯನ್ನು ಹೋಲಿಸಿದಾಗಲೆಲ್ಲ ಅವರ ಹದಿಹರೆಯದ ಮನಸ್ಸು ಮುರುಟುತ್ತಿತ್ತು. ಮನಸ್ಸನ್ನು ಕಲಕುತ್ತಿದ್ದ ವ್ಯಥೆ ಛಂದೋರೂಪವನ್ನು ತಾಳಿತು! "ಅಂದಿನ ತುಂಬು ಜೀವನದ ರಸರುಚಿ ಪುನರುದಯವಾಗಲೆಂಬ ಉತ್ಕಟೇಚ್ಛೆ" ಆ ಮೊದಲ ಕವಿತೆಗೆ ಪ್ರೇರಕ ಶಕ್ತಿಯಾಗಿತ್ತು. "ಭಾವಸಾಂದ್ರತೆಯ ಒತ್ತಡದಿಂದ" ಕಾವ್ಯ ಸೃಷ್ಟಿಯಾಯಿತು. ಅಲ್ಲಿಂದ ಮುಂದೆ ಶ್ರೀಧರರು ತಮ್ಮ ಲೇಖನಿಗೆ ಬಿಡುವು ಕೊಡದೆ

ಹತ್ತಿರ ಹತ್ತಿರ ಆರು ದಶಕಗಳ ಕಾಲ ಬರೆದರು; ಬರೆದೇ ಬರೆದರು. ಅವರ ಬರವಣಿಗೆ ವೈವಿಧ್ಯಮಯವಾದದ್ದು. ಅದರಲ್ಲಿ ಸಕಾಲದ್ದೂ ಇದೆ; ತ್ರಿಕಾಲದ್ದೂ ಇದೆ!

ಅವರು ಕೊಟ್ಟ ಕೊನೆಯ ಲೇಖನ 'ಕೈಗಾ ಅಣು ವಿದ್ಯುತ್ ಯೋಜನೆ'ಗೆ ಸಂಬಂಧಿಸಿದ್ದು ('ನಾಗರಿಕ' ವಾರಪತ್ರಿಕೆ ಹೊನ್ನಾವರ: ಏಪ್ರಿಲ್ ೩೦, ೧೯೯೦) "ಒಂದು ದುಡುಕಿನಿಂದ ನೂರು ಕೆಡುಕುಗಳಾಗಬಹುದು" ಎಂದು ಶ್ರೀಧರ ಈ ಲೇಖನದಲ್ಲಿ ಎಚ್ಚರಿಸುತ್ತಾರೆ. ಅನೇಕ ಪ್ರಶ್ನೆಗಳನ್ನು ಎತ್ತಿ ನಾಳೆ ಎದುರಿಸಬೇಕಾಗಿ ಬರುವ ಭಯಂಕರ ವಿಪತ್ತುಗಳ ಬಗೆಗೆ ಹೇಳುತ್ತಾರೆ. ಅವರು ಆ ವಿಷಯಕ್ಕೆ ಸಂಬಂಧಿಸಿದಂತೆ ತಜ್ಞರಲ್ಲದಿರಬಹುದು. ಜೀವನ ಪ್ರೀತಿ, ಮಾನವೀಯ ಅನುಕಂಪಗಳಿಗೆ ತಜ್ಞತೆಯ ಅಗತ್ಯವಿಲ್ಲ. ಇದನ್ನು ಅವರು ಇಲ್ಲಿ ಸ್ಪಷ್ಟಪಡಿಸಿದ್ದಾರೆ! "ಸುರಕ್ಷತೆಯ ಬಗೆಗೆ ಹೆಚ್ಚು ಸುಧಾರಿತ ಕ್ರಮ ಕೈಗೊಳ್ಳಲು ಸಾಧ್ಯವಾಗದ ಭಾರತೀಯ ಅಣು ವಿದ್ಯುದುತ್ಪಾದನೆಯ ಪ್ರಯತ್ನವನ್ನು ಬಿಟ್ಟುಬಿಡಬೇಕು. ಏಕೆಂದರೆ ಸ್ಥಾವರ ಕೆಟ್ಟರೆ ಅದೊಂದು ರಾಸಾಯನಿಕ ಯುದ್ಧವೇ ಆದೀತು" ಎಂದು ಶ್ರೀಧರ ತಮ್ಮ ಲೇಖನದಲ್ಲಿ ಹೇಳಿದ್ದಾರೆ. ಇಲ್ಲಿನ ಕಳಕಳಿ ಸುಲಭವಾಗಿ ಅರ್ಥವಾಗುವಂಥದು. ಈ ಲೇಖನ ಶ್ರೀಧರರ ಆಸಕ್ತಿಯ ಹರವನ್ನು ತೋರಿಸುತ್ತದೆ; ಬದುಕನ್ನು ಕುರಿತ ಕಾತರವನ್ನು ಸೂಚಿಸುತ್ತದೆ.

ತಮ್ಮ ಹಳ್ಳಿಯ ಸಮೀಪದ ಬಿಜೂರು ಎಂಬಲ್ಲಿ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಆರಂಭಿಸಿದರು; ಸೊರಬ ಸಾಗರಗಳಲ್ಲಿ ಮುಂದುವರೆಸಿದರು. ಇಂಟರ್ಮೀಡಿಯೆಟ್ ಪದವಿ ಮತ್ತು ಸ್ನಾತಕೋತ್ತರ ಶಿಕ್ಷಣವನ್ನು ಮೈಸೂರಿನಲ್ಲಿ ಪಡೆದರು. ಮಹಾರಾಜರವರ ಕಾಲೇಜಿನಲ್ಲಿ, ಸಮರ್ಥ ಅಧ್ಯಾಪಕರ ಮಾರ್ಗದರ್ಶನದಲ್ಲಿ ಪದಕ ಬಹುಮಾನಗಳೊಡನೆ ಪದವಿಗಳನ್ನು ಪಡೆದರು. ಅವರಿಗೆ ಅಧ್ಯಾಪಕರಾಗಬೇಕೆಂಬ ಆಸೆ! ಆದರೆ ಅವಕಾಶಗಳೆಲ್ಲಿ? ಪುಣೆಯ ಯಾವುದೋ ಒಂದು ಮಿಲಿಟರಿ ಸರ್ವಿಸ್ಸಿನ ಕಛೇರಿಯಲ್ಲಿ ಗುಮಾಸ್ತರಾಗಿ ತಮ್ಮ ವ್ಯಕ್ತಿ ಜೀವನವನ್ನು ಆರಂಭಿಸಿದರು. ತಮಾಷೆಯಾಗಿ ಅವರೊಮ್ಮೆ ನನ್ನ ಬಳಿ ಹೇಳಿದ್ದರು; "ಕನ್ನಡದಲ್ಲಿ ನಾನು ಮತ್ತು ಪುತಿನ ಇಬ್ಬರೇ ಮಿಲಿಟರಿಯವರಿರುವುದು!" (ಪುತಿನ ಅವರೂ ಕೆಲಕಾಲ ಮಿಲಿಟರಿ ಕಛೇರಿಯೊಂದರಲ್ಲಿ ಕೆಲಸ ಮಾಡುತ್ತಿದ್ದುದನ್ನು ನೆನಪಿಸಿಕೊಳ್ಳಬಹುದು) ಪ್ರೌಢ ಶಾಲೆಯೊಂದರಲ್ಲಿ ಮೂರು ನಾಲ್ಕು ವರ್ಷ ಅಧ್ಯಾಪಕರಾಗಿ ಕೆಲಸ ಮಾಡಿ, ಹುಬ್ಬಳ್ಳಿಗೆ ಹೋಗಿ 'ಕರ್ಮವೀರ' ವಾರಪತ್ರಿಕೆಯ ಉಪಸಂಪಾದಕರಾಗಿ ಪತ್ರಿಕೋದ್ಯಮ ಕ್ಷೇತ್ರಕ್ಕೂ ಕಾಲಿಟ್ಟರು. ಇದೂ ಕೂಡ ಮೂರು ನಾಲ್ಕು ವರ್ಷಗಳ ಅವಧಿಯದು! ೧೯೫೧ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಕುಮಟಾದಲ್ಲಿ ಕೆನರಾ ಕಾಲೇಜು ಸ್ಥಾಪನೆಯಾದಾಗ ಶ್ರೀಧರ ಅಲ್ಲಿಗೆ ಪ್ರಾಧ್ಯಾಪಕರಾಗಿ ಹೋದರು. ಮುಂದೆ ಶಿರಸಿಯ ಕಾಲೇಜಿನಲ್ಲಿ ವೈಸ್ ಪ್ರಿನ್ಸಿಪಾಲರಾಗಿಯೂ, ಸಿದ್ಧಾಪುರ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿಯೂ ಕೆಲಸ ಮಾಡಿ, ಶಿಕ್ಷಕ ವೃತ್ತಿಯಿಂದ ನಿವೃತ್ತರಾದರು. ಹೊಸ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಅವುಗಳಿಗಾಗಿ

ಶ್ರಮಿಸಿದ್ದು ತಾವು ಹೋದ ಕಡೆಯೆಲ್ಲ ತಾವು ನಂಬಿದ ಜೀವನ ಮೌಲ್ಯಗಳನ್ನು ಪ್ರಸರಿಸಿದ್ದು ಶ್ರೀಧರರ ಒಂದು ವಿಶೇಷವೆಂದೇ ಹೇಳಬೇಕು. ಅವರು ಸಂಸ್ಕೃತ ಪ್ರಾಧ್ಯಾಪಕರಾಗಿದ್ದರೂ, ಸಮಾಜ ವಿಜ್ಞಾನ ಮಾನವಿಕಗಳಲ್ಲಿ ಅವರಿಗಿದ್ದ ಪರಿಣತಿ ವಿಶೇಷ ಉಲ್ಲೇಖಕ್ಕೆ ಅರ್ಹವಾಗಿದೆ. ಅವರು ನಮ್ಮ ಬಹುಶ್ರುತರಲ್ಲಿ ಒಬ್ಬರಾಗಿದ್ದರು.

ಶ್ರೀಧರ ಲೇಖಕರು; ಅನುವಾದಕರು. ಲೇಖಕರಾಗಿ ಅವರು ಕಾವ್ಯ, ವಿಮರ್ಶೆ, ವಿಚಾರ ಸಾಹಿತ್ಯ, ಸಂಶೋಧನೆ, ಶಿಶುಸಾಹಿತ್ಯ–ಹೀಗೆ ನಾನಾ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಅವರ ಮೊದಲನೆಯ ಪುಸ್ತಕ 'ಮೇಘನಾದ' ಎಂಬುದು ಒಂದು ಕವನ ಸಂಕಲನ; ಅದರಲ್ಲಿ ೩೨ ಕವಿತೆಗಳಿವೆ. ಗೆಳೆತನದ ಸ್ತುತಿ, ಪ್ರಕೃತಿಯ ವರ್ಣನೆ, ಇಲ್ಲಿನ ಅನೇಕ ಕವಿತೆಗಳಲ್ಲಿ ಹರಳುಗಟ್ಟಿವೆ. 'ಅಮೃತಬಿಂದು,' 'ಮಂಜುಗೀತ,' 'ರಸಯಜ್ಞ,' 'ಕಿನ್ನರಗೀತ,' 'ಮುತ್ತುರತ್ನ' ಇವು ಶ್ರೀಧರರ ಇತರ ಕೆಲವು ಕವನ ಸಂಗ್ರಹಗಳು. ಗಾಂಭೀರ್ಯ, ವಿಡಂಬನೆಗಳೆರಡೂ ಅವರ ಕಾವ್ಯದಲ್ಲಿ ಬಗೆಬಗೆಯಾಗಿ ಕಾಣಿಸಿಕೊಳ್ಳುತ್ತವೆ. ಚಿತ್ರ ಕಾವ್ಯದ ಬಗೆಗಳೂ ಅವರಲ್ಲಿವೆ. "ಪಾರಿವಾಳದ ಕೊರಳ ಕೊಂಕಿನಲಿ ಬಾ, ಚೆಲುವೆ" ಎಂದು ಸರಳವಾಗಿ ಬರೆಯಬಲ್ಲ ಅವರು ಒಂದು ಕವಿತೆಗೆ ಇಟ್ಟ ಹೆಸರು 'ಯುದ್ಧಾಯ ಯುಜ್ಯಸ್ವ'!

ನವ್ಯ ಕಾವ್ಯ ಸಂದರ್ಭದಲ್ಲಿ ಅವರು ಹೇಳಿದ್ದು "ಕನ್ನಡದಲ್ಲಿ ಭಾವಗೀತೆಗಳಿಗೇ ಪ್ರಥಮ ಸ್ಥಾನ. ಪುರಂದರ ದಾಸರ ಹಾಗೂ ನಿಜಗುಣ ಶಿವಯೋಗಿಗಳ ಪದಗಳನ್ನು ಮಾತಿಗೆ ಮೊದಲು ಎತ್ತಿ ಆಡುವ ಜನ ಭಾವಗೀತೆಗಳಿಗಲ್ಲದೆ ಮತ್ತಾವುದಕ್ಕೆ ಅಗ್ರಸ್ಥಾನ ಕೊಟ್ಟೀತು? ಇಷ್ಟೇ; ನಮ್ಮ ವಿದ್ಯಾಸಂಸ್ಕಾರಗಳ ಸಂಕರ – ಸಂಸೃಷ್ಟಿಗಳ ದೆಸೆಯಿಂದ ಈಗ ಕನ್ನಡದ ಭೂರಿ ಜನರಿಂದ ಸುಸಂಸ್ಕೃತ ಭಾವಗೀತೆ ಕೂಡ ಸ್ವಲ್ಪ ದೂರವಾಗಿ ನಿಂತಿರುವಂತೆ ತೋರುತ್ತದೆ. ಅವುಗಳ ಬೆಳವಣಿಗೆಗೆ ನವ್ಯಾಭಿ ನವ್ಯ ಹಾದಿಗಳಲ್ಲಿ ಭಾವದ ಹಾದಿ ಗೀತದ ಬೆಳಕಿನ ಕಂಬವನ್ನು ಬಿಟ್ಟಾಗ ಭಾವಗೀತ ಜನಪ್ರಿಯವಾಗಿ ಉಳಿಯಲಾರದು. ಜಟಿಲ ರೂಪಕ ಬಂಧ ಹಿಡಿದು ಕೆಲ ಸೊಗಸನ್ನು ಕಾಣಬಹುದಾದರೂ ಅದರಲ್ಲಿ ಮುನ್ನಡೆದರೆ ನವ್ಯ ಚಿತ್ರ ಕಾವ್ಯ ನಿರ್ಮಿತವಾಗಬಹುದಲ್ಲದೆ ಲೋಕ ಹೃದಯಾಕರ್ಷಕ ರಸಾಮೃತದ ಕಾವ್ಯ ಸಮುದ್ರ ಹುಟ್ಟದು. ಆದುದರಿಂದ ಭಾವಗೀತ ನವ್ಯವನ್ನುಳಿದು ಅಭಿನವ್ಯ ಮಾರ್ಗದಲ್ಲಿ ಮುಂದೆ ಸಾಗುವುದೆಂದು ನನ್ನ ಕಾಣ್ಕೆ." ಈ ಕಾಣ್ಕೆಯೇನೂ ಹುಸಿಯಾಗಲಿಲ್ಲ!

ಬೇಂದ್ರೆ, ಎಲಿಯೆಟ್, ರವೀಂದ್ರನಾಥ ಠಾಕೂರರನ್ನು ಕುರಿತು ಬರೆದ, ಅನುವಾದಿಸಿದ ಶ್ರೀಧರ ಮೊದಲ ಬಾರಿಗೆ ಹೊಸಗನ್ನಡ ಗದ್ಯ ಶೈಲಿಯ ವಿಶ್ಲೇಷಣೆ ಮಾಡಿದ್ದಾರೆ. 'ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ,' 'ಜ್ಞಾನಸೂತ್ರ,' 'ಪಂಚಮುಖಿ,' 'ರಾಷ್ಟ್ರಸೂತ್ರ' ಮೊದಲಾದವು ಅವರ ಪಂಡಿತ ಕೃತಿಗಳು. 'ಕುಂದಮಾಲೆ,' 'ಭಾರತೀಯ ವಾಙ್ಮಯ,' 'ಸ್ವಾತಂತ್ರ್ಯ ಮೀಮಾಸೆ' ಮೊದಲಾದವು ಅನುವಾದ

ಕೃತಿಗಳು. 'ಮರುಳ ಸಿದ್ಧನ ಮಹಾವಚನಗಳು,' 'ಭಾಷಣ ಭೈರವರ ಒಡ್ಡೋಲಗ' – ಇವು ಅವರ ವಿಡಂಬನೆಯ ಮಾದರಿಗಳು. 'ಭಾರತೀಯ ಮೂರ್ತಿಶಿಲ್ಪ' ಒಂದು ಸಂಶೋಧನೆಯ ಗ್ರಂಥ. 'ಭಾನುಮತಿ ಕಲ್ಯಾಣ' ಸಂಪಾದಿತ ಕೃತಿ. ಅವರ ಕೃತಿ ವೈವಿಧ್ಯವನ್ನು ತೋರಿಸಲು ಇಷ್ಟು ಸಾಕು. ಈ ಪಟ್ಟಿಯಲ್ಲಿ ಸೇರದ ಕೃತಿಗಳು ಅನೇಕ ಇವೆ!

'ಕಾವ್ಯಸೂತ್ರ' ಎನ್ನುವುದು ಬಹಳ ಪ್ರಸಿದ್ಧವಾದ ಗ್ರಂಥ. "ನಿಷ್ಕೃಷ್ಟವಾದ ಜ್ಞಾನವೂ, ಅನುಭವ ಸಿದ್ಧವಾದ ಆತ್ಮ ಪ್ರತ್ಯಯವೂ ತುಂಬಿರುವ ಧೈರ್ಯಶಾಲಿಗಳು ಮಾತ್ರ ರಚಿಸಬಹುದಾದ ಗ್ರಂಥ' ಎಂಬ ಪ್ರಶಂಸೆಯನ್ನು ಗಳಿಸಿದ ಈ ಕೃತಿ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವ ಪ್ರಶಸ್ತಿ, ತೀನಂಶ್ರೀ ಸ್ಮಾರಕ ಬಹುಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನಗಳನ್ನು ಗಳಿಸಿದೆ. 'ಜ್ಞಾನಸೂತ್ರ' ಗ್ರಂಥಕ್ಕೆ ಲೋಕ ಶಿಕ್ಷಣ ಟ್ರಸ್ಟಿನ ಗೌರವ ದೊರೆತಿದೆ. ಶ್ರೀಧರ ಉತ್ತರ ಕನ್ನಡ ಜಿಲ್ಲೆಯ ಮೂರನೆಯ ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೂ, ೫೫ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಾಹಿತ್ಯ ಗೋಷ್ಠಿಗೂ ಅಧ್ಯಕ್ಷರಾಗಿದ್ದರು.

ಶ್ರೀಧರ ಅವರನ್ನು ಮೈಸೂರು ಸಾಹಿತ್ಯ ಸಮ್ಮೇಳನದಲ್ಲಿ (೧೯೫೫) ನಾನು ಮೊದಲು ಕಂಡೆ. ಅಲ್ಲಿಂದ ಮುಂದಿನ ಈ ಮೂರುವರೆ ದಶಕಗಳಲ್ಲಿ ನಮ್ಮ ಸ್ನೇಹ ಕೆಲವು ಏರು–ಪೇರುಗಳೊಡನೆ ಬೆಳೆದು ಬಂದಿತ್ತು. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲೀಷ್–ಕನ್ನಡ ನಿಘಂಟಿನ ಪರಿಷ್ಕರಣೆ ಯೋಜನೆಯಲ್ಲಿ ನನಗೆ ಅವರೊಡನೆ ನಿಕಟವಾಗಿ ವ್ಯವಹರಿಸುವ ಅವಕಾಶ ದೊರೆಯಿತು. ಆಗ ನಾನು ಅವರ ಸುಸಂಸ್ಕೃತ ಸ್ನೇಹದ ಸವಿಯನ್ನು ಸವಿದೆ. ಸ್ನೇಹದ ಬಗೆಗೆ ಅವರೇ ಒಂದು ಕಡೆ ಹೀಗೆ ಬರೆದಿದ್ದಾರೆ.

"ಜೀವನದಲ್ಲಿ ಗೆಳೆತನಕ್ಕಿಂತ ಹೆಚ್ಚಿನದಿಲ್ಲ, ಪವಿತ್ರತರವಾದುವಿಲ್ಲ. ಮೈತ್ರಿ ಎಂಬುದು ಮಾನವನಿಗೆ ದೇವ ಕೊಟ್ಟಿರುವ ಒಂದು ವರ. ಅದು ಆನಂದ ಗಂಗೆಯ ಅತ್ಯುಚ್ಚವಾದ ಒಂದು ಉಗಮ. ಗೆಳೆತನವೆಂಬುದು ನನಗೆ 'ಮಧುರಾದಪಿ ಮಧುರತರಂ' ಎಂದು ಹೇಳಬಯಸುತ್ತೇನೆ.'

ಶ್ರೀಧರರ ಸ್ನೇಹವನ್ನು ಸವಿದವರಿಗೆ ಮಾತ್ರವೇ ಈ ಮಾತಿನ ಅರ್ಥ ತಿಳಿಯುತ್ತದೆ. ಒಂದು ತಪ್ಪು ಕಲ್ಪನೆಯಿಂದ ನನ್ನ ಹಾಗೂ ಶಿವರಾಮ ಕಾರಂತರ ಸ್ನೇಹ ಒಡೆದು ಹೋಗುವುದರಲ್ಲಿತ್ತು. ಶ್ರೀಧರರು ಮಧ್ಯೆ ಪ್ರವೇಶಿಸಿ ವಾಸ್ತವ ಸ್ಥಿತಿಯನ್ನು ಕಾರಂತರಿಗೆ ತಿಳಿಸಿ ಸ್ನೇಹವನ್ನು ಉಳಿಸಿದರು. ಶ್ರೀಧರರನ್ನು ಸ್ಮರಿಸುತ್ತಿರುವ ಈ ಸಂದರ್ಭದಲ್ಲಿ ನನಗೆ ಆ ಪ್ರಸಂಗ ನೆನಪಿಗೆ ಬರುತ್ತದೆ; ಮಂಜುಗಣ್ಣುಗಳಿಂದ ಹನಿಯುದುರುವಂತಾಗುತ್ತದೆ. ಎಷ್ಟು ಜನರ ಸ್ಮರಣೆ ಇಂಥ ಅನುಭವವನ್ನು ತರುತ್ತದೆ?

ಹಾ. ಮಾ. ನಾಯಕ

ಶ್ರೀ ಬ. ಹೆ. ಶ್ರೀಧರ: ಒಂದು ಪುಣ್ಯ ಸ್ಮರಣೆ

ಮಹಾ ನಾಟಕಕಾರ. ಮಹಾ ಕವಿ ಭವಭೂತಿಯು ಶ್ರೀರಾಮನ ವ್ಯಕ್ತಿತ್ವವನ್ನು ಕುರಿತು ಬರೆಯುವಾಗ

ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ ।

ಲೋಕೋತ್ತರಾಣಾಂ ಚೇತಾಂಸಿ ಕೋ ಹಿ ವಿಜ್ಞಾತುಮರ್ಹತಿ ॥

ಎಂದು ಲೋಕೋತ್ತರರ, ಮಹಾಪುರುಷರ ಕುರಿತು ವಜ್ರಕ್ಕಿಂತ ಕಠೋರವೂ, ಹೂವಿಗಿಂತಲೂ ಮೆದುವೂ ಎಂದು ಅವರ ಹೃದಯಗಳ ರೀತಿಯನ್ನು ಬಣ್ಣಿಸಿದುದು ನನಗೆ ಸ್ನೇಹಿತ ಶ್ರೀ ಶ್ರೀಧರರ ವ್ಯಕ್ತಿತ್ವವನ್ನು ಕುರಿತು ನೆನಪು ಮಾಡುವಾಗ ತಟ್ಟನೆ ಮನಸ್ಸಿನಲ್ಲಿ ಬಂದಿತು. ಅವತಾರಿಯಾಗಿದ್ದ ಶ್ರೀ ರಾಮನ ಘನತೆಯನ್ನು ನಾನಿಲ್ಲಿ ವಿಚಾರಿಸಲು ಬಯಸುವುದಿಲ್ಲ. ಆದರೆ, ಶ್ರೀರಾಮನ ಹಲವು ಗುಣಗಳು ಶ್ರೀಧರರಲ್ಲಿಯೂ ಇದ್ದವು ಎಂಬುದನ್ನು ಈ ಸಂದರ್ಭದಲ್ಲಿ ತಿಳುವಳಿಕೆಗೆ ತೆಗೆದುಕೊಳ್ಳಬೇಕು. ಸತ್ಯ ನಿಷ್ಠತೆಯು ಶ್ರೀಧರರ ಒಂದು ದೊಡ್ಡ ಲಕ್ಷಣವಾಗಿತ್ತು. ಅಸತ್ಯವನ್ನೂ, ಅನ್ಯಾಯವನ್ನೂ ಕಂಡರೆ ಅವರು ಸಹಿಸುತ್ತಿರಲಿಲ್ಲ. ಯಾರ ಹಂಗೂ ಇಲ್ಲದೆ ಮುಲಾಜಿಲ್ಲದೆ ನಿಷ್ಠುರವಾಗಿ ಅದನ್ನು ಖಂಡಿಸುತ್ತಿದ್ದರು. ಒಂದು ಉಪನ್ಯಾಸ ಮಾಡುವಾಗ ಅವರು ಯಾರ ಬಗ್ಗೆಯೋ 'ಕಂಡರೆ ಕಳ್ಳ ಕಾಣದಿದ್ದರೆ ಸತ್ಯ ಹರಿಶ್ಚಂದ್ರ' ಎಂದು ಮೂದಲಿಸಿದ್ದರು.

ಅವರ ಜೀವನವನ್ನು ಕುರಿತು ಸಂಶೋಧನೆ ಮಾಡಿದರೆ ಒಂದು ಗ್ರಂಥವನ್ನೇ ಅವರ ಕುರಿತು ಬರೆಯುವಷ್ಟು ಮಾಹಿತಿಗಳು ದೊರೆಯುತ್ತವೆ. ತೀರ ಬಡತನದಲ್ಲಿ ಕಾಲ ಕಳೆದು ಅವರ ತಂದೆಯವರು ಕಾಲವಶರಾದ ಮೇಲೆ ಇವರ ಅಣ್ಣ (ಅವರ ಕುರಿತು ನನಗೆ ಹೆಚ್ಚು ತಿಳಿಯದು) ಹಾಗೂ ಇವರನ್ನು, ಇವರ ಮೂರೂ ಸಹೋದರಿಯರನ್ನು ಇವರ ಮಹಾತಾಯಿ ಹೇಗೆ ಪಾಲನೆ ಪೋಷಣೆ ಮಾಡಿದರೋ ಎಂದು ತಿಳಿಯದಿದ್ದರೂ ಅವರ ಮನೆಗೆ ಹೋದಾಗಲೆಲ್ಲ ಬಂದವರನ್ನು ಪ್ರೀತಿಯಿಂದ ಉಪಚರಿಸುತ್ತಿದ್ದುದನ್ನು ನಾನೆಂದೂ ಮರೆಯಲಾರೆನು. ಶ್ರೀಧರರಂತೆ ಅವರು ಮನ ಘನ ಸಂಪನ್ನರು.

ಕಷ್ಟದಿಂದಲೇ ಜೀವನ ಮಾಡುತ್ತಿದ್ದ ಅವರು ಯಾರ ಸಹಾಯವಿಲ್ಲದೆಯೂ ತನ್ನ ಸ್ವಂತ ವ್ಯಕ್ತಿತ್ವದ ಬಲದಿಂದಲೇ ಉಚ್ಚ ಶಿಕ್ಷಣವನ್ನು ಪಡೆದು ಮೈಸೂರು

ವಿಶ್ವವಿದ್ಯಾಲಯದ ಎಂ.ಎ. ಪರೀಕ್ಷೆಯಲ್ಲಿ ಸಂಸ್ಕೃತ ವಿಷಯವನ್ನು ಮುಖ್ಯ ವಿಷಯವನ್ನಾಗಿ ತೆಗೆದುಕೊಂಡು ದ್ವಿತೀಯ ದರ್ಜೆಯಲ್ಲಿ ಹೆಚ್ಚಿನ ಗುಣ ಪಡೆದು ವಿಶ್ವವಿದ್ಯಾಲಯಕ್ಕೆ ಸಂಸ್ಕೃತ ವಿಷಯದಲ್ಲಿ ಪ್ರಥಮರಾಗಿ ತೇರ್ಗಡೆ ಹೊಂದಿ ಸ್ವರ್ಣ ಪದಕವನ್ನು ಗಳಿಸಿದುದು ಸಾಮಾನ್ಯ ಸಾಧನೆಯೇನಲ್ಲ. ಶ್ರೀ ಕೃಷ್ಣನ ವಕ್ಷಸ್ಥಲದಲ್ಲಿ ರಾರಾಜಿಸುತ್ತಿದ್ದಿತಂತೆ ಕೌಸ್ತುಭಮಣಿ. ಶ್ರೀಧರರ ಎದೆಯ ಮೇಲೆ ಈ ಸ್ವರ್ಣ ಪದಕವೂ ಯಾವಾಗಲೂ ಶೋಭಿಸುತ್ತಿತ್ತು.

ಅವರೂ ನಾನೂ ಕುಮಟಾದ ಕೆನರಾ ಕಾಲೇಜಿನಲ್ಲಿ ಒಂದೇ ವರ್ಷ ಉಪನ್ಯಾಸಕರಾಗಿ ಸೇರಿದ್ದೆವು. ಶ್ರೀಧರರು ಅದಕ್ಕೂ ಮುನ್ನ ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ದಿನಪತ್ರಿಕೆಯ 'ಕರ್ಮವೀರ' ಪತ್ರಿಕೆಯಲ್ಲಿ ನಾಲ್ಕು ವರ್ಷ ಕೆಲಸ ಮಾಡಿದ್ದರು. ಹಾಗಾಗಿ ಮಾಜಿ ಪತ್ರಕರ್ತನೆಂಬ ಪ್ರಭಾವಳಿಯು ಶ್ರೀಧರರಿಗೆ ಅಂಟಿಕೊಂಡಿತ್ತು. ಸುಭಾಷಿತ ರತ್ನಗಳ ಭಂಡಾರವೇ ಆಗಿರುವ ಸಂಸ್ಕೃತ ಭಾಷಾ ವಿಶಾರದರೂ ಆಗಿದ್ದ ಶ್ರೀಧರರ ಶ್ರೀಕಂಠ ಸಂಪತ್ತು ಬಹಳವಾಗಿದ್ದರಿಂದ ಅವರು ಬಹುಬೇಗನೆ ಜನಪ್ರಿಯರಾದರು.

ಕೆಯೂರಾಣಿನ ವಿಭೂಷಯಂತಿ ಪುರುಷಂ ಹಾರಾನ ಚಂದ್ರೋಜ್ವಲಾ
ನ ಸ್ನಾನಂ ವಿಲೇಪನಂ ಕುಸುಮಂ ನಾಲಂಕೃತಾ ಮೂರ್ಧಜಾಃ॥
ವಾಣ್ಯೇಕಾ ಸಮಲಂಕರೋತಿ ಪುರುಷಂ ಯಾ ಸಂಸ್ಕೃತಾಧಾರ್ಯತೇ ।
ಕ್ಷೀಯಂತೇಽಖಿಲ ಭೂಷಣಾನಿ ಸತತಂ ವಾಗ್ಭೂಷಣಂ ಭೂಷಣಂ॥

ಎಂಬ ಸುಭಾಷಿತದಲ್ಲಿ ತಿಳಿಸಿರುವಂತೆ ಅವರಿಗೆ ವಾಗ್ಭೂಷಣ ಒಪ್ಪುತ್ತಿತ್ತು. ನನಗಿದ್ದಂತೆ ಅವರಿಗೆ ಸಾಲವಿತ್ತೋ ಇಲ್ಲವೋ ತಿಳಿಯದು. ಆದರೆ ನನಗಿದ್ದಂತೆ ಮೂಲ ಅವರಿಗೆ ಇದ್ದಿರಲಿಲ್ಲ.

ಅವರ ಮನೆಯು ಬಂದವರಿಗೆ, ವಿದ್ಯಾರ್ಥಿಗಳಿಗೆ ಆದರ ಸತ್ಕಾರಕ್ಕೆ ಹೆಸರಾದುದಾಗಿತ್ತು. ಶ್ರೀಧರರ ಹೆಸರು ಚಿಕ್ಕದಾದರೂ ಹೆಬ್ಬಾರ ಎಂಬ ಅಡ್ಡ ಹೆಸರು ದೊಡ್ಡದು. 'ಹೆಸರಿಗೆ ಹೆಬ್ಬಾರ–ಮೊಸರಿಗೆ ತತ್ವಾರ' ಎಂಬ ಗಾದೆಯೇನೋ ಇದೆ. ಹೆಬ್ಬಾರ ಎಂಬ ಶಬ್ದವು ಹಿರಿಯ + ಹಾರುವ ಎಂಬ ಸಂಯುಕ್ತ ರೂಪದ ಸಂಕ್ಷಿಪ್ತ ರೂಪವಾಗಿರಬೇಕು. ಶ್ರೀಧರರ ಈ ಹಿರಿಯ ದೊಡ್ಡ ಗುಣದಿಂದಾಗಿ ಹಳ್ಳಿ ಹಳ್ಳಿಗಳವರೂ ಅವರಲ್ಲಿಗೆ ಬಂದು ಸತ್ಕೃತರಾಗಿ ತಮ್ಮಲ್ಲಿಗೆ ಉಪನ್ಯಾಸಕ್ಕೋ, ಅತಿಥಿಯೆಂದೋ ಬರೇ ಅಭ್ಯಾಗತನೆಂದೂ ಕರೆಯುತ್ತಿದ್ದರು. ಶ್ರೀಧರರ ದೊಡ್ಡ ಗುಣದಿಂದಾಗಿ ಅವರ ಪೂಜ್ಯ ತಾಯಿಯವರಿಗೂ ಸಹಧರ್ಮಿಣಿ ರಮಾದೇವಿಯವರಿಗೂ ಅತಿಥಿ ಸತ್ಕಾರ ಮಾಡುವ ಹೊಣೆ ಹೊರೆಯಾಗಿ ತ್ರಾಸಾಗುತ್ತಿತ್ತು. ಆದರೆ, ಅವರು ಎಂದೂ ಶ್ರೀಧರರಿಗೆ ಈ ವಿಷಯದಲ್ಲಿ ನೋವಾಗುವಂತೆ ವರ್ತಿಸಲಿಲ್ಲ. ರಮಾದೇವಿಯವರು ಪತಿಯೊಂದಿಗೆ

ಅನ್ಯೋನ್ಯವಾಗಿದ್ದರು. ಅದರಿಂದಲೇ ಒಂದು ಕವಿತೆಯಲ್ಲಿ ಶ್ರೀಧರರು, ಕಾಫಿಗೂ ಮೈಸೂರಿಗೂ ನನ್ನಾಕೆಗೂ ನನಗೂ ಸಮ ಎಂದು ಬರೆದುದಲ್ಲದೇ ಆ ಕವನವನ್ನು ಹಾಡಿಯೂ ತೋರಿಸಿದ್ದರು ಕೇಳಿದ್ದೆನು.

ಶ್ರೀಧರರ ಶ್ರೀಕಂಠ ಎಂದು ಬರೆದೆನಲ್ಲ. ಅವರ ಕಂಠಶ್ರೀ ಬಲುದೊಡ್ಡ. ಭಾಷಣ ಮಾಡುವಾಗ ಸಭಿಕರು ಮಂತ್ರ ಮುಗ್ಧರಾಗುವಂತೆ ಮಾಡುತ್ತಿದ್ದರು. ಅವರಿಗೆ ಕುಂದಾಪುರ ರೂಪರಂಗದ ನಾಲ್ಕನೆಯ ವಾರ್ಷಿಕೋತ್ಸವಕ್ಕೆ ಆಮಂತ್ರಣವಿತ್ತು. ನಾನು ಕಾಲೇಜು ಉಪನ್ಯಾಸಕನಾಗಿ ಸೇರಿ ಎರಡು ವರ್ಷಗಳಾಗಿದ್ದವೇನೋ. ಶ್ರೀಧರರು ಈ ವಾರ್ಷಿಕೋತ್ಸವದ ವಿಷಯ ಹೇಳಿ ನನ್ನನ್ನು ತಮ್ಮ ಜೊತೆಯಲ್ಲಿ ಬರುವಂತೆ ಕರೆದರು. ಅವರ ಜೊತೆಗೆ ಅಳಿಯನ ಸಂಗಡ ಗೆಳೆಯನಾಗಿ ನಾನು ಹೊರಟೆನು. ರೂಪರಂಗದವರ ಮಟ್ಟಿಗೆ ನಾನು ಆಗ ನಿಜವಾಗಿಯೂ ಅತಿಥಿಯಾದೆನು. ಅವರು ಇಬ್ಬರನ್ನು ಗೌರವದಿಂದ ಕಂಡು ನಮಗೆ ಉಳಿಯಲು ಒಳ್ಳೆಯ ವ್ಯವಸ್ಥೆಯನ್ನು ಮಾಡಿದರು. ವಾರ್ಷಿಕೋತ್ಸವ ಬಹಳ ಅದ್ಧುರಿಯಿಂದ ನಡೆಯಿತು. ಮುಖ್ಯ ಭಾಷಣಕಾರರಾದ ಶ್ರೀಧರರು ಆಗ ಏನು ಮಾತನಾಡಿದ್ದರೋ ನೆನಪಿಲ್ಲ. ಬಹಳ ಚೆನ್ನಾಗಿತ್ತು ಅವರ ಭಾಷಣ. ಅವರ ವಾಗ್ ವೈಖರಿಯ ಮುಂದೆ ನನ್ನ ಮಾತುಗಳು ಸಪ್ಪೆಯಾಗಿದ್ದರೆ ಆಶ್ಚರ್ಯವಿಲ್ಲ. ಅಲ್ಲಿ ಶ್ರೀ ಎಂ.ಎಂ. ಹೆಗಡೆ, ಗಣಪತಿ ಭಟ್ಟ ಮತ್ತು ಇತರರ ಪರಿಚಯವಾದುದು ನನಗೆ ಹೆಚ್ಚಿನ ಸಂತೋಷವನ್ನು ಉಂಟುಮಾಡಿತ್ತು. ಗಣಪತಿ ಭಟ್ಟರು ತೀರಿ ಹೋಗಿ ಹಲವು ವರ್ಷಗಳಾದವು.

ಶ್ರೀಧರರು ನನ್ನನ್ನು ಅವರ ಹತ್ತಿರದ ನೆಂಟರಾದ ಗೋಪಾಲಕೃಷ್ಣ ಅಡಿಗರ ಮನೆಗೆ ಮೊಗೇರಿಗೆ ಕರೆದೊಯ್ದರು. ಜೊತೆಯಲ್ಲಿ ಹೋದ ನನ್ನನ್ನೂ ನೆಂಟನೆಂದು, ಮಿತ್ರನೆಂದು ಉಪಚರಿಸಿದರು. ಅಡಿಗರ ತಂದೆ ಶ್ರೀ ರಾಮಪ್ಪ ಅಡಿಗರು, ಚಿಗಪ್ಪ ಶ್ರೀ ಪದ್ಮನಾಭ ಅಡಿಗರು ಮಹಾ ಮೇಧಾವಿಗಳು. ಪದ್ಮನಾಭ ಅಡಿಗರಂತೂ ತುಂಬಾ ಪ್ರಸಿದ್ಧರು.

ಶ್ರೀಧರರ ಅತ್ತೆಯವರು ಯಾವುದೋ ರೋಗದಿಂದ ಹಾಸಿಗೆ ಹಿಡಿದಿದ್ದರು. ಅವರನ್ನು ಕಂಡು ಬರಲೋಸುಗವೇ ಶ್ರೀಧರರು ಮೊಗೇರಿಗೆ ಹೋಗಿದ್ದು, ಬಸ್ ಇಳಿದು ಎರಡು ಮೈಲು ನಡೆದು ಹೋದಾಗ ಸೂರ್ಯ ಮುಳುಗಿ ಕತ್ತಲೆ ಆವರಿಸುತ್ತಿತ್ತು.

ಅತ್ತೆಗೆ ಅವರ ಮನೆಯೇ ತಂದೆಯ ಮನೆ ಬವುಳಾಡಿ ಊರು ಆಗಿದ್ದಿರಬೇಕು. ಅವರು ದಿ. ಬವುಳಾಡಿ ವೆಂಕಟ್ರಮಣ ಹೆಬ್ಬಾರರು ಮುದ್ದಣನಿಗೆ ಬರೆದುಕೊಟ್ಟಿದ್ದ (ರಾಮಪಟ್ಟಾಭಿಷೇಕ ಮುದ್ದಣನ ಕಾವ್ಯ ಇದರಲ್ಲಿ ಬಂದಿದ್ದಿರಬೇಕು.) ಹಲವಾರು ಷಟ್ಪದಿಗಳನ್ನು ಆಗ ಹಾಡಿದ್ದರು. ರುಗ್ಣ ಶಯ್ಯೆಯಲ್ಲಿದ್ದ ಆ ವಯಸ್ಸಾದ ಮುದುಕಿಯು ಈ ಪದ್ಯಗಳನ್ನು ಆಗಲೂ ಹಿಂದೆ ಬಾಯಪಾಠ ಮಾಡಿದ್ದುದನ್ನು ಹೇಳುತ್ತಿದ್ದುದು

ನನಗಂತೂ ಆಶ್ಚರ್ಯವನ್ನುಂಟು ಮಾಡಿತ್ತು. ಮುಂದೆ ಚೇತರಿಸಿಕೊಂಡಿದ್ದ ಅವರು ಒಂದೆರಡು ವರ್ಷ ಬದುಕಿದ್ದು ಸ್ವರ್ಗಸ್ಥರಾಗಿದ್ದಿರಬೇಕು.

ಶ್ರೀ ಶ್ರೀಧರರ ಸ್ನೇಹಿತರಲ್ಲಿ ಕನ್ನಡದ ಉದ್ದಾಮ ಸಾಹಿತಿಗಳು ಹಲವರಿದ್ದರು. ಅವರು ಕುವೆಂಪು ಅವರ ವಿದ್ಯಾರ್ಥಿಯಾಗಿದ್ದರು. ಕಾರಂತರು ಶ್ರೀಧರರನ್ನು ಗೌರವಿಸಿದ್ದರು. ಶ್ರೀಧರರು ಕುಶಾಗ್ರಮತಿಗಳು ಎಂದು ಶ್ಲಾಘಿಸಿದ್ದರು. ಬೇಂದ್ರೆಯವರಿಗಂತೂ ಸಲಿಗೆಯ ಗೆಳೆಯರಾಗಿದ್ದರು. ಇಬ್ಬರೂ ಹರಟೆಯ ಮಲ್ಲರೇ.

ನಮ್ಮ ಕಾಲೇಜಿನಲ್ಲಿ ಕರ್ನಾಟಕ ಸಂಘವನ್ನು ಸ್ಥಾಪಿಸಿ, ಗೆಳೆಯ ಶ್ರೀ ಡಾ. ಕೃ.ಗ. ಶಾಸ್ತ್ರಿಯವರು ಅವರ ಸಹೋದ್ಯೋಗಿಯಾಗಿದ್ದ ನನ್ನನ್ನು ವರ್ಷ ಬಿಟ್ಟು ವರ್ಷಕ್ಕೆ ಕಾರ್ಯಾಧ್ಯಕ್ಷನನ್ನಾಗಿ ಮಾಡಿದ್ದರು. ಒಂದು ವರ್ಷ ಅವರು, ಮುಂದಿನ ವರ್ಷ ನಾನು ಕರ್ನಾಟಕ ಸಂಘದ ವಾರ್ಷಿಕೋತ್ಸವವನ್ನು ಶ್ರೇಷ್ಠ ಸಾಹಿತಿಗಳನ್ನೇ ಮುಖ್ಯ ಅತಿಥಿಗಳಾಗಿ ಕರೆದು ಬಹಳ ವಿಜೃಂಭಣೆಯಿಂದ ಆಚರಿಸುತ್ತಿದ್ದೆವು.

ನಾನು ಕಾರ್ಯಾಧ್ಯಕ್ಷನಾಗಿದ್ದಾಗ ನಾ. ಕಸ್ತೂರಿ ಇವರನ್ನು ವಾರ್ಷಿಕೋತ್ಸವದ ಮುಖ್ಯ ಅತಿಥಿಯೆಂದು ಆಮಂತ್ರಿಸಿದ್ದೆನು. ಶ್ರೀಧರರಿಗೆ ಅವರು ಗುರು. ಹಾಗಾಗಿ ನಾ. ಕಸ್ತೂರಿಯರವರು ತಮ್ಮ ಮನೆಯಲ್ಲೇ ಬಿಡದಿ ಮಾಡಲಿ ಎಂದು ನನಗೆ ತಿಳಿಸಿ ನನ್ನನ್ನೂ ಅವರ ಜೊತೆ ತಮ್ಮ ಮನೆಯಲ್ಲೇ ಉಳಿಯುವಂತೆ ಕರೆದರು. ನಾ. ಕಸ್ತೂರಿಯವರ ಸಹವಾಸ ನನಗೂ ದೊರೆಯಿತು. ಅವರ ಮನೆಗೇ ಕಸ್ತೂರಿಯವರನ್ನು ಕರೆದುಕೊಂಡು ಹೋದೆನು. ಕಸ್ತೂರಿ ಬಂದವರೇ ತಮ್ಮ ಆ ವಿದ್ಯಾರ್ಥಿಯ ಹತ್ತಿರ 'ಎಲ್ಲಿ ನಿಮ್ಮ ಹೋಂ ವರ್ಕ್ಸ್' ಎಂದು ಕೇಳಿಬಿಟ್ಟರು. ಈ ಮಾತಿನ ಅರ್ಥ ಮಾಡಿಕೊಂಡ ನಮಗೆ ನಗುವನ್ನು ತಡೆದುಕೊಳ್ಳಲಾಗಲಿಲ್ಲ. ಶ್ರೀಧರರು ಮಕ್ಕಳನ್ನು ತಮ್ಮ ಗುರುವಿಗೆ ವಂದನೆ ಮಾಡಿಸಿ ಹೋಂವರ್ಕ್ಸ್‌ನ ಅಹವಾಲು ಒಪ್ಪಿಸಿದರು. ಹಾಸ್ಯ ಚಕ್ರವರ್ತಿಗೆ ನಗುವಿನ ಸರಮಾಲೆಯ ನಜರುಗಾನಿಕೆ ಒಪ್ಪಿಸಬೇಕಾಗಿತ್ತಲ್ಲವೆ.

ಇನ್ನೊಮ್ಮೆ ದ.ರಾ.ಬೇಂದ್ರೆಯವರನ್ನು ವಾರ್ಷಿಕೋತ್ಸವಕ್ಕೆ ಮುಖ್ಯ ಅತಿಥಿಯೆಂದು ಆಮಂತ್ರಿಸಿದ್ದಾಗ ಸಹ ಸಮಾನಶೀಲರಾದ ಶ್ರೀಧರ–ಬೇಂದ್ರೆ ಇವರ ಸಖ್ಯದ ಕಾರಣ ಬೇಂದ್ರೆಯವರು ಶ್ರೀಧರರ ಮನೆಯಲ್ಲೇ ತಂಗಿದ್ದರು. ಕಾಳಿದಾಸನ ಶಾಕುಂತಲ ನಾಟಕದ ಕುರಿತು ವಾರ್ಷಿಕೋತ್ಸವದಲ್ಲಿ ಬೇಂದ್ರೆಯವರು ಉಪನ್ಯಾಸ ಮಾಡಿದ್ದರು.

ಶ್ರೀಧರರು ಗಣ್ಯ ಕವಿಯೂ ಆಗಿದ್ದಂತೆ ಗಂಭೀರವಾದ ಚಿಂತನೆಯನ್ನು ಮಾಡಿ ಅದನ್ನು ಬರಹ ರೂಪದಲ್ಲಿ ತರುವ ಮೇಧಾವಿಯೂ ಆಗಿದ್ದರು. ಸಹಜವಾಗಿಯೇ ಭಾವಾವೇಶಕ್ಕೆ ಗುರಿಯಾಗುತ್ತಿದ್ದ ಅವರು ಅದಕ್ಕೆ ಬುದ್ಧಿಯ ಕಡಿವಾಣವನ್ನು ಹಾಕಲು ಬಲ್ಲವರಾಗಿದ್ದರು. ಅವರು ಒಮ್ಮೆ ನನ್ನ ಬಳಿ ಮಾತನಾಡುವಾಗ ಭಾವನೆಯು ಹೃದಯಕ್ಕೆ ಸಂಬಂಧಿಸಿದುದು. ಭಾವವು ಬುದ್ಧಿ ಮತ್ತು ಭಾವನೆ ಎರಡನ್ನೂ

ಒಳಗೊಳ್ಳುತ್ತದೆ ಎಂದಿದ್ದರು. ಈ ಭಾವಕ್ಕೆ ಅವರಲ್ಲಿ ಅಭಾವವೇ ಇರಲಿಲ್ಲ.

ಅವರ ಕಾವ್ಯಶಕ್ತಿಯು ಮಿಗಿಲಾದುದಾಗಿತ್ತು. ಆದರೆ ಅವರಲ್ಲಿ ಪಾಂಡಿತ್ಯದ ಭಾರವು ಕಲ್ಪನೆಯು ಗರಿಗೆದರಿ ಇನ್ನಷ್ಟು ಮೇಲಕ್ಕೆ ಹಾರಲು ಅವಕಾಶ ನೀಡುತ್ತಿರಲಿಲ್ಲವೇನೋ ಎಂದೆನಿಸುತ್ತದೆ. ವಿ.ಜಿ. ಭಟ್ಟರ ಆನಂತರದ ಕವಿತೆಯು ಮಾತನಾಡಿದವೊಲಂದವನಾಳ್ದಿರೆ ಎಂಬಂತೆ ಅತಿಶಯ ಸರಲವಾಗಿದ್ದರೂ ಶೈಲಿಯು ಅಪ್ರಯತ್ನವಾಗಿ, ಅತಿ ಸಹಜವಾಗಿ ಮೂಡಿ ಬಂದು ಆಶ್ಚರ್ಯವನ್ನುಂಟುಮಾಡುವಂತೆ ಬಹೆಶ್ರೀ ಕಾವ್ಯಶ್ರೀಯು ಅಷ್ಟು ಸರಳವೂ ಸಹಜವೂ ಆಗಿ ಮೂಡಿ ಬಂದುದು ಕ್ವಚಿತ್ತಾಗಿಯೇ ಎಂದು ನನ್ನ ಭಾವನೆಯಿದೆ.

ಅಲ್ಲಿತ್ತು ನಂದನದ ತೋಟ
ಅದರಲ್ಲಿ ಹೂಬಿಸಿಲಿನಾಟ

ಎಂಬಂಥ ಮರೆಯಲಾರದ ಶೈಲಿಯ ಸಹಜತೆ ಸುಭಗತೆ ವಿರಳವೆಂದೇ ನನಗೆ ಭಾಸವಾಗುತ್ತದೆ. ಇತ್ತೀಚೆಗೆ ಅವರ ಕವನ ಸಂಕಲನಗಳನ್ನು ಮತ್ತೆ ಓದಿದರೆ 'ಅಮೃತ ಬಿಂದು'ವಿನಲ್ಲಿ ಮೂಡಿದಂಥ ಚೆಲುವನ್ನು ಬೇರೆಡೆ ಸಹ ನಾನು ನೋಡಬಹುದೇನೋ.

ಅವರ ಗದ್ಯಶೈಲಿಯು ಸಹ ಸಂಸ್ಕೃತ ಪಾಂಡಿತ್ಯದ ಜಾಡಿನಲ್ಲಿಯೇ ಸಾಗುತ್ತದೆ. ಭಾಷಣ ಮಾಡುವಾಗ ಅವರು ಯಾವ ಸರಳ ಶೈಲಿಯಲ್ಲಿ ಸೊಗಸು ಉಂಟುಮಾಡುತ್ತಿದ್ದರೋ ಅದು ಅವರ ಬರವಣಿಗೆಯಲ್ಲಿ ಅಷ್ಟು ಕಾಣಲಿಲ್ಲ. ಅವರ ಗದ್ಯಶೈಲಿಯಲ್ಲಿ ವಿಡಂಬನೆಯ ತೀಕ್ಷ್ಣತೆಯಿದೆ. ಪ್ರಗಲ್ಭ ವಿಚಾರಗಳಿವೆ. ಆದರೆ ಪ್ರಯತ್ನಪೂರ್ವಕವೆಂಬಂತೆ ಸಂಸ್ಕೃತ ಶಬ್ದಗಳ ಆಡಂಬರವಿದೆ. ಆದರೆ ಅವರ 'ಕಾವ್ಯಸೂತ್ರ' ಮತ್ತು 'ಜ್ಞಾನಸೂತ್ರ'ಗಳಲ್ಲಿ ತೋರುವ ವೈಚಾರಿಕ ಶಿಸ್ತು ಮತ್ತು ಅಡಕವಾಗಿ ತಿಳಿಸುವ ಕಲೆ ಹೊಗಳುವಂತಹದೇ ಆಗಿದೆ. ಇವುಗಳ ಚೌಕಟ್ಟನ್ನು ಡಾ. ಹಾ.ಮಾ.ನಾ. ತುಂಬಾ ಶ್ಲಾಘಿಸಿದ್ದರು. ಈ ಗ್ರಂಥಗಳೇ ಶ್ರೀಧರರ ಮಹತ್ವದ ಕಾಣಿಕೆಗಳಾಗಿವೆ. ಮತ್ತು ಬಹುಮಾನ ಸಹ ಗಳಿಸಿವೆ. 'ಕವಿರಾಜ ಮಾರ್ಗ'ದಲ್ಲಿ 'ಕಿರಿದರೊಳ್ ಪಿರಿದರ್ಥವನಿರಿಸಲ್ ಬಲ್ಲಾತನೆಲ್ಲರಿಂದಂ ಬಲ್ಲಂ' ಎಂದಿರುವುದು ಈ ಎರಡೂ ಗ್ರಂಥಗಳ ಒಟ್ಟಂದದ ಶಿಲ್ಪಕ್ಕೆ ಸಲ್ಲಬಲ್ಲ ಹೊಗಳಿಕೆಯಾಗಿದೆ.

'ಜ್ಞಾನಸೂತ್ರ'ವು ಕನ್ನಡದಲ್ಲಿ ಪಾಶ್ಚಿಮಾತ್ಯ ತತ್ವಜ್ಞಾನವನ್ನು ಮೊಟ್ಟಮೊದಲಿಗೆ ಪರಿಚಯ ಮಾಡಿಸಿದ ಹೆಚ್ಚಿನ ಮಹತ್ವದ ಹೆಗ್ಗಳಿಕೆಯನ್ನು ಪಡೆದಿದೆ. ಸಾಕ್ರೆಟಿಸ್, ಪ್ಲೇಟೊ, ಅರಿಸ್ಟಾಟಲ್‌ರ ಹೆಸರುಗಳು ಸ್ವಲ್ಪ ಪರಿಚಿತವಾದವು. ಆದರೆ ಡೆಕಾರ್ಟ್, ಹೆಗೆಲ್, ಕಾಂಟ ಇವರ ಹೆಸರುಗಳನ್ನು ಹಲವರು ಕೇಳಿದ್ದಿರಲಿಕ್ಕಿಲ್ಲ.

ಶ್ರೀ ಎನ್.ಎಂ. ಹನುಮಂತರಾವ್ ಜೊತೆ ಸೇರಿ ಮನೋ ವಿಜ್ಞಾನದ ಗ್ರಂಥವನ್ನು ರಚಿಸಿದಂತೆ ಕದಂಬರ ಕುರಿತು ಇವರು ಗ್ರಂಥ ರಚಿಸಿದ್ದರು. ತನ್ನ ಹಿರಿಯರು ರಚಿಸಿದ 'ಬಾನುಮತಿ ಕಲ್ಯಾಣ – ಯಕ್ಷಗಾನ'ವನ್ನು ಪ್ರಕಟಿಸಿದರು. ಸ್ವತಃ ಯಕ್ಷಗಾನ ಪ್ರಸಂಗ ರಚಿಸಿದರು. ಇವರ ಅನುವಾದ ಸಾಹಿತ್ಯವನ್ನು ನಾನು ಓದಿಲ್ಲ. ಇವರ ಸಾಹಿತ್ಯ ಸಾಧನೆಗೆ ತಕ್ಕ ಗುಣ ಗೌರವ ದೊರೆಯಲಿಲ್ಲ. ಎಂ ಡಾ. ಹಾ. ಮಾ. ನಾ. ಅವರ ಅಭಿಪ್ರಾಯವನ್ನು ಒಪ್ಪಿ ಅವರಿಗೆ ಪತ್ರ ಬರೆದು ತಿಳಿಸಿದ್ದೆನು.

ಸಣ್ಣ ಕಾರಣಕ್ಕೂ ಸಿಡಿಮಿಡಿಗೊಳ್ಳುತ್ತಿದ್ದ ಶ್ರೀಧರರ ಆರೋಗ್ಯವು ರಕ್ತದ ಏರೊತ್ತಡದ ತೀವ್ರ ಕಾಯಿಲೆಯಿಂದಾಗಿ ಕೆಟ್ಟು ಹೋಗಿ, ದೊಡ್ಡ ಆಸ್ಪತ್ರೆಯ ಚಿಕಿತ್ಸೆಗಳು ಫಲಕಾರಿಯಾಗದೇ ಅವರು ಅಕಾಲದಲ್ಲಿಯೇ ವಿಧಿವಶರಾದುದು ತುಂಬಾ ಖೇದದ ಸಂಗತಿ. ಈ ರೋಗದ ಕಾರಣದಿಂದಲೇ ಅವರು ಸಹನೆಯನ್ನು ಕಳೆದುಕೊಂಡಿದ್ದಿರಬೇಕು.

ನಮ್ಮ ಕಾಲೇಜಿನಲ್ಲಿ ಅವರಿಗೆ ಒಳ್ಳೆ ಗೌರವ ಇದ್ದರೂ ಮುಂಬಡತಿಯ ಸಾಧ್ಯತೆಯಿಂದಲೂ ಅವರು ಶ್ರೀ ಲಿಂಗೇಶ ಶರ್ಮರೊಡನೆ ಸಿರ್ಸಿ ಮೋಟಿನಸರದ ಕಾಲೇಜಿಗೆ ಹೋಗಿ ಸೇರಿದರು. ಮುಂದೆ ಹೊಸದಾಗಿ ಸ್ಥಾಪಿತವಾದ ಸಿದ್ಧಾಪುರದ ಮಹಾತ್ಮಾಗಾಂಧಿ ಶತಮಾನೋತ್ಸವ ಮಹಾವಿದ್ಯಾಲಯದ ಪ್ರಾಂಶುಪಾಲರಾಗಿ ಅಲ್ಲಿಯೇ ಇದ್ದು ನಿವೃತ್ತಿಯನ್ನು ಪಡೆದರು. ಕಾಲೇಜಿನ ಏಳ್ಗೆಯಲ್ಲಿ ಅವರ ಕಾರ್ಯಕ್ಷಮತೆಯೂ ಇತ್ತು.

ಸಂಖ್ಯಾಶಾಸ್ತ್ರದ ಉಪನ್ಯಾಸಕ ಎಂಬ ಹುದ್ದೆಗೆ ಜಾಹಿರಾತು ನೀಡಿದಾಗ ಆ ವಿಷಯದಲ್ಲಿ ಎಂ.ಎಸ್.ಸಿ. ಪದವಿಯನ್ನು ಪಡೆದಿದ್ದ ನನ್ನ ಮಗನೂ (ಆರ್.ಎಲ್. ಹೆಗಡೆ) ಅರ್ಜಿಯನ್ನು ಹಾಕಿದ್ದನು. ಆಗ ಅವನು ಆಯ್ಕೆಯಾಗುವಂತೆ ನಾನು ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಏಕೆಂದರೆ ಸ್ವತಃ ನಾನೇ ಈ ಹಿಂದೆ ಕೆನರಾ ಕಾಲೇಜಿನಲ್ಲಿ (ಮುಂದೆ ಡಾ. ಬಾಳಿಗಾ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯವಾಯಿತು ಅದು) ಕನ್ನಡ ಉಪನ್ಯಾಸಕ ಹುದ್ದೆಗೆ ಜಾಹಿರಾತನ್ನು ಕಾಲೇಜಿನ ಆಡಳಿತ ಸಮಿತಿಯವರು ಪ್ರಾಂಶುಪಾಲ ಡಾ. ಬಿ.ಎನ್. ಕೆ. ಶರ್ಮಾ ಅವರ ಮೂಲಕವಾಗಿ ಪತ್ರಿಕೆಗಳಲ್ಲಿ ಪ್ರಕಟಣೆಗೆ ನೀಡಿದಾಗ ಅರ್ಜಿ ಹಾಕಿದ್ದೆನಾದರೂ ಆ ಹುದ್ದೆಯ ಆಯ್ಕೆಗಾಗಿ ಯಾರನ್ನೂ ಭೆಟ್ಟಿಯಾಗಿ ಕೇಳಿಕೊಂಡಿರಲಿಲ್ಲ. ಎಂ.ಎ. ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲಿ ನಾನು ಉತ್ತೀರ್ಣನಾಗಿದ್ದವನು. ಅಭ್ಯರ್ಥಿಯ ಸಂದರ್ಶನಕ್ಕೆ ಕರೆಯದೆಯೇ ಆಡಳಿತ ಮಂಡಳಿಯವರು ನನ್ನನ್ನು ನೇಮಿಸಿಕೊಳ್ಳಲು ನಿರ್ಣಯಿಸಿ ನನಗೆ ನೇಮಕಾತಿಯ ಆದೇಶವನ್ನು ನೀಡಿದ್ದರು.

ಮೇಲಾಗಿ ಮಿತ್ರ ಶ್ರೀ ಬಿ.ಎಚ್. ಶ್ರೀಧರರೇ ಪ್ರಾಂಶುಪಾಲರು. ನನ್ನ ಮಗನು ಅರೆಕಾಲಿಕ ಉಪನ್ಯಾಸಕನೆಂದು ೨ ವರ್ಷ ಕೆಲಸ ಮಾಡಿದುದನ್ನು ಬಲ್ಲವರು ಎಂಬ ಕಾರಣದಿಂದ ಅವನ ಕುರಿತು ಪ್ರಯತ್ನ ಮಾಡಿರಿ ಎಂದು ಹೇಳಲು ಹೋಗಲೇ

ಇಲ್ಲ. ಮತ್ತು ಆಡಳಿತ ಸಮಿತಿಯ ಅಧ್ಯಕ್ಷರು ಆಗ ಹಿರಿಯರಾದ ಶ್ರೀ ತಟ್ಟಿ ಕೈ ರಾಮ ಭಟ್ಟರು. ಕೊಡುಗೈ ದೊರೆ, ಸಮಾಜಸೇವಾಧುರಂಧರರಾಗಿರುವ ದೊಡ್ಮನೆ ಶ್ರೀ ಗಣೇಶ ಹೆಗಡೆಯವರು ಹಾಗೂ ಅಧ್ಯಕ್ಷರು ಮತ್ತು ಇನ್ನಿತರ ಸಮಿತಿ ಸದಸ್ಯರ ಪರಿಚಯ ಆಗ ನನಗೆ ಇರಲಿಲ್ಲ. ಯಾರನ್ನೂ ಕಾಣಲು ಹೋಗಿ ನನ್ನ ಮಗನ ಬಗ್ಗೆ ಹೇಳಿಕೊಳ್ಳಲೇ ಇಲ್ಲ. ಸಂದರ್ಶನಕ್ಕೆ ಬಂದವರಲ್ಲಿ ಪ್ರಥಮ ವರ್ಗದಲ್ಲಿ ಉತ್ತೀರ್ಣರಾಗಿದ್ದವರೂ ಇದ್ದರಂತೆ. ನನ್ನ ಮಗನು ದ್ವಿತೀಯ ವರ್ಗದಲ್ಲಿ ಉತ್ತೀರ್ಣನಾಗಿದ್ದನು. ದೊಡ್ಮನೆ ಶ್ರೀ ಗಣೇಶ ಹೆಗಡೆಯವರ ಮಗ ಶ್ರೀ ವಿನಾಯಕ ಹೆಗಡೆಯವರು ಇತ್ತೀಚೆಗೆ ಒಂದು ಸಂದರ್ಭದಲ್ಲಿ ಅವನು ಕೇವಲ ನಿಮ್ಮ ಮಗ ಎಂಬ ಕಾರಣದಿಂದಲೇ ಅವನನ್ನು (ಉಪನ್ಯಾಸಕ ಹುದ್ದೆಗೆ) ಆಯ್ಕೆ ಮಾಡಿದ್ದು ಎಂದು ಹೇಳಿದ್ದರು. ಶ್ರೀ ಗಣೇಶ ಹೆಗಡೆಯವರೂ ಹೀಗೆಯೇ ಹೇಳಿದ್ದರು. ನನ್ನ ಪರಿಚಯ ಅವರಿಗೆ ಇತ್ತಂತೆ. ಈ ಸಮಿತಿಯಲ್ಲಿ ಪ್ರಾಂಶುಪಾಲರೊಬ್ಬರೇ ನನ್ನನ್ನು ಚೆನ್ನಾಗಿ ಬಲ್ಲವರಾಗಿದ್ದ ಸ್ನೇಹಿತರು ಎಂದು ನಾನು ತಿಳಿದಿದ್ದೆ. ಆಡಳಿತ ಸಮಿತಿಯ ಎಲ್ಲರೂ ಆಗಲೇ ನನ್ನ ಹೆಸರು ಪ್ರಸಿದ್ಧವಾಗಿದ್ದ ಕಾರಣ ನನ್ನ ಮಗನನ್ನು ಈ ಹುದ್ದೆಗೆ ಆಯ್ಕೆ ಮಾಡಿದ್ದರು. ಪ್ರಾಂಶುಪಾಲರಿಗೂ ಈ ಆಯ್ಕೆಯು ಸಂತೋಷವನ್ನು ತಂದಿತು ಎಂದು ಬೇರೆ ಹೇಳಬೇಕಾಗಿಲ್ಲ.

ನನ್ನ ಕಾಲೇಜಿನಲ್ಲಿನ ದೀರ್ಘಕಾಲದಲ್ಲಿ ನಾನು ಎಲ್ಲಾ ಸಹೋದ್ಯೋಗಿಗಳ ಸಂಗಡವೂ ಪ್ರೀತಿ ವಿಶ್ವಾಸದಿಂದಲೇ ಇದ್ದವನು. ನನ್ನ ಮಗನೂ ತನ್ನ ಕಾಲೇಜಿನಲ್ಲಿ ಎಲ್ಲರೊಡನೆಯೂ ಪ್ರೀತಿಯಿಂದಲೇ ಇದ್ದಾನೆ. ಸ್ನೇಹಜೀವಿ ಶ್ರೀಧರರು ಈಗ ಇಲ್ಲ. ಆದರೆ ಅವರು ನನ್ನ ಬಗ್ಗೆ ತೋರಿದ್ದ ಸ್ನೇಹ ಹಾಗೂ ಮಾಡಿದ್ದ ಉಪಕಾರಗಳನ್ನು ನಾನು ಮರೆಯುವಂತೆಯೇ ಇಲ್ಲ. ಅವರ ಅಸ್ವಾಸ್ಥ್ಯದ ಸಮಯದಲ್ಲಿ ಅವರ ಕಷ್ಟಗಳನ್ನು ಕಡಿಮೆ ಮಾಡಿ ಸಹಾಯ ಮಾಡಲು ನನ್ನಿಂದ ಆಗಿರಲಿಲ್ಲ ಎಂಬ ಕೊರಗು ನನಗುಂಟು. ಡಾ। ವಾಮನ ಬೇಂದ್ರೆಯವರು ಶ್ರೇಷ್ಠರಾದ ತಂದೆಯ ಸ್ಮಾರಕದ ಬಗ್ಗೆ ಕೆಲಸ ಮಾಡುತ್ತಿದ್ದುದನ್ನು ಶ್ರೀಧರರು ಮೆಚ್ಚಿ ನನ್ನೊಡನೆ ಹೊಗಳಿದ್ದರು. ಚಿ. ರಾಜಶೇಖರನು ತಂದೆಯ ಬಗ್ಗೆ ಕೆಲಸ ಮಾಡುತ್ತಿರುವುದನ್ನು ಅವರ ಆತ್ಮ ಮೆಚ್ಚುವುದು.

ಎಲ್. ಆರ್. ಹೆಗಡೆ

ಶ್ರೀಧರರ ನೆನಪು

ಶ್ರೀಮಾನ್ ಬಿ.ಎಚ್. ಶ್ರೀಧರರವರನ್ನು ನಾನು ಮೊದಲ ಬಾರಿಗೆ ಕಂಡದ್ದು ಕುಮಟಾದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ. ಗೋಪಾಲಕೃಷ್ಣ ಅಡಿಗರು ತಮ್ಮ ಒಂದು ಕವನವನ್ನು ಓದಿದರು. ಆ ಕವನ ಪ್ರೇಕ್ಷಕರ ಮೇಲೆ ಯಾವ ಪ್ರಭಾವವನ್ನೂ ಬೀರಿದಂತೆ ಕಂಡು ಬರುವುದಿಲ್ಲ. ಬಿ.ಎಚ್. ಶ್ರೀಯವರು ತಮ್ಮ ಕವನ ಓದಿದಾಗ ಮಲಗಿದವರು ಎಚ್ಚೆತ್ತು ಅವರ ಕವನಕ್ಕೆ ಪ್ರತಿಕ್ರಿಯೆ ತೋರಿದಂತೆ ಭಾಸವಾಗುತ್ತಿತ್ತು. ನಂತರ ಬಿ.ಎಚ್.ಶ್ರೀಧರರನ್ನು ನಾನು ೧೯೬೦ರಲ್ಲಿ ಸಾಲಿರಾಮಚಂದ್ರರಾಯರ ಸಂಗಡ ಅವರ ಮನೆಗೆ ಹೋದಾಗ ಕಂಡಿದ್ದು. ಆಗ ಅವರ ಮನೆಯಲ್ಲಿ ೩–೪ ಜನ ವಿದ್ಯಾರ್ಥಿಗಳೂ ಇದ್ದರು. ಒಳಗಿನಿಂದ ಊಟಕ್ಕೆ ಆಮಂತ್ರಣ ಬಂತು. ಇನ್ನು ವಿದ್ಯಾರ್ಥಿಗಳು ಹೋಗುತ್ತಾರೆ; ನಾವಷ್ಟೇ ಊಟಕ್ಕಿರುತ್ತೇವೆಂದು ಆಲೋಚಿಸುತ್ತಿರುವಾಗಲೇ ಎಲ್ಲರೂ ಊಟಕ್ಕೆ ಹೋದೆವು. ನನಗೆ ಅತ್ಯಂತ ಆಶ್ಚರ್ಯವಾಯಿತು. ಆದರೆ ೧೯೬೩ರಲ್ಲಿ ನಾನು ಶಿರಸಿ ಕಾಲೇಜಿಗೆ ಬಂದ ನಂತರ ಬಿ.ಎಚ್. ಶ್ರೀಯವರೊಂದಿಗೆ ಅತ್ಯಂತ ನಿಕಟ ಸಂಬಂಧ ಬಂತು. ಆಗ ನನಗೆ ತಿಳಿದು ಬಂದದ್ದೆಂದರೆ ಅವರ ಮನೆಯೆಂದರೆ ಒಂದು ಅನ್ನಛತ್ರ. ರಮಾಬಾಯಿಯವರು ಅನ್ನಪೂರ್ಣೇಶ್ವರಿ ಎಂದು. ಅವರ ಮನೆಗೆ ಹೋದವರಾರೂ ಅವರ ಅತಿಥಿ ಸತ್ಕಾರ ಸ್ವೀಕರಿಸದೇ ಹೋಗಿಲ್ಲವೆಂದು ನಾನು ಆಣೆ ಮಾಡಿ ಹೇಳಬಲ್ಲೆ.

ಬಿ.ಎಚ್. ಶ್ರೀಯವರದು ವಿಶಿಷ್ಟ ವ್ಯಕ್ತಿತ್ವ. ಎಲ್ಲ ವರ್ಗದ, ಎಲ್ಲ ವಯಸ್ಸಿನ, ಎಲ್ಲ ಸ್ಥರಗಳ ಜನರೊಡನೆ ಬೆರೆತು, ಅವರಲ್ಲಿ ಒಬ್ಬರಾಗಿಯೂ, ತಮ್ಮತನವನ್ನು ಕಾಯ್ದುಕೊಂಡು ಬಂದವರು. ೧೯೬೩ರಲ್ಲಿ ನಾನು ಶಿರಸಿಯ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯವನ್ನು ಸೇರಿದಾಗ ಅವರು ಉಪ ಪ್ರಾಂಶುಪಾಲರು. ನಾನು ಉಪನ್ಯಾಸಕ. ನನ್ನ ಮತ್ತು ಬಿ.ಎಚ್.ಶ್ರೀಯವರ ಸಂಪರ್ಕ ಎಷ್ಟು ನಿಕಟವಾಯಿತೆಂದರೆ ಕೂಡಿಯೇ ಪೇಟೆಗೆ ಹೋಗುವುದು, ಕೂಡಿಯೇ ಚಹ ಕುಡಿಯುವುದು, ಕೂಡಿ ಹರಟೆ ಹೊಡೆಯುವುದು ಅವ್ಯಾಹತವಾಗಿ ನಡೆದೇ ಇರುತ್ತಿತ್ತು. If you want to know a person, you must talk with him, walk with him, eat with him and sleep with him ಎಂದು ಹೇಳುತ್ತಿದ್ದರು. ಕರ್ನಾಟಕದಲ್ಲೇ ಅತ್ಯಂತ ಶ್ರೇಷ್ಠ ಹರಟೆಗಾರರಲ್ಲಿ ಬಿ.ಎಚ್.ಶ್ರೀ. ಒಬ್ಬರಾಗಿದ್ದರು. ಅವರ ಮಾತು ಕೇಳುತ್ತಿದ್ದವನು ಅನೇಕ ಸಲ ಕಿವಿ,

ಬಾಯಿ ಹಾಗೂ ಕಣ್ಣುಗಳನ್ನು ತೆರೆದೇ ಕುಳಿತಿರಬೇಕಾದ ಸಂದರ್ಭ ಅನೇಕ ಬಾರಿ ಬರುತ್ತಿದ್ದವು. ಕೆಲವು ವೇಳೆ ಯಾವುದೋ ಗಹನವಾದ ವಿಚಾರ ಹೇಳುತ್ತಿರಬೇಕಾದರೆ ಸುತ್ತಲೂ ಕುಳಿತವರ ಕಡೆ ಅವರ ಲಕ್ಷ್ಯವಿರದೆ ವಿಷಯದ ಮೇಲೆ ಅವರ ಮನಸ್ಸು ಕೇಂದ್ರೀಕೃತವಾಗಿರುತ್ತಿತ್ತು. ಒಮ್ಮೆ ಉಪನ್ಯಾಸಕರ ಕೊಠಡಿಯಲ್ಲಿ ನಾವು ೧೫–೨೦ ಉಪನ್ಯಾಸಕರು ಕುಳಿತಿದ್ದೆವು. ಬಿ.ಎಚ್.ಶ್ರೀಯವರು ಬ್ರಹ್ಮ ಜಿಜ್ಞಾಸೆಯ ವಿಷಯವಾಗಿ ಮಾತು ಆರಂಭಿಸಿದರು. ಅವರ ಮಾತು ಸ್ವಗತ ಭಾಷಣದಂತಿತ್ತು. ನಮಗೆ ಆ ವಿಷಯದ ತಲೆ ಬುಡ ಗೊತ್ತಾಗದೆ ತಲೆಯಾಡಿಸುತ್ತಾ ಕುಳಿತಿದ್ದೆವು. ಇವರ ಮಾತು ಮುಗಿಯುವ ಲಕ್ಷಣ ಕಂಡು ಬರಲಿಲ್ಲ. ಆಗ ಒಬ್ಬ ಉಪನ್ಯಾಸಕರು ಹೊರಗೆ ಬಂದು ಉಪನ್ಯಾಸಕರ ಕೊಠಡಿಯ ಸೇವಕನನ್ನು ಕಳುಹಿಸಿ ಮತ್ತೊಬ್ಬ ಉಪನ್ಯಾಸಕರು ಹೊರಬರುವಂತೆ ಮಾಡಿದರು. ಹೀಗೆ ಒಬ್ಬರ ನಂತರ ಒಬ್ಬರು ಉಪನ್ಯಾಸಕರು ಹೊರ ಬಂದು ನೆಮ್ಮದಿಯ ನಿಟ್ಟುಸಿರು ಬಿಟ್ಟದ್ದಾಯಿತು. ಅಲ್ಲಿ ಯಾವ ಉಪನ್ಯಾಸಕರೂ ಇರಲಿಲ್ಲ. ಕೆಲ ಸಮಯದ ನಂತರ ತಿರುಗಿ ಕೊಠಡಿಯಲ್ಲಿ ಪ್ರವೇಶಿಸಿದಾಗ ಬಿ.ಎಚ್. ಶ್ರೀಯವರು ಕೊಠಡಿಯ ಸೇವಕನ ಮುಂದೆ ಬ್ರಹ್ಮ ಜಿಜ್ಞಾಸೆಯ ವಿಷಯವನ್ನೇ ಮುಂದುವರಿಸಿದ್ದರು.

ಇನ್ನೊಂದು ಘಟನೆ ಸ್ಮರಣೆಗೆ ಬರುತ್ತದೆ: ಪ್ರಾಂಶುಪಾಲರ ಕೊಠಡಿಯಲ್ಲಿ ಬಿ.ಎಚ್.ಶ್ರೀ ಹಾಗೂ ನಾನು ಕುಳಿತಿದ್ದೆವು. ಶ್ರೀಧರರು ಇದ್ದಲ್ಲಿ ಮಾತಿಗೆ ವಿಷಯಗಳು ಎಷ್ಟೋ ಸಿಗುತ್ತವೆ. ಯಾವುದೋ ವಿಷಯದ ಬಗ್ಗೆ ಮಾತನಾಡುತ್ತಿದ್ದ ನಾವು Vegetarianism ವಿಷಯ ಕುರಿತು ಚರ್ಚೆ ಮಾಡತೊಡಗಿದೆವು. ನನ್ನ ಅಭಿಪ್ರಾಯ ಹಾಗೂ ಅವರ ಅಭಿಪ್ರಾಯ ಬೇರೆ ಬೇರೆಯಾಗಿತ್ತು. ಮಾತಿಗೆ ಮಾತು ಆರಂಭವಾಗಿ, ಜಗಳಕ್ಕೆ ಹೋಗಿ ಒಂದು ದೊಡ್ಡ ಅಖಾಡವೇ ಆಯಿತು. ಆಮೇಲೆ ಆದಷ್ಟು ಮಟ್ಟಿಗೆ ಅವರನ್ನು avoid ಮಾಡಲಾರಂಭಿಸಿದೆ. ಎರಡು ಮೂರು ದಿನಗಳು ಹೀಗೇ ಕಳೆದವು. ಒಂದು ದಿನ ಬೆಳಿಗ್ಗೆ ೯–೩೦ರ ಸುಮಾರಿಗೆ ನಮ್ಮ ಮನೆಯ ಬಾಗಿಲು ತಟ್ಟಿದ ಸದ್ದನ್ನು ಕೇಳಿ ಬಾಗಿಲನ್ನು ತೆರೆದಾಗ ಬಿ.ಎಚ್.ಶ್ರೀ.ಯವರು ನಗುನಗುತ್ತ ಒಳಗೆ ಬಂದರು. 'ಭಿನ್ನಾಭಿಪ್ರಾಯ ನಮ್ಮೀರ್ವರ ಆತ್ಮೀಯತೆಯನ್ನು ಕೆಡಿಸಬಾರದು' ಎಂಬ ಮಾರ್ಮಿಕವಾದ ಮಾತನ್ನು ಹೇಳಿದರು.

ಬಿ.ಎಚ್.ಶ್ರೀಯವರು ಕೇವಲ ವಿದ್ವಾಂಸರು, ಸಾಹಿತಿಗಳು, ವಾಗ್ಮಿಗಳು, ಹರಟೆಗಾರರು ಆಗಿರದೆ ಅತ್ಯಂತ ಶ್ರೇಷ್ಠ ಮಾನವರಾಗಿದ್ದರು. ಇಂಥ ಅಪರೂಪದ ವ್ಯಕ್ತಿಗಳು ಆಗೊಮ್ಮೆ ಈಗೊಮ್ಮೆ ಹುಟ್ಟಿಬರುತ್ತಾರೆ. ಅಂಥವರ ಜೀವನವು ನಮಗೆ ಸದಾ ಸ್ಫೂರ್ತಿದಾಯಕವಾಗಲಿ, ಮಾರ್ಗದರ್ಶಿಯಾಗಲಿ ಎಂದು ಆಶಿಸುತ್ತೇನೆ.

ಪಿ.ಎಂ. ಹೆಗಡೆ

ಭಾರತೀಯ ವಿದ್ವಾಂಸರ ಸಂಗ

ನನಗೆ ಬಿ.ಎಚ್.ಶ್ರೀಧರರ ಪರಿಚಯವಾದದ್ದು, ನಿಕಟ ಸಂಪರ್ಕ ಬೆಳೆದದ್ದು, ನೆನಪುಗಳು ಉಳಿದಿರುವುದು ನನ್ನ ತಂದೆಯವರ ಮೂಲಕ. ಹಾಗಾಗಿ ಇವರಿಬ್ಬರ ನೆನಪುಗಳು ಒಟ್ಟೊಟ್ಟಿಗೆ ಆಗುತ್ತಿರುವುದು ಸಹಜವೆಂದು ಭಾವಿಸುತ್ತೇನೆ. ಇವರ ಸ್ನೇಹದ ಬಗ್ಗೆ ಯೋಚಿಸುವಾಗ ಸಹಪಾಠಿಗಳ ಸ್ನೇಹಕ್ಕೂ, ಸಹೋದ್ಯೋಗಿಗಳ ಸ್ನೇಹಕ್ಕೂ ಸಮಾನ ಗುಣಶೀಲರ, ಸಮಾನ ಆಸಕ್ತಿಯವರ ಸ್ನೇಹಕ್ಕೂ ವ್ಯತ್ಯಾಸವನ್ನು ಗುರುತಿಸುವುದು ಅಗತ್ಯವೆಂದು ನನ್ನ ಈಗಿನ ಅನಿಸಿಕೆ. ಅಂತೆಯೇ ತಾಯಿ–ತಂದೆಯರ, ಗುರು–ಹಿರಿಯರ, ಅಜ್ಜ–ಅಜ್ಜಿಯರ ವಾತ್ಸಲ್ಯವು ವ್ಯವಹಾರದಲ್ಲಿ ಗುಪ್ತಗಾಮಿನಿಯಾಗಿ ಪ್ರವಹಿಸುವ ಸೂಕ್ಷ್ಮತೆಗಳನ್ನು ಅರಿಯಬೇಕಾಗಿದೆ ಎಂದೂ ಅನಿಸುತ್ತದೆ. ವಾತ್ಸಲ್ಯದ ಅವತರಣವು ಅಧಃಪತನವಲ್ಲ, ದೈವೀಕೃಪೆ, ವಾತ್ಸಲ್ಯದ ಹಂಬಲ ಅಶಕ್ತತೆಯಲ್ಲ, ಭಕ್ತಿಯ ಪ್ರಾರ್ಥನೆ ಎಂಬ ಭಾವ ನನಗೆ ಸ್ಥಾಯಿಯಾಗುತ್ತಿದೆ.

ಕ್ಷೀರ–ಕ್ಷೀರ ಸಮರಸ; ನನ್ನ ತಂದೆ ರಾ. ಭ. ಹಾಸಣಗಿಯವರು ಮತ್ತು ಬಿ.ಎಚ್. ಶ್ರೀಧರರು ತಮ್ಮ ವಿದ್ಯಾಭ್ಯಾಸ ಕಾಲದಲ್ಲಿ ಮೈಸೂರಿನಲ್ಲಿ ಪರಸ್ಪರರನ್ನು ಬಲ್ಲವರು. ಬಡತನದ, ನೌಕರಿಯ, ಸಂಸಾರದ ಕಹಿಗಳನ್ನು ಉಂಡು ಜೀರ್ಣಿಸಿಕೊಂಡು ಅಖಂಡ ಏಕರಸ ತಾದಾತ್ಮ್ಯವನ್ನು ಸಾಧಿಸಿದವರು.* ವಿದ್ಯಾರ್ಥಿ ದೆಸೆಯಿಂದ ಅಂತ್ಯಕಾಲದವರೆಗೂ ಸ್ವಾಧ್ಯಾಯ ನಿರತರಾಗಿದ್ದವರು. ಯಕ್ಷಗಾನ, ಇತಿಹಾಸ ಸಂಶೋಧನೆ ಮತ್ತು ಸಂಸ್ಕೃತ ಸಾಹಿತ್ಯ ಇವರ ಸಮಾನ ಆಸಕ್ತಿಯ ವಿಷಯಗಳಾಗಿದ್ದವು.

ಯಕ್ಷಗಾನಕ್ಕೆ ಸಂಬಂಧಿಸಿದ ಬಡಗುತಿಟ್ಟು–ತೆಂಕುತಿಟ್ಟು, ಸಣ್ಣಾಟ–ದೊಡ್ಡಾಟ, ಪ್ರಸಿದ್ಧ ನಟರ ಅಭಿನಯ, ಡಾ। ಶಿವರಾಮ ಕಾರಂತರ ಅಭಿಪ್ರಾಯಗಳು–ಪ್ರಯೋಗಗಳು ಮುಂತಾದವುಗಳ ಬಗ್ಗೆ ಇವರು ಚರ್ಚಿಸುತ್ತಿದ್ದರು. ಇತಿಹಾಸಕ್ಕೆ ಸಂಬಂಧಿಸಿ ಬಳ್ಳಿಗಾವೆ, ಬನವಾಸಿ, ಯಾಣ, ಸ್ವಾದಿ, ಸ್ವರ್ಣವಲ್ಲೀ ಮುಂತಾದ ವಿಷಯಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದರು. ಸಂಸ್ಕೃತ ವೈದಿಕ ಸಾಹಿತ್ಯಕ್ಕೆ ಸಂಬಂಧಿಸಿ ಭಾಸ–ಕಾಳಿದಾಸ, ವಾಶಿಷ್ಠ ಗಣಪತಿ ಮುನಿಗಳು–ದೇವರಾತರು, ವೇದಕಾಲದ ವಿದ್ಯಾವತಿಯರು ಮುಂತಾದವುಗಳ ಬಗ್ಗೆ ಸಹಚಿಂತನೆ ಮಾಡುತ್ತಿದ್ದರು. ಇವೆಲ್ಲವೂ ನಾನು ಕಿವಿಯಾರೆ ಕೇಳಿದ ವಿಷಯಗಳಾಗಿವೆ.

ಶ್ರೀಧರರಿಗೆ ಇದ್ದಷ್ಟು ಇಂಗ್ಲೀಷ್ ಭಾಷೆ–ಸಾಹಿತ್ಯದ ಪರಿಜ್ಞಾನ, ಆಧುನಿಕ ವಿಜ್ಞಾನಗಳ

ಪರಿಚಯ ಮತ್ತು ಆಡಳಿತದ ಅನುಭವ ನನ್ನ ತಂದೆಯವರಿಗೆ ಇರಲಿಲ್ಲ. ಅಲ್ಲದೇ ನನ್ನ ತಂದೆಯವರಲ್ಲಿ ಅಂತಃಕರಣವು ಹೆಚ್ಚು ಪ್ರಧಾನವಾಗಿದ್ದು ಶ್ರೀಧರರು ಬುದ್ಧಿಪ್ರಧಾನತೆಯ ವಜ್ರಮುಷ್ಟಿಯವರಾಗಿದ್ದರು ಎಂದು ನನ್ನ ಅನಿಸಿಕೆ. ಶ್ರೀಧರರಿಗೆ ಹೋಲಿಸಿದರೆ ನನ್ನ ತಂದೆಯವರು ಹೆಚ್ಚು ಕರ್ಮಠ ವೈದಿಕರಾಗಿದ್ದರು ಎಂದು ಮೇಲ್ನೋಟಕ್ಕೆ ಅನಿಸಬಹುದಾದರೂ ಅವರು ಅಂತಃಕರಣದ ನಿಲುಮೆಗೆ ಶಾಸ್ತ್ರ ಪ್ರಮಾಣಗಳನ್ನು ಬಯಸುತ್ತಿರಲಿಲ್ಲ. ಇವರಿಬ್ಬರ ಈ ತುಲನೆ ಮಾಡಿರುವುದು ನನ್ನ ಆತ್ಮ ನಿರೀಕ್ಷಣೆಯ ಅಂಗವಾಗಿಯೇ ಹೊರತು ತಾರತಮ್ಯಕ್ಕಾಗಿ ಅಲ್ಲ.

ತಾಳಗುಂದದ ಶಿವಲಿಂಗ: ಶ್ರೀಧರರ ಕುರಿತು ನನ್ನ ಅತಿ ಹಳೆಯ ನೆನಪೆಂದರೆ ಶಿರಾಳಕೊಪ್ಪದ್ದು. ನಾನು ಆಗ ಶಾಲಾಬಾಲಕನಾಗಿದ್ದೆ. ನನ್ನ ತಂದೆ ಅಲ್ಲಿಯ ಪ್ರೌಢಶಾಲೆಯಲ್ಲಿ ಸಂಸ್ಕೃತ ಅಧ್ಯಾಪಕರಾಗಿದ್ದರು. ಶ್ರೀಧರರು ಸಿದ್ಧಾಪುರದಿಂದ ತಮ್ಮ ಕಾಲೇಜಿನ ಮಕ್ಕಳನ್ನು ಪ್ರವಾಸಕ್ಕೆ ಕರೆತಂದಿದ್ದರು. ನನ್ನ ತಂದೆ ಅವರಿಗೆ ಮಾರ್ಗದರ್ಶಿಯಾಗಿದ್ದರು. ಬಳ್ಳಿಗಾವೆ, ತಾಳಗುಂದ, ಉಡುಗಣಿ, ಉಡುತಡಿ, ಬಂದಳಿಕೆ ಮುಂತಾದ ಕ್ಷೇತ್ರಗಳನ್ನು ನೋಡುವ ಯೋಜನೆಯಿತ್ತು. ನಾನೂ ಅವರೊಂದಿಗೆ ಕೆಲವೆಡೆ ಹೋಗಿದ್ದೆ. ಬಳ್ಳಿಗಾವೆಯ ಒಂದು ಶಿಲ್ಪ ಚತುರ್ಮುಖಿ ಬ್ರಹ್ಮನದೋ ಪಂಚಮುಖಿ ಶಿವನದೋ ಎಂಬ ಚರ್ಚೆಯಾದ ಅಸ್ಪಷ್ಟ ನೆನಪಿದೆ. ತಾಳಗುಂದದಲ್ಲಿ ಒಂದು ಆಳೆತ್ತರ ಮೀರಿದ, ಪೀಠ ರಹಿತ ಶಿವಲಿಂಗದ ದೇವಸ್ಥಾನಕ್ಕೆ ಹೋದಾಗ, ಅಲ್ಲಿಯ ಅರ್ಚಕರು ಬೇರೆ ಹಳ್ಳಿಗೆ ಹೋಗಿದ್ದು, ಬೀಗದ ಕೈ ಸಿಗದೇ ತಾಸು ಗಟ್ಟಲೆ ಕಾದು ಕುಳಿತ ಸ್ಪಷ್ಟ ನೆನಪಿದೆ. ಕಡೆಗೆ ಅರ್ಚಕರು ಬಂದು, ಬಾಗಿಲು ತೆರೆದ ಮೇಲೆ ಎಣ್ಣೆ ದೀಪ ಹಚ್ಚಿ ದರ್ಶನ ಪಡೆದಿದ್ದೆವು.

'ಕಾಣೆಯಾದ ಕಬ್ಬಿಣರಾಯ' : ನಂತರದ ನೆನಪೆಂದರೆ ಶಿರಸಿಯಲ್ಲಿ ಅವರ ಮನೆಗೆ ನಾನು ನನ್ನ ತಾಯಿ–ತಂದೆಯವರೊಂದಿಗೆ ಹೋಗಿದ್ದೆ. ಅವರೆಲ್ಲ ಹರಟುತ್ತ ಕುಳಿತಿದ್ದಾಗ ನಾನು ಅವರ ಗ್ರಂಥರಾಶಿಯಲ್ಲಿ ಮಕ್ಕಳ ಪುಸ್ತಕಗಳನ್ನು ಕಂಡು ಬಹಳ ಹೊತ್ತು ಅವನ್ನೇ ತಿರುವುತ್ತಿದ್ದೆ. ಕಡೆಗೆ ಡಾ. ಶಿವರಾಮ ಕಾರಂತರ 'ಕಾಣೆಯಾದ ಕಬ್ಬಿಣರಾಯ' ಪುಸ್ತಕವನ್ನು ಓದುತ್ತ ಕುಳಿತಿದ್ದೆ. ಎಷ್ಟು ಕರೆದರೂ ನಾನು ಬಾರದಿದ್ದಾಗ, ಶ್ರೀಧರರ ಮನೆಯ ಅಮ್ಮ (ಶ್ರೀಧರರ ಪತ್ನಿ ರಮಾದೇವಿಯವರನ್ನು ನಾನು ಕರೆಯುವುದೇ ಹಾಗೆ) ನನ್ನನ್ನು ಹೊತ್ತುಕೊಂಡು ಎಲ್ಲರೆದುರು ಕೂಡಿಸಿ 'ಕಾಣೆಯಾದ ಕಬ್ಬಿಣರಾಯ' ಓದುತ್ತ ಇದ್ದ ಇವನು ಈಗ ಸಿಕ್ಕಿಬಿದ್ದ ಕಬ್ಬಿಣರಾಯ" ಎಂದು ನಗೆಯಾಡಿದ ಸಂದರ್ಭವನ್ನು ಈಗಲೂ ನೆನಪಿಸಿಕೊಳ್ಳುತ್ತೇವೆ. ನಂತರ ಆ ಕಥೆಯನ್ನು ಎಲ್ಲರೆದುರು ಸಾಭಿನಯವಾಗಿ ಓದಿ ಹೇಳುತ್ತ 'ಕಬ್ಬಿಣರಾಯ ಎಲ್ಲಿ ಇದ್ದಾನೆ, ಇಲ್ಲಿ ಇದ್ದಾನೆಯೋ, ಅಲ್ಲಿ ಇದ್ದಾನೆಯೋ' ಎನ್ನುತ್ತ ಸುತ್ತಲೂ ತಿರುಗಾಡಿ ಕೇಳಿ ರಂಜಿಸಿದೆನಂತೆ.

'ಗುರುವಿಗೆ ಶರಣು' : ಮುಂದಿನ ಹಂತ ಶಿರಸಿಯದು. ನಾನು ಪಿ.ಯು.ಸಿ ಯಿಂದ ಬಿ.ಎ. ಮುಗಿಯುವವರೆಗೆ (೧೯೭೩–೭೮) ಐದು ವರ್ಷಕಾಲ ಶಿರಸಿಯಲ್ಲಿದ್ದೆ.

ಶ್ರೀಧರರು ನಿವೃತ್ತರಾಗಿ ಯಲ್ಲಾಪುರನಾಕಾದಿಂದ ಕಾಲೇಜು ರೋಡಿನಲ್ಲಿ ಮನೆ ಹಿಡಿದಿದ್ದರು. ನನ್ನ ರೂಮು ಅದೇ ದಾರಿಯಲ್ಲಿ ಸ್ವಲ್ಪ ಮುಂದಿತ್ತು. ಅನೇಕ ದಿನ ರಾತ್ರಿ ಬಹಳ ಹೊತ್ತಿನವರೆಗೂ ಅವರ ಮನೆಯಲ್ಲಿರುತ್ತಿದ್ದೆ. ಕೆಲವು ದಿನ ರಾತ್ರಿಯ ಊಟ–ಫಳಾರವೂ ಅಲ್ಲೇ ಆಗುತ್ತಿತ್ತು. ಆಗ ಏನೆಲ್ಲ ವಿಷಯಗಳನ್ನು ಚರ್ಚಿಸಿದೆವೆಂದು ಪಟ್ಟಿ ಮಾಡಲು ಸಾಧ್ಯವಿಲ್ಲ. ಶ್ರೀಧರರು ಹಿರಿಯ ಕನ್ನಡ ಸಾಹಿತಿಗಳ ಬಗ್ಗೆ (ವಿಶೇಷತಃ ಬೇಂದ್ರೆ, ಕುವೆಂಪು, ಕಾರಂತ, ಮಾಸ್ತಿಯವರ ಬಗ್ಗೆ) ಮತ್ತು ತಮ್ಮ ಗುರುಹಿರಿಯರ ಬಗ್ಗೆ (ವಿಶೇಷತಃ ಎ.ಆರ್.ಕೃಷ್ಣಶಾಸ್ತ್ರಿ, ಡಿ.ಎಲ್. ನರಸಿಂಹಾಚಾರ್, ನಾ. ಕಸ್ತೂರಿ, ಜೆ. ಸಿ. ರಾಲೋರವರ ಬಗ್ಗೆ) ಒಡನಾಟದ ಸವಿನೆನಪುಗಳನ್ನು ಬಣ್ಣಿಸಿ ಗುರುಭಕ್ತಿ ಸಾಹಿತ್ಯಾಸಕ್ತಿಗಳನ್ನು ಬೆಳೆಸಿದರೆಂದು ನಾನು ಹೇಳಲೇಬೇಕು. ಹಾಗಾಗಿ ವಿಷಯ ಭೇದವಿಲ್ಲದೇ ಎಲ್ಲ ಗುರುಗಳನ್ನು ಗೌರವಿಸುವ ಪ್ರವೃತ್ತಿ ನನ್ನಲ್ಲಿ ಬೆಳೆದಿದೆ. ಗುರುಗಳೆಂದರೆ ಕೃಪಾಚಾರ್ಯ, ದ್ರೋಣಾಚಾರ್ಯ, ವಶಿಷ್ಠ, ವಿಶ್ವಾಮಿತ್ರ, ಶುಕ್ರಾಚಾರ್ಯ, ಬೃಹಸ್ಪತಿ, ವಾಲ್ಮೀಕಿ, ವ್ಯಾಸ, ಸಂದೀಪಿನಿ, ಧೌಮ್ಯ ಮುಂತಾದ ಆಚಾರ್ಯರು–ಋಷಿಗಳು ಎಂಬ ಚಿತ್ರ ನನ್ನಲ್ಲಿ ಇಂದಿಗೂ ಒಡಮೂಡುವುದಕ್ಕೆ ಅವರೂ ಕಾರಣವೆನ್ನಬಹುದು. (ನನ್ನ ಈಗಿನ ವೃತ್ತಿಯಲ್ಲಿ ನಾನು ಯಾರಂತಹವನು ಎಂದು ತಿಳಿಯುವ ಪೇಚು ನನಗೆ ಈಗಲೂ ಇದೆ).

'ಸಾಹಿತ್ಯದ ಗರಡಿಮನೆ' : ಶಿರಸಿಯ ಆಗಿನ ನೆನಪುಗಳೊಂದಿಗೆ Aurobindo Study Circle, English Association ಮತ್ತು ಸಾಹಿತ್ಯ ಬಳಗಗಳ ಮಧುರ ಸ್ಮೃತಿಯೂ ಇದೆ. ಒಮ್ಮೆ ತೋಟಗಾರ ಸೊಸೈಟಿಯ ಹಾಸ್ಟೆಲಿನಲ್ಲಿ ಶ್ರೀ ಅಜ್ಜೀ ಬಳ ಹೆಗಡೆಯವರ ನೇತೃತ್ವದಲ್ಲಿ ಪ್ರೊ. ಪಿ. ಎಂ. ಹೆಗಡೆಯವರು ಶ್ರೀ ಅರವಿಂದರ 'ಸಾವಿತ್ರಿ' ಮಹಾಕಾವ್ಯದ ಬಗ್ಗೆ ಶ್ರೀಧರರ ಉಪನ್ಯಾಸ ಮಾಲೆಯನ್ನು ಏರ್ಪಡಿಸಿದ್ದರು. ಅದರ ಮುಕ್ತಾಯದ ದಿನ ಮಹರ್ಷಿ ಅರವಿಂದರ ಮತ್ತು ಮಾತೆ ಮೀರಾ ರಿಚರ್ಡ್ಸ್‌ರವರ ಭಾವಚಿತ್ರ ಪೂಜೆ, ಗ್ರಂಥಪೂಜೆ ಮಾಡಿ ಪ್ರಸಾದ ವಿತರಿಸಿದ್ದೆವು. ಅಲ್ಲಿ ಶ್ರೀ ರಾಮಕೃಷ್ಣ ಪರಮಹಂಸ–ಶಾರದಾಮಣಿ–ವಿವೇಕಾನಂದರ ಭಾವಚಿತ್ರವನ್ನು ಪೂಜಿಸಿದ್ದೆವು. ಶ್ರೀಧರರು ತಮ್ಮ ಉಪನ್ಯಾಸದಲ್ಲಿ ಶ್ರೀ ಅರವಿಂದರ ಸಾವಿತ್ರಿ ಮಹಾಕಾವ್ಯವನ್ನು ವಾಶಿಷ್ಠ ಗಣಪತಿ ಮುನಿಗಳ 'ಉಮಾ ಸಹಸ್ರ'ದೊಂದಿಗೆ ಹೋಲಿಸಿದ್ದರು. ಶಂಕರರದು ಕೇವಲಾದ್ವೈತ–ಅರವಿಂದರರದು ಸಮಗ್ರಾದ್ವೈತವೆಂದೂ; ಮಿಲ್ಟನ್‌ನ 'ಪ್ಯಾರಡೈಸ್ ಲಾಸ್ಟ್'ಗಿಂತ ಅರವಿಂದರ 'ಸಾವಿತ್ರಿ'ಗೆ ಹೆಚ್ಚಿನ ಧಾರ್ಮಿಕ–ಚಾರಿತ್ರಿಕ–ರಾಷ್ಟ್ರಿಕ ಮೌಲ್ಯವಿದೆ ಎಂದೂ; ರವೀಂದ್ರನಾಥ ಠಾಕೂರರಲ್ಲಿ ಕವಿಸತ್ವ ಪ್ರಧಾನವೆಂದೂ, ಅರವಿಂದರಲ್ಲಿ ಯೋಗಸತ್ವ ಪ್ರಧಾನವೆಂದೂ ಹೇಳಿದ್ದರು. ಅರವಿಂದರ Life Divine ಅಥವಾ Synthesis of Yoga ಅಧ್ಯಯನ ಮಾಡಲು ಪ್ರೊ.ಪಿ. ಎಂ. ಹೆಗಡೆಯವರು ನನಗೆ ಸೂಚಿಸಿದರು. ಮಹರ್ಷಿ ಅರವಿಂದರ ಸಾಧನಾ ಮಾರ್ಗವು ಕಠಿಣವೆನಿಸುತ್ತದೆ ಎಂದು ನಾನು ಹೇಳಿದಾಗ ಮುಗ್ಧ ಮನಸ್ಸಿನಿಂದ ಶ್ರೀಮಾತೆಯವರನ್ನು ನಂಬಲು ಹೇಳಿದರು. "There

is no challenge to innocence. There is also a concept of second innocence which you will understand later in life. First innocence is of a sleeping-smiling child; second innocence is of a ripe old man. Ernest Hemingway's Old Man and the sea illustrates it. Herman Melvill's Moby Dick is an example of its absence'' ಎಂದು ಹೇಳಿದರು.

ನಂತರ ಕಾಲೇಜಿನಲ್ಲಿ ಪ್ರೊ. ಆರ್. ನಾಗರಾಜ ಅವರು Paradise Lost ಕಲಿಸುತ್ತಿದ್ದಾಗ ಕಾವ್ಯ ಮೌಲ್ಯ–ಧಾರ್ಮಿಕ ಮೌಲ್ಯ–ಚಾರಿತ್ರಿಕ ಮೌಲ್ಯ–ಸಾಮಾಜಿಕ ಮೌಲ್ಯಗಳ ಸಂಬಂಧದ ಬಗ್ಗೆ, ಯುಗಪ್ರಜ್ಞೆ–ಪ್ರತಿಭೆ–ಪರಂಪರೆಗಳ ಬಗ್ಗೆ ಚರ್ಚಿಸಿದೆವು. English Association ದ ಸಭೆಯಲ್ಲಿ ಈ ಕುರಿತು ಚಿಂತನೆ ಮಾಡಿದೆವು. ಸಾಹಿತ್ಯ ಬಳಗದ ಕಾರ್ಯಕ್ರಮವೊಂದರಲ್ಲಿ ಪ್ರೊ. ನಾಗರಾಜರ 'ಊರು' ಕಾದಂಬರಿ ಕುರಿತು ಚರ್ಚಿಸಿದೆವು. ಕವಿ ಕೆ.ಎಸ್. ನರಸಿಂಹ ಸ್ವಾಮಿಯವರ 'ತೆರೆದ ಬಾಗಿಲು' ಬಗ್ಗೆ ಚರ್ಚಿಸಿದೆವು. ಕಾಲೇಜಿನ ಒಕ್ಕೂಟದ ವತಿಯಿಂದ ವಿಶಿಷ್ಟವಾದ ರಸಾನುಭವ ಕಾರ್ಯಕ್ರಮವನ್ನು ಕನ್ನಡ –ಸಂಸ್ಕೃತ–ಹಿಂದಿ ವಿಭಾಗದವರು ಸಂಯುಕ್ತವಾಗಿ ಏರ್ಪಡಿಸಿದ್ದರು. ವಿವಿಧ ರಸಗಳ ಸೈದ್ಧಾಂತಿಕ ವಿವರಣೆಯೊಂದಿಗೆ ಉದಾಹರಣೆಗಳ ರಂಜನೀಯ ಪ್ರದರ್ಶನವೂ ಇತ್ತು. ಕಠಿಣವಾದ ವಿಷಯವನ್ನು ಸುಲಭ ಗ್ರಾಹ್ಯವಾಗಿಸಿದ ಸಂಭಾಷಣೆ–ದೃಷ್ಟಾಂತದ ರೂಪಕ ಮಾಧ್ಯಮ ಅತ್ಯಂತ ಯಶಸ್ವಿಯಾಯಿತು.

ಚತುರೋಕ್ತಿಗಳು: ಧಾರವಾಡದಲ್ಲಿ ನಾನು ಎಂ.ಎ. ಕಲಿಯುತ್ತಿದ್ದಾಗಲೂ ಆಗಾಗ ಶ್ರೀಧರರ ಮನೆಗೆ ಹೋಗಿ ಬರುತ್ತಿದ್ದೆ. Mind and Matter ದ್ವಂದ್ವಕ್ಕೆ ಸಂಬಂಧಿಸಿ ಅವರು ಕೆಳಗಿನಂತೆ ಹೇಳುತ್ತಿದ್ದರು. "What's mind?" "No Matter." "What's Matter?" "Never MInd". ತಾಯಿ ಬೆಕ್ಕು – ಮರಿ ಬೆಕ್ಕುಗಳಿಗೆ ಪ್ರತ್ಯೇಕ ಕಿಂಡಿ ಮಾಡಿದ ವಿಜ್ಞಾನಿಯ ಕಥೆ ಅವರಿಗೆ ಬಹಳ ಪ್ರೀತಿಯದಾಗಿತ್ತು. ಶ್ರೀಧರರು ಮೈಸೂರು ಕನ್ನಡ, ಮಂಗಳೂರು ಕನ್ನಡ, ಧಾರವಾಡ–ಹುಬ್ಬಳ್ಳಿ ಕನ್ನಡಗಳನ್ನು ಪ್ರತ್ಯೇಕಿಸಿ ಹೇಳುತ್ತಿದ್ದರು. ಉತ್ತರ ಕನ್ನಡ ಜಿಲ್ಲೆಯ ಹವ್ಯಕ ಕನ್ನಡ ಮತ್ತು ಅದರ ಪ್ರಭೇದಗಳು ತನಗೆ ಪೂರ್ತಿ ಸರಿಯಾಗಿ ತಿಳಿಯುವುದಿಲ್ಲವೆಂದು ಅವರು ಹೇಳಿದ ನೆನಪಿದೆ.

೧೯೮೭ರಲ್ಲಿ ಪ್ರಕಟವಾದ ನನ್ನ 'ಮೂರು ಮಹಾಕಾವ್ಯಗಳು' ಕೃತಿಯನ್ನು ಶ್ರೀಧರರಿಗೆ ಸಮರ್ಪಿಸಿದ್ದೇನೆ. ದಿ. ೫–೧–೮೮ ರಂದು ಮಂಚಿಕೇರಿಯಲ್ಲಿ ನಡೆದ ನನ್ನ ತಂದೆಯವರ ಸನ್ಮಾನ ಸಮಾರಂಭಕ್ಕೆ ಅವರು ಅಧ್ಯಕ್ಷರಾಗಿದ್ದರು. ಈಗ ಅವರೂ ಇಲ್ಲ, ಇವರೂ ಇಲ್ಲ. ನಾನು ಇಂಗ್ಲಿಷ್ ಕಲಿಸುತ್ತಿದ್ದೇನೆ. ಸ್ವಾಧ್ಯಾಯ ನಿರತರ ಮಾರ್ಗವೇ ಮಾರ್ಗ.

"ಸಿರಿಗನ್ನಡಂ ಗೆಲ್ಗೆ"

ಎಚ್.ಆರ್. ಅಮರನಾಥ

ಅಣ್ಣ ಶ್ರೀಧರರು

ನನಗೂ ನನ್ನಣ್ಣನಿಗೂ ಬಾಲ್ಯದ ಒಡನಾಟ ಅಕ್ಕಂದಿರಿಗಿದ್ದಷ್ಟು ನನಗಿಲ್ಲ. ಕಾರಣ ನಮ್ಮ ನಡುವಿನ ವಯಸ್ಸಿನ ಅಂತರ ನನಗೂ ಅವನಿಗೂ ೧೭ ವರ್ಷಗಳ ಅಂತರ. ನನ್ನ ತಂದೆಯವರು ತಮ್ಮ ಹುಟ್ಟೂರು 'ಬವಲಾಡಿ' ಯನ್ನು ಬಿಟ್ಟು ಸೊರಬ ತಾಲೂಕಿನ ಅಂಡಿಗೆಗೆ ಬಂದ ಮೇಲೆ ನಾ ಹುಟ್ಟಿದ್ದು. ಆಗ ನನ್ನಣ್ಣ ಸಾಗರದ ಹೈಸ್ಕೂಲಿನಲ್ಲಿ ಓದುತ್ತಿದ್ದಿರಬೇಕು. ಮುಂದೆ ಅಣ್ಣಯ್ಯ ಮಹಾರಾಜಾ ಕಾಲೇಜಿನಲ್ಲಿ (ಮೈಸೂರು) ಬಿ.ಎ. ಓದುತ್ತಿದ್ದಾಗ ವರ್ಷಕ್ಕೊಮ್ಮೆ ಬೇಸಿಗೆ ರಜೆಯಲ್ಲಿ ಊರಿಗೆ ಬಂದಾಗಲೇ ನನಗೆ ಅವನ ಒಡನಾಟ. ಅಂಡಿಗೆ ೨೦೦–೨೫೦ ವರ್ಷಗಳ ಹಿಂದೆ ಒಬ್ಬ ಪಾಳೆಯಗಾರನ ರಾಜಧಾನಿಯಾಗಿತ್ತಂತೆ. ಊರ ಹೆಬ್ಬಾಗಿಲು, ಸುತ್ತಲೂ ಕೋಟೆ, ರಾಜನ ಅರಮನೆ, ದೊಡ್ಡ ಕೆರೆ, ಕೆರೆಯ ದಂಡೆಯ ಮೇಲೆ ಗಜಲಕ್ಷ್ಮಿಯ ಕಲ್ಲಿನಲ್ಲಿ ಕೆತ್ತಿದ ಸುಂದರ ವಿಗ್ರಹ, ಕಂದಕ. ಆದರೆ ಇವೆಲ್ಲವೂ ನೆಲಸಮವಾಗಿಯೇ ನೂರು ವರ್ಷ ಕಳೆದಿರಬೇಕು. ಅಳಿದ ಹಳೆಹಳ್ಳಿಗೆ ಅನತಿ ದೂರದಲ್ಲಿಯೇ ಹೊಸಹಳ್ಳಿ, ಗೌಡರ, ಪಟೇಲರ, ಶಾನಭೋಗರ, ಜಮೀನ್ದಾರರ ಮನೆಗಳು ರೂಪುಗೊಂಡೇ ೧೦೦ ವರ್ಷಗಳ ಹತ್ತಿರವಾಗಿರಬೇಕು. ಈಗ ಅಲ್ಲಿಗೆ ಹೋದರೆ, "ಇದು ಪಾಳೆಯಗಾರರ ಅರಮನೆಯಲ್ಲಿದ್ದ ಜಾಗ. ಈ ಕೆರೆಯ ಮೆಟ್ಟಲಲ್ಲೇ ದಾಸಿಯರು ಪಾತ್ರೆ ತೊಳೆಯುತ್ತಿದ್ದರು. ಇದು ಅವರ ಬಚ್ಚಲು ಹಂಡೆಯಿಡುವ ಜಾಗ. ಈ ನೆಲದಡಿ ಅರಸರ ಖಜಾನೆಯಿದೆ. ಅದರ ಮೇಲೆ ಈಗ ಮುಳ್ಳು ಪೊದೆ ಬೆಳೆದಿದೆ. ಅದನ್ನೊಂದು ನಾಗರ ಹಾವು ಕಾಯುತ್ತಾ ಇರುತ್ತದಂತೆ. ಜನ ಈಗಲೂ ಅದರ ಹತ್ತಿರ ಹೋಗಲು ಹೆದರುತ್ತಾರೆ" ಎನ್ನುತ್ತಾರೆ.

ಬೇಸಿಗೆಯ ರಜೆ ಬಂತೆಂದರೆ ನಮಗೆಲ್ಲ ಹಬ್ಬದ ಸಂಭ್ರಮ. ಅಣ್ಣಯ್ಯ ಯಾವಾಗ ಬರುವನೊ ಎಂಬ ಕಾತರದ ನಿರೀಕ್ಷೆ. ನನ್ನ ತಂದೆ ಊರ ದೇವರಾದ ಹನುಮಂತ ದೇವರ ಅರ್ಚಕರು. ಹಳ್ಳಿಯ ಜನರಿಗೆ ಅವರೆಂದರೆ ಎಲ್ಲಿಲ್ಲದ ಗೌರವ; ಭಕ್ತಿ. ಕಬ್ಬು ಬೆಳೆಯುವ ಸಮಯದಲ್ಲಿ ಹೊರೆ, ಹೊರೆ ಕಬ್ಬು, ಅವರು ಬೆಳೆಯುತ್ತಿದ್ದ ದವಸ–ಧಾನ್ಯಗಳು, ಭತ್ತ ಎಲ್ಲವನ್ನೂ ಒಂದು ನಿಗದಿತ ಅಳತೆಯಲ್ಲಿ ತಂದೊಪ್ಪಿಸುತ್ತಿದ್ದರು. ಮತ್ತೆ ಆಲೆ ಮನೆಗೆ ಹೋದರೆ ತಬಕದ ಬೆಲ್ಲ, ಅಂಟುಬೆಲ್ಲ, ಅಚ್ಚಿನ ಬೆಲ್ಲ, ಕಬ್ಬಿನ ಹಾಲುಗಳನ್ನು ಧಾರಾಳವಾಗಿ ಕೊಡುತ್ತಿದ್ದರು. ರಜಾದಿನಗಳು ಬರುತ್ತಿದ್ದಂತೆಯೆ,

ಅಮ್ಮ ಅಂಟು ಬೆಲ್ಲ, ತಬಕದ ಬೆಲ್ಲ, ಒಣಗಿಸಿದ ಗೇರು ಹಣ್ಣು ಗೇರು ಬೀಜ, ನೆಲಗಡಲೆ (ಬಯಲು ಸೀಮೆಯ ಕಡೆಯಿಂದ ಎತ್ತಿನ ಗಾಡಿಯ ಮೇಲೆ ನೆಲಗಡಲೆ ಚೀಲವನ್ನು ಹೇರಿಕೊಂಡು ಹಳ್ಳಿಗಳಿಗೆ ಹೋಗಿ ಮಾರಾಟ ಮಾಡುತ್ತಿದ್ದರು) ಗಳನ್ನು ಡಬ್ಬದಲ್ಲಿ ತುಂಬಿಸಿಡುತ್ತಿದ್ದಳು. ಅಣ್ಣಯ್ಯ ಊರಿಗೆ ಬಂದಾಗ ನಾವೆಲ್ಲ (ನಾನು, ಸುಶೀಲಕ್ಕ, ಅಣ್ಣಯ್ಯ) ಅದನ್ನು ತಿನ್ನುತ್ತ ದಿನನಿತ್ಯ ಹಳ್ಳಿಯ ಕಾಡು, ಗುಡ್ಡ, ತೋಟಗಳನ್ನು ಸುತ್ತಿ ಬರುತ್ತಿದ್ದೆವು. ಅಲ್ಲಿಯ ಹಲಸು, ಮಾವು, ನೇರಳೆ, ಪೇರಳೆ ಹಣ್ಣುಗಳನ್ನು ಚೀಲದಲ್ಲಿ ತುಂಬಿಸಿ ಮನೆಗೆ ತರುತ್ತಿದ್ದೆವು. ಮಾವಿನ ಹಣ್ಣಿನ ಸುಗ್ಗಿಯಲ್ಲಂತೂ ಒಂದು ದಿನವೂ ಊಟಕ್ಕೆ ಮಾವಿನ ಹಣ್ಣು ತಪ್ಪಿದ್ದಲ್ಲ. ಆಗೆಲ್ಲ, ಅಣ್ಣಯ್ಯ ಮೈಸೂರಿನ ವಿಚಾರ, ಅವನ ವಿದ್ಯಾಗುರುಗಳ ಬಗ್ಗೆ, ಮಹಾರಾಜರ ಬಗ್ಗೆ, ನವರಾತ್ರಿ–ದಸರಾ ವೈಭವದ ಬಗ್ಗೆ ಹೇಳುತ್ತಿದ್ದ. ಅಂದಿನಿಂದಲೂ ಜಯಚಾಮರಾಜರ ಬಗ್ಗೆ ನನಗೆ ಅತೀವ ಅಭಿಮಾನ.

ವರ್ಷ ಕಳೆದಂತೆ ನನ್ನಣ್ಣ ರಜಾ ದಿನಗಳಲ್ಲಿ ಅಂಡಿಗೆಗೆ ಬರುವುದು ಕಡಿಮೆಯಾಯಿತು. ಮೈಸೂರಿನಲ್ಲಿ ಬಿ.ಎ ಮುಗಿಸಿ ಎಂ.ಎ. ಓದಲು ಸಂಕಲ್ಪಿಸಿದ. ಮುಂದೆ ಎಂ.ಎ. ಪದವಿ ಪಡೆದು, ಸ್ವತಃ ಮಹಾರಾಜರ ಕೈಯಿಂದಲೇ 'ಗೋಲ್ಡ್ ಮೆಡಲ್' ಸ್ವೀಕರಿಸಿದಾಗ ಅದು ನಮಗೇ ದೊರಕಿದಷ್ಟು ಹೆಮ್ಮೆ ನಮಗೆ. ಆಮೇಲೆ ಉದ್ಯೋಗವನ್ನರಸುತ್ತಾ ಪೂನಾದಲ್ಲಿ ಮಿಲಿಟರಿಯಲ್ಲಿ 'ಎಕೌಂಟಟ್' ಆಗಿ ಕೆಲಸಕ್ಕೆ ಸೇರಿದ ಸುದ್ದಿ ತಿಳಿದಾಗ ನಮಗೆಲ್ಲ ಆನಂದಕ್ಕಿಂತ ಭಯವೇ ಹೆಚ್ಚಾಯಿತು. ಮಿಲಿಟರಿ ಅಂದರೇ ನಮಗದೇಕೋ ಭಯ. ತಿಂಗಳಿಗೊಮ್ಮೆ ಬರುವ ಅವನ ಕಾಗದ ಎರಡು ದಿನ ತಡವಾದರೆ (ಅದರಲ್ಲಿ ಯುದ್ಧದ ಸುದ್ದಿ ಬಂದರೆ) ನನಗೆ, ಅಪ್ಪಯ್ಯನಿಗೆ, ಭಯ ಹೀಗೊಮ್ಮೆ ಅವನ ಕಾಗದ ಬಂದಾಗ, ತಂದೆಯವರು ಅದನ್ನು ಒಡೆಯುತ್ತಿದ್ದಾಗ ಅಲ್ಲಿಯೇ ಇದ್ದ ನಾನು ಆತುರದಿಂದ 'ಶುಭವಿರಲಿ, ಶುಭವಿರಲಿ, ಶುಭವಿರಲಿ ದೇವಾ' ಎಂದು ಗುಣುಗುಣಿಸುತ್ತಿದ್ದೆ. ಅದನ್ನು ಕೇಳಿದ ತಂದೆಯವರು ಹೃದಯ ತುಂಬಿ, ಕಣ್ದುಂಬಿ, ನನ್ನನ್ನು ಅಪ್ಪಿಕೊಂಡು ತಲೆ ನೇವರಿಸಿದ್ದು ಇನ್ನೂ ಮನದಲ್ಲಿ ಹಸಿರು.

ಮುಂದೆ ಪೂನಾದಲ್ಲಿಯ ಝಳುಣಕ, ಒಣರೊಟ್ಟಿ, ಸ್ವಯಂಪಾಕದ ಪ್ರಯೋಗದಿಂದಾಗಿ ಅಣ್ಣಯ್ಯನ ಆರೋಗ್ಯ ಹದಗೆಟ್ಟು ಅವನು ಪೂನಾವನ್ನು ಬಿಡಬೇಕಾಯಿತು. ಭಟ್ಕಳದ ಹೈಸ್ಕೂಲ್ ಮಾಸ್ತರರಾಗಿದ್ದಾಗಲೇ ಮದುವೆಯೂ ನಡೆಯಿತು. ಬಾಲ್ಯದಿಂದಲೂ ಅಪ್ಪ, ಅಮ್ಮ, ಎಲ್ಲರಿಗೂ ಪ್ರೀತಿಯ 'ರಮಕ್ಕ'ನಾಗಿ ಬೆಳೆದ ನನಗೆ 'ರಮಾದೇವಿ' ಅತ್ತಿಗೆಯಾಗಿ ಬಂದಳು. ಅಲ್ಲ ಗೆಳತಿಯಾಗಿ, ಅದೂ ಅಲ್ಲ ಆತ್ಮೀಯ ಬಂಧುವಾಗಿ ಬಂದಳು.

ಮುಂದೆ ಅವನ ಹತ್ತಿರ ಇದ್ದು, ಅವನನ್ನು ಅರಿತದ್ದು, ಅವನಿಂದ ಗಳಿಸಿದ್ದು, ಬೆಳೆಸಿದ್ದು, ಉಳಿಸಿದ್ದು ಎಲ್ಲಾ. ಅವನು 'ಕರ್ಮವೀರ'ದ ಉಪಸಂಪಾದಕನಾಗಿ

ಹುಬ್ಬಳ್ಳಿಯಲ್ಲಿ ನೆಲೆಸಿ, ಅತ್ತಿಗೆಯನ್ನು ಕರೆದುಕೊಂಡು ಬಂದ ನಾಲ್ಕು ತಿಂಗಳ ನಂತರ ನನ್ನ ಹನ್ನೆರಡನೆಯ ವಯಸ್ಸಿನಲ್ಲಿ ನನ್ನ ಹುಟ್ಟಿದೂರು ಅಂಡಿಗೆಯನ್ನು ಬಿಟ್ಟು ತಂದೆ ತಾಯಿಯರೊಂದಿಗೆ ಹುಬ್ಬಳ್ಳಿಗೆ ಬಂದೆ. ಅವನ ಗುಣದ, ವಿದ್ವತ್ತಿನ ಪೂರ್ಣ ಪರಿಚಯವಾದದ್ದು ಅಂದಿನಿಂದ. ಕವಿಯೂ, ಲೇಖಕನೂ ಆದ ಅವನ ಮೊದಲ ಕವನಸಂಕಲನ 'ಮೇಘನಾದ' ಪ್ರಕಟಗೊಂಡದ್ದೂ ಆಗಲೆ. ಅವನಲ್ಲಿದ್ದ ಪುಸ್ತಕಭಂಡಾರದಂತೆ ಅವನೂ ಒಂದು ಜ್ಞಾನನಿಧಿ. ಅವನಲ್ಲಿಗೆ ಯಾರು ಬಂದರೂ ಅವನ ಮಾತನ್ನೇ ಕೇಳುತ್ತಾ ಕೂಡಬೇಕು. ಅಂತಹ ವಾಗ್ಮಿ. 'ಕಸ್ತೂರಿ' ಬಳಗದ ಪಾ. ವೆಂ. ಆಚಾರ್ಯರೂ ನನ್ನ ಅಣ್ಣನೂ ಆತ್ಮೀಯ ಸ್ನೇಹಿತರು. ಅವರು ದಂಪತಿ ಸಮೇತ ಅಥವಾ ಒಬ್ಬರೇ ಆಗಾಗ್ಗೆ ನಮ್ಮಲ್ಲಿಗೆ ಬರುತ್ತಿದ್ದರು. ಬೇಂದ್ರೆಯವರನ್ನು ಅವನು ಗುರುಸ್ಥಾನದಲ್ಲಿಟ್ಟಿದ್ದ. ಅವರ ಗುರುತಿನವರು, ಸಾಹಿತಿಗಳು, ಸಾಹಿತ್ಯಾಸಕ್ತರಿಂದ ಸಾಹಿತ್ಯಿಕ ಚರ್ಚೆ, ಮಾತುಕತೆ, ಚತುರೋಕ್ತಿಗಳಿಂದ ಮನೆ ಉತ್ಸಾಹದಿಂದ ತುಂಬಿರುತ್ತಿತ್ತು. ಪುಸ್ತಕ ಪ್ರಿಯಳಾದ ನನಗೆ ಅಣ್ಣಯ್ಯನ ಪುಸ್ತಕ ಭಂಡಾರ ನನ್ನ ಜ್ಞಾನದಾಹವನ್ನು ತಣಿಸಲು ಸಾಕಷ್ಟು ಸಹಾಯವಾಯಿತು. ಬೇಂದ್ರೆ, ಕುವೆಂಪು, ಶಿವರುದ್ರಪ್ಪ, ಚೆನ್ನವೀರ ಕಣವಿ, ಅಡಿಗ ಹಾಗೂ ಹಳೆಯ ಹೊಸ ಕವಿಗಳ ಕವನ ಸಂಕಲನಗಳು, ಕಾದಂಬರಿಗಳು, ವಿಮರ್ಶೆಗೆ ಬಂದ ಹಲವು ಪುಸ್ತಕಗಳು ಎಲ್ಲವನ್ನೂ ಓದುತ್ತಿದ್ದೆ. ಕಡೆ ಕಡೆಗೆ ಕಾದಂಬರಿಗಳಿಗಿಂತ ಕವಿತೆಗಳೇ ನನಗೆ ಹೆಚ್ಚು ಪ್ರಿಯವಾದವು. ಅವನು ಯಾವಾಗಲೂ "ಕೇವಲ ಕಥೆ ಕಾದಂಬರಿಗಳನ್ನು ಅಥವಾ ಪತ್ರಿಕೆಗಳಲ್ಲಿ ಬರುವ ಧಾರಾವಾಹಿಗಳನ್ನು ಮಾತ್ರ ಓದುವುದಲ್ಲ. ಬೇರೆ ಲೇಖನಗಳನ್ನೂ ಓದಬೇಕು. ಎಲ್ಲಾ ವಿಷಯಗಳಲ್ಲಿಯೂ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು" ಎನ್ನುತ್ತಿದ್ದ.

ಅವನಲ್ಲಿದ್ದ ಉಪನಿಷತ್ತು, ವೇದಗಳ ಸಾರಾಂಶ ಇವುಗಳಲ್ಲದೇ ಕನ್ನಡದಲ್ಲಿ ಯಾವುದೆಲ್ಲ ಲಭ್ಯವೊ ಅವುಗಳೆಲ್ಲವನ್ನೂ ನಾನಲ್ಲಿ ಓದಿದೆ. ಪಂಪ, ರನ್ನ, ಜನ್ನ, ರತ್ನಾಕರ ವರ್ಣಿ, ರಾಘವಾಂಕ, ಹರಿಹರ, ಸೋಮೇಶ್ವರ ಹೀಗೆ ಅದೆಷ್ಟೋ ಹಳೆ ಹೊಸಗನ್ನಡ ಕವಿಗಳ ಗದ್ಯ-ಪದ್ಯಗಳನ್ನೂ ಓದಿದೆ. ಇಂಗ್ಲಿಷ್, ಸಂಸ್ಕೃತಗಳನ್ನು ಕಲಿಸಿದ ನನ್ನಣ್ಣ. ಹಿಂದಿಯನ್ನೂ ಪರಿಚಯಿಸಿಕೊಂಡೆ. ಜೈಮಿನಿ ಭಾರತವನ್ನೂ ಸಂಪೂರ್ಣ ಓದಿ ಎರಡು ಅಧ್ಯಾಯ ಕಂಠಪಾಠ ಮಾಡಿದೆ; ಅರ್ಥ ಬರೆದೆ. ಮುಂದೆ ಸಾಧ್ಯವಾಗಲಿಲ್ಲ. ಒಂದು ಕೊರತೆಯೆಂದರೆ, ಆಗಲೇ ನನ್ನ ಮದುವೆಯ ಬಗ್ಗೆ ನನ್ನ ತಂದೆಯವರು ಚಿಂತಿಸುತ್ತಿದ್ದುದರಿಂದ ಅರ್ಧಕ್ಕೆ ನಿಲ್ಲಿಸಿದ್ದ ನನ್ನ ಶಾಲಾ ಓದನ್ನು ಮುಂದುವರಿಸುವ ಯೋಚನೆ ಮಾಡದಿದ್ದದ್ದು. ನಾನೂ ಆ ಬಗ್ಗೆ ಹಠ ಹಿಡಿಯದಿದ್ದದ್ದು.

ಮುಂದೆ ನನ್ನ ೧೫ನೇ ವರ್ಷಕ್ಕೆ ನನ್ನ ಮದುವೆಯಾಯಿತು. ನನ್ನ ಅಣ್ಣನ ಮನೆಗೆ ಬಂದಾಗಲೆಲ್ಲ ಅವನ ಪುಸ್ತಕ ಭಂಡಾರವನ್ನು ತಿರುವಿ ಹಾಕುವುದು ನನ್ನ ಮೊದಲ ಕೆಲಸ. ೧೩ ವರ್ಷಗಳ ನಂತರ ನನಗೆ ಟಿ.ಬಿ. ಶುರುವಾಗಿ ನನ್ನಮ್ಮನನ್ನು ಕಳಿಸಿ ನನ್ನಣ್ಣ ನನ್ನನ್ನು ಕರೆಸಿಕೊಂಡಾಗ, ಅಲ್ಲಿ ಒಂದು ವರ್ಷವಿದ್ದಾಗ, ನನ್ನ

ಸಾಹಿತ್ಯಾಸಕ್ತಿ ಮತ್ತಷ್ಟು ಬೆಳೆಯಿತು. ಅವನು ಮನೆಯಲ್ಲಿ ಇರುವಷ್ಟು ಸಮಯವೂ ಅವನ ಭೇಟಿಗಾಗಿ ಅವನ ಹಳೆ–ಹೊಸ ವಿದ್ಯಾರ್ಥಿಗಳು, ಪರಿಚಿತರು ಅಂತ ಒಬ್ಬರಲ್ಲ ಒಬ್ಬರು ಬರುತ್ತಿದ್ದರು. ಅವರಿಗೆಲ್ಲ ಕಾಫಿ, ತಿಂಡಿ ಸರಬರಾಜು ಮಾಡುವ ಜವಾಬ್ದಾರಿ ನನ್ನ ಅತ್ತಿಗೆಯದು. ಕೆಲವು ಸಲ ಊಟದ ಸಮಯಕ್ಕೆ ಬಂದರೆ, ಊಟಕ್ಕೆ ಒತ್ತಾಯ. ಯಾರು ಎಷ್ಟು ಹೊತ್ತಿಗೆ ಬಂದರೂ, ಸುಧಾರಿಸಿಕೊಂಡು ನಗುನಗುತ್ತಾ ಉಪಚರಿಸುತ್ತಿದ್ದ ಅತ್ತಿಗೆ ಎಲ್ಲರಿಗೂ ರಮಾದೇವಿಯಕ್ಕ. ಅನೇಕ ಶಿಷ್ಯರು, ತಮ್ಮ ಪಾಠದಲ್ಲಿ ಗೊತ್ತಿಲ್ಲದ ತಿಳಿಯದ ವಿಷಯಗಳನ್ನು ತಿಳಿದುಕೊಳ್ಳಲು ಬರುತ್ತಿದ್ದರು. ಅವನು ಟ್ಯೂಶನ್ ಕೊಡುತ್ತಿದ್ದರೆ ಎಷ್ಟೋ ಮೇಲು ಸಂಪಾದನೆ ಮಾಡಬಹುದಿತ್ತು. ಆದರೆ ಅವನ ಸ್ವಭಾವ ಅದಲ್ಲ. ಅವನು ಪಾಠ ಹೇಳುತ್ತಿದ್ದಾಗ ನಾನು ಗಮನವಿಟ್ಟು ಕೇಳುತ್ತಿದ್ದೆ ಮತ್ತು ಆಗಿನ ಸಾಹಿತಿಗಳಲ್ಲಿ ಕೆಲವರಿಗೆ ಇಂಗ್ಲಿಷ್ ಮಿಶ್ರಿತ ಕನ್ನಡ ಮಾತನಾಡುವ ಅಭ್ಯಾಸ. ಆಗ ನಾನು ಪ್ರತಿ ಕನ್ನಡ ಶಬ್ದಕ್ಕೂ ಇಂಗ್ಲಿಷ್‌ನಲ್ಲಿ ಏನು ಹೇಳುತ್ತಾರೆ ಎಂದು ಗ್ರಹಿಸುತ್ತಿದ್ದೆ; ಬರೆದುಕೊಳ್ಳುತ್ತಿದ್ದೆ. ಇದರಿಂದ ನನ್ನ ಭಾಷಾಜ್ಞಾನ ಮತ್ತಷ್ಟು ಬೆಳೆಯಿತು. ಶಿರಸಿ ಮಾರಿಕಾಂಬಾ ದೇವಸ್ಥಾನ ಮತ್ತು ಅದರ ನವರಾತ್ರಿ ಉತ್ಸವ ಬಹಳ ಪ್ರಸಿದ್ಧವಾದುದು. ಅದು ಕೇವಲ ಧಾರ್ಮಿಕ ಉತ್ಸವವಾಗಿರದೇ ಸಾಂಸ್ಕೃತಿಕ ಉತ್ಸವವೂ ಆಗಿತ್ತು. ಕಲೆ, ಸಾಹಿತ್ಯಕ್ಕೆ ಪ್ರೋತ್ಸಾಹ ಕೊಡುತ್ತಿದ್ದ ಅದರ ಧರ್ಮದರ್ಶಿಗಳು ಹತ್ತು ದಿನವೂ ಹತ್ತಾರು ಹೆಸರಾಂತ ಸಾಹಿತಿಗಳನ್ನು, ವಿದ್ವಾಂಸರನ್ನೂ ಕರೆಸಿ, ಭಾಷಣ, ಕವಿತಾ ವಾಚನ, ಹರಿಕಥೆ, ನಾಟಕ, ಯಕ್ಷಗಾನಗಳನ್ನು ಏರ್ಪಡಿಸುತ್ತಿದ್ದರು. ಆಗ ಅಲ್ಲಿಗೆ ಬಂದ ವಿದ್ವಾಂಸರು ನಮ್ಮಲ್ಲಿಗೂ ಬರುತ್ತಿದ್ದರು. ಹೀಗೊಮ್ಮೆ ಬೇಂದ್ರೆಯವರು ಬಂದಾಗ ಅವರು ಅತ್ತಿಗೆಗೆ 'ಜೀವನದಲ್ಲಿ ಕಷ್ಟ–ಸುಖ, ನೋವು–ನಲಿವು ಇದ್ದದ್ದೆ. ನೀನು ಹೀಗೆ ನಗುನಗುತ್ತಾ ಇರು ಮಗಳೆ. ನಿನ್ನ ಮುಖದ ನಗು ಎಂದಿಗೂ ಮಾಸದಿರಲಿ' ಎಂದ ಮಾತು ಇಂದಿಗೂ ನೆನಪಾಗುತ್ತದೆ. (ಅವರು ಕವಿಗಳೂ, ಸಂಖ್ಯಾಶಾಸ್ತ್ರಜ್ಞರೂ ಆಗಿದ್ದಂತೆ ಜ್ಯೋತಿಷಿಗಳೂ ಆಗಿದ್ದರು).

ಮುಂದೆ ನಾನು ಆರೋಗ್ಯವಂತಳಾಗಿ, ತಿರುಗಿ ಮನೆಗೆ ಹೋಗಿ, ಅಲ್ಲಿ ನನ್ನ ಮಗಳು ಜ್ಯೋತಿಯ ಪ್ರೋತ್ಸಾಹದಿಂದ ಭಂಡಾರ್‌ಕರ್ಸ್ ಕಾಲೇಜಿನಲ್ಲಿ ಉಚಿತವಾಗಿ ಕಲಿಸುತ್ತಿದ್ದ ಸಂಸ್ಕೃತ ತರಗತಿಗೆ ಸೇರಿದ ಸುದ್ದಿ ತಿಳಿದಾಗ ನನ್ನ ಅಣ್ಣನಿಗಾದ ಸಂತೋಷವೆಷ್ಟು! ನಾನಲ್ಲಿಗೆ ಹೋದಾಗ ಸಂಸ್ಕೃತ ವ್ಯಾಕರಣ ಕೊಟ್ಟ (ಪಾಣಿನಿ) ಭತೃಹರಿಯ ನೀತಿಶತಕ, ಶಂಕರಾಚಾರ್ಯರ ಸ್ತೋತ್ರಗಳು ಹಾಗೂ ಇನ್ನೂ ಅನೇಕ ಪುಸ್ತಕಗಳನ್ನು ಕೊಟ್ಟ. ಸಂಸ್ಕೃತ ಶ್ಲೋಕಕ್ಕೆ ಅರ್ಥ ಕೇಳಿದ. ಉತ್ತರಿಸಿದಾಗ ಖುಶಿಪಟ್ಟಿದ್ದ. ಮುಂದೆ ನನ್ನ ಕಥೆ, ಲೇಖನ, ಚಿಂತನೆಗಳು ಆಗಾಗ್ಗೆ ಪ್ರಕಟಗೊಳ್ಳುತ್ತಿದ್ದಾಗ ಅಣ್ಣಯ್ಯ ಅದನ್ನು ಮೆಚ್ಚಿದ್ದ. ನನ್ನ ಅನುಭವಗಳ ಭಾವವನ್ನು, ಅದನ್ನು ಮೂಡಿಸಿದ್ದ ಬಗೆಯನ್ನೂ ಹೊಗಳಿದ್ದ. ನನ್ನ ಸಾಹಿತ್ಯಿಕ ಬಲವನ್ನು ಮತ್ತಷ್ಟು ಹಿಗ್ಗಿಸಿದ್ದ. ಅವನೆದುರು ಕುಳಿತರೆ ಸಾಕು: ಪುಂಖಾನು ಪುಂಖವಾಗಿ, ಅವನ ಬಾಯಿಂದ ಹೊರಡುತ್ತಿದ್ದ ವಿಚಾರಧಾರೆ

ಇಡೀ ವಿಶ್ವವನ್ನೆ ನಮಗೆ ಪರಿಚಯಿಸುತ್ತಿತ್ತು. ಅದು ಕೇವಲ ಒಣ ತತ್ವ ಶಾಸ್ತ್ರವಲ್ಲ, ಹಾಸ್ಯ, ವಿನೋದ, ವಿಡಂಬನೆಗಳ ನವರಸಗಳೂ ಅವುಗಳಲ್ಲಿರುತ್ತಿತ್ತು. ಅವನು ಮಾತಾಡುವ ಶೈಲಿ, ಪ್ರತಿಭೆ ಕೇಳುಗರನ್ನು ಮಂತ್ರ ಮುಗ್ಧರನ್ನಾಗಿಸುತ್ತಿತ್ತು. ಅವನ ಕಂಠಶ್ರೀಯೂ ಅಷ್ಟೆ ಬೇಂದ್ರೆಯವರ ಕವನಗಳನ್ನು ಅವನ ಬಾಯಿಂದ ಕೇಳುವುದೇ ಸೊಗಸು. ಜಗನ್ನಾಥ ಪಂಡಿತನ ಗಂಗಾಲಹರಿಯನ್ನು ಉದಾಹರಣೆಗಾಗಿ ಹೇಳುತ್ತಿದ್ದರೆ, ಆ ಗಂಗೆಯೇ ತೆರೆ ತೆರೆಯಾಗಿ ಹರಿದುಬಂದಂತೆ ಅನಿಸುತ್ತಿತ್ತು. ಯಾವುದೇ ಕವನ, ಕಾವ್ಯ, ಜನರ ಮನಮುಟ್ಟಬೇಕಾದರೆ, ಅರ್ಥ ಪಡೆದುಕೊಳ್ಳಬೇಕಾದರೆ, ಗೇಯತೆಯ ಗುಣ, ಹಾಡುವ ಕಂಠ, ಎರಡೂ ಮುಖ್ಯ ಎಂದು ಅವನು ಯವಾಗಲೂ ಹೇಳುತ್ತಿದ್ದ. ಅವನ ಲೇಖನಗಳಿಗಿಂತ ಕವನಗಳೇ ರಸಮಯವಾಗಿರುತ್ತಿದ್ದವು. ಅವನ ಅನೇಕ ಕವನ ಸಂಕಲನ, ಹಾಗೂ ಇತರ ಪುಸ್ತಕಗಳು ಪ್ರಕಟಗೊಂಡಿವೆ. ಆದರೆ ನಮ್ಮ ಸಮಾಜದಲ್ಲಿ ಕವನಗಳನ್ನು ಕೊಂಡು ಓದುವವರು ಎಷ್ಟು? ಓದುವ ಆಸಕ್ತಿಯುಳ್ಳವರು ಎಷ್ಟು ಜನ? ಹೀಗಾಗಿ ಅವನ ಅನೇಕ ಪ್ರಕಟಿತ ಪುಸ್ತಕಗಳು ಮಾರಾಟವಾಗದೇ ಕಪಾಟಿನಲ್ಲಿ ಕೊಳೆಯಬೇಕಾಯಿತು. ಅವನು ಕೊನೆಯಲ್ಲಿ ಎರಡು ವರ್ಷಗಳ ಸತತ ಪರಿಶ್ರಮದಿಂದ ಬರೆದ ವೇದಗಳ ರಹಸ್ಯಕ್ಕೆ (ಅರವಿಂದರ ಇಂಗ್ಲಿಷ್ ಪುಸ್ತಕದ ಅನುವಾದ) ಬೆಳಕು ಕಾಣುವ ಯೋಗ ಬರಲೇ ಇಲ್ಲ. ಅವನಿಗಿದ್ದ ಬಿ.ಪಿ., ಇನ್ನೂ ಅನೇಕ ಒತ್ತಡಗಳು ಅವನನ್ನು ದಿನ ದಿನಕ್ಕೆ ದುರ್ಬಲನನ್ನಾಗಿಸಿದವು. ಕೊನೆಗೆ ಅವನಿಗೆ ಬ್ಲಡ್ ಯೂರಿಯಾ ಎಂದು ಮಂಗಳೂರಿಗೆ ಕರೆದುಕೊಂಡು ಹೋದಾಗ ನಾನೂ ಹೋಗಿದ್ದೆ ನೋಡಲು.

ನಾನು ಅಣ್ಣನ ಮನೆಗೆ ಹೋದಾಗಲೆಲ್ಲ ಅವನೊಂದು 'ಪೆನ್' ಕೊಡುತ್ತಿದ್ದ. ನಾನು ಮರಳುವಾಗ ನನ್ನ ಅನೇಕ ಕಥೆ, ಕವನಗಳು ಪ್ರಕಟಗೊಂಡು ಪ್ರೋತ್ಸಾಹ ಸಿಕ್ಕಾಗ, ನನ್ನಣ್ಣನ ಲೇಖನಿಯಲ್ಲಿ ಬರೆದದ್ದೇ, ಅವನ ಪ್ರತಿಭೆ ನನ್ನಲ್ಲೂ ಹರಿಯಿತೆಂಬ ಅನಿಸಿಕೆ ನನಗೆ. ಒಮ್ಮೆ ಅದು ಕಳೆದುಹೋಯಿತು, ಆಗ ನನಗಾದ ಬೇಸರ ಎಷ್ಟೆಂದರೆ... ಏನೇ ಇರಲಿ, ಪ್ರತಿಭಾ ಸಂಪನ್ನನಾದ ನನ್ನಣ್ಣನ ಪ್ರತಿಭೆಯಲ್ಲಿ ಕಾಲಂಶವಾದರೂ ನನ್ನಲ್ಲಿದ್ದರೆ, ಅದನ್ನು ನಾನು ಉಳಿಸಿ, ಬೆಳೆಸಿಕೊಂಡರೆ ಅದೇ ನಾನವನಿಗೆ ಕೊಡುವ ಕಾಣಿಕೆ; ತೀರಿಸುವ ಋಣ ಎಂದುಕೊಂಡಿದ್ದೇನೆ.

ರಮಾ ಕಾರಂತ

ನನ್ನ ಅಪ್ಪಯ್ಯ

ನನ್ನ ತಂದೆಯಂಥ ತಂದೆಯ ಕುರಿತು ಬರೆಯುವುದಾಗಲೀ, ಬರೆಯದೇ ಇರುವುದಾಗಲೀ ಅಷ್ಟೇ ಕಷ್ಟ. ಎಲ್ಲರಂಥವರಲ್ಲದವರ ಕುರಿತು ಬರೆಯಬೇಕು ಎಂಬ ತುಡಿತಕ್ಕೆ ಶಬ್ದಗಳು ಸಹಕರಿಸಿಯಾವೇ ಎಂಬ ಅಳುಕು. ಅದೂ ಸಾಧಾರಣವಾದ 'ತಂದೆ' ಎಂಬ ಕಲ್ಪನೆಗೆ ಎಷ್ಟೆಷ್ಟೂ ಹೊಂದದ ನನ್ನ 'ಅಪ್ಪಯ್ಯ' ಏನೂ ಕೊಡದೇನೇ ಎಷ್ಟೆಲ್ಲವನ್ನೂ ಕೊಟ್ಟರು ಎಂದು ಹೇಗೆ ತಿಳಿಸಲಿ? ಇಂಥ ಅಪ್ಪಯ್ಯ ಏಳೇಳು ಜನ್ಮಕ್ಕೂ ಬೇಡ ಎಂದೆನಿಸುವ ಗಳಿಗೆಗಳೊಂದಿಗೇ ಬರುವ ಜನ್ಮದಲ್ಲೆಲ್ಲ ಇವರೇ ಸಾಕು ಇವರೇ ಬೇಕು ಎನ್ನುವ ಬಯಕೆಯ ವಿರೋಧಾಭಾಸ ನಮಗಷ್ಟೇ ಗೊತ್ತು.

ಬಾಲ್ಯ ಕಾಲದ ಒಂದು ಆತ್ಮೀಯ ನೆನಪೂ ನನಗಿಲ್ಲ. ಒಂದು ಚಾಕಲೇಟು, ಒಂದು ಹೊಸ ಅಂಗಿ, ಕಿಂಚಿತ್ ಹೊಗಳಿಕೆ ಊಹೂಂ ನೆನಪಿಲ್ಲ. ಆದರೂ ಒಂದನೇ ಕ್ಲಾಸಿನಲ್ಲಿ ನಾನು ಮೊದಲ ನಂಬರು ಪಡೆದಾಗ

"ಶಾಲೆಯಿಂದ ಓಡಿ ಬರುವ ರಾಜಿ ಎಷ್ಟು ಚೆಂದ
ಪಾಟಿಚೀಲ ಜನಿವಾರದ ಅಲಂಕಾರ ಬಂಧ" ಎಂದು ಪದ್ಯ ಬರೆದಿದ್ದರು. ಅದ್ಹೇಗೆ ನನ್ನ ನೆನಪಿನಲ್ಲಿದೆಯೋ ವಿಚಿತ್ರ. ಅಲಿಪ್ತರಂತೆ ತೋರುತ್ತಿದ್ದ ಅಪ್ಪಯ್ಯನ ಒಂದೊಂದು ಪ್ರತಿಕ್ರಿಯೆಯನ್ನೂ ಮನಸ್ಸು ಜೋಪಾನವಾಗಿ ಎತ್ತಿಟ್ಟುಕೊಳ್ಳುತ್ತಿರಬೇಕು. ನಮ್ಮೊಂದಿಗೆ ಸಲಿಗೆಯ ಒಂದು ಮಾತನ್ನೂ ಆಡದ, ಯಾವಾಗಲೂ ಓದಿನ, ಬರಹದ ಜಗತ್ತಿನಲ್ಲೇ ಮುಳುಗಿದವರಂತಿರುತ್ತಿದ್ದ ಅಪ್ಪಯ್ಯ ಬಾಲ್ಯದಲ್ಲಂತೂ ನಮಗೆ ಹತ್ತಿರವಾಗಲಿಲ್ಲ. ಆದರೂ ನನಗೊಂದು ಕೊರತೆಯೆಂಬ ಭಾವನೆ ಬಂದ ನೆನಪಿಲ್ಲ.

ನಾನು ಕಾಲೇಜು ಕಟ್ಟೆ ಹತ್ತುವಷ್ಟರಲ್ಲಿ ಅಪ್ಪಯ್ಯ ಸ್ವಲ್ಪ ಸ್ವಲ್ಪವಾಗಿ ಬಿಚ್ಚಿಕೊಳ್ಳುತ್ತಿದ್ದರು. ಅಷ್ಟರೊಳಗಾಗಲೇ ಏನೇನೋ ನನ್ನ ಲೇಖನಿಗೆ ಮೀರಿದ ಘಟನೆಗಳು ನಡೆದುಹೋಗಿ ನಾವೆಲ್ಲ ಅವರ ನೋವಿನ ತೀವ್ರತೆಯನ್ನು ಸಾಕ್ಷಾತ್ ಅನುಭವಿಸಿದೆವು. ಎಲ್ಲ ನಿರಾಶೆ, ವಿಶ್ವಾಸಘಾತಗಳ ಪ್ರಹಾರದ ನಡುವೆಯೂ ಅವರು ಸಿನಿಕರಾಗಲಿಲ್ಲ. ಎಂಥ ವಿಷಗಳಿಗೆಯಲ್ಲಿಯೂ ಓದು–ಬರಹಗಳಿಂದ ಅವರ ಮನಸ್ಸು ವಿಮುಖವಾಗಲಿಲ್ಲ. ಹೃದಯ ಜರ್ಝರಿತವಾದಾಗಲೂ ಮೆದುಳು ಅಷ್ಟೇ ಶಕ್ತಿಶಾಲಿಯಾಗಿತ್ತು. ಒಂದು ಗಳಿಗೆಯೂ ನಿದ್ರೆ ಇಲ್ಲದ ಇರುಳಿನ ನಂತರವೂ ಬೆಳಿಗ್ಗೆ ಸ್ನಾನ ಮಾಡಿ ರೂಮಿನಲ್ಲಿ ಕುಳಿತು ಬರಹದಲ್ಲಿ ಮಗ್ನರಾಗುವ ತನ್ಮಯತೆ ಈ ಲೋಕದ್ದಂತೂ ಅಲ್ಲ.

ಅಪ್ಪಯ್ಯನೆಂದರೆ ಒಂದು ಜ್ಞಾನಕೋಶ ಮಾತ್ರ ಎಂಬ ಭಾವನೆಯಿದ್ದ ನಮಗೆ ಆ ಕೋಶದೊಳಗಿನ ಹೃದಯದ ಮಿಡಿತ ಕೇಳತೊಡಗಿದ್ದು ತುಸು ದೊಡ್ಡವರಾದಮೇಲೇ. ಜ್ಞಾನವನ್ನೂ, ತರ್ಕವನ್ನೂ ಅತಿ ಎನಿಸುವಷ್ಟು ಮೆಚ್ಚಿದ್ದ, ತತ್ಪರಿಣಾಮವಾಗಿ ವಿಚಾರದಲ್ಲಿನ ಅಪ್ರಬುದ್ಧತೆಯನ್ನೂ, ಅಸಮರ್ಪಕತೆಯನ್ನೂ ಕಿಂಚಿತ್ತೂ ಸಹಿಸದ ಅವರ ಅಸಹನೆ, ಆಕ್ರೋಶಗಳು ಬಾಲ್ಯದಲ್ಲಿ ಭಯ ಹುಟ್ಟಿಸಿ, ಅರ್ಥವಾಗದ ಗೊಂದಲದಲ್ಲಿ ದೂರ ನಿಲ್ಲಿಸುತ್ತಿದ್ದರೆ, ಬೆಳೆದಂತೆಲ್ಲ ಅದೇ ಅಸಹನೆ, ಆಕ್ರೋಶಗಳು ಪ್ರಿಯವಾಗಿ, ಅದೇ ಸರಿ ಎನಿಸಿ, ನಮ್ಮೊಳಗಿನ ಆಕ್ರೋಶಕ್ಕೆ ಅದೇ ದನಿಯಾದ ಹಾಗೆನಿಸಿತು. ಅವರ ತಾಸು–ತಾಸಿನ ಮಾತು ನಿರರ್ಗಳವಾಗಿ ಹರಿಯುವಾಗ ಅದ್ವೈತ ಲೋಕದ ಚಿತ್ರವನ್ನು ಸ್ವಯಂ ಅನುಭವಿಸಿದವರಂತೆ ಪ್ರಸನ್ನ ಮುಖಮುದ್ರೆಯಲ್ಲಿ ವಿವರಿಸುವಾಗ, ತಮ್ಮ ಗುರುಗಳನ್ನು ಗದ್ಗದ ಕಂಠದಲ್ಲಿ ಸ್ಮರಿಸುವಾಗ, ಬೇಂದ್ರೆಯವರ ಭಾವಗೀತಗಳನ್ನು (ಸಚ್ಚಿದಾನಂದ, ಸಚ್ಚಿದಾನಂದ... ಕಿವಿಯಲ್ಲೇ ಇದೆ) ಅವರದ್ದೇ ಶೈಲಿಯಲ್ಲಿ ಮೈಯಲ್ಲಿ ಗಾಳಿ ಹೊಕ್ಕವರಂತೆ ಹೇಳುವಾಗ ನಾನು ಸವಿಯುತ್ತಿದ್ದದ್ದು ಅವರ ಅದುವರೆಗೆ ಅಗಮ್ಯವಾಗಿದ್ದ ಹೃದಯ ಮೃದುತ್ವವನ್ನು. ಮುಂದೊಮ್ಮೆ ವಿಜಾಪುರಕ್ಕೆ ಅವರು ಒಂದು ಭಾಷಣ ನೀಡಲು ಹೋಗುವಾಗ ನನ್ನನ್ನೂ ಕರೆದೊಯ್ದರು. ಹೋಗುವಾಗ ಬಸ್ಸಿನಲ್ಲಿ ಉದ್ದಕ್ಕೂ ಚಾಕಲೇಟು, ಪೇಪರಮೆಂಟು ಕೊಡಿಸಿದ್ದೇ ಕೊಡಿಸಿದ್ದು, ಕಾಲೇಜು ಓದುತ್ತಿದ್ದ ಈ ಮಗಳಿಗೆ! (ಅವರ ಪಿತೃಹೃದಯ ಪ್ರೀತಿಯ ಅಭಿವ್ಯಕ್ತಿಗೆ ತಹತಹಿಸುತ್ತಿತ್ತೇ...?) ಅಲ್ಲಿಯ ಗೋಳಗುಮ್ಮಟದಲ್ಲಿ ನಾನು, ಅವರು ಇಬ್ಬರೇ ನಿಂತಾಗ "ಏನನ್ನಾದರೂ ಹೇಳಿ ನೋಡು, ಪ್ರತಿಧ್ವನಿ ಬರುತ್ತೆ ಏಳು ಸಲ" ಎಂದಾಗ ನಾನು ಏನನ್ನೂ ಹೇಳಲಾಗದೇ 'ಅಪ್ಪಯ್ಯಾ' ಎಂದಿದ್ದೂ ಅದು ತರಂಗಿತವಾಗಿ ಪ್ರತಿಧ್ವನಿಸಿದ್ದೂ ನನಗೊಂದು ದಿವ್ಯಾನುಭೂತಿ ಇಂದಿಗೂ.

ಇಷ್ಟೊಂದು ಪ್ರೀತಿಯ ಭಂಡಾರವಿದ್ದೂ, ಯಾಕೆ, ಯಾಕೆ ಅದು ಲೋಕ ರೀತಿಯಲ್ಲಿ ವ್ಯಕ್ತವಾಗಲಿಲ್ಲ? ನನಗಿದರ ಕುರಿತು ಕಿಂಚಿತ್ ಅತೃಪ್ತಿಯೂ ಇಲ್ಲದಿದ್ದರೂ ಅವರ ಲೋಕ–ಭಿನ್ನತೆ ಪ್ರಿಯವೇ ಆಗಿದ್ದರೂ ಕೌತುಕ ಆಗೀಗ ಏಳುತ್ತದೆ. ಇಲ್ಲಿಯೇ ಅವರ ಅವಧೂತತ್ವ ಅಡಗಿದೆಯೇ?

ಒಮ್ಮೊಮ್ಮೆ ತೀರ ಚಿಕ್ಕ ದೋಷಕ್ಕೂ ತರ್ಕಬದ್ಧವಾಗಿ, ವಾಗ್ಬಾಣಗಳಿಂದ ಪ್ರಹರಿಸಲು ತೊಡಗಿದರೆಂದರೆ ನಾವು ತೀರ ಕುಗ್ಗಿ ಹೋಗಿ ಆ ಕ್ಷಣವೇ ಆತ್ಮಹತ್ಯೆಗೆ ಎಳೆಸುವಷ್ಟು ಮನಸ್ಸು ಘಾಸಿಗೊಳ್ಳುವುದಿತ್ತು. ಆದರೆ ನಮ್ಮ ಮನಸ್ಸು ಘಾಸಿಗೊಂಡಿದ್ದು ತುಸು ಅರಿವಾಯಿತೋ ಆಗಲೇ ವಿಷಯ ಬದಲಾಯಿಸಿ ನಮಗರಿವಾಗದಂತೆ ಇನ್ನೊಂದು ಲೋಕಕ್ಕೊಯ್ಯುವ ಅತಿ ಮೃದುತ್ವ, ದಾಕ್ಷಿಣ್ಯ ಪರತೆ ಇತ್ತು. ಈ ವಿರೋಧಾಭಾಸ ಅವರು ಲೋಕೋತ್ತರರಾಗಿದ್ದಕ್ಕೇ ಇದ್ದಿರಬಹುದೇ? ಅದೇನೇ ಇರಲಿ, ಇದೇ ಕಾರಣಕ್ಕೆ ಅವರು ನಮ್ಮೆಲ್ಲ ಅಳತೆಗೂ ಮೀರಿ "ಅತ್ಯತಿಷ್ಠದ್ದಶಾಂಗುಲಮ್" ಎಂಬಂತಿರುತ್ತಿದ್ದರು. ಒಮ್ಮೊಮ್ಮೆ ನನಗೆ ಅವರೊಂದು ಸಂಕೇತದ ಹಾಗೆ, ಶುದ್ಧ ತತ್ವದ ಹಾಗೆ ತೋರುತ್ತಿದ್ದರು.

ವ್ಯಾವಹಾರಿಕ ಪ್ರಪಂಚದ ಆಗು–ಹೋಗುಗಳು ಅವರನ್ನು ಆಕರ್ಷಿಸುತ್ತಲೂ, ಸ್ಪರ್ಶಿಸುತ್ತಲೂ ಇರಲಿಲ್ಲ. ಹೀಗಿದ್ದರೂ ಒಂದು ಸಾದಾ ಸಿನೇಮಾಕ್ಕೂ ಕರೆದೊಡನೆ ಬಂದು (ಬಹುಶಃ 'ಭೂತಯ್ಯನ ಮಗ ಅಯ್ಯು') 'ಚೆನ್ನಾಗಿದೆ' ಎಂಬ ಸರ್ಟಿಫಿಕೇಟನ್ನೂ ಕೊಟ್ಟು ಚಕಿತಪಡಿಸುವುದಿತ್ತು. ಜಗತ್ತಿಗೆ ನಿಷ್ಠುರವಾದಿಯಾಗಿ ನಿರ್ದಾಕ್ಷಿಣ್ಯವಂತರಾಗಿ ತೋರುತ್ತಿದ್ದರೂ ನಮ್ಮೊಂದಿಗೇ ಅತಿ–ನಿಷ್ಠುರವಾಗಿ ಎಷ್ಟೋ ಬಾರಿ ನಡೆದುಕೊಂಡಿದ್ದರೂ ಇದಲ್ಲ, ಇದಲ್ಲ ಇವರ ನಿಜ ಸ್ವರೂಪ, ಎಲ್ಲೋ ಏನೋ ಮರೆಯಾಗಿದೆ, ಈಗೋ ಇನ್ನೊಂದು ಕ್ಷಣಕ್ಕೋ ದ್ರವಿಸುವ ಹೃದಯವಿದೆ ಅನ್ನುವ ಅನಿಸುವಿಕೆ ನನಗೆ ಯಾವಾಗಲೂ ಇರುತ್ತಿತ್ತು.

ನನ್ನ ತಂದೆಯವರಲ್ಲಿ ಪಾಂಡಿತ್ಯ ಓತ–ಪ್ರೋತವಾಗಿದ್ದರೂ, ಮೆದುಳೊಂದು ಶಬ್ದಕೋಶವೇ ಆಗಿದ್ದರೂ ಅದು ತೆರೆದರಷ್ಟೇ ತೋರುತ್ತಿತ್ತು. ಉಳಿದಂತೆ ಅವರು ಒಂದು ಮಗುವಿನಷ್ಟು ಸರಳ ವ್ಯಕ್ತಿ. ಏನೆಂದರೆ ಏನನ್ನೂ, ತೀರ ಕ್ಷುಲ್ಲಕವಾಗಿದ್ದನ್ನೂ ಕೂಡ ಪ್ರಾಮಾಣಿಕವಾಗಿ ಕೇಳಿದರೆ ಅದಕ್ಕೇ ಅಷ್ಟೇ ಶ್ರದ್ಧೆಯಿಂದ ಉತ್ತರ ಬರುತ್ತಿತ್ತು. ಇಂತಹ ಸರಳ ವ್ಯಕ್ತಿ, ಯಾವ ತೋರಿಕೆಯನ್ನೂ ಅರ್ಥ ಮಾಡಿಕೊಳ್ಳಲಾರದ ಮುಗ್ಧ, ಸಮಯ ಸಾಧಕರೂ ಕೇವಲ ಸ್ವಾರ್ಥಿಗಳೂ ಹೆಚ್ಚಾಗಿ ತುಂಬಿರುವ ಈ ಸಮಾಜದಲ್ಲಿ ನೇರ ವ್ಯವಹಾರವನ್ನು ನಿಭಾಯಿಸುವ ಪ್ರಸಂಗ ಬಂದಿದ್ದರೆ ಯಾವ ರೀತಿಯಲ್ಲಿ ಪ್ರತಿಕ್ರಿಯಿಸುತ್ತಿದ್ದರೋ ನಾನರಿಯೆ. ಆದರೆ ದೈವ ಕೃಪೆಯೋ ಎನ್ನುವಂತೆ ನಮ್ಮಮ್ಮ ಅವೆಲ್ಲವನ್ನೂ ತಾನೇ ನಿಭಾಯಿಸಿಕೊಂಡು ಹೋಗುತ್ತಿದ್ದುದರಿಂದ ಅವರು ತಮ್ಮದೇ ಪ್ರಿಯ ಪ್ರಪಂಚದಲ್ಲಿ ನಿರ್ಬಾಧಿತವಾಗಿದ್ದು ಬಿಡುವುದು ಸಾಧ್ಯವಾಯಿತು.

ಎಲ್ಲ ಆಡಂಬರಕ್ಕೂ, ತೋರಿಕೆಗೂ, ಪ್ರಚಾರಪ್ರಿಯತೆಗೂ ವಿಮುಖರಾಗಿ, ಎಲ್ಲರೊಂದಿಗೆ ಬೆರೆತರೂ ಅಂತರ್ಮುಖತೆಯಲ್ಲಿ ಲೀನರಾಗಿ, ನಿಜವಾದ ಹೃದಯವಂತಿಕೆಯನ್ನು ಮೆಚ್ಚಿ, ಸ್ವಾರ್ಥ ಸಾಧನೆಗಾಗಿ ಯಾವ ಸಂಧಿಯನ್ನೂ ಮಾಡಿಕೊಳ್ಳದೇ ಕೊನೆಯವರೆಗೂ ಅದೇ ಧೀರತೆಯಲ್ಲಿ ಬದುಕಿದ ನನ್ನ ತಂದೆ ಏನು ಕೊಟ್ಟರು, ಏನನ್ನು ಬಿಟ್ಟು ಹೋದರು ಎಂದು ಆಲೋಚಿಸುತ್ತದೆ ಮನಸ್ಸು. ಅವರೊಡನಿದ್ದ ನಮಗೆ ಅವರ ನೇರ ಉಪದೇಶವಿಲ್ಲದೆಯೇ ಸರಿ–ತಪ್ಪು, ಕಾಳು–ಜೊಳ್ಳುಗಳ ಅರಿವು ಮೂಡುತ್ತದೆ. ಒಂದು ಆದರ್ಶವನ್ನು, ಮೌಲ್ಯವನ್ನು ಕಂಡು ಅನುಭವಿಸಿದ ಮನಸ್ಸಿಗೆ ಅದಕ್ಕಿಂತ ಕಿಂಚಿದೂನವಾದರೂ ಒಗ್ಗುವುದಿಲ್ಲ. ಈ ಒಗ್ಗದಿರುವಿಕೆ ವಿಮುಖತೆ ನಾವು ಜಾರದಿರುವಂತೆ ಕಾಯುತ್ತದೆ. ಆದರ್ಶವನ್ನು ಮುಟ್ಟಲಾಗದಿದ್ದರೂ, ಅದಲ್ಲದುದ್ದನ್ನು ಮೋಹಿಸುವ ದೌರ್ಬಲ್ಯದಿಂದಾದರೂ ನಮ್ಮನ್ನು ರಕ್ಷಿಸುತ್ತದೆ. ಈ ಅರಿವು ಮೂಡಿದಾಗ ನನ್ನ ನಿರ್ಮೋಹಿಯಾದ ತಂದೆಯ ಕೊಡುಗೆ ನಿಚ್ಚಳವಾಗುತ್ತದೆ. ಅವರ ಮಗಳಾಗಿ ಹುಟ್ಟಿಸಿದ್ದಕ್ಕೆ, ಅವರ ರಕ್ತವನ್ನು ನನ್ನಲ್ಲಿ ಹರಿಯಿಸಿದ್ದಕ್ಕೆ ವಿಧಿಗೆ ನಮೋ ಎನ್ನಬೇಕೆನಿಸುತ್ತದೆ.

ರಾಜೇಶ್ವರಿ ಲೋಕರೆ

ಪ್ರತಿಭಾ ಪುರುಷ ಪಂಡಿತ ಕವಿ ಪ್ರಾಚಾರ್ಯ ಶ್ರೀ ಬಿ.ಎಚ್. ಶ್ರೀಧರ

ಕವಿ, ವಿಮರ್ಶಕ, ವಾಗ್ಮಿ, ಪತ್ರಿಕೋದ್ಯಮಿ, ಪ್ರಾಚಾರ್ಯ, ಕನ್ನಡಾಂಗ್ಲ–ಸಂಸ್ಕೃತ ತ್ರಿಭಾಷಾ ಪಂಡಿತ, ಸಾಹಿತಿ ಶ್ರೀ ಬಿ.ಎಚ್. ಶ್ರೀಧರರ ನೆನಹು ನನಗೆ ನಿರಂತರ. ಸುತ್ತೆಲ್ಲ ಸ್ನೇಹಿತರು ಸೇರಿದಾಗ ಅವರ ನಿರರ್ಗಳ ಮಾತಿನ ಪ್ರವಾಹ ಹರಿದು ಹಲವಾರು ವಿಷಯುಗಳ ಕುರಿತು ವಿಶ್ಲೇಷಣೆ, ವಿಮರ್ಶೆ, ಹಾಸ್ಯ ಚಟಾಕಿಗಳನ್ನು ಒಳಗೊಂಡಿರುತ್ತಿದ್ದರಿಂದ ಅವರೊಡನೆ ಕಳೆದ ರಸನಿಮಿಷಗಳನ್ನು ನಾವು ಮರೆಯುವಂತಿಲ್ಲ. ಇಳಿ ವಯಸ್ಸಿನಲ್ಲಿಯೂ ತರುಣರನ್ನು ಮೀರಿಸುವ ಉತ್ಸಾಹ, ಮಾತು, ಮಾತು, ಮಾತು. ಎರಡು ಕ್ಷಣ ಸುಮ್ಮನೆ ಕುಳಿತ ಜನವಲ್ಲ. ಕ್ಷಣ ಕ್ಷಣಕ್ಕೂ ಚಿಂತನಶೀಲ ಚೈತನ್ಯಮೂರ್ತಿ. ನಮ್ಮಂಥವರಿಗೆ ಸ್ಫೂರ್ತಿ.

ಸಂಸ್ಕೃತದ ಜೊತೆಗೆ ಪಾಶ್ಚಿಮಾತ್ಯ ಸಾಹಿತ್ಯಗಳ ಅಭ್ಯಾಸದ ಫಲವಾಗಿ ನವನವೋನ್ವೇಷಶಾಲಿ ವೈಚಾರಿಕ ಪ್ರಚೋದನೆ ಅವರಿಗೆ ಮೈಗೂಡಿತು. ಹಳೆಗನ್ನಡ ಹೊಸಗನ್ನಡ ಕಾವ್ಯಗಳ ಪ್ರಭಾವ ಕಲಿಯುತ್ತಿರುವಾಗಲೇ ಆಗಿತ್ತು. ಕುಮಾರವ್ಯಾಸನ ವೀರವಾಣಿ, ಲಕ್ಷ್ಮೀಶನ ಗಿರ್ಗುಂಫ, ಮುದ್ದಣನ ಭಾಷಾಮೋಡಿ, ಅಂಬಿಕಾತನಯರ ಲಾಲಿತ್ಯ–ಮಾಧುರ್ಯ–ಚಾತುರ್ಯಗಳು. ಕುವೆಂಪುರವರ ಗಾಂಭೀರ್ಯ–ಭೀಮತ್ವ–ಭೂಮತ್ವಗಳು ಇವರ ಮನ ಸೆಳೆದವು. ಆಂಗ್ಲ ಕವಿಗಳಲ್ಲಿ ಶೇಕ್ಸ್‌ಪಿಯರ್‌ನ ಗಂಭೀರ ನಾಟಕೀಯ ಅಚ್ಚುಕಟ್ಟು, ಮಿಲ್ಟನ್‌ನ ನಾದಭಾರ, ವರ್ಡ್ಸ್‌ವರ್ತ್‌ನ ಸರಳತೆ, ಶೆಲ್ಲಿಯ ಕಲ್ಪನಾ ಭವ್ಯತೆ, ಕೋಲ್‌ರಿಜ್‌ನ ಸೂಚಕತೆಗಳು ಹೃದಯವನ್ನು ಅರಳಿಸಿ, ಭಾವಗೀತೆಗಳನ್ನು ರಚಿಸುವಲ್ಲಿ ಇವರಿಗೆ ಮಾರ್ಗದರ್ಶಿಯಾದವು. ಪದ್ಯ ರಚನೆ ಇವರಿಗೆ ನೀರು ಕುಡಿದಷ್ಟು ಸುಲಭದ ಮಾತಾಯಿತು. ನಿಂತಲ್ಲಿ ಕುಳಿತಲ್ಲಿ ಕವಿತೆ ಗೀಚಿದರು. ಶ್ರೀಧರರ ಜೀವನ ಕಷ್ಟ, ನಿಷ್ಠುರ, ಕ್ರೋಧ, ಕಾರ್ಪಣ್ಯಗಳನ್ನು ಎದುರಿಸಿದೆ. ಸಮಾಜದಲ್ಲಿ ಕಂಡುಬರುವ ಅಜ್ಞಾನ, ದಾರಿದ್ರ್ಯ, ಮತ್ಸರ, ಸಂತಾಪ, ರೋಷ ರೋಗಗಳು, ಪ್ರೇಮವೈರ–ಭಾವಗಳು ಬುಗ್ಗೆಯಾಗಿ ಹೊರಹೊಮ್ಮಿ ಇವರ ಕಾವ್ಯದಲ್ಲಿ ಅಮೃತ ವಾಹಿನಿಯಾಗಿ ಹರಿದಿವೆ.

ಶ್ರೀ ಶ್ರೀಧರರ ಸಾಹಿತ್ಯಕ್ಷೇತ್ರ ಬಹು ವಿಶಾಲ ಹಾಗೂ ವೈವಿಧ್ಯಮಯ. ಪದ್ಯ, ನಾಟಕ, ಪ್ರಬಂಧ, ವಿಮರ್ಶೆ, ಜೀವನ ಚರಿತ್ರೆ, ಇತಿಹಾಸ, ಮನೋವಿಜ್ಞಾನ, ತತ್ವಶಾಸ್ತ್ರ,

ರಾಜನೀತಿ, ಮಕ್ಕಳ ಸಾಹಿತ್ಯ ಇತ್ಯಾದಿ ಅಪಾರ ಪಾಂಡಿತ್ಯದ ಸುಮಾರು ಮೂವತ್ತೈದು ಪುಸ್ತಕಗಳು ಮಹತ್ತು–ಬೃಹತ್ತುಗಳಲ್ಲಿ ಇವರ ಹಿರಿತನವನ್ನು ಪ್ರದರ್ಶಿಸಿವೆ.

ಶ್ರೀ ಶ್ರೀಧರರ ಶೈಲಿ ಕನ್ನಡ–ಸಕ್ಕದಗಳನ್ನು ಜಕ್ಕುಲಿಸುವ ಜವ್ವನದ ಚೈತನ್ಯಶಾಲಿ ಪೆಂಪಿನಿಂದೊಡಗೂಡಿದೆ. ಸಂಸ್ಕೃತ ಶಬ್ದಗಳ ಬಳಕೆ ಹೆಚ್ಚಿರುವುದರಿಂದ ಸಾಮಾನ್ಯ ಓದುಗನಿಗೆ ಒಮ್ಮೆಲೆ ಭಾಷೆಯ ಭಾವದ ಅರ್ಥವಾಗದೇ ಹೋಗಬಹುದು. ಇವರ ಕವನದ ಹೊರ ಶಬ್ದ ಸಿಪ್ಪೆಗಳನ್ನು ಸುಲಿದು, ಶೈಲಿಯ ಕರಟವನ್ನು ಒಡೆದು ಕಾವ್ಯದ ತಿರುಳನ್ನು ಸವಿದಾಗ ತೆಂಗಿನ ಎಳೆ ನೀರಿನಂತೆ ರುಚಿಕರ, ಆಹ್ಲಾದಕರ ಹಾಗೂ ಆರೋಗ್ಯಕರ. ಶ್ರೀಧರರ ಅನೇಕ ಲೇಖನಗಳು ಇವರ ನಿರ್ಭೀತ ವ್ಯಕ್ತಿತ್ವವನ್ನು ತೆರೆದು ತೋರಿಸುತ್ತವೆ.

ಶ್ರೀಧರರಿಗೆ ಸಭೆ ಸಮಾರಂಭಗಳಲ್ಲಿ ಮನ್ನಣೆಯ ಮಣೆ, ಮಾನ–ಸನ್ಮಾನಗಳು ದೊರೆತಿವೆ. ಉತ್ತರ ಕನ್ನಡಿಗರೆಲ್ಲರ ವಾತ್ಸಲ್ಯದ ಮೂರ್ತಿಯಾಗಿದ್ದ ಇವರಿಗೆ ೧೯೭೪ರಲ್ಲಿ ಯಲ್ಲಾಪುರದಲ್ಲಿ ಜರುಗಿದ ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯಿತ್ತು ಉತ್ತರ ಕನ್ನಡದ ಜನ ಗೌರವ–ಕೃತಜ್ಞತೆಗಳನ್ನು ಸೂಚಿಸಿದರು.

ನನ್ನ ಹಾಗೂ ಶ್ರೀಧರರ ಒಡನಾಟ ಅತ್ಯಂತ ಆತ್ಮೀಯವಾಗಿತ್ತು. ನನ್ನ ನಾಟ್ಯಾಭಿನಯ ಕಲೆಯನ್ನು ಮತ್ತು ನಾಟಕಗಳನ್ನು ತುಂಬಾ ಮೆಚ್ಚಿದ್ದರು. ನನ್ನನ್ನು 'ನಟ ನಾಯಕ'ನೆಂದೇ ಆಗಾಗ ಪ್ರೀತಿಯಿಂದ ಕರೆಯುತ್ತಿದ್ದರು. ಕುಮಟೆಯಲ್ಲಿ ನನ್ನ ಪಕ್ಕದ ಮನೆಯಲ್ಲಿ ಇರುತ್ತಿದ್ದ ಶ್ರೀಧರರು ತಾಸು–ತಾಸು ನನ್ನೊಡನೆ ಹರಟುತ್ತಿದ್ದರು. ಅವರ ಜ್ಞಾನದ ರಸದೂಟ ನನಗಾಗುತ್ತಿತ್ತು. ಶ್ರೀಧರರ ಸಂಗ ಶ್ರೀಗಂಧದಂತಿತ್ತು. ಭರತನಾಟ್ಯದ ಶಾಸ್ತ್ರದ ಶ್ಲೋಕಗಳನ್ನು ಅರ್ಥೈಸುವುದರಲ್ಲಿ ಹೆಚ್ಚು ಸಹಾಯ ಅವರಿಂದ ನನಗಾಗುತ್ತಿತ್ತು. ನನ್ನ ನಾಟಕ ಪ್ರಯೋಗದಲ್ಲಿ ಅವರನ್ನು ದುಡಿಸಿಕೊಂಡಿದ್ದುಂಟು. ನನ್ನ ಒತ್ತಾಯಕ್ಕೆ ಮಣಿದು ಒಂದು ಸಲ ನಾಟಕ ರಂಗದಲ್ಲಿ ಬಣ್ಣ ಬಳಿದು ಪಾತ್ರ ತೊಟ್ಟು ನನ್ನೊಡನೆ ಅಭಿನಯಿಸಿದ್ದುದು ನನ್ನ ನೆನಪಿನ ಸುಳಿಯಲ್ಲಿ ಇಂದಿಗೂ ಹಸಿರಾಗಿಯೇ ಇದೆ. ಹೀಗೆ ಎಲ್ಲರೊಳಗೊಂದಾಗಿ ಬೆರೆತು ಬಾಳುವ ಒಳ್ಳೆತನ ಅವರದಾಗಿತ್ತು. "ಒಳ್ಳೆತನವೇ ಸೌಂದರ್ಯ, ಸತ್ಯ" ಎಂಬ ಸೂತ್ರವನ್ನು ನಂಬಿದ ದಾರ್ಶನಿಕ ಕವಿಯಾದ ಇವರು ಪದವಿ–ಪ್ರಶಸ್ತಿಗಳಿಗಿಂತ ಸಾಹಿತ್ಯ–ಸಂಸ್ಕೃತಿಗಳನ್ನು ಸಹೃದಯರಿಗೆ ನೀಡಿ ತಣಿಸುವುದರಲ್ಲಿಯೇ ತೃಪ್ತಿ ಸಮಾಧಾನ ಕಂಡರು. ನೈತಿಕ ಬಲದಲ್ಲಿ ಶ್ರದ್ಧೆ ಇರಿಸಿಕೊಂಡು ಬಹು ಜನರಿಗೆ ಗುರುವಾಗಿ ನಡೆದರು.

ಗೋಪಾಲಕೃಷ್ಣ ಪಿ. ನಾಯಕ

ಶ್ರೀಧರ ಸ್ಮರಣೆ

"ಕವನಗಳನ್ನು ಹಾಕಲೇಬೇಡಿ. ಅವನ್ನು ಬರೆದವರು ಮಾತ್ರ ಓದ್ತಾರೆ" ಎಂಬ ನಿರ್ದಾಕ್ಷಿಣ್ಯ ಸಲಹೆ ಕೊಟ್ಟವರು ಪ್ರೊ.ಬಿ.ಎಚ್. ಶ್ರೀಧರರು.

ಸಂದರ್ಭ: ೧೯೮೯ರಲ್ಲಿ ನಾನು 'ಶಿರಸಿ ಸಮಾಚಾರ'ದ ಸಂಪಾದಕತ್ವ ವಹಿಸಿಕೊಂಡು ಪತ್ರಿಕೆಗೆ ನಿಯಮಿತ ಬರಹಗಳಿಗಾಗಿ ವಿನಂತಿಸಿಕೊಳ್ಳಲು ಶಿರಸಿಯ ಅವರ ಮನೆಗೆ ಹೋಗಿದ್ದೆ. ಪತ್ರಿಕೆ ಯಾವ ರೀತಿ ಹೊರಬರುತ್ತದೆ ಎಂಬ ಮಾಹಿತಿ ಕೇಳಿದಾಗ ೩ನೇ ಪುಟದಲ್ಲಿ ಕಥೆ, ಕವನಗಳು..." ಎಂದು ವಿವರಿಸುತ್ತಿದ್ದಾಗ, ಅವರು ಥಟ್ಟನೆ ಮೇಲಿನಂತೆ ಹೇಳಿದರು.

ಸ್ವತಃ ಹೆಸರಾದ ಕವಿಯಾಗಿದ್ದ ಅವರ ಮಾತಿನಲ್ಲಿ ವಿಶಾದವೂ ಇತ್ತೆನೋ; ನವ್ಯ ಕವನಗಳನ್ನು ಅರ್ಥೈಸಿಕೊಳ್ಳಲಾಗದ ಓದುಗರ ದೃಷ್ಟಿಯಿಂದ ಸತ್ಯವೂ ತುಂಬಿತ್ತಲ್ಲ!

ನಾನು ಶ್ರೀಧರರ ಭೇಟ್ಟಿಗೆಂದು ಹೊರಟಾಗಲೇ ಕೆಲವರು, 'ಅವರೊಬ್ಬ ಅಹಂಕಾರಿ, ಮುಂಗೋಪಿ' ಎಂದು ಹೆದರಿಸಿದ್ದರು. ಸ್ವಲ್ಪ ಅಂಜುತ್ತಲೇ ಅವರ ಮನೆಯ ಮೆಟ್ಟಿಲು ಹತ್ತಿದ ಮೇಲೆ ಹೆದರಿಕೆ ಹಾರಿಹೋಯಿತು. ತುಂಬಾ ವಿಶ್ವಾಸದಿಂದ ಆದರದಿಂದ ಮಾತನಾಡಿಸಿ, ಚಹಾ ಕುಡಿಸಿ, ಎರಡು ತಾಸಿಗೂ ಹೆಚ್ಚು ಸಮಯ ನನ್ನೊಡನೆ ಕಳೆದರು. ಪತ್ರಿಕೆಯ ಬಗ್ಗೆ ಉಪಯುಕ್ತ ಸಲಹೆಗಳನ್ನು ಕೊಟ್ಟರು. ಅಂಕಣಕಾರರಾಗಲು ಒಪ್ಪಿ ಅದರಂತೆ ನಡೆದುಕೊಂಡರು. ಇಂಥ ಸಜ್ಜನರ ಬಗ್ಗೆ ಎಂಥ ಅಪಪ್ರಚಾರ, ಏಕೆ ಹೀಗೆ? ಎನಿಸಿತು.

ಅವರದೊಂದು ಪುಸ್ತಕವನ್ನು ಕೊಟ್ಟು ಹರಸಿ ಬೀಳ್ಕೊಟ್ಟಿದ್ದರು. ನಂತರದ ಅವರ ಭೇಟ್ಟಿಗಳಿಂದ ಒಂದು ವಿಷಯ ನನಗೆ ಮನದಟ್ಟಾಗಿತ್ತು. ಸಾಕಷ್ಟು ಬಿಡುವಿಲ್ಲದಿದ್ದರೆ ಶ್ರೀಧರರ ಭೆಟ್ಟಿಗೆ ಹೋಗಬಾರದು ಎಂಬುದು. ಸಾಹಿತ್ಯ ಮತ್ತು ಇತರ ವಿಷಯಗಳ ಬಗ್ಗೆ ತುಂಬಾ ಕಳಕಳಿಯಿಂದ ಅವರು ತಮ್ಮ ವಿಚಾರಗಳನ್ನು ಹೊರಹಾಕುತ್ತಿದ್ದರು. ಯುವ ಪೀಳಿಗೆಯ ಬಗ್ಗೆ ಸ್ವಲ್ಪ ಬೇಸರವೂ ವ್ಯಕ್ತವಾಗುತ್ತಿತ್ತು. ಕೇಳುವವರಿಗೆ ಬೇಸರ ಬಾರದಂತೆ ಅವರ ಮಾತುಗಳು ಆಸಕ್ತಿದಾಯಕವಾಗಿರುತ್ತಿದ್ದವು. ಅವರೊಡನೆ ಮಾತುಕತೆಯೆಂದರೆ ಸಮಯದ ಸದುಪಯೋಗ ಎಂದೇ ನಾನು ನಂಬಿದ್ದೇನೆ.

ಪ್ರೊ. ಶ್ರೀಧರರ ನಿಧನಾನಂತರ ರಾಜಶೇಖರ ಹೆಬ್ಬಾರರು ಪತ್ರಿಕೆಯ ಬಗ್ಗೆ ಆದರವನ್ನೇ ತೋರಿಸಿ, ದಿ. ಶ್ರೀಧರರ ಕೆಲವು ಹಸ್ತಪ್ರತಿ ಲೇಖನಗಳನ್ನು ಪ್ರಕಟಣೆಗೆ ನೀಡಿ ಸಹಕರಿಸಿದರು.

ಶ್ರೀಧರರ ಯೋಗ್ಯತೆಯನ್ನು ಗುರುತಿಸಿ ಗೌರವಿಸುವ ಕಾರ್ಯವನ್ನು ನಮ್ಮ ನಾಡು ಸರಿಯಾಗಿ ಮಾಡಲಿಲ್ಲ ಎಂಬ ಕೊರಗು ಮಾತ್ರ ನನ್ನಲ್ಲಿನ್ನೂ ಇದ್ದೇ ಇದೆ.

ಮಂಜುನಾಥ ಬೆಳಖಂಡ

ಬಿ. ಎಚ್.ಶ್ರೀ.: ಮೂರು ಕವಿತೆಗಳು

೧. ಶ್ರೀಧರಾರ್ಪಣ

ಬ್ರಹ್ಮ ರಂಧ್ರದವರೆಗೆ ಚಾಚಿಕೊಂಡಿರುವ ಹಣೆ:
ಸಹಜಗುಹೆಯಲಿ ಗುಹೇಶ್ವರನಂಥ ಕಣ್ಣುಗಳು;
ನೋವು ಸಂಕಟ ಜಗಿದು ಉಗುಳುರಸ ತಂಬಾಕು;
ಮೇಜು ಗಡಗುಟ್ಟಿಸುವ ಯಕ್ಷಗಾನದ ಮುಷ್ಟಿ

ಶಾಸ್ತ್ರೇತಿಹಾಸಗಳು ಹುರಿಗಟ್ಟಿದಂತೆ
ಬರೆಯಬಲ್ಲವನು,
ವಿಶ್ವಕೋಶವೇ ಬಾಯ್ತೆರೆದಂತೆ
ಹುರಿದು ಅರಳಬಲ್ಲವನು,
ಪೂರ್ವಪಶ್ಚಿಮ ದಂಡೆಗಳ ಮೇಲೆ ಕಾಲಿಟ್ಟು
ತುರೀಯ ಸೂರ್ಯನಿಗೆ ತಲೆಬಾಗುವವನು,
ಕಾಮಾರ್ಥ ಕನ್ನಡಕಧಾರಿಗಳ ಬೆವರಿಳಿಸಿ
ಸ್ವಚ್ಛ ಕಣ್ಣಿನ ಬಗ್ಗೆ, ನಿಜದ ಬಣ್ಣದ ಬಗ್ಗೆ
ಸ್ಫಟಿಕದ ಶಲಾಕೆಯಿಂದ ಕಣ್ತೆರೆಯುವವನು.

ಭರತನದೆ ರಸಮೌಲ್ಯ, ಪಾಣಿನಿಯ ವಾಕ್–ಕರಣ,
ಚಾಣಕ್ಯ ನಯನೀತಿ, ಶಂಕರನ ತತ್ವಮತಿ–
ಬರೀ ಅದ್ವಿತೀಯರ ಬಂಟ,
ವರಕವಿಯ ನೆಂಟ, ಅತ್ತಕಡೆ ಹೊಂಟ.

ಹುಟ್ಟಿದವರಿಗೆ ಸಾಯುವುದೇ ಪ್ರಕೃತಿ
ಎನ್ನುವ ವಶಿಷ್ಠರೇ ಹೊರಟುಹೋದರೆ
ಆತ್ಮಹತ್ಯೆಯ ಗುಂಗಿನ ಅಜನಿಗೆ
ಬುದ್ಧಿ ಹೇಳುವವರಾರು?
'ಅಜನಲ್ಲ, ಅಮರ' ಎಂದು ಛೇಡಿಸುವವರಾರು?
ನಿನ್ನ ದೀಕ್ಷಾಮಂತ್ರ ನೆನಪು ಮಾಡುವವರಾರು?
'। ಜೀವೇಮ ಶರದಃ ಶತಮ್ ।' (೧೯೮೦)

೨. ಶ್ರೀಧರ ಸ್ಮೃತಿ

ಶ್ರೀಧರರ ಸಾಹಿತ್ಯ ಪೂರ್ತಿ ಓದದ ನಾನು
ಸಮೀಕ್ಷೆಯನು ಹೇಗೆ ಮಾಡಬೇಕು?
'ಹೂಂ' ಎಂದ ಕಾರಣಕೆ ಲೇಖನದ ಬದಲಿಗೆ
ಕವಿತೆಯನ್ನಾದರೂ ಓದಬೇಕು.

ಓದಿದ್ದು ಬರೆದದ್ದು ಸಾಕಿನ್ನು ಮಾರಾಯ
ಮನೆ ಕಟ್ಟಬೇಕಿನ್ನು ಎನ್ನುತ್ತಾರೆ ಗುರುಗಳು
ಮನೆ ನಡೆಸುವುದು Microeconomics
ದೇಶ ನಡೆಸುವುದು Macroeconomics

ಯಾವ ಬ್ಯಾಂಕಿನವರು ಸಾಲ ಕೊಡುತ್ತಾರೆ ಕೇಳು
ನಿನ್ನದೇ ಪ್ಲಾನ್ ಒಂದು ತಯಾರು ಮಾಡು
ಉಸುಕು, ಕಲ್ಲು, ಸಿಮೆಂಟು, ಕಬ್ಬಿಣ
ಏನೆಲ್ಲಾ ಬೇಕೆಂದು ಪಟ್ಟಿಮಾಡು.

ಇದು ಮೂರ್ತಿ ಶಿಲ್ಪ ಅಲ್ಲ, ವಾಸ್ತು ಶಿಲ್ಪದ ಮಾತು
ಭಾವಗೀತೆಯದಲ್ಲ, ಮಹಾಕಾವ್ಯದ ಧಾತು
ಅನ್ನ ಬ್ರಹ್ಮನ ಅಪ್ಪ ನಾದಬ್ರಹ್ಮ
ನಾದ ಬ್ರಹ್ಮನ ಅಪ್ಪ ಶಬ್ದಬ್ರಹ್ಮ.

ಇದು ಬ್ರಹ್ಮಪಿಂಡ,
ಬನವಾಸಿ ಮಯೂರನ ಹಾಗೆ
ಸಾಮ್ರಾಜ್ಯ ಶಾಹಿಗಳನ್ನು ಎದುರಿಸಲಿಕ್ಕೆ
ಗೆರಿಲ್ಲಾ ಯುದ್ಧವೇ ಸರಿ
ಶಿವಾಜಿಯ ಎದುರು ಔರಂಗಜೇಬನ ಆಟ
ನಡೆಯಲಿಲ್ಲ.
ಚಂದ್ರಗುಪ್ತ ಮೌರ್ಯ ಹಜಾಮನಲ್ಲ.

ಶಿವಾಜಿಗೆ ಯಾರ್‍ಯಾರು ಏನೆಲ್ಲ ಅಂದಿದ್ದಾರೆ
ಅಂಬೇಡ್ಕರನಿಗೆ ಗೊತ್ತಿತ್ತು.

ಯಾರ ಸ್ಮೃತಿ ತಲೆಯಲ್ಲಿ ಇರುತ್ತದೆ
ಅದನ್ನು ಸುಡಲು ಸಾಧ್ಯವಿಲ್ಲ

ಆದಷ್ಟು ಬೇಗ ಗುದ್ದಲಿ ಪೂಜೆ ಮಾಡು
ಕಟ್ಟಲು ಶುರು ಮಾಡಿದರೆ
ಸಾವಿರ ಕೈಗಳು ಸಹಕಾರ ನೀಡುತ್ತವೆ.

ಕವಿತೆ ಕಟ್ಟಿದ ಹಾಗೆ ಮನೆ ಕಟ್ಟಬೇಕು
ಇದು ಕಟ್ಟಿದ್ದಲ್ಲ, ಹುಟ್ಟಿದ್ದು ಎಂದೆನಿಸಬೇಕು
ಹುಟ್ಟಾ ಕವಿಗೆ ಶಬ್ದಗಳ ಬರಗಾಲ ಇರುವುದಿಲ್ಲ
ಕನಸುಕಾಣುವವರಿಗೆ ಕಂಗಳೆರಡೂ ಸಾಲುವುದಿಲ್ಲ

ಶ್ರೀಧರನ ಸ್ಮೃತಿಯಲ್ಲಿ ಬಡತನದ ಅಳುಕಿಲ್ಲ
ಕಲ್ಲಿನರೆಗಳ ಒಳಗೆ ಬಂಗಾರದ ಗೆರೆ
ಮಿರಿಮಿರಿ ಮಿಂಚುತ್ತದೆ
'ಸುವರ್ಣಂ ಅಮೇಧ್ಯಾದಪಿ' –
ಇದು ಮನುಸ್ಮೃತಿಯ ಭಾಷೆ
ಅವನ ನಂತರದವನು ಯಾಜ್ಞವಲ್ಕ್ಯ.

ತಿರುಪತಿಯ ಹುಂಡಿಯಲ್ಲಿ
ಸುವರ್ಣ ವೃಷ್ಟಿಯಾದರೆ
ಯಾವ ಜಾತಿಯವರದೆಂದು
ತಿಮ್ಮಪ್ಪನಿಗೂ ತಿಳಿಯುವುದಿಲ್ಲ.
ತಿರುಪತಿ ತಿಮ್ಮಪ್ಪಾಣಿ
ಗೋವಿಂದಾಣಿ ಗೋವಿಂದಾSS
ಗೋSSವಿಂದ

೩. ಗ್ರಂಥ ಸಾಹೇಬ

ಪುಸ್ತಕದೊಡನೆ ಮಾತನಾಡಿದವ
ಪುಸ್ತಕದೊಳಗೆ ಕುಂತಾನ।
ಲೇಖನವೇಕೆ ಕವಿತೆಯ ಬರೆಯೋ
ಕವಿಯಲ್ಲವೇ ನೀ ಅಂತಾನ । ಕವಿಯಲ್ಲವೇ ನೀ
ಅಂತಾನ ॥

ಭಾರತೀಯನಿವ ಶಿಲ್ಪ ಶಾಸ್ತ್ರದವ
ಕಲ್ಲು ಹೃದಯವಹುದೆ ।
ಮೂರ್ತಿಗಳೆದ್ದು ಶಿಲ್ಪಿಯ ಬಗ್ಗೆ
ಮಾತನಾಡಬಹುದೇ । ಸ್ವಾಮಿ । ಮಾತನಾಡಬಹುದೆ ॥

ನಮ್ಮ ಹಿರಿಯರು ನಮ್ಮ ಗುರುಗಳು
ಎಂತಿದ್ದರು ಅವರು ।
ನಮ್ಮ ಎಳೆತನ ಅವರ ಗೆಳೆತನ
ಎನ್ನುತ್ತಿದ್ದರವರು । ಸ್ವಾಮಿ । ಎನ್ನುತ್ತಿದ್ದರವರು ॥

ನಮ್ಮ ನಾಡಸಿರಿ ನಮ್ಮ ನುಡಿಯ ಸಿರಿ
ನಾಡಿ ಮಿಡಿತವೇನು ।
ನಮ್ಮ ಕಾಡಸಿರಿ ನಮ್ಮ ಮೋಡಸಿರಿ
ಮಳೆಯ ಜಡಿತವೇನು । ಸ್ವಾಮಿ । ಮಳೆಯ
ಜಡಿತವೇನು ॥

ನಮ್ಮ ನೌಕರಿಗೆ ನಮ್ಮ ಚಾಕರಿಗೆ
ಮೆಚ್ಚಬಹುದೇ ಶಿವನು ।
ನಮ್ಮ ಸಾಧನೆಗೆ ನಮ್ಮ ಶೋಧನೆಗೆ
ಒಲಿಯಬಹುದೇ ಅವನು । ಸ್ವಾಮಿ । ಒಲಿಯಬಹುದೇ
ಅವನು ॥
ತಪ್ಪು ಹುಡುಕುವವ ಗುರುವೇ ಅಲ್ಲ
ತಿದ್ದುವವನೇ ಗುರು ।
ತಪ್ಪು ಮಾಡದವ ಮನುಜನೆ ಅಲ್ಲ
ತಿದ್ದಿಕೊಳುವುದರಿವು । ಸ್ವಾಮಿ । ತಿದ್ದಿಕೊಳುವುದರಿವು ॥

ಚಂದ್ರಗೆ ಬಿತ್ತು ಗುರುವಿನ ಶಾಪ
ಕಚಗು ತಪ್ಪಲಿಲ್ಲ ।
ನಚಿಕೇತನಿಗೆ ಯಾವ ಭೀತಿಯಿದೆ
ಯಮನು ಸೋತನಲ್ಲ । ಸ್ವಾಮಿ । ಯಮನು ಸೋತನಲ್ಲ ॥

ಶ್ರೀಧರ ಚರಿತೆಯ ಒಳಗಡೆ ನನ್ನ
ಹೆಸರು ಕಾಣಲಿಲ್ಲ ।
ಹೆಸರು ಬಯಸದೇ ಹೆಸರು ಮಾಡದೆಯೆ
ಅಮರನಾದನಲ್ಲ । ಸ್ವಾಮಿ । ಅಮರನಾದನಲ್ಲ ॥

'ಜೀವಯಾನ'ವೇ ಭಾರತ ಭಾರ
ದೇವಗೆಲ್ಲ ಹಗುರ ।
ಜೀವಮಾನವೇ ಭಾರತ ಸಾರ
ಜನರಿಗಿಲ್ಲ ನದರ । ಸ್ವಾಮಿ । ಜನರಿಗಿಲ್ಲ ನದರ ॥

ಎಲ್ಲ ಗುರುಗಳು ತೀರಿ ಹೋಗುವರು
ಉಳಿವನೆ ಸಾಹೇಬ ।
ಗುರುವೇ ಗ್ರಂಥದ ಸಾಹೇಬರು ಖರೆ
ಗ್ರಂಥ ಸಾಹೇಬ । ಅಂತಿಮ ಗ್ರಂಥ ಸಾಹೇಬ ॥
(೧೯೯೬)

ಎಚ್.ಆರ್. ಅಮರನಾಥ

ಹೈವೆ ಬೆಳಕಿಗೆ

ಸೂಟು ಬೂಟು ಟೈ ಕನ್ನಡಕ ಧರಿಸಿ
ಟಪ್ ಟಪ್ ಟಪ್ ಟಿಪ್ ಟಾಪ್ ಆಗಿ
ಥೇಟು ಆಂಗ್ಲ ಅಧಿಕಾರಿ ಹಾಗೆ
ಈ ಸಂಸ್ಕೃತ ಪ್ರೊಫೆಸರರು ನಮ್ಮ–
ನೆಗೆ ಬಂದರೆ ಹಸಿ ಹಸಿ

ಅವಲಕ್ಕಿ ಬತ್ತವನೊಲೆಬಂಡಿಗಿಟ್ಟು ಹುರಿದಂತೆ
ಚಟಪಟ ಚಟಪಟ ಇಡಿದಿನ ಮೆತ್ತಿ ಮೇಲೆ
ಮನು, ಭರತ, ಶಂಕರ, ಕಾಳಿದಾಸ
ರಸೆಲ್, ಬ್ರೂಕ್ಸ್, ಶೇಕ್ಸ್‌ಪಿಯರ್, ಎಲಿಯೆಟ್
ಶ್ರೀ, ಮಾಸ್ತಿ, ಬೇಂದ್ರೆ, ಪುಟ್ಟಪ್ಪ, ಕಾರಂತ
ಉವಾಚೋ ಉವಾಚ
ರಾತ್ರಿ ಮಲಗುವಾಗಲೂ
ಬೆಳಿಗ್ಗೆ ಕಣ್ ಬಿಟ್ಟಾಗಲೂ
ನಮಗೆ ನಿಬ್ಬೆರಗೋ ಬೆಳಗು !

ಊಟ, ಆಸರು, ಸ್ನಾನದಲ್ಲಿ
ಯಾರೆ ಸಿಕ್ಕರು ಸಾಕು, ಸುರುವಾತು ಮಾತು
ಎಳೆಮಾಣಿ, ಮುದಿ ಅಜ್ಜ ಭೇದ ಭಾವವೇ ಇಲ್ಲ
“ಇಷ್ಟಿಷ್ಟೂ ಸೊಕ್ಕಿಲ್ಲ, ಎಷ್ಟು ಸರಲ, ಉದಾರ,”
ಹಾಗಾಗೆ ಬೇಡ ಬೇಡವೆಂದರೂ “ಇರಲಿ, ಕವಳ ಹಾಕಿ,”
“ಮತ್ತೆ ಬನ್ನಿ” ಎಂದು ಬಟ್ಟಲು ತುಂಬಾ ಅಡಿಕೆ
ಬೊಗಸೆ ತುಂಬಾ ಯಾಲಕ್ಕಿ ಉಪಚಾರ
ಮೇಲೆ ಮನಃಪೂರ್ವಕ ನಮಸ್ಕಾರ
ಈ ಕದಂಬಾಭಿಮಾನಿಗೆ
ಜ್ಞಾನಿಗೆ, ಜ್ಞಾನದಾನಿಗೆ.

ಮಾತಿನಲ್ಲಿ ಮಲ್ಲಿಗೆ ಮಾಲೆಯಂತೆ ಕಾಂತಿ, ಸೊಗಸು;
ಲೇ 'ಖನಿ'ಯೋ ಕವಲುನಾರ ಹಗ್ಗ ಹೊಸೆದ "ಸೂತ್ರ"ವು!
ಎಂ.ಎ. ಕಟ್ಟೋ ಎಳೆಯರಿಗೆಲ್ಲ ಬಹುಶಃ ಇಂಥದೇ
ಅಗತ್ಯವೋ....?
ಎಂಬ ಸಮಜಾಯಿಸಿ ಆಗ ನನ್ನೊಳಗೇ ನ-ನಗೆ!

ಒಂದು ಸಂಜೆ ಕುಮಟೆಯಲ್ಲಿ "ಮೇಘನಾದ" ದೊರಕಲು
ಆಹಾ! ಎಂಥ "ಅಮೃತಬಿಂದು"!
"ಮುತ್ತುರತ್ನ" "ಗೀತ"ವೂ.
ಯಾಕೆ, ಎಲ್ಲಿ, ನಂದಿಹೋಯ್ತು
ಆ 'ಶ್ರೀಧರ' "ರಸಯಜ್ಞ"ವು?

ಎಲೆಯಡಿಕೆ ಹಿಂದೆ ಬಂದ ತಂಬಾಕು ಬಾಕು ಹಾಕಿ
ಎಲೆಯಡಿಕೆ ತಳ್ಳಿ ಹಾಕಿ ತಾನೇ ತಾನು ಮೆರೆಯುವಂತೆ
ಕವಿಯ ಹಿಂದೆ ಮುಂದೆ ಸುಳಿದ
ಪಂಡಿತ, ವಿಮರ್ಶಕ
ಕೆಡವಿ ಕವಿಯ ಆ –
ಕ್ರಮಿಸಿದನೋ
ಆ-ಸ್ಥಾನವ?

ಬದುಕೆಂದರೆ ಸದಾ ಸದ್ಯೋ
"ಜಾತವೇದ"

ಪ್ರಜ್ಞೆಯೆಂದು ನುಡಿದ, ಕಡೆದ, ನಡೆದ ಹೈವೆ
ಬೆಳಕಿಗೆ

ಇದೋ ನಮನ
ಅಭಿವಾದನ.

ಟಿ.ಜಿ. ಭಟ್ಟ, ಹಾಸಣಗಿ

ಕನ್ನಡ ಸಾಹಿತ್ಯರತ್ನ

ಓ ಕನ್ನಡ ಸಾಹಿತ್ಯ ರತ್ನ
ನಿನ್ನ ಸಾಹಿತ್ಯ ಬೆಲೆಬಾಳ್ವ ಮುತ್ತು ರತ್ನ
ಕವಿ ಕುಲತಿಲಕ ಕನ್ನಡದ ಮುಕುಟಮಣಿ
ದೇದೀಪ್ಯ ಮಾನ ಮಾನ್ಯ –

ಮಂಜು ಸುರಿದಂತೆ ತಂಪೆರಚಿ ಬಿತ್ತು
ಕನ್ನಡದ ನೆಲದಲ್ಲಿ ಮಂಜುಗೀತ
ಅಮೃತ ಬಿಂದುವಿನಂತೆ ಹಿರಿದಾದ ಕಾವ್ಯ
ನೀನಿತ್ತ ಜಾತ ವೇದ

ಬೇತಾಳಗಳ ಕುಣಿತವನ್ನೇ ನೋಡುತಿರುವ
ಭಾಷಣ ಭೈರವರ ಒಡ್ಡೋಲಗದಲ್ಲಿ
ತಿಳಿಯದಾದರು ಸಂಸ್ಕೃತ ಸುಭಾಷಿತದ ಅರ್ಥ
ಕುಂದಮಾಲೆ ಹೊಸಗನ್ನಡ ಸಾಹಿತ್ಯ ಹೊಳಪಿನಲಿ
ನವ್ಯ ಕಾವ್ಯಗಳೆಲ್ಲ ಅರ್ಥ ಶೂನ್ಯ ವ್ಯರ್ಥ

ನಿನ್ನೆಲ್ಲ ಕಾವ್ಯ ಚಿರಕಾಲ ಸತ್ಯ
ಪಾಂಡಿತ್ಯ ಪೂರ್ಣವೆಲ್ಲ
ಸಾವಿಲ್ಲವದಕೆ ಬೆಳಗುವುದು ಮುಂದು
ಬೆಳಕೀವ ದಾರಿದೀಪ

ಕೊಟ್ಟು ಹೋದೆ ಗುರುವೇ ಅದನ್ನೆಲ್ಲ ನಮಗೆ
ಭಾರತೀಯ ನಾಗರೀಕತೆಗೆ ಮನುವಿನಾ ಕೊಡುಗೆಯಂತೆ
ವಿಶಾಲ ನೆರಳೀವ ಹೆಮ್ಮರವು ನೀನಿರಲು
ನಮಗಿಲ್ಲ ಎಂದೂ ಚಿಂತೆ

ಜಿ.ವಿ. ಕೊಪ್ಪಲತೋಟ

ಅನುಬಂಧಗಳು

ಪ್ರೊ.ಬಿ.ಎಚ್.ಶ್ರೀಧರ : ಜೀವನದ ಮುಖ್ಯ ಘಟನೆಗಳು

ಜನನ :	೨೪ ಏಪ್ರಿಲ್ ೧೯೧೮
	ಬಿಜೂರು ಗ್ರಾಮ (ಅವಿಭಜಿತ ದಕ್ಷಿಣ ಕನ್ನಡ)ದ ಬವಲಾಡಿಯಲ್ಲಿ
ತಂದೆ :	ಸೀತಾರಾಮ ಹೆಬ್ಬಾರ
ತಾಯಿ :	ನಾಗಮ್ಮ
ತಂಗಿಯರು :	ರುಕ್ಮಿಣಿ, ಸುಶೀಲ, ರಮ
ಶಿಕ್ಷಣ	
ಪ್ರಾಥಮಿಕ :	ಬಿಜೂರಿನ ಪ್ರಾಥಮಿಕ ಶಾಲೆಯಲ್ಲಿ
ಮಾಧ್ಯಮಿಕ :	ಮಿಡಲ್ ಸ್ಕೂಲ್, ಸೊರಬ (೩ ವರ್ಷ) ಮಿಡಲ್ ಸ್ಕೂಲ್, ಸಾಗರ (೧ ವರ್ಷ)
ಪ್ರೌಢ :	ಮುನಿಸಿಪಲ್ ಹೈಸ್ಕೂಲ್, ಸಾಗರ, ಎಸ್.ಎಸ್.ಎಲ್.ಸಿ. ಶಿವಮೊಗ್ಗ ಕೇಂದ್ರದಲ್ಲಿ
ಇಂಟರ್ ಮಿಡಿಯಟ್:	ಮೈಸೂರಿನ ಯುವರಾಜ ಕಾಲೇಜಿನಲ್ಲಿ
ಬಿ.ಎ. (ಆನರ್ಸ್) :	ಮೈಸೂರಿನ ಮಹಾರಾಜ ಕಾಲೇಜಿನಲ್ಲಿ (೧೯೪೧)ರಲ್ಲಿ ರಾಜ್ಯಕ್ಕೆ ಮೊದಲಿಗನಾಗಿ ಉತ್ತೀರ್ಣ ಪೂರ್ಣ ಕೃಷ್ಣರಾವ್ ಬಂಗಾರದ ಪದಕ ನವೀನಂ ರಾಮಾನುಜಾಚಾರ್ಯ ಬಂಗಾರದ ಪದಕ 'ಕವಿಯೂ ವಿಜ್ಞಾನಿಯೂ' ಪ್ರಬಂಧಕ್ಕೆ ಹೊನ್ನಸೆಟ್ಟಿ ಬಹುಮಾನ
ಎಂ.ಎ. ಆನರ್ಸ್ :	ಮಹಾರಾಜ ಕಾಲೇಜು, ಮೈಸೂರು.
ವಿವಾಹ :	ಮೇ (೧೯೪೬) ರಮಾದೇವಿಯವರೊಡನೆ

ಮಕ್ಕಳು	:	ಸುಮಾ, ಪ್ರತಿಭಾ, ವಿಜಯಾ, ರಾಜಶೇಖರ, ರಾಜೇಶ್ವರಿ
ವೃತ್ತಿ	:	ಪುಣೆಯ ಫೀಲ್ಡ ಕಂಟ್ರೋಲರ್ ಆಫ್ ಮಿಲಿಟರಿ ಎಕೌಂಟ್ಸ್ ಆಫೀಸಿನಲ್ಲಿ ಒಂದು ವರ್ಷ 'ಗುಮಾಸ್ತಗಿರಿ' (೧೯೪೨)
	*	ಭಟ್ಕಳದ ಇಸ್ಲಾಮಿಯ ಆಂಗ್ಲೋ ಉರ್ದು ಹೈಸ್ಕೂಲಿನಲ್ಲಿ ಸಹ ಶಿಕ್ಷಕರಾಗಿ ೪ ವರ್ಷ ಹಾಗೂ ಹೆಡ್ ಮಾಸ್ಟರ್ ಆಗಿ ಒಂದು ವರ್ಷ
	*	'ಕರ್ಮವೀರ' ವಾರಪತ್ರಿಕೆ (ಹುಬ್ಬಳ್ಳಿ)ಯ ಉಪಸಂಪಾದಕರಾಗಿ (೧೯೪೭–೫೧)
	*	ಕುಮಟದ ಕೆನರಾ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕ (೧೯೫೧–೬೨)ರಾಗಿ
	*	ಶಿರಸಿಯ ಎಂ.ಎಂ. ಕಲಾ–ವಿಜ್ಞಾನ ಮಹಾವಿದ್ಯಾಲಯದಲ್ಲಿ ಉಪ ಪ್ರಾಚಾರ್ಯರಾಗಿ (೧೯೬೨–೬೯) ಸಂಸ್ಕೃತ ಮತ್ತು ಕನ್ನಡ ಪ್ರಾಧ್ಯಾಪಕರಾಗಿ.
	*	ಸಿದ್ಧಾಪುರದ ಎಂ.ಜಿ.ಸಿ. ಕಾಲೇಜಿನಲ್ಲಿ ಪ್ರಾಚಾರ್ಯರಾಗಿ (೧೯೬೯–೭೬)
	*	ಶಿರಸಿಯ ಮಾಡರ್ನ್ ಎಜ್ಯುಕೇಷನ್ ಸೊಸೈಟಿಯ ಆನರರಿ ಮೆನೇಜರ್‌ಗಾಗಿ ೧೫–೬–೧೯೮೨ ರವರೆಗೆ
ನಿಧನ	:	ಏಪ್ರಿಲ್ ೨೪, ೧೯೯೦
ಪ್ರಕಟಣೆಗಳು	:	೧೯ನೇಯ ವಯಸ್ಸಿನಲ್ಲಿ ಇಂಟರ್ ಮೀಡಿಯಟ್ ಓದುತ್ತಿದ್ದಾಗ ಬೆಂಗಳೂರಿನ 'ಸುಬೋಧ' ರಾಮರಾಯರ ಕರೆಯ ಮೇರೆಗೆ ಬರೆದು ಪ್ರಕಟಿಸಿದ ಚಂಪಕಮಾಲಾ ವೃತ್ತದಲ್ಲಿದ್ದ ಕವನ ಮೊದಲ ಪ್ರಕಟಣೆ. ೧೯೯೦ರಲ್ಲಿ ಕೈಗಾ ಅಣು ವಿದ್ಯುತ್ ಸ್ಥಾವರ ಕುರಿತು 'ನಾಗರಿಕ' ಪತ್ರಿಕೆಯಲ್ಲಿ ಕೊನೆಯ ಲೇಖನ. ಈ ಮಧ್ಯದಲ್ಲಿ ೫೦ಕ್ಕೂ ಹೆಚ್ಚು ಪುಸ್ತಕಗಳು, ನೂರಾರು ಲೇಖನಗಳು ಪ್ರಕಟವಾದವು.

ಪ್ರಶಸ್ತಿ/ಗೌರವಗಳು

ಕಾವ್ಯಸೂತ್ರ	:	ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ
		ತೀ.ನಂ.ಶ್ರೀ ಸ್ಮಾರಕ ಬಹುಮಾನ
		ಮೈಸೂರು ವಿ.ವಿ. ಸುವರ್ಣ ಮಹೋತ್ಸವ ಬಹುಮಾನ
ರಾಷ್ಟ್ರಸೂತ್ರ	:	ರಾಜ್ಯ ಸರಕಾರ ಅನುದಾನ
		ಮೂರು ಸಾವಿರ ಮಠ, ಹುಬ್ಬಳ್ಳಿ, ಬಹುಮಾನ
ಜ್ಞಾನಸೂತ್ರ	:	ಹುಬ್ಬಳ್ಳಿಯ ಲೋಕ ಶಿಕ್ಷಣ ಟ್ರಸ್ಟ್ ಬಹುಮಾನ
ಮಾನಸ ದರ್ಪಣ	:	ಮದ್ರಾಸ್ ಕ್ರಿಶ್ಚಿಯನ್ ಟೆಕ್ಸ್ಟ್‌ಬುಕ್ ಕಮಿಟಿ ಬಹುಮಾನ
ನೌಕಾಗೀತ	:	ಕೇಂದ್ರ ಸರಕಾರದ ಸಂರಕ್ಷಣಾ ಶಾಖೆ ಬಹುಮಾನ
ರಸಯಜ್ಞ	:	ದೇವರಾಜ ಬಹಾದೂರ ಬಹುಮಾನ
ಮನುಸ್ಮೃತಿ (ರಾಜಧರ್ಮ)	:	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಪದವಿ ತರಗತಿ ಪಠ್ಯಪುಸ್ತಕ
		೫೫ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪತ್ರಿಕಾ ಗೋಷ್ಠಿ ಅಧ್ಯಕ್ಷ ಉ.ಕ. ಜಿಲ್ಲಾ ಮೂರನೆಯ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ (೧೯೭೪)
		ಕುಂದಾಪುರದಲ್ಲಿ 'ಜೇಸೀ' ಸನ್ಮಾನ (೧೯೮೦)
		ಶಿರಸಿಯ ರೋಟರಿ ಕ್ಲಬ್ ಸನ್ಮಾನ (೧೯೮೭)
		ಶಿರಸಿಯ 'ರಂಗ ಸಂಗ' ಕಲಾರಂಗದವರಿಂದ ಪೌರ ಸನ್ಮಾನ (೧೯೮೭)
		ಯುಗ ಪುರುಷದ ಬಳಗದಿಂದ ಕಿನ್ನಗೋಳಿಯಲ್ಲಿ ಸನ್ಮಾನ (೧೯೮೮)

ಬಿ.ಎಚ್.ಶ್ರೀಧರ ಕೃತಿ ಸೂಚಿ

೧. ಕಾವ್ಯ

ಮೇಘನಾದ	ಸಾಹಿತ್ಯ ಮಂದಿರ, ಮೈಸೂರು	೧೯೪೫
ಕಿನ್ನರಗೀತ	ಕಥಾಂಜಲಿ ಗ್ರಂಥಮಾಲೆ, ಬೆಂಗಳೂರು	೧೯೪೭
ಅಮೃತಬಿಂದು	ಸಂಯುಕ್ತ ಕರ್ನಾಟಕ ಕಾರ್ಯಾಲಯ, ಹುಬ್ಬಳ್ಳಿ	೧೯೪೯
ಮಂಜುಗೀತ	ಲೇಖಕರು, ಕುಮಟ	೧೯೫೮
ರಸಯಜ್ಞ	ವಿದ್ಯಾರಣ್ಯ ಪ್ರಕಾಶನ ಸಂಸ್ಥೆ, ಶಿರಸಿ	೧೯೬೪
ಮುತ್ತುರತ್ನ	ಸುಲಭ ಸಾಹಿತ್ಯ ಪ್ರಕಾಶನ, ಕುಮಟ	೧೯೬೮
	(ಮ.ಮು. ೧೯೮೭)	
ನೌಕಾಗೀತ	ಅಪ್ರಕಟಿತ (ಖಾಸಗಿ ಪ್ರಸಾರದಲ್ಲಿ)	೧೯೬೮
ಕದಂಬ ವೈಭವ	ಪ್ರಬುದ್ಧ ಕರ್ನಾಟಕದಲ್ಲಿ	೧೯೭೦;
	ಸಾಹಿತ್ಯ ಮಂದಿರ ಶಿರಸಿ	೧೯೮೭
ಕಂಟಕಾರಿ ಮಹಾಕಾವ್ಯಂ	ದೀನಬಂಧು ಪ್ರಜಾಶನ, ಹೊನ್ನಾವರ	೧೯೮೧
ಜಾತವೇದ	ಪಿ.ಎ.ಎನ್. ಪಬ್ಲಿಷರ್ಸ್, ಬೆಂಗಳೂರು	೧೯೮೪
ಅಮೃತಬಿಂದು (ಶ್ರೀಧರ ಕಾವ್ಯ ವಾಚಿಕೆ)	ಸಾಹಿತ್ಯ ಪರಿಷತ್ತು ಬೆಂಗಳೂರು	೨೦೦೭

೨. ಯಕ್ಷಗಾನ

ಯಕ್ಷಗಾನ ಪಂಚರಾತ್ರ ವಾರ್ಧಿಕ್ಯ, ಶಿರಸಿಯ 'ಧ್ಯೇಯನಿಷ್ಠ ಪತ್ರಕರ್ತ' ದಿನಪತ್ರಿಕೆಯಲ್ಲಿ ೫–೧೨–೧೯೯೩ ರಿಂದ ೮–೫–೧೯೯೪ರ ವರೆಗೆ ಪ್ರತಿ ಭಾನುವಾರ

೩. ನಾಟಕ

ಮಯೂರ ಶರ್ಮ, ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ	೧೯೮೮
ಸೋಮಾರಿಗಳ ಕ್ಲಬ್ (ಅಪ್ರಕಟಿತ)	೧೯೮೭

೪. ಆತ್ಮಕಥೆ

ಜೀವಯಾನ, ಬಿ.ಎಚ್.ಶ್ರೀ. ಸಾಹಿತ್ಯ ಪ್ರಶಸ್ತಿ ಸಮಿತಿ, ಶಿರಸಿ ೧೯೯೪

೫. ವಿನೋದ–ವಿಡಂಬನೆ

ಬೇತಾಳಗಳ ಕುಣಿತ	ಸರ್ವೋದಯ ಸಾಹಿತ್ಯ ಮಾಲೆ, ಹುಬ್ಬಳ್ಳಿ	೧೯೫೧
ಭಾಷಣಗಳ ಭೈರವರ ಒಡ್ಡೋಲಗ	ಎ.ಎಂ.ಜಿ. ಸಾಹಿತ್ಯ ಪ್ರಕಾಶನ, ಉಡುಪಿ	೧೯೬೬

೬. ವಿಮರ್ಶೆ

ಬೇಂದ್ರೆ	ಎಂ.ಜಿ.ಎಂ. ಕಾಲೇಜು ಉಡುಪಿ	೧೯೫೬
ಹೊಸಗನ್ನಡ ಸಾಹಿತ್ಯ ಶೈಲಿ	ಪ್ರತಿಭಾ ಗ್ರಂಥಮಾಲೆ, ಧಾರವಾಡ	೧೯೫೬
ಕವೀಂದ್ರ ರವೀಂದ್ರ	ಶಶಿ ಪ್ರಕಾಶನ, ಬೆಂಗಳೂರು	೧೯೫೯
ಕಾವ್ಯಸೂತ್ರ	ವಿದ್ಯಾರಣ್ಯ ಗ್ರಂಥ ಪ್ರಕಾಶನ, ಶಿರಸಿ	೧೯೬೮
ಪ್ರತಿಭೆ	ರವೀಂದ್ರ ಪ್ರಕಾಶನ, ಕಾರ್ಗಲ್	೧೯೭೮
ಸಂಸ್ಕೃತಗಳ ಕನ್ನಡಗಳ ಬಾಂಧವ್ಯ	ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್ ಮಂಗಳೂರು	೧೯೮೧
ಪಸರಿಪ ಕನ್ನಡಕ್ಕೊಡೆಯನೀಗ ದರಾಂಕಿತ ಬೇಂದ್ರೆ	ಶ್ರೀಮಾತಾ ಪ್ರಕಾಶನ ಧಾರವಾಡ	
ಜನ್ನ (ಸಂ.ವಿ.ಸಿ)	ಐ.ಬಿ.ಎಚ್.ಪ್ರಕಾಶನ ಬೆಂಗಳೂರು	೧೯೭೫

೭. ವೈಚಾರಿಕ

ಭಾರತೀಯ ನಾಗರಿಕತೆಗೆ	ಪ್ರಸಾರಾಂಗ	೧೯೫೯
ಮನುವಿನ ಕೊಡುಗೆ	ಕ.ವಿ.ವಿ. ಧಾರವಾಡ (ಮರುಮುದ್ರಣ)	೧೯೭೧
ಪಂಚಮುಖಿ	ಅಂತರಂಗ ಕಾರ್ಯಾಲಯ, ಉಡುಪಿ	೧೯೫೫
ವಿದೇಶದ ತಿಳಿವಳಿಕೆಗಳು	ರಾಮಕೃಷ್ಣ ಪ್ರಿಂಟಿಂಗ್ ವರ್ಕ್ಸ್, ಕುಮಟ	೧೯೫೯
ಜ್ಞಾನಸೂತ್ರ	ವಿದ್ಯಾರಣ್ಯ ಗ್ರಂಥ ಪ್ರಕಾಶನ, ಶಿರಸಿ	೧೯೬೯
ಮಾನಸದರ್ಪಣ (ಹನುಮಂತರಾವ್ ಅವರೊಂದಿಗೆ)	ಸಮಾಜ ಪುಸ್ತಕಾಲಯ, ಧಾರವಾಡ	೧೯೭೩
ರಾಷ್ಟ್ರಸೂತ್ರ	ವಿಶ್ವ ಪ್ರಕಾಶನ, ಹುಬ್ಬಳ್ಳಿ	೧೯೭೪
ವಿಚಾರ ವಿಜಯ	ರವೀಂದ್ರ ಪುಸ್ತಕಾಲಯ, ಕಾರ್ಗಲ್	೧೯೮೧
ಭಾರತೀಯ ಮೂರ್ತಿಶಿಲ್ಪ	ಬಂಡಾಯ ಪ್ರಕಾಶನ, ಅರೆಅಂಗಡಿ	೨೦೦೯

೮. ಇತಿಹಾಸ

ಬನವಾಸಿಯ ಕದಂಬರು ಶತಮಾನೋತ್ಸವ ಸಮಿತಿ, ಬನವಾಸಿ ೧೯೬೬
(ಎಲ್.ಟಿ. ಶರ್ಮಾರೊಂದಿಗೆ)
ಬನವಾಸಿಯ ಇತಿಹಾಸ ಸಾಹಿತ್ಯ ಮಂದಿರ, ಶಿರಸಿ ೨೦೦೪

೯. ಇತರೆ

ಮಯೂರ ಶರ್ಮ ಐ.ಬಿ.ಎಚ್. ಪ್ರಕಾಶನ, ಬೆಂಗಳೂರು ೧೯೭೧
(ಮರುಮುದ್ರಣ ೧೯೭೧)
ಕೌಶಿಕ ರಾಮಾಯಣ ಐ.ಬಿ.ಎಚ್. ಪ್ರಕಾಶನ, ಬೆಂಗಳೂರು ೧೯೭೨
ರಮಣ ಮಹರ್ಷಿ ಸುಲಭ ಸಾಹಿತ್ಯ ಪ್ರಕಾಶನ, ಕುಮಟ ೧೯೬೯
ಉತ್ತರ ಕನ್ನಡ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳು (ಉಪಲಬ್ಧವಿಲ್ಲ)
ಬನವಾಸಿಯ ಕೈಪಿಡಿ ೧೯೭೧
ಸಾಹಿತ್ಯ ಚಿಂತನ (ಮಂಜುವಾಣಿಯಲ್ಲಿ ಧಾರಾವಾಹಿಯಾಗಿ)
ಶಿವಪುರಾಣ (ಮಂಜುವಾಣಿಯಲ್ಲಿ ಧಾರವಾಹಿಯಾಗಿ)
ವೇದರಹಸ್ಯಸಾರ ರಾಜಶೇಖರ ಹೆಬ್ಬಾರ, ಶಿರಸಿ ೨೦೦೩

೧೦. ಅನುವಾದ

(ಇಂಗ್ಲಿಷಿನಿಂದ)
ಭಾರತೀಯ ರಾಜ್ಯಧರ್ಮದ ಸತ್ವ ಮತ್ತು ಸ್ವರೂಪ
(ಆರವಿಂದರ The Foundations of Indian Culture (ಭಾಗ–೧) ಅನುವಾದ)
ಸುಲಭ ಸಾಹಿತ್ಯ ಪ್ರಕಾಶನ, ಕುಮಟ ೧೯೫೫
ಭಾರತೀಯ ವಾಙ್ಮಯ
(ಅರವಿಂದರ The Foundations of Indian Culture (ಭಾಗ–೨) ಅನುವಾದ)
ಎನ್.ಆರ್.ರಾವ್‌ರೊಂದಿಗೆ ಸುಲಭ ಸಾಹಿತ್ಯ ಪ್ರಕಾಶನ, ಕುಮಟ ೧೯೫೭
ಟಿ.ಎಸ್.ಈಲಿಯಟ್ (ಎ.ಸಿ.ಬ್ರ್ಯಾಡ್ ಬ್ರೂಕ್‌ರ T.S.Eliot ಅನುವಾದ)
ಎಂ.ಜಿ.ಎಂ. ಕಾಲೇಜು ಉಡುಪಿ. ೧೯೫೭
ಸ್ವಾತಂತ್ರ್ಯ ಮೀಮಾಂಸೆ
(ಜೆ.ಎಸ್. ಮಿಲ್ಲರರ On Liberty ಅನುವಾದ ಎನ್.ಆರ್. ರಾವ್‌ರೊಂದಿಗೆ)
ಕುಮಟ ೧೯೬೧
ಮಾತೃಶ್ರೀ (ಪಶುಪತಿಯವರ On the Mother Divine ಅನುವಾದ)
ಶ್ರೀ ಅರವಿಂದೋ ಸೊಸೈಟಿ, ಶಿವಮೊಗ್ಗ ೧೯೭೫

ವೇದರಹಸ್ಯ (ಅರವಿಂದ The Secret of the Veda ಅನುವಾದ) (ಅಪ್ರಕಟಿತ)
ನೆಹರೂ ಉವಾಚ (ಉಪಲಬ್ಧವಿಲ್ಲ)
ರಮಣ ಮಾರ್ಗ ಭಾಗ ೧ ಮತ್ತು ಭಾಗ –೨
(ಓಂ ಸಾಧು ಅವರ The Path of Ramana Part-1 & Part 2 ಅನುವಾದ)
ಅಪ್ರಕಟಿತ

ಅನುವಾದ (ಸಂಸ್ಕೃತ)

ಕಾಳಿದಾನ ಕಾವ್ಯ ಸೌರಭ	ರೋಟರಿ ಕ್ಲಬ್, ಕುಮಟ (ಉಪಲಬ್ಧವಿಲ್ಲ)	೧೯೬೨
ಕುಂದಮಾಲೆ (ನಾಟಕ)	ಗೀತಾ ಬುಕ್ ಹೌಸ್, ಮೈಸೂರು	೧೯೬೭
ಸಂಸ್ಕೃತ ಸುಭಾಷಿತ ಸಂಗ್ರಹ	ಪ್ರಸಾರಾಂಬ, ಕ.ವಿ.ವಿ. ಧಾರವಾಡ	೧೯೭೧
ರಾಜಧರ್ಮ	ಪ್ರಸಾರಾಂಗ, ಕ.ವಿ.ವಿ. ಧಾರವಾಡ	೧೯೭೪

(ಮನುಸ್ಮೃತಿ ೭ನೇ ಅಧ್ಯಾಯದ ಅನುವಾದ – ಟಿಪ್ಪಣಿ, ಪೀಠಿಕ ಸಹಿತ ಬಿ.ಆರ್.ಮೋಡಕರೊಂದಿಗೆ)

೧೧. ಸಂಪಾದಿತ

ನವರತ್ನ (ಮಿಸಲೆನಿ) ಸುಲಭ ಸಾಹಿತ್ಯ ಪ್ರಕಾಶನ, ಕುಮಟ (ವರ್ಷ ನಮೂದಿಸಿಲ್ಲ)
ಬವವಾಡಿ ಹಿರಿಯಣ್ಣ ಹೆಬ್ಬಾರ್ ವಿರಚಿತ
ಭಾನುಮತಿ ಕಲ್ಯಾಣ (ಯಕ್ಷಗಾನ) ಕಾವ್ಯಾಲಯ ಪ್ರಕಾಶಕರು, ಮೈಸೂರು
೧೯೫೮
ರಸೋ ವೈ ಸಃ (ಹಿರಿಯಣ್ಣ ಹೆಬ್ಬಾರರ ಯಕ್ಷಗಾನ ಮತ್ತು ಭಕ್ತಿ ಸ್ತೋತ್ರಗಳು)
'ಸಾಹಿತ್ಯ ಮಂದಿರ' ಶಿರಸಿ ೧೯೮೭

ಕೆಲವು ಲೇಖನಗಳು

೧. ಅಭಿನಂದನ ಗ್ರಂಥಗಳಲ್ಲಿ

ಸಂಸ್ಕೃತ ನಾಟಕ	ಅಭಿನಂದನೆ	೧೯೫೬
ಕನ್ನಡ ಸಾಹಿತ್ಯಕ್ಕೆ ಮುಗಳಿ ಕೊಡುಗೆ	ರಸಿಕರಂಗ ದರ್ಶನ	೧೯೬೬
ಸೌಂದರ್ಯ ಮೀಮಾಂಸೆ	ಉಪಾಯನ	೧೯೬೭
ಯಕ್ಷಗಾನ ಬಯಲಾಟ	ಕಾರಂತ ಪ್ರಪಂಚ	೧೯೬೯
ಬೆಂಗಳೂರು ಭಾರ್ಗವ (ಅ.ನ.ಕೃ)	ರಸಚೇತನ	೧೯೭೦
ಗುರುಗಳಿಗೆ ನಮಸ್ಕಾರ	ಸಮರ್ಪಣೆ	೧೯೭೦
ಕುವೆಂಪು ಗದ್ಯ	ಸಹ್ಯಾದ್ರಿ	೧೯೭೪
ಯಕ್ಷಗಾನದ ಸಾಂಸ್ಕೃತಿಕ ಕೊಡುಗೆ	ರಸ ಋಷಿ	೧೯೭೪
ಬೇಂದ್ರೆ ಕಾವ್ಯ ಸ್ತೋತ್ರ	ಇಳಿದು ಬಾ ತಾಯಿ	೧೯೭೭
ಕಾವ್ಯಾನುಶಾಸನ	ಬ್ರಹ್ಮಗಿರಿ	೧೯೭೭
ಅಭಿಜಾತ ಕೃತಿ–ನಲ್ಮೆ	ವಾಙ್ಮಯ ತಪಸ್ವಿ	೧೯೭೭
ಜ್ಞಾನದ ಪೂರ್ಣಕುಂಭ	ನಮನ	೧೯೭೮
ಮಿತ್ರಾಭಿನಂದನ	ಪ್ರವೃತ್ತ	೧೯೭೬
ಆಧುನಿಕ ಸಾಹಿತ್ಯ ಸಮೀಕ್ಷೆ	ಬೆಳ್ವೊಲ	೧೯೮೧
ಇತ್ಯಾದಿ		

೨. ಸಂಸ್ಮರಣ ಸಂಚಿಕೆಗಳಲ್ಲಿ

ಹೈವನಾಡಿನ ಚರಿತ್ರೆ	ಉ.ಕ.ದರ್ಶನ, ಕ.ಸಾ.ಪ. ಬೆಂಗಳೂರು	೧೯೮೬
ಬನವಾಸಿಯ ಚಕ್ರವರ್ತನ	ಪಡುವಣ (೪೫ನೇಯ ಕನ್ನಡ ಸಾಹಿತ್ಯ ಸಮ್ಮೇಳನ)	
ಶಿರಸಿಯ ಚಾರಿತ್ರಿಕ ಹಿನ್ನೆಲೆ	ಶಿರಸಿ ನಗರಸಭಾ ಸಂಚಿಕೆ	೧೯೬೬
ಹೊನ್ನಾವರ ಚರಿತ್ರೆ	ಹೊನ್ನಾವರ ಭೂ ಅಭಿವೃದ್ಧ ಬ್ಯಾಂಕ್	೧೯೭೭

ಸಿದ್ದಾಪುರದ ಚಾರಿತ್ರಿಕ ಹಿನ್ನೆಲೆ	ಅರ್ಬನ್ ಬ್ಯಾಂಕ್, ಸಿದ್ದಾಪುರ	೧೯೭೯
ಭಾರತದ ಗ್ರಂಥಾಲಯಗಳ ಇತಿಹಾಸ	ಶಿರಸಿ ಪಂಡಿತ್ ಲೈಬ್ರರಿ	೧೯೭೦
ಕೌಶಿಕ ರಾಮಾಯಣ	ಕದಂಬ (ಸಾಹಿತ್ಯ ಸಮ್ಮೇಳನಾಂಕ)	೧೯೮೨
ವಿದ್ವತ್ಕವಿ ಪಾಂಡೇಶ್ವರರು	ತಾಂಬೂಲ (ಉ.ಕ.ಸಾಹಿತ್ಯ ಸಮ್ಮೇಳನಾಂಕ)	೧೯೮೧
ಕನ್ನಡ ಸಾಹಿತ್ಯ ನಡೆದು ಬಂದ ದಾರಿ ಇತ್ಯಾದಿ	ಮೈಸೂರು ದಸರಾ ದರ್ಶಿನಿ	೧೯೬೪

೩. ಪತ್ರಿಕೆಗಳು

ಇಂದಿನ ಕನ್ನಡ ಪ್ರಬಂಧಗಳು	ಕನ್ನಡ ಸಾಹಿತ್ಯ ಪರಿಷತ್ಪತ್ರಿಕ	೪೬/೧
ಔಚಿತ್ಯ	ಜೂನ್ ೧೯೬೭	
	ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ	
	೪೨/೧ ಜೂನ್ ೧೯೪೭	
ಕುಂದಗನ್ನಡ	ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ	
	೪೧, ೪೨, ೪೩ ಜೂನ್ ೧೯೪೬/೫೮	
ಹೊಸಗನ್ನಡ ಛಂದೋವಿಕಾಸ	ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ	
	೪/೧-೨ ಜೂನ್ -ಡಿಸೆಂ.	
ಕನ್ನಡತ್ರಯ ವಿಭಾಗಯೋಗ	ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ	
	೬೨/೧ ಜೂನ್ - ಡಿಸೆಂ. ೧೯೭೭	
ವಿಮರ್ಶೆ	ಸಾಧನ, ಸಂಪುಟ ೧, ಸಂಚಿಕೆ ೩೧	
ಸ್ವಾತಂತ್ರ್ಯ ಮತ್ತು ಭ್ರಮೆ	ಜೀವನ	
	ಜುಲೈ ೧೯೬೮	
ರಂಗ ಬಿನ್ನಪ	ಪ್ರಬುದ್ಧ ಕರ್ನಾಟಕ ಚಿನ್ನದ ಸಂಚಿಕೆ	
	೧೯೬೯	
ಸಾಹಿತ್ಯ ಚಿಂತನ-ಲೇಖನ ಸರಣಿ	ಮಂಜುವಾಣಿ	
	೧೯೮೧ ರಿಂದ ೧೯೮೩	
ಶಿವ ಪುರಾಣ-ಲೇಖನ ಸರಣಿ	ಮಂಜುವಾಣಿ	
	೧೯೮೪ ರಿಂದ ೧೯೮೬	
ಜನಜೀವನ ಹಾಗೂ	ಕಾನಡಾವೃತ್ತ	

ಜಾನಪದ ಕಲೆಗಳು ೧೦೮೨
ಯಕ್ಷಗಾನ : ಉಗಮ ಮತ್ತು ಸಂಯುಕ್ತ ಕರ್ನಾಟಕ
ಇತಿಹಾಸ ೨೪–೬–೧೯೮೪
ಸಾಹಿತ್ಯ ಮತ್ತು ಮಹಾಕಲ್ಪನೆ ಜನತಾ
೧೨–೮–೧೯೬೩
ಮಾನವ ಸಂಸ್ಕೃತಿ ಜಯಕರ್ನಾಟಕ
ಜುಲೈ ೧೯೫೩
ಕಾವ್ಯದಲ್ಲಿ ಪ್ರಾಸ ಏಕೆ ಬೇಕು? ಕನ್ನಡ ನುಡಿ
೧–೪–೧೯೭೩
ವಿಮರ್ಶಾ ಪರಿಭಾಷೆ ತಾಯಿ ನುಡಿ ದೀಪಾವಳಿ ಸಂಚಿಕೆ
* ಮುಂತಾದ ಸಾವಿರಾರು ಲೇಖನಗಳು

೪. ಇಂಗ್ಲಿಷ್ ಲೇಖನಗಳು

Manu's Theory of Kingship	JL of K.U.D. YV	1971
Experience and expression	XVII	1973
Classical and Modern Plays	The Mysore Orientalist	1969
Aesthetic Experience	Mysore Oriental Research Institute	1972
Indian History-A Challenge to some Fundamental Assumptions	JL of Mysore University	1977
The Hindu View of History etc.	P.B.Desai Fel. Vol Dharwad	

ಶ್ರೀಧರರ ಕುರಿತು

೧. ಕಿರುಹೊತ್ತಿಗೆ

ರಾಜಶೇಖರ ಹೆಬ್ಬಾರ ಹಾಗೂ ಕಿರಣ ಭಟ್ಟ	ಪ್ರೊ.ಬಿ.ಎಚ್.ಶ್ರೀಧರ ಬಿ.ಎಚ್.ಶ್ರೀ ಸಾಹಿತ್ಯ ಪ್ರಶಸ್ತಿ ಸಮಿತಿ, ಶಿರಸಿ	೧೯೯೨
ರಾಜಶೇಖರ ಹೆಬ್ಬಾರ	ಪ್ರೊ.ಬಿ.ಎಚ್.ಶ್ರೀಧರ	೨೦೦೭
ರಾಜಶೇಖರ ಹೆಬ್ಬಾರ ಡಾ.ಶ್ರೀಪಾದ ಭಟ್ಟ	ಶ್ರೀಧರ ಪ್ರಶಸ್ತಿ	೨೦೧೦

೨. ಸಂದರ್ಶನ

ಪಾ.ವೆಂ.ಆಚಾರ್ಯ	ಕಸ್ತೂರಿ	ಫೆಬ್ರವರಿ ೧೯೭೪
ಭುವನೇಶ್ವರಿ ಹೆಗಡೆ	ತರಂಗ	೧೯೮೭
ಭಾಗೀರಥಿ ಹೆಗಡೆ	ಉಷಾವಾಣಿ	೨೧-೮-೧೯೮೮
ಮೋಹನ ಹೆಗಡೆ	ಸಂಯುಕ್ತ ಕರ್ನಾಟಕ	೨೬-೪-೧೯೮೭
ಮುಂತಾದವು		

೩. ಸಾಹಿತ್ಯ ವಿಮರ್ಶೆ

ಎಚ್.ಆರ್.ಅಮರನಾಥ-ಪರಂಪರೆಯ ಕಾವಲುಗಾರ:

ಬಿ.ಎಚ್.ಶ್ರೀಧರರ ಕಾವ್ಯ ಸಮೀಕ್ಷೆ ಸೃಜನವೇದಿ	ಏಪ್ರಿಲ್ ೧೯೮೭
ಪ್ರೊ.ಬಿ.ಎಚ್.ಶ್ರೀಧರ-ರಾಜಶೇಖರ ಹೆಬ್ಬಾರ	೨೦೦೭

೪. ಗ್ರಂಥಾವಲೋಕನ

ಮೇಘನಾದ	ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ-೩೧, ೨	
ಮಂಜುಗೀತ	ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ-೪೩, ೨	
ಜಾತವೇದ	ಪ್ರಜಾವಾಣಿ	೫-೧-೧೯೮೬
ಜಾತವೇದ	ನಾಗರಿಕ	೧೯೮೫
ಜಾತವೇದ	ಸಂಯುಕ್ತ ಕರ್ನಾಟಕ	೫-೧-೧೯೮೬
ಕಂಟಕಾರೀ ಕಾವ್ಯಂ	ಗ್ರಂಥಲೋಕ	೧-೪-೧೯೮೨
ಕವೀಂದ್ರ ರವೀಂದ್ರ	ಕರ್ನಾಟಕ ಭಾರತಿ	೧೯೬೪
ಕಾವ್ಯ ಸೂತ್ರ	ಸಂಯುಕ್ತ ಕರ್ನಾಟಕ	೧೧-೧೦-೧೯೬೯
ಬೇಂದ್ರೆ	ಶಿರಸಿ ಸಮಾಚಾರ	೧-೭-೧೯೮೭
ಪ್ರಜ್ಞಾವಾದ	ವನಶ್ರೀ ಉ.ಕ.ಜಿಲ್ಲಾ ಸಾಹಿತ್ಯ ಸಮ್ಮೇಳನ ಯಲ್ಲಾಪುರ	೧೯೭೪
ಭಾರತೀಯ ಮೂರ್ತಿಶಿಲ್ಪ	The Indian Express	೧-೮-೧೯೮೮

೫. ಬದುಕು-ಬರೆಹ ಪರಿಚಯದ ಲೇಖನಗಳು

ಮೋಹನ ಹೆಗಡೆ	ಸಂಯುಕ್ತ ಕರ್ನಾಟಕ	೨೬-೪-೧೯೮೭
ರಾಜಶ್ರೀ ಹೆಗಡೆ	The Indian Express	೧೧-೫-೧೯೮೭
ಎಂ.ಎ.ಶರ್ಮ ತದ್ದಲಸೆ	ಪ್ರಜಾಮತ	೨೪-೫-೧೯೮೭

ಹಾ.ಮಾ.ನಾಯಕ	ಪ್ರಜಾವಾಣಿ	೨೧–೫–೧೯೮೭
ಹಾ.ಮಾ.ನಾಯಕ	ಪ್ರಜಾವಾಣಿ	೨೦–೫–೧೯೯೦
ಟಿ.ಎಂ.ಸುಬ್ಬರಾಯ	ಉದಯವಾಣಿ	೬–೫–೧೯೯೦
ಎಚ್ಚೆಸ್ಕೆ	ಸುಧಾ	೨೪–೫–೧೯೮೭
ಪಾ.ವೆಂ.ಆಚಾರ್ಯ	ಉದಯವಾಣಿ	೬–೫–೧೯೯೦
ಕಿರಣ ಭಟ್ ಹಾಗೂ ಅಮರನಾಥ	ಪ್ರಜಾವಾಣಿ	೨೧–೬–೧೯೯೧
ರಾಜೇಶ್ವರಿ ಹೆಬ್ಬಾರ	ಸಂಯುಕ್ತ ಕರ್ನಾಟಕ	೨೦೦೯

* ಮುಂತಾದವು.

೬. **ಶ್ರೀಧರ ಸ್ಮರಣೆ** – ಸಂ. ಡಾ.ಎಂ.ಜಿ.ಹೆಗಡೆ ೧೯೯೯
(ಅಭಿನಂದನ ಗ್ರಂಥ)

೭. ಶ್ರೀಧರರ ನೆನಪು

ಶ್ರೀಧರರ ನೆನಪು ಚಿರಂತನವಾಗಿ ಉಳಿಯುವಂತೆ ಮಾಡಲು ಅವರ ಕುಟುಂಬದವರು ಶಿಷ್ಯರು ಹಾಗೂ ಅಭಿಮಾನಿಗಳ ಪರವಾಗಿ ಡಾ.ಟಿ.ನಾರಾಯಣ ಭಟ್, ಎಚ್.ಆರ್.ಅಮರನಾಥ, ಕಿರಣಭಟ್, ವಿಷ್ಣುಹೆಗಡೆ ಹಾಗೂ ರಾಜಶೇಖರ ಹೆಬ್ಬಾರ, ಜಗದೀಶ ಭಂಡಾರಿ, 'ಬಿ.ಎಚ್.ಶ್ರೀಧರ ಸಾಹಿತ್ಯ ಪ್ರಶಸ್ತಿ ಸಮಿತಿಯನ್ನು ರೂಪಿಸಿ ಪ್ರತಿ ವರ್ಷ ಕನ್ನಡದ ಉತ್ತಮ ಸಾಹಿತ್ಯ ಕೃತಿಗೆ ಬಹುಮಾನ ನೀಡುವ ವ್ಯವಸ್ಥೆ ಮಾಡಿದ್ದಾರೆ (೧೯೯೧ ರಿಂದ) –ಸಿ.ಎನ್.ಹೆಗಡೆ, ಸಿ.ಆರ್.ಶಾನಭಾಗ, ಯು.ಎ.ಐತಾಳ, ವಿಠಲ ಭಂಡಾರಿ, ಶ್ರೀಪಾದ ಭಟ್, ಯಶವಂತ ನಾಯಕ ಇವರು ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಬಿ.ಎಚ್.ಶ್ರೀಧರ ಸಾಹಿತ್ಯ ಪ್ರಶಸ್ತಿ ಪುರಸ್ಕೃತರು

ವರ್ಷ	ಪ್ರಶಸ್ತಿ	ಕೃತಿ	ಅಧ್ಯಕ್ಷತೆ
೧೯೯೧	ನಾ.ಮೊಗಸಾಲೆ	ಪ್ರಭವ (ಕಾವ್ಯ)	ಕೀರ್ತಿನಾಥ ಕುರ್ತಕೋಟಿ
೧೯೯೨	ಗಿರೀಶ ಕಾರ್ನಾಡ	ತಲೆದಂಡ (ನಾಟಕ)	'ಎನ್ಕೆ' ಕುಲಕರ್ಣಿ
೧೯೯೩	ಪಿ.ಲಂಕೇಶ ಹಾಗೂ	ಅಕ್ಕ (ಕಾದಂಬರಿ)	
	ದು.ನಿಂ.ಬೆಳಗಲಿ	ದೇವದಾಸಿ (ಕಾದಂಬರಿ)	ಶಿವರಾಮ ಕಾರಂತ
೧೯೯೪	ಪುರುಷೋತ್ತಮ ಬಿಳಿಮಲೆ	ಶಿಷ್ಟ ಪರಿಶಿಷ್ಟ (ವಿಮರ್ಶೆ)	ಕೆ.ವಿ.ಸುಬ್ಬಣ್ಣ
೧೯೯೫	ಎಚ್.ಎಸ್.ವೆಂಕಟೇಶಮೂರ್ತಿ	ಎಷ್ಟೊಂದು ಮುಗಿಲು (ಕವನ)	ಪಾಟೀಲ ಪುಟ್ಟಪ್ಪ
೧೯೯೬	ಜಿ.ಎಸ್.ಆಮೂರ	ಕನ್ನಡ ಕಥನ ಸಾಹಿತ್ಯ ಕಾದಂಬರಿ ವಿಮರ್ಶೆ	ಪ್ರಸನ್ನ
೧೯೯೭	ಜಯಂತ ಕಾಯ್ಕಿಣಿ	ಅಮೃತಬಳ್ಳಿ ಕಷಾಯ (ಕಥಾಸಂಕಲನ)	ವೇಣುಗೋಪಾಲ
೧೯೯೮	ಸವಿತಾ ನಾಗಭೂಷಣ	ಸ್ತ್ರೀಲೋಕ (ಕಾದಂಬರಿ)	ಸಿ.ಎನ್.ರಾಮಚಂದ್ರನ್
೧೯೯೯	ಕೆ.ವಿ.ನಾರಾಯಣ	ಬೇರು–ಕಾಂಡ–ಚಿಗುರು (ವಿಮರ್ಶೆ)	ವಿಷ್ಣುನಾಯ್ಕ
೨೦೦೦	ಪ್ರತಿಭಾ ನಂದಕುಮಾರ್	ಕವಡೆ ಆಟ (ಕವನ)	ಗಿರಡ್ಡಿ ಗೋವಿಂದರಾಜ್
೨೦೦೧	ಕೆ.ರಾಘವೇಂದ್ರರಾವ್	Imagining the unimaginable communities	ಟಿ.ನಾ.ಭಟ್
೨೦೦೨	ಮೊಗಳ್ಳಿ ಗಣೇಶ	ಭೂಮಿ (ಕಥಾ ಸಂಕಲನ)	ಬರಗೂರು ರಾಮಚಂದ್ರಪ್ಪ
೨೦೦೩	ಶಿವರಾಮ ಪಡಿಕ್ಕಲ್	ನಾಡು ನುಡಿಯ ರೂಪಕ (ವಿಮರ್ಶೆ)	ಬಿ.ಎ.ಸನದಿ
೨೦೦೪	ಚಿಂತಾಮಣಿ ಕೊಡ್ಲೆಕೆರೆ	ತಲೆಮಾರಿನ ಕೊನೆಯ ಕೊಂಡಿ	ಜಯಂತ ಕಾಯ್ಕಿಣಿ
೨೦೦೫	ಎ.ಎನ್.ಪ್ರಸನ್ನ	ರಥಸಪ್ತಮಿ (ಕಥಾಸಂಕಲನ)	ಜಿ.ಎಸ್.ಆಮೂರ
೨೦೦೬	ಎಸ್.ದಿವಾಕರ	ನಾಪತ್ತೆಯಾದ ಗ್ರಾಮಾಫೋನ್ ಮತ್ತು ಇತರ ಪ್ರಬಂಧಗಳು (ವೈಚಾರಿಕ ಗದ್ಯ)	ಶಂಭು ಹೆಗಡೆ
೨೦೦೭	ಎಸ್.ಮಂಜುನಾಥ	ಕಲ್ಲ ಪಾರಿವಾಳಗಳ ಬೇಟ (ಕವನ)	ಚಿಂತಾಮಣಿ ಕೊಡ್ಲೆಕೆರೆ
೨೦೦೮	ಗಿರಡ್ಡಿ ಗೋವಿಂದರಾಜ್	ಹಿಡಿಯದ ಹಾದಿ (ಪ್ರಬಂಧ)	ಕಿ.ರಂ.ರಾಮಚಂದ್ರನ್
೨೦೦೯	ಅಶೋಕ ಹೆಗಡೆ	ವಾಸನೆ, ಶಬ್ದ, ಬಣ್ಣ ಇತ್ಯಾದಿ (ಕಥಾ ಸಂಕಲನ)	ಸಿ.ಎನ್.ರಾಮಚಂದ್ರನ್
೨೦೧೦	ಪ್ರಸನ್ನ ಹೆಗ್ಗೋಡು	ಬಾಲಗೋಪಾಲ (ಕಾದಂಬರಿ)	ಲಕ್ಷ್ಮೀಶ ತೋಳ್ಪಾಡಿ
೨೦೧೧	ಆರ್.ಪಿ.ಹೆಗಡೆ	ಸಮಗ್ರ ಸಾಧನೆಗೆ	ಜಯಂತ ಕಾಯ್ಕಿಣಿ
೨೦೧೨	ವಿವೇಕ ಶಾನಭಾಗ	ವಿಶಿಷ್ಟ ಸಾಹಿತ್ಯ	ಗೋಪಾಲಕೃಷ್ಣ ಪೈ
೨೦೧೩	ರಾಜೇಂದ್ರ ಚೆನ್ನಿ	ಸಮಗ್ರ ಸಾಧನೆಗೆ	ಎಮ್. ರಮೇಶ

೨೦೧೪	ಭುವನೇಶ್ವರಿ ಹೆಗಡೆ	ಸಮಗ್ರ ಸಾಧನೆಗೆ	ವೈದೇಹಿ
೨೦೧೫	ಕೆ.ವಿ. ಅಕ್ಷರ	ಸಮಗ್ರ ಸಾಧನೆಗೆ	ಟಿ.ಪಿ. ಅಶೋಕ
೨೦೧೬	ಕೆ. ಸತ್ಯನಾರಾಯಣ	ಸಮಗ್ರ ಸಾಧನೆಗೆ	ಗಿರಡ್ಡಿ ಗೋವಿಂದರಾಜ
೨೦೧೭	ನಾಗೇಶ ಹೆಗಡೆ	ಸಮಗ್ರ ಸಾಧನೆಗೆ	ಪ್ರಕಾಶ ಭಟ್ಟ

* ಡಾ.ಟಿ.ಪಿ.ಅಶೋಕ, ಡಾ.ಸಿದ್ಧಲಿಂಗ ಪಟ್ಟಣಶೆಟ್ಟಿ, ಸುವರ್ಣ, ಗೌರೀಶ ಕಾಯ್ಕಿಣಿ, ಡಾ.ಆರ್.ಪಿ.ಹೆಗಡೆ, ಪ್ರೊ.ಜಿ.ಎಸ್.ಅವಧಾನಿ, ಡಾ.ಆರ್.ವಿ.ಭಂಡಾರಿ, ಡಾ.ಎಂ.ಜಿ.ಹೆಗಡೆ, ಪ್ರೊ.ಎಂ.ರಮೇಶ, ರಾಜಶೇಖರ ಹೆಬ್ಬಾರ, ಡಾ.ಶ್ರೀಪಾದ ಭಟ್ ಇವರೆಲ್ಲ ನಿರ್ಣಾಯಕರಾಗಿ ಕಾರ್ಯನಿರ್ವಹಿಸಿದ್ದಾರೆ.

ಬಿ.ಎಚ್.ಶ್ರೀಧರ ಶಿಕ್ಷಣ ಪ್ರಶಸ್ತಿ ಪುರಸ್ಕೃತರು


(೧೯೯೫ ರಿಂದ ಕೃಷ್ಣ ಲೋಕರೆಯವರು ನೀಡಿದ ಮೂಲಧನದಿಂದ ಆರಂಭವಾದ ಈ ಪ್ರಶಸ್ತಿಗೆ ಸಿದ್ಧಾಪುರದ ಎಂ.ಜಿ.ಸಿ. ಕಾಲೇಜಿನ ಬಿ.ಎ. ಭಾಗ–೩ ರಲ್ಲಿ ಪ್ರಥಮರಾದ ವಿದ್ಯಾರ್ಥಿಗೆ ಪ್ರತಿವರ್ಷ ನೀಡಲಾಗುತ್ತಿದೆ.)

೨೦೦೫	ವರದುರ್ಗಾ ಭಟ್
೨೦೦೬	ಪ್ರಜ್ಞಾ ಭಟ್
೨೦೦೭	ಪ್ರಜ್ಞಾ ಹೆಗಡೆ
೨೦೦೮	ಗೀತಾ ನಾಯ್ಕ
೨೦೦೯	ವೆಂಕಟೇಶ ನರಸಿಂಹ ಹೆಗಡೆ
೨೦೧೦	ಮಧುಲತಾ ಗೌಡರ್
೨೦೧೧	ಸಿ.ಆರ್.ರೇಷ್ಮಾ
೨೦೧೨	ಶ್ರುತಿ ಭಟ್
೨೦೧೩	ಕಾವ್ಯಶ್ರೀ ನಾಯ್ಕ
೨೦೧೪	ಆಶಾ ಹೆಗಡೆ
೨೦೧೫	ಲೋಹಿತ್ ಮಹಾಲೆ
೨೦೧೬	ಮಾಲತಿ ನಾಯ್ಕ
೨೦೧೭	ಇಂದಿರಾ ಸಬ್ನೀಸ್


ಚಿತ್ರಸಂಪುಟ



ಬಿ.ಎಚ್. ಶ್ರೀಧರರು – ನಿಷ್ಕಪಟ ನಗು



ಬಿ.ಎಚ್. ಶ್ರೀಧರರು – ಮಾತಿನ ಓಘದಲ್ಲಿ



ಬಿ.ಎಚ್. ಶ್ರೀಧರರು – ಚಿಂತಕ ದೃಷ್ಟಿ




(ಎಡದಿಂದ) ಕುಳಿತವರು – ರಮಾದೇವಿ. ಬಿ.ಎಚ್.ಶ್ರೀ, ಮೊಮ್ಮಗ ರಮಣ,
ಟಿ.ಎಮ್. ಸುಬ್ಬರಾಯ, ರಾಜಶೇಖರ ಹೆಬ್ಬಾರ, ಸಾವಿತ್ರಿ (ಸೊಸೆ), ಮೊಮ್ಮಗ ಬ್ರಹ್ಮಾನಂದ



ಕುಂದಾಪುರದಲ್ಲಿ ಕನ್ನಡ ಸಾಹಿತ್ಯೋತ್ಸವ – ಕಾರಂತರೊಂದಿಗೆ ಕಾರ್ಯಕ್ರಮ – 1.11.1988



'ಭಾರತೀಯ ಮೂರ್ತಿಶಿಲ್ಪ' ಪುಸ್ತಕ ಬಿಡುಗಡೆ (1988) ಸಮಾರಂಭದಲ್ಲಿ ಕಲಾವಿದ
ಆರ್.ಜಿ. ರಾಯ್ಕರ, ಡಾ. ಟಿ. ನಾರಾಯಣಭಟ್ ಹಾಗೂ ಬಿ.ಎಚ್.ಶ್ರೀಧರ



ಅಭ್ಯಾಸ ನಿರತ ಬಿ.ಎಚ್.ಶ್ರೀಧರರು




ಬಿ.ಎಚ್.ಶ್ರೀಧರರ ಪ್ರಕಟಿತ ಪುಸ್ತಕಗಳ ಚಿತ್ರ




26.4.1987ರ ಸನ್ಮಾನ – ನಿಂತವರು – ಶ್ರೀ ಎಲ್.ಆರ್. ಭಟ್, ಅವರ ಪತ್ನಿ ನಳಿನಿ (ಭಾರತೀಸುತರ ಮಗಳು), ಕುಳಿತವರು – (ಎಡದಿಂದ) ಶಂತರ ಕಾರಂತ (ಅಳಿಯ), ರಾಜಶೇಖರ ಹೆಬ್ಬಾರ (ಮಗ), ರಮಣ (ಮೊಮ್ಮಗ), ಸಚಿನ್ (ತಂಗಿಯ ಮೊಮ್ಮಗ), ಶ್ರೀಧರರು, ರಮಾದೇವಿ, ಸುಶೀಲೆ (ತಂಗಿ), ವಿಜಯಾ (ಮಗಳು)



ಬಿ.ಎಚ್.ಶ್ರೀಧರ, ರಮಾದೇವಿ, ಬ್ರಹ್ಮಾನಂದ (ಮೊಮ್ಮಗ)



ಮಗಳು ಪ್ರತಿಭಾ ಮತ್ತು ಅಳಿಯ ರಮೇಶ ವೈದ್ಯರೊಂದಿಗೆ ಶ್ರೀಧರ ದಂಪತಿ



ಶಿವರಾಮಕಾರಂತರಿಂದ ಬಿ.ಎಚ್. ಶ್ರೀಧರರಿಗೆ ಸಿದ್ದಾಪುರದಲ್ಲಿ ನಡೆದ
ಸನ್ಮಾನ ಸಮಾರಂಭದಲ್ಲಿ ಮಾತನಾಡುತ್ತಿರುವ ಬಿ.ಎಚ್. ಶ್ರೀ



ಶಿವರಾಮಕಾರಂತರಿಂದ ಶ್ರೀಧರರಿಗೆ ಸನ್ಮಾನ (ಸಿದ್ದಾಪುರ – 1974)



ಸಿದ್ದಾಪುರದ ಎಮ್.ಜಿ.ಸಿ. ಕಾಲೇಜಿನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ
ಕೆ.ವಿ. ಸುಬ್ಬಣ್ಣನವರೊಂದಿಗೆ ಪ್ರಿನ್ಸಿಪಾಲ್ ಶ್ರೀಧರರು



ಸಿದ್ದಾಪುರದ ಎಮ್.ಜಿ.ಸಿ. ಕಾಲೇಜಿನ ಕಾರ್ಯಕ್ರಮದಲ್ಲಿ
ಚಿತ್ರನಟ ಉದಯಕುಮಾರರೊಂದಿಗೆ ಬಿ.ಎಚ್.ಶ್ರೀಧರ



ಸಿದ್ದಾಪುರದ ಕಾಲೇಜಿನ ಕಾರ್ಯಕ್ರಮವೊಂದರಲ್ಲಿ ಬಿ.ಎಚ್.ಶ್ರೀ,
ರಾಜ್ಯಪಾಲ ಧರ್ಮವೀರ, ಶ್ರೀ ರಾಮಕೃಷ್ಣ ಹೆಗಡೆ ಮತ್ತಿತರು




ಮುಖ್ಯಮಂತ್ರಿ ವೀರೇಂದ್ರ ಪಾಟೀಲರಿಗೆ ಶ್ರೀಧರರಿಂದ ಗೌರವಾರ್ಪಣೆ



ಶಿವರಾಮಕಾರಂತರಿಗೆ ಮಾಲಾರ್ಪಣೆ ಮಾಡುತ್ತಿರುವ ಶ್ರೀಧರರು



ಸಿದ್ದಾಪುರದ ಕಾಲೇಜಿನ ಶಿಲಾನ್ಯಾಸ ಕಾರ್ಯಕ್ರಮ (ಎಡದಿಂದ) – ಬಿ.ಎಚ್.ಶ್ರೀ,
ರಾಮಕೃಷ್ಣ ಹೆಗಡೆ, ಗಣೇಶ ಹೆಗಡೆ ಮತ್ತಿತರು




ಕವಿ ಬೇಂದ್ರೆ ಮತ್ತಿತರೊಡನೆ ಉಪಹಾರ ಸೇವನೆ



ಶಿವಮೊಗ್ಗದಲ್ಲಿ ಬೇಂದ್ರೆಯವರಿಂದ ಸನ್ಮಾನ



ಗೋಪಾಲಕೃಷ್ಣ ಅಡಿಗರೊಂದಿಗೆ (ನಾಲ್ಕನೆಯವರು) ಕುಮಟೆಯ ಕೆನರಾ ಕಾಲೇಜಿನಲ್ಲಿದ್ದಾಗ




26.4.1987ರಂದು ಶ್ರೀಧರರ 70ನೇ ಹುಟ್ಟುಹಬ್ಬದಂದು ಶಿರಸಿಯಲ್ಲಿ ನಡೆದ ಸನ್ಮಾನದ ಚಿತ್ರ. (ಎಡದಿಂದ) –
ಜಿ.ವಿ. ಭಟ್, ಡಿ.ಎನ್. ಶಾನಭಾಗ, ಬಿ.ಎಚ್.ಶ್ರೀ, ರಮಾದೇವಿ



ಬಿ.ಎಚ್.ಶ್ರೀಧರ (1968ರ ಸುಮಾರಿಗೆ)



ಹುಬ್ಬಳ್ಳಿಯ 'ಕರ್ಮವೀರ' ವಾರಪತ್ರಿಕೆಯ
ಉಪಸಂಪಾದಕರಾಗಿದ್ದಾಗಿನ ಬಿ.ಎಚ್.ಶ್ರೀ
(1947–51)



ಕುಮಟೆಯಲ್ಲಿ ವಾಸವಿದ್ದ ಮನೆಯೆದುರು
(1951–1962)



ಮೈಸೂರಿನ ಮಹಾರಾಜ ಕಾಲೇಜಿನ ದಿಗ್ಗಜ ಪ್ರಾಧ್ಯಾಪಕರೊಂದಿಗೆ ಶಿಷ್ಯ ಶ್ರೀಧರ
(ನಿಂತವರದಲ್ಲಿ (ಬಲಗಡೆಯಿಂದ) ಎರಡನೇ ಸಾಲಿನಲ್ಲಿ ಮೊದಲನೆಯವರು)



ಸಭೆಯೊಂದರಲ್ಲಿ ಬಿ.ಎಚ್. ಶ್ರೀಧರರು ಮಾತನಾಡುತ್ತಿರುವುದು



ಕುಮಟೆಯ ಸಾಹಿತ್ಯ ಸಮ್ಮೇಲನದಲ್ಲಿ – (ನಿಂತವರು) – ಬಿ.ಎಚ್. ಶ್ರೀಧರ, ವೈಎನ್.ಕೆ. (ಕುಳಿತವರು) – ಗೋಪಾಲಕೃಷ್ಣ ಅಡಿಗ, ತ.ರಾ.ಸು., ರಾಮಚಂದ್ರ ಶರ್ಮ, ಸು.ರಂ. ಎಕ್ಕುಂಡಿ



ಶ್ರೀಸೂಕ್ತ

1.ಗಾಂಧಿಯೇ ಮಾತಿನ ನಾಂದಿ; ಗಾಂಧಿಯೇ ಪ್ರಚಾರದ ಬ್ರಾಂದಿ. ಗಾಂಧಿಯ ಮಾತು ಗಾಳಿಯ ಪಾಲು; ಸೇಂದಿಯ ಪಿಪಾಯಿ ಕಳ್ಳಭಟ್ಟಿಯ ಪಾಲು. ಗಾಂಧಿ ಗಾಂಧಿ ಎಂದು ಗೋಗರೆದು ಬೂಂದಿಯೂಟ ಕಳಕೊಳ್ಳಬೇಡವೋ ಸೇಂದಿ ಸಿದ್ಧೇಶ್ವರಾ !

–(ಭಾಷಣ ಭೈರವರ ಒಡ್ಡೋಲಗ)

2. ಸರಕಾರಿ ಮತವೇ ಸಾರ್ವಜನಿಕ ಮತ. ಮುಖ್ಯಮಂತ್ರಿಯ ಮತವೇ ಮುನ್ನಡೆಯುವ ಮತ. ಮತದಾನವೇ ಮತಿದಾನ. ಮತಚೌರ್ಯವೇ ಮಹಾಶೌರ್ಯ. ಮತಿವಂತರ ಮತಕ್ಕಾಗಿ ಒದ್ದಾಡದೇ ಮತವಂತರ ಮತಿಗೆ ಮಂಕುವಿಸಿ ಮಾನ್ಯನಾಗೋ ಪಾರ್ಲಿಮೆಂಟಿನ ಪರಮೇಶ್ವರಾ !

–(ಭಾಷಣ ಭೈರವರ ಒಡ್ಡೋಲಗ)

3. ಪುಣೆಯಲ್ಲಿ passing show ಎಂಬ ಸಿಗರೇಟಿನ ಹೆಸರನ್ನು ಕೇಳಿದಾಗ Life is a passing show, ಜೀವನವೊಂದು ತೋರಿಯಡಗುವ ನಾಟಕವೆನಿಸಿತ್ತು. ಅನಂತರ Some people show to live and some others live to show; ಕೆಲವರು ಬದುಕಲಿಕ್ಕಾಗಿ ಮಾತ್ರ ಪ್ರದರ್ಶನ ಕಲಾವಿದರಾದರೆ ಇನ್ನು ಕೆಲವರು ಪ್ರದರ್ಶನಕ್ಕಾಗಿಯೇ ಬದುಕಿರುತ್ತಾರೆ ಎಂಬ ಅನುಭವವೀಗ ಬಂತು. ಸ್ವಪ್ನ–ಜಾಗರಣೆಗಳ ಅಂತರದಂತೆಯೇ ಪ್ರದರ್ಶನ–ದರ್ಶನಗಳ ಅಂತರ. ಅದನ್ನು ಇದೆಂದೂ, ಇದನ್ನು ಅದೆಂದೂ ತಿಳಿಯುವವರೇ ಅಧಿಕ. ಈ ಕುರುಡ–ಮೆಳ್ಳರಿಬ್ಬರ ಅವಸ್ಥೆಯನ್ನು ಮೀರಿದ್ದು ರಮನಮಹರ್ಷಿತ್ವ.

– ಜೀವಯಾನ

ಬಾಗೂರು ಮಾರ್ಕಾಂಡೇಯ

ತೇಜು ಪಬ್ಲಿಕೇಷನ್ಸ್